ಪೂರ್ಣ ಪರಮಾತ್ಮನೇ ನಮಃ

ಶ್ರೀಮದ್ಭಗವದ್ಗೀತೆ

# ಗೀತೆಯೇ ನಿನ್ನ ಜ್ಞಾನ ಅಮೃತ

ಜೀವವೇ ನಮ್ಮ ಜಾತಿ, ಮಾನವ ಧರ್ಮ(Mankind) ನಮ್ಮದು ।
ಹಿಂದೂ ಮುಸ್ಲಿಂ ಸಿಖ್ ಇಸಾಈ, ಯಾವ ಧರ್ಮವೂ ಬೇರೆ ಅಲ್ಲ ॥

# ಅವಶ್ಯಕವಾಗಿ ನೋಡಿರಿ

## ಸಂತ ರಾಮ್‌ಪಾಲ್ ಮಹಾರಾಜ ರವರ ಮಂಗಳ ಪ್ರವಚನ

ರಾಜ್ ಮ್ಯೂಸಿಕ್ ಚಾನಲ್‌ನಲ್ಲಿ ಸಂಜೆ 7:30 ರಿಂದ 8:30 ರವರೆಗೆ

ಸಾಧನಾ ಚಾನಲ್‌ನಲ್ಲಿ ಸಂಜೆ 7:30 ರಿಂದ 8:30 ರವರೆಗೆ

ಶ್ರದ್ಧಾ ಚಾನಲ್‌ನಲ್ಲಿ ಮಧ್ಯಾಹ್ನ 2:00 ರಿಂದ 3:00 ರವರೆಗೆ

ಈಶ್ವರ್ ಚಾನಲ್‌ನಲ್ಲಿ ಬೆಳಿಗ್ಗೆ 6:00 ರಿಂದ 7:00 ರವರೆಗೆ

**ಒಟ್ಟು ಬೆಲೆ – 98 ರೂ.**
**ಧರ್ಮಾರ್ಥ ಬೆಲೆ – 30 ರೂ.**

**ಜಗದ್ಗುರು ತತ್ವದರ್ಶಿ ಸಂತ ರಾಮ್‌ಪಾಲ್ ಮಹಾರಾಜರ ಅಮೂಲ್ಯ ಸತ್ಸಂಗಗಳಿಂದ ಮತ್ತು ಎಲ್ಲಾ ಪವಿತ್ರ ಧರ್ಮಗಳ ಪವಿತ್ರ ಧಾರ್ಮಿಕ ಗ್ರಂಥಗಳನ್ನು ಆಧರಿಸಿ ಸಂಗ್ರಹಿಸಲಾದ ಅಮೂಲ್ಯ ಪುಸ್ತಕ (ಜ್ಞಾನ ಗಂಗಾ)**

**ಸಂಗ್ರಹಕಾರ ಮತ್ತು ಲೇಖಕರು:–** ಭಕ್ತ ರಾಜು ದಾಸ್, ಸತ್ಲೋಕ್ ಆಶ್ರಮ ಬರವಾಲಾ, ಜಿಲ್ಲೆ–ಹಿಸಾರ್, ಹರಿಯಾಣ.

ಪ್ರಕಾಶಕರು :– ಪ್ರಚಾರ ಪ್ರಸಾರ ಸಮಿತಿ ಹಾಗು ಭಕ್ತ ಸಮೂಹ
**ಸತ್ಲೋಕ್ ಆಶ್ರಮ, ಹಿಸಾರ್–ಟೋಹಾನಾ ರೋಡ್ ಬರವಾಲಾ**
ಜಿಲ್ಲೆ–ಹಿಸಾರ್ (ಪ್ರಾಂತ್ಯ–ಹರಿಯಾಣ) ಭಾರತ.

**Printer :- Mahavir Graphics**
4, Amidhara Apartment, 2nd Floor, Paradise Park,
Patidar soc. Vibhag 2, Usmanpura Road, Vadaj. Ahmedabad (Gujarat)

ಸಂತ ರಾಮ್‌ಪಾಲ್ ಮಹಾರಾಜರಿಂದ ನಾಮದೀಕ್ಷೆ ಪಡೆಯಲು ಮತ್ತು ಹೆಚ್ಚಿನ ಮಾಹಿತಿಗಾಗಿ ಈ ಸಂಖ್ಯೆಗಳಿಗೆ ಸಂಪರ್ಕಿಸಿ:–

**ದೂರವಾಣಿ ಸಂ. 8222880541, 8222880542, 8222880543, 8222880544, 8222880545**

**ಸತ್ಲೋಕ್ ನಾಮೋಪದೇಶ ಕೇಂದ್ರ, ಬೆಂಗಳೂರು (ಕರ್ನಾಟಕ)**
**ದೂರವಾಣಿ ಸಂ. 8884445281, 7026200360**

**Visit us at: www.jagatgururampalji.org**
**e-mail: jagatgururampalji@yahoo.com**

# ವಿಷಯ ಸೂಚಿ


| ಕ್ರ.ಸಂ. | ವಿವರಣೆ | ಪುಟ ಸಂಖ್ಯೆ |
|---|---|---|
| 1. | ಪೀಠಿಕೆ | I-III |
| 2. | ಎರಡು ಮಾತು | 1 |
| | ● ಮಕ್ಕಾ ಮಹಾದೇವನ ಮಂದಿರವಾಗಿದೆ | 9 |
| 3. | ಗೀತೆಯ ಸತ್ಯ ಸಾರಾಂಶ | 11 |
| | ● ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಮತ್ತು ಶ್ರೀ ಶಂಕರನ ತಂದೆ-ತಾಯಿ ಯಾರು?... | 16 |
| 4. | ಸಂದೇಹ ನಿವಾರಣೆ | 19 |
| | ● ಗೀತೆಯಲ್ಲಿ ಎರಡು ಪ್ರಕಾರದ ಜ್ಞಾನವಿದೆ | 46 |
| | ● ಪಾಂಡವರ ಮೂಲಕ ಮಾಡಲ್ಪಟ್ಟ ಯಾಗ | 46 |
| | ● ಯಾರ್ಯಾರಿಗೆ ಪರಮಾತ್ಮನು ಸಿಕ್ಕನು | 59 |
| | ● ವ್ರತ ಮಾಡುವುದರ ಬಗ್ಗೆ ಗೀತೆಯಲ್ಲಿ ಏನು ಹೇಳಲಾಗಿದೆ? | 63 |
| | ● ಶ್ರಾದ್ಧ-ಪಿಂಡ ಪ್ರದಾನದ ಬಗ್ಗೆ ಗೀತೆಯಲ್ಲಿ ಏನು ಹೇಳಲಾಗಿದೆ? | 63 |
| | ● ಶ್ರಾದ್ಧ-ಪಿಂಡದಾನದ ಬಗ್ಗೆ ರುಚಿ ಎಂಬ ಋಷಿಯ ಅಭಿಪ್ರಾಯ | 64 |
| | ● ಜಿಂದಾ ಮಹಾತ್ಮ ಎರಡನೇ ಬಾರಿ ಅಂತರ್ಧ್ಯಾನವಾಗುವುದು | 70 |
| | ● ಅನ್ಯ ಸಂತರ ಜೊತೆ ಧರ್ಮದಾಸರ ಜ್ಞಾನ ಸಂವಾದ | 72 |
| | ● ಹಿರಣ್ಯಕಶಿಪುವಿನ ಕಥೆ | 80 |
| | ● ರಾವಣ ಮತ್ತು ಭಸ್ಮಾಸುರನ ಕಥೆ | 83 |
| | ● ಹರಿದ್ವಾರದಲ್ಲಿ ಸಾಧುಗಳ ಹತ್ಯಾಕಾಂಡ | 84 |
| | ● ಚುಣಕ ಋಷಿ ಹಾಗು ರಾಜ ಮಾನಧಾತನ ಕಥೆ | 85 |
| | ● ಎಂಭತ್ತನಾಲ್ಕು ಲಕ್ಷ ಪ್ರಕಾರದ ಜೀವಿಗಳಲ್ಲಿ ಮಾನವ ದೇಹವು ಉತ್ತಮವಾಗಿದೆ | 93 |
| | ● ಹೇಳುವುದರಲ್ಲಿ ಹಾಗೂ ಮಾಡುವುದರಲ್ಲಿ ಅಂತರವಿದೆ | 99 |
| | ● ಧರ್ಮದಾಸರನ್ನು ಸತ್ಯಲೋಕಕ್ಕೆ ಕರೆದೊಯ್ಯುವುದು | 102 |
| | ● ಗುರುವನ್ನು ಬದಲಿಸಬಹುದೇ? | 105 |
| 5. | ವೇದ ಮಂತ್ರಗಳ ಫೋಟೋಕಾಪಿ (ಪ್ರಮಾಣ ಸಹಿತ) | 108 |
| 6. | ಸಂಕ್ಷಿಪ್ತ ಸೃಷ್ಟಿ ರಚನೆ | 124 |
| | ● ನಾವು ಕಾಲನ ಲೋಕಕ್ಕೆ ಹೇಗೆ ಬಂದೆವು? | 126 |
| | ● ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಹಾಗೂ ಶ್ರೀ ಶಿವನ ಉತ್ಪತ್ತಿ | 130 |
| 7. | ಸಂಪೂರ್ಣ ಸೃಷ್ಟಿ ರಚನೆ | 134 |
| | ● ಆತ್ಮಗಳು ಕಾಲನ ಬಲೆಯಲ್ಲಿ ಹೇಗೆ ಸಿಲುಕಿಕೊಂಡವು? | 137 |
| | ● ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಮತ್ತು ಶ್ರೀ ಶಿವನ ಉತ್ಪತ್ತಿ | 141 |

- ಮೂರು ಗುಣಗಳು ಯಾವುವು? ಪ್ರಮಾಣ ಸಹಿತ ........................ 143
- ಕಾಲಬ್ರಹ್ಮನ ಅವ್ಯಕ್ತನಾಗುವ ಪ್ರತಿಜ್ಞೆ ........................ 144
- ಬ್ರಹ್ಮಾನು ತನ್ನ ತಂದೆ ಕಾಲಬ್ರಹ್ಮನನ್ನು ಪಡೆಯುವ ಪ್ರಯತ್ನದಲ್ಲಿ ............ 146
- ಬ್ರಹ್ಮಾನಿಗೆ ತಾಯಿ ದುರ್ಗೆಯಿಂದ ಶಾಪ ........................ 147
- ವಿಷ್ಣು ತನ್ನ ತಂದೆ ಕಾಲಬ್ರಹ್ಮನನ್ನು ಕಾಣಲು ಹೊರಡುವನು ಹಾಗೂ ತಾಯಿಯಿಂದ ಆಶೀರ್ವಾದ ಪಡೆಯುವನು ........................ 148
- ಪರಬ್ರಹ್ಮನ ಏಳು ಶಂಖ ಬ್ರಹ್ಮಾಂಡಗಳ ಸ್ಥಾಪನೆ ........................ 155
- ಪವಿತ್ರ ಅಥರ್ವಣವೇದದಲ್ಲಿ ಸೃಷ್ಟಿ ರಚನೆಯ ಪ್ರಮಾಣ ........................ 156
- ಪವಿತ್ರ ಋುಗ್ವೇದದಲ್ಲಿ ಸೃಷ್ಟಿ ರಚನೆಯ ಪ್ರಮಾಣ ........................ 162
- ಪವಿತ್ರ ಶ್ರೀಮದ್‌ದೇವಿ ಮಹಾಪುರಾಣದಲ್ಲಿ ಸೃಷ್ಟಿ ರಚನೆಯ ಪ್ರಮಾಣ ... 167
- ಪವಿತ್ರ ಶಿವ ಮಹಾಪುರಾಣದಲ್ಲಿ ಸೃಷ್ಟಿ ರಚನೆಯ ಪ್ರಮಾಣ ........................ 169
- ಪವಿತ್ರ ಶ್ರೀ ಮದ್ಭಗವದ್ಗೀತೆಯಲ್ಲಿ ಸೃಷ್ಟಿ ರಚನೆಯ ಪ್ರಮಾಣ ........................ 170
- ಪವಿತ್ರ ಬೈಬಲ್ ಮತ್ತು ಪವಿತ್ರ ಕುರಾನ್ ಶರೀಫದಲ್ಲಿ ಸೃಷ್ಟಿ ರಚನೆಯ ಪ್ರಮಾಣ ........................ 173
- ಪೂಜ್ಯ ಕಬೀರ್ ಪರಮೇಶ್ವರ (ಕವಿರ್ ದೇವ) ರವರ ಅಮೃತವಾಣಿಯಲ್ಲಿ ಸೃಷ್ಟಿಯ ರಚನೆ ........................ 174
- ಗೌರವಾನ್ವಿತ ಗರೀಬ್ ದಾಸ್ ರವರ ಅಮೃತವಾಣಿಯಲ್ಲಿ ಸೃಷ್ಟಿಯ ರಚನೆಯ ಪ್ರಮಾಣ ........................ 177
- ಗೌರವಾನ್ವಿತ ಗುರುನಾನಕ್ ರವರ ಮಾತಿನಲ್ಲಿ ಸೃಷ್ಟಿ ರಚನೆಯ ಸಂಕೇತ .. 183
- ಬೇರೆ ಸಂತರ ಮೂಲಕ ಸೃಷ್ಟಿ ರಚನೆಯ ದಂತ ಕಥೆ ........................ 187

8. ಶಾಸ್ತ್ರಗಳಲ್ಲಿ ಪರಮಾತ್ಮ ........................ 189
- ಮಾಂಸ ತಿನ್ನುವುದು ಬೈಬಲ್‌ನಲ್ಲಿ ನಿಷೇಧ ........................ 190
- ಹಜರತ್ ಮುಹಮ್ಮದ್‌ರು ಮಾಂಸವನ್ನು ತಿನ್ನುತ್ತಿರಲಿಲ್ಲ ........................ 195
- ಸಂತ ಜಂಭೇಶ್ವರ ಮಹಾರಾಜರ ವಿಚಾರ ........................ 196
- 'ಪರಮಾತ್ಮನು ಸಾಕಾರನು, ಇದು ಎಲ್ಲ ಸದ್ಗ್ರಂಥಗಳ ಹಾಗು ಪರಮಾತ್ಮನನ್ನು ಪಡೆದ ಸಂತರ ನಿಷ್ಕರ್ಷ ........................ 202
- ಬಿಶ್ನೋಈ ಧರ್ಮದ ಭಕ್ತಿ ........................ 202
- ಸದ್ಗುರುವಿನಿಂದ ನಾಮದೀಕ್ಷೆ ಪಡೆದು ಭಕ್ತಿಯನ್ನು ಮಾಡಿ ........................ 203
- ಹರಿಯಾಣಕ್ಕೆ ಹರಿ ಬರುವರು ........................ 203

9. ಇದೇ ಪುಸ್ತಕ "ಗೀತೆಯೇ ನಿನ್ನ ಜ್ಞಾನ ಅಮೃತ" ದಿಂದ ಸಂಬಂಧಿಸಿದ ಶ್ರೀಮದ್ಭಗವದ್ಗೀತೆಯ ಶ್ಲೋಕಗಳ ಫೋಟೋಕಾಪಿಗಳು ........................ 205


❑❑❑

# ಪೀಠಿಕೆ

ಸರ್ವ ಭಕ್ತ ಸಮಾಜಕ್ಕೆ ಒಂದು ವಿನಮ್ರ ಪ್ರಾರ್ಥನೆ ಏನೆಂದರೆ, ಈ ಪುಸ್ತಕವನ್ನು ಪ್ರಕಟಿಸುವ ಮೂಲ ಉದ್ದೇಶವು ಎಲ್ಲಾ ಭಕ್ತರಿಗೆ ಶಾಸ್ತ್ರಾನುಸಾರವಾದ ಭಕ್ತಿ ಮಾರ್ಗವು ಸಿಗಬೇಕು ಎಂಬುದಾಗಿದೆ. ಇಂದು ಹಿಂದೂ, ಮುಸ್ಲಿಂ, ಸಿಖ್, ಇಸಾಯಿ ಎಲ್ಲರೂ ತಮ್ಮ ತಮ್ಮ ಧರ್ಮಗ್ರಂಥಗಳನ್ನು ಸತ್ಯವೆಂದು ನಂಬಿ, ಅವುಗಳ ಆಧಾರದ ಮೇಲೆ ಭಕ್ತಿ ಸಾಧನೆಯನ್ನು ಮಾಡುತ್ತಿದ್ದಾರೆ. ಆದರೆ, ಅವುಗಳಲ್ಲಿ ಅಡಗಿರುವ ಗೂಢ ರಹಸ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅವರು ಮಾಡುತ್ತಿರುವ ಸಾಧನೆಗಳಿಂದ ಅವರಿಗೆ ಯಾವುದೇ ಲಾಭವಾಗುತ್ತಿಲ್ಲ. ಏಕೆಂದರೆ ಗೀತೆಯ ಅಧ್ಯಾಯ 16, ಶ್ಲೋಕ 23 ರಲ್ಲಿ, "ಯಾವ ಸಾಧಕನು ಶಾಸ್ತ್ರವಿಧಿಯನ್ನು ತ್ಯಜಿಸಿ ಮನಬಂದಂತೆ ಆಚರಿಸುತ್ತಾನೋ, ಅವನಿಗೆ ಸುಖವಾಗಲಿ, ಸಿದ್ಧಿಯಾಗಲಿ ಅಥವಾ ಪರಮಗತಿಯಾಗಲಿ ಪ್ರಾಪ್ತವಾಗುವುದಿಲ್ಲ" ಎಂದು ಬರೆಯಲಾಗಿದೆ. ಅಂದರೆ, ಆ ಸಾಧನೆಯು ವ್ಯರ್ಥವಾಗಿದೆ. ಸಂಪೂರ್ಣ ಆಧ್ಯಾತ್ಮಿಕ ಜ್ಞಾನವಿಲ್ಲದ ಕಾರಣ, ಅವರು ಶಾಸ್ತ್ರ ವಿರುದ್ಧವಾದ ಸಾಧನೆಯನ್ನು ತ್ಯಜಿಸಲು ಅಸಮರ್ಥರಾಗಿದ್ದಾರೆ. ಸಂತ ರಾಮ್‌ಪಾಲ್ ಮಹಾರಾಜರು ಸಮಾಜಕ್ಕೆ ತಿಳಿಸುತ್ತಿರುವ ಶಾಸ್ತ್ರಸಮ್ಮತ ಭಕ್ತಿಯನ್ನು ಸಹ ಅವರು ಸ್ವೀಕರಿಸಲು ಸಾಧ್ಯವಾಗುತ್ತಿಲ್ಲ. ಈ ಪುಸ್ತಕದ ಮೂಲಕ ಭಕ್ತ ಸಮಾಜಕ್ಕೆ ನೀಡಲಾಗುತ್ತಿರುವ ಶಾಸ್ತ್ರಸಮ್ಮತ ಜ್ಞಾನವನ್ನು ಹಿಂದೂ, ಮುಸ್ಲಿಂ, ಸಿಖ್, ಇಸಾಯಿ ಈ ಎಲ್ಲಾ ಪವಿತ್ರ ಧರ್ಮಗಳ ಪವಿತ್ರ ಧಾರ್ಮಿಕ ಗ್ರಂಥಗಳಿಂದ, ಅಮರಗ್ರಂಥ ಸಾಹೇಬ್ ಮತ್ತು ಕಬೀರ್ ಸಾಗರದ ಸತ್ಯಜ್ಞಾನದ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆ ಮತ್ತು ಇದನ್ನು ಸಂತ ರಾಮ್‌ಪಾಲ್ ಮಹಾರಾಜರ ಅಮೂಲ್ಯ ಪ್ರವಚನಗಳಿಂದ ಸಂಗ್ರಹಿಸಲಾಗಿದ್ದು, ಇದು ಪವಿತ್ರ ಶಾಸ್ತ್ರಗಳಿಂದ ಪ್ರಮಾಣೀಕರಿಸಲ್ಪಟ್ಟಿದೆ ಹಾಗೂ ಪೂರ್ಣ ಮೋಕ್ಷದಾಯಕವಾಗಿದೆ. ಇದರಿಂದ ಸಾಧಕನಿಗೆ ಸಾಂಸಾರಿಕ ಮತ್ತು ಆಧ್ಯಾತ್ಮಿಕ ಎರಡೂ ಲಾಭಗಳು ಲಭಿಸುತ್ತವೆ. ಈ ಪುಸ್ತಕವನ್ನು ಪ್ರಕಟಿಸುವ ಉದ್ದೇಶವು ಯಾರದೇ ಭಾವನೆಗಳಿಗೆ ಧಕ್ಕೆ ತರುವುದಾಗಲಿ ಅಥವಾ ಯಾರಿಗೇ ಆದರೂ ಮಾನಹಾನಿ ಮಾಡುವುದಾಗಲಿ ಖಂಡಿತಾ ಅಲ್ಲ. ಬದಲಾಗಿ, ಇದರ ಏಕೈಕ ಉದ್ದೇಶವೇನೆಂದರೆ, ಎಲ್ಲಾ ಪವಿತ್ರ ಧರ್ಮಗಳ ಜನರು ತಮ್ಮ ತಮ್ಮ ಪವಿತ್ರ ಧರ್ಮಗ್ರಂಥಗಳಲ್ಲಿ ಅಡಗಿರುವ ಗೂಢ ರಹಸ್ಯಗಳನ್ನು ಅರಿತುಕೊಳ್ಳಬೇಕು ಮತ್ತು ಸರ್ವ ಭಕ್ತ ಸಮಾಜವು ಶಾಸ್ತ್ರಸಮ್ಮತವಾದ ಸದ್ಭಕ್ತಿ ಸಾಧನೆಯನ್ನು ಮಾಡುವ ಮೂಲಕ ಸಾಂಸಾರಿಕ ಸುಖ ಮತ್ತು ಪೂರ್ಣ ಮೋಕ್ಷವನ್ನು ಪಡೆಯಬೇಕು ಎಂಬುದಾಗಿದೆ.

"ಗೀತೆ" ಒಂದು ಪವಿತ್ರವಾದ ಸತ್ಯಗ್ರಂಥ. ಅದು ಆಧ್ಯಾತ್ಮ ಜ್ಞಾನದ ಕೋಶ. ಇಂದಿನ ದಿನಗಳಲ್ಲಿ ಇದನ್ನು ಹಿಂದೂಗಳ ಗ್ರಂಥವೆಂದು ಹೇಳಲಾಗುತ್ತಿದೆ. ವಾಸ್ತವದಲ್ಲಿ ಪವಿತ್ರ ಗೀತೆಯು ವಿಶ್ವದ ಗ್ರಂಥವಾಗಿದೆ. ಇಂದಿಗೆ ಅಂದರೆ 2012 ರಿಂದ ಸುಮಾರು 5550 (ಐದು ಸಾವಿರದ ಐದುನೂರ ಐವತ್ತು) ವರ್ಷಗಳ ಪೂರ್ವದಲ್ಲಿ ಮಹಾಭಾರತದ ಯುದ್ಧದ ಸಮಯದಲ್ಲಿ ಇದರ ಉತ್ಪತ್ತಿಯಾಯಿತು. ಆ ಸಮಯದಲ್ಲಿ ಯಾವುದೇ ಧರ್ಮವಿರಲಿಲ್ಲ. ಒಂದು ಸನಾತನ ಪಂಥವಿತ್ತು. ಅಂದರೆ ಮಾನವ ಧರ್ಮವಿತ್ತು. ಶಬ್ದಗಳು ಅಳಿಸಿಹೋಗಲ್ಲ, ಅದು ಆ ಪುಣ್ಯಾತ್ಮಗಳ ಮಸ್ತಿಷ್ಕವೆಂಬ ವಾಟ್ಸಾಪ್(whatsApp)ಗೆ ಹೋಗಿ ತಲುಪುತ್ತದೆ. ಯಾರ ನೆಟ್‌ವರ್ಕ್ ಸರಿಯಾಗಿರುತ್ತದೆ. ಈ ಮೊದಲು ಅದು ವ್ಯಾಸ ಮಹರ್ಷಿಗಳ (ಶ್ರೀ ಕೃಷ್ಣ ದ್ವೈಪಾಯನ) ಮಸ್ತಿಷ್ಕವೆಂಬ whatsApp ಗೆ ಲೋಡ್ ಆಗಿತ್ತು. ಇದರಿಂದಲೇ ಶ್ರೀ ವೇದವ್ಯಾಸರು ಪವಿತ್ರ "ಶ್ರೀಮದ್ ಭಗವದ್ಗೀತೆ" ಯನ್ನು ಕಾಗದದ ಮೇಲೆ ಬರೆದರು ಅಥವಾ ತಾಳೆ ವೃಕ್ಷದ ಎಲೆಗಳ ಮೇಲೆ ಬರೆದರು. ಅದೇ ಇಂದು ನಮ್ಮ ಬಳಿ ಇರುವ ಪವಿತ್ರವಾದ ಗೀತೆ. ಗೀತಾಶಾಸ್ತ್ರದಲ್ಲಿ ಒಟ್ಟು 18 (ಹದಿನೆಂಟು) ಅಧ್ಯಾಯಗಳು ಮತ್ತು 700 (ಏಳು ನೂರು) ಶ್ಲೋಕಗಳಿವೆ. ನಾನು ಈ ಪವಿತ್ರ ಪುಸ್ತಕದಿಂದ ಆವಶ್ಯಕತೆಗೆ ಅನುಸಾರವಾಗಿ ವಿವರಣೆ ಪಡೆದು 'ಗೀತೆಯೇ ನಿನ್ನ ಜ್ಞಾನ ಅಮೃತ' ಎಂಬ ಗ್ರಂಥವನ್ನು ರಚಿಸಿದ್ದೇನೆ.

ಹೇಗೆ ಕಾಡಿನಲ್ಲಿ ಗಿಡಮೂಲಿಕೆಗಳಿರುತ್ತವೆ. ವೈದ್ಯನು ಆ ಕಾಡಿನಿಂದ ಅವಶ್ಯಕವಾದ ಮೂಲಿಕೆಗಳನ್ನು ತಂದು, ಅದರಿಂದ ಜೀವದಾಯಕವಾದ ಔಷಧಿಯನ್ನು ತಯಾರಿಸಿದ ನಂತರವೂ ಕಾಡು ಉಳಿದಿರುತ್ತದೆಯೋ ಹಾಗೆ ಈ ಪುಸ್ತಕವಾದ 'ಗೀತೆಯೇ ನಿನ್ನ ಜ್ಞಾನ ಅಮೃತ' ಒಂದು

ಔಷಧಿ ಎಂದು ತಿಳಿಯಿರಿ. ಇದನ್ನು ಓದಿ ಜ್ಞಾನದ ಗುಟುಕನ್ನು ಕುಡಿದು ನಿಮ್ಮ ಜನನ–ಮರಣವೆಂಬ ರೋಗವನ್ನು ನಿವಾರಿಸಿಕೊಳ್ಳಿ.

ಆಧ್ಯಾತ್ಮ ಜ್ಞಾನವಿಲ್ಲದೆ ಮನುಷ್ಯನ ಜೀವನ ಅಪೂರ್ಣವಾದುದು. ಯಾರ ಬಳಿಯಾದರೂ ಕೋಟಿಗಟ್ಟಲೆ ಸಂಪತ್ತಿದ್ದರೂ, ಅವನಿಗೆ ತನ್ನ ಜೀವನದಲ್ಲಿ ಏನೋ ಕೊರತೆ ಇರುವಂತೆ ಭಾಸವಾಗುತ್ತದೆ. ಅದನ್ನು ನೀಗಿಸಲು ಮನುಷ್ಯನು ಪರ್ಯಟನ ಸ್ಥಾನಗಳಿಗೆ ಹೋಗುತ್ತಾನೆ. ಆ ಸಮಯದಲ್ಲಿ ಅವನಿಗೆ ಸ್ವಲ್ಪ ಒಳ್ಳೆಯದೆನಿಸುತ್ತದೆ. ಆದರೆ ಅದರಿಂದ ಇಡೀ ಜೀವನ ಒಳ್ಳೆಯದಾಗುವುದಿಲ್ಲ ಹಾಗೂ ಇದರಿಂದ ಆತ್ಮ ಕಲ್ಯಾಣವಾಗುವುದಿಲ್ಲ. ಎರಡು–ಮೂರು ದಿನಗಳ ನಂತರ ಪುನಃ ಅದೇ ದಿನಚರಿ ಪ್ರಾರಂಭವಾಗುತ್ತದೆ. ಆಗ ಜೀವನ ಏನೋ ಅಪೂರ್ಣವೆನ್ನಿಸುತ್ತಿರುತ್ತದೆ. ಆ ಕೊರತೆಯು ಪರಮಾತ್ಮನ ಭಕ್ತಿಯದ್ದೇ ಆಗಿದೆ. ಅದನ್ನು ಪೂರ್ಣಗೊಳಿಸಲು ವಿಶ್ವದ ಧಾರ್ಮಿಕ ಮಾನವನು ತನ್ನ ಪರಂಪರಾಗತವಾದ ಸಾಧನೆ ಮಾಡುತ್ತಾನೆ. ಹಾಗೊಂದು ವೇಳೆ ಆ ಸಾಧಕನ ಆ ಸಾಧನೆಯು ಶಾಸ್ತ್ರಗಳಿಗೆ ಅನುಗುಣವಾಗಿ ಇದ್ದದ್ದೇ ಆದರೆ ಅದರ ಲಾಭವಾಗುವುದು. ಹಾಗೊಂದು ವೇಳೆ ಶಾಸ್ತ್ರವಿಧಿಯನ್ನು ಬಿಟ್ಟು ಮನಸ್ಸಿಗೆ ಬಂದಂತೆ ಆಚರಣೆ ಅರ್ಥಾತ್ ಮನಸ್ಸಿಗೆ ಬಂದಂತೆ ಸಾಧನೆ ಮಾಡಿದರೆ ಈ ಗೀತೆಯ **16**ನೇ ಅಧ್ಯಾಯದ **23–24**ನೇ ಶ್ಲೋಕದ ಅನುಸಾರ ಎಲ್ಲವೂ ವ್ಯರ್ಥ, ಸಾಧಕನಿಗೆ ಸುಖವೂ ಸಿಗುವುದಿಲ್ಲ, ಸಿದ್ಧಿಯೂ ಪ್ರಾಪ್ತವಾಗುವುದಿಲ್ಲ, ಮೋಕ್ಷವೂ ಲಭಿಸುವುದಿಲ್ಲ. ಅಂದರೆ ಅದು ವ್ಯರ್ಥ ಸಾಧನೆಯಾಗುತ್ತದೆ. ಆಸಕ್ತಿ ಹೊಂದಿರುವ ಕೆಲವರು ಗುರುವಿನಿಂದ ದೀಕ್ಷೆ ಪಡೆದು ಭಕ್ತಿ ಮಾಡುತ್ತಾರೆ. ಗುರು ಪೂರ್ಣವಾಗಿದ್ದರೆ ಲಾಭವಾಗುವುದು, ಇಲ್ಲದಿದ್ದರೆ ಆ ಸಾಧನೆ ವ್ಯರ್ಥ.

'ಗೀತೆಯೇ ನಿನ್ನ ಜ್ಞಾನ ಅಮೃತ' ಎಂಬ ಈ ಪುಸ್ತಕದಿಂದ ನಿಮಗೆ ಪ್ರಮಾಣಿತ ಶಾಸ್ತ್ರವು ಯಾವುದು? ಯಾವುದರ ಪ್ರಕಾರ ಸಾಧನೆ ಮಾಡಬೇಕು? ಶಾಸ್ತ್ರಾನುಸಾರ ಸಾಧನೆ ಯಾವುದು? ಆ ಸಾಧನೆಯನ್ನು ಮಾಡುವ ವಿಧಿ ಯಾವುದು? ಯಾವ ಮಹಾತ್ಮನಿಂದ ಪ್ರಾಪ್ತವಾಗುವುದು? ಪೂರ್ಣ ಗುರುವನ್ನು ಗುರುತಿಸುವುದು ಹೇಗೆ? ಇವೆಲ್ಲವನ್ನೂ ಈ ಪುಸ್ತಕದಲ್ಲಿ ಓದುವಿರಿ. ವಿವಿಧ ಧರ್ಮಗಳಲ್ಲಿ ಹಂಚಿ ಹೋಗಿ ತಮ್ಮಲ್ಲೇ ಹೊಡೆದಾಡಿಕೊಂಡು ಸಾಯುತ್ತಿರುವ ವಿಶ್ವದ ಮನುಷ್ಯರನ್ನೆಲ್ಲಾ ಈ ಪುಸ್ತಕವು ಒಂದುಗೂಡಿಸುವುದು. ಗೀತೆಯ ಶಾಸ್ತ್ರವು ಯಾವುದೇ ಧರ್ಮ ವಿಶೇಷದ್ದಲ್ಲ. ಯಾವುದೇ ಧರ್ಮವಿಲ್ಲದ ಸಮಯದಲ್ಲಿ ಮಾನವನ ಕಲ್ಯಾಣಕ್ಕಾಗಿ ಇದನ್ನು ಪ್ರದಾನಿಸಲಾಗಿತ್ತು. ಕೇವಲ ಮಾನವ ಧರ್ಮವಿತ್ತು. ಸಂತ ರಾಮ್‌ಪಾಲ್ ಮಹಾರಾಜರ ಘೋಷಣೆ ಇದಾಗಿದೆ :–

ಜೀವವೇ ನಮ್ಮ ಜಾತಿ, ಮಾನವ ಧರ್ಮ ನಮ್ಮದು,
ಹಿಂದೂ, ಮುಸ್ಲಿಮ್, ಸಿಖ್, ಈಸಾಯಿ, ಯಾವ ಧರ್ಮವೂ ಬೇರೆ ಅಲ್ಲ.

ಶ್ರೀ ಗುರು ನಾನಕರ ಜನ್ಮವು ಪವಿತ್ರ ಹಿಂದೂ ಧರ್ಮದಲ್ಲಿ ಶ್ರೀ ಕಾಲೂರಾಮ್ ಮೆಹತಾ ಅವರ ಮನೆಯಲ್ಲಿ ಖತ್ರಿ (ಅರೋಡಾ) ಎಂಬ ಕುಲದಲ್ಲಿ ಆಗಿತ್ತು. ಶ್ರೀ ಬ್ರಜ್‌ಲಾಲ್ ಪಾಂಡೆ ಅವರಿಂದ ಶ್ರೀ ಗುರು ನಾನಕರು ಗೀತೆಯ ಜ್ಞಾನವನ್ನು ಪಡೆದರು ಮತ್ತು ಅವರಿಂದ ತಿಳಿಸಲ್ಪಟ್ಟ ಭಕ್ತಿಯನ್ನು ಮಾಡುತ್ತಿದ್ದರು. ಶ್ರೀ ವಿಷ್ಣು ಮತ್ತು ಶ್ರೀ ಶಂಕರನನ್ನು ಪೂಜಿಸುತ್ತಿದ್ದರು. ಹಿಂದೂ ಧರ್ಮದಲ್ಲಿ ವರ್ತಮಾನದಲ್ಲಿ ಇರುವ ಬೇರೆ ದೇವತೆಗಳ ಭಕ್ತಿ ಮಾಡುತ್ತಿದ್ದರು. ಶ್ರೀ ಗುರು ನಾನಕರು ಸುಲ್ತಾನ್‌ಪುರ ನಗರದಲ್ಲಿ ಅಲ್ಲಿಯ ನವಾಬರ ಬಳಿ ಮೋದಿಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ನಗರದಿಂದ ಒಂದರ್ಧ ಕಿ.ಮೀ. ದೂರದಲ್ಲಿ ಬೇಈ ಎಂಬ ನದಿ ಹರಿಯುತ್ತಿತ್ತು. ಪ್ರತಿ ದಿನವೂ ಶ್ರೀ ಗುರು ನಾನಕ್ ಸಾಹೇಬರು ಆ ನದಿಯಲ್ಲಿ ಸ್ನಾನ ಮಾಡಲು ಹೋಗುತ್ತಿದ್ದರು. ಯಾರು ಧೃಡ ಭಕ್ತರೋ ಅಂತಹ ಒಳ್ಳೆಯ ಆತ್ಮಗಳಿಗೆ ಪರಮಾತ್ಮನು ಭೇಟಿಯಾಗುತ್ತಾನೆ. ಇದರ ಬಗ್ಗೆ ಈ ಪುಸ್ತಕದಲ್ಲಿ ಹೆಚ್ಚಿನ ಪ್ರಮಾಣಗಳನ್ನು ನೀವು ಓದುವಿರಿ. ಅದೇ ರೀತಿ ಪರಮಾತ್ಮ ಶ್ರೀ ಗುರು ನಾನಕ್ ಸಾಹೇಬರಿಗೆ ಸಿಕ್ಕನು. ಅವರಿಗೆ ತತ್ವಜ್ಞಾನವನ್ನು ತಿಳಿಸಿದನು. ಶಾಸ್ತ್ರಾನುಸಾರವಾಗಿರುವ ಸತ್ಯ ಸಾಧನೆಯ ಜ್ಞಾನವನ್ನು ತಿಳಿಸಿದನು. ಶ್ರೀ ಗುರು ನಾನಕ ಸಾಹೇಬರ ಸಂತೃಪ್ತಿಗಾಗಿ ಅವರನ್ನು ತನ್ನ ಜೊತೆ ಮೇಲಿರುವ ತನ್ನ ಶಾಶ್ವತ ಸ್ಥಾನ ಅರ್ಥಾತ್ ಸತ್ಯಖಂಡಕ್ಕೆ ಕರೆದುಕೊಂಡು ಹೋದನು. ಸರ್ವ ಬ್ರಹ್ಮಾಂಡಗಳಲ್ಲಿ ಸುತ್ತಾಡಿಸಿ ನಿಜವಾದ ಭಕ್ತಿ ವಿಧಿಯನ್ನು ತಿಳಿಸಿ 'ಸನಾತನ ಭಕ್ತಿ'ಯನ್ನು ಪುನಃ ಸ್ಥಾಪಿಸಲು ಆದೇಶ ನೀಡಿದನು. ಮೂರು ದಿನಗಳ ನಂತರ ಶ್ರೀ ಗುರು ನಾನಕರನ್ನು ಮತ್ತೆ ಭೂಮಿಗೆ ತಂದು ಬಿಟ್ಟನು.

ಇದಾದ ನಂತರ ಶ್ರೀ ಗುರು ನಾನಕರು ಹಿಂದೂ ಧರ್ಮದಲ್ಲಿ ಪ್ರಚಲಿತವಾಗಿದ್ದ ಹಾಗೂ ಮನಸ್ಸಿಗೆ ಬಂದ ಹಾಗೆ ಇದ್ದ ಆಚರಣೆಯನ್ನು ನಿಲ್ಲಿಸಿ ಗೀತೆ (ಸಪ್ತಶ್ಲೋಕೀ ಗೀತೆ)ಯ ಶಾಸ್ತ್ರ ಅನುಸಾರ ಸಾಧನೆಯ ಪ್ರಚಾರ ಮಾಡಿದರು. ಅಂದರೆ ಯಥಾರ್ಥ ಭಕ್ತಿಯ ಪ್ರಚಾರ ಮಾಡಿದರು.

ಪರಮಾತ್ಮನ ಸತ್ಯ ಸಾಧನೆಯನ್ನು ಮಾಡಲು ಮೊಟ್ಟಮೊದಲು 'ಗುರು' ಇರುವುದು ಅತಿ ಆವಶ್ಯಕವಾಗಿದೆ. ಇದರ ಪಾಲನೆಯನ್ನು ಮಾಡುತ್ತಾ ಶ್ರೀ ಗುರು ನಾನಕರು ಶಿಷ್ಯರನ್ನು ಸೇರಿಸಿಕೊಳ್ಳಲು ಪ್ರಾರಂಭಿಸಿದರು. ಸ್ವಯಂ ಅವರೇ ಗುರುವಿನ ಸ್ಥಾನದಲ್ಲಿ ವಿರಾಜಮಾನರಾಗಿದ್ದರು. ಶ್ರೀ ಗುರು ನಾನಕರ ಶಿಷ್ಯರನ್ನು (ಪಂಜಾಬಿ ಭಾಷೆಯಲ್ಲಿ) ಸಿಖ್ಖರೆಂದು ಕರೆಯುತ್ತಾರೆ. ಇದೇ ಕಾರಣದಿಂದ ಅವರ ಪ್ರತ್ಯೇಕವಾದ ಅಸ್ತಿತ್ವ ಪ್ರಾರಂಭವಾಯಿತು. ವರ್ತಮಾನದಲ್ಲಿ ಆ ಅನುಯಾಯಿಗಳ ಸಮೂಹವು ಧರ್ಮದ ರೂಪವನ್ನು ಧಾರಣೆ ಮಾಡಿತು. ನಂತರದಲ್ಲಿ ಹಿಂದೂ ಮತ್ತು ಸಿಖ್ಖರು ಪರಸ್ಪರ ಧರ್ಮದ ಹೆಸರಿನಲ್ಲಿ ಹೊಡೆದಾಡಲು ಪ್ರಾರಂಭಿಸಿದರು. ಇದು ವಿವೇಕದ ಕೊರತೆ.

ವಿವೇಚನೆ :– ಭಕ್ತಿ ಯಾವುದಾದರೂ ಮಾಡಿ. ಆದರೆ ಅವರಿಗೆ ಗುರು ಇರಬೇಕಾದದ್ದು ಆವಶ್ಯಕ, ಯಾರು ತಮ್ಮ ಮುಖ ಕಮಲದಿಂದ ತತ್ವಜ್ಞಾನ ಮತ್ತು ಸಾಧನೆಯ ವಿಧಾನವನ್ನು ಹೇಳುತ್ತಾರೋ, ಆ ಗುರು ಕೂಡಾ ಪೂರ್ಣ ಗುರುವಾಗಿರಬೇಕು. ಗುರು ಶರೀರದ ಹೆಸರು ಮಾತ್ರವಲ್ಲ. ಆ ಶರೀರದಲ್ಲಿ ಯಾವ ಆತ್ಮ ವಿದೆಯೋ, ಅವರೇ ಗುರು, ಶರೀರ ಪಂಚ ತತ್ವಗಳಿಂದಾಗಿರಬಹುದು ಅಥವಾ ಎಲೆಕ್ಟ್ರಾನಿಕ್ (ವೀಡಿಯೋ) ನಿಂದ ಆಗಿರಬಹುದು, ಅವರನ್ನು ಪೂರ್ಣ ಗುರು ಎಂದೇ ಕರೆಯಲಾಗುತ್ತದೆ. ಹಿಂದೂಗಳು ಹೆಚ್ಚಾಗಿ ಗುರುವಿಲ್ಲದೆಯೇ ತಮ್ಮ ಪರಂಪರಾಗತವಾದ ಸಾಧನೆಯನ್ನು ಮಾಡುತ್ತಿರುತ್ತಾರೆ. ಆ ದಾರಿತಪ್ಪಿದ ವಿಧಾನವನ್ನು ಶ್ರೀ ಗುರು ನಾನಕರು ಪರಮಾತ್ಮನಿಂದ ಪ್ರಾಪ್ತವಾದ ಜ್ಞಾನದಿಂದ ಸರಿಪಡಿಸಿದ್ದರು. ಇಂದು ಸಿಖ್ಖರಲ್ಲೂ ಪೂರ್ಣಗುರುವಿನ ಕೊರತೆ ಇದೆ. ಸೂಕ್ಷ್ಮವೇದದಲ್ಲಿ ಹೇಳಿರುವಂತೆ (ಸೂಕ್ಷ್ಮವೇದ ಎಂದರೆ ಏನು ಎಂಬುದನ್ನು ಇದೇ ಪುಸ್ತಕದಿಂದ ತಿಳಿದುಕೊಳ್ಳಿ) :–

ರಾಮ್–ಕೃಷ್ಣ ಸೇ ಕೌನ್ ಬಡಾ, ಉನ್ಹೋನೆ ಭೀ ಗುರು ಕೀನ್ಹ।
ತೀನ್ ಲೋಕ್ ಕೇ ವೇ ಧನೀ, ಗುರು ಆಗೇ ಆಧೀನ್॥

ಭಾವಾರ್ಥ :– ಯಾವ ಹಿಂದೂ ಶ್ರದ್ಧಾಳುಗಳು ಗುರುವಿಲ್ಲದೆ ತನ್ನ ಮನಸ್ಸಿಗೆ ಬಂದಂತೆ ಆಚರಣೆ ಮಾಡುತ್ತಾರೋ, ಅವರು ಶ್ರೀರಾಮ ಮತ್ತು ಶ್ರೀ ಕೃಷ್ಣನಿಗಿಂತ, ಯಾರನ್ನೂ ದೊಡ್ಡವರೆಂದು ನಂಬುವುದಿಲ್ಲ. ಮೂರು ಲೋಕದ ಒಡೆಯರಾದರೂ ಸಹ ಅವರು ಗುರು ಧಾರಣೆಮಾಡಿ ಭಕ್ತಿ ಮಾಡುತ್ತಿದ್ದರು ಹಾಗೂ ತಮ್ಮ ತಮ್ಮ ಗುರುಗಳ ಚರಣಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದರು. (ಶ್ರೀ ರಾಮನ ಗುರುಗಳು ವಸಿಷ್ಠರಾಗಿದ್ದರು ಹಾಗೂ ದೂರ್ವಾಸರು ಶ್ರೀಕೃಷ್ಣನ ಗುರುಗಳಾಗಿದ್ದರು. ಸಂದೀಪನಿ ಋಷಿಗಳಂತೂ ಅಕ್ಷರ ಜ್ಞಾನವನ್ನು ನೀಡುವಂಥಾ ಅಧ್ಯಾಪಕರಾಗಿದ್ದರು. ದೂರ್ವಾಸರು ಶ್ರೀಕೃಷ್ಣನ ಅಧ್ಯಾತ್ಮಿಕ ಗುರುಗಳಾಗಿದ್ದರು.) ನೀವು ಗುರುವಿಲ್ಲದೆ ನಿಮ್ಮ ಉದ್ಧಾರ ಮಾಡಿಕೊಳ್ಳಲು ಇಚ್ಛಿಸುತ್ತಿರುವಿರಿ, ನಿಮ್ಮದೇನು ಅಸ್ತಿತ್ವ ಇದೆ? ಸೂಕ್ಷ್ಮವೇದದಲ್ಲಿ ಪುನಃ ಹೇಳಲಾಗಿದೆ :–

ಕಬೀರ್, ಗುರು ಬಿನ್ ಮಾಲಾ ಫೇರ್‌ತೇ, ಗುರು ಬಿನ್ ದೇತೇ ದಾನ್।
ಗುರು ಬಿನ್ ದೋನೋಂ ನಿಷ್ಫಲ್ ಹೈ, ಭಾವೈಂ ಪೂಛೊ ವೇದ್ ಪುರಾಣ್॥

ಈ ಪುಸ್ತಕದಲ್ಲಿ ನಿಮಗೆ ಇನ್ನೂ ಹೆಚ್ಚಿನ ಭಕ್ತಿಯ ಗುರುಗಳು ಸಿಗುತ್ತಾರೆ ಹಾಗೂ ನಿಜವಾದ ಆಧ್ಯಾತ್ಮಜ್ಞಾನ ಮತ್ತು ಸಾಧನೆಯ ಅರಿವಾಗುವುದು. ಈ ಪುಸ್ತಕವು ಮಾನವನ ಕಲ್ಯಾಣ ಮಾಡುವುದು ಎಂದು ನಾನು ಆಶಿಸುವೆನು. ಈ ದಾಸನ ಪ್ರಯತ್ನವನ್ನು ಸಫಲಗೊಳಿಸು ಎಂದು ನಾನು ಪರಮಾತ್ಮನಲ್ಲಿ ವಿನಂತಿಸುವೆ. ಎಲ್ಲರೂ ನಿಮ್ಮ ಮಕ್ಕಳು. ನಿಮ್ಮ ಆತ್ಮಗಳು. ಇವರಿಗೆ ಯಥಾರ್ಥ ಭಕ್ತಿ ಮಾರ್ಗದ ಅರಿವಾಗಲಿ ಮತ್ತು ಎಲ್ಲಾ ಮಾನವರು ತಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಲಿ. ವಿಶ್ವದಲ್ಲಿ ಶಾಂತಿ ನೆಲೆಸಲಿ. "ಸತ್ಯ ಸಾಹೇಬ್"

ಸಂಗ್ರಹಕಾರ ಮತ್ತು ಲೇಖಕರು

ಭಕ್ತ ರಾಜು ದಾಸ್,

ಸತ್ಲೋಕ್ ಆಶ್ರಮ ಬರವಾಲಾ, ಜಿಲ್ಲೆ–ಹಿಸಾರ್, ಹರಿಯಾಣ.

# ಎರಡು ಮಾತು

ಜೀವವೇ ನಮ್ಮ ಜಾತಿ, ಮಾನವ ಧರ್ಮ ನಮ್ಮದು,
ಹಿಂದೂ, ಮುಸ್ಲಿಮ್, ಸಿಖ್, ಇಸಾಈ, ಯಾವ ಧರ್ಮವೂ ಬೇರೆಯಲ್ಲ.

ಶ್ರೀಮದ್ಭಗವದ್ಗೀತೆಯ ಜ್ಞಾನವು ಯಾವಾಗ (2012ನೇ ಇಸವಿಯಿಂದ ಸುಮಾರು 5550 ವರ್ಷಗಳ ಹಿಂದೆ) ಹೇಳಲ್ಪಟ್ಟಿತ್ತೋ, ಆ ಸಮಯದಲ್ಲಿ ಯಾವುದೇ ಧರ್ಮವಿರಲಿಲ್ಲ. ಹಿಂದೂ ಧರ್ಮ ಅಂದರೆ ಆದಿ ಶಂಕರಾಚಾರ್ಯರ ಮೂಲಕ ಆಚರಣೆಗೆ ಬಂದ ಪಂಚ ದೇವತಾ ಉಪಾಸನೆಯ ಪರಂಪರೆಯನ್ನು ಒಪ್ಪಿಕೊಳ್ಳುವವರು ಹಿಂದೂಗಳು ಎಂದು ಕರೆಯಲ್ಪಟ್ಟರು. (ವಾಸ್ತವದಲ್ಲಿ ಇದು ಸನಾತನ ಪಂಥವಾಗಿದೆ. ಇದು ಲಕ್ಷಾಂತರ ವರ್ಷಗಳಿಂದ ನಡೆದು ಬಂದಿದೆ) ಆದಿ ಶಂಕರಾಚಾರ್ಯರು 2012ನೇ ಇಸವಿಯಿಂದ 2500 ವರ್ಷಗಳ ಮೊದಲೇ ಇದರ (ಹಿಂದೂಧರ್ಮದ) ಸ್ಥಾಪನೆ ಮಾಡಿದ್ದರು. ಆದಿ ಶಂಕರಾಚಾರ್ಯರ ಜನ್ಮವು ಕ್ರಿಸ್ತ ಪೂರ್ವ 508 ವರ್ಷಗಳ ಮೊದಲೇ ಆಗಿತ್ತು. 8 ವರ್ಷದವರಾಗಿದ್ದಾಗಲೇ ಅವರಿಗೆ ಉಪನಿಷತ್ತುಗಳ ಜ್ಞಾನವಾಯಿತು. 16 ವರ್ಷದವರಾಗಿದ್ದಾಗ ಆದಿ ಶಂಕರಾಚಾರ್ಯರು ಗುಹೆಯಲ್ಲಿ ವಾಸವಿದ್ದ ಒಬ್ಬ ವಿರಕ್ತ ಸನ್ಯಾಸಿಯಿಂದ ದೀಕ್ಷೆ ಪಡೆದುಕೊಂಡಿದ್ದರು. ಆ ವಿರಕ್ತ ಸನ್ಯಾಸಿ ಅನೇಕ ದಿನಗಳವರೆಗೆ ಹೊರಗೇ ಬರುತ್ತಿರಲಿಲ್ಲ. ಆ ಮಹಾತ್ಮನು ಆದಿ ಶಂಕರಾಚಾರ್ಯರಿಗೆ 'ಜೀವವೇ ಬ್ರಹ್ಮ' ಎಂದು ಹೇಳಿದ್ದರು. (ಅಯಮ್ ಆತ್ಮ ಬ್ರಹ್ಮ) ಎಂದು ಬೋಧಿಸಿದ್ದರು ಹಾಗೂ ನಾಲ್ಕೂ ವೇದಗಳಲ್ಲಿ ಇದೇ ಪ್ರಮಾಣವನ್ನು ತಿಳಿಸಿಕೊಟ್ಟಿದ್ದರು. ನಾವೂ ಬ್ರಹ್ಮ, ನೀವೂ ಬ್ರಹ್ಮ (ಬ್ರಹ್ಮನ ಅರ್ಥ ಪರಮಾತ್ಮ) ಜೀವಾತ್ಮವೇ ಬ್ರಹ್ಮವಾದರೆ ಪೂಜೆಯ ಆವಶ್ಯಕತೆಯಾದರೂ ಏನು ಎಂದು ಜನರೆಲ್ಲಾ ಶಂಕರಾಚಾರ್ಯರನ್ನು ಪ್ರಶ್ನಿಸಿದರು. ಈ ಪ್ರಶ್ನೆಯಿಂದ ಆದಿ ಶಂಕರಾಚಾರ್ಯರು ಅಸಮಂಜಸದಲ್ಲಿ ಬಿದ್ದರು. ಆದಿ ಶಂಕರಾಚಾರ್ಯರು ವಿವೇಕದಿಂದ ಶ್ರೀ ವಿಷ್ಣು ಹಾಗೂ ಶಿವನ ಪೂಜೆ ಮಾಡಿ ಎಂದು ಹೇಳಿದರು.

ನಂತರ ಪಂಚ ದೇವತೆಗಳ ಉಪಾಸನೆಯ ವಿಧಾನವನ್ನು ದೃಢಪಡಿಸಿದರು. 1) ಶ್ರೀ ಬಹ್ಮಾ 2) ಶ್ರೀ ವಿಷ್ಣು 3) ಶ್ರೀ ಶಿವ 4) ಶ್ರೀದೇವಿ 5) ಶ್ರೀಗಣೇಶ. ಆದರೆ ಮೂಲ ರೂಪದಲ್ಲಿ, ಇಷ್ಟದೈವನ ರೂಪದಲ್ಲಿ ತಮೋಗುಣ ಶಿವನನ್ನೇ ಆರಾಧಿಸಲಾಗುತ್ತದೆ. ಆದಿ ಶಂಕರಾಚಾರ್ಯರು ತಮ್ಮ 20ನೇ ವಯಸ್ಸಿನಲ್ಲಿ ಈ ವಿಧಾನವನ್ನು ಅನುಷ್ಠಾನಕ್ಕೆ ತಂದರು. ಅಂದರೆ ಕ್ರಿಸ್ತ ಪೂರ್ವ 488ರ ಮೊದಲೇ ಹಿಂದೂಧರ್ಮವನ್ನು ಸ್ಥಾಪಿಸಿದ್ದರು. ಇದರ ಪ್ರಚಾರಕ್ಕಾಗಿ ಅವರು ಭಾರತ ವರ್ಷದ ನಾಲ್ಕೂ ದಿಕ್ಕುಗಳಲ್ಲಿ ಒಂದೊಂದು ಶಂಕರ ಮಠವನ್ನು ಸ್ಥಾಪನೆ ಮಾಡಿದ್ದರು. ಆದಿ ಶಂಕರಾಚಾರ್ಯರು 1) ಗಿರಿ ಸಾಧುಗಳನ್ನು ನೇಮಿಸಿದರು. ಅವರು ಪರ್ವತಗಳಲ್ಲಿ ವಾಸವಾಗಿರುವ ಜನರ ಮಧ್ಯೆ ತಮ್ಮ ಧರ್ಮದ ಪ್ರಚಾರವನ್ನು ಮಾಡುತ್ತಿದ್ದರು. 2) ಪುರೀ ಸಾಧುಗಳನ್ನು ನೇಮಿಸಿದರು ಅವರು ಹಳ್ಳಿ–ಹಳ್ಳಿಗಳಿಗೆ ಹೋಗಿ ತಮ್ಮ ಧರ್ಮದ ಪ್ರಚಾರ ಮಾಡುತ್ತಿದ್ದರು. 3) ಸನ್ಯಾಸಿ ಸಾಧುಗಳನ್ನು ನೇಮಿಸಿದರು, ಅವರು ವಿರಕ್ತರಾಗಿ ಜನರನ್ನು ಪ್ರಭಾವಿತರನ್ನಾಗಿ ಮಾಡಿ ತಮ್ಮ ಗುಂಪಿನಲ್ಲಿ ಸೇರಿಸಿಕೊಳ್ಳುತ್ತಿದ್ದರು. 4) ವಾನಪ್ರಸ್ಥ ಸಾಧುಗಳನ್ನು ನೇಮಿಸಿದರು. ಅವರು ಕಾಡಿನಲ್ಲಿರುವ ಜನರಿಗೆ ತಮ್ಮ ಅಭಿಪ್ರಾಯ ತಿಳಿಸಿ ತಮ್ಮ ಗುಂಪಿನಲ್ಲಿ ಸೇರಿಸಿಕೊಳ್ಳುತ್ತಿದ್ದರು. ವೇದಗಳನ್ನು (ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ) ಹಾಗೂ ಗೀತೆ ಮತ್ತು ಪುರಾಣಗಳನ್ನು, ಉಪನಿಷತ್ತುಗಳನ್ನು ಸತ್ಯಜ್ಞಾನದಿಂದ ಕೂಡಿದ ಪುಸ್ತಕ ಎಂದು ತಿಳಿಯುತ್ತಿದ್ದರು. ಇಂದಿಗೂ ಹಿಂದೂ ಧರ್ಮದ ಶ್ರದ್ಧಾಳುಗಳು, ಈ ಧಾರ್ಮಿಕ ಗ್ರಂಥಗಳನ್ನೇ ಸತ್ಯವೆಂದು ತಿಳಿಯುತ್ತಾರೆ. ಈ ರೀತಿ ಹಿಂದೂಧರ್ಮದ ಸ್ಥಾಪನೆಯು ಕ್ರಿ.ಶ 488 ವರ್ಷಗಳ ಹಿಂದೆ (2012ನೇ ಇಸವಿಯಿಂದ 2500 ವರ್ಷಗಳ ಹಿಂದೆ) ಆಗಿತ್ತು. ಆದಿ ಶಂಕರಾಚಾರ್ಯರು 30 ವರ್ಷದವರಾಗಿದ್ದಾಗ

ಅಸಾಧ್ಯ ರೋಗದಿಂದಾಗಿ ತಮ್ಮ ಶರೀರವನ್ನು ತ್ಯಜಿಸಿ, ಭಗವಂತ ಶಿವನ ಲೋಕಕ್ಕೆ ಹೋದರು. ಏಕೆಂದರೆ ಅವರು ಶಿವನ ಉಪಾಸಕರಾಗಿದ್ದರು. ಅವರನ್ನು ಅದೇ ಲೋಕದಿಂದ ಈ ಧರ್ಮದ ಸ್ಥಾಪನೆಗಾಗಿ ಬಂದವರೆಂದು ತಿಳಿಯಲಾಯಿತು. ಆ ಸಮಯದಲ್ಲಿ ಬೌದ್ಧಧರ್ಮವು ಬಹಳ ವೇಗವಾಗಿ ಹರಡುತ್ತಿತ್ತು. ಅದು ಭಾರತದಲ್ಲಿ ಹರಡುವುದನ್ನು ಅವರು ತಡೆದರು. ಬೌದ್ಧಧರ್ಮ ಹರಡಿದ್ದಿದ್ದರೆ ಚೀನಾ ದೇಶದಂತೆ ಭಾರತವಾಸಿಗಳೂ ಸಹ ನಾಸ್ತಿಕರಾಗುತ್ತಿದ್ದರು.

**2.** ಕ್ರೈಸ್ತ ಧರ್ಮದ ಸ್ಥಾಪನೆ :- ಯೇಸುಕ್ರಿಸ್ತರಿಂದ ಕ್ರೈಸ್ತ ಧರ್ಮದ ಸ್ಥಾಪನೆಯಾಯಿತು. ಯೇಸುಕ್ರಿಸ್ತರು 32 ವರ್ಷದವರಿದ್ದಾಗ ಅವರನ್ನು ಮೊಳೆಗಳಿಂದ ಶಿಲುಬೆಗೆ ಏರಿಸಿದರು. ಅವರನ್ನು ವಿರೋಧಿಸುವ ಧರ್ಮಗುರುಗಳು ಗವರ್ನರ್ ಮೇಲೆ ಒತ್ತಡ ತಂದು ಅವರನ್ನು ಸಾಯಿಸಿದರು.

ಯಾರು ಪವಿತ್ರ ಗೀತೆ ಮತ್ತು ಪವಿತ್ರ ವೇದಗಳ ಜ್ಞಾನವನ್ನು ನೀಡಿದ್ದನೋ, ಅದೇ ಪ್ರಭುವು ಯೇಸುವಿಗೆ ಪವಿತ್ರ 'ಇಂಜಿಲ್'ಎಂಬ ಗ್ರಂಥವನ್ನು ಕೊಟ್ಟು ಕಳುಹಿಸಿದ್ದನು. ಇಂಜಿಲ್ ಗ್ರಂಥದಲ್ಲಿ ಭಿನ್ನ ಜ್ಞಾನವಿಲ್ಲ. ಏಕೆಂದರೆ ಆಧ್ಯಾತ್ಮಿಕ ಜ್ಞಾನವು ಈ ಮೊದಲೇ ಪವಿತ್ರ ಗೀತೆ ಹಾಗೂ ಪವಿತ್ರ ವೇದಗಳಲ್ಲಿ ಹೇಳಲ್ಪಟ್ಟಿತ್ತು. ಅವು ಯಾವುದೇ ಧರ್ಮ ವಿಶೇಷದವರಿಗಾಗಿ ಅಲ್ಲ. ಪವಿತ್ರ ಗೀತೆ ಹಾಗೂ ವೇದಗಳ ಜ್ಞಾನವು ಮಾನವನಿಗಾಗಿ ಮಾತ್ರ. ಯೇಸುಕ್ರಿಸ್ತನ ನಂತರ ಸುಮಾರು 600 ವರ್ಷಗಳು ಕಳೆದ ನಂತರ ಹಜರತ್ ಮೊಹಮ್ಮದರು ಇಸ್ಲಾಂ ಧರ್ಮದ ಸ್ಥಾಪನೆ ಮಾಡಿದರು. ಮೊಹಮ್ಮದರಿಗೆ ಪವಿತ್ರ 'ಕುರಾನ್ ಶರೀಫ್' ಎಂಬ ಗ್ರಂಥವನ್ನು ಅದೇ ಬ್ರಹ್ಮನು ನೀಡಿದ್ದನು. ಅದರಲ್ಲೂ ಸಹ ಭಕ್ತಿಯ ವಿಧಾನವು ಸಂಪೂರ್ಣವಾಗಿ ಇಲ್ಲ. ಕೇವಲ ಸಾಂಕೇತಿಕವಾಗಿದೆ. ಏಕೆಂದರೆ ಭಕ್ತಿಯ ಜ್ಞಾನವನ್ನು ವೇದಗಳು ಹಾಗೂ ಗೀತೆಯಲ್ಲಿ ಮುಂಚೆಯೇ ಹೇಳಲಾಗಿತ್ತು. ಆದ್ದರಿಂದ ಕುರಾನ್ ಶರೀಫ್‌ನಲ್ಲಿ ಪುನಃ ಹೇಳುವುದು ಅನಿವಾರ್ಯವಾಗಿರಲಿಲ್ಲ. ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ, ಯಜುರ್ವೇದದ 40ನೇ ಅಧ್ಯಾಯದ 10ನೇ ಮಂತ್ರದಲ್ಲಿ ಹೇಳಿರುವುದೇನೆಂದರೆ, ಸರ್ವ ಸೃಷ್ಟಿ ರಚನೆ ಮಾಡಿರುವ ಪೂರ್ಣ ಪರಮಾತ್ಮನ ಬಗ್ಗೆ ತತ್ವದರ್ಶಿ ಸಂತರಿಗೆ ಕೇಳು. ಅವರು ಸರಿಯಾದ ಜ್ಞಾನವನ್ನು ಹಾಗೂ ಭಕ್ತಿಯ ವಿಧಿಯನ್ನು ನೀಡುವರು. ಯಾವ ಸಂತನು ಆ ಪೂರ್ಣ ಪರಮಾತ್ಮನ ಜ್ಞಾನವನ್ನು ಅರಿತಿರುತ್ತಾನೋ, ಅವನು ಸತ್ಯ ಸಾಧನೆಯನ್ನೂ ಸಹ ಅರಿತಿರುತ್ತಾನೆ.

ಗೀತೆಯ ಜ್ಞಾನದಾತನೇ ಬೈಬಲ್ ಗ್ರಂಥದ ಜ್ಞಾನವನ್ನು ನೀಡಿದ್ದಾನೆ. (ಬೈಬಲ್ ಮೂರು ಪುಸ್ತಕಗಳ ಸಂಗ್ರಹ. 1) ಜಬೂರ್ 2) ತೌರತ್ 3) ಇಂಜಿಲ್) ಬೈಬಲ್ ಗ್ರಂಥದ ಉತ್ಪತ್ತಿ ಗ್ರಂಥದ ಆರಂಭದಲ್ಲಿಯೇ ಪರಮೇಶ್ವರನು ಮನುಷ್ಯರನ್ನು ತನ್ನಂತೆ ಅರ್ಥಾತ್ ತನ್ನ ಸ್ವರೂಪಕ್ಕೆ ಅನುಸಾರವಾಗಿ ಉತ್ಪತ್ತಿ ಮಾಡಿದ್ದಾನೆ. ಹೆಣ್ಣು-ಗಂಡು ಎಂದು ಉತ್ಪತ್ತಿ ಮಾಡಿದ್ದಾನೆ ಎಂದು ಬರೆಯಲಾಗಿದೆ. ಆರು ದಿನಗಳಲ್ಲಿ ಸೃಷ್ಟಿಯ ರಚನೆ ಮಾಡಿ ಪರಮೇಶ್ವರನು 7ನೇ ದಿನ ವಿಶ್ರಾಂತಿ ಪಡೆದನು ಎಂದು ಬರೆಯಲಾಗಿದೆ.

ಕುರ್‌ಆನ್ ಶರೀಫ್ :- ಕುರ್‌ಆನ್ ಶರೀಫ್ ಪುಸ್ತಕದಲ್ಲಿ ಸೂರತಿ ಫೂರ್ಕಾನಿ 25ನೇ ಆಯತ್ತಿನ 52ರಿಂದ 59ನೇ ಸಂಖ್ಯೆಯಲ್ಲಿ ಹೇಳಿರುವುದೇನೆಂದರೆ, 'ಅಲ್ಲಾಹ್ ಕಬೀರನು ಆರು ದಿನಗಳಲ್ಲಿ ಸೃಷ್ಟಿಯನ್ನು ರಚನೆ ಮಾಡಿದ ನಂತರ ಮೇಲೆ ಆಕಾಶದಲ್ಲಿ ಗದ್ದುಗೆ (ಸಿಂಹಾಸನದ) ಮೇಲೆ ವಿರಾಜಮಾನನಾದನು. ಆ ಪರಮೇಶ್ವರನ ವಿಷಯದಲ್ಲಿ ಯಾರಾದರೂ ಬಾಖಬರ್ ಅಂದರೆ ತತ್ವದರ್ಶಿ ಸಂತರಿಂದ ಕೇಳಿ ತಿಳಿದುಕೋ'. ಕುರ್‌ಆನ್‌ನ ಲೇಖನದಿಂದ ಸ್ಪಷ್ಟವಾಗುವುದೇನೆಂದರೆ, ಕುರ್‌ಆನ್ ಶರೀಫ್‌ನ ಜ್ಞಾನವನ್ನು ನೀಡಿದವನೂ ಸಹ ಪೂರ್ಣ ಪರಮಾತ್ಮ ಅರ್ಥಾತ್ ಅಲ್ಲಾಹುಅಕಬರ್ (ಅಲ್ಲಾಹ್ ಕಬೀರ್)ನ ಬಗ್ಗೆ ಪೂರ್ಣ ಜ್ಞಾನವನ್ನು ಹೊಂದಿಲ್ಲ.

ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿರುವಂತೆ ಕುರ್‌ಆನ್ ಶರೀಫ್‌ನ 42ನೇ ಸೂರತಿಯ ಪ್ರಥಮ ಆಯತ್‌ನಲ್ಲೂ ಈ ಮೂರೂ ಮಂತ್ರಗಳ ಸಾಂಕೇತಿಕ ಜ್ಞಾನವಿದೆ. ಏನೆಂದರೆ ಬ್ರಹ್ಮಣಃ ಅಂದರೆ ಸಚ್ಚಿದಾನಂದ ಘನ ಬ್ರಹ್ಮನ ಭಕ್ತಿಯ 'ಓಂ-ತತ್-ಸತ್' ಎಂಬ ಮೂರು ನಾಮಮಂತ್ರಗಳ ಸ್ಮರಣೆ ಮಾಡು.

ಕುರ್‌ಆನ್ ಶರೀಫ್‌ನಲ್ಲಿ 42ನೇ ಸೂರತಿಯ ಪ್ರಥಮ ಆಯತ್‌ನಲ್ಲಿ ಇವುಗಳನ್ನೇ ಸಾಂಕೇತಿಕವಾಗಿ ಈ ರೀತಿ ಬರೆದಿದೆ. "ಅಯ್‌ನ್-ಸೀನ್-ಕಾಫ್".

'ಅಯ್‌ನ್' ಹಿಂದಿಯ 'ಅ' ಅಕ್ಷರವಾಗಿದೆ. ಇದರ ಸಂಕೇತ 'ಓಂ' ನ ಕಡೆಗಿದೆ. 'ಅಯ್‌ನ್'ನ ಭಾವಾರ್ಥ 'ಓಂ' ಆಗಿದೆ. ಸೀನ್=ಸ ಅಂದರೆ ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ 'ತತ್' ಮಂತ್ರವಿದೆ. ಅದರ ವಾಸ್ತವಿಕ ಮಂತ್ರದ ಮೊದಲನೇ ಅಕ್ಷರ 'ಸ' ಆಗಿದೆ. ಇದೇ ಓಂ+ಸೀನ್ ಅಥವಾ ತತ್ ಸೇರಿ ಸತ್ಯನಾಮ ಎಂಬ ಎರಡು ಮಂತ್ರವಾಗಿದೆ. ಕುರ್‌ಆನ್ ಶರೀಫ್ ನಲ್ಲಿ ಬರೆದಿರುವ ಮೂರನೇ ಮಂತ್ರ 'ಕಾಫ್'=ಕ ಆಗಿದೆ. ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಬರೆದಿರುವ ಮೂರನೇ ಮಂತ್ರದಲ್ಲಿ ಅಂತಿಮ 'ಸತ್' ಮಂತ್ರವಾಗಿದೆ (ಹೇಗೆ ಗುರುಮುಖಿಯಲ್ಲಿ 'ಕ' ವನ್ನು ಕಕಾ ಎಂದೂ, 'ಖ' ವನ್ನು 'ಖಖಾ' ಎಂದೂ ಹಾಗೂ 'ಗ' ವನ್ನು 'ಗಗಾ' ಎಂದೂ 'ಊ' ವನ್ನು 'ಊಡಾ' ಎಂದೂ 'ಈ' ಯನ್ನು 'ಈಡಾ' ಎಂದೂ ಹೇಳುತ್ತಾರೋ ಹಾಗೂ ಬರೆಯುತ್ತಾರೋ, ಹಾಗೆ ಕುರ್‌ಆನ್ ನಲ್ಲಿ ಅ, ಸ, ಕ ವನ್ನು ಬರೆಯಲಾಗಿದೆ.)

'ಸತ್' ಮಂತ್ರವು ಸಾಂಕೇತಿಕವಾಗಿದೆ. ಆದರೆ ನಿಜವಾದ ಮಂತ್ರದ ಮೊದಲ ಅಕ್ಷರವು 'ಕ' ಆಗಿದೆ (ಅದು 'ಕರೀಮ್' ಮಂತ್ರ) ಇದನ್ನು ಸಾರನಾಮವೆಂದೂ ಕರೆಯುತ್ತಾರೆ. ಯಾವ ಭಕ್ತರಿಗೆ ನನ್ನ (ಸಂತ ರಾಮ್‌ಪಾಲ್ ದಾಸನ) ಮೂಲಕ ಮೂರೂ ಮಂತ್ರಗಳ ಉಪದೇಶ ಪ್ರಾಪ್ತವಾಗಿದೆಯೋ, ಅವರು ಆ ಎರಡೂ ಸಾಂಕೇತಿಕ ಮಂತ್ರಗಳ ನಿಜವಾದ ಹೆಸರುಗಳನ್ನು ಬಲ್ಲವರಾಗಿದ್ದಾರೆ.

## "ಎಲ್ಲಾ ಗ್ರಂಥಗಳಲ್ಲೂ ಕೆಲವು ಸಮಾನತೆಗಳು"

ಬೈಬಲ್ ಗ್ರಂಥದ ಉತ್ಪತ್ತಿಯ ಗ್ರಂಥದಲ್ಲಿ ಹೇಳಿರುವುದೇನೆಂದರೆ, 'ಆದಮ್' ಮತ್ತು ಅವನ ಧರ್ಮಪತ್ನಿ ('ಹವ್ವಾ') ಉದ್ಯಾನವನದ ಮಧ್ಯದಲ್ಲಿದ್ದ ಮರಗಳ ಹಣ್ಣುಗಳನ್ನು ತಿಂದಾಗ ಅವರಿಗೆ ಒಳ್ಳೆಯದು-ಕೆಟ್ಟದ್ದರ ಅರಿವಾಯಿತು. ಸಂಜೆಯ ಸಮಯದಲ್ಲಿ ಪ್ರಭುಗಳು ಉದ್ಯಾನವನದಲ್ಲಿ ತಿರುಗಾಡಲು ಬಂದಾಗ ಆದಮ್ ಮತ್ತು (ಹವ್ವಾ) ಒಳ್ಳೆಯ-ಕೆಟ್ಟದರ ಅರಿವು ಮೂಡಿಸುವ ಮರದ ಹಣ್ಣುಗಳನ್ನು ತಿಂದಿದ್ದಾರೆ ಎಂದು ತಿಳಿಯಿತು. ಆಗ ಆ ಪ್ರಭುವೆಂದರು "ಒಳ್ಳೆಯ-ಕೆಟ್ಟದರ ಅರಿವು ಉಂಟಾಗುವುದರಿಂದ ಆದಮ್ ಮತ್ತು ಅವನ ಹೆಂಡತಿ ನಮ್ಮವರಲ್ಲಿ ಒಬ್ಬರಾಗಿ ಬಿಟ್ಟಿದ್ದಾರೆ. ಇವರು ಅಮರರಾಗುವ ವೃಕ್ಷಗಳ ಹಣ್ಣನ್ನು ತಿಂದು ಅಮರರಾಗಬಹುದೆಂದು ತಿಳಿದು, ಹಾಗೆ ಆಗದಿರಲಿ. ಆದ್ದರಿಂದ ಆದಮ್ ಮತ್ತು ಅವನ ಹೆಂಡತಿಗೆ ಸ್ವರ್ಗದ ಉದ್ಯಾನವನದಿಂದ ಹೊರಗೆ ಹಾಕಿ ಭೂಮಿಯ ಮೇಲೆ ಕಳುಹಿಸಲಾಯಿತು." (ಲೇಖನ ಮುಗಿಯಿತು)

ವಿವೇಚನೆ:- ಇದರಿಂದ ತಿಳಿಯುವುದೇನೆಂದರೆ, "ಪ್ರಭುಗಳು ಒಬ್ಬರಿಗಿಂತ ಹೆಚ್ಚಾಗಿದ್ದಾರೆ, ಏಕೆಂದರೆ ಒಳ್ಳೆಯ-ಕೆಟ್ಟದರ ಅರಿವು ಉಂಟಾಗುವುದರಿಂದ ನಮ್ಮವರಲ್ಲಿ ಒಬ್ಬವರಾಗಿ ಬಿಟ್ಟಿದ್ದಾರೆ ಎಂದು ಪ್ರಭುಗಳು ಮೇಲೆ ತಿಳಿಸಿದ್ದಾರೆ, ಬೈಬಲ್ ಗ್ರಂಥದಲ್ಲಿ 'ಅಬ್ರಾಹಿಮ್' ಮಾಮರೆ ವೃಕ್ಷಗಳ ಕೆಳಗೆ ಕುಳಿತಿದ್ದನು ಅವನಿಗೆ ಮೂವರು ಪ್ರಭುಗಳು ಕಾಣಿಸಿದರು. ಅವರಿಗೆ ತಿಂಡಿ ತಿನ್ನಿಸಿ, ದೀರ್ಘದಂಡವತ ನಮಸ್ಕಾರ ಮಾಡಿ ಆಶೀರ್ವಾದ ಪಡೆದನು ಎಂದು ಹೇಳಿದೆ. ಇದರಿಂದ ಬೈಬಲ್‌ನಲ್ಲಿ ಮೂವರು ಪ್ರಭುಗಳಿದ್ದಾರೆ ಎನ್ನುವುದು ಸಾಬೀತಾಯಿತು.

ಮುಸಲ್ಮಾನ ಧರ್ಮದಲ್ಲಿ “ನಾಲ್ಕು ಯಾರಿ”ಗಳಿದ್ದಾರೆ ಎಂದು ಭಾವಿಸಲಾಗಿದೆ. ಇವರು ಬಾಲಕರ ರೂಪದಲ್ಲಿರುತ್ತಾರೆ. ಸೂಕ್ಷ್ಮವೇದ ಅರ್ಥಾತ್ ತತ್ವಜ್ಞಾನದಲ್ಲಿ ಹೀಗೆಂದು ಹೇಳಲಾಗಿದೆ:–

ವಹೀ ಸನಕ್ ಸನಂದನಾ, ವಹೀ ಚಾರ್ ಯಾರೀ।
ತತ್ವಜ್ಞಾನ್ ಜಾನೇ ಬಿನಾ, ಬಿಗಡೀ ಬಾತ್ ಸಾರೀ॥

ಭಾವಾರ್ಥ:– ಹಿಂದೂ ಧರ್ಮದಲ್ಲಿ ಬಾಲಕರ ರೂಪದಲ್ಲಿ ಸನಕ, ಸನಂದನ, ಸನಾತನ ಮತ್ತು ಸಂತಕುಮಾರರು ಇರುತ್ತಾರೆ ಅವರು ಬ್ರಹ್ಮಾಜಿ ಅವರ ಮಾನಸ ಮಕ್ಕಳು ಮುಸ್ಲಿಂ ಧರ್ಮದಲ್ಲಿ ಅವರನ್ನೇ ‘ನಾಲ್ಕು ಯಾರಿ’ ಅಂದರೆ ನಾಲ್ವರು ಬಾಲಕ ಮಿತ್ರರು ಎಂದು ಕರೆಯುತ್ತಾರೆ. ನಂತರ ಸೂಕ್ಷ್ಮವೇದದಲ್ಲಿ ಹೇಳಲಾಗಿದೆ :–

ವಹೀ ಮೊಹಮ್ಮದ್ ವಹೀ ಮಹಾದೇವ್, ವಹೀ ಆದಮ್ ವಹೀ ಬ್ರಹ್ಮಾ।
ದಾಸ್‌ಗರೀಬ್ ದೂಸ್‌ರಾ ಕೋಯೀ ನಹೀ, ದೇಖ್ ಆಪ್‌ನೆ ಘರಮಾ॥

ಭಾವಾರ್ಥ :– ಮುಸಲ್ಮಾನ ಧರ್ಮದ ಪ್ರವರ್ತಕರಾದ ಹಜರತ್ ಮೊಹಮ್ಮದ್‌ರವರು ಶಿವನ ಲೋಕದಿಂದ ಬಂದಿದ್ದರು, ಒಂದು ಗುಹೆಯಲ್ಲಿ ಕುಳಿತು ಪರಂಪರಾಗತವಾದ ಸಾಧನೆ ಒಂದು ಗುಹೆಯಲ್ಲಿ ಕುಳಿತು ಮಾಡುತ್ತಿದ್ದರು, ಪುಣ್ಯಕರ್ಮಿ ಆತ್ಮದವರಾಗಿದ್ದರು. ಹನ್ನೊಂದು ರುದ್ರರಲ್ಲಿ ಒಬ್ಬರಾದ ಶಿವನ ಒಂದು ಗಣವು ಆ ಮುಹಮ್ಮದರನ್ನು ಆ ಗುಹೆಯಲ್ಲಿ ಭೇಟಿಯಾಯಿತು. ಅವರದೇ ಆದ ಭಾಷೆಯಲ್ಲಿ (ಅರಬೀ ಭಾಷೆ) ಕಾಲಪ್ರಭು ಅರ್ಥಾತ್ ಬ್ರಹ್ಮನ ಸಂದೇಶವನ್ನು ತಿಳಿಸಿತು. ಅದೇ ರುದ್ರನನ್ನು ಮುಸಲ್ಮಾನರು ಜಬರಿಲ್ ದೇವತೆ ಎಂದು ಕರೆಯುತ್ತಾರೆ. ಅವನನ್ನು ಒಳ್ಳೆಯ ದೇವತೆ ಎಂದು ಭಾವಿಸಲಾಗುತ್ತದೆ.

ಭಾವಾರ್ಥವೇನೆಂದರೆ, ಹಜರತ್ ಮುಹಮ್ಮದರೂ ಸಹ ಶಿವನ ಮಕ್ಕಳು. ಮುಸಲ್ಮಾನ ಧರ್ಮದ ಪವಿತ್ರ ತೀರ್ಥ ಸ್ಥಾನವಾದ ‘ಕಾಬಾ’ದಲ್ಲಿ ಶಂಕರ ಭಗವಂತನ ಲಿಂಗದ ಆಕಾರದ ಕಲ್ಲು ಇದೆ. ಅದಕ್ಕೆ ಮುಸಲ್ಮಾನ ಶ್ರದ್ಧಾಳುಗಳು ನಮಿಸುತ್ತಾರೆ. ಅರ್ಥಾತ್ ಪ್ರಣಾಮ ಮಾಡುತ್ತಾರೆ.

2. ಆದಮ್ ಬಾಬಾ:– ಪುರಾಣಗಳಲ್ಲಿ ಹಾಗೂ ಜೈನ ಧರ್ಮದ ಗ್ರಂಥಗಳಲ್ಲಿ ಒಂದು ಪ್ರಸಂಗವಿದೆ. ಅದು ಈ ರೀತಿ ಇದೆ: – ವೃಷಭದೇವನು ನಾಭಿರಾಜ ಎನ್ನುವ ರಾಜನ ಮಗನಾಗಿದ್ದನು. ನಾಭಿರಾಜನು ಅಯೋಧ್ಯೆಯ ರಾಜನಾಗಿದ್ದನು. ವೃಷಭದೇವನಿಗೆ ನೂರು ಪುತ್ರರು ಹಾಗೂ ಒಬ್ಬಳು ಪುತ್ರಿ ಇದ್ದಳು. ಒಂದು ದಿನ ಪರಮೇಶ್ವರನು ಒಬ್ಬ ಸಂತನ ರೂಪದಲ್ಲಿ ವೃಷಭದೇವನನ್ನು ಭೇಟಿಯಾದನು. ಅವನಿಗೆ ಭಕ್ತಿ ಮಾಡಲು ಪ್ರೇರೆಪಿಸಿದನು, ಅವನಿಗೆ ಜ್ಞಾನ ತಿಳಿಸಿದರು ಮಾನವ ಜೀವನದಲ್ಲಿ ಶಾಸ್ತ್ರವಿಧಿ ಅನುಗುಣವಾಗಿ ಸಾಧನೆ ಮಾಡದಿದ್ದರೆ ಮಾನವ ಜೀವನ ವ್ಯರ್ಥವಾಗುತ್ತದೆ. ಇಂದು ಏನೆಲ್ಲಾ ಮನುಷ್ಯನಿಗೆ ಸಿಕ್ಕಿದೆಯೋ, ಅದು ಪೂರ್ವ ಜನ್ಮ–ಜನ್ಮಾಂತರಗಳಲ್ಲಿ ಮಾಡಿದ ಪುಣ್ಯ ಹಾಗೂ ಪಾಪಗಳ ಫಲ. ನೀವು ರಾಜರಾಗಿದ್ದೀರಿ. ಇದು ನಿಮ್ಮ ಪೂರ್ವಜನ್ಮದ ಒಳ್ಳೆಯ ಕರ್ಮಫಲ.

ಒಂದು ವೇಳೆ ಈಗ ಭಕ್ತಿ ಮಾಡದಿದ್ದರೆ, ನೀವು ಭಕ್ತಿಹೀನ, ಶಕ್ತಿಹೀನ ಹಾಗೂ ಪುಣ್ಯಹೀನರಾಗಿ ನರಕದಲ್ಲಿ ಬೀಳುವಿರಿ. ನಂತರ ಅನ್ಯ ಪ್ರಾಣಿಗಳ ಶರೀರದಲ್ಲಿ ಇದ್ದು ಕಷ್ಟಪಡುವಿರಿ. (ಹೇಗೆಂದರೆ ವರ್ತಮಾನದಲ್ಲಿ ಇನ್ವರ್ಟರ್‌ನ ಬ್ಯಾಟರಿಚಾರ್ಜ್ ಮಾಡಿದೆ ಹಾಗೂ ಚಾರ್ಜರ್‌ನನ್ನು ಅದರಿಂದ ಬೇರ್ಪಡಿಸಲಾಗಿದೆ ಎಂದಿಟ್ಟುಕೊಳ್ಳೋಣ. ಆದರೂ ಬ್ಯಾಟರಿ ಕೆಲಸ ಮಾಡುತ್ತಿದೆ, ಫ್ಯಾನ್‌ತಿರುಗುತ್ತಿದೆ. ಬಲ್ಬ್, ಟ್ಯೂಬ್‌ಗಳೂ ಉರಿಯುತ್ತಿವೆ. ಮತ್ತೆ ಚಾರ್ಜರ್‌ನಿಂದ ಚಾರ್ಜ್ ಮಾಡದಿದ್ದರೆ ಕೆಲ ಸಮಯದ ನಂತರ ಇನ್ವರ್ಟರ್ ಎಲ್ಲಾ ಕೆಲಸಗಳನ್ನೂ ನಿಲ್ಲಿಸಿಬಿಡುತ್ತದೆ. ಫ್ಯಾನ್ ತಿರುಗುವುದಿಲ್ಲ, ಬಲ್ಬ್ ಅಥವಾ ಟ್ಯೂಬ್‌ಲೈಟ್ ಉರಿಯುವುದಿಲ್ಲ.) ಇದೇ ರೀತಿ

ಮಾನವ ಶರೀರವು ಒಂದು ಇನ್ವರ್ಟರ್ ಇದ್ದಂತೆ. ಶಾಸ್ತ್ರಾನುಕೂಲ ಭಕ್ತಿ ಚಾರ್ಜರ್ ಇದೆ. ಪರಮಾತ್ಮನ ಶಕ್ತಿಯಿಂದ ಮಾನವನು ಮತ್ತೆ ಚಾರ್ಜ್ ಆಗುತ್ತಾನೆ ಅಂದರೆ ಭಕ್ತಿಯ, ಶಕ್ತಿಯ ಧನಿಕನಾಗುತ್ತಾನೆ ಹಾಗೂ ಪುಣ್ಯವಂತನಾಗುತ್ತಾನೆ.

ಈ ಜ್ಞಾನವನ್ನು ಆ ಋಷಿಯರೂಪದಲ್ಲಿ ಪ್ರಕಟವಾಗಿರುವ ಪರಮಾತ್ಮನ ಮುಖ ಕಮಲದಿಂದ ಕೇಳಿದ ಋಷಭದೇವನು ಭಕ್ತಿಯನ್ನು ಮಾಡಲು ದೃಢ ಮನಸ್ಸಿನಿಂದ ನಿರ್ಧರಿಸಿದನು. ಋಷಭದೇವನು ಋಷಿಯ ಹೆಸರನ್ನು ತಿಳಿಯಲು ಇಚ್ಛಿಸಿದಾಗ ಋಷಿಯು ತನ್ನ ಹೆಸರನ್ನು 'ಕವಿ ದೇವ' ಅಂದರೆ ಕವಿರ್ದೇವ ಎಂದು ಹೇಳಿದನು ಹಾಗೂ ನಾನು ಸ್ವತಃ ಪೂರ್ಣ ಪರಮಾತ್ಮನೆಂದು ಹೇಳಿದನು. ನನ್ನ ಹೆಸರು ನಾಲ್ಕೂ ವೇದಗಳಲ್ಲಿ ಕವಿರ್ದೇವ ಎಂದು ಬರೆದಿದೆ, ನಾನೇ ಪರಮ ಅಕ್ಷರ ಬ್ರಹ್ಮ ಎಂದನು. ಸೂಕ್ಷ್ಮವೇದದಲ್ಲಿ ಬರೆದಿದೆ :–

ಋಷಭ್‌ದೇವ್ ಕೆ ಆಇಯಾ, ಕಬೀ ನಾಮೇ ಕರ್‌ತಾರ್।
ನೌ ಯೋಗೇಶ್ವರ್ ಕೋ ಸಮ್‌ಜಾಇಯಾ, ಜನಕ್ ವಿದೇಹ್ ಉದ್ಧಾರ್।।

ಭಾವಾರ್ಥ:–ಋಷಭದೇವರಿಗೆ 'ಕಬೀ' ಎನ್ನುವ ಹೆಸರಿನಲ್ಲಿ ಪರಮಾತ್ಮ ಸಿಕ್ಕಿದನು. ಅವನಿಗೆ ಭಕ್ತಿಯ ಪ್ರೇರಣೆ ನೀಡಿದನು. ಅದೇ ಪರಮಾತ್ಮನು ಒಂಭತ್ತು ಯೋಗೇಶ್ವರರಿಗೆ ಮತ್ತು ಜನಕ ರಾಜನಿಗೆ ತಿಳಿಸಿ ಅವರ ಉದ್ಧಾರಕ್ಕಾಗಿ ಭಕ್ತಿ ಮಾಡಲು ಪ್ರೇರಣೆ ನೀಡಿದನು. ಕವಿರ್ದೇವ ಋಷಿಯೇ ಪರಮಾತ್ಮ ಎಂದು ಋಷಭದೇವನಿಗೆ ನಂಬಿಕೆ ಬರಲಿಲ್ಲ. ಆದರೆ ಭಕ್ತಿ ಮಾಡಲು ದೃಢ ಮನಸ್ಸಿನಿಂದ ನಿರ್ಧರಿಸಿದನು. ಒಬ್ಬ ತಪಸ್ವೀ ಋಷಿಯಿಂದ ದೀಕ್ಷೆ ಪಡೆದು ಓಂ ನಾಮಜಪ ಮತ್ತು ಹಠಯೋಗ ಮಾಡಿದನು. ಋಷಭದೇವನ ದೊಡ್ಡ ಮಗನು 'ಭರತ'. ಭರತನ ಮಗ 'ಮಾರೀಚಿ'. ಋಷಭದೇವನು ಮೊದಲು ಒಂದು ವರ್ಷದವರೆಗೆ ನಿರಾಹಾರನಾಗಿ ತಪಸ್ಸು ಮಾಡಿದನು. ನಂತರ ಒಂದು ಸಾವಿರ ವರ್ಷದವರೆಗೆ ಘೋರ ತಪಸ್ಸು ಮಾಡಿದನು. ತಪಸ್ಸನ್ನು ಪೂರೈಸಿ ತನ್ನ ಮೊಮ್ಮಗ ಅಂದರೆ ಭರತನ ಪುತ್ರನಾದ ಮಾರೀಚಿಗೆ ಮೊದಲು ಧರ್ಮೋಪದೇಶ (ದೀಕ್ಷೆ) ಕೊಟ್ಟನು.

ಈ ಮಾರೀಚಿ ಆತ್ಮವೇ 24ನೇ ತೀರ್ಥಂಕರರು. ಮಹಾವೀರ ಜೈನರಾದರು. ಋಷಭದೇವನು ಜೈನ ಧರ್ಮವನ್ನು ನಡೆಸಲಿಲ್ಲ, ಜೈನ ಧರ್ಮವು ಮಹಾವೀರ ಜೈನರಿಂದ ಮುಂದುವರಿಸಲ್ಪಟ್ಟಿತು. ಹಾಗೆಯೇ ಮಹಾವೀರ ಜೈನರೂ ಸಹ ಯಾವುದೇ ಧರ್ಮದ ಸ್ಥಾಪನೆ ಮಾಡಲಿಲ್ಲ. ಕೇವಲ ತಮ್ಮ ಅನುಭವವನ್ನು ತಮ್ಮ ಅನುಯಾಯಿಗಳಿಗೆ ತಿಳಿಸಿದರು. ಇದೊಂದು ಭಕ್ತಿ ಮಾಡುವವರ ಭಕ್ತ ಸಮುದಾಯ. ಋಷಭದೇವನು ಓಂ ನಾಮದ ಜಪವನ್ನು ಓಂಕಾರ ಎಂದು ಜಪಿಸಿ ಮಾಡುತ್ತಿದ್ದನು. ಅದನ್ನೇ ವರ್ತಮಾನದಲ್ಲಿ ಅಪಭ್ರಂಶ (ಭ್ರಷ್ಟ)ವಾಗಿ 'ಣೋಂಕಾರ' ಮಂತ್ರ ಎಂದು ಜೈನರು ಹೇಳುತ್ತಾರೆ. ಇದರ ಜಪವನ್ನೇ ಮಾಡುತ್ತಾರೆ. ಇದನ್ನೇ 'ಓಂಕಾರ' ಮತ್ತು 'ಊಂ' ಎಂದೂ ಹೇಳುತ್ತಾರೆ.

ನಾವು ನಮ್ಮ ಪ್ರಸಂಗಕ್ಕೆ ಬರೋಣ. ಜೈನಧರ್ಮ ಗ್ರಂಥದಲ್ಲಿ ಮತ್ತು ಜೈನಧರ್ಮದ ಅನುಯಾಯಿಗಳ ಮೂಲಕ ಬರೆದ ಪುಸ್ತಕ "ಬನ್ನಿ ಜೈನಧರ್ಮವನ್ನು ತಿಳಿಯೋಣ" ದಲ್ಲಿ, ಋಷಭದೇವ (ಜೈನರು ಅವರನ್ನೇ ಆದಿನಾಥರೆಂದು ಕರೆಯುತ್ತಾರೆ) ಅವರ ಜೀವಾತ್ಮವೇ ಬಾಬಾ ಆದಮ್‌ನ ರೂಪದಲ್ಲಿ ಜನಿಸಿದ್ದರು ಎಂದು ಬರೆದಿದೆ. ಈಗ ಅದೇ ಸೂಕ್ಷ್ಮವೇದದ ವಾಣಿಯ ಸರಳಾರ್ಥವನ್ನು ಹೇಳುತ್ತೇನೆ :–

ವಹೀ ಮುಹಮ್ಮದ್, ವಹೀ ಮಹಾದೇವ್, ವಹೀ ಆದಮ್ ವಹೀ ಬ್ರಹ್ಮಾ।
ದಾಸ್‌ಗರೀಬ್ ದೂಸ್‌ರಾ ಕೋಯೀ ನಹೀ, ದೇಖ್ ಆಪ್‌ನೆ ಘರ್‌ಮಾ।।

ಬಾಬಾ ಆದಮ್ ಬ್ರಹ್ಮಾನ ಲೋಕದಿಂದ ಬಂದಿದ್ದರು. ಏಕೆಂದರೆ ಜೀವಾತ್ಮವು ಮಾನವ ಜನ್ಮದಲ್ಲಿ ಮಾಡಿದ ಸಾಧನೆಗೆ ಅನುಗುಣವಾಗಿ ಭಕ್ತಿಗೆ ಅನುಸಾರವಾಗಿ ಮೇಲಿನ ಮೂರೂ ದೇವತೆಗಳ ಲೋಕದಲ್ಲಿ ಹಂತ ಹಂತವಾಗಿ ಹೋಗುತ್ತದೆ, ತನ್ನ ಪುಣ್ಯವು ಕ್ಷೀಣವಾದ ನಂತರ ಪುನಃ ಭೂಮಿಯ ಮೇಲೆ ಸಂಸ್ಕಾರಕ್ಕೆ ಅನುಸಾರವಾಗಿ ಜನ್ಮತಾಳುತ್ತದೆ.

ಸಂತ ಗರೀಬ್‌ದಾಸರಿಗೆ (ಹರಿಯಾಣ ಪ್ರಾಂತ್ಯದ ಝಜ್ಜರ್ ಜಿಲ್ಲೆಯ ಛುಡಾನಿ ಹಳ್ಳಿಯವರಿಗೆ) ಸ್ವತಃ ಋಷಭದೇವರಿಗೆ ಭೇಟಿಯಾದ ಅದೇ ಪರಮಾತ್ಮನು ಭೇಟಿಯಾಗಿದ್ದನು. ಸಂತ ಗರೀಬದಾಸರು ಪರಮೇಶ್ವರನ ಜೊತೆ ಮೇಲೆ ಹೋಗಿ ತಮ್ಮ ಕಣ್ಣುಗಳಿಂದ ಎಲ್ಲಾ ವ್ಯವಸ್ಥೆಯನ್ನು ನೋಡಿದ್ದರು. ನಂತರ ಆದಮ್ ಬ್ರಹ್ಮಾನ ಲೋಕದಿಂದ ಬಂದಿದ್ದರಿಂದ ಅವರನ್ನು ಬ್ರಹ್ಮಾನ ಅವತಾರ ಎಂದು ಹೇಳಿದ್ದಾರೆ. ಮುಹಮ್ಮದರು ತಮೋಗುಣ ಶಿವನ ಅವತಾರ ಎಂದು ಹೇಳಿದ್ದಾರೆ. ಪ್ರಿಯ ಓದುಗರೇ! ಅವತಾರ ಎರಡು ಪ್ರಕಾರದವರಾಗಿರುತ್ತಾರೆ.

1) ಶ್ರೀರಾಮ, ಶ್ರೀಕೃಷ್ಣ ಮುಂತಾದ ರೂಪದಲ್ಲಿ ಸ್ವತಃ ಶ್ರೀ ವಿಷ್ಣು ಅವತಾರ ಬಂದ ಹಾಗೆ ಸ್ವತಃ ಆ ಪ್ರಭು ಅವತಾರವೆತ್ತಿ ಬರುತ್ತಾನೆ. ಆದರೆ ಕಪಿಲ ಋಷಿಗಳನ್ನೂ ಪರಶುರಾಮನನ್ನೂ ಸಹ ವಿಷ್ಣುವಿನ ಅವತಾರ ಎಂದು ಭಾವಿಸಲಾಗುತ್ತದೆ. ಇವರು ಸ್ವತಃ ವಿಷ್ಣುವಲ್ಲ, ವಿಷ್ಣು ಲೋಕದಿಂದ ಬಂದ ದೇವಾತ್ಮರಾಗಿದ್ದರು. ಅವರ ಬಳಿ ಸ್ವಲ್ಪ ಶಕ್ತಿ ವಿಷ್ಣುವಿನದ್ದಾಗಿತ್ತು. ಏಕೆಂದರೆ ಇವರು ಅವರಿಂದಲೇ ಕಳುಹಿಸಲ್ಪಟ್ಟವರಾಗಿದ್ದರು.

ಇದೇ ರೀತಿ ಹಜರತ್ ಮುಹಮ್ಮದರು ಶಿವನ (ಲೋಕದಿಂದ ಬಂದ ದೇವಾತ್ಮ) ಅವತಾರವಾಗಿದ್ದರು ಹಾಗೂ ಬಾಬಾ ಆದಮ್ ಶ್ರೀ ಬ್ರಹ್ಮಾನ (ಲೋಕದಿಂದ ಬಂದ ದೇವಾತ್ಮ) ಅವತಾರವಾಗಿದ್ದರು. ಇದೆ ಪ್ರಕಾರ ಯೇಸುಕ್ರಿಸ್ತರು ಶ್ರೀವಿಷ್ಣುವಿನ (ಲೋಕದಿಂದ ಬಂದ ದೇವಾತ್ಮಾ) ಅವತಾರವಾಗಿದ್ದರು ಕ್ರಿಸ್ತರು ಸಹ ಯೇಸುಕ್ರಿಸ್ತನನ್ನು ದೇವರ ಮಗನೆಂದು ಭಾವಿಸುತ್ತಾರೆಯೇ ವಿನಃ ದೇವರೆಂದು ಅಲ್ಲ.

ಸಂತ ಗರೀಬ್‌ದಾಸರು, 'ಒಂದು ವೇಳೆ ನಿಮಗೆಲ್ಲಾ ನನ್ನ ಮಾತಿನ ಮೇಲೆ ವಿಶ್ವಾಸವಿಲ್ಲದಿದ್ದರೆ, ನನ್ನಿಂದ ಹೇಳಲ್ಪಟ್ಟ ಶಾಸ್ತ್ರಬದ್ಧವಾದ ಭಕ್ತಿಯನ್ನು ಮಾಡಿ ನಿಮ್ಮ ಮನೆಯಲ್ಲಿ ಅಂದರೆ ನಿಮ್ಮ ಮಾನವ ಶರೀರದಲ್ಲಿ ನಿಮ್ಮ ಕಣ್ಣುಗಳಿಂದ ನೋಡಿರಿ' ಎಂದು ಹೇಳಿದ್ದಾರೆ.

ಭಾವಾರ್ಥ:- ಎಲ್ಲಾ ಧರ್ಮದ ಮನುಷ್ಯರ ಶರೀರದ ರಚನೆಯು ಒಂದೇ ರೀತಿಯದ್ದಾಗಿರುತ್ತದೆ. ತತ್ವಜ್ಞಾನವಿಲ್ಲದ ಕಾರಣ ನಾವು ಧರ್ಮಗಳಲ್ಲಿ ಹಂಚಲ್ಪಟ್ಟಿದ್ದೇವೆ. ಸಂತ ಗರೀಬದಾಸರು, ಮಾನವ ಶರೀರದಲ್ಲಿ ಪರಮೇಶ್ವರನು ಭಿನ್ನ ಭಿನ್ನವಾದ ಅಂಗಗಳನ್ನು ಮಾಡಿದ್ದಾನೆ, ಬೆನ್ನು ಮೂಳೆ ಅಂದರೆ **Back bone (Spine)**ನ ಒಳಗಡೆ ಐದು ಕಮಲ ಚಕ್ರಗಳಿವೆ ಎಂದು ಹೇಳಿದ್ದಾರೆ. ದಯವಿಟ್ಟು ಈ ಚಿತ್ರವನ್ನು ನೋಡಿ.

1. ಮೂಲ ಚಕ್ರ :- ಈ ಚಕ್ರವು ಬೆನ್ನುಮೂಳೆಯ ತುದಿಯಿಂದ ಒಂದು ಇಂಚು ಮೇಲೆ ಗುದದ್ವಾರದ ಬಳಿ ಇದೆ. ಇದರ ದೇವರು ಶ್ರೀ ಗಣೇಶ. ಈ ಕಮಲದಲ್ಲಿ ನಾಲ್ಕು ದಳಗಳಿವೆ.

2. ಸ್ವಾದಚಕ್ರ :- ಇದು ಮೂಲ ಕಮಲದಿಂದ ಎರಡು ಇಂಚು ಮೇಲೆ ಬೆನ್ನು ಮೂಳೆಯ ಒಳಗಡೆಯ ಕಡೆಗೆ ಅಂಟಿಕೊಂಡಿದೆ. ಇದರ ದೇವರು ಶ್ರೀ ಬ್ರಹ್ಮಾ ಮತ್ತು ಇವರ ಧರ್ಮಪತ್ನಿ ಸಾವಿತ್ರಿ. ಈ ಕಮಲದಲ್ಲಿ 6 ದಳಗಳಿವೆ.

3. ನಾಭಿ ಕಮಲ ಚಕ್ರ :- ಇದು ನಾಭೀಯ ಮುಂದೆ ಅದೇ ಬೆನ್ನು ಮೂಳೆಯ ಜೊತೆ ಅಂಟಿಕೊಂಡಿದೆ. ಇದರ ದೇವರು ಶ್ರೀ ವಿಷ್ಣು ಮತ್ತು ಇವರ ಧರ್ಮಪತ್ನಿ ಲಕ್ಷ್ಮಿ. ಈ ಕಮಲದಲ್ಲಿ 8 ದಳಗಳಿವೆ.



ಶರೀರ (ಪಿಂಡ) ದಲ್ಲಿ ಕಮಲಗಳ (ಚಕ್ರಗಳ) ಚಿತ್ರ

**4. ಹೃದಯ ಕಮಲ ಚಕ್ರ :–** ಈ ಕಮಲವು ಎದೆಯಲ್ಲಿರುವ ಎರಡೂ ಸ್ತನಗಳ ಮಧ್ಯದಲ್ಲಿ ಬೆನ್ನು ಮೂಳೆಯ ಜೊತೆ ಅಂಟಿಕೊಂಡಿದೆ. ಇದರ ದೇವರು ಶ್ರೀ ಶಿವ ಮತ್ತು ಇವರ ಧರ್ಮಪತ್ನಿ ಪಾರ್ವತಿ. ಈ ಕಮಲದಲ್ಲಿ 12 ದಳಗಳಿವೆ.

**5. ಕಂಠ ಕಮಲ :–** ಈ ಕಮಲವು ಎದೆಯ ಮೂಳೆಗಳ ಮೇಲೆ, ಕುತ್ತಿಗೆ ಪ್ರಾರಂಭವಾಗುವ ಭಾಗದಲ್ಲಿ ಇರುತ್ತದೆ. ಇದರ ಹಿಂದೆ ಬೆನ್ನುಮೂಳೆಯ ಜೊತೆ ಕೊನೆಯಲ್ಲಿರುತ್ತದೆ. ಇದರ ಪ್ರಧಾನ ದೇವಿ ದುರ್ಗೆಯಾಗಿರುವಳು, ಈ ಕಮಲದಲ್ಲಿ 16 ದಳಗಳಿವೆ. ಉಳಿದ ಕಮಲ ಚಕ್ರಗಳು ಮೇಲಿವೆ.

**6. ಸಂಗಮ ಕಮಲ ಅಥವಾ ಆರನೇ ಕಮಲ :–** ಈ ಕಮಲವು ಸುಷ್ಮಣಾ ಮೇಲಿನ ದ್ವಾರದಲ್ಲಿದ್ದು ಇದಕ್ಕೆ ಮೂರು ದಳಗಳಿವೆ. ಇದರಲ್ಲಿ ಸರಸ್ವತಿ ರೂಪದಲ್ಲಿ ದುರ್ಗಾದೇವಿಯು ವಾಸ ಮಾಡುತ್ತಾಳೆ. ಒಂದು ದಳದಲ್ಲಿ ದುರ್ಗಾದೇವಿ ಸರಸ್ವತಿ ರೂಪದಲ್ಲಿ ಇರುತ್ತಾಳೆ. ಅವಳ ಜೊತೆ 72 ಕೋಟಿ ಊರ್ವಶಿಯರು (ಸುಂದರ ಅಪ್ಸರೆಯರು) ಇರುತ್ತಾರೆ. ಮೇಲೆ ಬರುವ ಭಕ್ತರನ್ನು ತಮ್ಮ ಬಲೆಯಲ್ಲಿ ಬೀಳಿಸಿಕೊಳ್ಳುತ್ತಾರೆ. ಎರಡನೇ ದಳದಲ್ಲಿ ಸುಂದರವಾದ ಯುವಕರಿರುತ್ತಾರೆ. ಅವರು ಭಕ್ತಮತಿಯರನ್ನು ಆಕರ್ಷಿಸಿ ಕಾಲಜಾಲದಲ್ಲಿ ಬೀಳಿಸುತ್ತಾರೆ. ಕಾಲನು ಸಹ ಬೇರೆ ರೂಪದಲ್ಲಿ ಈ ಯುವಕರ ಮುಖಂಡನಾಗಿ ಇರುತ್ತಾನೆ. ಮೂರನೇ ದಳದಲ್ಲಿ ಸ್ವತಃ ಪರಮಾತ್ಮನು ಬೇರೆ ರೂಪದಲ್ಲಿರುತ್ತಾನೆ. ತನ್ನ ಭಕ್ತರನ್ನು ಅವರ ಬಲೆಯಿಂದ ಬಿಡಿಸುತ್ತಾನೆ. ಜ್ಞಾನ ತಿಳಿಸಿ ಎಚ್ಚರಿಸುತ್ತಾನೆ.

**7. ತ್ರಿಕುಟಿ ಕಮಲ ಚಕ್ರ :–** ಇದು ಎರಡೂ ಕಣ್ಣುಗಳ ಹುಬ್ಬುಗಳ ಮಧ್ಯದಲ್ಲಿ, ತಲೆಯ

ಹಿಂದಿನ ಭಾಗದಲ್ಲಿ ಅನ್ಯ ಕಮಲಗಳ ಪಂಕ್ತಿಯಲ್ಲಿ ಮೇಲಿರುತ್ತದೆ. ಇದರ ದೇವರು ಸದ್ಗುರು ರೂಪದಲ್ಲಿ ಸ್ವತಃ ಪರಮೇಶ್ವರನೇ ಆಗಿದ್ದಾನೆ. ಈ ಕಮಲದಲ್ಲಿ ಎರಡು ದಳಗಳಿವೆ. ಒಂದು ಬಿಳಿಯ ಬಣ್ಣದ್ದು, ಎರಡನೆಯದು ಕಪ್ಪು (ದುಂಬಿ) ಬಣ್ಣದ ದಳ. ಬಿಳಿಯ ದಳದಲ್ಲಿ ಸದ್ಗುರು ರೂಪದಲ್ಲಿ ಸತ್ಯಪುರುಷ ವಾಸಮಾಡುತ್ತಾನೆ. ಕಪ್ಪು ಬಣ್ಣದ ದಳದಲ್ಲಿ ನಕಲಿ ಸದ್ಗುರು ರೂಪದಲ್ಲಿ ಕಾಲ ನಿರಂಜನನು ವಾಸ ಮಾಡುತ್ತಾನೆ.

**8.** ಸಹಸ್ರ ಕಮಲ ಚಕ್ರ :– ಈ ಕಮಲವು ತಲೆಯ ಮಧ್ಯಭಾಗದಿಂದ ಎರಡು ಅಂಗುಲಗಳ ಕೆಳಗೆ ಉಳಿದ ಕಮಲಗಳ ಪಂಕ್ತಿಯಲ್ಲಿದೆ. ಹಿಂದೂ ಧರ್ಮದ ವ್ಯಕ್ತಿ ತಲೆಯ ಮೇಲೆ ಜುಟ್ಟು ಬಿಡುತ್ತಿದ್ದರು. ಕೆಲವರು ಈಗಲು ಬಿಡುತ್ತಾರೆ. ಅದರ ಕೆಳಗೆ ಈ ಸಹಸ್ರ ದಳ ಕಮಲವಿದೆ. ಬ್ರಹ್ಮ ಇದರ ದೇವರು. ಇವನನ್ನು ಕ್ಷರ ಪುರುಷನೆಂದೂ ಕರೆಯುತ್ತಾರೆ. ಇವನು ಗೀತೆ ಮತ್ತು ವೇದಗಳ ಜ್ಞಾನವನ್ನು ತಿಳಿಸಿದ್ದಾನೆ. ಈ ಕಮಲಕ್ಕೆ ಒಂದು ಸಾವಿರ ದಳಗಳಿವೆ. ಇವುಗಳನ್ನು ಕಾಲಬ್ರಹ್ಮನು ಪ್ರಕಾಶದಿಂದ ತುಂಬಿಸಿದ್ದಾನೆ. ಸ್ವತಃ ಅವನು ಇದೇ ಕಮಲಚಕ್ರದಲ್ಲಿ ದೂರವಿರುತ್ತಾನೆ. ಸ್ವತಃ ಅವನು ಕಾಣಿಸುವುದಿಲ್ಲ, ಕೇವಲ ದಳಗಳು ಹೊಳೆಯುವುದು ಮಾತ್ರ ಕಾಣುತ್ತದೆ.

(ಅಷ್ಟಕಮಲ ದಳ :– ಈ ಕಮಲದ ದೇವರು ಅಕ್ಷರ ಪುರುಷ, ಇವನನ್ನು ಪರಬ್ರಹ್ಮನೆಂದು ಕರೆಯುತ್ತಾರೆ. ಇದರ ದಳಗಳು **8**. ಇದರ ಸ್ಥಿತಿಯನ್ನು ನಾನು ಹೇಳುವುದಿಲ್ಲ. ಏಕೆಂದರೆ ನಕಲಿ ಗುರುಗಳು ಅದನ್ನು ತಿಳಿದುಕೊಂಡು ಜನರನ್ನು ಭ್ರಮೆಗೊಳಪಡಿಸುವರು.)

**9.** ಸಂಖ ಕಮಲ ದಳ :– ಈ ಕಮಲದಲ್ಲಿ ಪೂರ್ಣ ಬ್ರಹ್ಮ ಅಂದರೆ ಪರಮ ಅಕ್ಷರ ಬ್ರಹ್ಮನ ನಿವಾಸವಿದೆ. ಇದಕ್ಕೆ ಶಂಖ ದಳಗಳಿವೆ. ಇದರ ಬಗ್ಗೆಯೂ ಏನನ್ನೂ ಹೇಳುವುದಿಲ್ಲ. ಕಾರಣವನ್ನು ಮೇಲೆ ಹೇಳಲಾಗಿದೆ.

(ತೋರಿಸಿರುವ ಚಿತ್ರದಲ್ಲಿ **6**ನೇ ಕಮಲ ಮತ್ತು **9**ನೇ ಕಮಲವನ್ನು ತೋರಿಸಿಲ್ಲ. ಕಾರಣ ವಿದ್ಯಾರ್ಥಿಗಳಿಗೆ ನಿಧಾನವಾಗಿ ಜ್ಞಾನವೃದ್ಧಿ ಮಾಡಬೇಕಾಗುತ್ತದೆ. ಕಮಲಗಳ ಬಗ್ಗೆ ಆಳವಾದ ರಹಸ್ಯವಿದೆ. ಇದನ್ನು ಕಬೀರ್ ಸಾಗರ್‌ದ ಸಾರಾಂಶದಲ್ಲಿ ಬರೆದಿದೆ)

ಟೆಲಿವಿಷನ್‌ನಲ್ಲಿ ಚಾನಲ್‌ಗಳು ಕಾರ್ಯ ನಿರ್ವಹಿಸುವಂತೆ ಶರೀರದಲ್ಲಿ ಈ ಕಮಲಗಳು ಕಾರ್ಯ ನಿರ್ವಹಿಸುತ್ತವೆ. ಯಾವ ಚಾನಲ್ ಹಾಕಿದರೂ ಕಾರ್ಯಕ್ರಮಗಳು ಪ್ರಸಾರವಾಗುತ್ತಿರುತ್ತವೆ. ಆ ಕಾರ್ಯಕ್ರಮಗಳು ಸ್ಟುಡಿಯೋದಲ್ಲಿ ನಡೆಯುತ್ತಿದ್ದರೂ, ಪ್ರಸಾರವಾಗುವುದು ಟಿ.ವಿ.ಯಲ್ಲಿ. ಪ್ರತೀ ಕಮಲದ ಕಾರ್ಯ**(function)**ಇದೇ ರೀತಿ ಇದೆ. ಈ ಕಮಲಗಳನ್ನು ಸಕ್ರಿಯಗೊಳಿಸಲು ಮಂತ್ರಗಳಿವೆ. ಅದನ್ನು ಈ ದಾಸ (ಸಂತ ರಾಮ್‌ಪಾಲ್ ದಾಸ್) ಜಪ ಮಾಡಲು ನೀಡುತ್ತಾನೆ. ಮೊದಲಿಗೆ ಈ ಚಾನಲ್‌ಗಳನ್ನು ತೆರೆಯಲು ದೀಕ್ಷೆ ನೀಡಲಾಗುತ್ತದೆ. ಮಂತ್ರಗಳ ಶಕ್ತಿಯಿಂದ ಎಲ್ಲಾ ಕಮಲಗಳು ಸಕ್ರಿಯವಾಗುತ್ತವೆ. ನಂತರ ಸಾಧಕನು ತನ್ನ ಶರೀರದಲ್ಲಿರುವ ಚಾನಲ್‌ನಲ್ಲಿ ಆ ದೇವರ ಧಾಮವನ್ನು ನೋಡಬಹುದು. ಅಲ್ಲಿಯ ಎಲ್ಲಾ ದೃಶ್ಯಗಳನ್ನು ನೋಡಬಹುದು.

ಆದ್ದರಿಂದ ಸಂತ ಗರೀಬ್‌ದಾಸರು ಹೇಳಿರುವುದೇನೆಂದರೆ, 'ನೀವು ನಿಮ್ಮ ಶರೀರದ ಚಾನೆಲ್‌ಅನ್ನು ಸಕ್ರಿಯಗೊಳಿಸಿ, ಸ್ವತಃ ನೀವೇ ನೋಡಿಕೊಳ್ಳಿ. ಆದಮ್ ಅವರು, ನಿಮಗೆ ಬ್ರಹ್ಮಾನ ಲೋಕದಿಂದ ಬಂದಿದ್ದು ಕಾಣುವುದು. ಏಕೆಂದರೆ ಅಲ್ಲಿ ಎಲ್ಲಾ ರೆಕಾರ್ಡ್‌ಗಳು ಉಪಲಬ್ಧವಿದೆ. ಹೇಗೆ ವರ್ತಮಾನದಲ್ಲಿ ಯೂಟ್ಯೂಬ್ ಇದೆಯೋ, ಹಾಗೆ ಪ್ರತಿಯೊಂದು ದೇವರ ಲೋಕದಲ್ಲಿ ಈ ಮೊದಲೇ ಘಟಿಸಿರುವ ಘಟನೆಯನ್ನು ನೋಡಲು ಬಯಸಿದರೆ, ನೀವು ನೋಡಬಹುದು'.

'ಇದೇ ರೀತಿ ಹಜರತ್ ಮುಹಮ್ಮದ್‌ರವರು, ನಿಮಗೆ ಶಿವನ ಲೋಕದಿಂದ ಬಂದಿದ್ದು ಕಾಣುತ್ತದೆ. ಇದೇ ಯೇಸುಕ್ರಿಸ್ತನು ವಿಷ್ಣುವಿನ ಲೋಕದಿಂದ ಬಂದದ್ದು ಕಾಣುವುದು ಎಂದು ಗರೀಬ್‌ದಾಸರು ಹೇಳಿದ್ದಾರೆ.

# "ಮಕ್ಕಾ ಮಹಾದೇವನ ಮಂದಿರವಾಗಿದೆ"

ಭಾಯೀ ಬಾಲೆ ವಾಲಿ ಜನ್ಮ ಸಾಖೀ ಎಂಬ ಪುಸ್ತಕದಲ್ಲಿ ಪ್ರಮಾಣವಿದೆ :–

"ಸಾಖೀ ಮದೀನೆ ಕೀ ಚಲೀ" ಎನ್ನುವ ಹಿಂದಿಯ 262ನೇ ಪುಟದಲ್ಲಿ ಶ್ರೀ ನಾನಕರು ನಾಲ್ಕು ಇಮಾಮರ ಪ್ರಶ್ನೆಗೆ ಉತ್ತರ ನೀಡುತ್ತಾ ಹೀಗೆಂದಿದ್ದಾರೆ:–

ಆಖೆ ನಾನಕ್ ಶಾಹ್ ಸಚ್ಚ್, ಸುಣ್ ಹೋ ಚಾರ್ ಇಮಾಮ್।
ಮಕ್ಕಾ ಹೈ ಮಹಾದೇವ್ ಕಾ, ಬ್ರಾಹ್ಮಣ್ ಸನ್ ಸುಲ್ತಾನ್॥

ಈಗ ನಿಮ್ಮನ್ನು ತಮ್ಮ ಉದ್ದೇಶದ ಕಡೆಗೆ ಕರೆದುಕೊಂಡು ಹೋಗುತ್ತೇನೆ. ನಿಮಗೆ ಸ್ಪಷ್ಟಪಡಿಸಲು ಇಚ್ಛಿಸುವುದೇನೆಂದರೆ, ಯಾವ ಯಥಾರ್ಥ ಆಧ್ಯಾತ್ಮಿಕ ಜ್ಞಾನವು ಸೂಕ್ಷ್ಮವೇದ, ಗೀತೆ ಮತ್ತು ನಾಲ್ಕೂ ವೇದಗಳಲ್ಲಿದೆಯೋ, ಅದು ಪುರಾಣಗಳಲ್ಲೂ ಇಲ್ಲ, ಕುರ್‌ಆನ್ ಶರೀಫ್‌ನಲ್ಲೂ ಇಲ್ಲ, ಬೈಬಲ್‌ನಲ್ಲೂ ಇಲ್ಲ, ಆರು ಶಾಸ್ತ್ರಗಳಲ್ಲೂ ಇಲ್ಲ, ಹನ್ನೊಂದು ಉಪನಿಷದ್‌ಗಳಲ್ಲೂ ಇಲ್ಲ. ಉದಾಹರಣೆಗೆ:– ಹತ್ತನೇ ತರಗತಿಯವರೆಗೆ ಇರುವ ಪಠ್ಯಕ್ರಮ ತಪ್ಪಂತೂ ಅಲ್ಲ. ಆದರೆ ಅದರಲ್ಲಿ ಬಿ.ಎ. ಮತ್ತು ಎಂ.ಎ. ಯ ಜ್ಞಾನವಿಲ್ಲ. ಆ ಪಠ್ಯಕ್ರಮ ತಪ್ಪಲ್ಲ ಆದರೆ ಪರ್ಯಾಪ್ತ ಜ್ಞಾನವಿಲ್ಲ. ಇಷ್ಟು ಹೇಳಿದರೆ ಅರ್ಥವಾಗುತ್ತದೆ ಎಂದು ಭಾವಿಸೋಣ.

ಅನ್ಯ ಉದಾಹರಣೆಗಳು :– ಗೀತೆಯ 2ನೇ ಅಧ್ಯಾಯದ 46ನೇ ಶ್ಲೋಕದಲ್ಲಿ ಹೇಳಿರುವಂತೆ, ಹೇ ಅರ್ಜುನ! ದೊಡ್ಡ ಜಲಾಶಯ (ಸರೋವರ) ಸಿಕ್ಕ ಮೇಲೆ ಚಿಕ್ಕ ಜಲಾಶಯ(ಕೆರೆ) ಬಗ್ಗೆ ಏಷ್ಟು ಆಸಕ್ತಿ ಇರುವುದೋ, ಇದೇ ರೀತಿ ಪೂರ್ಣ ಪರಮಾತ್ಮನ ಸಂಪೂರ್ಣ ಜ್ಞಾನವು ಪ್ರಾಪ್ತವಾದ ನಂತರ ಬೇರೆ ಜ್ಞಾನ ಮತ್ತು ಬೇರೆ ಭಗವಂತರಲ್ಲಿ ಅಷ್ಟೆ ಆಸಕ್ತಿ ಇರುವುದು.

ಯಾವಾಗ ಗೀತೆಯ ಜ್ಞಾನವನ್ನು ತಿಳಿಸಲಾಗಿತ್ತೋ ಆ ಸಮಯದಲ್ಲಿ ಎಲ್ಲಾ ಮಾನವರು ನದಿಯ ಅಕ್ಕಪಕ್ಕ ವಾಸಿಸುತ್ತಿದ್ದರು, ಮಳೆಯಾಗುತ್ತಿತ್ತು. ಕೆರೆಗಳು ತುಂಬುತ್ತಿದ್ದವು. ವರ್ಷವಿಡೀ ಅದೇ ಜಲಾಶಯದಿಂದ ಮನುಷ್ಯರು ನೀರನ್ನು ಕುಡಿಯುತ್ತಿದ್ದರು. ಜಾನುವಾರುಗಳಿಗೂ ಅಲ್ಲಿಂದಲೇ ನೀರನ್ನು ಕುಡಿಸುತ್ತಿದ್ದರು. ಅದನ್ನು ಎರಡು ಭಾಗಗಳನ್ನಾಗಿ ಮಾಡುತ್ತಿದ್ದರು. ಒಂದು ವರ್ಷ ಮಳೆಯಾಗದಿದ್ದರೆ ಸಣ್ಣ ಪುಟ್ಟಕೆರೆ ಕಟ್ಟೆಗಳ ಮೇಲೆ ಅವಲಂಬಿತರಾದ ವ್ಯಕ್ತಿಗಳಿಗೆ ಸಂಕಟ ಒದಗಿ ಬರುತ್ತಿತ್ತು, ಹಾಹಾಕಾರವಾಗುತ್ತಿತ್ತು.

ಸರೋವರ ಬಹಳ ದೊಡ್ಡ ಜಲಾಶಯವಿರುತ್ತದೆ, ಅದರ ನೀರು ಸಾಕಷ್ಟು ಇದ್ದು, 10 ವರ್ಷಗಳು ಮಳೆಯಾಗದಿದ್ದರೂ ನೀರು ಖಾಲಿಯಾಗುವುದಿಲ್ಲ. ಯಾವುದೇ ವ್ಯಕ್ತಿಗೆ ಸರೋವರದ ಜಲಾಶಯವು ಸಿಕ್ಕರೆ ಅವನು ತಕ್ಷಣ ಸಣ್ಣ ಕೆರೆಯನ್ನು ಬಿಟ್ಟು ಆ ದೊಡ್ಡ ಜಲಾಶಯದ ಬಳಿ ತನ್ನ ವಾಸ್ತವ್ಯ ಹೂಡುತ್ತಾನೆ. ಅದೇರೀತಿ ಈ ಪವಿತ್ರ ಪುಸ್ತಕವಾದ 'ಗೀತೆಯೇ ನಿನ್ನ ಜ್ಞಾನ ಅಮೃತ' ದಲ್ಲಿ ನಿಮಗೆ ಆ ದೊಡ್ಡ ಜಲಾಶಯ ಪ್ರಾಪ್ತವಾಗಿದೆ. ಬಹಳ ಬೇಗ ಇದರ ದಡಕ್ಕೆ ಬಂದು ತಮ್ಮ ವಾಸ್ತವ್ಯ ಹೂಡಿ ಮತ್ತು ನಿಮ್ಮ ಮಾನವ ಜೀವನವನ್ನು ಸುಖಮಯವಾಗಿಸಿಕೊಳ್ಳಿ. ದಯವಿಟ್ಟು ಈ ಜ್ಞಾನವೆಂಬ ಅಮೃತವನ್ನು ಕುಡಿದು ಅಮರರಾಗಿ.

ಮುಸಲ್ಮಾನರು ವಿರುದ್ಧವಾದ ಸಾಧನೆ ಮಾಡುತ್ತಾರೆ ಎಂದು ಹಿಂದೂಗಳು ಹೇಳುತ್ತಾರೆ. ನಾವು ಉದಯಿಸುವ ಸೂರ್ಯನಿಗೆ ನಮಿಸುತ್ತೇವೆ, ಮುಸಲ್ಮಾನರು ಅಸ್ತವಾಗುವ ಸೂರ್ಯನಿಗೆ ಸಲಾಂ ಮಾಡುತ್ತಾರೆ.

ವಿವೇಚನೆ :– ಇಬ್ಬರ ಆಶಯವೂ ಸರಿಯಾಗಿದೆ. ಆದರೆ ವಿವೇಕದ ಕೊರತೆ ಇದೆ. ಹಿಂದೂಗಳು ಉದಯಿಸುತ್ತಿರುವ ಸೂರ್ಯನಿಗೆ ಧನ್ಯವಾದ ಮಾಡುತ್ತಾರೆ, 'ಹೇ ಪ್ರಕಾಶವನ್ನು ನೀಡುವ ದೇವತೆಯೇ! ನಿನಗೆ ಧನ್ಯವಾದ. ನೀವು ಕತ್ತಲೆಯ ರಾತ್ರಿಯ ನಂತರ ಬೆಳಕನ್ನು

ನೀಡಿದಿರಿ ಆದ್ದರಿಂದ ನಾವು ನಮ್ಮ ನಿರ್ವಹಣೆಯ ಕಾರ್ಯವನ್ನು ಮಾಡಬಹುದು. ಇದೇ ರೀತಿ ನಮ್ಮ ಮೇಲೆ ನಿಮ್ಮ ಕೃಪೆ ಇರಲಿ.

ಬೆಳಿಗ್ಗೆ ನಮ್ಮ ಹಿಂದೂ ಸಹೋದರರು ನಮ್ಮೆಲ್ಲರಿಗೂ ಮಂಗಳವಾಗಲೆಂದು ಸೂರ್ಯನಿಗೆ ಧನ್ಯವಾದ ಅರ್ಪಿಸಿದ್ದಾರೆ ಎನ್ನುವುದು ಮುಸಲ್ಮಾನರಿಗೆ ಗೊತ್ತು. ಹಾಗಾಗಿ ಸೂರ್ಯಾಸ್ತವಾಗುವ ಸಮಯದಲ್ಲಿ ನಾವು ಸೂರ್ಯನಿಗೆ ಧನ್ಯವಾದ ಅರ್ಪಿಸುತ್ತೇವೆ ಎಂದು ಯೋಚಿಸುತ್ತಾ, 'ಹೇ ಬೆಳಕನ್ನು ನೀಡುವ ಸೂರ್ಯನೇ, ನೀವು ಜೀವಿಗಳಾದ ನಮ್ಮೆಲ್ಲರಿಗೆ ಬೆಳಕನ್ನು ನೀಡಿ ದೊಡ್ಡ ಉಪಕಾರ ಮಾಡಿರುವಿರಿ. ನಾವು ನಿಮಗೆ ಧನ್ಯವಾದ ಅರ್ಪಿಸುತ್ತೇವೆ. ಮತ್ತೆ ನಾಳೆ ನೀವು ಇದೇ ರೀತಿ ಕೃಪೆ ತೋರಿ. ನೀವು ಸಹ ಅಲ್ಲಾಹು ಅಕ್ಬರ್‌ನ ಸೃಷ್ಟಿ ಹಾಗೂ ನಾವು ಸಹ ಅವನ ಸಂತಾನ'.

ವಾಸ್ತವದಲ್ಲಿ ಹಿಂದೂಗಳಾಗಲಿ, ಮುಸಲ್ಮಾನರಾಗಲಿ ಸೂರ್ಯನ ಪೂಜೆ ಮಾಡುವುದಿಲ್ಲ. ಇಬ್ಬರೂ ಸಹ ಪೂರ್ವ–ಪಶ್ಚಿಮದ ಕಡೆ ಮುಖ ಮಾಡಿ ಬೆಳಿಗ್ಗೆ ಹಿಂದೂಗಳು ಹಾಗೂ ಸಂಜೆ ಮುಸಲ್ಮಾನರು ಪರಮಾತ್ಮನ ಪೂಜೆ ಮಾಡುತ್ತಾರೆ. ಕೇವಲ ಪೂರ್ಣ ಪರಮಾತ್ಮನ ಪೂಜೆಯನ್ನು ಮಾಡಬೇಕು. ಅನ್ಯದೇವಿ, ದೇವತೆಗಳನ್ನು ಗೌರವಿಸಬೇಕು, ಇನ್ನೂ ಹೆಚ್ಚಿನ ಜ್ಞಾನಕ್ಕಾಗಿ "ಗೀತೆಯ ಸತ್ಯ ಸಾರಾಂಶ" ವನ್ನು ಇದೇ ಪುಸ್ತಕದಲ್ಲಿ ಓದಿ.

ನಿವೇದನೆ: – ಈ ಪುಸ್ತಕದ ಕೊನೆಯ ಪುಟಗಳಲ್ಲಿ ಗೀತಾ ಪ್ರೆಸ್, ಗೋರಖ್ ಪುರದಿಂದ ಪ್ರಕಾಶಿತವಾದ ಶ್ರೀ ಜಯದಯಾಲ್ ಗೋಯಂದಕಾ ಅವರಿಂದ ಅನುವಾದಗೊಂಡ ಗೀತೆಗೆ ಸಂಬಂಧಿಸಿದ ಅಧ್ಯಾಯದ ಶ್ಲೋಕಗಳ ಪ್ರತಿ ಲಿಪಿಗಳನ್ನು ನೀಡಲಾಗಿದೆ. ಹಾಗಾಗಿ ನೀವು ಅತ್ಯಂತ ಬೇಗ ಸತ್ಯವನ್ನು ಅರಿಯಬಹುದು ಹಾಗು ನಿಮಗೆ ಪ್ರಮಾಣ ನೋಡಲು ಗೀತೆಯ ಇನ್ನೊಂದು ಪುಸ್ತಕವನ್ನು ಖರೀದಿಸುವ ಆವಶ್ಯಕತೆ ಇರುವುದಿಲ್ಲ.

ಸಂಗ್ರಹಕಾರ ಮತ್ತು ಲೇಖಕರು

ಭಕ್ತ ರಾಜು ದಾಸ್,
ಸತ್ಲೋಕ್ ಆಶ್ರಮ ಬರವಾಲಾ,

# "ಗೀತೆಯ ಸತ್ಯ ಸಾರಾಂಶ"

❖ ಗೀತೆ = ಶ್ರೀಮದ್ಭಗವದ್ಗೀತೆ

**1.** ಪ್ರಶ್ನೆ :- ಗೀತೆಯ ಜ್ಞಾನ ಯಾವಾಗ ಹಾಗು ಯಾರು, ಯಾರಿಗೆ ಹೇಳಿದರು? ಯಾರು ಬರೆದರು? ದಯವಿಟ್ಟು ವಿಸ್ತಾರವಾಗಿ ಹೇಳಿ.

ಉತ್ತರ:- ಶ್ರೀಮದ್ಭಗವದ್ಗೀತೆಯ ಜ್ಞಾನವನ್ನು ಶ್ರೀ ಕೃಷ್ಣನ ಶರೀರದಲ್ಲಿ ಪ್ರವೇಶ ಮಾಡಿ ಕಾಲ ಭಗವಂತನು (ಇವನನ್ನು ವೇದಗಳಲ್ಲಿ ಹಾಗೂ ಗೀತೆಯಲ್ಲಿ 'ಬ್ರಹ್ಮ' ಎಂದೂ ಕರೆಯುತ್ತಾರೆ) ಅರ್ಜುನನಿಗೆ ಹೇಳಿದನು. ಯಾವಾಗ ಕೌರವರು ಮತ್ತು ಪಾಂಡವರು ತಮ್ಮ ಸಂಪತ್ತು ಅಂದರೆ ದೆಹಲಿಯ ರಾಜ್ಯದ ಮೇಲೆ ತಮ್ಮ ತಮ್ಮ ಹಕ್ಕನ್ನು ಚಲಾಯಿಸಿ, ಯುದ್ಧವನ್ನು ಮಾಡಲು ಸಿದ್ಧರಾದರೋ, ಆಗ ಇಬ್ಬರ ಸೈನ್ಯವೂ ಎದುರು-ಬದುರಾಗಿ ಕುರುಕ್ಷೇತ್ರದ ಮೈದಾನದಲ್ಲಿ ನಿಂತಿತ್ತು. ಅರ್ಜುನನು ತನ್ನ ಎದುರಾಗಿ ನಿಂತಿದ್ದ ಸೈನ್ಯದಲ್ಲಿ ಭೀಷ್ಮ ಪಿತಾಮಹರು, ಗುರು ದ್ರೋಣಾಚಾರ್ಯರು, ಬಂಧು-ಬಾಂಧವರು, ಕೌರವರ ಮಕ್ಕಳು, ಅಳಿಯಂದಿರು, ಬಾವ ಮೈದುನರು, ಮಾವಂದಿರು......ಮುಂತಾದವರು ಕಾದಾಡಲು, ಮಡಿಯಲು ನಿಂತಿದ್ದನ್ನು ನೋಡಿದನು. ಕೌರವರು ಹಾಗೂ ಪಾಂಡವರು ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು. ಇವರನ್ನು ನೋಡಿ ಅರ್ಜುನನಲ್ಲಿ ಸಾಧು ಭಾವನೆ ಜಾಗೃತವಾಯಿತು. ಮತ್ತು ವಿಚಾರ ಮಾಡಿದನು 'ಯಾವ ರಾಜ್ಯ ಪ್ರಾಪ್ತಿಗಾಗಿ ನಾವು ನಮ್ಮ ಚಿಕ್ಕಪ್ಪನ ಮಕ್ಕಳನ್ನು, ಅಣ್ಣನ ಮಕ್ಕಳನ್ನು, ಅಳಿಯಂದಿರನ್ನು, ಬಾವ ಮೈದುನರನ್ನು, ಭೀಷ್ಮ ಪಿತಾಮಹನನ್ನು ಹಾಗೂ ಗುರು ಜನರನ್ನು ಸಾಯಿಸಲು ಹೊರಟಿದ್ದೇವೆಯೋ, ನಾವು ಎಷ್ಟು ದಿನ ಈ ಪ್ರಪಂಚದಲ್ಲಿ ಬದುಕಲು ಸಾಧ್ಯ? ಆದ್ದರಿಂದ ಈ ರೀತಿ ಪ್ರಾಪ್ತವಾಗುವ ರಾಜ್ಯದ ಸುಖದ ಬದಲಾಗಿ ನಾವು ಭಿಕ್ಷೆ ಬೇಡಿ ನಮ್ಮ ಜೀವನ ಸಾಗಿಸುವುದು ಲೇಸು. ಆದರೆ ನಾವು ಯುದ್ಧ ಮಾಡುವುದಿಲ್ಲ' ಎಂದು ನಿರ್ಧಾರ ಮಾಡಿ ಅರ್ಜುನನು ಬಿಲ್ಲು ಬಾಣವನ್ನು ತ್ಯಜಿಸಿಬಿಟ್ಟನು ಮತ್ತು ರಥದ ಹಿಂದಿನ ಭಾಗದಲ್ಲಿ ಹೋಗಿ ಕುಳಿತುಬಿಟ್ಟನು.

ಅರ್ಜುನನ ಈ ಅವಸ್ಥೆಯನ್ನು ನೋಡಿ ಶ್ರೀ ಕೃಷ್ಣನು ಹೀಗೆಂದನು:- "ಯಾವ ಯೋಧರ ಜೊತೆ ನೀನು ಯುದ್ಧ ಮಾಡಬೇಕೆಂದು ಒಮ್ಮೆ ನೋಡು". ಆಗ ಅರ್ಜುನನು, "ಹೇ ಕೃಷ್ಣ, ಏನೇ ಆದರೂ ನಾನು ಯುದ್ಧ ಮಾಡುವುದಿಲ್ಲ" ಎಂದನು ತನ್ನ ಉದ್ದೇಶ ಹಾಗೂ ತನ್ನ ಮನಸ್ಸಿನಲ್ಲಿ ಉದ್ಭವಿಸುವ ವಿಚಾರಗಳನ್ನು ತಿಳಿಸಿದನು. ಅದೇ ಸಮಯ ಶ್ರೀ ಕೃಷ್ಣನಲ್ಲಿ ಕಾಲ ಭಗವಂತನು ಪ್ರವೇಶ ಮಾಡಿದನು. ಅಂದರೆ ಯಾವುದೋ ಪ್ರೇತವು ಬೇರೆ ವ್ಯಕ್ತಿಯ ಶರೀರದಲ್ಲಿ ಪ್ರವೇಶ ಮಾಡಿ ಮಾತನಾಡುವಂತೆ ಕಾಲ ಭಗವಂತನು ಶ್ರೀ ಕೃಷ್ಣನ ಶರೀರದಲ್ಲಿ ಪ್ರವೇಶ ಮಾಡಿ ಶ್ರೀಮದ್ಭಗವದ್ಗೀತೆಯ ಜ್ಞಾನವನ್ನು ನೀಡುತ್ತಾ ಯುದ್ಧಮಾಡಲು ಪ್ರೇರೇಪಣೆ ಮಾಡಿದನು. ಹಾಗೂ ಕಲಿಯುಗದಲ್ಲಿ ವೇದಗಳನ್ನು ತಿಳಿದಿರುವವರು ಯಾರೂ ಇರುವುದಿಲ್ಲ ಆದ್ದರಿಂದ ನಾಲ್ಕೂ ವೇದಗಳ ಸಂಕ್ಷಿಪ್ತ ವರ್ಣನೆ ಮತ್ತು ಸಾರಾಂಶವನ್ನು 'ಗೀತೆಯ ಜ್ಞಾನ' ರೂಪದಲ್ಲಿ **18** ಅಧ್ಯಾಯಗಳಲ್ಲಿ **700** ಶ್ಲೋಕಗಳಲ್ಲಿ ವಿವರಿಸಿದನು. ಗೀತೆಯ ಜ್ಞಾನದಲ್ಲಿ ತಾನು ಏನು ಹೇಳಿರುವೆನು ಎಂಬುದರ ಬಗ್ಗೆ ಶ್ರೀಕೃಷ್ಣನಿಗೆ ಗೊತ್ತೇ ಇರಲಿಲ್ಲ.

(ಬ್ರಹ್ಮಕುಮಾರಿ ಪಂಥದವರು ಇದೇ ಕಾಲ ಬ್ರಹ್ಮನನ್ನು ನಿರಾಕಾರ ಶಿವ ಬಾಬಾ ಎಂದು ಕರೆಯುತ್ತಾರೆ. ಶಿವಬಾಬಾನು ಯಾರೋ ವೃದ್ಧನ ಶರೀರದಲ್ಲಿ ಪ್ರವೇಶಿಸಿ ಗೀತೆಯ ಜ್ಞಾನವನ್ನು ತಿಳಿಸಿದ್ದಾನೆ ಎಂದು ಅವರು ನಂಬಿದ್ದಾರೆ. ಈ ಶಿವಬಾಬಾ ಬ್ರಹ್ಮಕುಮಾರಿಯವರ ಆರಾಧ್ಯದೈವ).

❖ ಕೆಲ ವರ್ಷಗಳ ನಂತರ ವೇದವ್ಯಾಸ ಋಷಿಗಳು ಈ ಅಮೃತ ಜ್ಞಾನವನ್ನು ಸಂಸ್ಕೃತ ಭಾಷೆಯಲ್ಲಿ ದೇವನಾಗರಿ ಲಿಪಿಯಲ್ಲಿ ಬರೆದರು. ನಂತರ ಅನುವಾದಕರು ತಮ್ಮ ಬುದ್ಧಿಗೆ

ಅನುಗುಣವಾಗಿ ಈ ಪವಿತ್ರ ಗ್ರಂಥವನ್ನು ಹಿಂದಿಗೆ ಹಾಗೂ ಇನ್ನಿತರ ಭಾಷೆಗಳಿಗೆ ಅನುವಾದಿಸಿದ್ದಾರೆ. ವರ್ತಮಾನದಲ್ಲಿ ಇದು ಉತ್ತರ ಪ್ರದೇಶದ ಗೋರಖಪುರದ ಗೀತಾ ಪ್ರೆಸ್‌ನಿಂದ ಪ್ರಕಟವಾಗುತ್ತಿದೆ. ಇದರ ಫೋಟೋಕಾಪಿಗಳು ಇದೇ ಪುಸ್ತಕದ ಕೊನೆಯಲ್ಲಿ ಮುದ್ರಿತವಾಗಿದೆ.

ಪ್ರಶ್ನೆ :– ಇಂದಿನ (2012ನೇ ಇಸವಿ)ವರೆಗೆ ಗೀತೆಯ ಜ್ಞಾನವನ್ನು ಶ್ರೀಕೃಷ್ಣನು ಹೇಳಿದ್ದಾನೆ ಎಂದು ತಿಳಿಯಲಾಗಿತ್ತು. ಆದರೆ ಶ್ರೀ ಕೃಷ್ಣನ ಶರೀರದಲ್ಲಿ ಕಾಲ ಭಗವಂತನು ಪ್ರವೇಶಿಸಿ ಇದನ್ನು ಹೇಳಿದ್ದಾನೆ ಹಾಗೂ ಶ್ರೀಕೃಷ್ಣನಿಗೆ ತಾನು ಏನು ಹೇಳಿದ್ದೇನೆ ಎಂದು ಗೊತ್ತೇ ಇರಲಿಲ್ಲ ಎಂದು ಹೇಳುತ್ತಿರುವಿರಿ, ಇದು ಅಸತ್ಯವೆನ್ನಿಸುತ್ತದೆ. ಇದಕ್ಕೆ ಯಾವುದಾದರೂ ಪ್ರಮಾಣವಿದೆಯೇ?

ಉತ್ತರ :– ನಿಮಗೆ ಸಾಕಷ್ಟು ಪ್ರಮಾಣಗಳನ್ನು ನೀಡುತ್ತೇವೆ. ಇದರಿಂದ ಗೀತಾ ಶಾಸ್ತ್ರದ ಜ್ಞಾನವನ್ನು ಕಾಲ ಭಗವಂತ ಹೇಳಿದ್ದಾನೆ ಎನ್ನುವುದು ನಿಮಗೆ ಸಾಬೀತಾಗುತ್ತದೆ.

ಮೊಟ್ಟ ಮೊದಲಿಗೆ ಗೀತೆಯಿಂದಲೇ ಪ್ರಮಾಣ ನೀಡುತ್ತೇನೆ.

❖ ಪ್ರಮಾಣ ಸಂ. 1 :– ಗೀತೆಯ 10ನೇ ಅಧ್ಯಾಯದಲ್ಲಿ ಹೇಳಿರುವಂತೆ, ಗೀತೆಯ ಜ್ಞಾನದಾತನು ತನ್ನ ವಿರಾಟ ರೂಪವನ್ನು ತೋರಿಸಿದಾಗ ಅರ್ಜುನನು ಕಂಪಿಸಲಾರಂಭಿಸಿದನು ಹಾಗೂ ಭಯಭೀತನಾದನು. ಅರ್ಜುನನ ಭಾವ ಮೈದುನನೇ ಶ್ರೀಕೃಷ್ಣ ಏಕೆಂದರೆ ಕೃಷ್ಣನ ತಂಗಿಯಾದ ಸುಭದ್ರೆಯನ್ನು ಅರ್ಜುನನು ವಿವಾಹವಾಗಿದ್ದನು ಎಂಬ ವಿಚಾರವನ್ನು ಇಲ್ಲಿ ಹೇಳುವುದು ಅನಿವಾರ್ಯ.

ಗೀತೆಯ ಜ್ಞಾನದಾತನು ಯಾವ ಸಮಯದಲ್ಲಿ ತನ್ನ ಭಯಂಕರ ಸಾವಿರ ಬಾಹುಗಳುಳ್ಳ ವಿರಾಟ ರೂಪವನ್ನು ತೋರಿಸಿದಾಗ ಅರ್ಜುನನು ಹೀಗೆಂದನು, 'ಹೇ ದೇವ! ನೀವು ಯಾರು?' (ಗೀತೆಯ 11ನೇ ಅಧ್ಯಾಯದ 31ನೇ ಶ್ಲೋಕ)

❖ ಹೇ ಸಹಂಸ್ರಾಬಾಹು, (ಸಾವಿರ ಭುಜಗಳುಳ್ಳವ) ನೀವು ನಿಮ್ಮ ಚತುರ್ಭುಜ ರೂಪದಲ್ಲಿ ದರ್ಶನ ನೀಡಿರಿ (ಏಕೆಂದರೆ ಅರ್ಜುನನು ಅವನನ್ನು ವಿಷ್ಣು ಅವತಾರ ಕೃಷ್ಣನೆಂದು ತಿಳಿದಿದ್ದನು. ಆದರೆ ಆ ಸಮಯದಲ್ಲಿ ಶ್ರೀ ಕೃಷ್ಣನ ಶರೀರದಿಂದ ಹೊರಬಂದು ಕಾಲನು ತನ್ನ ವಿರಾಟ ರೂಪವನ್ನು ತೋರಿಸಿದ್ದನು) ನಾನು ಭಯಭೀತನಾಗಿದ್ದೇನೆ. ನಿಮ್ಮ ಈ ರೂಪವನ್ನು ನನಗೆ ಸಹಿಸಲು ಸಾಧ್ಯವಾಗುತ್ತಿಲ್ಲ. (ಗೀತೆಯ 11ನೇ ಅಧ್ಯಾಯದ 46ನೇ ಶ್ಲೋಕ)

❖ ಓದುಗರೇ ವಿಚಾರಮಾಡಿ: ನಾವು ನಮ್ಮ ಭಾವ ಮೈದುನನ ಹತ್ತಿರ ಹೀಗೆ ಕೇಳಲು ಸಾಧ್ಯವೇ? 'ಹೇ ಮಹಾನುಭಾವರೇ! ನೀವ್ಯಾರೆಂದು ಹೇಳಿ' ಎನ್ನಲು ಖಂಡಿತ ಸಾಧ್ಯವಿಲ್ಲ. ಒಮ್ಮೆ ಒಬ್ಬ ವ್ಯಕ್ತಿಯಲ್ಲಿ ಒಂದು ಪ್ರೇತ ಮಾತನಾಡಲಾರಂಭಿಸಿತು. ಜೊತೆಯಲ್ಲಿದ್ದ ವ್ಯಕ್ತಿ ನೀವು ಯಾರು ಮಾತನಾಡುತ್ತಿರುವುದು ಎಂದು ಕೇಳಿದನು. ಆಗ ನಿನ್ನ ಮಾವ ಮಾತನಾಡುತ್ತಿದ್ದೇನೆ, ನಾನು ಒಂದು ದುರ್ಘಟನೆಯಲ್ಲಿ ಸತ್ತು ಹೋದೆ ಎಂದು ಆ ವ್ಯಕ್ತಿ ಹೇಳಿದನು. ನಮಗೆ ನಮ್ಮ ಸಹೋದರನ ಬಗ್ಗೆ ಗೊತ್ತಿಲ್ಲವೇ? ಇದೇ ರೀತಿ ಶ್ರೀ ಕೃಷ್ಣನಲ್ಲಿ ಕಾಲ ಭಗವಂತ ಮಾತನಾಡುತ್ತಿದ್ದನು.

❖ ಪ್ರಮಾಣ ಸಂ. 2 :– ಗೀತೆಯ 11ನೇ ಅಧ್ಯಾಯದ 21 ನೇ ಶ್ಲೋಕದಲ್ಲಿ ಅರ್ಜುನನು ಹೀಗೆಂದಿದ್ದಾನೆ, "ನೀವಂತು ದೇವತೆಗಳ ಸಮೂಹದ ಸಮೂಹವನ್ನೇ ಭಕ್ಷಿಸುತ್ತಿರುವಿರಿ. ಅವರೆಲ್ಲಾ ಭಯಭೀತರಾಗಿ ಕೈ ಜೋಡಿಸಿ ನಿಮ್ಮ ಸ್ತುತಿಮಾಡುತ್ತಿದ್ದಾರೆ. ಮಹರ್ಷಿಗಳ ಮತ್ತು ಸಿದ್ಧರ ಸಮುದಾಯವು ನಿಮ್ಮಿಂದ ತಮ್ಮ ಜೀವನದ ರಕ್ಷಣೆಗಾಗಿ ಮಂಗಳ ಕಾಮನೆಗಳನ್ನು ಮಾಡುತ್ತಿದ್ದಾರೆ". ಗೀತೆಯ 11ನೇ ಅಧ್ಯಾಯದ 32ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೀಗೆಂದಿದ್ದಾನೆ, "ಹೇ ಅರ್ಜುನ! ನಾನು ಕಾಲನು, ಈಗ ಪ್ರಕಟನಾಗಿರುವೆ ಅಂದರೆ ಶ್ರೀ ಕೃಷ್ಣನ ಶರೀರದಲ್ಲಿ ಈಗ ಪ್ರವೇಶಿಸಿದ್ದೇನೆ. ಎಲ್ಲಾ ವ್ಯಕ್ತಿಗಳ ನಾಶ ಮಾಡುವೆನು. ನೀನು ಯುದ್ಧ ಮಾಡದಿದ್ದರೂ ವಿಪಕ್ಷದ ಇಡೀ ಸೈನ್ಯವು ನಾಶವಾಗುವುದು".

ಇದರಿಂದ ಸ್ಪಷ್ಟವಾಗುವುದೇನೆಂದರೆ, ಗೀತೆಯ ಜ್ಞಾನವನ್ನು ಶ್ರೀಕೃಷ್ಣನ ಶರೀರದಲ್ಲಿ ಪ್ರವೇಶ ಮಾಡಿ ಕಾಲನು ಹೇಳಿದ್ದಾನೆ. ಶ್ರೀ ಕೃಷ್ಣನು ಈ ಮೊದಲು ಎಂದೂ ನಾನು ಕಾಲನು ಎಂದು ಎಲ್ಲಿಯೂ ಹೇಳಿಲ್ಲ. ಶ್ರೀ ಕೃಷ್ಣನನ್ನು ನೋಡಿ ಯಾರೂ ಭಯಭೀತರಾಗುತ್ತಿರಲಿಲ್ಲ. ಗೋಪ-ಗೋಪಿಯರು, ಗೊಲ್ಲರು, ಪಶು-ಪಕ್ಷಿಗಳು ಇವರೆಲ್ಲಾ ದರ್ಶನ ಪಡೆದು ಆನಂದ ಪಡುತ್ತಿದ್ದರು, 'ಹಾಗಾದರೆ ಶ್ರೀ ಕೃಷ್ಣನು ಕಾಲನೇ?' ಅಲ್ಲ. ಆದ್ದರಿಂದ ಗೀತೆಯ ಜ್ಞಾನದಾತನು ಕಾಲನು. ಇವನು ಶ್ರೀ ಕೃಷ್ಣನ ಶರೀರದಲ್ಲಿ ಪ್ರವೇಶಿಸಿ ಗೀತಾ ಶಾಸ್ತ್ರದ ಜ್ಞಾನವನ್ನು ನೀಡಿದನು.

❖ ಪ್ರಮಾಣ ಸಂ. 3 :- ಗೀತೆಯ 11ನೇ ಅಧ್ಯಾಯದ 47ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು, "ಹೇ ಅರ್ಜುನ! ನಾನು ಪ್ರಸನ್ನನಾಗಿ ನನ್ನ ಶಕ್ತಿಯಿಂದ ನಿನ್ನ ದಿವ್ಯದೃಷ್ಟಿಯನ್ನು ತೆರೆದು ಈ ವಿರಾಟ ರೂಪವನ್ನು ತೋರಿಸಿದ್ದೇನೆ. ಈ ವಿರಾಟ ರೂಪವು ನಿನ್ನ ವಿನಃ ಬೇರೆ ಯಾರೂ ನೋಡಿಲ್ಲ" ಎಂದು ಹೇಳಿದನು.

❖ ವಿಚಾರ ಮಾಡಬೇಕಾದ ವಿಷಯ :- ಪ್ರಿಯ ಓದುಗರೇ! ಮಹಾಭಾರತ ಗ್ರಂಥದಲ್ಲಿ ಒಂದು ಪ್ರಕರಣವಿದೆ. ಶ್ರೀ ಕೃಷ್ಣನು ಕೌರವರ ಸಭೆಯಲ್ಲಿ ಹಾಜರಾಗಿದ್ದಾಗ ಅವರಿಗೆ ಈ ರೀತಿ ಹೇಳಿದನು, "ನೀವಿಬ್ಬರೂ (ಪಾಂಡವರು ಹಾಗೂ ಕೌರವರು) ಪರಸ್ಪರ ಮಾತುಕತೆಯ ಮೂಲಕ ನಿಮ್ಮ ಸಂಪತ್ತನ್ನು (ರಾಜ್ಯವನ್ನು) ಹಂಚಿಕೊಳ್ಳಿ. ಯುದ್ಧ ಮಾಡುವುದು ಒಳ್ಳೆಯದಲ್ಲ." ಆಗ ಪಾಂಡವರು, "ನಮಗೆ ಐದು ಹಳ್ಳಿಗಳನ್ನು ಕೊಡಿ. ಅದರಲ್ಲೇ ನಾವು ತೃಪ್ತಿ ಪಟ್ಟುಕೊಳ್ಳುತ್ತೇವೆ" ಎಂದರು. ಆಗ ದುರ್ಯೋಧನನು ಈ ಬೇಡಿಕೆಯನ್ನು ಒಪ್ಪದೆ "ಪಾಂಡವರಿಗೆ ಒಂದು ಸೂಜಿಯ ಮೊನೆಯಷ್ಟು ರಾಜ್ಯವನ್ನೂ ಕೊಡಲ್ಲ, ಯುದ್ಧ ಮಾಡಿ ಪಡೆದುಕೊಳ್ಳಬಹುದು" ಎಂದು ಹೇಳಿದನು. ಈ ಮಾತಿನಿಂದ ಶ್ರೀ ಕೃಷ್ಣನಿಗೆ ಬಹಳ ಕೋಪ ಬಂದಿತು. ದುರ್ಯೋಧನನಿಗೆ ಹೀಗೆಂದು ಹೇಳಿದನು, ನೀನು ಈ ಭೂಮಿಯನ್ನು ನಾಶ ಮಾಡಲೆಂದೇ ಹುಟ್ಟಿರುವೆ. ಕುಲನಾಶ ಮಾಡಿಯೇ ಬಿಡುವೆ. ಭಲೇ ಮಾನವ! ಎಲ್ಲಿ ಅರ್ಧರಾಜ್ಯ, ಎಲ್ಲಿ ಐದು ಹಳ್ಳಿಗಳು ನಾಚಿಕೆಯಾಗಬೇಕು" ಎಂದನು.

ಈ ಮಾತುಗಳನ್ನು ಕೇಳಿದ ದುರ್ಯೋಧನನು ಕೆಂಡಾಮಂಡಲವಾದನು ಹಾಗೂ ಸಭೆಯಲ್ಲಿ ಹಾಜರಿದ್ದ ತನ್ನ ಸಹೋದರರಿಗೆ ಹಾಗೂ ಮಂತ್ರಿಗಳಿಗೆ 'ಈ ಕೃಷ್ಣಯಾದವನನ್ನು ಬಂಧಿಸಿ' ಎಂದು ಹೇಳಿದನು. ಅದೇ ವೇಳೆ ಶ್ರೀ ಕೃಷ್ಣನು ವಿರಾಟ ರೂಪವನ್ನು ತೋರಿಸಿದನು. ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಭಾಸದರು ಆ ವಿರಾಟ ರೂಪವನ್ನು ನೋಡಿ ಭಯಭೀತರಾಗಿ ಕುರ್ಚಿಗಳ ಕೆಳಗೆ ಅವಿತುಕೊಂಡರು. ಕೆಲವರು ಕಣ್ಣುಗಳನ್ನು ಮುಚ್ಚಿಕೊಂಡು ಕೆಳಗೆ ಬಿದ್ದುಬಿಟ್ಟರು. ಶ್ರೀ ಕೃಷ್ಣನು ಸಭೆಯನ್ನು ಬಿಟ್ಟು ಹೊರಟು ಹೋದನು ಹಾಗೂ ತನ್ನ ವಿರಾಟರೂಪವನ್ನು ಸಮಾಪ್ತಿಗೊಳಿಸಿದನು.

ಈಗ ಆ ಮಾತಿನ ಬಗ್ಗೆ ಚಿಂತಿಸೋಣ. ಯಾವುದೆಂದರೆ ಗೀತೆಯ 11ನೇ ಅಧ್ಯಾಯದ 47ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದನು, 'ನನ್ನ ಈ ವಿರಾಟ ರೂಪವನ್ನು ನಿನ್ನ ವಿನಃ ಈ ಮೊದಲು ಬೇರೆಯಾರೂ ನೋಡಿಲ್ಲ ಅರ್ಜುನ!' ಆದರೆ ಕೃಷ್ಣನ ವಿರಾಟ ರೂಪವನ್ನು ಈ ಮೊದಲೇ ಕೌರವರು ಹಾಗೂ ಉಳಿದೆಲ್ಲಾ ಸಭಾಸದರು ನೋಡಿದ್ದರು. ಹಾಗಾಗಿ ಶ್ರೀ ಕೃಷ್ಣನೇ ಗೀತೆಯ ಜ್ಞಾನವನ್ನು ಹೇಳಿದ್ದಿದ್ದರೆ, ಅವನು ಹೀಗೆ ಹೇಳುತ್ತಿರಲಿಲ್ಲ. ಇದರಿಂದ ಗೀತೆಯ ಜ್ಞಾನವನ್ನು ಶ್ರೀ ಕೃಷ್ಣನು ಹೇಳಿಲ್ಲ, ಬದಲಾಗಿ ಅವನ ಶರೀರದಲ್ಲಿ ಪ್ರೇತಗಳಂತೆ ಪ್ರವೇಶಿಸಿ ಕಾಲನು (ಕ್ಷರ ಪುರುಷನು) ಹೇಳಿದ್ದಾನೆ ಎಂದು ಸ್ಪಷ್ಟವಾಯಿತು. ಇದು ಮೂರನೇ ಪ್ರಮಾಣವಾಯ್ತು.

❖ ಪ್ರಮಾಣ ಸಂ. 4 :- ಶ್ರೀ ವಿಷ್ಣು ಪುರಾಣದ (ಗೀತಾ ಪ್ರೆಸ್, ಗೋರಖ್‌ಪುರದಿಂದ ಪ್ರಕಾಶಿತಗೊಂಡ) ಹಿಂದಿಯ ಪುಟ ಸಂಖ್ಯೆ 168ರಲ್ಲಿ ಪ್ರಮಾಣವಿದೆ. ಒಮ್ಮೆ ದೇವತೆಗಳು

ಹಾಗೂ ರಾಕ್ಷಸರಲ್ಲಿ ಯುದ್ಧವಾಯಿತು. ದೇವತೆಗಳು ಪರಾಜಿತರಾಗಿ ಸಮುದ್ರ ತೀರಕ್ಕೆ ಹೋಗಿ ಅವಿತುಕೊಂಡರು. ಆಗ ಭಗವಂತನನ್ನು ಪ್ರಾರ್ಥಿಸಲಾರಂಭಿಸಿದರು. ಕಾಲನು ತನ್ನ ವಾಸ್ತವಿಕ ರೂಪದಲ್ಲಿ ಯಾರಿಗೂ, ಎಂದಿಗೂ ದರ್ಶನ ನೀಡುವುದಿಲ್ಲ, ತನ್ನ ಯೋಗ ಮಾಯೆಯಿಂದ ಅವಿತುಕೊಂಡಿರುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದನು. (ಗೀತೆಯ 7ನೇ ಅಧ್ಯಾಯದ 24–25ನೇ ಶ್ಲೋಕ) ಆದ್ದರಿಂದ ಈ ಕಾಲನು (ಕ್ಷರ ಪುರುಷನು) ಕೆಲವರಿಗೆ ವಿಷ್ಣುವಿನ ರೂಪದಲ್ಲಿ ದರ್ಶನ ನೀಡಿದರೆ, ಇನ್ನು ಕೆಲವರಿಗೆ ಶಂಕರನ ರೂಪದಲ್ಲಿ, ಇನ್ನೂ ಕೆಲವರಿಗೆ ಬ್ರಹ್ಮನ ರೂಪದಲ್ಲಿ ದರ್ಶನ ನೀಡುತ್ತಾನೆ.

ದೇವತೆಗಳಿಗೆ ಶ್ರೀ ವಿಷ್ಣುವಿನ ರೂಪದಲ್ಲಿ ದರ್ಶನ ನೀಡಿ ಹೀಗೆಂದನು, ‘ನಾನು ನಿಮ್ಮ ಸಮಸ್ಯೆಯನ್ನು ಅರ್ಥ ಮಾಡಿಕೊಂಡಿರುವೆ. ನೀವು ಪುರಂಜ್ಯ ರಾಜನನ್ನು ಯುದ್ಧ ಮಾಡಲು ಸಿದ್ದಗೊಳಿಸಿ. ನಾನು ಆ ರಾಜನ ದೇಹದಲ್ಲಿ ಪ್ರವೇಶ ಮಾಡಿ ರಾಕ್ಷಸರ ನಾಶಮಾಡುವೆನು’. ಹಾಗೆಯೇ ಮಾಡಲಾಯಿತು (ಹೆಚ್ಚಿನ ಮಾಹಿತಿಗಾಗಿ ನೀವು ವಿಷ್ಣು ಪುರಾಣವನ್ನು ಓದಬಹುದು)

❖ ಪ್ರಮಾಣ ಸಂ. 5 :– ಶ್ರೀ ವಿಷ್ಣು ಪುರಾಣ ಹಿಂದಿಯ 173ನೇ ಪುಟದಲ್ಲಿ ಈ ಪ್ರಮಾಣವಿದೆ. ಒಮ್ಮೆ ನಾಗವಂಶಿಗಳು ಹಾಗೂ ಗಂಧರ್ವರ ನಡುವೆ ಯುದ್ಧವಾಯಿತು. ಗಂಧರ್ವರು ನಾಗಗಳ ಬಹುಮೂಲ್ಯವಾದ ವಜ್ರ ವೈಢೂರ್ಯ ಹಾಗೂ ಖಜಾನೆಯನ್ನೇ ಲೂಟಿ ಮಾಡಿದರು. ಅವರ ರಾಜ್ಯವನ್ನೂ ವಶಪಡಿಸಿಕೊಂಡರು. ನಾಗಗಳು ಭಗವಂತನಲ್ಲಿ ಪ್ರಾರ್ಥಿಸಿದವು. ಇದೇ ಕಾಲನು ವಿಷ್ಣುವಿನ ರೂಪ ಧರಿಸಿ ಪ್ರತ್ಯಕ್ಷನಾದನು. ಹೇಳಿದನು ನೀವು ಪುರುಕುತ್ಸ ರಾಜನನ್ನು ಗಂಧರ್ವರ ಜೊತೆ ಯುದ್ಧ ಮಾಡಲು ಸಿದ್ಧತೆ ನಡೆಸಿಕೊಳ್ಳಿ, ನಾನು ಪುರುಕುತ್ಸನ ಶರೀರದಲ್ಲಿ ಪ್ರವೇಶಿಸಿ ದುಷ್ಟ ಗಂಧರ್ವರನ್ನು ನಾಶ ಮಾಡುತ್ತೇನೆ’ ಎಂದು ಹೇಳಿದನು. ಹಾಗೆಯೇ ಆಯಿತು.

ಮೇಲೆ ತಿಳಿಸಿದ ವಿಷ್ಣು ಪುರಾಣದ ಕಥೆಗಳಿಂದ ಸ್ಪಷ್ಟವಾಗುವುದೇನೆಂದರೆ, ಈ ಕಾಲ ಭಗವಂತನು (ಕ್ಷರ ಪುರುಷನು) ಈ ರೀತಿ ಅವ್ಯಕ್ತನಾಗಿ (ಗುಪ್ತವಾಗಿ) ಇದ್ದು ಕಾರ್ಯ ಮಾಡುತ್ತಾನೆ. ಇದೇ ರೀತಿ ಇವನು ಶ್ರೀ ಕೃಷ್ಣನಲ್ಲೂ ಪ್ರವೇಶಿಸಿ ಗೀತೆಯ ಜ್ಞಾನವನ್ನು ಹೇಳಿದ್ದಾನೆ.

❖ ಪ್ರಮಾಣ ಸಂ. 6 :– ಮಹಾಭಾರತ ಗ್ರಂಥದಲ್ಲಿ (ಗೋರಖ್‌ಪುರದ ಉ.ಪ್ರದೇಶ ಗೀತಾ ಪ್ರೆಸ್‌ನಿಂದ ಪ್ರಕಟಗೊಂಡ) ಹಿಂದಿಯಲ್ಲಿ ಭಾಗ 2, 800–801ನೇ ಪುಟದಲ್ಲಿ, ಮಹಾಭಾರತದ ಯುದ್ಧದ ನಂತರ ರಾಜ ಯುಧಿಷ್ಠಿರನನ್ನು ಸಿಂಹಾಸನದ ಮೇಲೆ ಕುಳಿಸಿದ ನಂತರ ಶ್ರೀಕೃಷ್ಣನು ದ್ವಾರಕೆಗೆ ಹೋಗಲು ಸಿದ್ಧನಾದನು. ಆಗ ಅರ್ಜುನನು ಶ್ರೀ ಕೃಷ್ಣನಿಗೆ ಹೀಗೆಂದನು, ‘ನೀವು ಆ ಗೀತೆಯ ಜ್ಞಾನವನ್ನು ಮತ್ತೊಮ್ಮೆ ತಿಳಿಸಿ, ನಾನು ಆ ಜ್ಞಾನವನ್ನು ಮರೆತು ಬಿಟ್ಟಿದ್ದೇನೆ.’ ಆಗ ಶ್ರೀಕೃಷ್ಣನು, ಹೇ ಅರ್ಜುನ! ನೀನು ಬುದ್ಧಿಹೀನನು, ನೀನೊಬ್ಬ ದಡ್ಡನು, ಶ್ರದ್ಧೆ ಇಲ್ಲದವನು, ನೀನು ಇಂಥಾ ಅಮೂಲ್ಯವಾದ ಜ್ಞಾನವನ್ನು ಹೇಗೆ ಮರೆತುಬಿಟ್ಟೆ, ಆಗ ನಾನು ಯೋಗಯುಕ್ತನಾಗಿ ಗೀತೆಯ ಜ್ಞಾನವನ್ನು ನಿನಗೆ ತಿಳಿಸಿದ್ದೆ. ಈಗ ನಾನು ಅದನ್ನು ಹೇಳಲು ಸಾಧ್ಯವಿಲ್ಲ’. ಎಂದು ಹೇಳಿದನು.

❖ ಯೋಚಿಸಿ :– ಯುದ್ಧದ ಸಮಯದಲ್ಲಿ ಯೋಗಯುಕ್ತನಾಗಿ ಹೇಳಲು ಸಾಧ್ಯವಾದರೆ, ಶಾಂತಿಯುತ ವಾತಾವರಣದಲ್ಲಿ ಯೋಗಯುಕ್ತನಾಗಲು ಸಮಸ್ಯೆ ಏನು? ವಾಸ್ತವದಲ್ಲಿ ಕಾಲನು ಶ್ರೀ ಕೃಷ್ಣನಲ್ಲಿ ಪ್ರವೇಶಿಸಿ ಈ ಜ್ಞಾನವನ್ನು ಹೇಳಿದ್ದಾನೆ.

❖ ಶ್ರೀ ಕೃಷ್ಣನಿಗೆ ಸ್ವತಃ ಗೀತೆಯ ಜ್ಞಾನ ನೆನಪಿಲ್ಲ? ಅವನು ಭಾಷಣಕಾರನೇ ಆಗಿದ್ದರೆ, ಒಬ್ಬ ಭಾಷಣಕಾರನಿಗೆ ಎಲ್ಲವೂ ನೆನಪಿರುತ್ತದೆ. ಕೇಳುವವರಿಗೆ ಮೊದಲ ಬಾರಿ 40 ಪ್ರತಿಶತ ನೆನಪಿರುತ್ತದೆ. ಆದ್ದರಿಂದ ಕಾಲನು (ಕ್ಷರ ಪುರುಷನು) ಶ್ರೀ ಕೃಷ್ಣನಲ್ಲಿ ಪ್ರವೇಶಿಸಿ ಗೀತೆಯ ಜ್ಞಾನವನ್ನು

ಹೇಳಿದ್ದಾನೆ ಎನ್ನುವುದು ಸಾಬೀತಾಗುತ್ತದೆ. ಮೇಲಿನ ಪ್ರಮಾಣಗಳಿಂದ ಗೀತೆಯ ಜ್ಞಾನವನ್ನು ಶ್ರೀ ಕೃಷ್ಣನು ಹೇಳಿಲ್ಲ ಎಂದು ಸ್ಪಷ್ಟವಾಗುತ್ತದೆ. ಅವರಿಗಂತು ಏನು ಹೇಳಿದ್ದೆ ಎಂಬುದೇ ಗೊತ್ತಿಲ್ಲ. ಶ್ರೀ ಕೃಷ್ಣನ ಶರೀರದಲ್ಲಿ ಪ್ರವೇಶಿಸಿ ಕಾಲಪುರುಷ (ಕ್ಷರ ಪುರುಷ)ನು ಹೇಳಿದ್ದನು.

ಪ್ರಶ್ನೆ 2 :– ಕಾಲ ಪುರುಷನು ಯಾರು?

ಉತ್ತರ :– ಅದಕ್ಕಾಗಿ ಈ ಪುಸ್ತಕದಲ್ಲಿರುವ 'ಸೃಷ್ಟಿ ರಚನೆ' ಎಂಬ ಅಧ್ಯಾಯವನ್ನು ಓದಿ.

ಪ್ರಶ್ನೆ 3 :– ಕಾಲ ಭಗವಂತ ( ಬ್ರಹ್ಮ) ನು ಅವಿನಾಶಿಯೇ ಅಥವಾ ಹುಟ್ಟುತ್ತಾನೆ–ಸಾಯುತ್ತಾನೆ?

ಉತ್ತರ :– ಹುಟ್ಟುತ್ತಾನೆ–ಸಾಯುತ್ತಾನೆ.

ಪ್ರಶ್ನೆ 4 :– ಗೀತೆಯಲ್ಲಿ ಸಾಕ್ಷ್ಯವೆಲ್ಲಿದೆ?

ಉತ್ತರ :– ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5ನೇ ಶ್ಲೋಕ ಹಾಗೂ 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಸ್ವತಃ ಸ್ವೀಕರಿಸುತ್ತಾನೆ. ಅಂದರೆ 'ನನ್ನದೂ ಜನ್ಮ–ಮೃತ್ಯು ಆಗುತ್ತದೆ, ನಾನು ಅವಿನಾಶಿಯಲ್ಲ, ಹೇ ಅರ್ಜುನ! ನಿನ್ನ ಮತ್ತು ನನ್ನ ಅನೇಕ ಜನ್ಮಗಳಾಗಿವೆ, ನಿನಗೆ ಗೊತ್ತಿಲ್ಲ, ಆದರೆ ನನಗೆ ಗೊತ್ತಿದೆ. ನೀನು ನಾನು ಹಾಗೂ ಈ ರಾಜರು ಹಾಗೂ ಸೈನಿಕರು ಈ ಮೊದಲೂ ಇದ್ದೆವು, ಮುಂದೆಯೂ ಇರುವೆವು, ನಾವು ವರ್ತಮಾನದಲ್ಲಿ ಮಾತ್ರ ಇರುತ್ತೇವೆ ಎಂದು ತಿಳಿಯಬೇಡ. ನನ್ನ ಉತ್ಪತ್ತಿಯನ್ನು ದೇವತೆಗಳಿಗೂ ಗೊತ್ತಿಲ್ಲ, ಋಷಿಗಳಿಗೂ ಗೊತ್ತಿಲ್ಲ, ಏಕೆಂದರೆ ಅವರೆಲ್ಲಾ ನನ್ನಿಂದ ಉತ್ಪನ್ನರಾದವರು'.

ಇದರಿಂದ ಗೀತೆಯ ಜ್ಞಾನದಾತನು ಕಾಲ ಪುರುಷನು ಅವಿನಾಶಿ ಅಲ್ಲ ಎಂದು ಸ್ಪಷ್ಟವಾಯ್ತು. ಆದ್ದರಿಂದ ಇವನು ಕ್ಷರ ಪುರುಷ (ನಾಶವಾಗುವ ಪ್ರಭು) ಎಂದು ಕರೆಯಲ್ಪಡುತ್ತಾನೆ.

ಪ್ರಶ್ನೆ 5 :– ಬ್ರಹ್ಮಾ, ವಿಷ್ಣು ಮತ್ತು ಮಹೇಶ್ವರ ಅವಿನಾಶಿಯೇ?

ಉತ್ತರ :– ಇಲ್ಲ, ಇವರೂ ನಾಶವಾಗುವರು, ಇವರದೂ ಜನ್ಮ–ಮೃತ್ಯು ಆಗುತ್ತದೆ. ಬ್ರಹ್ಮಾ, ವಿಷ್ಣು ಮತ್ತು ಮಹೇಶ್ವರರಿಗೂ ತಂದೆ ತಾಯಿಗಳಿದ್ದಾರೆ.

ಪ್ರಶ್ನೆ 6 :– ಯಾವುದಾದರೂ ಪ್ರಮಾಣ ತಿಳಿಸಿ, ಅವರ ತಂದೆ ತಾಯಿಗಳ ಹೆಸರನ್ನೂ ತಿಳಿಸಿ.

ಉತ್ತರ :– ಗೀತಾ ಪ್ರೇಸ್ ಗೋರಖ್ ಪುರದಿಂದ ಪ್ರಕಾಶಿತಗೊಂಡ "ಶ್ರೀ ದೇವಿ ಮಹಾಪುರಾಣ" ಇದರ ಕನ್ನಡ ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಣಕರ್. ಅಧ್ಯಾಯ 4–5ರ ಮೂರನೆಯ ಸ್ಕಂದ ಪುಟ 105ರಲ್ಲಿ ಶ್ರೀ ವಿಷ್ಣುವು ತನ್ನ ತಾಯಿಯಾದ ದುರ್ಗೆಯ ಸ್ತುತಿಯನ್ನು ಮಾಡುತ್ತಾ ಹೀಗೆಂದಿದ್ದಾನೆ, 'ಹೇ ಮಾತೆ! ನೀನು ಶುದ್ಧ ಸ್ವರೂಪಳು, ಇಡೀ ಪ್ರಪಂಚವು ನಿನ್ನಿಂದಲೇ ಎದ್ದು ಕಾಣುತ್ತಿದೆ. ನಿನ್ನ ಕೃಪೆಯಿಂದ ನಾವೆಲ್ಲಾ ವಿದ್ಯಮಾನರಾಗಿದ್ದೇವೆ. ನಾನು, ಬ್ರಹ್ಮಾ ಹಾಗು ಶಂಕರ ಹುಟ್ಟುತ್ತೇವೆ, ಸಾಯುತ್ತೇವೆ, ನಮ್ಮದಂತು ಅವಿರ್ಭಾವ (ಜನ್ಮ) ಮತ್ತು ತಿರೋಭಾವ (ಮೃತ್ಯು) ಆಗುತ್ತಿರುತ್ತದೆ, ನಾವು ಅವಿನಾಶಿ ಅಲ್ಲ, ನೀನೇ ಜಗತ್ಜನನಿ. ಹಾಗೂ ಸನಾತನೀ ದೇವಿ ಹಾಗು ಪ್ರಕೃತಿ ದೇವಿಯಾಗಿರುವೆ."

ಶಂಕರ ಭಗವಂತನು ಹೇಳಿದನು, 'ಹೇ ಮಾತಾ! ವಿಷ್ಣುವಿನ ನಂತರ ಉತ್ಪನ್ನವಾದ ಬ್ರಹ್ಮಾನು ನಿನ್ನ ಮಗನಾದರೆ, ತಮೋಗುಣ ಲೀಲೆಯನ್ನು ಮಾಡುವ ಶಂಕರ ನಿನ್ನ ಮಗನಲ್ಲವೇ? ಅಂದರೆ ನನ್ನನ್ನೂ ಉತ್ಪನ್ನಿಸಿದವಳು ನೀನೇಯಾಗಿರುವೆ'. ಈ ದೇವಿ ಮಹಾಪುರಾಣದ ಉಲ್ಲೇಖದಿಂದ ಸ್ಪಷ್ಟವಾಯ್ತು ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಹಾಗೂ ಶ್ರೀ ಶಿವನಿಗೆ ಜನ್ಮ ನೀಡುವವಳು ದುರ್ಗಾ ಮಾತೆ (ಅಷ್ಟಂಗಿ ದೇವಿ) ಹಾಗೂ ಈ ಮೂವರೂ ನಾಶಹೊಂದುವವರು.

# ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಹಾಗೂ ಶ್ರೀ ಶಿವನ ತಂದೆ ಯಾರು?

ಪ್ರಮಾಣ:– "ಶ್ರೀ ಶಿವ ಮಹಾಪುರಾಣ" (ಇದರ ಕನ್ನಡ ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಣಕರ್, ಗೀತಾ ಪ್ರೆಸ್ ಗೋರಖಪುರದಿಂದ ಪ್ರಕಾಶನ) ದಲ್ಲಿ ಇವರ ತಂದೆಯ ಬಗ್ಗೆ ಮಾಹಿತಿ ಇದೆ. ಶ್ರೀ ಶಿವ ಮಹಾಪುರಾಣದ ರುದ್ರಸಂಹಿತೆ ಖಂಡದ ಅಧ್ಯಾಯ **6–7**ರ **81** ರಿಂದ **85**ನೇ ಪುಟದವರೆಗೆ ಈ ಕೆಳಗಿನ ಪ್ರಕರಣವಿದೆ.

ತನ್ನ ಪುತ್ರನಾದ ನಾರದರ ಪ್ರಶ್ನೆಗೆ ಉತ್ತರವನ್ನು ನೀಡುತ್ತಾ ಶ್ರೀ ಬ್ರಹ್ಮಾ ಹೀಗೆಂದರು, ಹೇ ಪುತ್ರ! ನೀನು ಸೃಷ್ಟಿಯ ಸೃಷ್ಟಿಕರ್ತನ ವಿಷಯದಲ್ಲಿ ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳುತ್ತೇನೆ, ಕೇಳು. ಪ್ರಾರಂಭದಲ್ಲಿ ಕೇವಲ ಒಬ್ಬ 'ಸದ್‌ಬ್ರಹ್ಮ' ಮಾತ್ರ ಇದ್ದನು. ಎಲ್ಲಾ ಸ್ಥಾನಗಳಲ್ಲೂ ಪ್ರಳಯವಿತ್ತು. ಆ ನಿರಾಕಾರ ಪರಮಾತ್ಮನು ತನ್ನ ಸ್ವರೂಪವನ್ನು ಶಿವನಂತೆ ಮಾಡಿದನು. ಅವನನ್ನು 'ಸದಾಶಿವ' ಎಂದು ಕರೆಯಲಾಗುತ್ತದೆ. ಅವನು ತನ್ನ ಶರೀರದಿಂದ ಒಬ್ಬ ಸ್ತ್ರೀಯನ್ನು ಬೇರ್ಪಡಿಸಿದನು, ಆ ಸ್ತ್ರೀ ದುರ್ಗಾ, ಜಗದಂಬಿಕಾ, ಪ್ರಕೃತಿದೇವಿ ಹಾಗೂ ತ್ರಿದೇವ (ಬ್ರಹ್ಮಾ, ವಿಷ್ಣು ಮತ್ತು ಮಹೇಶ್ವರ)ರ ಜನನಿ ಎಂದು ಕರೆಯಲ್ಪಟ್ಟಳು. ಅವಳಿಗೆ **8** ಭುಜಗಳಿವೆ. ಅವಳನ್ನೇ 'ಶಿವೆ' ಎಂದೂ ಕರೆಯುತ್ತಾರೆ.

❖ ಶ್ರೀ ವಿಷ್ಣುವಿನ ಉತ್ಪತ್ತಿ :– ಸದಾಶಿವ ಹಾಗೂ ಶಿವೆ (ದುರ್ಗೆ)ಯು ಪತಿ–ಪತ್ನಿಯ ರೂಪದಲ್ಲಿದ್ದು ಒಬ್ಬ ಪುತ್ರನ ಉತ್ಪತ್ತಿ ಮಾಡಿದರು, ಅವನ ಹೆಸರನ್ನು ವಿಷ್ಣುವೆಂದು ಇಟ್ಟರು.

❖ ಶ್ರೀ ಬ್ರಹ್ಮಾನ ಉತ್ಪತ್ತಿ :– ಶ್ರೀ ಬ್ರಹ್ಮಾನು, 'ಯಾವ ರೀತಿ ಶಿವ ಹಾಗೂ ಶಿವೆಯ ಸಂಯೋಗ ದಿಂದ ವಿಷ್ಣುವಿನ ಉತ್ಪತ್ತಿಯಾಯ್ತೋ, ಅದೇ ರೀತಿ ನನ್ನ ಉತ್ಪತ್ತಿ ಆಯಿತು' ಎಂದು ಹೇಳಿದನು.

ಟಿಪ್ಪಣಿ :– ಇಲ್ಲಿ ಶಿವನನ್ನು ಕಾಲಬ್ರಹ್ಮನೆಂದು ತಿಳಿಯಬೇಕು. ಶಿವೆ ಎಂದರೆ ದುರ್ಗೆ ಎಂದು ತಿಳಿಯಬೇಕು. ಪ್ರಿಯ ಓದುಗರೇ, ರುದ್ರ ಸಂಹಿತೆಯ ಖಂಡದಲ್ಲಿ ಶಿವನ ಉತ್ಪತ್ತಿಯ ಪ್ರಕರಣವಿಲ್ಲ. ಇದು ಅನುವಾದಕರ್ತನ ತಪ್ಪು. ಹಾಗಂತು ದೇವಿ ಪುರಾಣದಲ್ಲಿ ಶಂಕರನು, ನನ್ನ ಜನ್ಮವು ದುರ್ಗಾ (ಪ್ರಕೃತಿ) ದೇವಿಯಿಂದ ಆಗಿದೆ ಎಂದು ಒಪ್ಪಿಕೊಂಡಿದ್ದಾನೆ.

❖ ಶಂಕರನೂ ಸಹ ಶಿವ ಹಾಗೂ ಶಿವೆಯ ಪುತ್ರನು :– ಶಿವ ಮಹಾಪುರಾಣದ ವಿದ್ವೇಶ್ವರ ಸಂಹಿತೆ ಖಂಡದ **19**ರಿಂದ **22**ನೇ ಪುಟದಲ್ಲಿ ಪ್ರಮಾಣವಿದೆ. ಒಮ್ಮೆ ಶ್ರೀ ಬ್ರಹ್ಮಾ ಹಾಗೂ ವಿಷ್ಣುವಿನ ಮಧ್ಯದಲ್ಲಿ ಈ ಮಾತಿನ ಮೇಲೆ ಯುದ್ಧ ನಡೆಯಿತು. ಅಂದರೆ ಬ್ರಹ್ಮಾನು ಹೀಗೆಂದನು, 'ನಾನು ನಿನ್ನ ತಂದೆ. ಏಕೆಂದರೆ ಈ ಪ್ರಪಂಚವು ನನ್ನಿಂದ ಸೃಷ್ಟಿಯಾಗಿದೆ. ನಾನು ಪ್ರಜಾಪಿತನು'. ಆಗ ವಿಷ್ಣುವು, 'ನಾನು ನಿನ್ನ ತಂದೆ. ನೀನು ನನ್ನ ನಾಭಿ ಕಮಲದಿಂದ ಹುಟ್ಟಿರುವೆ' ಎಂದನು. ಒಬ್ಬರು ಇನ್ನೊಬ್ಬರನ್ನು ಹೊಡೆಯಲು ಮುಂದಾದರು. ಅದೇ ಸಮಯದಲ್ಲಿ ಸದಾಶಿವನು ಅಂದರೆ ಕಾಲಬ್ರಹ್ಮನು ಆ ಇಬ್ಬರ ಮಧ್ಯದಲ್ಲಿ ಒಂದು ಬಿಳೀ ಬಣ್ಣದ ಪ್ರಕಾಶಮಯವಾದ ಸ್ತಂಭವನ್ನು ನಿಲ್ಲಿಸಿದನು. ನಂತರ ಸ್ವತಃ ಶಂಕರನ ರೂಪದಲ್ಲಿ ಪ್ರತ್ಯಕ್ಷನಾಗಿ, ನಿಮ್ಮಲ್ಲಿ ಯಾರೂ ಸೃಷ್ಟಿಕರ್ತರಲ್ಲ ಎಂದು ಹೇಳಿದನು. 'ಹೇ ಪುತ್ರರೇ, ನಾನು ನಿಮಗೆ ಜಗತ್ತಿನ ಸೃಷ್ಟಿ ಹಾಗೂ ಸ್ಥಿತಿ ಎಂಬ ಎರಡು ಕಾರ್ಯಗಳನ್ನು ನೀಡಿದ್ದೇನೆ. ಅದೇ ರೀತಿ ನಾನು ಶಂಕರ ಹಾಗೂ ರುದ್ರರಿಗೆ ಎರಡು ಕಾರ್ಯಗಳಾದ ಸಂಹಾರ ಹಾಗೂ ತಿರೋಗತಿಯನ್ನು ನೀಡಿದ್ದೇನೆ. ವೇದಗಳಲ್ಲಿ ನನ್ನನ್ನು ಬ್ರಹ್ಮನೆಂದಿದ್ದಾರೆ. ನನಗೆ ಐದು ಮುಖಗಳಿವೆ. ಒಂದು ಮುಖದಿಂದ ಅಕಾರ (ಅ), ಎರಡನೇ ಮುಖದಿಂದ ಉಕಾರ (ಉ), ಮೂರನೇ ಮುಖದಿಂದ ಮಕಾರ (ಮ), ನಾಲ್ಕನೇ ಮುಖದಿಂದ ಬಿಂದು (.) ಹಾಗೂ ಐದನೇ ಮುಖದಿಂದ ನಾದ (ಶಬ್ದ) ಪ್ರಕಟವಾಗಿವೆ. ಈ ಐದೂ ಅವಯವಗಳು ಸೇರಿ ಒಂದು ಅಕ್ಷರ ಓಂ ಆಗಿದೆ. ಇದು ನನ್ನ ಮೂಲ ಮಂತ್ರವಾಗಿದೆ.

ಮೇಲಿನ ಶಿವ ಮಹಾಪುರಾಣದಿಂದ, ಬ್ರಹ್ಮಾ, ವಿಷ್ಣು ಹಾಗೂ ಶಿವನ ತಾಯಿ ಶ್ರೀ ದುರ್ಗಾದೇವಿ (ಅಷ್ಟಂಗಿ ದೇವಿ) ಹಾಗು ತಂದೆ ಸದಾಶಿವ ಅಂದರೆ 'ಕಾಲ ಬ್ರಹ್ಮ' ಎಂದು ಸ್ಪಷ್ಟವಾಯ್ತು ಮತ್ತು ಈ ಕಾಲಬ್ರಹ್ಮನು ಭಗವದ್ಗೀತೆಯ ಜ್ಞಾನವನ್ನು ಶ್ರೀ ಕೃಷ್ಣನಲ್ಲಿ ಪ್ರವೇಶಿಸಿ ಹೇಳಿದ್ದನು. ಇವನನ್ನೆ ಕ್ಷರಪುರುಷ, ಕ್ಷರಬ್ರಹ್ಮ ಎಂದು ಕರೆಯಲಾಗುತ್ತದೆ. ಇದೇ ಪ್ರಮಾಣ ಭಗವದ್ಗೀತೆಯ 14ನೇ ಅಧ್ಯಾಯದ 3ರಿಂದ 5ರವರೆಗಿನ ಶ್ಲೋಕಗಳಲ್ಲಿ ಇದೆ. ರಜ್ (ರಜೋಗುಣ ಬ್ರಹ್ಮಾ), ಸತ್ (ಸತ್ವಗುಣ ವಿಷ್ಣು) ತಮ್ (ತಮೋಗುಣ ಶಂಕರ) ಈ ಮೂರು ಗುಣಗಳ ಉತ್ಪತ್ತಿ ಪ್ರಕೃತಿ ಅರ್ಥಾತ್ ದುರ್ಗಾ ದೇವಿಯಿಂದ ಆಗಿದೆ. ಪ್ರಕೃತಿಯಂತು ಎಲ್ಲಾ ಜೀವಿಗಳನ್ನು ಉತ್ಪತ್ತಿಸಿದ ತಾಯಿ. ನಾನು (ಗೀತಾ ಜ್ಞಾನದಾತನು) ಎಲ್ಲಾ ಜೀವಿಗಳ ತಂದೆ. ನಾನು ದುರ್ಗೆ (ಪ್ರಕೃತಿ)ಯ ಗರ್ಭದಲ್ಲಿ ಬೀಜ ಸ್ಥಾಪಿಸುತ್ತೇನೆ ಇದರಿಂದ ಎಲ್ಲರ ಉತ್ಪತ್ತಿಯಾಗುತ್ತದೆ.

ಪ್ರಶ್ನೆ 7 :– ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಂಕರ ಎನ್ನುವುದಕ್ಕೆ ಪ್ರಮಾಣ ಎಲ್ಲಿದೆ?

ಉತ್ತರ 1) :– ಶ್ರೀ ಮಾರ್ಕಂಡೇಯ ಪುರಾಣ (ಸಚಿತ್ರ ದಪ್ಪ ಅಚ್ಚು ಗೀತಾ ಪ್ರೆಸ್, ಗೋರಖ್‌ಪುರದಿಂದ ಪ್ರಕಾಶಿತವಾದ) ಹಿಂದಿಯ 123ನೇ ಪುಟದಲ್ಲಿ, ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಂಕರ– ಈ ಮೂವರೂ ಬ್ರಹ್ಮನ ಪ್ರಧಾನ ಶಕ್ತಿಗಳು, ಇವರೇ ಮೂರು ದೇವತೆಗಳು, ಇವರೇ ಮೂರು ಗುಣಗಳು ಎಂದು ಹೇಳಲಾಗಿದೆ.

2) ಶ್ರೀ ದೇವಿ ಮಹಾಪುರಾಣ ಸಂಸ್ಕೃತ ಮತ್ತು ಹಿಂದಿ ಅನುವಾದ (ಶ್ರೀ ವೆಂಕಟೇಶ್ವರ ಪ್ರೆಸ್, ಮುಂಬೈನಿಂದ ಪ್ರಕಾಶಿತವಾದ)ದಲ್ಲಿ ಮೂರನೇ ಸ್ಕಂದ 5ನೇ ಅಧ್ಯಾಯದ 8ನೇ ಶ್ಲೋಕದಲ್ಲಿ ಭಗವಂತ ಶಂಕರ ಹೇಳಿದರು, ಹೇ ಮಾತೆ! ಒಂದು ವೇಳೆ ನೀವು ನಮ್ಮ ಮೇಲೆ ದಯೆಯುಕ್ತಳಾಗಿದ್ದರೆ ನನ್ನನ್ನು ತಮೋಗುಣ, ಬ್ರಹ್ಮಾ ರಜೋಗುಣ ಹಾಗು ವಿಷ್ಣು ಸತ್ವಗುಣಯುಕ್ತ ಏಕೆ ಮಾಡಿದೆ?

ಮೇಲಿನ ಪ್ರಮಾಣಗಳಿಂದ ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಂಕರ ಎಂದು ಸ್ಪಷ್ಟವಾಯ್ತು.

ಪ್ರಶ್ನೆ 8 :– ಪರಮಾತ್ಮನನ್ನು ಅಜನ್ಮ, ಅಜರ–ಅಮರ ಎನ್ನುತ್ತಾರೆ. ಮೇಲೆ ತಿಳಿಸಿದ ಪ್ರಕರಣ ಹಾಗೂ ಪ್ರಮಾಣಗಳಿಂದ ಬ್ರಹ್ಮಾ, ವಿಷ್ಣು, ಶಂಕರ–ಈ ಮೂವರು ನಾಶಹೊಂದುವರೆಂದು ಸಾಬೀತಾಯಿತು. ಹಾಗಾದರೆ ಅವಿನಾಶಿ ಪರಮಾತ್ಮನು ಯಾರು? ಬ್ರಹ್ಮಾ, ವಿಷ್ಣು, ಶಂಕರ ಮತ್ತು ಕಾಲಬ್ರಹ್ಮ ಪರಮಾತ್ಮನಲ್ಲವೇ? ಪ್ರಮಾಣ ಸಹಿತ ತಿಳಿಸಿ.

ಉತ್ತರ :– ಮೊದಲು ಬ್ರಹ್ಮಾ, ವಿಷ್ಣು, ಮಹೇಶ್ವರ ಹಾಗೂ ಕಾಲಬ್ರಹ್ಮ ಪರಮಾತ್ಮನೋ, ಅಥವಾ ಇಲ್ಲವೋ ಎಂಬುದನ್ನು ಸ್ಪಷ್ಟಪಡಿಸುತ್ತೇವೆ. ಪರಮಾತ್ಮನು ಅಜನ್ಮ ಅಂದರೆ ಎಂದಿಗೂ ಅವನ ಜನ್ಮವಾಗಿಲ್ಲ, ಆಗುವುದಿಲ್ಲ ಎಂದು ನೀವು ನಿಮ್ಮ ಪ್ರಶ್ನೆಯಲ್ಲೇ ಉತ್ತರ ನೀಡಿದ್ದೀರಿ. ಮೇಲಿನ ವಿವರಣೆ ಹಾಗು ಪ್ರಮಾಣಗಳಿಂದ ಬ್ರಹ್ಮಾ, ವಿಷ್ಣು, ಶಂಕರನ ತಂದೆ ತಾಯಿಗಳಿದ್ದಾರೆ ಎಂದು ಸಾಬೀತುಪಡಿಸಲಾಗಿದೆ. ಬ್ರಹ್ಮನೂ ನಾಶಹೊಂದುವನು. ಅವನ ಜನ್ಮವೂ ಆಗಿದೆ. ಹಾಗಾಗಿ ಅವನೂ ಪರಮಾತ್ಮನಲ್ಲವೆಂದು ಸ್ಪಷ್ಟವಾಯಿತು. ಹಾಗಾದರೆ ಅವಿನಾಶಿ ಯಾರು? ಎಂಬ ಪ್ರಶ್ನೆ ಉದ್ಭವವಾಯಿತು. ಇದನ್ನು ಗೀತೆಯ ಆಧಾರದಿಂದಲೇ ಸ್ಪಷ್ಟಪಡಿಸುವುದೇನೆಂದರೆ ಗೀತೆಯ ಜ್ಞಾನದಾತನಿಗಿಂತ ಬೇರೆ ಪರಮಾತ್ಮನೊಬ್ಬನಿದ್ದಾನೆ. ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5ನೇ ಶ್ಲೋಕ, 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನ್ನ ಸ್ಥಿತಿಯನ್ನು ಸ್ಪಷ್ಟಪಡಿಸಿದ್ದಾನೆ ಅಂದರೆ, ನನ್ನ ಜನ್ಮವಾಗಿದೆ, ನನ್ನ ಜನ್ಮ–ಮೃತ್ಯು ಆಗುತ್ತದೆ, ಅರ್ಜುನ ನನ್ನ ಹಾಗು ನಿನ್ನ ಅನೇಕ ಜನ್ಮಗಳಾಗಿವೆ. ನಾನೂ ನಾಶಹೊಂದುವವನು. ಗೀತೆಯ

2ನೇಯ ಅಧ್ಯಾಯದ 17ನೇ ಶ್ಲೋಕದಲ್ಲಿ ಯಾವ ಪರಮಾತ್ಮನು ಎಲ್ಲರನ್ನೂ ಸೃಷ್ಟಿಸಿದ್ದಾನೋ, ಯಾರನ್ನು ಸಾಯಿಸಲು ಸಾಧ್ಯವಿಲ್ಲವೋ, ಅವನೇ ಅವಿನಾಶಿ ಎಂದು ತಿಳಿ ಎಂದು ಹೇಳಲಾಗಿದೆ. ಆ ಅವಿನಾಶಿ ಪರಮಾತ್ಮನ ಇದು ಮೊದಲ ಪ್ರಮಾಣ.

❖ ಪ್ರಮಾಣ ಸಂ. 2 :– ಭಗವದ್ಗೀತೆಯ 15ನೇ ಅಧ್ಯಾಯದ 16, 17ನೇ ಶ್ಲೋಕದಲ್ಲಿ ಮೂವರು ಪುರುಷರನ್ನು (ಪ್ರಭು) ವಿವರಿಸಲಾಗಿದೆ. ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಹೇಳಿದ್ದಾರೆ ಈ ಲೋಕದಲ್ಲಿ ಇಬ್ಬರು ಪುರುಷರು ಪ್ರಸಿದ್ಧರು, ಕ್ಷರ ಪುರುಷ ಮತ್ತು ಅಕ್ಷರ ಪುರುಷ ಎಂದು ಹೇಳಲಾಗಿದೆ. ಇವರಿಬ್ಬರೂ ಪ್ರಭುಗಳು ಮತ್ತು ಅವರ ಅಧಿನದಲ್ಲಿರುವ ಸಮಸ್ತ ಜೀವಿಗಳು ನಾಶಹೊಂದುವವು, ಆತ್ಮವಂತು ಎಲ್ಲರದೂ ಅಮರವಾಗಿದೆ. ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಉತ್ತಮ ಪುರುಷ ಅರ್ಥಾತ್ ಪುರುಷೋತ್ತಮನಂತು ಬೇರೆ ಯಾರೋ ಇದ್ದಾನೆ, ಅವನನ್ನು ಪರಮಾತ್ಮ ಎಂದು ಕರೆಯಲಾಗಿದೆ. ಅವನು ಮೂರೂ ಲೋಕಗಳಲ್ಲಿ ಪ್ರವೇಶಿಸಿ, ಎಲ್ಲರ ಧಾರಣೆ ಪೋಷಣೆ ಮಾಡುತ್ತಾನೆ. ಅವನೇ ವಾಸ್ತವದಲ್ಲಿ ಅವಿನಾಶಿ ಎಂದು ಹೇಳಲಾಗಿದೆ.

ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾವ ಸಾಧಕರು ಕೇವಲ ಜರಾ (ವೃದ್ಧಾಪ್ಯ), ಮರಣದ (ಮೃತ್ಯುವಿನ) ದುಃಖದಿಂದ ಬಿಡುಗಡೆ ಹೊಂದಲು ಪ್ರಯತ್ನಿಸುತ್ತಾರೆ. ಅವರು ತತ್ ಬ್ರಹ್ಮ ನನ್ನು ಅರಿತವರು, ಎಲ್ಲಾ ಕರ್ಮಗಳನ್ನು ಹಾಗೂ ಸಂಪೂರ್ಣ ಆಧ್ಯಾತ್ಮದ ಬಗ್ಗೆ ತಿಳಿದವರು.

ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಅರ್ಜುನನು ಕೇಳುತ್ತಾನೆ, 'ತತ್ ಬ್ರಹ್ಮ' ಎಂದರೆ ಏನು? ಗೀತೆಯ ಜ್ಞಾನದಾತನು 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಉತ್ತರಿಸಿದ್ದಾನೆ, ಅವನು 'ಪರಮ ಅಕ್ಷರ ಬ್ರಹ್ಮನು' ಅಂದರೆ ಪರಮ ಅಕ್ಷರ ಪುರುಷನು, (ಪುರುಷ ಹೇಳಿ ಅಥವಾ ಬ್ರಹ್ಮ) ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ 'ಉತ್ತಮ ಪುರುಷಃ ತು ಅನ್ಯಃ ಪರಮಾತ್ಮ ಇತಿ ಉದಾಹೃತಃ' ಎಂದು ಹೇಳಲಾಗಿದೆ. ಅವನು "ಪರಮ ಅಕ್ಷರ ಬ್ರಹ್ಮನು", ಅವನನ್ನೇ ಪುರುಷೋತ್ತಮನೆಂದು ಕರೆದಿದ್ದಾರೆ.

❑❑❑

# ಸಂದೇಹ ನಿವಾರಣೆ

ಗೀತೆಯ 15ನೇ ಅಧ್ಯಾಯದ 18ನೇ ಶ್ಲೋಕದಲ್ಲಿ ಗೀತೆಯ ಜ್ಞಾನವನ್ನು ನೀಡಿದಾತನು ಹೇಳಿರುವುದೇನೆಂದರೆ, "ನನ್ನ 21 ಬ್ರಹ್ಮಾಂಡಗಳಲ್ಲಿ ಇರುವ ಎಲ್ಲಾ ಜೀವಿಗಳಿಗಿಂತ ನಾನು ಉತ್ತಮನು ಅಂದರೆ ಶಕ್ತಿವಂತನು. ಆದ್ದರಿಂದ ಲೋಕವೇದ ಅಂದರೆ ದಂತಕಥೆಯ ಆಧಾರದ ಮೇಲೆ ನಾನು ಪುರುಷೋತ್ತಮನೆಂದು ಪ್ರಸಿದ್ಧನಾಗಿದ್ದೇನೆ." ವಾಸ್ತವದಲ್ಲಿ ಪುರುಷೋತ್ತಮನು ಯಾರೆಂದು ಗೀತೆಯ 15ನೇ ಅದ್ಯಾಯದ 17ನೇ ಶ್ಲೋಕದಲ್ಲಿ ಸ್ಪಷ್ಟಪಡಿಸಲಾಗಿದೆ. ಉತ್ತಮ ಪುರುಷ ಅಂದರೆ ಪುರುಷೋತ್ತಮನು ಕ್ಷರ ಪುರುಷ (ಗೀತೆಯಜ್ಞಾನ ನೀಡಿದವನು) ಮತ್ತು ಅಕ್ಷರ ಪುರುಷ (ಏಳು ಶಂಖ ಬ್ರಹ್ಮಾಂಡದ ಸ್ವಾಮಿಯಾಗಿರುವನು) ನಿಗಿಂತ ಭಿನ್ನವಾದವನು. ಅವನೇ ನಿಜವಾದ ಪರಮಾತ್ಮನು. ಅವನು ಎಲ್ಲರ ಪಾಲನೆ ಪೋಷಣೆ ಮಾಡುತ್ತಾನೆ. ವಾಸ್ತವದಲ್ಲಿ ಅವನೇ ಅವಿನಾಶಿ. ಅವನು ಪರಮ ಅಕ್ಷರ ಬ್ರಹ್ಮನು ಅವನು ಅಸಂಖ್ಯಾತ ಬ್ರಹ್ಮಾಂಡಗಳಿಗೆ ಒಡೆಯನು, ಎಲ್ಲರ ಸೃಷ್ಟಿಕರ್ತನು, ಕುಲದ ಒಡೆಯನು ಅಂದರೆ ಪರಮಾತ್ಮನು.

ಪ್ರಶ್ನೆ 9 :– ಅಕ್ಷರ ಎಂದರೆ ಅವಿನಾಶಿ ಎಂದರ್ಥ. ಆದರೆ ನೀವು ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಅಕ್ಷರ ಪುರುಷನನ್ನೂ ನಾಶವಾಗುವನೆಂದು ಹೇಳಿದ್ದೀರಾ. ದಯವಿಟ್ಟು ಸ್ಪಷ್ಟಪಡಿಸಿ.

ಉತ್ತರ :– 'ಅಕ್ಷರ' ಎಂದರೆ ಅವಿನಾಶಿ ಎಂದರ್ಥ, ಇದು ಸತ್ಯ. ಆದರೆ, ಪ್ರಸಂಗಕ್ಕೆ ತಕ್ಕಂತೆ ಅರ್ಥ ಬದಲಾಗುವುದು. ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಕ್ಷರ ಮತ್ತು ಅಕ್ಷರ ಎಂಬ ಇಬ್ಬರು ಪುರುಷರು (ಪ್ರಭುಗಳು) ಈ ಲೋಕದಲ್ಲಿದ್ದಾರೆ. ಇವರಿಬ್ಬರೂ ಹಾಗೂ ಇವರ ಅಧಿನದಲ್ಲಿರುವ ಎಲ್ಲಾ ಜೀವಿಗಳು ನಾಶವಾಗುವಂಥವರು. ಆತ್ಮ ಯಾರದೂ ಸಾಯುವುದಿಲ್ಲ ಎಂದು ಹೇಳಲಾಗಿದೆ. ನಂತರ ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ, ಪುರುಷೋತ್ತಮನು ಮೇಲೆ ತಿಳಿಸಿದ ಈ ಇಬ್ಬರು ಪುರುಷರಿಗಿಂತ ಭಿನ್ನನು, ಅವನೇ ಅವಿನಾಶಿ, ಅವನೇ ಎಲ್ಲರ ಪಾಲನೆ–ಪೋಷಣೆ ಮಾಡುವವನು ಎಂದು ಹೇಳಲಾಗಿದೆ. ಗೀತೆಯ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ 'ತತ್ ಬ್ರಹ್ಮ' ನನ್ನು 'ಪರಮ ಅಕ್ಷರ ಬ್ರಹ್ಮ' ಎಂದು ಹೇಳಲಾಗಿದೆ. ಅಕ್ಷರ ಎಂದರೆ ಅವಿನಾಶಿ ಎಂದರ್ಥ. ಆದರೆ ಇಲ್ಲಿ ಪರಮ ಅಕ್ಷರ ಬ್ರಹ್ಮ ಎಂದು ಹೇಳಲಾಗಿದೆ. ಅಕ್ಷರದ ಮುಂದೆ ಪರಮ ಅಕ್ಷರ ಬ್ರಹ್ಮ ನಿದ್ದಾನೆ. ಆದ್ದರಿಂದ ಅವನು ಅವಿನಾಶಿ ಎನ್ನುವುದು ಸ್ಪಷ್ಟವಾಗುತ್ತದೆ.

ಪ್ರಮಾಣ :– ಬ್ರಹ್ಮಾನ ಆಯಸ್ಸು ನೂರು ವರ್ಷ ಎಂದು ಹೇಳಲಾಗುತ್ತದೆ. ದೇವತೆಗಳ ವರ್ಷ ಎಷ್ಟು ಸಮಯದ್ದಾಗಿದೆ?

ಉತ್ತರ: – ಕೇಳಿ! ನಾಲ್ಕು ಯುಗ (ಸತ್ಯಯುಗ, ತ್ರೇತಾಯುಗ, ದ್ವಾಪರಯುಗ, ಹಾಗೂ ಕಲಿಯುಗ) ಇದು ಒಂದು ಚತುರ್ಯುಗವಾಗುತ್ತದೆ. ಇದರಲ್ಲಿ ಮನುಷ್ಯರದು 43,20,000 (ನಲ್ವತ್ತಮೂರು ಲಕ್ಷದಇಪ್ಪತ್ತು ಸಾವಿರ) ವರ್ಷವಾಗಿರುತ್ತದೆ. ಈ ರೀತಿಯ 1008 ಚತುರ್ಯುಗಗಳು ಬ್ರಹ್ಮಾನಿಗೆ ಒಂದು ದಿನ ಹಾಗೂ ಇಷ್ಟೇ ಚತುರ್ಯುಗಗಳ ಒಂದು ರಾತ್ರಿ ಆಗುತ್ತದೆ. ಅಂದರೆ 30 ಹಗಲು–ರಾತ್ರಿಯ 1 ತಿಂಗಳಾಗುತ್ತದೆ. 12 ತಿಂಗಳು ಸೇರಿದರೆ 1 ವರ್ಷವಾಗುತ್ತದೆ. ಅಂತಹ ನೂರು ವರ್ಷಗಳ ಬ್ರಹ್ಮಾನ ಆಯುಷ್ಯವಾಗುತ್ತದೆ. ಹೀಗೆ ವಿಷ್ಣುವಿನ ಆಯಸ್ಸು ಬ್ರಹ್ಮಾನಿಗಿಂತ 7 ಪಟ್ಟು ಜಾಸ್ತಿ ಇದೆ ಅಂದರೆ 700 ವರ್ಷಗಳು. ಶಂಕರನ ಅವಧಿಯು ವಿಷ್ಣುವಿನ ಅವಧಿಗಿಂತ 7 ಪಟ್ಟು ಅಧಿಕವಾಗಿರುತ್ತದೆ. ಅಂದರೆ 4,900 ವರ್ಷಗಳು. ಬ್ರಹ್ಮ (ಕ್ಷರ ಪುರುಷ)ನ ಆಯುಷ್ಯ 70 ಸಾವಿರ ಶಂಕರನ ಮೃತ್ಯುವಿನ ನಂತರ ಒಬ್ಬ ಬ್ರಹ್ಮನ ಮೃತ್ಯುವಾಗುತ್ತದೆ. ಅಂದರೆ ಕ್ಷರ ಪುರುಷನ ಮೃತ್ಯುವಾಗುತ್ತದೆ. ಇಷ್ಟೇ ಸಮಯದ ಒಂದು ಯುಗ ಅಕ್ಷರ ಪುರುಷನದ್ದಾಗಿದೆ.

ಅಕ್ಷರ ಪುರುಷನ ಆಯುಷ್ಯವನ್ನು ಗೀತೆಯ 8ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೀಗೆಂದು ಬರೆದಿದೆ :-

ಸಹಂಸ್ರ್ ಯುಗ್ ಪರ್ಯಂತಮ್ ಅಹಃ ಯತ್ ಬ್ರಹ್ಮಣಃ ವಿದುಃ ।
ರಾತ್ರಿಮ್ ಯುಗ್ ಸಹಂಸ್ರಾಂತಮ್ ತೇ ಅಹೋರಾತ್ರಾ ವಿದಃ ಜನಾಃ ॥ (17)

ಅನುವಾದ:- ಇಂದಿನತನಕ ಎಲ್ಲಾ ಅನುವಾದಕರು ಸರಿಯಾಗಿ ಅನುವಾದವನ್ನು ಮಾಡಿಲ್ಲ. ಎಲ್ಲರು ಬ್ರಹ್ಮಾನಿಗೆ ಒಂದು ಸಾವಿರ ಚತುರ್ಯುಗ ಎಂದು ಬರೆದಿದ್ದಾರೆ. ಇದು ತಪ್ಪು (ಹೆಚ್ಚಿನ ಮಾಹಿತಿಗಾಗಿ ಇದೇ ಪುಸ್ತಕದ ಕೊನೆಯಲ್ಲಿ ಗೀತೆಯ ಶ್ಲೋಕಗಳ ಅನುವಾದದ ಪ್ರತಿ ಲಿಪಿಗಳನ್ನು ನೀಡಲಾಗಿದೆ. ಇದು ಗೋರಖ್‌ಪುರದ ಗೀತಾ ಪ್ರೆಸ್‌ನಿಂದ ಪ್ರಕಾಶಗೊಂಡಿದೆ.)

ಮೂಲ ಪಾಠದಲ್ಲಿ "ಸಹಸ್ರ ಚತುರ್ಯುಗ"ವೆಂದು ಬರೆಯದೆ "ಸಹಸ್ರ ಯುಗ" ಎಂದು ಬರೆದಿದೆ. ಆದ್ದರಿಂದ ಗೀತೆಯ 8ನೇ ಅಧ್ಯಾಯದ 17ನೇ ಶ್ಲೋಕದ ಅನುವಾದ ಹೀಗಿರುತ್ತದೆ :- [ಬ್ರಹ್ಮಣಃ] ಅಕ್ಷರ ಪುರುಷನ [ಯತ್][ಅಹಃ] ಒಂದು ದಿನವು [ಸಹಸ್ರ ಯುಗ ಪ್ರಯಂತಂ] ಅದು ಒಂದು ಸಾವಿರ ಯುಗದ ಅವಧಿಯದ್ದಾಗಿದೆ ಹಾಗೂ [ರಾತ್ರಿಂ] ಒಂದು ರಾತ್ರಿಯೂ ಸಹ [ಯುಗ ಸಹಸ್ರಾಂತಂ] ಒಂದು ಸಾವಿರ ಯುಗದ ಅವಧಿಯ ಯಾವ ಪುರುಷರು (ವಿಧುಃ) ತಿಳಿದಿರುತ್ತಾರೋ, (ತೆ) ಆ (ಜನಾ) ವ್ಯಕ್ತಿಗಳು (ಅಹೋ ರಾತ್ರಿ) ಹಗಲು-ಇರುಳನ್ನು (ವಿದಃ) ತಿಳಿದವರಾಗಿರುತ್ತಾರೆ.

ಭಾವಾರ್ಥ :- ಈ ಶ್ಲೋಕದಲ್ಲಿ 'ಬ್ರಹ್ಮಾ' ಎನ್ನುವ ಶಬ್ದವು ಮೂಲ ಪಾಠದಲ್ಲಿಲ್ಲ. 'ಚತುರ್ಯುಗ' ಎನ್ನುವ ಶಬ್ದವು ಸಹ ಮೂಲ ಪಾಠದಲ್ಲಿಲ್ಲ. ಇದರಲ್ಲಿ 'ಬ್ರಹ್ಮಣಃ' ಶಬ್ದವಿದೆ. ಅದರ ಅರ್ಥವು ಸಚ್ಚಿದಾನಂದ ಘನ ಬ್ರಹ್ಮ ಅಂದರೆ ಪರಮ ಅಕ್ಷರ ಬ್ರಹ್ಮ ಎಂದಾಗುತ್ತದೆ. ಆದರೆ ಪ್ರಸಂಗಕ್ಕೆ ಅನುಗುಣವಾಗಿ ಬ್ರಹ್ಮಣಃ ಶಬ್ದದ ಅರ್ಥವು ಬ್ರಹ್ಮನನ್ನು ಬಿಟ್ಟು ಇನ್ನೊಬ್ಬ ಪರಬ್ರಹ್ಮ [ಅಕ್ಷರ ಬ್ರಹ್ಮ] ಎಂದೂ ಆಗುತ್ತದೆ.

ಪ್ರಮಾಣ :- ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಬ್ರಹ್ಮಣಃದ ಅರ್ಥ ಸಚ್ಚಿದಾನಂದ ಘನ ಬ್ರಹ್ಮವೆಂದು ಮಾಡಿದ್ದಾರೆ. ಇಲ್ಲಿ ಅನುವಾದಕರು ಸರಿಯಾಗಿ ಬರೆದಿದ್ದಾರೆ. ಗೀತೆಯ 8ನೇ ಅಧ್ಯಾಯದ 17ನೇ ಶ್ಲೋಕದಲ್ಲಿ 'ಆಯಸ್ಸಿಗೆ ಸಂಬಂಧಿಸಿದ ಪ್ರಸಂಗವಿದೆ. ಇದರಲ್ಲಿ ಬ್ರಹ್ಮಣಃ ಎಂಬುದಕ್ಕೆ ಅಕ್ಷರ ಬ್ರಹ್ಮ ಎಂದು ಅರ್ಥವಾಗುತ್ತದೆ. ಇಲ್ಲಿ ಅಕ್ಷರ ಬ್ರಹ್ಮನ ಆಯುಷ್ಯದ ಮಾಹಿತಿ ಇದೆ. ಅಕ್ಷರ ಬ್ರಹ್ಮನ ಒಂದು ದಿನ, ಒಂದು ಸಾವಿರ ಯುಗಕ್ಕೆ ಸಮಾನ. [ಎಪ್ಪತ್ತು ಸಾವಿರ (70,000) ಶಂಕರರು ಮರಣ ಹೊಂದಿದ ನಂತರ ಒಬ್ಬ ಕ್ಷರ ಪುರುಷನ ಮೃತ್ಯುವಾಗುತ್ತದೆ. ಆ ಸಮಯವು ಒಂದು ಯುಗ ಅಕ್ಷರ ಪುರುಷನದ್ದಾಗಿದೆ.] ಹೀಗೆ ಆದ ಒಂದು ಸಾವಿರ (1,000) ಯುಗಗಳ ಅಕ್ಷರ ಪುರುಷನ ಹಗಲು ಮತ್ತು ಅಷ್ಟೇ ರಾತ್ರಿಗಳೂ ಆಗುತ್ತವೆ. ಇಂತಹ ಮೂವತ್ತು ಹಗಲು-ರಾತ್ರಿಗಳು ಸೇರಿದರೆ ಒಂದು ತಿಂಗಳಾಗುತ್ತದೆ. ಹಾಗೆಯೇ ಅಕ್ಷರ ಪುರುಷನ ಹನ್ನೆರಡು ತಿಂಗಳು ಒಂದು ವರ್ಷವಾಗುತ್ತದೆ. ಮತ್ತು ಇಂತಹ ನೂರು ವರ್ಷಗಳ ಅಕ್ಷರ ಪುರುಷನ ಆಯುಷ್ಯವಾಗಿದೆ. ಇದಾದ ನಂತರ ಅವನ ಮೃತ್ಯುವಾಗುತ್ತದೆ. ಆದ್ದರಿಂದ ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಕ್ಷರ ಪುರುಷ ಮತ್ತು ಅಕ್ಷರ ಪುರುಷ ಇವರಿಬ್ಬರನ್ನೂ ನಾಶಹೊಂದುವರೆಂದು ಹೇಳಲಾಗಿದೆ. ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೇಳಿರುವ ಅವಿನಾಶಿ ಪರಮಾತ್ಮನು ಶಾಶ್ವತನು. ಎಲ್ಲಾ ಪ್ರಾಣಿಗಳ ಮರಣಾ ನಂತರವು ಸಹ ಈ ಪರಮಾತ್ಮನು ನಾಶವಾಗುವುದಿಲ್ಲ.

ಪ್ರಮಾಣ :- ಗೀತೆಯ 8ನೇ ಅಧ್ಯಾಯದ 20 ರಿಂದ 22ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿರುವುದೇನೆಂದರೆ, 'ಆ ಪರಮ ಅಕ್ಷರ ಬ್ರಹ್ಮನು, ಎಲ್ಲಾ ಜೀವಾತ್ಮಗಳ ನಾಶವಾದ ಮೇಲೂ ನಾಶವಾಗುವುದಿಲ್ಲ.

ಉದಾ :– (1) ಬಿಳಿ ಮಣ್ಣಿನಿಂದ ಮಾಡಿದ ತಟ್ಟೆ–ಲೋಟಗಳು ಕೈಯಿಂದ ಜಾರಿ ನೆಲಕ್ಕೆ ಬಿದ್ದು ಮುರಿದು ಹೋಗುತ್ತವೆ. ಅಂದರೆ ನಾಶವಾಗುತ್ತವೆ. ಇದನ್ನು ಕ್ಷರ ಎನ್ನುತ್ತಾರೆ. ಅಂದರೆ ಈ ಸ್ಥಿತಿಯನ್ನು ಕ್ಷರ ಪುರುಷನೆಂದು ತಿಳಿದುಕೊಳ್ಳಿ.

ಉದಾ :– (2) ಸ್ಟೀಲಿನಿಂದ ಮಾಡಿದ ತಟ್ಟೆ–ಲೋಟಗಳು ಬಹಳ ಕಾಲದವರೆಗೆ ಬಾಳಿಕೆ ಬರುತ್ತವೆ. ನಂತರ ತುಕ್ಕು ಹಿಡಿದು ನಾಶವಾಗುತ್ತವೆ. ಅವು ಬಹಳ ಬೇಗ ಮುರಿಯುವುದಿಲ್ಲ. ಹಾಗೂ ನಾಶವಾಗುವುದಿಲ್ಲ. ಮಣ್ಣಿನ ಪಾತ್ರೆಗಳಿಗೆ ಹೋಲಿಸಿದರೆ ಸ್ಟೀಲ್ ಪಾತ್ರೆಗಳು ಶಾಶ್ವತ ಎನ್ನುವ ಭಾವನೆ ಬರುತ್ತದೆ. ಆದರೆ ಅವು ಸಹ ನಾಶವಾಗುತ್ತವೆ. ಅದೇ ಸ್ಥಿತಿಯನ್ನು ಅಕ್ಷರ ಪುರುಷನದು ಎಂದು ತಿಳಿಯಿರಿ.

ಉದಾ :– (3) ಚಿನ್ನದಿಂದ ಮಾಡಿದ ತಟ್ಟೆ–ಲೋಟಗಳು ಎಂದಿಗೂ ನಾಶವಾಗುವುದಿಲ್ಲ. ಅವುಗಳಿಗೆ ತುಕ್ಕು ಹಿಡಿಯುವುದಿಲ್ಲ. ವಾಸ್ತವದಲ್ಲಿ ಇವು ಅವಿನಾಶಿ. ಈ ಸ್ಥಿತಿಯನ್ನು ಪರಮ ಅಕ್ಷರ ಬ್ರಹ್ಮನದು ಎಂದು ತಿಳಿಯಿರಿ. ಆದ್ದರಿಂದ ಪ್ರಸಂಗಕ್ಕೆ ತಕ್ಕಂತೆ ಅಕ್ಷರದ ಅರ್ಥ ನಶ್ವರವಾಗುತ್ತದೆ ವಾಸ್ತವಿಕದಲ್ಲಿ ಅಕ್ಷರದ ಅರ್ಥ ಅವಿನಾಶಿಯಾಗಿದೆ.

**ಉದಾಹರಣೆಗಾಗಿ ಗೀತೆಯ 8ನೇ ಅಧ್ಯಾಯದ 11ನೇ ಶ್ಲೋಕದ ಇರುವ ಮೂಲ ಪಾಠ :–**

ಯತ್ ಅಕ್ಷರಮ್ ವೇದ್ ವಿದಃ ವದಂತಿ ವಿಶಂತಿಯತ್ ಯತಯಃ ಬೀತರಾಗಾಃ
ಯತ್ ಇಚ್ಛಂತಃ ಬ್ರಹ್ಮಚರ್ಯಮ್ ಚರಂತಿ ತತ್ ತೇ ಪದಮ್ ಸಂಗ್ರಹೇಣ ಪ್ರವಕ್ಷ್ಯೆ (11)

ಅನುವಾದ :– ಈ ಶ್ಲೋಕದಲ್ಲಿ 'ಅಕ್ಷರ' ಎಂದರೆ ಅವಿನಾಶಿ ಪರಮಾತ್ಮ ಎಂದಿದೆ. "[ವೇದ ವಿದಃ] ತತ್ವದರ್ಶಿ ಸಂತನು ಅಂದರೆ ವೇದದ ತಾತ್ಪರ್ಯವನ್ನು ತಿಳಿದ ಮಹಾತ್ಮ [ಯತ್] ನನ್ನು [ಅಕ್ಷರಂ] ಅವಿನಾಶಿ [ವದಂತಿ] ಎಂದು ಕರೆಯುತ್ತಾರೆ. [ಯತಯಃ] ಸಾಧನೆಯಲ್ಲಿ ನಿರತರಾದ [ಭೀತರಾಗ] ಆಸಕ್ತಿ ರಹಿತ ಸಾಧಕನು [ಯತ್] ಯಾವ ಲೋಕಕ್ಕೆ [ವಿಶಂತಿ] ಪ್ರವೇಶ ಮಾಡುತ್ತಾನೋ ಮತ್ತು [ಯತ್] ಯಾವ ಪರಮಾತ್ಮನನ್ನು [ಇಚ್ಛಂತಹ] ಇಷ್ಟ ಪಡುವ ಸಾಧಕನು (ಬ್ರಹ್ಮಚರ್ಯಂ) ಬ್ರಹ್ಮಚರ್ಯೆ ಎಂದರೆ ಶಿಷ್ಯ ಪರಂಪರೆಯನ್ನು [ಚರಂತಿ] ಆಚರಿಸುತ್ತಾನೆಯೋ, [ತತ್] ಆ [ಪದಂ] ಪದವಿಯನ್ನು [ತೆ] ನಿನಗಾಗಿ ನಾನು [ಸಂಗ್ರಹೇಣ] ಸಂಕ್ಷೇಪದಲ್ಲಿ [ಪ್ರವಕ್ಷ್ಯೇ] ಹೇಳುತ್ತೇನೆ". ಈ ಶ್ಲೋಕದಲ್ಲಿ ಅಕ್ಷರದ ಅರ್ಥವು ಅವಿನಾಶಿ ಪರಮಾತ್ಮ ಎಂದಾಗಿದೆ. ಇದು ಸರಿಯಾಗಿದೆ. ಕಬೀರರು ಸೂಕ್ಷ್ಮವೇದದಲ್ಲಿ ಹೀಗೆಂದಿದ್ದಾರೆ :–

ಗುರು ಬಿನ್ ಕಾಹೂ ನ್ ಪಾಯಾ ಜ್ಞಾನಾ, ಜ್ಯೋಂ ಥೋಥಾ ಭುಸ್ ಛಿಡೇ ಮೂಢ್ ಕಿಸಾನಾ ।
ಗುರು ಬಿನ್ ವೇದ್ ಪಢೇ ಜೋ ಪ್ರಾಣೀ, ಸಮಝೇ ನಾ ಸಾರ್ ರಹೇ ಅಜ್ಞಾನೀ ॥

ಪ್ರಶ್ನೆ10 :– ನೀವು ಯಾವುದನ್ನು ಪೂರ್ಣ ಮೋಕ್ಷವೆಂದು ಭಾವಿಸುತ್ತೀರಿ?

ಉತ್ತರ: – ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ವರ್ಣನೆ ಇದೆ. ತತ್ವದರ್ಶಿ ಸಂತನ ಪ್ರಾಪ್ತಿಯ ಬಳಿಕ ತತ್ವಜ್ಞಾನವೆಂಬ ಅಸ್ತ್ರದಿಂದ ಅಜ್ಞಾನವನ್ನು ಕತ್ತರಿಸಿ ಅಂದರೆ ಒಳ್ಳೆಯ ರೀತಿಯಲ್ಲಿ ಜ್ಞಾನವನ್ನು ತಿಳಿದುಕೊಂಡು ತದನಂತರ ಪರಮೇಶ್ವರನ ಆ ಪರಮ ಪದದ [ಸತ್ಯಲೋಕದ] ಅನ್ವೇಷಣೆಯನ್ನು ಮಾಡಬೇಕು. ಅಲ್ಲಿಗೆ ಹೋದ ಸಾಧಕನು ಮರಳಿ ಈ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ ಅಂದರೆ ಅವನ ಜನ್ಮ ಎಂದಿಗೂ ಆಗುವುದಿಲ್ಲ. ಯಾವ ಪರಮಾತ್ಮನು ಎಲ್ಲ ರಚನೆ ಮಾಡಿದ್ದಾನೊ ಕೇವಲ ಅವನ ಭಕ್ತಿ ಪೂಜೆ ಮಾಡಬೇಕು. ಅದರ ಪ್ರಾಪ್ತಿಯ ಬಳಿಕ ಪುನಃ ಜನ್ಮವಾಗುವುದಿಲ್ಲವೋ, ಜನ್ಮ ಮರಣದ ಚಕ್ರ ಸದಾಕಾಲಕ್ಕೆ ಸಮಾಪ್ತವಾಗುವುದೋ ಅದನ್ನು ಪೂರ್ಣ ಮೋಕ್ಷವೆಂದು ಕರೆಯುತ್ತಾರೆ.

ಪ್ರಶ್ನೆ 11 :– ಗೀತೆಯ ಜ್ಞಾನದಾತ ಬ್ರಹ್ಮನ ಭಕ್ತಿಯಿಂದ ಪೂರ್ಣ ಮೋಕ್ಷವು ಸಿಗುವುದೇ?

ಉತ್ತರ:– ಇಲ್ಲ

ಪ್ರಶ್ನೆ 12 :– ಗೀತೆಯ 8 ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು, 'ಹೇ ಅರ್ಜುನ! ನನ್ನನ್ನು ಪ್ರಾಪ್ತಿಸಿದ ಮೇಲೆ ಪುನರ್ಜನ್ಮ ಆಗುವುದಿಲ್ಲ ಎಂದು ಹೇಳಿದ್ದಾನೆ ಎನ್ನುವುದಕ್ಕೆ ಆಧಾರವಿದೆ. ಬ್ರಹ್ಮನನ್ನು ಆರಾಧಿಸುವುದರಿಂದ ಪೂರ್ಣ ಮೋಕ್ಷವು ಸಾಧ್ಯವಿಲ್ಲವೆಂದು ನೀವು ಹೇಗೆ ಹೇಳುವಿರಿ?'

ಉತ್ತರ:– ಶ್ರೀದೇವಿ ಮಹಾಪುರಾಣದ (ಗೀತಾ ಪ್ರೆಸ್‌ಗೋರಖ್‌ಪುರದಿಂದ ಪ್ರಕಾಶಿತಗೊಂಡ) ಕನ್ನಡ ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್ 7ನೇ ಸ್ಕಂದದ 462–463ನೇ ಪುಟದಲ್ಲಿ ಇರುವ ಪ್ರಮಾಣವೇನೆಂದರೆ ಶ್ರೀ ದೇವಿಯು ಹಿಮಾಲಯ ರಾಜನಿಗೆ ಉಪದೇಶವನ್ನು ನೀಡುತ್ತಾ ಹೀಗೆಂದಿದ್ದಾಳೆ, 'ಹೇ ರಾಜ! ಎಲ್ಲಾ ವಿಷಯಗಳನ್ನು ಬಿಟ್ಟು, ನನ್ನನ್ನೂ ಸಹ ಆರಾಧಿಸುವುದನ್ನು ಬಿಟ್ಟು ಕೇವಲ 'ಓಂ' ಎಂಬ ನಾಮಜಪವನ್ನು ಮಾಡು. ಬ್ರಹ್ಮನ ಪ್ರಾಪ್ತಿಯ ಇದೊಂದೇ ಮಂತ್ರವಾಗಿದೆ. ಇದರಿಂದ ಪ್ರಪಂಚದ ಇನ್ನೊಂದು ಕಡೆಯಿರುವ ಬ್ರಹ್ಮನನ್ನು ನೀನು ಪಡೆಯಬಹುದು. ಅವನು ಬ್ರಹ್ಮಲೋಕದಂತಿರುವ ದಿವ್ಯ ಆಕಾಶದಲ್ಲಿರುತ್ತಾನೆ. ನಿನ್ನ ಕಲ್ಯಾಣವಾಗಲಿ'

ಭಾವಾರ್ಥವೇನೆಂದರೆ ಬ್ರಹ್ಮ ಸಾಧನೆಯ ಕೇವಲ 'ಓಂ' ಎಂಬ ಒಂದು ನಾಮಜಪವಿದೆ. ಇದರಿಂದ ಬ್ರಹ್ಮನ ಪ್ರಾಪ್ತಿಯಾಗುತ್ತದೆ. ಆ ಸಾಧಕನು ಬ್ರಹ್ಮ ಲೋಕಕ್ಕೆ ಹೊರಟು ಹೋಗುತ್ತಾನೆ. ಇದೇ ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ ಬ್ರಹ್ಮ ಲೋಕದಿಂದ ಹಿಡಿದು ಎಲ್ಲಾ ಲೋಕಗಳು ಪುನರಾವರ್ತನೆಯ ಚಕ್ರದಲ್ಲಿವೆ. ಅಂದರೆ ಬ್ರಹ್ಮಲೋಕಕ್ಕೆ ಹೋದ ಸಾಧಕನಿಗೂ ಸಹ ಪುನರ್ಜನ್ಮವಿರುತ್ತದೆ. ಬ್ರಹ್ಮನನ್ನು ಆರಾಧಿಸುವುದರಿಂದ ಪೂರ್ಣ ಮೋಕ್ಷವು ಪ್ರಾಪ್ತಿಯಾಗುವುದಿಲ್ಲ. ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕವನ್ನು (ಗೀತಾಪ್ರೆಸ್ ಗೋರಖಪುರ ದಿಂದ ಪ್ರಕಾಶಿತಗೊಂಡ ಗೀತೆ ಮತ್ತು ಬೇರೆ ಪ್ರಕಾಶನದ ಗೀತೆಯಲ್ಲಿ) ತಪ್ಪಾಗಿ ಅನುವಾದಿಸಿದ್ದಾರೆ.

ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕ :–

ಆ ಬ್ರಹ್ಮ್ ಭುವನಾತ್ ಲೋಕಾಃ ಪುನರಾವರ್ತಿನಃ ಅರ್ಜುನ್ ।
ಮಾಮ್ ಉಪೇತ್ಯ ತು ಕೌಂತೇಯ್ ಪುನರ್ಜನ್ಮ್ ನ ವಿಧತೇ ॥ (16)

ಇದನ್ನು ತಪ್ಪಾಗಿ ಈ ರೀತಿ ಅನುವಾದಿಸಿದ್ದಾರೆ:– ಹೇ ಅರ್ಜುನ! 'ಬ್ರಹ್ಮ ಲೋಕದವರೆಗಿನ ಎಲ್ಲಾ ಲೋಕಗಳು ಪುನರಾವರ್ತನೆಯಲ್ಲಿವೆ. ಅಂದರೆ ಅಲ್ಲಿ ಹೋದ ನಂತರ ಈ ಪ್ರಪಂಚಕ್ಕೆ ಪುನಃ ಬರಬೇಕಾಗುತ್ತದೆ. ಆದರೆ ನನ್ನನ್ನು ಪಡೆದ ಮೇಲೆ ಪುನರ್ಜನ್ಮ ಇರುವುದಿಲ್ಲ. (ಈ ಅನುವಾದ ತಪ್ಪು) ಈ ಪುಸ್ತಕದ ಕೊನೆಯಲ್ಲಿ ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದ ಅನುವಾದವನ್ನು ನೀಡಿದೆ. ಅದನ್ನು ಗೋರಖ್‌ಪುರದ ಗೀತಾಪ್ರೆಸ್‌ನವರು ಮುದ್ರಿಸಿದ್ದಾರೆ.

ಇದರ ನಿಜವಾದ ಅನುವಾದವು ಈ ರೀತಿ ಇದೆ :–

"ಬ್ರಹ್ಮ ಲೋಕದವರೆಗಿನ ಎಲ್ಲಾ ಲೋಕಗಳು ಪುನರಾವರ್ತನೆಯಲ್ಲಿವೆ. ಅಂದರೆ ಬ್ರಹ್ಮ ಲೋಕಕ್ಕೆ ಹೋದ ವ್ಯಕ್ತಿಗಳಿಗೂ ಸಹ ಪುನರ್ಜನ್ಮವಿರುತ್ತದೆ. ಅದು ಅವರಿಗೆ ಗೊತ್ತಿಲ್ಲ. ಹೇ ಅರ್ಜುನ, ನನ್ನನ್ನು ಪಡೆದ ನಂತರವು ಸಹ ಅವರಿಗೆ ಪುನರ್ಜನ್ಮವಿದೆ". ಈ ಶ್ಲೋಕದಲ್ಲಿ 'ವಿದ್ಯತೆ' ಎನ್ನುವ ಶಬ್ದಕ್ಕೆ 'ತಿಳಿಯುವುದು' ಎಂದರ್ಥವಿದೆ. ಗೀತೆಯ 6ನೇ ಅಧ್ಯಾಯದ 23ನೇ ಶ್ಲೋಕದಲ್ಲಿ 'ವಿದ್ಯಾತ್' ಎನ್ನುವ ಶಬ್ದಕ್ಕೆ 'ತಿಳಿಯುವುದು' ಎಂದು ಬರೆದಿದ್ದಾರೆ. ಈ ಶ್ಲೋಕದಲ್ಲಿಯೂ ಸಹ 'ವಿದ್ಯತೆ' ಎಂಬ ಶಬ್ದಕ್ಕೆ ತಿಳಿಯುವುದು ಎಂದು ಆಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಪುಸ್ತಕದಲ್ಲಿರುವ ಇದೇ ಶ್ಲೋಕದ ಪೋಟೋ ಕಾಪಿಯನ್ನು ನೋಡಿ, ಇನ್ನೂ ಸ್ಪಷ್ಟಪಡಿಸಬೇಕೆಂದರೆ ಗೀತೆಯ 8ನೇ ಅಧ್ಯಾಯದ 15ನೇ ಶ್ಲೋಕವನ್ನು ಓದಿ. ಮೂಲ ಪಾಠ:–

ಮಾಮ್ ಉಪೇತ್ಯ್ ಪುನರ್ಜನ್ಮ ದುಃಖಾಲಯಮ್ ಅಶಾಶ್ವತಮ್ ನ ಆಪ್ನುವಂತಿ

ಮಹಾತ್ಮನಃ ಸಂಸಿದ್ಧಿಮ್ ಪರಮಾಮ್ ಗತಾಃ ॥ (8/15)

**ಅನುವಾದ :–** (ಮಾಮ್) ನನ್ನನ್ನು ಪಡೆದ ನಂತರವೂ (ಪುನರ್ಜನ್ಮ) ಪುನರ್ಜನ್ಮವಿರುತ್ತದೆ. ಅದು (ಅಶಾಶ್ವತಂ) ನಾಶಹೊಂದುವ ಜೀವನ. (ದುಃಖಾಲಯಂ) ದುಃಖಗಳ ಮನೆ. (ಪರಮಾಮಂ) ಪರಮ (ಸಂಸಿದ್ಧಿಂ ಗತಾ) ಸಿದ್ಧಿಯನ್ನು ಪಡೆದ (ಮಹಾತ್ಮಯಃ) ಮಹಾತ್ಮ ಜನರು (ನ ಆಪ್ನೂವಂತಿ) ಪುನರ್ಜನ್ಮವನ್ನು ಪಡೆಯುವುದಿಲ್ಲ (ಗೀತೆಯ 8ನೇ ಅಧ್ಯಾಯದ 15ನೇ ಶ್ಲೋಕ)

**ಭಾವಾರ್ಥ :–** ಗೀತೆಯ ಜ್ಞಾನದಾತನು, 'ನನ್ನನ್ನು ಪ್ರಾಪ್ತಿಸಿದ ಬಳಿಕ ದುಃಖಗಳ ಮನೆ, ಈ ಕ್ಷಣ ಭಂಗುರದ ಜೀವನ, ಹುಟ್ಟು–ಸಾವು ಇರುತ್ತದೆ. ಯಾವ ಮಹಾತ್ಮನು ಪರಮಗತಿಯನ್ನು ಹೊಂದುವನೋ ಅವನಿಗೆ ಪುನರ್ಜನ್ಮವಿರುವುದಿಲ್ಲ' ಎಂದು ಹೇಳಿದ್ದಾನೆ.

❖ ವಿಚಾರಮಾಡಿ :– ಗೀತೆಯ 8ನೇ ಅಧ್ಯಾಯದ 1 ರಿಂದ 10ನೇ ಶ್ಲೋಕದವರೆಗೆ ಇರುವ ಸಾರಾಂಶವು ಈ ರೀತಿ ಇದೆ:– ಅರ್ಜುನನು ಕೇಳುತ್ತಾನೆ (ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕ) "ತತ್ ಬ್ರಹ್ಮ ಏನು?" ಗೀತೆಯ ಜ್ಞಾನದಾತನು 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ "ಅವನು ಪರಮ ಅಕ್ಷರ ಬ್ರಹ್ಮ" ಎಂದಿದ್ದಾನೆ.

ನಂತರ ಗೀತೆಯ ಜ್ಞಾನದಾತನು 8ನೇ ಅಧ್ಯಾಯದ 5 ಮತ್ತು 7ನೇ ಶ್ಲೋಕದಲ್ಲಿ ತನ್ನನ್ನು ಆರಾಧಿಸುವಂತೆ ಹೇಳಿದ್ದಾನೆ. ಹಾಗು ಗೀತೆಯ 8ನೇ ಅಧ್ಯಾಯದ 8, 9, 10ನೇ ಶ್ಲೋಕದಲ್ಲಿ ಪರಮ ಅಕ್ಷರ ಬ್ರಹ್ಮನನ್ನು ಆರಾಧಿಸುವಂತೆ ಹೇಳಿದ್ದಾನೆ. ಗೀತೆಯ 8ನೇ ಅದ್ಯಾಯದ 13ನೇ ಶ್ಲೋಕದಲ್ಲಿ ತನ್ನ ಭಕ್ತಿಯ ಮಂತ್ರ ಕೇವಲ ಒಂದು 'ಓಂ' ಅಕ್ಷರವಿದೆ ಎಂದಿದ್ದಾನೆ. ಅದನ್ನು ಉಚ್ಚರಿಸುತ್ತಾ ಸ್ಮರಣೆ ಮಾಡುತ್ತಾ ಯಾರು ತಮ್ಮ ಶರೀರವನ್ನು ತ್ಯಜಿಸುತ್ತಾರೋ ಅವರಿಗೆ ಪರಮ ಪದವು ಪ್ರಾಪ್ತವಾಗುವುದು ಎಂದಿದ್ದಾನೆ. ಓಂ ನಾಮಜಪದಿಂದ ಬ್ರಹ್ಮಲೋಕವು ಪ್ರಾಪ್ತಿಯಾಗುತ್ತದೆ ಎಂದು ಪೂರ್ವದಲ್ಲೇ ಶ್ರೀದೇವಿ ಪುರಾಣದಿಂದ ಸಾಬೀತುಗೊಳಿಸಲಾಗಿದೆ. ಆದರೆ ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಬ್ರಹ್ಮಲೋಕಕ್ಕೆ ಹೋದ ಸಾಧಕನಿಗೆ ಪುನರ್ಜನ್ಮವಿರುತ್ತದೆಂದು ಹೇಳಲಾಗಿದೆ. ಆದ್ದರಿಂದ ಗೀತೆಯ 8ನೇ ಅಧ್ಯಾಯದ 13ನೇ ಶ್ಲೋಕದಲ್ಲಿ ಓಂ ನಾಮ ಜಪದಿಂದ ಸಿಗುವ ಪರಮ ಪದದ ವರ್ಣನೆ ಇದೆ. ಆದರೆ ಗೀತೆಯ 8ನೇ ಅಧ್ಯಾಯದ 8, 9 ಮತ್ತು 10ನೇ ಶ್ಲೋಕದಲ್ಲಿ ಸಚ್ಚಿದಾನಂದ ಘನ ಬ್ರಹ್ಮ ಅರ್ಥಾತ್ 'ಪರಮ ದಿವ್ಯ ಪುರುಷನನ್ನು ಆರಾಧಿಸುವಂತೆ ಹೇಳಲಾಗಿದೆ'. ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಇದರ ಮಂತ್ರವನ್ನು ಬರೆಯಲಾಗಿದೆ.

ಓಂ, ತತ್, ಸತ್, ಇತಿ, ನಿರ್ದೇಶಃ ಬ್ರಹ್ಮಣಃ, ತ್ರಿವಿಧಃ, ಸ್ಮೃತಃ
ಬ್ರಾಹ್ಮಣಾಃ, ತೇನ್, ವೇದಾಃ, ಚ, ಯಜ್ಞಾಃ, ಚ ವಿಹಿತಾಃ, ಪುರಾ ॥

**ಅನುವಾದ:–** ಸಚ್ಚಿದಾನಂದ ಘನ ಬ್ರಹ್ಮನನ್ನು ಆರಾಧಿಸುವ ಮಂತ್ರವು 'ಓಂ ತತ್ ಸತ್' ಎಂದಿದೆ. 'ಓಂ' ಮಂತ್ರವು ಬ್ರಹ್ಮ ಅಂದರೆ 'ಕ್ಷರ ಪುರುಷ'ನದ್ದಾಗಿದೆ. ಅಕ್ಷರ ಪುರುಷನ 'ತತ್' ಎನ್ನುವ ಮಂತ್ರವು ಸಾಂಕೇತಿಕವಾಗಿದೆ. ಪರಮ ಅಕ್ಷರ ಬ್ರಹ್ಮನ 'ಸತ್' ಎನ್ನುವ ಮಂತ್ರವು ಸಹ ಸಾಂಕೇತಿಕವಾಗಿದೆ. ಈ 3 ಮಂತ್ರಗಳ ಜಪದಿಂದ ಪ್ರಾಪ್ತವಾಗುವ ಪರಮ ಗತಿಯ ಬಗ್ಗೆ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಲಾಗಿದೆ. ಅಲ್ಲಿಗೆ ಹೋಗುವ ಸಾಧಕನು ಮರಳಿ ಈ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲವೆಂದು ಹೇಳಲಾಗಿದೆ.

ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದ ಅರ್ಥವು ಸರಿಯಾಗಿದೆ ಎಂದು ಭಾವಿಸಿದರೆ ಅರ್ಥಾತ್ 'ನನ್ನನ್ನು ಪಡೆಯುವವನಿಗೆ ಪುನರ್ಜನ್ಮವಿರುವುದಿಲ್ಲ' ಎನ್ನುವುದು ಸರಿಯಾದರೆ, ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, ಗೀತೆಯ 4ನೇ ಅಧ್ಯಾಯದ 5ನೇ ಶ್ಲೋಕ, ಗೀತೆಯ 10ನೇ ಅಧ್ಯಾಯದ 2ನೇ ಶ್ಲೋಕ ತಪ್ಪಾಗುತ್ತದೆ. ಅದರಲ್ಲಿ ಗೀತೆಯ ಜ್ಞಾನದಾತನು ಹೀಗೆಂದಿದ್ದಾನೆ,

"ಹೇ ಅರ್ಜುನ! ನಿನ್ನ ಮತ್ತು ನನ್ನ ಅನೇಕ ಜನ್ಮಗಳಾಗಿವೆ, ನಿನಗೆ ಗೊತ್ತಿಲ್ಲ, ಆದರೆ ನನಗೆ ಗೊತ್ತು. ನನ್ನ ಉತ್ಪತ್ತಿಯ ಬಗ್ಗೆ ದೇವತೆಗಳಿಗಾಗಲೀ, ಮಹರ್ಷಿಗಳಿಗಾಗಲೀ, ಸಿದ್ಧರಿಗಾಗಲೀ ತಿಳಿದಿಲ್ಲ". ಇಲ್ಲಿ ವಿಚಾರ ಮಾಡಬೇಕಾದ ವಿಷಯವೇನೆಂದರೆ ಇಷ್ಟ ದೈವನಿಗೇ ಹುಟ್ಟು-ಸಾವುಗಳಿದ್ದರೆ ಸಾಧಕನಿಗೆ ಪುನರ್ಜನ್ಮವಾಗದಿರುವಂತಹ ಮೋಕ್ಷವು ಹೇಗೆ ಪ್ರಾಪ್ತವಾಗುವುದು?

ಆದ್ದರಿಂದ ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದ ಅನುವಾದವನ್ನು ಯಾವ ರೀತಿ ನಾನು ಮಾಡಿದ್ದೇನೆಯೋ ಅದು ಸರಿಯಾಗಿದೆ. ಅಂದರೆ ಗೀತೆಯ ಜ್ಞಾನದಾತನು ಹೇಳಿರುವನು, ಬ್ರಹ್ಮಲೋಕದ ವರೆಗಿನ ಎಲ್ಲಾ ಲೋಕಗಳು ಪುನರಾವರ್ತನೆಯಲ್ಲಿರುತ್ತವೆ. ಅಂದರೆ ಬ್ರಹ್ಮಲೋಕಕ್ಕೆ ಹೋಗುವ ಜೀವಿಯು ಮರಳಿ ಈ ಪ್ರಪಂಚದಲ್ಲಿ ಜನ್ಮ ತಾಳುತ್ತಾನೆ. ಯಾರಿಗೆ ಇದು ಗೊತ್ತಿಲ್ಲವೊ ಅವರು ನನ್ನ ಭಕ್ತಿ ಮಾಡಿಕೊಂಡರು ಪುನರ್ಜನ್ಮಕ್ಕೆ ಪ್ರಾಪ್ತವಾಗುತ್ತಾರೆ. ಆದ್ದರಿಂದ ಗೀತೆಯ ಜ್ಞಾನದಾತನು ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಿರುವನು ಹೇ ಅರ್ಜುನ! 'ನೀನು ಸಂಪೂರ್ಣವಾಗಿ ಆ ಪರಮೇಶ್ವರನಿಗೆ ಶರಣಾಗು. ಆ ಪರಮೇಶ್ವರನ ಕೃಪೆಯಿಂದಲೇ ನೀನು ಪರಮ ಶಾಂತಿಯನ್ನು ಹಾಗೂ ಸನಾತನ ಪರಮ ಧಾಮವನ್ನು ಅಂದರೆ ಸತ್ಯಲೋಕವನ್ನು ಪಡೆಯುವೆ'. ಇದೇ ಪ್ರಮಾಣವು ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿದೆ, "ತತ್ವದರ್ಶಿ ಸಂತನಿಂದ ತತ್ವಜ್ಞಾನವನ್ನು ಪಡೆದು ಆ ತತ್ವಜ್ಞಾನವೆಂಬ ಶಸ್ತ್ರದಿಂದ ಅಜ್ಞಾನವನ್ನು ಕತ್ತರಿಸಿ ನಂತರ ಪರಮೇಶ್ವರನ ಆ ಪರಮ ಪದವನ್ನು ಹುಡುಕಬೇಕು". ಅಲ್ಲಿ ಹೋದ ಬಳಿಕ ಸಾಧಕನು ಮರಳಿ ಮತ್ತೆ ಪ್ರಪಂಚದಲ್ಲಿ ಎಂದಿಗೂ ಬರುವುದಿಲ್ಲ.

ಯಾವ ಪರಮೇಶ್ವರನಿಂದ ಪ್ರಪಂಚವೆಂಬ ವೃಕ್ಷದ ಪ್ರವೃತ್ತಿಯು ವಿಸ್ತಾರಕ್ಕೆ ಪ್ರಾಪ್ತವಾಗಿದೆಯೋ, ಅಂದರೆ ಯಾವ ಪರಮೇಶ್ವರನು ಈ ಪ್ರಪಂಚವನ್ನು ಸೃಷ್ಟಿಸಿದ್ದಾನೋ, ಕೇವಲ ಅವನದೇ ಭಕ್ತಿಮಾಡು, ಅವನಿಂದ ಮಾತ್ರ ಎಲ್ಲರ ಉದ್ಧಾರವಾಗುವುದು ಎಂದು ಗೀತೆಯ ಜ್ಞಾನದಾತನು ಹೇಳಿದ್ದಾನೆ.

❖ ಬ್ರಹ್ಮನ ಭಕ್ತಿಯಿಂದ ಪೂರ್ಣಮೋಕ್ಷವಿಲ್ಲ. ಪೂರ್ಣ ಪರಮಾತ್ಮನ (ಪರಮ ಅಕ್ಷರ ಬ್ರಹ್ಮನ) ಭಕ್ತಿ ಮಾಡುವುದರಿಂದಲೇ ಪೂರ್ಣಮೋಕ್ಷ ಪ್ರಾಪ್ತಿಯಾಗುವುದು ಎಂಬುದು ಸ್ಪಷ್ಟವಾಯಿತು.

ಪ್ರಶ್ನೆ13:- 'ಓಂ' ಈ ಮಂತ್ರವು ಬ್ರಹ್ಮನ ಜಪವಾಯಿತು. ಹಾಗಾದರೆ ಬ್ರಹ್ಮನನ್ನು ಪೂಜಿಸುವುದರಿಂದ ಪೂರ್ಣ ಮೋಕ್ಷವು ಸಿಗುವುದಿಲ್ಲವೆಂದು ಏಕೆ ಹೇಳುತ್ತಿರುವಿರಿ? ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ 'ಓಂ ತತ್ ಸತ್' ಈ ಮಂತ್ರದ ಜಪದಿಂದ ಪೂರ್ಣ ಮೋಕ್ಷವು ಸಿಗುವುದು ಎಂದು ನೀವು ಹೇಳಿದಿರಿ, ಈ ಮಂತ್ರದಲ್ಲೂ ಸಹ 'ಓಂ' ಮಂತ್ರವಿದೆ.

ಉತ್ತರ:- ಒಬ್ಬ ಇಂಜಿನಿಯರ್ ಅಥವಾ ಡಾಕ್ಟರ್ ಆಗಲು ಶಿಕ್ಷಣದ ಅವಶ್ಯಕತೆ ಇರುತ್ತದೆ. ಮೊದಲು 1ನೇ ತರಗತಿ, ನಂತರ 5ನೇ, 8ನೇ ಹಾಗೂ 10ನೇ ತರಗತಿ ಓದಿ ಉತ್ತೀರ್ಣನಾಗಬೇಕಾಗುತ್ತದೆ. ಅದಾದ ನಂತರ ಮುಂದೆ ಶಿಕ್ಷಣ ಮುಂದುವರೆಸಬೇಕಾಗುತ್ತದೆ. ನಂತರದಲ್ಲಿ ತರಬೇತಿ ಪಡೆದು ಇಂಜಿನಿಯರ್ ಅಥವಾ ವೈದ್ಯನಾಗಬೇಕಾಗುತ್ತದೆ. ಅದೇ ರೀತಿ ಶ್ರೀ ಬ್ರಹ್ಮಾ, ವಿಷ್ಣು, ಶಿವ, ಗಣೇಶ ಹಾಗೂ ದೇವಿಯ ಸಾಧನೆಯನ್ನು ಮಾಡಬೇಕಾಗುತ್ತದೆ. ನಾನು ಸ್ವತಃ ಮಾಡುತ್ತೇನೆ ಹಾಗೂ ನನ್ನ ಅನುಯಾಯಿಗಳಿಂದ ಮಾಡಿಸುತ್ತೇನೆ. ಇದು ಕೇವಲ 5ನೇ ತರಗತಿಯವರೆಗಿನ ಶಿಕ್ಷಣ ಎಂದು ತಿಳಿಯಿರಿ. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ 5 ಕಮಲಗಳನ್ನು ತೆರೆಯುವ ಸಾಧನವಾಗಿದೆ. ಮತ್ತು ಬ್ರಹ್ಮನ ಸಾಧನೆಯು 10ನೇ ತರಗತಿಯವರೆಗೆ ಎಂದು ತಿಳಿಯಬೇಕು. ಅಂದರೆ ಇದು ಬ್ರಹ್ಮಲೋಕದವರೆಗಿನ ಸಾಧನೆ. ಅದಕ್ಕಾಗಿ ಓಂ ನಾಮದ ಜಪವನ್ನು ಮಾಡಬೇಕು. 14ನೇ ತರಗತಿಯವರೆಗೆ ಶಿಕ್ಷಣ ಮುಂದುವರೆಸಬೇಕಾದರೆ (ತತ್) ಎಂಬ ಅಕ್ಷರ ಪುರುಷನ ಮಂತ್ರದ ಜಪವನ್ನು ಮಾಡಬೇಕು. ಈ ತತ್ ಮಂತ್ರವು

ಸಾಂಕೇತಿಕವಾಗಿದೆ. ವಾಸ್ತವಿಕ ಮಂತ್ರವು ಇದಕ್ಕಿಂತ ಭಿನ್ನವಾಗಿದೆ. ಇದನ್ನು ಉಪದೇಶ ಪಡೆದವರಿಗೆ ಮಾತ್ರ ಹೇಳಿಕೊಡಲಾಗುತ್ತದೆ.

ಪರಮ ಅಕ್ಷರ ಪುರುಷನ ಸಾಧನೆಯು ಇಂಜಿನಿಯರ್ ಅಥವಾ ವೈದ್ಯನಾಗಲು ಓದುವಂಥಹ ಶಿಕ್ಷಣವೆಂದು ತಿಳಿಯಬೇಕು. ಅದನ್ನು 'ಸತ್' ಎಂಬ ಮಂತ್ರದಿಂದ ಜಪಿಸಬೇಕು. ಈ 'ಸತ್' ಎಂಬ ಮಂತ್ರವು ಸಹ ಸಾಂಕೇತಿಕವಾಗಿದೆ. ವಾಸ್ತವದಲ್ಲಿ ಈ ಮಂತ್ರವು ಸಹ ಭಿನ್ನವಾಗಿದೆ. ಇದನ್ನು ಉಪದೇಶ ಪಡೆದವರಿಗೆ ಮಾತ್ರ ಹೇಳಿಕೊಡಲಾಗುತ್ತದೆ. ಇದನ್ನು 'ಸಾರನಾಮ' ಎಂದೂ ಕರೆಯುತ್ತಾರೆ.

ಆದ್ದರಿಂದ ಕೇವಲ ಬ್ರಹ್ಮನೊಬ್ಬನ ಓಂ ನಾಮಜಪದಿಂದ ಪೂರ್ಣ ಮೋಕ್ಷವು ಪ್ರಾಪ್ತಿಯಾಗುವುದಿಲ್ಲ. 'ಓಂ' ಎಂಬುದು ಬ್ರಹ್ಮನ ನಾಮಜಪವಾಗಿದೆ. ಇದರಿಂದ ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಹೇಳಿರುವಂತೆ ಸಾಧಕನಿಗೆ ಬ್ರಹ್ಮ ಲೋಕವೇನೋ ಪ್ರಾಪ್ತಿಯಾಗುತ್ತದೆ. ಆದರೆ ಅಲ್ಲಿಗೆ ಹೋದ ಸಾಧಕನಿಗೆ ಪುನರ್ಜನ್ಮ ಪ್ರಾಪ್ತಿಯಾಗುತ್ತದೆ. ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಲಾಗಿದೆ ಪರಮಾತ್ಮನ ಆ ಪರಮ ಪದವನ್ನು ಹುಡುಕಬೇಕು, ಅಲ್ಲಿಗೆ ಹೋದ ಸಾಧಕ ಎಂದಿಗೂ ಮರಳಿ ಪುನರ್ಜನ್ಮ ಪಡೆಯುವುದಿಲ್ಲ. ಪೂರ್ಣ ಗುರುವಿನ ಬಳಿ ಶಾಸ್ತ್ರಾನುಸಾರವಾಗಿ ಭಕ್ತಿ ಪ್ರಾಪ್ತಿಸುವುದರಿಂದಲೇ ಪೂರ್ಣ ಮೋಕ್ಷವಾಗುತ್ತದೆ. ವರ್ತಮಾನದಲ್ಲಿ ಈ ವಿಶ್ವದಲ್ಲಿ ನನ್ನ (ಸಂತ ರಾಮ್‌ಪಾಲ್ ದಾಸನ) ಹೊರತು ಬೇರೆ ಯಾರ ಬಳಿಯೂ ಸಿಗುವುದಿಲ್ಲ.

ಪ್ರಶ್ನೆ14:– ಪರಮಾತ್ಮನು ಒಬ್ಬನೆ? ಅಥವಾ ಅನೇಕರಿದ್ದಾರೆಯೇ?

ಉತ್ತರ: – ಕುಲದ ಒಡೆಯ ಒಬ್ಬನೇ ಇದ್ದಾನೆ.

ಪ್ರಶ್ನೆ15:– ಕುಲದ ಒಡೆಯನಾದ ಆ ಪರಮಾತ್ಮ ಯಾರು? ಇದಕ್ಕೆ ಆಧಾರವೆಲ್ಲಿದೆ?

ಉತ್ತರ :– ಕುಲದ ಒಡೆಯನಾದ ಆ ಪರಮಾತ್ಮನೇ ಪರಮ ಅಕ್ಷರ ಬ್ರಹ್ಮನು.

ಪ್ರಮಾಣ :– ಭಗವದ್ಗೀತೆಯ 15ನೇ ಅಧ್ಯಾಯದ 1ರಿಂದ 4 ಮತ್ತು 16, 17ನೇ ಶ್ಲೋಕದಲ್ಲಿ ಪ್ರಮಾಣವಿದೆ. ಗೀತೆಯ ಅಧ್ಯಾಯ 15 ಶ್ಲೋಕ 1 ರಿಂದ 4 ರ ಸಾರಾಂಶ ಹಾಗೂ ಭಾವಾರ್ಥವೇನೆಂದರೆ ತಲೆಕೆಳಗಾಗಿ ನೇತಾಡುತ್ತಿರುವ ವೃಕ್ಷವನ್ನು ಈ ಪ್ರಪಂಚವೆಂದು ತಿಳಿ. ಹೇಗೆ ವೃಕ್ಷದ ಬೇರು ಮೇಲಿರುತ್ತದೆ ಹಾಗೂ ಕೆಳಗೆ 3 ಗುಣಗಳೆಂಬ ಶಾಖೆಗಳಿರುತ್ತವೆ ಎಂದು ತಿಳಿ. ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ತತ್ವದರ್ಶಿ ಸಂತನನ್ನು ಹೇಗೆ ಗುರುತಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಪ್ರಪಂಚವೆಂಬ ವೃಕ್ಷದ ಸರ್ವಾಂಗಗಳನ್ನು ಭಿನ್ನ–ಭಿನ್ನವಾಗಿ ತಿಳಿಸಿ ಹೇಳುವವನೇ ತತ್ವದರ್ಶಿ ಸಂತನು.

ವಿಶೇಷ :– ಮುಂದೆ ನೀಡಲಾಗಿರುವ ವೇದ ಮಂತ್ರಗಳ ಫೋಟೋ ಕಾಪಿಗಳು ಆರ್ಯ ಸಮಾಜದ ಆಚಾರ್ಯರ ಹಾಗೂ ದಯಾನಂದ ಮಹರ್ಷಿಗಳ ಮೂಲಕ ಅನುವಾದಿಸಲ್ಪಟ್ಟಿದೆ. ಇದು ಸಾರ್ವದೇಶಿಕ ಆರ್ಯ ಪ್ರತಿನಿಧಿ ಸಭಾ ದೆಹಲಿ–ಇವರ ಮೂಲಕ ಪ್ರಕಾಶಿತಗೊಂಡಿದೆ. ಇದರಲ್ಲಿ ಪರಮೇಶ್ವರನು ಸ್ವತಃ ಭೂಮಿಯ ಮೇಲೆ ಸಶರೀರ ಪ್ರತ್ಯಕ್ಷನಾಗಿ ಕವಿಗಳಂತೆ ಆಚರಣೆ ಮಾಡುತ್ತಾ ಸತ್ಯವಾದ ಆಧ್ಯಾತ್ಮಿಕ ಜ್ಞಾನವನ್ನು ನೀಡುತ್ತಾನೆಂದು ವರ್ಣಿಸಲಾಗಿದೆ. (ಪ್ರಮಾಣ :– ಋಗ್ವೇದದ 9ನೇ ಮಂಡಲದ 86ನೇ ಸೂಕ್ತಿಯ 26–27ನೇ ಮಂತ್ರ, ಋಗ್ವೇದ ಮಂಡಲ 9, 82ನೇ ಸೂಕ್ತಿಯ 1–2ನೇ ಮಂತ್ರ, 96ನೇ ಸೂಕ್ತಿಯ 16ರಿಂದ 20ನೇ ಮಂತ್ರ, ಋಗ್ವೇದ ಮಂಡಲ 9, 94ನೇ ಸೂಕ್ತಿಯ 1ನೇ ಮಂತ್ರ, ಋಗ್ವೇದ ಮಂಡಲ 9, 95ನೇ ಸೂಕ್ತಿಯ 2ನೇ ಮಂತ್ರ, ಋಗ್ವೇದ ಮಂಡಲ 9, 20ನೇ ಸೂಕ್ತಿಯ 1ನೇ ಮಂತ್ರ, ಋಗ್ವೇದ ಮಂಡಲ 9, 54ನೇ ಸೂಕ್ತಿಯ 3ನೇ ಮಂತ್ರದಲ್ಲಿ ಇದೆ.) ಇವುಗಳಲ್ಲಿ ಹೇಳಲಾಗಿದೆ

ಪರಮಾತ್ಮನು ಎಲ್ಲಾ ಭವನಗಳಿಗಿಂತ ಅಂದರೆ ಎಲ್ಲಾ ಲೋಕಗಳಿಗಿಂತ ಮೇಲಿರುವ ಲೋಕದಲ್ಲಿ ವಿರಾಜಮಾನನಾಗಿರುತ್ತಾನೆ. ಯಾವಾಗೆಲ್ಲಾ ಭೂಮಿಯ ಮೇಲೆ ಅಜ್ಞಾನದ ವೃದ್ಧಿಯಿಂದ ಅಧರ್ಮವು ಹೆಚ್ಚುತ್ತದೋ ಆವಾಗೆಲ್ಲಾ ಪರಮಾತ್ಮನು ಸ್ವತಃ ಸಶರೀರ ಭೂಮಿಯ ಮೇಲೆ ಪ್ರತ್ಯಕ್ಷನಾಗಿ ಯಥಾರ್ಥವಾದ ಅಧ್ಯಾತ್ಮ ಜ್ಞಾನದ ಪ್ರಚಾರವನ್ನು ಲೋಕೋಕ್ತಿಗಳ, ಪದ್ಯಗಳ, ಚೌಪದಿಗಳ, ದೋಹೆಗಳ, ಕವಿತೆಗಳ ಮೂಲಕ ಕವಿಯಂತೆ ಆಚರಣೆ ಮಾಡಿ ವಿಹರಿಸುತ್ತಾ ಮಾಡುತ್ತಾನೆ. ಈ ಕಾರಣದಿಂದ ಅವನಿಗೆ ಪ್ರಸಿದ್ಧ ಕವಿ ಎಂಬ ಬಿರುದು ಸಹ ಪ್ರಾಪ್ತವಾಗುತ್ತದೆ ಎಂದು ಹೇಳಲಾಗಿದೆ. ದಯಮಾಡಿ ಇದೇ ಪುಸ್ತಕದ "ವೇದ ಮಂತ್ರಗಳ ಫೋಟೋಕಾಪಿ" ಎಂಬ ಅಧ್ಯಾಯದಲ್ಲಿ ನೋಡಿ.

ಪರಮಾತ್ಮನು ತನ್ನ ಮುಖ-ಕಮಲದಿಂದ ಜ್ಞಾನವನ್ನು ಹೇಳಿದ್ದನು. ಅದನ್ನು ಸೂಕ್ಷ್ಮ ವೇದವೆಂದು ಕರೆಯುತ್ತಾರೆ. ಅದನ್ನೇ ತತ್ವಜ್ಞಾನವೆಂದು ಕರೆಯುತ್ತಾರೆ. ತತ್ವಜ್ಞಾನದ ಪ್ರಚಾರವನ್ನು ಮಾಡುವ ಕಾರಣ ಪರಮಾತ್ಮನನ್ನು ತತ್ವದರ್ಶಿ ಸಂತನೆಂದು ಕರೆಯುತ್ತಾರೆ. ಆ ತತ್ವದರ್ಶಿ ಸಂತನ ರೂಪದಲ್ಲಿ ಪ್ರತ್ಯಕ್ಷನಾದ ಪರಮಾತ್ಮನು ಪ್ರಪಂಚ ರೂಪಿ ವೃಕ್ಷದ ಸರ್ವಾಂಗಗಳನ್ನು ತಿಳಿಸಿದ್ದಾನೆ.

ಕಬೀರ್, ಅಕ್ಷರ್ ಪುರುಷ್ ಏಕ್ ವೃಕ್ಷ್ ಹೈ, ಕ್ಷರ್ ಪುರುಷ್ ವಾಕಿ ಡಾರ್।<br>
ತೀನೋಂ ದೇವಾ ಶಾಖಾ ಹೈಂ, ಪಾತ್ ರೂಪ್ ಸಂಸಾರ್ ॥

ಭಾವಾರ್ಥ :- ವೃಕ್ಷದ ಯಾವ ಭಾಗವು ಭೂಮಿಯ ಮೇಲೆ ಕಾಣಿಸುವುದೋ ಅದನ್ನು 'ಕಾಂಡ'ವೆಂದು ಕರೆಯುತ್ತಾರೆ. ಹಾಗೆಯೇ ಪ್ರಪಂಚವೆಂಬ ವೃಕ್ಷದ ಕಾಂಡ ಅಕ್ಷರ ಪುರುಷನಾಗಿದ್ದಾನೆ. ಕಾಂಡದಿಂದ ಬರುವ ದೊಡ್ಡ-ದೊಡ್ಡ ಕೊಂಬೆಗಳನ್ನು ಕ್ಷರ ಪುರುಷನೆಂದು ತಿಳಿಯಿರಿ. ಆ ಕೊಂಬೆಯಿಂದ ಬಂದ 3 ಶಾಖೆಗಳನ್ನು 3 ದೇವತೆಗಳೆಂದು ತಿಳಿಯಿರಿ. (ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಿವ) ಈ ಶಾಖೆಗಳಲ್ಲಿ ಪುಟ್ಟ-ಪುಟ್ಟ ಜೊಂಪೆಗಳು ಹಾಗೂ ಎಲೆಗಳನ್ನು ಪ್ರಪಂಚವೆಂದು ತಿಳಿಯಿರಿ. ಈ ಪ್ರಪಂಚವೆಂಬ ವೃಕ್ಷದ ಮೇಲಿನ ಭಾಗಗಳು ಭೂಮಿಯ ಮೇಲೆ ಕಣ್ಣಿಗೆ ಕಾಣುತ್ತವೆ. ಆದರೆ ಮೂಲವು (ಬೇರು) ನೆಲದ ಒಳಗಿರುತ್ತದೆ. ಇದು ವೃಕ್ಷದ ಸರ್ವಾಂಗಗಳ ಪೋಷಣೆಯನ್ನು ಮಾಡುತ್ತದೆ. ಗೀತೆಯ 15ನೇ ಅಧ್ಯಾಯದ 16, 17ನೇ ಶ್ಲೋಕದಲ್ಲಿ ಮೂವರು ಪುರುಷರ ಬಗ್ಗೆ ಹೇಳಲಾಗಿದೆ. 16ನೇ ಶ್ಲೋಕದಲ್ಲಿ ಹೇಳಿರುವ ಕ್ಷರ ಪುರುಷ ಮತ್ತು ಅಕ್ಷರ ಪುರುಷನ ಬಗ್ಗೆ ಮೇಲೆ ತಿಳಿಸಿದೆ. ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಕ್ಷರ ಪುರುಷ ಮತ್ತು ಅಕ್ಷರ ಪುರುಷರು ಇಬ್ಬರೂ ನಾಶಹೊಂದುವವರು ಇವರ ಅಧೀನದಲ್ಲಿರುವ ಜೀವಿಗಳೆಲ್ಲಾ ನಾಶಹೊಂದುವವರು ಆದರೆ ಯಾರದೂ ಆತ್ಮವು ಸಾಯುವುದಿಲ್ಲ ಎಂದು ಹೇಳಲಾಗಿದೆ. ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಉತ್ತಮ ಪುರುಷ ಅಂದರೆ ಪುರುಷೋತ್ತಮನು ಕ್ಷರಪುರುಷ ಮತ್ತು ಅಕ್ಷರ ಪುರುಷನಿಗಿಂತ ಭಿನ್ನನು, ಇವನೇ ಪರಮಾತ್ಮನು ಎಂದು ಹೇಳಲಾಗಿದೆ. ಗೀತೆಯ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಈ ಪರಮಾತ್ಮನದೇ ಮಾಹಿತಿ ಇದೆ, ಅವನನ್ನು ಪರಮ ಅಕ್ಷರ ಬ್ರಹ್ಮ ಎಂದು ಕರೆಯಲಾಗಿದೆ. ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಇದರ ವರ್ಣನೆ ಇದೆ. ಈ ಪರಮಾತ್ಮನೇ 3 ಲೋಕಗಳಲ್ಲಿ ಪ್ರವೇಶಿಸಿ ಎಲ್ಲರ ಪಾಲನೆ-ಪೋಷಣೆ ಮಾಡುತ್ತಾನೆ. ವಾಸ್ತವದಲ್ಲಿ ಇವನೇ ಅವಿನಾಶಿ ಪರಮೇಶ್ವರನು. ಹೇಗೆ ಬೇರಿನಿಂದಲೇ ವೃಕ್ಷದ ಪೋಷಣೆಯಾಗುವುದೋ ಹಾಗೇ ಇಡೀ ಪ್ರಪಂಚದ ಪೋಷಣೆಯು ಪರಮ ಅಕ್ಷರ ಬ್ರಹ್ಮನಿಂದಾಗುತ್ತದೆ. ಅಂದರೆ ಪೂರ್ವದಲ್ಲೇ ಗೀತೆಯ ಅಧ್ಯಾಯ 15 ಶ್ಲೋಕ 1 ರಿಂದ 4 ರಲ್ಲಿ ಹೇಳಲಾಗಿದೆ ಮೇಲೆ ಬೇರು (ಮೂಲ), ಕೆಳಗೆ ಶಾಖೆಯ ಪ್ರಪಂಚರೂಪಿ ವೃಕ್ಷವಿದೆ ಬೇರಿನಿಂದಲೆ ವೃಕ್ಷದ ಪಾಲನೆ ಪೋಷಣೆ ಆಗುತ್ತದೆ ಆದ್ದರಿಂದ ಪ್ರಪಂಚವೆಂಬ ವೃಕ್ಷದ ಬೇರು ಪರಮ ಅಕ್ಷರ ಬ್ರಹ್ಮನಾಗಿದ್ದಾನೆ. ಅವನೇ ಎಲ್ಲಾ ಪುರುಷರ (ಪ್ರಭುಗಳ) ಪಾಲನೆ ಮಾಡುವವನು ಇವರ ವಿಸ್ತಾರ ಮಾಡಿದಾತನು (ರಚನೆ ಮಾಡುವವನು = ಸೃಷ್ಟಿಕರ್ತನು). ಇವನೇ ಕುಲದ ಒಡೆಯ.

ಪ್ರಶ್ನೆ–16:– ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಿವನ ಪೂಜೆಯನ್ನು ಮಾಡಬೇಕೇ?

ಉತ್ತರ: – ಇಲ್ಲ

ಪ್ರಶ್ನೆ–17:–ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಿವ ಇವರ ಪೂಜೆ ಮಾಡಬಾರದು ಎನ್ನುವುದಕ್ಕೆ ಪ್ರಮಾಣ ಎಲ್ಲಿದೆ?

ಉತ್ತರ :– ಭಗವದ್ಗೀತೆಯ 7ನೇ ಅಧ್ಯಾಯದ 12ರಿಂದ 15ನೇ ಶ್ಲೋಕ, 20 ರಿಂದ 23ನೇ ಶ್ಲೋಕ, 9ನೇ ಅಧ್ಯಾಯದ 23–24ನೇ ಶ್ಲೋಕ ಇವುಗಳಲ್ಲಿ ಪ್ರಮಾಣವಿದೆ. ಗೀತೆಯ 7ನೇ ಅಧ್ಯಾಯದ 12 ರಿಂದ 15 ನೇ ಶ್ಲೋಕದಲ್ಲಿ ಪ್ರಮಾಣವಿದೆ. ಯಾವ ವ್ಯಕ್ತಿಯು ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು, ತಮೋಗುಣ ಶಿವನನ್ನು ಆರಾಧಿಸುತ್ತಾನೋ ಅವನು ರಾಕ್ಷಸ ಸ್ವಭಾವವನ್ನು ಹೊಂದಿದ ಮನುಷ್ಯರಲ್ಲೇ ನೀಚ, ಕೆಟ್ಟ ಕೆಲಸ ಮಾಡುವ ಮೂರ್ಖನಾಗಿರುತ್ತಾನೆ. ಅವನು ನನ್ನನ್ನು ಭಜಿಸುವುದಿಲ್ಲ. (ಈ ಪ್ರಮಾಣವು ಗೀತೆಯ 7ನೇ ಅಧ್ಯಾಯದ 12ರಿಂದ 15ನೇ ಶ್ಲೋಕದಲ್ಲಿದೆ. ಹಾಗೂ 7ನೇ ಅಧ್ಯಾಯದ 20ರಿಂದ 23ನೇ ಶ್ಲೋಕ ಹಾಗು 9ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ ಇದನ್ನೇ ಹೇಳಲಾಗಿದೆ ಮತ್ತು ಕ್ಷರ ಪುರುಷ, ಅಕ್ಷರ ಪುರುಷ ಹಾಗು ಪರಮ ಅಕ್ಷರ ಪುರುಷನ ಬಗ್ಗೆ ಗೀತೆಯ 15ನೇ ಅಧ್ಯಾಯದ 16–17ನೇ ಶ್ಲೋಕದಲ್ಲಿ ವರ್ಣನೆಯಿದೆ.) ನನ್ನನ್ನು ಬಿಟ್ಟು ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಮತ್ತು ಶ್ರೀ ಶಿವ ಇವರು ಬೇರೆ ದೇವತೆಗಳ ಅಂಕಿಗಳಲ್ಲಿ ಬರುತ್ತಾರೆ. ಈ ಎರಡು ಅಧ್ಯಾಯದಲ್ಲಿ (ಗೀತೆಯ ಅಧ್ಯಾಯ 7 ಮತ್ತು 9 ರಲ್ಲಿ) ಮೇಲೆ ತಿಳಿಸಿದ ಶ್ಲೋಕಗಳಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ ಯಾವ ಸಾಧಕನು ಯಾವ ಉದ್ದೇಶವನ್ನು ಇಟ್ಟುಕೊಂಡು ಅನ್ಯ ದೇವತೆಗಳನ್ನು ಭಜಿಸುತ್ತಾರೋ ಅವರು ಪರಮಾತ್ಮನೆಂದು ಪೂಜಿಸುತ್ತಾರೆ. ಆ ದೇವತೆಗಳಿಗೆ ನಾನು ಸ್ವಲ್ಪ ಶಕ್ತಿಯನ್ನು ಪ್ರದಾನಿಸಿದ್ದೇನೆ. ಆದ್ದರಿಂದ ದೇವತೆಗಳನ್ನು ಪೂಜಿಸುವವರಿಗೆ ನನ್ನ ಮೂಲಕ ಕೊಡಲ್ಪಟ್ಟ ಶಕ್ತಿಯಿಂದ ಸ್ವಲ್ಪ ಲಾಭ ಸಿಗುತ್ತದೆ. ಆದರೆ ಆ ಅಲ್ಪ ಬುದ್ಧಿಯುಳ್ಳವರ ಈ ಲಾಭವು ನಾಶವಾಗುವಂಥದ್ದು. ದೇವತೆಗಳನ್ನು ಪೂಜಿಸುವವರು ದೇವತೆಗಳ ಲೋಕಕ್ಕೆ ಹೋಗುತ್ತಾರೆ. ಆದರೆ ನನ್ನ ಭಕ್ತರು ನನ್ನನ್ನು ಪ್ರಾಪ್ತಿಸುತ್ತಾರೆ.

ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕಗಳಲ್ಲಿ ಹೇಳಿರುವುದೇನೆಂದರೆ, ಶಾಸ್ತ್ರ ವಿಧಿಯನ್ನು ತ್ಯಜಿಸಿ ಯಾವ ಸಾಧಕನು ಮನಸ್ಸಿಗೆ ಬಂದ ಹಾಗೆ ಆಚರಿಸುತ್ತಾನೋ ಅಂದರೆ ದೇವತೆಗಳ, ಪಿತೃಗಳ, ಯಕ್ಷರ, ಭೂತಗಳ ಆರಾಧನೆಯನ್ನು ಮಾಡುತ್ತಾರೋ ಹಾಗೂ ಮನಬಂದಂತೆ ಮಂತ್ರಗಳ ಜಪವನ್ನು ಮಾಡುತ್ತಾರೋ ಅವರಿಗೆ ಯಾವುದೇ ಸುಖವೂ ಸಿಗುವುದಿಲ್ಲ, ಸಿದ್ಧಿಯೂ ಪ್ರಾಪ್ತವಾಗುವುದಿಲ್ಲ ಹಾಗೂ ಮೋಕ್ಷವೂ ಸಿಗುವುದಿಲ್ಲ. ಆದ್ದರಿಂದ ಹೇ ಅರ್ಜುನ! ಕರ್ತವ್ಯ (ಯಾವ ಭಕ್ತಿಯನ್ನು ಮಾಡಬೇಕೋ) ಹಾಗೂ ಅಕರ್ತವ್ಯ (ಯಾವ ಭಕ್ತಿಯನ್ನು ಮಾಡಬಾರದು) ಎಂಬುದರ ವ್ಯವಸ್ಥೆಯಲ್ಲಿ ಶಾಸ್ತ್ರವೇ ಪ್ರಮಾಣ. ಗೀತೆಯ 17ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಅರ್ಜುನನು ಕೇಳಿದನು, "ಹೇ ಕೃಷ್ಣಾ! (ಏಕೆಂದರೆ ಅರ್ಜುನನು ಕೃಷ್ಣನನ್ನು ಗೀತೆಯ ಜ್ಞಾನವನ್ನು ತಿಳಿಸಿದವನೆಂದು ನಂಬಿದ್ದನು. ಆದರೆ ಶ್ರೀಕೃಷ್ಣನ ಶರೀರದಲ್ಲಿ ಕಾಲಬ್ರಹ್ಮನು ಪ್ರೇತದಂತೆ ಪ್ರವೇಶಿಸಿ ಈ ಜ್ಞಾನವನ್ನು ತಿಳಿಸುತ್ತಿದ್ದನು. ಇದನ್ನು ಈ ಮೊದಲೇ ಪ್ರಮಾಣ ಸಹಿತವಾಗಿ ವಿವರಿಸಲಾಗಿದೆ) ಯಾವ ವ್ಯಕ್ತಿಯು ಶಾಸ್ತ್ರ ವಿಧಿಯನ್ನು ತ್ಯಜಿಸಿ ಅನ್ಯ ದೇವತೆಗಳನ್ನು ಪೂಜಿಸುತ್ತಾರೋ ಅವರು ಸ್ವಭಾವದಲ್ಲಿ ಹೇಗಿರುತ್ತಾರೆ? ಗೀತೆಯ ಜ್ಞಾನದಾತನು ಉತ್ತರಿಸಿದ್ದಾನೆ. ಸಾತ್ವಿಕ ವ್ಯಕ್ತಿಗಳು ದೇವತೆಗಳ ಪೂಜೆಯನ್ನು ಮಾಡುತ್ತಾರೆ, ರಾಜಸೀ ವ್ಯಕ್ತಿಗಳು ಯಕ್ಷರ ಹಾಗೂ ರಾಕ್ಷಸರ ಪೂಜೆ ಮಾಡುತ್ತಾರೆ ಹಾಗೂ ತಾಮಸೀ ವ್ಯಕ್ತಿಗಳು ಪ್ರೇತ ಇತ್ಯಾದಿಗಳ ಪೂಜೆಯನ್ನು ಮಾಡುತ್ತಾರೆ. ಇವೆಲ್ಲಾ ಶಾಸ್ತ್ರವಿರುದ್ಧ ಕ್ರಮವಾಗಿದೆ. ಗೀತೆಯ 17ನೇ ಅಧ್ಯಾಯದ 5, 6ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾವ ಮನುಷ್ಯರು ಶಾಸ್ತ್ರ ವಿಧಿಯನ್ನು ತ್ಯಜಿಸಿ

ಕೇವಲ ಮನಸ್ಸಿಗೆ ಬಂದಂತೆ ಘೋರ ತಪಸ್ಸನ್ನು ಮಾಡುತ್ತಾರೋ ಅವರು ಕಪಟಿಗಳು ಹಾಗೂ ಶರೀರದ ಕಮಲಗಳಲ್ಲಿ ವಿರಾಜಮಾನವಾದ ಶಕ್ತಿಗಳನ್ನು ಹಾಗೂ ನನ್ನನ್ನು ದುಃಖಿ ಮಾಡುವ ರಾಕ್ಷಸ ಸ್ವಭಾವದ ಅಜ್ಞಾನಿಗಳೆಂದು ತಿಳಿ. ಸೂಕ್ಷ್ಮ ವೇದಗಳಲ್ಲಿ ಪರಮೇಶ್ವರರು ಹೇಳಿದ್ದಾರೆ :–

"ಕಬೀರ್, ಮಾಯೀ ಮಸಾನೀ ಸೇಢ್ ಶೀತಲಾ ಭೈರವ್ ಭೂತ್ ಹನುಮಂತ್ ।
ಪರಮಾತ್ಮಾ ಸೇ ನ್ಯಾರಾ ರಹೈ, ಜೋ ಇನಕೋ ಪೂಜಂತ್ ॥
ರಾಮ್ ಭಜೈ ತೋ ರಾಮ್ ಮಿಲೈ, ದೇವ್ ಭಜೈ ಸೋ ದೇವ್ ।
ಭೂತ್ ಭಜೈ ಸೋ ಭೂತ ಭವೈ, ಸುನೋ ಸಕಲ್ ಸುರ್ ಭೇವ್ ॥"

ರಜೋಗುಣ ಬ್ರಹ್ಮಾ, ಸತಗುಣ ವಿಷ್ಣು, ತಮೋಗುಣ ಶಿವ ಇವರ ಪೂಜೆಯನ್ನು ಮಾಡಬಾರದು ಹಾಗೂ ಭೂತಗಳ, ಪಿತೃಗಳ ಪೂಜೆ (ಶ್ರಾದ್ಧಕರ್ಮ, ತಿಥಿ, ಪಿಂಡ ಪ್ರದಾನ ಇವೆಲ್ಲಾ ಪ್ರೇತ ಪೂಜೆಯಾಗುತ್ತದೆ) ಭೈರವನ ಹಾಗೂ ಹನುಮಂತನ ಆರಾಧನೆಯನ್ನು ಮಾಡಬಾರದು ಎಂಬುವುದು ಸ್ಪಷ್ಟವಾಯಿತು.

ಪ್ರಶ್ನೆ18:– ಕ್ಷರ ಪುರುಷನ ಪೂಜೆಯನ್ನು ಮಾಡಬೇಕೇ? ಅಥವಾ ಬೇಡವೇ?

ಉತ್ತರ:– ನಿಮಗೆ ಮೋಕ್ಷ ಬೇಕಿದ್ದರೆ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವಂತೆ ತತ್ವಜ್ಞಾನದ ಪ್ರಾಪ್ತಿಯ ನಂತರ ಪರಮೇಶ್ವರ ಆ ಪರಮಪದವಿವನ್ನು ಹುಡುಕಬೇಕು. ಅಲ್ಲಿ ಹೋದ ಮೇಲೆ ಸಾಧಕನು ಮತ್ತೆ ಮರಳಿ ಈ ಪ್ರಪಂಚದಲ್ಲಿ ಜನ್ಮ ತಾಳುವುದಿಲ್ಲ. ಕ್ಷರ ಪುರುಷನು ಪ್ರಪಂಚವೆಂಬ ವೃಕ್ಷದ ಒಂದು ರೆಂಬೆ ಮಾತ್ರ. ಹಾಗಾಗಿ ಇವನ ಪೂಜೆಯನ್ನು ಮಾಡಬಾರದು.

ಪ್ರಶ್ನೆ19:– ಈ ಮೊದಲು ಇದ್ದ ಋಷಿ ಮುನಿಗಳೆಲ್ಲಾ ಬ್ರಹ್ಮನ ಪೂಜೆಯನ್ನು ಮಾಡುತ್ತಿದ್ದರು ಹಾಗೂ ಮಾಡಿಸುತ್ತಿದ್ದರು. 'ಓಂ' ನಾಮ ಮಂತ್ರವನ್ನು ಎಲ್ಲಕ್ಕಿಂತ ಶ್ರೇಷ್ಠ ಹಾಗೂ ಉತ್ತಮ ಮಂತ್ರವೆಂದು ಹೇಳುತ್ತಿದ್ದರು. ಹಾಗಾದರೆ ಅವರೆಲ್ಲಾ ಅಜ್ಞಾನಿಗಳೇ? ಒಂದು ವೇಳೆ ಬ್ರಹ್ಮನ ಭಕ್ತಿಯು ಉತ್ತಮವಲ್ಲ ಎಂದಾದರೆ ಗೀತೆಯಲ್ಲಿ ಇದಕ್ಕೆ ಯಾವುದಾದರೂ ಪ್ರಮಾಣವಿದೆಯೇ?

ಉತ್ತರ :– ಯಥಾರ್ಥ ಅಧ್ಯಾತ್ಮ ಜ್ಞಾನವನ್ನು ಸ್ವತಃ ಪರಮೇಶ್ವರನು (ಪರಮ ಅಕ್ಷರ ಬ್ರಹ್ಮ) ಭೂಮಿಯ ಮೇಲೆ ಸಶರೀರ ಪ್ರತ್ಯಕ್ಷನಾಗಿ ಹೇಳುತ್ತಾನೆ ಎಂದು ಈ ಮೊದಲೇ ತಿಳಿಸಲಾಗಿದೆ. ವೇದ–ಮಂತ್ರಗಳಲ್ಲಿ ಇರುವ ಪ್ರಮಾಣವನ್ನು ಈ ಪುಸ್ತಕದ ವೇದ ಮಂತ್ರಗಳ ಫೋಟೋಕಾಪಿ ಎಂಬ ಅಧ್ಯಾಯದಲ್ಲಿ ನೋಡಿ. ಪರಮಾತ್ಮನ ಮೂಲಕ ತಿಳಿಸಲ್ಪಟ್ಟ ಜ್ಞಾನವನ್ನು ಸೂಕ್ಷ್ಮವೇದ (ತತ್ವಜ್ಞಾನ) ಎಂದು ಕರೆಯಲಾಗಿದೆ. ತತ್ವಜ್ಞಾನದಲ್ಲಿ ಪರಮಾತ್ಮನು ಹೀಳಿದ್ದಾರೆ:–

ಗುರು ಬಿನ್ ಕಾಹೂ ನ ಪಾಯಾ ಜ್ಞಾನಾ, ಜ್ಯೋಂ ಥೋಥಾ ಭುಸ್ ಛಡೇ ಮೂಢ್ ಕಿಸಾನಾ ।
ಗುರು ಬಿನ್ ಬೇದ್ ಪಢೈ ಜೋ ಪ್ರಾಣೀ, ಸಮಝೋ ನಾ ಸಾರ್ ರಹೇ ಅಜ್ಞಾನೀ ॥

ಯಾವ ಋಷಿ ಮುನಿಗಳಿಗೆ ಸದ್ಗುರುವು ಸಿಗಲಿಲ್ಲವೋ ಅವರು ವೇದಗಳನ್ನು ಓದಿದರೂ ಸಹ ಅವುಗಳ ಸಾರವನ್ನು ತಿಳಿಯದಂತಹ ಸ್ಥಿತಿ ಅವರದಾಗಿತ್ತು. ಉದಾಹರಣೆಗೆ, ಶ್ರೀ ದೇವಿ ಪುರಾಣ (ಗೀತಾ ಪ್ರೆಸ್ ಗೋರಖ್‌ಪುರದಿಂದ ಪ್ರಕಾಶಿತಗೊಂಡ) ಕನ್ನಡ ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣ್‌ದಾಸ ವೇಲಣಕರ್. ಇದರ 341ನೇ ಪುಟದಲ್ಲಿ, 4ನೇ ಸ್ಕಂದ ಸತ್ಯಯುಗದ ಬ್ರಾಹ್ಮಣರು (ಮಹರ್ಷಿಗಳು) ವೇದಗಳ ಪೂರ್ಣ ವಿದ್ವಾಂಸರಾಗಿದ್ದರು ಹಾಗೂ ಶ್ರೀ ದೇವಿಯ (ದುರ್ಗೆ) ಪೂಜೆ ಮಾಡುತ್ತಿದ್ದರು ಎಂದು ಬರೆಯಲಾಗಿದೆ.

❖ ವಿಚಾರಮಾಡಿ:– ಭಗವದ್ಗೀತೆಯು 4 ವೇದಗಳ ಸಾರವಾಗಿದೆ. ನಿಮಗಂತು ಗೀತೆಯ ಬಗ್ಗೆ ಗೊತ್ತೇ ಇದೆ, ಇದರ ಅಧ್ಯಯನ ಸಹ ಮಾಡುತ್ತಿರುತ್ತಿರಿ. ಹಾಗಾದರೆ ಗೀತೆಯಲ್ಲಿ ಶ್ರೀ ದೇವಿಯನ್ನು ಪೂಜೆ ಮಾಡಿ ಎಂದು ಎಲ್ಲಾದರೂ ಬರೆದಿದೆಯೇ? ವೇದಗಳಲ್ಲಿಯೂ ಸಹ ದುರ್ಗೆಯನ್ನು (ಶ್ರೀ ದೇವಿಯನ್ನು) ಪೂಜೆ ಮಾಡಿ ಎಂದು ಬರೆದಿಲ್ಲ. ಹಾಗಾದರೆ ಆ ಮಹರ್ಷಿಗಳು

ವೇದಗಳನ್ನು ಎಷ್ಟರಮಟ್ಟಿಗೆ ಅರ್ಥ ಮಾಡಿಕೊಂಡಿದ್ದಾರೆ? ಸತ್ಯಯುಗದ ಮಹರ್ಷಿಗಳು ಪೂರ್ಣ ವಿದ್ವಾಂಸರೇ? 'ಓಂ' ಎಂಬ ನಾಮಜಪವೂ ಎಲ್ಲದಕ್ಕಿಂತ ಉತ್ತಮ ಹಾಗೂ ಬ್ರಹ್ಮ ಪೂಜೆಯು ಸರ್ವಶ್ರೇಷ್ಠ ಎನ್ನುವುದು ಅವರ ಸ್ವಂತ ನಿರ್ಧಾರವಾಗಿತ್ತು. 'ಹಾಗಾಗಿ ಪ್ರಿಯ ಓದುಗರೇ! ಯಾರು ಬ್ರಹ್ಮನ ಪೂಜೆಯನ್ನು ಇಷ್ಟ ದೈವರೆಂದು ತಿಳಿದು ಮಾಡುತ್ತಾರೋ ಅವರು ಅಜ್ಞಾನಿಗಳು. ಬ್ರಹ್ಮ ಸಾಧನೆಯಿಂದ ಅನುತ್ತಮ ಗತಿ ಪ್ರಾಪ್ತವಾಗುತ್ತದೆ.

ಗೀತೆಯಲ್ಲಿ ಆಧಾರ :- ಗೀತೆಯ 7ನೇ ಅಧ್ಯಾಯದ 12ರಿಂದ 15ನೇ ಶ್ಲೋಕಗಳಲ್ಲಿ, ಮೂರು ಗುಣಗಳ (ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು, ತಮೋಗುಣ ಶಂಕರನ) ಪೂಜೆಯನ್ನು ಮಾಡುವವರು ನೀಚರು, ರಾಕ್ಷಸ ಸ್ವಭಾವವನ್ನು ಹೊಂದಿದವರು, ಕೆಟ್ಟ ಕೆಲಸಗಳನ್ನು ಮಾಡುವ ಮೂರ್ಖರು ನನ್ನನ್ನು ಕೂಡಾ ಭಜಿಸುವುದಿಲ್ಲ ಎಂದು ಹೇಳಲಾಗಿದೆ. ನಂತರ ಗೀತೆಯ 7ನೇ ಅಧ್ಯಾಯದ 16ರಿಂದ 18ನೇ ಶ್ಲೋಕದವರೆಗೆ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ ನನ್ನ ಭಕ್ತಿಯನ್ನು ನಾಲ್ಕು ಪ್ರಕಾರದಿಂದ ಮಾಡುತ್ತಾರೆ. ಅರ್ಥಾರ್ಥಿ, ಆರ್ತ, ಜಿಜ್ಞಾಸು, ಜ್ಞಾನಿ ನಂತರ ಹೀಗೆಂದಿದ್ದಾನೆ, "ಜ್ಞಾನಿಯು ನನಗೆ ಇಷ್ಟವಾಗುತ್ತಾನೆ. ಜ್ಞಾನಿಗೂ ಸಹ ನಾನು ಇಷ್ಟವಾಗುತ್ತೇನೆ." (ಗೀತೆಯ 7ನೇ ಅಧ್ಯಾಯದ 18ನೇ ಶ್ಲೋಕದಲ್ಲಿ) ಗೀತೆಯಜ್ಞಾನದಾತನು ಹೇಳಿರುವುದೇನೆಂದರೆ, ಈ ಜ್ಞಾನಿ ಆತ್ಮಗಳು ಉದಾರ (ಒಳ್ಳೆಯ) ಆತ್ಮಗಳು ಆದರೆ ಇವೆಲ್ಲಾ ನನ್ನ ಅನುತ್ತಮ ಗತಿ ಅಂದರೆ ಕೀಳಮಟ್ಟದ ಗತಿಯಲ್ಲೇ ಆಶ್ರಿತರಾಗಿರುವರು. ಈ ಶ್ಲೋಕದಲ್ಲಿ (ಗೀತೆಯ ಅಧ್ಯಾಯ 7 ಶ್ಲೋಕ 18ರಲ್ಲಿ) ಗೀತೆಯ ಜ್ಞಾನದಾತ ಬ್ರಹ್ಮ ಸ್ವತಃ ಸ್ವೀಕರಿಸುತ್ತಿದ್ದಾನೆ ನನ್ನ ಭಕ್ತಿಯಿಂದಾಗುವ ಗತಿ ಅನುತ್ತಮ (ಅಶ್ರೇಷ್ಠ =ಕೀಳಮಟ್ಟದು). ಗೀತೆಯ 7ನೇ ಅಧ್ಯಾಯದ 19ನೇ ಶ್ಲೋಕದಲ್ಲಿ ಹೇಳಲಾಗಿದೆ :-

ಬಹುನಾಮ್, ಜನ್ಮಾನಾಮ್, ಅಂತೇ, ಜ್ಞಾನವಾನ್, ಮಾಮ್, ಪ್ರಪದ್ಯತೇ,
ವಾಸುದೇವಃ, ಸರ್ವಮ್, ಇತಿ, ಸಃ, ಮಹಾತ್ಮಾ, ಸುದುರ್ಲಭಃ ॥

ಅನುವಾದ :- ಗೀತೆಯ ಜ್ಞಾನದಾತ ಬ್ರಹ್ಮನು ಹೇಳಿದ್ದಾನೆ- "ನನ್ನ ಭಕ್ತಿಯನ್ನು ಅನೇಕ ಜನ್ಮಗಳ ಅಂತ್ಯದಲ್ಲಿ ಯಾರಾದರೂ ಒಬ್ಬ ಜ್ಞಾನಿ ಆತ್ಮದವನು ಮಾಡುತ್ತಾನೆ ಇಲ್ಲದಿದ್ದರೆ ಅನ್ಯದೇವಿ ದೇವತೆಗಳ ಭೂತಗಳ, ಪಿತೃಗಳ ಭಕ್ತಿಯಲ್ಲಿ ಜೀವನವನ್ನು ನಾಶ ಮಾಡಿಕೊಳ್ಳುತ್ತಿರುತ್ತಾರೆ. ಹಾಗೆಯೇ ನನ್ನ ಭಕ್ತಿಯಿಂದ ಸಿಗುವ ಲಾಭವು (ಗೀತಾ ಅಧ್ಯಾಯ 7 ಶ್ಲೋಕ 18 ರಲ್ಲಿ ) ಸಹ ಉತ್ತಮವಲ್ಲ". ಎಂದು ಹೇಳಿದ್ದಾನೆ. ಆದ್ದರಿಂದ ಗೀತೆಯ 7ನೇ ಅಧ್ಯಾಯದ 19ನೇ ಶ್ಲೋಕದಲ್ಲಿ ಹೀಗೆ ಹೇಳಲಾಗಿದೆ:- 'ವಾಸುದೇವನೇ ಎಲ್ಲಾ' ಎಂದು ಹೇಳುವ ಮಹಾತ್ಮನು ಬಹಳ ಅಪರೂಪವಾಗಿ ಸಿಗುತ್ತಾನೆ. ಅವನೇ ಎಲ್ಲರ ಸೃಷ್ಟಿಕರ್ತ, ಅವನೇ ಪಾಪನಾಶಕ, ಪೂರ್ಣ ಮೋಕ್ಷದಾಯಕ, ಅವನೇ ಪೂಜೆಗೆ ಯೋಗ್ಯನು, ಅವನೇ ಅರ್ಥಾತ್ ವಾಸುದೇವನೇ ಕುಲದ ಒಡೆಯ ಪರಮ ಅಕ್ಷರ ಬ್ರಹ್ಮನು, ಕೇವಲ ಇವನನ್ನೇ ಪೂಜಿಸು, ಬೇರೆಯವರನ್ನು ಪೂಜಿಸ ಬೇಡಾ.

ಗೀತೆಯ ಜ್ಞಾನದಾತನು ಸ್ವತಃ ಹೇಳಿದ್ದಾನೆ, "ಹೇ ಅರ್ಜುನಾ! ನೀನು ಸರ್ವಭಾವದಿಂದ ಆ ಪರಮೇಶ್ವರನಿಗೆ ಶರಣಾಗು, ಆ ಪರಮೇಶ್ವರನ ಕೃಪೆಯಿಂದಲೇ ನೀನು ಪರಮ ಶಾಂತಿಯನ್ನು ಹಾಗೂ ಸನಾತನ ಪರಮಧಾಮವನ್ನು (ಸತ್ಯಲೋಕ) ಪಡೆಯುವೆ". (ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಪ್ರಮಾಣವಿದೆ). ನಂತರ ಗೀತೆಯ ಅಧ್ಯಾಯ 18ನೇ 46ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಯಾವ ಪರಮಾತ್ಮನಿಂದ ಎಲ್ಲಾ ಪ್ರಾಣಿಗಳ ಸೃಷ್ಟಿಯಾಗಿದೆಯೋ, ಯಾರಿಂದ ಇಡೀ ಪ್ರಪಂಚವು ವ್ಯಾಪಿಸಿದೆಯೋ ಆ ಪರಮೇಶ್ವರನನ್ನು ತನ್ನ ಸ್ವಾಭಾವಿಕ ನಿತ್ಯ ಕರ್ಮಗಳನ್ನು ಮಾಡುತ್ತಾ ಪೂಜೆ ಮಾಡಿದರೆ ಅಂತಹ ಮನುಷ್ಯನು ಪರಮ ಸಿದ್ಧಿಯನ್ನು ಪ್ರಾಪ್ತಿಸುತ್ತಾನೆ'. ನಂತರ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ

ಹೇಳಿರುವಂತೆ ತತ್ವಜ್ಞಾನವನ್ನು ತಿಳಿದು ಅದರ ನಂತರ ಪರಮೇಶ್ವರನ ಆ ಪರಮಪದದ ಅನ್ವೇಷಣೆಯನ್ನು ಮಾಡಬೇಕು. ಅಲ್ಲಿಗೆ ಹೋದ ಬಳಿಕ ಸಾಧಕನು ಮತ್ತೆ ಮರಳಿ ಪ್ರಪಂಚಕ್ಕೆ ಬರುವುದಿಲ್ಲ ಯಾವ ಪರಮೇಶ್ವರನಿಂದ ಪ್ರಪಂಚರೂಪಿ ವೃಕ್ಷದ ಪ್ರವೃತ್ತಿ ವಿಸ್ತಾರವಾಗಿದೆ ಅಂದರೆ ಯಾವ ಪರಮೇಶ್ವರನು ಎಲ್ಲರನ್ನು ಸೃಷ್ಟಿಸಿದ್ದಾನೆ. ಅವನನ್ನೇ ಪೂಜಿಸಬೇಕು. ಇದರಿಂದ ಋಷಿಗಳಿಗೂ ಸಹ ವೇದಗಳ ಗೂಢರಹಸ್ಯವು ತಿಳಿದಿರಲಿಲ್ಲ ಹಾಗೂ ಅವರು ಅಜ್ಞಾನಿಗಳಾಗಿದ್ದರು ಎನ್ನುವುದು ಸಾಬೀತಾಗುತ್ತದೆ.

ಪ್ರಶ್ನೆ 20 :– ಗೀತೆಯ ಜ್ಞಾನದಾತನು ತನ್ನಿಂದ ಸಿಗುವ ಮೋಕ್ಷವನ್ನು ಅನುತ್ತಮವೆಂದು ಏಕೆ ಹೇಳಿದ್ದಾನೆ?

ಉತ್ತರ :– ಗೀತೆಯ ಜ್ಞಾನದಾತನು ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5ನೇ ಶ್ಲೋಕ, 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಹೀಗೆಂದಿದ್ದಾನೆ, "ಹೇ ಅರ್ಜುನಾ! ನನ್ನ ಹಾಗೂ ನಿನ್ನ ಅನೇಕ ಜನ್ಮಗಳಾಗಿವೆ. ನಿನಗೆ ಗೋತ್ತಿಲ್ಲ, ನನಗೆ ಗೋತ್ತು. ಋಷಿ ಮಹರ್ಷಿಗಳು ಹಾಗೂ ದೇವತೆಗಳಿಗೆ ನನ್ನ ಉತ್ಪತ್ತಿಯ ಬಗ್ಗೆ ಗೋತ್ತಿಲ್ಲ. ನೀನು, ನಾನು, ಈ ರಾಜರು, ಸೈನಿಕರು ಎಲ್ಲರೂ ಮೊದಲು ಹುಟ್ಟಿದ್ದೆವು. ಮುಂದೆಯೂ ಹುಟ್ಟುತ್ತೇವೆ". ಹಾಗಾದರೆ ಓದುಗರೇ ವಿಚಾರ ಮಾಡಿ. ಬ್ರಹ್ಮನು ಸ್ವತಃ ನನಗೆ ಜನನ–ಮರಣಗಳು ಇರುತ್ತವೆ ಎಂದಿದ್ದಾನೆ. ಹಾಗಾದಾಗ ಬ್ರಹ್ಮನ ಭಕ್ತನಿಗೆ ಗೀತಾ ಅಧ್ಯಾಯ 15 ಶ್ಲೋಕ 4ರ ಜನನ ಮರಣವಿಲ್ಲದ ಮೋಕ್ಷವು ಪ್ರಾಪ್ತವಾಗುವುದಿಲ್ಲ. ಎಲ್ಲಿಯವರೆಗೆ ಜನನ–ಮರಣಗಳಿರುತ್ತವೆಯೋ ಅಲ್ಲಿಯವರೆಗೆ ಪರಮ ಶಾಂತಿಯು ದೊರಕುವುದಿಲ್ಲ. ಸ್ವತಃ ಗೀತೆಯ ಜ್ಞಾನದಾತನು ತನ್ನ ಅಸಮರ್ಥತೆಯನ್ನು ವ್ಯಕ್ತಗೊಳಿಸಿದ್ದಾನೆ. ಗೀತೆಯ 18ನೇ ಅದ್ಯಾಯದ 62ನೇ ಶ್ಲೋಕದಲ್ಲಿ ಹೀಗೆಂದಿದ್ದಾನೆ. 'ಪರಮ ಶಾಂತಿಗಾಗಿ ಆ ಪರಮೇಶ್ವರನ (ಪರಮ ಅಕ್ಷರ ಬ್ರಹ್ಮನ) ಶರಣಾಗು. ಅವನ ಕೃಪೆಯಿಂದಲೇ ನೀನು ಪರಮ ಶಾಂತಿ ಹಾಗೂ ಸನಾತನ ಪರಮ ಧಾಮವನ್ನು ಪಡೆಯುವೆ. ಗೀತೆಯ 8ನೇ ಅಧ್ಯಾಯ 5 ಮತ್ತು 7ರ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ, ನನ್ನ ಭಕ್ತಿಮಾಡುವುದಾದರೆ ಯುದ್ಧವನ್ನೂ ಮಾಡಬೇಕಾಗುತ್ತದೆ. ಎಲ್ಲಿ ಯುದ್ಧವಿದೆಯೋ ಅಲ್ಲಿ ಶಾಂತಿಯಿರುವುದಿಲ್ಲ. ಪರಮಶಾಂತಿಯ ಮನೆ ದೂರವಿದೆ. ಆದ್ದರಿಂದ ಗೀತೆಯ ಜ್ಞಾನದಾತನು ತನ್ನ ಗತಿಯನ್ನು ('ಓಂ' ನಾಮಜಪದಿಂದ ಸಿಗುವ ಲಾಭವನ್ನು) ಅನುಉತ್ತಮ (ಕೀಳಮಟ್ಟದು) ಎಂದು ಹೇಳಿದ್ದಾನೆ.

ಪ್ರಶ್ನೆ 21:– ನೀವು 13ನೇ ಪ್ರಶ್ನೆಯ ಉತ್ತರದಲ್ಲಿ ಪೂರ್ಣ ಮೋಕ್ಷ ಪ್ರಾಪ್ತಿಗಾಗಿ ಬ್ರಹ್ಮಾ–ವಿಷ್ಣು–ಶಿವ, ಗಣೇಶ ಹಾಗೂ ದೇವಿ, ಕ್ಷರಪುರುಷ, ಅಕ್ಷರಪುರುಷ ಇವರ ಸಾಧನೆಯನ್ನು ಮಾಡಬೇಕೆಂದು ಹೇಳಿದ್ದೀರಿ. ಇನ್ನೊಂದುಕಡೆ ಬ್ರಹ್ಮಾ–ವಿಷ್ಣು–ಶಿವ ಇವರು ಅನ್ಯ ದೇವತೆಗಳು, ಕ್ಷರಪುರುಷನ ಪೂಜೆಯು ಯೋಗ್ಯವಲ್ಲ. ಕೇವಲ ಪರಮ ಅಕ್ಷರ ಬ್ರಹ್ಮನ ಪೂಜೆ ಮಾಡಬೇಕು ಎನ್ನುತ್ತಿದ್ದೀರಿ?

ಉತ್ತರ:– ಇದನ್ನು ನಾನು ಹೇಳುತ್ತಿಲ್ಲ, ನಿಮ್ಮ ಸದ್ಗ್ರಂಥಗಳೇ ಹೇಳುತ್ತಿವೆ. ಪೂಜೆ ಮತ್ತು ಸಾಧನೆಯಲ್ಲಿರುವ ವ್ಯತ್ಯಾಸವನ್ನು ಮೊದಲು ಸ್ಪಷ್ಟಪಡಿಸುತ್ತೇನೆ.

❖ ಪಡೆಯುವ ವಸ್ತುವನ್ನು ಅಪೇಕ್ಷಿಸುವುದು, ಪೂಜೆ ಎಂದು ಹೇಳಲಾಗುತ್ತದೆ. ಅದನ್ನು ಪಡೆಯಲು ಪ್ರಯತ್ನಿಸುವುದು ಸಾಧನೆ ಎಂದಾಗುತ್ತದೆ.

ಉದಾ :– ನಮಗೆ ನೀರು ಬೇಕಾಗಿದೆ. ಇದನ್ನು ನಾವು ಪಡೆಯುವುದಾಗಿದೆ. ನಮಗೆ ನೀರಿನ ಇಚ್ಛೆ ಇದೆ. ನೀರನ್ನು ಪಡೆಯಲು ಹ್ಯಾಂಡ್–ಪಂಪ್ ಹಚ್ಚಬೇಕಾಗುತ್ತದೆ. ಹ್ಯಾಂಡ್–ಪಂಪ್ ಹಚ್ಚಲು ಯಾವ–ಯಾವ ಉಪಕರಣಗಳನ್ನು ಉಪಯೋಗಿಸುತ್ತೇವೆಯೋ ಅದು ಪ್ರಯತ್ನವಾಗುತ್ತದೆ. ಇದೇ ರೀತಿ ಪರಮಾತ್ಮನ ಪರಮ ಪದವನ್ನು ಪಡೆಯುವುದು ನಮ್ಮ

ಇಚ್ಚೆ. ಅಲ್ಲಿಗೆ ಹೋದ ಬಳಿಕ ಮತ್ತೆ ಸಾಧಕನು ಮರಳಿ ಪ್ರಪಂಚಕ್ಕೆ ಬರುವುದಿಲ್ಲ. ನಾವು ಪರಮೇಶ್ವರ ಮತ್ತು ಅವನ ಸನಾತನ ಪರಮಧಾಮವನ್ನು ಪಡೆಯುವುದಾಗಿದೆ. ಅದನ್ನು ಪಡೆಯಲು ಮಾಡುವ ನಾಮ ಜಪವು, ಹೋಮ–ಹವನಗಳು ಇತ್ಯಾದಿ ಸಾಧನೆಯಾಗಿದೆ. ಆ ಸಾಧನೆಯಿಂದ ಪೂಜ್ಯ ವಸ್ತುವಾದ ಪರಮಾತ್ಮನು ಪ್ರಾಪ್ತನಾಗುತ್ತಾನೆ. ಇದನ್ನು 13ನೇ ಪ್ರಶ್ನೆಯ ಉತ್ತರದಲ್ಲಿ ಸ್ಪಷ್ಟಪಡಿಸಲಾಗಿದೆ. ಆ ಪೂರ್ಣ ಮೋಕ್ಷಕ್ಕಾಗಿ 3 ಬಾರಿಯಲ್ಲಿ ದೀಕ್ಷಾ ಕ್ರಮಗಳನ್ನು ಪೂರ್ಣಗೊಳಿಸಬೇಕಾಗುತ್ತದೆ.

(1) ಪ್ರಥಮ ನಾಮ ದೀಕ್ಷೆ:– ಬ್ರಹ್ಮಾ, ವಿಷ್ಣು, ಶಿವ, ಗಣೇಶ, ದೇವಿ ಇವರ ಮಂತ್ರಗಳ ಸಾಧನೆಯನ್ನು ಕೊಡಲಾಗುತ್ತದೆ.

(2) ಎರಡನೇ ಬಾರಿಗೆ ಕ್ಷರಬ್ರಹ್ಮ ಹಾಗು ಅಕ್ಷರ ಬ್ರಹ್ಮನ ಎರಡು ಅಕ್ಷರ ಮಂತ್ರ ಜಪವನ್ನು ನೀಡಲಾಗುತ್ತದೆ. ಸಂತರು ಇದನ್ನು ಸತ್ಯನಾಮ ಎಂದು ಕರೆಯುತ್ತಾರೆ. ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ 3 ಮಂತ್ರಗಳ ಜಪವಿದೆ. ಅವು 'ಓಂ ತತ್ ಸತ್' ಈ ಸತ್ಯನಾಮದಲ್ಲಿ 2 ಅಕ್ಷರಗಳಿವೆ. ಒಂದು 'ಓಂ' ಮತ್ತು 'ತತ್' (ಇದು ಸಾಂಕೇತಿಕವಾಗಿದೆ ಅಂದರೆ ಗುಪ್ತ ನಾಮವಾಗಿದೆ. ಇದನ್ನು ಉಪದೇಶದ ಸಮಯದಲ್ಲಿ ಉಪದೇಶ ಪಡೆಯುವವರಿಗೆ ಹೇಳಿಕೊಡಲಾಗುತ್ತದೆ.)

(3) ಮೂರನೇ ಬಾರಿಗೆ ಸಾರನಾಮದ ದೀಕ್ಷೆಯನ್ನು ನೀಡಲಾಗುತ್ತದೆ. ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಈ ಮಂತ್ರವನ್ನು 'ಸತ್' ಎಂದು ಕರೆಯಲಾಗಿದೆ. ಇದೂ ಸಹ ಸಾಂಕೇತಿಕವಾಗಿದೆ. ಇದನ್ನೂ ಸಹ ದೀಕ್ಷೆಯ ಸಮಯದಲ್ಲಿ ಉಪದೇಶ ಪಡೆಯುವವರಿಗೆ ತಿಳಿಸಲಾಗುತ್ತದೆ. ಈ ರೀತಿ ಪೂರ್ಣ ಮೋಕ್ಷವು ಪ್ರಾಪ್ತವಾಗುತ್ತದೆ.

ಪ್ರಶ್ನೆ 22 :– ಈ ಮೊದಲು ನಾವು ಮಾಡುತ್ತಿದ್ದ ಸಾಧನೆಯನ್ನು ತ್ಯಜಿಸಬೇಕೇ?

ಉತ್ತರ :– ಒಂದುವೇಳೆ ಶಾಸ್ತ್ರವಿರುದ್ಧವಾಗಿದ್ದರೆ ತ್ಯಜಿಸಲೇ ಬೇಕು. ಅನಾಧಿಕಾರಿಯ ಬಳಿ ದೀಕ್ಷೆ ಪಡೆದಿದ್ದರೆ, ಅದರಿಂದ ಏನೂ ಲಾಭವಾಗದು, ಪೂರ್ಣಗುರುವಿನಿಂದ ಸಾಧನೆಯ ದೀಕ್ಷೆಯನ್ನು ಪಡೆಯಬೇಕಾಗುತ್ತದೆ.

ಪ್ರಶ್ನೆ 23 :– ಗೀತೆಯ 18ನೇ ಅಧ್ಯಾಯದ 47ನೇ ಶ್ಲೋಕ ಹಾಗೂ 3ನೇ ಅಧ್ಯಾಯದ 35ನೇ ಶ್ಲೋಕದಲ್ಲಿ ಹೀಗೆ ಹೇಳಲಾಗಿದೆ :–

ಶ್ರೇಯಾನ್ ಸ್ವಧರ್ಮಃ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಮ್ ಶ್ರೇಯಃ ಪರಧರ್ಮಃ, ಭಯಾವಹಃ ॥ (ಗೀತಾ ಅಧ್ಯಾಯ 3 ಶ್ಲೋಕ 35)

ಒಳ್ಳೆಯ ರೀತಿಯ ಆಚರಣೆಯಿಂದ ಅನುಷ್ಠಾನಗೊಳಿಸಿಕೊಂಡ ಬೇರೆಯ ಧರ್ಮಕ್ಕಿಂತ ಗುಣರಹಿತವಾಗಿದ್ದರೂ ಸಹ ನಮ್ಮ ಧರ್ಮವೇ ಅತ್ಯಂತ ಉತ್ತಮ ಧರ್ಮ. ನಮ್ಮ ಧರ್ಮದಲ್ಲಿ ಸಾವೂ ಸಹ ಕಲ್ಯಾಣಕಾರಿಯಾಗಿರುತ್ತದೆ. ಬೇರೆ ಧರ್ಮವು ಭಯವನ್ನುಂಟು ಮಾಡುವಂಥಾದ್ದಾಗಿರುತ್ತದೆ.

ಉತ್ತರ:– ಈ ಅನುವಾದವು ತಪ್ಪು. ಒಂದು ವೇಳೆ ನಮ್ಮ ಧರ್ಮವು ಗುಣರಹಿತವಾಗಿದ್ದರೂ ಅದನ್ನು ಬಿಡಬಾರದು ಎನ್ನುವ ಮಾತು ಸರಿಯಾಗಿದ್ದರೆ, ಗೀತೆಯ ಜ್ಞಾನವನ್ನು 18 ಅಧ್ಯಾಯಗಳಲ್ಲಿ, 700 ಶ್ಲೋಕಗಳಲ್ಲಿ ಬರೆಯುವ ಆವಶ್ಯಕತೆಯಾದರೂ ಏನಿತ್ತು? ನಮ್ಮ ಸಾಧನೆಯು ಹೇಗಿದ್ದರೂ ಅದು ಎಷ್ಟೇ ಗುಣರಹಿತವಾಗಿದ್ದರೂ (ಲಾಭರಹಿತ) ಅದನ್ನೇ ಮಾಡುತ್ತಿರು ಎನ್ನುವ ಒಂದು ಶ್ಲೋಕವೇ ಸಾಕಾಗಿತ್ತು. ಹಾಗಾದರೆ ಗೀತೆಯ 7ನೇ ಅಧ್ಯಾಯದ 12ರಿಂದ 15ನೇ ಶ್ಲೋಕಗಳಲ್ಲಿ ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಿವನ ಪೂಜೆಯು ರಾಕ್ಷಸ ಸ್ವಭಾವವನ್ನು ಹೊಂದಿರುವ ಮನುಷ್ಯರಲ್ಲಿ ನೀಚ, ಕೆಟ್ಟ ಕೆಲಸ ಮಾಡುವ ಮೂರ್ಖರು ನನ್ನನ್ನು

ಭಜಿಸುವುದಿಲ್ಲ ಎಂದು ಏಕೆ ಹೇಳಲಾಗಿದೆ? ಗೀತೆಯ ಜ್ಞಾನದಾತನು ಆ ಸಾಧಕರಿಗೆ ಅವರ ಧರ್ಮವನ್ನು ಅರ್ಥಾತ್ ಧಾರ್ಮಿಕ ಸಾಧನೆಯನ್ನು ಬಿಟ್ಟು ಬಿಡಲು ಹೇಳಿದ್ದಾನೆ ಹಾಗೂ ಗೀತೆಯ 7ನೇ ಅಧ್ಯಾಯದ 20ರಿಂದ 23ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾರು ನನ್ನ ಪೂಜೆಯನ್ನು ಮಾಡದೆ ಅನ್ಯ ದೇವತೆಗಳನ್ನು ಪೂಜಿಸುತ್ತಾರೋ, ಅವರು ಅಜ್ಞಾನಿಗಳು. ಅವರ ಸಾಧನೆಯಿಂದ ಬಹಳ ಬೇಗ ಮುಗಿದು ಹೋಗುವ ಸುಖ (ಸ್ವರ್ಗ ಸಮಯ) ಪ್ರಾಪ್ತಿಯಾಗುತ್ತದೆ. ನಂತರ ತಮ್ಮ ಧಾರ್ಮಿಕ ಪೂಜೆ ಅರ್ಥಾತ್ ಧರ್ಮವನ್ನು ಬಿಟ್ಟುಬಿಡಲು ಹೇಳಿದ್ದಾನೆ. ಪೂರ್ಣಲಾಭಕ್ಕಾಗಿ ಪರಮ ಅಕ್ಷರ ಬ್ರಹ್ಮನ ಧರ್ಮ ಅರ್ಥಾತ್ ಧಾರ್ಮಿಕ ಸಾಧನೆಯನ್ನು ಮಾಡಲು ಹೇಳಿದ್ದಾನೆ.

❖ ಗೀತೆಯ 3ನೇ ಅಧ್ಯಾಯದ 35ನೇ ಶ್ಲೋಕದ ಯಥಾರ್ಥ ಅನುವಾದ ಈ ರೀತಿ ಇದೆ :–

ಅನುವಾದ:– (ವಿಗುಣಃ ಪರಧರ್ಮಾತ್ಸವನುಷ್ಠಿತಾತ್) ಬೇರೆಯವರ ಗುಣರಹಿತ ಅಂದರೆ ಲಾಭ ರಹಿತವಾದ, ಬಹಳ ಬೇಗ ಆಕರ್ಷಿಸಲ್ಪಡುವ ಧರ್ಮ ಅರ್ಥಾತ್ ಧಾರ್ಮಿಕ ಕರ್ಮಕ್ಕಿಂತ (ಸ್ವಧರ್ಮಃ) ನಿನ್ನ ಶಾಸ್ತ್ರ ವಿಧಾನಾನುಸಾರ ಮಾಡುವ ಧಾರ್ಮಿಕ ಕರ್ಮವು (ಶ್ರೇಯಾಸ್) ಅತ್ಯಂತ ಉತ್ತಮವಾಗಿದೆ. (ಸ್ವಧರ್ಮ) ತಮ್ಮ ಶಾಸ್ತ್ರಕ್ಕೆ ಅನುಗುಣವಾದ ಧರ್ಮ–ಕರ್ಮದ ಸಂಘರ್ಷದಲ್ಲಿ (ನಿಧನಮ್) ಸಾಯುವುದೂ ಸಹ (ಶ್ರೇಯಃ) ಕಲ್ಯಾಣಕಾರಕವು. (ಪರಧರ್ಮ) ಬೇರೆಯ ಧಾರ್ಮಿಕ ಕರ್ಮವು (ಭಯಾವಹಃ) ಭಯವನ್ನು ನೀಡುವುದೇ ಆಗಿದೆ. ಭಾವಾರ್ಥವೇನೆಂದರೆ, ಜಾಗರಣೆ ಮುಂತಾದವುಗಳಲ್ಲಿ, ಅತ್ಯಂತ ಮಧುರವಾದ ರಾಗದಲ್ಲಿ ಮಧುರವಾದ ಗೀತೆಗಳನ್ನು ಹಾಡಲಾಗುತ್ತದೆ. ಆಡಂಬರವೂ ಇರುತ್ತದೆ. ಶಾಸ್ತ್ರಕ್ಕೆ ಅನುಗುಣವಾದ ಧರ್ಮ–ಕರ್ಮದಲ್ಲಿ ಕೇವಲ ನಾಮಜಪ ಅಥವಾ ಸಾಧಾರಣವಾದ ವಿಧಾನದಿಂದ ಆರತಿ ಮಾಡಲಾಗುತ್ತದೆ. ವೇದ, ಗೀತೆಯಲ್ಲಿ ಶ್ರೀದೇವಿಯ ಪೂಜೆ ಹಾಗೂ ಜಾಗರಣೆ ಮಾಡಲು ಆದೇಶ ನೀಡಿಲ್ಲ. ಆದ್ದರಿಂದ ಇದು ಶಾಸ್ತ್ರ ವಿಧಾನವನ್ನು ಬಿಟ್ಟು, ಮನಸೆಚ್ಛೆ ಆಚರಣೆ ಯಾಯ್ತು. ಆದ್ದರಿಂದ ಅದು ವ್ಯರ್ಥವಾಗಿದೆ. ಬೇರೆಯವರ ಶಾಸ್ತ್ರ ವಿಧಾನರಹಿತವಾದ ಧಾರ್ಮಿಕ ಕರ್ಮವನ್ನು ನೋಡಲು ಖುಷಿಯಾಗುತ್ತದೆ. ಏಕೆಂದರೆ ಅದರಲ್ಲಿ ಆಡಂಬರ, ಆಕರ್ಷಣೆ ಇರುತ್ತದೆ. ಆದ್ದರಿಂದ ಸತ್ಯಸಾಧನೆ ಮಾಡುವವರಿಗೆ ಬೇರೆಯವರ ಧಾರ್ಮಿಕ ಕರ್ಮವನ್ನು ನೋಡಿ ನಮ್ಮ ಭಕ್ತಿಯು ಸರಿಯೇ ಎಂಬ ಭಯ ಹುಟ್ಟುತ್ತದೆ. ಆದರೆ ತತ್ವಜ್ಞಾನವನ್ನು ತಿಳಿದ ನಂತರ ಈ ಭಯವು ಕೊನೆಗೊಳ್ಳುತ್ತದೆ. ತತ್ವಜ್ಞಾನದಲ್ಲಿ ಹೇಳಿರುವುದೇನೆಂದರೆ :–

ದುರ್ಗಾ ಧ್ಯಾನ್ ಪಡೆ ಜಿಸ್ ಬಗಡಮ್, ತಾ ಸಂಗತಿ ಡೂಬ್ಯೆ ಸಬ್ ನಗರಮ್।
ದಂಭ್ ಕರೇಂ ಡೂಂಗರ್ ಚಢ್ಯೆ, ಅಂತರ್ ಝೀನೀ ಝೂಲ್।
ಜಗ್ ಜಾನೇ ಬಂದಗೀ ಕರೇಂ, ಬೋವೇಂ ಸೂಲ ಬಬೂಲ್ ॥

ಆದ್ದರಿಂದ ವಿಗುಣ ಅರ್ಥಾತ್ ಲಾಭರಹಿತವಾದ ಧಾರ್ಮಿಕ ಸಾಧನೆಯನ್ನು ಬಿಟ್ಟು ಸತ್ಯ ಸಾಧನೆಯನ್ನು ಶಾಸ್ತ್ರವಿಧಿ ಅನುಸಾರ ಮಾಡುವುದರಿಂದಲೇ ಉದ್ಧಾರವಾಗುವುದು.

ಪ್ರಶ್ನೆ 24:– ನಾನು ಸಂತ ಶ್ರೀ ಅಭಿಲಾಷ್ ದಾಸರ ವಿಚಾರವನ್ನು ಕೇಳಿದ್ದೆ ಜಗತ್ತನ್ನು ಸೃಷ್ಟಿಸುವ ಪರಮಾತ್ಮ ಇಲ್ಲವೆಂದು ಅವರು ಹೇಳುತ್ತಿದ್ದರು. ಇದು ಕೇವಲ ಹೆಣ್ಣು–ಗಂಡಿನ ಸಂಯೋಗದಿಂದ ಆಗಿದೆ. ನಂತರ ಇದು ಸಮಾಪ್ತಿಯಾಗುತ್ತದೆ. ದೇವರಿಲ್ಲ. ಜೀವವೇ ಬ್ರಹ್ಮ, ಜೀವವೇ ಕರ್ತ ಎಂದು ಅಭಿಲಾಷ ದಾಸರು ಹೇಳಿದ್ದರು. ಅವರ ಈ ವಿಚಾರವು ಸರಿಯೇ ಅಥವಾ ತಪ್ಪೇ?

ಉತ್ತರ:– ಇದರ ಉತ್ತರವನ್ನು ಭಗವದ್ಗೀತೆಯ 16ನೇ ಅಧ್ಯಾಯದ 6ರಿಂದ 10ನೇ ಶ್ಲೋಕದಲ್ಲಿ ವಿಸ್ತಾರವಾಗಿ ಹೇಳಲಾಗಿದೆ. ಯಾರು ಅಸುರೀ ಪ್ರವೃತ್ತಿಯ ಜನರಿರುತ್ತಾರೋ ಅವರು ಈ ಪ್ರಪಂಚವು ಪರಮಾತ್ಮನಿಂದಾಗಿಲ್ಲ, ಸ್ತ್ರೀ–ಪುರುಷನ ಸಂಯೋಗದಿಂದಾಗಿದೆ ಎಂದು

ಹೇಳುತ್ತಿರುತ್ತಾರೆ. ಇದರ ಯಾರು ಕರ್ತೃವು ಇಲ್ಲ. ಅಂಥಹ ವ್ಯಕ್ತಿಗಳು ಈ ಪ್ರಪಂಚವನ್ನು ನಾಶ ಮಾಡಲೆಂದೇ ಹುಟ್ಟಿರುತ್ತಾರೆ. ವಾಸ್ತವಿಕತೆ ಏನೆಂದರೆ ಪರಮಾತ್ಮನು ಇಡೀ ಪ್ರಪಂಚವನ್ನು ಸೃಷ್ಟಿಸಿದವನು. ಜೀವ ಬ್ರಹ್ಮನಲ್ಲ, ಬ್ರಹ್ಮ ಎಂದರೆ ಪ್ರಭು ಎಂದರ್ಥ. ಹೇಗೆಂದರೆ :- (1) ಬ್ರಹ್ಮ (ಇವನನ್ನು ಕ್ಷರ ಪುರುಷನೆಂದು ಕರೆಯಲಾಗುತ್ತದೆ) 21 ಬ್ರಹ್ಮಾಂಡಗಳ ಒಡೆಯನು. (2) ಅಕ್ಷರಬ್ರಹ್ಮ (ಇವನನ್ನು ಅಕ್ಷರ ಪುರುಷನೆಂದು ಕರೆಯಲಾಗುತ್ತದೆ ಗೀತೆಯ 15ನೇ ಅಧ್ಯಾಯ 16ನೇ ಶ್ಲೋಕ) ಇವನು 7 ಶಂಖ ಬ್ರಹ್ಮಾಂಡಗಳ ಒಡೆಯನು. (3) ಪೂರ್ಣ ಬ್ರಹ್ಮ (ಗೀತೆಯ ಅಧ್ಯಾಯ 8 ಶ್ಲೋಕ 3ರಲ್ಲಿ ಅವನನ್ನು ಪರಮ ಅಕ್ಷರ ಬ್ರಹ್ಮನೆಂದು ಕರೆಯಲಾಗಿದೆ) ಅಸಂಖ್ಯ ಬ್ರಹ್ಮಾಂಡಗಳ ಒಡೆಯ, ಇವನೇ ಕುಲದ ಒಡೆಯ. ಯಾವ ಭಗವಂತನೇ ಇಲ್ಲ ಎಂದು ಹೇಳುವುದು, ಕೇವಲ ಸ್ತ್ರೀ-ಪುರುಷರ ಸಂಯೋಗದಿಂದ ಪ್ರಪಂಚದ ಸೃಷ್ಟಿಯಾಗಿದೆ ಮತ್ತು ಸಮಾಪ್ತಿಯಾಗುತ್ತದೆ, ಜೀವವೇ ಕರ್ತೃವ ಅಂದರೆ ಜೀವವೇ ಬ್ರಹ್ಮ ಎಂದು ಹೇಳುವುದು ಸಂಪೂರ್ಣ ತಪ್ಪು.

ಪ್ರಶ್ನೆ 25 :- ಗೀತೆಯ ಜ್ಞಾನದಾತನು 8ನೇ ಅಧ್ಯಾಯದ 5 ಮತ್ತು 7ನೇ ಶ್ಲೋಕಗಳಲ್ಲಿ ಹೇಳಿರುವುದೇನೆಂದರೆ, "ಯಾವ ಪುರುಷನು ಅಂತ್ಯಕಾಲದಲ್ಲಿ ನನ್ನ ಸ್ಮರಣೆಯನ್ನು ಮಾಡುತ್ತಾ ಶರೀರವನ್ನು ತ್ಯಜಿಸುತ್ತಾನೋ ಅವನು ನನ್ನನ್ನು ಪಡೆಯುತ್ತಾನೆ. ಆದ್ದರಿಂದ ಹೇ ಅರ್ಜುನ, ಎಲ್ಲಾ ಸಮಯದಲ್ಲೂ ನನ್ನ ಸ್ಮರಣೆಯನ್ನು ಮಾಡು, ಯುದ್ಧವನ್ನು ಮಾಡು. ಆಗಲೂ ನನ್ನನ್ನು ಪಡೆಯುವೆ. ಆದ್ದರಿಂದ "ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ನನ್ನ ಸ್ಮರಣೆ ಸಾಧನೆಯನ್ನೆ ಮಾಡು. ನೀವು ಅನ್ಯ ಪರಮಾತ್ಮನ ಬಗ್ಗೆ ಹೇಳುತ್ತಿರುವಿರಿ, ಅದು ವಿಶ್ವಾಸವಾಗುತ್ತಿಲ್ಲ. ಗೀತೆಯಲ್ಲಿ ಇನ್ನೂ ಎಲ್ಲಾದರೂ ಬರೆದಿದೆಯೇ? ಗೀತೆಯ ಜ್ಞಾನದಾತನ ಹೊರತು ಅನ್ಯ ಪರಮಾತ್ಮನ ಭಕ್ತಿಮಾಡಬೇಕೆಂದು.

ಉತ್ತರ:- ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಯಾವ ಸಾಧಕರು ಕೇವಲ ಜರಾ (ವೃದ್ಧಾಪ್ಯ) ಮತ್ತು ಮರಣದಿಂದ (ಮೃತ್ಯುವಿನಿಂದ) ಪಾರಾಗಲು ಪ್ರಯತ್ನಶೀಲರಾಗಿರುವರೋ ಅವರು 'ತತ್ ಬ್ರಹ್ಮ' ನನ್ನು ತಿಳಿದವರು. ಅರ್ಜುನನು ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಹೀಗೆಂದು ಕೇಳಿದ್ದಾನೆ 'ತತ್ ಬ್ರಹ್ಮ' ಎಂದರೆ ಏನು?" ಗೀತೆಯ ಜ್ಞಾನದಾತನು 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಅವನು 'ಪರಮ ಅಕ್ಷರ ಬ್ರಹ್ಮ' ಎಂದು ಹೇಳಿದ್ದಾನೆ. ಹಾಗೂ ಗೀತೆಯ 8ನೇ ಅಧ್ಯಾಯದ 5 ಮತ್ತು 7ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನ್ನ ಸ್ಮರಣೆಯನ್ನು ಮಾಡಲು ಹೇಳಿದ್ದಾನೆ. (ಗೀತೆಯ ಜ್ಞಾನದಾತನು ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ ಮತ್ತು 4ನೇ ಅಧ್ಯಾಯದ 5ನೇ ಶ್ಲೋಕ ಹಾಗೂ 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ತನ್ನ ಜನನ-ಮರಣವನ್ನೂ ಸಹ ಹೇಳಿದ್ದಾನೆ. ಅಲ್ಲದೆ ನನ್ನನ್ನು ಭಕ್ತಿಯಿಂದ ಪರಮಶಾಂತಿಯು ಸಿಗುವುದಿಲ್ಲ, ಯುದ್ಧವನ್ನು ಸಹ ಮಾಡಬೇಕಾಗುತ್ತದೆ ಎಂದು ಹೇಳಿದ್ದಾನೆ. ಅವನು ಜನನ-ಮರಣವು ಸದಾ ಇರುವುದೆಂದೂ ಹೇಳುತ್ತಾನೆ.) ಹೀಗೆ ಹೇಳಿದ ತಕ್ಷಣವೇ ಗೀತೆಯ 8ನೇ ಅಧ್ಯಾಯದ 8, 9 ಮತ್ತು 10ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನ್ನನ್ನು ಬಿಟ್ಟು 'ಪರಮ ಅಕ್ಷರ ಬ್ರಹ್ಮನ' ಭಕ್ತಿ ಮಾಡಲು ಹೇಳಿದ್ದಾನೆ. ಅಂದರೆ 'ಹೇ ಪಾರ್ಥ! ಪರಮೇಶ್ವರನ ಸಾಧನೆಯ ಅಭ್ಯಾಸಯೋಗದಿಂದ ಕೂಡಿದ ಅನ್ಯ ದೇವರಲ್ಲಿ ಅಥವಾ ಪ್ರಭುವಿನಲ್ಲಿ ಶ್ರದ್ಧೆಯನ್ನು ಇಡದೆ ಒಬ್ಬನೇ ಪರಮೇಶ್ವರನನ್ನು ದೃಢಚಿತ್ತದಿಂದ ಸ್ಮರಣೆ ಮಾಡುತ್ತಾ ಇದ್ದರೆ ಮನುಷ್ಯನು (ಪರಮಮಂ ದಿವ್ಯಂ ಪುರುಷಂಯಾತಿ) ಆ ಪರಮ ಅಲೌಕಿಕ ಪರಮೇಶ್ವರನನ್ನು ಅಂದರೆ ಪರಮ ಅಕ್ಷರ ಬ್ರಹ್ಮನನ್ನೆ ಪಡೆಯುತ್ತಾನೆ. (ಗೀತಾ ಅಧ್ಯಾಯ 8 ಶ್ಲೋಕ 8)

ಯಾವ ಸಾಧಕನು ಪರಮ ಅಕ್ಷರಬ್ರಹ್ಮ, ಅನಾದಿ, ಎಲ್ಲರ ಸಂಚಾಲಕ, ಕಂಟ್ರೋಲರ್,

ಸೂಕ್ಷ್ಮದಿಂದ ಅತೀ ಸೂಕ್ಷ್ಮದವರೆಗೆ ಎಲ್ಲರ ಪಾಲನೆ-ಪೋಷಣೆ ಮಾಡುವವ, ಅಚಿಂತ ಸ್ವರೂಪನಾದ ಸೂರ್ಯನಿಗೆ ಸಮಾನ ಪ್ರಕಾಶವಂಥನಾದ, ಅವಿದ್ಯಾರಹಿತನಾದ, ಶುದ್ಧ ಚಿದಾನಂದ ಪರಮೇಶ್ವರನ ಸ್ಮರಣೆ ಮಾಡುತ್ತಾನೆ. (ಗೀತೆಯ 8ನೇ ಅಧ್ಯಾಯದ 9ನೇ ಶ್ಲೋಕ)

ಆ ಭಕ್ತಿ ಸಾಧನೆಯುಕ್ತ ಸಾಧಕ ಅಂತ್ಯಕಾಲದಲ್ಲೂ ಭಕ್ತಿಯ ಶಕ್ತಿಯಿಂದ ಭ್ರುಕುಟಿಗಳ ಮಧ್ಯದಲ್ಲಿ ಪ್ರಾಣವನ್ನು ಅಂದರೆ ಶ್ವಾಸವನ್ನು ದೃಢವಾಗಿ ಸ್ಥಾಪಿಸಿ ನಿಶ್ಚಲವಾದ ಮನಸ್ಸಿನಿಂದ ಸ್ಮರಣೆ ಮಾಡುತ್ತಾ ಆ (ದಿವ್ಯಪರಮಪುರುಷಂ) ಅಲೌಕಿಕ ಪರಮ ಪುರುಷ ಅಂದರೆ ಪರಮ ಅಕ್ಷರ ಬ್ರಹ್ಮ (ಗೀತೆಯ ಜ್ಞಾನದಾತನಿಗಿಂತ ಭಿನ್ನವಾದವ) ನನ್ನೆ ಪಡೆಯುತ್ತಾನೆ. ಗೀತೆಯ 8ನೇ ಅಧ್ಯಾಯದ 11ರಿಂದ 22ನೇ ಶ್ಲೋಕದವರೆಗೆ ಇದರ ಬಗ್ಗೆ ಪ್ರಮಾಣವಿದೆ. ಗೀತೆಯ 8ನೇ ಅಧ್ಯಾಯದ 11ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ತತ್ವದರ್ಶಿ ಅರ್ಥಾತ್ ವೇದವನ್ನು ಸರಿಯಾಗಿ ತಿಳಿದಿರುವವನನ್ನು ಅವಿನಾಶಿ ಎಂದುಕರೆಯುತ್ತಾರೆ. ಆ ಪರಮ ಪದವನ್ನು ನಿನಗೆ ಹೇಳುತ್ತೇನೆ ಗೀತೆಯ 8ನೇ ಅಧ್ಯಾಯದ 12ನೇ ಶ್ಲೋಕದಲ್ಲಿ, ಅವನನ್ನು ಪಡೆಯುವ ಸಾಧನೆಯು ಶ್ವಾಸದಿಂದ ನಾಮಸ್ಮರಣೆ ಮಾಡುವುದರಿಂದಾಗುತ್ತದೆ ಎಂದು ಹೇಳಲಾಗಿದೆ.

ಗೀತೆಯ 8ನೇ ಅಧ್ಯಾಯದ 13ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಬ್ರಹ್ಮನಾದ ನನ್ನ ಕೇವಲ ಒಂದು ಓಂ ಅಕ್ಷರವಿದೆ. ಇದರ ಸ್ಮರಣೆಯನ್ನು ಸಾಯುವವರೆಗೆ ಮಾಡಬೇಕು. ಅವನು ಈ ಮಂತ್ರದಿಂದ ಸಿಗುವ ಪರಮ ಗತಿ ಅಂದರೆ ಬ್ರಹ್ಮಲೋಕವನ್ನು ಪ್ರಾಪ್ತಿಸುತ್ತಾನೆ.

ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಹೀಗೆಂದು ಹೇಳಿದೆ, 'ಬ್ರಹ್ಮಲೋಕಕ್ಕೆ ಹೋದ ಸಾಧಕನು ಸಹ ಪುನಃ ಮರಳಿ ಈ ಪ್ರಪಂಚದಲ್ಲಿ ಜನ್ಮತಾಳುತ್ತಾನೆ, ಪುನಃ ಸಾಯುತ್ತಾನೆ. ಇದು ಪೂರ್ಣ ಮೋಕ್ಷವಲ್ಲ'. ಗೀತೆಯ 8ನೇ ಅಧ್ಯಾಯದ 14ನೇ ಶ್ಲೋಕದಲ್ಲಿ, ಯಾರು ನನ್ನ ಸಾಧನೆ ಸ್ಮರಣೆ ಮಾಡುತ್ತಾನೋ ಅವನಿಗೆ ನಾನು ಸುಲಭವಾಗಿ ಸಿಗುತ್ತೇನೆಂದು ಹೇಳಲಾಗಿದೆ.

ಗೀತೆಯ 8ನೇ ಅಧ್ಯಾಯದ 15ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, 'ನನ್ನನ್ನು ಪ್ರಾಪ್ತಿಸಿದ ನಂತರವು ಪುನರ್ಜನ್ಮವಿರುತ್ತದೆ ಅದು ದುಃಖಗಳ ಮನೆ, ಕ್ಷಣಭಂಗುರದ ಜೀವನವಾಗಿರುತ್ತದೆ. ಯಾವ ಸಾಧಕನು ಪರಮ ಅಕ್ಷರ ಬ್ರಹ್ಮನ ಭಕ್ತಿ ಸಾಧನೆ ಮಾಡುತ್ತಾನೋ ಅವನು ಪರಮ ಸಿದ್ಧಿಯನ್ನು ಪಡೆದು ಅಮರನಾಗುತ್ತಾನೆ. ಪುನಃ ಅವನ ಜನನ-ಮರಣ ಆಗುವುದಿಲ್ಲ.

ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, 'ಬ್ರಹ್ಮ ಲೋಕದವರೆಗೆ ಎಲ್ಲ ಲೋಕಗಳು ಪುನರಾವರ್ತನೆಯಲ್ಲಿವೆ. ಅಂದರೆ ಬ್ರಹ್ಮಲೋಕದವರೆಗಿನ ಎಲ್ಲ ಲೋಕಗಳಿಗೆ ಹೋದ ಸಾಧಕರು ಸದಾ ಜನನ-ಮರಣವೆಂಬ ಚಕ್ರದಲ್ಲೇ ಸಿಲುಕುತ್ತಾರೆ. ಹೇ ಅರ್ಜುನಾ! ಯಾರು ಇದನ್ನು ತಿಳಿದಿಲ್ಲವೋ ಅವರು ನನ್ನನ್ನು ಪಾಪ್ತಿಸಿದ ಬಳಿಕವೂ ಸದಾ ಜನನ-ಮರಣವೆಂಬ ಚಕ್ರದಲ್ಲಿ ಸಿಲುಕಿರುತ್ತಾರೆ. ಏಕೆಂದರೆ ಗೀತೆಯ ಜ್ಞಾನದಾತನು ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5ನೇ ಶ್ಲೋಕ, 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಸ್ವತಃ ಹೇಳಿದ್ದಾನೆ. ಹೇ ಅರ್ಜುನಾ! ನಿನ್ನ ಮತ್ತು ನನ್ನ ಅನೇಕ ಜನ್ಮಗಳಾಗಿವೆ ಮುಂದೆಯೂ ಆಗುತ್ತಿರುತ್ತದೆ. ನಿನಗೆ ಗೊತ್ತಿಲ್ಲ, ನನಗೆ ಗೋತ್ತು. ನನ್ನ ಜನ್ಮದ ಬಗ್ಗೆ ದೇವತೆಗಳಿಗೆ ಗೊತ್ತಿಲ್ಲ, ಮಹರ್ಷಿ ಹಾಗೂ ಸಿದ್ಧ ಪುರುಷರಿಗೂ ಗೊತ್ತಿಲ್ಲ. ಆದರೆ ಪರಮ ಅಕ್ಷರ ಬ್ರಹ್ಮನ ಭಕ್ತಿಮಾಡಿ, ಪರಮ ಸಿದ್ಧಿಯನ್ನು ಅಂದರೆ ಪರಮಗತಿ ಪ್ರಾಪ್ತಮಾಡಿದ ಮಹಾತ್ಮರು ಪುನರ್ಜನ್ಮ ಪಡೆಯುವುದಿಲ್ಲ.

ಗೀತೆಯ 8ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಅಕ್ಷರ ಪುರುಷನ (ಪರಬ್ರಹ್ಮ) ಹಗಲು-ರಾತ್ರಿಯ ವರ್ಣನೆ ಇದೆ. ಇಲ್ಲಿ (ಬ್ರಹ್ಮಣಃ) ಪರಬ್ರಹ್ಮನ ಒಂದು ದಿನವು ಒಂದು ಸಾವಿರಯುಗಕ್ಕೆ ಸಮ, ಅಷ್ಟೇ ರಾತ್ರಿಯು ಇರುತ್ತದೆ. ಪರಬ್ರಹ್ಮ ಎಂದರೆ ಅಕ್ಷರ ಪುರುಷನ ವರ್ಣನೆಯು ಗೀತೆಯ

15ನೇ ಅಧ್ಯಾಯದ 16ನೇ ಶ್ಲೋಕದಲ್ಲಿದೆ. ಅವನ ಪ್ರಕರಣೆಯು 8ನೇ ಅಧ್ಯಾಯದ 17, 18 ಮತ್ತು 19ನೇ ಶ್ಲೋಕದಲ್ಲಿದೆ.

ಟಿಪ್ಪಣಿ :– ಹೆಚ್ಚಿನ ಮಾಹಿತಿಗಾಗಿ ಪ್ರಶ್ನೆ ಸಂಖ್ಯೆ 9ನ್ನು ಓದಿರಿ. ಅದರಲ್ಲಿ 8ನೇ ಅಧ್ಯಾಯದ 17ರಿಂದ 19ನೇ ಶ್ಲೋಕದವರೆಗೆ ಅಕ್ಷರ ಪುರುಷನ ಮಾಹಿತಿ ಇದೆ. ಇವನನ್ನೂ ಅವ್ಯಕ್ತ ಎಂದು ಕರೆಯಲಾಗಿದೆ. ಇವನ ದಿನ ಪೂರ್ತಿಯಾದ ನಂತರ ಕ್ಷರ ಪುರುಷನ 21 ಬ್ರಹ್ಮಾಂಡಗಳಲ್ಲಿ ಇರುವ ಎಲ್ಲಾ ಜೀವಿಗಳು ನಾಶವಾಗುತ್ತವೆ, ರಾತ್ರಿ ಪೂರ್ತಿಯಾದ ನಂತರ ಪುನಃ ಹಗಲಿನಲ್ಲಿ ಪ್ರಪಂಚದಲ್ಲಿ ಜೀವಿಗಳ ಸೃಷ್ಟಿಯಾಗುತ್ತದೆ.

ಗೀತೆಯ 8ನೇ ಅಧ್ಯಾಯದ 20ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಈ ಅಕ್ಷರ ಪುರುಷನೂ ಸಹ ಅವ್ಯಕ್ತನೆಂದು ಕರೆಯಲ್ಪಡುತ್ತಾನೆ. ಆದರೆ ಈ ಅವ್ಯಕ್ತನಿಗಿಂತ ಬೇರೆ ವಿಲಕ್ಷಣ ಸನಾತನ ಅವ್ಯಕ್ತ ಭಾವವು ಇದೆ, ಪರಮದಿವ್ಯ ಪುರುಷ ಅಂದರೆ ಪರಮ ಅಕ್ಷರ ಬ್ರಹ್ಮನು ಎಲ್ಲಾ ಜೀವಿಗಳು (ಕ್ಷರಪುರುಷ, ಅಕ್ಷರಪುರುಷ ಹಾಗೂ ಇವುಗಳ ಅಧಿನದಲ್ಲಿ ಎಷ್ಟು ಜೀವಿಗಳಿವೆಯೋ, ಅವೆಲ್ಲವೂ) ನಾಶ ಹೊಂದಿದ ನಂತರವೂ ನಾಶವಾಗುವುದಿಲ್ಲ ಅಂದರೆ ವಾಸ್ತವದಲ್ಲಿ ಅವಿನಾಶಿ.

ಗೀತೆಯ 8ನೇ ಅಧ್ಯಾಯದ 21ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾರನ್ನು ಅವ್ಯಕ್ತ (ಅಕ್ಷರ) ಅವಿನಾಶಿ ಎನ್ನುವ ಹೆಸರಿನಿಂದ ಕರೆಯಲಾಗಿದೆಯೋ ಆ ಪರಮ ಪುರುಷನ ಪ್ರಾಪ್ತಿಯನ್ನು ಪರಮಗತಿಯೆಂದು ಹೇಳಲಾಗುತ್ತದೆ. ಆ ಸನಾತನ ಅವ್ಯಕ್ತ ಪರಮ ಪುರುಷನನ್ನು ಪ್ರಾಪ್ತಿಸಿದ ಮೇಲೆ ಮರಳಿ ಜನನ–ಮರಣ ಆಗುವುದಿಲ್ಲ. ಆ ಧಾಮವು ನನ್ನ ಧಾಮಕ್ಕಿಂತ ಶ್ರೇಷ್ಠವಾದದ್ದು. ಈ ಮೊದಲು ನಾನು ಸಹ ಅಲ್ಲಿಯೇ ಇರುತ್ತಿದ್ದೆ. ಆದ್ದರಿಂದ ಅದು ಸಹ ನನ್ನ ಪರಮಧಾಮವೇ ಆಗಿದೆ ಎಂದು ಹೇಳಲಾಗಿದೆ. ಯಾಕೆಂದರೆ ಗೀತೆಯ ಜ್ಞಾನದಾತನು ಆ ಪರಮ ಸನಾತನ ಧಾಮ ಅರ್ಥಾತ್ ಸತ್ಯಲೋಕದಿಂದ ಹೊರಹಾಕಲ್ಪಟ್ಟಿದ್ದಾನೆ. (ಸಂಪೂರ್ಣ ಮಾಹಿತಿಗಾಗಿ ಇದೇ ಪುಸ್ತಕದ 'ಸೃಷ್ಟಿಯ ರಚನೆ' ಎನ್ನುವ ಅಧ್ಯಾಯವನ್ನು ಓದಿರಿ)

ಗೀತೆಯ 8ನೇ ಅಧ್ಯಾಯದ 22ನೇ ಶ್ಲೋಕದಲ್ಲಿ ಸ್ಪಷ್ಟನೆ ಇದೆ. ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, 'ಹೇ ಅರ್ಜುನಾ! ಯಾವ ಪರಮಾತ್ಮನ ಅಧೀನದಲ್ಲಿ ಸರ್ವಭೂತ ಅರ್ಥಾತ್ ಜೀವಿಗಳಿವೆಯೋ (ಕ್ಷರ ಪುರುಷ ಮತ್ತು ಅವನ 21 ಬ್ರಹ್ಮಾಂಡಗಳ ಜೀವಿಗಳು, ಅಕ್ಷರ ಪುರುಷ ಮತ್ತು 7 ಶಂಖ ಬ್ರಹ್ಮಾಂಡಗಳಲ್ಲಿ ಇರುವ ಎಲ್ಲಾ ಜೀವಿಗಳು ಹಾಗೂ ಪರಮ ಅಕ್ಷರ ಪುರುಷನ ಅಸಂಖ್ಯಾತ ಬ್ರಹ್ಮಾಂಡಗಳಲ್ಲಿ ಇರುವ ಜೀವಿಗಳು ಆ ಪರಮ ಅಕ್ಷರ ಬ್ರಹ್ಮನ ಆಧಿನದಲ್ಲಿವೆ) ಹಾಗೂ ಆ ಪರಮ ಅಕ್ಷರ ಪುರುಷನಿಂದ ಈ ಜಗತ್ತಿನ ಪರಿಪೂರ್ಣತೆ ಆಗಿರುವುದೋ ಅರ್ಥಾತ್ ಅವನು ಸಕಲ ಜೀವಿಗಳನ್ನು ಉತ್ಪತ್ತಿಸಿದ್ದಾನೆ, ಅವನ ಅಧಿಕಾರವು ಎಲ್ಲರ ಮೇಲೆಯೂ ಇದೆ, ಆ ಸನಾತನ ಅವ್ಯಕ್ತ ಪರಮ ಪುರುಷನನ್ನು ಅನನ್ಯ ಭಕ್ತಿಯಿಂದ ಪಡೆಯಬೇಕು. ಇದರ ಭಾವಾರ್ಥವೇನೆಂದರೆ, ಪರಮ ಅಕ್ಷರ ಬ್ರಹ್ಮನನ್ನು ಪ್ರಾಪ್ತಿಸಲು ಕೇವಲ ಅವನನ್ನೇ ಪೂಜಿಸಬೇಕು. ಬೇರೆಯಾವ ಪ್ರಭುವಿನಲ್ಲೂ ಶ್ರದ್ಧೆ–ಭಕ್ತಿ ಇಡಬಾರದು. ಇದನ್ನೇ ಅನನ್ಯ ಭಕ್ತಿ ಅರ್ಥಾತ್ ಪೂಜೆ ಎಂದು ಕರೆಯುತ್ತಾರೆ. ಕೇವಲ ಪರಮ ಅಕ್ಷರ ಬ್ರಹ್ಮನ ಪೂಜೆಯನ್ನೇ ಅನನ್ಯ ಭಕ್ತಿ ಎಂದು ಕರೆಯಲಾಗುತ್ತದೆ. ಗೀತೆ 8ನೇ ಅಧ್ಯಾಯದ 22ನೇ ಶ್ಲೋಕದ ಸರಿಯಾದ ಅನುವಾದ ಮಾಡಿದರೆ ಸ್ಪಷ್ಟವಾಗುತ್ತದೆ :–

ಪುರುಷಃ, ಸಃ, ಪರಃ, ಪಾರ್ಥ, ಭಕ್ತಯಾ, ಲಭ್ಯಃ ತು, ಅನನ್ಯಾ,
ಯಸ್ಯ, ಅಂತಃಸ್ಥಾನಿ, ಭೂತಾನಿ, ಯೇನ್, ಸರ್ವಮ್ ಇದಮ್, ತತಮ್

ಅನುವಾದ:– (ಸಃ) ಆ (ಪರಃ) ಬೇರೆಯ (ಪುರುಷಃ) ಪರಮಾತ್ಮನು. ಅನನ್ಯ ಭಕ್ತಿಯಿಂದ ಪ್ರಾಪ್ತಿಸುವ ಯೋಗ್ಯನಾಗಿರುವನು. ಅವನ ಅಧೀನದಲ್ಲಿ ಸಕಲ ಜೀವಿಗಳಿವೆ ಹಾಗೂ ಅವನೇ ಇಡೀ ಜಗತ್ತನ್ನು ಸೃಷ್ಟಿಸಿದ್ದಾನೆ ಮತ್ತು ಎಲ್ಲರನ್ನೂ ಪಾಲಿಸುತ್ತಾನೆ. ಸರಳಾರ್ಥ ಸಮಾಪ್ತ (ಗೀತೆಯ

8ನೇ ಅಧ್ಯಾಯ 22ನೇ ಶ್ಲೋಕ) ಇದರ ಮೂಲ ಪಾಠದಲ್ಲಿ ಅಂದರೆ ಸಂಸ್ಕೃತದಲ್ಲಿ ಬರೆದಿದೆ = ಸಃ ಪರಃ ಪುರುಷಃ = ಪರ ಅರ್ಥ ಗೀತೆಯ 8ನೇ ಅಧ್ಯಾಯದ 20ನೇ ಶ್ಲೋಕದಲ್ಲಿ 'ಬೇರೆ' ಎಂದು ಬರೆಯಲಾಗಿದೆ. ಇಲ್ಲಿ (ಗೀತೆಯ 8ನೇ ಅಧ್ಯಾಯ 22ನೇ ಶ್ಲೋಕದಲ್ಲಿ) ಯು ಬೇರೆ ಎಂದು ತೆಗೆದುಕೊಳ್ಳುತ್ತಿದ್ದರೆ. ಅಂದರೆ ಗೀತೆಯ ಜ್ಞಾನದಾತನಿಗಿಂತ ಇನ್ನೂ ಯಾರೋ ಬೇರೆ ಸಮರ್ಥ ಪ್ರಭು ಇದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ಅವನ ಶರಣದಲ್ಲಿ ಹೋಗಲು ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ.

ಇದರಿಂದ ತಿಳಿಯುವುದೇನೆಂದರೆ, ಭಗವದ್ಗೀತೆಯ ಅನೇಕ ಶ್ಲೋಕಗಳಲ್ಲಿ ಗೀತೆಯ ಜ್ಞಾನದಾತ ತನ್ನನ್ನು ಬಿಟ್ಟು ಬೇರೆ ಪರಮೇಶ್ವರನ (ಪರಮ ಅಕ್ಷರ ಬ್ರಹ್ಮ) ಭಕ್ತಿ ಮಾಡಲು ತಿಳಿಸಿದ್ದಾನೆ. ಅವನಿಂದಲೇ ಪೂರ್ಣ ಮೋಕ್ಷವು ಸಂಭವವೆಂದು ಹೇಳಿದ್ದಾನೆ ಹಾಗೂ ಜನನ–ಮರಣವೆಂಬ ಚಕ್ರವು ಸದಾಕಾಲಕ್ಕೆ ಸಮಾಪ್ತಿಯಾಗುವುದೆಂದು ಹೇಳಿದ್ದಾನೆ. ಗೀತೆಯ 7ನೇ ಅಧ್ಯಾಯದ 19, 29ರ ಶ್ಲೋಕಗಳಲ್ಲಿ, ಗೀತೆಯ 18ನೇ ಅಧ್ಯಾಯದ 46, 61, 62, 66ರ ಶ್ಲೋಕಗಳಲ್ಲಿ, ಗೀತೆಯ 8ನೇ ಅಧ್ಯಾಯದ 3, 8, 9, 10, 20ರಿಂದ 22ರ ಶ್ಲೋಕಗಳಲ್ಲಿ, ಗೀತೆಯ 4ನೇ ಅಧ್ಯಾಯದ 31, 32ರ ಶ್ಲೋಕಗಳಲ್ಲಿ, ಗೀತೆಯ 15ನೇ ಅಧ್ಯಾಯದ 1, 4, 17ರ ಶ್ಲೋಕಗಳಲ್ಲಿ, ಗೀತೆಯ 2ನೇ ಅಧ್ಯಾಯದ 17, 59ರ ಶ್ಲೋಕಗಳಲ್ಲಿ, ಗೀತೆಯ 3ನೇ ಅಧ್ಯಾಯದ 14, 15, 19ರ ಶ್ಲೋಕಗಳಲ್ಲಿ ಹಾಗೂ ಗೀತೆಯ 5ನೇ ಅದ್ಯಾಯದ 14, 15, 16, 19, 20, 24, 25, 26ರ ಶ್ಲೋಕಗಳಲ್ಲಿ ಕೂಡಾ ಇದರ ಪ್ರಮಾಣವಿದೆ.

ಪ್ರಶ್ನೆ 26:– ಶ್ರೀ ಕೃಷ್ಣನು ಗೀತೆಯ ಜ್ಞಾನವನ್ನು ಅರ್ಜುನನಿಗೆ ನೀಡಿದನು ಎನ್ನುವುದನ್ನು ಎಲ್ಲ ಸಂತರು ಮತ್ತು ಹಿಂದೂ ಧರ್ಮದ ಗುರುಗಳು ಹೇಳಿದ್ದಾರೆ. ಶ್ರೀ ಕೃಷ್ಣನೇ ಪೂರ್ಣ ಪರಮಾತ್ಮನೆಂದು ನಮಗೆ ತಿಳಿಸಿದ್ದಾರೆ. ಸ್ವತಃ ವಿಷ್ಣುವೇ ಅವತಾರವೆತ್ತಿ ದೇವಕಿಯ ಗರ್ಭದಿಂದ ಜನಿಸಿದ್ದರು, ಇವರನ್ನು ಬಿಟ್ಟು ಬೇರೆ ಪರಮಾತ್ಮನಿಲ್ಲ ಎಂದು ಹೇಳಿದ್ದಾರೆ. ಆದರೆ ನೀವು ಗೀತೆಯ ಜ್ಞಾನದಾತನಿಗಿಂತ ಬೇರೆ ಇನ್ನೊಬ್ಬ ಪೂರ್ಣ ಪರಮಾತ್ಮನಿದ್ದಾನೆ ಎಂದು ನಿಮ್ಮ ಸತ್ಸಂಗದಲ್ಲಿ ಹೇಳುತ್ತಿರುವಿರಿ. ಶಾಸ್ತ್ರದಲ್ಲಿ ಬರೆದಿರುವುದನ್ನು ಪ್ರಮಾಣ ತೋರಿಸಿ ತಿಳಿಸಿದರೆ ನಿಮ್ಮ ಮಾತಿನಲ್ಲಿ ನಂಬಿಕೆ ಬರುವುದು.

ಉತ್ತರ :– ಮೇಲಿನ ಈ ಪ್ರಶ್ನೆಗೆ ನಾವು ಆಧಾರವನ್ನು ತೋರಿಸಿದ್ದೇವೆ. ಆದರೂ ನಿಮಗೆ ಇನ್ನೂ ಸಂದೇಹವಿದೆ. ಇದಕ್ಕೆ ಕಾರಣವೇನೆಂದರೆ ಹಿಂದೂ ಧರ್ಮಗುರುಗಳಿಗೆ ತಮ್ಮ ಶಾಸ್ತ್ರಗಳ ಬಗ್ಗೆ ಹೆಚ್ಚಿನ ಜ್ಞಾನವಿಲ್ಲ. ಹಾಗೇನಾದರೂ ಅವರಿಗೆ ಜ್ಞಾನ ಇದ್ದಿದ್ದರೆ ಮೇಲಿನ ಶಾಸ್ತ್ರ ವಿರುದ್ಧವಾದ ಉಪದೇಶಗಳನ್ನು ನಿಮಗೆ ನೀಡುತ್ತಿರಲಿಲ್ಲ. ಮತ್ತೊಂದು ವಿಷಯವೇನೆಂದರೆ, ಧಾರ್ಮಿಕ ಗುರು ಒಬ್ಬ ಅಧ್ಯಾಪಕನಿದ್ದಂತೆ. ಒಬ್ಬ ಅಧ್ಯಾಪಕನಿಗೆ ಪಠ್ಯಕ್ರಮದ ಬಗ್ಗೆ ತಿಳುವಳಿಕೆ ಇಲ್ಲದಿದ್ದಾಗ ಅವನೊಬ್ಬ ಅಜ್ಞಾನಿ ಶಿಕ್ಷಕನೆನಿಸಿಕೊಳ್ಳುತ್ತಾನೆ ಹಾಗೂ ವಿದ್ಯಾರ್ಥಿಗಳ ಜೀವನದ ಜೊತೆ ಆಟವಾಡುತ್ತಿದ್ದಾನೆಂದರ್ಥ. ಏಕೆಂದರೆ ಪಠ್ಯದಲ್ಲಿ ಇಲ್ಲದ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದಾನೆ. ಅಂಥಹ ಶಿಕ್ಷಕನಿಂದ ದೂರವಿರುವುದು ಒಳ್ಳೆಯದು. ಅಂಥಹ ಶಿಕ್ಷಕನನ್ನು ಬಿಟ್ಟು ಬಿಡುವುದರಲ್ಲೇ ವಿದ್ಯಾರ್ಥಿಗಳ ಹಿತವಿದೆ.

ಭಗವದ್ಗೀತೆಯಲ್ಲಿ ನಿಮಗೆ ಸಾಕಷ್ಟು ಪ್ರಮಾಣಗಳನ್ನು ನೀಡುವೆನು. ಗೀತೆಯ ಜ್ಞಾನ ನೀಡಿದವನಿಗಿಂತ ಬೇರೆ ಇನ್ನೊಬ್ಬ ಪೂರ್ಣ ಪರಮಾತ್ಮನು ಇದ್ದಾನೆ. ಆ ಪರಮಾತ್ಮನೇ ಆರಾಧನೆಗೆ ಯೋಗ್ಯನು. ಅವನ ಭಕ್ತಿ ಮಾಡುವುದರಿಂದಲೇ ಪೂರ್ಣ ಮೋಕ್ಷವು ಪ್ರಾಪ್ತಿಯಾಗುತ್ತದೆ. ಇಲ್ಲಿ ಗೀತೆಯ ಕೆಲವು ಶ್ಲೋಕಗಳನ್ನು ಬರೆಯುತ್ತೇನೆ. ಅವುಗಳಿಂದ ನೀವು ಸ್ವತಃ ತಿಳಿಯಬಹುದು. ಈ ಪುಸ್ತಕದ ಕೊನೆಯಲ್ಲಿ ಅದರ ಫೋಟೋಕಾಪಿ ನೀಡಲಾಗಿದೆ. ಯಥಾರ್ಥ ರೂಪದಲ್ಲಿ ಗೀತೆಯ ಅನುವಾದ ವನ್ನು ತಿಳಿಯಲು ನಾನು ನೀಡಿರುವ ಗೀತೆಯ ಸಂಪೂರ್ಣ ಶ್ಲೋಕಗಳ

ಅನುವಾದವನ್ನು ಓದಿರಿ. ಇನ್ನೊಂದು ಪುಸ್ತಕದ ಹೆಸರು 'ಗಹರೀ ನಜರ ಗೀತಾ ಮೆ' ಇದನ್ನು ನಮ್ಮ ವೆಬ್‌ಸೈಟ್‌ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. (**Website** ಹೆಸರು **(www.jagatgururampalji.org)**

ಗೀತೆಯ 18ನೇ ಅಧ್ಯಾಯದ 46, 61, 62, 66ರ ಶ್ಲೋಕಗಳಲ್ಲಿ, 7ನೇ ಅಧ್ಯಾಯದ 19, 29ರ ಶ್ಲೋಕಗಳಲ್ಲಿ, 8ನೇ ಅಧ್ಯಾಯದ 3, 8, 9, 10, 20, 21, 22ರ ಶ್ಲೋಕಗಳಲ್ಲಿ, 4ನೇ ಅಧ್ಯಾಯದ 31, 32ರ ಶ್ಲೋಕಗಳಲ್ಲಿ, 15 ನೇ ಅಧ್ಯಾಯದ 1, 4, 16, 17ರ ಶ್ಲೋಕಗಳಲ್ಲಿ, 2ನೇ ಅಧ್ಯಾಯದ 17, 59ರ ಶ್ಲೋಕಗಳಲ್ಲಿ, 3ನೇ ಅಧ್ಯಾಯದ 14, 15, 19ರ ಶ್ಲೋಕಗಳಲ್ಲಿ, 5ನೇ ಅಧ್ಯಾಯದ 14, 15, 16, 19, 20, 24, 25, 26ರ ಶ್ಲೋಕಗಳಲ್ಲಿ, 6ನೇ ಅಧ್ಯಾಯದ 7ನೇ ಶ್ಲೋಕ, 11ನೇ ಅಧ್ಯಾಯದ 55ನೇ ಶ್ಲೋಕ, 12ನೇ ಅಧ್ಯಾಯದ 1 ರಿಂದ 5ನೇ ಶ್ಲೋಕ–ಈ ಎಲ್ಲಾ ಶ್ಲೋಕಗಳಿಂದ ಗೀತೆಯ ಜ್ಞಾನದಾತನನ್ನು ಬಿಟ್ಟು ಇನ್ನೊಬ್ಬ ಪರಮಾತ್ಮನಿದ್ದಾನೆಂಬುದು ತಿಳಿಯುತ್ತದೆ. ಅವನ ಬಗ್ಗೆ ಮತ್ತು ಅವನ ಪ್ರಾಪ್ತಿಗಾಗಿ ಮಾಡುವ ಭಕ್ತಿಯ ಬಗ್ಗೆ ಗೀತೆಯ ಜ್ಞಾನದಾತನಿಗೂ ಗೊತ್ತಿಲ್ಲ. ಪ್ರಮಾಣ ಗೀತೆಯ 4ನೇ ಅಧ್ಯಾಯ 32, 34ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಯಜ್ಞಗಳ ಅರ್ಥಾತ್ ಧಾರ್ಮಿಕ ಅನುಷ್ಠಾನಗಳ ವಿಸ್ತೃತ ಜ್ಞಾನವು (ಬ್ರಹಣಃ ಮುಖೆ) ಸಚ್ಚಿದಾನಂದ ಘನಬ್ರಹ್ಮನ ಮುಖಕಮಲದಿಂದ ಉಚ್ಚರಿಸಲ್ಪಟ್ಟ ವಾಣಿಯಲ್ಲಿ ಇದೆ. ಆ ಪರಮಾತ್ಮನು ಸ್ವತಃ ಭೂಮಿಯ ಮೇಲೆ ಪ್ರತ್ಯಕ್ಷನಾಗಿ ತನ್ನ ಮುಖಕಮಲದಿಂದ ಏನನ್ನು ಹೇಳಿದ್ದಾನೋ, ಅದನ್ನು ತತ್ವಜ್ಞಾನವೆಂದು ಕರೆಯುತ್ತಾರೆ. ಅದನ್ನೇ ಸೂಕ್ಷ್ಮ ವೇದವೆಂದು ಸಹ ಕರೆಯುತ್ತಾರೆ. ಆ ಜ್ಞಾನವನ್ನು ನಂತರದಲ್ಲಿ ತತ್ವದರ್ಶಿ ಸಂತರೇ ಅರಿತಿರುತ್ತಾರೆ. ಆ ಜ್ಞಾನದಲ್ಲಿ ಪೂರ್ಣ ಪರಮಾತ್ಮನ ಪ್ರಾಪ್ತಿ ಮತ್ತು ಸ್ಥಿತಿಯ ಬಗ್ಗೆ ಸಂಪೂರ್ಣ ಜ್ಞಾನವಿರುತ್ತದೆ.

ಟಿಪ್ಪಣಿ:– ಗೀತೆಯ ಅನುವಾದಕರು 4ನೇ ಅಧ್ಯಾಯದ 32ನೇ ಶ್ಲೋಕದ ಅನುವಾದದಲ್ಲಿ ಸ್ವಲ್ಪ ತಪ್ಪು ಮಾಡಿದ್ದಾರೆ. ಅವರು 'ಬ್ರಹ್ಮಣಃ' ಶಬ್ದದ ಅರ್ಥವನ್ನು 'ವೇದ' ಎಂದು ತಪ್ಪಾಗಿ ಅನುವಾದಿಸಿದ್ದಾರೆ. ವಾಸ್ತವದಲ್ಲಿ ಬ್ರಹ್ಮಣಃ ಶಬ್ದದ ಅರ್ಥ ಗೀತೆಯ 17ನೇ ಅಧ್ಯಾಯ 23ರಲ್ಲಿ ಹೇಳಿದ್ದಾರೆ 'ಬ್ರಹ್ಮಣಃ' ಎಂದರೆ ಸಚ್ಚಿದಾನಂದ ಘನಬ್ರಹ್ಮ ಎಂದರೆ ಪೂರ್ಣ ಪರಮಾತ್ಮ ಎಂದರ್ಥ.

(ಓದುಗರಲ್ಲಿ ವಿಶೇಷವಿನಂತಿ :– ನೀವು ಗೋರಖ್‌ಪುರ್, ಗೀತಾಪ್ರೆಸ್‌ನಿಂದ ಪ್ರಕಾಶಿತಗೊಂಡ ಗೀತೆಯನ್ನು ಆಧಾರವಾಗಿಟ್ಟುಕೊಳ್ಳಿ. ವಿಶೇಷವಾಗಿ ಪದಚ್ಛೇದ, ಅನ್ವಯ, ಟಿಪ್ಪಣಿ ಸಹಿತ ಅನುವಾದಕರಾದ ಶ್ರೀ ಜಯದಯಾಲ್ ಗೋಯಂದಕಾ ಮತ್ತು ಶ್ರೀ ರಾಮ್‌ಸುಖ್‌ದಾಸ್ ಇವರಿಂದ ಅನುವಾದಿಸಲ್ಪಟ್ಟ ಗೀತೆಯ ಈ ಪುಸ್ತಕದಲ್ಲಿ ಪ್ರಮಾಣಕ್ಕಾಗಿ ನೀಡಿರುವ ಶ್ಲೋಕಗಳನ್ನು ಗಮನಿಸಿ ಪುಸ್ತಕ 'ಗೀತೆಯೇ ನಿನ್ನ ಜ್ಞಾನ ಅಮೃತ' ದಲ್ಲಿ ಎಷ್ಟು ಶ್ಲೋಕಗಳನ್ನು ತೆಗೆದುಕೊಂಡಿದ್ದೇವೆ ಅವುಗಳ ಫೋಟೋಕಾಪಿ ಈ ಪುಸ್ತಕದಲ್ಲಿ ನೋಡಿರಿ. ಹಿಂದೂ ಸಂತ ವಿದ್ವಾನ ಶ್ರೀ ಜಯದಯಾಲ್ ಗೋಯಂದಕಾ ಅವರಿಂದ ಅನುವಾದಿಸಿದ ಮತ್ತು ಗೀತಾಪ್ರೆಸ್ ಗೋರಖಪುರದಿಂದ ಪ್ರಕಾಶಿತಗೊಂಡಿದೆ)

ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾವ ಜ್ಞಾನವನ್ನು ಸ್ವತಃ ಪರಮಾತ್ಮನು ಸ್ವತಃ ತನ್ನ ಮುಖಕಮಲದಿಂದ ಹೇಳುತ್ತಾನೋ ಅದೇ ತತ್ವಜ್ಞಾನ. ಆದ್ದರಿಂದ ಅದರಲ್ಲಿ ವಿಸ್ತೃತವಾದ ಮಾಹಿತಿ ಯಜ್ಞ ಅಂದರೆ ಧಾರ್ಮಿಕ ಅನುಷ್ಠಾನದು ಎಂದು ಹೇಳಿದ್ದಾರೆ ಆ ಜ್ಞಾನವನ್ನು ನೀನು ತತ್ವದರ್ಶಿ ಸಂತರ ಬಳಿ ಹೋಗಿ ತಿಳಿದುಕೊ, ಅವರಿಗೆ ದೀರ್ಘದಂಡ ನಮಸ್ಕಾರ ಮಾಡಿ, ವಿನಯಪೂರ್ವಕವಾಗಿ ಪ್ರಶ್ನೆಗಳನ್ನು ಕೇಳಿದರೆ ತತ್ವಜ್ಞಾನವನ್ನು ತಿಳಿದ ಮಹಾತ್ಮ ನಿಮಗೆ ತತ್ವಜ್ಞಾನ ತಿಳಿಸುವರು.

ಇದರಿಂದ ಸ್ಪಷ್ಟವಾಗುವುದೇನೆಂದರೆ, ಗೀತೆಯ ಜ್ಞಾನದಾತನಿಗೆ ತತ್ವಜ್ಞಾನದ ಬಗ್ಗೆ

ತಿಳುವಳಿಕೆ ಇಲ್ಲ. ತತ್ವಜ್ಞಾನವು ಶ್ರೀ ಮದ್‌ಭಗವದ್ಗೀತೆಯಲ್ಲಿ ಇಲ್ಲ. ಹಾಗೊಂದು ವೇಳೆ ಗೀತೆಯ ಜ್ಞಾನದಾತನಿಗೆ ತತ್ವಜ್ಞಾನವಿದ್ದಿದ್ದರೆ ಅವನು ಇನ್ನೊಂದು ಅಧ್ಯಾಯವನ್ನು ಹೇಳುತ್ತಿದ್ದ.

ಮೇಲೆ ತಿಳಿಸಿರುವ ಶ್ಲೋಕಗಳಿಂದ ಸ್ಪಷ್ಟವಾಗುವುದೇನೆಂದರೆ, ಗೀತೆಯ ಜ್ಞಾನದಾತನಿಗಿಂತ ಬೇರೆಯ ಇನ್ನೊಬ್ಬ ಯಾರೋ ಸಮರ್ಥ ಅವಿನಾಶಿ, ಪೂರ್ಣ ಮೋಕ್ಷದಾತ, ಪರಮಾತ್ಮ ಎಲ್ಲರ ಧಾರಣೆ ಪೋಷಣೆ ಮಾಡುವವನು ಇದ್ದಾನೆ. ಅವನ ಆಶ್ರಯಕ್ಕೆ ಹೋದರೆ ಸನಾತನ ಪರಮಧಾಮವು ಪ್ರಾಪ್ತಿಯಾಗುವುದು ಹಾಗೂ ಪರಮಶಾಂತಿಯು ಲಭಿಸುವುದು. ಈ ಪರಮ ಪದಕ್ಕೆ ಹೋಗಿ ತಲುಪಿದ ಮೇಲೆ ಸಾಧಕನು ಎಂದಿಗೂ ಪ್ರಪಂಚಕ್ಕೆ ಮರಳಿ ಬರುವುದಿಲ್ಲ. ಅಂದರೆ ಜನನ–ಮರಣವೆಂಬ ಚಕ್ರವು ಸದಾಕಾಲಕ್ಕೆ ಕೊನೆಗೊಳ್ಳುವುದು. ಇನ್ನೂ ಮೇಲಿನ ಕೆಲವು ಶ್ಲೋಕಗಳ ಅನುವಾದ ಮಾಡಿ ಸ್ಪಷ್ಟಪಡಿಸುತ್ತೇನೆ.

ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, “ಹೇ ಭಾರತ! ನೀನು ಸರ್ವಭಾವದಿಂದ ಆ ಪರಮಾತ್ಮನಿಗೆ ಶರಣ ಹೋಗು. ಅವನ ಕೃಪೆಯಿಂದಲೇ ನೀನು ಪರಮ ಶಾಂತಿಯನ್ನು ಹಾಗೂ ಸನಾತನ ಪರಮಧಾಮವನ್ನು ಪಡೆಯುವೆ”. ಶ್ರೀ ಕೃಷ್ಣನು ತನ್ನ ಆಶ್ರಯಕ್ಕೆ ಬರಬೇಕೆಂದು ಹೇಳುತ್ತಾನೆಂದು ಹಿಂದೂ ಧರ್ಮದ ಸಂತರು, ಮಂಡಲೇಶ್ವರರು, ಧರ್ಮದ ಗುರುಗಳು ಹೇಳುತ್ತಾರೆ. ಇವರೆಲ್ಲರೂ ಹೀಗೆ ಹೇಳುವುದು ನಿಜವಾಗಿಯೂ ತಪ್ಪು. ಏಕೆಂದರೆ ಗೀತೆಯ 2ನೇ ಅಧ್ಯಾಯದ 7ನೇ ಶ್ಲೋಕದಲ್ಲಿ ಹೇಳಿರುವಂತೆ ‘ಹೇ ಶ್ರೀಕೃಷ್ಣಾ, ನಾನು (ಅರ್ಜುನ) ನಿಮ್ಮ ಆಶ್ರಯಕ್ಕೆ ಬಂದಿದ್ದೇನೆ. ನಾನು ನಿಮ್ಮ ಶಿಷ್ಯ. ನನಗೆ ಯಾವುದು ಒಳ್ಳೆಯದಾಗುವುದೋ ಅಂಥಹ ಸಲಹೆಯನ್ನು ನೀಡಿ’. ಅದೇ ರೀತಿ ಗೀತೆಯ 4ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, “ಹೇ ಅರ್ಜುನಾ ! ನೀನು ನನ್ನ ಭಕ್ತ.” ಇದರಿಂದ ತಿಳಿಯುವುದೇನೆಂದರೆ, ಅರ್ಜುನನು ಮೊದಲಿನಿಂದಲೂ ಶ್ರೀ ಕೃಷ್ಣನ ಆಶ್ರಯದಲ್ಲಿದ್ದನು. ಹಾಗಾಗಿ ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದ ಭಾವಾರ್ಥವೆನೆಂದರೆ ಗೀತೆಯ ಜ್ಞಾನದಾತ ತನ್ನನ್ನು ಬಿಟ್ಟು ಇನ್ನೊಬ್ಬ ಪರಮೇಶ್ವರನ ಆಶ್ರಯಕ್ಕೆ ಹೋಗಲು ಹೇಳುತ್ತಿರುವನು. ಇದರಿಂದ ಬೇರೊಬ್ಬ ಪರಮೇಶ್ವರನಿರುವುದು ಸಾಬೀತಾಯಿತು.

ಅನ್ಯ ಪ್ರಮಾಣ :– ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕದ ಪ್ರಶ್ನೆಗೆ ಗೀತೆಯ ಜ್ಞಾನದಾತನು 3ನೇ ಶ್ಲೋಕದಲ್ಲಿ ಉತ್ತರಿಸಿದ್ದಾನೆ. ಅವನು ಪರಮ ಅಕ್ಷರ ಬ್ರಹ್ಮನು ಎಂದು ಹೇಳಿದ್ದಾನೆ. ನಂತರ 8ನೇ ಅಧ್ಯಾಯದ 5 ಮತ್ತು 7ನೇ ಶ್ಲೋಕದಲ್ಲಿ ತನ್ನನ್ನು ಆರಾಧಿಸುವಂತೆ ಹೇಳಿದ್ದಾನೆ. ನಂತರ 8, 9, 10ನೇ ಶ್ಲೋಕದಲ್ಲಿ ಪರಮ ಅಕ್ಷರ ಬ್ರಹ್ಮನ ಆರಾಧನೆಯನ್ನು ಮಾಡಲು ತಿಳಿಸಿದ್ದಾನೆ. ಗೀತೆಯ 4ನೇ ಅದ್ಯಾಯದ 5ನೇ ಶ್ಲೋಕದಲ್ಲಿ, 2ನೇ ಅಧ್ಯಾಯದ 12ನೇ ಶ್ಲೋಕದಲ್ಲಿ ಮತ್ತು 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನ್ನ ಸ್ಥಿತಿ ಸ್ಪಷ್ಟಪಡಿಸಿರುವುದೇನೆಂದರೆ, “ನನ್ನನ್ನು ಪೂಜಿಸಿದರೆ ಜನನ–ಮರಣ ನನ್ನದು ಹಾಗೂ ನಿನ್ನದು ಸದಾ ಇರುವುದು”. ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ತತ್ವದರ್ಶಿ ಸಂತನ ಬಗ್ಗೆ ಹೇಳಲಾಗಿದೆ. ಯಾವ ವ್ಯಕ್ತಿಯು ಪ್ರಪಂಚವೆಂಬ ವೃಕ್ಷದ ಬೇರಿನಿಂದ ಹಿಡಿದು ಎಲ್ಲಾ ಭಾಗಗಳನ್ನು ತಿಳಿದಿರುತ್ತಾನೋ (ಸವೇದವಿತ್) ಅವನು ವೇದದ ತಾತ್ಪರ್ಯವನ್ನು ತಿಳಿದಿರುತ್ತಾನೆ. ಅಂದರೆ ಅವನೇ ತತ್ವದರ್ಶಿ ಸಂತನು. ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವಂತೆ ತತ್ವದರ್ಶಿ ಸಂತನು ಸಿಕ್ಕ ನಂತರ ಪರಮೇಶ್ವರನ ಪರಮಧಾಮದ ಅನ್ವೇಷಣೆಯನ್ನು ಮಾಡಬೇಕು. ಏಕೆಂದರೆ ಸಾಧಕನು ಅಲ್ಲಿಗೆ ಹೋದ ನಂತರ ಸಾಧಕ ಮತ್ತೆ ಮರಳಿ ಪ್ರಪಂಚದಲ್ಲಿ ಎಂದಿಗೂ ಜನನ–ಮರಣದ ಚಕ್ರದಲ್ಲಿ ಸಿಲುಕುವುದಿಲ್ಲ. ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಇರುವ ವರ್ಣನೆ ಏನೆಂದರೆ, ‘ಅರ್ಜುನಾ, ನೀನು ಸರ್ವಭಾವದಿಂದ ಆ ಪರಮೇಶ್ವರನಿಗೆ ಶರಣಾಗು. ಅವನ ಕೃಪೆಯಿಂದಲೇ ನೀನು ಪರಮಶಾಂತಿ

ಹಾಗೂ ಸನಾತನ ಪರಮಧಾಮವನ್ನು ಪಡೆಯುವೆ". ಇದೇ ಪರಮಶಾಂತಿ. ಏಕೆಂದರೆ ಸಾಧಕನು ಪುನಃ ಜನ್ಮ ತಾಳುವುದಿಲ್ಲ. ಶಾಶ್ವತವಾಗಿ ಅವನು ಅಮರಲೋಕದಲ್ಲಿ (ಸನಾತನ ಪರಮಧಾಮದಲ್ಲಿ) ವಾಸಿಸುತ್ತಾನೆ. ಅಲ್ಲಿ ಕರ್ಮರಹಿತವಾದ ಮೋಕ್ಷವು ಪ್ರಾಪ್ತಿಯಾಗುತ್ತದೆ. ಇದರ ಭಾವಾರ್ಥವೇನೆಂದರೆ, ಸತ್ಯ ಲೋಕದಲ್ಲಿ (ಸನಾತನ ಪರಮಧಾಮ) ಯಾವುದೇ ಕರ್ಮ ಮಾಡದಿದ್ದರೂ ಎಲ್ಲಾ ಸೌಲಭ್ಯಗಳು ಮತ್ತು ಪದಾರ್ಥಗಳು ಲಭ್ಯವಾಗುತ್ತವೆ. ಹಾಗೂ ನಮ್ಮ ಪುಣ್ಯವು ಎಂದಿಗೂ ಕಡಿಮೆಯಾಗುವುದಿಲ್ಲ. ಆದರೆ ಬ್ರಹ್ಮಾ, ವಿಷ್ಣು, ಶಿವ, ಗಣೇಶ, ದುರ್ಗೆ, ಬ್ರಹ್ಮ, ಪರಬ್ರಹ್ಮನನ್ನು ಆರಾಧಿಸಿದರೆ ಕರ್ಮರಹಿತವಾದ ಮೋಕ್ಷವೇನೋ ಪ್ರಾಪ್ತಿಯಾಗುತ್ತದೆ. ಆದರೆ ಅದು ಸ್ವಲ್ಪ ಸಮಯದವರೆಗೆ ಮಾತ್ರ ಇರುತ್ತದೆ. ಪ್ರತಿಯೊಬ್ಬ ದೇವತೆಯ ಲೋಕದಲ್ಲಿ ಇರುವ ಸ್ವರ್ಗದಲ್ಲಿ ಪ್ರಾಪ್ತಿಯಾಗುತ್ತದೆ. ಅಲ್ಲಿ ಅವನ ಪುಣ್ಯಕ್ಕೆ ತಕ್ಕ ಪ್ರತಿಫಲ ಮಾತ್ರ ಪ್ರಾಪ್ತವಾಗುತ್ತದೆ. ಪುಣ್ಯವು ಮುಗಿದ ನಂತರ ಪುನರ್ಜನ್ಮ ಮತ್ತು ಮೃತ್ಯುವಿನ ಚಕ್ರ ಮತ್ತೆ ಪ್ರಾರಂಭವಾಗುತ್ತದೆ (ನೈಷ್ಕರ್ಮ್ಯ, ಮುಕ್ತಿಯ ವರ್ಣನೆಯು ಗೀತೆಯ 3ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹಾಗೂ 18ನೇ ಅಧ್ಯಾಯದ 49ನೇ ಶ್ಲೋಕದಲ್ಲಿದೆ).

ಯಾವ ಸನಾತನ ಪರಮಧಾಮ ಹಾಗೂ ಶಾಂತಿಯ ಪ್ರಾಪ್ತಿಗಾಗಿ ಮತ್ತು ಯಾವ ಪರಮೇಶ್ವರನಿಗೆ ಶರಣಾಗಲು ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕ ಹಾಗೂ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಲಾಗಿದೆ ಆ ಪರಮಾತ್ಮನು ಗೀತೆಯ ಜ್ಞಾನ ನೀಡಿದವನಿಗಿಂತ ಭಿನ್ನನು. ಗೀತೆಯ 8ನೇ ಅಧ್ಯಾಯ 5 ಮತ್ತು 7ನೇ ಶ್ಲೋಕದಲ್ಲಿ ಗೀತಾ ಜ್ಞಾನದಾತನು ತನ್ನನ್ನು ಆರಾಧಿಸಲು ಹೇಳಿದ್ದಾನೆ ಅದರಿಂದ ಇಬ್ಬರದೂ ಜನನ – ಮರಣ ಇದ್ದೆ ಇರುವುದು. ಆದ್ದರಿಂದ ಗೀತೆಯ 8ನೇ ಅಧ್ಯಾಯದ 8, 9, 10ನೇ ಶ್ಲೋಕದಲ್ಲಿ ಆ ಪರಮೇಶ್ವರನನ್ನು ಆರಾಧಿಸುವಂತೆ ಹೇಳಲಾಗಿದೆ. ಅದರ ವರ್ಣನೆಯು ಗೀತೆಯ 18ನೇ ಅಧ್ಯಾಯ 62 ಶ್ಲೋಕ ಮತ್ತು 15ನೇ ಅಧ್ಯಾಯ 4ನೇ ಶ್ಲೋಕದಲ್ಲಿದೆ ನಂತರ ಗೀತೆಯ ಅಧ್ಯಾಯ 8ರ 18ನೇ ಶ್ಲೋಕದಲ್ಲಿ ಹೇಳಲಾಗಿದೆ (ಗೀತೆಯ 15ನೇ ಅಧ್ಯಾಯದ 16, 17ನೇ ಶ್ಲೋಕದಲ್ಲಿ ಮೂವರು ಪುರುಷರ ಬಗ್ಗೆ ಹೇಳಲಾಗಿದೆ:–

1. ಕ್ಷರ ಪುರುಷ:– ಇವನು ಸ್ವಯಂ ಗೀತೆಯ ಜ್ಞಾನದಾತನು. ಇವನನ್ನು ಕ್ಷರಬ್ರಹ್ಮನೆಂದು ಕರೆಯುತ್ತಾರೆ. ಇವನು ಕೇವಲ 21 ಬ್ರಹ್ಮಾಂಡಗಳ ಪ್ರಭುವಾಗಿದ್ದಾನೆ.

2. ಅಕ್ಷರ ಪುರುಷ:– ಇವನನ್ನು ಪರಬ್ರಹ್ಮನೆಂದು ಕರೆಯುತ್ತಾರೆ. ಇವನು ಕೇವಲ 7 ಶಂಖ ಬ್ರಹ್ಮಾಂಡಗಳ ಪ್ರಭುವಾಗಿದ್ದಾನೆ.

3. ಪರಮ ಅಕ್ಷರ ಪುರುಷನು:– ಇವನನ್ನು ಪರಮ ಅಕ್ಷರಬ್ರಹ್ಮ, ಪರಮೇಶ್ವರ, ಸತ್ಯಪುರುಷ ಅವಿನಾಶಿ ಪರಮಾತ್ಮ ಎಂದೂ ಕರೆಯುತ್ತಾರೆ. ಇವನು ಅಸಂಖ್ಯ ಬ್ರಹ್ಮಾಂಡಗಳ ಪ್ರಭುವಾಗಿದ್ದಾನೆ. ಇಲ್ಲಿ ಗೀತೆಯ 8ನೇ ಅಧ್ಯಾಯದ 8, 9, 10, 20 ಹಾಗೂ 22 ಶ್ಲೋಕದಲ್ಲಿ ಪರಮ ಅಕ್ಷರ ಪುರುಷನ ಬಗ್ಗೆ ವರ್ಣನೆಯಿದೆ ಅಧ್ಯಾಯ 8 ಶ್ಲೋಕ 18ರಲ್ಲಿ ಅಕ್ಷರ ಪುರುಷನ ಬಗ್ಗೆ ವರ್ಣನೆ ಇದೆ.)

ಯಾವಾಗ ಅಕ್ಷರ ಪುರುಷನ ಒಂದು ದಿನವು ಪೂರ್ತಿಯಾಗುವುದೋ ಅದು ಒಂದು ಸಾವಿರ ಯುಗಗಳದ್ದಾಗಿರುತ್ತದೆ. ಗೀತೆಯ 8ನೇ ಅಧ್ಯಾಯದ 17ನೇ ಶ್ಲೋಕದ ಮೂಲ ಪಾಠದಲ್ಲಿ ಕೇವಲ ಸಹಸ್ರಯುಗ ಎಂದು ಬರೆಯಲಾಗಿದೆ, ಸಹಸ್ರ ಚತುರ್ಯುಗ ಅಲ್ಲ. ಆದ್ದರಿಂದ ಅಕ್ಷರ ಪುರುಷನ ಒಂದು ದಿನವು ಮುಗಿದಾಗ ಎಲ್ಲಾ ಜೀವಿಗಳು ಕ್ಷರ ಪುರುಷ ಮತ್ತು ಅಕ್ಷರ ಪುರುಷನ ಕೆಲವು ಕ್ಷೇತ್ರಗಳ ಜೀವಿಗಳು ನಾಶವಾಗುತ್ತವೆ. ಕ್ಷರ ಪುರುಷ ಮತ್ತು ಇವನ 21 ಬ್ರಹ್ಮಾಂಡದಲ್ಲಿನ ಎಲ್ಲಾ ಜೀವಿಗಳು ನಾಶವಾಗುತ್ತವೆ. ದಿನವು ಪ್ರಾರಂಭವಾದಾಗ ಎಲ್ಲ ಜೀವಿಗಳು ತಮ್ಮ-ತಮ್ಮ ಕರ್ಮಾನುಸಾರ ಹುಟ್ಟುತ್ತವೆ ಮತ್ತು ಸಾಯುತ್ತವೆ. ನಂತರ ಗೀತೆಯ 8ನೇ ಅಧ್ಯಾಯದ 20ನೇ

ಶ್ಲೋಕದಲ್ಲಿ ಅವ್ಯಕ್ತ ಅಂದರೆ ಅಕ್ಷರ ಪುರುಷನಿಗಿಂತ ಭಿನ್ನವಾಗಿರುವ ಸನಾತನ ಅವ್ಯಕ್ತ ಭಾವ. ಅರ್ಥಾತ್ ಪರಮ ಅಕ್ಷರ ಬ್ರಹ್ಮನಿದ್ದಾನೆ. ಆ ಪರಮೇಶ್ವರನು ಎಲ್ಲಾ ಜೀವಿಗಳು ನಾಶವಾದರೂ ಸಹ ಅವನು ನಾಶವಾಗುವುದಿಲ್ಲ ನಂತರ ಗೀತೆಯ 8ನೇ ಅಧ್ಯಾಯ 21ನೇ ಶ್ಲೋಕದಲ್ಲಿ ಹೇಳಲಾಗಿದೆ ಅವನಿಗೆ ಅವಿನಾಶಿ ಅವ್ಯಕ್ತ ಎನ್ನುವರು, ಅವನನ್ನೇ ಅವಿನಾಶಿ ಪರಮೇಶ್ವರ ಎಂದು ಕರೆಯಲಾಗಿದೆ. ಆ ಧಾಮವನ್ನು ಪಡೆದಾಗ ಪರಮಶಾಂತಿಯು ಪ್ರಾಪ್ತಿಯಾಗುತ್ತದೆ. ಅದನ್ನು ಪ್ರಾಪ್ತಿ ಮಾಡಿದ ನಂತರ ಸಾಧಕನು ಮತ್ತೆ ಮರಳಿ ಬರುವುದಿಲ್ಲ ಇದರ ಬಗ್ಗೆ ಗೀತೆಯ ಅಧ್ಯಾಯ 18 ಶ್ಲೋಕ 62ರಲ್ಲಿ ಮತ್ತು ಅಧ್ಯಾಯ 15 ಶ್ಲೋಕ 4ರಲ್ಲಿ ಹೇಳಲಾಗಿದೆ. ಗೀತೆಯ ಜ್ಞಾನದಾತನು ಹೀಗೆಂದಿದ್ದಾನೆ, "ಆ ಧಾಮವು ನನ್ನ ಧಾಮಕ್ಕಿಂತ ಶ್ರೇಷ್ಠವಾಗಿದೆ. ಆದ್ದರಿಂದ ಅದನ್ನು ಸನಾತನ ಪರಮಧಾಮವೆಂದು ಕರೆಯಲಾಗಿದೆ.

(ಟಿಪ್ಪಣಿ):- ಗೀತೆಯ 8ನೇ ಅಧ್ಯಾಯದ 21ನೇ ಶ್ಲೋಕದ ಅನುವಾದ ತಪ್ಪಾಗಿದೆ. ಅದರಲ್ಲಿ ಹೀಗೆಂದು ಬರೆದಿದ್ದಾರೆ. ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಇದು ನನ್ನ ಪರಮಧಾಮ. ವಾಸ್ತವವಾಗಿ ಮೂಲ ಪಾಠದಲ್ಲಿ 'ತತ್‌ಧಾಮ್ ಪರಮಂ ಮಮ' ಎಂದು ಬರೆಯಲಾಗಿದೆ. ಇದರಲ್ಲಿ 'ಮಮ' ಶಬ್ದದಲ್ಲಿ ಕೊನೆಯಲ್ಲಿ 'ಮ್' ಇಲ್ಲ. ಪ್ರಮಾಣಕ್ಕಾಗಿ ಗೀತೆಯ 3ನೇ ಅಧ್ಯಾಯ 23ನೇ ಶ್ಲೋಕದಲ್ಲಿ ಅನುವಾದಕರು 'ಮಮ' ಎಂದರೆ ನನ್ನ ಎಂದು ಅನುವಾದಿಸಿದ್ದಾರೆ. ಅದೇ ರೀತಿ ಈ ಗೀತೆಯ 8ನೇ ಅಧ್ಯಾಯದ 21ನೇ ಶ್ಲೋಕದಲ್ಲಿ 'ಮಮ' ಎಂದರೆ 'ನನಗಿಂತ ಪರಮ ಧಾಮ' ಎಂದರ್ಥ. ಅದು ಸರಿಯಾಗಿದೆ. ನಂತರ ಗೀತೆಯ 8ನೇ ಅಧ್ಯಾಯದ 22ನೇ ಶ್ಲೋಕದಲ್ಲಿ ಸ್ಪಷ್ಟಪಡಿಸಿರುವುದೇನೆಂದರೆ, ಪುರುಷಃ ಸಃ ಪರಃ = (ಸಃ) ಅವನು (ಪರಃ) ಬೇರೆಯ (ಪುರುಷಃ) ಪರಮೇಶ್ವರನು, ಅನನ್ಯವಾಗಿ ಆರಾಧಿಸುವವರಿಗೆ ಸಿಗಲು ಯೋಗ್ಯನಾದವನು. ಅವನ ಅಧೀನದಲ್ಲಿ ಎಲ್ಲಾ ಜೀವಿಗಳು ಬರುತ್ತಾರೆ. ಪ್ರಪಂಚದ ಸೃಷ್ಟಿಯನ್ನು ಮಾಡಿದವನು ಇವನೇ. ಗೀತೆಯ 8ನೇ ಅಧ್ಯಾಯದ 20 ರಿಂದ 22 ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನಿಗಿಂತ ಬೇರೆ ಪರಮ ಪುರುಷನ ವರ್ಣನೆಯನ್ನು ಮಾಡಿದ್ದಾನೆ. ಆದ್ದರಿಂದ ಅವನು ಆ ಧಾಮವನ್ನು ತನ್ನದೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ತನ್ನ ಲೋಕಕ್ಕಿಂತ ಶ್ರೇಷ್ಠವಾದ ಲೋಕ ಆ ಪರಮೇಶ್ವರನದ್ದು ಎಂದು ಹೇಳಿದ್ದಾನೆ. ಇದೇ ಸರಿಯಾದ ಅರ್ಥ.

ಯೋಚಿಸಿ:- ಗೀತೆಯ 8 ನೇ ಅಧ್ಯಾಯದ 20 ನೇ ಶ್ಲೋಕದಲ್ಲಿ 'ಪರಃ' ಶಬ್ದದ ಅರ್ಥವನ್ನು 'ಬೇರೆ' ಎಂದು ಅರ್ಥೈಸಿದ್ದಾರೆ. ಅಂದರೆ ಅವ್ಯಕ್ತನಿಂದ (ಪರಃ) = ಬೇರೆ ಅಂದರೆ ಬೇರೆಯ ಸನಾತನ ಅವ್ಯಕ್ತ ಭಾವ ಇರುವ ಪರಮೇಶ್ವರನು. ಇದೇ ರೀತಿ ಗೀತೆಯ 8ನೇ ಅಧ್ಯಾಯದ 22ನೇ ಶ್ಲೋಕದಲ್ಲಿ (ಸಃ) ಅವನು (ಪರಃ) ಬೇರೆಯವನು ಅಂದರೆ ಬೇರೆಯ (ಪುರುಷಃ) ಪರಮೇಶ್ವರನು. ಅವನ ಪ್ರಾಪ್ತಿ ಅನನ್ಯ ಭಕ್ತಿಯಿಂದಲೇ ಸಂಭವ.

ಇದರ ಅನ್ಯ ಪ್ರಮಾಣಗಳು:- ಗೀತೆಯ 7ನೇ ಅಧ್ಯಾಯದ 12ರಿಂದ 15ನೇ ಶ್ಲೋಕದಲ್ಲಿ 3 ಗುಣಗಳ (ರಜೋಗುಣ ಬ್ರಹ್ಮಾ, ಸತಗುಣ ವಿಷ್ಣು, ತಮೋಗುವಣ ಶಂಕರ ಇವರ) ಭಕ್ತಿಮಾಡುವವರಿಗೆ ರಾಕ್ಷಸ ಸ್ವಭಾವವನ್ನು ಹೊಂದಿರುವಂಥಹ ಮನುಷ್ಯರಲ್ಲಿಯೇ ನೀಚರು, ಕೆಟ್ಟ ಕರ್ಮವನ್ನು ಮಾಡುವ ಮೂರ್ಖರು ಎಂದು ಹೇಳಲಾಗಿದೆ. ಗೀತೆಯ ಜ್ಞಾನವನ್ನು ನೀಡಿದಾತನು ಹೇಳಿದನು ಇವರು ನನ್ನನ್ನು ಕೂಡಾ ಆರಾಧಿಸುವುದಿಲ್ಲ. ಗೀತೆಯ 7ನೇ ಅಧ್ಯಾಯದ 16ರಿಂದ 18ನೇ ಶ್ಲೋಕದಲ್ಲಿ ತನ್ನ ಭಕ್ತಿಯ ವಿಷಯದಲ್ಲಿ ಹೀಗೆಂದಿದ್ದಾನೆ, "ನನ್ನ ಭಕ್ತಿಯಿಂದ ಸಿಗುವ ಮುಕ್ತಿಯು ಕೀಳಮಟ್ಟದ್ದಾಗಿದೆ". ಗೀತೆಯ ಅಧ್ಯಾಯ 7 ಶ್ಲೋಕ 19 ರಲ್ಲಿ ಹೇಳಲಾಗಿದೆ ಹಲವಾರು ಜನ್ಮಗಳ ಅನಂತರ ಯಾವುದೋ ಒಂದು ಜನ್ಮದಲ್ಲಿ ನನ್ನನ್ನು ಆರಾಧಿಸುತ್ತಾರೆ ಇಲ್ಲದಿದ್ದರೆ ಬೇರೆ ದೇವತೆಗಳನ್ನು ಹಾಗೂ ಭೂತ ಪ್ರೇತಗಳನ್ನು ಪೂಜಿಸುತ್ತಿರುತ್ತಾರೆ. ಆದರೆ ವಾಸುದೇವ ಅರ್ಥಾತ್ ಯಾರ ವಾಸವು ಅರ್ಥಾತ್ ಯಾರ ಅಧಿಕಾರವು ಎಲ್ಲರ ಮೇಲೆಯೂ ಇದೆಯೋ ಅವನೇ

ಪೂರ್ಣ ಪರಮಾತ್ಮ, ಅವನೇ ಎಲ್ಲವೂ, ಅವನೇ ಪೂಜೆಗೆ ಯೋಗ್ಯ. ಅವನ ಭಕ್ತಿಯಿಂದಲೇ ಪೂರ್ಣ ಮೋಕ್ಷವು ಪ್ರಾಪ್ತಿಯಾಗುವುದು, ಅವನೇ ಸೃಷ್ಟಿಕರ್ತ, ಅವನೇ ಎಲ್ಲರ ಪಾಲನೆ-ಪೋಷಣೆ ಮಾಡುವವನು ಎಂದು ತಿಳಿಸುವ ಸಂತರು ಬಹಳ ವಿರಳ. ನಂತರ ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೀಗೆಂದಿದ್ದಾನೆ, "ಯಾವ ಸಾಧಕರು ನನ್ನ ಜ್ಞಾನವನ್ನು ಆಧಾರವಾಗಿಟ್ಟುಕೊಂಡು ತತ್ವದರ್ಶಿ ಸಂತನಿಂದ ಜ್ಞಾನವನ್ನು ಪಡೆದು ಭಕ್ತಿ ಮಾಡುತ್ತಾ ಕೇವಲ ಜರಾ(ವೃದ್ಧಾಪ್ಯದ ದುಃಖದಿಂದ) ಮತ್ತು ಮರಣ (ಮೃತ್ಯುವಿನ ದುಃಖದಿಂದ) ಪಾರಾಗಲು ಪ್ರಯತ್ನಿಸುತ್ತಾರೋ ಅವರು ಪ್ರಪಂಚದ ಎಲ್ಲ ವಸ್ತುಗಳನ್ನು ನಶ್ವರ ಎಂದು ಭಾವಿಸಿ ಅವುಗಳನ್ನು ಇಚ್ಛಿಸದೆ ಕೇವಲ ಮೋಕ್ಷದ ಉದ್ದೇಶದಿಂದ ಭಕ್ತಿ ಮಾಡುತ್ತಾರೆ. ಅವರು (ತತ್ ಬ್ರಹ್ಮ) ಆ ಬ್ರಹ್ಮನನ್ನು (ವಿದು) ಅರಿತಿರುತ್ತಾರೆ, ಎಲ್ಲಾ ಕರ್ಮಗಳನ್ನು ತಿಳಿದಿರುವವರು, ಎಲ್ಲಾ ಆಧ್ಯಾತ್ಮ ಜ್ಞಾನವನ್ನು ತಿಳಿದಿರುತ್ತಾರೆ. (ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕ).

ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಅರ್ಜುನನು ಹೀಗೆಂದು ಪ್ರಶ್ನಿಸಿದ್ದಾನೆ, "ಹೇ ಭಗವಂತ ! (ಕಿಮ್ ತತ್ ಬ್ರಹ್ಮ) ಆ ಬ್ರಹ್ಮನು ಯಾರು? ಅವನನ್ನು ತಿಳಿಯುವುದರಿಂದ ಸಾಧಕನು ಕೇವಲ ಮೋಕ್ಷ ಮಾತ್ರ ಬಯಸುತ್ತಾನೆ. ಇದರ ಉತ್ತರವನ್ನು ಗೀತೆಯ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತಿಳಿಸಿದ್ದಾನೆ. ಅವನು ಪರಮ ಅಕ್ಷರ ಬ್ರಹ್ಮನೆಂದು ತಿಳಿಸಿದ್ದಾನೆ. ಗೀತೆಯ ಜ್ಞಾನದಾತನು ಈ ಪರಮ ಅಕ್ಷರ ಬ್ರಹ್ಮನ ವಿವರಣೆಯನ್ನು ಗೀತೆಯ 8ನೇ ಅಧ್ಯಾಯ 8, 9, 10, 20, 21, 22ನೇ ಶ್ಲೋಕದಲ್ಲೂ ಕೊಟ್ಟಿದ್ದಾನೆ ಅವನು ಗೀತೆಯ ಜ್ಞಾನದಾತನಿಗಿಂತ ಬೇರೆಯವನು. ಗೀತೆಯ ಜ್ಞಾನದಾತನು ಗೀತೆಯ 2ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೀಗೆಂದಿದ್ದಾನೆ, 'ಯಾವ ಪರಮೇಶ್ವರನು ಸಂಪೂರ್ಣ ಪ್ರಪಂಚವನ್ನು ಸೃಷ್ಟಿಸಿದ್ದಾನೋ, ಯಾರಿಂದ ಈ ಜಗತ್ತು ವ್ಯಾಪಿಸಿದೆಯೋ (ಅಂದರೆ ಯಾರ ಶಕ್ತಿಯಿಂದ ಎಲ್ಲಾ ಬ್ರಹ್ಮಾಂಡಗಳು ನಿಂತಿವೆಯೋ) ಅವನೇ ವಾಸ್ತವದಲ್ಲಿ ಅವಿನಾಶಿ ಪರಮಾತ್ಮನು. ಯಾರೂ ಅವನನ್ನು ನಾಶ ಮಾಡಲಾರರು. ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೀಗೆ ಹೇಳಲಾಗಿದೆ. ಬೇರೆ ಒಬ್ಬ ಪುರುಷೋತ್ತಮನಿದ್ದಾನೆ (ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಇಬ್ಬರು ಪುರುಷರ ಬಗ್ಗೆ ಹೇಳಲಾಗಿದೆ. ಕ್ಷರಪುರುಷ ಮತ್ತು ಅಕ್ಷರಪುರುಷ. ಇವರಿಬ್ಬರಿಗಿಂತ ಬೇರೊಬ್ಬ ಉತ್ತಮ ಪುರುಷನಿದ್ದಾನೆ. ಅವನೇ ಶ್ರೇಷ್ಠ ಪರಮೇಶ್ವರ) ಅವನು 3 ಲೋಕಗಳಲ್ಲಿ ಪ್ರವೇಶ ಮಾಡಿ ಎಲ್ಲರ ಪಾಲನೆ ಪೋಷಣೆ ಮಾಡುತ್ತಾನೆ. ಅವನನ್ನು ಪರಮಾತ್ಮ ಎಂದು ಕರೆಯುತ್ತಾರೆ ಅವನೇ ವಾಸ್ತವದಲ್ಲಿ ಅವಿನಾಶಿ ಪರಮಾತ್ಮನು (ಗೀತೆಯ 15ನೇ ಅಧ್ಯಾಯ 17 ಶ್ಲೋಕ)

ಗೀತೆಯ 2ನೇ ಅಧ್ಯಾಯ 59 ಶ್ಲೋಕದಲ್ಲಿ ಗೀತಾ ಜ್ಞಾನದಾತನು ತನಗಿಂತ ಬೇರೆ ಪರಮಾತ್ಮನ ಬಗ್ಗೆ ಹೇಳಿದ್ದಾನೆ. ಪ್ರಸಂಗ ಗೀತೆಯ 2ನೇ ಅಧ್ಯಾಯದ 53ನೇ ಶ್ಲೋಕದಲ್ಲಿ ಹೀಗೆಂದು ಹೇಳಲಾಗಿದೆ. ಹೇ ಅರ್ಜುನಾ! ಯಾವಾಗ ಭ್ರಮೆಗೆ ಒಳಗಾಗುವಂತಹ ಭಿನ್ನ ಭಿನ್ನವಾದ ಜ್ಞಾನದ ಮಾತುಗಳಿಂದ ವಿಚಲಿತವಾದ ನಿನ್ನ ಬುದ್ಧಿಯು ಯಾವಾಗ ಪರಮಾತ್ಮನಲ್ಲಿ ಅಚಲವಾಗಿ ಅಂದರೆ ಸ್ಥಿರವಾಗಿ ನಿಲ್ಲುವುದೋ ಆಗ ನಿನಗೆ ಯೋಗವು ಪ್ರಾಪ್ತಿಯಾಗುವುದು. (ಗೀತೆಯ ಅಧ್ಯಾಯ 2 ಶ್ಲೋಕ 53) ನಂತರ ಗೀತೆಯ 2ನೇ ಅಧ್ಯಾಯದ 59ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಕೆಲವರು ನಿರಾಹಾರರಾಗಿ (ಊಟವನ್ನು ಬಿಟ್ಟು) ಕೇವಲ ಹಾಲು-ಹಣ್ಣು ತಿಂದು ಇರುತ್ತಾರೋ, ಅವರು ಕೊಂಚ ಸಮಯದವರೆಗೆ ವಿಕಾರಗಳಿಂದ ನಿವೃತ್ತರಾಗುತ್ತಾರೆ. ಆದರೆ ಜಗತ್ತಿನ ವಸ್ತುಗಳ ಆಸಕ್ತಿಯಿಂದ ನಿವೃತ್ತರಾಗಲಾರರು. ಶಸ್ತ್ರಾನುಸಾರ ಸಾಧನೆ ಮಾಡುವುದರಿಂದ ಆ ಅನ್ಯ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ, ಅದರಿಂದ ವಿಷಯ-ವಿಕಾರ ಹಾಗೂ ಆಸಕ್ತಿ ಕೂಡಾ ಸಮಾಪ್ತವಾಗುವುದು.

ಗೀತೆಯ 2ನೇ ಅಧ್ಯಾಯದ 59ನೇ ಶ್ಲೋಕದ ಮೂಲ ಪಾಠದಲ್ಲಿ 'ಪರಂ' ಶಬ್ದದ ಅರ್ಥ

'ಬೇರೆ' ಎಂದು ಆಗುತ್ತದೆ. ಉದಾಹರಣೆಗೆ ಗೀತೆಯ 7ನೇ ಅಧ್ಯಾಯದ 13ನೇ ಶ್ಲೋಕದ ಮೂಲ ಪಾಠದಲ್ಲಿ ಇದೆ 'ಪರಂ' ಶಬ್ದವಿದೆ. ಇಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, '3 ಗುಣಗಳ (ರಜೋಗುಣ ಬ್ರಹ್ಮಾ, ಸತಗುಣ ವಿಷ್ಣು, ತಮೋಗುಣ ಶಿವ) ಇವರ ಭಾವದಿಂದ ಇಡೀ ಪ್ರಪಂಚವು ಮೋಹಕ್ಕೊಳಗಾಗಿದೆ. ಇವರಿಗಿಂತ ಭಿನ್ನವಾದ ನನ್ನನ್ನು ಯಾರೂ ಅರಿತಿಲ್ಲ'. (ಗೀತಾ ಅಧ್ಯಾಯ 7 ಶ್ಲೋಕ 13) ಇದರಲ್ಲಿ ಪರಮ್ = ಬೇರೆ ಎಂದು ಅರ್ಥವಾಗಿದೆ ಇದೇ ರೀತಿ ಗೀತೆಯ 2ನೇ ಅಧ್ಯಾಯದ 59ನೇ ಶ್ಲೋಕದಲ್ಲೂ ಸಹ 'ಪರಮ್' ಎಂದರೆ 'ಬೇರೆ' ಎಂದು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಗೀತೆಯ 11ನೇ ಅಧ್ಯಾಯ 55ನೇ ಶ್ಲೋಕ ಮತ್ತು ಗೀತೆಯ 12ನೇ ಅಧ್ಯಾಯ 1 ರಿಂದ 6ರ ಶ್ಲೋಕದಲ್ಲಿ ಆಧಾರವಿದೆ. ಗೀತೆಯ 11ನೇ ಅಧ್ಯಾಯದ 55ನೇ ಶ್ಲೋಕದಲ್ಲಿ ಒಂದು ಸಂಕೇತವಿದೆ. (ಮತ್ ಕರ್ಮಕೃತ್) = ಶಾಸ್ತ್ರಕ್ಕೆ ಅನುಗುಣವಾದ ಭಕ್ತಿ ಕರ್ಮವನ್ನು ನನಗಾಗಿ ಮಾಡುತ್ತಾ, (ಮತ್ ಪರಮ್) ನನಗಿಂತ ಶ್ರೇಷ್ಠನಾದ ಪರಮಾತ್ಮನಿಗಾಗಿ ಮಾಡುತ್ತಾ (ಮತ್ ಭಕ್ತ್) ಇರುವ ನನ್ನ ಭಕ್ತನು ನನ್ನನ್ನೇ ಪ್ರಾಪ್ತಿಸುತ್ತಾನೆ. ಎಲ್ಲಿಯವರೆಗೆ ತತ್ವದರ್ಶಿ ಸಂತ ಸಿಗುವುದಿಲ್ಲವೋ ಅಲ್ಲಿಯವರೆಗೆ ವೇದಗಳ ಅನುಸಾರವಾದ ಜ್ಞಾನದಿಂದ 'ಓಂ' ನಾಮಜಪವನ್ನು ಪೂರ್ಣ ಪರಮಾತ್ಮನದ್ದು ಎಂದು ತಿಳಿದು ಮಾಡುತ್ತಿರುತ್ತಾರೆ. ಇದರಿಂದ ಬ್ರಹ್ಮಲೋಕಕ್ಕೆ ಹೊರಟು ಹೋಗುತ್ತಾರೆ. ಆದ್ದರಿಂದ ನನ್ನ ಭಕ್ತರು ನನಗಿಂತ ಬೇರೆ ಪೂರ್ಣ ಪರಮಾತ್ಮನನ್ನು ಆರಾಧಿಸಿದರೂ ನನ್ನನ್ನೇ ಪ್ರಾಪ್ತಿಸುತ್ತಾರೆ ಎಂದು ಹೇಳಲಾಗಿದೆ. (ಗೀತೆ 11ನೇ ಅಧ್ಯಾಯದ 55ನೇ ಶ್ಲೋಕ)

ನಂತರ ಗೀತೆಯ 12ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿರುವುದೇನೆಂದರೆ ಅರ್ಜುನನು, "ಯಾವ ಭಕ್ತನು ಪೂರ್ವೋಕ್ತ ಪ್ರಕಾರವಾಗಿ (ಗೀತೆಯ ಅಧ್ಯಾಯ 11 ಶ್ಲೋಕ 55 ರಲ್ಲಿ) ಯಾವ (ತ್ವಂ) ನಿಮ್ಮನ್ನು ಹಾಗೂ ಯಾವ (ಅವ್ಯಕ್ತಂ ಅಕ್ಷರಂ) ಅವಿನಾಶಿ ಅವ್ಯಕ್ತ (ಯಾರ ವರ್ಣನೆಯು ಗೀತೆಯ 8ನೇ ಅಧ್ಯಾಯದ 20 ರಿಂದ 22ನೇ ಶ್ಲೋಕದಲ್ಲಿದೆ) ನನ್ನು ಭಜಿಸುತ್ತಾರೋ ಅವರಲ್ಲಿ ಉತ್ತಮವಾದ ಭಕ್ತಿಯುಳ್ಳ ಭಕ್ತರು ಯಾರು ಎಂದು ಪ್ರಶ್ನಿಸಿದ್ದಾನೆ. (ಗೀತಾ 12ನೇ ಅಧ್ಯಾಯದ 1ನೇ ಶ್ಲೋಕ)

ಗೀತೆಯ 12ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೀಗೆಂದಿದ್ದಾನೆ, "ಯಾವ ಭಕ್ತನು ಕೇವಲ ನನ್ನ ಧ್ಯಾನದಲ್ಲಿ ತೊಡಗಿದ್ದಾನೋ ಅವನು (ಯುಕ್ತತಮಃ ಮತಾಃ) ನನ್ನ ದೃಷ್ಟಿಯಲ್ಲಿ ನಿಜವಾದ ಸಾಧಕನು. (ಗೀತೆಯ 12ನೇ ಅಧ್ಯಾಯ 2 ಶ್ಲೋಕ)

ಗೀತೆಯ 12ನೇ ಅಧ್ಯಾಯದ 3ರಿಂದ 4ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾರು ಸರ್ವವ್ಯಾಪಿಯೋ, ಯಾರ ಬಗ್ಗೆ ನನಗೂ ಸಹ ತಿಳಿದಿಲ್ಲವೋ, ಯಾರು ಒಂದೇ ಸ್ಥಾನದಲ್ಲಿ ನೆಲೆಸುವವನೋ, ಯಾರು ಅಚಲ, ಅವ್ಯಕ್ತ ಅರ್ಥಾತ್ ಅವಿನಾಶಿ ಪರಮ ಅಕ್ಷರ ಬ್ರಹ್ಮನನ್ನು ನಿರಂತರವಾಗಿ ಆರಾಧಿಸುತ್ತಾರೋ, ಅವರು ಎಲ್ಲ ಜೀವಿಗಳ ಹಿತವನ್ನೇ ಬಯಸುವ ಸಾಧಕನು, ಎಲ್ಲರನ್ನು ಸಮಭಾವದಿಂದ ನೋಡುವ ಸಾಧಕನು. ಅವನು ನನ್ನನ್ನೇ ಪ್ರಾಪ್ತಿಸುತ್ತಾನೆ, ಅಂದರೆ ಯಾವ ಸಚ್ಚಿದಾನಂದ ಘನಬ್ರಹ್ಮ ಅರ್ಥಾತ್ ಪರಮಅಕ್ಷರಬ್ರಹ್ಮನ ಜ್ಞಾನವು ಗೀತೆಯ ಜ್ಞಾನದಾತನಿಗೆ ಇಲ್ಲವೋ ಅಂಥಹ ಜ್ಞಾನವು ತತ್ವದರ್ಶಿ ಸಂತರು ತಿಳಿದಿರುತ್ತಾರೆ.

ತತ್ವದರ್ಶಿ ಸಂತ ಸಿಗದಿದ್ದಾಗ ಬ್ರಹ್ಮನ 'ಓಂ' ನಾಮವನ್ನು ಪರಮ ಅಕ್ಷರಬ್ರಹ್ಮನ ನಾಮ ಮಂತ್ರವೆಂದು ತಿಳಿದು ಜಪ ಮಾಡುತ್ತಾರೆ. ಆಗ ಅವರು ಕಾಲನ ಜಾಲದಲ್ಲಿ ಬೀಳುತ್ತಾರೆ. ಆದ್ದರಿಂದ ಹೇಳಲಾಗಿದೆ ಆ ಭಕ್ತನು ನನಗೆ ಪ್ರಾಪ್ತವಾಗುತ್ತಾನೆ. ಕಬೀರ ಪರಮೇಶ್ವರರು 'ಸೋಹಂ' ಮಂತ್ರದ ಅವಿಷ್ಕಾರವನ್ನು ಮಾಡಿ ಸಾಧಕರಿಗೆ ತಿಳಿಸಿದ್ದಾರೆ. ಆದರೆ ಸಾರನಾಮವನ್ನು ಗುಪ್ತವಾಗಿಯೇ ಇಟ್ಟಿದ್ದಾರೆ. ಸೂಕ್ಷ್ಮವೇದದಲ್ಲಿ ಬರೆದಿದೆ:–

ಸೋಹಂ ಶಬ್ದ್ ಹಮ್ ಜಗ್ ಮೇಂ ಲಾಯೆ।ಸಾರ್ ಶಬ್ದ್ ಹಮ್ ಗುಪ್ತ್ ಛಿಪಾಯೆ॥

ಸೋಹಂ ಊಪರ್ ಔರ್ ಸತ್‌ಸುಕೃತ್ ಏಕ್ ನಾಮ್।
ಸಬ್ ಹಂಸೋಂ ಕಾ ಬಾಸ್ ಹೈ, ನಹೀಂ ಬಸ್ತೀ ನಹೀಂ ಠಾಮ್ ॥
ಸತಗುರು ಸೋಹಂ ನಾಮ್ ದೇ, ಗುರ್ಝ್ ಬಿರಜ್ ವಿಸ್ತಾರ್ ।
ಬಿನ್ ಸೋಹಂ ಸೀಝ್ಯೈ ನಹೀಂ, ಮೂಲ ಮಂತ್ರ್ ನಿಜ್ ಸಾರ್ ॥

ಯಾವ ಸಾಧಕನು ಸೋಹಂ ನಾಮ ಜಪವನ್ನು ಮಾಡುತ್ತಾನೋ ಅದು ಪರಬ್ರಹ್ಮನ ಜಪವಾಗಿದೆ. (ಅಕ್ಷರ ಪುರುಷ ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಇದಕ್ಕೆ ಸಾಕ್ಷಿಯಿದೆ) ಸಾರ ನಾಮವು ಸಿಗದಿದ್ದರೆ 'ಸೋಹಂ' ಮತ್ತು 'ಓಂ' ಇವು ಪೂರ್ಣ ಮೋಕ್ಷದಾಯಕವಲ್ಲ. ಓಂ ಜಪವು ಬ್ರಹ್ಮನ (ಗೀತೆಯ ಜ್ಞಾನದಾತನ) ದ್ದಾಗಿದೆ. ಬ್ರಹ್ಮಲೋಕದಲ್ಲಿ ಮಹಾ ಇಂದ್ರನ ಲೋಕವು ಪ್ರಾಪ್ತಿಯಾಗುತ್ತದೆ. ಅದು ಬ್ರಹ್ಮಲೋಕದಲ್ಲೇ ಇದೆ. ಸೋಹಂ ನಾಮಜಪದಿಂದ ಬ್ರಹ್ಮಲೋಕದಲ್ಲೇ ಇರುವ ನಕಲಿ ಸತ್ಯಲೋಕವು ಪ್ರಾಪ್ತವಾಗುತ್ತದೆ. ಸಾಧನೆಯ ಸಮಯದಲ್ಲಿ ಸಾಧಕನು "ಎಲ್ಲ ಜೀವಿಗಳಿಗೂ ಒಳ್ಳೆಯದಾಗಲಿ" ಎಂದು ಹೇಳುತ್ತಿರುತ್ತಾನೆ.

ಸರ್ವೆ ಭವಂತು ಸುಖಿನಃ, ಸರ್ವೆ ಸಂತು ನಿರಾಮಯಾಃ ।
ಸರ್ವೆ ಭದ್ರಾಣಿ ಪಶ್ಯಂತು, ಮಾ ಕಶ್ಚಿತ್ ದುಃಖ್‌ಭಾಗ್ ಭವೇತ್ ॥

ಭಾವಾರ್ಥ:- ಎಲ್ಲರೂ ಸುಖವಾಗಿರಿ, ಎಲ್ಲರೂ ಆರೋಗ್ಯವಂತರಾಗಿರಿ, ಎಲ್ಲರಿಗೂ ಒಳ್ಳೆಯದಾಗಲಿ, ಯಾರಿಗೂ ಯಾವ ದುಃಖವು ಬರದಿರಲಿ ಹೀಗೆ ಮಂತ್ರಗಳನ್ನು ಹೇಳುತ್ತಾ ಆಶೀರ್ವಾದ ಮಾಡುತ್ತಾನೆ. ಪ್ರಾರ್ಥನೆ ಮಾಡುತ್ತಿರುತ್ತಾನೆ. ಇದರಿಂದ ಈ ಸಾಧಕನ ಪುಣ್ಯ ಸಂಪಾದನೆ ಹಾಗೂ ಭಕ್ತಿಧನವು ಆಶೀರ್ವಾದ ರೂಪದಲ್ಲಿ ಖಾಲಿಯಾಗುತ್ತದೆ. ಆದರೆ ತತ್ವದರ್ಶಿ ಸಂತನ ಅನುಯಾಯಿ ಇಂತಹ ತಪ್ಪನ್ನು ಎಂದಿಗೂ ಮಾಡುವುದಿಲ್ಲ. ಆದ್ದರಿಂದ ಆ ಪರಮ ಅಕ್ಷರ ಸಾಧಕನು ಸಹ ನನ್ನನ್ನೇ ಪಡೆಯುತ್ತಾನೆಂದು ಹೇಳಿದ್ದಾನೆ. ಏಕೆಂದರೆ ಎಲ್ಲರನ್ನು ಆಶೀರ್ವದಿಸಿ ಶುಭ ಕಾಮನೆಗಳನ್ನು ತಿಳಿಸಿ ಭಕ್ತಿಯನ್ನು ಖಾಲಿ ಮಾಡಿಕೊಂಡನು, ಸ್ವಲ್ಪ ಬ್ರಹ್ಮಲೋಕದಲ್ಲಿ ಖರ್ಚು ಮಾಡಿ, ನಂತರ ಜನನ-ಮರಣ ಹಾಗೂ 84 ಲಕ್ಷ ಯೋನಿಗಳ ಚಕ್ರದಲ್ಲಿ ಹೋಗಿ ಸಿಲುಕಿಕೊಳ್ಳುತ್ತಾನೆ.

### ❖ ಜನಕ ಮಹಾರಾಜನ ಜೀವನದಿಂದ ಸಾಬೀತುಗೊಳಿಸುತ್ತೇವೆ :-

ತ್ರೇತಾಯುಗದಲ್ಲಿ ಜನಕನು ಒಬ್ಬ ಧಾರ್ಮಿಕ ರಾಜನಾಗಿದ್ದನು. ಅವನ ಮಗಳು ಸೀತೆಯು ತ್ರಿಲೋಕನಾಥನಾದ ಶ್ರೀ ವಿಷ್ಣುವು ಅರ್ಥಾತ್ ಶ್ರೀ ರಾಮಚಂದ್ರನ ಹೆಂಡತಿಯಾಗಿದ್ದಳು. ಸತ್ಯಯುಗದಲ್ಲಿ ಜನಕರಾಜನೇ ಅಂಬರೀಶನಾಗಿದ್ದನು. ಅವನು ವಿಷ್ಣುವಿನ ಪರಮ ಭಕ್ತನಾಗಿದ್ದನು. ಜೊತೆಗೆ ಅವರು ವೇದಗಳ ಅನುಸಾರ ಬ್ರಹ್ಮ ಸಾಧನೆಯ'ಓಂ' ನಾಮಜಪವನ್ನು ಮಾಡುತ್ತಿದ್ದನು. ಇದರ ಪರಿಣಾಮವಾಗಿ ಲಕ್ಷಾಂತರ ವರ್ಷಗಳವರೆಗೆ ವಿಷ್ಣುವಿನ ಲೋಕದಲ್ಲಿ ಇರುವ ಸ್ವರ್ಗದಲ್ಲಿ ತನ್ನ ಭಕ್ತಿಯ ಸುಖವನ್ನು ಅನುಭವಿಸಿದನು. ನಂತರ ಲಕ್ಷಾಂತರ ವರ್ಷಗಳು ಬ್ರಹ್ಮಲೋಕದಲ್ಲಿ ಬ್ರಹ್ಮಸಾಧನೆಯ ಸುಖವನ್ನು ಅನುಭವಿಸಿದನು. ನಂತರ ತ್ರೇತಾಯುಗದಲ್ಲಿ ಧಾರ್ಮಿಕ ರಾಜನಾದ ಜನಕ ಮಹಾರಾಜನಾಗಿ ಪುನರ್ಜನ್ಮ ತಾಳಿದನು. ತನ್ನ ಜೀವನ ಕಾಲದಲ್ಲಿ ಅನೇಕ ಯಜ್ಞ-ಯಾಗಾದಿಗಳನ್ನು ಮಾಡಿದನು. ವಿಷ್ಣುವಿನ ಮತ್ತು ಬ್ರಹ್ಮ-ಸಾಧನೆಯನ್ನು ಮಾಡಿದನು. ಯಾವಾಗ ಈ ಪ್ರಪಂಚ ಬಿಟ್ಟು ಹೊರಟನೋ ಆಗ ಸ್ವರ್ಗದಿಂದ ಒಂದು ವಿಮಾನವು ಬಂದಿತು. ಜನಕರಾಜನನ್ನು ಕುಳಿಸಿಕೊಂಡು ಹಾರಿತು. ದಾರಿಯಲ್ಲಿ ಒಂದು ನರಕವಿತ್ತು. ಅದರಲ್ಲಿ 12 ಕೋಟಿ ಜೀವಿಗಳು ತಾವು ಮಾಡಿದ ಪಾಪಕ್ಕೆ ಶಿಕ್ಷೆ ಅನುಭವಿಸುತ್ತಿದ್ದರು. ಅಲ್ಲಿ ಹಾಹಾಕಾರವಾಗುತ್ತಿತ್ತು. ಜನಕನು ದೇವದೂತರಿಗೆ ಇದು ಯಾವ ದುಃಖಿಗಳ ಚೀರಾಟ ಎಂದು ಕೇಳಿದನು. ಆಗ ಅವನು ವಿಮಾನವನ್ನು ನಿಲ್ಲಿಸಲು ಹೇಳಿದನು. ವಿಮಾನವು ಅಲ್ಲಿಯೇ ನಿಂತಿತು. ದೇವದೂತರು ಹೀಗೆಂದರು, "ರಾಜನೇ ಇದೊಂದು ನರಕ. ಇದರಲ್ಲಿ ಜೀವಿಗಳು ತಮ್ಮ ಪಾಪ-ಕರ್ಮಗಳ

ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ" ಎಂದರು. ಆಗ ಜನಕನು ಹೀಗೆಂದನು, "ಇವರನ್ನೆಲ್ಲಾ ಈ ನರಕದಿಂದ ಪಾರು ಮಾಡು, ನನ್ನಿಂದ ನೋಡಲು ಅಗುತ್ತಿಲ್ಲ". ಆಗ ದೇವದೂತರು, "ಜನಕರೇ ಇದು ನಿಮ್ಮ ರಾಜ್ಯವಲ್ಲ, ಇಲ್ಲಿ ಧರ್ಮರಾಯನ ಆಜ್ಞೆಯಂತೆ ನಡೆಯುತ್ತದೆ" ಎಂದರು. ಆಗ ಜನಕನು, "ಇವರನ್ನೆಲ್ಲಾ ಬಿಟ್ಟುಬಿಡು ಅಥವಾ ನನ್ನನ್ನೂ ಈ ನರಕ್ಕೆ ಹಾಕು" ಎಂದರು. ಆಗ ದೇವದೂತರು, "ಧರ್ಮರಾಯನು ಮಾತ್ರ ಇದಕ್ಕೆ ಪರಿಹಾರ ನೀಡುವವನು" ಎಂದರು. ರಾಜ ಜನಕನು ನನಗೆ ಧರ್ಮರಾಯನೊಂದಿಗೆ ಮಾತನಾಡಿಸಿ ಎಂದನು. ಧರ್ಮರಾಯನು ಅಲ್ಲಿಗೆ ಬಂದು ಎಲ್ಲಾ ವಿಷಯವನ್ನು ತಿಳಿದ ನಂತರ ಹೀಗೆಂದನು, 'ನಾನು ನಿಮ್ಮನ್ನು ನರಕದಲ್ಲಿ ಹಾಕಲು ಸಾಧ್ಯವಿಲ್ಲ. ಈ 12 ಕೋಟಿ ಜೀವಿಗಳನ್ನು ಸಹ ನರಕದಿಂದ ಪಾರು ಮಾಡಲು ಸಾಧ್ಯವಿಲ್ಲ, ಆದರೆ ನಾನೊಂದು ಉಪಾಯವನ್ನು ಹೇಳುತ್ತೇನೆ. ನೀವು (ಜನಕ) ನಿಮ್ಮ ಭಕ್ತಿಯ ಸ್ವಲ್ಪ ಭಾಗವನ್ನು (ಪುಣ್ಯ ಮತ್ತು ಮಂತ್ರಜ ಪದಿಂದ ಲಭಿಸಿದ ಭಕ್ತಿಧನ) ಈ 12 ಕೋಟಿ ಜೀವಿಗಳಿಗೆ ನೀಡಿ. ಆಗ ಇವರನ್ನೆಲ್ಲಾ ನಿಮ್ಮ ಜೊತೆ ಸ್ವರ್ಗಕ್ಕೆ ಕಳುಹಿಸುತ್ತೇನೆ'. ಜನಕ ಮಹಾರಾಜನು ಕರುಣೆಯಿಂದ ತನ್ನ ಅರ್ಧ ಭಕ್ತಿ ಸಂಪಾದನೆಯನ್ನು 12 ಕೋಟಿ ಜೀವಿಗಳಿಗೆ ದಾನವಾಗಿ ನೀಡಿಬಿಟ್ಟನು. ಆಗ 12 ಕೋಟಿ ಆತ್ಮಗಳು ಜನಕನು ನೀಡಿದ ಪುಣ್ಯದ ಫಲದಿಂದ ಸ್ವರ್ಗಕ್ಕೆ ಹೊರಟು ಹೋದವು. ಜನಕನು ಸಹ ಸ್ವರ್ಗದಲ್ಲಿ (ವಿಷ್ಣುವಿನ ಲೋಕದ ಸ್ವರ್ಗದಲ್ಲಿ, ಬ್ರಹ್ಮ ಲೋಕದ ಮಹಾಸ್ವರ್ಗದಲ್ಲಿ) ವಾಸ ಮಾಡಿ ತನ್ನ ಪುಣ್ಯದ ಫಲವನ್ನು ಅನುಭವಿಸಿದನು. ಇದರಿಂದ ಭಕ್ತಿಯ ಧನವು ಮುಗಿದು ಹೋಯಿತು.

ಕಥೆಯ ಸಾರಾಂಶ :– ಜನಕ ಮಹಾರಾಜನು ತನ್ನ ಅರ್ಧ ಪುಣ್ಯವನ್ನು ಯಾವ 12 ಕೋಟಿ ಜೀವಾತ್ಮಗಳಿಗೆ ದಾನ ಮಾಡಿದನೋ ಅದನ್ನು ಧರ್ಮರಾಯನು ಎಲ್ಲರಿಗೂ ಸಮನಾಗಿ ಹಂಚಿದನು. ಆ ಪುಣ್ಯದ ಫಲವಾಗಿ ಆ ಆತ್ಮಗಳೆಲ್ಲ ಸ್ವರ್ಗಕ್ಕೆ ಹೋದವು. ಆ ಪುಣ್ಯವು ಮುಗಿದು ಹೋದ ನಂತರ ಪುನಃ ಅವುಗಳನ್ನೆಲ್ಲಾ ನರಕಕ್ಕೆ ತಳ್ಳಲಾಯಿತು. ಯಾವ ಪಾಪ ಕರ್ಮವು ಬಾಕಿ ಉಳಿದಿತ್ತೋ ಮತ್ತೆ ಅದನ್ನು ಅನುಭವಿಸತೊಡಗಿದರು. ಜನಕ ಮಹಾರಾಜನಿಗೆ ಬಹಳ ದೊಡ್ಡ ಮೋಸವಾಯಿತು. ಅವನ ಅರ್ಧ ಪುಣ್ಯವುದಾನ ಮಾಡಿದ್ದರಿಂದ ಮುಗಿದು ಹೋಯಿತು. ಇನ್ನು ಅರ್ಧ ಪುಣ್ಯವು ಸ್ವರ್ಗದಲ್ಲಿ ಸುಖವನ್ನು ಅನುಭವಿಸಿದ್ದರಿಂದ ಮುಗಿದು ಹೋಯಿತು. ಅವನು ಪುನಃ ಜನನ–ಮರಣವೆಂಬ ಚಕ್ರದಲ್ಲಿ ಸಿಲುಕಿದನು. ಅದೇ ಜನಕನ ರಾಜನ ಜೀವಾತ್ಮವು ಕಲಿಯುಗದಲ್ಲಿ ಸಿಖ್ಖರ ಗುರುವಾದ 'ಶ್ರೀ ಗುರು ನಾನಕ್‌ದೇವ ಸಾಹೇಬ್' ಆಗಿ ಜನ್ಮತಾಳಿತು. ಶ್ರೀ ಗುರು ನಾನಕರಿಗೆ ಸುಲ್ತಾನಪುರವೆಂಬ ಊರಿನಲ್ಲಿ ಬೇಈ ಎಂಬ ನದಿಯ ತೀರದಲ್ಲಿ ಜಿಂದಾ ಸಾಧುವಿನ ವೇಷದಲ್ಲಿ ಪೂರ್ಣ ಪರಮಾತ್ಮನು ಸಿಕ್ಕನು. ಅವರನ್ನು ಸನಾತನ ಪರಮಧಾಮ (ಸತ್ಯ ಲೋಕ= ಸಚ್‌ಖಂಡ್ = ನಿಜವಾದ ಲೋಕ) ಕ್ಕೆ ಕರೆದುಕೊಂಡು ಹೋದನು. ನಂತರ ಮೂರನೇ ದಿನ ಅದೇ ಬೇಈ ನದಿಯ ತೀರಕ್ಕೆ ಕರೆದುಕೊಂಡು ತಂದು ಬಿಟ್ಟನು. ಪೂರ್ಣ ಪರಮಾತ್ಮ ಅವರಿಗೆ ತತ್ವಜ್ಞಾನವನ್ನು ತಿಳಿಸಿದರು. ಅವರ ಅನೇಕ ಪೂರ್ವಜನ್ಮಗಳನ್ನು ತೋರಿಸಿದರು. ಅವರಿಗೆ ಸತ್ಯನಾಮದ (ಇದು 2 ಅಕ್ಷರಗಳ ಮಂತ್ರ. ಇದರಲ್ಲಿ ಒಂದು 'ಓಂ' 2ನೆಯದು ಗುಪ್ತವಾಗಿದೆ ಇದನ್ನು ಉಪದೇಶ ಪಡೆದವರಿಗೆ ಮಾತ್ರ ಹೇಳಲಾಗುವುದು) ದೀಕ್ಷೆಯನ್ನು ನೀಡಿದರು. ಆಗ ಶ್ರೀ ಗುರು ನಾನಕದೇವ ಸಾಹೇಬರಿಗೆ ಪೂರ್ಣ ಮೋಕ್ಷವು ಲಭಿಸಿತು. ಪರಮಾತ್ಮನು ತತ್ವದರ್ಶಿ ಸಂತನ ರೂಪದಲ್ಲಿ ಪ್ರತ್ಯಕ್ಷವಾಗದೆ ಇದ್ದಿದ್ದರೆ ಶ್ರೀ ಗುರು ನಾನಕ್ ಅವರ ಜೀವಾತ್ಮ ಜನನ–ಮರಣವೆಂಬ ಚಕ್ರದಿಂದ ಬಿಡುಗಡೆ ಹೊಂದುತ್ತಿರಲಿಲ್ಲ. ಆ ಸತ್ಯ ಸಾಧನೆಯು ನನ್ನ (ಸಂತ ರಾಮ್‌ಪಾಲ್ ದಾಸರ) ಬಳಿ ಇದೆ. ಈಗ ಪ್ರಸಂಗ ನಡೆಯುತ್ತದೆ ಭಾವನಾತ್ಮಕವಾಗಿ ಯಾರಿಗೂ ಆಶೀರ್ವಾದ ನೀಡಿ ನಿಮ್ಮ ಭಕ್ತಿಯೆಂಬ ಪುಣ್ಯವನ್ನು ನಷ್ಟ ಮಾಡಿಕೊಳ್ಳಬೇಡಿ. ಬುದ್ಧಿವಂತನಾದ ಧನಿಕನು ತನ್ನ ಹಣವನ್ನು ಬೇರೆಯವರಿಗೆ ಹಂಚುವುದನ್ನು ನೋಡಿಲ್ಲ. ಸಹಾಯ ಮಾಡಲು ಬಯಸಿದರೆ ಅದನ್ನು ಸಂಪಾದಿಸುವ ಮಾರ್ಗವನ್ನು ತಿಳಿಸಿಕೊಡುತ್ತಾನೆ. ಇದರಿಂದ ಕೆಲಸ ಮಾಡಿ

ಅವನು ಸಹ ಧನಿಕನಾಗುತ್ತಾನೆ. ಆದ್ದರಿಂದ ಯಾರಾದರೂ ಭಕ್ತರು ಬೇರೆಯವರಿಗೆ ಸಹಾಯ ಮಾಡಲು ಇಚ್ಛಿಸಿದರೆ ಅವರಿಗೆ ಪೂರ್ಣ ಗುರುವಿನಿಂದ ದೀಕ್ಷೆ ಕೊಡಿಸಿ, ಭಕ್ತಿಯೆಂಬ ಧನವನ್ನು ಸಂಪಾದಿಸಲು ಪ್ರೇರಣೆ ನೀಡಿ.

ಗೀತೆಯ 12ನೇ ಅಧ್ಯಾಯದ 5ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾರು ಸಚ್ಚಿದಾನಂದ ಘನಬ್ರಹ್ಮ ಅಂದರೆ ಪರಮ ಅಕ್ಷರ ಬ್ರಹ್ಮನಲ್ಲಿ ಶ್ರದ್ಧೆಯನ್ನಿಡುತ್ತಾರೋ, ಯಾರು ಅವನನ್ನು ಚೆನ್ನಾಗಿ ಅರಿತಿರುತ್ತಾರೋ, ಅವರಿಗೆ ಹೆಚ್ಚಾಗಿ (ಜಗಳ) ಅನುಮಾನದ ಕಾರಣ ಜ್ಞಾನದ ಜಗಳವಾಗುತ್ತದೆ? ಆ ಮಾನವ ಶರೀರ ಧಾರಿಗಳಿಗೆ ಈ ಕಾರಣದಿಂದ ದುಃಖ ಪೂರ್ವಕವಾಗಿ ಪ್ರಾಪ್ತಿಸುವ ಮೋಕ್ಷವಾಗಿದೆ. ಇದರ ಭಾವಾರ್ಥವೇನೆಂದರೆ ತತ್ವದರ್ಶಿ ಸಂತನು ಸಿಗದೇ ಇರುವ ಕಾರಣ ಕಬೀರ ಪಂಥದವರು (ಘೀಸಾದಾಸ್ ಪಂಥದವರು, ಗರೀಬ್‌ದಾಸ್ ಪಂಥದವರು, ದಾದೂ ಪಂಥದವರು, ನೇಕಿರಾಮ್ ಪಂಥದವರು–ಇವರೆಲ್ಲಾ ಕಬೀರ ಪಂಥದವರೆಂದು ಕರೆಯಲ್ಪಡುತ್ತಾರೆ.) ಕಠಿಣ ತಪಸ್ಸನ್ನು ಮಾಡುತ್ತಾರೆ. ವ್ರತ, ಮೌನವ್ರತ ಮುಂತಾದ ಕಠಿಣ ಸಾಧನೆಗಳನ್ನು ಮಾಡುತ್ತಾರೆ. ಆದ್ದರಿಂದ ಪೂರ್ಣ ಪರಮಾತ್ಮನ ಸಾಧನೆಯು ಕ್ಲೇಶದಾಯಕ ಹಾಗೂ ದುಃಖ ಪೂರ್ವಕವಾಗಿ ಪಡೆಯಲು ಯೋಗ್ಯ ಎಂದು ಹೇಳುತ್ತಾರೆ. ವಾಸ್ತವದಲ್ಲಿ ಯಾವ ಸಾಧನೆಗಳು ಶಾಸ್ತ್ರಕ್ಕೆ ಅನುಸಾರವಾಗಿವೆಯೋ ಅವು ತುಂಬಾ ಸುಲಭವಾಗಿದೆ.

ಪ್ರಮಾಣ :– ಯಜುರ್ವೇದದ 40ನೇ ಅಧ್ಯಾಯದ 15ನೇ ಮಂತ್ರದಲ್ಲಿ ಬ್ರಹ್ಮ ಸಾಧನೆಗಾಗಿ ಈ ರೀತಿ ಹೇಳಲಾಗಿದೆ :–

ವಾಯುಃ ಅನಿಲಮ್ ಅಮೃತಮ್ ಅಥ್ ಇದಮ್ ಭಸ್ಮಾಂತಮ್ ಶರೀರಮ್॥
ಓಮ್ ಕೃತಮ್ ಸ್ಮರ್, ಕಿಲಬೇ ಸ್ಮರ್ ಕೃತುಃ ಸ್ಮರ್ ॥

ಭಾವಾರ್ಥ:– ಬ್ರಹ್ಮ ಸಾಧನೆಯ ಓಂ ಒಂದು ನಾಮ ಜಪವಾಗಿದೆ. ಇದರಿಂದ ಸಿಗುವಂಥಹ ಅಮೃತ ಅರ್ಥಾತ್ ಮೋಕ್ಷ ಪ್ರಾಪ್ತಿಗಾಗಿ 'ಓಂ' ನಾಮ ಜಪವನ್ನು (ವಾಯುಃ ಅನಿಲಂ) ಉಚ್ವಾಸ–ನಿಶ್ವಾಸದಿಂದ, ಪೂರ್ತಿ ಆಸಕ್ತಿಯಿಂದ ಶರೀರವು ನಾಶವಾಗುವತನಕ (ಕೃತಂ) ಕಾರ್ಯ ಮಾಡುತ್ತಾ–ಮಾಡುತ್ತಾ (ಸ್ಮರ) ಸ್ಮರಣೆ ಮಾಡು, (ಕಿಲಬೆ ಸ್ಮರ) ತುಂಬಾ ಆಸಕ್ತಿಯಿಂದ ಕಷ್ಟಪಟ್ಟು ಅರ್ಥಾತ್ ವಿಲಾಪವನ್ನು ಮಾಡುವಂಥಹ ಸ್ಥಿತಿಯಿಂದ ಸ್ಮರಣೆ ಮಾಡು (ಕೃತುಃ ಸ್ಮರ) ಮನುಷ್ಯ ಜೀವನದ ಮೂಲ ಕಾರ್ಯವೆಂದು ತಿಳಿದು ಸ್ಮರಣೆ ಮಾಡು. (ಯಜುರ್ವೇದ ಅಧ್ಯಾಯ 40 ಮಂತ್ರ 15)

ನಂತರ ಯಜುರ್ವೇದದ 40ನೇ ಅಧ್ಯಾಯದ 17ನೇ ಮಂತ್ರದಲ್ಲಿ ವೇದಗಳ ಜ್ಞಾನದಾತನು (ಇದೇ ಗೀತೆಯ ಜ್ಞಾನದಾತನು) ಹೇಳಿರುವುದೇನೆಂದರೆ, ಆ ಪೂರ್ಣ ಪರಮಾತ್ಮನು ಮೇಲಿನ ಲೋಕದಲ್ಲಿ ಅವ್ಯಕ್ತನು. (ಅಹಂ ಖಮ್ ಬ್ರಹ್ಮ ಓಂ) ನಾನು ಬ್ರಹ್ಮನು, ದಿವ್ಯ ಆಕಾಶವೆಂಬ ಬ್ರಹ್ಮಲೋಕದಲ್ಲಿ ವಾಸಿಸುತ್ತೇನೆ. ನನ್ನ ಓಂ ನಾಮವಿದೆ. ಯಜುರ್ವೇದ 40ನೇ ಅಧ್ಯಾಯದ 10ನೇ ಮಂತ್ರದಲ್ಲಿ ಹೇಳಿರುವುದೇನೆಂದರೆ, ಯಾರೋ ಪರಮಾತ್ಮನನ್ನು (ಸಂಭವಾತ್) ಸ್ವತಃ ಸೃಷ್ಟಿಯಾಗುವ, ಅವತಾರ ರೂಪದಲ್ಲಿರುವ, ಸಾಕಾರನೆಂದು ಭಾವಿಸುತ್ತಾರೆ, ಇನ್ಯಾರೋ (ಅಸಂಭವಾತ್) ಸ್ವತಃ ಸೃಷ್ಟಿ ಆಗದಿರುವ ಅಂದರೆ ನಿರಾಕಾರನೆಂದು ಭಾವಿಸುತ್ತಾರೆ. ಆ ಪರಮಾತ್ಮನು ಉತ್ಪನ್ನನಾಗುತ್ತಾನೋ ಅಥವಾ ಇಲ್ಲವೋ ಅಥವಾ ಆ ಪರಮಾತ್ಮನು ಹೇಗಿದ್ದಾನೆ ಅದರ ಜ್ಞಾನವನ್ನು (ಧೀರಾಣಾಂ) ತತ್ವದರ್ಶಿ ಸಂತರು ಹೇಳುತ್ತಾರೆ. ನೀನು ಅವರಿಂದ (ಶೃಣುಃ) ಕೇಳಿ. (ಯಜುರ್ವೇದ 40ನೇ ಅಧ್ಯಾಯ 10 ನೇ ಮಂತ್ರ) ಇದೇ ಪ್ರಮಾಣವು ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿದೆ. ಪರಮಾತ್ಮನ ವಿಷಯದಲ್ಲಿ ಸಂಪೂರ್ಣ ಜ್ಞಾನವನ್ನು ತತ್ವದರ್ಶಿ ಸಂತರು ಹೇಳುತ್ತಾರೆ. ಅವರನ್ನು ಹುಡುಕಿ ಯಾವುದೇ ಕಪಟತೆಯಿಲ್ಲದೆ ಅವರಿಗೆ ದೀರ್ಘ ದಂಡ ನಮಸ್ಕಾರ ಮಾಡಿ ವಿನಯವಾಗಿ ಪ್ರಶ್ನೆಯನ್ನು ಕೇಳಿದರೆ, ಆ ತತ್ವದರ್ಶಿ ಸಂತರು

ನಿನಗೆ ತತ್ವಜ್ಞಾನದ ಉಪದೇಶವನ್ನು ನೀಡುತ್ತಾರೆಂದು ಹೇಳಲಾಗಿದೆ. ಸೂಕ್ಷ್ಮ ವೇದದಲ್ಲಿ ಹೇಳಿರುವುದೇನೆಂದರೆ:–

ನಾಮ್ ಉಠತ್ ನಾಮ್ ಬೈಠತ್, ನಾಮ್ ಸೋವತ್ ಜಾಗ್‌ರೆ ।
ನಾಮ್ ಖಾತೆ ನಾಮ್ ಪೀತೆ, ನಾಮ್ ಸೆತೀ ಲಾಗ್‌ರೇ ॥

ಭಾವಾರ್ಥ :– ಪರಮಾತ್ಮನ ಸಾಧನೆಯು ಕೇವಲ ನಾಮ ಜಪದಿಂದ ಸಾಧ್ಯವಾಗುತ್ತದೆ. ಆ ನಾಮ ಜಪದ ಕೆಲಸವನ್ನು ನಿರಂತರವಾಗಿ ಮಾಡು. ರಾತ್ರಿ ಮಲಗುವ ಮುಂಚೆ, ಬೆಳಿಗ್ಗೆ ಎದ್ದ ತಕ್ಷಣ, ಊಟ ಮಾಡುವ ಸಮಯದಲ್ಲಿ, ದ್ರವ ಪದಾರ್ಥಗಳನ್ನು ಸೇವಿಸುವ ಸಮಯದಲ್ಲಿ ಅಂದರೆ ಎಲ್ಲ ಕೆಲಸ ಮಾಡುತ್ತಾ ಮಾಡುತ್ತಾ ನಾಮ ಸ್ಮರಣೆಯನ್ನು ಮಾಡು. ಅಂದರೆ ಹಠಯೋಗವನ್ನು ಮಾಡದೆ, ಕರ್ಮಯೋಗದಲ್ಲಿ ಸಾಧನೆಯನ್ನು ಮಾಡು ಎಂದರ್ಥ.

## "ಗೀತೆಯಲ್ಲಿ ಎರಡು ಪ್ರಕಾರದ ಜ್ಞಾನವಿದೆ"

ಗೀತೆಯ ಜ್ಞಾನವು ವೇದಗಳ (ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ) ಮತ್ತು ಸೂಕ್ಷ್ಮವೇದ ಅದನ್ನು ಸಚ್ಚಿದಾನಂದ ಘನಬ್ರಹ್ಮ ಅರ್ಥಾತ್ ಸತ್ಯಪುರುಷನು ತನ್ನ ಮುಖ ಕಮಲದಿಂದ ಹೇಳಿರುವ ತತ್ವಜ್ಞಾನಕ್ಕೂ ಹೊಂದಾಣಿಕೆ ಆಗದಿದ್ದರೆ ಆ ಜ್ಞಾನವು ತಪ್ಪು. ಅದು ಗೀತೆಯ ಜ್ಞಾನದಾತನ ಅಭಿಪ್ರಾಯವಿದೆ ಅದನ್ನು ಸ್ವೀಕರಿಸಲು ಸಾಧ್ಯವಿಲ್ಲ. ಗೀತೆಯ ಜ್ಞಾನದಾತನು ಅನೇಕ ಶ್ಲೋಕಗಳಲ್ಲಿ (ಗೀತೆಯ 13ನೇ ಅಧ್ಯಾಯದ 2ನೇ ಶ್ಲೋಕ, 7ನೇ ಅಧ್ಯಾಯದ 18ನೇ ಶ್ಲೋಕ, 6ನೇ ಅಧ್ಯಾಯದ 36ನೇ ಶ್ಲೋಕ, 3ನೇ ಅಧ್ಯಾಯದ 31ನೇ ಶ್ಲೋಕ ಮತ್ತು 18ನೇ ಅಧ್ಯಾಯದ 70ನೇ ಶ್ಲೋಕದಲ್ಲಿ) ಹೇಳಿರುವುದೇನೆಂದರೆ, 'ಇದು ನನ್ನ ಅಭಿಪ್ರಾಯ, ಇದು ನನ್ನ ವಿಚಾರ'. ಶ್ರೀಮದ್ಭಗವದ್ಗೀತೆಯಲ್ಲಿ 95 ಪ್ರತಿಶತ ವೇದಜ್ಞಾನವಿದೆ. 5 ಪ್ರತಿಶತ ಗೀತೆಯ ಜ್ಞಾನದಾತನ ಅಭಿಪ್ರಾಯ ಇದೆ. ಒಂದು ವೇಳೆ ವೇದಗಳಲ್ಲಿದ್ದಂತೆ ಇದ್ದರೆ ಸರಿ, ಇಲ್ಲದಿದ್ದರೆ ಅದು ಬರೀ ವ್ಯರ್ಥ. ಉದಾಹರಣೆಗಾಗಿ ಗೀತೆಯ 2ನೇ ಅಧ್ಯಾಯದ 37–38ನೇ ಶ್ಲೋಕವೇ ಸಾಕು. ಇವುಗಳಲ್ಲೇ ವಿರೋಧಾಭಾಸವಿದೆ. ಗೀತೆಯ 2ನೇ ಅಧ್ಯಾಯದ 37ನೇ ಶ್ಲೋಕದಲ್ಲಿ ಲಾಭ–ನಷ್ಟದ ಬಗ್ಗೆ ಹೇಳಲಾಗಿದೆ. ಅದರಲ್ಲಿ "ನೀನು ಯುದ್ಧದಲ್ಲಿ ಸತ್ತು ಸ್ವರ್ಗ ಸೇರುವೆ ಅಥವಾ ಯುದ್ಧ ಗೆದ್ದು ಈ ಭೂಮಿಯ ಮೇಲೆ ರಾಜ್ಯವನ್ನಾಳುವೆ. ಆದ್ದರಿಂದ ಹೇ ಅರ್ಜುನ! ಯುದ್ಧಕ್ಕಾಗಿ ಸಿದ್ಧನಾಗು" ಎಂದು ಹೇಳಲಾಗಿದೆ. (ಗೀತೆಯ 2ನೇ ಅಧ್ಯಾಯದ 37ನೇ ಶ್ಲೋಕ). ನಂತರ ಗೀತೆಯ 2ನೇ ಅಧ್ಯಾಯದ 38ನೇ ಶ್ಲೋಕದಲ್ಲಿ ಇದರ ವಿರುದ್ಧ ಹೇಳಲಾಗಿದೆ. "ಜಯ–ಪರಾಜಯ, ಅಂದರೆ ಸೋಲು–ಗೆಲುವು, ಸುಖ–ದುಃಖವನ್ನು ಸಮಾನವೆಂದು ಭಾವಿಸಿ ಯುದ್ಧಕ್ಕಾಗಿಸಿದ್ಧನಾಗು, ಈ ರೀತಿ ಯುದ್ಧ ಮಾಡುವುದರಿಂದ ನಿನಗೆ ಪಾಪ ತಗಲುವುದಿಲ್ಲ."(ಗೀತೆಯ 2ನೇ ಅಧ್ಯಾಯದ 38ನೇ ಶ್ಲೋಕ).

ಗೀತೆಯ 11ನೇ ಅಧ್ಯಾಯದ 33ನೇ ಶ್ಲೋಕದಲ್ಲಿ, "ಏಳು, ಎದ್ದೇಳು, ಯಶಸ್ಸನ್ನು ಗಳಿಸು, ಶತ್ರುಗಳನ್ನು ಸದೆಬಡಿದು, ಗೆಲುವು ಸಾಧಿಸಿ, ಧನ–ಧಾನ್ಯಗಳಿಂದ ಸಂಪನ್ನ ರಾಜ್ಯವನ್ನು ಆಳು. ನಾನು ನಿನ್ನ ಮುಂದಿದ್ದ ಯೋಧರನ್ನು ಈ ಮೊದಲೇ ಹತ್ಯೆಗೈದಿದ್ದೇನೆ. ನೀನು ಕೇವಲ ನಿಮಿತ್ತ ಮಾತ್ರ" ಎಂದು ಸ್ಪಷ್ಟಪಡಿಸಲಾಗಿದೆ.

## "ಪಾಂಡವರ ಮೂಲಕ ಮಾಡಲ್ಪಟ್ಟ ಯಾಗ"

ಮಹಾಭಾರತ ಗ್ರಂಥದಲ್ಲಿ ಒಂದು ಪ್ರಸಂಗವಿದೆ. ಕುರುಕ್ಷೇತ್ರದ ಮೈದಾನದಲ್ಲಿ ಯುದ್ಧವಾಯಿತು, ಕೋಟಿಗಟ್ಟಲೆ ಸೈನಿಕರು ಸತ್ತರು, ಕೋಟ್ಯಾಂತರ ಹೆಣ್ಣುಮಕ್ಕಳು ವಿಧವೆಯರಾದರು, ಕೋಟಿಗಟ್ಟಲೆ ಮಕ್ಕಳು ಅನಾಥರಾದರು. ಪಾಂಡವರು ಯುದ್ಧದಲ್ಲಿ ಗೆದ್ದರು. ಕೌರವರ ಸರ್ವನಾಶವಾಯಿತು. ದೆಹಲಿಯ (ಇಂದ್ರಪ್ರಸ್ಥ) ಸಿಂಹಾಸನದ ಮೇಲೆ

ಶ್ರೀ ಯುಧಿಷ್ಠಿರನನ್ನು ಕುಳಿಸಿ ಶ್ರೀ ಕೃಷ್ಣನು ದ್ವಾರಕೆಗೆ ಹೊರಟು ಹೋದನು. ಯುಧಿಷ್ಠಿರ ಮಹಾರಾಜನಿಗೆ ಕೆಟ್ಟ ಕೆಟ್ಟ ಕನಸುಗಳು ಬೀಳಲಾರಂಭಿಸಿದವು. ಆ ಕನಸಿನಲ್ಲಿ ಶಿರಚ್ಛೇದಗೊಂಡ ವ್ಯಕ್ತಿಗಳು ಅವನ ಅರಮನೆಗೆ ಪ್ರವೇಶಿಸಿದಂತೆ ಹಾಗೂ ಕೋಟ್ಯಂತರ ಮಕ್ಕಳು ಅಪ್ಪಾ-ಅಪ್ಪಾ...., ಎಂದು ಕಿರುಚುತ್ತಾ ಬರುತ್ತಿರುವಂತೆ ಅವನಿಗೆ ಕಾಣಿಸಿತು. ಕೋಟ್ಯಂತರ ವಿಧವೆಯರು ಅಯ್ಯೋ ಪತಿ ದೇವರೆ! ಎನ್ನುತ್ತಾ ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಾ, ತಮ್ಮ ತಲೆಯ ಕೂದಲನ್ನು ಕಿತ್ತುಕೊಳ್ಳುತ್ತಿರುವಂತೆ ಕಾಣಿಸಿತು. ನೀನು "ಈ ಅರಮನೆಯ ಸುಖವನ್ನು ಅನುಭವಿಸಲು ನಮ್ಮ ಗಂಡಂದಿರನ್ನು ಕೊಂದವನೇ ನಮ್ಮನ್ನು ಹಾಗೂ ನಮ್ಮ ಮಕ್ಕಳನ್ನು ಸಾಯಿಸಿಬಿಡು, ಆಗ ನಿನ್ನ ಐಶ್ವರ್ಯ ಪೂರ್ಣವಾಗುವುದು, ಎಷ್ಟು ದಿನ ಈ ಸಿಂಹಾಸನದ ಮೇಲೆ ಕುಳಿತಿರುತ್ತೀಯಾ?" ಎಂದು ಹೇಳುತ್ತಾ ಇರುವಂತೆ ಕಾಣಿಸಿತು.

ಒಂದು ದಿನ ಯುದಿಷ್ಠಿರನು ಸ್ನಾನ ಮಾಡಲು ಗಂಗಾ ನದಿಯ ದಡಕ್ಕೆ ಬಂದನು. ಆಗ ಸಾವಿರಾರು ಸಂಖ್ಯೆಯಲ್ಲಿ ವಿಧವೆಯರು ತಮ್ಮ ಪತಿ ಸತ್ತ ನಂತರ ಒಡೆದ ಬಳೆಗಳನ್ನು ನೀರಿನಲ್ಲಿ ಬಿಡಲು ಬಂದಿದ್ದರು. ಅವರೆಲ್ಲಾ ಬಿಕ್ಕಳಿಸಿ, ಬಿಕ್ಕಳಿಸಿ ಅಳುತ್ತಿದ್ದರು. ಕೆಲವರು ತಲೆ ತಿರುಗಿ ಬಿದ್ದು ಬಿಡುತ್ತಿದ್ದರು. ಅವರ ಮಕ್ಕಳು ಆ ವಿಧವೆ ತಾಯಂದಿರ ಮೇಲೆ ಬಿದ್ದು ಜೋರಾಗಿ ಅಳುತ್ತಿದ್ದರು. ಕೆಲವು ವಯಸ್ಸಾದ ವಿಧವೆಯರು ಬೇರೊಬ್ಬರ ಸಹಾಯದಿಂದ ನಡೆಯುತ್ತಿದ್ದರು. ಅವರೂ ಸಹ ಅಳುತ್ತಿದ್ದರು. ಈ ಭಯಂಕರವಾದ ದೃಶ್ಯವನ್ನು ನೋಡಿ ಯುಧಿಷ್ಠಿರ ಮಹಾರಾಜನು ಸ್ನಾನ ಮಾಡದೇ ಹಾಗೇ ಮರಳಿ ಅರಮನೆಗೆ ಬಂದು ಬಿಟ್ಟನು. ಇಡೀ ದಿನ ಆ ದೃಶ್ಯವು ಅವನ ಕಣ್ಮುಂದೆ ಸುತ್ತಲಾರಂಭಿಸಿತು. ಅವನು ಆ ಇಡೀ ದಿನ ಏನನ್ನೂ ತಿನ್ನಲಿಲ್ಲ. ರಾತ್ರಿ ಮಲಗಲು ಪ್ರಯತ್ನಿಸಿದಾಗಲೂ ಸಹ ಆ ದೃಶ್ಯವೇ ಕಣ್ಮುಂದೆ ಬರುತ್ತಿತ್ತು. ಹೇಗೋ ನಿದ್ದೆ ಬಂತು. ಆಗಲೂ ಕನಸಿನಲ್ಲಿ ಆ ದೃಶ್ಯಗಳೇ ಕಾಣರಾಲಂಭಿಸಿದವು. ಯುಧಿಷ್ಠಿರನಿಗೆ ಇದರಿಂದ ಮಲಗಲೂ ಸಾಧ್ಯವಾಗುತ್ತಿರಲಿಲ್ಲ, ಅಳಲೂ ಸಾಧ್ಯವಾಗುತ್ತಿರಲಿಲ್ಲ, ಊಟ ತಿಂಡಿ ಮಾಡಲೂ ಸಾಧ್ಯವಾಗುತ್ತಿರಲಿಲ್ಲ, ಕೇವಲ ಹೆಸರಿಗಷ್ಟೇ ಊಟ ಮಾಡುತ್ತಿದ್ದ ಕಣ್ಣುಗಳೆಲ್ಲಾ ಆಯಾಸಗೊಂಡಂತೆ, ಮುಖವು ಹೆದರಿಕೆಯಿಂದ ಬಾಡಿಹೋದಂತೆ ಕಾಣಿಸುತ್ತಿತ್ತು. ದ್ರೌಪದಿಯು ಕೆಲವು ದಿನಗಳಿಂದ ತನ್ನ ದೊಡ್ಡಪತಿಯ ಈ ಸ್ಥಿತಿಯನ್ನು ಗಮನಿಸುತ್ತಿದ್ದಳು. ಕೆಲವು ಬಾರಿ ಕಾರಣವನ್ನೂ ಕೇಳಿದಳು. ಆದರೆ ಏನೂ ಇಲ್ಲ ಎಂಬ ಉತ್ತರವೇ ಸಿಗುತ್ತಿತ್ತು. ದ್ರೌಪದಿಗೆ ತೃಪ್ತಿಕರವಾದ ಉತ್ತರ ಸಿಗದಿದ್ದಾಗ ಮತ್ತು ಯುಧಿಷ್ಠಿರನ ಮನಸ್ಸು ದಿನೇ ದಿನೇ ಬಿಗಡಾಯಿಸಿದಾಗ ಅವಳು ಅನ್ಯ ಮಾರ್ಗವಿಲ್ಲದೆ ಉಳಿದ ಪಾಂಡವರ ಬಳಿ ಇದನ್ನು ಹೇಳಲೇ ಬೇಕಾಯಿತು. ನಾಲ್ವರು ಪಾಂಡವರು (ಭೀಮ, ಅರ್ಜುನ, ನಕುಲ, ಸಹದೇವ) ಯುಧಿಷ್ಠಿರನ ಬಳಿ ಬಂದರು ಹಾಗೂ ಬಹಳ ವಿನಯದಿಂದ ಕಾರಣವನ್ನು ಕೇಳಿದರು. ಯುಧಿಷ್ಠಿರನು ಆಗಲೂ ಏನನ್ನೂ ಹೇಳಲಿಲ್ಲ. 'ಈ ದೊಡ್ಡ ಅಣ್ಣ ಬದುಕಿರುವವರೆಗೆ ಚಿಕ್ಕವರು ಚಿಂತೆ ಮಾಡುವ ಆವಶ್ಯಕತೆ ಇಲ್ಲ' ಎಂದನು. ಆಗ ಅರ್ಜುನನು, "ಅಣ್ಣಾ, ನಾವೇನು ಮಕ್ಕಳೇ? ನಮ್ಮಣ್ಣನ ದುಃಖದಲ್ಲಿ ನಾವು ಭಾಗಿಗಳಾಗಬಾರದೇ? ನೀವು ನಮ್ಮನ್ನು ನಿಮ್ಮ ತಮ್ಮಂದಿರೆಂದು ಭಾವಿಸುವುದಿಲ್ಲವೇ" ಎಂದು ಕೇಳಿದನು. ತಕ್ಷಣ ಯುಧಿಷ್ಠಿರನ ಕಣ್ಣುಗಳಿಂದ ಕಣ್ಣೀರು ಸುರಿಯಿತು. ಆಗ ಆ ನಾಲ್ವರು ತಮ್ಮಂದಿರನ್ನು ತಬ್ಬಿಕೊಂಡು ಅವರ ಮುಖ ಸವರಿ ಹೀಗೆಂದನು, "ಹಾಗೆಲ್ಲಾ ಹೇಳಬೇಡಿ, ನೀವೆಲ್ಲಾ ನನ್ನ ತಮ್ಮಂದಿರಷ್ಟೇ ಅಲ್ಲ, ನನ್ನ ಪ್ರಾಣ ಮತ್ತು ತಂದೆಯ ಮಾಣಿಕ್ಯದಂತೆ. ಆದರೆ ನಿಮ್ಮಿಂದ ಮುಚ್ಚಿಡುವಂಥಾ ದೊಡ್ಡ ವಿಷಯವೇನಿಲ್ಲ" ಎಂದನು. ಸಹದೇವನು ಕಣ್ಣಲ್ಲಿ ನೀರು ತುಂಬಿಕೊಂಡು ಹೀಗೆಂದನು, "ಅಣ್ಣಾ, ರಾಜನಾದ ಮೇಲೆ ನೀವೊಬ್ಬ ಮೋಸಗಾರನಾಗಿದ್ದೀರಾ ಎಂದು ಅನ್ನಿಸುತ್ತದೆ. ನಮ್ಮೊಂದಿಗೆ ಖಂಡಿತ ಮೋಸಮಾಡುತ್ತಿರುವಿರಿ, ನಮ್ಮ ನಾಲ್ಕೂ ಜನರ ಮೇಲಾಣೆ, ನೀವು ನಿಜ ಹೇಳಿ. ಇಲ್ಲದಿದ್ದರೆ ನಾವೂ ಸಹ ಅನ್ನ-ನೀರು ಬಿಟ್ಟು ಬಿಡುತ್ತೇವೆ". ಯುಧಿಷ್ಠಿರನಿಗೆ ಆ ತಮ್ಮನ ಪ್ರೀತಿ ತುಂಬಿದ ಬೈಗುಳವನ್ನು ಕೇಳಿ ತನ್ನ ದುಃಖವನ್ನು ಹೇಳಿಕೊಳ್ಳುವಂತೆ ಮಾಡಿತು. ಆಗ ತನಗೆ ಬೀಳುತ್ತಿದ್ದ

ಕನಸುಗಳನ್ನು ಹಾಗೂ ಗಂಗಾ ನದಿಯ ದಡದಲ್ಲಿ ನಡೆದ ಘಟನೆಗಳನ್ನೆಲ್ಲಾ ತಿಳಿಸಿದನು. (ಗೀತೆಯ 2ನೇ ಅಧ್ಯಾಯದ 7ನೇ ಶ್ಲೋಕ ಮತ್ತು 4ನೇ ಅಧ್ಯಾಯದ 3ನೇ ಶ್ಲೋಕ ಇದಕ್ಕೆ ಪ್ರಮಾಣ)

ಕೃಷ್ಣನು ಪಾಂಡವರ ಗುರುವಾಗಿದ್ದನು. ಆದ್ದರಿಂದ ಐದೂ ಜನ ಪಾಂಡವರು ದ್ವಾರಕೆಗೆ ಹೋದರು. ಯುಧಿಷ್ಠಿರನ ಚಿಂತೆಯ ಬಗ್ಗೆ ಶ್ರೀ ಕೃಷ್ಣನಿಗೆ ಹೇಳಿದರು. ಈ ಸಂಕಟಕ್ಕೆ ಕಾರಣ ಹಾಗು ಪರಿಹಾರವನ್ನೂ ಕೇಳಿದರು. ಶ್ರೀ ಕೃಷ್ಣನು ಬಹಳ ಯೋಚಿಸಿ, ಯುಧಿಷ್ಠಿರನ ಮೇಲೆ ಕೆಟ್ಟ ಆತ್ಮಗಳ ಪ್ರಭಾವ ಇದೆ ಹಾಗೂ ಯುದ್ಧದಲ್ಲಿ ತನ್ನ ಬಂಧು ಬಾಂಧವರನ್ನು ಸಾಯಿಸಿದ ಪಾಪ ಸುತ್ತಿಕೊಂಡಿದೆ ಎಂದು ಹೇಳಿದನು.

ಪರಿಹಾರ :– ಶ್ರೀ ಕೃಷ್ಣನು ಯುಧಿಷ್ಠಿರನಿಗೆ ಅಶ್ವಮೇಧ ಯಾಗ ಮಾಡುವಂತೆ ತಿಳಿಸಿದನು ಹಾಗೂ ಇಡೀ ಭೂಮಿಯ ಮೇಲಿರುವ ಸಾಧು ಸಂತರಿಗೆ, ಋಷಿ–ಮುನಿಗಳಿಗೆ, ಬ್ರಾಹ್ಮಣರಿಗೆ, ಬಂಧು ಬಾಂಧವರಿಗೆ ಹಾಗೂ ಸ್ವರ್ಗಲೋಕದ ಎಲ್ಲಾ ದೇವಾದಿ ದೇವತೆಗಳಿಗೆ ಆ ಯಜ್ಞದಲ್ಲಿ ಭೋಜನವನ್ನು ಏರ್ಪಡಿಸಲು ಹೇಳಿದನು. ನಂತರ ಯುಧಿಷ್ಠಿರನಿಗೆ, "ನೀನು ಮೊದಲು ಒಂದು ಪಂಚಾಯಣ (ಪಂಚಾನನ) ಅಂದರೆ ಪಂಚಮುಖಿ ಶಂಖವನ್ನು ತೆಗೆದುಕೊಂಡು ಬಾ. ಅದನ್ನು ಒಂದು ಸುಸಜ್ಜಿತ ಮೇಜಿನ ಮೇಲೆ ಇಡಬೇಕು. ಹಾಜರಿರುವ ಎಲ್ಲಾ ಅತಿಥಿಗಳು ಊಟ ಮಾಡಿದರೆ, ಈ ಶಂಖವು ತನ್ನಷ್ಟಕ್ಕೆ ತಾನೇ ಮೊಳಗುವುದು. ಆಗ ನಿನ್ನ ಈ ಮೂರು ತಾಪತ್ರಯದ ಸಂಕಟವು ಕೊನೆಗೊಳ್ಳುತ್ತದೆ. ಈ ಶಂಖವೇನಾದರೂ ಮೊಳಗದಿದ್ದರೆ, ಈ ಯಾಗವು ಪೂರ್ಣವಾಗುವುದಿಲ್ಲ, ನಿನ್ನ ಸಂಕಟ ಹಾಗೇ ಇರುವುದು". ಎಂದು ಹೇಳಿದನು.

ಈ ಮಾತನ್ನು ಕೇಳಿ ಅರ್ಜುನ ಸ್ತಬ್ಧನಾಗಿ ಬಿಟ್ಟನು. ಅವನ ತಲೆ ತಿರುಗಲಾರಂಭಿಸಿತು. 'ಯುದ್ಧದ ಸಿದ್ಧತೆಯಲ್ಲಿದ್ದಾಗ ನಾನು ಯುದ್ಧ ಮಾಡಲು ನಿರಾಕರಿಸಿದ್ದೆ. ಆಗ ಭಗವಂತನು ಯುದ್ಧ ಮಾಡಲು ಬಾರಿ ಬಾರಿ ಪ್ರೇರೇಪಿಸುತ್ತಿದ್ದನು. ನಿನಗೆ ಯಾವುದೇ ಪಾಪ ತಗಲುವುದಿಲ್ಲ, ನೀನು ನಿಮಿತ್ತ ಮಾತ್ರ, ನಿನ್ನ ಎರಡೂ ಕೈಯ್ಯಲ್ಲಿ ಲಡ್ಡುಗಳಿವೆ ಎಂದು ಹೇಳಿದ್ದನು. ಆದರೆ ಈಗ ಯುದ್ಧ ಮಾಡಿ ನರಸಂಹಾರದ ಪಾಪವೇ ನಿನ್ನ ಸಂಕಟದ ಕಾರಣ ಎಂದು ಹೇಳುತ್ತಿದ್ದಾರೆ. ಕೋಟಿಗಟ್ಟಲೆ (ಈಗಿನ ಶತಕೋಟಿಯಷ್ಟು )ಹಣ ಖರ್ಚಾಗುವಂಥಾ ಪರಿಹಾರವನ್ನು ಹೇಳುತ್ತಿದ್ದಾರೆ'. ಎಂದು ಯೋಚಿಸಿ ಅರ್ಜುನ ಸುಮ್ಮನಾಗಿ ಬಿಟ್ಟನು. ಗೀತೆಯ ಜ್ಞಾನವನ್ನು ನೀಡುವಾಗ 'ನೀವು ಯುದ್ಧ ಮಾಡು, ನಿನಗೆ ಪಾಪ ತಗಲುವುದಿಲ್ಲ, ಈಗ ಯುದ್ಧದಲ್ಲಿ ಮಾಡಿದ ಪಾಪವೇ ಈಗ ನಿನಗೆ ತಗುಲಿದೆ ಎಂದು ಹೇಳುತ್ತಿದ್ದಾರೆ, ಎಂದು ಈಗ ನಾನು ಶ್ರೀ ಕೃಷ್ಣನನ್ನು ಪ್ರಶ್ನಿಸಿದರೆ,. ಅಣ್ಣನಾದ ಯುಧಿಷ್ಠಿರನು ಇದರ ಪರಿಹಾರಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚಾಗಬಹುದು. ಆದ್ದರಿಂದ ಅರ್ಜುನನು ಶ್ರೀ ಕೃಷ್ಣನ ಬಳಿ ವಾದ ವಿವಾದ ಮಾಡುತ್ತಿದ್ದಾನೆ. ಅವನು ಪರಿಹಾರ ನೀಡಲು ಇಚ್ಛಿಸುತ್ತಿಲ್ಲ ಎಂದು ತಿಳಿಯಬಹುದು. ಇದರ ಸುಳಿವೇನಾದರೂ ಯುಧಿಷ್ಠಿರನಿಗೆ ಸಿಕ್ಕರೆ ಅವನು ಸತ್ತರೂ ಸರಿ ಪರಿಹಾರ ಮಾಡಿಸುವುದಿಲ್ಲ' ಎಂದು ಅರ್ಜುನನು ಯೋಚಿಸುತ್ತಾ ಯಾಗದ ದಿನಾಂಕ ಹಾಗೂ ಸ್ಥಳವನ್ನು ಕೇಳಿಕೊಂಡು ಯಾಗದ ಸಿದ್ಧತೆ ಮಾಡಿಕೊಂಡನು.

ಆ ಯಾಗದಲ್ಲಿ ಮೂವತ್ತಮೂರು (33) ಕೋಟಿ ದೇವತೆಗಳು, 88 ಸಾವಿರ ಋಷಿಗಳು, 12 ಕೋಟಿ ಬ್ರಾಹ್ಮಣರು, 56 ಕೋಟಿ ಯಾದವರು (ದ್ವಾರಕೆಯಿಂದ ಅರ್ಜುನನ ಅತ್ತೆಯ ಮನೆಯವರು) 9 ನಾಥರು, 84 ಸಿದ್ಧರು ಹಾಗೂ ಇನ್ನೂ ಅನೇಕ ಸಾಮಾನ್ಯ ಜನರು ಬಂದರು ಹಾಗೂ ಶ್ರೀ ಕೃಷ್ಣನೂ ಸೇರಿದ ಹಾಗೆ ಎಲ್ಲರೂ ಊಟ ಮಾಡಿದರು. ಆದರೆ ಶಂಖ ಮೊಳಗಲಿಲ್ಲ. ನಂತರ ಸಂತ ಸುದರ್ಶನರನ್ನು ಕರೆಸಲಾಯಿತು. ಆಗ ಶಂಖವು ಮೊಳಗಿತು. ಯಜ್ಞವು ಸಂಪೂರ್ಣವಾಯಿತು. ಆ ಸಮಯದಲ್ಲಿ ತತ್ವದರ್ಶಿ ಸಂತನ ಲೀಲೆಗಳನ್ನು ಮಾಡಲು ಪ್ರತೀಯುಗದಲ್ಲಿ ಬರುವ ಪರಮಾತ್ಮ ಕರುಣಾಮಯ ಹೆಸರಿನಿಂದ ಪ್ರಕಟರಾಗಿ ಅಲ್ಲಿಗೆ ಬಂದಿದ್ದರು. ಸುದರ್ಶನನು ಅವರ ಶಿಷ್ಯನಾಗಿದ್ದನು. ಮತ್ತು ಸತ್ಯನಾಮದ (ಸತ್ಯನಾಮವು ಎರಡು ಅಕ್ಷರಗಳಿಂದ

ಕೂಡಿದೆ–ಒಂದು ಓಂ, ಇನ್ನೊಂದು ತತ್) ಭಕ್ತಿಯನ್ನು ಮಾಡುತ್ತಿದ್ದನು. ಆದ್ದರಿಂದ ಪಾಂಡವರ ಯಾಗ ಸಫಲವಾಯಿತು ಮತ್ತು ಮೂರು ತಾಪತ್ರಯದ ಸಂಕಟ ಸಮಾಪ್ತವಾಯಿತು, ಅದು ಶ್ರೀ ಕೃಷ್ಣನು ಊಟ ಮಾಡಿದ್ದರಿಂದ ಆಗಲೀ, ಮೇಲೆ ತಿಳಿಸಿರುವ ಮಹಾನುಭಾವರು ಊಟವನ್ನು ಮಾಡಿದ್ದರಿಂದ ಆಗಲಿ, ಪಾಂಡವರ ಯಾಗವು ಯಶಸ್ವಿಯಾಗಲಿಲ್ಲ . ಶ್ರೀ ಸುದರ್ಶನ ಅವರು ಆ ಪರಮ ಅಕ್ಷರಬ್ರಹ್ಮ ಅಂದರೆ ಪೂರ್ಣ ಪರಮಾತ್ಮನ ಭಕ್ತಿ ಮಾಡುತ್ತಿದ್ದರು. ಸೂಕ್ಷ್ಮವೇದದಲ್ಲಿ ಬರೆದಿದೆ :–

ತುಮ್ ಕೌನ್ ರಾಮ್ ಕಾ ಜಪ್‌ತೇ ಜಾಪಮ್। ತಾತೇಂ ಕಟೇಂ ನಾ ತುಮ್ಹರೆಂ ತೀನೋಂ ತಾಪಮ್॥

ಭಾವಾರ್ಥ :– ನೀವು ಯಾವ ರಾಮನ ಭಕ್ತಿಯ ನಾಮ ಜಪಿಸುತ್ತಿರಿ, ಅದರಿಂದ ನಿಮ್ಮ ಮೂರು ತಾಪತ್ರಯಗಳು ಸಹ ನಾಶವಾಗುವುದಿಲ್ಲ. ಮೋಕ್ಷವಂತು ಬಹಳ ದೂರದ ಮಾತು. ಆದ್ದರಿಂದ ನನ್ನ (ಸಂತ ರಾಮ್‌ಪಾಲ್) ಬಳಿ ಆ ಸತ್ಯ ಸಾಧನೆ ಇದೆ. ಎರಡು ಅಕ್ಷರಗಳ ಸತ್ಯನಾಮವಿದೆ. ಬನ್ನಿ, ದೀಕ್ಷೆ ಪಡೆದು ನಿಮ್ಮ ಉದ್ಧಾರ ಮಾಡಿಕೊಳ್ಳಿ.

ಈಗ ಮತ್ತೆ ಅದೇ ವಿಷಯಕ್ಕೆ ಬರೋಣ. ಗೀತೆಯಲ್ಲಿ ಎರಡು ರೀತಿಯ ಜ್ಞಾನವಿದೆ. ಅಂದರೆ ವಿರೋಧಾಭಾಸವಿದೆ. ಒಂದಂತೂ ಗೀತೆಯ ಜ್ಞಾನದಾತನು ಯುದ್ಧ ಮಾಡಿಸಲು ಪಣತೊಟ್ಟಿದ್ದಾನೆ. ಅದು ವೇದಗಳಿಗೆ ವಿರುದ್ಧವಾದ ಹಾಗು ಸತ್ಯಕ್ಕೆ ವಿರುದ್ಧವಾದರಿಂದ ಅದು ಸ್ವೀಕಾರವಿಲ್ಲ, ಅದು ಅವನ ಅಭಿಪ್ರಾಯವಾಗಿದೆ. ಆದರೆ ಗೀತೆಯ 12ನೇ ಅಧ್ಯಾಯದ 5ನೇ ಶ್ಲೋಕದಲ್ಲಿ ಆ ಸಚ್ಚಿದಾನಂದ ಘನಬ್ರಹ್ಮನ ಭಕ್ತಿ ಕ್ಲೇಶ ಹಾಗು ದುಃಖಪೂರ್ವಕ ಪ್ರಾಪ್ತಿಯಾಗುವುದೆಂದು ಹೇಳಲಾಗಿದೆ. ತತ್ವದರ್ಶಿ ಸಂತನು ಸಿಕ್ಕ ನಂತರ ಆ ಪರಮಾತ್ಮ (ಪೂರ್ಣ ಬ್ರಹ್ಮ) ನ ಭಕ್ತಿ ಮಾಡುತ್ತಾ ಮಾಡುತ್ತಾ ನಾಮಜಪದ ಸಾಧನೆ ಮಾಡಿ ಮಾಡಲಾಗುತ್ತದೆ. ಬಹಳ ಸರಳ ಎಂದು ವೇದದಲ್ಲಿ ಬರೆದಿದೆ. ಇದರಿಂದ ಗೀತೆಯ ಜ್ಞಾನದಾತನು ಹೇಳಿರುವ ಅಭಿಪ್ರಾಯವು, ಅದು ಆ ವೇದಗಳ (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಹಾಗೂ ಐದನೇ ವೇದವಾದ ಸೂಕ್ಷ್ಮವೇದ) ಜೊತೆ ಸಾಮ್ಯತೆ ಇರದಿದ್ದರೆ ಅದು ವ್ಯರ್ಥವಾದ ಜ್ಞಾನ ಎಂದು ಸಾಬೀತಾಯಿತು. ಅದು ಗೀತೆಯ ಜ್ಞಾನದಾತನ ವೈಯಕ್ತಿಕ ಜ್ಞಾನವಾಗಿದೆ. ನಾವು ಅದನ್ನು ಗ್ರಹಿಸಬಾರದು, ಅದನ್ನು ಒಪ್ಪಬಾರದು.

ಅನ್ಯ ಪ್ರಮಾಣ :– ಗೀತೆಯ 12ನೇ ಅಧ್ಯಾಯದ 8ನೇ ಶ್ಲೋಕದಿಂದ 19ನೇ ಶ್ಲೋಕದವರೆಗೆ ತನ್ನ ಅಭಿಪ್ರಾಯ ತಿಳಿಸಿದ್ದಾನೆ. ಗೀತೆಯ 12ನೇ ಅಧ್ಯಾಯದ 8ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು, "ನನ್ನಲ್ಲಿ ಮನಸ್ಸಿಡು, ನನ್ನಲ್ಲಿ ಬುದ್ಧಿ ಸ್ಥಿರಗೊಳಿಸು, ನನ್ನನ್ನು ಪಡೆಯುವೆ. ಇದೆ ಪ್ರಕಾರ (ಊರ್ಧ್ವಂ) ಮೇಲಿರುವ ಅವ್ಯಕ್ತನ ಭಕ್ತಿ ಮಾಡಿದರೆ ಅವನನ್ನೇ ಪಡೆಯುವೆ. ಇದರಲ್ಲಿ ಯಾವುದೇ ಸಂಶಯವಿಲ್ಲ" ಎಂದು ಹೇಳಿದ್ದಾನೆ. (ಗೀತೆಯ 12ನೇ ಅಧ್ಯಾಯದ 8ನೇ ಶ್ಲೋಕ).

ಗೀತೆಯ 12ನೇ ಅಧ್ಯಾಯದ 9ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, "ಹಾಗೊಂದು ವೇಳೆ ನನ್ನನ್ನು ಪಡೆಯಲು ಇಚ್ಛಿಸಿದರೆ ಹಾಗೂ ನಿನ್ನ ಮನಸ್ಸನ್ನು ನನ್ನಲ್ಲಿ ಇಡಲು ಅಸಮರ್ಥನಾದರೆ ಹೇ ಧನಂಜಯ!, ಹೇ ಅರ್ಜುನ, ಅಭ್ಯಾಸ, ಯೋಗ ಅರ್ಥಾತ್ ನಾಮಜಪ ಹಾಗೂ ನಿತ್ಯ ಪಠಣ ಮುಂತಾದವುಗಳನ್ನು ಅಭ್ಯಾಸ ಸಾಧನೆ ಎನ್ನುವರು ಅದನ್ನು ಮಾಡುವುದರಿಂದ ನನ್ನನ್ನು ಪಡೆಯಲು ಇಚ್ಛಿಸು".

ಗೀತೆಯ 12ನೇ ಅಧ್ಯಾಯದ 10ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ, "ಹಾಗೊಂದು ವೇಳೆ ನಾಮಜಪ, ನಿತ್ಯ ಪಠಣ ಮುಂತಾದವುಗಳನ್ನು ಮಾಡಲು ಅಸಮರ್ಥನಾದರೆ (ಮತ್ ಕರ್ಮ ಪರಮಃ) ನನಗಾಗಿ ಶ್ರೇಷ್ಠ ಕರ್ಮವನ್ನು ಮಾಡುವಂತಹವನಾಗು. ಈ ರೀತಿ ನನಗಾಗಿ ಒಳ್ಳೆಯ ಕರ್ಮವನ್ನು ಮಾಡಿದರೆ ಸಿದ್ಧಿಯನ್ನು ಪಡೆದುಕೊಳ್ಳುವೆ."

ಗೀತೆಯ 12ನೇ ಅಧ್ಯಾಯದ 11ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು

ಹೇಳಿರುವುದೇನೆಂದರೆ, "ಹಾಗೊಂದು ವೇಳೆ (ಮದ್ಯೋಗಮ್=ಮತ್‌ಯೋಗಮ್) ನನ್ನ ಮೂಲಕ ಹೇಳಲ್ಪಟ್ಟ ಭಕ್ತಿ ಸಾಧನೆಯ ಮೇಲೆ ಆಶ್ರಯ ಪಡೆದು, ಮೇಲೆ ತಿಳಿಸಿದಂತಹ ಸಾಧನೆಯನ್ನು ಮಾಡಲು ಅಸಮರ್ಥನಾದರೆ (ಯತಾತ್ಮವಾನ್=ಯತ್‌ಆತ್ಮವಾನ್) 'ಯತಿ ಆತ್ಮ ಉಳ್ಳವನಾಗು, 'ಯತಿ' ಎಂದರೆ ತನ್ನ ಪತ್ನಿಯನ್ನು ಬಿಟ್ಟು ಪರಸ್ತ್ರೀಯ ಬಗ್ಗೆ ಕಾಮವಾಸನೆಯ ದೋಷದ ಭಾವನೆ ಮನಸ್ಸಿನಲ್ಲಿ ಹೊಂದದೆ ಇರುವವನು ಎಂದರ್ಥ. ಹೇಗೆ ಶ್ರೀ ರಾಮಚಂದ್ರನಿಗೆ ಯತಿ ಎಂದೂ, ಸಂತರ ಭಾಷೆಯಲ್ಲಿ ಜತಿ ಎಂದು ಕರೆಯುತ್ತಾರೆ. ಶ್ರೀ ಸುಖದೇವ = ಶುಕದೇವ = ವ್ಯಾಸರ ಪುತ್ರನಿಗೂ ಸಹ ಯತಿ = ಜತಿ ಎಂದು ಕರೆಯಲಾಗಿದೆ. ರಾಮಚಂದ್ರನ ಪತ್ನಿ ಸೀತೆಗೆ 'ಸತಿ' ಎನ್ನುತ್ತಾರೆ. ಆದ್ದರಿಂದ ಯತಾತ್ಮವಾನ್ ಅರ್ಥಾತ್ ಯತಿ ಪುರುಷನಾಗಿ ಎಲ್ಲಾ ಕರ್ಮಫಲಗಳನ್ನು ತ್ಯಜಿಸು" ಎಂದು ಹೇಳಿದೆ. (ಗೀತೆಯ 12ನೇ ಅಧ್ಯಾಯದ 11ನೇ ಶ್ಲೋಕ)

ಗೀತೆಯ 12ನೇ ಅಧ್ಯಾಯದ 12ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, (ಅಭ್ಯಾಸಾತ್) ನಾಮಜಪ, ನಿತ್ಯಪಠಣೆ ಮುಂತಾದವುಗಳನ್ನು ಯಾರು ಅಭ್ಯಾಸ ಮಾಡುತ್ತಾರೋ, ಅದಕ್ಕಿಂತ ಶ್ರೇಷ್ಠ ಜ್ಞಾನವಿದೆ ಅರ್ಥಾತ್ ಜಿಜ್ಞಾಸುವಾಗಿ ಜ್ಞಾನವನ್ನು ಪಡೆದುಕೊ, ಜ್ಞಾನದಿಂದ ಧ್ಯಾನ ಅರ್ಥಾತ್ ಹಠಯೋಗ ಸಾಧನೆ ಮಾಡಿ ಸಮಾಧಿ ಸ್ಥಿತಿ ತಲುಪುವುದನ್ನು ಗೀತೆಯ ಜ್ಞಾನದಾತನ ಪ್ರಕಾರ ಧ್ಯಾನವೆಂದು ಹೇಳಲಾಗಿದೆ. ಎಲ್ಲಾ ಋಷಿವರ್ಯರು ಇದನ್ನೇ ಅನುಸರಿಸುತ್ತಿದ್ದರು. ಆದರೆ ಈಗ ಇದನ್ನು ಮೆಡಿಟೇಷನ್ ಎಂದು ಕರೆಯುತ್ತಾರೆ. ಧ್ಯಾನಕ್ಕಿಂತ ಶ್ರೇಷ್ಠವಾದದ್ದು ಕರ್ಮಗಳ ಫಲದ ತ್ಯಾಗಮಾಡುವುದು. ಏಕೆಂದರೆ ತ್ಯಾಗದಿಂದ ತಕ್ಷಣವೇ ಶಾಂತಿ ಸಿಗುತ್ತದೆ (ಇದು ಗೀತೆಯ ಜ್ಞಾನದಾತನ ಅಭಿಪ್ರಾಯ)

ಗೀತೆಯ 12ನೇ ಅಧ್ಯಾಯದ 13–14ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಯಾವ ವ್ಯಕ್ತಿಯು ಎಲ್ಲಾ ಜೀವಿಗಳ ಜೊತೆ ದ್ವೇಷ ರಹಿತನಾಗಿರುತ್ತಾನೋ, ಅವನು ಎಲ್ಲರ ಮಿತ್ರನಾಗಿರುತ್ತಾನೆ, ದಯಾಳು ಆಗಿರುವನು. ರಾಜ ಜನಕನು ಇದ್ದ ಹಾಗೆ. ಅಹಂಕಾರವಿಲ್ಲದೆ ಸುಖ ದುಃಖಗಳಲ್ಲಿ ಸಮಾನವಾಗಿರುತ್ತಾನೆ. ಎಲ್ಲರನ್ನು ಕ್ಷಮಿಸುತ್ತಾನೆ. ಯಾವ ಯೋಗಿ (ಸಾಧಕ) ನಿರಂತರವಾಗಿ ಸಂತುಷ್ಟನಾಗಿರುತ್ತಾನೆ. (ಯತಾತ್ಮ) ಯತಿ ಪುರುಷನು, ದೃಢನಿಶ್ಚಯವುಳ್ಳವನು. ಅರ್ಥಾತ್ ಯಾವ ಜ್ಞಾನವನ್ನು ನನ್ನ ಅಭಿಪ್ರಾಯ ಅಥವಾ ವೇದ ಜ್ಞಾನ ಎಂದು ಹೇಳಿರುವೆನೋ, ಅದನ್ನು ದೃಢ ನಿರ್ಧಾರದಿಂದ ಪಾಲಿಸುವವನು. ನನಗೆ ಸಮರ್ಪಿಸಿಕೊಂಡವನು, ಆ ನನ್ನ ಭಕ್ತ ನನಗೆ ಪ್ರಿಯವಾದವನು.

ಹೀಗೆ ಗೀತೆಯ 12ನೇ ಅಧ್ಯಾಯದ 15ರಿಂದ 19ನೇ ಶ್ಲೋಕದವರೆಗೆ ಬರೀ ನಾಸ್ತಿಕತೆಯ ಕಡೆಗೆ ಕರೆದು ಕೊಂಡು ಹೋಗುವಂಥಾ ತನ್ನ ಅಭಿಪ್ರಾಯವನ್ನು ಹೇಳಿದ್ದಾನೆ. ಮೇಲೆ ತಿಳಿಸಿದ ಉಲ್ಲೇಖದಲ್ಲಿ, ಗೀತೆಯ 12ನೇ ಅಧ್ಯಾಯದ 8ರಿಂದ 12ನೇ ಶ್ಲೋಕದವರೆಗೆ ಹೇಳಿರುವುದೇನೆಂದರೆ:–

"ನನ್ನಲ್ಲಿ ಮನಸ್ಸಿಡು, ಒಂದು ವೇಳೆ ಮನಸ್ಸಿಡದಿದ್ದರೆ, ನಾಮಜಪ ಮತ್ತು ನಿತ್ಯಪಠಣೆ ಮುಂತಾದವುಗಳನ್ನು ಅಭ್ಯಾಸ ಮಾಡು. ಅಭ್ಯಾಸ ಎಂದರೆ ಮತ್ತೆ ಮತ್ತೆ ಕರ್ಮ ಮಾಡು ಎಂದರ್ಥ. ನಾಮ ಜಪ, ನಿತ್ಯಪಠಣೆ ಮಾಡಿ ನನ್ನನ್ನು ಪಡೆಯಲು ಇಚ್ಛಿಸು. ಹಾಗೊಂದು ವೇಳೆ ನಾಮಜಪ, ನಿತ್ಯ ಪಠಣೆ ಮಾಡದಿದ್ದರೆ ನನಗಾಗಿ ಅಂದರೆ ಪರಮಾತ್ಮನಿಗಾಗಿ ಕರ್ಮ ಮಾಡುವಂತಹವನಾಗು. ಉದಾಹರಣೆಗೆ ಧಾರ್ಮಿಕ ಕರ್ಮವನ್ನು ಮಾಡುತ್ತಾರೆ. ಎಲ್ಲೋ ಕಂಬಳಿ ಹಂಚುವುದು, ಎಲ್ಲೋ ಅನ್ನದಾಸೋಹ ಮಾಡಿಸುವುದು, ಎಲ್ಲೋ ದೇವಸ್ಥಾನ ಕಟ್ಟಿಸುವುದು, ಎಲ್ಲೋ ಕೆರೆ ಕಟ್ಟಿಸುವುದು, ಪಕ್ಷಿಗಳಿಗೆ ಕಾಳು ಹಾಕುವುದು ಮುಂತಾದವುಗಳನ್ನು ಪರಮಾತ್ಮನನ್ನು ಪಡೆಯಲು ಮಾಡುವಂತಹ ಕರ್ಮ ಎಂದು ಹೇಳಲಾಗುತ್ತದೆ. ಇವುಗಳನ್ನು ಮಾಡುವುದರಿಂದ ಸ್ವಲ್ಪ ಸಿದ್ಧಿ ಪ್ರಾಪ್ತಿಯಾಗುವುದು. ಪ್ರಿಯ ಓದುಗರೇ, ಯೋಚಿಸಿ, ಈ ಶ್ಲೋಕದಲ್ಲಿ ಈ ಕರ್ಮಗಳಿಂದ ಸಿಗುವ

ಪ್ರತಿಫಲವನ್ನು ತಿಳಿಸಲಾಗಿದೆ. ಸಿದ್ಧಿ ಪ್ರಾಪ್ತವಾಗುತ್ತದೆ ನಂತರ ಸಾಧಕನು ಸ್ವತಃ ಮಾಟಮಂತ್ರ ಮಾಡಲು, ಆಶೀರ್ವಾದ, ಶಾಪ ನೀಡಲು ಯೋಗ್ಯನಾಗುತ್ತಾನೆ ಮತ್ತು ಮಹರ್ಷಿ ಎಂದು ಪ್ರಸಿದ್ಧನಾಗುತ್ತಾನೆ. (ಗೀತೆಯ 12ನೇ ಅಧ್ಯಾಯದ 10ನೇ ಶ್ಲೋಕ).

ಒಂದು ವೇಳೆ ಪರಮಾತ್ಮನಿಗಾಗಿ ಕರ್ಮವನ್ನು ಸಹ ಮಾಡದಿದ್ದರೆ ಯತಿ (ಜತಿ) ಪುರುಷನಾಗಿ ಕರ್ಮಫಲವನ್ನು ತ್ಯಜಿಸಿಬಿಡು.

ವಿಚಾರಮಾಡಿ :- ಭಗವಂತನಿಗಾಗಿ ಧಾರ್ಮಿಕ ಕರ್ಮ ಮಾಡುವುದೇ ಇಲ್ಲ ಎಂದ ಮೇಲೆ ತ್ಯಾಗ ಮಾಡಲು ಇನ್ನು ಯಾವ ಕರ್ಮ ಫಲವು ಬಾಕಿ ಉಳಿದಿದೆ? ಇದನ್ನು ಅರ್ಥವಿಲ್ಲದ, ಅರ್ಥಹೀನ ಜ್ಞಾನವೆಂದು ಕರೆಯುತ್ತಾರೆ. (ಗೀತೆಯ 12ನೇ ಅಧ್ಯಾಯದ 11ನೇ ಶ್ಲೋಕ). ಇನ್ನು ಗೀತೆಯ 12ನೇ ಅಧ್ಯಾಯದ 12ನೇ ಶ್ಲೋಕದಲ್ಲಂತು ಅದ್ಭುತ ಮಾಡಿದ್ದಾನೆ. ಹೇಳುತ್ತಾನೆ ಅಭ್ಯಾಸ ಅರ್ಥಾತ್ ನಾಮಜಪ ನಿತ್ಯ ಪಠಣೆ ರೂಪದಲ್ಲಿರುವ ಅಭ್ಯಾಸಕ್ಕಿಂತ ಗೀತೆಯ ಜ್ಞಾನದಾತನು ಹೇಳಿರುವ ತನ್ನ ಜ್ಞಾನ (ಅಭಿಪ್ರಾಯ) ಶ್ರೇಷ್ಠ ಎಂದು ಹೇಳಿದ್ದಾನೆ. ಜ್ಞಾನಕ್ಕಿಂತ ಧ್ಯಾನ **(meditation)** ಅರ್ಥಾತ್ ಬಲವಂತವಾಗಿ, ಏಕಾಂತವಾಗಿ ಒಂದೇ ಜಾಗದಲ್ಲಿ ಆಸೀನನಾಗಿ (ಗೀತೆಯ 6ನೇ ಅಧ್ಯಾಯದ 10ನೇ ಶ್ಲೋಕದಿಂದ 15ನೇ ಶ್ಲೋಕದವರೆಗೆ ಹೇಳಿರುವ ವಿಧಾನ ಗೀತೆಯ ಜ್ಞಾನದಾತನ ಅಭಿಪ್ರಾಯವಾಗಿದೆ) ಮಾಡುವುದು ಶ್ರೇಷ್ಠ. ಈ ಧ್ಯಾನದಿಂದ ಎಲ್ಲಾ ಧಾರ್ಮಿಕ ಪ್ರತಿಫಲಗಳನ್ನು ತ್ಯಾಗ ಮಾಡಿದಾಗ ತಕ್ಷಣವೇ ಶಾಂತಿ ಸಿಗುತ್ತದೆ. ಗೀತೆಯ 12ನೇ ಅಧ್ಯಾಯದ 11ನೇ ಶ್ಲೋಕದಲ್ಲಿ ಎಲ್ಲಾ ಧಾರ್ಮಿಕತೆಯ ಕರ್ಮಗಳನ್ನು ಬಿಟ್ಟು ಬಿಡಲು ಆದೇಶ ನೀಡಲಾಗಿದೆ. ಆದರೆ ಈ ರೀತಿಯ ಜ್ಞಾನವು ಸಾಧಕರನ್ನು ನಾಸ್ತಿಕತೆಯ ಕಡೆಗೆ ನೂಕುತ್ತದೆ. ಇದು ಗೀತೆಯ ಜ್ಞಾನದಾತನ ಶಾಸ್ತ್ರ ವಿರುದ್ಧವಾದ ಜ್ಞಾನವಾಗಿದೆ. ಈ ಕಾರಣದಿಂದ ಸಾಧಕರು ಶಾಸ್ತ್ರ ವಿಧಾನವನ್ನು ಬಿಟ್ಟು ತಮ್ಮ ಮನಸ್ಸಿಗೆ ಬಂದಂತೆ ಆಚರಣೆ ಮಾಡಲು ಪ್ರಾರಂಭಿಸಿದ್ದಾರೆ ಹಾಗೂ ತಮ್ಮ ಅಮೂಲ್ಯವಾದ ಮಾನವ ಜೀವನವನ್ನು ಹಾಳು ಮಾಡಿಕೊಳ್ಳುತ್ತಾರೆ.

ಒಂದು ವೇಳೆ ಭಗವಂತನಲ್ಲಿ ದೃಢ ಚಿತ್ತವಿಡದೆ ಇದ್ದರೆ, ಅಭ್ಯಾಸ (ನಾಮ ಜಪ, ನಿತ್ಯ ಪಠಣೆ) ಮಾಡು. ಅಭ್ಯಾಸ ಮಾಡಲು ಸಾಧ್ಯವಿಲ್ಲದಿದ್ದರೆ ಭಗವಂತನಿಗಾಗಿ ಕರ್ಮ ಮಾಡು, ಭಗವಂತನಿಗಾಗಿ ಕರ್ಮ ಮಾಡಲು ಸಾಧ್ಯವಿಲ್ಲದಿದ್ದರೆ, ಎಲ್ಲಾ ಕರ್ಮಗಳ ಫಲವನ್ನು ಬಿಟ್ಟು ಬಿಡು ಹಾಗಾದರೆ ನಾಲ್ಕೂ ವೇದಗಳ ಹಾಗೂ ಭಗವದ್ಗೀತೆಯ ಅನ್ಯ 650 ಶ್ಲೋಕಗಳ (ಯಾಕೆಂದರೆ 50 ಶ್ಲೋಕಗಳಲ್ಲಿ ಗೀತಾ ಜ್ಞಾನದಾತನ ಅಭಿಪ್ರಾಯದ ಜ್ಞಾನ ಇದೆ) ಅವಶ್ಯಕತೆಯಾದರೂ ಏನಿತ್ತು? ಇವೆ 4-5 ಶ್ಲೋಕ ಪರ್ಯಾಪ್ತವಾಗಿದ್ದವು ಈ ರೀತಿ ಗೀತೆಯ ಜ್ಞಾನದಾತನು ತನ್ನ ಅಭಿಪ್ರಾಯ ನೀಡಿದ್ದಾನೆ, ಅದು ವೇದಗಳ ವಿರುದ್ಧವಾದ ಜ್ಞಾನವಾಗಿದೆ. ಅದನ್ನು ಸ್ವೀಕರಿಸುವುದು ಸರಿಯಲ್ಲ. ಗೀತೆಯ 12ನೇ ಅಧ್ಯಾಯದ 20ನೇ ಶ್ಲೋಕದಲ್ಲಿ ತನ್ನ ಅಜ್ಞಾನವನ್ನು ಮುಚ್ಚಿಡಲು ಹೀಗೆ ಹೇಳಿದ್ದಾನೆ. ಯಾವ (ಶ್ರಧ್ವಾನಾಃ) ಸಾಧಕನು ಶ್ರದ್ಧೆಯಿಂದ (ಮತ್ಪರಮಾಃ=ಮತ್ ಪರಮಾಃ) ನನಗಿಂತ ಶ್ರೇಷ್ಠವಾದ ಪರಮಾತ್ಮನನ್ನು (ಪರ್ಯುಪಾಸತೆ) ಪೂಜಿಸುತ್ತಾನೋ ಅವನು ನನಗೆ ಅತೀ ಪ್ರಿಯನು. ಎಂದರೆ ಪ್ರಾರಂಭದಲ್ಲಿ ವರ್ಣನೆ ಇದೆಯೇನೆಂದರೆ ಗೀತೆ ಅಧ್ಯಾಯ 5 ಶ್ಲೋಕ 14 ರಲ್ಲಿ 16, 20, 25, 26 ರಲ್ಲಿ ಕೂಡಾ ಪ್ರಮಾಣವಿದೆ, ಗೀತಾ ಜ್ಞಾನದಾತನು ತನಗಿಂತ ಅನ್ಯ ಪ್ರಭುವಿನ ವಿಷಯದಲ್ಲಿ ಹೇಳಿದ್ದಾನೆ. ಗೀತೆಯ ಅಧ್ಯಾಯ 5 ಶ್ಲೋಕ 14 ರಲ್ಲಿ ಗೀತೆ ಜ್ಞಾನದಾತನು ಹೇಳಿದ್ದಾನೆ (ಪ್ರಭು) ಪರಮಾತ್ಮ ಯಾವುದೇ ಮನುಷ್ಯನ ಕರ್ಮಗಳನ್ನು ರಚಿಸುವುದಿಲ್ಲ ಮತ್ತು ಕರ್ಮಫಲ ಸಂಯೋಗವನ್ನು ರಚಿಸುವುದಿಲ್ಲ, ಕರ್ತೃತ್ವವನ್ನು ರಚಿಸುವುದಿಲ್ಲ, ಆದರೂ ಸಕಲ ಜೀವಿಗಳು ತನ್ನ ಸ್ವಭಾವದಂತೆ ಕರ್ಮ ಮಾಡುತ್ತವೆ.

ಗೀತೆಯ 5ನೇ ಅಧ್ಯಾಯದ 15ನೇ ಶ್ಲೋಕ :- (ವಿಭುಃ) ಸರ್ವವ್ಯಾಪಿ ಅಂದರೆ ವಾಸುದೇವ. ಗೀತೆಯ 3ನೇ ಅಧ್ಯಾಯದ 14-15ನೇ ಶ್ಲೋಕದಲ್ಲಿ ಅವನ ವರ್ಣನೆ ಇದೆ. ಸರ್ವ ಪ್ರಾಣಿಗಳ

ಸೃಷ್ಟಿಯು ಅನ್ನದಿಂದಾಗುತ್ತದೆ. ಅನ್ನವು ಮಳೆಯಿಂದ ಉತ್ಪನ್ನವಾಗುತ್ತದೆ. ಮಳೆಯು ಧಾರ್ಮಿಕ ಅನುಷ್ಠಾನ ಅರ್ಥಾತ್ ಯಜ್ಞಗಳಿಂದಾಗುತ್ತದೆ. ಯಜ್ಞವು ಶಾಸ್ತ್ರಾನುಸಾರವಾದ ಧಾರ್ಮಿಕ ಕರ್ಮಗಳಿಂದ ಉತ್ಪನ್ನವಾಗುತ್ತದೆ. ಬ್ರಹ್ಮ ಅರ್ಥಾತ್ ಕ್ಷರ ಪುರುಷನು (ಅಕ್ಷರಃ ಸಮ್ ಉದ್ಧ ಭವಮ್) ಅವಿನಾಶಿ ಪರಮಾತ್ಮ ಅರ್ಥಾತ್ ಪರಮ ಅಕ್ಷರ ಬ್ರಹ್ಮನಿಂದ ಉತ್ಪತ್ತಿಯಾಗಿದ್ದಾನೆ ಎಂದು ತಿಳಿ. ಇದರಿಂದ (ಸರ್ವಗತಮ್ ಬ್ರಹ್ಮ) ಸರ್ವವ್ಯಾಪಿ ಪರಮಾತ್ಮ ಅರ್ಥಾತ್ (ವಿಭುಃ) ಸರ್ವವ್ಯಾಪಿ ಪರಮೇಶ್ವರನು ಯಾರ ಪಾಪವನ್ನೂ, ಯಾವುದೇ ಶುಭಕರ್ಮವನ್ನು ಪಡೆದುಕೊಳ್ಳುವುದಿಲ್ಲವೆಂದು ಸಾಬೀತಾಗುತ್ತದೆ. ಎಲ್ಲಾ (ಜಂತವಃ) ಜೀವ ಜಂತುಗಳು ಹಾಗೂ ಮನುಷ್ಯರು ಅವನಿಂದ ಮೋಹಿತರಾಗುತ್ತಿದ್ದಾರೆ.

ಗೀತೆಯ **5**ನೇ ಅಧ್ಯಾಯದ **16**ನೇ ಶ್ಲೋಕ ಹಾಗೂ **17**ನೇ ಶ್ಲೋಕವನ್ನು ಓದಿದಾಗ ಸ್ಪಷ್ಟವಾಗುವುದೇನೆಂದರೆ, ಗೀತೆಯ ಜ್ಞಾನದಾತನು ತನ್ನನ್ನು ಬಿಟ್ಟು ಬೇರೆ ಪರಮೇಶ್ವರನ ವಿಷಯವನ್ನು ಹೇಳಿದ್ದಾನೆ. ಇದೇ ರೀತಿ ಗೀತೆಯ **5**ನೇ ಅಧ್ಯಾಯದ **20, 24, 25, 26**ನೇ ಶ್ಲೋಕಗಳನ್ನು ಬೇರೆ ಅನುವಾದಕರ ಮೂಲಕ ಮಾಡಲ್ಪಟ್ಟ ಸರಳಾರ್ಥದಿಂದ ತಿಳಿಯಬಹುದಾಗಿದೆ.

ಇದೇ ರೀತಿ ಗೀತೆಯ **6**ನೇ ಅಧ್ಯಾಯದ **7**ನೇ ಶ್ಲೋಕದಲ್ಲಿ ಮೂಲ ಪಾಠದಲ್ಲಿ 'ಪರಮಾತ್ಮ' ಎಂದು ಸ್ಪಷ್ಟವಾಗಿ ಬರೆದಿದೆ, ಅದು ಗೀತೆಯ ಜ್ಞಾನದಾತನಿಗಿಂತ ಬೇರೆ 'ಪರಮಾತ್ಮನ' ಪ್ರಮಾಣವಿದೆ. ಏಕೆಂದರೆ ಗೀತೆಯ **15**ನೇ ಅಧ್ಯಾಯದ **17**ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, **16**ರಲ್ಲಿ ವರ್ಣಿಸಲಾದ ಇಬ್ಬರು ಪುರುಷರಾದ ಕ್ಷರಪುರುಷ ಹಾಗೂ ಅಕ್ಷರಪುರುಷರ ಹೊರತು ಯಾರೋ ಉತ್ತಮ ಪುರುಷ ಅಂದರೆ ಪುರುಷೋತ್ತಮನಿದ್ದಾನೆ. ಅವನನ್ನು (ಪರಮಾತ್ಮ ಇತಿ ಉದಾಹೃತ) ಪರಮಾತ್ಮ ಎಂದು ಕರೆಯಲಾಗುತ್ತದೆ. ಅವನೇ ಮೂರೂ ಲೋಕಗಳಲ್ಲಿ ಪ್ರವೇಶಿಸಿ ಎಲ್ಲರ ಪಾಲನೆ-ಪೋಷಣೆ ಮಾಡುತ್ತಾನೆ, ಅವನು ಅವಿನಾಶಿ ಪರಮಾತ್ಮನು. ಇದರಲ್ಲಿ (ಗೀತೆಯ **15**ನೇ ಅಧ್ಯಾಯದ **17**ನೇ ಶ್ಲೋಕದಲ್ಲಿ)ಯೂ 'ಪರಮಾತ್ಮ' ಶಬ್ದವಿದೆ. ಈ ರೀತಿ ಗೀತೆಯ ಅಮೃತ ಜ್ಞಾನವನ್ನು ತಿಳಿಯಬೇಕು. ಕೇವಲ ಗೀತೆಯನ್ನು ಓದುವುದರಿಂದ ಉದ್ಧಾರವಾಗುವುದಿಲ್ಲ, ಇದರ ಅಮೃತ ಜ್ಞಾನವನ್ನು ತಿಳಿದು, ಅದರ ಅನುಸಾರವಾಗಿ ಧಾರ್ಮಿಕ ಕ್ರಿಯೆಗಳನ್ನು ಮಾಡುವುದರಿಂದ ಮೂರೂ ಲಾಭಗಳಾಗುವವು. ಅವು ಗೀತೆಯ **16**ನೇ ಅಧ್ಯಾಯದ **23**ನೇ ಶ್ಲೋಕದಲ್ಲಿ ತಿಳಿಸಿರುವಂತೆ ಸುಖಪ್ರಾಪ್ತಿ, ಸಿದ್ಧಿ ಶಕ್ತಿಯ ಪ್ರಾಪ್ತಿ ಹಾಗೂ ಪರಮಗತಿ ಎಂದರೆ ಪೂರ್ಣ ಮೋಕ್ಷ ಪ್ರಾಪಿ ಎಂಬ ಲಾಭಗಳು.

ಈಗ ಪುನಃ ಅದೇ ಪ್ರಸಂಗದ ಬಗ್ಗೆ ಚರ್ಚಿಸೋಣ. ಗೀತೆಯ ಜ್ಞಾನ ದಾತನಿಗಿಂತ ಭಿನ್ನವಾದ ಬೇರೆ ಪೂರ್ಣ ಪರಮಾತ್ಮನು ಯಾರು ಹಾಗೂ ಅವನು ತನ್ನನ್ನು ಬಿಟ್ಟು ಬೇರೆ ಯಾವ ಪರಮೇಶ್ವರನಿಗೆ ಶರಣಾಗಬೇಕು ಎಂದು ಹೇಳಿದ್ದಾನೆ ಎನ್ನುವುದರ ಬಗ್ಗೆ ಪ್ರಶ್ನೆ ಕೇಳಿರುವಾತನು ತಿಳಿಯಲು ಇಚ್ಛಿಸಿದ್ದಾನೆ.

ಉತ್ತರ ಈ ರೀತಿ ಇದೆ. ಗೀತೆಯ ಜ್ಞಾನದಾತನಿಗಿಂತ ಭಿನ್ನವಾಗಿರುವ 'ಪರಮ ಅಕ್ಷರ ಬ್ರಹ್ಮನಿದ್ದಾನೆ' ಎನ್ನುವುದಂತೂ ಸ್ಪಷ್ಟವಾಗಿದೆ. ಗೀತೆಯ **18**ನೇ ಅಧ್ಯಾಯದ **62**ನೇ ಶ್ಲೋಕದಲ್ಲಿ ಆ ಪರಮೇಶ್ವರನಿಗೆ (ಪರಮ ಅಕ್ಷರ ಪುರುಷ) ಶರಣಾಗಲು ಹೇಳಲಾಗಿದೆ. ಗೀತೆಯ **18**ನೇ ಅಧ್ಯಾಯದ **66**ನೇ ಶ್ಲೋಕ, ಗೀತೆಯ **8**ನೇ ಅಧ್ಯಾಯದ **28**ನೇ ಶ್ಲೋಕ, ಗೀತೆಯ **12**ನೇ ಅಧ್ಯಾಯದ **6**ರಿಂದ **7**ನೇ ಶ್ಲೋಕ-ಇವುಗಳಲ್ಲಿ ಹೇಳಿರುವುದೇನೆಂದರೆ, ಪೂರ್ಣ ಪರಮಾತ್ಮನ ಪ್ರಾಪ್ತಿಗಾಗಿ ನನ್ನ ಭಕ್ತಿಯೂ ಸಹ ಮಾಡಲಾಗುತ್ತದೆ. ಹೇಗೆಂದರೆ ಗೀತೆಯ **17**ನೇ ಅಧ್ಯಾಯದ **23**ನೇ ಶ್ಲೋಕದಲ್ಲಿ "ಓಂ ತತ್ ಸತ್" ಎಂಬ ನಾಮ ಜಪವು ಪರಮ ಅಕ್ಷರ ಬ್ರಹ್ಮನ ಪ್ರಾಪ್ತಿಗಾಗಿ ಇದೆ. ಗೀತೆಯ **8**ನೇ ಅಧ್ಯಾಯದ **13**ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನ್ನ ಸಾಧನೆ ಮಾಡಲು ಕೇವಲ ಒಂದು 'ಓಂ' ನಾಮ ಮಂತ್ರವನ್ನು ಹೇಳಿದ್ದಾನೆ. ಸಾಧಕನು

ಪೂರ್ಣ ಪರಮಾತ್ಮನ ಪ್ರಾಪ್ತಿಗಾಗಿ ಓಂ ನಾಮದ ಜಪವನ್ನೂ ಮಾಡುತ್ತಾನೆ. ಆದ್ದರಿಂದ ಗೀತೆಯ 8ನೇ ಅಧ್ಯಾಯದ 28ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯೋಗಿ ಅಂದರೆ ಭಕ್ತನು ತತ್ವಜ್ಞಾನದ ಮೂಲಕ ಈ ರಹಸ್ಯವನ್ನು ತಿಳಿದು ವೇದಗಳ ಅನುಸಾರವಾಗಿರುವ ಭಕ್ತಿಯನ್ನು ಮಾಡುವುದರಿಂದ, ಅದರ ಪ್ರಕಾರವಾದ ಯಜ್ಞ ಅಂದರೆ ಧಾರ್ಮಿಕ ಅನುಷ್ಠಾನವನ್ನು ಮಾಡುವುದರಿಂದ, ತಪಸ್ಸು ಅರ್ಥಾತ್ ತನ್ನ ಧರ್ಮದ ಮೇಲೆ ಧೃಡತೆಯಿಂದ ನಿಲ್ಲುವುದರಿಂದ, ಶಾರೀರಿಕವಾಗಿ, ಮಾನಸಿಕವಾಗಿ ಎಷ್ಟೇ ಕಷ್ಟ ಬಂದರೂ, ಸಹಿಸಿಕೊಂಡು, ಆ ತಪಸ್ಸು ಹಾಗೂ ದಾನದಿಂದ ಸಿಗುವ ಪುಣ್ಯ ಫಲವನ್ನು ಅಂದರೆ ಧಾರ್ಮಿಕ ಕರ್ಮದಿಂದ ಸಿಗುವ ಭಕ್ತಿಫಲವನ್ನು (ಅತ್ಯೇತಿ) ಉಲ್ಲಂಘಿಸುತ್ತಾನೋ, ತ್ಯಾಗ ಮಾಡುತ್ತಾನೋ, ಅವನು (ಆದ್ಯ) ಸನಾತನ (ಪರಮ್) ಅನ್ಯ=ಬೇರೆಯ (ಸ್ಥಾನಮ್) ಧಾಮವನ್ನು ಪಡೆಯುತ್ತಾನೆ.

ಗೀತೆಯ 12ನೇ ಅಧ್ಯಾಯದ 7 ರಿಂದ 8ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, (ಮತ್ಪರಾಃ = ಮತ್ ಪರಾಃ) ನನ್ನನ್ನು ಬಿಟ್ಟು ಬೇರೆ ಪರಮಾತ್ಮನ ಭಕ್ತಿಮಾಡುವ ಎಲ್ಲಾ ಭಕ್ತ ಜನರು ನನ್ನ ಭಕ್ತಿಯ ಎಲ್ಲಾ ಭಕ್ತಿ ಕರ್ಮವನ್ನು ನನಗೆ ಅರ್ಪಿಸಿ ನನ್ನಲ್ಲೇ ಬಿಟ್ಟು ಬಿಡುತ್ತಾರೆ. ಅವರು ಅನನ್ಯ ಭಕ್ತಿಯಿಂದ ನನ್ನನ್ನು ಬಿಟ್ಟು ಬೇರೆಯವರನ್ನು ಆರಾಧಿಸುತ್ತಾರೆ.

ಗೀತೆಯ 12ನೇ ಅಧ್ಯಾಯದ 7ನೇ ಶ್ಲೋಕದಲ್ಲಿ, 'ಹೇ ಅರ್ಜುನ! ನನ್ನಲ್ಲಿ ಚಿತ್ತವಿಡುವವರು, ನನ್ನನ್ನು ಅರಿತಿರುವವರು (ಆವೇಶಿತ) ಆವೇಶದ ಜೊತೆ (ಚೇತಾಸಾಮ್) ನನ್ನನ್ನು ಅರಿತಿದ್ದಾರೆ. ನನ್ನನ್ನು ಗುರುತಿಸಿದ್ದಾರೆ. ಆ ಭಕ್ತರನ್ನು ನಾನು ಶೀಘ್ರವಾಗಿ ಸಂಸಾರ ಸಮುದ್ರದಿಂದ (ಸಮ್ ಉದ್ಧರ್ತಾ = ಸಮುದ್ಧರ್ತಾ) ಅದೇ ರೀತಿ ಉದ್ಧಾರ ಮಾಡುತ್ತೇನೆ. ಗೀತೆಯ 18ನೇ ಅಧ್ಯಾಯದ 66ನೇ ಶ್ಲೋಕದಲ್ಲಿ ಹೇಳಲಾಗಿದೆ :–

ಸರ್ವ ಧರ್ಮಾನ್ ಪರಿತ್ಯಜ್ಯ ಮಾಮ್, ಏಕಮ್ ಶರಣಮ್ ವ್ರಜ್।
ಅಹಮ್ ತ್ವಾ ಸರ್ವ ಪಾಪೇಭ್ಯಃ ಮೋಕ್ಷಯಿಷ್ಯಾಮಿ ಮಾ ಶುಚಃ ॥

ಅನ್ಯ ಅನುವಾದಕರು ಮಾಡಿರುವ ಗೀತೆಯ 18ನೇ ಅಧ್ಯಾಯದ 66ನೇ ಶ್ಲೋಕದ ಅನುವಾದ ಈ ರೀತಿ ಮಾಡಿದ್ದಾರೆ ಅದು ತಪ್ಪಾಗಿದೆ :– ಸಂಪೂರ್ಣ ಧರ್ಮಗಳನ್ನು ಅಂದರೆ ಸಂಪೂರ್ಣ ಕರ್ಮಗಳನ್ನು ನನಗೆ ಬಿಟ್ಟು, ನೀನು ಕೇವಲ ಒಬ್ಬ ಸರ್ವಶಕ್ತಿವಂತನಾದ, ಸರ್ವಾಧಾರ ಪರಮೇಶ್ವರನಾದ ನನಗೆ ಶರಣಾಗು. ನಾನು ನಿನ್ನನ್ನು ಸಂಪೂರ್ಣ ಪಾಪಗಳಿಂದ ಬಿಡುಗಡೆಗೊಳಿಸುತ್ತೇನೆ, ದುಃಖ ಪಡಬೇಡ.

ವಿವೇಚನೆ:– ಸಂಪೂರ್ಣ ಧರ್ಮಗಳನ್ನು ಅಂದರೆ ಕರ್ತವ್ಯ ಕರ್ಮಗಳನ್ನು ನನ್ನಲ್ಲಿ ಬಿಟ್ಟು ನೀನು ಕೇವಲ ಒಬ್ಬ ಸರ್ವಶಕ್ತಿವಂತನಾದ ಸರ್ವಾಧಾರ ಪರಮೇಶ್ವರನಾದ ನನಗೆ ಶರಣಾಗು ಎಂದು ಬರೆದಿರುವುದು ತಪ್ಪು.

ವಿಚಾರಮಾಡಿ :– ಗೀತೆಯ 18ನೇ ಅಧ್ಯಾಯದ 46 ಮತ್ತು 62ನೇ ಶ್ಲೋಕ, 15ನೇ ಅಧ್ಯಾಯದ 1–4ನೇ ಶ್ಲೋಕದಲ್ಲಿ ಹಾಗು 17ನೇ ಶ್ಲೋಕದಲ್ಲಿ ಸರ್ವ ಶಕ್ತಿವಂತ, ಸರ್ವಧಾರ ಪರಮಾತ್ಮನು ಬೇರೆ ಇನ್ಯಾರೋ ಎಂದು ಹೇಳಲಾಗಿದೆ. ಗೀತೆಯ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಅವನು ಪರಮ ಅಕ್ಷರ ಬ್ರಹ್ಮ ಎಂದು ಹೇಳಲಾಗಿದೆ. ಇಲ್ಲಿ ಗೀತೆಯ 18ನೇ ಅಧ್ಯಾಯದ 66ನೇ ಶ್ಲೋಕದಲ್ಲಿ ಅನುವಾದಕನು ತನ್ನ ಕಡೆಯಿಂದ ಸ್ವಲ್ಪ ಮಹಿಮೆಯನ್ನು ಜೋಡಿಸಿದ್ದಾನೆ. ಇದು ಬರೀ ವ್ಯರ್ಥ. ನಂತರ ಸಂಪೂರ್ಣ ಕರ್ಮಗಳನ್ನು ನನ್ನಲ್ಲಿ ಬಿಟ್ಟು ನನ್ನ ಆಶ್ರಯಕ್ಕೆ ಬಂದು ಬಿಡು ಎಂದು ಹೇಳಲಾಗಿದೆ. ಇದೂ ಸಹ ನ್ಯಾಯ ಸಮ್ಮತವಲ್ಲ. ಯಾರಾದರೂ ಹೇಳಿದರೆ ಸಂಪೂರ್ಣ ಕರ್ಮಗಳನ್ನು ನನ್ನಲ್ಲಿ ಬಿಟ್ಟು ಬಿಡು ಮತ್ತು ನನ್ನ ಆಶ್ರಯಕ್ಕೆ ಬಂದು ಬಿಡು. ಇದರಿಂದ ಸ್ಪಷ್ಟವಾಗುತ್ತದೆ ಎಲ್ಲ ಧಾರ್ಮಿಕ ಕರ್ಮಗಳ ಭಕ್ತಿ ಧನವನ್ನು ನನ್ನಲ್ಲಿ ಬಿಟ್ಟು ಬೇರೆಯವರ ಆಶ್ರಯಕ್ಕೆ ಹೋಗು. ಇದೇ ರೀತಿ 'ವ್ರಜ' ಎಂದರೆ ಹೋಗುವುದು

ಎಂದರ್ಥವೇ ಹೊರತು ಬರುವುದು ಎಂದಲ್ಲ, ಇಂಗ್ಲಿಷಿನಲ್ಲಿ 'ಗೋ' ಎಂದರೆ ಹೋಗುವುದು ಎಂದರ್ಥವೇ ಹೊರತು 'ಬರುವುದು' ಎಂದು ಅರ್ಥಮಾಡಿಕೊಳ್ಳಬಾರದು. ಹಾಗೆಯೇ ಅನ್ಯ ಪ್ರಮಾಣಗಳು, ಗೀತೆಯ 2ನೇ ಅಧ್ಯಾಯದ 7ನೇ ಶ್ಲೋಕದಲ್ಲಿ ಅರ್ಜುನನು ಹೀಗೆ ಹೇಳಿದ್ದಾನೆ, "ನಾನು ನಿಮ್ಮ ಶಿಷ್ಯ, ನಿಮಗೆ ಶರಣಾಗಿದ್ದೇನೆ. ನನಗೆ ಸರಿಯಾದ ಶಿಕ್ಷಣ ನೀಡಿ". ಗೀತೆಯ ಜ್ಞಾನದಾತನು ಗೀತೆಯ 4ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, "ನೀನು ನನ್ನ ಭಕ್ತ ಹಾಗೂ ಗೆಳೆಯ". ಗೀತೆಯ 18ನೇ ಅಧ್ಯಾಯದ 66ನೇ ಶ್ಲೋಕದಲ್ಲಿ ಈ ರೀತಿ ಅನುವಾದವಾಗಿದೆ. "ನನಗೆ ಶರಣಾಗು" ಇದು ತಪ್ಪು. ಏಕೆಂದರೆ ಅರ್ಜುನನು ಈ ಮೊದಲೇ ಶ್ರೀ ಕೃಷ್ಣನಿಗೆ ಶರಣಾಗಿದ್ದಾನೆ ಎನ್ನುವುದು ಸ್ಪಷ್ಟವಾಗಿದೆ. ತತ್ವಜ್ಞಾನವಿಲ್ಲದ ಕಾರಣ ಅನುವಾದಕರು ಅರ್ಥಗಳನ್ನು ಅನರ್ಥ ಮಾಡುತ್ತಾರೆ.

ಗೀತೆಯ ಜ್ಞಾನದಾತನು 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, "ಆ ಪರಮೇಶ್ವರನಿಗೆ ಶರಣಾಗು, ಆ ಪರಮೇಶ್ವರನ ಕೃಪೆಯಿಂದಲೇ ನೀನು ಪರಮ ಶಾಂತಿಯನ್ನು ಹಾಗೂ ಸನಾತನ ಪರಮಧಾಮವನ್ನು ಪ್ರಾಪ್ತಿಸುವೆ." ಗೀತೆಯ 18ನೇ ಅಧ್ಯಾಯದ 46ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, "ಯಾವ ಪರಮೇಶ್ವರನಿಂದ ಸಂಪೂರ್ಣ ಜೀವಿಗಳ ಸೃಷ್ಟಿಯಾಗಿದೆಯೋ, ಯಾರಿಂದ ಈ ಸಮಸ್ತ ಜಗತ್ತು ವ್ಯಾಪಿಸಲ್ಪಟ್ಟಿದೆಯೋ ಸ್ವಾಭಾವಿಕ ಕರ್ಮಗಳನ್ನು ಮಾಡುತ್ತಲೇ ಆ ಪರಮೇಶ್ವರನ ಪೂಜೆಯನ್ನು ಮಾಡಿ ಮನುಷ್ಯನು ಪರಮ ಸಿದ್ಧಿಯನ್ನು ಪಡೆಯುತ್ತಾನೆ". ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಸ್ಪಷ್ಟಪಡಿಸಿರುವುದೇನೆಂದರೆ, 16ನೇ ಶ್ಲೋಕದಲ್ಲಿ ಹೇಳಿರುವ ಇಬ್ಬರು ಪುರುಷ (ಕ್ಷರ ಪುರುಷ ಹಾಗೂ ಅಕ್ಷರ ಪುರುಷ)ರಿಗಿಂತ ಬೇರೆ ಇನ್ನೊಬ್ಬ ಉತ್ತಮ ಪುರುಷನಿದ್ದಾನೆ. ಅವನನ್ನು ಪರಮಾತ್ಮ ಎಂದು ಕರೆಯಲಾಗುತ್ತದೆ. ಅವನು ಮೂರೂ ಲೋಕಗಳಲ್ಲಿ ಪ್ರವೇಶ ಮಾಡಿ ಎಲ್ಲರ ಪಾಲನೆ ಪೋಷಣೆ ಮಾಡುತ್ತಾನೆ. ಅವನು ವಾಸ್ತವದಲ್ಲಿ ಅವಿನಾಶಿ ಪರಮೇಶ್ವರನು. ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ತತ್ವದರ್ಶಿ ಸಂತನ ಪ್ರಾಪ್ತಿಯ ನಂತರ ಆ ಪರಮೇಶ್ವರನ ಪರಮ ಪದದ ಅನ್ವೇಷಣೆ ಮಾಡಬೇಕು ಅಲ್ಲಿ ಹೋದ ಮೇಲೆ ಸಾಧಕನು ಮರಳಿ ಪ್ರಪಂಚಕ್ಕೆ ಬರುವುದಿಲ್ಲ. ಯಾವ ಪರಮೇಶ್ವರನಿಂದ ಪ್ರಪಂಚವೆಂಬ ವೃಕ್ಷದ ಪ್ರವೃತ್ತಿ ವಿಸ್ತಾರವನ್ನು ಪಡೆದಿದೆಯೋ ಅವನದೇ ಭಕ್ತಿ ಮಾಡು.

ಗೀತೆಯ ಜ್ಞಾನದಾತನು ತನ್ನ ಸ್ಥಿತಿಯನ್ನು ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5ನೇ ಶ್ಲೋಕ, 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿರುವುದೇನೆಂದರೆ, "ಹೇ ಅರ್ಜುನ ! ನಿನ್ನ ಮತ್ತು ನನ್ನ ಅನೇಕ ಜನ್ಮಗಳಾಗಿವೆ. ಮುಂದೆಯೂ ಆಗುತ್ತಿರುತ್ತವೆ. ನಿನಗೆ ಗೊತ್ತಿಲ್ಲ, ಆದರೆ ನನಗೆ ಗೊತ್ತು. ಯಾವ ಪ್ರಭುವಿಗೆ ಜನನ-ಮರಣಗಳಿರುತ್ತವೆಯೋ, ಅವನು ಅವಿನಾಶಿಯಲ್ಲ, ಅವನ ಉಪಾಸಕನೂ ಸಹ ಹುಟ್ಟುತ್ತಿರುತ್ತಾನೆ-ಸಾಯುತ್ತಿರುತ್ತಾನೆ. ಬ್ರಹ್ಮನ ಸಾಧಕನು ಆ ಮೋಕ್ಷವನ್ನು ಪಡೆಯಲು ಸಾಧ್ಯವಿಲ್ಲ". ಯಾವುದರ ಬಗ್ಗೆ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಲಾಗಿದೆ, ಅಂದರೆ ಅಲ್ಲಿಗೆ ಹೋದ ನಂತರ ಪುನರ್ಜನ್ಮ ಇರುವುದಿಲ್ಲ, ಗೀತೆಯ 18ನೇ ಅಧ್ಯಾಯದ 66ನೇ ಶ್ಲೋಕದ ವಾಸ್ತವಿಕ ಅನುವಾದವು ಈ ರೀತಿ ಇದೆ.

ಅನುವಾದ:- (ಸರ್ವಧರ್ಮಾನ್) ನನ್ನ ಉಪಾಸನೆಯ ಸಂಪೂರ್ಣ ಧಾರ್ಮಿಕ ಕರ್ಮಗಳು ಅವುಗಳ ಭಕ್ತಿಯ ಸಂಪಾದನೆ. ಅದನ್ನು (ಮಾಮ್) ನನಗೆ (ಪರಿತ್ಯಜ್ಯ) ಬಿಟ್ಟು ನೀನು (ಏಕಮ್) ಆ ಒಬ್ಬ, ಅಂದರೆ ಅವನ ಸಮಾನ ಬೇರೆಯಾರೂ ಇಲ್ಲ, ಆ ಅದ್ವಿತೀಯ ಸರ್ವಶಕ್ತಿವಂತ ಪರಮೇಶ್ವರ ಅರ್ಥಾತ್ ಪರಮ ಅಕ್ಷರ ಬ್ರಹ್ಮನ (ಶರಣಮ್) ಶರಣದಲ್ಲಿ (ವ್ರಜ) ಹೋಗು. (ಅಹಮ್‌ತ್ವಾ) ನಾನು ನಿನ್ನನ್ನು (ಸರ್ವ ಪಾಪೇಭ್ಯಃ) ಸಂಪೂರ್ಣ ಪಾಪಗಳಿಂದ

(ಮೋಕ್ಷಯಿಷ್ಯಾಮಿ) ಬಿಡುಗಡೆಗೊಳಿಸುತ್ತೇನೆ. (ಮಾ ಶುಚಃ) ದುಃಖಪಡಬೇಡ. ಗೀತೆಯ 18ನೇ ಅಧ್ಯಾಯದ 66ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಯಾವ ಮಂತ್ರವು ನನ್ನ ಉಪಾಸನೆಯದ್ದಾಗಿದೆಯೋ, ಅದರ ಭಕ್ತಿಯ ಸಂಪಾದನೆಯನ್ನು ನನಗೆ ಬಿಟ್ಟು ನೀನು ಕೇವಲ ಆ ಒಬ್ಬ ಅರ್ಥಾತ್ ಅವನ ಸಮಾನ ಬೇರೆ ಯವುದು ಶಕ್ತಿ ಇಲ್ಲವೋ, ಆ ಅದ್ವಿತೀಯ ಸರ್ವಶಕ್ತಿವಂತ ಪರಮೇಶ್ವರ ಅಂದರೆ ಪರಮ ಅಕ್ಷರ ಬ್ರಹ್ಮನಿಗೆ ಶರಣಾಗು. ನಾನು ನಿನ್ನನ್ನು ಸರ್ವ ಪಾಪಗಳಿಂದ ಮುಕ್ತಿಗೊಳಿಸುವೆ. ದುಃಖಪಡಬೇಡ. (ಗೀತೆಯ 18ನೇ ಅಧ್ಯಾಯದ 66ನೇ ಶ್ಲೋಕ)

ವಿಶ್ಲೇಷಣೆ :– ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಸಂಕೇತ ನೀಡಿದ್ದಾನೆ. ಆ (ಬ್ರಹ್ಮಣಃ) ಸಚ್ಚಿದಾನಂದ ಘನ ಬ್ರಹ್ಮ ಅರ್ಥಾತ್ ಪರಮ ಅಕ್ಷರ ಬ್ರಹ್ಮನ ಪ್ರಾಪ್ತಿಯ 'ಓಂ ತತ್ ಸತ್' ಈ ಮೂರು ಮಂತ್ರಗಳ ಜಪವಾಗಿದೆ. ಇದನ್ನೇ ಜಪಿಸುವ ನಿರ್ದೇಶನವಿದೆ. ನಂತರ ಗೀತೆಯ 8ನೇ ಅಧ್ಯಾಯದ 13ನೇ ಶ್ಲೋಕದಲ್ಲಿ ತನ್ನ ಉಪಾಸನೆಯ ಮಂತ್ರವನ್ನು ಹೇಳಿದ್ದಾನೆ. ಬ್ರಹ್ಮನಾದ ನನ್ನ ಭಕ್ತಿಯ ಮಂತ್ರ ಕೇವಲ 'ಓಂ' ಎಂಬ ಒಂದು ಅಕ್ಷರ. ಯಾರು ಇದನ್ನು ಉಚ್ಚರಿಸುತ್ತಾ ಶರೀರವನ್ನು ತ್ಯಜಿಸುವರೋ ಅವರಿಗೆ ನನ್ನ ಪರಮಗತಿ (ಮೋಕ್ಷ) ಪ್ರಾಪ್ತವಾಗುತ್ತದೆ.

'ಓಂ' ಜಪವು ಬ್ರಹ್ಮನ ಜಪವಾಗಿದೆ. ಇದರಿಂದ ಬ್ರಹ್ಮಲೋಕವು ಪ್ರಾಪ್ತವಾಗುತ್ತದೆ. ಈ ಪರಮಗತಿಯು ಓಂ ಎಂಬ ಜಪದಿಂದ ಪ್ರಾಪ್ತವಾಗುತ್ತದೆ. ಇದನ್ನು 7ನೇ ಅಧ್ಯಾಯದ 18ನೇ ಶ್ಲೋಕದಲ್ಲಿ ಅನುತ್ತಮ ಅರ್ಥಾತ್ ಶ್ರೇಷ್ಠವಲ್ಲದ್ದೆಂದು ಹೇಳಲಾಗಿದೆ. ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ, ಬ್ರಹ್ಮಲೋಕದವರೆಗೆ ಎಷ್ಟು ಲೋಕಗಳಿವೆಯೋ, ಅವುಗಳಲ್ಲಿ ಹೋಗುವ ಸಾಧಕರು ಪುನರಾವೃತ್ತಿಯಲ್ಲಿದ್ದಾರೆ ಅರ್ಥಾತ್ ಬ್ರಹ್ಮಲೋಕದವರೆಗೆ ಹೋದ ಸಾಧಕರು ಪುನಃ ಜನನ ಮರಣದಲ್ಲಿರುತ್ತಾರೆ. ಆದ್ದರಿಂದ ಮೇಲೆ ತಿಳಿಸಿದ ಗೀತೆಯ 18ನೇ ಅಧ್ಯಾಯದ 46, 62, 66ನೇ ಶ್ಲೋಕಗಳಲ್ಲಿ, 15ನೇ ಅಧ್ಯಾಯದ ಶ್ಲೋಕ 4 ಮತ್ತು 17ರಲ್ಲಿ ಯಾರೋ ಸಮರ್ಥ ಪರಮೇಶ್ವರನಿಗೆ ಶರಣಾಗಲು ಹೇಳಲಾಗಿದೆ. ಅವನದು ಓಂ ತತ್ ಸತ್ ಮಂತ್ರದ ಜಪವಾಗಿದೆ (ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಓಂ ತತ್ ಸತ್ ಎಂಬ ಮೂರು ಮಂತ್ರಗಳು) ಇದರಲ್ಲಿರುವ ಓಂ ನಾಮವು ಬ್ರಹ್ಮನ ಜಪವಾಗಿದೆ. ಇದೇ ಬ್ರಹ್ಮನನ್ನು ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಕ್ಷರಪುರುಷನೆಂದು ಹೇಳಲಾಗಿದೆ.

ಇನ್ನೊಬ್ಬ ಅಕ್ಷರ ಪುರುಷನಿದ್ದಾನೆ. 'ತತ್' ಮಂತ್ರ ಜಪವು ಅಕ್ಷರಪುರುಷನದ್ದಾಗಿದೆ. ಇದು ಸಾಂಕೇತಿಕವಾಗಿದೆ. ಹಾಗೂ ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, "ಉತ್ತಮ ಪುರುಷಃ ತು ಅನ್ಯಃ" ಪುರುಷೋತ್ತಮ ಅರ್ಥಾತ್ ಸರ್ವಶ್ರೇಷ್ಠ, ಸರ್ವ ಶಕ್ತಿವಂತ ಪುರುಷನು ಕ್ಷರಪುರುಷ ಹಾಗೂ ಅಕ್ಷರಪುರುಷನಿಗಿಂತ ಭಿನ್ನನು. ಅವನ ಮಂತ್ರವು 'ಸತ್' ಎಂದಾಗಿದೆ. ಇದೂ ಸಾಂಕೇತಿಕವಾಗಿದೆ. ಅವನೇ ಪರಮೇಶ್ವರನು ಅರ್ಥಾತ್ ಪರಮ ಅಕ್ಷರ ಬ್ರಹ್ಮನು. ಅವನನ್ನು ಸಂತರ ಭಾಷೆಯಲ್ಲಿ ಸತ್ಯ ಪುರುಷನೆಂದು ಕರೆಯುತ್ತಾರೆ. ಆ ಪರಮಪದ ಅರ್ಥಾತ್ ಪರಮಧಾಮ ಅದನ್ನು ಸಂತರ ಭಾಷೆಯಲ್ಲಿ ಸತ್ಯಲೋಕ ಎಂದು ಕರೆಯುತ್ತಾರೆ ಅಲ್ಲಿ ಹೋಗಲು ಅರ್ಥಾತ್ ಪೂರ್ಣ ಮೋಕ್ಷವನ್ನು ಪಡೆಯಲು ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದ 'ಓಂ ತತ್ ಸತ್' ಎಂಬ ನಾಮ ಜಪವನ್ನು ಮಾಡಬೇಕು. ಇನ್ಯಾವುದೇ ನಾಮಜಪವು ಪೂರ್ಣ ಮೋಕ್ಷಕ್ಕಾಗಿ ಅಲ್ಲ. "ತತ್–ಸತ್" ಎನ್ನುವ ಎರಡು ಬೇರೆ ಮಂತ್ರಗಳನ್ನು ಉಪದೇಶ ಪಡೆಯುವವರಿಗೆ ಉಪದೇಶದ ಸಮಯದಲ್ಲಿ ನೀಡಲಾಗುತ್ತದೆ. 'ಓಂ' ನಾಮ ಜಪವು ಬ್ರಹ್ಮ = ಕ್ಷರ ಪುರುಷನದ್ದಾಗಿದೆ, ಗೀತೆಯ ಜ್ಞಾನದಾತನದ್ದಾಗಿದೆ. ಇವನ ಉಪಾಸನೆ 'ಓಂ' ನಾಮ ಜಪದಿಂದ ಆಗುತ್ತದೆ. ಓಂ ನಾಮ

ಜಪದ ಸಂಪಾದನೆ ಅರ್ಥಾತ್ ಧಾರ್ಮಿಕ ಕರ್ಮವು ಬ್ರಹ್ಮನಿಗೆ ಕೊಡಬೇಕಾಗುತ್ತದೆ. ನಾವು ಮೊದಲು ತತ್ವಜ್ಞಾನವಿಲ್ಲದೆ 'ಓಂ' ನಾಮಜಪದ ಸಂಪಾದನೆಯನ್ನು (ಭಕ್ತಿಧನ) ಬ್ರಹ್ಮಲೋಕಕ್ಕೆ ಹೋಗಿ ಕೊನೆಗೊಳಿಸುತ್ತಿದ್ದೆವು. ಪಾಪ ಎನ್ನುವ ಸಾಲವು ಉಳಿದುಬಿಡುತ್ತಿತ್ತು. ಅದನ್ನು ನರಕದಲ್ಲಿ ಮತ್ತು 84 ಲಕ್ಷ ವಿವಿಧ ಪ್ರಕಾರದ ಪ್ರಾಣಿಗಳ ಶರೀರಗಳಲ್ಲಿ ಕಷ್ಟವನ್ನು ಅನುಭವಿಸುತ್ತಿದ್ದೆವು. ಈಗ ನಾವು 'ಓಂ' ನಾಮಜಪದ ಭಕ್ತಿಯ ಧನವನ್ನು ಬ್ರಹ್ಮನಿಗೆ ಕೋಡೋಣ. ಅದರ ಫಲವನ್ನು ಬ್ರಹ್ಮಲೋಕದಲ್ಲಿ ಅನುಭವಿಸುವುದಿಲ್ಲ. ಇದರ ಪ್ರತಿಫಲವಾಗಿ ಈ ಬ್ರಹ್ಮ ಅಂದರೆ ಕ್ಷರಪುರುಷನು ನಮ್ಮ ಸಕಲ ಪಾಪಗಳೆಂಬ ಸಾಲವನ್ನು ಸಮಾಪ್ತಗೊಳಿಸುತ್ತಾನೆ.

ಗೀತೆಯ 18ನೇ ಅಧ್ಯಾಯದ 66ನೇ ಶ್ಲೋಕದಲ್ಲಿ ಇದರ ಭಾವಾರ್ಥವಿದೆ. ನಂತರ ನಾವು 'ತತ್' ಮಂತ್ರದ ಜಪದ ಸಂಪಾದನೆಯನ್ನು ಅಕ್ಷರಪುರುಷ ಅರ್ಥಾತ್ ಪರಬ್ರಹ್ಮ (ಗೀತೆಯ ಜ್ಞಾನದಾತನಿಗಿಂತ ಭಿನ್ನನು)ನಿಗೆ ಬಿಟ್ಟು ಬಿಡೋಣ. ಅವನ 7 ಶಂಖ ಬ್ರಹ್ಮಾಂಡಗಳ ಕ್ಷೇತ್ರವಿದೆ. ಅದನ್ನು ದಾಟಿ ಸನಾತನ ಪರಮಧಾಮ (ಸತ್ಯಲೋಕ)ಕ್ಕೆ ಹೋಗಲು ಬಾಡಿಗೆ ನೀಡಬೇಕಾಗುತ್ತದೆ. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ಟೋಲ್‌ಟ್ಯಾಕ್ಸ್ ನೀಡಬೇಕಾಗುತ್ತದೆ. ಈ 'ತತ್' ಮಂತ್ರಜಪದ ಸಂಪಾದನೆಯಿಂದ ಇದು ಪೂರ್ತಿಯಾಗುತ್ತದೆ. ನಂತರ 'ಸತ್' ಮಂತ್ರವು ಸತ್ಯಪುರುಷ (ಪರಮ ಅಕ್ಷರ ಬ್ರಹ್ಮ)ನದ್ದಾಗಿದೆ. ಇದರ ಸಂಪಾದನೆಯನ್ನು ತೆಗೆದುಕೊಂಡು ನಾವು ಪರಮ ಪದವನ್ನು ಪಡೆಯುತ್ತೇವೆ. ಸನಾತನ ಪರಮಧಾಮ (ಸತ್ಯೋಲಕ) ಪ್ರಾಪ್ತಿಯಾದ ಮೇಲೆ ಸಾಧಕನು ಈ ಪ್ರಪಂಚಕ್ಕೆ ಎಂದಿಗೂ ಮರಳಿ ಬರುವುದಿಲ್ಲ. ಪರಮಶಾಂತಿ ಅರ್ಥಾತ್ ಪೂರ್ಣ ಮೋಕ್ಷವು ಪ್ರಾಪ್ತವಾಗುತ್ತದೆ. ಈ ಸಂಪೂರ್ಣ ಭಕ್ತಿ ಸಾಧನೆಯು ನನ್ನ (ಸಂತ ರಾಮ್‌ಪಾಲ್‌ದಾಸನ) ಬಳಿ ಇದೆ. ಬನ್ನಿ ಮತ್ತು ನಿಮ್ಮ ಉದ್ಧಾರ ಮಾಡಿಕೊಳ್ಳಿ.

ಗೀತೆಯ 18ನೇ ಅಧ್ಯಾಯದ 66ನೇ ಶ್ಲೋಕದ ಯಥಾರ್ಥ ಅನುವಾದವು ಇದಾಗಿದೆ. ಆದ್ದರಿಂದ–"ಗೀತೆಯೇ ನಿನ್ನ ಜ್ಞಾನ ಅಮೃತ" ಎಂದು ಹೇಳಲಾಗುತ್ತದೆ. ಮೇಲೆ ತಿಳಿಸಿದ ಪ್ರಮಾಣಗಳಿಂದ ಸ್ಪಷ್ಟವಾಗಿರುವುದೇನೆಂದರೆ, ಗೀತೆಯ ಜ್ಞಾನದಾತನಿಗಿಂತ ಬೇರೆ ಪರಮಾತ್ಮನೊಬ್ಬನಿದ್ದಾನೆ. ಅವನಿಗೆ ಶರಣಾಗಲು ಗೀತೆಯ ಜ್ಞಾನದಾತನು (ಗೀತೆಯ 18ನೇ ಅಧ್ಯಾಯದ 62, 66ನೇ ಶ್ಲೋಕದಲ್ಲಿ) ಹೇಳಿದ್ದಾನೆ. ಅಮೂಲ್ಯವಾದ ಗೀತಾ ಜ್ಞಾನವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಅಜ್ಞಾನಿಗಳು ಅರ್ಥವನ್ನು ಅನರ್ಥ ಮಾಡಿದ್ದಾರೆ ಹಾಗೂ ಗೀತೆಯ ಜ್ಞಾನದಾತನು ತನ್ನ, ಶರಣ ಬರಲು ಹೇಳುತ್ತಿದ್ದಾನೆ ಎಂದು ತಪ್ಪಾಗಿ ಬರೆದಿದ್ದಾರೆ.

ಯಾರೋ ಒಬ್ಬ ವ್ಯಕ್ತಿಯ ಕಾರ್ಯವು ಮುಖ್ಯಮಂತ್ರಿಯ ಬಳಿ ಆಗುವುದಿದೆ ಎಂದುಕೊಳ್ಳೋಣ. ಅವನು ಒಬ್ಬ ಮಂತ್ರಿಯ ಬಳಿ ನಿಂತು ಅವನ ಬಳಿ ಕೆಲಸ ಮಾಡಿಕೊಡಲು ಪ್ರಾರ್ಥಿಸುತ್ತಿದ್ದಾನೆ ಎಂದಿಟ್ಟುಕೊಳ್ಳಿ, ಮಂತ್ರಿಯು ಬುದ್ಧಿವಂತನಾದರೆ ಅವನು ಆ ವ್ಯಕ್ತಿಯನ್ನು ಭ್ರಮೆಗೊಳಪಡಿಸುವುದಿಲ್ಲ. ಬದಲಾಗಿ ಈ ಕಾರ್ಯವಾಗಬೇಕಾದರೆ ನೀವು ಮುಖ್ಯಮಂತ್ರಿಯ ಬಳಿ ಹೋದರೆ ಅವರ ಕೃಪೆಯಿಂದ ನಿಮ್ಮಕಾರ್ಯವಾಗುತ್ತದೆ ಎಂದು ಹೇಳುತ್ತಾನೆ. ಆ ಮಂತ್ರಿಯು ಒಂದು ಪತ್ರ ಬರೆದುಕೊಟ್ಟು, ನೀವು ಮುಖ್ಯಮಂತ್ರಿಯ ಬಳಿ ಹೋದರೆ ಈ ಕಾರ್ಯವಾಗುವುದು ಎಂದು ಹೇಳಿದರೆ ಸರಿ.

ಆ ವ್ಯಕ್ತಿಯು ತಪ್ಪಾಗಿ ಅರ್ಥೈಸಿಕೊಂಡು ಆ ಮಂತ್ರಿಯು ತನ್ನ ಬಳಿಯೇ ಬರಲು ತನಗೆ ಹೇಳುತ್ತಿದ್ದಾನೆ ಎಂದು ತಪ್ಪಾಗಿ ಅರ್ಥ ಮಾಡಿಕೊಂಡರೆ ಅದು ತಪ್ಪಾಗುವುದು. ಮಂತ್ರಿಯ ಬಳಿಯಿಂದಲೇ ಅವನು ಬಂದಿರುವುದರಿಂದ ಆ ಅರ್ಥವು ಅನರ್ಥವಾಗುತ್ತದೆ. ಇದೇ ರೀತಿ ಗೀತೆಯ ಅಮೃತ ಜ್ಞಾನವನ್ನು ತಿಳಿಯದೆ 'ಬಾಯಿಗೆ ಬಂದಂತೆ ಅನುವಾದ ಮಾಡುವುದರಿಂದ ಓದುಗರಿಗೆ ಅಜ್ಞಾನಿ ಸಂತರು ಭ್ರಮೆಗೊಳಪಡಿಸಿದ್ದಾರೆ ಹಾಗೂ ಜನನ–ಮರಣ ಚಕ್ರದಲ್ಲಿ ಸ್ವತಃ ಬಿದ್ದಿರುವರು ಹಾಗೂ ತನ್ನ ಮುಗ್ಧ ಅನುಯಾಯಿಗಳನ್ನು ಜನನ–ಮರಣದ ಚಕ್ರದಲ್ಲಿ ಇಟ್ಟಿದ್ದಾರೆ.

ಅವರು ಆ ಅಜ್ಞಾನಿಗಳನ್ನು ಪೂರ್ಣ ವಿದ್ವಾನ ಗೀತಾಮನಿಷಿ ಎಂದುಕೊಂಡಿದ್ದಾರೆ. ಗೀತೆಯ ಜ್ಞಾನವನ್ನು ಯಾರು ಹೇಳಿದ್ದರು, ಮೊದಲಿನ ಪ್ರಶ್ನೆ-ಉತ್ತರದಲ್ಲಿ ಸ್ಪಷ್ಟಗೊಳಿಸಲಾಗಿದೆ. ಪ್ರಶ್ನೆ 1 ಮತ್ತು ಅದರ ಉತ್ತರವನ್ನು ಓದಿ.

ಪ್ರಶ್ನೆ 27 :- ಪರಮಾತ್ಮ ಸಾಕಾರನೋ ಅಥವಾ ನಿರಾಕಾರನೋ? ಅವ್ಯಕ್ತ ಎಂದರೆ ನಿರಾಕಾರವೇ?

ಉತ್ತರ :- ಪರಮಾತ್ಮ ಸಾಕಾರನು, ನರ ಸ್ವರೂಪನು ಅಂದರೆ ಮನುಷ್ಯನಂತೆ ಆಕಾರವುಳ್ಳವನು. ಅವ್ಯಕ್ತ ಎಂದರೆ ನಿರಾಕಾರ ಎಂದರ್ಥವಲ್ಲ, ಸಾಕಾರ ಎಂದೇ ಆಗುತ್ತದೆ. ಉದಾಹರಣೆಗೆ ಸೂರ್ಯನ ಮುಂದೆ ಮೋಡವು ಆವರಿಸಿದೆ, ಆಗ ಸೂರ್ಯನು ಅವ್ಯಕ್ತನಾಗುತ್ತಾನೆ. ನಮಗೆ ಅವನು ಕಾಣುವುದೇ ಇಲ್ಲ. ಆದರೆ ಸೂರ್ಯನು ಅವ್ಯಕ್ತನು ಹಾಗೂ ಸಾಕಾರನು. ಯಾವ ಪ್ರಭುವು ನಮಗೆ ಸಾಮಾನ್ಯ ಸಾಧನೆಯಿಂದ ಕಾಣುವುದಿಲ್ಲವೋ ಅವನ್ನು ಅವ್ಯಕ್ತ ಎಂದು ಕರೆಯುತ್ತಾರೆ.

ಗೀತೆಯ 7ನೇ ಅಧ್ಯಾಯದ 24-25ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನ್ನನ್ನು ಅವ್ಯಕ್ತನೆಂದು ಹೇಳಿಕೊಂಡಿದ್ದಾನೆ. ಏಕೆಂದರೆ ಅವನು ಶ್ರೀ ಕೃಷ್ಣನಲ್ಲಿ ಪ್ರವೇಶಿಸಿ ಹೇಳುತ್ತಿದ್ದನು. ಯಾವಾಗ ವ್ಯಕ್ತನಾದನೋ ಆಗ ವಿರಾಟರೂಪವನ್ನು ತೋರಿಸಿದ್ದನು. ಇವನು ಮೊದಲ ಅವ್ಯಕ್ತ ಪ್ರಭು, ಕ್ಷರಪುರುಷ ಎಂದು ಕರೆಯಲ್ಪಡುತ್ತಾನೆ, ಅವನನ್ನು ಕಾಲನೆಂದೂ ಕರೆಯುತ್ತಾರೆ. ಗೀತೆಯ 8ನೇ ಅಧ್ಯಾಯದ 17ರಿಂದ 19ರವರೆಗಿನ ಶ್ಲೋಕದಲ್ಲಿ ಎರಡನೇಯ ಅವ್ಯಕ್ತ ಅಕ್ಷರ ಪುರುಷನಿದ್ದಾನೆ. ಗೀತೆಯ ಅಧ್ಯಾಯ 8 ಶ್ಲೋಕ 20ರಲ್ಲಿ, ಈ ಅವ್ಯಕ್ತ ಅಂದರೆ ಅಕ್ಷರಪುರುಷನಿಗಿಂತ ಭಿನ್ನನಾದ ಸನಾತನ ಅವ್ಯಕ್ತ ಪರಮೇಶ್ವರ ಅರ್ಥಾತ್ ಪರಮ ಅಕ್ಷರ ಪುರುಷನಿದ್ದಾನೆ ಎಂದು ಹೇಳಲಾಗಿದೆ. ಈ ರೀತಿ ಇಲ್ಲಿ ಮೂವರು ಸಾಕಾರ (ನಿರಾಕಾರ) ಪ್ರಭುಗಳಿದ್ದಾರೆ. ಅವ್ಯಕ್ತ ಎಂದರೆ ನಿರಾಕಾರ ಎಂದಾಗುವುದಿಲ್ಲ. ಕ್ಷರಪುರುಷ (ಬ್ರಹ್ಮ)ನು ಎಂದಿಗೂ ತನ್ನ ನಿಜರೂಪದಲ್ಲಿ ಯಾರಿಗೂ ದರ್ಶನ ನೀಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದಾನೆ.

ಪ್ರಮಾಣ :- ಗೀತೆಯ 11ನೇ ಅಧ್ಯಾಯದ 47-48ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, "ಹೇ ಅರ್ಜುನ! ನನ್ನ ಈ ವಿರಾಟ ರೂಪವನ್ನು ನೀನು ನೋಡಿದೆ. ಈ ನನ್ನ ವಿರಾಟರೂಪವನ್ನು ಈ ಮೊದಲು ಯಾರೂ ನೋಡಿರಲಿಲ್ಲ. ನಿನ್ನನ್ನು ಅನುಗ್ರಹಿಸಿ ನಾನು ಈ ವಿರಾಟರೂಪವನ್ನು ನಿನಗೆ ತೋರಿಸಿದ್ದೇನೆ".

ಗೀತೆಯ 11ನೇ ಅಧ್ಯಾಯದ 48ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, "ನನ್ನ ಸ್ವರೂಪವನ್ನು ವೇದಗಳಲ್ಲಿ ವರ್ಣಿಸಿರುವ ವಿಧಿಯಿಂದಾಗಲಿ, ಜಪದಿಂದಾಗಲಿ, ತಪದಿಂದಾಗಲಿ, ಯಜ್ಞ-ಇತ್ಯಾದಿಗಳಿಂದ ನೋಡಲು ಸಾಧ್ಯವಿಲ್ಲ". ಕ್ಷರಪುರುಷ (ಗೀತೆಯ ಜ್ಞಾನದಾತ)ನನ್ನು ಯಾವುದೇ ಋಷಿ ಮುನಿಗಳು, ಮಹರ್ಷಿಗಳು, ಸಾಧಕರು ನೋಡಿಲ್ಲವೆಂದು ಇದರಿಂದ ಸಾಬೀತಾಯಿತು. ಆದ್ದರಿಂದ ಅವನನ್ನು ನಿರಾಕಾರನೆಂದು ಭಾವಿಸಿದರು. ಸೂಕ್ಷ್ಮವೇದ (ತತ್ವಜ್ಞಾನ)ದಲ್ಲಿ ಹೇಳಿರುವುದೇನೆಂದರೆ:-"ಖೋಜತ್-ಖೋಜತ್ ಥಾಕಿಯಾ, ಅಂತ್ ಮೆಂ ಕಹಾ ಬೇಚೂನ್। ನ ಗುರು ಪೂರಾ ನ ಸಾಧನಾ, ಸತ್ಯ್ ಹೋ ರಹೇ ಜೂನಮಂ-ಜೂನ್॥"

ಈಗ ಗೀತೆಯ 7ನೇ ಅಧ್ಯಾಯದ 24-25ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಸ್ಪಷ್ಟಪಡಿಸಿರುವುದೇನೆಂದರೆ, "ನಾನು ನನ್ನ ಯೋಗ ಮಾಯೆಯಿಂದ ಅವಿತುಕೊಂಡಿರುತ್ತೇನೆ. ಯಾರ ಎದುರೂ ಬರುವುದಿಲ್ಲ, ನಾನು ಅವ್ಯಕ್ತನು, ಅವಿತುಕೊಳ್ಳುವುದು ಎಂದರೆ ಸಾಕಾರನು ಎಂದರ್ಥ. ಅಕ್ಷರ ಪುರುಷನೂ ಅವ್ಯಕ್ತನು", ಇದೂ ಸಹ ಮೇಲಿನ ಉದಾಹರಣೆಗಳಿಂದ ಸ್ಪಷ್ಟಪಡಿಸಲಾಗಿದೆ. ಈ ಪ್ರಭುವಿನ (ಅಕ್ಷರ ಪುರುಷನ) ಬಗ್ಗೆ ಯಾವುದೇ ಭೂಮಿಕೆ ಇಲ್ಲ, ಅವನು ತನ್ನ 7 ಶಂಖ ಬ್ರಹ್ಮಾಂಡಗಳವರೆಗೆ ಮಾತ್ರ ಸೀಮಿತನು. ಆದ್ದರಿಂದ ಅವನನ್ನು ನೋಡಲು ಯಾರಿಗೂ ಸಾಧ್ಯವಿಲ್ಲ.

ಪರಮ ಅಕ್ಷರ ಪುರುಷ :– ಈ ಪ್ರಭುವಿಗೆ ಎಲ್ಲಾ ಬ್ರಹ್ಮಾಂಡಗಳಲ್ಲೂ ಭೂಮಿಕೆ ಇದೆ. ಇವನು ಸತ್ಯಲೋಕದಲ್ಲಿರುತ್ತಾನೆ. ಇದು ಪೃಥ್ವಿಯಿಂದ 16 ಶಂಖ ಕೊಸ ದೂರ ಇದೆ. (ಒಂದು ಕೊಸ ಎಂದರೆ 3 ಕಿ.ಮಿ.) ವೇದಗಳಲ್ಲಿ (ನಾಲ್ಕುವೇದ) ಇವನನ್ನು ಪಡೆಯುವ ಬಗ್ಗೆ ಮಾಹಿತಿ ಇಲ್ಲ. ಆದ್ದರಿಂದ ಈ ಪ್ರಭುವನ್ನು ಯಾರೂ ನೋಡಲು ಸಾಧ್ಯವಾಗಿಲ್ಲ. ಯಾವಾಗ ಈ ಪ್ರಭುವು (ಪರಮ ಅಕ್ಷರ ಬ್ರಹ್ಮನು) ಭೂಮಿಯ ಮೇಲೆ ಸಶರೀರವಾಗಿ ಪ್ರತ್ಯಕ್ಷನಾಗುತ್ತಾನೋ, ಆಗ ಇವನನ್ನು ಯಾರೂ ಗುರುತಿಸಲಾರರು. ಪರಮಾತ್ಮನು ಹೀಗೂ ಹೇಳಿದ್ದಾರೆ :–

"ಹಮ್ ಹೀ ಅಲಖ್ ಅಲ್ಲಾಹ್ ಹೈಂ, ಕುತುಬ್–ಗೋಸ್ ಔರ್ ಪೀರ್।
ಗರೀಬ್ ದಾಸ್ ಖಾಲಿಕ್ ಧನೀ, ಹಮ್‌ರಾ ನಾಮ್ ಕಬೀರ್॥"

ನಾನು ಪೂರ್ಣ ಪರಮಾತ್ಮನು, ನಾನೇ ಪೀರ್ ಅರ್ಥಾತ್ ಸತ್ಯಜ್ಞಾನವನ್ನು ನೀಡುವ ಸದ್ಗುರು. ಸರ್ವ ಸೃಷ್ಟಿಯ ಮಾಲೀಕನೂ ನಾನೇ. ನನ್ನ ಹೆಸರು ಕಬೀರ. ಆದರೆ ಎಲ್ಲಾ ಸಾಧಕರು, ಋಷಿಗಳು ಹಾಗೂ ಮಹರ್ಷಿಗಳು ಇದೇ ಜ್ಞಾನ ದೃಢ ಮಾಡಿಕೊಂಡಿದ್ದಾರೆ ಪರಮಾತ್ಮನು ನಿರಾಕಾರನೆಂದು. ಅವನನ್ನು ನೋಡಲು ಸಾಧ್ಯವಿಲ್ಲ, ಈ ಭೂಮಿಯ ಮೇಲೆ ಅಲೆದಾಡುವ ಒಬ್ಬ ನೇಕಾರ ಕಬೀರನು, ಒಬ್ಬ ಕವಿ ಹೇಗೆ ಪರಮ ಅಕ್ಷರ ಬ್ರಹ್ಮನಾಗಲು ಸಾಧ್ಯ?

ಅದಕ್ಕೆ ಉತ್ತರ ಈ ರೀತಿ ಇದೆ:–

ಪರಮಾತ್ಮನನ್ನು ಇಷ್ಟಪಡುವ ಪ್ರಪಂಚದ ಯಾವುದೇ ವ್ಯಕ್ತಿಯು ನಾಲ್ಕೂ ವೇದಗಳ (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ)ನ್ನು ತಪ್ಪೆಂದು ಭಾವಿಸುವುದಿಲ್ಲ. ಇಂದು ಆರ್ಯ ಸಮಾಜದ ಪ್ರವರ್ತಕರಾದ ಸ್ವಾಮಿ ದಯಾನಂದರನ್ನು ವೇದಗಳ ಪೂರ್ಣ ವಿದ್ವಾಂಸ ಎಂದು ತಿಳಿಯಲಾಗುತ್ತದೆ. ಅವರ ಹೇಳಿಕೆ ಏನೆಂದರೆ, 'ಪರಮಾತ್ಮನು ನಿರಾಕಾರನು'. ಆರ್ಯ ಸಮಾಜ ಹಾಗೂ ಮಹರ್ಷಿ ದಯಾನಂದರು ವೇದಗಳ ಜ್ಞಾನವನ್ನು ಸತ್ಯವೆಂದು ನಂಬುತ್ತಾರೆ. ಅವರು ಸ್ವತಃ ವೇದಗಳನ್ನು ಹಿಂದಿಗೆ ಅನುವಾದಿಸಿದ್ದಾರೆ. ಅದರಲ್ಲಿ, "ಪರಮಾತ್ಮನು ಮೇಲಿನ ಲೋಕದಲ್ಲಿರುತ್ತಾನೆ, ಅಲ್ಲಿಂದ ಸಶರೀರವಾಗಿ ನಡೆದು ಭೂಮಿಗೆ ಬರುತ್ತಾನೆ. ಒಳ್ಳೆಯ ಆತ್ಮಗಳಿಗೆ ಸಿಗುತ್ತಾನೆ. ಅವರಿಗೆ ಯಥಾರ್ಥ ಭಕ್ತಿಯ ಜ್ಞಾನವನ್ನು ತಿಳಿಸುತ್ತಾನೆ. ಪರಮಾತ್ಮನು ತನ್ನ ಮುಖ ಕಮಲದಿಂದ ತತ್ವಜ್ಞಾನವನ್ನು ಉಚ್ಚಾರ ಮಾಡಿ, ಲೋಕೋಕ್ತಿಗಳ, ಸಾಖಿ, ಪದ್ಯ, ದೋಹೆ ಚೌಪದಿಗಳ ರೂಪದಲ್ಲಿ ಹೇಳುತ್ತಾನೆ. ಆ ಕಾರಣದಿಂದ ಪ್ರಸಿದ್ಧ ಕವಿಯ ಬಿರುದು ಸಹ ಪಡೆಯುತ್ತಾನೆ. ಕವಿಗಳ ರೀತಿಯಲ್ಲಿಯೇ ಇದ್ದು ಭೂಲೋಕದಲ್ಲಿ ಓಡಾಡಿಕೊಂಡಿರುತ್ತಾನೆ. ಭಕ್ತಿಯ ಗುಪ್ತ ಮಂತ್ರಗಳ ಆವಿಷ್ಕಾರ ಮಾಡಿ ಸಾಧಕರಿಗೆ ಹೇಳುತ್ತಾನೆ ಹಾಗೂ ಭಕ್ತಿ ಮಾಡಲು ಪ್ರೇರೇಪಿಸುತ್ತಾನೆ" ಎಂದು ಬರೆದಿದೆ.

ಪ್ರಮಾಣಕ್ಕಾಗಿ ವೇದಗಳ ಫೋಟೋಕಾಪಿಯನ್ನು ಇದೇ ಪುಸ್ತಕದಲ್ಲಿ ನೀಡಲಾಗಿದೆ.

ಋಗ್ವೇದ ಮಂಡಲ 9 ಸೂಕ್ತಿ 86 ಮಂತ್ರ 26–27, ಋಗ್ವೇದ ಮಂಡಲ 9 ಸೂಕ್ತಿ 82 ಮಂತ್ರ 1–2, ಋಗ್ವೇದ ಮಂಡಲ 9 ಸೂಕ್ತಿ 96 ಮಂತ್ರ 16–20, ಋಗ್ವೇದ ಮಂಡಲ 9 ಸೂಕ್ತಿ 94 ಮಂತ್ರ 1, ಋಗ್ವೇದ ಮಂಡಲ 9 ಸೂಕ್ತಿ 95 ಮಂತ್ರ 2, ಋಗ್ವೇದ ಮಂಡಲ 9 ಸೂಕ್ತಿ 54 ಮಂತ್ರ 3, ಋಗ್ವೇದ ಮಂಡಲ 9 ಸೂಕ್ತಿ 20 ಮಂತ್ರ 1 ಇನ್ನೂ ಅನೇಕ ವೇದ ಮಂತ್ರಗಳಲ್ಲಿ ಇದರ ಬಗ್ಗೆ ಇರುವ ಪ್ರಮಾಣವೇನೆಂದರೆ, ಪರಮಾತ್ಮನು ಮನುಷ್ಯನಂತೆ ನರಾಕಾರನು. ಗೀತೆಯ 4ನೇ ಅಧ್ಯಾಯದ 32ನೇ ಹಾಗೂ 34ನೇ ಶ್ಲೋಕದಲ್ಲಿಯೂ ಪ್ರಮಾಣವಿದೆ. ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, "ಹೇ ಅರ್ಜುನ, ಪರಮ ಅಕ್ಷರ ಬ್ರಹ್ಮನು ತನ್ನ ಮುಖಕಮಲದಿಂದ ತತ್ವಜ್ಞಾನವನ್ನು ಹೇಳುತ್ತಾನೆ. ಆ ಸಚ್ಚಿದಾನಂದ ಘನ ಬ್ರಹ್ಮನ ವಾಣಿಯಲ್ಲಿ ಯಜ್ಞಗಳ ಅರ್ಥಾತ್ ಧಾರ್ಮಿಕ ಅನುಷ್ಠಾನಗಳ ಮಾಹಿತಿಯನ್ನು ವಿಸ್ತಾರವಾಗಿ ಹೇಳಲಾಗಿದೆ. ಇದನ್ನು ತಿಳಿದು ಭಕ್ತನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ". ನಂತರ ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ

ಹೇಳಿರುವುದೇನೆಂದರೆ, "ಆ ಜ್ಞಾನವನ್ನು ನಂತರ ನೀನು ತತ್ವದರ್ಶಿ ಸಂತನ ಬಳಿ ಹೋಗಿ ತಿಳಿದುಕೋ. ಅವರಿಗೆ ದೀರ್ಘದಂಡ ನಮಸ್ಕಾರ ಮಾಡಿ ವಿನಯವಾಗಿ ಪ್ರಶ್ನಿಸುವುದರಿಂದ ಆ ತತ್ವದರ್ಶಿ ಸಂತರು ನಿನಗೆ ತತ್ವಜ್ಞಾನದ ಉಪದೇಶ ಮಾಡುವರು".

ಒಂದು ವಿಶೇಷವಾದ ವಿಷಯವೇನೆಂದರೆ, ಗೀತೆಯು ನಾಲ್ಕೂ ವೇದಗಳ ಸಾರಾಂಶ. ಇದರಲ್ಲಿ ಹೆಚ್ಚಿನ ಜ್ಞಾನವು ಸಾಂಕೇತಿಕವಾಗಿದೆ. ತತ್ವಜ್ಞಾನವು ಗೀತೆಯ ಜ್ಞಾನಕ್ಕಿಂತ ಭಿನ್ನ ಎಂಬುದೂ ಸ್ಪಷ್ಟವಾಯಿತು. ಅದನ್ನು ಕೇವಲ ತತ್ವದರ್ಶಿ ಸಂತನೇ ಬಲ್ಲನು. ಅವರನ್ನು ಪರಮ ಅಕ್ಷರ ಬ್ರಹ್ಮನು ಸ್ವತಃ ಭೂಲೋಕಕ್ಕೆ ಬಂದು ಭೇಟಿಯಾಗುತ್ತಾನೆ.

ಪ್ರಶ್ನೆ 28:- ಯಾವ ಯಾವ ಪುಣ್ಯಾತ್ಮರಿಗೆ ಪರಮಾತ್ಮನು ಸಿಕ್ಕಿದ್ದಾನೆ?

ಉತ್ತರ:- ಪರಮಾತ್ಮನು ನಾಲ್ಕೂ ಯುಗಗಳಲ್ಲಿ ಪ್ರಕಟರಾಗಿ ಜ್ಞಾನವನ್ನು ತಿಳಿಸುತ್ತಾರೆ 1) ಸತ್ಯಯುಗದಲ್ಲಿ 'ಸತ್ಯಸುಕೃತ್' ಎಂಬ ಹೆಸರಿನಿಂದ 2) ತ್ರೇತಾಯುಗದಲ್ಲಿ 'ಮುನೀಂದ್ರ' ಎಂಬ ಹೆಸರಿನಿಂದ 3) ದ್ವಾಪರಯುಗದಲ್ಲಿ 'ಕರುಣಾಮಯ' ಎಂಬ ಹೆಸರಿನಿಂದ 4)ಕಲಿಯುಗದಲ್ಲಿ 'ಕಬೀರ' ಎಂಬ ಹೆಸರಿನಿಂದ ಪರಮೇಶ್ವರ ಪ್ರಕಟರಾಗಿದ್ದಾರೆ. ಸೂಕ್ಷ್ಮವೇದದಲ್ಲಿ ಹೇಳಿದೆ:-

ಸತ್‌ಯುಗ್ ಮೆಂ ಸತ್‌ಸುಕೃತ್ ಕಹ್ ಟೇರಾ, ತ್ರೇತಾ ನಾಮ್ ಮುನಿಂದ್ರ್ ಮೇರಾ॥
ದ್ವಾಪರ್ ಮೆಂ ಕರುಣಾಮಯ್ ಕಹಾಯಾ, ಕಲ್‌ಯುಗ್ ನಾಮ್ ಕಬೀರ್ ಧರಾಯಾ॥

## "ಯಾರ್‍ಯಾರಿಗೆ ಪರಮಾತ್ಮನು ಸಿಕ್ಕನು"

ಕಲಿಯುಗದಲ್ಲಿ ಪರಮೇಶ್ವರನು ಯಾವ-ಯಾವ ಆತ್ಮಗಳಿಗೆ ಸಿಕ್ಕಿದನು, ಹಾಗೂ ಯಾರ್‍ಯಾರಿಗೆ ತತ್ವಜ್ಞಾನವನ್ನು ತಿಳಿಸಿದನು ಎನ್ನುವ ಬಗ್ಗೆ ನಾನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

### "ಸಂತ ಧರ್ಮದಾಸನಿಗೆ ಪ್ರಥಮ ಬಾರಿ ಪರಮೇಶ್ವರ ಕಬೀರರ ಸಾಕ್ಷಾತ್ಕಾರ"

ಧರ್ಮದಾಸರು ವೈಶ್ಯ ಜಾತಿಗೆ ಸೇರಿದವರಾಗಿದ್ದರು. ಅವರು ಬಾಂಧವ್‌ಗಢ್ (ಮಧ್ಯಪ್ರದೇಶ) ಎಂಬ ಪ್ರದೇಶದಲ್ಲಿ ವಾಸಿಸುವ ಒಬ್ಬ ಶ್ರೀಮಂತ ವ್ಯಕ್ತಿಯಾಗಿದ್ದರು. ಅವರಿಗೆ ಬಾಲ್ಯದಿಂದಲೂ ಭಕ್ತಿಯ ಪ್ರೇರಣೆ ಇತ್ತು. ಆದ್ದರಿಂದ ಅವರು ರೂಪ್‌ದಾಸ ಎಂಬ ವೈಷ್ಣವ ಸಂತರನ್ನು ಗುರು ಧಾರಣೆ ಮಾಡಿದ್ದರು. ಹಿಂದೂ ಧರ್ಮದಲ್ಲಿ ಹುಟ್ಟಿದ್ದ ಕಾರಣ ಸಂತ ರೂಪ್‌ದಾಸರು ಧರ್ಮದಾಸನಿಗೆ ರಾಮ, ಕೃಷ್ಣ, ವಿಷ್ಣು ಹಾಗೂ ಶಿವನನ್ನು ಆರಾಧಿಸುವಂತೆ ಹೇಳುತ್ತಿದ್ದರು. ಏಕಾದಶಿಯ ವ್ರತ, ತೀರ್ಥಸ್ಥಾನಗಳಿಗೆ ಹೋಗುವುದು, ಶ್ರಾದ್ಧಕರ್ಮ, ಪಿಂಡಪ್ರದಾನ ಇವುಗಳನ್ನೆಲ್ಲಾ ಮಾಡಲು ತಿಳಿಸಿದ್ದರು. ಗುರು ರೂಪ್‌ದಾಸರು ಹೇಳಿದಂತೆ ಎಲ್ಲಾ ಸಾಧನೆಗಳನ್ನು ಧರ್ಮದಾಸರು ಪೂರ್ತಿ ಶ್ರದ್ಧೆಯಿಂದ ಮಾಡುತ್ತಿದ್ದರು. ಧರ್ಮದಾಸರು ರೂಪ್‌ದಾಸರ ಅಪ್ಪಣೆ ಪಡೆದು ತೀರ್ಥಸ್ಥಾನಗಳಿಗೆ ಭೇಟಿ ನೀಡಲು, ತೀರ್ಥಸ್ನಾನ ಮಾಡಲು ಹಾಗೂ ಗಿರಿರಾಜ (ಗೋವರ್ಧನ) ಪರ್ವತದ ಪ್ರದಕ್ಷಿಣೆ ಹಾಕಲು ಮಥುರಾ ನಗರಕ್ಕೆ ಹೋಗಿದ್ದರು. ಪರಮ ಅಕ್ಷರ ಬ್ರಹ್ಮ, ಜಿಂದಾ ಮಹಾತ್ಮನ ವೇಷದಲ್ಲಿ ಧರ್ಮದಾಸರಿಗೆ ಸ್ವಯಂ ಮಥುರಾದಲ್ಲಿ ಭೇಟಿಯಾದರು. ಶ್ರೀ ಕೃಷ್ಣನು ತನ್ನ ಬಾಲ್ಯದಲ್ಲಿ ಸ್ನಾನ ಮಾಡುತ್ತಿದ್ದ ಕೆರೆಯಲ್ಲಿ ಧರ್ಮದಾಸರು ಸ್ನಾನ ಮಾಡಿದರು. ನಂತರ ಒಂದು ಲೋಟದಲ್ಲಿ ಅದೇ ನೀರನ್ನು ತುಂಬಿ ತಂದರು. ಭಗವಂತ ಶ್ರೀಕೃಷ್ಣನ ಮೂರ್ತಿ (ಸಾಲಿಗ್ರಾಮ್)ಯ ಚರಣಗಳ ಮೇಲೆ ಸುರಿದು ಮತ್ತೊಂದು ಪಾತ್ರೆಗೆ ಆ ನೀರು ಬೀಳುವಂತೆ ಮಾಡಿ, ಅದನ್ನು ಚರಣಾಮೃತ ಮಾಡಿ ಕುಡಿದರು. ನಂತರ ಸಾಲಿಗ್ರಾಮಕ್ಕೆ ಸ್ನಾನ ಮಾಡಿಸಿ ತನ್ನ ಕರ್ಮಕಾಂಡವನ್ನು ಪೂರೈಸಿದರು. ಒಂದು ನಿರ್ದಿಷ್ಟ ಸ್ಥಳವನ್ನು ಹಸುವಿನ ಸಗಣಿಯಿಂದ ಸಾರಿಸಿ ಆ ನೆಲವನ್ನು ಶುಚಿಗೊಳಿಸಿ, ಅದರ ಮೇಲೆ ಒಂದು ಸ್ವಚ್ಛವಾದ ಬಟ್ಟೆಯನ್ನು ಹಾಸಿ, ಭಗವದ್ಗೀತೆಯ ಅಧ್ಯಯನ ಮಾಡಲು ಕುಳಿತರು. ಈ ಎಲ್ಲಾ ಕ್ರಿಯೆಗಳನ್ನು ಧರ್ಮದಾಸರು ಮಾಡುತ್ತಿರುವಾಗ. ಜಿಂದಾ ಮಹಾತ್ಮನ ವೇಷದಲ್ಲಿದ್ದ ಪರಮಾತ್ಮ ಸ್ವಲ್ಪದೂರದಲ್ಲಿ ಕುಳಿತು

ಇದೆಲ್ಲವನ್ನೂ ನೋಡುತ್ತಿದ್ದರು. ಧರ್ಮದಾಸರು ಸಹ ನೋಡುತ್ತಿದ್ದರು, ಯಾರೋ ಒಬ್ಬ ಮುಸಲ್ಮಾನ ಸಂತ ನನ್ನ ಭಕ್ತಿ ಕ್ರಿಯೆಗಳನ್ನು ಬಹಳ ಗಮನವಿಟ್ಟು ನೋಡುತ್ತಿರುವನು, ಇವನಿಗೆ ಹಿಂದೂಗಳಾದ ನಮ್ಮ ಸಾಧನೆ ಇಷ್ಟವಾಗಿದೆ ಎಂದು ಅನ್ನಿಸುತ್ತದೆ. ಹಾಗಾಗಿ ಧರ್ಮದಾಸರು ಭಗವದ್ಗೀತೆಯ ಪಠಣೆಯನ್ನು ಸ್ವಲ್ಪಜೋರಾಗಿ ಮಾಡಲು ಪ್ರಾರಂಭಿಸಿದರು. ಹಾಗು ಅದರ ಅನುವಾದವನ್ನೂ ಓದಲು ಪ್ರಾರಂಭಿಸಿದರು. ಪರಮೇಶ್ವರರು ಎದ್ದು ಧರ್ಮದಾಸನ ಬಳಿ ಬಂದು ಕುಳಿತರು. ಧರ್ಮದಾಸನಿಗೆ ವಾಸ್ತವವಾಗಿ ಜಿಂದಾ ವೇಷಧಾರಿ ಬಾಬಾಗೆ ನಮ್ಮ ಧರ್ಮದ ಭಕ್ತಿ ತುಂಬಾ ಹಿಡಿಸಿದೆ ಎನ್ನುವ ತನ್ನ ಸಂದೇಹ ನಿಜವೆನ್ನಿಸಿತು. ಆದ್ದರಿಂದ ಆ ದಿನ ಗೀತೆಯ ಅನೇಕ ಅಧ್ಯಾಯಗಳ ಪಠಣೆ ಮಾಡಿದನು ಹಾಗೂ ಅದರ ಅರ್ಥವನ್ನು ಹೇಳಿದನು. ಧರ್ಮದಾಸ ತನ್ನ ದೈನಂದಿನ ಭಕ್ತಿ ಕರ್ಮವನ್ನು ಮಾಡಿ ಮುಗಿಸಿದ ನಂತರ ಪರಮಾತ್ಮ ಹೀಗೆಂದರು, 'ಹೇ ಮಹಾತ್ಮರೇ, ನಿಮ್ಮ ಹೆಸರೇನು? ಯಾವ ಜಾತಿಯವರು? ನೀವು ಎಲ್ಲಿ ವಾಸಿಸುತ್ತಿರಿ? ಯಾವ ಧರ್ಮ-ಪಂಥದಿಂದ ಸೇರಿದವರು? ದಯವಿಟ್ಟು ಹೇಳುವ ಕೃಪೆ ಮಾಡಿ. ನನಗೆ ನಿಮ್ಮ ಈ ಜ್ಞಾನ ಬಹಳ ಇಷ್ಟವಾಯಿತು. ನನಗೂ ಏನಾದರೂ ಭಕ್ತಿಜ್ಞಾನವನ್ನು ತಿಳಿಸಿ.' ನಿಮ್ಮ ಬಹಳ ಕೃಪೆ ಆಗುವುದು.

ಧರ್ಮದಾಸರು ಉತ್ತರ ನೀಡಿದರು :- ನನ್ನ ಹೆಸರು ಧರ್ಮದಾಸ. ನಾನು ಬಾಂಧವಗಢ್ ಎಂಬ ಹಳ್ಳಿಯಲ್ಲಿರುವ ವೈಶ್ಯ ಕುಲದವನು. ನಾನು ವೈಷ್ಣವ ಪಂಥದ ದೀಕ್ಷೆ ಪಡೆದಿದ್ದೇನೆ. ಹಿಂದೂ ಧರ್ಮದಲ್ಲಿ ಹುಟ್ಟಿದ್ದೇನೆ. ನಾನು ದೃಢ ನಿಶ್ಚಯದಿಂದ ಹಾಗೂ ಜ್ಞಾನ ತಿಳಿದ ಮೇಲೆ ವೈಷ್ಣವ ಪಂಥದಿಂದ ದೀಕ್ಷೆ ಪಡೆದಿದ್ದೇನೆ. ಶ್ರೀ ರೂಪ್‌ದಾಸರು ನನ್ನ ಗುರುಗಳು. ಆಧ್ಯಾತ್ಮ ಜ್ಞಾನದಿಂದ ನಾನು ಪರಿಪೂರ್ಣನಾಗಿದ್ದೇನೆ. ಬೇರೆಯವರ ಮಾತು ಕೇಳುವವನಲ್ಲ. ರಾಮ, ಕೃಷ್ಣರು ವಿಷ್ಣುವಿನದೇ ಅವತಾರ ಹಾಗು ನಾನು ಭಗವಂತ ಶಿವನನ್ನೂ ಪೂಜಿಸುತ್ತೇನೆ. ಏಕಾದಶಿ ವ್ರತವನ್ನು ಮಾಡುತ್ತೇನೆ. ತೀರ್ಥಸ್ಥಾನಗಳಿಗೆ ಹೋಗುತ್ತೇನೆ. ಅಲ್ಲಿ ದಾನಧರ್ಮ ಮಾಡುತ್ತೇನೆ. ಮೂರ್ತಿ ಪೂಜೆ ಪ್ರತಿದಿನ ಮಾಡುತ್ತೇನೆ. ಪವಿತ್ರ ಪುಸ್ತಕ ಶ್ರೀಮದ್ಭವದ್ಗೀತೆಯನ್ನು ಪ್ರತಿನಿತ್ಯ ಪಠಿಸುತ್ತೇನೆ. ಸ್ವರ್ಗವಾಸಿಗಳಾಗಿರುವ ನನ್ನ ಪೂರ್ವಜರ ಶ್ರಾದ್ಧ ಕರ್ಮವನ್ನು ಮಾಡುತ್ತೇನೆ. ಪಿಂಡ ಪ್ರದಾನ ಸಹ ಮಾಡುತ್ತೇನೆ. ನಾನು ಯಾವುದೇ ಜೀವಹಿಂಸೆ ಮಾಡುವುದಿಲ್ಲ. ಮಾಂಸ, ಮದಿರೆ, ತಂಬಾಕು ಸೇವನೆ ಮಾಡುವುದಿಲ್ಲ.

ನೀವು ಓದುತ್ತಿದ್ದ ಪುಸ್ತಕದ ಹೆಸರೇನು? ಎಂದು ಕಬೀರ ಪರಮೇಶ್ವರರು ಕೇಳಿದರು. 'ಇದು ಶ್ರೀಮದ್ಭಗವದ್ಗೀತೆ. ನಾವು ಶುದ್ಧವಾಗಿರುತ್ತೇವೆ. ಶೂದ್ರರನ್ನು ಹತ್ತಿರವು ಬರಲು ಬಿಡಲ್ಲ ಎಂದು ಧರ್ಮದಾಸರು ಹೇಳಿದರು.

ಪ್ರಶ್ನೆ **29**:- (ಜಿಂದಾ ರೂಪದಲ್ಲಿರುವ ಕಬೀರರು) ನೀವು ಯಾವ ನಾಮ ಜಪ ಮಾಡುವಿರಿ?

ಉತ್ತರ:- (ಧರ್ಮದಾಸನ) ನಾವು ಹರೆ ಕೃಷ್ಣ, ಕೃಷ್ಣ-ಕೃಷ್ಣ ಹರೇ ಹರೇ, ಓಂ ನಮಃ ಶಿವಾಯ, ಓಂ ಭಗವತೇ ವಾಸುದೇವಾಯ ನಮಃ, ರಾಧೇ-ರಾಧೇ, ಗಾಯತ್ರಿ ಮಂತ್ರವನ್ನು **108** ಬಾರಿ ಪ್ರತಿದಿನ ಜಪಿಸುತ್ತೇನೆ. ವಿಷ್ಣು ಸಹಸ್ರನಾಮದ ಜಪವನ್ನೂ ಸಹ ಮಾಡುತ್ತೇನೆ.

ಪ್ರಶ್ನೆ **30**:- (ಜಿಂದಾ ಮಹಾತ್ಮನ) ಹೇ ಮಹಾತ್ಮ ಧರ್ಮದಾಸ! ಗೀತೆಯ ಜ್ಞಾನವನ್ನು ನೀಡಿದವರು ಯಾರು?

ಉತ್ತರ:- (ಧರ್ಮದಾಸನ) ಕುಲದ ಒಡೆಯನಾದ ಹಾಗೂ ಸರ್ವಶಕ್ತಿವಂತನಾದ ಶ್ರೀ ಕೃಷ್ಣ ಪರಮಾತ್ಮನು. ಅವನೇ ವಿಷ್ಣು.

ಪ್ರಶ್ನೆ **31**:- (ಜಿಂದಾ ಮಹಾತ್ಮನ ರೂಪದಲ್ಲಿರುವ ಪರಮಾತ್ಮನ) ನಿಮ್ಮ ಇಷ್ಟ ದೇವರು ಕೃಷ್ಣ ಅರ್ಥಾತ್ ಶ್ರೀ ವಿಷ್ಣು ಎಂದಾಯಿತು. ಅವರು ತಿಳಿಸಿರುವ ಭಕ್ತಿಜ್ಞಾನವು ಗೀತಾಶಾಸ್ತ್ರ ಎಂದಾಯಿತು.

ಹೇ ಧರ್ಮದಾಸ! ಒಬ್ಬ ರೈತನಿಗೆ ವೃದ್ಧಾಪ್ಯದಲ್ಲಿ ಪುತ್ರ ಪ್ರಾಪ್ತಿಯಾದನು. ಮಗನು ದೊಡ್ಡವನಾಗಿ, ಕೃಷಿ ವ್ಯವಸಾಯ ಮಾಡುವ ವೇಳೆಗೆ ನಾನು ಬದುಕಿರುವುದಿಲ್ಲ ಎಂದು ಯೋಚಿಸಿದನು ಆದ್ದರಿಂದ ಕೃಷಿ ವ್ಯವಸಾಯ ಮಾಡುವ ವಿಧಾನವನ್ನು ತನ್ನ ಅನುಭವವನ್ನು ಒಂದು ರಿಜಿಸ್ಟರ್‌ನಲ್ಲಿ ಬರೆದಿಟ್ಟನು. ನಂತರ ತನ್ನ ಮಗನನ್ನು ಕರೆದು ಹೀಗೆಂದನು, "ಮಗೂ, ನೀನು ದೊಡ್ಡವನಾದ ಮೇಲೆ ಈ ರಿಜಿಸ್ಟರ್ ನಲ್ಲಿ ಬರೆದಿರುವ ನನ್ನ ಅನುಭವವನ್ನು ಎರಡೆರಡು ಬಾರಿ ಓದು. ಅದರಂತೆ ಬೆಳೆ ಬೆಳೆಯಬೇಕು." ಕೆಲವು ವರ್ಷಗಳ ನಂತರ ಆ ರೈತನು ತೀರಿಕೊಂಡನು. ತಂದೆಯ ಮಾತಿನಂತೆ ಮಗನು ಆ ಅನುಭವದ ಪಾಠವನ್ನು ಪ್ರತಿದಿನವೂ ಓದಲು ಪ್ರಾರಂಭಿಸಿದನು. ಆದರೆ ಅನುಭವವಿಲ್ಲದ್ದರಿಂದ ಬೀಜ ಬಿತ್ತನೆ, ನಾಟಿ ಮಾಡುವುದು ಹಾಗೂ ನೀರು ಹಾಯಿಸುವುದನ್ನು ವಿರುದ್ಧವಾಗಿ ಹೇಗೇಗೋ ಮಾಡುತ್ತಿದ್ದನು. ಇದರಿಂದ ಆ ಮಗನು ಕೃಷಿಯಲ್ಲಿ ಯಶಸ್ವಿಯಾಗಲು ಸಾಧ್ಯವೇ?

ಉತ್ತರ (ಧರ್ಮದಾಸನ) :- ಹಾಗಾದರೆ ಆ ಪುತ್ರನು ಬಡವನಾಗಿ ಬಿಡುವನು. ತಂದೆಯು ಬರೆದಿಟ್ಟ ಅನುಭವದ ಪ್ರಕಾರವೇ ಪ್ರತಿಕೆಲಸವನ್ನು ಮಾಡಬೇಕು. ಅವನಂತು ಮೂರ್ಖ ಮಗನು.

ಪ್ರಶ್ನೆ 32:- (ಜಿಂದಾ ಮಹಾತ್ಮನ ರೂಪದಲ್ಲಿರುವ ಪರಮಾತ್ಮನ) ಹೇ ಧರ್ಮದಾಸ ! ಈ ಗೀತಾಶಾಸ್ತ್ರದಲ್ಲಿ ಬರೆದಿರುವ ನನ್ನ ಅನುಭವವನ್ನು ಓದಿ ಅದರ ಪ್ರಕಾರವಾಗಿ ಭಕ್ತಿ ಮಾಡಿದರೆ ಮೋಕ್ಷ ಪ್ರಾಪ್ತಿಯಾಗುವುದು ಎನ್ನುವುದು ನಿಮ್ಮ ಪರಮಪಿತ ಪರಮಾತ್ಮನಾದ ಕೃಷ್ಣ ಉರುಫ್ ವಿಷ್ಣುವಿನ ಅನುಭವ ಹಾಗೂ ಅವನ ಆದೇಶವಾಗಿದೆ. ಅದೇ ಗೀತಾ ಶಾಸ್ತ್ರ. ನೀವೂ ಸಹ ಗೀತೆಯಲ್ಲಿ ಬರೆದಿರುವಂತೆ ಶ್ರೀ ಕೃಷ್ಣನ ಆದೇಶದ ಅನುಸಾರ ಭಕ್ತಿ ಮಾಡಿತ್ತಿದ್ದೀರಾ? ನಿಮ್ಮ ಗುರುಗಳು ನಿಮಗೆ ನೀಡಿರುವ ಮಂತ್ರಜಪವು ಗೀತೆಯಲ್ಲಿ ಬರೆದಿದೆಯೇ? (ಹರೇರಾಮ-ಹರೇರಾಮ, ರಾಮ-ರಾಮ ಹರೇ ಹರೇ, ಹರೇ ಕೃಷ್ಣ-ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ, ಓಂ ನಮಃ ಶಿವಾಯ, ಓಂ ಭಗವತೇ ವಾಸುದೇವಾಯ ನಮಃ, ರಾಧೇರಾಧೇ ಶ್ಯಾಮ್, ಗಾಯತ್ರಿ ಮಂತ್ರ ಹಾಗೂ ವಿಷ್ಣು ಸಹಸ್ರನಾಮ) ಗೀತೆಯಲ್ಲಿ ಏಕಾದಶಿ ವ್ರತವನ್ನು ಆಚರಿಸಲು, ಶ್ರಾದ್ಧಕರ್ಮ ಮಾಡಲು, ಪಿಂಡಪ್ರದಾನ ಮಾಡಲು ಆದೇಶವಿದೆಯೇ?

ಉತ್ತರ (ಧರ್ಮದಾಸನ) :- ಇಲ್ಲ

ಪ್ರಶ್ನೆ 33 (ಪರಮೇಶ್ವರನ):- ಹಾಗಾದರೆ ನೀವಂತು ಆ ರೈತನ ಮಗನಂತೆ ತನ್ನ ತಂದೆಯ ಆಜ್ಞೆಯನ್ನು ಧಿಕ್ಕರಿಸಿ ತನ್ನ ಮನಸ್ಸಿಗೆ ಬಂದ ವಿಧಾನದಿಂದ ಜೋಳದ ಬೀಜವನ್ನು ಸಮಯವಲ್ಲದ ಸಮಯದಲ್ಲಿ ಬಿತ್ತಿ, ಮೂರ್ಖತೆಯನ್ನು ಪ್ರದರ್ಶಿಸುತ್ತಿರುವ ಕೆಲಸದಂತೆಯೇ ಮಾಡುತ್ತಿರುವಿರಿ. ಈಗಾಗಲೇ ನೀವು ಅವನನ್ನು ಮೂರ್ಖನೆಂದು ಕರೆದಿದ್ದೀರಿ. ಆ ರೈತನ ಮೂರ್ಖ ಪುತ್ರನಿಗಿಂತ ನೀವೇನು ಕಡಿಮೆಯೇ?

ಧರ್ಮದಾಸರು ಹೇಳಿದರು:- ಹೇ ಜಿಂದಾ, ನೀವು ಮುಸಲ್ಮಾನ ಫಕೀರರು. ಆದ್ದರಿಂದ ನಮ್ಮ ಹಿಂದೂ ಧರ್ಮದ ಭಕ್ತಿಯ ಕ್ರಿಯಾವಿಧಾನ ಹಾಗೂ ಮಂತ್ರಗಳನ್ನು ತಪ್ಪೆಂದು ಹೇಳುತ್ತಿರುವಿರಿ.

ಉತ್ತರ:- (ಜಿಂದಾ ಮಹಾತ್ಮನ ರೂಪದಲ್ಲಿರುವ ಕಬೀರರ) :- ಹೇ ಧರ್ಮದಾಸ ಸ್ವಾಮಿಗಳೇ, ನಾನೇನೂ ಹೇಳುತ್ತಿಲ್ಲ, ನಿಮ್ಮ ಧರ್ಮದ ಧರ್ಮ ಗುರುಗಳು ಶಾಸ್ತ್ರ ವಿಧಾನವನ್ನು ಬಿಟ್ಟು ಮನಸ್ಸಿಗೆ ಬಂದಂತೆ ಆಚರಣೆ ಮಾಡಿಸುತ್ತಿದ್ದಾರೆ ಎಂದು ನಿಮ್ಮ ಧರ್ಮಗ್ರಂಥಗಳೇ ಹೇಳುತ್ತಿವೆ. ನಿಮ್ಮ ಗೀತೆಯ 16ನೇ ಅಧ್ಯಾಯದ 23-24ನೇ ಶ್ಲೋಕದಲ್ಲೂ, ಹೇಳಲಾಗಿದೆ ಹೇ ಅರ್ಜುನ! ಯಾವ ಸಾಧಕನು ಶಾಸ್ತ್ರ ವಿಧಾನವನ್ನು ಬಿಟ್ಟು ಮನಸ್ಸಿಗೆ ಬಂದ ಹಾಗೆ ಆಚರಣೆ ಮಾಡುತ್ತಾನೋ, ಅಂದರೆ ಇಷ್ಟ ಬಂದ ಮಂತ್ರವನ್ನು ಜಪ ಮಾಡುತ್ತಾನೋ, ಮನಸ್ಸಿಗೆ ಬಂದಂತೆ ಶ್ರಾದ್ಧ ಕರ್ಮ ಮತ್ತು ಪಿಂಡ ಪ್ರದಾನ ಕರ್ಮ ಹಾಗೂ ವ್ರತಗಳನ್ನು ಮಾಡುತ್ತಾನೋ, ಅವನಿಗೆ ಸಿದ್ಧಿಯೂ ಪ್ರಾಪ್ತಿಯಾಗುವುದಿಲ್ಲ, ಸುಖವೂ ಪ್ರಾಪ್ತಿಯಾಗುವುದಿಲ್ಲ. ಮೋಕ್ಷವಂತೂ ಸಿಗುವುದೇ

ಇಲ್ಲ. ಆದ್ದರಿಂದ ಇದೆಲ್ಲಾ ವ್ಯರ್ಥ ಎಂದು ಹೇಳಲಾಗಿದೆ. ಗೀತೆಯ 16ನೇ ಅಧ್ಯಾಯದ 24ನೇ ಶ್ಲೋಕದಲ್ಲಿ, ಹೇಳಲಾಗಿದೆ ಇದರಿಂದ ನಿನಗಾಗಿ ಅರ್ಜುನ ಕರ್ತವ್ಯ ಅಂದರೆ ಯಾವ ಪೂಜೆ ಮಾಡಬೇಕು, ಅಕರ್ತವ್ಯ ಅಂದರೆ ಯಾವ ಭಕ್ತಿ ಕರ್ಮ ಮಾಡಬಾರದು ಎನ್ನುವ ಬಗ್ಗೆ ಶಾಸ್ತ್ರವೇ ಪ್ರಮಾಣವಾಗಿವೆ. ಆ ಶಾಸ್ತ್ರಗಳಲ್ಲಿ ಹೇಳಿರುವ ಭಕ್ತಿ ಕರ್ಮವನ್ನು ಮಾಡುವುದರಿಂದಲೇ ಲಾಭವಾಗುವುದು.

ಧರ್ಮದಾಸನು:– "ಹೇ ಜಿಂದಾ! ನೀನು ನಿನ್ನ ಬಾಯಿ ಮುಚ್ಚಿಕೋ. ನನ್ನಿಂದ ಇದನ್ನು ಕೇಳಲು ಸಾಧ್ಯವಿಲ್ಲ", ಜಿಂದಾ ಮಹಾತ್ಮ ರೂಪದಲ್ಲಿರುವ ಪರಮೇಶ್ವರ:– "ಹೇ ವೈಷ್ಣವ ಮಹಾತ್ಮ ಧರ್ಮದಾಸರೇ! ಸತ್ಯ ಬೇವಿನಂತೆ ಕಹಿಯಾಗಿರುತ್ತದೆ. ಆದರೆ ರೋಗಿಯು ಕಹಿ ಔಷಧಿಯನ್ನು ಇಷ್ಟವಿಲ್ಲದಿದ್ದರೂ ಸೇವಿಸಲೇಬೇಕು. ಇದರಲ್ಲೇ ಅವನಿಗೆ ಹಿತವಿದೆ. ನಿಮಗೆ ಕೋಪ ಬಂದಿದ್ದರೆ, ನಾನು ಹೊರಟು ಹೋಗುತ್ತೇನೆ". ಹೀಗೆನ್ನುತ್ತಾ ಜಿಂದಾ ರೂಪದಲ್ಲಿದ್ದ ಪರಮೇಶ್ವರನು ಅಂತರ್ಧ್ಯಾನನಾದನು. ಧರ್ಮದಾಸರಿಗೆ ಬಹಳ ಆಶ್ಚರ್ಯವಾಯಿತು. ಇವನು ಯಾರೋ ಸಾಮಾನ್ಯ ಸಂತನಲ್ಲವೆಂದು ಅನ್ನಿಸಿತು. ಇವನು ಪೂರ್ಣ ವಿದ್ವಾಂಸ ಹಾಗೂ ಸಿದ್ಧ ಪುರುಷನೆಂದು ಕಾಣುತ್ತದೆ. ಮುಸಲ್ಮಾನನಾಗಿ ಹಿಂದೂ ಶಾಸ್ತ್ರಗಳ ಪೂರ್ಣಜ್ಞಾನವಿದೆ. ಇವನ್ಯಾರೋ ದೇವರೇ ಇರಬೇಕು ಎಂದೂ ಅನ್ನಿಸಿತು. ನಾನು ಹಿಂದೂ ಶಾಸ್ತ್ರಕ್ಕೆ ವಿರುದ್ಧವಾದ ಸಾಧನೆ ಮಾಡುತ್ತಿದ್ದೇನೆ ಎಂದು ಧರ್ಮದಾಸರ ಮನಸ್ಸಿಗೆ ಅನ್ನಿಸಿತು. ಆದರೂ ಒಪ್ಪಿಕೊಳ್ಳಲು ಅಹಂಕಾರ ಅಡ್ಡಿ ಬರುತ್ತಿತ್ತು. ಯಾವಾಗ ಪರಮಾತ್ಮನು ಅಂತರ್ಧ್ಯಾನನಾದನೋ, ಆಗ ನನ್ನ ಭಕ್ತಿಯು ಗೀತೆಗೆ ವಿರುದ್ಧವಾಗಿದೆ. ನಾನು ಭಗವಂತನ ಆಜ್ಞೆಯನ್ನು ಅವಮಾನಿಸುತ್ತಿದ್ದೇನೆ. ನನ್ನ ಗುರುವಾದ ರೂಪ್‌ದಾಸರಿಗೆ ಸಹ ವಾಸ್ತವಿಕವಾದ ಭಕ್ತಿ ವಿಧಾನದ ಜ್ಞಾನವಿಲ್ಲ. ಈಗಂತೂ ಆರಾಧನೆ ಮಾಡಿದರೂ ಒಂದೇ, ಮಾಡದಿದ್ದರೂ ಒಂದೇ. ಎಲ್ಲವೂ ವ್ಯರ್ಥ' ಎಂದು ಚಿಂತಿಸಿದರು. ಬಹಳ ದುಃಖದ ಮನಸ್ಸಿನಿಂದ ಅತ್ತಿತ್ತ ನೋಡತೊಡಗಿದರು ಹಾಗೂ ಮನಸ್ಸಿನಲ್ಲೇ ತನ್ನನ್ನು ತಾನು ಬೈದುಕೊಳ್ಳತೊಡಗಿದರು. ಎಲ್ಲಾ ಸತ್ಯವನ್ನು ನೋಡಿದ ಮೇಲೂ ಒಬ್ಬ ಪರಮಾತ್ಮನ ಸಮಾನನಾದ ಮಹಾತ್ಮನನ್ನು ನನ್ನ ಮೂರ್ಖತನದಿಂದ ಹಾಗೂ ಹಠದಿಂದ ಕಳೆದುಕೊಂಡೆ. ಹೇ ಪರಮಾತ್ಮಾ! ಮತ್ತೊಮ್ಮೆ ಆ ಸಂತನು ಸಿಕ್ಕರೆ ನಾನು ನನ್ನ ಹಠವನ್ನು ಬಿಟ್ಟು ವಿನೀತನಾಗಿ ಸರ್ವ ಜ್ಞಾನವನ್ನು ಪಡೆದುಕೊಳ್ಳುವೆ ಎಂದು ಚಿಂತಿಸುತ್ತಾ ದಿನದಲ್ಲಿ ಹಲವಾರು ಬಾರಿ ಕರೆದು ರಾತ್ರಿಯಲ್ಲಿ ಮಲಗಿಬಿಟ್ಟನು. ಇಡೀ ರಾತ್ರಿ ಮಗ್ಗಲು ಬದಲಾಯಿಸುತ್ತಿದ್ದನು. "ಪರಮಾತ್ಮ ! ಇದೇನಾಗಿ ಹೋಯಿತು? ಎಲ್ಲಾ ಸಾಧನೆಗಳು ಶಾಸ್ತ್ರವಿರುದ್ಧವಾಗಿ ಮಾಡುತ್ತಿರುವೆನಲ್ಲಾ! ಆ ದೇವದೂತ ನನ್ನ ಕಣ್ಣು ತೆರೆದ. ಈಗಾಗಲೇ ನನಗೆ 60 ವರ್ಷವಾಗಿ ಹೋಗಿದೆ. ಆ ದೇವದೂತ ಮತ್ತೆ ಸಿಗುವನೋ ಇಲ್ಲವೋ, ತಿಳಿಯದು ಎಂದು ಯೋಚಿಸಿದನು. ಬೆಳಿಗ್ಗೆಯಾದೊಡನೆ ಎದ್ದು ಕುಳಿತನು. ಮೊದಲು ತಿಂಡಿ ತಯಾರಿಸತೊಡಗಿದನು. ಆ ದಿನ ಯಾವ ಪೂಜೆಯನ್ನೂ ಮಾಡಲಿಲ್ಲ. ನಿನ್ನೆಯ ದಿನ ಕಾಡಿನಿಂದ ಸ್ವಲ್ಪ ಕಟ್ಟಿಗೆ ತಂದು ಇಟ್ಟಿದ್ದನು. ಅದನ್ನೇ ಇಟ್ಟು ಒಲೆ ಉರಿಸಿ ಅಡುಗೆ ಸಿದ್ಧಮಾಡತೊಡಗಿದನು. ಒಂದು ಕಟ್ಟಿಗೆ ತುಂಬಾ ದಪ್ಪಗಿತ್ತು. ಅದು ಮಧ್ಯ ಮಧ್ಯದಲ್ಲಿ ಟೊಳ್ಳಾಗಿಯೂ ಇತ್ತು. ಅದರಲ್ಲಿ ಅನೇಕ ಇರುವೆಗಳು ಸೇರಿಕೊಂಡಿದ್ದವು. ಕಟ್ಟಿಗೆ ಉರಿಯುತ್ತಾ ಹೋದಂತೆ ಚಿಕ್ಕದಾಗಿ ಹೋಯಿತು. ಆಗ ಕಟ್ಟಿಗೆಯ ಹಿಂದಿನ ಭಾಗದಿಂದ ಒಂದು ರೀತಿಯ ನೀರಿನಂತಹ ದ್ರವ ಹೊರಬರುತ್ತಿರುವುದನ್ನು ಧರ್ಮದಾಸರು ನೋಡಿದರು. ಇರುವೆಗಳು ತಪ್ಪಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದವು. ಆದರೆ ಆ ದ್ರವದಲ್ಲಿ ಬಿದ್ದು ಸತ್ತು ಹೋಗುತ್ತಿದ್ದವು. ಕೆಲವು ಬೆಂಕಿಯಲ್ಲಿ ಸುಟ್ಟು ಹೋಗುತ್ತಿದ್ದವು. ಧರ್ಮದಾಸರು ಹೀಗೆಂದು ಯೋಚಿಸಿದರು, ಈ ಕಟ್ಟಿಗೆಯ ಬಹುಭಾಗ ಉರಿದು ಹೋಗಿದೆ. ಅದರಲ್ಲಿ ಅನೇಕ ಇರುವೆಗಳು ಸುಟ್ಟು ಭಸ್ಮವಾಗಿವೆ". ತಕ್ಷಣವೇ ಬೆಂಕಿಯನ್ನು ಆರಿಸಿದರು. ಈ ಪಾಪಯುಕ್ತ ಊಟವನ್ನು ನಾನು ತಿನ್ನಲಾರೆ. ಯಾರಾದರೂ ಸಾಧು ಸಂತರಿಗೆ ತಿನ್ನಿಸಿ, ನಾನು ಉಪವಾಸವಿರುತ್ತೇನೆ. ಇದರಿಂದ ನನ್ನ ಪಾಪವು ಕಡಿಮೆಯಾಗುವುದು ಎಂದು ಯೋಚಿಸುತ್ತಾ,

ಎಲ್ಲಾ ಊಟವನ್ನು ಒಂದು ತಟ್ಟೆಯಲ್ಲಿ ತುಂಬಿಕೊಂಡು ಸಾಧುವನ್ನು ಹುಡುಕಲು ಹೊರಟನು.

ಕಬೀರ ಪರಮೇಶ್ವರರು ಒಬ್ಬ ಹಿಂದೂ ಸಂತನಂತೆ ವೇಷ ಧರಿಸಿ, ಒಂದು ಮರದ ಕೆಳಗೆ ಕುಳಿತರು. ಧರ್ಮದಾಸರು ಸಾಧುವನ್ನು ನೋಡಿ, ಅವರ ಮುಂದೆ ಊಟದ ತಟ್ಟೆಯನ್ನು ಇಟ್ಟು ಹೀಗೆಂದರು, 'ಹೇ ಮಹಾತ್ಮಾ! ಊಟ ಮಾಡು', ಸಾಧು ರೂಪದಲ್ಲಿದ್ದ ಪರಮೇಶ್ವರನು ಹೀಗೆಂದನು, ಧರ್ಮದಾಸ! ಕೊಡು ಹಸಿವಾಗಿದೆ." ತನ್ನ ಹೆಸರನ್ನು ಕೇಳಿದ ಧರ್ಮದಾಸರಿಗೆ ಆಶ್ಚರ್ಯವಾಯಿತು. ಆದರೂ ಹೆಚ್ಚು ಗಮನ ನೀಡಲಿಲ್ಲ. ಸಾಧುವಿನ ರೂಪದಲ್ಲಿದ್ದ ಪರಮಾತ್ಮನು ತನ್ನ ಲೋಟದಿಂದ ಸ್ವಲ್ಪ ನೀರನ್ನು ಕೈಯಲ್ಲಿ ತೆಗೆದುಕೊಂಡು, ತನ್ನ ಬಾಯಿಂದ ಏನನ್ನೋ ಉಚ್ಚರಿಸುತ್ತಾ ಊಟದ ಮೇಲೆ ನೀರನ್ನು ಸಿಂಪಡಿಸಿದನು. ಊಟವೆಲ್ಲಾ ಇರುವೆಗಳಾಗಿ ಬದಲಾಯ್ತು. ತಟ್ಟೆ ಇರುವೆಗಳಿಂದ ತುಂಬಿ ಕಪ್ಪಗೆ ಕಾಣುತ್ತಿತ್ತು. ಇರುವೆಗಳು ತಮ್ಮ ಮೊಟ್ಟೆಗಳನ್ನೂ ಬಾಯಲ್ಲಿಟ್ಟುಕೊಂಡು, ತಟ್ಟೆಯಿಂದ ಹೊರಬರಲು ಪ್ರಯತ್ನಿಸುತ್ತಿದ್ದವು. ಪರಮಾತ್ಮನೂ ಸಹ ಅದೇ ಜಿಂದಾ ಮಹಾತ್ಮನ ರೂಪವನ್ನು ಧರಿಸಿದರು. ನಂತರ ಹೀಗೆಂದರು, "ಹೇ ಧರ್ಮದಾಸ, ಹೇ ವೈಷ್ಣವ ಸಂತ! ನಾವು ಯಾವ ಪ್ರಾಣಿ ಹಿಂಸೆಯನ್ನೂ ಮಾಡುವುದಿಲ್ಲ ಎಂದು ಹೇಳಿದ್ದಿರಿ. ಆದರೆ ನಿಮಗಿಂತ ಕಸಾಯಿಯೇ ಕಡಿಮೆ ಹಿಂಸೆ ಮಾಡುತ್ತಾನೆ. ನೀವು ಕೊಟ್ಯಾಂತರ ಜೀವಿಗಳ ಹಿಂಸೆ ಮಾಡಿಬಿಟ್ಟಿರಿ" ಎಂದರು. ಆಗ ಧರ್ಮದಾಸರು ಸಾಧುವಿನ ಪಾದಗಳ ಮೇಲೆ ಬಿದ್ದು, ನಿನ್ನೆ ನಡೆದಂತಹ ಘಟನೆಗೆ ಕ್ಷಮೆ ಯಾಚಿಸಿದರು. ಹಾಗೂ ಹೀಗೆಂದು ಪ್ರಾರ್ಥಿಸಿದರು. "ಹೇ ಪ್ರಭು ! ನನ್ನಂಥಾ ಅಜ್ಞಾನಿಯನ್ನು ಕ್ಷಮಿಸು. ನಾನು ಎಲ್ಲಿಯೂ ಸಲ್ಲದವನಾಗಿದ್ದೇನೆ. ಏಕೆಂದರೆ ಮೊದಲು ಮಾಡುತ್ತಿದ್ದಂಥಾ ಸಾಧನೆ ಪೂರ್ಣವಾಗಿ ಶಾಸ್ತ್ರಕ್ಕೆ ವಿರುದ್ಧವಾಗಿದೆ. ಅದನ್ನು ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಅದನ್ನೇ ನೀವೂ ಸಹ ಗೀತೆಯ ಮೂಲಕ ಪ್ರಮಾಣೀಕರಿಸಿದ್ದೀರಿ. ಶಾಸ್ತ್ರಕ್ಕೆ ಅನುಗುಣವಾದ ಸಾಧನೆ ಯಾರ ಬಳಿ ಸಿಗುವುದೆಂದು ನೀವೇ ಹೇಳಿ. ನಾನು ನಿಮ್ಮಿಂದ ಪೂರ್ಣ ಆಧ್ಯಾತ್ಮಿಕ ಜ್ಞಾನವನ್ನು ಕೇಳುವ ಇಚ್ಛೆ ಇದೆ. ದಯಮಾಡಿ ನನಗೆ ಮೋಕ್ಷ ಸಿಗುವಂಥಾ ಜ್ಞಾನವನ್ನು ತಿಳಿಸಿ".

## ವ್ರತ ಮಾಡುವುದರ ಬಗ್ಗೆ ಗೀತೆಯಲ್ಲಿ ಏನು ಹೇಳಲಾಗಿದೆ?

ಪರಮೇಶ್ವರನು (ಜಿಂದಾ ಸಾಧುವಿನ ರೂಪದಲ್ಲಿ), ಹೇ ಧರ್ಮದಾಸರೇ, ನೀವು ಏಕಾದಶಿಯ ವ್ರತವನ್ನು ಮಾಡುತ್ತೀರಾ, ಆದರೆ ಶ್ರೀಮದ್ಭಗವದ್ಗೀತೆಯ 6ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಇದನ್ನು ನಿಷೇಧಿಸಲಾಗಿದೆ. ಅಲ್ಲಿ ಹೀಗೆಂದು ಹೇಳಲಾಗಿದೆ. 'ಹೇ ಅರ್ಜುನ! ಈ ಯೋಗವು (ಭಕ್ತಿ) ಹೆಚ್ಚು ತಿನ್ನುವವರಿಗೆ ಹಾಗೂ ಏನೂ ತಿನ್ನದೇ ಇರುವವರಿಗೆ ಅರ್ಥಾತ್ ಭಕ್ತಿ ಅರ್ಥಾತ್ ವ್ರತವನ್ನು ಆಚರಿಸುವವರಿಗೆ, ಯಾವಾಗಲೂ ಮಲಗಿರುವವರಿಗೆ ಅಥವಾ ಯಾವಾಗಲೂ ಎಚ್ಚರಗೊಂಡು ಇರುವವರಿಗೆ ಯಶಸ್ಸನ್ನು ನೀಡುವುದಿಲ್ಲ. ಈ ಶ್ಲೋಕದಲ್ಲಿ ವ್ರತವನ್ನು ಆಚರಿಸುವುದನ್ನು ಪೂರ್ಣವಾಗಿ ನಿಷೇಧಿಸಿದೆ. ಬೇಕಾದರೆ ಗೀತೆಯನ್ನು ತೆಗೆದು ನೋಡು' ಎಂದು ಹೇಳಿದನು. ಧರ್ಮದಾಸರಿಗೆ ಗೀತೆಯ ಶ್ಲೋಕಗಳು ನೆನಪಿನಲ್ಲಿದ್ದವು. ಏಕೆಂದರೆ ಅವರು ದಿನವೂ ಪಠಣೆ ಮಾಡುತ್ತಿದ್ದರು. ಆದರೂ ಸಹ ಈ ಸಂತನು ಕೋಪಗೊಳ್ಳದೆ ಇರಲಿ ಎಂದು ಯೋಚಿಸುತ್ತಾ ಗೀತೆಯನ್ನು ತೆಗೆದು 6ನೇ ಅಧ್ಯಾಯದ 16ನೇ ಶ್ಲೋಕವನ್ನು ಓದಿದರು. ನಂತರ, "ನೀವು ನನ್ನ ಕಣ್ಣು ತೆರೆದಿರಿ ಜಿಂದಾ. ನೀವಂತು ಪರಮಾತ್ಮನ ಸ್ವರೂಪವಾಗಿರುವಿರಿ" ಎಂದು ಹೇಳಿದರು.

## ಶ್ರಾದ್ಧ-ಪಿಂಡ ಪ್ರದಾನದ ಬಗ್ಗೆ ಗೀತೆಯಲ್ಲಿ ಏನು ಹೇಳಲಾಗಿದೆ?

ನೀವು ಶ್ರಾದ್ಧ ಮತ್ತು ಪಿಂಡಪ್ರದಾನ ಮಾಡುವಿರಿ. ಗೀತೆಯ 9ನೇ ಅಧ್ಯಾಯದ 25ನೇ ಶ್ಲೋಕದಲ್ಲಿ ಪ್ರೇತ ಪೂಜಿಸುವವರು ಪ್ರೇತಗಳಿಗೆ ಪ್ರಾಪ್ತಿಯಾಗುತ್ತಾರೆ. ಶ್ರಾದ್ಧ ಮಾಡುವುದು,

ಪಿಂಡ ಪ್ರದಾನ ಮಾಡುವುದು ಮುಂತಾದವು ಪ್ರೇತ ಪೂಜೆಯಾಗುತ್ತದೆ, ಹಾಗಾಗಿ ಇದು ವ್ಯರ್ಥವಾದ ಸಾಧನೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

## "ಶ್ರಾದ್ಧ-ಪಿಂಡದಾನದ ಬಗ್ಗೆ ರುಚಿ ಎಂಬ ಋಷಿಯ ಅಭಿಪ್ರಾಯ"

ಮಾರ್ಕಂಡೇಯ ಪುರಾಣದಲ್ಲಿ 'ರೌಚ್ಯ ಋಷಿಯ ಜನ್ಮ'ದ ಕಥೆ ಬರುತ್ತದೆ. ರುಚೀ ಎಂಬ ಒಬ್ಬ ಋಷಿ ಇದ್ದನು. ಅವನು ಬ್ರಹ್ಮಚರ್ಯವನ್ನು ಪಾಲಿಸುತ್ತ ವೇದಗಳ ಪ್ರಕಾರ ಸಾಧನೆಯನ್ನು ಮಾಡುತ್ತಿದ್ದನು. ಅವನು ಅವಿವಾಹಿತನಾಗಿದ್ದನು. ರುಚೀ ಋಷಿಯ ತಂದೆ, ತಾತ, ಮುತ್ತಾತ ಅವರೆಲ್ಲ ಭೂತಯೋನಿಯಲ್ಲಿ ಇದ್ದು, ಹಸಿವು ಮತ್ತು ಬಾಯಾರಿಕೆಯಿಂದ ಅಲೆದಾಡುತ್ತಿದ್ದರು. ಒಂದು ದಿನ ಅವರೆಲ್ಲ ರುಚೀ ಋಷಿಗೆ ದರ್ಶನ ನೀಡಿದರು ಹಾಗೂ ಹೀಗೆಂದು ಹೇಳಿದರು, "ಮಗನೇ ನೀನೇಕೆ ಮದುವೆ ಮಾಡಿಕೊಂಡಿಲ್ಲ? ಮದುವೆ ಮಾಡಿಕೊಂಡು ನಮ್ಮ ಶ್ರಾದ್ಧವನ್ನು ಮಾಡು". ಆಗ ರುಚೀ ಋಷಿಯು ಹೀಗೆಂದನು, "ಹೇ ಪಿತಾಮಹರೇ! ವೇದದಲ್ಲಿ ಶ್ರಾದ್ಧ ಮುಂತಾದ ಕರ್ಮಗಳನ್ನು ಅವಿದ್ಯೆ ಹಾಗೂ ಮೂರ್ಖರ ಕೆಲಸ ಎಂದು ಹೇಳಲಾಗಿದೆ. ಆದರೂ ನೀವೆಲ್ಲಾ ನನಗೆ ಈ ಕರ್ಮವನ್ನು ಮಾಡಲು ಏಕೆ ಹೇಳುತ್ತಿರುವಿರಿ?"

ಪಿತೃಗಳು ಹೀಗೆಂದರು, "ವೇದದಲ್ಲಿ ಶ್ರಾದ್ಧ ಮುಂತಾದ ಕರ್ಮವನ್ನು ಅವಿದ್ಯೆ ಅರ್ಥಾತ್ ಮೂರ್ಖರ ಕೆಲಸ ಎಂದು ಹೇಳಿರುವುದೇನೋ ಸತ್ಯ" ನಂತರ ಆ ಪಿತೃಗಳು ವೇದ ವಿರುದ್ಧವಾದ ಜ್ಞಾನವನ್ನು ತಿಳಿಸುತ್ತಾ ರುಚೀ ಋಷಿಯನ್ನು ಭ್ರಮೆಗೊಳಪಡಿಸಿದರು. ಏಕೆಂದರೆ ಮೋಹವು ಅಜ್ಞಾನದ ಮೂಲ. ಮಾರ್ಕಂಡೇಯ ಪುರಾಣದ ಪ್ರಕರಣದಲ್ಲಿ, ವೇದಗಳಲ್ಲಿ ಮತ್ತು ವೇದಗಳ ಸಂಕ್ಷಿಪ್ತ ರೂಪವಾದ ಗೀತೆಯಲ್ಲಿ ಶ್ರಾದ್ಧ ಮತ್ತು ಪಿಂಡಪ್ರದಾನ ಮುಂತಾದ ಭೂತಾರಾಧನೆಯ ಕರ್ಮವನ್ನು ನಿಷೇಧ ಎಂದು ಹೇಳಲಾಗಿದೆ, ಅದನ್ನು ಮಾಡಬಾರದು ಎನ್ನುವುದು ಸಾಬೀತಾಯಿತು. ಆ ಮೂರ್ಖ ಋಷಿಗಳು ತಮ್ಮ ಪುತ್ರನಿಗೆ ಶ್ರಾದ್ಧ ಮಾಡುವಂತೆ ವಿವಶನನ್ನಾಗಿ ಮಾಡಿದರು. ಹಾಗಾಗಿ ಅವನು ಮದುವೆ ಮಾಡಿಕೊಂಡನು, ರೌಚ್ಯ ಋಷಿ ಎಂಬ ಮಗನ ಜನ್ಮವಾಯಿತು, ಮಗನೂ ಸಹ ಪಾಪದಲ್ಲಿ ಭಾಗಿಯಾದನು.

❖ ಯಾವುದನ್ನು ನೀವು ಗಾಯತ್ರಿ ಮಂತ್ರ ಎನ್ನುವಿರಿ ಅದು, ಯಜುರ್ವೇದದ 36ನೇ ಅಧ್ಯಾಯದ 3ನೇ ಮಂತ್ರ. ಅಲ್ಲಿ 'ಓಂ' ಅಕ್ಷರವಿಲ್ಲ. ಒಂದು ವೇಳೆ 'ಓಂ' ಅಕ್ಷರವನ್ನು ಈ ವೇದಮಂತ್ರದ ಜೊತೆ ಜೋಡಿಸಿದರೆ ಪರಮಾತ್ಮನಿಗೆ ಅಪಮಾನ ಮಾಡಿದಂತೆ. ಏಕೆಂದರೆ ಓಂ ಅಕ್ಷರವಂತೂ ಬ್ರಹ್ಮನ ಜಪವಾಗಿದೆ. ಯಜುರ್ವೇದದ 36ನೇ ಅಧ್ಯಾಯದ 3ನೇ ಮಂತ್ರದಲ್ಲಿ ಪರಮ ಅಕ್ಷರ ಬ್ರಹ್ಮನ ಮಹಿಮೆ ಇದೆ. ಒಂದುವೇಳೆ ಯಾರೋ ಒಬ್ಬ ಅಜ್ಞಾನಿ ಪ್ರಧಾನಮಂತ್ರಿಗೆ ಪತ್ರ ಬರೆಯುತ್ತಿದ್ದಾನೆ ಎಂದಿಟ್ಟುಕೊಳ್ಳಿ. ಅವನು 'ಇವರಿಗೆ' ಎನ್ನುವ ಜಾಗದಲ್ಲಿ ಪ್ರಧಾನಮಂತ್ರಿ ಎನ್ನುವ ಬದಲಾಗಿ ಮುಖ್ಯಮಂತ್ರಿ ಎಂದು ಬರೆದರೆ ಅವನು ಪ್ರಧಾನಮಂತ್ರಿಗೆ ಅವಮಾನ ಮಾಡಿದಂತಾಗುತ್ತದೆ. ಯಜುರ್ವೇದದ 36ನೇ ಅಧ್ಯಾಯದ 3ನೇ ಮಂತ್ರವಾದ ಇದನ್ನು ಜಪ ಮಾಡುವುದರಿಂದ ಮೋಕ್ಷವು ಸಿಗುವುದಿಲ್ಲ. ಮಂತ್ರದ ಮೂಲಪಾಠ ಈ ರೀತಿ ಇದೆ:-

ಭೂರ್ಭವಃ ಸ್ವಃ ತತ್ ಸವಿತು ವರೇಣಿಯಂ ಭರ್ಗೋ ದೇವಸ್ಯ ಧೀಮಹೀ
ಧಿಯೋ ಯೋನಃ ಪ್ರಚೋದಯಾತ್.

ಅನುವಾದ:- (ಭೂಃ) ಸ್ವಯಂಭೂ ಆದ ಪರಮಾತ್ಮನು ಭೂಲೋಕವನ್ನು ಹಾಗೂ (ಭವಃ) ಗೋಲೋಕ ಮುಂತಾದ ಭವನಗಳನ್ನು ತನ್ನ ವಚನಗಳಿಂದ ಪ್ರಕಟಗೊಳಿಸಿರುವನು. (ಸ್ವಃ) ಸ್ವರ್ಗ ಲೋಕವು ಸುಖದ ಧಾಮವಾಗಿದೆ. (ತತ್) ಅವನು (ಸವಿತುಃ) ಆ ಎಲ್ಲರ ಜನಕನಾದ ಪರಮಾತ್ಮನಾಗಿದ್ದಾನೆ. (ವರೇಣಿಯಂ) ಎಲ್ಲಾ ಸಾಧಕರನ್ನು ಉದ್ಧಾರ ಮಾಡುವಂತ ಯೋಗ್ಯನು ಅರ್ಥಾತ್ ಒಳ್ಳೆಯ ಆತ್ಮಗಳ ಆರಾಧನೆಗೆ ಯೋಗ್ಯನು. (ಭೃಗೋ) ತೇಜೋಮಯನಾದ ಅರ್ಥಾತ್ ಪ್ರಕಾಶಮಾನನಾದ (ದೇವಸ್ಯ) ಪರಮಾತ್ಮನ (ಧೀಮಹಿ) ಉಚ್ಚ ವಿಚಾರವನ್ನು

ಚಿಂತಿಸುವ ಅರ್ಥಾತ್ ಒಳ್ಳೆಯ ತಿಳುವಳಿಕೆಯಿಂದ (ಧಿಯೋ ನಃ ಪ್ರಚೋದಯಾತ್) ಯಾರು ಬುದ್ಧಿವಂತನಂತೆ ಯೋಚಿಸುತ್ತಾನೋ ಆ ವಿವೇಕಯುತನಾದ ವ್ಯಕ್ತಿಯು ಮೋಕ್ಷವನ್ನು ಪಡೆಯಲು ಅರ್ಹನಾಗಿರುತ್ತಾನೆ.

ಭಾವಾರ್ಥ:- ಪರಮಾತ್ಮನು ಸ್ವಯಂಭೂ. ಅವನು ಭೂಮಿ, ಗೋಲೋಕ ಮತ್ತು ಸ್ವರ್ಗಲೋಕ ಮುಂತಾದ ಲೋಕಗಳನ್ನು ಸೃಷ್ಟಿಸುವವನು. ಯಾರು ಪುರುಷೋತ್ತಮನೋ, (ಸರ್ವಶ್ರೇಷ್ಠ ಪರಮಾತ್ಮ) ಯಾರು ಎಲ್ಲಾ ಪ್ರಭುಗಳಲ್ಲಿ ಶ್ರೇಷ್ಠನೋ, ಯಾರು ಸುಖವನ್ನು ನೀಡುವವನೋ, ಯಾರು ಸ್ವರ್ಗವನ್ನು ನೀಡುವವನೋ ಅವನನ್ನು ಆರಾಧಿಸಬೇಕು ಎಂದು ವಿಚಾರಮಾಡಿ ಶ್ರೇಷ್ಠ ಭಕ್ತರು ಆ ತೇಜೋಮಯ ಪರಮೇಶ್ವರನನ್ನು ಭಕ್ತಿ ಮಾಡಬೇಕು.

ಇದು ಮೇಲೆ ತಿಳಿಸಿದ ಮಂತ್ರದ ಕನ್ನಡ ಅನುವಾದ ಮತ್ತು ಭಾವಾರ್ಥ. ಸಂಸ್ಕೃತದ ಅಥವಾ ಕನ್ನಡದ ಅನುವಾದವನ್ನು ಓದುತ್ತಾ ಇದ್ದರೆ ಮೋಕ್ಷವು ಸಿಗುವುದಿಲ್ಲ. ಏಕೆಂದರೆ ಇದು ಪರಮಾತ್ಮನ ಮಹಿಮೆಯ ಒಂದು ಅಂಶ. ಅರ್ಥಾತ್ ಸಾವಿರಾರು ವೇದ ಮಂತ್ರಗಳಲ್ಲಿ ಯಜುರ್ವೇದದ 36ನೇ ಅಧ್ಯಾಯದ 3ನೆಯ ಮಂತ್ರವು ಕೇವಲ ಒಂದು ಮಂತ್ರವಷ್ಟೆ. ಹಾಗೊಂದು ವೇಳೆ ಯಾರಾದರೂ 4 ವೇದಗಳನ್ನು ಓದಿದರೂ ಸಹ ಅವರಿಗೆ ಮೋಕ್ಷ ಸಿಗುವುದಿಲ್ಲ. ಕೇವಲ ವೇದಗಳಲ್ಲಿ ವರ್ಣಿಸಲಾದ ಜ್ಞಾನಕ್ಕೆ ಅನುಸಾರವಾಗಿ ಭಕ್ತಿ ಕ್ರಿಯೆ ಮಾಡುವುದರಿಂದ ಮಾತ್ರ ಮೋಕ್ಷ ಪ್ರಾಪ್ತಿಯಾಗುವುದು. ಉದಾಹರಣೆಗೆ ವಿದ್ಯುತ್ ಕತ್ತಲನ್ನು ಬೆಳಕಾಗಿ ಬದಲಿಸುತ್ತದೆ. ಅದೇ ವಿದ್ಯುತ್‌ನಿಂದ ಟ್ಯೂಬ್‌ವೇಲನ್ನು ಚಲಾಯಿಸಿ ಬೆಳೆಗೆ ನೀರು ಹಾಯಿಸಲು ಉಪಯೋಗಿಸಲಾಗುತ್ತದೆ. ಅದೇ ವಿದ್ಯುತ್ ಅಕ್ಕಿಯನ್ನು ಬೀಸುತ್ತದೆ. ಹೀಗೆ ವಿದ್ಯುತ್ತಿಗೆ ಬಹಳಷ್ಟು ಗುಣಗಳಿವೆ. ಇದು ವಿದ್ಯುತ್ತಿನ ಮಹಿಮೆ. ಆದರೆ ಒಬ್ಬ ವ್ಯಕ್ತಿ ದಿನವೂ ವಿದ್ಯುತ್ತಿನ ಗುಣಗಾನ ಮಾಡುತ್ತಿದ್ದರೆ ಅದರಿಂದ ಏನೂ ಪ್ರಯೋಜನವಿಲ್ಲ. ವಿದ್ಯುತ್ತಿನ ಸಂಪರ್ಕ ತೆಗೆದುಕೊಂಡಾಗ ಮಾತ್ರ ಅದರಿಂದ ಲಾಭವಾಗುವುದು. ಹಾಗಾದರೆ ಸಂಪರ್ಕ ಹೇಗೆ ಪಡೆಯುವುದು? ವಿದ್ಯುತ್ ಸಂಪರ್ಕ ಪಡೆದ ನಂತರವಷ್ಟೇ ವಿದ್ಯುತ್ತಿನಿಂದ ಲಾಭ ಪ್ರಾಪ್ತವಾಗುವುದು. ಕೇವಲ ವಿದ್ಯುತ್ತಿನ ಮಹಿಮೆಯನ್ನು ಹಾಡಿ ಹೊಗಳುವುದರಿಂದ ಯಾವುದೇ ಲಾಭ ಸಿಗುವುದಿಲ್ಲ.

ಇದೇ ರೀತಿ ವೇದ ಮಂತ್ರಗಳಲ್ಲಿ ಅರ್ಥಾತ್ (ನಾಲ್ಕು ವೇದಗಳ ಸಾರವಾದ) ಶ್ರೀ ಮದ್ಭಗವದ್ಗೀತೆಯಲ್ಲಿ ಮೋಕ್ಷ ಪ್ರಾಪ್ತಿಗಾಗಿ ಯಾವ ಜ್ಞಾನವನ್ನು ಹೇಳಲಾಗಿದೆಯೋ ಅದರ ಅನುಸಾರವಾಗಿ ಆಚರಣೆ ಮಾಡುವುದರಿಂದ ಮೋಕ್ಷ ಅರ್ಥಾತ್ ಪರಮಾತ್ಮನ ಪ್ರಾಪ್ತಿಯಾಗುವುದು.

ಪ್ರಶ್ನೆ 34 :- (ಧರ್ಮದಾಸನ) :- ಹೇ ಜಿಂದಾ, ಗೀತೆಯಲ್ಲಿ ಮೋಕ್ಷ ಪ್ರಾಪ್ತಿಗಾಗಿ ಇರುವ ಜ್ಞಾನವು ಯಾವುದು ಎಂಬುದರ ಬಗ್ಗೆ ನನಗೆ ತಿಳುವಳಿಕೆ ಇಲ್ಲ. ನಾನು ಕೇವಲ ಗೀತೆಯನ್ನು ಓದಿದ್ದೇನೆಯೇ ವಿನಃ ತಿಳಿದುಕೊಂಡಿಲ್ಲ. ನಮ್ಮ ಧರ್ಮಗುರುಗಳು ತಿಳಿಸಿರುವ ಭಕ್ತಿಯ ವಿಧಾನದಂತೆ ಬಹಳ ಶ್ರದ್ಧೆಯಿಂದ ನಾನು ಆಚರಿಸಿಕೊಂಡು ಬರುತ್ತಿದ್ದೇನೆ. ಹಲವಾರು ವರ್ಷಗಳಿಂದ ಪ್ರಚಲಿತವಾಗಿರುವ ಶಾಸ್ತ್ರವಿರುದ್ಧವಾದ ಭಕ್ತಿಯನ್ನು ಎಲ್ಲಾ ಭಕ್ತರು ಸತ್ಯವೆಂದು ನಂಬಿದ್ದಾರೆ. ಗೀತೆಯಲ್ಲಿ ಬರೆದಿರುವ ಭಕ್ತಿ ವಿಧಾನವನ್ನು ಅನುಸರಿಸಿದರೆ ಸಾಕಲ್ಲವೇ?

ಉತ್ತರ :- (ಜಿಂದಾ ಮಹಾತ್ಮನ) :- ಗೀತೆಯಲ್ಲಿ ಕೇವಲ ಬ್ರಹ್ಮನವರೆಗಿನ ಭಕ್ತಿವಿಧಾನವನ್ನು ಬರೆಯಲಾಗಿದೆ. ಪೂರ್ಣವಾದ ಮೋಕ್ಷ ಪ್ರಾಪ್ತಿಗಾಗಿ ಪರಮ ಅಕ್ಷರ ಬ್ರಹ್ಮನ ಭಕ್ತಿ ಮಾಡಬೇಕು. ಗೀತೆಯಲ್ಲಿ ಪೂರ್ಣ ವಿಧಾನ ತಿಳಿಸಿಲ್ಲ. ಕೇವಲ ಸಂಕೇತವಿದೆ. ಹೇಗೆಂದರೆ ಗೀತೆಯ 17ನೆಯ ಅಧ್ಯಾಯದ 23ನೇ ಶ್ಲೋಕದಲ್ಲಿ ಹೀಗೆಂದು ಹೇಳಲಾಗಿದೆ, 'ಸಚ್ಚಿದಾನಂದ ಘನಬ್ರಹ್ಮ' ಅಂದರೆ ಪರಮ ಅಕ್ಷರಬ್ರಹ್ಮನ ಪ್ರಾಪ್ತಿಗಾಗಿ 'ಓಂ' 'ತತ್', 'ಸತ್' ಈ ಮಂತ್ರದ ನಿರ್ದೇಶವಿದೆ. ಇದನ್ನು ಸ್ಮರಣೆ ಮಾಡುವ ವಿಧಿ 3 ರೀತಿಯಲ್ಲಿದೆ. ಈ ಮಂತ್ರದಲ್ಲಿರುವ ಓಂ ಕ್ಷರಪುರುಷ ಅರ್ಥಾತ್

ಬ್ರಹ್ಮನ ಮಂತ್ರವೆಂದು ಸ್ಪಷ್ಟವಾಗಿದೆ. ಆದರೆ 'ಪರಬ್ರಹ್ಮ' (ಅಕ್ಷರಪುರುಷ)ನ ಮಂತ್ರ 'ತತ್' ಎಂದಿದೆ. ಅದು ಸಾಂಕೇತಿಕವಾಗಿದೆ. ಅದನ್ನು ಉಪದೇಶ ಪಡೆದುಕೊಂಡವರಿಗೆ ತತ್ವದರ್ಶಿ ಸಂತನು ಹೇಳುತ್ತಾನೆ. 'ಸತ್'–ಈ ಮಂತ್ರವು ಪೂರ್ಣ ಬ್ರಹ್ಮನದ್ದಾಗಿದೆ (ಪರಮ ಅಕ್ಷರ ಬ್ರಹ್ಮ) ಇದೂ ಸಹ ಸಾಂಕೇತಿಕವಾಗಿದೆ. ಇದನ್ನು ಸಹ ತತ್ವದರ್ಶಿ ಸಂತನು ಉಪದೇಶಿಸುತ್ತಾನೆ. ತತ್ವದರ್ಶಿ ಸಂತನ ಬಳಿ ಪೂರ್ಣ ಮೋಕ್ಷಮಾರ್ಗವಿರುತ್ತದೆ. ಅದು ವೇದಗಳಲ್ಲೂ ಇಲ್ಲ, ಗೀತೆಯಲ್ಲೂ ಇಲ್ಲ, ಪುರಾಣ ಅಥವಾ ಉಪನಿಷತ್ತುಗಳಲ್ಲೂ ಇಲ್ಲ. ತತ್ವಜ್ಞಾನದ ಸತ್ಯತೆಯನ್ನು ಪ್ರಮಾಣೀಕರಿಸಲು ಗೀತೆ ಮತ್ತು ವೇದಗಳು ಸಹಾಯಕವಾಗಿವೆ. ಯಾವ ಭಕ್ತಿವಿಧಾನವು ವೇದ ಮತ್ತು ಗೀತೆಯಲ್ಲಿದೆಯೋ ಅದೇ ತತ್ವಜ್ಞಾನದಲ್ಲೂ ಇದೆ. ಸೂಕ್ಷ್ಮವೇದ ಅಂದರೆ ತತ್ವಜ್ಞಾನದಲ್ಲಿ ವೇದ ಮತ್ತು ಗೀತೆಯಲ್ಲಿರುವ ಭಕ್ತಿವಿಧಾನವಂತೂ ಇದೆ. ಅದರ ಜೊತೆಗೆ ಇನ್ನೂ ಭಿನ್ನವಾದ ಪೂರ್ಣ ಮೋಕ್ಷವನ್ನು ನೀಡುವಂಥಹ ಸಾಧನೆಯೂ ಇದೆ. ಉದಾಹರಣೆಗೆ 10ನೇ ತರಗತಿಯ ಪಠ್ಯಕ್ರಮವು ತಪ್ಪಲ್ಲ, ಆದರೆ ಅಪೂರ್ಣ ಬಿ.ಎ., ಎಂ.ಎ., ನಲ್ಲಿರುವ ಪಠ್ಯಕ್ರಮದಲ್ಲಿ 10ನೇ ತರಗತಿಯ ಪಠ್ಯಕ್ರಮದ ಜ್ಞಾನವು ಇರುತ್ತದೆ, ಅದಕ್ಕಿಂತ ಹೆಚ್ಚಿನ ಜ್ಞಾನವೂ ಇರುತ್ತದೆ. ಹೀಗೆ ವೇದ, ಗೀತೆ ಮತ್ತು ಸೂಕ್ಷ್ಮವೇದದ ಜ್ಞಾನದಲ್ಲಿ ಇರುವ ಅಂತರವನ್ನು ತಿಳಿಯಬೇಕು.

ಪ್ರಶ್ನೆ 35 (ಧರ್ಮದಾಸರ):– ಪೂರ್ಣ ಮೋಕ್ಷಮಾರ್ಗವು ಕೇವಲ ತತ್ವದರ್ಶಿ ಸಂತನ ಬಳಿ ಇದೆ, ವೇದ ಮತ್ತು ಗೀತೆಯಲ್ಲಿ ಇಲ್ಲ ಎನ್ನುವುದಕ್ಕೆ ಗೀತೆ ಹಾಗು ವೇದಗಳಲ್ಲಿ ಎಲ್ಲಿ ಪ್ರಮಾಣವಿದೆ?

ಹೇ ಜಿಂದಾ ಪ್ರಭು! ನನ್ನ ಸಂದೇಹವನ್ನು ಪರಿಹರಿಸಿ. ನಿಮ್ಮ ಜ್ಞಾನವು ನನ್ನ ಹೃದಯವನ್ನು ಮುಟ್ಟುತ್ತಿದೆ. ನೀವು ಹೇಳುತ್ತಿರುವುದು ಸತ್ಯ. ಆದರೆ ಪ್ರತ್ಯಕ್ಷ ಪ್ರಮಾಣ ನೋಡಿದಾಗ ಮಾತ್ರ ನಂಬಿಕೆ ಬರುತ್ತದೆ.

ಉತ್ತರ (ಜಿಂದಾ ಪರಮೇಶ್ವರನ):– ಗೀತೆಯ 4ನೇ ಅಧ್ಯಾಯದ 25ನೇ ಶ್ಲೋಕದಿಂದ 30ನೇ ಶ್ಲೋಕದವರೆಗೆ ಗೀತೆಯ ಜ್ಞಾನದಾತನು ಹೀಗೆಂದಿದ್ದಾನೆ, 'ಹೇ ಅರ್ಜುನ! ಎಲ್ಲ ಸಾಧಕರು ಪಾಪವನ್ನು ನಾಶ ಮಾಡುವಂಥ ಅಂದರೆ ಮೋಕ್ಷದಾಯಕ ಎಂದು ತಿಳಿದು ತಮ್ಮ ಸಾಧನೆ ಮತ್ತು ಭಕ್ತಿ ಮಾಡುತ್ತಾರೆ. ಒಂದು ವೇಳೆ ಅವರಿಗೆ ನೀವು ಮಾಡುತ್ತಿರುವ ಭಕ್ತಿ ಶಾಸ್ತ್ರಾನುಸಾರ ಇಲ್ಲವೆಂದು ಅವರಿಗೆ ತಿಳಿದರೆ ಅವರು ಸಾಧನೆಯನ್ನೇ ಬಿಟ್ಟು ಬಿಡುತ್ತಾರೆ. ಎಷ್ಟೋ ಸಾಧಕರು ದೇವತೆಗಳ ಪೂಜೆಯ ರೂಪದಲ್ಲಿ ಯಜ್ಞ ಅಂದರೆ ಧಾರ್ಮಿಕ ಅನುಷ್ಠಾನ ಮಾಡುವುದನ್ನೇ ಪೂಜೆಯೆಂದು ಭಾವಿಸುತ್ತಾರೆ. ಉಳಿದವರು ಬ್ರಹ್ಮನವರೆಗೆ ಮಾತ್ರ ಪೂಜಿಸುತ್ತಾರೆ. ಕೆಲವರು ಕೇವಲ ಅಗ್ನಿಗೆ ತುಪ್ಪವನ್ನು ಸುರಿದು ಆರಾಧನೆ ಮಾಡುತ್ತಾರೆ. ಅದನ್ನೇ ಅವರು ಹೋಮವೆಂದು ಕರೆಯುತ್ತಾರೆ. (ಗೀತೆಯ 4ನೆಯ ಅಧ್ಯಾಯದ 25ನೇ ಶ್ಲೋಕ)

❖ ಕೆಲ ಯೋಗಿಗಳು ಅಂದರೆ ಭಕ್ತರು ಕಣ್ಣು, ಕಿವಿ, ಬಾಯಿ ಮುಚ್ಚಿಕೊಂಡು ಕ್ರಿಯೆಗಳನ್ನು ಮಾಡುತ್ತಾರೆ. ಅದರಲ್ಲೇ ತಮ್ಮ ಇಡೀ ಜೀವನವನ್ನು ಸಮಾಪ್ತಗೊಳಿಸುತ್ತಾರೆ. (ಗೀತೆಯ 4ನೇ ಅಧ್ಯಾಯದ 26ನೇ ಶ್ಲೋಕ)

❖ ಕೆಲ ಯೋಗಿಗಳು ಅಂದರೆ ಭಕ್ತಜನರು ಉಚ್ವಾಸ–ನಿಶ್ವಾಸವನ್ನು ಗಮನಿಸುತ್ತಾ ಭಕ್ತಿಯ ಸಾಧನೆಯನ್ನು ಮಾಡುತ್ತಾರೆ. ಇದರಿಂದ ಅವರು ಆತ್ಮಸಂಯಮ ಸಾಧನೆಯೆಂಬ ಅಗ್ನಿಯಲ್ಲಿ ತಮ್ಮ ಜೀವನವನ್ನು ಸಮರ್ಪಿಸುತ್ತಾರೆ. ಅರ್ಥಾತ್ ಮಾನವ ಜೀವನವನ್ನು ಪೂರ್ಣಗೊಳಿಸುತ್ತಾರೆ. ಅದನ್ನು ಅವರು ಜ್ಞಾನದೀಪವೆಂದು ಭಾವಿಸುತ್ತಾರೆ. ಅರ್ಥಾತ್ ತಮ್ಮ ಸಾಧನೆಯನ್ನು ಶ್ರೇಷ್ಠವೆಂದು ಭಾವಿಸುತ್ತಾರೆ. (ಗೀತೆಯ 4ನೇ ಅಧ್ಯಾಯದ 27ನೇ ಶ್ಲೋಕ)

❖ ಇನ್ನೂ ಕೆಲ ಸಾಧಕರು ಹಣದಿಂದ ಮಾಡುವ ಯಜ್ಞಗಳನ್ನು ಅರ್ಥಾತ್ ಧಾರ್ಮಿಕ ಅನುಷ್ಠಾನಗಳನ್ನು ಮಾಡುತ್ತಾರೆ. ಉದಾಹರಣೆಗೆ ಅನ್ನ ದಾಸೋಹ ಏರ್ಪಡಿಸುವುದು, ಬಟ್ಟೆಬರೆ ದಾನ

ಮಾಡುವುದು, ಧರ್ಮಶಾಲೆಗಳನ್ನು ಕಟ್ಟಿಸುವುದು, ಬಾವಿ ತೋಡಿಸುವುದು ಮುಂತಾದವುಗಳನ್ನು ಮಾಡುತ್ತಾರೆ. ಕೆಲವರು ತಪಸ್ಸನ್ನು ಮಾಡಿದರೆ ಇನ್ನೂ ಕೆಲವರು ಯೋಗಾಸನವನ್ನು ಮಾಡುತ್ತಾರೆ. ಇದನ್ನು ಅವರೆಲ್ಲಾ ಪರಮಾತ್ಮನ ಪ್ರಾಪ್ತಿಗಾಗಿ ಮಾಡುವ ಸಾಧನೆ ಎಂದು ಭಾವಿಸುತ್ತಾರೆ. ಹಲವಾರು ಸಾಧಕರು ಅಹಿಂಸೆಯೆಂಬ ಕಠಿಣವಾದ ವ್ರತವನ್ನು ಆಚರಿಸುತ್ತಾರೆ. ಬಾಯಿಗೆ ಬಟ್ಟೆ ಕಟ್ಟಿಕೊಂಡು ಬರಿಗಾಲಿನಲ್ಲಿ ನಡೆಯುವುದು, ಹಲವಾರು ದಿನ ಉಪವಾಸ ಇರುವುದು ಮುಂತಾದವುಗಳನ್ನು ಮಾಡುತ್ತಾರೆ. ಇನ್ನೂ ಕೆಲ ಯೋಗಿಗಳು ಅಂದರೆ ಸಾಧಕರು ಸ್ವ ಅಧ್ಯಾಯ ಅಂದರೆ ಪ್ರತಿದಿನವು ಯಾವುದಾದರೂ ವೇದ ಗ್ರಂಥದಿಂದ ಮಂತ್ರಗಳನ್ನು ಅಥವಾ ಶ್ಲೋಕಗಳನ್ನು ಪಠಣೆ ಮಾಡುತ್ತಾರೆ. ಇದರಿಂದ ಜ್ಞಾನ ಯಜ್ಞ ಆಗುತ್ತದೆ ಇವರೆಲ್ಲಾ ಈ ಕ್ರಿಯೆಗಳನ್ನು ಮೋಕ್ಷದಾಯಕವೆಂದು ಭಾವಿಸುತ್ತಾರೆ. (ಗೀತೆಯ 4ನೇ ಅಧ್ಯಾಯದ 28ನೇ ಶ್ಲೋಕ)

❖ ಇನ್ನೂ ಕೆಲ ಯೋಗಿಜನರು ಅಂದರೆ ಭಕ್ತಜನರು ತಮ್ಮ ಪ್ರಾಣವಾಯುವನ್ನು ಅಪಾನವಾಯುವಿನಲ್ಲಿ ತಲುಪಿಸುವ ಕ್ರಿಯೆಯನ್ನು ಮಾಡುತ್ತಾರೆ. ಇನ್ನೂ ಕೆಲವರು ಇದಕ್ಕೆ ವಿರುದ್ಧವಾದ ಅಪಾನ ವಾಯುವನ್ನು ಪ್ರಾಣ ವಾಯುವಿಗೆ ತರುವ ಪ್ರಯತ್ನ ಮಾಡುತ್ತಾರೆ. ಕೆಲ ಸಾಧಕರು ಅಲ್ಪಹಾರಿಗಳಾಗಿರುತ್ತಾರೆ. ಇನ್ನೂ ಕೆಲವರು ಪ್ರಾಣಾಯಾಮದಲ್ಲಿ ತಲ್ಲೀನರಾಗಿ ಪಾನ-ಅಪಾನ ಇದರ ವೇಗವನ್ನು ತಡೆದು ಶ್ವಾಸವನ್ನೇ ಕಡಿಮೆ ಮಾಡಿಕೊಳ್ಳುತ್ತಾರೆ. ಇದರಲ್ಲೇ ತಮ್ಮ ಮಾನವ ಜೀವನವನ್ನು ಸಮರ್ಪಿಸಿಕೊಳ್ಳುತ್ತಾರೆ. ಮೇಲೆ ತಿಳಿಸಿದ ಈ ಎಲ್ಲಾ ಸಾಧಕರು (4ನೇ ಅಧ್ಯಾಯದ 25ರಿಂದ 30ನೇ ಶ್ಲೋಕದವರೆಗೆ) ತಮ್ಮ-ತಮ್ಮ ಕ್ರಿಯೆಗಳನ್ನು ಮಾಡುತ್ತಾ, ಯಜ್ಞ ಅಂದರೆ ಧಾರ್ಮಿಕ ಅನುಷ್ಠಾನಗಳನ್ನು ಮಾಡಿ ತಮ್ಮ ಪಾಪವನ್ನು ನಾಶಮಾಡುವ ಭಕ್ತಿ ಸಾಧನೆಯನ್ನು ಮಾಡುತ್ತಿದ್ದೇವೆ ಎಂದು ಭಾವಿಸುತ್ತಾರೆ. (ಗೀತೆಯ 4ನೇ ಅಧ್ಯಾಯದ 30ನೇ ಶ್ಲೋಕ)

❖ ಒಂದು ವೇಳೆ ಸಾಧಕನ ಸಾಧನೆಯು ಶಾಸ್ತ್ರಕ್ಕೆ ಅನುಗುಣವಾಗಿದ್ದರೆ ಕುರುಶ್ರೇಷ್ಠ ಅರ್ಜುನ! ಈ ಯಜ್ಞದಲ್ಲಿ ಉಳಿದಿರುವ ಅಮೃತವನ್ನು ಉಣ್ಣುವ ಸಾಧಕನು ಸನಾತನ ಬ್ರಹ್ಮ ಅರ್ಥಾತ್ ಪರಮ ಅಕ್ಷರ ಬ್ರಹ್ಮನನ್ನು ಪ್ರಾಪ್ತಿಸುತ್ತಾನೆ. ಶಾಸ್ತ್ರಾನುಕೂಲವಾಗಿ ಸಾಧನೆ ಮಾಡದಿರುವ ಮನುಷ್ಯನಿಗೆ ಈ ಭೂ ಲೋಕವು ಸಹ ಸುಖದಾಯಕವಾಗಿರುವುದಿಲ್ಲ. ಇನ್ನು ಪರಲೋಕವು ಸುಖದಾಯಕವಾಗಿರಲು ಹೇಗೆ ಸಾಧ್ಯ? ಅಂದರೆ ಶಾಸ್ತ್ರವಿರುದ್ಧವಾದ ಸಾಧಕನಿಗೆ ಯಾವುದೇ ಲಾಭಸಿಗುವುದಿಲ್ಲ. ಇದೇ ಆಧಾರವು ಗೀತೆಯ 16ನೇ ಅದ್ಯಾಯದ 23-24ನೇ ಶ್ಲೋಕದಲ್ಲಿದೆ(ಗೀತೆ ಅಧ್ಯಾಯ 4 ಶ್ಲೋಕ 31).

❖ ಗೀತೆಯ ಜ್ಞಾದಾತನು ಮೇಲಿನ 25ರಿಂದ 30ನೇ ಶ್ಲೋಕಗಳವರೆಗೆ ಸ್ಪಷ್ಟವಾಗಿ ಹೇಳಿರುವುದೇನೆಂದರೆ, ಯಾವ ಸಾಧಕರು ಯಾವ ಸಾಧನೆ ಮಾಡುತ್ತಿದ್ದಾರೋ, ಅದನ್ನೇ ಅವರು ಮೋಕ್ಷದಾಯಕವೆಂದು ಪರಿಗಣಿಸಿದ್ದಾರೆ. ಆದರೆ ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕದಲ್ಲಿ, "ಯಜ್ಞಗಳು ಅಂದರೆ ಧಾರ್ಮಿಕ ಅನುಷ್ಠಾನಗಳ ಯಥಾರ್ಥ ಜ್ಞಾನ" (ಬ್ರಹ್ಮಣಃ ಮುಖೆ) ಪರಮ ಅಕ್ಷರ ಬ್ರಹ್ಮನು ಸ್ವತಃ ತನ್ನ ಮುಖ ಕಮಲದಿಂದ ಹೇಳುತ್ತಾನೆ. (ಅದನ್ನು ಸಚ್ಚಿದಾನಂದ ಘನಬ್ರಹ್ಮ ಅಂದರೆ ಪರಮ ಅಕ್ಷರಬ್ರಹ್ಮನ ವಾಣಿ ಎಂದು ಕರೆಯಲಾಗಿದೆ. ಅದನ್ನು ತತ್ವಜ್ಞಾನವೆಂದು ಕರೆಯುತ್ತಾರೆ. ಹಾಗೂ ಸೂಕ್ಷ್ಮವೇದ ಅಂದರೆ 5ನೇ ವೇದವೆಂದು ಸಹ ಕರೆಯುತ್ತಾರೆ) ಈ ತತ್ವಜ್ಞಾನದಲ್ಲಿ ವಿಸ್ತಾರವಾಗಿ ಭಕ್ತಿ ವಿಧಾನವನ್ನು ಹೇಳಲಾಗಿದೆ. ಇದನ್ನು ತಿಳಿದ ಸಾಧಕರು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾರೆ. ಅಂದರೆ ಅವರಿಗೆ ಪೂರ್ಣ ಮೋಕ್ಷವು ಪ್ರಾಪ್ತಿಯಾಗುತ್ತದೆ.

ಟಿಪ್ಪಣಿ :- ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕದ ಅನುವಾದದಲ್ಲಿ ಎಲ್ಲಾ ಅನುವಾದಕರು ಒಂದೇ ರೀತಿಯ ತಪ್ಪನ್ನು ಮಾಡಿದ್ದಾರೆ. ಬ್ರಹ್ಮಣಃ ಶಬ್ದದ ಅರ್ಥವನ್ನು ವೇದವೆಂದು ಬರೆದಿದ್ದಾರೆ. ಮತ್ತು ಬ್ರಹ್ಮಣಃ ಮುಖೆ ಎಂದರೆ ವೇದದ ವಾಣಿಯಲ್ಲಿ ಎಂದು

ಅನುವಾದಿಸಿದ್ದಾರೆ. ಅದು ತಪ್ಪು. ಇದೇ ಅನುವಾದಕರು ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಬ್ರಹ್ಮಣಃ ಎಂದರೆ ಸಚ್ಚಿದಾನಂದ ಘನಬ್ರಹ್ಮ ಎಂದು ಬರೆದಿದ್ದಾರೆ. ಇದು ಸರಿಯಾಗಿದೆ. ಆದ್ದರಿಂದ ಗೀತೆಯ 4ನೇ ಅಧ್ಯಾಯ 32ನೇ ಶ್ಲೋಕ ಬ್ರಹ್ಮಣಃ ಇದರ ಅರ್ಥ ಸಚ್ಚಿದಾನಂದ ಘನಬ್ರಹ್ಮ ಅರ್ಥಾತ್ ಪರಮ ಅಕ್ಷರ ಬ್ರಹ್ಮ ಮಾಡುವುದು ಸರಿ. ಪ್ರಮಾಣಕ್ಕಾಗಿ ಇದೇ ಪುಸ್ತಕದ ಕೊನೆಯಲ್ಲಿ ಗೀತೆಯ ಶ್ಲೋಕಗಳು ಇವೆ. ದಯಮಾಡಿ ಅದನ್ನು ನೋಡಿ.

❖ **ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, 'ಆ ಜ್ಞಾನವನ್ನು (ಯಾವುದನ್ನು ಪರಮಾತ್ಮನು ತನ್ನ ಮುಖಕಮಲದಿಂದ ಹೇಳಿದ್ದಾನೋ, ಆ ತತ್ವಜ್ಞಾನವನ್ನು) ನೀನು ತತ್ವದರ್ಶಿ ಸಂತನ ಬಳಿ ಹೋಗಿ ತಿಳಿದುಕೋ. ಅವರಿಗೆ ದೀರ್ಘ ದಂಡ ನಮಸ್ಕಾರ ಮಾಡಿದರೆ, ಕಪಟತೆಯನ್ನು ಬಿಟ್ಟು ವಿನಯವಾಗಿ ಪ್ರಶ್ನಿಸಿದರೆ ತತ್ವದರ್ಶಿ ಸಂತರು ನಿನಗೆ ತತ್ವಜ್ಞಾನದ ಉಪದೇಶವನ್ನು ನೀಡುವರು'.**

❖ **ಇದರಿಂದ ಗೀತೆಯಲ್ಲಿರುವ ಜ್ಞಾನವು ಪೂರ್ಣವಲ್ಲವೆಂದು ಸಾಬೀತಾಯಿತು. ಆದರೆ ಅದು ತಪ್ಪಲ್ಲ. ಗೀತೆಯ ಜ್ಞಾನದಾತನಿಗೂ ಪೂರ್ಣ ಮೋಕ್ಷಮಾರ್ಗದ ಅರಿವಿಲ್ಲ. ಏಕೆಂದರೆ ಅವನಿಗೆ ತತ್ವಜ್ಞಾನದ ಬಗ್ಗೆ ಜ್ಞಾನವಿಲ್ಲ. ಯಾವುದನ್ನು ಪರಮಾತ್ಮ ('ಪರಮ ಅಕ್ಷರ ಬ್ರಹ್ಮ') ತಮ್ಮ ಮುಖಕಮಲದಿಂದ ಹೇಳುತ್ತಾರೋ. ಅದನ್ನು ತತ್ವದರ್ಶಿ ಸಂತರಿಂದ ತಿಳಿಯಲು ಹೇಳಿದ್ದಾನೆ.**

❖ **ಯಜುರ್ವೇದದ 4ನೇ ಅಧ್ಯಾಯದ 10ನೇ ಮಂತ್ರದಲ್ಲೂ ಸಹ ಇದಕ್ಕೆ ಪ್ರಮಾಣವಿದೆ. ಪರಮ ಅಕ್ಷರ ಬ್ರಹ್ಮನನ್ನು ಯಾರೋ ಒಬ್ಬರು 'ಸಂಭವಾತ್' ಅಂದರೆ ರಾಮ-ಕೃಷ್ಣರ ತರಹ ಜನ್ಮಿಸುವವನು ಅವನು ಸಾಕಾರ ಎಂದಿದ್ದಾರೆ. ಇನ್ನೊಬ್ಬರು 'ಅಸಂಭವಾತ್' ಎಂದರೆ ಪರಮಾತ್ಮನು ಜನ್ಮ ತಾಳುವುದಿಲ್ಲ, ಅವನು ನಿರಾಕಾರನು ಎಂದಿದ್ದಾರೆ. ಪರಮೇಶ್ವರನು ಜನ್ಮಿಸುತ್ತಾನೋ ಇಲ್ಲವೋ ಅಥವಾ ವಾಸ್ತವದಲ್ಲಿ ಹೇಗಿದ್ದಾನೆ ಎಂಬುದರ ಬಗ್ಗೆ 'ಧೀರಾಣಾಂ' ತತ್ವದರ್ಶಿ ಸಂತರು ತಿಳಿಸುತ್ತಾರೆ, ಅವರಿಂದ ಕೇಳಿ ಎಂದು ಹೇಳಲಾಗಿದೆ.**

**ಪ್ರಶ್ನೆ 36 (ಧರ್ಮದಾಸನ):- ಹೇ ಪ್ರಭು! ಹೇ ಜಿಂದಾ! ತತ್ವದರ್ಶಿ ಸಂತನ ಗುರುತೇನು? ಹಾಗು ಪ್ರಮಾಣಿತ ಸದ್ಗ್ರಂಥಗಳಲ್ಲಿ ಅದಕ್ಕೆ ಪ್ರಮಾಣವೆಲ್ಲಿದೆ? ನಿಮ್ಮ ಜ್ಞಾನವು ಆತ್ಮದವರೆಗೆ ಮುಟ್ಟುತ್ತಿದೆ. ಗೀತೆಯ ಶಬ್ದಗಳ ಯಥಾರ್ಥ ಭಾವಾರ್ಥವನ್ನು ನಿಮ್ಮ ಮುಖಕಮಲದಿಂದ ಕೇಳಿ ಯುಗ-ಯುಗಗಳಿಂದ ದಾಹದಿಂದ ಇದ್ದ ಆತ್ಮವು ಕೊಂಚ ಮಟ್ಟಿಗೆ ತೃಪ್ತಿಪಟ್ಟುಕೊಂಡಿದೆ.**

**ಉತ್ತರ :- (ಜಿಂದಾ ಪರಮೇಶ್ವರರ) ಮೊಟ್ಟಮೊದಲಿಗೆ ನೀನು ತತ್ವದರ್ಶಿ ಸಂತನ ಅಂದರೆ ಪೂರ್ಣ ಜ್ಞಾನಿಯಾದ ಸದ್ಗುರುವಿನ ಲಕ್ಷಣಗಳನ್ನು ತಿಳಿದುಕೋ:-**

ಗುರು ಕೆ ಲಕ್ಷಣ್ ಚಾರ್ ಬಖಾನಾ, ಪ್ರಥಮ್ ವೇದ್ ಶಾಸ್ತ್ರ ಕೋ ಜ್ಞಾನಾ (ಜ್ಞಾತಾ)।
ದೂಜೇ ಹರಿ ಭಕ್ತಿ ಮನ್ ಕರ್ಮ್ ಬಾನೀ, ತೀಸರೇ ಸಮದೃಷ್ಟಿ ಕರ್ ಜಾನೀ।
ಚೌಥೇ ವೇದ್ ವಿಧಿ ಸಬ್ ಕರ್ಮಾ, ಯಹ್ ಚಾರ್ ಗುರು ಗುಣ್ ಜಾನೋ ಮರ್ಮಾ।

**ಕಬೀರ್ ಸಾಗರ್‌ದ "ಜೀವ್ ಧರ್ಮ್ ಬೋಧ" ಎನ್ನುವ ಅಧ್ಯಾಯದ 1960ನೇ ಪುಟದಲ್ಲಿ ಈ ಅಮೃತವಾಣಿಗಳು ಇವೆ.**

**ಭಾವಾರ್ಥ :- ಯಾರು ತತ್ವದರ್ಶಿ ಸಂತರಿರುವರೋ (ಪೂರ್ಣ ಸದ್ಗುರು) ಅವರಲ್ಲಿ 4 ಮುಖ್ಯ ಗುಣಗಳಿರುತ್ತವೆ :-**

**1. ಅವರು ವೇದ ಮತ್ತು ಉಳಿದ ಎಲ್ಲಾ ಗ್ರಂಥಗಳನ್ನು ಪೂರ್ಣವಾಗಿ ತಿಳಿದ ಜ್ಞಾನಿಯಾಗಿರುತ್ತಾರೆ.**

**2. ಅವರು ಕಾಯಾ-ವಾಚಾ-ಮನಸಾ ಪರಮಾತ್ಮನನ್ನು ಸ್ವತಃ ಆರಾಧಿಸುತ್ತಾರೆ. ಕೇವಲ ಭಾಷಣ ಮಾಡುವುದಿಲ್ಲ. ಅವರ ಹೇಳುವುದರಲ್ಲಿ ಹಾಗೂ ಮಾಡುವುದರಲ್ಲಿ ವ್ಯತ್ಯಾಸವಿರುವುದಿಲ್ಲ.**

3. ಅವರು ತನ್ನ ಎಲ್ಲ ಅನುಯಾಯಿಗಳನ್ನು ಸಮಾನ ದೃಷ್ಟಿಯಿಂದ ನೋಡುತ್ತಾರೆ. ಯಾವುದೇ ಭೇದ-ಭಾವ ಮಾಡುವುದಿಲ್ಲ.

4. ಅವರು ಎಲ್ಲಾ ಭಕ್ತಿ ಕರ್ಮಗಳನ್ನು ವೇದಗಳಿಗೆ ಅನುಗುಣವಾಗಿಯೇ ಮಾಡುತ್ತಾರೆ ಮತ್ತು ಮಾಡಿಸುತ್ತಾರೆ. ಅಂದರೆ ಶಾಸ್ತ್ರಕ್ಕೆ ಅನುಸಾರವಾಗಿರುವ ಭಕ್ತಿ ಸಾಧನೆಯನ್ನು ಮಾಡುತ್ತಾರೆ ಹಾಗೂ ಮಾಡಿಸುತ್ತಾರೆ.

ಈ ಮೇಲೆ ತಿಳಿಸಿದ ಪ್ರಮಾಣವು ಪರಮೇಶ್ವರನು ತನ್ನ ಮುಖಕಮಲದಿಂದ ಹೇಳಿದ ಸೂಕ್ಷ್ಮವೇದದಲ್ಲಿದೆ. ಈಗ ತತ್ವದರ್ಶಿ ಸಂತನನ್ನು ಗುರುತಿಸುವುದು ಹೇಗೆಂದು ಭಗವದ್ಗೀತೆಯಲ್ಲಿ ಪ್ರಮಾಣ ತೋರಿಸುತ್ತೇನೆ.

ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಸ್ಪಷ್ಟವಾಗಿದೆ:-

ಊರ್ಧ್ವ್ ಮೂಲಮ್ ಅಧಃ ಶಾಖಮ್ ಅಶ್ವತ್ಥಮ್ ಪ್ರಾಹುಃ ಅವ್ಯಯಮ್।
ಛಂದಾಸಿ ಯಸ್ಯ ಪ್ರಣಾನಿ, ಯಃ ತಮ್ ವೇದ್ ಸಃ ವೇದವಿತ್॥

ಅನುವಾದ :- ಮೇಲೆ ಬೇರಿರುವ, ಕೆಳಗಡೆ 3 ಗುಣ ರೂಪಿ ಶಾಖೆಗಳಿರುವ ತಲೆಕೆಳಗಾಗಿ ನೇತಾಡುತ್ತಿರುವ ಪ್ರಪಂಚ ರೂಪಿ ಅರಳಿ ವೃಕ್ಷವೆಂದು ತಿಳಿದುಕೊ, ಇದನ್ನು ಅವಿನಾಶಿ ಎನ್ನುತ್ತಾರೆ. ಏಕೆಂದರೆ ಸೃಷ್ಟಿ-ಪ್ರಳಯ ಚಕ್ರವು ಸದಾ ತಿರುಗುತ್ತಿರುತ್ತದೆ. ಆದ್ದರಿಂದ ಇದನ್ನು ಅವಿನಾಶಿ ಎನ್ನಲಾಗಿದೆ. ಈ ಪ್ರಪಂಚವೆಂಬ ವೃಕ್ಷದ ಎಲ್ಲಾ ಭಾಗಗಳು (Part) (ಯಃ ತಮ್ ವೇದ್) ಯಾರು ಈ ಪ್ರಪಂಚವೆಂಬ ವೃಕ್ಷದ ಎಲ್ಲಾ ಭಾಗಗಳ ತತ್ವವನ್ನು ತಿಳಿದಿರುತ್ತಾರೋ (ಸಃ) ಅವರು (ವೇದ ವಿತ್) ವೇದದ ತಾತ್ಪರ್ಯವನ್ನು ತಿಳಿದಿರುವವರು. ಅರ್ಥಾತ್ ಅವರೇ ತತ್ವದರ್ಶಿ ಸಂತರು. ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ ಪರಮ ಅಕ್ಷರ ಬ್ರಹ್ಮನು ಸ್ವತಃ ಭೂಮಿಯ ಮೇಲೆ ಪ್ರತ್ಯಕ್ಷನಾಗಿ ತನ್ನ ಮುಖಕಮಲದಿಂದ ತತ್ವಜ್ಞಾನವನ್ನು ವಿಸ್ತಾರವಾಗಿ ಹೇಳುತ್ತಾನೆ. ಪರಮೇಶ್ವರನು ತನ್ನ ವಾಣಿಯಲ್ಲಿ ಅಂದರೆ ತತ್ವಜ್ಞಾನದಲ್ಲಿ ಹೀಗೆ ಹೇಳಿದ್ದಾನೆ:-

ಕಬೀರ್, ಅಕ್ಷರ್ ಪುರುಷ್ ಏಕ್ ಪೇಡ್ ಹೈ, ಕ್ಷರ್ ಪುರುಷ್ ವಾಕಿ ಡಾರ್।
ತೀನೊಂ ದೇವಾ ಶಾಖಾ ಹೈಂ, ಪಾತ್ ರೂಪ್ ಸಂಸಾರ್॥

ಭಾವಾರ್ಥ :- ಭೂಮಿಯ ಮೇಲಿರುವ ವೃಕ್ಷದ ಭಾಗವನ್ನು ಕಾಂಡವೆಂದು ಕರೆಯುತ್ತಾರೆ. ಅದನ್ನು ಅಕ್ಷರ ಪುರುಷನೆಂದು ಕರೆಯೋಣ. ಕಾಂಡದಿಂದ ಅನೇಕ ದೊಡ್ಡ-ದೊಡ್ಡ ಕೊಂಬೆಗಳು ಬರುತ್ತವೆ. ಅದರಲ್ಲಿರುವ ಒಂದು ದೊಡ್ಡ ಕೊಂಬೆಯನ್ನು ಕ್ಷರಪುರುಷ ಎಂದು ತಿಳಿ. ಆ ಕೊಂಬೆಯಿಂದ 3 ಶಾಖೆಗಳು ಬರುತ್ತವೆ. ಅವುಗಳನ್ನು 3 ದೇವತೆಗಳೆಂದು (ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಿವಶಂಕರ) ಎಂದು ತಿಳಿಯಿರಿ. ಮತ್ತು ಈ ಶಾಖೆಗಳಲ್ಲಿರುವ ಎಲೆಗಳನ್ನು ಪ್ರಪಂಚವೆಂದು ತಿಳಿಯಿರಿ.

ಗೀತೆಯ 15ನೇ ಅಧ್ಯಾಯದ 1ರಿಂದ 4ನೇ ಶ್ಲೋಕದಲ್ಲಿ ಸಾಂಕೇತಿಕವಾದ ವಿವರಣೆ ಇದೆ. ತತ್ವಜ್ಞಾನದಲ್ಲಿ ವಿಸ್ತಾರವಾದ ವಿವರಣೆ ಇದೆ. ಮೊದಲಿಗೆ ಇದನ್ನು ಗೀತೆಯ ಆಧಾರದಿಂದ ತಿಳಿಯೋಣ.

ಗೀತೆಯ 15ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಹೇಳಿರುವಂತೆ ಪ್ರಪಂಚವೆಂಬ ವೃಕ್ಷದ 3 ಗುಣಗಳೆಂಬ (ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಂಕರ) ರೆಂಬೆಗಳಿವೆ. ಇವು ಮೇಲೆ (ಸ್ವರ್ಗ ಲೋಕದಲ್ಲಿ) ಮತ್ತು ಕೆಳಗೆ (ಪಾತಾಳ ಲೋಕದಲ್ಲೂ) ಹರಡಿವೆ.

ಟಿಪ್ಪಣಿ :- ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಮತ್ತು ತಮೋಗುಣ ಶಂಕರ ಇದ್ದಾರೆ.

ಪ್ರಶ್ನೆ ಸಂಖ್ಯೆ 7ರಲ್ಲಿ ಪ್ರಮಾಣವನ್ನು ನೋಡಿ. 3 ಶಾಖೆಗಳು ಮೇಲೆ-ಕೆಳಗೆ ಹರಡಿವೆ. ಇದರ ತಾತ್ಪರ್ಯವೇನೆಂದರೆ ಭೂ ಲೋಕದಲ್ಲಿ ಗೀತೆಯ ಜ್ಞಾನವನ್ನು ಹೇಳಲಾಗುತ್ತಿತ್ತು. ಮೂವರು ದೇವತೆಗಳ ಅಧಿಕಾರವು 3 ಲೋಕಗಳಲ್ಲೂ ಇದೆ. 1. ಭೂಲೋಕ 2. ಸ್ವರ್ಗಲೋಕ 3. ಪಾತಾಳಲೋಕ. ಈ ಮೂವರು ಒಂದೊಂದು ವಿಭಾಗದ ಮಂತ್ರಿಗಳು. ರಜೋಗುಣ ವಿಭಾಗಕ್ಕೆ ಶ್ರೀ ಬ್ರಹ್ಮಾ, ಸತ್ವಗುಣ ವಿಭಾಗಕ್ಕೆ ಶ್ರೀ ವಿಷ್ಣು ಹಾಗೂ ತಮೋಗುಣ ವಿಭಾಗಕ್ಕೆ ಶ್ರೀ ಶಿವ.

ಗೀತೆಯ 15ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಹೇ ಅರ್ಜುನಾ! ಈ ಪ್ರಪಂಚವೆಂಬ ವೃಕ್ಷದ ಸ್ವರೂಪವನ್ನು (ವಿಚಾರ ಮಾಡುವ ಸಮಯದಲ್ಲಿ) ಅರ್ಥಾತ್ ನಿನ್ನ ಹಾಗೂ ನನ್ನ ಗೀತೆಯ ಜ್ಞಾನದ ಚರ್ಚೆಯಲ್ಲಿ ಕಾಣಲು ಸಾಧ್ಯವಿಲ್ಲ. ಅರ್ಥಾತ್ ನಾನು ಹೇಳಲು ಸಾಧ್ಯವಿಲ್ಲ ಏಕೆಂದರೆ ಇದರ ಆದಿ ಮತ್ತು ಅಂತ್ಯದ ಬಗ್ಗೆ ನನಗೆ ಅರಿವಿಲ್ಲ. ಆದ್ದರಿಂದ ಈ ಅತ್ಯಂತ ದೃಢವಾದ ಬೇರುಳ್ಳ ಅರ್ಥಾತ್ ಪ್ರಪಂಚವೆಂಬ ವೃಕ್ಷದ ಬೇರುಳ್ಳ (ಆ ಪರಮಾತ್ಮನು ಅವಿನಾಶಿ ಮತ್ತು ಅವನ ಸ್ಥಾನವಾದ ಸತ್ಯಲೋಕ ಅಲಖ್‌ಲೋಕ, ಅಗಮ್ ಲೋಕ ಮತ್ತು ಅಕಹ್ ಲೋಕ, ಈ ನಾಲ್ಕು ಲೋಕಗಳು ಸಹ ಅವಿನಾಶಿ ಈ ನಾಲ್ಕರಲ್ಲೂ ಒಬ್ಬನೇ ಪರಮಾತ್ಮ ಭಿನ್ನ-ಭಿನ್ನವಾದ ರೂಪ ಧರಿಸಿ ಸಿಂಹಾಸನದ ಮೇಲೆ ವಿರಾಜಮಾನನಾಗುತ್ತಾನೆ. ಆದ್ದರಿಂದ ಅವನನ್ನು 'ಸದೃಢ ಮೂಲಂ' ಅಂದರೆ ಅತಿ ದೃಢವಾದ ಬೇರಿರುವವನು ಎಂದು ಕರೆಯಲಾಗಿದೆ) ತತ್ವಜ್ಞಾನವೆಂಬ ಶಸ್ತ್ರದಿಂದ ಕಡಿದು ಹಾಕು ಅಂದರೆ ತತ್ವದರ್ಶಿ ಸಂತನಿಂದ ತತ್ವಜ್ಞಾನ ಪಡೆದುಕೋ. ನಂತರ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಇದರ ನಂತರ ಪರಮೇಶ್ವರನ ಪರಮಪದ ಅಂದರೆ ಸತ್ಯಲೋಕದ ಅನ್ವೇಷಣೆಯನ್ನು ಮಾಡಬೇಕು. ಅಲ್ಲಿಗೆ ಹೋದ ನಂತರ ಸಾಧಕರು ಮತ್ತೆ ಈ ಪ್ರಪಂಚಕ್ಕೆ ಮರಳಿ ಬರುವುದಿಲ್ಲ. ಯಾವ ಪರಮೇಶ್ವರನಿಂದ ಪ್ರಪಂಚವೆಂಬ ವೃಕ್ಷದ ಪ್ರವೃತ್ತಿಯು ತನ್ನ ವಿಸ್ತಾರವನ್ನು ಪಡೆದುಕೊಂಡಿದೆಯೋ, ಅರ್ಥಾತ್ ಯಾವ ಪರಮೇಶ್ವರನು ಇಡೀ ಪ್ರಪಂಚವನ್ನು ಸೃಷ್ಟಿಸಿದ್ದಾನೋ, ಆ ಪರಮೇಶ್ವರನ ಭಕ್ತಿಯನ್ನು ಮೊದಲು ತತ್ವದರ್ಶಿ ಸಂತನಿಂದ ತಿಳಿದುಕೋ. ಗೀತೆಯ ಜ್ಞಾನದಾತನು ತನ್ನ ಭಕ್ತಿಯನ್ನು ಸಹ ನಿರಾಕರಿಸಿದ್ದಾನೆ. ಗೀತೆಯ 15ನೇ ಅಧ್ಯಾಯದ 16 ಮತ್ತು 17ನೇ ಶ್ಲೋಕದಲ್ಲಿ ಮೂವರು ಪ್ರಭುಗಳಿದ್ದಾರೆಂದು ತಿಳಿಸಲಾಗಿದೆ. 16ನೇ ಶ್ಲೋಕದಲ್ಲಿ ಇಬ್ಬರು ಪುರುಷರಿದ್ದಾರೆಂದು ತಿಳಿಸಲಾಗಿದೆ. ಕ್ಷರ ಪುರುಷ ಮತ್ತು ಅಕ್ಷರ ಪುರುಷ ಇವರಿಬ್ಬರು ನಾಶಹೊಂದುವವರು. 17ನೇ ಶ್ಲೋಕದಲ್ಲಿ ಹೇಳಿರುವ 3ನೆಯ ಪುರುಷನು ಪರಮ ಅಕ್ಷರ ಪುರುಷನು. ಅವನೇ ಪ್ರಪಂಚವೆಂಬ ವೃಕ್ಷದ ಬೇರು. ಇವನೇ ವಾಸ್ತವದಲ್ಲಿ ಅವಿನಾಶಿ. ಬೇರಿನಿಂದಲೇ ವೃಕ್ಷದ ಎಲ್ಲಾ ಭಾಗಗಳಾದ ಕಾಂಡ, ಕೊಂಬೆ, ಶಾಖೆಗಳು ಹಾಗೂ ಎಲೆಗಳಿಗೆ ಆಹಾರವು ಪ್ರಾಪ್ತಿಯಾಗುತ್ತದೆ. ಈ ಪರಮ ಅಕ್ಷರ ಪುರುಷನೇ 3 ಲೋಕಗಳಲ್ಲಿ ಪ್ರವೇಶ ಮಾಡಿ ಎಲ್ಲರ ಧಾರಣೆ-ಪೋಷಣೆ ಮಾಡುತ್ತಾನೆ. ಅದೇ ಮೂಲ ಪುರುಷನ ಪೂಜೆಯನ್ನು ಮಾಡಬೇಕು. ಈ ವಿವರಣೆಯಿಂದ ತತ್ವದರ್ಶಿ ಸಂತನನ್ನು ಗುರುತಿಸುವುದು ಹಾಗೂ ಗೀತೆಯ ಜ್ಞಾನದಾತನ ಅಲ್ಪ ಜ್ಞಾನ ಅರ್ಥಾತ್ ತತ್ವಜ್ಞಾನ ಹೀನತೆಯು ಸ್ಪಷ್ಟವಾಗುತ್ತದೆ.

## "ಜಿಂದಾ ಮಹಾತ್ಮ ಎರಡನೇ ಬಾರಿ ಅಂತರ್ಧ್ಯಾನವಾಗುವುದು"

(ಧರ್ಮದಾಸರು ಹೇಳಿದರು) :- ಹೇ ಜಿಂದಾ! ವಿಷ್ಣುವು ಮೂರೂ ಲೋಕಗಳಲ್ಲಿ ಕೇವಲ ಒಂದು ವಿಭಾಗಕ್ಕೆ ಮಾತ್ರ ಮಂತ್ರಿ ಎಂದು ನೀವು ಇದೇನು ಹೇಳುತ್ತಿರುವಿರಿ? ನೀವು ತಪ್ಪು ಹೇಳುತ್ತಿದ್ದೀರಾ. ಶ್ರೀ ವಿಷ್ಣುವು ಅಖಿಲ ಬ್ರಹ್ಮಾಂಡದ ಮಾಲೀಕ. ಇವನೇ ಬ್ರಹ್ಮಾನ ರೂಪದಲ್ಲಿದ್ದು ಸೃಷ್ಟಿಸುತ್ತಾನೆ, ವಿಷ್ಣುವಿನ ರೂಪದಲ್ಲಿದ್ದು ಇಡೀ ಜಗತ್ತನ್ನು ಪಾಲಿಸುತ್ತಾನೆ. ಹಾಗೇ ಶಿವನ ರೂಪ ಪಡೆದು ಸಂಹಾರ ಮಾಡುತ್ತಾನೆ. ಇವನಂತೂ ಇಡೀ ಕುಲದ ಮಾಲೀಕ. ಒಂದೊಮ್ಮೆ ನೀವು ಮತ್ತೆ ಶ್ರೀ ವಿಷ್ಣುವನ್ನು ಅವಮಾನಿಸಿದರೆ ಸರಿ ಇರುವುದಿಲ್ಲ.

ಪರಮೇಶ್ವರ ಕಬೀರರು ಹೇಳಿದ್ದಾರೆ:–

ಮೂರ್ಖ್ ಕೇ ಸಮಝಾವತೆ, ಜ್ಞಾನ್ ಗಾಂಠಿ ಕಾ ಜಾಯ್।
ಕೋಯಲಾ ಹೋತ್ ನ ಉಜಲಾ, ಭಾವೇಂ ಸೌ ಮನ್ ಸಾಬುನ್ ಲಾಯ್॥

ಇಷ್ಟು ಹೇಳಿ ಪರಮೇಶ್ವರ ಜಿಂದಾ ರೂಪಧಾರಿಯು ಅಂತರ್ಧ್ಯಾನರಾದರು. ಎರಡನೇ ಬಾರಿ ಪರಮೇಶ್ವರನನ್ನು ಕಳೆದುಕೊಂಡ ನಂತರ ಧರ್ಮದಾಸನಿಗೆ ಬಹಳ ಬೇಸರವಾಯಿತು. ಭಗವಂತ ವಿಷ್ಣುವಿನಲ್ಲಿ ಎಷ್ಟು ದೃಢ ವಿಶ್ವಾಸವಿತ್ತೆಂದರೆ ಕಣ್ಮುಂದೆ ಪ್ರತ್ಯಕ್ಷ ಸಾಕ್ಷಿ ಇದ್ದರೂ ಸುಳ್ಳನ್ನು ಬಿಡಲು ಸಿದ್ಧನಿರಲಿಲ್ಲ.

ಕಬೀರ್, ಜಾನ್ ಬೂಝ್ ಸಾಚೀ ತಜೈ, ಕರೇ ಝೂಠ್ ಸೇ ನೇಹ್।
ತಾಕಿ ಸಂಗತಿ ಹೇ ಪ್ರಭು, ಸ್ವಪನ್ ಮೆಂ ಭೀ ನಾ ದೇಹ್॥

ಕೊಂಚ ಸಮಯದ ನಂತರ ಧರ್ಮದಾಸನ ಬುದ್ಧಿಯಿಂದ ಕಾಲನ ಪ್ರಭಾವ ಕಡಿಮೆಯಾಯ್ತು. ಮತ್ತು ತನ್ನ ತಪ್ಪಿನ ಬಗ್ಗೆ ಯೋಚಿಸಿದನು. ಎಲ್ಲಾ ಪ್ರಮಾಣಗಳನ್ನು ಗೀತೆಯಿಂದಲೇ ಪ್ರತ್ಯಕ್ಷವಾಗಿ ತೋರಿಸಲ್ಪಟ್ಟಿತ್ತು. ಜಿಂದಾ ಮಹಾತ್ಮ ತನ್ನ ಕಡೆಯಿಂದ ಏನನ್ನೂ ಸುಮ್ಮನೇ ಊಹಿಸಿಕೊಂಡು ಹೇಳಲಿಲ್ಲ. ನಾನೆಂಥಾ ದುರಾದೃಷ್ಟವಂತ, ನನ್ನ ಹಠಮಾರಿತನದಿಂದ ದೇವರಂಥಾ ತತ್ವದರ್ಶಿ ಸಂತನನ್ನು ಕಳೆದುಕೊಂಡೆ. ಈಗ ಆ ದೇವರು ಸಿಗುವುದಿಲ್ಲ. ನನ್ನ ಜೀವನ ವ್ಯರ್ಥವಾಗಿ ಹೋಗುತ್ತದೆ. ಹೀಗೆ ಯೋಚಿಸುತ್ತಲೇ ಧರ್ಮದಾಸರು ಬೆಚ್ಚಿ ಬಿದ್ದರು. ಅಂದರೆ ಭಯದಿಂದ ಕಂಪಿಸಲಾರಂಭಿಸಿದರು. ಆಹಾರ ಕೂಡಾ ಕಡಿಮೆ ಸೇವಿಸಲಾರಂಭಿಸಿದರು. ದುಃಖಿಯಾದನು ಮನಸ್ಸಿನಲ್ಲೇ 'ಹೇ ಜಿಂದಾ ಮಹಾತ್ಮ! ಒಮ್ಮೆ ದರ್ಶನ ನೀಡು. ಮುಂದೆಂದೂ ಇಂಥಾ ತಪ್ಪು ಮಾಡುವುದಿಲ್ಲ. ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ. ನನ್ನಂಥಾ ಮೂರ್ಖನ, ಅಲ್ಪಮತಿಯ ಮಾತುಗಳನ್ನು ಗಣನೆಗೆ ತೆಗೆದುಕೊಳ್ಳಬೇಡ. ಇನ್ನೊಮ್ಮೆ ಸಿಗು, ನನ್ನ ತಂದೆ! ನಿನ್ನ ಜ್ಞಾನವೇ ಸತ್ಯ, ನಿನ್ನ ಒಂದೊಂದು ಮಾತು ಅಮೃತ. ದಯಮಾಡಿ ದರ್ಶನ ನೀಡು. ಇಲ್ಲದಿದ್ದರೆ ನಾನು ಹೆಚ್ಚು ದಿನ ಬದುಕಿರಲಾರೆ, ಎಂದು ಪ್ರಾರ್ಥಿಸಿದರು.

ಮೂರನೇ ದಿನ ಕಬೀರ ಪರಮೇಶ್ವರನು ಸಮುದ್ರದ ದಡದಲ್ಲಿದ್ದ ಒಂದು ಮರದ ಕೆಳಗೆ ಕುಳಿತಿದ್ದರು. ಸುತ್ತಮುತ್ತಲಿನ ಅನಾಥ ಹಸುಗಳು ಆ ಮರದ ಕೆಳಗೆ ಕುಳಿತು ಮೆಲಕು ಹಾಕುತ್ತಿದ್ದವು. ಇನ್ನೂ ಕೆಲವು ಹಸುಗಳು ಹುಲ್ಲು ಮೇಯುತ್ತಿದ್ದವು. ಧರ್ಮದಾಸನ ದೃಷ್ಟಿ ಪೀತಾಂಬರವನ್ನುಟ್ಟು ಕುಳಿತಿದ್ದ ಸಂತನ ಮೇಲೆ ಬಿತ್ತು. ಸುತ್ತಮುತ್ತಲೂ ಹಸುಗಳು ಮೇಯುತ್ತಿದ್ದವು. ಸಾಕ್ಷಾತ್ ಕೃಷ್ಣ ಪರಮಾತ್ಮನು ತನ್ನ ಲೋಕದಿಂದ ಇಳಿದು ಬಂದು ಅಲ್ಲಿ ಕುಳಿತಿರುವಂತೆ ಅವನಿಗೆ ಅನ್ನಿಸಿತು. ಧರ್ಮದಾಸನು ಉತ್ಸಾಹದಿಂದ ಆ ಸಂತನ ಬಳಿ ಹೋಗಿ ನೋಡಿದ, ಇವನ್ಯಾರೋ ಸಾಮಾನ್ಯ ಸಂತನು. ಆದರೂ ಅವನ ಪಾದ ಸ್ಪರ್ಶ ಮಾಡಿ ಮುಂದೆ ಹೋಗೋಣವೆಂದು ನಿರ್ಧರಿಸಿದನು. ಯಾವಾಗ ಧರ್ಮದಾಸನು ಅವನ ಚರಣ ಸ್ಪರ್ಶ ಮಾಡಿದನೋ, ತನ್ನ ತಲೆಯು ಅವನ ಪಾದಗಳಿಗೆ ತಾಗಿಸಿದಾಗ ಎಲ್ಲೊ ಹತ್ತಿಯನ್ನು ಸ್ಪರ್ಶಿಸಿದಂತೆ ಅವನಿಗೆ ಅನ್ನಿಸಿತು. ಪಾದಗಳನ್ನು ಒತ್ತಿ ಒತ್ತಿ ನೋಡಿದಾಗ ಪಾದಗಳಲ್ಲಿ ಎಲ್ಲಿಯೂ ಮೂಳೆಯೇ ಇರಲಿಲ್ಲ. ನಂತರ ಮುಖವನ್ನು ನೋಡಿದಾಗ ಅದೇ ಜಿಂದಾ ಮಹಾತ್ಮ ಮೊದಲಿನ ವೇಷಭೂಷಣದಲ್ಲಿ ಕುಳಿತಿದ್ದನು. ಆಗ ಧರ್ಮದಾಸನು ಅವನು ಎಲ್ಲಿಯೂ ಹೊರಟು ಹೋಗದಂತೆ ಗಟ್ಟಿಯಾಗಿ ಅವನ ಕಾಲುಗಳನ್ನು ಹಿಡಿದುಕೊಂಡನು ಮತ್ತು ತನ್ನ ತಪ್ಪನ್ನು ಮನ್ನಿಸುವಂತೆ ಕೇಳಿಕೊಂಡನು. ಹಾಗೂ ಹೀಗೆಂದು ಪ್ರಾರ್ಥಿಸಿದನು "ಹೇ ಜಿಂದಾ! ನೀವಂತೂ ತತ್ವದರ್ಶಿ ಸಂತರು, ನಾನೊಬ್ಬ ಭ್ರಮೆಗೊಳಗಾಗಿರುವ ಜಿಜ್ಞಾಸು. ಎಲ್ಲಿಯವರೆಗೆ ನನ್ನ ಸಂದೇಹಗಳಿಗೆ ಸಮಾಧಾನ ಸಿಗುವುದಿಲ್ಲವೋ, ಅಲ್ಲಿಯವರೆಗೆ ನನ್ನ ಅಜ್ಞಾನ ದೂರವಾಗುವುದಾದರೂ ಹೇಗೆ? ನೀವಂತು ತುಂಬಾ ದಯಾಳು. ಈ ದಾಸನ ಮೇಲೆ ದಯೆ ತೋರಿ. ನನ್ನ ಅಜ್ಞಾನವನ್ನು ದೂರಮಾಡಿ ಪ್ರಭು!

ಪ್ರಶ್ನೆ 37 (ಧರ್ಮದಾಸರ):- ಹೇ ಜಿಂದಾ! ಒಂದು ವೇಳೆ ಶ್ರೀ ವಿಷ್ಣು ಪೂರ್ಣ ಪರಮಾತ್ಮನಲ್ಲ ಎಂದಾದರೆ, ಪೂರ್ಣ ಪರಮಾತ್ಮ ಯಾರು? ದಯಮಾಡಿ ಗೀತೆಯಲ್ಲಿ ಪ್ರಮಾಣ ನೀಡಿ.

ಉತ್ತರ: – ಪ್ರಶ್ನೆ ಸಂಖ್ಯೆ 15ರ ಉತ್ತರವನ್ನು ನೋಡಿ. (ಜಿಂದಾ ರೂಪಧಾರಿ ಪರಮೇಶ್ವರನು ಧರ್ಮದಾಸನಿಗೆ ತಿಳಿಸಿರುವ)

ಪ್ರಶ್ನೆ 38:- 'ಶ್ರೀ ವಿಷ್ಣುವಿನ ಮತ್ತು ಶಂಕರನ ಪೂಜೆ ಮಾಡಬೇಕೇ?' ಎಂದು ಧರ್ಮದಾಸನು ಕೇಳಿದನು.

ಉತ್ತರ :- (ಜಿಂದಾ ಬಾಬಾ):- ಮಾಡಬಾರದು.

ಪ್ರಶ್ನೆ 39 (ಧರ್ಮದಾಸರ):- ದಯಮಾಡಿ ಗೀತೆಯ ಮೂಲಕ ಪ್ರಮಾಣೀಕರಿಸಿ.

ಉತ್ತರ: – ದಯಮಾಡಿ ಪ್ರಶ್ನೆ ಸಂಖ್ಯೆ 17ರ ಉತ್ತರ ಓದಿ.

ಪ್ರಭುವು ಧರ್ಮದಾಸರಿಗೆ ಹೇಳಿದರು, ಗೀತೆಯ ಶಾಸ್ತ್ರದಿಂದ ಪ್ರತ್ಯಕ್ಷ ಪ್ರಮಾಣ ನೋಡಿ ಧರ್ಮದಾಸರ ಕಣ್ಣು ತೆರೆಯಿತು. ಅಂದರೆ ಸ್ತಬ್ಧವಾಗಿ ಬಿಟ್ಟರು. ಸುಳ್ಳಂತೂ ಹೇಳುವ ಹಾಗಿಲ್ಲ, ಒಪ್ಪಿಕೊಳ್ಳಲು ಸಮಯ ಬೇಕಾಗುತ್ತದೆ.

ಜಿಂದಾ ಮಹಾತ್ಮ ರೂಪಧಾರಿ ಪರಮೇಶ್ವರನು ಧರ್ಮದಾಸನನ್ನು ಸಂಬೋಧಿಸಿ ಹೀಗೆಂದನು, 'ಹೇ ವೈಷ್ಣವ ಮಹಾತ್ಮ! ಯಾವ ಪ್ರಪಂಚಕ್ಕೆ ಹೊರಟು ಹೋಗಿರುವಿ? ಮರಳಿ ಬಾ,' ಆಗ ಧರ್ಮದಾಸರು ನಿದ್ರೆಯಿಂದ ಎದ್ದವರಂತೆ ಸಾವಧಾನವಾಗಿ ಹೀಗೆ ಹೇಳಿದರು, 'ಏನಿಲ್ಲ, ಏನಿಲ್ಲ, ದಯಮಾಡಿ ಇನ್ನೂ ಹೆಚ್ಚಿನ ಜ್ಞಾನವನ್ನು ತಿಳಿಸಿ. ಅದರಿಂದ ನನ್ನ ಭ್ರಮೆ ದೂರವಾಗಬಹುದು'. ಪರಮೇಶ್ವರ ಕಬೀರನು ಸೃಷ್ಟಿಯ ರಚನೆಯನ್ನು ಧರ್ಮದಾಸರಿಗೆ ತಿಳಿಸಿದರು. ಇದೇ ಪುಸ್ತಕದಲ್ಲಿ ಸೃಷ್ಟಿ ರಚನೆಯ ಅಧ್ಯಾಯವನ್ನು ಓದಿ.

ಸೃಷ್ಟಿಯ ರಚನೆಯನ್ನು ಕೇಳಿದ ಧರ್ಮದಾಸರಿಗೆ ತಾನು ಹುಚ್ಚನಾಗಿಬಿಡುವೆನೇನೋ ಎಂಬಂತೆ ಭಾಸವಾಯಿತು. ಏಕೆಂದರೆ ಇಲ್ಲಿಯವರೆಗೆ ಯಾವ ಜ್ಞಾನವನ್ನು ಹಿಂದೂ ಧರ್ಮಗುರುಗಳ, ಋಷಿಗಳ, ಮಹರ್ಷಿಗಳ-ಸಂತರಿಂದ ಕೇಳಿ ತಿಳಿದಿದ್ದರೋ, ಅದು ನಿರಾಧಾರ ಹಾಗೂ ಅಪ್ರಮಾಣಿತವೆನ್ನಿಸುತ್ತಿತ್ತು. ಜಿಂದಾ ಮಹಾತ್ಮ ಹಿಂದೂ ಸದ್ಗ್ರಂಥಗಳಿಂದಲೇ ಪ್ರಮಾಣಗಳನ್ನು ಕೊಡುತ್ತಿದ್ದರು. ಇದರಲ್ಲಿ ಸಂದೇಹವೇ ಇರಲಿಲ್ಲ. ನಾನು ಹುಚ್ಚನಾಗುತ್ತಿಲ್ಲವೇ ಎಂದು ಮನಸ್ಸಿನಲ್ಲೇ ಯೋಚಿಸತೊಡಗಿದನು.

ಪ್ರಶ್ನೆ 40 :- (ಧರ್ಮದಾಸರ):- ಹೇ ಜಿಂದಾ, ಹಾಗಾದರೆ ಹಿಂದೂ ಧರ್ಮದ ಗುರುಗಳಿಗೆ ಹಾಗೂ ಋಷಿಗಳಿಗೆ ಶಾಸ್ತ್ರಗಳ ಅರಿವಿಲ್ಲವೇ?

ಉತ್ತರ (ಜಿಂದಾ ಮಹಾತ್ಮರ):- ಇನ್ನೂ ಇದನ್ನು ಹೇಳುವ ಆವಶ್ಯಕತೆ ಇದೆಯೇ?

## "ಅನ್ಯ ಸಂತರ ಜೊತೆ ಧರ್ಮದಾಸರ ಜ್ಞಾನ ಸಂವಾದ"

ಪ್ರಶ್ನೆ 41:- (ಧರ್ಮದಾಸರ):- 'ಹಿಂದೂ ಧರ್ಮದ ಸಂತರಿಗೆ, ಗುರುಗಳಿಗೆ, ಮಹರ್ಷಿಗಳಿಗೆ ಸತ್ಯ, ಅಧ್ಯಾತ್ಮದ ತಿಳುವಳಿಕೆ ಇರದೆ ಇರಲು ಹೇಗೆ ಸಾಧ್ಯ?' ಎಂದು ಧರ್ಮದಾಸರು ಮನಸ್ಸಿನಲ್ಲಿಯೇ ಚಿಂತಿಸಿದರು. ಯಾರಾದರೂ ಮಹಾಮಂಡಲೇಶ್ವರರ ಬಳಿ ಕೇಳಲು ಧರ್ಮದಾಸರು ನಿರ್ಧರಿಸಿದರು. ಒಬ್ಬ ಫಕೀರನ ಬಳಿ ಏನು ಸಿಗಲು ಸಾಧ್ಯ? ಹೀಗೆಂದು ಮನಸ್ಸಿನಲ್ಲಿ ಯೋಚಿಸುತ್ತಿರುವಾಗಲೇ ಪರಮೇಶ್ವರನಾದ ಜಿಂದಾಬಾಬಾ ಧರ್ಮದಾಸನ ಮನಸ್ಸಿನಲ್ಲಿರುವ ದೋಷವನ್ನು ತಿಳಿದುಕೊಂಡು, 'ನೀವು ನಿಮ್ಮ ಮಂಡಲೇಶ್ವರರಿಂದಲೇ ಜ್ಞಾನವನ್ನು ಪಡೆದುಕೊಳ್ಳಿ' ಎಂದು ಹೇಳಿ. ಪರಮೇಶ್ವರ ಜಿಂದಾ ಮೂರನೇ ಬಾರಿ ಅಂತರ್ಧ್ಯಾನರಾದರು. ಧರ್ಮದಾಸರು ನಿಂತಲ್ಲೇ ನಿಂತು ಬಿಟ್ಟರು. ಹಾಗೂ ತನ್ನ ಮನಸ್ಸಿನಲ್ಲಿದ್ದ

ದೋಷವನ್ನು ಜಿಂದಾ ಮಹಾತ್ಮನ ಮುಖಕಮಲದಿಂದ ಕೇಳಿ ನಾಚಿಕೆ ಪಟ್ಟರು. ಪ್ರಭುಗಳು ಅಂತರ್ಧ್ಯಾನರಾಗುತ್ತಿದ್ದಂತೆಯೇ ಧರ್ಮದಾಸರಿಗೆ ಬಹಳ ಚಿಂತೆಯಾಗತೊಡಗಿತು. ಆದರೆ ಮಹಾಮಂಡಲೇಶ್ವರರ ಬಳಿ ತತ್ವಜ್ಞಾನದ ಅರಿವು ಇರಬಹುದೆಂಬ ಭರವಸೆ ಧರ್ಮದಾಸರಿಗಿತ್ತು. ಜಿಂದಾ ಮಹಾತ್ಮನ (ಮುಸಲ್ಮಾನ) ಜ್ಞಾನವನ್ನು ತತ್ವಜ್ಞಾನ ಎಂದು ತಿಳಿದು ಸಾಧನೆ ಸ್ವೀಕರಿಸಿದರೆ ಧರ್ಮ ಪರಿವರ್ತನೆ ಆದ ಹಾಗೆ. ಸಮಾಜದಲ್ಲಿ ನಿಂದೆಗೆ ಒಳಗಾಗಬಹುದು. ಆದ್ದರಿಂದ ತಮ್ಮ ಹಿಂದೂ ಮಹಾತ್ಮರಿಂದ ತತ್ವಜ್ಞಾನವನ್ನು ತಿಳಿದುಕೊಂಡು ಶ್ರೇಷ್ಠವಾದ ಶಾಸ್ತ್ರಕ್ಕೆ ಅನುಕೂಲವಾದ ಭಕ್ತಿಯನ್ನು ಮಾಡುವುದೇ ಉತ್ತಮ ಎಂದು ಯೋಚಿಸಿದರು. ಈ ಬಾರಿ ಜಿಂದಾ ಮಹಾತ್ಮ ಇದ್ದಕ್ಕಿದ್ದಂತೆ ಹೊರಟು ಹೋಗಿದ್ದು ಧರ್ಮದಾಸರಿಗೆ ಏನೂ ಅನ್ನಿಸಲಿಲ್ಲ. ಏಕೆಂದರೆ ಹಿಂದೂ ಧರ್ಮವು ಎಷ್ಟು ದೊಡ್ಡ ಹಾಗೂ ಎಷ್ಟು ಪುರಾತನವಾದ ಧರ್ಮ, ಯಾರೂ ತತ್ವದರ್ಶಿ ಸಂತ ಸಿಗುವುದಿಲ್ಲವೇ? ಎಂಬ ತಪ್ಪು ತಿಳುವಳಿಕೆ ಅವರಿಗಿತ್ತು. ಧರ್ಮದಾಸರು ಒಬ್ಬ ವೈಷ್ಣವ ಮಹಾಮಂಡಲೇಶ್ವರನಾದ ಶ್ರೀ ಜ್ಞಾನಾನಂದರ ಆಶ್ರಮಕ್ಕೆ ಹೋದರು. ಆ ಸಮಯದಲ್ಲಿ ಜ್ಞಾನಾನಂದರು ಬಹಳ ಜನಪ್ರಿಯರಾಗಿದ್ದರು. ಅವರು ಕಾಶಿಯ ರಾಮಾನಂದರ ಶಿಷ್ಯರಾಗಿದ್ದರು. ಆದರೆ ಆ ಸಮಯದಲ್ಲಿ ಸ್ವಾಮಿ ರಾಮಾನಂದರು ಪರಮೇಶ್ವರ ಕಬೀರರ ಶಿಷ್ಯ/ಗುರುಗಳಾಗಿದ್ದರು. ಅವರು ತಮ್ಮ ಜ್ಞಾನವನ್ನು ಅಜ್ಞಾನವೆಂದು ತಿಳಿದಿದ್ದರು. ಸ್ವಾಮಿ ರಾಮಾನಂದರು ತಮ್ಮ ಶಿಷ್ಯರಿಗೆ, 'ತನ್ನ ಮೂಲಕ ಹೇಳಲ್ಪಟ್ಟಿರುವ ಜ್ಞಾನವು ವ್ಯರ್ಥ ಹಾಗೂ ಈ ಸಾಧನೆಯು ಶಾಸ್ತ್ರವಿರುದ್ಧವಾದದ್ದು. ನೀವೆಲ್ಲಾ ಕಬೀರ ಪರಮೇಶ್ವರರ ಬಳಿ ದೀಕ್ಷೆ ಪಡೆದುಕೊಳ್ಳಿ ಎಂದು ಹೇಳಿದ್ದರು'. ಆದರೆ ಜಾತಿಯ ಬಗ್ಗೆ ಇರುವ ಅಭಿಮಾನ, ಶಿಷ್ಯರ ಬಳಿ ಇರುವ ಅಹಂಕಾರ, ಜ್ಞಾನದ ಬದಲಾಗಿ ಇದ್ದ ಅಜ್ಞಾನ ಇವೆಲ್ಲಾ ಸತ್ಯ ಸ್ವೀಕಾರವನ್ನು ಮಾಡಲು ಬಿಡುವುದಿಲ್ಲ.

ಕಬೀರ್, ರಾಜ್ ತಜನಾ ಸಹಜ್ ಹೈ, ಸಹಜ್ ತ್ರಿಯಾ ಕಾ ನೇಹ್।
ಮಾನ್ ಬಡಾಈ ಈರ್ಷ್ಯಾ, ದುರ್ಲಭ್ ತಜನಾ ಯೇಹ್॥

ಧರ್ಮದಾಸರು ಶ್ರೀ ಜ್ಞಾನಾನಂದರ ಬಳಿ ತೆರಳಿ, 'ಸ್ವಾಮಿಗಳೇ! ವಿಷ್ಣು ಭಗವಂತನಿಗಿಂತ ಮಿಗಿಲಾದ ದೇವರಿದ್ದಾನೆಯೇ?' ಎಂದು ಕೇಳಿದರು. ಆಗ ಜ್ಞಾನಾನಂದನು ಉತ್ತರಿಸಿದನು, 'ಶ್ರೀ ವಿಷ್ಣುವು ಸ್ವತಃ ಪರಮ ಬ್ರಹ್ಮ ಪರಮಾತ್ಮನು. ಇವನಿಗಿಂತ ಮಿಗಿಲಾದ ದೇವರು ಇರಲು ಸಾಧ್ಯವೇ?' ವಿಷ್ಣು ಹಾಗೂ ಕೃಷ್ಣ ಈ ಇಬ್ಬರೂ ಒಬ್ಬರೇ. ಕೃಷ್ಣನೇ ಶ್ರೀಮದ್ಭಗವದ್ಗೀತೆಯ ಜ್ಞಾನವನ್ನು ನೀಡಿದವನು. ನಿಮಗೆ ಭ್ರಮೆಗೊಳಪಡಿಸಿದವರು ಯಾರು?' ಆಗ ಧರ್ಮದಾಸರು ಗೀತೆಯ **8**ನೇ ಅಧ್ಯಾಯದ **1**ನೇ ಶ್ಲೋಕದಲ್ಲಿ ಅರ್ಜುನನು ಕೇಳಿದ 'ತತ್ ಬ್ರಹ್ಮ ಎಂದರೆ ಏನು?' ಗೀತೆಯ **8**ನೇ ಅಧ್ಯಾಯದ **3**ನೇ ಶ್ಲೋಕದಲ್ಲಿ ಭಗವಂತನು, ಇವನು 'ಪರಮ ಅಕ್ಷರಬ್ರಹ್ಮ' ಎಂದು ಹೇಳಿದ್ದಾನೆ. ಹಾಗಾದರೆ ಇವನು ಶ್ರೀ ಕೃಷ್ಣ ಭಗವಂತನಿಗಿಂತ ಬೇರೆ ಎಂದಾಯಿತು. ಆಗ ಜ್ಞಾನಾನಂದನು "ಬಹುಶಃ ನಿನಗೆ ಕಾಶಿಯ ನೇಕಾರನ ಭ್ರಮೆ ತಲೆಗೇರಿದೆ ಎಂದಾಯಿತು, ಹೋಗು ನಿನ್ನ ಕೆಲಸ ನೋಡು. ಕೃಷ್ಣನಿಗಿಂತ ಮಿಗಿಲಾದ ಬೇರೆ ದೇವರಿಲ್ಲ" ಎಂದನು. ಆಗ ಇವನ ಬಳಿ ಜಿಂದಾ ಮಹಾತ್ಮ ಪ್ರಮಾಣ ಸಹಿತ ತಿಳಿಸಿರುವಂಥಾ ಜ್ಞಾನವಿಲ್ಲ ಎಂದು ಧರ್ಮದಾಸರಿಗೆ ತಿಳಿಯಿತು. ಧರ್ಮದಾಸರು ನಿರಾಸೆಯಿಂದ ಅಲ್ಲಿಂದ ಹೊರಟರು. ಕಾಶಿಯ ನೇಕಾರನೇ ಜಿಂದಾ ಮಹಾತ್ಮ ಎಂಬುದು ಧರ್ಮದಾಸರಿಗೆ ತಿಳಿದಿರಲಿಲ್ಲ. ನಂತರ ಧರ್ಮದಾಸರಿಗೆ ಮೋಹನಗಿರಿ ಎಂಬ ಮಹಾಮಂಡಲೇಶ್ವರರಿದ್ದಾರೆ ಎಂದು ತಿಳಿಯಿತು. ಅವರ ಬಳಿ ಹೋಗಿ ಭಗವಂತನ ಬಗ್ಗೆ ಚರ್ಚೆ ಪ್ರಾರಂಭಿಸಿದರು. ಮೊದಲು ಒಂದು ರೂಪಾಯಿಯನ್ನು ದಕ್ಷಿಣೆಯಾಗಿ ನೀಡಿದ ನಂತರ ಮೋಹನಗರಿಯು ಇವರನ್ನು ಹತ್ತಿರ ಕೂರಿಸಿಕೊಂಡರು. ನಂತರ 'ಶಿವನೇ ಸೃಷ್ಟಿಯನ್ನು ಮಾಡಿದವನು, ಇವರನ್ನು ಮೀರಿ ಬೇರೆ ಪ್ರಭುಗಳು ಈ ಪ್ರಪಂಚದಲ್ಲಿ ಇಲ್ಲ. 'ಓಂ ನಮಃ ಶಿವಾಯ' ಎಂಬ ಮಂತ್ರವನ್ನು ಜಪಿಸು' ಎಂದು ಹೇಳಿದನು. ಧರ್ಮದಾಸರು ವಂದಿಸಿ ಮುಂದೆ ನಡೆದರು. ಇವರ ಹೆಸರಂತು ಬಹಳ ಪ್ರಸಿದ್ಧ ಆದರೆ ಜ್ಞಾನ ಒಂದು ಪೈಸೆಯದೂ

ಇಲ್ಲ, ಎಂದು ಯೋಚಿಸಿದರು. ಯಾರೋ ಧರ್ಮದಾಸರ ಬಳಿಗೆ ಬಂದು 'ಒಬ್ಬ ದೊಡ್ಡ ತಪಸ್ವಿ ಇರುವನು, ಅವನು ಬಹಳ ವರ್ಷಗಳಿಂದ ನಿಂತುಕೊಂಡೇ ತಪಸ್ಸನ್ನು ಮಾಡುತ್ತಿದ್ದಾನೆ' ಎಂದು ಹೇಳಿದ. ಧರ್ಮದಾಸರು ಅಲ್ಲಿಗೆ ಹೋದರು. ಅವನು ನಾಥ ಪಂಥದವನು, ಶಿವನನ್ನು ಸಮರ್ಥ ಪರಮಾತ್ಮನೆಂದು ಹೇಳುತ್ತಿದ್ದನು. ತಪಸ್ಸನ್ನು ಮಾಡಿ ಹಠಯೋಗದಿಂದ ಪರಮಾತ್ಮನನ್ನು ಪಡೆಯಬಹುದು ಎಂದು ತಿಳಿದಿದ್ದ. ಇಷ್ಟು ಘೋರವಾದ ತಪಸ್ಸನ್ನು ಮಾಡುವುದರಿಂದ ಪರಮಾತ್ಮನು ಸಿಗುವುದಾದರೆ ಈ ಕೆಲಸ ನಮ್ಮ ಕೈ ಮೀರಿದ್ದು ಎಂದು ಧರ್ಮದಾಸರು ಯೋಚಿಸಿದರು. ನಂತರ ಅಲ್ಲಿಂದಲೂ ಮುಂದೆ ನಡೆದರು. ಕಾಶಿಯ ವಿದ್ಯಾಪೀಠದಲ್ಲಿ ಓದಿದ ಒಬ್ಬ ವಿದ್ವಾಂಸರು ಬಂದಿರುವುದಾಗಿ ಧರ್ಮದಾಸರಿಗೆ ತಿಳಿಯಿತು. ವೇದಗಳ ಪೂರ್ಣ ವಿದ್ವಾಂಸ ಎಂದು ತಿಳಿಯಿತು. ಧರ್ಮದಾಸರು ಆ ಮಹಾತ್ಮ ಬಳಿ ಹೋಗಿ ಪರಮಾತ್ಮ ಹೇಗಿದ್ದಾನೆ ಎಂದು ಕೇಳಿದರು. ನಿರಾಕಾರನು ಎಂಬ ಉತ್ತರ ಸಿಕ್ಕಿತು. ಆ ನಿರಾಕಾರ ಪರಮಾತ್ಮನಿಗೆ ಯಾವುದಾದರೂ ಹೆಸರಿದೆಯೇ? ಎಂದು ಧರ್ಮದಾಸರು ಕೇಳಿದರು. ಆ ವಿದ್ವಾಂಸರ ಉತ್ತರ ಹೀಗಿತ್ತು. "ಅವನ ಹೆಸರು ಬ್ರಹ್ಮ", "ಪರಮಾತ್ಮನನ್ನು ನೋಡಲು ಸಾಧ್ಯವೇ?" ಎಂದು ಧರ್ಮದಾಸರು ಕೇಳಿದಾಗ "ಪರಮಾತ್ಮನು ನಿರಾಕಾರ, ಅವನನ್ನು ನೋಡಲು ಹೇಗೆ ಸಾಧ್ಯ? ಕೇವಲ ಪರಮಾತ್ಮನ ಬೆಳಕನ್ನು ಮಾತ್ರ ನೋಡಬಹುದು" ಎಂದು ಹೇಳಿದನು. ಶ್ರೀ ಕೃಷ್ಣ ಹಾಗು ವಿಷ್ಣು ಪರಮಾತ್ಮರೇ ಎಂದು ಪ್ರಶ್ನಿಸಿದಾಗ, ಅವರು ಸಾಕಾರ ದೇವರು, ಪರಮಾತ್ಮನು ನಿರಾಕಾರನು ಎಂಬ ಉತ್ತರ ಸಿಕ್ಕಿತು.

ಗೀತೆ ಹಾಗು ವೇದಗಳ ಜ್ಞಾನದಲ್ಲಿರುವ ಅಂತರವೇನು ಎಂದು ಧರ್ಮದಾಸರು ಪ್ರಶ್ನಿಸಿದರು. ಬ್ರಾಹ್ಮಣನು ಈ ರೀತಿ ಉತ್ತರಿಸಿದನು, 'ನಾಲ್ಕೂ ವೇದಗಳ ಸಾರವೇ ಗೀತೆ', ಭಕ್ತಿಮಂತ್ರ ಯಾವುದು ಎಂದು ಧರ್ಮದಾಸರು ಕೇಳಿದರು. ಬ್ರಾಹ್ಮಣನು ಗಾಯತ್ರಿ ಮಂತ್ರದ ಜಪವನ್ನು ಮಾಡು ಎಂದು ಹೇಳಿದನು. "ಓಂ ಭೂರ್ಭವಸ್ವಃ ತತ್ ಸವಿತುಃ ವರೇಣಿಯಮ್ ಭೃಗೋದೇವಸ್ಯ ಧೀಮಹಿ ಧೀಯೋ ಯೋ ನಃ ಪ್ರಚೋದಯಾತ್". ಈ ಮಂತ್ರದಿಂದ ಮೋಕ್ಷವು ಸಾಧ್ಯವಿಲ್ಲವೆಂದು ಜಿಂದಾ ಮಹಾತ್ಮ ಧರ್ಮದಾಸರಿಗೆ ಹೇಳಿದ್ದರು. ಧರ್ಮದಾಸರು ಮುಂದೆ ಹೋಗುತ್ತಿರುವಾಗ ಸಂತನು ಗುಹೆಯಲ್ಲಿ ಇದ್ದಾನೆ ಎನ್ನುವುದು ತಿಳಿಯಿತು. ಹಲವಾರು ದಿನಗಳವರೆಗೆ ಅವನು ಗುಹೆಯಿಂದ ಹೊರ ಬರುವುದಿಲ್ಲ. ಆಗ ಅವನು ಸಂತನ ಬಳಿಯೇ ಹೋಗಿ ದೇವರು ಹೇಗೆ ಸಿಗುತ್ತಾನೆ ಎಂದು ಪ್ರಶ್ನಿಸಿದನು. ಆಗ 'ಇಂದ್ರಿಯಗಳನ್ನು ನಿಯಂತ್ರಿಸು, ಆಗ ಪರಮಾತ್ಮನು ಸಿಗುತ್ತಾನೆ' ಎಂದು ಉತ್ತರ ಸಿಕ್ಕಿತು. ನಾಮಜಪದಿಂದ ಏನೂ ಪ್ರಯೋಜನವಿಲ್ಲ. ಸಕ್ಕರೆ ಎಂದು ಹೇಳಿದರೆ ಬಾಯಿ ಸಿಹಿಯಾಗುವುದಿಲ್ಲ ಎನ್ನುವ ಉತ್ತರ ಸಿಕ್ಕಿತು. ಧರ್ಮದಾಸನಿಗೆ ಇದರಿಂದ ಸಂತೋಷವಾಗಲಿಲ್ಲ. ಎಲ್ಲಾ ಸಂತರ ಬಳಿ ಜ್ಞಾನಚರ್ಚೆ ಮಾಡಿದ ನಂತರ ಅವರಿಗೆ ಪಶ್ಚಾತ್ತಾಪವಾಗತೊಡಗಿತು. ಯಾವುದೇ ಸಂತ ಮಹಾಮಂಡಲೇಶ್ವರನ ಬಳಿ ನಿಜವಾದ ಅಧ್ಯಾತ್ಮ ಜ್ಞಾನವಿಲ್ಲವೆಂದು ಹೇಳಿದ ಆ ಜಿಂದಾ ಮಹಾತ್ಮನನ್ನು ನಾನು ನಂಬಲಿಲ್ಲವಲ್ಲಾ ಎಂದು ಯೋಚಿಸಿದರು. ಯಾವುದೇ ಸಂತ, ಮಹಾತ್ಮನ ಜ್ಞಾನವೂ ಶಾಸ್ತ್ರ ಸಮ್ಮತವಾಗಿ ಪ್ರಮಾಣಿತವಾಗಿಲ್ಲ. ಯಾವುದೇ ಶಾಸ್ತ್ರದ ಪ್ರಮಾಣಗಳಿಲ್ಲ ಎಂದು ಯೋಚಿಸಿದ ಧರ್ಮದಾಸರು ಅಳಲಾರಂಭಿಸಿದರು. ನಾನೆಂಥಾ ಮೂರ್ಖ ಎಂದು ಪಶ್ಚಾತ್ತಾಪ ಪಡಲಾರಂಭಿಸಿದರು. ನಾನು ದುರಾದೃಷ್ಟವಂತ. ಪರಮಾತ್ಮನ ಸ್ವರೂಪನಾದ ಜಿಂದಾ ಮಹಾತ್ಮನ ಮೇಲೆ ವಿಶ್ವಾಸವಾಗಲಿಲ್ಲ. ಈಗ ಆ ಅಂತರ್ಯಾಮಿ ನನಗೆ ಸಿಗುವುದಿಲ್ಲ. ಏಕೆಂದರೆ ನಾನು ಅನೇಕ ಸಲ ಅವನನ್ನು ಅವಮಾನಿಸಿರುವೆ, ಈಗೇನು ಮಾಡಲಿ? ಬದುಕಲು ಮನಸ್ಸಾಗುತ್ತಿಲ್ಲ, ಆದರೆ ಆತ್ಮಹತ್ಯೆ ಮಹಾಪಾಪ." ಎಂದು ಯೋಚಿಸುತ್ತಾ ಗಳಗಳನೆ ಅಳತೊಡಗಿದರು. ಬಹಳ ನೊಂದು, ಮೂರ್ಛೆ ಹೋದರು.

ಉತ್ತರ:– ಪರಮಾತ್ಮ ಜಿಂದಾ ಮಹಾತ್ಮನ ರೂಪದಲ್ಲಿ ಒಂದು ಮರದ ಕೆಳಗೆ ಕುಳಿತನು. ಧರ್ಮದಾಸರಿಗೆ ಎಚ್ಚರವಾಯಿತು. ಹೃದಯಪೂರ್ವಕವಾಗಿ ಭಗವಂತನನ್ನು ಕರೆಯುತ್ತಾ

ಹೀಗೆಂದರು, "ಹೇ ಜಿಂದಾ, ಒಮ್ಮೆ ದರ್ಶನ ನೀಡಿ, ನಾನು ಸೋತು ಹೋಗಿದ್ದೇನೆ. ಯಾರ ಬಳಿಯೂ ಜ್ಞಾನವೆಂಬುದು ಇಲ್ಲ. ನಿಮ್ಮ ಎಲ್ಲಾ ಮಾತೂ ಸತ್ಯ, ಹೇ ಪರಮಾತ್ಮ, ಒಂದು ಬಾರಿ ನನ್ನಂಥಾ ಅಜ್ಞಾನಿ, ಮಹಾಮೂರ್ಖನನ್ನು ಕ್ಷಮಿಸು ಪರಮಾತ್ಮ. ನೀವು ಜಿಂದಾ ಅಲ್ಲ ನೀವು ಪರಮಾತ್ಮ. ನೀವೇ ಮಹಾ ವಿದ್ವಾಂಸರು. ನಿಮ್ಮ ಜ್ಞಾನಕ್ಕೆ ಸಮಾನರಾದವರು ಯಾರೂ ಇಲ್ಲ. ಇನ್ನು ಜೀವನಪರ್ಯಂತ ನಿಮ್ಮ ಮೇಲೆ ನಾನು ಅನುಮಾನಪಡುವುದಿಲ್ಲ". ಹೀಗೆ ಯೋಚಿಸುತ್ತಾ ಮುಂದೆ ನಡೆದರು. ಆಗ ಒಂದು ಮರದ ಕೆಳಗೆ ಒಬ್ಬ ಸಾಧು ಕುಳಿತಿದ್ದನು. ಅವನ ಬಳಿ ಕೆಲ ವ್ಯಕ್ತಿಗಳು ಕುಳಿತಿದ್ದರು. ನಾನಂತು ಆ ಮಹಾಮಂಡಲೇಶ್ವರರನ್ನು ಭೇಟಿಯಾಗಿ ಬಂದಿದ್ದೇನೆ. ಅವರ ಬಳಿ ಸಾವಿರಾರು ಭಕ್ತರು ದರ್ಶನಾರ್ಥವಾಗಿ ಕುಳಿತಿರುತ್ತಾರೆ. ಈ ಪುಟ್ಟ ಸಾಧುವಿನಿಂದ ಏನು ಸಿಗುವುದು? ಎಂದು ಯೋಚಿಸಿದರು. ಆದರೂ ಸ್ವಲ್ಪ ವಿಶ್ರಾಂತಿಯಂತೂ ಪಡೆಯಬೇಕು. ಇಲ್ಲೇ ಪಡೆಯೋಣ ಎಂದು ಯೋಚಿಸಿದರು. ನಂತರ ಅವನನ್ನು ಹೀಗೆಂದು ಪ್ರಶ್ನಿಸಿದರು. 'ಹೇ ಮಹಾತ್ಮ, ಪರಮಾತ್ಮನು ಹೇಗಿದ್ದಾನೆ?' ಆಗ ಸಾಧುವು, 'ನಾನೇ ಪರಮಾತ್ಮ' ಎಂದು ಹೇಳಿದನು, ಧರ್ಮದಾಸರು, ಇವನ್ಯಾರೋ ತಮಾಷೆ ಮಾಡುತ್ತಿದ್ದಾನೆ, ಇವನು ಸಂತನೂ ಅಲ್ಲ, ಎಂದು ಯೋಚಿಸಿದನು. ಸ್ವಲ್ಪ ಹೊತ್ತಿನ ಬಳಿಕ ಎಲ್ಲಾ ಜನರೂ ಹೊರಟು ಹೋದರು. ಧರ್ಮದಾಸರು ಹೊರಡಲು ಅನುವಾದರು. ಆಗ ಪರಮಾತ್ಮನು, 'ಹೇ ಮಹಾತ್ಮ! ಪರಮಾತ್ಮನು ಹೇಗಿದ್ದಾನೆಂದು ನಿಮ್ಮ ಮಂಡಲೇಶ್ವರರು ಹೇಳಲಿಲ್ಲವೇ?' ಎಂದು ಕೇಳಿದನು. ಆಗ ನಾನು ಅಲೆದಾಡುತ್ತಿರುವುದು ಈ ಸಂತನಿಗೆ ಹೇಗೆ ತಿಳಿಯಿತು ಎಂದು ಧರ್ಮದಾಸರಿಗೆ ಆಶ್ಚರ್ಯವಾಯಿತು. ಆ ಕ್ಷಣವೇ ಪರಮಾತ್ಮ ಅದೇ ಜಿಂದಾ ಮಹಾತ್ಮನ ರೂಪ ತಾಳಿದರು. ಆಗ ಧರ್ಮದಾಸರು ಅವರ ಪಾದಗಳ ಮೇಲೆ ಬಿದ್ದು ಬಿಕ್ಕಿ ಬಿಕ್ಕಿ ಅಳತೊಡಗಿದರು. ನಂತರ ಹೀಗೆಂದರು, "ಹೇ ಪರಮಾತ್ಮ, ಯಾರ ಬಳಿಯೂ ಜ್ಞಾನವಿಲ್ಲ. ನನ್ನಂಥಾ ಪಾಪಿ ಮೂರ್ಖನನ್ನು ಕ್ಷಮಿಸು ತಂದೆ! ನಾನು ದೊಡ್ಡ ತಪ್ಪು ಮಾಡಿರುವೆ. ನೀವು ಸೃಷ್ಟಿ ರಚನೆಯ ಜ್ಞಾನ ಏನು ಹೇಳಿರುವಿರಿ, ಅದರ ಮುಂದೆ ಎಲ್ಲಾ ಸಂತರ ಜ್ಞಾನವು ಸೂರ್ಯನ ಮುಂದೆ ದೀಪವಿದ್ದಂತೆ. ಎಲ್ಲರೂ ಬಾಯಿಗೆ ಬಂದಂತೆ ಹೇಳುತ್ತಾರೆ." ಪರಮೇಶ್ವರನು ಧರ್ಮದಾಸನನ್ನು ಕುರಿತು ಹೀಗೆಂದನು, "ನೀವು ವೇದಗಳ ವಿದ್ವಾಂಸರ ಬಳಿ ಹೋಗಿ ಪರಮಾತ್ಮನು ಹೇಗಿದ್ದಾನೆ ಎಂದು ಪ್ರಶ್ನಿಸಿದಾಗ ನಿಮಗೆ ಅವರಿಂದ ಪರಮಾತ್ಮನು ನಿರಾಕಾರನು ಎಂಬ ಉತ್ತರ ಸಿಕ್ಕಿತ್ತು. ಪರಮಾತ್ಮನನ್ನು ನೋಡಬಹುದೇ ಎಂದು ನೀವು ಪ್ರಶ್ನಿಸಿದಾಗ ಆ ಅಜ್ಞಾನಿಗಳು, ಅವನು ನಿರಾಕಾರನಾಗಿದ್ದರಿಂದ ಅವನನ್ನು ನೋಡುವ ಪ್ರಶ್ನೆಯೇ ಇಲ್ಲ. ಕೇವಲ ಪರಮಾತ್ಮನ ಪ್ರಕಾಶವನ್ನು ನೋಡಬಹುದು ಎಂದು ಹೇಳಿದರು."

❖ ಯೋಚಿಸು ಧರ್ಮದಾಸ! ಈ ವಿಚಾರಗಳು ಎಂಥ ವ್ಯಕ್ತಿಗಳದ್ದು ಅಂದರೆ ಒಬ್ಬ ಕುರುಡನನ್ನು ಸೂರ್ಯ ಹೇಗಿದ್ದಾನೆ ಎಂದು ಕೇಳಿದಾಗ? ಆಗ ಸೂರ್ಯನು ನಿರಾಕಾರ ಎಂದು ಉತ್ತರಿಸಿದ. ಸೂರ್ಯನನ್ನು ನೋಡಬಹುದೇ ಎನ್ನುವ ಪ್ರಶ್ನೆಗೆ, ಸೂರ್ಯನನ್ನು ನೋಡಲಾಗುವುದಿಲ್ಲ, ಕೇವಲ ಅವನ ಪ್ರಕಾಶವನ್ನು ನೋಡಬಹುದು ಎಂದು ಉತ್ತರಿಸಿದ. ಸೂರ್ಯನಿಲ್ಲದೇ ಯಾರ ನೋಡಲು ಸಾಧ್ಯ? ಎಂದು ಆ ಕುರುಡನನ್ನು ಕೇಳಿದಂತೆ. ಇದೇ ರೀತಿ ಅಧ್ಯಾತ್ಮ ಜ್ಞಾನಹೀನ ಅರ್ಥಾತ್ ಪೂರ್ಣ ಅಜ್ಞಾನಿಯಾದ ಸಂತನು ಇಂತಹುದ್ದೇ ಮಾತನ್ನು ಹೇಳುತ್ತಾರೆ, ಅಂದರೆ ಪರಮಾತ್ಮನು ನಿರಾಕಾರನು ಅವನ ಪ್ರಕಾಶವನ್ನು ಹೇಗೆ ನೋಡಲು ಸಾಧ್ಯ? ಪರಮಾತ್ಮನದೇ ಪ್ರಕಾಶ ಇರುವುದಲ್ಲವೇ". ಆಗ ಧರ್ಮದಾಸರು ಹೀಗೆಂದರು, "ಹೇ ಮಹಾತ್ಮ! ಈ ವಿಷಯ ನನ್ನ ತಲೆಗೆ ಹೊಳೆಯಲೇ ಇಲ್ಲ, ನಿಮ್ಮ ದಿವ್ಯ ತರ್ಕದಿಂದ ನನ್ನ ಕಣ್ಣು ತೆರೆಯಿತು, ನನಗೆ ಸಿಕ್ಕ ಮಹಾಮಂಡಲೇಶ್ವರರು ತುಂಬಾ ಅಜ್ಞಾನಿಗಳು. ಹೇ ಜಿಂದಾ ಮಹಾತ್ಮರೇ! ಹಾಗೊಂದು ವೇಳೆ ನಾನು ನಿಮ್ಮ ಜ್ಞಾನವನ್ನು ಕೇಳಿದ ನಂತರ ಈ ಮೂರ್ಖರ ಭೇಟಿ ಆಗಿರದಿದ್ದರೆ ನೀವು ಎಷ್ಟು ಪ್ರಮಾಣಗಳನ್ನು ಹೇಳಿದರು ಹಾಗು ತೋರಿಸಿದರು ಸಹ ನನ್ನ ಭ್ರಮೆಯ ನಿವಾರಣೆಯಾಗುತ್ತಿರಲಿಲ್ಲ.

ಪ್ರಶ್ನೆ 42 (ಧರ್ಮದಾಸ):– ಹೇ ಜಿಂದಾ ಮಹಾತ್ಮ, ನೀವು ಸಿಟ್ಟಾಗಬೇಡಿ. ನನ್ನ ಮನಸ್ಸಿನಲ್ಲಿ ಒಂದು ಸಂದೇಹವಿದೆ. ಭಗವಂತ ವಿಷ್ಣುವಿನ ಭಕ್ತಿ ಒಳ್ಳೆಯದಲ್ಲವೇ?

ಉತ್ತರ (ಜಿಂದಾ ಮಹಾತ್ಮನ):– ಹೇ ಧರ್ಮದಾಸ! ಶ್ರೀಮದ್ಭಗವದ್ಗೀತೆಯ 2ನೇ ಅಧ್ಯಾಯದ 46ನೇ ಶ್ಲೋಕದಲ್ಲಿ ಒಂದು ಪ್ರಮಾಣವಿದೆ. ಗೀತೆಯನ್ನು ಜ್ಞಾನದಾತನು ಹೀಗೆಂದಿದ್ದಾನೆ, 'ಅರ್ಜುನ! ಬಹಳ ದೊಡ್ಡ ಜಲಾಶಯ (ನದಿ)ವನ್ನು ಪಡೆದ ನಂತರ ಒಬ್ಬ ಮನುಷ್ಯನಿಗೆ ಚಿಕ್ಕ ಜಲಾಶಯದಿಂದ ಏನು ಪ್ರಯೋಜನ? ಅದೇ ರೀತಿ ಪೂರ್ಣ ಜ್ಞಾನ ಮತ್ತು ಪೂರ್ಣ ಪರಮಾತ್ಮನ ಆರಾಧನೆಯ ವಿಧಾನ ಮತ್ತು ಅದರಿಂದಾಗುವ ಲಾಭದ ಜ್ಞಾನವನ್ನು ಪಡೆದ ನಂತರ ಅನ್ಯ ಜ್ಞಾನ ಮತ್ತು ಚಿಕ್ಕ ಪುಟ್ಟ ದೇವತೆಗಳಲ್ಲಿ ಎಷ್ಟು ಶ್ರದ್ಧೆ ಉಳಿಯುವುದೆಂದರೆ. ದೊಡ್ಡ ಜಲಾಶಯದ ಪ್ರಾಪ್ತಿಯ ಬಳಿಕ ಚಿಕ್ಕ ಜಲಾಶಯದಲ್ಲಿ ಶ್ರದ್ಧೆ ಉಳಿದಷ್ಟು. ಚಿಕ್ಕ ಜಲಾಶಯದ ನೀರು ಚೆನ್ನಾಗಿದ್ದರೂ ಸಹ ಸಾಕಾಗುವುದಿಲ್ಲ. ಒಂದು ವೇಳೆ ಒಂದು ವರ್ಷ ಮಳೆ ಬರದಿದ್ದರೆ ಚಿಕ್ಕ ಜಲಾಶಯದ ನೀರು ಬತ್ತಿ ಹೋಗುತ್ತದೆ ಹಾಗೂ ಅದನ್ನು ಆಶ್ರಯಿಸಿಕೊಂಡಿರುವ ಜನರೂ ಸಹ ನೀರಿನ ಅಭಾವದಿಂದ ಕಷ್ಟಪಡಲಾರಂಭಿಸುತ್ತಾರೆ. ಅಲ್ಲಿ ಹಾಹಾಕಾರವೇಳುತ್ತದೆ. ಆದರೆ ದೊಡ್ಡ ಜಲಾಶಯದ ನೀರು 10 ವರ್ಷಗಳು ಮಳೆ ಬರದಿದ್ದರೂ ಬತ್ತಿ ಹೋಗುವುದಿಲ್ಲ. ಯಾವ ವ್ಯಕ್ತಿಗೆ ದೊಡ್ಡ ಜಲಾಶಯ ಸಿಗುವುದೋ, ಅವನು ಚಿಕ್ಕ ಜಲಾಶಯವನ್ನು ಬಿಟ್ಟು ದೊಡ್ಡ ಜಲಾಶಯದ ತೀರಕ್ಕೆ ಬಂದು ವಾಸಿಸತೊಡಗುತ್ತಾನೆ. ಯಾವಾಗ ಗೀತೆಯ ಜ್ಞಾನವನ್ನು ಹೇಳಲಾಯಿತೋ, ಆಗ ಎಲ್ಲಾ ಜನರು ಕೆರೆಯ ನೀರಿನ ಮೇಲೆ ಅವಲಂಬಿತರಾಗಿದ್ದರು. ಆದ್ದರಿಂದ ಈ ಉದಾಹರಣೆ ಕೊಡಲಾಗಿತ್ತು. ಇದೇ ರೀತಿ ವಿಷ್ಣುವಿನ ಭಕ್ತಿಯನ್ನು ನೀವು ಒಳ್ಳೆಯದೆಂದು ಭಾವಿಸಿದ್ದೀರಿ. ಆದರೆ ಅದು ಪೂರ್ಣ ಮೋಕ್ಷದಾಯಕವಲ್ಲ. ವಿಷ್ಣುವೂ ಸಹ ನಾಶಹೊಂದುವವನು. ಅವನದೂ ಜನನ–ಮರಣ ವಾಗುತ್ತದೆ. ಹಾಗಾದಾರೆ ಸಾಧಕನು ಅಮರ ಹೇಗಾಗುತ್ತಾನೆ? ಆದ್ದರಿಂದ ಪೂರ್ಣ ಮೋಕ್ಷ ಎಂದರೆ ಅಮರನಾಗಬೇಕಾದರೆ ಅಮರ ಪರಮಾತ್ಮನದೇ ಭಕ್ತಿ ಮಾಡಬೇಕು.

ಪ್ರಶ್ನೆ 43:– ಹೇ ಜಿಂದಾ ಮಹಾತ್ಮರೇ! ನಾನು ನಿಮ್ಮ ಮೇಲೆ ವಿಶ್ವಾಸ ಮಾಡಲಿಲ್ಲ. ನಾನೊಬ್ಬ ಮಹಾಪಾಪಿ, ನನ್ನನ್ನು ಕ್ಷಮಿಸಿ.

ಉತ್ತರ (ಜಿಂದಾ ಮಹಾತ್ಮನ):– ಹೇ ಧರ್ಮದಾಸ! ನಾನೇ ನಿನ್ನ ಮನಸ್ಸಲ್ಲಿ ಈ ರೀತಿ ಪ್ರೇರೇಪಿಸಿದ್ದು, ಒಂದು ವೇಳೆ ನೀನು ಆ ಧರ್ಮಗುರುಗಳನ್ನು ಹುಡುಕದೇ ಇದ್ದಿದ್ದರೆ, ನನ್ನ ಮಾತುಗಳನ್ನು ಎಂದಿಗೂ ನಂಬುತ್ತಿರಲಿಲ್ಲ. ಹಾಗಾಗದೆ ಇದ್ದಿದ್ದರೆ ಹಿಂದೂ ಧರ್ಮದ ಯಾವುದೇ ಮಹರ್ಷಿ, ಮಂಡಲೇಶ್ವರ ಅಥವಾ ಸಂತರಿಗೆ ತತ್ವಜ್ಞಾನವಿಲ್ಲ ಎಂಬುವುದು ಹೇಗೆ ಸಾಧ್ಯ? ಎಂಬ ವಿಚಾರವು ನಿನ್ನ ಮನಸ್ಸಿನಲ್ಲಿ ಶಾಶ್ವತವಾಗಿ ಕುಟುಕುತ್ತಿರುತ್ತಿತ್ತು. ಈಗ ನೀನು ನನ್ನ ಮಾತುಗಳನ್ನು ನಂಬುವೆ. ಯೋಚಿಸು ಧರ್ಮದಾಸ! ಗೀತೆಯ ಜ್ಞಾನದಾತ ಗೀತೆಯ 4ನೇ ಅಧ್ಯಾಯದ 32 ಮತ್ತು 34ನೇ ಶ್ಲೋಕದಲ್ಲಿ ಹೇಳುತ್ತಾನೆ, ಯಾವ ಜ್ಞಾನವನ್ನು ಪರಮ ಅಕ್ಷರಬ್ರಹ್ಮ (ಪರಮೇಶ್ವರ)ನು ತನ್ನ ಮುಖ ಕಮಲದಿಂದ ಹೇಳುತ್ತಾನೋ ಅದೇ ತತ್ವಜ್ಞಾನವಾಗಿದೆ. (ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕ) ಆ ಜ್ಞಾನವನ್ನು ನೀನು ತತ್ವದರ್ಶಿ ಸಂತರ ಬಳಿ ಹೋಗಿ ತಿಳಿದುಕೋ. (ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕ) ಇದರಿಂದ ಸ್ಪಷ್ಟವಾಯ್ತೆನೆಂದರೆ ಗೀತೆಯ ಜ್ಞಾನ ನೀಡಿದಾತ ಪರಮಾತ್ಮನಿಗೇ ತತ್ವಜ್ಞಾನ ಇಲ್ಲದಿದ್ದರೆ ಗೀತೆಯನ್ನು ಓದುವವರಿಗೆ ಹಾಗೂ ಆ ಪ್ರಭುವಿನ ಉಪಾಸಕರಿಗೆ ಹೇಗೆ ತಾನೇ ಜ್ಞಾನವಿರಲು ಸಾಧ್ಯ?

ಗೀತೆಯ 2ನೇ ಅಧ್ಯಾಯದ 53ನೇ ಶ್ಲೋಕದಲ್ಲಿ ಹೇಳಲಾಗಿರುವುದೇನೆಂದರೆ, 'ಹೇ ಅರ್ಜುನ! ಭಿನ್ನ ಭಿನ್ನ ರೀತಿಯಿಂದ ಭ್ರಮೆಗೆ ಒಳಪಡಿಸುವ ವಚನಗಳಿಂದ ದೂರವಾಗಿ ನಿನ್ನ ಬುದ್ಧಿಯು ಒಂದು ತತ್ವಜ್ಞಾನದಲ್ಲಿ ಸ್ಥಿರಗೊಳ್ಳುವುದು. ಆಗ ನೀನು ಯೋಗವನ್ನು (ಭಕ್ತಿಯನ್ನು) ಪಡೆದುಕೊಳ್ಳುವೆ. ಭಾವಾರ್ಥವೇನೆಂದರೆ, ನೀನು ಭಕ್ತನಾಗುವೆ. ಆದ್ದರಿಂದ ನಾನು ನಿನ್ನನ್ನು

ಆ ಸಂತರ–ಮಂಡಲೇಶ್ವರರ ಜೊತೆ ಹೋಗಲು ಪ್ರೇರೇಪಿಸಿದ್ದೆ'. ಧರ್ಮದಾಸ! ಈಗ ನೀನು ಯೋಗವನ್ನು ಪಡೆದುಕೊಳ್ಳುವೆ, ಭಕ್ತನಾಗಬಹುದು.

ಪ್ರಶ್ನೆ 44 (ಧರ್ಮದಾಸರ):– ಹಾಗಾದರೆ ಪೂರ್ಣ ಮೋಕ್ಷಕ್ಕಾಗಿ ವಿಷ್ಣು ಹಾಗೂ ಶಂಕರನ ಪೂಜೆಯನ್ನು ಬಿಟ್ಟುಬಿಡಬೇಕೇ?

ಉತ್ತರ(ಜಿಂದಾ ಮಹಾತ್ಮನ):– ಆ ಪ್ರಭುಗಳನ್ನು ಬಿಡಬಾರದು, ಅವರ ಪೂಜೆಯನ್ನು ಬಿಡಬೇಕು.

ಪ್ರಶ್ನೆ 45 (ಧರ್ಮದಾಸರ):– ಹೇ ಜಿಂದಾ! ನನಗೆ ತಿಳಿಯಲಿಲ್ಲ. ಈ ವಿಷ್ಣು ಹಾಗೂ ಶಂಕರರನ್ನು ಬಿಡಬಾರದು ಆದರೆ ಪೂಜೆ ಬಿಡಬೇಕು ಎಂದರೆ ಏನರ್ಥ? ನಾನು ಮಂದಮತಿ ಉಳ್ಳವನು. ಮಹಾ ಅಜ್ಞಾನಿ ನಾನು. ದಯಮಾಡಿ ವಿಸ್ತಾರದಿಂದ ಹೇಳಿ.

ಉತ್ತರ :– (ಜಿಂದಾ ಮಹಾತ್ಮರ):– ಹೇ ಧರ್ಮದಾಸ, ನೀನು ಇವರ ಸಾಧನೆಯನ್ನು ಶಾಸ್ತ್ರಕ್ಕೆ ಅನುಗುಣವಾಗಿ ಮಾಡದೆ ಮನಸ್ಸಿಗೆ ಬಂದ ಹಾಗೆ ಆಚರಣೆ ಮಾಡುತ್ತಿರುವೆ. ಇದರಿಂದ ನಿನಗೆ ಯಾವುದೇ ಲಾಭ ಸಿಗುತ್ತಿಲ್ಲ. ಈ ದೇವತೆಗಳಿಂದ ಲಾಭ ಪಡೆಯಲು ಸಾಧನೆಯ ಮಂತ್ರ ನನ್ನ ಬಳಿ ಇದೆ. ಉದಾಹರಣೆಗೆ ಕೋಣದ ಬಳಿ ಹೋಗಿ ಕೋಣ ಕೋಣ ಕರೆದರೆ ಅದು ನಿಮ್ಮನ್ನು ನೋಡುವುದಿಲ್ಲ. ಅದಕ್ಕೆ ಒಂದು ವಿಶೇಷ ಮಂತ್ರವೆಂದರೆ ಹುರ್, ಹುರ್, ಅದನ್ನು ಕೇಳಿದ ತಕ್ಷಣವೇ ಪ್ರಭಾವಿತನಾಗಿ ಶಬ್ದ ಮಾಡುವವನ ಬಳಿ ಓಡಿಹೋಗುತ್ತದೆ. ಅದೇ ರೀತಿ ಈ ಎಲ್ಲಾ ಆದರಣೀಯ ದೇವತೆಗಳಿಗೆ ನಿಜ ಮಂತ್ರವಿದೆ. ಇದರಿಂದ ಅವರು ಪೂರ್ಣ ಲಾಭ ಹಾಗೂ ತಕ್ಷಣವೇ ಲಾಭ ನೀಡುತ್ತಾರೆ. ಪ್ರಿಯ ಓದುಗರೇ, ಅದೇ ಮಂತ್ರ ನನ್ನ (ಸಂತ ರಾಮ್‌ಪಾಲ್ ದಾಸನ) ಬಳಿ ಇದೆ. ಅದನ್ನು ಪರಮೇಶ್ವರನು ಗುರುಗಳ ಮೂಲಕ ನನಗೆ ನೀಡಿದ್ದಾರೆ. ಬನ್ನಿ ಮತ್ತು ಪಡೆದುಕೊಳ್ಳಿ.

ಈ ಮೊದಲೇ ತಿಳಿಸಿರುವಂತೆ (ಪ್ರಶ್ನೆ ಸಂಖ್ಯೆ 36ರ ಉತ್ತರದಲ್ಲಿ ವರ್ಣಿಸಲಾಗಿದೆ) ಈ ಜಗತ್ತು ಒಂದು ವೃಕ್ಷವೆಂದು ತಿಳಿದುಕೊಳ್ಳಿ. ಪರಮ ಅಕ್ಷರ ಪುರುಷನು ಬೇರು ಎಂದು ತಿಳಿಯಿರಿ, ಅಕ್ಷರ ಪುರುಷನನ್ನು ಕಾಂಡವೆಂದು ತಿಳಿಯಿರಿ. ಕ್ಷರ ಪುರುಷನು ಕೊಂಬೆಯಾದರೆ ಮೂರೂ ದೇವತೆಗಳು (ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಿವ) ಈ ಪ್ರಪಂಚವೆಂಬ ವೃಕ್ಷದ ಶಾಖೆಗಳು ಹಾಗೂ ಎಲೆಗಳು ಪ್ರಪಂಚ.

ನೀವು ಎಲ್ಲಿಂದಲಾದರೂ ಮಾವಿನ ಗಿಡವನ್ನು ತಂದು, ಹೊಂಡ ತೋಡಿ, ಆ ಬೇರುಗಳನ್ನು ಆ ಹೊಂಡಯಲ್ಲಿಟ್ಟು, ಮಣ್ಣಿನಿಂದ ಮುಚ್ಚಿ, ಅದಕ್ಕೆ ನೀರು ಎರೆದರೆ ಆಗ ಆ ಗಿಡ ಮಾವಿನ ಮರವಾಗಿ ಬೆಳೆಯುವುದು. ಆ ಮರದ ಶಾಖೆಗಳಲ್ಲಿ ಹಣ್ಣು ಬಿಡುವುದು. ಆದ್ದರಿಂದ ಮರದ ಶಾಖೆಗಳನ್ನು ಮುರಿಯಬಾರದು. ಆದರೆ ಆ ಶಾಖೆಗಳನ್ನು ಹೊಂಡ ತೋಡಿ, ನೆಟ್ಟು, ಮಣ್ಣಿನಿಂದ ಮುಚ್ಚಿ, ನೀರೆರೆದರೆ ಅವು ಫಲ ನೀಡುವುದಿಲ್ಲ. ಅದೇ ರೀತಿ ಪ್ರಪಂಚವೆಂಬ ವೃಕ್ಷದ ಬೇರು ಎಂದರೆ ಪರಮ ಅಕ್ಷರ ಬ್ರಹ್ಮನನ್ನು ಇಷ್ಟ ದೈವದ ರೂಪದಲ್ಲಿ ಪ್ರತಿಷ್ಠಾಪಿಸಿ ಪೂಜೆ ಮಾಡುವುದರಿಂದ ಶಾಸ್ತ್ರಾನುಕುಲ ಸಾಧನೆಯಾಗುತ್ತದೆ. ಅದು ಪರಮ ಲಾಭ ನೀಡುವುದು. ಹೀಗೆ ಮಾಡಲ್ಪಟ್ಟ ಭಕ್ತಿ ಕರ್ಮಗಳ ಫಲವನ್ನು ಈ ಮೂರೂ ದೇವತೆಗಳೇ (ಪ್ರಪಂಚವೆಂಬ ವೃಕ್ಷದ ಶಾಖೆಗಳೇ) ಕರ್ಮಾನುಸಾರ ಪ್ರದಾನಿಸುತ್ತಾರೆ. ಆದ್ದರಿಂದ ಇವರ ಪೂಜೆ ಮಾಡುವುದನ್ನು ಬಿಡಬೇಕು. ಆದರೆ ಇವರನ್ನು ಬಿಡಬಾರದು, ಇದೇ ಪ್ರಮಾಣವು ಶ್ರೀಮದ್ಭಗವದ್ಗೀತೆಯ 3ನೇ ಅಧ್ಯಾಯದ 8ರಿಂದ 15ನೇ ಶ್ಲೋಕದ ವರೆಗೆ ಇದೆ. ಅಲ್ಲಿ ಹೇಳಿರುವುದೇನೆಂದರೆ:–

❖ ಹೇ ಅರ್ಜುನ! ನೀನು ಶಾಸ್ತ್ರವಿಹಿತ ಅರ್ಥಾತ್ ಶಾಸ್ತ್ರಗಳಲ್ಲಿ ಯಾವ ರೀತಿ ಭಕ್ತಿ ಮಾಡಲು ಹೇಳಲಾಗಿದೆ. ಅದೇ ರೀತಿ ಭಕ್ತಿ ಮಾಡು. ಒಂದು ವೇಳೆ ಮನೆ, ಮಠ ಬಿಟ್ಟು ಕಾಡಿಗೆ ಹೋದರೆ, ಅರ್ಥಾತ್ ಸನ್ಯಾಸಿಯಾದರೆ ಅಥವಾ ಒಂದೇ ಜಾಗದಲ್ಲಿ ಕುಳಿತು ಹಠಪೂರ್ವಕ ಸಾಧನೆ ಮಾಡಲು ತೊಡಗಿದರೆ ನಿನ್ನ ಶರೀರದ ಪೋಷಣೆ ಆಗುವುದಿಲ್ಲ. ಆದ್ದರಿಂದ ಕರ್ಮವನ್ನು

ಬಿಡುವುದರ ಬದಲಾಗಿ, ನಿತ್ಯ ಕರ್ಮವನ್ನು ಮಾಡುತ್ತಲೇ ಭಕ್ತಿ ಕರ್ಮವನ್ನು ಮಾಡುವುದು ಶ್ರೇಷ್ಠ. (ಗೀತೆಯ 3ನೇ ಅಧ್ಯಾಯದ 8ನೇ ಶ್ಲೋಕ).

❖ ಯಾವ ಸಾಧಕನು ಶಾಸ್ತ್ರವಿಧಿಯನ್ನು ಬಿಟ್ಟು ಮನಸ್ಸಿಗೆ ತೋಚಿದಂತೆ ಆಚರಣೆ ಮಾಡುತ್ತಾನೋ, ಅಂದರೆ ಶಾಸ್ತ್ರ ವಿಧಾನಕ್ಕೆ ಅನುಗುಣವಾಗಿ ಭಕ್ತಿ ಕರ್ಮಗಳ ಬದಲಾಗಿ ಬೇರೆ ಕರ್ಮಗಳಲ್ಲಿ ನಿರತನಾಗುತ್ತಾನೋ, ಅಂತಹ ಮನುಷ್ಯನು ಸಮುದಾಯ ಕರ್ಮಗಳ ಬಂಧನದಲ್ಲಿ ಸಿಲುಕಿ ಜನನ ಮರಣವೆಂಬ ಚಕ್ರದಲ್ಲಿ ಸದಾ ಇರುತ್ತಾನೆ. ಆದ್ದರಿಂದ ಹೇ ಕುಂತಿಪುತ್ರ ಅರ್ಜುನ! ಶಾಸ್ತ್ರವಿರುದ್ಧವಾದ ಭಕ್ತಿ ಕರ್ಮವನ್ನು ಯಾರು ಮಾಡುತ್ತಿದ್ದಾರೋ, ಅವರಿಂದ ವಿಮುಖನಾಗಿ ನೀನು ಶಾಸ್ತ್ರಕ್ಕೆ ಅನುಗುಣವಾದ ಭಕ್ತಿ ಕರ್ಮವನ್ನು ಮಾಡು. (ಗೀತೆಯ 3ನೇ ಅಧ್ಯಾಯದ 9ನೇ ಶ್ಲೋಕ)

❖ ಪ್ರಪಂಚವನ್ನು ಸೃಷ್ಟಿಸಿ ಪ್ರಜಾಪತಿಯು (ಕುಲದ ಒಡೆಯ) ಮೊಟ್ಟ ಮೊದಲನೆಯದಾಗಿ ಮನುಷ್ಯನನ್ನು ಸೃಷ್ಟಿಸಿ, ಜೊತೆಯಲ್ಲೇ ಯಜ್ಞಗಳನ್ನು ಅರ್ಥಾತ್ ಧಾರ್ಮಿಕ ಅನುಷ್ಠಾನಗಳ ಅರಿವಿನ ಜ್ಞಾನವನ್ನು ನೀಡುತ್ತಾ, ನೀವೆಲ್ಲಾ ಈ ರೀತಿಯಾಗಿ ಹೇಳಿರುವ ಶಾಸ್ತ್ರಕ್ಕೆ ಅನುಗುಣವಾಗಿರುವ ಕರ್ಮಗಳ ಮೂಲಕ ವೃದ್ಧಿಯನ್ನು ಪಡೆದುಕೊಳ್ಳಿ. ಈ ರೀತಿ ಶಾಸ್ತ್ರಾನುಸಾರವಾಗಿ ಮಾಡಿರುವಂಥಾ ಭಕ್ತಿಯು ನಿಮಗೆಲ್ಲಾ ನೀವು ಇಚ್ಛಿಸಿರುವ ಭೋಗವನ್ನು ನೀಡುವಂತಾಗಲಿ ಎಂದು ಅವರಿಗೆ ಹೇಳಿದ್ದನು. (ಗೀತೆಯ 3ನೇ ಅಧ್ಯಾಯದ 10ನೇ ಶ್ಲೋಕ).

❖ ಈ ರೀತಿ ಶಾಸ್ತ್ರಕ್ಕೆ ಅನುಗುಣವಾದ ಭಕ್ತಿಯ ಮೂಲಕ ಅರ್ಥಾತ್ ಪ್ರಪಂಚವೆಂಬ ವೃಕ್ಷದ ಬೇರುಗಳಿಗೆ (ಅಂದರೆ ಪರಮ ಅಕ್ಷರ ಬ್ರಹ್ಮ) ನೀರೆರೆದರೆ ಅರ್ಥಾತ್ ಪೂಜೆ ಮಾಡಿ. ದೇವತೆಗಳ ಅರ್ಥಾತ್ ಪ್ರಪಂಚವೆಂಬ ವೃಕ್ಷದ ಮೂರೂ ಗುಣಗಳೆಂಬ ಶಾಖೆಗಳನ್ನು (ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು, ತಮೋಗುಣ ಶಿವ) ಪೋಷಿಸಿ. ಆ ದೇವತೆಗಳು (ಪ್ರಪಂಚವೆಂಬ ವೃಕ್ಷದ ಮೂರು ಶಾಖೆಗಳು) ನಿಮಗೆ ಕರ್ಮಾನುಸಾರ ಫಲವನ್ನು ನೀಡಿ ಉದ್ಧಾರ ಮಾಡುವರು. ಈ ರೀತಿ ಒಬ್ಬರು ಇನ್ನೊಬ್ಬರ ಮೂಲಕ ತೃಪ್ತಿಪಟ್ಟು. ಪರಮ ಕಲ್ಯಾಣ ಅಂದರೆ ಪೂರ್ಣ ಮೋಕ್ಷವನ್ನು ಪಡೆದುಕೊಳ್ಳುವೆ. (ಗೀತೆಯ 3ನೇ ಅಧ್ಯಾಯದ 11ನೇ ಶ್ಲೋಕ).

❖ ಶಾಸ್ತ್ರಕ್ಕೆ ಅನುಗಣವಾಗಿ ಮಾಡಿದ ಭಕ್ತಿ ಕರ್ಮಗಳ ಅರ್ಥಾತ್ ಯಜ್ಞಗಳ ಮೂಲಕ ವೃದ್ಧಿಸಿದ ದೇವತೆಗಳು ಅರ್ಥಾತ್ ಪ್ರಪಂಚವೆಂಬ ವೃಕ್ಷದ ಬೇರಿನ ಅರ್ಥಾತ್ ಮೂಲ ಒಡೆಯ (ಪರಮ ಅಕ್ಷರ ಬ್ರಹ್ಮ) ನನ್ನು ಇಷ್ಟರೂಪದಲ್ಲಿ ಪ್ರತಿಷ್ಠಾಪನೆ ಮಾಡಿಕೊಂಡು ಭಕ್ತಿ ಕರ್ಮದಿಂದ ವೃದ್ಧಿಯಾದ, ಮರದ ಶಾಖೆಗಳು (ಮೂರೂ ದೇವತೆಗಳು) ನೀವೆಲ್ಲಾ ಬೇಡದಿದ್ದರೂ ಕರ್ಮಾನುಸಾರವಾದ ಇಚ್ಛಿತ ಭೋಗವನ್ನು ನಿಶ್ಚಯವಾಗಿಯೂ ನೀಡುತ್ತಿರುವವು. ಹೇಗೆ ಮಾವಿನ ಮರದ ಬೇರಿಗೆ ನೀರನ್ನು ಎರೆದರೆ ಆ ಮರದ ಶಾಖೆಗಳು ಬಲಿಷ್ಠವಾಗಿ ತಮ್ಮಷ್ಟಕ್ಕೆ ತಾವೇ ಹಣ್ಣು ನೀಡಲಾರಂಭಿಸುತ್ತವೆ, ಹಾಗೇ ಮನುಷ್ಯನಿಗೂ ಅಷ್ಟೇ. ಅವನಿಗೆ ಅವನ ಕರ್ಮಾನುಸಾರ ಧನ ಪ್ರಾಪ್ತಿಯಾಗುತ್ತದೆ. ಅದೂ ಸಹ ಮೇಲೆ ತಿಳಿಸಿರುವ ವಿಧಾನದಿಂದ ಸಿಗುತ್ತದೆ. ಒಂದು ವೇಳೆ ಯಾರಾದರೂ ಆ ದೇವತೆಗಳ ಮೂಲಕ ಕೊಟ್ಟ ಧನವನ್ನು ಪುನಃ ದಾನಧರ್ಮದಲ್ಲಿ ತೊಡಗಿಸದಿದ್ದರೆ ಅಂದರೆ ಪುನಃ ಶಾಸ್ತ್ರಾನುಸಾರ ಸಾಧನೆ ಮಾಡದಿದ್ದರೆ, ಬದಲಾಗಿ ಕೇವಲ ತನ್ನ ಹೊಟ್ಟೆ ತುಂಬಿಸಿಕೊಂಡರೆ, ಸ್ವತಃ ತಾನೇ ಅನುಭವಿಸಿದರೆ, ಅವನೊಬ್ಬ ಪರಮಾತ್ಮನ ಕಳ್ಳ. (ಗೀತೆಯ 3ನೇ ಅಧ್ಯಾಯದ 12ನೇ ಶ್ಲೋಕ).

❖ ಶಾಸ್ತ್ರಾನುಸಾರವಾದ ಭಕ್ತಿಯ ವಿಧಾನದಲ್ಲಿ ಮೊಟ್ಟಮೊದಲಿಗೆ ಪರಮಾತ್ಮನಿಗೆ ನೈವೇದ್ಯ ಅರ್ಪಿಸಬೇಕು. ದಾಸೋಹ ಮಾಡಬೇಕು. ಮೊದಲಿಗೆ ಪರಮ ಅಕ್ಷರ ಬ್ರಹ್ಮನನ್ನು ಇಷ್ಟರೂಪದಲ್ಲಿ ಪೂಜಿಸಿ, ನೈವೇದ್ಯ ಅರ್ಪಿಸಿ, ಉಳಿದ ಭೋಜನವನ್ನು ಭಕ್ತರಿಗೆ ಹಂಚಲಾಗುತ್ತದೆ. ಆ ಉಳಿದ ಅನ್ನವನ್ನು ಸತ್ಸಂಗದಲ್ಲಿ ಉಪಸ್ಥಿತರಿರುವ ಒಳ್ಳೆಯ ಆತ್ಮಗಳು ತಿನ್ನುತ್ತವೆ. ಏಕೆಂದರೆ ಪುಣ್ಯಾತ್ಮಗಳು ಪರಮಾತ್ಮನಿಗಾಗಿ ಬಿಡುವು ಮಾಡಿಕೊಂಡು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತವೆ.

ಆದ್ದರಿಂದ ಆ ಯಜ್ಞದಲ್ಲಿ ಉಳಿದಿರುವ ಅನ್ನವನ್ನು ತಿನ್ನುವ ಸಂತರು ಎಲ್ಲಾ ಪಾಪಗಳಿಂದ ಮುಕ್ತರಾಗುತ್ತಾರೆ. ಯಾರು ಪಾಪಿಗಳೋ ಅವರು ತತ್ವದರ್ಶಿ ಸಂತರ ಸತ್ಸಂಗಕ್ಕೆ ಹೋಗುವುದಿಲ್ಲ. ಅವರಿಗೆ ಜ್ಞಾನವಿರುವುದಿಲ್ಲ. ಈ ಪಾಪಿಗಳು ತಮ್ಮ ಶರೀರವನ್ನು ಪೋಷಿಸಿಕೊಳ್ಳಲು ಮಾತ್ರ ಅಡುಗೆ ಮಾಡುತ್ತಾರೆ, ಅವರು ಪಾಪವನ್ನೇ ತಿನ್ನುತ್ತಾರೆ. ಏಕೆಂದರೆ ನಾವು ಊಟ ಮಾಡುವ ಮೊದಲು ಪರಮ ಅಕ್ಷರ ಬ್ರಹ್ಮನಿಗೆ ನೈವೇದ್ಯವನ್ನು ಅರ್ಪಿಸುತ್ತೇವೆ. ಇದರಿಂದ ಇಡೀ ಆಹಾರವು ಪವಿತ್ರ ಪ್ರಸಾದವಾಗಿ ಬದಲಾಗುತ್ತದೆ. ಹಾಗೆ ಮಾಡದಿದ್ದವರು ಪರಮಾತ್ಮನಿಗೆ ಮೋಸ ಮಾಡುತ್ತಿದ್ದಾರೆಂದು ಅರ್ಥ. ಅವರು ಪರಮಾತ್ಮನ ಕಳ್ಳರು ಪರಮಾತ್ಮನಿಗೆ ನೈವೇದ್ಯವನ್ನಿಡದಿರುವ ಆಹಾರವು ಪಾಪದ ಆಹಾರವಾಗುತ್ತದೆ. ಆದ್ದರಿಂದ ಯಾರು ಶಾಸ್ತ್ರಾನುಸಾರ ಧರ್ಮ–ಕರ್ಮ ಮಾಡುವುದಿಲ್ಲವೋ, ಅವರು ಪಾಪಕ್ಕೆ ಗುರಿಯಾಗುತ್ತಾರೆ. (ಗೀತೆಯ 3ನೇ ಅಧ್ಯಾಯದ 13ನೇ ಶ್ಲೋಕ).

❖ ಎಲ್ಲಾ ಜೀವಿಗಳು ಅನ್ನದಿಂದಲೇ ಉತ್ಪನ್ನರಾಗುತ್ತಾರೆ. ಅನ್ನವು ಮಳೆಯಿಂದ ಉತ್ಪನ್ನವಾಗುತ್ತದೆ. ಮಳೆಯು ಯಜ್ಞಗಳು ಅರ್ಥಾತ್ ಶಾಸ್ತ್ರಾನುಕೂಲವಾದ ಧಾರ್ಮಿಕ ಅನುಷ್ಠಾನದಿಂದ ಆಗುತ್ತದೆ. ಯಜ್ಞಗಳು ಅರ್ಥಾತ್ ಧಾರ್ಮಿಕ ಅನುಷ್ಠಾನಗಳು ಶಾಸ್ತ್ರಬದ್ಧವಾದ ಕರ್ಮಗಳಿಂದ ಆಗುತ್ತವೆ. (ಗೀತೆಯ 3ನೇ ಅಧ್ಯಾಯದ 14ನೇ ಶ್ಲೋಕ)

❖ ಕರ್ಮವಂತೂ ಬ್ರಹ್ಮ ಅಂದರೆ ಕ್ಷರ ಪುರುಷನಿಂದ ಉತ್ಪನ್ನವಾಗಿವೆ. ಏಕೆಂದರೆ ಸಕಲ ಜೀವಿಗಳು ಸನಾತನ ಪರಮ ಧಾಮದಲ್ಲಿರುತ್ತಿದ್ದವು, ಅಲ್ಲಿ ಯಾವುದೇ ಕರ್ಮ ಮಾಡದೆ ಸುಖ ಮತ್ತು ಸೌಲಭ್ಯಗಳು ಲಭ್ಯವಿದೆ. ಇಲ್ಲಿರುವ ಎಲ್ಲಾ ಜೀವಿಗಳು ತಮ್ಮ ತಪ್ಪಿನಿಂದ ಈ ಕ್ಷರ ಪುರುಷನ ಜೊತೆ ಬಂದವು. ಈಗ ಎಲ್ಲರಿಗೂ ಕರ್ಮದ ಫಲವೇ ಪ್ರಾಪ್ತಿಯಾಗುತ್ತದೆ. ಕರ್ಮವನ್ನು ಮಾಡಿಯೇ ತೀರಬೇಕು. ಆದ್ದರಿಂದ ಕರ್ಮವು ಬ್ರಹ್ಮ (ಕ್ಷರ ಪುರುಷ)ನಿಂದ ಉತ್ಪತ್ತಿಯಾದದ್ದು ಎಂದು ತಿಳಿ. ಹಾಗೆಯೇ ಬ್ರಹ್ಮನನ್ನು ಅವಿನಾಶಿ ಪರಮಾತ್ಮನಿಂದ ಉತ್ಪತ್ತಿಯಾದದ್ದು ಎಂದು ತಿಳಿ. (ಹೆಚ್ಚಿನ ಮಾಹಿತಿಗಾಗಿ ಈ ಪುಸ್ತಕದಲ್ಲಿರುವ 'ಸೃಷ್ಟಿಯ ರಚನೆ' ಎಂಬ ಅಧ್ಯಾಯವನ್ನು ಓದಿ).

(ಟಿಪ್ಪಣಿ:– ಈ ಶ್ಲೋಕದಲ್ಲಿ 'ಅಕ್ಷರ' ಶಬ್ದದ ಅರ್ಥವು ಅವಿನಾಶಿ ಪರಮಾತ್ಮ ಅದು ಸರಿಯಾಗಿದೆ. ಆದರೆ ಎಲ್ಲಿ ಕ್ಷರ ಪುರುಷ, ಅಕ್ಷರ ಪುರುಷ ಮತ್ತು ಪರಮ ಅಕ್ಷರ ಪುರುಷನ ವರ್ಣನೆ ಇದೆಯೋ, ಅಲ್ಲಿ ಕ್ಷರ ಪುರುಷ ಮತ್ತು ಅಕ್ಷರ ಪುರುಷ ಇವರಿಬ್ಬರನ್ನೂ ನಾಶವಾಗುವವರು ಎಂದು ಹೇಳಲಾಗಿದೆ. ಅಲ್ಲಿ ಅಕ್ಷರದ ಅರ್ಥವು ಸರಿಯಾಗಿದೆ. ಗೀತೆಯ 15ನೇ ಅಧ್ಯಾಯದ 16–17ನೇ ಶ್ಲೋಕದಲ್ಲಿ ವರ್ಣನೆ ಇದೆ. ಅಲ್ಲಿರುವ 'ಅಕ್ಷರ'ದ ಅರ್ಥ ಅವಿನಾಶಿ ಪರಮಾತ್ಮ ಎಂದಿದೆ. ಏಕೆಂದರೆ ಬ್ರಹ್ಮನ ಸೃಷ್ಟಿ ಸತ್ಯ ಪುರುಷ (ಅವಿನಾಶಿ ಪರಮಾತ್ಮ)ನು ಮಾಡಿರುವನು ಎಂದು ಸೃಷ್ಟಿಯ ರಚನೆಯಲ್ಲಿ ಸ್ಪಷ್ಟವಾಗುತ್ತದೆ. ಆದ್ದರಿಂದ (ಸರ್ವಗತಮ್ ಬ್ರಹ್ಮ) ಅಂದರೆ ಯಾವ ಪರಮಾತ್ಮನ ಅಸ್ತಿತ್ವ ಎಲ್ಲಾ ಬ್ರಹ್ಮಾಂಡಗಳಲ್ಲೂ ಇದೆಯೋ, ಯಾರು ಎಲ್ಲರಿಗೂ ಒಡೆಯನೋ, ಆ ಪರಮಾತ್ಮನು ಯಾವಾಗಲೂ ಯಜ್ಞಗಳ ಅರ್ಥಾತ್ ಧಾರ್ಮಿಕ ಅನುಷ್ಠಾನಗಳಲ್ಲಿ ಪ್ರತಿಷ್ಠಿತನಾಗಿದ್ದಾನೆ ಎಂದು ಸ್ಪಷ್ಟವಾಯ್ತು. ಪರಮ ಅಕ್ಷರ ಬ್ರಹ್ಮನನ್ನು ಇಷ್ಟದೇವನ ರೂಪದಲ್ಲಿ ಪ್ರತಿಷ್ಠಾಪಿಸಿ, ಧಾರ್ಮಿಕ ಅನುಷ್ಠಾನ ಅರ್ಥಾತ್ ಯಜ್ಞಗಳನ್ನು ಮಾಡುವುದರಿಂದ, ಶಾಸ್ತ್ರ ವಿಧಾನಗಳ ಅನುಗುಣವಾಗಿ ಕರ್ಮವನ್ನು ಮಾಡುವುದರಿಂದ ಸಾಧಕನಿಗೆ ಭಕ್ತಿಯ ಲಾಭ ಸಿಗುವುದು. ಇದರಿಂದ ಮೋಕ್ಷವು ಪ್ರಾಪ್ತಿಯಾಗುವುದು. ಎನ್ನುವುದೇ ಇದರ ಭಾವಾರ್ಥ. (ಪ್ರಪಂಚವೆಂಬ ಗಿಡದ ಚಿತ್ರವನ್ನು ಈ ಪುಸ್ತಕದ 82ನೇ ಪುಟದಲ್ಲಿ ನೋಡಿರಿ.)

81ನೇ ಪುಟದಲ್ಲಿ ನೋಡಿರಿ, ಈ ಚಿತ್ರದಲ್ಲಿ ಗಿಡದ ಶಾಖೆಗಳನ್ನು ಗುಂಡಿಯಲ್ಲಿ ಹಾಕಿ ಮುಚ್ಚಿರುವಂತೆ ತೋರಿಸಲಾಗಿದೆ. ಯಾರು ಮೂರೂ ದೇವತೆಗಳ (ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು, ತಮೋಗುಣ ಶಿವ)ಲ್ಲಿ ಒಬ್ಬರನ್ನು ಪೂಜೆಮಾಡುವರೋ ಅವರು ಶಾಸ್ತ್ರವಿಧಾನವನ್ನು ಬಿಟ್ಟು ಅವರ ಮನಸ್ಸಿಗೆ ತೋಚಿದ ಹಾಗೆ ಆಚರಣೆ ಮಾಡುತ್ತಾರೆ ಎಂದರ್ಥ. ಗೀತೆಯ 16ನೇ ಅಧ್ಯಾಯದ

23-24ನೇ ಶ್ಲೋಕದಲ್ಲಿ ಇದನ್ನು ತಪ್ಪು ಹಾಗೂ ವ್ಯರ್ಥ ಎಂದು ತಿಳಿಸಿದೆ. ಯಾರು ಸರ್ವಗತಮ್ ಬ್ರಹ್ಮ ಅರ್ಥಾತ್ ಪರಮ ಅಕ್ಷರ ಬ್ರಹ್ಮನ ಪೂಜೆಯನ್ನು ಮಾಡಿಲ್ಲವೋ, ಅವನನ್ನು ಇಷ್ಟ ರೂಪದಲ್ಲಿ ಪೂಜಿಸಿಲ್ಲವೋ, ಆ ಸಾಧಕನ ಸಾಧನೆಯು ವ್ಯರ್ಥ. ಶಾಖೆಗಳಿಗೆ ನೀರನ್ನು ಎರೆಯುವುದರಿಂದ ಗಿಡವು ಸತ್ತು ಹೋಗುತ್ತದೆ. ಬೇರೆ ದೇವತೆಗಳ ಪೂಜೆಯನ್ನು ಮಾಡುವುದನ್ನು ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕದಿಂದ 15, 20-23 ಮತ್ತು ಗೀತೆಯ 9ನೇ ಅಧ್ಯಾಯದ 23-24ರಲ್ಲಿ ನಿಷೇಧಿಸಲಾಗಿದೆ. (17ನೇ ಪ್ರಶ್ನೆಯ ಉತ್ತರವನ್ನು ಓದಿ).

ಈ ಪುಸ್ತಕದಲ್ಲಿರುವ ಇನ್ನೊಂದು ಚಿತ್ರವನ್ನು 77ನೇ ಪುಟದಲ್ಲಿ ನೋಡಿ. ಅದರಲ್ಲಿ ಗಿಡವನ್ನು ನೆಟ್ಟಗೆ ನೆಡಲಾಗಿದೆ. ಅದು ಶಾಸ್ತ್ರವಿಧಾನವಾದ ಸಾಧನೆಯಾಗಿದೆ. ಅದೇ ಮೋಕ್ಷದಾಯಕ. ಇದರ ಆಧಾರವೂ ಗೀತೆಯಲ್ಲಿ ಇದೆ. ಆದ್ದರಿಂದ ಹೇ ಧರ್ಮದಾಸ! ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಹಾಗೂ ಶ್ರೀ ಶಿವ ಇವರನ್ನು ಬಿಡಬಾರದು. ಇಷ್ಟರೂಪದಲ್ಲಿ ಮಾಡುತ್ತಿರುವ ಇವರ ಪೂಜೆಯನ್ನು ಬಿಡಬೇಕು. ಆಗಲೇ ಭಕ್ತನಿಗೆ ಪೂರ್ಣ ಮೋಕ್ಷವು ಪ್ರಾಪ್ತಿಯಾಗುತ್ತದೆ.

ಪ್ರಶ್ನೆ 46 :- (ಧರ್ಮದಾಸನ):- ಹೇ ಜಿಂದಾ! ನೀವು ಮೂರೂ ದೇವತೆಗಳ (ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು, ತಮೋಗುಣ ಶಿವ) ಆರಾಧನೆಯನ್ನು ಮಾಡುವಂತಹವರ ಸ್ಥಿತಿಯನ್ನು ಭಗವದ್ಗೀತೆಯ 7ನೇ ಅಧ್ಯಾಯದ 12ರಿಂದ 15, 20ರಿಂದ 30 ಹಾಗೂ 9ನೇ ಅಧ್ಯಾಯದ 23-24ನೇ ಶ್ಲೋಕದಲ್ಲಿ ಆಧಾರಸಹಿತವಾಗಿ ವಿವರಿಸಿದ್ದೀರಿ. ಈ ಮೂರೂ ಗುಣಗಳ (ರಜೋಗುಣ, ಸತ್ವಗುಣ, ತಮೋಗುಣ) ಆರಾಧನೆ ಮಾಡುವವರು ರಾಕ್ಷಸ ಗುಣಗಳನ್ನು ಪಡೆದು ಮನುಷ್ಯರಲ್ಲೇ ನೀಚರಾಗಿ ಹುಟ್ಟಿ, ಕೆಟ್ಟ ಕರ್ಮಗಳನ್ನು ಮಾಡುವ ಮೂರ್ಖರಾಗಿ ನನ್ನನ್ನು (ಗೀತೆಯನ್ನು ನೀಡಿದ ಬ್ರಹ್ಮ) ಭಜಿಸುವುದಿಲ್ಲ. ಅನ್ಯ ದೇವತೆಗಳನ್ನು ಆರಾಧಿಸುವವರ ಸುಖ ಸಮಯವು (ಸ್ವರ್ಗದ ಸಮಯ) ಕ್ಷಣಿಕವಾಗಿರುತ್ತದೆ. ಸ್ವರ್ಗದ ಪ್ರಾಪ್ತಿಯ ನಂತರ ಬಹಳ ಬೇಗ ಮತ್ತೆ ಅವರು ಭೂಮಿಯ ಮೇಲೆ ಜನ್ಮತಾಳುತ್ತಾರೆ. ಹೇ ಮಹಾತ್ಮಾ! ದಯಮಾಡಿ ಈ ಪ್ರಪಂಚದಲ್ಲಿ ನಡೆದಿರುವ ಯಾವುದಾದರೂ ಒಂದು ಪ್ರಕರಣವನ್ನು ನನಗೆ ತಿಳಿಸಿ. ಇದರಿಂದ ಮೂರೂ ದೇವತೆಗಳ ಆರಾಧಕರು ಹೇಗೆ ನಡೆದುಕೊಳ್ಳುತ್ತಾರೆ ಎನ್ನುವುದು ತಿಳಿಯುತ್ತದೆ. ಹಾಗೂ ನೀವು ತಿಳಿಸಿರುವ ಮಾತುಗಳು ಸತ್ಯವೆಂದು ಸಿದ್ಧವಾಗುತ್ತದೆ.

## "ಹಿರಣ್ಯಕಶಿಪುವಿನ ಕಥೆ"

1. ಉತ್ತರ (ಜಿಂದಾ ಜಗದೀಶನ)

ರಜೋಗುಣ ಬ್ರಹ್ಮಾನ ಉಪಾಸಕರ ಚರಿತ್ರ: ಹಿರಣ್ಯಕಶಿಪು ಎಂಬ ಒಬ್ಬ ಬ್ರಾಹ್ಮಣ ರಾಜನಿದ್ದನು. ಕಾರಣಾಂತರಗಳಿಂದ ಭಗವಂತ ವಿಷ್ಣುವಿನ ಮೇಲೆ (ಈರ್ಶ್ಯೆ) ಅಸೂಯೆಯಾಯಿತು. ಆ ರಾಜನು ರಜೋಗುಣ ಬ್ರಹ್ಮಾನನ್ನು ತನ್ನ ಭಕ್ತಿಯಿಂದ ಪ್ರಸನ್ನಗೊಳಿಸಿದನು. ಬ್ರಹ್ಮಾನು ಹೇಳಿದನು, "ಭಕ್ತ! ಏನನ್ನು ಬೇಡಲು ಬಯಸುವೆ?" ಬೇಡು ಎಂದಾಗ ಹಿರಣ್ಯಕಶಿಪು ಬೆಳಿಗ್ಗೆಯಲ್ಲಾಗಲಿ, ಸಂಜೆಯಲ್ಲಾಗಲಿ, ಹೊರಗಡೆಯಾಗಲಿ, ಒಳಗಡೆಯಾಗಲಿ, ದಿನದಲ್ಲಾಗಲಿ, ರಾತ್ರಿಯಲ್ಲಾಗಿ, ಹನ್ನೆರಡು ತಿಂಗಳಲ್ಲಾಗಲಿ, ಆಕಾಶದಲ್ಲಾಗಲಿ, ಭೂಮಿಯ ಮೇಲಾಗಲಿ, ಮಾನವನಿಂದಾಗಲಿ, ಪಶು-ಪಕ್ಷಿಗಳಿಂದಾಗಲಿ ನಾನು ಸಾಯಬಾರದು ಎಂದು ಬೇಡಿಕೊಂಡಾಗ ಬ್ರಹ್ಮಾ 'ತಥಾಸ್ತು' ಎಂದನು. ಇದಾದ ನಂತರ ಹಿರಣ್ಯಕಶಿಪು ತನ್ನನ್ನು ತಾನು ಅಮರನೆಂದು ತಿಳಿದುಕೊಂಡು ತನ್ನ ಹೆಸರನ್ನೇ ಜಪ ಮಾಡಬೇಕೆಂದು ಹೇಳತೊಡಗಿದ ಹಾಗೂ ಯಾರು ವಿಷ್ಣುವಿನ ಹೆಸರನ್ನು ಜಪಿಸುತ್ತಾರೋ, ಅವರನ್ನು ಕೊಲ್ಲುತ್ತಿದ್ದನು. ಆದರೆ ಅವನ ಪುತ್ರ ಪ್ರಹ್ಲಾದನು ವಿಷ್ಣುವಿನ ಭಕ್ತನಾಗಿದ್ದನು. ಹಾಗಾಗಿ ತಂದೆಯೇ ಅವನನ್ನು ಪೀಡಿಸುತ್ತಿದ್ದನು. ಹೇ ಧರ್ಮದಾಸ! ಈ ಕಥೆಯಿಂದ ನೀನು ಪರಿಚಿತನಾಗಿರುವೆ. ಇದರ ಬಾವಾರ್ಥವೇನೆಂದರೆ ರಜೋಗುಣ ಬ್ರಹ್ಮಾನ ಭಕ್ತ ಹಿರಣ್ಯಕಶಿಪು ರಾಕ್ಷಸನೆನಿಸಿಕೊಂಡು ಕೆಟ್ಟ ರೀತಿಯಲ್ಲಿ ಸಾವನ್ನಪ್ಪಿದನು.



ಗೀತೆ ಅಧ್ಯಾಯ ಸ.15
ಪೂರ್ಣ ಬ್ರಹ್ಮ ಕಬೀರ್ ಪರಮೇಶ್ವರ
ಶ್ಲೋಕ ಸ.1 ರಿಂದ 2 ಹಾಗೂ
16-17 ರ ತಾತ್ಪರ್ಯ
ಕಬೀರ್,
ಅಕ್ಷರ್ ಪುರುಷ್ ಎಕ್ ಪೇಡ್ ಹೈ.
ನಿರಂಜನ್ ಬಾಕಿ ಡಾರ್ ।
ತೀನೋಂ ದೇವಾ ಶಾಖಾ ಹೈ.
ಪಾತ್ ರೂಪ್ ಸಂಸಾರ್ ॥
ಮೂಲ ಅಂದರೆ ಬೇರು
[ ಪರಮ ಅಕ್ಷರ ಬ್ರಹ್ಮ = ಕಬೀರ್ ಸಾಹೇಬ್ ]
ಕಾಂಡ
ಕಾಂಡ = [ ಅಕ್ಷರ ಬ್ರಹ್ಮ ಅಂದರೆ ಅಕ್ಷರ ಪುರುಷ (ಪರಬ್ರಹ್ಮ) ]
ಕೊಂಬೆ = [ ಕ್ಷರ ಬ್ರಹ್ಮ ಅಂದರೆ ಕ್ಷರ ಪುರುಷ (ಕಾಲ ಬ್ರಹ್ಮ) ]
ಕೊಂಬೆ
ಶಿವ (ತಮಗುಣ)
ಬ್ರಹ್ಮಾ (ರಜಗುಣ)
ವಿಷ್ಣು (ಸತಗುಣ)
ಶಾಸ್ತ್ರ ವಿರುದ್ಧ
ಸಾಧನೆ
ಅಂದರೆ ಹಿಮ್ಮುಖವಾಗಿ ನೆಟ್ಟಿರುವ ಭಕ್ತಿ ರೂಪಿ ಸಸ್ಯ (ಗಿಡ)


ಗೀತೆ ಅಧ್ಯಾಯ ಸ.15
ಶ್ಲೋಕ ಸ.1 ರಿಂದ 2 ಹಾಗೂ
16-17 ರ ತಾತ್ಪರ್ಯ
ಬ್ರಹ್ಮಾ (ರಜಗುಣ)
ಶಿವ (ತಮಗುಣ)
ವಿಷ್ಣು (ಸತಗುಣ)
ಕಬೀರ್,
ಅಕ್ಷರ್ ಪುರುಷ್ ಎಕ್ ಪೇಡ್ ಹೈ,
ನಿರಂಜನ್ ಬಾಕ ಡಾರ್ ।
ತೀನೋಂ ದೇವಾ ಶಾಖಾ ಹೈ,
ಪಾತ್ ರೂಪ್ ಸಂಸಾರ್ ॥
ಕೊಂಬೆ
ಕೊಂಬೆ = [ ಕ್ಷರ ಬ್ರಹ್ಮ ಅಂದರೆ ಕ್ಷರ ಪುರುಷ (ಕಾಲ ಬ್ರಹ್ಮ) ]
ಕಾಂಡ
ಕಾಂಡ = [ ಅಕ್ಷರ ಬ್ರಹ್ಮ ಅಂದರೆ ಅಕ್ಷರ ಪುರುಷ (ಪರಬ್ರಹ್ಮ) ]
ಕಬೀರ್ ಸಾಹೇಬ್
ಮೂಲ ಅಂದರೆ ಬೇರು
[ ಪರಮ ಅಕ್ಷರ ಬ್ರಹ್ಮ = ಪೂರ್ಣ ಬ್ರಹ್ಮ ]
ಶಾಸ್ತ್ರಾನುಕೂಲ
ಸಾಧನೆ
ಅಂದರೆ ನೇರವಾಗಿ ನೆಟ್ಟಿರುವ ಭಕ್ತಿ ರೂಪಿ ಸಸ್ಯ (ಗಿಡ)

# "ರಾವಣ ಮತ್ತು ಭಸ್ಮಾಸುರನ ಕಥೆ"

2. ತಮೋಗುಣ ಶಿವನ ಉಪಾಸಕರ ಚರಿತ್ರ:- ಲಂಕಾದೀಶ್ವರನಾದ ರಾವಣನು ತಮೋಗುಣನಾದ ಶಿವನ ಭಕ್ತನಾಗಿದ್ದನು. ಅವನು ತನ್ನ ಶಕ್ತಿಯಿಂದ 33 ಕೋಟಿ ದೇವತೆಗಳನ್ನು ಬಂಧಿಸಿಟ್ಟಿದ್ದನು. ನಂತರ ಸೀತೆಯನ್ನೂ ಅಪಹರಿಸಿದನು. ನಂತರ ಅವನ ಪರಿಸ್ಥಿತಿ ಏನಾಯಿತೆಂದು ನಿಮಗೆ ತಿಳಿದಿದೆ. ತಮೋಗುಣ ಶಿವನ ಉಪಾಸಕನಾದ ರಾವಣ ರಾಕ್ಷಸನೆನಿಸಿಕೊಂಡು ನಿಂದನೆಗೆ ಪಾತ್ರನಾಗಿ ನಂತರ ಸರ್ವನಾಶವಾದನು.

❖ ಅನ್ಯ ಉದಾಹರಣೆ:- ,ತಮಗೆ ಭಸ್ಮಾಸುರನ ಕಥೆಯು ತಿಳಿದಿದೆ. ಭಸ್ಮಾಗಿರಿಯು ಭಗವಂತ ಶಿವ (ತಮೋಗುಣ)ನನ್ನು ಆರಾಧಿಸುತ್ತಿದ್ದನು. ಆತ ಹನ್ನೆರಡು ವರ್ಷಗಳ ಕಾಲ ಶಿವನ ದ್ವಾರದ ಮುಂದೆ, ತನ್ನ ಕಾಲುಗಳನ್ನು ಮೇಲೆ ಮಾಡಿ ತಲೆಯನ್ನು ಕೆಳಗೆ (ಶೀರ್ಷಾಸನ) ಮಾಡಿ ತಪಸ್ಸು ಮಾಡುತ್ತಿದ್ದ. ಕಾರಣ ಪಾರ್ವತಿಯು ಶಿವನ ಬಳಿ ಬಂದು, ನೀವು ಸಮರ್ಥರು 'ನಿಮ್ಮ ಭಕ್ತ ಏನನ್ನು ಕೇಳುತ್ತಾನೋ, ಅದನ್ನು ದಯಪಾಲಿಸಿ' ಎಂದಾಗ ಶಿವನು ಭಸ್ಮಾಗಿರಿಗೆ 'ಏನು ಕೇಳಲು ಬಯಸುವೆ? ಕೇಳು, ನಾನು ನಿನ್ನಿಂದ ಅತಿ ಪ್ರಸನ್ನನಾಗಿದ್ದೇನೆ ಎಂದಾಗ ಆತನು 'ಮೊದಲು ವಚನಬದ್ಧನಾಗು ಪ್ರಭು, ನಂತರ ಕೇಳುವೆ ಎಂದನು.

ಆ ಪ್ರಕಾರ ಶಿವನು ವಚನಬದ್ಧನಾದ ನಂತರ ಭಸ್ಮಾಗಿರಿಯು, ತಮ್ಮ ಹತ್ತಿರವಿರುವ ಭಸ್ಮಕಂಡಾ (ಭಸ್ಮಕಡಗ)ವನ್ನು ದಯಪಾಲಿಸು ಎಂದು ಕೇಳಿದನು. ಅವನ ಕೋರಿಕೆಯಂತೆ ಶಿವನು ಭಸ್ಮಕಡಗವನ್ನು ಕೊಟ್ಟನು ಭಸ್ಮಾಗಿರಿಗೆ ಕೊಟ್ಟನು. ಕಡಗವು ಕೈಯಲ್ಲಿ ಬರುತ್ತಿದ್ದಂತೆಯೇ ಶಿವನನ್ನೇ ಭಸ್ಮ ಮಾಡುವುದಾಗಿಯೂ ಹಾಗೂ ಪಾರ್ವತಿಯನ್ನು ಪತ್ನಿಯನ್ನಾಗಿಸಿಕೊಳ್ಳುವುದಾಗಿಯೂ ಎಚ್ಚರವಹಿಸಿ ಎಂದು ಹೇಳಿ ಅಭದ್ರ ರೀತಿ ನಕ್ಕಿದನು ಹಾಗೂ ಶಿವನನ್ನು ಕೊಲ್ಲಲು ಮುಂದಾದನು. ಆ ದುಷ್ಟನ ಉದ್ದೇಶವನ್ನು ತಿಳಿದು ಶಿವನು ಪ್ರಾಣ ಉಳಿಸಿಕೊಳ್ಳಲು ಓಡಲು ಆರಂಭಿಸಿದನು. ಹಿಂದೆ ಹಿಂದೆ ಭಕ್ತ ಮುಂದೆ-ಮುಂದೆ ಇಷ್ಟದೇವ ಶಿವ (ತಮೋಗುಣ) ಓಡುತ್ತಿದ್ದಾರೆ.

ವಿಚಾರ ಮಾಡಿ ಧರ್ಮದಾಸರೇ! ಒಂದು ವೇಳೆ ಶಿವನು ಅವಿನಾಶಿಯಾಗಿರುತ್ತಿದ್ದರೆ ಮೃತ್ಯುವಿಗೆ ಹೆದರುತ್ತಿರಲಿಲ್ಲ. ಅವನನ್ನು ಅವಿನಾಶಿ ಎಂದು, ಅಂತರ್ಯಾಮಿ ಎಂದೂ ಹೇಳುತ್ತಿರುವೆ. ಹಾಗಿದ್ದಲ್ಲಿ ಅವನು ಅಂತರ್ಯಾಮಿ ಇದ್ದರೆ ಭಸ್ಮಾಗಿರಿಯ ಮನಸ್ಸಿನ ಕೆಟ್ಟ ವಿಚಾರವನ್ನು ಮೊದಲೇ ತಿಳಿಯಬೇಕಾಗಿತ್ತು. ಇದರಿಂದ ಶಿವನು ಅಂತರ್ಯಾಮಿಯಲ್ಲವೆಂದು ತಿಳಿದು ಬರುತ್ತದೆ.

ಶಿವನನ್ನು ಭಸ್ಮಾಸುರ ಓಡಿಸಿಕೊಂಡು ಹೋಗುತ್ತಿರುವ ಸಮಯದಲ್ಲಿ ಶಿವನು ತನ್ನ ರಕ್ಷಣೆಗಾಗಿ ಪರಮೇಶ್ವರನನ್ನು ಕರೆದನು. ಅದೇ ಸಮಯದಲ್ಲಿ "ಪರಮ ಅಕ್ಷರ ಬ್ರಹ್ಮ"ನು ಪಾರ್ವತಿಯ ರೂಪ ಧರಿಸಿ ಭಸ್ಮಾಗಿರಿಯ ಮುಂದೆ ಬಂದು ನಿಂತು ಹೇ ಭಸ್ಮಾಗಿರಿ! ಬಾ ನನ್ನ ಬಳಿ ಕುಳಿತುಕೋ.

ಈಗ ಭಸ್ಮಾಗಿರಿಗೆ ತಿಳಿದಿತ್ತು ಶಿವನಂತು ಸಮೀಪದಲ್ಲೆಲ್ಲೂ ನಿಲ್ಲುವುದಿಲ್ಲ. ಭಸ್ಮಾಗಿರಿಯಂತು ಪಾರ್ವತಿಗಾಗಿಯೇ ಇದೆಲ್ಲಾ ಉಪದ್ರವ ಮಾಡುತ್ತಿದ್ದನು. ಧರ್ಮದಾಸ ನಿನಗೆ ಎಲ್ಲ ಕಥೆಯು ಗೊತ್ತಿದ್ದೆ ಹಾಗಾಗಿ ಪಾರ್ವತಿಯ ರೂಪದಲ್ಲಿದ್ದ ಪರಮಾತ್ಮನು ಗಂಡಹಥ ನೃತ್ಯ ಮಾಡಿಸಿ ಅವನನ್ನು ಭಸ್ಮ ಮಾಡಿದನು. ತಮೋಗುಣ ಶಿವನ ಭಕ್ತನಾದ ಭಸ್ಮಾಗಿರಿಯು ತನ್ನ ಕೆಟ್ಟ ಕೆಲಸದಿಂದ ಭಸ್ಮಾಸುರ ಅರ್ಥಾತ್ ಭಸ್ಮಾರಾಕ್ಷಸ ಎನಿಸಿಕೊಂಡನು.

ಆದ್ದರಿಂದ ಈ ಮೂರು ದೇವತೆಗಳ ಭಕ್ತರನ್ನು ರಾಕ್ಷಸ ಸ್ವಭಾವವನ್ನು ಹೊಂದಿ ಮನುಷ್ಯರಲ್ಲಿ ನೀಚ ಕರ್ಮಗಳನ್ನು ಮಾಡುವ ಮೂರ್ಖರು ಎಂದಿದ್ದಾರೆ.

# "ಹರಿದ್ವಾರದಲ್ಲಿ ಸಾಧುಗಳ ಹತ್ಯಾಕಾಂಡ"

3. ಈಗ ಸತ್ವಗುಣ ಶ್ರೀ ವಿಷ್ಣುವಿನ ಭಕ್ತರ ಕಥೆಯನ್ನು ಹೇಳುತ್ತೇನೆ.

❖ ಒಮ್ಮೆ ಹರಿದ್ವಾರದಲ್ಲಿ ಹರನ ಘಾಟ್‌ದಲ್ಲಿ ಕುಂಭಮೇಳವನ್ನು ಆಯೋಜಿಸಲಾಗಿತ್ತು. ಆ ಸಮಯದಲ್ಲಿ ಮೂರು ಗುಣಗಳ ಉಪಾಸಕರು ತಮ್ಮ-ತಮ್ಮ ಸಮುದಾಯಗಳಲ್ಲಿ ಸೇರಿದ್ದರು. ಗಿರಿ, ಪುರಿ, ನಾಗಾ-ನಾಥ ಇವರು ಭಗವಂತ ತಮೋಗುಣ ಶಿವನ ಉಪಾಸಕರಾಗಿರುತ್ತಾರೆ. ಹಾಗೂ ವೈಷ್ಣವರು ಸತ್ವಗುಣ ಭಗವಂತ ವಿಷ್ಣುವಿನ ಉಪಾಸಕರಾಗಿರುತ್ತಾರೆ. ಹರನ ಘಾಟ್‌ದಲ್ಲಿ ಪ್ರಥಮ ಸ್ನಾನ ಮಾಡುವುದಕ್ಕಾಗಿ ಎರಡೂ ಸಮುದಾಯದವರಾದ 'ನಾಗಾ ಹಾಗೂ ವೈಷ್ಣವರ ನಡುವೆ ಕಲಹ ಉಂಟಾಯಿತು. ಇದರಿಂದಾಗಿ 25 ಸಾವಿರ ತ್ರಿಗುಣ (ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು ಹಾಗೂ ತಮೋಗುಣ ಶಿವ)ರ ಭಕ್ತರು ಹೊಡೆದಾಡಿ ಸತ್ತರು. ಕತ್ತಿ, ಚೂರಿ, ಕಠಾರಿಗಳಿಂದ ಒಬ್ಬರನೊಬ್ಬರ ಪ್ರಾಣವನ್ನು ತೆಗೆದರು. ಸೂಕ್ಷ್ಮವೇದದಲ್ಲಿ ಹೇಳಲಾಗಿದೆ :-

ತೀರ್ ತುಪಕ್ ತಲ್‌ವಾರ್ ಕಟಾರೀ, ಜಮ್‌ಧಡ್ ಜೋರ್ ಬಧಾವೈಂ ಹೈಂ ।
ಹರ್ ಪೈಡೀ ಹರ್ ಹೇತ್ ನಹೀಂ ಜಾನಾ, ವಹಾಂ ಜಾ ತೇಗ್ ಚಲಾವೈಂ ಹೈಂ॥
ಕಾಟೈ ಶೀಶ್ ನಹೀಂ ದಿಲ್ ಕರುಣಾ, ಜಗ್ ಮೆಂ ಸಾಧ್ ಕಹಾವೈಂ ಹೈಂ ।
ಜೋ ಜನ್ ಇನ್‌ಕೆ ದರ್ಶನ್ ಕೂಂ ಜಾವೈ, ಉನ್‌ಕೋ ಭೀ ನರಕ್ ಪಠಾವೈಂ ಹೈಂ ॥

ಹೇ ಧರ್ಮದಾಸ! ಈ ಮೇಲಿನ ಎಲ್ಲಾ ಸತ್ಯ ಘಟನೆಗಳಿಂದ ಸ್ಪಷ್ಟವಾಗುವುದೇನೆಂದರೆ, ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು ಹಾಗೂ ತಮೋಗುಣ ಶಿವನ ಸಾಧಕರು ರಾಕ್ಷಸ ಗುಣವನ್ನು ಹೊಂದಿರುವ ಹಾಗೂ ನೀಚ ಕೆಲಸಗಳನ್ನು ಮಾಡುವ ಮೂರ್ಖರೆಂದು ಗೀತೆಯ 7ನೇ ಅಧ್ಯಾಯದ 12-15ನೇ ಶ್ಲೋಕದಲ್ಲಿ ಹೇಳಲಾಗಿದೆ.

❖ ಪರಮೇಶ್ವರ ಜಿಂದಾ ಮಹಾತ್ಮನ ಮುಖ ಕಮಲದಿಂದ ಈ ಎಲ್ಲಾ ಕಥೆಗಳನ್ನು ಕೇಳಿ ಧರ್ಮದಾಸನಿಗೆ ತಲೆ ತಿರುಗಿದಂತಾಯಿತು. ಧೈರ್ಯ ಮಾಡುತ್ತಾ ಧರ್ಮದಾಸರು ಹೇಳಿದರು, 'ಪ್ರಭು ನೀವಂತು ಅಜ್ಞಾನದಿಂದ ಅಂಧನಾಗಿರುವ ನನಗೆ ಕಣ್ಣುಗಳನ್ನು ನೀಡಿದ್ದೀರಿ. ಎಲ್ಲಾ ಕಥೆಗಳನ್ನು ಕೇಳುತ್ತಿರುತ್ತೇವೆ. ಓದುತ್ತಿರುತ್ತೇವೆ. ಆದರೆ ಎಂದಿಗೂ ನಾವು ಕೆಟ್ಟದಾರಿಯಲ್ಲಿ ನಡೆಯುತ್ತಿದ್ದೇವೆಂದು ಎಂಬ ವಿಚಾರ ಬರಲಿಲ್ಲ. ನಿಮಗೆ ನನ್ನ ಶತಶತ ಧನ್ಯವಾದಗಳು. ತಾವು ಪಾಪಿಯಾದ ನನಗೆ ಈ ನರಕದಿಂದ ಹೊರಗೆ ತೆಗೆದಿದ್ದಿರಾ ಪ್ರಭು".

ಪ್ರಶ್ನೆ 47:- (ಧರ್ಮದಾಸನ) ಹೇ ಜಿಂದಾ ಮಹಾತ್ಮರೇ, ತಾವು ಹೇಳಿದ್ದೀರಾ ಹಾಗೂ ನಾನು ಕೂಡಾ ಗೀತೆಯ 7ನೇ ಅಧ್ಯಾಯದ 18ನೇ ಶ್ಲೋಕದಲ್ಲಿ ನೋಡಿರುವುದೇನೆಂದರೆ ಗೀತಾ ಜ್ಞಾನದಾತ ಬ್ರಹ್ಮನು ತನ್ನ ಸಾಧನೆಯಿಂದ ಆಗುವ ಗತಿಯು ಅನುತ್ತಮವಾಗಿರುತ್ತದೆ ಎಂದಿದ್ದಾನೆ. ಅದನ್ನೂ ಸಹ ಇದೇ ರೀತಿ ಸ್ಪಷ್ಟಗೊಳಿಸಿ. ಯಾವುದಾದರೊಂದು ಪ್ರಸಂಗವನ್ನು ತಿಳಿಸಿಕೊಡಿ.

ಉತ್ತರ :- (ಜಿಂದಾ ಮಹಾತ್ಮನ ವೇಷದಲ್ಲಿ ಪರಮಾತ್ಮ) :-

❖ ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5 ಮತ್ತು 9ನೇ ಶ್ಲೋಕ ಹಾಗೂ 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತ (ಬ್ರಹ್ಮ)ನು, "ಹೇ ಅರ್ಜುನ, ನನ್ನ ಮತ್ತು ನಿನ್ನ ಜನ್ಮಗಳು ಅನೇಕ ಬಾರಿ ಆಗಿದೆ. ಈ ವಿಷಯ ನಿನಗೆ ತಿಳಿದಿಲ್ಲ. ಆದರೆ ನನಗೆ ತಿಳಿದಿದೆ" ಎಂದು ಹೇಳಿದ್ದಾನೆ. ಶ್ರೀಮದ್ ಭಗವದ್ಗೀತೆಯ 15ನೇ ಅದ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ತತ್ವದರ್ಶಿ ಸಂತನಿಂದ ತತ್ವಜ್ಞಾನ ಪ್ರಾಪ್ತವಾದ ನಂತರ ಪರಮೇಶ್ವರನ ಪರಮಪದವನ್ನು ಅನ್ವೇಷಿಸಬೇಕಾಗುತ್ತದೆ. ಅಲ್ಲಿಗೆ ಹೋದ ನಂತರ ಸಾಧಕನು ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ. ಯಾವ ಪರಮೇಶ್ವರನಿಂದ ಪ್ರಪಂಚವೆಂಬ ವೃಕ್ಷದ ಪ್ರವೃತ್ತಿ ವಿಸ್ತಾರವು ಪ್ರಾಪ್ತವಾಯಿತೋ, ಯಾವ ಪರಮೇಶ್ವರನು ಇಡೀ ಪ್ರಪಂಚವನ್ನು ಸೃಷ್ಟಿಸಿದ್ದಾನೋ,

ಆ ಪರಮೇಶ್ವರನ ಭಕ್ತಿ ಮಾಡು. ನಂತರ ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಹೇ ಅರ್ಜುನ! ನೀನು ಸರ್ವಭಾವದಿಂದ ಆ ಪರಮೇಶ್ವರನಿಗೆ ಶರಣಾಗು. ಆ ಪರಮೇಶ್ವರನ ಕೃಪೆಯಿಂದಲೇ ನೀನು ಪರಮಶಾಂತಿ ಹಾಗೂ ಸನಾತನ ಪರಮಧಾಮವನ್ನು ಪಡೆಯುವೆ. ಹೇ ಧರ್ಮದಾಸ! ಎಲ್ಲಿಯವರೆಗೆ ಜನನ-ಮರಣವಿರುವುದೋ, ಅಲ್ಲಿಯವರೆಗೆ ಪರಮಶಾಂತಿ ಇರುವುದಿಲ್ಲ ಹಾಗೂ ಸನಾತನ ಪರಮ ಧಾಮವು ಪ್ರಾಪ್ತವಾಗುವುದಿಲ್ಲ. ವಾಸ್ತವದಲ್ಲಿ ಯಾವುದರಲ್ಲಿ ಜನನ-ಮರಣ ಸಂಪೂರ್ಣವಾಗಿ ಕೊನೆಗೊಳ್ಳುವುದೋ, ಅದನ್ನು ಪರಮಗತಿ ಎಂದು ಕರೆಯುತ್ತಾರೆ, ಅದು ಬ್ರಹ್ಮ ಸಾಧನೆಯಿಂದ ಎಂದಿಗೂ ಸಾಧ್ಯವಿಲ್ಲ. ಆದ್ದರಿಂದ ಗೀತೆಯ 7ನೇ ಅಧ್ಯಾಯದ 18ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಜ್ಞಾನಿ ಆತ್ಮಗಳೆಲ್ಲಾ ನನ್ನ ವಿಚಾರದಲ್ಲಿ ಎಲ್ಲಾ ಒಳ್ಳೆಯ ಆತ್ಮಗಳೇ. ಆದರೆ ಅವರೆಲ್ಲಾ ನನ್ನ ಅನುತ್ತಮ (ಕೆಟ್ಟ) ಮೋಕ್ಷದಲ್ಲಿ ಲೀನರಾಗಿದ್ದಾರೆ. ಏಕೆಂದರೆ ಅವರೆಲ್ಲಾ ನನ್ನ (ಬ್ರಹ್ಮನ)ನ್ನು ಆರಾಧಿಸುತ್ತಿದ್ದಾರೆ. ಬ್ರಹ್ಮನ ಸಾಧನೆಯ ಮಂತ್ರವು 'ಓಂ' ಆಗಿದೆ. ಇದರಿಂದ ಬ್ರಹ್ಮಲೋಕವು ಪ್ರಾಪ್ತಿಯಾಗುತ್ತದೆ. ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ, ಬ್ರಹ್ಮಲೋಕಕ್ಕೆ ಹೋದ ಸಾಧಕರು ಪುನಃ ಮರಳಿ ಈ ಪ್ರಪಂಚಕ್ಕೆ ಬರುತ್ತಾರೆ ಎಂದು ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ ಅವರಿಗೆ ಪರಮಶಾಂತಿ ಸಿಗುವುದಿಲ್ಲ. ಸನಾತನ ಪರಮಧಾಮವು ಪ್ರಾಪ್ತವಾಗುವುದಿಲ್ಲ. ವೇದಗಳಲ್ಲಿ ವರ್ಣಿಸಿರುವ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿಯಾಗುವುದಿಲ್ಲ. ಕೆಲವು ಸಿದ್ಧಿಗಳು ಪ್ರಾಪ್ತಿಯಾಗುತ್ತವೆ. ಅದರ ಮೂಲಕ ಋಷಿಗಳು ಚಮತ್ಕಾರ ಮಾಡಿ ಯಾರಿಗಾದರೂ ಹಾನಿ ಉಂಟುಮಾಡಿ ಅವರು ಪ್ರಸಿದ್ಧರಾಗುತ್ತಾರೆ. ಕೊನೆಯಲ್ಲಿ ಪಾಪದ ಮೂಟೆ ಕಟ್ಟಿಕೊಂಡು ಎಂಭತ್ತನಾಲ್ಕು ಲಕ್ಷ ಪ್ರಕಾರದ ಜೀವರಾಶಿಗಳ ಶರೀರಗಳಲ್ಲಿ ಕಷ್ಟಪಡುತ್ತಾರೆ. ಆದ್ದರಿಂದ ಬ್ರಹ್ಮ ಸಾಧನೆಯಿಂದ ಸಿಗುವ ಮೋಕ್ಷವು ಅನುತ್ತಮ (ಕೆಟ್ಟದ್ದು) ಎಂದು ಹೇಳಲಾಗಿದೆ.

## "ಚುಣಕ ಋಷಿ ಹಾಗು ರಾಜ ಮಾನಧಾತಾನ ಕಥೆ"

❖ ಕಥಾಪ್ರಸಂಗ:- ಗೀತೆಯ ಜ್ಞಾನದಾತ (ಬ್ರಹ್ಮ)ನು ಗೀತೆಯ 7ನೇ ಅಧ್ಯಾಯದ 16-17ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ನನ್ನ ಭಕ್ತಿ 4 ಪ್ರಕಾರದ ಭಕ್ತರು ಮಾಡುತ್ತಾರೆ. (1) ಆರ್ತ (ಸಂಕಟ ನಿವಾರಣೆಗಾಗಿ) (2) ಅರ್ಥಾರ್ಥಿ (ಧನ ಲಾಭಕ್ಕಾಗಿ) (3) ಜಿಜ್ಞಾಸು (ಜ್ಞಾನ ಪ್ರಾಪ್ತಿಯ ನಂತರ ಉಪನ್ಯಾಸಕನಾಗಲು) (4) ಜ್ಞಾನಿ (ಕೇವಲ ಮೋಕ್ಷಕ್ಕಾಗಿ ಭಕ್ತಿ ಮಾಡುವವರು). ಗೀತಾ ಜ್ಞಾನದಾತನು ಮೇಲಿನ ಮೂವರನ್ನು ಬಿಟ್ಟು ನಾಲ್ಕನೆಯವ ಜ್ಞಾನಿಯನ್ನು ತನ್ನ ಪಕ್ಕಾ ಭಕ್ತನೆಂದು ಹೇಳಿದ್ದಾನೆ.

❖ ಜ್ಞಾನಿಯ ವಿಶೇಷತೆ :- ಮಾನವ ಜೀವನ ಕೇವಲ ಮೋಕ್ಷ ಪ್ರಾಪ್ತಿಗಾಗಿಯೇ ಎಂದು ತಿಳಿದವನೇ ನಿಜವಾದ ಜ್ಞಾನಿ ಹಾಗೂ ಪೂರ್ಣ ಮೋಕ್ಷಕ್ಕಾಗಿ ಕೇವಲ ಒಬ್ಬ ಪರಮಾತ್ಮನನ್ನು ಆರಾಧಿಸಬೇಕು ಎಂದು ಅವನಿಗೆ ತಿಳಿದಿರುತ್ತದೆ. ಅನ್ಯ ದೇವತೆಗಳ (ಬ್ರಹ್ಮಾ, ವಿಷ್ಣು, ಶಿವನ) ಭಕ್ತಿಯಿಂದ ಪೂರ್ಣ ಮೋಕ್ಷವಾಗದು. ಆ ಜ್ಞಾನಿ ಆತ್ಮಾಗಳು ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕ ಹಾಗೂ ಯಜುರ್ವೇದದ 40ನೇ ಅಧ್ಯಾಯದ 10ನೇ ಮಂತ್ರದಲ್ಲಿ ವರ್ಣಿತ ತತ್ವದರ್ಶಿ ಸಂತರ ಸಿಗದಿರುವ ಕಾರಣದಿಂದಾಗಿ ವೇದಗಳಿಂದ ತಾವೇ ಸ್ವತಃ ನಿಷ್ಕರ್ಷ ತಗೆದರು ಅಂದರೆ, 'ಬ್ರಹ್ಮನೇ ಸಮರ್ಥ ಪರಮಾತ್ಮನು, ಓಂ ಆತನ ಭಕ್ತಿಯ ಮಂತ್ರ ಹಾಗೂ ಈ ಸಾಧನೆಯಿಂದಲೇ ಬ್ರಹ್ಮಲೋಕ ಪ್ರಾಪ್ತವಾಗುವುದು ಮತ್ತು ಇದೇ ಮೋಕ್ಷ, ಎಂದುಕೊಂಡರು.

ಜ್ಞಾನಿ ಆತ್ಮಗಳು ಪರಮಾತ್ಮನ ಪ್ರಾಪ್ತಿಗಾಗಿ ಹಠಯೋಗ ಮಾಡಿದವು. ಒಂದೇ ಸ್ಥಾನದಲ್ಲಿ ಕುಳಿತು ಘೋರ ತಪಸ್ಸನ್ನು ಮಾಡಿದವು ಹಾಗೂ ಓಂ ನಾಮಜಪ ಮಾಡಿದವು. ಆದರೆ ವೇದ ಮತ್ತು ಗೀತೆಯಲ್ಲಿ ಹಠಯೋಗ, ಘೋರ ತಪಸ್ಸು ಮಾಡಿದವರನ್ನು ಮೂರ್ಖರು ಹಾಗೂ

ರಾಕ್ಷಸರು ಎಂದು ಹೇಳಲಾಗಿದೆ. (ಗೀತೆಯ 3ನೇ ಅಧ್ಯಾಯದ 4-9ನೇ ಶ್ಲೋಕ, 16ನೇ ಅಧ್ಯಾಯದ 17-20ನೇ ಶ್ಲೋಕ ಮತ್ತು 17ನೇ ಅಧ್ಯಾಯದ 1-6ನೇ ಶ್ಲೋಕ) ಇವರಿಗೆಲ್ಲಾ ಹಠಯೋಗ ಮಾಡುವ ಪ್ರೇರಣೆ ಎಲ್ಲಿಂದ ಬಂದಿತು? ಎಂದಾಗ ಶ್ರೀ ದೇವಿಪುರಾಣ (ಗೀತಾ ಪ್ರೆಸ್ ಗೋರಖಪುರದಿಂದ ಪ್ರಕಾಶಿತ)ದ ಮೂರನೇ ಸ್ಕಂದದಲ್ಲಿ ಬ್ರಹ್ಮಾನು ತನ್ನ ಪುತ್ರ ನಾರದನಿಗೆ ಹೇಳಿರುವುದೇನೆಂದರೆ, ನನ್ನ ಉತ್ಪತ್ತಿಯಾದಾಗ ನಾನು ಕಮಲದ ಹೂವಿನ ಮೇಲೆ ಕುಳಿತಿದ್ದೆ. ಆಗ ತಪಸ್ಸು ಮಾಡು, ತಪಸ್ಸು ಮಾಡು ಎಂದು ಆಕಾಶವಾಣಿಯಾಯಿತು. ಆಗ ನಾನು ಒಂದು ಸಾವಿರ ವರ್ಷದವರೆಗೂ ತಪಸ್ಸನ್ನು ಮಾಡಿದೆ.

ಹೇ ಧರ್ಮದಾಸ! ಸಮುದ್ರ ಮಂಥನದಲ್ಲಿ ವೇದಗಳು ಬ್ರಹ್ಮಾನಿಗೆ ಸಿಕ್ಕಿದವು. ಅದನ್ನು ಓದಿದಾಗ ಯಜುರ್ವೇದದ 40ನೇ ಅಧ್ಯಾಯದ 15ನೇ ಮಂತ್ರದಲ್ಲಿ 'ಓಂ' ನಾಮವು ದೊರೆಯಿತು. ಅದರ ಜಪ ಹಾಗೂ ಆಕಾಶವಾಣಿಯಿಂದ ಕೇಳಿದ ಹಠಯೋಗ (ಘೋರ ತಪಸ್ಸು) ಇವೆರಡನ್ನೂ ಸೇರಿಸಿ ಸ್ವಯಂ ಬ್ರಹ್ಮಾನು ಅನುಸರಿಸಿದ. ಹಾಗೂ ತನ್ನ ಪುತ್ರರಿಗೂ (ಋಷಿಗಳು) ಹೇಳಿದನು. (ನಾಲ್ಕು ವೇದಗಳು ಹಾಗೂ ಶ್ರೀಮದ್ ಭಗವದ್ಗೀತೆಯಲ್ಲಿ ಈ ರೀತಿಯ ಹಠಮಾಡಿ ಘೋರ ತಪಸ್ಸು ಮಾಡುವವರನ್ನು ಕ್ರೂರಿ, ರಾಕ್ಷಸ, ನರಾಧಮ ಅಂದರೆ ನೀಚ ಎನ್ನಲಾಗಿದೆ. ಹಾಗೂ ಗೀತೆಯ 16ನೇ ಅಧ್ಯಾಯದ 17-20 ಶ್ಲೋಕದಲ್ಲಿ ಇದರ ಪ್ರಮಾಣವಿದೆ. ಹಾಗೂ ಗೀತೆಯ 17ನೇ ಅಧ್ಯಾಯದ 1 ರಿಂದ 6 ರ ಶ್ಲೋಕದಲ್ಲಿ) ಅದೇ ಸಾಧನೆಯನ್ನು ಜ್ಞಾನಿ ಆತ್ಮಗಳಾದ ಋಷಿಮುನಿಗಳು ಮಾಡತೊಡಗಿದರು. ಆ ಜ್ಞಾನಿಗಳಲ್ಲಿ ಚುಣಕ ಋಷಿಯ ಒಂದು ಪ್ರಸಂಗವನ್ನು ತಿಳಿಸುತ್ತೇನೆ. ಇದರಿಂದ ನಿಮ್ಮ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಗುವುದು :- ಚುಣಕ ಎಂಬ ಹೆಸರಿನ ಒಬ್ಬ ಋಷಿಯು ಇದ್ದನು.

ಈತ ಸಾವಿರಾರು ವರ್ಷಗಳ ಕಾಲ ಘೋರ ತಪಸ್ಸು ಮಾಡಿದನು ಹಾಗೂ 'ಓಂ' ನಾಮ ಜಪಿಸಿದನು. ಇದು ಬ್ರಹ್ಮನ ಭಕ್ತಿಯಾಗಿದೆ. ನಾನು ಯಾವುದೇ ಸಾಧನೆ ಅರ್ಥಾತ್ ವೇದಗಳಲ್ಲಿ ವರ್ಣಿತವಾಗಿರುವ ಯಜ್ಞಗಳಿಂದಾಗಲಿ, ಜಪಗಳಿಂದಾಗಲಿ, ತಪಗಳಿಂದಾಗಲಿ, ಯಾರಿಗೂ ದರ್ಶನ ನೀಡುವುದಿಲ್ಲ ಎಂದು ಬ್ರಹ್ಮನು ಪ್ರತಿಜ್ಞೆ ಮಾಡಿದ್ದಾನೆ. ಗೀತೆಯ 11ನೇ ಅಧ್ಯಾಯದ 48ನೇ ಶ್ಲೋಕದಲ್ಲಿ, 'ಹೇ ಅರ್ಜುನ! ನೀನು ನನ್ನ ಸ್ವರೂಪವನ್ನು ಅರ್ಥಾತ್ ಕಾಲ ರೂಪವನ್ನು ನೋಡಿರುವೆ. ಇದು ನನ್ನ ಸ್ವರೂಪವಾಗಿದೆ. ಇದನ್ನು ಯಾವುದೇ ವೇದಗಳಲ್ಲಿ ವರ್ಣಿತವಾಗಿರುವ ವಿಧಿಗಳಿಂದಾಗಲಿ, ಜಪಗಳಿಂದಾಗಲಿ, ತಪಗಳಿಂದಾಗಲಿ, ಯಜ್ಞಗಳಿಂದಾಗಲಿ ನೋಡಲು ಸಾಧ್ಯವಿಲ್ಲ, ಗೀತೆಯ ಜ್ಞಾನದಾತನು ಗೀತೆಯ 7ನೇ ಅಧ್ಯಾಯದ 24-25ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ-ಇದು ನನ್ನ ಅವಿನಾಶಿ ವಿಧಾನ. ಯಾರಿಗೂ ದರ್ಶನ ನೀಡದೆ ನನ್ನ ಯೋಗ ಮಾಯೆಯಿಂದ ಅಡಗಿರುತ್ತೇನೆ. ಈ ಮೂರ್ಖ ಜನರು ನನಗೆ ಮನುಷ್ಯನ ರೂಪ ಅರ್ಥಾತ್ ಕೃಷ್ಣನೆಂದು ಭಾವಿಸುತ್ತಿದ್ದಾರೆ. ಮುಂದೆ ನಿಂತಿದ್ದ ಸೈನ್ಯದ ಕಡೆಗೆ ಸಂಕೇತ ಗೀತೆಯ ಜ್ಞಾನದಾತನು ಹೇಳುತ್ತಿದ್ದನು. ಇದರ ಭಾವಾರ್ಥವೆಂದರೆ, 'ನಾನು ಯಾರಿಗೂ ದರ್ಶನ ನೀಡುವುದಿಲ್ಲ. ನಿನ್ನ ಮೇಲೆ ಅನುಗ್ರಹಿಸಿ ನನ್ನ ರೂಪವನ್ನು ತೋರಿಸಿರುವೆ' ಎಂದನು.

ಭಾವಾರ್ಥ:- ವೇದಗಳಲ್ಲಿ ವರ್ಣಿತವಾಗಿರುವ ವಿಧಿಗಳಿಂದ ಅಥವಾ ಅನ್ಯ ಪ್ರಚಲಿತ ಕ್ರಿಯೆಗಳಿಂದ ಬ್ರಹ್ಮನ ಪ್ರಾಪ್ತಿಯಾಗುವುದಿಲ್ಲ. ಹಾಗಾಗಿ ಆ ಚುಣಕ ಋಷಿಗೆ ಪರಮಾತ್ಮನ ಪ್ರಾಪ್ತಿಯಾಗಲಿಲ್ಲ. ಆದರೆ ಸಿದ್ಧಿಗಳು ಪ್ರಾಪ್ತಿಯಾದವು. ಋಷಿಗಳು ಅದನ್ನೇ ಭಕ್ತಿಯ ಅಂತಿಮ ಪ್ರತಿಫಲ ಎಂದುಕೊಂಡರು. ಯಾರ ಬಳಿ ಅಧಿಕ ಸಿದ್ಧಿಗಳು ಪ್ರಾಪ್ತವಾಗಿರುತ್ತದೆಯೋ ಅವರು ಶ್ರೇಷ್ಠ ಋಷಿ ಎನಿಸಿಕೊಳ್ಳುತ್ತಿದ್ದರು. ಅವರಲ್ಲಿ ಈ ಚುಣಕ ಋಷಿಯು ಕೂಡ ಒಬ್ಬನಾಗಿದ್ದನು.

ಒಬ್ಬ ಮಾನಧಾತಾ ಎಂಬ ಚಕ್ರವರ್ತಿ ರಾಜ (ಅವರ ಆಡಳಿತ ಇಡೀ ಪೃಥ್ವಿಯ ಮೇಲಿರುತ್ತದೆ, ಅಷ್ಟು ಶಕ್ತಿಶಾಲಿ ರಾಜ)ನಿದ್ದನು. ಅವನ ಹತ್ತಿರ 72 ಅಕ್ಷೌಣಿ ಸೇನೆಯಿತ್ತು. ಆ ರಾಜನು, ತನ್ನ

ಅಧೀನದಲ್ಲಿರುವ ರಾಜರಿಗೆ ಹೇಳಿದ ಯಾರಿಗೆ ನನ್ನ ಅಧೀನತೆ ಸ್ವೀಕಾರವಿಲ್ಲವೋ ಅವರು ನನ್ನೊಡನೆ ಯುದ್ಧ ಮಾಡಿ, ರಾಜ ಮಾನಧಾತನ ಅಧೀನತೆಯನ್ನು ಸ್ವೀಕರಿಸಲಾಗದವರು ಕುದುರೆಯನ್ನು ಹಿಡಿದುಕೊಳ್ಳಿ ಮತ್ತು ಯುದ್ಧಕ್ಕಾಗಿ ಸಿದ್ಧತೆ ಮಾಡಿ ಎಂದು ಒಂದು ಪತ್ರದಲ್ಲಿ ಬರೆದು ಕುದುರೆಯ ಕೊರಳಿಗೆ ತೂಗುಹಾಕಿದನು. ಇಡೀ ಪೃಥ್ವಿ ಮೇಲೆ ಯಾವ ರಾಜನು ಸಹ ಕುದುರೆಯನ್ನು ಹಿಡಿಯಲಿಲ್ಲ ಅದರ ಜೊತೆಗೆ ಕೆಲವು ಸೈನಿಕರು ಸಹ ಇದ್ದರು. ಮರಳಿ ಬರುವಾಗ ಋಷಿ ಚುಣಕನು ಸೈನಿಕರಿಗೆ ಕೇಳಿದನು ಎಲ್ಲಿ ಹೋಗಿದ್ದೀರಿ, ಉತ್ತರ ಸಿಕ್ಕಿತು ಎಲ್ಲ ಪೃಥ್ವಿ ಮೇಲೆ ತಿರುಗಿ ಬಂದೆವು ಆದರೆ ಕುದುರೆಯನ್ನು ಹಿಡಿದು ನಿಲ್ಲಿಸುವ ಧೈರ್ಯ ಯಾರೂ ಮಾಡಲಿಲ್ಲ. ಯಾರೂ ರಾಜನ ಯುದ್ಧ ಸ್ವೀಕರಿಸಲಿಲ್ಲ. ಆದರೆ ಚುಣಕ ಋಷಿ ಹೇಳಿದ ನಾನು ಯುದ್ಧ ಸ್ವೀಕರಿಸಿದೆ. ಸೈನಿಕರು 'ನಿನ್ನ ಬಳಿ ತಿನ್ನಲು ಗತಿಯಿಲ್ಲ' ನೀನು ಯುದ್ಧ ಮಾಡುವೆಯಾ ರಾಜ ಮಾನಧಾತನ ಜೊತೆಗೆ?' ಎಂದಾಗ ಚುಣಕ ಋಷಿಯು ಆ ಕುದುರೆಯನ್ನು ಮರಕ್ಕೆ ಕಟ್ಟಿ ಹಾಕಿದನು. ಈ ವಿಷಯವನ್ನು ತಿಳಿದ ರಾಜನು ಯುದ್ಧಕ್ಕೆ ಸಕಲ ಸಿದ್ಧತೆಗಳನ್ನು ಮಾಡಿದನು. ಮತ್ತು ರಾಜನು ತನ್ನ 72 ಅಕ್ಷೋಹಿಣಿ ಸೈನ್ಯವನ್ನು ನಾಲ್ಕು ತುಕಡಿಯನ್ನಾಗಿ ಮಾಡಿ ಋಷಿಯ ಮೇಲೆ ಆಕ್ರಮಣ ಮಾಡಲು ತನ್ನ ಒಂದು ತುಕಡಿಯ 18 ಅಕ್ಷೋಹಿಣಿ (18 ಕೋಟಿ) ಸೈನ್ಯವನ್ನು ಕಳುಹಿಸಿದನು. ಮತ್ತೊಂದು ಕಡೆ ಋಷಿಯು ತನ್ನ ಸಿದ್ಧಿಯಿಂದ ನಾಲ್ಕು ಗೊಂಬೆಗಳನ್ನು ತಯಾರಿಸಿದನು. ಹಾಗೂ ಒಂದು ಗೊಂಬೆಯನ್ನು ಯುದ್ಧಕ್ಕೆ ಬಿಟ್ಟನು. ಅದು ರಾಜನ 18 ಕೋಟಿ ಸೈನ್ಯವನ್ನು ನಾಶಗೊಳಿಸಿತು. ರಾಜನು ಎರಡನೆಯ ಸೈನ್ಯದ ಭಾಗವನ್ನು ಕಳುಹಿಸಿದನು. ಋಷಿಯು ತನ್ನ ಎರಡನೆಯ ಗೊಂಬೆಯನ್ನು ಕಳುಹಿಸಿದನು. ರಾಜನ ಎರಡನೆಯ 18 ಅಕ್ಷೋಹಿಣಿ ಸೇನೆಯು ನಾಶವಾಯಿತು. ಹೀಗೆ ಚುಣಕ ಋಷಿಯು ಮಾನಧಾತ ರಾಜನ 72 ಅಕ್ಷೋಹಿಣಿ ಸೇನೆಯನ್ನು ತನ್ನ 4 ಗೊಂಬೆಗಳಿಂದ ನಾಶಮಾಡಿಸಿದನು. ಈ ಕಾರಣದಿಂದಾಗಿ ಚುಣಕ ಮಹರ್ಷಿಯು ಇಡೀ ಪೃಥ್ವಿಯ ಮೇಲೆ ಪ್ರಸಿದ್ಧನಾದನು. ಈ ಅನರ್ಥ ಕಾರ್ಯದಿಂದ ಸರ್ವ ಶ್ರೇಷ್ಠ ಋಷಿ ಎನಿಸಿಕೊಂಡನು.

"ಹೇ ಧರ್ಮದಾಸ! (ಜಿಂದಾ ರೂಪಧಾರಿ ಪರಮಾತ್ಮನು ಹೇಳಿದ) ಋಷಿ ಚುಣಕ ಸೇನೆಯನ್ನು ನಾಶಮಾಡಿದ ಈ ಪಾಪ ಕಾರ್ಯವು ಆತನ ಕರ್ಮಗಳಲ್ಲಿ ಸೇರಿಕೊಂಡಿದೆ. ಅವನು 'ಓಂ' ನಾಮ ಒಂದು ಅಕ್ಷರದು ಜಪಿಸಿದ್ದರಿಂದ ಅವನು ಅದರ ಬದಲಾಗಿ ಬ್ರಹ್ಮಲೋಕದಲ್ಲಿ ಹೋಗುವನು, ನಂತರ ಬ್ರಹ್ಮಲೋಕದ ಎಲ್ಲಾ ಸುಖವನ್ನು ಅನುಭವಿಸಿದ ನಂತರ ಪೃಥ್ವಿಮೇಲೆ ಜನಿಸುವನು. ಹಾಗೂ ಆತ ಮಾಡಿದ ಹಠಯೋಗದಿಂದ ಪೃಥ್ವಿಮೇಲೆ ರಾಜನಾಗುತ್ತಾನೆ ಮತ್ತು ಮೃತ್ಯುವಿನ ನಂತರ ನಾಯಿಯ ಜನ್ಮ ತಾಳುವನು. ಆ ಶ್ವಾನದ ತಲೆಯಲ್ಲಿ ಗಾಯಗಳಾಗಿ ಯುದ್ಧದಲ್ಲಿ ಸತ್ತ ಸೈನಿಕರು ಹುಳುಗಳ ರೂಪದಲ್ಲಿ ತಮ್ಮ ಪ್ರತಿಕಾರವನ್ನು ತೆಗೆದುಕೊಳ್ಳುವರು. ಹೇ ಧರ್ಮದಾಸ! ಆದ್ದರಿಂದ ಗೀತಾ ಜ್ಞಾನದಾತ (ಬ್ರಹ್ಮ)ನು, ತನ್ನ ಸಾಧನೆಯಿಂದ ಆಗುವ ಮುಕ್ತಿಯು ಅನುತ್ತಮ (ಅಶ್ರೇಷ್ಠ)ವಾಗಿರುವುದು ಎಂದು ಹೇಳಿರುವನು."

ಪ್ರಶ್ನೆ 45 (ಧರ್ಮದಾಸ):- ಹೇ ಜಿಂದಾ! ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಭಗವಂತ ಕೃಷ್ಣನು ಯಾವ ಪರಮೇಶ್ವರನಿಗೆ ಶರಣಾಗಲು ಹೇಳಿದ್ದಾನೆ? ಎಂದು ಒಬ್ಬ ಮಹಾಮಂಡಲೇಶ್ವರನ ಬಳಿ ಕೇಳಿದಾಗ ಕೃಷ್ಣನೇ ಸ್ವತಃ ಪೂರ್ಣ ಪರಮಾತ್ಮ. ಅವನು ತನ್ನ ಶರಣದಲ್ಲೇ ಬರಲು ಹೇಳುತ್ತಿರುವನು, ಹಾಗಾಗಿ ಹೇ ಜಿಂದಾ! ನನ್ನ ಈ ಅಜ್ಞಾನವನ್ನು ದೂರಮಾಡು.

ಉತ್ತರ :- (ಜಿಂದಾ ಮಹಾತ್ಮನ ಪರಮೇಶ್ವರನ):- ಹೇ ಧರ್ಮದಾಸ

ಯೆ ಮಾಲಾ ಡಾಲ್ ಹುಎ ಹೈಂ ಮುಕ್ತಾ । ಷಟ್‌ದಲ್ ಉವಾ-ಬಾಈ ಬಕತಾ ।

ನಿಮ್ಮ ಸರ್ವಮಂಡಲೇಶ್ವರ ಹಾಗು ಶಂಕರಾಚಾರ್ಯರು ಏನೇನೋ ಹೇಳಿ ಮುಗ್ಧ ಜನರನ್ನು ಭ್ರಮೆಗೊಳಪಡಿಸುತ್ತಿದ್ದಾರೆ. ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ

ಅರ್ಜುನನನ್ನು ಕೃಷ್ಣನು ತನ್ನ ಶರಣಾಗುವಂತೆ ಹೇಳುವುದು ಸಂಪೂರ್ಣ ತಪ್ಪು. ಏಕೆಂದರೆ ಗೀತೆಯ 2ನೇ ಅಧ್ಯಾಯದ 7ನೇ ಶ್ಲೋಕದಲ್ಲಿ ಅರ್ಜುನನು, ಹೇ ಕೃಷ್ಣ ನನ್ನ ಬುದ್ಧಿಯು ಸರಿಯಾಗಿ ಕೆಲಸಮಾಡುತ್ತಿಲ್ಲ ನಾನು ನಿಮ್ಮ ಶಿಷ್ಯನು, ನಿಮ್ಮ ಶರಣದಲ್ಲಿರುವೆನು. ಯಾವುದು ನನ್ನ ಹಿತದಲ್ಲಿರುವುದೋ ಆ ಜ್ಞಾನವನ್ನು ನನಗೆ ನೀಡಿ ಎಂದನು. ಹೇ ಧರ್ಮದಾಸ ಅರ್ಜುನನು ಮೊದಲೇ ಕೃಷ್ಣನಿಗೆ ಶರಣಾಗಿದ್ದನು. ಆದ್ದರಿಂದ ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಗೀತಾ ಜ್ಞಾನದಾತನು, ಅನ್ಯ 'ಪರಮ ಅಕ್ಷರ ಬ್ರಹ್ಮ' ನಿಗೆ ಶರಣಾಗಲು ಹೇಳಿರುವನು. ಗೀತೆಯ 4ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ. ಹೇ ಅರ್ಜುನ ನೀನು ನನ್ನ ಭಕ್ತ ಆದ್ದರಿಂದ ಈ ಗೀತೆಯ ಶಾಸ್ತ್ರವನ್ನು ಹೇಳಿದ್ದೇನೆ.

ಗೀತೆಯ ಜ್ಞಾನದಾತನಿಗಿಂತ ಅನ್ಯ ಪರಮಾತ್ಮನ ಬಗ್ಗೆ ಹೇಳಿರುವ ಆಧಾರವು ಗೀತೆಯ 13ನೇ ಅಧ್ಯಾಯದ 11ರಿಂದ 28, 30, 31, 34ನೇ ಶ್ಲೋಕಗಳಲ್ಲಿ ದೊರೆಯುತ್ತದೆ.

❖ ಶ್ರೀಮದ್ ಭಗವದ್ಗೀತೆಯ 13ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಗೀತಾ ಜ್ಞಾನದಾತನು ಹೀಗೆಂದಿದ್ದಾನೆ. ಶರೀರವನ್ನು ಕ್ಷೇತ್ರ ಎನ್ನುತ್ತಾರೆ, ಯಾರು ಈ ಕ್ಷೇತ್ರ ಅರ್ಥಾತ್ ಶರೀರವನ್ನು ತಿಳಿದಿರುತ್ತಾನೋ, ಅವನನ್ನು 'ಕ್ಷೇತ್ರಜ್ಞ' ಎಂದು ಹೇಳಲಾಗುತ್ತದೆ. (ಗೀತೆಯ 13ನೇ ಅಧ್ಯಾಯ 1ನೇ ಶ್ಲೋಕ)

❖ ಗೀತೆಯ 13ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಗೀತಾ ಜ್ಞಾನದಾತನು, 'ನಾನು ಕ್ಷೇತ್ರಜ್ಞ ಎಂದು ಹೇಳಿದ್ದಾನೆ. ಕ್ಷೇತ್ರ ಮತ್ತು ಕ್ಷೇತ್ರಜ್ಞವನ್ನು ಅರಿಯುವುದೇ 'ತತ್ವಜ್ಞಾನ'ವಾಗಿದೆ ಎಂದು ನನ್ನ ಅಭಿಪ್ರಾಯ. ಗೀತೆಯ 13ನೇ ಅಧ್ಯಾಯದ 10ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, 'ನನ್ನ ಭಕ್ತಿಯು ಅವ್ಯಭಿಚಾರಿಣಿಯಾಗಿರಬೇಕು. ಅನ್ಯ ದೇವತೆಗಳ ಸಾಧನೆಯು ವ್ಯರ್ಥ ಎಂದು ಗೀತೆಯ 7ನೇ ಅಧ್ಯಯಾದ 12ರಿಂದ 15ನೆಯ ಮತ್ತು 20ರಿಂದ 23ನೆಯ ಹಾಗೂ 9ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ ಹೇಳಲಾಗಿದೆ. ಕೇವಲ ಬ್ರಹ್ಮನನ್ನು ಆರಾಧಿಸಿ. ಅದರ ವಿಷಯದಲ್ಲಿ ಇಲ್ಲಿ ಹೇಳಲಾಗುದೆ ಅನ್ಯ ದೇವತೆಗಳಲ್ಲಿ ಅಸಕ್ತರಾಗಬೇಡಿ. ಭಾವಾರ್ಥವೇನೆಂದರೆ, ಕೇವಲ ಭಕ್ತಿಗಾಗಿ, ಮುಕ್ತಿಗಾಗಿ ಜ್ಞಾನವನ್ನು ಅರಿಯಬೇಕು. ಬೋಧನೆ ಮಾಡುವುದಕ್ಕಾಗಿ ಅಲ್ಲ. ಇದನ್ನು ಬಿಟ್ಟು ಬೊಧನೆ ಮಾಡಲು ಜ್ಞಾನವನ್ನು ಅರಿತರೆ ಅದು ಅಜ್ಞಾನವಾಗುತ್ತದೆ. ಪತಿವ್ರತ ಸ್ತ್ರೀಯಂತೆ ಕೇವಲ ನನ್ನಲ್ಲೇ ಶ್ರದ್ಧೆ ಇಟ್ಟು ಭಕ್ತಿ ಮಾಡು. ಅನ್ಯ ಮನುಷ್ಯರ ಜೊತೆಗೂಡಿ ಮಾತು ಮರೆಸುವ ಸ್ವಭಾವವಿರದೆ, ಏಕಾಂತದಲ್ಲಿ ಇದ್ದು ಭಕ್ತಿ ಮಾಡಿ.

❖ ಗೀತೆಯ 13ನೇ ಅಧ್ಯಾಯದ 11ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು, 'ಆಧ್ಯಾತ್ಮ ಜ್ಞಾನದಲ್ಲಿ ಆಸ್ತರಾಗಿ, ತತ್ವಜ್ಞಾನಕ್ಕಾಗಿ ಸದ್ಗ್ರಂಥಗಳನ್ನು ತಿಳಿದುಕೊಳ್ಳುವುದೇ ತತ್ವಜ್ಞಾನವಾಗಿದೆ. ಅದರ ಬದಲಾಗಿ ತತ್ವಜ್ಞಾನದ ಅಪೇಕ್ಷೆ ಹಾಗು ಕಥೆಗಳನ್ನು ಕೇಳುವುದು, ಹೇಳುವುದು ಶಾಸ್ತ್ರದ ವಿರುದ್ಧವಾಗಿ ಭಕ್ತಿಮಾಡುವುದೆಲ್ಲಾ ಅಜ್ಞಾನವಾಗಿರುತ್ತದೆ. ತತ್ವಜ್ಞಾನಕ್ಕಾಗಿ ಪರಮಾತ್ಮನನ್ನು ಅರಿತುಕೊಳ್ಳುವುದೇ ಜ್ಞಾನ' ಎಂದು ಹೇಳಿದ್ದಾನೆ.

❖ ಗೀತೆಯ 13ನೇ ಅಧ್ಯಾಯದ 12ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನಗಿಂತ ಭಿನ್ನನಾದ 'ಪರಮ ಬ್ರಹ್ಮ' ಅರ್ಥಾತ್ ಶ್ರೇಷ್ಠ ಪರಮಾತ್ಮನ ಜ್ಞಾನವನ್ನು ಹೇಳಿದ್ದಾನೆ. ಯಾವ ಪರಮಾತ್ಮ (ಜ್ಞೇಯಮ್) ಅರಿಯಲು ಯೋಗ್ಯನೋ, ಯಾರನ್ನು ಅರಿಯುವುದರಿಂದ (ಅಮೃತಮ್ ಅಶ್ನುತೆ) ಅಮರತ್ವ ಅರ್ಥಾತ್ ಪೂರ್ಣ ಮೋಕ್ಷ ಹಾಗೂ ಮಹದಾನಂದ ಸಿಗುವುದೋ, ಅದನ್ನು ಸರಿಯಾಗಿ ಹೇಳುವೆನು. (ತತ್) ಆ ಬೇರೊಬ್ಬ (ಬ್ರಹ್ಮ) ಪರಮಾತ್ಮನು ಸತ್ಯವು ಅಲ್ಲ, ಅಸತ್ಯವು ಅಲ್ಲ. ಅರ್ಥಾತ್ ಗೀತೆಯ ಜ್ಞಾನದಾತನು 4ನೇ ಅಧ್ಯಾಯದ 32, 34ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾವುದು ತತ್ವಜ್ಞಾನವೋ ಅದು ಪರಮಾತ್ಮನ ಪೂರ್ಣ ಜ್ಞಾನವಿರುತ್ತದೆ. ಆ ತತ್ವಜ್ಞಾನವನ್ನು ಪರಮಾತ್ಮನೇ ಸ್ವತಃ ತನ್ನ ಮುಖಕಮಲದಿಂದ ಹೇಳುತ್ತಾನೆ. ಆ ತತ್ವಜ್ಞಾನವನ್ನು ತತ್ವದರ್ಶಿಸಂತರು

ತಿಳಿದಿರುತ್ತಾರೆ. ಅವರಿಗೆ ದೀರ್ಘದಂಡ ಪ್ರಣಾಮ ಮಾಡುವುದರಿಂದ, ವಿನಮ್ರತೆಯಿಂದ ಪ್ರಶ್ನಿಸುವುದರಿಂದ ಆ ಪರಮಾತ್ಮ ತತ್ವವನ್ನು ಬಹಳ ಚೆನ್ನಾಗಿ ಅರಿತ ತತ್ವದರ್ಶಿ ಸಂತ ನಿನಗೆ ತತ್ವಜ್ಞಾನದ ಉಪದೇಶ ನೀಡುವರು. ಇದರಿಂದ ಗೀತೆಯ ಜ್ಞಾನದಾತನಿಗೆ ಪರಮಾತ್ಮನ ಪೂರ್ಣ ಜ್ಞಾನವಿಲ್ಲ ಎಂಬುದು ಸಾಬೀತಾಯಿತು. ಆದ್ದರಿಂದ ಹೇಳುತ್ತಿದ್ದಾನೆ ಬೇರೊಬ್ಬ ಪರಮಾತ್ಮನಿದ್ದಾನೆ. ಅವನು ಗೀತೆಯ ಜ್ಞಾನದಾತನಿಗಿಂತಲೂ ಭಿನ್ನನು. ಅವನು ಸತ್ಯನೂ ಅಲ್ಲ, ಅಸತ್ಯನೂ ಅಲ್ಲ. ಇಲ್ಲಿ ಪರ+ಬ್ರಹ್ಮ ಅರ್ಥ ಏಳು ಶಂಖ ಬ್ರಹ್ಮಾಂಡದ ಪರಬ್ರಹ್ಮ ಅರ್ಥಾತ್ ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದ ಅಕ್ಷರ ಪುರುಷನಲ್ಲ. ಏಕೆಂದರೆ ಕಾಲಲೋಕದಲ್ಲಿ (ಅದು 21 ಬ್ರಹ್ಮಾಂಡದ ಕ್ಷೇತ್ರವಿದೆ) ಅಕ್ಷರಪುರುಷ ಎಂದು ಕರೆದಿರುವ ಪರಬ್ರಹ್ಮನ ಪಾತ್ರ ವಿಶೇಷವಾದುದಲ್ಲ. ಇಲ್ಲಿ ಕಾಲನ ಲೋಕದಲ್ಲಿ ಕಾಲ ಹಾಗೂ ದಯಾಳುವಿನ ಪಾತ್ರವಿದೆ. (21 ಬ್ರಹ್ಮಾಂಡಗಳ ಕ್ಷೇತ್ರ) ಆದ್ದರಿಂದ ಇಲ್ಲಿ (ಪರ ಅಂದರೆ ಬೇರೆಯ ಮತ್ತು ಬ್ರಹ್ಮ ಅಂದರೆ ಪರಮಾತ್ಮ) ಬ್ರಹ್ಮನನ್ನು ಬಿಟ್ಟು ಬೇರೆ ಪರಮಾತ್ಮನ ಪೂರ್ಣಬ್ರಹ್ಮನ ವರ್ಣನೆ ಇದೆ.

ಭಾವಾರ್ಥ:– ಗೀತೆಯ 13ನೇ ಅಧ್ಯಾಯದ 12ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೀಗೆಂದಿದ್ದಾನೆ, ತನಗಿಂತ ಬೇರೊಬ್ಬ "ಬ್ರಹ್ಮ" ಅರ್ಥಾತ್ ಪ್ರಭು ಇದ್ದಾನೆ. ಆತನು ಅನಾದಿಯಾಗಿರುವನು. ಅನಾದಿ ಅಂದರೆ ಎಂದಿಗೂ ಜನ್ಮತಾಳದವನು. ಗೀತೆಯ ಜ್ಞಾನದಾತನು ಕ್ಷರಪುರುಷನು. ಇವನನ್ನು "ಬ್ರಹ್ಮ" ಎಂದೂ ಕೂಡ ಕರೆಯಲಾಗುತ್ತದೆ. ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5, 9 ಹಾಗೂ 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಸ್ವಯಂ ಅವನೇ ಸ್ವೀಕರಿಸುತ್ತಾ, ಹೇ ಅರ್ಜುನ! ನಿನ್ನ ಹಾಗು ನನ್ನ ಬಹಳ ಜನ್ಮಗಳಾಗಿವೆ. ಅದು ನಿನಗೆ ಗೊತ್ತಿಲ್ಲ ನನಗೆ ಗೊತ್ತಿದೆ' ಎಂದು ಹೇಳಿರುವನು. ಇದರಿಂದ ಗೀತಾ ಜ್ಞಾನದಾತನು ಅನಾದಿಯ 'ಬ್ರಹ್ಮ' ಅರ್ಥಾತ್ ಪ್ರಭುವಲ್ಲ ಹಾಗೂ ಗೀತೆಯ 13ನೇ ಅಧ್ಯಾಯದ 12ನೇ ಶ್ಲೋಕದಲ್ಲಿ ತನಗಿಂತ ಅನ್ಯ ಅವಿನಾಶಿ ಪರಮಾತ್ಮನ ಮಹಿಮೆಯನ್ನು ಹೇಳಿರುವನು ಎಂದು ಸಾಬೀತಾಗುತ್ತದೆ. (ಅಧ್ಯಾಯ 13 ಶ್ಲೋಕ 12)

❖ ಗೀತೆಯ ಜ್ಞಾನದಾತ ಬ್ರಹ್ಮನು. ಇವನು ಒಂದು ಸಾವಿರ (ಸಹಸ್ರ) ಕೈ–ಕಾಲುಗಳನ್ನು ಹೊಂದಿರುವನು. ಹಾಗೂ ಸಹಸ್ರ ಕಮಲದ ದಳಗಳನ್ನು ಹೊಂದಿರುವವನು. ಗೀತೆಯ 11ನೇ ಅಧ್ಯಾಯದ 46ನೇ ಶ್ಲೋಕದಲ್ಲಿ ಅರ್ಜುನನು, 'ಹೇ ಸಹಸ್ರಬಾಹು, (ಸಾವಿರ ಕೈಗಳನ್ನು ಹೊಂದಿರುವವನು) ನೀನು ಚತುರ್ಭುಜದ ರೂಪದಲ್ಲಿ ಬಾ ಎಂದು ಹೇಳಿರುವನು. ಇದರಿಂದ ಗೀತೆಯ ಜ್ಞಾನದಾತನು ಕೇವಲ ಸಾವಿರ ಬಾಹುಗಳನ್ನು ಹೊಂದಿರುವವನು ಎಂದು ಸ್ಪಷ್ಟವಾಗುತ್ತದೆ. ಹಾಗೂ ಗೀತೆಯ 13ನೆಯ ಅಧ್ಯಾಯದ 13ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು, ತನಗಿಂತ ಭಿನ್ನವಾದ ಎಲ್ಲಾ ಕಡೆ ಕೈ–ಕಾಲುಗಳುಳ್ಳ, ನೇತ್ರ, ತಲೆ ಹಾಗೂ ಕಿವಿಗಳುಳ್ಳ ಅನ್ಯ ಪರಮಾತ್ಮನ ಮಹಿಮೆಯನ್ನು ಹೇಳುತ್ತಿದ್ದಾನೆ. ಆ ಪರಮಾತ್ಮನೇ ಇಡೀ ಜಗತ್ತನ್ನು ತನ್ನ ಶಕ್ತಿಯಿಂದ ನಿಯಂತ್ರಿಸುತ್ತಾನೆ ಹಾಗು ಸತ್ಯಲೋಕ (ಶಾಶ್ವತ್ ಸ್ಥಾನಮ್ ತಿಷ್ಠತಿ) ದಲ್ಲಿ ಕುಳಿತಿರುವನು ಎಂದಿದ್ದಾನೆ.

ಇದರಿಂದ ಸ್ಪಷ್ಟವಾಗುವುದೇನೆಂದರೆ, ಗೀತೆಯ ಜ್ಞಾನದಾತನಿಗಿಂತಲೂ ಅನ್ಯ ಸಮರ್ಥ ಪರಮಾತ್ಮನೊಬ್ಬನಿದ್ದಾನೆ. ಅವನೇ ಇಡೀ ಜಗತ್ತಿನ ಸಂಚಾಲಕನಾಗಿದ್ದು ಎಲ್ಲರನ್ನೂ ಪೋಷಿಸುವವನಾಗಿದ್ದಾನೆ. (ಗೀತಾ ಅಧ್ಯಾಯ 13 ಶ್ಲೋಕ 13)

❖ ಗೀತೆಯ 13ನೇ ಅಧ್ಯಾಯದ 14ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು, ತನಗಿಂತ ಅನ್ಯ ಪರಮಾತ್ಮನ ಜ್ಞಾನದ ಬಗ್ಗೆ ತಿಳಿಸಿದ್ದಾನೆ. ಹೇಳಿದ್ದಾನೆ ಸಂಪೂರ್ಣ ಇಂದ್ರಿಯಗಳ ವಿಷಯವನ್ನು ತಿಳಿದಿರುವವನು ಅರ್ಥಾತ್ ಅಂತರ್ಯಾಮಿಯಾಗಿರುವನು. ಸಕಲ ಇಂದ್ರಿಯಗಳ ರಹಿತನು. ಅರ್ಥಾತ್ ಪರಮಾತ್ಮನ ಇಂದ್ರಿಯಗಳು ಮಾನವರಂತೆ ಅಥವಾ ಅನ್ಯ ಪ್ರಾಣಿಗಳಂತೆ

ವಿಕಾರಗ್ರಸ್ಥವಾಗಿರುವುದಿಲ್ಲ ಹಾಗೂ ಆ ಪರಮಾತ್ಮ ಆಸಕ್ತರಹಿತನು. ಅರ್ಥಾತ್ ಅವನು ಈ ಕಾಲಲೋಕ (21 ಬ್ರಹ್ಮಾಂಡ)ದ ಯಾವುದೇ ವಸ್ತು ಅಥವಾ ಪದಾರ್ಥಗಳಲ್ಲಿಯೂ ಆಸಕ್ತಿ ತೋರುವುದಿಲ್ಲ. ಏಕೆಂದರೆ ಆ ಪರಮಾತ್ಮನ ಸತ್ಯಲೋಕವು ಈ ಕಾಲನ ಲೋಕದಿಂದ ಅಸಂಖ್ಯ ಪಟ್ಟು ಉತ್ತಮವಾಗಿದೆ. ಆದ್ದರಿಂದ ಆ ಪರಮಾತ್ಮನು ಆಸಕ್ತರಹಿತನು. ಅವನೇ ಎಲ್ಲರನ್ನೂ ಪೋಷಿಸುವವನು ಎಂಬ ಪ್ರಮಾಣವು ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಸಿಗುತ್ತದೆ. ಹಾಗೂ ಆ ಪರಮಾತ್ಮನು ನಿರ್ಗುಣನು ಆದರೆ ಸಗುಣ ರೂಪದಲ್ಲಿದ್ದು ತನ್ನ ಮಹತ್ವವನ್ನು ತೋರಿಸುತ್ತಾನೆ. ಉದಾಹರಣೆಗೆ :- ಹೇಗೆ ಮಾವಿನ ಮರವು ಮಾವಿನ ಬೀಜದಲ್ಲಿ ನಿರ್ಗುಣ ಅವಸ್ಥೆಯಲ್ಲಿರುತ್ತದೆ. ಯಾವಾಗ ಆ ಬೀಜವನ್ನು ಬಿತ್ತುತ್ತೇವೆಯೋ ಅದು ಗಿಡವಾಗಿ ನಂತರ ಮರದ ಮುಖಾಂತರ ಸಗುಣರೂಪದಲ್ಲಿ ತನ್ನ ಫಲವನ್ನು ನೀಡುತ್ತದೆ. ಆದರೆ ಪರಮಾತ್ಮನು ಸತ್ಯಲೋಕದಲ್ಲಿ ಸಗುಣ ರೂಪದಲ್ಲಿರುವನು ಏಕೆಂದರೆ ಪರಮಾತ್ಮನು ತನ್ನ ವಚನ ಶಕ್ತಿಯಿಂದ ಸರ್ವ ಸೃಷ್ಟಿಯನ್ನು ರಚಿಸಿ ವಿಧಾನ ಮಾಡಿ ಬಿಟ್ಟನು. ಆ ಪರಮಾತ್ಮನ ವಿಧಾನದ ಅನುಸಾರವಾಗಿ ಸರ್ವ ಜೀವಿಗಳು ಹಾಗೂ ನಕ್ಷತ್ರಗಳು, ತಯಾರಾಗುತ್ತಿರುತ್ತವೆ ಹಾಗು ನಾಶವಾಗುತ್ತಿರುತ್ತವೆ. ಜೀವಿಗಳು ಕರ್ಮಾನುಸಾರವಾಗಿ ಜನ್ಮ-ಮರಣ ಆಗುತ್ತಿರುತ್ತದೆ. ಆ ಪರಮಾತ್ಮನಿಗೆ ಯಾವುದೇ ಟೆನ್ಶನ್ (ಚಿಂತೆ) ಇಲ್ಲ. ಯಾವಾಗ ಪರಮಾತ್ಮನು ಪೃಥ್ವಿ ಮೇಲೆ ಪ್ರಕಟಗೊಳ್ಳುವನು ಆಗ ಎಲ್ಲಾ ಗುಣಗಳನ್ನು ಅನುಭವಿಸುತ್ತಾನೆ. ಒಂದು ಮಾವಿನ ಮರಕ್ಕೆ ನಿರ್ಗುಣ ರೂಪದಿಂದ ಸಗುಣ ರೂಪಕ್ಕೆ ಬರಲು ಬಹಳ ಸಮಯ ಬೇಕಾಗುವುದು. ಆದರೆ ಪರಮಾತ್ಮನಿಗೆ ಸಮಯದ ಸೀಮೆ ಇರುವುದಿಲ್ಲ. ಅವನು ಕ್ಷಣ ಮಾತ್ರದಲ್ಲಿ ನಿರ್ಗುಣನಾಗಬಹುದು ಹಾಗೂ ಕ್ಷಣ ಮಾತ್ರದಲ್ಲಿ ಸಗುಣನಾಗಬಹುದು. ಹೇಗೆ ಕ್ಷಣ ಮಾತ್ರದಲ್ಲೇ ಸತ್ಯಲೋಕಕ್ಕೆ ಮರಳಿದಾಗ ನಮಗೆಲ್ಲಾ ಅವರು ನಿರ್ಗುಣರಾಗುವರು. ನಾವು ಅವರ ಗುಣಗಳ ಲಾಭಗಳನ್ನು ಪ್ರಾಪ್ತಿ ಮಾಡಲಾಗುವುದಿಲ್ಲ ಹಾಗೂ ಕ್ಷಣದಲ್ಲಿ ಪೃಥ್ವಿ ಮೇಲೆ ಪ್ರಕಟಗೊಂಡಾಗ ಅವರು ಸಗುಣರಾಗುತ್ತಾರೆ. ನಮಗೆ ಆಶೀರ್ವದಿಸಿ ತಮ್ಮ ಗುಣಗಳ ಲಾಭ ನೀಡುತ್ತಾರೆ. ಈ ರೀತಿ ನಿರ್ಗುಣ-ಸಗುಣ ಹೇಳಿದ್ದಾರೆ. ಇದರಿಂದ ಸಾಬೀತಾಗುವುದೇನೆಂದರೆ, ಗೀತೆಯ ಜ್ಞಾನದಾತನಿಗಿಂತಲೂ ಬೇರೊಬ್ಬ ಪರಮಾತ್ಮನಿದ್ದಾನೆ. ಅವನೇ ಎಲ್ಲರ ಧಾರಣೆ-ಪೋಷಣೆ ಮಾಡುವವನಾಗಿದ್ದಾನೆ.

❖ ಗೀತೆಯ 13ನೇ ಅಧ್ಯಾಯದ 15-16ನೇ ಶ್ಲೋಕದಲ್ಲಿ ಇದೆ ಪ್ರಮಾಣವಿದೆ ಗೀತಾ ಜ್ಞಾನದಾತನು ಹೇಳಿರುವುದೇನೆಂದರೆ, ಹೇಗೆ ಸೂರ್ಯನು ದೂರ ಸ್ಥಾನದಲ್ಲಿ ಸ್ಥಿತನಾಗಿದ್ದು ತನ್ನ ಪ್ರಭಾವವನ್ನು ಪೃಥ್ವಿಯ ಮೇಲೆ ಬೀರುತ್ತಾನೆಯೋ ಹಾಗೆಯೇ ಪರಮಾತ್ಮನು ಸತ್ಯಲೋಕದಲ್ಲಿದ್ದು ಸರ್ವ ಬ್ರಹ್ಮಾಂಡದ ಮೇಲೆ ತನ್ನ ಪ್ರಭಾವವನ್ನು ಬೀರುತ್ತಾನೆ. ಸರ್ವ ಚರಾಚರ ಭೂತಗಳ. ಒಳಗೆ-ಹೊರಗೆ ಇರುವನು. ಈ ಪ್ರಕಾರ ಅವನು ಸೂಕ್ಷ್ಮನಾಗಿರುವ ಕಾರಣ ನಾವು ನಮ್ಮ ಚರ್ಮದೃಷ್ಟಿಯಿಂದ ನೋಡಲು ಸಾಧ್ಯವಿಲ್ಲ. ಆದ್ದರಿಂದ ಅವನು ನಮ್ಮ ಜ್ಞಾನಕ್ಕೆ ನಿಲುಕುವುದಿಲ್ಲ. ಹಾಗು ಅದೇ ಪರಮತ್ಮ ನಮ್ಮ ಸಮೀಪದಲ್ಲೂ ಇರುವನು, ದೂರದಲ್ಲಿಯೂ ಇರುವನು. ಪರಮಾತ್ಮನು ದೂರ ಸತ್ಯಲೋಕದಲ್ಲಿದ್ದು ತನ್ನ ಶಕ್ತಿಯ ಪ್ರಭಾವವನ್ನು ಪ್ರತಿಯೊಂದು ಜೀವಿಯ ಮೇಲೆ ಬೀರುತ್ತಿರುತ್ತಾನೆ. (ಗೀತಾ ಅಧ್ಯಾಯ 13 ಶ್ಲೋಕ 15)

❖ ಯಾವ ರೀತಿ ಸೂರ್ಯನು ದೂರಸ್ಥಿತಿಯಲ್ಲಿದ್ದು ಪೃಥ್ವಿಯ ಮೇಲಿರುವ ಎಲ್ಲಾ ಜೀವಿಗಳಿಗೆ ಸಮಾನವಾಗಿ ಕಾಣಿಸುತ್ತಾನೆಯೋ, ಹೇಗೆ ಒಂದು ಸ್ಥಳದಲ್ಲಿ ಅನೇಕ ಬಿಂದಿಗೆಗಳಲ್ಲಿ ಜಲವನ್ನು ತುಂಬಿಸಿಟ್ಟರೆ ಸೂರ್ಯ ಪ್ರತಿಯೊಂದು ಬಿಂದಿಗೆಯಲ್ಲಿ ಕಾಣುತ್ತಾನೋ, ತುಂಡು ತುಂಡಾಗಿ ಕಾಣುವುದಿಲ್ಲ, ಹಾಗೆಯೇ ಪರಮಾತ್ಮನು ಪ್ರತಿಯೊಬ್ಬ ವ್ಯಕ್ತಿಗೂ ಕಾಣಿಸುತ್ತಾನೆ. ಪರಮಾತ್ಮನು ಒಂದು ಜಾಗದಲ್ಲಿ ಸ್ಥಿರವಾಗಿರುತ್ತಾನೆ. ಆ ಪರಮಾತ್ಮನು ಅರಿಯಲು ಯೋಗ್ಯನು. ಭಾವಾರ್ಥವೇನೆಂದರೆ, ನನಗಿಂತ ಭಿನ್ನನಾದ ಪರಮಾತ್ಮನೊಬ್ಬನಿದ್ದಾನೆ, ಅವನನ್ನು ಅರಿಯುವುದು ಮುಖ್ಯ ಎಂದು ಗೀತೆಯ ಜ್ಞಾನದಾತನು ಹೇಳಿದ್ದಾನೆ. ಆ ಪರಮಾತ್ಮನೇ ತನ್ನ

ವಿಧಾನಕ್ಕೆ ಅನುಸಾರವಾಗಿ ಸರ್ವರ ಧಾರಣೆ ಪೋಷಣೆ ಜನನ/ಉತ್ಪತ್ತಿ ಮತ್ತು ಮೃತ್ಯುವನ್ನು ಮಾಡುತ್ತಾನೆ. ವಾಸ್ತವದಲ್ಲಿ ಅವನೇ "ಬ್ರಹ್ಮಾ" (ಎಲ್ಲರ ಉತ್ಪತ್ತಿಕರ್ತ), ಅವನೇ ವಿಷ್ಣು" (ಎಲ್ಲರ ಧಾರಣೆ–ಪೋಷಣೆ ಮಾಡುವವ) ಹಾಗೂ ಅವನೇ ಶಂಕರ (ಸಂಹಾರಕರ್ತ)ನು ಕೂಡ. ಅನ್ಯ "ಬ್ರಹ್ಮಾ, ವಿಷ್ಣು, ಶಂಕರರು ಕೇವಲ ಬ್ರಹ್ಮಾಂಡದ ಕರ್ತೃಗಳು. ಆದರೆ ಆ ಪರಮಾತ್ಮನು ಸರ್ವ ಬ್ರಹ್ಮಾಂಡಗಳ ಬ್ರಹ್ಮಾ, ವಿಷ್ಣು, ಶಂಕರರ ರೂಪದಲ್ಲಿ ಒಬ್ಬನೇ ಆಗಿದ್ದಾನೆ. ಹೇಗೆ ಇಡೀ ಭಾರತ ದೇಶಕ್ಕೆ ಕೇಂದ್ರದ ಗೃಹಮಂತ್ರಿ ಇರುತ್ತಾರೆ ಮತ್ತು ರಾಜ್ಯದ ಗೃಹ ಮಂತ್ರಿ ಕೂಡಾ ಇರುತ್ತಾರೆ. ದೇಶದ ಪ್ರಧಾನಮಂತ್ರಿ ತನ್ನ ಕಡೆ ಬೇರೆ ವಿಭಾಗಗಳನ್ನು ತೆಗೆದುಕೊಳ್ಳುತ್ತಾರೆ ಆ ಸಮಯ ಪ್ರಧಾನಮಂತ್ರಿ ಅವರು ಗೃಹಮಂತ್ರಿ ಇತ್ಯಾದಿ ಕೂಡಾ ಇರುತ್ತಾರೆ ಮತ್ತು ಪ್ರಧಾನ ಮಂತ್ರಿ ಕೂಡಾ ಇರುತ್ತಾರೆ. ಇದರಿಂದ ಸಾಬೀತಾಗುವುದೇನೆಂದರೆ ಗೀತೆಯ ಜ್ಞಾನದಾತನಿಗಿಂತ ಅನ್ಯ ಬೇರೊಬ್ಬ ಪರಮಾತ್ಮನಿದ್ದಾನೆ. ಹಾಗೂ ಅವನು ಪರಿಪೂರ್ಣನು (ಗೀತೆಯ 13ನೇ ಅಧ್ಯಾಯದ 16ನೇ ಶ್ಲೋಕ) ಗೀತೆಯ ಜ್ಞಾನದಾತನು ಗೀತೆಯ 13ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಅನ್ಯ ಪರಮಾತ್ಮನ ಮಹಿಮೆಯ ಬಗ್ಗೆ ಈ ರೀತಿ ಹೇಳಿರುವನು:–

❖ ಆ ಬೇರೆ ಪರಮಾತ್ಮನು (ಪರಮ ಬ್ರಹ್ಮ) ಎಲ್ಲಾ ಜ್ಯೋತಿಗಳ ಜ್ಯೋತಿಯು ಅರ್ಥಾತ್ ಸರ್ವಪ್ರಕಾಶ ಸ್ತ್ರೋತನು, ಆ ಅನ್ಯ ಪರಮಾತ್ಮನ ಶಕ್ತಿಯಿಂದಲೇ ಸರ್ವವೂ ಪ್ರಕಾಶಮಾನವಾಗಿದೆ ಮತ್ತು ಆ ಪರಮಾತ್ಮನ ಪ್ರಕಾಶವು ಎಲ್ಲದಕ್ಕಿಂತ ಅಧಿಕವಾಗಿದೆ ಹಾಗೂ ಆ ಪರಮಾತ್ಮನು ಮಾಯಾ ರಹಿತ ಎನ್ನುವರು. ವಾಸ್ತವದಲ್ಲಿ ಅವನೇ ನಿರಂಜನ. ಗೀತೆಯ ಜ್ಞಾನದಾತನು ಇವನು ಮಾಯಾ ಸಹಿತ 'ಜ್ಯೋತಿ ನಿರಂಜನ' ಎಂದು ಕರೆಯಲ್ಪಡುವನು ಹಾಗೂ ಆ ಪರಮಾತ್ಮನು ಜ್ಞಾನ ಭಂಡಾರ. ಅವನು ಅರಿಯಲು ಯೋಗ್ಯನು, ಅವನನ್ನು (ಜ್ಞಾನಗಮ್ಯಮ್) ತತ್ವಜ್ಞಾನದಿಂದ ಪಡೆಯಲು ಯೋಗ್ಯನು.

ಗೀತೆಯ 13ನೇ ಅದ್ಯಾಯದ 17ನೇ ಶ್ಲೋಕದಲ್ಲಿ ಮೂಲ ಪಾಠದಲ್ಲಿ "ಜ್ಞಾನಮ್ ಜ್ಞೇಯಮ್ ಜ್ಞಾನ ಗಮ್ಯಮ್" ಎಂದು ಹೇಳಲಾಗಿದೆ. ಇದರ ಭಾವಾರ್ಥವೇನೆಂದರೆ, (ಜ್ಞಾನಂ) ಯಾವ ಜ್ಞಾನವನ್ನು ಪರಮಾತ್ಮನು ಸ್ವತಃ ಪೃಥ್ವಿಯ ಮೇಲೆ ಪ್ರತ್ಯಕ್ಷನಾಗಿ ತತ್ವಜ್ಞಾನವನ್ನು ಸ್ವಯಂ ತನ್ನ ಮುಖಕಮಲದಿಂದ ಹೇಳುತ್ತಾನೆ. ಆದ್ದರಿಂದ ಅವನು ಜ್ಞಾನದ ರೂಪ ಅರ್ಥಾತ್ ಜ್ಞಾನದ ಭಂಡಾರ. ಆ ಪರಮಾತ್ಮ (ಜ್ಞೆಯಮ್ ಜ್ಞಾನಗ್ಯಮ್) ಅದೇ ತತ್ವಜ್ಞಾನದಿಂದ ಅರಿಯಲು ಯೋಗ್ಯ ಮತ್ತು ಅದೇ ತತ್ವಜ್ಞಾನದಿಂದ ಪ್ರಾಪ್ತಿ ಮಾಡಲು ಯೋಗ್ಯ. ಆ ಪರಮಾತ್ಮನು ಪ್ರತಿಯೊಂದು ಜೀವಿಯ ಹೃದಯದಲ್ಲಿರುವನು. ಹೇಗೆ ಸೂರ್ಯನು ದೂರದ ಸ್ಥಾನದಲ್ಲಿದ್ದುಕೊಂಡು ಪ್ರತ್ಯೇಕ ಬಿಂದಿಗೆಯ ಜಲದಲ್ಲಿ ಕಾಣಿಸಿಕೊಳ್ಳುತ್ತಾನೆಯೋ, ವಾಸ್ತವದಲ್ಲಿ ಸೂರ್ಯ ಆ ಬಿಂದಿಗೆಯಲ್ಲಿ ಇರುವುದಿಲ್ಲ. ಆದರೆ ಬಿಂದಿಗೆಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತಾನೆ ಹಾಗೂ ಉಷ್ಣತೆಯನ್ನು ಕೊಡುತ್ತಾನೆ. ಸೂಕ್ಷ್ಮ ವೇದದಲ್ಲಿ ಹೇಳಿರುವುದೇನೆಂದರೆ:–

ಬ್ರಹ್ಮಾ ವಿಷ್ಣು ಶಿವ್ ರಾಈ ಝೂಮ್‌ಕರಾ ।
ನಹೀಂ ಸಬ್ ಬಾಜೀ ಕೇ ಖಂಬ್ ಸುನೋಂ ರಾಈ ಝೂಮ್‌ಕರಾ ॥
ವಹ್ ಸರ್ವ್ ಠಾಮ್ ಸಬ್ ಠೌರ್ ಹೈ ರಾಈ ಝೂಮ್‌ಕರಾ ।
ಸಕಲ್ ಲೋಕ್ ಭರ್‌ಪೂರ್ ಸುನೋ ರಾಈ ಝೂಮ್‌ಕರಾ ॥

ಇದೇ ಪ್ರಮಾಣವು ಗೀತೆಯ 18ನೇ ಅಧ್ಯಾಯದ 61ನೇ ಶ್ಲೋಕದಲ್ಲಿ ಹೇಳಿರುವುದು. 'ಹೇ ಅರ್ಜುನ! ಶರೀರರೂಪಿ ಯಂತ್ರದಲ್ಲಿ ಆರೂಢನಾಗಿರುವ ಸಂಪೂರ್ಣ ಜೀವಿಗಳನ್ನು ಅಂತರ್ಯಾಮಿ ಪರಮೇಶ್ವರನು ತನ್ನ ಮಾಯಾ ಅರ್ಥಾತ್ ಶಕ್ತಿಯಿಂದ ಅವರವರ ಕರ್ಮಗಳಿಗೆ ಅನುಸಾರವಾಗಿ ಸಂಚರಿಸುವಂತೆ ಮಾಡುತ್ತಾನೆ ಅರ್ಥಾತ್ ಸಂಸ್ಕಾರಗಳಿಗೆ ಅನುಸಾರವಾಗಿ ಒಳ್ಳೆಯ–ಕೆಟ್ಟ ಯೋನಿಗಳಲ್ಲಿ ಸುತ್ತಾಡಿಸುತ್ತಾನೆ. ಆ ಸರ್ವ ಶಕ್ತಿಮಾನ ಪರಮಾತ್ಮನು ಎಲ್ಲರ

ಹೃದಯದಲ್ಲಿ ವಿರಾಜಮಾನನಾಗಿದ್ದಾನೆ'. ಈ ರೀತಿಯಾಗಿ ಪರಮೇಶ್ವರನ ಮಹಿಮೆಯನ್ನು ಗೀತೆಯ 13ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೇಳಲಾಗಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಗೀತೆಯ ಜ್ಞಾನದಾತನು ತನಗಿಂತ ಅನ್ಯ ಪೂರ್ಣ ಪರಮಾತ್ಮನ ಮಹಿಮೆಯ ಬಗ್ಗೆ ಹೇಳಿದ್ದಾನೆ. (ಗೀತೆಯ 13ನೇ ಅಧ್ಯಾಯದ 17ನೇ ಶ್ಲೋಕ)

❖ ಗೀತೆಯ 13ನೇ ಅಧ್ಯಾಯದ 18ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಕ್ಷೇತ್ರ ಅರ್ಥಾತ್ ಶರೀರ, ಜ್ಞಾನಂ ತತ್ವ ಜ್ಞಾನ ಮತ್ತು ಜ್ಞೇಯಂ ಅರ್ಥಾತ್ ತಿಳಿಯಲು ಯೋಗ್ಯವಾದಂತಹ ಪರಮಾತ್ಮನ ಸಂಪೂರ್ಣ ಮಹಿಮೆಯನ್ನು ನಾನು ಸಂಕ್ಷೇಪವಾಗಿ ಹೇಳಿರುವೆ. ನನ್ನ ಭಕ್ತ ಈ ಮೊದಲು ನನ್ನನ್ನೇ ಸರ್ವಸ್ವ ಎಂದು ತಿಳಿದು ನನ್ನಲ್ಲಿ ಆಶ್ರಿತನಾಗಿದ್ದನು. ನಂತರ ಈ ತತ್ವಜ್ಞಾನ (ವಿಜ್ಞಾಯ) ದ ಆಧಾರದಿಂದ ನನ್ನ ಭಾವನೆ ಅಂದರೆ ನನ್ನ ಶಕ್ತಿಯಿಂದ ಪರಿಚಿತನಾಗಿ ಹಾಗೂ ಆ ಸಮರ್ಥನ ಶಕ್ತಿಯಿಂದ ಪರಿಚಿತನಾಗಿ (ಉಪದ್ಯತೆ) ಅದರ ನಂತರ ಭಕ್ತಿ ಮಾಡಿ ಅದೇ ಭಾವನೆಯನ್ನು ಪ್ರಾಪ್ತಿಯಾಗುತ್ತಾನೆ. (ಗೀತೆಯ 13ನೇ ಅಧ್ಯಾಯದ 18ನೇ ಶ್ಲೋಕ).

❖ ಇದೇ ರೀತಿ ಗೀತೆಯ 13ನೇ ಅಧ್ಯಾಯದ 19ನೇ ಶ್ಲೋಕದಲ್ಲಿ ಗೀತಾ ಜ್ಞಾನದಾತನು ತನಗಿಂತ ಅನ್ಯ ಪುರುಷ ಅರ್ಥಾತ್ ಪರಮಾತ್ಮನ ಮಹಿಮೆಯ ಬಗ್ಗೆ ಹೇಳಿದ್ದಾನೆ. ಪ್ರಕೃತಿ ಮತ್ತು ಪುರುಷ ಇಬ್ಬರು ಅನಾದಿ. ಇಲ್ಲಿ ಪ್ರಕೃತಿಯ ತಾತ್ಪರ್ಯವೆಂದರೆ ಸತ್ಯಲೋಕದ ಪ್ರಕೃತಿಯದು, ಅದನ್ನು ಪರಾಶಕ್ತಿ, ಪರಾನಂದಿನಿ, ಮಹಾನ್ ಪ್ರಕೃತಿ ಎಂದೂ ಕರೆಯಲಾಗುತ್ತದೆ. ಪುರುಷನ ಅರ್ಥವೆಂದರೆ ಪೂರ್ಣ ಪರಮಾತ್ಮನು. ಇವರಿಬ್ಬರೂ ಅನಾದಿ. ಇಲ್ಲಿ ಪ್ರಕೃತಿಯ ಭಾವಾರ್ಥ:– ದುರ್ಗಾ ಸ್ತ್ರೀ ರೂಪದಂತೆ ಸ್ತ್ರೀ ರೂಪವಾಗಿರುವುದಿಲ್ಲ. ಹೇಗೆ ಸೂರ್ಯನಿದ್ದರೆ ಅದರ ಪ್ರಕೃತಿ ಉಷ್ಣತೆಯೂ ಸಹ ಜೊತೆಯಲ್ಲಿರುತ್ತದೆ. ಹಾಗೆಯೇ ಸತ್ಯಪುರುಷ ಮತ್ತು ಪ್ರಕೃತಿ ಅರ್ಥಾತ್ ಶಕ್ತಿ ಇಬ್ಬರೂ ಅನಾದಿಯಾಗಿರುವರು.

ಈ ರೀತಿಯಾಗಿ ಮೂರು ಗುಣಗಳು ಹಾಗು ವಿಕಾರಗಳು ಯಾರಿಂದ ಉತ್ಪನ್ನವಾಗಿವೆಯೋ ಅದು ಅನ್ಯ ಪ್ರಕೃತಿಯಾಗಿದೆ. ಅದರಿಂದ ಉತ್ಪನ್ನವಾಗಿದೆ ಎಂದು ತಿಳಿ. ಗೀತೆಯ 7ನೇ ಅಧ್ಯಾಯದ 4–5ನೇ ಶ್ಲೋಕದಲ್ಲಿ ಎರಡು ಪ್ರಕೃತಿಗಳೆಂದು ಹೇಳಲಾಗಿದ್ದು ಒಂದು ಜಡ ಮತ್ತೊಂದು ಚೇತನ ದುರ್ಗಾದೇವಿ. ಇಲ್ಲಿ ಎರಡನೆಯ ಪ್ರಕೃತಿಯನ್ನು ದುರ್ಗಾ ಎಂದೂ ಹೇಳಲಾಗಿದೆ. (ಗೀತೆಯ 13ನೇ ಅಧ್ಯಾಯದ 19ನೇ ಶ್ಲೋಕ).

❖ ಗೀತೆಯ 13ನೇ ಅಧ್ಯಾಯದ 20ನೇ ಶ್ಲೋಕದಲ್ಲಿ ಅನ್ಯ (ಪುರುಷಃ) ಪರಮಾತ್ಮನ ವರ್ಣನೆ ಇದೆ. ಗೀತಾ ಪ್ರೆಸ್ ಗೋರಖಪುರದಿಂದ ಪ್ರಕಾಶನವಾಗಿರುವ ಗೀತೆಯ ಈ ಶ್ಲೋಕದ ಅನುವಾದದಲ್ಲಿ 'ಪುರುಷಃ'ನ ಅರ್ಥ 'ಜೀವಾತ್ಮ' ಎಂದು ಮಾಡಿದ್ದಾರೆ. ವಾಸ್ತವದಲ್ಲಿ ಪುರುಷ ಎಂದರೆ ಪರಮಾತ್ಮ ಎಂದರ್ಥ. ಗೀತೆಯ 13ನೇ ಅಧ್ಯಾಯದ 20ನೇ ಶ್ಲೋಕದಲ್ಲಿ ಇದರ ಯಥಾರ್ಥ ಅನುವಾದ ನೋಡಿ. "ಗಹರೀ ನಜರ್ ಗೀತಾ " ನಲ್ಲಿ ಹಾಗೂ ನಮ್ಮ ವೆಬ್‌ಸೈಟ್‌ನಲ್ಲಿ ನೋಡ ಹಾಗು ಡೌನ್‌ಲೋಡ್ ಮಾಡಿಕೊಳ್ಳಬಹುದು. ವೆಬ್‌ಸೈಟ್‌ನ ಹೆಸರು **"www.jagatgururampalji.org"**

❖ ಗೀತೆಯ 13ನೇ ಅಧ್ಯಾಯದ 21ನೇ ಶ್ಲೋಕದಲ್ಲಿಯೂ ಅನ್ಯ (ಪುರುಷಃ) ಪರಮಾತ್ಮನ ವರ್ಣನೆಯಿದೆ. ಗೋರಖಪುರದಿಂದ ಪ್ರಕಾಶಿತವಾಗಿರುವ ಅನುವಾದದಲ್ಲಿ "ಪುರುಷಃ"ನ ಅರ್ಥ ಪುರುಷನೆಂದೇ ಆಗಿದೆ. ಅದು ಸರಿಯಾಗಿದೆ. ಹಾಗೂ ಪರುಷಃನ ಅರ್ಥ ಪರಮಾತ್ಮವು ಎಂದಾಗುತ್ತದೆ. ಪ್ರಸಂಗದ ಪ್ರಕಾರ ಪುರುಷಃನ ಅರ್ಥ ಮನುಷ್ಯ ಎಂದೂ ಆಗುತ್ತದೆ. ಏಕೆಂದರೆ ಪರಮಾತ್ಮನು ತನ್ನ ಸ್ವರೂಪದ ಅನುಸಾರ ಮನುಷ್ಯನನ್ನು ಮಾಡಿದ್ದಾನೆ. ಆದ್ದರಿಂದ ಹೇಳಲಾಗುತ್ತದೆ :–

ನರ್ ನಾರಾಯಣ್ ರೂಪ್ ಹೈ, ತೂ ನಾ ಸಮಝ್ ದೇಹಿ ।

## "ಎಂಭತ್ತನಾಲ್ಕು ಲಕ್ಷ ಪ್ರಕಾರದ ಜೀವಿಗಳಲ್ಲಿ ಮಾನವ ದೇಹವು ಉತ್ತಮವಾಗಿದೆ"

ಗೀತೆಯ 13ನೇ ಅಧ್ಯಾಯದ 22ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನಗಿಂತ ಅನ್ಯ ಪರಮಾತ್ಮನ ಪ್ರತ್ಯಕ್ಷ ಪ್ರಮಾಣದ ಬಗ್ಗೆ ತಿಳಿಸಿದ್ದಾನೆ. ಗೀತಾ ಪ್ರೆಸ್ ಗೋರಖಪುರದಿಂದ ಪ್ರಕಾಶಿತವಾಗಿರುವ ಗೀತೆಯಲ್ಲಿ ಈ ಶ್ಲೋಕದ ಅರ್ಥವನ್ನು ತಪ್ಪಾಗಿ ನೀಡಿದ್ದಾರೆ. (ಇದೇ ಪುಸ್ತಕದ ಕೊನೆಯ ಪುಟಗಳಲ್ಲಿ ನೋಡಬಹುದು.)

❖ ಯಥಾರ್ಥ ಅನುವಾದ :- ಹಿಂದಿನ ಶ್ಲೋಕಗಳಲ್ಲಿ ಹೇಳಿರುವಂತೆ ಪರಮಾತ್ಮನು ಪ್ರತಿಯೊಂದು ಜೀವಿಯಲ್ಲಿಯೂ ಹೀಗಿರುತ್ತಾನೆ. ಹೇಗೆಂದರೆ ಸೂರ್ಯನು ಪ್ರತ್ಯೇಕ ನೀರಿನ ಬಿಂದಿಗೆಗಳಲ್ಲಿ ಕಾಣಿಸಿಕೊಳ್ಳುತ್ತಾನೋ, ಹಾಗೂ ಅದಕ್ಕೆ ಉಷ್ಣತೆಯನ್ನು ನೀಡುತ್ತಾನೆ, ಹಾಗೆಯೇ ಪರಮಾತ್ಮನು ಪ್ರತಿಯೊಂದು ಜೀವಿಯ ಹೃದಯ ಕಮಲದಲ್ಲಿ ವಿದ್ಯಮಾನನಾಗಿರುತ್ತಾನೆ. ಹೇಗೆ ಸೌರಶಕ್ತಿ ಯಂತ್ರ ಎಲ್ಲಿ ಇದ್ದರು ಸೂರ್ಯನಿಂದ ಉಷ್ಣ ಪಡೆದು ಶಕ್ತಿಯನ್ನು ಸಂಗ್ರಹಿಸುತ್ತದೆ ಹಾಗೆ ಪ್ರತಿಯೊಂದು ಜೀವಿಯ ಜೊತೆಯಲ್ಲೂ ಪರಮಾತ್ಮನಿರುತ್ತಾನೆ. ಆದ್ದರಿಂದ ಈ ಶ್ಲೋಕ (ಗೀತೆಯ 13ನೇ ಅಧ್ಯಾಯದ 22ನೇ ಶ್ಲೋಕ)ದಲ್ಲಿ ಹೇಳಲಾಗಿರುವುದೇನೆಂದರೆ, ಪರಮಾತ್ಮನು ಎಲ್ಲಾ ಪ್ರಭುಗಳ ಸ್ವಾಮಿಯಾಗಿರುವುದರಿಂದ 'ಮಹೇಶ್ವರ' ಎಂದೂ, ಎಲ್ಲರ ಧಾರಣೆ-ಪೋಷಣೆ ಮಾಡುವುದರಿಂದ 'ಕರ್ತಾ' ಎಂದೂ, ಸತ್ಯಲೋಕದಲ್ಲಿ ಆಸೀನನಾಗಿ ಪ್ರತಿಯೊಂದು ಜೀವಿಯ ಗತಿವಿಧಿಗಳನ್ನು ನೋಡುವವನಾಗಿರುವುದರಿಂದ 'ಉಪದ್ರಷ್ಟಾ' ಎಂದೂ ಹೇಳಲಾಗಿದೆ. ಜೀವಿಯು ಪರಮಾತ್ಮನ ಅಂಶ. ಪ್ರತಿಯೊಂದು ಜೀವಿಯೂ ಪರಮಾತ್ಮನ ಶಕ್ತಿಯಿಂದಲೇ ಕಾರ್ಯವನ್ನು ನಿರ್ವಹಿಸುತ್ತದೆ. (ರಾಮಾಯಣದಲ್ಲೂ ಜೀವಿಯನ್ನು ಈಶ್ವರನ ಅಂಶ ಎನ್ನಲಾಗಿದೆ). ಈ ಕಾರಣದಿಂದ ಜೀವಿ ತಾನು ಮಾಡಿರುವ ಯಾವುದೇ ಕರ್ಮದ ಸುಖ-ದುಃಖ ಭೋಗಿಸುತ್ತಾನೆ ಆದ್ದರಿಂದ ತನ್ನ ಅಂಶದ ಸುಖ-ದುಃಖ ಪರಮಾತ್ಮನೂ ಭಾವಿಸುತ್ತಾನೆ. ಸೂಕ್ಷ್ಮವೇದದಲ್ಲಿ ಬರೆಯಲಾಗಿದೆ :-

"ಕಬೀರ್ ಕಹ್ ಮೇರೆ ಜೀವ್ ಕೋ ದುಃಖ್ ನಾ ದಿಜೋ ಕೋಯ್।
ಭಕ್ತ್ ದುಃಖಾಯೆ ಮೈಂ ದುಃಖೀ ಮೇರಾ ಆಪಾ ಭೀ ದುಃಖೀ ಹೋಯ್ ॥"

ಆದ್ದರಿಂದ 'ಭೋಕ್ತಾ' ಎಂದು ಕರೆಯಲ್ಪಡುತ್ತಾನೆ. ಪ್ರತಿಯೊಂದು ಜೀವಿಗೂ ಗುಪ್ತರೂಪದಲ್ಲಿ ಸರಿಯಾದ ಸಲಹೆ ನೀಡುವುದರಿಂದ ಪರಮಾತ್ಮನನ್ನು 'ಅನುಮಂತಾ' ಎಂದು ಹೇಳಲಾಗುತ್ತದೆ. ('ಪರಮಾತ್ಮ' ಶಬ್ದದ ಸಂಧಿವಿಚ್ಛೇದ ರೂಪ=ಪರಮ+ಆತ್ಮಾ=ಶ್ರೇಷ್ಠ ಆತ್ಮಾ=ಪರಮಾತ್ಮ) ಹಾಗೊಮ್ಮೆ ಯಾರಾದರೂ ದುಃಖದ ಅನುಭವವನ್ನೂ ಕೊಡುತ್ತಾರೋ, ಸುಖದ ಅನುಭವವನ್ನೂ ನೀಡುತ್ತಾರೋ, ಅರ್ಥಾತ್ ಒಂದು ಜೀವಿಯು ತನ್ನ ಕರ್ಮಗಳಿಗೆ ಅನುಸಾರವಾಗಿ ಸುಖ-ದುಃಖಗಳನ್ನು ಅನುಭವಿಸುತ್ತಾನೆಯೋ ಅವನನ್ನು ಶ್ರೇಷ್ಠ ಆತ್ಮಾ ಎಂದೂ, ಪರಮಾತ್ಮನೆಂದೂ ಹೇಳಲಾಗುವುದಿಲ್ಲ. ಈ ಕಾಲನ (ಬ್ರಹ್ಮನ) ಲೋಕದಲ್ಲಿ ಹೇಗೆ ಕರ್ಮಗಳನ್ನು ಮಾಡುತ್ತಾನೋ, ಹಾಗೆ ಪ್ರತಿಫಲಗಳನ್ನು ಭಗವಂತ ಅವಶ್ಯ ನೀಡುತ್ತಾನೆಂಬ ನಿಯಮವಿದೆ. ಹಾಗಿದ್ದಲ್ಲಿ ಈತನು ಪ್ರಭು (ಸ್ವಾಮಿ), ಆದರೆ 'ಪರಮಾತ್ಮ'ನಲ್ಲ. ಈ ಮಾನವನ ಶರೀರದಲ್ಲಿ (ಪರಃ) ಬೇರೊಬ್ಬ (ಪುರುಷಃ) ಪರಮಾತ್ಮನು ಜೀವಿಗಳ ಜೊತೆಯಲ್ಲಿ ಅಭಿನ್ನ ರೂಪದಲ್ಲಿರುತ್ತಾನೆ. ಹೇಗೆ ಸೂರ್ಯನು ಪ್ರತಿಯೊಂದು ಜೀವಿಯ ಮೇಲೆ ತನ್ನ ಶಕ್ತಿಯನ್ನು ಬೀರುತ್ತಾನೋ, ಹಾಗೆ ಆ ಇನ್ನೊಬ್ಬ ಪರಮಾತ್ಮನೂ ಸಹ ಮೇಲೆ ತಿಳಿಸಿರುವಂತೆ ಮಹಾ ಮಹಿಮೆಯುಳ್ಳವನು. ಹೇಗೆ ಸೌರಶಕ್ತಿಯಿಂದ ದೀಪವು ಬೆಳಗುತ್ತದೆ. ಅಲ್ಲಿ ಸೂರ್ಯನ ಸೌರಶಕ್ತಿಯು ಕಾರ್ಯ ನಿರ್ವಹಿಸುತ್ತದೆ. ಅದೇ ಪ್ರಕಾರ ಪೂರ್ಣ ಪರಮಾತ್ಮನ ಪಾತ್ರವಾಗಿದೆ.

❖ ಗೀತೆಯ 13ನೇ ಅಧ್ಯಾಯದ 23ನೇ ಶ್ಲೋಕದಲ್ಲೂ ಅನ್ಯ (ಪುರುಷಂ) ಪರಮಾತ್ಮನ ಬಗ್ಗೆ ಹೇಳಲಾಗಿದೆ, ಯಾವ ಸಂತನು ಮೇಲೆ ತಿಳಿಸಿರುವಂತಹ ಪ್ರಕಾರವಾಗಿ (ಪುರುಷಮ್) ಪರಮಾತ್ಮ, ಪ್ರಕೃತಿ ಹಾಗೂ ಗುಣಗಳ ಸಹಿತವಾಗಿ ಅರಿತಿರುತ್ತಾನೋ, ಸಂತ–ಸಾಧಕನು ಎಲ್ಲಾ ರೀತಿಯಲ್ಲೂ ಪರಮಾತ್ಮನಲ್ಲಿ ಲೀನವಾಗಿ (ವರ್ತಮಾನದಲ್ಲಿ) ರುತ್ತಾ ಅವರು ಪುನರ್ಜನ್ಮವನ್ನು ಪಡೆಯುವುದಿಲ್ಲ. ಅಂದರೆ ಅವನಿಗೆ ಪೂರ್ಣ ಮೋಕ್ಷವು ಪ್ರಾಪ್ತವಾಗುತ್ತದೆ.

❖ ಗೀತೆಯ 13ನೇ ಅಧ್ಯಾಯದ 24ನೇ ಶ್ಲೋಕದಲ್ಲೂ ಅನ್ಯ ಪರಮಾತ್ಮನ ವರ್ಣನೆಯಿದೆ. ಅವನು ಗೀತೆಯ ಜ್ಞಾನದಾತನಿಗಿಂತಲೂ ಭಿನ್ನನಾಗಿದ್ದಾನೆ. ಪರಮಾತ್ಮನು ಸೂರ್ಯನ ಸದೃಶ್ಯ ಜೀವಾತ್ಮದ ಜೊತೆಗೆ ಅಭೇದ ರೂಪದಲ್ಲಿರುತ್ತಾನೆ. ಅವನನ್ನು ಸಾಧಕರು ಧ್ಯಾನದ ಮೂಲಕ ದಿವ್ಯ ದೃಷ್ಟಿಯಿಂದ, ಹೃದಯದಲ್ಲಿ ನೋಡುತ್ತಾರೆ ಹೇಗೆ ವಿದ್ಯುತ್ ಅನ್ನು ಟೆಸ್ಟರ್‌ನ ಮುಖಾಂತರ ನೋಡಲಾಗುವುದೋ ಹಾಗೆ. ಅನ್ಯ ಸಾಧಕರು ಜ್ಞಾನವನ್ನು ಕೇಳಿ ನಂಬಿಕೆಯಿಂದ ಪರಮಾತ್ಮನ ಸ್ವರೂಪವನ್ನು ಸ್ವೀಕರಿಸಿಕೊಳ್ಳುತ್ತಾರೆ.

❖ ಅನ್ಯಭಕ್ತರು (ಕರ್ಮಯೋಗೇನ) ಪರಮಾತ್ಮನ ಕರ್ಮಗಳನ್ನು ಅರ್ಥಾತ್ ಲೀಲೆಗಳನ್ನು ನೋಡಿ ಪರಮಾತ್ಮನ ಅಸ್ತಿತ್ವವನ್ನು ತಿಳಿದುಕೊಳ್ಳುತ್ತಾರೆ. ಜಗತ್ತಿನಲ್ಲಿ ಸುಮಾರು ಏಳು ಶತಕೋಟಿ ಜನಸಂಖ್ಯೆಯಿದೆ. ಆದರೆ ಯಾರ ಮುಖವೂ ಒಬ್ಬರ–ಇನ್ನೊಬ್ಬರೊಂದಿಗೆ ಹೋಲುವುದಿಲ್ಲ. (ಕವಿ ಹೇಳಿರುವುದೇನೆಂದರೆ :– ಕಈ ಅರಬ್ ಬನಾಏ ಬಂದೇ ಆಂಖ್, ನಾಕ್, ಹಾಥ್ ಲಗಾಏ, ಏಕ್–ದೂಸರೆ ಕೆ ನಾಲ್ ಕೊಈ ಭೀ ರಲ್‌ದೇ ನಹೀಂ ರಲಾಏ) ಇದರಿಂದ ಸಾಬೀತಾಗುವುದೇನೆಂದರೆ ಯಾವುದೋ ಸರ್ವಜ್ಞಶಕ್ತಿಯಿದೆ. ಅವನನ್ನು 'ಪರಮಾತ್ಮ' ಎಂದು ಕರೆಯಲಾಗುತ್ತದೆ. ಕೆಲವು ಭಕ್ತಾದಿಗಳು ಪರಮಾತ್ಮನ ಈ ಕಾರ್ಯಗಳನ್ನು ನೋಡಿ ಪರಮಾತ್ಮನನ್ನು ನಂಬುತ್ತಾರೆ.

❖ ಗೀತೆಯ 13ನೇ ಅಧ್ಯಾಯದ 25ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾರು ಶಿಕ್ಷಿತರಲ್ಲವೋ, ಹಾಗು ಯಾರು ಧ್ಯಾನವನ್ನು ಮಾಡುವುದಿಲ್ಲವೋ ಹಾಗೂ ಜ್ಞಾನವನ್ನು ಯಾರು ಅರಿಯುವುದಿಲ್ಲವೋ ಅವರು ಪರಮಾತ್ಮನ ಸಂರಚನೆಯಿಂದ ಪರಮಾತ್ಮನನ್ನು ಕೂಡ ಅರಿಯುವುದಿಲ್ಲ. ಅವರೆಲ್ಲರೂ ಬೇರೆ ಬೇರೆ ಶಿಕ್ಷಿತರು, ವಿದ್ವಾಂಸ ವ್ಯಕ್ತಿಗಳಿಂದ ಪರಮಾತ್ಮನ ಮಹಿಮೆಯನ್ನು ಕೇಳಿ ಶಿಕ್ಷಿತ ಮತ್ತು ಜ್ಞಾನಿ ವ್ಯಕ್ತಿಗಳು ಹೇಳಿದ ನಂತರ ಪರಮಾತ್ಮ ಇದ್ದಾನೆಂದು ಒಪ್ಪಿಕೊಳ್ಳುತ್ತಾರೆ. ನಂತರ ಅವರು ಉಪಾಸನೆ ಮಾಡಲು ಆರಂಭಿಸುತ್ತಾರೆ ಅದನ್ನು ಕೇಳಿದ ಕಾರಣ ಪರಮಾತ್ಮನ ಅಸ್ತಿತ್ವವನ್ನು ಒಪ್ಪಿಕೊಂಡು ಉಪಾಸನೆಯನ್ನು ಮಾಡಲು ಪ್ರಾರಂಭಿಸುತ್ತಾರೆ. ಈ ಕಾರಣದಿಂದ ಈ ಮೃತ್ಯುಲೋಕ (ಮೃತ್ಯು ಪ್ರಪಂಚ)ದಿಂದ ಮುಕ್ತರಾಗುತ್ತಾರೆ.

❖ ಗೀತೆಯ 13ನೇ ಅಧ್ಯಾಯದ 26ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಎಲ್ಲಾ ಜೀವಿಗಳು ಕ್ಷೇತ್ರ ಅರ್ಥಾತ್ ದುರ್ಗೆಯ ಶರೀರ ಹಾಗೂ ಕ್ಷೇತ್ರಜ್ಞ ಅರ್ಥಾತ್ ಗೀತೆಯ ಜ್ಞಾನದಾತ ಕ್ಷರ ಬ್ರಹ್ಮನ ಸಂಯೋಗದಿಂದ ಉತ್ಪನ್ನವಾಗುತ್ತಾರೆ. ನೆನಪಿರಲಿ ಗೀತೆಯ ಜ್ಞಾನದಾತನು ಗೀತೆಯ 13ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ 'ಕ್ಷೇತ್ರ' ಎಂದು ಶರೀರವನ್ನು ಕರೆಯಲಾಗುತ್ತದೆ. ಹಾಗೂ ಯಾರು ಶರೀರದ ವಿಷಯವನ್ನು ತಿಳಿದಿರುತ್ತಾರೋ ಅವರನ್ನು 'ಕ್ಷೇತ್ರಜ್ಞ' ಎಂದು ಕರೆಯಲಾಗುತ್ತದೆ. ಇದನ್ನು ಗೀತೆಯ 13ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಹೇಳಲಾಗಿದೆ. ಈ ಕಾಲ ಲೋಕ (21 ಬ್ರಹ್ಮಾಂಡಗಳ ಕ್ಷೇತ್ರ) ದಲ್ಲಿ ಎಷ್ಟು ಜೀವಿಗಳು ಉತ್ಪನ್ನವಾಗುತ್ತವೊ, ಅವೆಲ್ಲಾ ದುರ್ಗೆಯ ಹಾಗೂ ಕಾಲ ಭಗವಂತನ ಸಂಯೋಗದಿಂದಾಗುತ್ತವೆ. ಅರ್ಥಾತ್ ನರ–ನಾರಿಯಿಂದ, ಕಾಲ ಪ್ರೇರಣೆಯಿಂದ ಕಾಲ ಸೃಷ್ಟಿ ಉತ್ಪನ್ನವಾಗುತ್ತದೆ.

❖ ಗೀತೆಯ 13ನೇ ಅಧ್ಯಾಯದ 27ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಲಾಗಿರುವುದೇನೆಂದರೆ, ಗೀತಾ ಜ್ಞಾನದಾತನಿಗಿಂತಲೂ ಅನ್ಯ ಬೇರೆ ಪರಮೇಶ್ವರನಿದ್ದಾನೆ ಎಂದು. ಹೇಗೆ ಹಿಂದಿನ

ಶ್ಲೋಕದಲ್ಲಿ ಆಧಾರಸಹಿತ ಮೊದಲೇ ತಿಳಿಸಿರುವಂತೆ ಪರಮಾತ್ಮನು ಪ್ರತಿಯೊಂದು ಜೀವಿಯ ಹೃದಯದಲ್ಲಿರುತ್ತಾನೆ. ಹೇಗೆ ಸೂರ್ಯನು ನೀರು ತುಂಬಿದ ಪ್ರತಿಯೊಂದು ಬಿಂದಿಗೆಯಲ್ಲಿ ಕಾಣಿಸಿಕೊಳ್ಳುತ್ತಾನೋ ಹಾಗೆ. ಅದೇ ಪ್ರಕಾರ 27ನೇ ಶ್ಲೋಕದಲ್ಲಿಯೂ ಹೇಳಲಾಗಿದೆ. ಪರಮೇಶ್ವರನು ಎಲ್ಲರ ಹೃದಯದಲ್ಲಿರುತ್ತಾನೆ. ಒಂದು ವೇಳೆ ಜೀವಿಯ ಶರೀರ ನಷ್ಟವಾದರೂ ಪರಮಾತ್ಮನು ನಷ್ಟವಾಗುವುದಿಲ್ಲ. ಒಂದು ವೇಳೆ ಬಿಂದಿಗೆಯು ಒಡೆದು ಹೋಗಿ ಅದರಲ್ಲಿರುವ ನೀರು ನೆಲದ ಪಾಲಾದರೂ, ಸೂರ್ಯನು ಯಥಾವತ್ ಹಾಗೆಯೇ ಇರುತ್ತಾನೆ. ಆದ್ದರಿಂದ ಪರಮೇಶ್ವರನು ಅವಿನಾಶಿಯಾಗಿರುತ್ತಾನೆ. ಯಾವ ಸಂತನು ಪರಮಾತ್ಮನನ್ನು ಈ ದೃಷ್ಟಿಕೋನದಿಂದ ನೋಡುತ್ತಾನೋ ಅವನು ಸರಿಯಾಗಿ ತಿಳಿದಿರುತ್ತಾನೆ, ಅವನು ತತ್ವಜ್ಞಾನಿ ಸಂತನು.

ಈ ಶ್ಲೋಕ (ಗೀತೆಯ 13ನೇ ಅಧ್ಯಾಯದ 27ನೇ ಶ್ಲೋಕ)ದಲ್ಲಿ ಪರಮೇಶ್ವರ ಎಂಬ ಶಬ್ದ ಬರೆಯಲಾಗಿದೆ. ಅದು ಗೀತೆಯ ಜ್ಞಾನದಾತನಿಗಿಂದಲೂ ಭಿನ್ನನಾದ ಪರಮಾತ್ಮನ ಬಗ್ಗೆ ತಿಳಿಸಿರುವುದು ಈ ರೀತಿ ಇದೆ:–

“ಪರಮೇಶ್ವರ” ನ ಸಂಧಿ ವಿಚ್ಛೇದ=ಪರಮ+ಈಶ್ವರ”

ವ್ಯಾಖ್ಯಾನ :– ಈಶ ಎಂದರೆ ಸ್ವಾಮಿ, ಪ್ರಭು, ಒಡೆಯ. ವರ ಎಂದರೆ ಶ್ರೇಷ್ಠ, ಪತಿ .

1. ಈಶನಂತು ಗೀತೆಯ ಜ್ಞಾನದಾತ “ಕ್ಷರ ಪುರುಷ” ಅರ್ಥಾತ್ ಕ್ಷರ ಬ್ರಹ್ಮನು. ಇವನು ಕೇವಲ ಇಪ್ಪತ್ತೊಂದು ಬ್ರಹ್ಮಾಂಡಗಳ ಪ್ರಭು.

2. ಈಶ್ವರ = ಈಶ ಅರ್ಥಾತ್ ಕ್ಷರ ಪುರುಷನಿಗಿಂತ ಶ್ರೇಷ್ಠನು. ಇವನು ಕೇವಲ ಏಳು ಶಂಖ ಬ್ರಹ್ಮಾಂಡಗಳ ಒಡೆಯ. ಇವನಿಗೆ ಅಕ್ಷರ ಪುರುಷ ಅಥವಾ ಪರಬ್ರಹ್ಮ ಎಂದೂ ಕೂಡ ಕರೆಯಲಾಗುತ್ತದೆ.

3. ಪರಮೇಶ್ವರ=ಈಶ್ವರ ಅರ್ಥಾತ್ ಅಕ್ಷರ ಪುರುಷನಿಗಿಂತ ಪರಮ ಅರ್ಥಾತ್ ಶ್ರೇಷ್ಠನು. ಇವನು ಅಸಂಖ್ಯ ಬ್ರಹ್ಮಾಂಡಗಳ ಪ್ರಭು.

ಇವನನ್ನು ಪರಮ ಅಕ್ಷರ ಬ್ರಹ್ಮ ಎಂದು ಕರೆಯಲಾಗುತ್ತದೆ. (ಗೀತೆಯ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಪ್ರಮಾಣವಿದೆ) ಗೀತೆಯ 15ನೇ ಅಧ್ಯಾಯದ 16–17ನೇ ಶ್ಲೋಕದಲ್ಲಿ ಮೂವರು ಪುರುಷರ ವರ್ಣನೆ ಇದೆ.

ಕ್ಷರ ಪುರುಷ = ಇವನು ಗೀತೆಯ ಜ್ಞಾನದಾತನು ಈಶನು ಹಾಗೂ ಅಕ್ಷರ ಪುರುಷ=ಈಶ್ವರನು. ಹಾಗೂ ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೇಳಲಾಗಿರುವುದೇನೆಂದರೆ (ಉತ್ತಮ ಪುರುಷಃ) ಪುರುಷೋತ್ತಮ ಅರ್ಥಾತ್ ವಾಸ್ತವದಲ್ಲಿ ಸರ್ವ ಶ್ರೇಷ್ಠ ಪ್ರಭುವಂತು. ಮೇಲಿನ ಶ್ಲೋಕ (ಗೀತೆಯ 15ನೇ ಅಧ್ಯಾಯ 16ನೇ ಶ್ಲೋಕ)ದಲ್ಲಿ ಹೇಳಲಾದ, ಇಬ್ಬರಿಗಿಂತ (ಕ್ಷರ ಪುರುಷ ಮತ್ತು ಅಕ್ಷರ ಪುರುಷನಿಗಿಂತ) ಭಿನ್ನನು. ಅವನನ್ನೆ ವಾಸ್ತವದಲ್ಲಿ “ಪರಮಾತ್ಮ” ಎಂದು ಹೇಳಲಾಗುತ್ತದೆ. ಅವನೇ ಮೂರು ಲೋಕಗಳಲ್ಲಿ {ಕ್ಷರಪುರುಷನ 21 ಬ್ರಹ್ಮಾಂಡಗಳ ಕ್ಷೇತ್ರಗಳನ್ನು ಕಾಲ ಲೋಕವೆಂದು ಹೇಳಲಾಗುತ್ತದೆ ಹಾಗೂ ಅಕ್ಷರ ಪುರುಷನ 7 ಶಂಖ ಬ್ರಹ್ಮಾಂಡಗಳ ಕ್ಷೇತ್ರಗಳನ್ನು ಪರಬ್ರಹ್ಮನ ಲೋಕವೆಂದು ಮತ್ತು ಮೇಲಿನ ನಾಲ್ಕು ಲೋಕಗಳ (ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ ಹಾಗೂ ಅಕಹ್ ಲೋಕ) ಕ್ಷೇತ್ರಗಳನ್ನು ಅಮರ ಲೋಕ ಅಂದರೆ ಪರಮೇಶ್ವರನ ಲೋಕವೆಂದು .

ಈ ರೀತಿ ಇಲ್ಲಿ ಮೂರು ಲೋಕಗಳ ವರ್ಣನೆಯಾಗಿದೆ.} ಪ್ರವೇಶಿಸಿ ಎಲ್ಲರ ಧಾರಣೆ–ಪೋಷಣೆ ಮಾಡುತ್ತಾನೆ. ಹಾಗಾಗಿ ಅವನನ್ನು ವಾಸ್ತವದಲ್ಲಿ ಅವಿನಾಶಿ ಪರಮೇಶ್ವರನೆಂದು ಹೇಳುತ್ತಾರೆ. ಗೀತೆಯ 13ನೇ ಅಧ್ಯಾಯದ 27ನೇ ಶ್ಲೋಕದಲ್ಲಿ “ಪರಮೇಶ್ವರ” ಎಂಬ ಶಬ್ದವಿದೆ. ಅದು ಗೀತೆಯ ಜ್ಞಾನದಾತನಿಗಿಂತಲೂ ಬೇರೆ ಸರ್ವಶಕ್ತಿವಂತ, ಸರ್ವರನ್ನೂ ಪಾಲಿಸುವವನ

ಬೊಧಕವಾಗಿದೆ.

❖ ಗೀತೆಯ 13ನೇ ಅಧ್ಯಾಯದ 28ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾನಿಗಿಂತಲೂ ಅನ್ಯ ಪ್ರಭುವಿನ ಬಗ್ಗೆ ಆಧಾರವಿದೆ. ಈ ಶ್ಲೋಕದಲ್ಲಿ "ಈಶ್ವರ" ಎಂಬ ಶಬ್ದವು ಪರಮೇಶ್ವರನ ಬೋಧಕವಾಗಿದೆ. ಈಶನ ಅರ್ಥ ಸ್ವಾಮಿ ಎಂದೂ, ವರನ ಅರ್ಥ ಶ್ರೇಷ್ಠ ಎಂದು. ವಾಸ್ತವದಲ್ಲಿ ಎಲ್ಲರ 'ಈಶ' ಸ್ವಾಮಿ ಪರಮ ಅಕ್ಷರ ಬ್ರಹ್ಮನಿದ್ದಾನೆ ಅವನೇ ಶ್ರೇಷ್ಠ ಈಶ ಆದ್ದರಿಂದ "ಈಶ್ವರ" ಎಂಬ ಶಬ್ದವು ಪ್ರಸಂಗದಿಂದ ಪೂರ್ಣ ಪರಮಾತ್ಮನ ಬೋಧಕವಾಗಿದೆ. ಒಂದು ವೇಳೆ ಬೇರೆ "ಈಶ"ನು ನಕಲಿ ಸ್ವಾಮಿಯಾಗಿರದಿದ್ದರೆ ಈಶ್ವರ ಹಾಗೂ ಪರಮೇಶ್ವರ ಎಂಬ ಶಬ್ದಗಳ ಅವಶ್ಯಕವಿರುತ್ತಿರಲಿಲ್ಲ. ಆದ್ದರಿಂದ ಈ ಶ್ಲೋಕದಲ್ಲಿ "ಈಶ್ವರ" ಶಬ್ದವು ಸತ್ಯಪುರುಷನ ಬೋಧಕವಾಗಿದೆ.

ಗೀತೆಯ 13ನೇ ಅಧ್ಯಾಯದ 28ನೇ ಶ್ಲೋಕದಲ್ಲಿ ಗೀತಾ ಜ್ಞಾನದಾತನು ಹೇಳಿರುವುದೇನೆಂದರೆ, ಯಾವ ಸಾಧಕನು ಪರಮೇಶ್ವರನನ್ನು ಸಮಭಾವದಿಂದ ನೋಡುತ್ತಾ (ಆತ್ಮಾನಮ್) ತನ್ನ ಆತ್ಮವನ್ನು (ಆತ್ಮನಾ) ತನ್ನ ಅಜ್ಞಾನ ಆತ್ಮದ ಮುಖಾಂತರ ನಷ್ಟ ಮಾಡಿಕೊಳ್ಳುವುದಿಲ್ಲವೋ ಅರ್ಥಾತ್ ಪರಮಾತ್ಮನನ್ನು ಸರಿ ಎಂದು ತಿಳಿದು ಅವನ ಸಾಧನೆಯನ್ನು ಮಾಡಿ (ತತಃ) ಅವನಿಂದ (ಪರಾಮ್=ಪರ) ಬೇರೆ (ಗತಿಮ್) ಗತಿ ಅರ್ಥಾತ್ ಮೋಕ್ಷವನ್ನು (ಯತಿ) ಪ್ರಾಪ್ತಿ ಮಾಡಿಕೊಳ್ಳುತ್ತಾನೆ ಅರ್ಥಾಥ ಸಾಧಕ ಗೀತಾ ಜ್ಞಾನದಾತನ ಪರಮಗತಿಯಿಂದ (ಗೀತೆಯ 8ನೇ ಅಧ್ಯಾಯದ 13ನೇ ಶ್ಲೋಕದಲ್ಲಿ ಹೇಳಲಾದ) ಬೇರೆ ಗತಿಯನ್ನು ಪಡೆಯುತ್ತಾನೆ.

❖ ಗೀತೆಯ 13ನೇ ಅಧ್ಯಾಯದ 30ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ಗೀತೆಯ ಜ್ಞಾನದಾತನು ತನಗಿಂತ ಭಿನ್ನನಾದ ಪರಮಾತ್ಮನ ಮಹಿಮೆಯ ಬಗ್ಗೆ ಹೇಳಿದ್ದಾನೆ. ಯಾವ ಸಂತನು ಸರ್ವ ಜೀವಿಗಳ ಸ್ಥಿತಿಯನ್ನು ಭಿನ್ನ-ಭಿನ್ನವಾಗಿದ್ದರೂ ಕೂಡ ಒಬ್ಬ ಪರಮಾತ್ಮ ಸರ್ವ ಶಕ್ತಿವಂತನ ಅಧೀನದಲ್ಲಿದ್ದಾರೆಂದು ತಿಳಿಯುತ್ತಾರೋ, ಅವರಿಗೆ "ಸಚ್ಚಿದಾನಂದ ಘನಬ್ರಹ್ಮ" ಅರ್ಥಾತ್ ಪರಮ ಅಕ್ಷರ ಬ್ರಹ್ಮನು ಪ್ರಾಪ್ತನಾಗಿದ್ದಾನೆ. ಅವರು ಸತ್ಯ ಭಕ್ತಿಯನ್ನು ಮಾಡಿ ಆ ಪರಮೇಶ್ವರನನ್ನು ಪಡೆಯುತ್ತಾರೆ.

❖ ಗೀತೆಯ 13ನೇ ಅಧ್ಯಾಯದ 31ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನಗಿಂತ ಭಿನ್ನವಾದ "ಪರಮಾತ್ಮ"ನ ವಿಷಯವನ್ನು ಹೇಳಿದ್ದಾನೆ. ಹಾಗೂ ಈ ಶ್ಲೋಕದಲ್ಲಿ "ಪರಮಾತ್ಮ" ಎಂಬ ಶಬ್ದದ ಸ್ಪಷ್ಟ ಪರಿಭಾಷೆಯನ್ನು ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೇಳಲಾಗಿದೆ. ಯಾರು ಉತ್ತಮ ಪುರುಷ ಅರ್ಥಾತ್ ಸರ್ವಶ್ರೇಷ್ಠ ಪ್ರಭು ಇದ್ದಾನೆ. ಅವನು ಮೂರು ಲೋಕಗಳಲ್ಲಿ ಪ್ರವೇಶಿಸಿ ಎಲ್ಲರ ಧಾರಣೆ-ಪೋಷಣೆ ಮಾಡುತ್ತಾನೆ. ಅವನು ವಾಸ್ತವದಲ್ಲಿ ಅವಿನಾಶಿ ಪರಮೇಶ್ವರನು. ಅವನಿಗೆನೇ "ಪರಮಾತ್ಮ" ಎಂದು ಹೇಳಲಾಗುತ್ತದೆ. ಅವನು ಕ್ಷರ ಪುರುಷ ಹಾಗೂ ಅಕ್ಷರ ಪುರುಷರಿಗಿಂತ ಭಿನ್ನನು.

ಈ ಶ್ಲೋಕ(ಗೀತೆಯ 13ನೇ ಅಧ್ಯಾಯದ 31ನೇ ಶ್ಲೋಕ)ದಲ್ಲಿ ಸ್ಪಷ್ಟಪಡಿಸಲಾಗಿರುವುದೇನೆಂದರೆ ಆ ಪರಮಾತ್ಮ ಅನಾದಿಯಾಗಿರುವುದರಿಂದ, ನಿರ್ಗುಣನಾಗಿರುವುದರಿಂದ ಪ್ರತಿಯೊಂದು ಪ್ರಾಣಿ/ಜೀವಿಯ ಶರೀರದಲ್ಲಿ (ಸೂರ್ಯನು ಬಿಂದಿಗೆಯಲ್ಲಿರುವ ಹಾಗೆ) ಸ್ಥಿತವಾಗಿದ್ದು ಕೂಡ ಏನನ್ನು ಮಾಡುವುದಿಲ್ಲ. ಏಕೆಂದರೆ ಎಲ್ಲಾ ಕಾರ್ಯಗಳನ್ನು ಪರಮಾತ್ಮನ ಶಕ್ತಿಯು ಮಾಡುತ್ತದೆ. (ಹೇಗೆ ಬಿಂದಿಗೆಯಲ್ಲಿ ಸೂರ್ಯನು ಕಾಣಿಸಿಕೊಳ್ಳುತ್ತಾನೋ, ಅದರಿಂದ ಜಲವು ಬಿಸಿಯಾಗುತ್ತಿದೆ, ಆದರೆ ಅಲ್ಲಿ ಸೂರ್ಯ ಏನೂ ಮಾಡುವುದಿಲ್ಲ, ಸೂರ್ಯನ ಉಷ್ಣತೆಯು ಮಾಡುತ್ತಿರುತ್ತದೆ ಸೂರ್ಯ ಏನು ಮಾಡುವುದಿಲ್ಲ ಎಂದು ಕಾಣುತ್ತದೆ) ಮತ್ತು ಪರಮಾತ್ಮನು ಆ ಶರೀರದಲ್ಲಿಲ್ಲ, ಹೇಗೆ ಸೂರ್ಯನು ಬಿಂದಿಗೆಯಲ್ಲಿಲ್ಲವೋ ಹಾಗೆ.

❖ ಗೀತೆಯ 13ನೇ ಅಧ್ಯಾಯದ 32ನೇ ಶ್ಲೋಕದಲ್ಲೂ ಇದೇ ಪ್ರಮಾಣವಿದೆ

❖ ಗೀತೆಯ 13ನೇ ಅಧ್ಯಾಯದ 33ನೇ ಶ್ಲೋಕದಲ್ಲಿ ಆತ್ಮ ಮತ್ತು ಶರೀರದ ಸ್ಥಿತಿ ಹೇಳಲಾಗಿದೆ.

❖ ಗೀತೆಯ 13ನೇ ಅಧ್ಯಾಯದ 34ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನಗಿಂತ ಭಿನ್ನನಾದ ಪರಮೇಶ್ವರನ ಮಾಹಿತಿ ನೀಡಿದ್ದಾನೆ. ಈ ರೀತಿ ಕ್ಷೇತ್ರ (ಶರೀರ) ಹಾಗೂ ಕ್ಷೇತ್ರಜ್ಞ (ಗೀತಾ ಜ್ಞಾನದಾತ)ನ ಭೇದವನ್ನು ಹಾಗು ಕರ್ಮವನ್ನು ಮಾಡುತ್ತಾ ಮಾಡುತ್ತಾ ಭಕ್ತಿಮಾಡಿ ಕಾಲನ ಪ್ರಕೃತಿ ಅರ್ಥಾತ್ ಈ ಕಾಲನ ಜಾಲದಿಂದ ಮುಕ್ತನಾಗಿ ಯಾವ ಸಾಧಕನು ಜ್ಞಾನಚಕ್ಷುಗಳ ಮೂಲಕ ತಿಳಿದು ತತ್ವದರ್ಶಿ ಸಂತನನ್ನು ಹುಡುಕಿ ಸತ್ಯ ಶಾಸ್ತ್ರಾನುಸಾರ ಸಾಧನೆಯನ್ನು ಮಾಡಿ ತತ್ವಜ್ಞಾನವನ್ನು ತಿಳಿದು ಆ ಪರಮ ಅರ್ಥಾತ್ ಬೇರೆ ಪರಮಬ್ರಹ್ಮ ಪರಮಾತ್ಮನನ್ನು ಪಡೆಯುತ್ತಾನೆ.

ಮೇಲಿನ ವಿವರಣೆಯಿಂದ ಸ್ಪಷ್ಟವಾಗುವುದೇನೆಂದರೆ ಗೀತೆಯ ಜ್ಞಾನದಾತನಿಗಿಂತಲೂ ಅನ್ಯ ಪೂರ್ಣ ಪರಮಾತ್ಮನಿದ್ದಾನೆ. ಅವನ ಭಕ್ತಿ ಸಾಧನೆ ಮಾಡಿ ಸಾಧಕ ಆ ಪೂರ್ಣ ಮೋಕ್ಷವನ್ನು ಪ್ರಾಪ್ತಿಸುತ್ತಾನೆ ಮತ್ತು ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ವರ್ಣಿಸಿರುವುದೇನೆಂದರೆ, ತತ್ವಜ್ಞಾನದ ಪ್ರಾಪ್ತಿಯ ನಂತರ ಪರಮೇಶ್ವರನ ಆ ಪರಮ ಪದವನ್ನು ಹುಡುಕಬೇಕು. ಅಲ್ಲಿ ಹೋದ ಬಳಿಕ ಸಾಧಕನು ಈ ಪ್ರಪಂಚಕ್ಕೆ ಮರಳಿ ಎಂದಿಗೂ ಬರುವುದಿಲ್ಲ.

ಸಾರಾಂಶ:– ಮೇಲಿನ ಉದಾಹರಣೆಗಳಿಂದ ಹಾಗೂ ಗೀತೆಯ 13ನೇ ಅಧ್ಯಾಯದ ಮೇಲಿನ ಪ್ರಮಾಣಗಳಿಂದ ಸ್ಪಷ್ಟವಾಗುವುದೇನೆಂದರೆ, ಗೀತೆಯ ಜ್ಞಾನದಾತನಿಗಿಂತಲೂ ಅನ್ಯ ಪರಮ ಅಕ್ಷರ ಬ್ರಹ್ಮ ಅರ್ಥಾತ್ ಪೂರ್ಣ ಪರಮಾತ್ಮನಿದ್ದಾನೆ. ಅವನಿಗೆ ಶರಣಾಗಲು ಗೀತಾ ಜ್ಞಾನದಾತನು ಗೀತೆಯ 18ನೇ ಅಧ್ಯಾಯದ 62, 66ನೇ ಶ್ಲೋಕದಲ್ಲಿ ಹೇಳಿದ್ದಾನೆ. ಅವನೇ ಪೂರ್ಣ ಮೋಕ್ಷದಾಯಕನು, ಪೂಜೆಗೆ ಯೋಗ್ಯನು, ಅವನೇ ಎಲ್ಲರ ರಚನಾಕಾರನು, ಅವನೇ ಎಲ್ಲರ ಪಾಲನೆ ಮಾಡುವವನು, ಧಾರಣೆ ಮಾಡುವವನು, ಸರ್ವಸುಖದಾಯಕನು. ಅವನನ್ನೇ ಪರಮಾತ್ಮ ಎಂದು ಹೇಳಲಾಗುತ್ತದೆ.

ಪ್ರಶ್ನೆ 49:– (ಧರ್ಮದಾಸರ) :– ಗೀತೆಯ 4ನೇ ಅಧ್ಯಾಯದ 6ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, 'ನಾನು ಅಜನ್ಮ ಹಾಗೂ ಅವಿನಾಶಿ ಆಗಿದ್ದರೂ ಸಮಸ್ತ ಜೀವಿಗಳ ಪ್ರಭುವಾಗಿದ್ದರೂ ಕೂಡ ನನ್ನ ಯೋಗ ಮಾಯೆಯಿಂದ ಪ್ರಕಟನಾಗುತ್ತೇನೆ.' ಇಲ್ಲಿ ಶ್ರೀ ಕೃಷ್ಣನು ತನ್ನನ್ನು ತಾನು ಸಮಸ್ತ ಜೀವಿಗಳ ಅವಿನಾಶಿ ಪ್ರಭು ಹಾಗೂ ಅಜನ್ಮ ಎಂದು ಹೇಳಿಕೊಂಡಿದ್ದಾನೆ.

ಉತ್ತರ:– (ಜಿಂದಾ ಪರಮೇಶ್ವರನ) ಹೇ ಧರ್ಮದಾಸ! ಕಾಲಬ್ರಹ್ಮನು ಕೃಷ್ಣನ ಶರೀರದಲ್ಲಿ ಪ್ರವೇಶಿಸಿ ಗೀತಾ ಜ್ಞಾನವನ್ನು ಹೇಳಿದ್ದಾನೆ. ಇಲ್ಲಿ ಶ್ರೀ ಕೃಷ್ಣನ ಯಾವದೇ ಪಾತ್ರವಿಲ್ಲ. ಗೀತಾ ಜ್ಞಾನದಾತನು ಕಾಲ ಬ್ರಹ್ಮನು. ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಈ 21 ಬ್ರಹ್ಮಾಂಡಗಳಲ್ಲಿ ಇರುವ ಸಮಸ್ತ ಜೀವಿಗಳ ಶ್ರೇಷ್ಠ ಪ್ರಭು (ಈಶ್ವರ)ವು ನಾನಾಗಿದ್ದೇನೆ. ಇದೇ ಪ್ರಮಾಣವು ಗೀತೆಯ 15ನೇ ಅಧ್ಯಾಯದ 18ನೇ ಶ್ಲೋಕದಲ್ಲಿದೆ. ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ನಾನು ಲೋಕವೇದದ (ಕೇಳಿ–ಹೇಳಿದ ಮಾತಿನ) ಆಧಾರದಿಂದ ನನ್ನ 21 ಬ್ರಹ್ಮಾಂಡಗಳ ಲೋಕದಲ್ಲಿ ನಾನು ಪುರುಷೋತ್ತಮನೆಂದು ಪ್ರಸಿದ್ಧನು. ಏಕೆಂದರೆ ಶರೀರಧಾರಿ ಜೀವಿಗಳಿಗಿಂತ ಹಾಗೂ ಅವಿನಾಶಿ ಜೀವಾತ್ಮನಿಗಿಂತಲೂ ಶ್ರೇಷ್ಠನಿದ್ದೇನೆ ಯಾರು ನನ್ನ ಅಧೀನದಲ್ಲಿರುವ 21 ಬ್ರಹ್ಮಾಂಡದಲ್ಲಿರುವವರಿಗಿಂತ. ವಾಸ್ತವದಲ್ಲಿ ಪುರುಶೋತ್ತಮ ಯಾರೋ ಬೇರೆ ಇದ್ದಾರೆ ಅವರ ವರ್ಣನೆಯನ್ನು ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೇಳಲಾಗಿದೆ.

❖ ಗೀತೆಯ 4ನೇ ಅಧ್ಯಾಯದ 6ನೇ ಶ್ಲೋಕದಲ್ಲಿ ಹೇಳಲಾಗಿದೆಯೇನೆಂದರೆ, 'ನಾನು

(ಅಜಃ) ಅಜನ್ಮ ಅರ್ಥಾತ್ ನಾನು ನಿಮ್ಮ ತರಹ ಜನ್ಮ ತಾಳುವುದಿಲ್ಲ. ನಾನು ಲೀಲೆಗಳಿಂದ ಪ್ರಕಟನಾಗುತ್ತೇನೆ. ಹೇಗೆ ಗೀತೆಯ 10ನೇ ಅಧ್ಯಾಯದಲ್ಲಿ ವಿರಾಟ ರೂಪವನ್ನು ತೋರಿಸಿದ್ದ, ನಂತರ ಹೇಳಲಾಗಿದೆ (ಅವ್ಯಯಾತ್ಮಾ) ನನ್ನ ಆತ್ಮವು ಅಮರ. ನಂತರ ಹೇಳಲಾಗಿದೆ (ಆತ್ಮ ಮಾಯಯಾ) ತನ್ನ ಲೀಲೆಗಳಿಂದ (ಸಂಭವಾಮಿ) ಉತ್ಪನ್ನನಾಗುತ್ತೇನೆ.' ಇಲ್ಲಿ ಉತ್ಪನ್ನನಾಗುತ್ತೇನೆಂದು ಹೇಳಲಾಗಿದೆ. ಏಕೆಂದರೆ ಕಾಲಬ್ರಹ್ಮ ಅಕ್ಷರ ಪುರುಷನ ಒಂದು ಯುಗದ ನಂತರ ಸಾವನ್ನಪ್ಪುತ್ತಾನೆ. ಆ ಸಮಯದಲ್ಲಿ ಒಂದು ಬ್ರಹ್ಮಾಂಡದ ವಿನಾಶವಾಗುತ್ತದೆ. (ಪ್ರಶ್ನೆ 9ರ ಉತ್ತರ ನೋಡಿ) ನಂತರ ಬೇರೆ ಬ್ರಹ್ಮಾಂಡಕ್ಕೆ ಸಮಸ್ತ ಜೀವಾತ್ಮಗಳು ಹೋಗುತ್ತವೆ. ಕಾಲಬ್ರಹ್ಮನ ಆತ್ಮವೂ ಹೋಗುತ್ತದೆ. ಅಲ್ಲಿ ಇವನಿಗೆ ಪುನಃ ಯುವ ಶರೀರವು ಪ್ರಾಪ್ತವಾಗುವುದು. ಇದೇ ಪ್ರಕಾರ ದೇವಿ ದುರ್ಗೆಯ ಮೃತ್ಯುವಾಗುತ್ತದೆ. ಮತ್ತು ಕಾಲಬ್ರಹ್ಮನ ಜೊತೆಯಲ್ಲಿ ಹೊಸ ಶರೀರವು ಪ್ರಾಪ್ತವಾಗುತ್ತದೆ. ಇದು ಪರಮ ಅಕ್ಷರ ಬ್ರಹ್ಮ (ಸತ್ಯ ಪುರುಷ)ನ ವಿಧಾನವಾಗಿದೆ.

ಹಾಗೆಯೇ ಆ ಹೊಸ ಬ್ರಹ್ಮಾಂಡದಲ್ಲಿ ಇಬ್ಬರು ಪತಿ-ಪತ್ನಿಯ ರೂಪದಲಿ ಹೊಸ ರಜೋಗುಣ ಯುಕ್ತ ಬ್ರಹ್ಮಾ, ಸತ್ವಗುಣಯುಕ್ತ ವಿಷ್ಣು, ತಮೋಗುಣಯುಕ್ತ ಶಿವನ ಉತ್ಪತ್ತಿ ಮಾಡುತ್ತಾರೆ. ನಂತರ ಆ ಬ್ರಹ್ಮಾಂಡದಲ್ಲಿ ಸೃಷ್ಟಿಯ ಕ್ರಮವು ಪ್ರಾರಂಭವಾಗುತ್ತದೆ. ಈ ಪ್ರಕಾರ ಕಾಲಬ್ರಹ್ಮನ ಮೃತ್ಯುವಾಗುತ್ತದೆ ಮತ್ತು ಲೀಲೆಯಿಂದ ಜನ್ಮವಾಗುತ್ತದೆ. ಗೀತಾ ಅಧ್ಯಾಯ 4, 9ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದೇನೆಂದರೆ, ನನ್ನ ಜನ್ಮ ಹಾಗು ಕರ್ಮ ಅಲೌಕಿಕವಾಗಿವೆ. ವಾಸ್ತವದಲ್ಲಿ ಇವನು ನಾಶಹೊಂದುವಂಥವನು, ಆದರೆ ಆತ್ಮವು ಸರ್ವ ಜೀವಿಗಳದ್ದೂ ಅಮರವಾಗಿರುತ್ತದೆ. ನಿಮ್ಮ ಮಹಾಮಂಡಲೇಶ್ವರ ಹಾಗೂ ಶಂಕರಾಚಾರ್ಯರಿಗೆ ಆಧ್ಯಾತ್ಮಿಕ ಜ್ಞಾನವು ಖಂಡಿತ ಇಲ್ಲ. ಆದ್ದರಿಂದ ಅಮುಲ್ಯವಾದ ಗ್ರಂಥಗಳನ್ನು ಸರಿಯಾಗಿ ಅರಿಯದೆ ಲೋಕವೇದ (ದಂತಕಥೆ) ಹೇಳುತ್ತಾರೆ.

ಸ್ವಯಂ ಗೀತೆಯ ಜ್ಞಾನದಾತನು ಗೀತೆಯ 4ನೇ ಅಧ್ಯಾಯದ 5ನೇ ಶ್ಲೋಕದಲ್ಲಿ ಅರ್ಜುನನಿಗೆ ಹೇಳಿರುವುದೇನೆಂದರೆ, ನನ್ನ-ನಿನ್ನ ಅನೇಕ ಜನ್ಮಗಳಾಗಿವೆ. ಅವೆಲ್ಲವನ್ನು ನಾನು ತಿಳಿದಿದ್ದೇನೆ. ಆದರೆ ನಿನಗೆ ಇದರ ಅರಿವಿಲ್ಲ. ಇದರ ಅಭಿಪ್ರಾಯವನ್ನು ಮೇಲೆ ಸ್ಪಷ್ಟಗೊಳಿಸಲಾಗಿದೆ. ಸಂಭವಾತದ ಅರ್ಥ ಉತ್ಪನ್ನವಾಗುವುದು.

ಪ್ರಮಾಣ:- ಯಜುರ್ವೇದದ 40ನೇ ಅಧ್ಯಾಯದ 10ನೇ ಮಂತ್ರದಲ್ಲೂ ಹೇಳಲಾಗಿದೆ ಏನೆಂದರೆ, ಯಾರೋ ಪರಮಾತ್ಮನನ್ನು (ಸಂಭವಾತ್) ಜನ್ಮತಾಳುವ ರಾಮ ಹಾಗು ಕೃಷ್ಣನ ತರಹ ಎಂದು ತಿಳಿದುಕೊಳ್ಳುತ್ತಾರೆ. ಇನ್ನ್ಯಾರೋ (ಅಸಂಭವಾತ್) ಉತ್ಪನ್ನವಾಗದೇ ಇರುವ ನಿರಾಕಾರ ಎಂದು ತಿಳಿದುಕೊಳ್ಳುತ್ತಾರೆ. ಅರ್ಥಾತ್ ತತ್ವದರ್ಶಿ ಸಂತರು ಸತ್ಯಜ್ಞಾನವನ್ನು ಹೇಳುತ್ತಾರೊ, ಅವರಿಂದ ಕೇಳು. ಅವರು ಹೇಳುವರು ಪರಮಾತ್ಮ ಉತ್ಪನ್ನನಾಗುತ್ತಾನೋ ಅಥವಾ ಇಲ್ಲವೋ. ಆದರೆ ವಾಸ್ತವದಲ್ಲಿ ಪರಮಾತ್ಮನು ಸ್ವಯಂಭು ಇದ್ದಾನೆ. ಅವನ ಜನ್ಮ ಎಂದೂ ಆಗಿಲ್ಲ ಮತ್ತು ಆಗುವುದೂ ಇಲ್ಲ. ಮೃತ್ಯುವಿನ ಪ್ರಶ್ನೆಯೂ ಇಲ್ಲಿ ಬರುವುದೇ ಇಲ್ಲ. ಮತ್ತೊಂದು ಕಡೆ ಗೀತಾ ಜ್ಞಾನದಾತನು ಸ್ವಯಂ ಹೇಳಿರುವುದೇನೆಂದರೆ, ನನ್ನ ಜನನ-ಮರಣವಾಗುತ್ತದೆ ನಾನು ಅವಿನಾಶಿಯಲ್ಲ. ಅವಿನಾಶಿಯು "ಪರಮ ಅಕ್ಷರಬ್ರಹ್ಮ"ನು ಎಂದಿದ್ದಾನೆ.

ಪ್ರಶ್ನೆ 50 :- (ಜಿಂದಾ ಮಹಾತ್ಮನ) :- ನಾವು ಶೂದ್ರರನ್ನು ಸಮೀಪದಲ್ಲಿ ಕೂರಿಸಿಕೊಳ್ಳುವುದಿಲ್ಲ. ಶುದ್ಧವಿರುತ್ತೇವೆ ಎಂದು ತಾವು ಹೇಳಿದ್ದೀರಾ. ಇದರಿಂದ ಭಕ್ತಿಯಲ್ಲಿ ಏನು ನಷ್ಟವೇನು?

ಉತ್ತರ (ಧರ್ಮದಾಸರ):- ಶೂದ್ರರನ್ನು ಮುಟ್ಟಿಸಿಕೊಳ್ಳುವುದರಿಂದ ಭಕ್ತರು ಅಪವಿತ್ರವಾಗುತ್ತಾರೆ. ಪರಮಾತ್ಮ ಕೋಪಗೊಳ್ಳುತ್ತಾನೆ. ಪಶ್ಚಾತಾಪವಾಗುತ್ತದೆ, ನಾನು ಮೇಲ್ಜಾತಿಯ ಒಬ್ಬ ವೈಶ್ಯನು.

# "ಹೇಳುವುದರಲ್ಲಿ ಹಾಗೂ ಮಾಡುವುದರಲ್ಲಿ ಅಂತರವಿದೆ"

ಪ್ರಶ್ನೆ 51 (ಧರ್ಮದಾಸರ):- ಹೇ ಜಿಂದಾ! ಶೂದ್ರರಿಂದ ದೂರವಿದ್ದರೆ ಭಕ್ತನು ಪವಿತ್ರನಾಗಿ ಇರುತ್ತಾನೆ ಎನ್ನುವುದು ಸತ್ಯ. ನೀವು ಇದನ್ನು ನಂಬುವುದಿಲ್ಲವೇ?

ಉತ್ತರ (ಜಿಂದಾ ಮಹಾತ್ಮನ):- ಈ ಶಿಕ್ಷಣವನ್ನು ನೀಡಿದವರು ಯಾರು?

ಧರ್ಮದಾಸರು ಹೀಗೆಂದರು, "ನಮ್ಮ ಧರ್ಮಗುರುಗಳು ಹೇಳುತ್ತಾರೆ, ಆಚಾರ್ಯರು, ಶಂಕರಾಚಾರ್ಯರು ಹಾಗೂ ಬ್ರಾಹ್ಮಣರು ಹೇಳುತ್ತಾರೆ".

ಕಬೀರ ಪರಮೇಶ್ವರರು ಧರ್ಮದಾಸನಿಗೆ ಹೇಳಿದರೆನೆಂದರೆ, (ಆ ಸಮಯದವರೆಗೆ ಧರ್ಮದಾಸರಿಗೆ ಅವರ ಜೊತೆ ಮಾತನಾಡುವವನೇ ನೇಕಾರ ಕಬೀರನೆಂದು ತಿಳಿದಿರಲಿಲ್ಲ) ನೇಕಾರ ಕಬೀರನು ಒಮ್ಮೆ ಸ್ವಾಮಿ ರಾಮಾನಂದ ಪಂಡಿತರ ಜೊತೆ ತೋತಾದ್ರಿಕ ಎಂಬ ಜಾಗದಲ್ಲಿ ಸತ್ಸಂಗ ಹಾಗು ಅನ್ನದಾಸೋಹಕ್ಕೆ ಹೋದನು. ಅವನು ಸ್ವಾಮಿ ರಾಮಾನಂದರ ಶಿಷ್ಯನು. ಸತ್ಸಂಗದಲ್ಲಿ ಮುಖ್ಯ ಆಚಾರ್ಯರು, ಭಗವಂತ ರಾಮನು ಶೂದ್ರಳಾದ ಶಬರಿಯ ಎಂಜಲು ಎಲಚಿ ಹಣ್ಣನ್ನು ತಿಂದನು ಎಂದು ಹೇಳಿದರು. ಪರಮಾತ್ಮನಂತೂ ಸಮದರ್ಶಿಯಾಗಿದ್ದನು. ಅವನು ಪ್ರೇಮಕ್ಕೆ ಪ್ರಸನ್ನನಾಗುತ್ತಾನೆ. ಭಕ್ತನನ್ನು ಮೇಲು-ಕೀಳು ಎಂಬ ಪಕ್ಷಪಾತದಿಂದ ನೋಡಬಾರದು, ಅವನ ಶ್ರದ್ಧೆ ನೋಡಲಾಗುತ್ತದೆ. ಲಕ್ಷ್ಮಣನು ಶಬರಿಯನ್ನು ಶೂದ್ರಳೆಂದು ತಿಳಿದು ಎಲಚಿಹಣ್ಣನ್ನು ತಿನ್ನಲಿಲ್ಲ, ಅದನ್ನು ಬಿಸಾಡಿದನು. ಅದೇ ಎಲಚಿಹಣ್ಣು ನಂತರದಲ್ಲಿ ಸಂಜೀವಿನಿ ಬೇರಾಗಿ ಬೆಳೆಯಿತು. ರಾವಣನ ಜೊತೆ ಯುದ್ಧ ಮಾಡುವಾಗ ಲಕ್ಷ್ಮಣನು ಮೂರ್ಛೆ ಹೋದನು. ಆಗ ಹನುಮಂತನು ದ್ರೋಣಾಗಿರಿ ಪರ್ವತವನ್ನು ಎತ್ತಿ ತಂದನು. ಅದರಲ್ಲಿ ಆ ಎಂಜಿಲಿನ ಎಲಚೀ ಹಣ್ಣಿನಿಂದ ಸಂಜೀವಿನೀ ಬೇರು ಬೆಳೆದಿತ್ತು. ಅದನ್ನು ತಿಂದ ನಂತರ ಲಕ್ಷ್ಮಣನು ಮೂರ್ಛೆಯಿಂದ ಎಚ್ಚರಗೊಂಡನು. ಅವನ ಜೀವ ಉಳಿಯಿತು. ಪರಮಾತ್ಮನ ಮೇಲೆ ಶಬರಿಗೆ ಅಂತಹ ಭಕ್ತಿ ಶ್ರದ್ಧೆ ಇತ್ತು. ಯಾರ ಶ್ರದ್ಧೆಗೂ ನಾವು ತೊಂದರೆ ಕೊಡಬಾರದು.

ಸತ್ಸಂಗದ ನಂತರ ದಾಸೋಹ ಪ್ರಾರಂಭವಾಯಿತು. 'ಪಂಡಿತ ರಾಮಾನಂದ್ ಬ್ರಾಹ್ಮಣನ ಜೊತೆ ಅವನ ಶಿಷ್ಯ ನೇಕಾರ ಕಬೀರನು ಬಂದಿದ್ದಾನೆ, ಅವನು ರಾಮಾನಂದರ ಜೊತೆ ಕುಳಿತು ಊಟ ಮಾಡುವನು. ಅವನೊಬ್ಬ ಶೂದ್ರ, ಇದು ಬ್ರಾಹ್ಮಣರಿಗೆ ಅವಮಾನ' ಎಂದು ಪಂಡಿತರು ಈ ಮೊದಲೇ ಯೋಚಿಸಿದ್ದರು. ಹಾಗಾಗಿ ಎರಡು ಬೇರೆ ಬೇರೆ ಸ್ಥಳಗಳಲ್ಲಿ ದಾಸೋಹ ಪ್ರಾರಂಭಿಸಿದರು. ಪಂಡಿತರ ಪಂಕ್ತಿಯಲ್ಲಿ ಊಟಕ್ಕೆ ಕುಳಿತುಕೊಳ್ಳುವವನು ಊಟಕ್ಕೆ ಮೊದಲು ವೇದಗಳ ನಾಲ್ಕು ಮಂತ್ರಗಳನ್ನು ಹೇಳಬೇಕೆಂಬ ಷರತ್ತನ್ನು ವಿಧಿಸಲಾಗಿತ್ತು. ಯಾರು ಮಂತ್ರವನ್ನು ಹೇಳುವುದಿಲ್ಲವೋ ಅವರು ಸಾಮಾನ್ಯರ ದಾಸೋಹ ಪಂಕ್ತಿಯಲ್ಲಿ ಊಟ ಮಾಡಬೇಕೆಂದು ಹೇಳಲಾಯಿತು. 'ಕಬೀರನು ಕಾಶಿಯ ಸಾಮಾನ್ಯ ನೇಕಾರನು, ಮೇಲಾಗಿ ಅಶಿಕ್ಷಿತನು. ಅವನಿಗೆ ಯಾವ ವೇದ ಮಂತ್ರಗಳು ಬರುತ್ತದೆ?' ಎಂದು ಅವರೆಲ್ಲಾ ಭಾವಿಸಿದ್ದರು. ಎಲ್ಲಾ ಪಂಡಿತರು ತಲಾ ನಾಲ್ಕು ಮಂತ್ರಗಳನ್ನು ಹೇಳಿ, ಪಂಡಿತರ ದಾಸೋಹ ಭವನಕ್ಕೆ ಪ್ರವೇಶಿಸುತ್ತಿದ್ದರು. ಎಲ್ಲರೂ ಸಾಲಾಗಿ ನಿಂತಿದ್ದರು. ಅದೇ ಸಾಲಲ್ಲಿ ನೇಕಾರ ಕಬೀರನೂ ನಿಂತಿದ್ದನು, ವೇದಮಂತ್ರವನ್ನು ಹೇಳುವ ಸರದಿ ಬಂದಿತು. ಸ್ವಲ್ಪವೇ ದೂರದಲ್ಲಿ ಒಂದು ಕೋಣ ಹುಲ್ಲು ಮೇಯುತ್ತಿತ್ತು.

ಕಬೀರನು ಆ ಕೋಣವನ್ನು ಕರೆದನು. ನಂತರ ಹೀಗೆಂದನು, "ಹೇ ಕೋಣ ಪಂಡಿತನೇ! ದಯಮಾಡಿ ಇಲ್ಲಿ ಬಾ, ಆಗ ಆ ಎಮ್ಮೆ ಓಡೋಡಿ ಬಂದಿತು. ಕಬೀರನ ಬಳಿ ಬಂದು ನಿಂತುಕೊಂಡಿತು. ಕಬೀರನು ಅದರ ಮೈದಡವುತ್ತಾ ಹೀಗೆಂದನು, "ಹೇ ವಿದ್ವಾಂಸ ಕೋಣ, ವೇದದ ನಾಲ್ಕು ಮಂತ್ರಗಳನ್ನು ಹೇಳು," ಆಗ ಕೋಣ (1) ಯಜುರ್ವೇದದ 5ನೇ ಅಧ್ಯಾಯದ 32ನೇ ಮಂತ್ರವನ್ನು ಹೇಳಿತು. ಅದರ ಭಾವಾರ್ಥವನ್ನು ಸಹ ಹೀಗೆ ಹೇಳಿತು. "ಯಾರು ಪರಮ

ಶಾಂತಿದಾಯಕನೋ (ಉಸಿಗ್ ಅಸಿ) ಯಾರು ಪಾಪವನ್ನು ನಾಶಮಾಡುತ್ತಾನೋ (ಅಂಘಾರಿ) ಯಾರು ಬಂಧನಗಳ ಶತ್ರುವೋ ಅಂದರೆ ಮುಕ್ತಿದಾತನೋ = ಬಂಭಾರೀ, ಅವನು (ಕವಿರಸಿ) ಕಬೀರನು. ಸ್ವರ್ಜ್ಯೋತಿ=ಸ್ವಯಂ ಪ್ರಕಾಶಿತ ಅಂದರೆ ತೇಜೋಮಯ ಶರೀರವುಳ್ಳವನು, ಋತಧಾಮಾ=ಸತ್ಯಲೋಕದವನು ಅಂದರೆ ಸತ್ಯಲೋಕದಲ್ಲಿ ವಾಸಿಸುವವನು. ಸಮ್ರಾಟಸಿ = ಎಲ್ಲಾ ಭಗವಂತರ ಭಗವಂತನು ಅಂದರೆ ಸರ್ವ ಶಕ್ತಿವಂತ ಸಮ್ರಾಟ ಅಂದರೆ ಮಹಾರಾಜನು.

(2) ಋಗ್ವೇದದ 9ನೇ ಮಂಡಲದ 86ನೇ ಸೂಕ್ತಿಯ 26ನೇ ಮಂತ್ರವನ್ನು ಹೇಳಿತು. ಇದರ ಭಾವಾರ್ಥವೇನೆಂದರೆ, ಪರಮಾತ್ಮನು ಮೇಲಿನ ಲೋಕದಿಂದ ನಡೆದು ಬರುತ್ತಾನೆ. ಒಳ್ಳೆಯ ಆತ್ಮಗಳನ್ನು ಭೇಟಿಯಾಗುತ್ತಾನೆ. ಭಕ್ತರ ಸಂಕಟಗಳನ್ನು ದೂರ ಮಾಡುತ್ತಾನೆ. ಅವನೇ ಕವಿರ್ದೇವ (ಕಬೀರ ಪರಮೇಶ್ವರ)ನು.

(3) ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 17ನೇ ಮಂತ್ರವನ್ನು ಹೇಳಿತು. ಇದರ ಭಾವಾರ್ಥ ಈ ರೀತಿ ಇದೆ. (ಕವಿಃ=ಕವಿರ್) ಕಬೀರ ಪರಮಾತ್ಮನು ಸ್ವತಃ ಭೂಮಿಯ ಮೇಲೆ ಪ್ರತ್ಯಕ್ಷನಾಗಿ ತತ್ವಜ್ಞಾನವನ್ನು ಹೇಳುತ್ತಾನೆ. ಅದನ್ನು ಕವಿರ್ವಾಣಿ (ಕಬೀರವಾಣಿ) ಎಂದು ಕರೆಯಲಾಗುತ್ತದೆ. ಸತ್ಯ ಆಧ್ಯಾತ್ಮಿಕ ಜ್ಞಾನವನ್ನು (ತತ್ವಜ್ಞಾನ) ಕಬೀರ ಪರಮಾತ್ಮನು ಲೋಕೋಕ್ತಿಗಳ ಮೂಲಕ, ದ್ವಿಪಂಕ್ತಿಗಳ ಮೂಲಕ, ಪದ್ಯಗಳ ಮೂಲಕ, ಚೌಪದಿಗಳ ಹಾಗೂ ಕವಿತೆಯ ರೂಪದಲ್ಲಿ ಕಬೀರ ವಾಣಿ ಮೂಲಕ ಹೇಳುತ್ತಾನೆ.

(4) ಋಗ್ವೇದದ 9ನೇ ಮಂಡಲದ 94ನೇ ಸೂಕ್ತಿಯ 1ನೇ ಮಂತ್ರವನ್ನು ಹೇಳಿತು. ಅದರ ಭಾವಾರ್ಥವೇನೆಂದರೆ, 'ಪರಮಾತ್ಮನು ಕವಿಯ ಹಾಗೆ ಆಚರಣೆ ಮಾಡುತ್ತಾ, ಭೂಮಿಯ ಮೇಲೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುತ್ತಾನೆ' ಇದಾದ ನಂತರ ಆ ಕೋಣ ಹೀಗೆಂದಿತು, 'ಹೇ ಮುಗ್ಧ ಪಂಡಿತರೇ! ಈ ಸಾಲಿನಲ್ಲಿ ನಿಂತು ಯಾರು ನನ್ನ ಮೈದಡವುತ್ತಾ ನಿಂತಿರುವರೋ ಅವರೇ ಆ ಪರಮಾತ್ಮ ಕಬೀರರು. ಅವರನ್ನು ಜನರು ಕವಿ ಎಂದು ಕರೆಯುತ್ತಾರೆ. ಅವರ ಕೃಪೆಯಿಂದಲೇ ಇಂದು ನಾನು ಮನುಷ್ಯರಂತೆ ವೇದ ಮಂತ್ರಗಳನ್ನು ಉಚ್ಚರಿಸುತ್ತಿದ್ದೇನೆ.

ಕಬೀರ ಪರಮೇಶ್ವರರು ಹೀಗೆಂದರು, "ಹೇ ಕೋಣ ಪಂಡಿತ, ನೀನು ಪಂಡಿತರ ಸಾಲಿನಲ್ಲಿ ಹೋಗಿ ಕುಳಿತು ಊಟ ಮಾಡು, ನಾನೊಬ್ಬ ಶೂದ್ರ, ಅಶಿಕ್ಷಿತನು. ಆದ್ದರಿಂದ ಸಾಧಾರಣ ಜನರಿಗಾಗಿ ಇರುವ ಸಾಲಿನಲ್ಲಿ ಹೋಗಿ ಊಟ ಮಾಡುತ್ತೇನೆ."

ಅದೇ ಸಮಯ ಆ ಕೋಣ ವೇದಮಂತ್ರಗಳನ್ನು ಉಚ್ಚರಿಸುವುದನ್ನು ನೋಡಿ ಅಲ್ಲಿ ಸೇರಿದ್ದ ಎಲ್ಲಾ ಪಂಡಿತರು ಕಬೀರರ ಪಾದಗಳ ಮೇಲೆ ಬಿದ್ದು ತಮ್ಮ ತಪ್ಪನ್ನು ಕ್ಷಮಿಸುವಂತೆ ಬೇಡಿಕೊಂಡರು. ಆಗ ಕಬೀರ ಪರಮೇಶ್ವರರು ಹೀಗೆಂದರು :-

ಕರನೀ ತಜ್ ಕಥನೀ ಕಥ್ಯೆಂ, ಅಜ್ಞಾನೀ ದಿನ್ ರಾತ್।
ಕುಕರ್ ಜ್ಯೋಂ ಭೌಂಕತ್ ಫಿರೆಂ ಸುನೀ ಸುನಾಈ ಬಾತ್ ॥

ಸತ್ಸಂಗದಲ್ಲಂತೂ ಹೇಳುತ್ತಿದ್ದಿರಿ, "ಭಗವಂತ ಶ್ರೀ ರಾಮಚಂದ್ರನು ಶೂದ್ರ ಜಾತಿಯವಳಾದ ಶಬರಿಯ (ಭೀಲನೀಯ) ಎಂಜಲಿನ ಎಲಚಿ ಹಣ್ಣುಗಳನ್ನು ತಿಂದನು, ಯಾವುದೇ ಅಸ್ಪೃಶ್ಯತೆಯನ್ನು ಮಾಡಲಿಲ್ಲ, ನಿಮ್ಮನ್ನು ನೀವು ಸ್ವತಃ ಪರಮಾತ್ಮನಿಗಿಂತ ಉತ್ತಮವೆಂದು ಭಾವಿಸುತ್ತಿರಿ. ಹೇಳುತ್ತಿರಿ ಆದರೆ ಮಾಡಲ್ಲ. ಒಬ್ಬರು-ಇನ್ನೊಬ್ಬರಿಂದ ಕೇಳಿ ಹೇಳಿದ ಮಾತನ್ನು ನಾಯಿಯಂತೆ ಬೊಗಳುತ್ತಿರುತ್ತೀರಿ." ಇದಾದ ನಂತರ ಅಲ್ಲಿದ್ದ ಎಲ್ಲ ಪಂಡಿತರ ಸಹಿತ ಸಾವಿರಾರು ಜನರು ನೇಕಾರನಾದ ಕಬೀರನ ಶಿಷ್ಯರಾದರು, ದೀಕ್ಷೆಯನ್ನು ಪಡೆದರು. ಶಾಸ್ತ್ರವಿರುದ್ಧವಾದ ಭಕ್ತಿಯನ್ನು ಬಿಟ್ಟು, ಶಾಸ್ತ್ರಕ್ಕನುಸಾರವಾದ ಭಕ್ತಿ ಪ್ರಾರಂಭಿಸಿದರು, ತಮ್ಮ ಆತ್ಮ ಕಲ್ಯಾಣ ಮಾಡಿಕೊಂಡರು.

"ಹೇ ಧರ್ಮದಾಸ! ಶೂದ್ರರನ್ನು ನಮ್ಮ ಹತ್ತಿರವೂ ಕುಳಿತುಕೊಳ್ಳಲು ಬಿಡುವುದಿಲ್ಲವೆಂಬ ಮಾತನ್ನೇ ನೀನೂ ಹೇಳುತ್ತಿರುವೆ."

ಆಗ ಧರ್ಮದಾಸರಿಗೆ ಬಹಳ ನಾಚಿಕೆಯಾಯಿತು. ಆದರೆ ಪರಮಾತ್ಮನು ಹೇಳಿದ ಈ ಮಾತನ್ನು ವ್ಯಂಗ್ಯವೆಂದು ತಿಳಿದು ಕೋಪಗೊಂಡು ಹೀಗೆಂದರು, "ಹೇ ಜಿಂದಾ! ನಿಮ್ಮ ಈ ನಿರರ್ಥಕ ಮಾತುಗಳು ನನಗೆ ರುಚಿಸುವುದಿಲ್ಲ. ನಿಮಗೆ ಹೇಗೆ ಮಾತನಾಡಬೇಕೆಂಬ ಸಭ್ಯತೆಯೂ ಇಲ್ಲ. ಕೇಳಿ–ಹೇಳಿದ ಮತನ್ನು ನೀವು ನಾಯಿಯಂತೆ ಬೊಗಳುತ್ತಿರಿ ಎಂದು ಹೇಳುತ್ತಿರುವೆ". ಇಷ್ಟು ಹೇಳಿ ಧರ್ಮದಾಸರು ಮುಖ ತಿರುಗಿಸಿದರು. ಕೋಪ ಪ್ರದರ್ಶಿಸಿದರು. ಜಿಂದಾ ರೂಪದಲ್ಲಿದ್ದ ಪರಮಾತ್ಮನು ಅಂತರ್ಧ್ಯಾನನಾದನು. ನಾಲ್ಕನೇ ಬಾರಿ ಪರಮಾತ್ಮನು ಅಂತರ್ಧ್ಯಾನನಾದಾಗ ಧರ್ಮದಾಸರಿಗೆ ಚಿಂತೆಯಾಗತೊಡಗಿತು. ಆಗ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು. ನಂತರ ಅದೇ ದಿನ ಬೃಂದಾವನದಲ್ಲಿ ಧರ್ಮದಾಸನೊಂದಿಗೆ ಪರಮಾತ್ಮನ ಮಾತುಕತೆಯಾಯ್ತು. (ಹೀಗೆ ಕಬೀರ ಪರಮೇಶ್ವರರು ಒಟ್ಟು ಆರು ಬಾರಿ ಅಂತರ್ಧ್ಯಾನರಾದರು, ಆಗ ಧರ್ಮದಾಸರಿಗೆ ಬುದ್ಧಿ ಬಂದಿತು) ಮಥುರಾ ಬೃಂದಾವನದಿಂದ ಧರ್ಮದಾಸರು ಅಳುತ್ತಾ ತನ್ನ ಗ್ರಾಮ ಬಾಂಧವ್‌ಗಢದ ಕಡೆಗೆ ಹೊರಟರು. 6 ತಿಂಗಳವರೆಗೆ ತೀರ್ಥಸ್ಥಾನಗಳನ್ನು ಭೇಟಿ ಮಾಡುವುದೆಂದು ಈ ಮೊದಲು ಧರ್ಮದಾಸರು ನಿರ್ಧರಿಸಿದ್ದರು. ಆದರೆ 15 ದಿನಗಳಲ್ಲೇ ಮರಳಿ ಬಂದುಬಿಟ್ಟರು.

ಗರೀಬದಾಸರು ತಮ್ಮ ಅಮೃತವಾಣಿಯಲ್ಲಿ ಹೇಳಿದ್ದಾರೆ:–

ತಹಾಂ ವಹಾಂ ರೋವತ್ ಹೈ ಧರ್ಮನೀ ನಾಗರ್, ಕಹಾಂ ಗಯೆ ಮೇರೇ ಸುಖ್ ಕೆ ಸಾಗರ್।
ಅತಿ ವಿಯೋಗ್ ಹುಆ ಹಮ್ ಸೇತೀ, ಜೈಸೆ ನಿರ್ಧನ್ ಕೀ ಲುಟ್ ಜಾಯ್ ಖೇತೀ।
ಹಮ್ ತೋ ಜಾನೇ ತುಮ್ ದೇಹ್ ಸ್ವರುಪಾ, ಹಮರೀ ಬುದ್ಧಿ ಅಂಧ್ ಗಹರ್ ಕೂಪಾ।
ಕಲ್ಪ್ ಕರೇ ಔರ್ ಮನ್ ಮೆಂ ರೋವೈ, ದಶೋಂ ದಿಶಾ ಕೂಂ ವೋ ಮಘ್ ಜೋಹೈ।
ಬೇಗ್ ಮಿಲೋ ಕರಹೂಂ ಅಪಘಾತಾ, ಮೈಂ ನಾ ಜೀವೂಂ ಸುನೋ ವಿಧಾತಾ।

ಧರ್ಮದಾಸರು ಬಾಂಧವ್‌ಗಢಕ್ಕೆ ತಲುಪಿದರು, ಆಗ ಬಹಳ ಅಳುತ್ತಿದ್ದನು. ಮನೆಯ ಒಳಗಡೆ ಬಂದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು. ಅವನ ಹೆಂಡತಿಯ ಹೆಸರು ಆಮಿನೀದೇವಿ. ತನ್ನ ಪತಿಯು ಅಳುತ್ತಿರುವುದನ್ನು ನೋಡಿ ಹಾಗೂ ಇಷ್ಟು ಬೇಗ ವಾಪಸ್ಸು ಬಂದಿರುವುದನ್ನು ನೋಡಿ, ಇವರನ್ನು ಯಾರೋ ಲೂಟಿ ಮಾಡಿರಬಹುದು. ಹಣವಿರದ ಕಾರಣ ಮರಳಿ ಬಂದಿರಬಹುದು ಎಂದು ಊಹಿಸಿ, ಧರ್ಮದಾಸನ ಬಳಿ ಬಂದು, ತನ್ನ ಕೈಗಳಿಂದ ಅವನ ಕಣ್ಣೀರನ್ನು ಒರೆಸುತ್ತಾ ಹೀಗೆಂದಳು, "ಯಾಕೆ ಮನಸ್ಸನ್ನು ಕೆಡಿಸಿಕೊಂಡಿರುವಿರಿ? ಯಾರೋ ನಿಮ್ಮ ಯಾತ್ರೆಯ ಹಣವನ್ನು ಲೂಟಿ ಮಾಡಿದ್ದರೆ ಚಿಂತೆ ಮಾಡಬೇಡಿ, ನಿಮ್ಮ ಹತ್ತಿರ ಹಣ ಕಡಿಮೆ ಇದೆಯೇ ಮತ್ತಷ್ಟು ತಗೊಂಡು ಹೋಗಿ ನಿಮ್ಮ ತೀರ್ಥಯಾತ್ರೆಯನ್ನು ಪೂರ್ಣಗೊಳಿಸಿ ಬಂದುಬಿಡಿ. ನಾನು ಬೇಡಾ ಅಂತಾ ಹೇಳುವೆನೇನು?" ಸ್ವಲ್ಪ ಹೊತ್ತಿನ ಬಳಿಕ ಧರ್ಮದಾಸರು ಮನಸ್ಸು ಗಟ್ಟಿಮಾಡಿಕೊಂಡು ಹೀಗೆಂದರು, "ಆಮಿನಿದೇವಿ, ನನ್ನ ಹಣ, ಸಂಪತ್ತು ಲೂಟಿಯಾಗಿದ್ದಿದ್ದರೆ, ನಾನು ಮತ್ತೆ ಇನ್ನಷ್ಟು ಹಣ ತಗೊಂಡು ಹೋಗುತ್ತಿದ್ದೆ. ಆದರೆ ನನಗೆ ಮರಳಿ ಸಿಗದಿರುವಂಥ ಸಂಪತ್ತು ಲೂಟಿಯಾಗಿದೆ . ಅದನ್ನು ನಾನು ನನ್ನ ಮೂರ್ಖತನದಿಂದಲೇ ಕಳೆದುಕೊಂಡೆ". ನಂತರ ಜಿಂದಾ ಮಹಾತ್ಮನ ಜೊತೆ ನಡೆದ ಎಲ್ಲ ಜ್ಞಾನ ಚರ್ಚೆ ಮತ್ತು ಅವರಿಂದ ಕೇಳಿದ ಸೃಷ್ಟಿಯ ರಚನೆಯನ್ನು ಆಮಿನಿದೇವಿಗೆ ತಿಳಿಸಿದನು. ಪ್ರಮಾಣ ಸಹಿತವಾದ ಸರ್ವಜ್ಞಾನವನ್ನು ಕೇಳಿದ ಆಮಿನಿದೇವಿಯು ಹೀಗೆಂದಳು, "ನೀವು ವೃತ್ತಿಯಲ್ಲಿ ವ್ಯಾಪಾರಸ್ಥರು. ಎಂದಿಗೂ ನಷ್ಟದ ವ್ಯಾಪಾರದ ಒಪ್ಪಂದವನ್ನು ಮಾಡಿಕೊಳ್ಳುತ್ತಿರಲಿಲ್ಲ. ಇಷ್ಟು ಪ್ರಮಾಣ ಸಹಿತವಾದ ಜ್ಞಾನವನ್ನು ನೀವು ಒಪ್ಪಲಿಲ್ಲವೆಂದ ಮೇಲೆ ಆ ಸಾಧುವಿಗೆ ಕೋಪ ಬರುವುದು ಸಹಜವೇ. ಪ್ರತಿಸಾರಿ ಅವರು ನಿಮಗೆ ಸಿಕ್ಕಾಗಲೂ ಮಕ್ಕಳಿಗೆ ಹೇಳುವ ಹಾಗೆ ನಿಮಗೆ ತಿಳಿಸಿ ಹೇಳಿದ್ದಾರೆ. ಆದರೆ ನೀವೇಕೆ ಆ ಮಹಾತ್ಮನನ್ನು ಧಿಕ್ಕರಿಸಿದಿರಿ?" ಆಗ ಧರ್ಮದಾಸರೆಂದರು, "ಆಮಿನಿ, ಜೀವನದಲ್ಲಿ ಮೊದಲ ಬಾರಿ ನಾನು ನಷ್ಟದ ವ್ಯಾಪಾರ ಮಾಡಿರುವೆ. ಈ ನಷ್ಟವನ್ನು ಈಗ ನಾನು ತುಂಬಲು ಸಾಧ್ಯವಿಲ್ಲ. ಈ ಸಂಪತ್ತು ಸಿಗದಿದ್ದರೆ ನಾನು ಜೀವಂತವಾಗಿರುವುದಿಲ್ಲ."

# "ಧರ್ಮದಾಸರನ್ನು ಸತ್ಯಲೋಕಕ್ಕೆ ಕರೆದೊಯ್ಯುವುದು"

ಆರು ತಿಂಗಳವರೆಗೆ ಜಿಂದಾ ಪರಮೇಶ್ವರನು ಬರಲಿಲ್ಲ. ಧರ್ಮದಾಸರು ಅತ್ತು-ಅತ್ತು ಸುಸ್ತಾದರು. ಊಟ ತಿಂಡಿ ಹೆಸರಿಗಷ್ಟೆ ತಿನ್ನುತ್ತಿದ್ದರು. ದಿನದಲ್ಲಿ ಗಂಟೆಗಟ್ಟಲೆ ಅಳುವುದು. ಶರೀರ ಬಹಳ ದುರ್ಬಲವಾಯಿತು. ಒಂದು ದಿನ ಆಮಿನಿದೇವಿ ಧರ್ಮದಾಸರನ್ನು ಕುರಿತು ಹೀಗೆಂದಳು, "ಹೇ ಸ್ವಾಮಿ, ನಿಮ್ಮ ಈ ಸ್ಥಿತಿ ನನ್ನಿಂದ ನೋಡಲಾಗುತ್ತಿಲ್ಲ. ಈ ಮೊದಲು ಬಹಳಷ್ಟು ಬಾರಿ ಬಂದಿದ್ದಾರೆ ಎಂದಾದರೆ ಈ ಬಾರಿಯೂ ಬಂದೇ ಬರುತ್ತಾರೆ. ನಂಬಿಕೆ ಇಡಿ". ಧರ್ಮದಾಸರು ಗೋಳಾಡುತ್ತಾ ಹೇಳಿದರು, "ಹಿಂದೆಂದೂ ಇಷ್ಟು ವಿಳಂಬವಾಗಿರಲಿಲ್ಲ. ನನ್ನಂಥಾ ಪಾಪಿಯ ಮೇಲೆ ಕೋಪಗೊಂಡಿರಬೇಕು. ಮಾತು ಸಹ ಕೊಪಗೊಳ್ಳುವಂಥದ್ದಾಗಿತ್ತು. ನಾನೊಬ್ಬ ಮಹಾಮೂರ್ಖನಿದ್ದೇನೆ ಆಮಿನಿ. ಈಗ ನನಗೆ ಅವರ ಬೆಲೆ ಗೊತ್ತಾಗಿದೆ. ಅವರನ್ನು ನೋಡಿದಾಗ ತುಂಬಾ ಮುಗ್ಧನಾಗಿ ಕಾಣುತ್ತಾರೆ. ಅವರು ಆ ಪರಮಾತ್ಮನ ವಿಶೇಷ ಕೃಪಾಪಾತ್ರರು. ಇಷ್ಟು ಜ್ಞಾನವನ್ನು ನಾನೆಂದಿಗೂ ನೋಡಿರಲಿಲ್ಲ, ಕೇಳಿರಲಿಲ್ಲ." ಆಗ ಆಮನಿದೇವಿಯು, "ಪರಮಾತ್ಮ ಹೇಗೆ ಸೀಗುತ್ತಾರೆ, ಎಲ್ಲೆಲ್ಲಿ ಹೋಗುತ್ತಾರೆಂದು ಹೇಳಿರಬಹುದಲ್ವಾ" ಎಂದು ಪತಿಯನ್ನು ಕೇಳಿದಳು. ಆಗ ಧರ್ಮದಾಸರು, "ಎಲ್ಲೆಲ್ಲಿ ಧರ್ಮ-ದಾಸೋಹವಾಗುವುದೋ ಅಲ್ಲೆಲ್ಲಾ ನಾನು ಅವಶ್ಯ ಹೋಗುತ್ತೇನೆ. ಅಲ್ಲಿ ಜನರಿಗೆ ಜ್ಞಾನವನ್ನು ತಿಳಿಸುತ್ತೇನೆ ಎಂದು ಹೇಳಿದ್ದರು" ಎಂದರು. ಆಗ ಆಮಿನಿದೇವಿಯು ತನ್ನ ಪತಿಗೆ ದಾಸೋಹವನ್ನು ಏರ್ಪಡಿಸಲು ಹೇಳಿದಳು. ಜಿಂದಾ ಮಹಾತ್ಮ ಬರಬಹುದು. ಮೂರು ದಿನ ದಾಸೋಹ ಏರ್ಪಡಿಸುವುದಾಗಿ ಧರ್ಮದಾಸರು ಹೇಳಿದರು. ಆಮಿನಿದೇವಿಯು ಮೊದಲು ತುಂಬಾ ಜಿಪುಣೆಯಾಗಿದ್ದಳು. ಧರ್ಮದಾಸರು ಮೂರು ದಿನ ದಾಸೋಹ ಏರ್ಪಡಿಸಲು ಹೇಳಿದರೆ, ಆಮಿನಿದೇವಿ ಒಂದು ದಿನ ಮಾಡಬೇಕೆಂದು ಹಠ ಹಿಡಿಯುತ್ತಿದ್ದಳು. ಆದರೆ ಆ ದಿನ ಆಮಿನಿ ಮರುಮಾತಿಲ್ಲದೆ ಒಪ್ಪಿಕೊಂಡಳು. ಧರ್ಮದಾಸರು ಮೂರು ದಿನಗಳ ದಾಸೋಹ ಏರ್ಪಡಿಸುತ್ತಿರುವೆನೆಂದು ದೂರದೂರದ ಊರಿನವರಿಗೆ ಸಂದೇಶ ಕಳುಹಿಸಿದರು, ಸಾಧುಗಳಿಗೆ ಆಮಂತ್ರಣವನ್ನು ಕಳುಹಿಸಿಕೊಟ್ಟರು. ನಿಗದಿತ ದಿನದಂದು ದಾಸೋಹ ಪ್ರಾರಂಭವಾಯಿತು. ಎರಡು ದಿನಗಳು ಕಳೆದವು. ಸಾಧು-ಮಹಾತ್ಮರು ಬಂದರು, ಜ್ಞಾನದ ಚರ್ಚೆಯಾಯಿತು. ಆದರೆ ಜಿಂದಾ ಮಹಾತ್ಮ ತಿಳಿಸಿದ್ದಂತಹ ಜ್ಞಾನವು ಯಾರ ಬಳಿಯೂ ಇರಲಿಲ್ಲ. ಧರ್ಮದಾಸರು ಬ್ರಹ್ಮಾ, ವಿಷ್ಣು, ಶಿವ ಇವರ ಜನನವಾಗುತ್ತದೆಯೇ ಎಂದು ಎಲ್ಲಾ ಸಾಧುಗಳಿಗೆ ಬೇಕಂತೆ ಪ್ರಶ್ನಿಸುತ್ತಿದ್ದರು. ಅವರಿಗೆ ಯಾರೂ ತಂದೆ-ತಾಯಿಗಳಿಲ್ಲ ಎಂಬ ಅದೇ ಉತ್ತರ ಸಿಗುತ್ತಿತ್ತು. ಇದರಿಂದ ಜಿಂದಾ ಮಹಾತ್ಮ ಅಲ್ಲಿಗೆ ಬಂದಿಲ್ಲವೆಂದು ಧರ್ಮದಾಸರಿಗೆ ಸ್ಪಷ್ಟವಾಗುತ್ತಿತ್ತು.

ಒಂದು ವೇಳೆ ವೇಷ ಬದಲಾಯಿಸಿಕೊಂಡು ಬಂದಿದ್ದರೂ, ಅವರು ಸರಿಯಾದ ಜ್ಞಾನವನ್ನೇ ಹೇಳುತ್ತಿದ್ದರು ಎಂದು ಧರ್ಮದಾಸರಿಗೆ ಗೊತ್ತಿತ್ತು. ಮೂರನೇ ದಿನ ಮಧ್ಯಾಹ್ನದವರೆಗೆ ಜಿಂದಾ ಮಹಾತ್ಮ ಬರಲಿಲ್ಲ. ಆಗ ಧರ್ಮದಾಸನು ಒಂದು ವೇಳೆ ಈ ದಿನವೂ ಜಿಂದಾ ಮಹಾತ್ಮ ಬರದಿದ್ದರೆ, ನಾನು ಆತ್ಮಹತ್ಯೆ ಮಾಡಿಕೊಳ್ಳುವೆ, ಏಕೆಂದರೆ ಹೀಗೆ ಬದುಕಿರುವುದಕ್ಕಿಂತ ಸಾಯುವುದೇ ಮೇಲು. ಪರಮಾತ್ಮನಂತೂ ಅಂತರ್ಯಾಮಿ. ಇಂದು ಭಕ್ತನು ನಿಜವಾಗಲೂ ಸತ್ತು ಹೋಗುವನು ಎಂದು ಅವರಿಗೆ ತಿಳಿಯಿತು. ಅದೇ ಸಮಯದಲ್ಲಿ ಸ್ವಲ್ಪ ದೂರದಲ್ಲಿದ್ದ ಒಂದು ಕದಂಬ ವೃಕ್ಷದ ಕೆಳಗೆ ಜಿಂದಾ ಮಹಾತ್ಮ ವೇಷದಲ್ಲಿ ಕುಳಿತಿದ್ದ ಪರಮಾತ್ಮ ಧರ್ಮದಾಸರಿಗೆ ಕಂಡರು. ಧರ್ಮದಾಸರು ಓಡಿಹೋಗಿ, ಗಮನವಿಟ್ಟು ನೋಡುತ್ತಾ, ಜಿಂದಾ ಮಹಾತ್ಮನನ್ನು ತಬ್ಬಿಕೊಂಡರು. ತಮ್ಮನ್ನು ಕ್ಷಮಿಸಬೇಕೆಂದು ಬೇಡಿದರು. ಮುಂದೆಂದೂ ಇಂಥಾ ತಪ್ಪು ಮಾಡುವುದಿಲ್ಲವೆಂದು ಸಾರಿ ಸಾರಿ ಹೇಳಿದರು. ಆಗ ಪರಮಾತ್ಮನು ಧರ್ಮದಾಸರ ಮನೆಗೆ ಬಂದರು. ಆಮಿನಿ ಹಾಗೂ ಧರ್ಮದಾಸರು ಸೇರಿ ಅವರ ಸೇವೆ ಮಾಡಿದರು. ಅವರಿಂದ

ದೀಕ್ಷೆ ಪಡೆದರು. ಪರಮಾತ್ಮ ಜಿಂದಾ ಮಹಾತ್ಮನ ವೇಷದಲ್ಲಿ ಅವರಿಗೆ ಮೊಟ್ಟ ಮೊದಲಿಗೆ ಪ್ರಥಮ ನಾಮ ದೀಕ್ಷೆ ನೀಡಿದರು. ಕೆಲವು ದಿನಗಳವರೆಗೆ ಪರಮೇಶ್ವರ ಅವರ ತೋಟದಲ್ಲಿ ಉಳಿದುಕೊಂಡರು. ನಂತರ ಒಂದು ದಿನ ಧರ್ಮದಾಸರು ಮತ್ತೊಂದು ತಪ್ಪು ಮಾಡಿದರು. ಆಗ ಪರಮಾತ್ಮ ಇದ್ದಕ್ಕಿದ್ದಂತೆ ಮಾಯವಾದರು. ಧರ್ಮದಾಸರಿಗೆ ತನ್ನ ತಪ್ಪಿನ ಅರಿವಾಯಿತು. ಊಟ ತಿಂಡಿ ಬಿಟ್ಟು, ಎಲ್ಲಿಯವರೆಗೆ ದರ್ಶನ ಭಾಗ್ಯ ಸಿಗುವುದಿಲ್ಲವೋ, ಅಲ್ಲಿಯವರೆಗೆ ಅನ್ನ ನೀರು ಮುಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಇದರಿಂದ ಅವರ ಶರೀರ ದುರ್ಬಲಗೊಂಡಿತು. ಮೇಲೆ ಏಳಲೂ ಸಾಧ್ಯವಾಗುತ್ತಿರಲಿಲ್ಲ. ಆರನೇ ದಿನ ಪರಮಾತ್ಮನು ಬಂದನು. ಧರ್ಮದಾಸರು ಅವರನ್ನು ತಬ್ಬಿಕೊಂಡರು. ತನ್ನ ಕೈಯಾರೇ ಊಟ ಮಾಡಿಸಿದರು. ಎಲ್ಲಕ್ಕಿಂತ ಮೊದಲು ಪರಮಾತ್ಮನ ಪಾದಗಳನ್ನು ತೊಳೆದು ಚರಣಾಮೃತ ಸ್ವೀಕರಿಸಿದನು. ನಂತರ ಜ್ಞಾನದ ಚರ್ಚೆ ಪ್ರಾರಂಭವಾದಾಗ ಧರ್ಮದಾಸರು, ನಿಮಗೆ ಇಷ್ಟೆಲ್ಲಾ ಜ್ಞಾನ ಹೇಗಾಯಿತೆಂದು ಕೇಳಿದರು?

ಪರಮೇಶ್ವರರು ಹೇಳಿದರು 'ನನಗೆ ಸದ್ಗುರು ಸಿಕ್ಕಿದ್ದಾರೆ. ಅವರು ಕಾಶೀ ನಗರದಲ್ಲಿ ಇರುತ್ತಾರೆ. ಅವರ ಹೆಸರು ಕಬೀರ. ಅವರೇ ಸ್ವತಃ ಪರಮೇಶ್ವರರು. ಸದ್ಗುರುವಿನ ರೂಪದಲ್ಲಿ ಲೀಲೆಗಳನ್ನು ಮಾಡುತ್ತಿದ್ದಾರೆ. ನೇಕಾರನ ಕೆಲಸ ಮಾಡುತ್ತಾರೆ. ಅವರು ನನಗೆ ಸತ್ಯಲೋಕವನ್ನು ತೋರಿಸಿದರು. ಆ ಲೋಕವು ಎಲ್ಲಕ್ಕಿಂತ ಭಿನ್ನವಾಗಿದೆ. ಅಲ್ಲಿರುವ ಸುಖವು ಸ್ವರ್ಗದಲ್ಲೂ ಇಲ್ಲ. ಸದಾಕಾಲವೂ ವಸಂತ ಋತುವಿನಂತೆ ಹಣ್ಣು ಕೊಡುವ ಮರಗಳು, ಸುಂದರವಾದ ಉದ್ಯಾನವನಗಳು ಹಾಲಿನ ಹೊಳೆ ಎಲ್ಲವೂ ಇರುತ್ತದೆ. ಸುಂದರ ನರ–ನಾರಿಯರಿರುತ್ತಾರೆ. ಅವರು ಎಂದಿಗೂ ವೃದ್ಧರಾಗುವುದಿಲ್ಲ. ಅವರಿಗೆ ಎಂದಿಗೂ ಸಾವು ಬರುವುದಿಲ್ಲ. ಯಾರು ಸದ್ಗುರುವಿನಿಂದ ತತ್ವಜ್ಞಾನವನ್ನು ಕೇಳಿ ಸತ್ಯನಾಮವನ್ನು ಪಡೆದು, ಭಕ್ತಿ ಮಾಡುತ್ತಾರೋ, ಅವರು ಆ ಪರಮಧಾಮವನ್ನು ಪಡೆಯುತ್ತಾರೆ. ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲೂ ಇದರ ವರ್ಣನೆ ಇದೆ.' ಎಂದು ಹೇಳಿದರು. ಆಗ ಧರ್ಮದಾಸರು ಹಠಮಾಡುತ್ತಾ ಹೀಗೆಂದರು, 'ಹೇ ಪರಮಾತ್ಮ, ನನಗೆ ಆ ಅಮರಲೋಕವನ್ನು ತೋರಿಸುವ ಕೃಪೆ ಮಾಡು. ಇದರಿಂದ ನನಗೆ ನಂಬಿಕೆ ಬರುವುದು'. ಆಗ ಪರಮೇಶ್ವರನು, "ಮೊದಲು ನೀನು ಭಕ್ತಿ ಮಾಡು. ನೀನು ನಿನ್ನ ಶರೀರವನ್ನು ತ್ಯಜಿಸಿದಾಗ ಆ ಲೋಕವನ್ನು ಪಡೆಯುವೆ" ಎಂದರು. ಧರ್ಮದಾಸರು ಬಹಳ ಆಗ್ರಹಪಡಿಸಿದಾಗ ಪರಮೇಶ್ವರ ಜಿಂದಾ, "ಸರಿ, ನಿನ್ನನ್ನು ಸತ್ಯಲೋಕಕ್ಕೆ ಕರೆದುಕೊಂಡು ಹೋಗುವೆ" ಎಂದರು. ಧರ್ಮದಾಸನ ಆತ್ಮವನ್ನು ಮೇಲಿರುವ ಸತ್ಯಲೋಕಕ್ಕೆ ಕರೆದುಕೊಂಡು ಹೋದರು. ಪರಮೇಶ್ವರನ ಆಸ್ಥಾನದ ದ್ವಾರದ ಬಳಿ ದ್ವಾರಪಾಲಕನು ನಿಂತಿದ್ದನು. ಜಿಂದಾ ಮಹಾತ್ಮನ ರೂಪದಲ್ಲಿ ನಿಂತಿದ್ದ ಪರಮೇಶ್ವರನು ದ್ವಾರಪಾಲಕನಿಗೆ, ಧರ್ಮದಾಸನಿಗೆ ಪರಮೇಶ್ವರನ ದರ್ಶನ ಮಾಡಿಸು' ಎಂದು ಹೇಳಿದನು. ದ್ವಾರಪಾಲಕನು ಒಂದು ಹಂಸಕ್ಕೆ (ಸತ್ಯಲೋಕದಲ್ಲಿ ಭಕ್ತನನ್ನು ಹಂಸವೆಂದು ಕರೆಯುತ್ತಾರೆ) ಹೀಗೆಂದನು, " ಧರ್ಮದಾಸನನ್ನು ಪರಮೇಶ್ವರನ ಸಿಂಹಾಸನದ ಬಳಿ ಕರೆದುಕೊಂಡು ಹೋಗು, ಸತ್ಯಪುರುಷನ ದರ್ಶನ ಮಾಡಿಸಿಕೊಂಡು ಬಾ." ಅಲ್ಲಿ ಬಹಳಷ್ಟು ಹಂಸ (ಭಕ್ತ) ಹಾಗೂ ಹಂಸನಿ (ನಾರಿ–ಭಕ್ತಮತಿ) ಒಟ್ಟಿಗೆ ಸೇರಿ ಹಾಡುತ್ತಾ, ಕುಣಿಯುತ್ತಾ ಧರ್ಮದಾಸನನ್ನು ಆದರದಿಂದ ಒಳಗಡೆ ಕರೆದುಕೊಂಡು ಹೋದರು. ಎಲ್ಲಾ ಹಂಸಗಳು ಹಾಗು ಹಂಸನಿ ಕೊರಳಲ್ಲಿ ಸುಂದರವಾದ ಹಾರನ್ನು ಧರಿಸಿದ್ದವು. ಅವರ ಶರೀರದ ಪ್ರಕಾಶವು 16 ಸೂರ್ಯರಿಗೆ ಸಮಾನವಾಗಿತ್ತು. ಧರ್ಮದಾಸರು ಸಿಂಹಾಸನದ ಮೇಲೆ ಕುಳಿತಿದ್ದ ಸತ್ಯ ಪುರುಷನನ್ನು ನೋಡಿದರು. ಆ ರೂಪವು ಅವನು ಭೂಮಿಯ ಮೇಲಿದ್ದಾಗ ನೋಡಿದ್ದ ಜಿಂದಾ ಮಹಾತ್ಮರ ರೂಪವೇ ಅದಾಗಿತ್ತು. ಆದರೆ ಇಲ್ಲಿ ಪರಮೇಶ್ವರನ ಒಂದು ರೋಮದ ಪ್ರಕಾಶವು ಕೊಟ್ಯಂತರ ಸೂರ್ಯರ ಹಾಗೂ ಕೋಟ್ಯಂತರ ಚಂದ್ರರ ಪ್ರಕಾಶಕ್ಕಿಂತ ಹೆಚ್ಚಿತ್ತು. ಜಿಂದಾ ರೂಪದಲ್ಲಿದ್ದ ಹಾಗೂ ಕೆಳಗಿನಿಂದ ಮೇಲೆ ಬಂದಿದ್ದ ಪರಮಾತ್ಮನು ಸಿಂಹಾಸನ ಮೇಲೆ ವಿರಾಜಮಾನನಾಗಿದ್ದ ತನ್ನದೇ ಸ್ವರೂಪದಲ್ಲಿದ್ದ ಪರಮಾತ್ಮನಿಗೆ ಚಾಮರ ಬೀಸುತ್ತಿದ್ದನು.

ಧರ್ಮದಾಸನು, ಜಿಂದಾ ಮಹಾತ್ಮ ಪರಮೇಶ್ವರನ ಸೇವಕನಿರಬೇಕು. ಅವನ ರೂಪವು ಇವನ ರೂಪವೂ ಹೋಲಿಕೆಯಾಗುತ್ತಿದೆ ಎಂದು ಯೋಚಿಸಿದನು. ಸ್ವಲ್ಪ ಸಮಯದ ನಂತರ ಸಿಂಹಾಸನದ ಮೇಲೆ ಕುಳಿತಿದ್ದ ಪರಮಾತ್ಮನು ಎದ್ದು ನಿಂತನು ಹಾಗೂ ಜಿಂದಾ ಮಹಾತ್ಮ ಸಿಂಹಾಸನದ ಮೇಲೆ ಕುಳಿತನು. ತೇಜೋಮಯ ಶರೀರವುಳ್ಳ ಪರಮಾತ್ಮನು ಜಿಂದಾ ಮಹಾತ್ಮನ ಶರೀರದಲ್ಲಿ ಪ್ರವೇಶಿಸಿದನು. ಧರ್ಮದಾಸ ನಾಚಿಕೆಯಿಂದ ನಿಂತಲ್ಲೇ ನೀರಾದನು. 'ನಾನೆಂಥಾ ದುಷ್ಟ, ನಾನು ಪರಮೇಶ್ವರನಿಗೆ ಎಷ್ಟು ಕಷ್ಟಕೊಟ್ಟೆ, ಎಷ್ಟು ಅವಮಾನಿಸಿದೆ. ಅಲ್ಲಿ ನನಗೆ ನಂಬಿಕೆಯೇ ಬಂದಿರಲಿಲ್ಲ' ಎಂದು ತನ್ನನ್ನು ತಾನೇ ಬಯ್ದುಕೊಂಡನು.

ಪರಮೇಶ್ವರನ ದರ್ಶನ ಮಾಡಿಸಿ ಸತ್ಯಲೋಕದ ಭಕ್ತರು ಅವನನ್ನು ಮರಳಿ ಕರೆತಂದರು. ಮೂರು ದಿನಗಳವರೆಗೆ ಪರಮಾತ್ಮನ ಸತ್ಯಲೋಕದಲ್ಲಿ ಧರ್ಮದಾಸರಿದ್ದರು. ಆದರೆ ಇತ್ತ ಧರ್ಮದಾಸರು ಮೂರು ದಿನಗಳು ಮೂರ್ಛಿತನಾಗಿರುವುದನ್ನು ನೋಡಿ, ಮನೆಯವರು, ಊರಿನವರು, ಬಂಧು-ಬಾಂಧವರು ಅವರ ಮನೆಯ ಮುಂದೆ ಜಮಾಯಿಸಿದರು. ಒಬ್ಬನು ಮಾಟ ಮಂತ್ರ ಮಾಡಿದರೆ, ಇನ್ನೊಬ್ಬನು ವೈದ್ಯರಿಂದ ಚಿಕಿತ್ಸೆ ಕೊಡಿಸಿದನು. ಆದರೆ ಯಾವುದೂ ಫಲಕಾರಿಯಾಗಲಿಲ್ಲ. ಯಾರಿಗೂ ಧರ್ಮದಾಸನು ಬದುಕುತ್ತಾನೆಂಬ ಭರವಸೆಯೇ ಇರಲಿಲ್ಲ ಮೂರನೇ ದಿನ ಪರಮಾತ್ಮನು ಧರ್ಮದಾಸನ ಆತ್ಮವನ್ನು ಶರೀರದಲ್ಲಿ ಪ್ರವೇಶಿಸಿದರು. ಧರ್ಮದಾಸನನ್ನು ತೋಟದಿಂದ ಮನೆಗೆ ಕರೆದೊಯ್ಯುತ್ತಿದ್ದರು ಅಲ್ಲಿಂದ ಪರಮಾತ್ಮನು ಧರ್ಮದಾಸನನ್ನು ಸತ್ಯಲೋಕಕ್ಕೆ ಕರೆದುಕೊಂಡು ಹೋಗಿದ್ದರು. ಧರ್ಮದಾಸನು ಎಚ್ಚರಗೊಂಡರು. ಎಚ್ಚರಗೊಂಡ ತಕ್ಷಣ ಪರಮಾತ್ಮನು ಜಿಂದಾ ಮಹಾತ್ಮ ರೂಪದಲ್ಲಿ ಕುಳಿತಿದ್ದ ತೋಟದ ಆ ಜಾಗಕ್ಕೆ ಹೋದರು. ಅಲ್ಲಿ ಕುಳಿತಿದ್ದ ಜಿಂದಾ ಮಹಾತ್ಮನ ಕಾಲಿಗೆ ಬಿದ್ದು ನನ್ನಂಥಾ ಅಜ್ಞಾನಿಯನ್ನು ಕ್ಷಮಿಸಿ ಎಂದು ಕೇಳಿಕೊಂಡನು.

ಅವಗುಣ್ ಮೇರೆ ಬಾಪ್ ಜೀ, ಬಖ್ಶೋ ಗರೀಬ್ ನಿವಾಜ್ ।  
ಜೋ ಮೈಂ ಪೂತ್ ಕುಪುತ್ ಹೂಂ, ಬಹುರ್ ಪಿತಾ ಕೋ ಲಾಜ್ ॥

"ನೀವೇ ಪರಮಾತ್ಮ ಎಂದು ನನಗೆ ನಂಬಿಕೆಯೇ ಬರಲಿಲ್ಲ. ನೀವೇ ಪರಮ ಅಕ್ಷರಬ್ರಹ್ಮ, ಒಮ್ಮೊಮ್ಮೆ ಆತ್ಮಕ್ಕೆ ಪೃಥ್ವಿ ಮೇಲೆ ಪೂರ್ಣ ಬ್ರಹ್ಮನನ್ನು ಬಿಟ್ಟು ಇಂಥಾ ಜ್ಞಾನವನ್ನು ತಿಳಿಸುವವರು ಇನ್ನಾರಿದ್ದಾರೆ ಎಂದು ಅನ್ನಿಸುತ್ತಿತ್ತು. ಆದರೆ ಮನಸ್ಸು ಅದನ್ನು ಕೇಳುತ್ತಿರಲಿಲ್ಲ. ಹೇ ಸತ್ಯ ಪುರುಷ! ಸತ್ಯಲೋಕದಲ್ಲಿದ್ದ ನಿಮ್ಮ ಶರೀರದ ಶೋಭೆಯನ್ನು ಇಲ್ಲಿ ಏಕೆ ತೋರಿಸಿಲ್ಲ?" ಎಂದನು.

ಆಗ ಪರಮೇಶ್ವರರು, "ಹೇ ಧರ್ಮದಾಸ! ಹಾಗೇನಾದರೂ ನಾನು ಅದೇ ಪ್ರಕಾಶಮಾನವಾದ ಶರೀರದಿಂದ ಈ ಕಾಲಲೋಕಕ್ಕೆ ಬಂದರೆ ಕ್ಷರಪುರುಷ (ಜ್ಯೋತಿ ನಿರಂಜನನೆಂದೂ ಕರೆಯಲ್ಪಡುವ) ವ್ಯಾಕುಲನಾಗುತ್ತಾನೆ. ನಾನು ನನ್ನ ಕೆಲಸವನ್ನು ಗುಪ್ತವಾಗಿಮಾಡುತ್ತೇನೆ. ಅವನು ನನ್ನನ್ನು ಒಬ್ಬ ಸಿದ್ಧ ಪುರುಷನಾದ ಸಂತನೆಂದು ಭಾವಿಸುತ್ತಾನೆ. ಆದರೆ ನಾನು ಎಲ್ಲಿಂದ ಬಂದಿರುವೆನೆಂದು ಅವನಿಗೆ ಗೊತ್ತಿಲ್ಲ. ನಾನು ಯಾರೆಂದು ಗೊತ್ತಿಲ್ಲ" ಎಂದರು. ನಂತರ ಧರ್ಮದಾಸರನ್ನು ಕುರಿತು ಹೀಗೆಂದರು, "ನನ್ನ ದೇಶ ನಿನಗೆ ಹೇಗನ್ನಿಸಿತು?" ಧರ್ಮದಾಸರು ಹೇಳಿದರು, "ಹೇ ಪರಮೇಶ್ವರ, ಈ ಪ್ರಪಂಚದಲ್ಲಿ ಇರಲು ನನಗೆ ಮನಸ್ಸಾಗುತ್ತಿಲ್ಲ. ಆ ಪವಿತ್ರ ಸ್ಥಾನದ ಎದುರು ಈ ಕಾಲನ ಸಂಪೂರ್ಣ ಲೋಕವು (21 ಬ್ರಹ್ಮಾಂಡಗಳ ಕ್ಷೇತ್ರವು) ನರಕದ ಸಮಾನವಿದೆ. ಜನನ-ಮರಣ ಇಲ್ಲಿಯ ಅಚಲ ವಿಧಾನ. ಎಂಭತ್ತನಾಲ್ಕು ಲಕ್ಷ ಜೀವಿಗಳ ಜೀವನವನ್ನು ಅನುಭವಿಸುವುದು ಅನಿವಾರ್ಯವಾಗಿದೆ. ಪ್ರತಿಯೊಂದು ಜೀವಿಗೂ ಈಗ ಸಾಯುವುದಿಲ್ಲ ಎಂಬ ಆಸೆಯಿಂದಲೇ ಬದುಕಿದೆ, ಆದರೆ ಎಂದಾದರೂ ಸಾವು ಬಂದೇ ಬರುತ್ತದೆ. ಒಬ್ಬ ಇನ್ನೊಬ್ಬನಿಗೆ ಮೋಸ ಮಾಡುತ್ತಿರುತ್ತಾನೆ. ಆದರೆ ಸತ್ಯಲೋಕದಲ್ಲಿ ಎಲ್ಲಾ ವ್ಯಕ್ತಿಗಳು ಪ್ರೀತಿಯಿಂದ ಮಾತನಾಡುತ್ತಾರೆ

ಕಪಟ ಮಾಡುವುದಿಲ್ಲ. ಮೂರು ದಿನಗಳೂ ನಾನು ಇದನ್ನೇ ಗಮನಿಸಿದೆ."

ಧರ್ಮದಾಸರು ತನ್ನ ಮನೆಯಲ್ಲಿ ಸೇರಿದ್ದ ಎಲ್ಲಾ ಜನರನ್ನು ನೋಡದೆ ಇದ್ದಿದ್ದರೆ, ತಾನು ಮೂರ್ಛೆ ಹೋಗಿದ್ದನ್ನು ನಂಬುತ್ತಿರಲಿಲ್ಲ. ತಾನೆಲ್ಲೋ ಕನಸು ಕಂಡಿರಬೇಕೆಂದು ತಿಳಿದುಕೊಳ್ಳುತ್ತಿದ್ದರು. ಆದರೆ ಈಗ ಅವರಿಗೆ ದೃಢ ನಂಬಿಕೆ ಬಂದಿತು.

(ಮೇಲೆ ತಿಳಿಸಿದ ವರ್ಣನೆಯು ಪವಿತ್ರ ಕಬೀರ್ ಸಾಗರ್‌ದ 'ಜ್ಞಾನ ಪ್ರಕಾಶ' ಎಂಬ ಅಧ್ಯಾಯದ 57–58ನೇ ಪುಟದಲ್ಲಿ, 'ಮೊಹಮ್ಮದ್ ಬೋಧ್' ಎಂಬ ಅಧ್ಯಾಯದ 20–21ನೇ ಪುಟದಲ್ಲಿ, ದಶ್ ಮುಕಾಮಿ ರೇಖತಾದ 'ಜ್ಞಾನ್ ಸ್ಥಿತಿ ಬೋಧ್' ಅಧ್ಯಾಯದ 83ನೇ ಪುಟದಲ್ಲಿ ಹಾಗೂ 'ಅಮರ ಮೂಲ'ದ 202ನೇ ಪುಟದಲ್ಲಿ ಇದೆ.)

## "ಗುರುವನ್ನು ಬದಲಿಸಬಹುದೇ?"

ಧರ್ಮದಾಸರು ಪ್ರಶ್ನಿಸಿದರು :–

ಪ್ರಶ್ನೆ 52 (ಧರ್ಮದಾಸರ):– ಹೇ ಪ್ರಭು ಗುರುವನ್ನು ಬದಲಿಸಬಹುದೇ? ಗುರುವನ್ನು ಬದಲಿಸಬಾರದೆಂದು ಸಂತರಿಂದ ಕೇಳಲ್ಪಟ್ಟಿರುವೆನು. ಗುರು ಒಬ್ಬರೇ, ಜ್ಞಾನ ಅನೇಕ.

(ಸತ್ಯಪುರುಷನ) ಉತ್ತರ:– ಜಬ್ ತಕ್ ಗುರು ಮಿಲೆ ನಹೀಂ ಸಾಚಾ,
ತಬ್ ತಕ್ ಗುರು ಕರೋ ದಸ್ ಪಾಂಚಾ
ಕಬೀರ್ ಝೂಠೇ ಗುರು ಕೇ ಪಕ್ಷ್ ಕೋ, ತಜತ್ ನ ಲಾಗ್ಯೆ ವಾರ್।
ದ್ವಾರ್ ನ ಪಾವ್ಯೆ ಮೋಕ್ಷ್ ಕಾ, ರಹ್ ವಾರ್ ಕಾ ವಾರ್॥

ಭಾವಾರ್ಥ :– ಎಲ್ಲಿಯವರೆಗೆ ಸದ್ಗುರು ದೊರಕುವುದಿಲ್ಲವೋ, ಅಲ್ಲಿಯವರೆಗೂ ಗುರುವನ್ನು ಬದಲಿಸುತ್ತಿರಬೇಕು. ಬೇಕಾದ್ರೆ ಎಷ್ಟೇ ಗುರುಗಳನ್ನು ಧಾರಣೆ ಮಾಡಿ ಮತ್ತು ಬದಲಿಸಿ. ನಕಲೀ ಗುರುವನ್ನು ತಕ್ಷಣವೇ ತ್ಯಜಿಸಿ ಬಿಡಿ.

ಕಬೀರ್, ಡೂಬ್ಯೆ ಥೇ ಪರ್ ಉಭರೇ, ಗುರು ಕೇ ಜ್ಞಾನ್ ಚಮಕ್।
ಬೇಡಾ ದೇಖಾ ಜರ್‌ಜರಾ, ಉತರ್ ಚಲೇ ಫಡಕ್॥

ಭಾವಾರ್ಥ:– ಯಾವ ಸಮಯದಲ್ಲಿ ನನಗೆ ಸದ್ಗುರು ಸಿಕ್ಕಿದರೋ, ಅವರ ಜ್ಞಾನದ ಬೆಳಕಿನಿಂದ ನಮ್ಮ ಜ್ಞಾನ ಮತ್ತು ಸಾಧನೆಗಳು ತಪ್ಪೆಂದು ತಿಳಿಯಿತು. ಹೇಗೆ ಯಾರದೋ ಭಯದಿಂದ ಪಶುವು ಗಾಬರಿಗೊಂಡು ವೇಗವಾಗಿ ಓಡುತ್ತದೆಯೋ ಹಾಗೆಯೇ ನಾನು ಗುರುವನ್ನು ಬದಲಿಸಿದೆನು. ರಾತ್ರಿಯಲ್ಲಿ ಪಯಣಿಸುತ್ತಿದ್ದ ಪ್ರಯಾಣಿಕರಿಗೆ ಬೆಳಗಿನ ಪ್ರಕಾಶದಲ್ಲಿ ತಾವು ಏರಿರುವ ದೋಣಿಯಲ್ಲಿ ನೀರು ಪ್ರವೇಶಿಸುತ್ತಿರುವುದು ತಿಳಿದಾಗ ಮತ್ತು ಜೊತೆಯಲ್ಲಿಯೇ ಸುರಕ್ಷಿತ ದೋಣಿಯೂ ಇದೆಯೆಂದು ಅರಿವಾದಾಗ ನಶೆಯಲ್ಲಿರದ ಬುದ್ಧಿವಂತ ಯಾತ್ರಿಕರು ತಕ್ಷಣವೇ ಮುರಿದ ದೋಣಿಯನ್ನು ತ್ಯಜಿಸಿ ಮರಿಯದ ದೋಣಿಯಲ್ಲಿ ಹೋಗಿ ಕುಳಿತುಕೊಳ್ಳುವಂತೆ. ನಿಮಗೆ ತಿಳಿಸಿದ ಈ ಜ್ಞಾನವನ್ನು ನಾನು ಕಾಶಿಯಲ್ಲಿ ಸದ್ಗುರು ಕಬೀರರ ಮೂಲಕ ತಿಳಿದಾಗ ಜಾತಿ, ಧರ್ಮ ಏನನ್ನೂ ನೋಡಲಿಲ್ಲ. ಅದೇ ಸಮಯದಲ್ಲಿ ಸದ್ಗುರುವಿಗೆ ಶರಣಾದೆ ಮತ್ತು ಮಂತ್ರ ದೀಕ್ಷೆಯನ್ನು ಪಡೆದು ಭಕ್ತಿ ಮಾಡುತ್ತಿದ್ದೇನೆ. ಸದ್ಗುರುವು ನನಗೆ ದೀಕ್ಷೆಯನ್ನು ನೀಡಲು ಆದೇಶಿಸಿದ್ದಾರೆ. ಹೇ ಧರ್ಮದಾಸ! ಯೋಚಿಸಿ, ರೋಗಿಯು ಒಬ್ಬ ವೈದ್ಯನಿಂದ ಗುಣ ಹೊಂದದಿದ್ದರೆ ಬೇರೆ ವೈದ್ಯನ ಬಳಿ ಹೋಗುವುದಿಲ್ಲವೇನು?

ಧರ್ಮದಾಸರು ಹೇಳುತ್ತಾರೆ, "ಹೌದು ಹೋಗುತ್ತಾನೆ, ಹೋಗಲೇಬೇಕು, ಜೀವನವನ್ನು ರಕ್ಷಿಸಿಕೊಳ್ಳಬೇಕು." ಆಗ ಪರಮೇಶ್ವರನು ಹೀಗೆಂದನು, "ಜೀವಿಗಳ ಉದ್ಧಾರಕ್ಕಾಗಿ ಹೀಗೆಯೇ ಮನುಷ್ಯ ಜನ್ಮ ದೊರೆಯುತ್ತದೆ. ಜೀವಿಗೆ ಜನ್ಮ–ಮರಣವೆಂಬ ದೀರ್ಘವಾದ ರೋಗವು ಅಂಟಿಕೊಂಟಿದೆ. ಇದು ಸತ್ಯನಾಮ ಹಾಗೂ ಸಾರನಾಮದ ಹೊರತು ಅಂತ್ಯಗೊಳ್ಳುವುದಿಲ್ಲ.

ಕಾಶಿಯಲ್ಲಿ ಸದ್ಗುರು ಕಬೀರ ಇರುತ್ತಾರೆ, ಎರಡೂ ಮಂತ್ರಗಳು ಅವರಿಂದ ದೊರೆಯುತ್ತವೆ. ಭೂಮಿ ಮೇಲೆ ಮತ್ಯಾರ ಬಳಿಯೂ ಇಲ್ಲ. ನೀವೂ ಕಾಶಿಗೆ ಹೋಗಿ ದೀಕ್ಷೆ ಪಡೆಯಿರಿ, ನಿಮ್ಮ ಉದ್ಧಾರವಾಗುವುದು. ಏಕೆಂದರೆ ಸದ್ಗುರುವಿನ ಹೊರತು ಆ ನನ್ನ ಸತ್ಯಲೋಕ ಪ್ರಾಪ್ತಿಯಾಗುವುದಿಲ್ಲ". ಆಗ ಧರ್ಮದಾಸರು ಹೇಳಿದರು, "ತಾವೇ ಸ್ವಯಂ ಸತ್ಯಪುರುಷರು. ನಾನು ಮತ್ತೆ ಮೋಸ ಹೋಗುವುದಿಲ್ಲ. ನೀವು ನಿಮ್ಮನ್ನೇ ಮರೆಮಾಚುತ್ತಿದ್ದೀರಿ. ಹೇ ಪ್ರಭು! ನಾನು ಗುರು ರೂಪದಾಸರಿಂದ ದೀಕ್ಷೆಯನ್ನು ಪಡೆದಿದ್ದೇನೆ. ನಾನು ಮೊದಲು ಗುರುವನ್ನು ಬದಲಿಸಲು ಅವರಿಂದ ಅನುಮತಿಯನ್ನು ಪಡೆಯುತ್ತೇನೆ. ಅವರು ಒಪ್ಪಿದರೆ ನಾನು ಗುರುವನ್ನು ಬದಲಿಸುವೆನು". ಆದರೆ ಧರ್ಮದಾಸರ ಮೂರ್ಖತೆಯ ಪರಮಾವಧಿಯನ್ನು ಕಂಡು ಪರಮೇಶ್ವರನು ಆರನೆ ಬಾರಿ ಅಂತರ್ಧ್ಯಾನನಾದನು. ಧರ್ಮದಾಸರು ಮತ್ತೆ ವ್ಯಾಕುಲಗೊಂಡರು. ಮೊದಲಿಗೆ ಅವರು ವೈಷ್ಣವ ಪಂಥಕ್ಕೆ ಸೇರಿದ ಶ್ರೀ ಕೃಷ್ಣ–ಶ್ರೀ ವಿಷ್ಣುವಿನ ಆರಾಧಕರಾದ ರೂಪದಾಸರ ಬಳಿಗೆ ಹೋದರು.

ಧರ್ಮದಾಸರು ಸಂತ ರೂಪದಾಸರಿಗೆ ಎಲ್ಲ ಘಟನೆಗಳನ್ನು ಹೇಳಿದರು ಹಾಗೂ ಗುರುವನ್ನು ಬದಲಿಸಲು ಅನುಮತಿಯನ್ನು ಬೇಡಿದರು. ಸಂತ ರೂಪದಾಸರು ಒಳ್ಳೆಯ ಆತ್ಮದ ವ್ಯಕ್ತಿಯಾಗಿದ್ದರು. ಅವರು ಹೀಗೆ ಹೇಳಿದರು, ಮಗು, ಧರ್ಮದಾಸ! ಯಾವ ಜಿಂದಾ ಮಾಹಾತ್ಮನಿಂದ ನೀನು ಜ್ಞಾನವನ್ನು ಕೇಳಿರುವಿಯೋ, ಆ ಜ್ಞಾನವನ್ನು ಕೇವಲ ಭಗವಂತ ಮಾತ್ರ ಹೇಳಬಲ್ಲ. ನನಗೂ ವಯಸ್ಸಾಗುತ್ತಿದೆ. ನಾನು ಈ ಮಾರ್ಗವನ್ನು ತೊರೆಯಲಾರೆ. ನಿನಗೆ ಆಸೆ ಇದ್ದರೆ ನೀನು ಆ ಮಹಾತ್ಮರಿಂದ ದೀಕ್ಷೆಯನ್ನು ಪಡೆಯಬಹುದು.

ಆಗ ಧರ್ಮದಾಸರು ಕಾಶಿಗೆ ಹೋದರು, ಅಲ್ಲಿ ಕಬೀರ (ಜುಲಾಹರ/ನೇಕಾರರ)ರ ಗುಡಿಸಲನ್ನು ಪತ್ತೆ ಹಚ್ಚಿದರು. ಅಲ್ಲಿ ಬಟ್ಟೆಯನ್ನು ನೇಯುವ ಕೆಲಸದಲ್ಲಿ ತೊಡಗಿದ್ದ ಕಬೀರ್ ಪರಮೇಶ್ವರರನ್ನು ಕಂಡು ಬಹಳ ದಿಗ್ಭ್ರಮೆಗೊಂಡರು. ಸದ್ಗುರುವೇ ಪರಮೇಶ್ವರರೆಂದು ತಿಳಿದು ಬಹಳ ಸಂತಸಗೊಂಡರು. ಆಗ ಅವರಿಂದ ದೀಕ್ಷೆ ಪಡೆದರು ಮತ್ತು ತಮ್ಮ ಉದ್ಧಾರ ಮಾಡಿಕೊಂಡರು. ಕಬೀರ ಪರಮೇಶ್ವರರು ನಂತರ ಧರ್ಮದಾಸರಿಗೆ ಎರಡಕ್ಷರದ (ಒಂದು ಓಂ ಮಂತ್ರ ಹಾಗೂ ಮತ್ತೊಂದು ತತ್ ಅದು ಸಾಂಕೇತಿಕ ವಾಗಿದೆ) ಸತ್ಯ ನಾಮವನ್ನು ನೀಡಿದರು. ನಂತರ ಸಾರನಾಮವನ್ನು ನೀಡಿ ಸತ್ಯಲೋಕದ ವಾಸಿಯನ್ನಾಗಿ ಮಾಡಿದರು.

❖ ಕಲಿಯುಗದಲ್ಲಿ ಪರಮಾತ್ಮ ಬೇರೆ ಬೇರೆ ಈ ಕೆಳಗಿನ ಒಳ್ಳೆ ಆತ್ಮದವರಿಗೆ ಭೇಟಿಯಾದರು.

2. ಸಂತ ಮಲೂಕ್ ದಾಸ (ಅರೋರಾ)ರಿಗೆ ದೊರೆತನು.

3. ಸಂತ ದಾದೂ ದಾಸರು (ಆಮೇರ್, ರಾಜಸ್ಥಾನದವರು) ಇವರಿಗೆ ದೊರೆತನು.

4. ಸಂತ ಶ್ರೀ ಗುರುನಾನಕ್ ಸಾಹೇಬರಿಗೆ ಸುಲ್ತಾನ್ ಪುರ್ ನಗರದ ಸಮೀಪ ಹರಿಯುವ ಬೇಈ ನದಿಯ ಬಳಿ ಭೇಟಿಯಾದರು. ಅಲ್ಲಿ ಗುರುದ್ವಾರಾ 'ಸಚ್ಚ್‌ಖಂಡ್ ಸಾಹೇಬ್' ಸ್ಮರಣಾರ್ಥವಾಗಿ ಕಟ್ಟಿಸಿದ್ದಾರೆ.

5. ಹರಿಯಾಣದ ಝಜ್ಜರ್ ಜಿಲ್ಲೆಯ ಛುಡಾನೀ ಎಂಬ ಹಳ್ಳಿಯ ಸಂತ ಗರೀಬ್ ದಾಸರಿಗೆ ಭೇಟಿಯಾದರು. ವರ್ತಮಾನದಲ್ಲಿ ಆ ಸ್ಥಳದಲ್ಲಿ ಸ್ಮರಣಾರ್ಥವಾಗಿ ಸ್ಮಾರಕ ಕಟ್ಟಿಸಿದ್ದಾರೆ.

ಸಂತ ಗರೀಬ್ ದಾಸರು ಹತ್ತು ವರ್ಷದವರಾಗಿದ್ದರು. ತಮ್ಮದೇ ಹೊಲದಲ್ಲಿ ಇತರ ಕೆಲವು ಗೋಪಾಲಕರೊಡನೆ ಗೋವುಗಳನ್ನು ಮೇಯಿಸಲು ಹೋಗುತ್ತಿದ್ದರು. ಪರಮೇಶ್ವರ ಜಿಂದಾ ಮಹಾತ್ಮನ ರೂಪದಲ್ಲಿ ಸತ್ಯಲೋಕ (ಸಚ್ಚ್ ಖಂಡ್)ದಿಂದ ನಡೆದು ಬಂದರು. ಈ ಲೋಕ ಎಲ್ಲಾ ಭವನಗಳಿಗಿಂತಲೂ ಎತ್ತರದಲ್ಲಿದೆ ಅಲ್ಲಿ ಪರಮಾತ್ಮ ಇರುತ್ತಾನೆ. ಪರಮಾತ್ಮ ಸಂತ ಗರೀಬದಾಸರ ಆತ್ಮವನ್ನು ಮೇಲಿರುವ ತಮ್ಮ ಲೋಕಕ್ಕೆ ಕರೆದೊಯ್ದರು. ಬಾಲಕ

ಮೃತನಾದನೆಂದು ತಿಳಿದು ಸಂಜೆಯ ಹೊತ್ತಿಗೆ ಅವನ ಶರೀರವನ್ನು ಚಿತೆಯ ಮೇಲಿಟ್ಟು ಅಂತಿಮ ಸಂಸ್ಕಾರವನ್ನು ಮಾಡುವವರಿದ್ದರು. ತಕ್ಷಣವೇ ಪರಮಾತ್ಮನು ಸಂತ ಗರೀಬದಾಸರ ಆತ್ಮವನ್ನು ಮೇಲೆ ಬ್ರಹ್ಮಾಂಡಗಳನ್ನು ತೋರಿಸಿ, ಸತ್ಯಜ್ಞಾನದ ಅರಿವು ಮೂಡಿಸಿ ಮತ್ತೆ ಶರೀರದೊಳಗೆ ಪ್ರವೇಶಿಸಿದನು. ಬಾಲಕ ಮತ್ತೆ ಜೀವಂತನಾದನು. ಈ ಘಟನೆಯು ಸಂವತ್ 1784 ಅಂದರೆ 1727ನೇ ಇಸವಿಯ ಫಾಲ್ಗುಣ ಮಾಸದ ಶುಕ್ಲಪಕ್ಷದ ದ್ವಾದಶಿಯದ್ದಾಗಿದೆ. ಸಂತ ಗರೀಬದಾಸರಿಗೆ ಪರಮಾತ್ಮನು ತತ್ವಜ್ಞಾನವನ್ನು ಪ್ರದಾನಿಸಿದನು. ಅವರ ಜ್ಞಾನಯೋಗವನ್ನು ತೆರೆದನು. ಆ ಕಾರಣದಿಂದ ಸಂತ ಗರೀಬ್ ದಾಸರು 24 ಸಾವಿರ ವಾಣಿಗಳನ್ನು ಹೇಳಿದರು ಹಾಗೂ ಸಂತ ಗೋಪಾಲದಾಸರ ಮೂಲಕ ಅದನ್ನು ಬರೆಯಿಸಲಾಯಿತು. ಆ ಅಮೃತವಾಣಿಯನ್ನು ಮುದ್ರಿಸಿ ಗ್ರಂಥರೂಪವನ್ನು ನೀಡಲಾಗಿದೆ. ಈ ದಾಸ (ಸಂತ ರಾಮ್‌ಪಾಲ್ ದಾಸ) ಅದರಿಂದಲೇ ಸತ್ಸಂಗವನ್ನು ಮಾಡುತ್ತಿರುತ್ತಾನೆ. ಸಂತ ಗರೀಬ್‌ದಾಸರು ಅಮೃತವಾಣಿಯಲ್ಲಿ ಹೇಳಿದ್ದಾರೆ :-

ಗರೀಬ್, ಹಮ್ ಸುಲ್‌ತಾನೀ ನಾನಕ್ ತಾರೇ, ದಾದೂ ಕೋ ಉಪದೇಶ್ ದಿಯಾ।
ಜಾತಿ ಜುಲಾಹಾ ಭೇದ್ ನಾ ಪಾಯಾ, ಕಾಶೀ ಮಾಂಹೇ ಕಬೀರ್ ಹುಆ॥
ಗರೀಬ್, ಅನಂತ್ ಕೋಟಿ ಬ್ರಹ್ಮಾಂಡ್ ಕಾ, ಏಕ್ ರತಿ ನಹೀಂ ಭಾರ್।
ಸತ್‌ಗುರು ಪುರುಷ್ ಕಬೀರ್ ಹೈಂ, ಕುಲ್ ಕೇ ಸಿರ್‌ಜನ್ ಹಾರ್॥

ಭಾವಾರ್ಥ:- ಸಂತ ಗರೀಬದಾಸರು ಪರಮಾತ್ಮನಿಂದ ಪ್ರಾಪ್ತವಾದ ದಿವ್ಯ ದೃಷ್ಟಿಯಿಂದ ನೋಡಿ ಭೂತ-ಭವಿಷ್ಯದ ಜ್ಞಾನವನ್ನು ಹೇಳಿದ್ದಾರೆ. ಕಾಶೀ ನಗರ (ಉತ್ತರ ಪ್ರದೇಶ) ದಲ್ಲಿರುವ ನೇಕಾರ ಕಬೀರರು, ಸರ್ವ ಬ್ರಹ್ಮಾಂಡಗಳ ಸೃಷ್ಟಿಕರ್ತರೆಂದು ಹೇಳಿದ್ದಾರೆ. ಎಲ್ಲ ಬ್ರಹ್ಮಾಂಡಗಳನ್ನೂ ತಮ್ಮ ಶಕ್ತಿಯಿಂದಲೇ ನಿಲ್ಲಿಸಿದ್ದಾರೆ. ಪರಮೇಶ್ವರ ಕಬೀರರ ಮೇಲೆ ಅವುಗಳ ಯಾವ ಭಾರವೂ ಇಲ್ಲ. ಹೇಗೆ ವಿಜ್ಞಾನಿಗಳು ವಿಮಾನ, ರಾಕೇಟುಗಳನ್ನು ತಯಾರಿಸಿ ಉಡಾವಣೆ ಮಾಡಿದ್ದಾರೋ, ಸ್ವತಃ ಅದರಲ್ಲಿ ಕುಳಿತು ಪ್ರಯಾಣಿಸುತ್ತಾರೋ ಹಾಗೆಯೇ ಸಂತ ಗರೀಬದಾಸರು ಪರಮೇಶ್ವರರನ್ನು ಪ್ರತ್ಯಕ್ಷವಾಗಿ ನೋಡಿ ಅವರ ಮಹಿಮೆಯನ್ನು ವರ್ಣಿಸಿದ್ದಾರೆ.

6. ಉತ್ತರಪ್ರದೇಶದ ಬಾಗ್‌ಪತ್ ಜಿಲ್ಲೆಯ ಖೇಖಡಾ ಗ್ರಾಮದ ಸಂತ ಘೀಸಾದಾಸರಿಗೆ ಪರಮೇಶ್ವರರು ಭೇಟಿಯಾಗಿದ್ದರು. ಪುಸ್ತಕ ವಿಸ್ತಾರತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೆಚ್ಚು ವಿಸ್ತಾರವಾಗಿ ಹೇಳುತ್ತಿಲ್ಲ. ಹೆಚ್ಚಿನ ಮಾಹಿತಿಗಾಗಿ " **www,jagatgururampalji.org**" **website open** ಮಾಡಿ ಹೆಚ್ಚಿನ ಜ್ಞಾನವನ್ನು ಗ್ರಹಿಸಬಹುದು.

❑❑❑

## (ವೇದಮಂತ್ರಗಳ ಫೋಟೋಕಾಪಿಯನ್ನು ನೋಡಿ)

(ಪ್ರಮಾಣ ಋಗ್ವೇದ ಮಂಡಲ ಸಂ. 9ರ ಸೂಕ್ತಿ 86ರ ಮಂತ್ರ 26–27)

**इन्दुः पुनानो अति गाहते मृधो विश्वानि कृण्वन्त्सुपथानि यज्यवे ।**
**गाः कृण्वानो निर्णिजं हर्यतः कविरत्यो न क्रीळन्परि वारमर्षति ॥२६॥**

**पदार्थः**—(**यज्यवे**) यज्ञ करने वाले यजमानों के लिये परमात्मा (**विश्वानि सुपथानि**) सब रास्तों को (**कृण्वन्**) सुगम करता हुआ (**मृधः**) उनके विघ्नों को (**अतिगाहते**) मर्द्दन करता है। और (**पुनानः**) उनको पवित्र करता हुआ और (**निर्णिजं**) अपने रूप को (**गाः कृण्वानः**) सरल करता हुआ (**हर्य्यतः**) वह कान्तिमय परमात्मा (**कविः**) सर्वज्ञ (**अत्यो न**) विद्युत् के समान (**क्रीळन्**) क्रीड़ा करता हुआ (**वारं**)वरणीय पुरुष को (**पर्य्यर्षति**) प्राप्त होता है ॥२६॥

ವಿವೇಚನೆ: – ಈ ಫೋಟೋಕಾಪಿಯು ಋಗ್ವೇದದ 9ನೇ ಮಂಡಲದ 86ನೇ ಸೂಕ್ತಿಯ 26ನೇ ಮಂತ್ರದ್ದಾಗಿದೆ. ಇದು ಆರ್ಯ ಸಮಾಜದ ಆಚಾರ್ಯರು ಹಾಗೂ ಮಹರ್ಷಿ ದಯಾನಂದರ ಶಿಷ್ಯರಿಂದ ಅನುವಾದಿಸಲ್ಪಟ್ಟಿದೆ. ಇದರಲ್ಲಿ ಸ್ಪಷ್ಟವಿದೆ.

ಯಜ್ಞ ಮಾಡುವವರು ಅರ್ಥಾತ್ ಧಾರ್ಮಿಕ ಅನುಷ್ಠಾನಗಳನ್ನು ಮಾಡುವ ಯಜಮಾನರು ಅಂದರೆ ಭಕ್ತರಿಗೆ ಪರಮಾತ್ಮನು, ಎಲ್ಲಾ ಮಾರ್ಗಗಳನ್ನು ಸುಗಮಗೊಳಿಸುತ್ತಾ ಅರ್ಥಾತ್ ಜೀವನವೆಂಬ ಪ್ರಯಾಣದ ಮಾರ್ಗವನ್ನು ದುಃಖಗಳಿಲ್ಲದೆ ಸುಗಮಗೊಳಿಸುತ್ತಾ, ಅವರ ವಿಘ್ನಗಳು ಅರ್ಥಾತ್ ಸಂಕಟಗಳನ್ನು ನಾಶಗೊಳಿತ್ತಾನೆ ಅರ್ಥಾತ್ ಸಮಾಪ್ತಗೊಳಿಸುತ್ತಾನೆ. ಭಕ್ತರನ್ನು ಪವಿತ್ರ ಅರ್ಥಾತ್ ಪಾಪ ರಹಿತ, ವಿಕಾರ ರಹಿತ ಮಾಡುತ್ತಾನೆ. ಮುಂದಿನ 27ನೇ ಮಂತ್ರದಲ್ಲಿ ಹೇಳಿರುವಂತೆ–ಯಾವ ಪರಮಾತ್ಮನು ದ್ಯೂಲೋಕ ಅರ್ಥಾತ್ ಸತ್ಯಲೋಕದ ಮೂರನೇ ಹಂತದಲ್ಲಿ ವಿರಾಜಮಾನನಾಗಿರುವನೋ, ಅಲ್ಲಿ ಪರಮಾತ್ಮನ ಶರೀರದ ಪ್ರಕಾಶವು ಅತ್ಯಂತ ಅಧಿಕವಾಗಿದೆ. ಉದಾಹರಣೆಗೆ ಪರಮಾತ್ಮನ ಒಂದು ರೋಮದ (ಶರೀರದ ಕೂದಲಿನ) ಪ್ರಕಾಶವು ಕೋಟಿ ಸೂರ್ಯರ ಹಾಗೂ ಅಷ್ಟೇ ಚಂದ್ರರೊಂದಿಗೆ ಸೇರಿದ ಪ್ರಕಾಶಕ್ಕಿಂತಲೂ ಅಧಿಕವಾಗಿದೆ. ಒಂದೊಮ್ಮೆ ಆ ಪರಮಾತ್ಮನು ಅದೇ ಪ್ರಕಾಶಯುಕ್ತನಾದ ಶರೀರದಿಂದ ಪೃಥ್ವಿಮೇಲೆ ಪ್ರತ್ಯಕ್ಷನಾದರೆ, ನಮ್ಮ ಚರ್ಮದೃಷ್ಟಿಯು ಅವನನ್ನು ನೋಡಲಾರವು. ಹೇಗೆ ಗೂಬೆಯು ಬೆಳಗಿನ ಸಮಯದಲ್ಲಿ ಸೂರ್ಯನ ಪ್ರಕಾಶದಿಂದಾಗಿ ಏನನ್ನೂ ನೋಡಲಾಗದೋ, ಅದೇ ಸ್ಥಿತಿ ಮನುಷ್ಯನದ್ದಾಗಿದೆ. ಅದಕ್ಕೇ ಆ ಪರಮಾತ್ಮನು ತನ್ನ ರೂಪ ಅರ್ಥಾತ್ ಶರೀರದ ಪ್ರಕಾಶವನ್ನು ಸರಳಗೊಳಿಸುತ್ತಾ, ಎಲ್ಲಿ ಪರಮಾತ್ಮನು ಮೇಲೆ ವಾಸಿಸುತ್ತಾನೋ, ಅಲ್ಲಿಂದ ಮಿಂಚಿನಂತೆ ಲೀಲೆ ಮಾಡುತ್ತಾ ನಡೆದು ಬರುತ್ತಾನೆ, ಶ್ರೇಷ್ಠ ಪುರುಷರಿಗೆ ಭೇಟಿಯಾಗುತ್ತಾನೆ. ಅವರು ಕವಿಃ ಅಂದರೆ ಕವಿರ್ದೇವ ಎಂದು ಸ್ಪಷ್ಟವಾಗಿದೆ. ನಾವು ಅವರನ್ನೇ ಕಬೀರ ಸಾಹೇಬರೆಂದು ಕರೆಯುತ್ತೇವೆ.

**असश्चतः शतधारा अभिश्रियो हरिं नवन्तेऽव ता उदन्युवः ।**
**क्षिपो मृजन्ति परि गोभिरावृतं तृतीये पृष्ठे अधि रोचने दिवः ॥२७॥**

**पदार्थः**—(**उदन्युवः**) प्रेम की (**ताः**) वे (**शतधाराः**) सैकड़ों धारायें (**असश्चतः**) जो नानारूपों में (**अभिश्रियः**) स्थिति को लाभ कर रही हैं। वे (**हरिं**) परमात्मा को (**अवनवन्ते**) प्राप्त होती हैं। (**गोभिरावृतं**) प्रकाशपुञ्ज परमात्मा को (**क्षिपः**) बुद्धिवृत्तियाँ (**मृजन्ति**) विषय करती हैं। जो परमात्मा (**दिवस्तृतीये पृष्ठे**) द्युलोक के तीसरे पृष्ठ पर विराजमान है और (**रोचने**) प्रकाशस्वरूप है, उसको बुद्धिवृत्तियाँ प्रकाशित करती हैं ॥२७॥

ವಿವೇಚನೆ: – ಈ ಫೋಟೋಕಾಪಿಯು ಋಗ್ವೇದದ 9ನೇ ಮಂಡಲದ 86ನೇ ಸೂಕ್ತಿಯ 27ನೇ ಮಂತ್ರದ್ದಾಗಿದೆ. ಪರಮಾತ್ಮನು ಧ್ಯೂಲೋಕ ಅರ್ಥಾತ್ ಅಮರ ಲೋಕದ 3ನೇ ಭಾಗದಲ್ಲಿ ವಿರಾಜಮಾನನಾಗಿದ್ದಾನೆಂದು ಸ್ಪಷ್ಟವಾಗಿದೆ. ಸತ್ಯಲೋಕ ಅರ್ಥಾತ್ ಶಾಶ್ವತ ಸ್ಥಾನದ ಮೂರು ಭಾಗಗಳಿವೆ. ಒಂದು ಭಾಗದಲ್ಲಿ ವನ–ಪರ್ವತ–ಝರಿ, ಹೂದೋಟ ಇತ್ಯಾದಿಗಳಿವೆ. ಇದು ಹೊರಗಿನ ಭಾಗವಾಗಿದೆ. (ಭಾರತದ ರಾಜಧಾನಿ ದೆಹಲಿಯೂ ಕೂಡ ಮೂರು ಭಾಗಗಳಲ್ಲಿ ಹಂಚಿಕೆಯಾಗಿರುವಂತೆ, ಹೊರ ದೆಹಲಿಯಲ್ಲಿ ಹಳ್ಳಿ, ಗದ್ದೆ–ಬಯಲು ಮತ್ತು ಕಾಲುವೆಗಳಿವೆ. ಮತ್ತೊಂದು ಭಾಗ ಮಾರುಕಟ್ಟೆಯಾಗಿದೆ. ಮೂರನೆಯದು ಸಂಸತ್ ಭವನ ಹಾಗೂ ಕಾರ್ಯಾಲಯಗಳು.)

ಇದರ ನಂತರ ಧ್ಯೂಲೋಕದಲ್ಲಿ ಮನೆಗಳಿವೆ. ಮೋಕ್ಷ ಪ್ರಾಪ್ತಿಯಾದ ಹಂಸಾತ್ಮಗಳು ಪರಿವಾರ ಸಮೇತ ಇಲ್ಲಿ ವಾಸಿಸುತ್ತವೆ. (ಭೂಮಿ ಮೇಲೆ ಹೇಗೆ ಭಕ್ತನನ್ನು ಭಕ್ತಾತ್ಮ ಎನ್ನುವರೋ, ಹಾಗೆಯೇ ಸತ್ಯಲೋಕದಲ್ಲಿ ಅವರನ್ನು ಹಂಸಾತ್ಮ ಎನ್ನುತ್ತಾರೆ.) (3) ಮೂರನೇ ಭಾಗದಲ್ಲಿ ಸರ್ವೋಪರಿಯಾದ ಪರಮಾತ್ಮನ ಸಿಂಹಾಸನವಿದೆ. ಅದರ ಸುತ್ತ–ಮುತ್ತ ಕೇವಲ ನರ ಆತ್ಮಗಳೇ ಇರುತ್ತವೆ, ಅಲ್ಲಿ ಸ್ತ್ರೀ–ಪುರುಷರ ಜೋಡಿಗಳಿರುವುದಿಲ್ಲ. ಅವರೇನಾದರೂ ತಮ್ಮ ಪರಿವಾರವನ್ನು ಬಯಸಿದರೆ ಕೇವಲ ಶಬ್ದ (ವಚನ)ದಿಂದ ಪುತ್ರನನ್ನು ಸೃಷ್ಟಿಸಬಹುದು. ಈ ಪ್ರಕಾರವಾಗಿ ಶಾಶ್ವತ ಸ್ಥಾನ ಅರ್ಥಾತ್ ಸತ್ಯಲೋಕವನ್ನು ಮೂರು ಭಾಗಗಳಾಗಿ ಆ ಭಗವಂತನು ವಿಭಾಗಿಸಿದ್ದಾನೆ. ಅಲ್ಲಿ ಅಂದರೆ ಸತ್ಯಲೋಕದಲ್ಲಿ ಪ್ರತಿಯೊಂದು ಸ್ಥಳದಲ್ಲಿಯೂ ಇರುವವರಿಗೆ ವೃದ್ಧಾಪ್ಯವೇ ಇರುವುದಿಲ್ಲ, ಅಲ್ಲಿ ಮರಣವೂ ಇಲ್ಲ. ಅದಕ್ಕಾಗಿಯೇ ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಏನು ಹೇಳಿದ್ದಾರೆಂದರೆ, ಯಾರು ವೃದ್ಧಾಪ್ಯ ಹಾಗೂ ಮರಣದಿಂದ ಮುಕ್ತಿ ಹೊಂದುವ ಪ್ರಯತ್ನದಲ್ಲಿರುತ್ತಾರೋ, ಅವರು ತತ್ ಬ್ರಹ್ಮ ಅರ್ಥಾತ ಪರಮ ಅಕ್ಷರ ಬ್ರಹ್ಮನನ್ನು ಅರಿತಿದ್ದಾರೆ. ಸತ್ಯಲೋಕದಲ್ಲಿ ಸತ್ಯಪುರುಷ ಇರುತ್ತಾನೆ, ಅಲ್ಲಿ ಯಾವ ವೃದ್ಧಾಪ್ಯ– ಮೃತ್ಯು ಇಲ್ಲ, ಮಕ್ಕಳು ಯುವಕರಾಗಿ ಸದಾ ಯುವಕರಾಗಿಯೇ ಇರುತ್ತಾರೆ.

(ಪ್ರಮಾಣ ಋಗ್ವೇದ ಮಂಡಲ ಸಂ.9ರ ಸೂಕ್ತಿ 82ರ ಮಂತ್ರ 1–2)

**असावि सोमो अरुषो वृषा हरी राजेव दस्मो अभि गा अचिक्रदत् ।**
**पुनानो वारं पर्येत्यव्ययं श्येनो न योनिं घृतवन्तमासदम् ॥१॥**

पदार्थः—(**सोमः**) जो सर्वोत्पादक प्रभु(**अरुषः**) प्रकाशस्वरूप (**वृषा**) सद्गुणों की वृष्टि करने वाला (**हरिः**) पापों के हरण करने वाला है, वह (**राजेव**) राजा के समान (**दस्मः**) दर्शनीय है। और वह (**गाः**) पृथिव्यादि लोक-लोकान्तरों के चारों ओर (**अभि अचिक्रदत्**) शब्दायमान हो रहा है। वह (**वारं**) वरणीय पुरुष को जो (**अव्ययं**) दृढ़भक्त है उसको (**पुनानः**) पवित्र करता हुआ (**पर्य्येति**) प्राप्त होता है। (**न**) जिस प्रकार (**श्येनः**) विद्युत् (**घृतवन्तं**) स्नेहवाले (**आसदं**) स्थानों को (**योनिं**) आधार बनाकर प्राप्त होता है। इसी प्रकार उक्त गुण वाले परमात्मा ने (**असावि**) इस ब्रह्माण्ड को उत्पन्न किया ॥१॥

कविर्वेधस्या पर्येषि माहिनमत्यो न मृष्टो अभि वाजमर्षसि ।
अपसेधन्दुरिता सोम मृळय घृतं वसानः परि यासि निर्णिजम् ॥२॥

**पदार्थः**—हे परमात्मन् ! (**वेधस्या**) उपदेश करने की इच्छा से आप (**माहिनं**) महापुरुषों को (**पर्येषि**) प्राप्त होते हो । और आप (**अत्यः**) अत्यन्त गतिशील पदार्थ के (**न**) समान (**अभिवाजं**) हमारे आध्यात्मिक यज्ञ को (**अभ्यर्षसि**) प्राप्त होते हैं । आप (**कविः**) सर्वज्ञ हैं (**मृष्टः**) शुद्ध स्वरूप हैं (**दुरिता**) हमारे पापों को (**अपसेधन्**) दूर करके (**सोम**) हे सोम ! (**मृळय**) आप हमको सुख दें । और (**घृतं वसानः**) प्रेम-भाव को उत्पन्न करते हुए (**निर्निजं**) पवित्रता को (**परियासि**) उत्पन्न करें ॥२॥

ವಿವೇಚನೆ :– ಮೇಲೆ ಋಗ್ವೇದದ 9ನೇ ಮಂಡಲದ, 82ನೇ ಸೂಕ್ತಿಯ 1 ಮತ್ತು 2ನೇ ಮಂತ್ರದ ಫೋಟೋಕಾಪಿಯಾಗಿದೆ. ಮಹರ್ಷಿ ದಯಾನಂದರ ಮಾರ್ಗದರ್ಶನದಲ್ಲಿ ಅವರ ಶಿಷ್ಯರೇ ಈ ಅನುವಾದವನ್ನು ಮಾಡಿದ್ದಾರೆ ಮತ್ತು ಸಾರ್ವದೇಶಿಕ ಆರ್ಯ ಪ್ರತಿನಿಧಿ ಸಭೆ, ದೆಹಲಿಯಿಂದ ಇದು ಪ್ರಕಾಶಿತಗೊಂಡಿದೆ.

ಇದರಲ್ಲಿ ಸ್ಪಷ್ಟಪಡಿಸಲಾಗಿರುವುದೇನೆಂದರೆ, ಒಂದನೇ ಮಂತ್ರದಲ್ಲಿ ಹೀಗೆ ಹೇಳಲಾಗಿದೆ,"ಎಲ್ಲರ ಸೃಷ್ಟಿಯನ್ನು ಮಾಡುವ ಪರಮಾತ್ಮನು ತೇಜೋಮಯವಾದ ಶರೀರವನ್ನೊಳಗೊಂಡಿದ್ದಾನೆ, ಪಾಪಗಳನ್ನು ನಾಶಮಾಡುವ ಮತ್ತು ಸುಖದ ಮಳೆಯನ್ನು ಸುರಿಸುವ ಅಂದರೆ ಸುಖದ ಸುರಿಮಳೆಯನ್ನೇ ಸುರಿಸುವ ಅವನು, ಮೇಲೆ ಸತ್ಯಲೋಕದಲ್ಲಿ ಸಿಂಹಾಸನದಲ್ಲಿ ವಿರಾಜಮಾನನಾಗಿದ್ದಾನೆ ಹಾಗೂ ನೋಡಲು ರಾಜನಂತೆಯೇ ಇದ್ದಾನೆ".

ಇದೇ ಪ್ರಮಾಣವು ಸೂಕ್ಷ್ಮವೇದದಲ್ಲಿ ಹೀಗಿದೆ:–

ಅರ್ಶ್ ಕುರ್ಶ್ ಪರ್ ಸಫೇದ್ ಗುಮಟ್ ಹೈ, ಜಹಾಂ ಪರಮೇಶ್ವರ್ ಕಾ ಡೇರಾ।
ಶ್ವೇತ್ ಛತ್ರ್ ಸಿರ್ ಮುಕುಟ್ ವಿರಾಜೇ, ದೇಖತ್ ನ ಉಸ್ ಚೆಹರೆ ನೂಂ॥

ಪರಮಾತ್ಮನು ಆರೇ ದಿನಗಳಲ್ಲಿ ಸೃಷ್ಟಿಯನ್ನು ಸೃಷ್ಟಿಸಿ ಏಳನೇ ದಿನ ಮೇಲೆ ಆಕಾಶದಲ್ಲಿ ಸಿಂಹಾಸನದ ಮೇಲೆ ವಿರಾಜಮಾನನಾದನು ಎನ್ನುವ ಪ್ರಮಾಣವು ಬೈಬಲ್ ಗ್ರಂಥ ಹಾಗೂ ಕುರಾನ್ ಶರೀಫ್ ನಲ್ಲಿಯೂ ನೀಡಲ್ಪಟ್ಟಿದೆ. (ಬೈಬಲ್‌ನ ಉತ್ಪತ್ತಿ ಗ್ರಂಥದ 2/26–30 ರ ಹಾಗೂ ಕುರಾನ್ ಶರೀಫ್‌ನ ಸುರತ್ ಫುರ್ಕಾನಿ 25ನೇ ಆಯತ 52ರಿಂದ 59ರಲ್ಲಿ ಇದೆ.)

ಆ ಪರಮಾತ್ಮನು ತನ್ನ ಅಮರ ಧಾಮದಿಂದ ನಡೆದು ಭೂಮಿಯ ಮೇಲೆ ಶಬ್ದವಾಣಿಯ ಮೂಲಕ ಜ್ಞಾನವನ್ನು ಹೇಳುತ್ತಾನೆ. ಅವನು ವರ್ಣೀಯ ಅಂದರೆ ಆದರಣೀಯ ಶ್ರೇಷ್ಠ ವ್ಯಕ್ತಿಗಳಿಗೆ ಪ್ರಾಪ್ತನಾಗುತ್ತಾನೆ, ಅವರಿಗೆ ಭೇಟಿಯಾಗುತ್ತಾನೆ.

1. ಸಂತ ಧರ್ಮದಾಸರು, ಬಾಂಧವ್‌ಗಢ (ಮಧ್ಯಪ್ರದೇಶ)ದವರಿಗೆ ಸಿಕ್ಕಿದರು. 2. ಸಂತ ಮಲೂಕ್ ದಾಸರಿಗೆ ಸಿಕ್ಕಿದರು 3. ಸಂತ ದಾದೂದಾಸರಿಗೆ ಆಮೆರ್ (ರಾಜಸ್ಥಾನ)ದವರಿಗೆ ಸಿಕ್ಕಿದರು 4. ಶ್ರೀ ಗುರು ನಾನಕ್ ಸಾಹೇಬರಿಗೆ ಸಿಕ್ಕಿದರು. 5. ಹರಿಯಾಣದ ಝಜ್ಜರ್ ಜಿಲ್ಲೆಯ ಛುಡಾನೀ ಗ್ರಾಮದ ಸಂತ ಗರೀಬ್ ದಾಸರಿಗೆ ಸಿಕ್ಕಿದರು. 6. ಉತ್ತರ ಪ್ರದೇಶದ ಬಾಗ್‌ಪತ್ ಜಿಲ್ಲೆಯ ಖೇಖಡಾ ಗ್ರಾಮದ ಸಂತ ಘೀಸಾದಾಸರಿಗೆ ಸಿಕ್ಕಿದರು. 7. ರಾಜಸ್ಥಾನದ ಸಮರಾಥಲ್ ಗ್ರಾಮದ ಬಿಶ್‌ನೋಈ ಧರ್ಮ ಪ್ರವರ್ತಕರಾದ ಸಂತ ಜಂಭೇಶ್ವರರಿಗೆ ಸಿಕ್ಕಿದರು.

ಆ ಪರಮಾತ್ಮ ಒಳ್ಳೆಯ ಆತ್ಮಗಳಿಗೆ ಭೇಟಿಯಾಗುತ್ತಾನೆ. ಯಾರು ಪರಮಾತ್ಮನ ದೃಢ ಭಕ್ತರಾಗಿರುತ್ತಾರೋ ಅವರ ಮೇಲೆ ಪರಮಾತ್ಮನ ವಿಶೇಷ ಆಕರ್ಷಣೆ ಇರುತ್ತದೆ. ಹೇಗೆ ವಿದ್ಯುತ್

ಅರ್ಥಾತ್ ಆಕಾಶದ ಮಿಂಚು ತನ್ನ ಸ್ನೇಹಯುಕ್ತ ಸ್ಥಾನಗಳಿಗೆ ಆಧಾರವಾಗಿ ಬೀಳುತ್ತದೋ ಹಾಗೇ ಎಂದು ಉದಾಹರಣೆಯ ಮೂಲಕ ಹೇಳಲಾಗಿದೆ. ಹೇಗೆ ಕಂಚಿನ ಮೇಲೆ ಮಿಂಚು ಬೀಳುತ್ತದೋ ಹಾಗೆ. ಮೊದಲೆಲ್ಲಾ ಕಂಚಿನ ಬಟ್ಟಲುಗಳು, ಲೋಟ-ತಟ್ಟೆ ಇತ್ಯಾದಿಗಳಿರುತ್ತಿದ್ದವು. ಮಳೆಗಾಲದಲ್ಲಿ ಅದನ್ನು ಎತ್ತಿ ಮನೆಯ ಒಳಗೆ ಇಡಲಾಗುತ್ತಿತ್ತು. ಕಂಚಿನ ಪಾತ್ರೆಯ ಮೇಲೆ ಮಿಂಚು ಸರಾಗವಾಗಿ ಬೀಳುತ್ತದೆಂದು ಹಿರಿಯರು ಹೇಳುತ್ತಿದ್ದರು, ಹಾಗೆಯೇ ಪರಮಾತ್ಮನು ತನ್ನ ಪ್ರಿಯ ಭಕ್ತರ ಮೇಲೆ ಆಕರ್ಷಿತನಾಗಿ ಅವರನ್ನು ಭೇಟಿಯಾಗುತ್ತಾನೆ..

ಮಂತ್ರ ಸಂ. 2 ರಲ್ಲಿ ಸ್ಪಷ್ಟಪಡಿಸಲಾಗಿರುವುದೇನೆಂದರೆ, ಪರಮಾತ್ಮನು ಆ ಒಳ್ಳೆಯ ಆತ್ಮಗಳಿಗೆ ಉಪದೇಶಿಸುವ ಇಚ್ಛೆಯಿಂದ ಸ್ವತಃ ಮಹಾಪುರುಷರಿಗೆ ಭೇಟಿಯಾಗುತ್ತಾರೆ. ಉಪದೇಶಿಸುವುದೆಂದರೆ ಪರಮಾತ್ಮನು ತತ್ವಜ್ಞಾನವನ್ನು ಉಪದೇಶಿಸಿ ಅವರಿಗೆ ದೀಕ್ಷೆಯನ್ನು ನೀಡುತ್ತಾನೆ. ಅವರ ಸದ್ಗುರು ಸ್ವಯಂ ಪರಮಾತ್ಮ ಆಗಿರುತ್ತಾರೆ. ಇದು ಕೂಡಾ ಸ್ಪಷ್ಟಪಡಿಸಿದೆ ಏನೆಂದರೆ ಪರಮಾತ್ಮನು ಅತ್ಯಂತ ಗತಿಶೀಲ ಪದಾರ್ಥ ಅರ್ಥಾತ್ ಮಿಂಚಿನಂತೆ ತೀವ್ರಗತಿಯಿಂದ, ನಮ್ಮ ಧಾರ್ಮಿಕ ಅನುಷ್ಠಾನಗಳಲ್ಲಿ ತಾವು ತಲುಪುತ್ತಿರಿ. ನೀವು ಹಿಂದೆಯೇ ಓದಿರುವಂತೆ, ಸಂತ ಧರ್ಮದಾಸರಿಗೆ ಭಗವಂತನು ಇದನ್ನೇ ಹೇಳಿದ್ದರು. ಏನೆಂದರೆ, ಎಲ್ಲೆಲ್ಲಿ ಧಾರ್ಮಿಕ ಅನುಷ್ಠಾನಗಳು ನಡೆಯುತ್ತವೋ ಅಲ್ಲಿಗೆ ನಾನು ಅವಶ್ಯ ಭೇಟಿ ನೀಡುತ್ತೇನೆ, ಏಕೆಂದರೆ, ನನ್ನ ಅನುಪಸ್ಥಿತಿಯಲ್ಲಿ ಕಾಲನು ಏನಾದರೂ ಉಪದ್ರವ ಮಾಡಿಬಿಡುತ್ತಾನೆ. ಆದ್ದರಿಂದ ಸಾಧಕರಿಗೆ ಭಗವಂತನ ಮೇಲಿನ ಶ್ರದ್ಧೆ ಸಮಾಪ್ತವಾಗುತ್ತದೆ. ನಾನಿರುವಾಗ ಅವನು ಆ ರೀತಿಯ ಗೊಂದಲ ಮಾಡಲಾರ. ಆದ್ದರಿಂದ ಗೀತೆಯ 3ನೇ ಅಧ್ಯಾಯದ 15ನೇ ಶ್ಲೋಕದಲ್ಲಿ ಹೇಳಿರುವಂತೆ, ಆ ಅವಿನಾಶಿ ಭಗವಂತನು, ಬ್ರಹ್ಮನ ಉತ್ಪತ್ತಿಗೂ ಕಾರಣೀಭೂತನೂ, ಸದಾ ಯಜ್ಞಗಳಲ್ಲಿ ಪ್ರತಿಷ್ಠಿತನು, ಅಂದರೆ ಧಾರ್ಮಿಕ ಅನುಷ್ಠಾನಗಳಲ್ಲಿ. ಅವನನ್ನೇ ಇಷ್ಟರೂಪದಲ್ಲಿ ಆರತಿ, ಸ್ತುತಿ ಮಾಡಬೇಕು.

ಈ ಋಗ್ವೇದದ, 9ನೇ ಮಂಡಲದ 82ನೇ ಸೂಕ್ತಿಯ 2ನೇ ಮಂತ್ರದಲ್ಲಿ ಸ್ಪಷ್ಟಪಡಿಸಲಾಗಿದೆ. ಏನಂದರೆ ನೀವು (ಕವಿರ್ವೇಧಸ್ಯ) ಕವಿರ್ದೇವರು ನೀವು ಸರ್ವರಿಗೂ ಉಪದೇಶಿಸುವ ಇಚ್ಛೆಯಿಂದ ಬರುತ್ತಿರಿ, ನೀವು ಪವಿತ್ರ ಪರಮಾತ್ಮ. ನಮ್ಮ ಪಾಪಗಳನ್ನು ನಾಶ ಮಾಡಿ. ಹೇ ಅಮರ ಪರಮಾತ್ಮ! ನೀವು ನಮಗೆ ಸುಖವನ್ನು ನೀಡಿ ಮತ್ತು (ದ್ಯುತಮ್ ವಸಾನಃ ನಿರ್ನಿಜಮ್ ಪರಿಯಸಿ) ನಾವು ನಿಮ್ಮ ಮಕ್ಕಳು. ನಮ್ಮ ಬಗ್ಗೆ ಅದೇ ವಾತ್ಸಲ್ಯಭರಿತ ಪ್ರೇಮದ ಭಾವನೆಯನ್ನು ಹೊಂದುತ್ತಾ ಅದೇ (ನಿರ್ನಿಜಮ್) ಸುಂದರ ರೂಪವನ್ನು (ಪರಿಯಾಸಿ) ಉತ್ಪನ್ನಿಸಿ ಅರ್ಥಾತ್ ನಮ್ಮನ್ನು ನಿಮ್ಮ ಮಕ್ಕಳೆಂದು ತಿಳಿದು. ಹೇಗೆ ನೀವು ಈ ಮೊದಲು ಹಾಗೂ ನಿಮಗೆ ಬೇಕೆಂದಾಗ ನಿಮ್ಮ ಪ್ರೀತಿಯ ಆತ್ಮಗಳನ್ನು ಭೇಟಿಯಾಗುತ್ತಿರೋ, ಹಾಗೆಯೇ ನಮಗೂ ದರ್ಶನ ನೀಡಿ.

(ಪ್ರಮಾಣ :– ಋಗ್ವೇದ ಮಂಡಲ 9 ಸೂಕ್ತಿ 96ರ ಮಂತ್ರ 16 – 20)

स्वायुधः सोतृभिः पूयमानोऽभ्यर्ष गुह्यं चारु नाम ।

अभि वाजं सप्तिरिव श्रवस्याभि वायुमभि गा देव सोम ॥१६॥

**पदार्थः**—हे परमात्मन् ! ( **गुह्यम्** ) सर्वोपरि रहस्य ( **चारु** ) श्रेष्ठ ( **नाम** ) जो तुम्हारी संज्ञा है । ( **अभ्यर्ष** ) उसका ज्ञान करायें । आप ( **सोतृभिः, पूयमानः** ) उपासक लोगों से स्तूयमान हैं । ( **स्वायुधः** ) स्वाभाविक शक्ति से युक्त हैं और ( **सप्तिरिव** ) विद्युत् के समान ( **श्रवस्याभि** ) ऐश्वर्य के सम्मुख प्राप्त कराइये और ( **वायुमभि** ) हमको प्राणों की विद्या का वेत्ता बनाइये । ( **देव** ) हे सर्वशक्ति-सम्पन्न परमेश्वर ! हमको ( **गाः** ) इन्द्रियों के ( **अभिगमय** ) नियमन का ज्ञाता बनाइये ॥१६॥

शिशुं जज्ञानं हर्यतं मृजन्ति शुम्भन्ति वह्निं मरुतो गणेन ।
कविर्गीर्भिः काव्येना कविः सन्त्सोमः पवित्रमत्येति रेभन् ।१७॥

**पदार्थ:**—( **शिशुम्** ) "श्यति सूक्ष्मं करोति प्रलयकाले जगदिति शिशुः परमात्मा" उस परमात्मा को ( **जज्ञानम्** ) जो सदा प्रकट है, ( **हर्यतः** ) जो अत्यन्त कमनीय है, उसको उपासक लोग ( **मृजन्ति** ) बुद्धिविषय करते हैं और ( **शुंभन्ति** ) उसकी स्तुति द्वारा उसके गुणों का वर्णन करते हैं और ( **मरुतः** ) विद्वान् लोग ( **वह्निम्** ) उस गतिशील परमात्मा का ( **गणेन** ) गुणों के गणों द्वारा वर्णन करते हैं और ( **कविः** ) कवि लोग ( **गीर्भिः** ) वाणी द्वारा और ( **काव्येन** ) कवित्व से उसकी स्तुति करते हैं । ( **सोमः** ) सोमस्वरूप ( **पवित्रम्** ) पवित्र वह परमात्मा कारणावस्था में अतिसूक्ष्म प्रकृति को ( **रेभन्, सन्** ) गर्जता हुआ ( **अत्येति**) अतिक्रमण करता है ॥१७॥

ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 16ನೇ ಮಂತ್ರದಲ್ಲಿ ಹೇಳಲಾಗಿದೇನೆಂದರೆ, 'ಹೇ ಪರಮಾತ್ಮ, ನೀವು ನಿಮ್ಮ ಶ್ರೇಷ್ಠ ಗುಪ್ತನಾಮದ ಜ್ಞಾನವನ್ನು ನೀಡಿ'. 17ನೇ ಮಂತ್ರದಲ್ಲಿ ಆ ನಾಮವನ್ನು ಕವಿ ಅರ್ಥಾತ್ ಕವಿರ್ದೇವರೆಂದು ಹೇಳಲಾಗಿದೆ.

17ನೇ ಮಂತ್ರ: (ಶಿಶುಮ್ ಜಜ್ಞಾನಮ್ ಹರ್ಯಂತಮ್) ಪರಮೇಶ್ವರನು ಬೇಕಂತಲೇ ತತ್ವಜ್ಞಾನ ಬೋಧಿಸುವ ಉದ್ದೇಶದಿಂದ ಶಿಶುವಿನ ರೂಪದಲ್ಲಿ ಪ್ರಕಟನಾಗುತ್ತಾನೆ. ಪರಮಾತ್ಮನ ಜ್ಞಾನೋಪದೇಶ ಕೇಳಿ (ಮಾರುತೋ ಗಣೇನ) ಭಕ್ತರ ಬಹು ದೊಡ್ಡ ಸಮೂಹವೇ ಆ ಪರಮಾತ್ಮನ ಅನುಯಾಯಿಗಳಾಗುತ್ತಾರೆ. (ಮೃಜಂತಿ ಶುಮ್ಯಂತಿ ವಹಿನ್) ಆ ಜ್ಞಾನವು ಬುದ್ಧಿಜೀವಿಗಳ ಅರಿವಿಗೆ ಮಾತ್ರ ಬರುವಂಥದ್ದು. ಅವರು ಭಕ್ತಿ, ತತ್ವಜ್ಞಾನದ ಆಧಾರದಿಂದ ಆ ಪರಮೇಶ್ವರನ ಸ್ತುತಿ ಮಾಡುತ್ತಾರೆ. ಆ ಭಕ್ತಿಯು (ವಹಿನ್) ಶೀಘ್ರ ಲಾಭ ನೀಡುವಂಥದ್ದಾಗಿದೆ. ಆ ಭಗವಂತನು ತನ್ನ ತತ್ವಜ್ಞಾನವನ್ನು (ಕಾವ್ಯೇನಾ) ಕವಿತ್ವದಿಂದ ಅಂದರೆ ಕವಿಗಳ ರೀತಿಯಲ್ಲಿ ದೋಹೆ, ಶಬ್ದ, ಲೋಕೊಕ್ತಿಗಳ ಮೂಲಕ (ಕವಿರ್ ಗೀರ್ಭಿಃ), ಕವಿರ್ ವಾಣಿಯ ಮೂಲಕ ಅರ್ಥಾತ್ ಕಬೀರರ ವಾಣಿಯ ಮೂಲಕ (ಪವಿತ್ರಮ್ ಅತಿರೇಭನ್) ಶುದ್ಧ ಜ್ಞಾನವನ್ನು ಉಚ್ಚ ಸ್ವರದಲ್ಲಿ ಜೋರಾಗಿ ಕೂಗಿ ಹೇಳುತ್ತಾನೆ. ಅವನು (ಕವಿಃ) ಕವಿಯಂತೆ ಆಚರಣೆಯುಳ್ಳ ಕವಿರ್ದೇವ. (ಸಂತ್) ಅವನು ಸಂತನ ರೂಪದಲ್ಲಿ ಪ್ರಕಟ (ಸೋಮ) ಅಮರ ಪರಮತ್ಮನಾಗಿರುತ್ತಾನೆ. (ಋಗ್ವೇದ ಮಂಡಲ 9 ಸೂಕ್ತಿ 96ರ ಮಂತ್ರ 17) ವಿಶೇಷ :– ಈ ಮಂತ್ರದ ಮೂಲ ಪಾಠದಲ್ಲಿ ಎರಡು ಬಾರಿ "ಕವಿಃ" ಶಬ್ದದ ಪ್ರಯೋಗವಿದೆ. ಆರ್ಯಸಮಾಜದ ಅನುವಾದಕರು ಒಂದರ (ಕವಿಃ) ಅರ್ಥವನ್ನೇ ಮಾಡಿಲ್ಲ.

ऋषिमना य ऋषिकृत्स्वर्षाः सहस्रणीथः पदवीः कवीनाम् ।
तृतीयं धाम महिषः सिषासन्त्सोमो विराजमनु राजति ष्टुप् ॥१८॥

**पदार्थ:**—( **सोमः** ) सोमस्वरूप परमात्मा ( **सिसासन्** ) पालन की इच्छा करता हुआ ( **महिषः** ) जो महान् है वह परमात्मा ( **तृतीयं, धाम** ) देवयान और पितृयान इन दोनों से पृथक तीसरा जो मुक्तिधाम है । उसमें ( **विराजम्** ) विराजमान जो ज्ञानयोगी है उसको ( **अनुराजति** ) प्रकाश करने वाला है और ( **स्तुप** ) स्तूयमान है । ( **कवीनाम्, पदवीः** ) जो क्रान्तदर्शियों की पदवी अर्थात् मुख्य स्थान है और ( **सहस्रनीथः** ) अनन्त प्रकार से स्तवनीय है, ( **ऋषिमनाः** ) सर्वज्ञान के साधनरूप मनवाला वह परमात्मा ( **यः** ) जो ( **ऋषिकृत** ) सब ज्ञानों का प्रदाता ( **स्वर्षाः** ) सूर्यादिकों को प्रकाशक है । वह जिज्ञासु के लिए उपासनीय है ॥१८॥

ವಿವೇಚನೆ :– ಇದು ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 18ನೇಮಂತ್ರದ ಫೋಟೋಕಾಪಿಯಾಗಿದ್ದು, ಇದರ ಅನುವಾದವನ್ನು ಮಹರ್ಷಿ ದಯಾನಂದರ ಅನುಯಾಯಿಗಳು ಮಾಡಿದ್ದಾರೆ. ಇದನ್ನು ಸಾರ್ವದೇಶಿಕ ಆರ್ಯ ಪ್ರತಿನಿಧಿ ಸಭೆ, ದೆಹಲಿ – ಇವರ ಮೂಲಕ ಅನುವಾದಿಸಲಾಗಿದೆ. ಇದರ ಬಗ್ಗೆ ವಿವೇಚಿಸೋಣ. ಆರ್ಯ ಸಮಾಜದ ಆಚಾರ್ಯರಿಂದ ಇದರ ಅನುವಾದಕಾರ್ಯದಲ್ಲಿಯೂ ಸಹ ಹಲವಾರು ತಪ್ಪುಗಳಾಗಿವೆ. ನಾವು ಸಂಸ್ಕೃತವನ್ನೂ ತಿಳಿಯ ಬಲ್ಲೆವು, ವಿವೇಚನೆಯನ್ನು ಮಾಡುತ್ತೇನೆ ಹಾಗೂ ಯಥಾರ್ಥ ಅನುವಾದ ಹಾಗೂ ಭಾವಾರ್ಥವನ್ನು ಸ್ಪಷ್ಟಪಡಿಸುತ್ತೇನೆ. 17ನೇ ಮಂತ್ರದಲ್ಲಿ ಹೇಳಿರುವುದೇನೆಂದರೆ, ಪರಮಾತ್ಮನು ಋಷಿ ಅಥವಾ ಸಂತರ ರೂಪದಲ್ಲಿ ಪ್ರಕಟವಾಗಿ ತನ್ನ ಮುಖಕಮಲದಿಂದ ಅಮೃತವಾಣಿಯನ್ನು ಹೇಳುತ್ತಾನೆ ಮತ್ತು ಆ ಜ್ಞಾನವನ್ನು ಅರಿತು ಅನೇಕ ಅನುಯಾಯಿಗಳ ಸಮೂಹವಾಗುತ್ತದೆ. (ಯ) ಪರಮಾತ್ಮನು ತತ್ವಜ್ಞಾನದ ಯಾವ ವಾಣಿಯನ್ನು ಬೋಧಿಸುತ್ತಾನೋ, ಅವು (ಋಷಿಕೃತ್) ಋಷಿಯ ರೂಪದಲ್ಲಿ ಪ್ರಕಟನಾದ ಪರಮಾತ್ಮನು ರಚಿಸಿದ (ಸಹಸ್ರಣೀಯಃ) ಸಾವಿರಾರು ವಾಣಿ ಅರ್ಥಾತ್ ಕಬೀರವಾಣಿ (ಋಷಿಮನಾ) ಋಷಿ/ಸಂತ ಸ್ವಭಾವದ ಭಕ್ತರಿಗೆ (ಸ್ವರ್ಷಾಃ) ಆನಂದದಾಯಕವಾಗಿರುತ್ತದೆ. (ಕವಿನಾಮ ಪದವೀಃ) ಕವಿತ್ವದಿಂದ ದೋಹೆಗಳು, ಚೌಪದಿಗಳಲ್ಲಿ ವಾಣಿಯನ್ನು ಹೇಳುವ ಕಾರಣದಿಂದ ಆ ಪರಮಾತ್ಮನು ಪ್ರಸಿದ್ಧ ಕವಿಗಳಲ್ಲಿ ಒಬ್ಬ ಕವಿಯ ಪದವಿಯನ್ನು ಪಡೆಯುತ್ತಾನೆ. ಆ (ಸೋಮ) ಅಮರ ಪರಮಾತ್ಮ, (ಪಿಪಾಸನ್) ಸರ್ವ ಪಾಲನೆಯ ಇಚ್ಛೆಯನ್ನು ಹೊಂದುತ್ತಾ ಪ್ರಥಮ ಸ್ಥಿತಿಯಲ್ಲಿ (ಮಹಿಷಃ) ಬೃಹತ್ ಪೃಥ್ವಿ ಅರ್ಥಾತ್ ಮೇಲಿನ ಲೋಕಗಳಲ್ಲಿ (ತೃತೀಯಮ್ ಧಾಮ) ತೃತೀಯ ಧಾಮ ಅರ್ಥಾತ್ ಸತ್ಯಲೋಕದ ಮೂರನೆಯ ಹಂತದಲ್ಲಿ (ಅನುರಾಜತಿ) ತೇಜೋಮಯ ಶರೀರವುಳ್ಳವನಾಗಿ (ಸ್ತುಪ) ಗುಮ್ಮಟದಲ್ಲಿ (ವಿರಾಜಮ್) ವಿರಾಜಮಾನನಾಗಿದ್ದಾನೆ. ಅಲ್ಲಿ ಕುಳಿತಿದ್ದಾನೆ. ಪರಮಾತ್ಮನು ಸರ್ವ ಲೋಕಗಳ ಮೇಲಿನ ಲೋಕದಲ್ಲಿ ವಿರಾಜಮಾನನಾಗಿದ್ದಾನೆ. (ತಿಷ್ಠಂತಿ) ಕುಳಿತಿದ್ದಾನೆ ಎಂಬ ಪ್ರಮಾಣವು ಋಗ್ವೇದ 9ನೇ ಮಂಡಲದ 54ನೇ ಸೂಕ್ತಿಯ, 3ನೇ ಮಂತ್ರದಲ್ಲಿದೆ.

चमूषच्छ्येनः शकुनो विभृत्वा गोविन्दुर्द्रप्स आयुधानि बिभ्रत् ।
अपामूर्मिं सचमानः समुद्रं तुरीयं धाम महिषो विवक्ति ।।१९।

पदार्थः—( अपामूर्मिम् ) प्रकृति की सूक्ष्म से सूक्ष्म शक्तियों के साथ ( सचमानः ) जो संगत है और ( समुद्रम् ) "सम्यक् द्रवन्ति भूतानि यस्मात् स समुद्रः" जिससे सब भूतों की उत्पत्ति, स्थिति और प्रलय होता है। वह ( तुरीयम् ) चौथा ( धाम ) परमपद परमात्मा है। उसको ( महिषः ) मह्यते इति महिषः महिष इति महन्नामसु पठितम् नि० ३—१३। महापुरुष उक्त तुरीय परमात्मा का ( विवक्ति ) वर्णन करता है। वह परमात्मा ( चमूसत् ) जो प्रत्येक बल में स्थित है ( श्येनः ) सर्वोपरि प्रशंसनीय है और ( शकुनः ) सर्वशक्तिमान् है। ( गोविन्दुः ) यजमानों को लुप्त करके जो ( द्रप्सः ) शीघ्रगति वाला है ( आयुधानि, बिभ्रत् ) अनन्त शक्तियों को धारण करता हुआ इस सम्पूर्ण संसार का उत्पादक है ।।१९।।

ವಿವೇಚನೆ :– ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 19ನೇ ಮಂತ್ರದ ಅನುವಾದವನ್ನೂ ಸಹ ಆರ್ಯ ಸಮಾಜದ ಪಂಡಿತರು ಮಾಡಿದ್ದಾರೆ. ಇದರಲ್ಲೂ ಬಹಳಷ್ಟು ದೋಷಗಳಿವೆ. ಹಾಗಾಗಿ ನಮಗೆ ಅವಶ್ಯವಿರುವ ಮಾಹಿತಿಯನ್ನು ಮಾತ್ರ ಪಡೆದುಕೊಳ್ಳೋಣ.

ಈ ಮಂತ್ರದಲ್ಲಿ ನಾಲ್ಕನೆಯ ಧಾಮದ ವರ್ಣನೆಯನ್ನು ತಾವುಗಳು ಸೃಷ್ಟಿಯ ರಚನೆಯಲ್ಲಿ ಓದಬಹುದಾಗಿದೆ, ಅದರಿಂದ ಸಂಪೂರ್ಣ ಮಾಹಿತಿ ಪ್ರಾಪ್ತವಾಗುವುದು. ಇದೇ ಪುಸ್ತಕದ ಸೃಷ್ಟಿಯ ರಚನೆ ಎಂಬ ಅಧ್ಯಾಯದಲ್ಲಿ ಓದಿ.

ಪರಮಾತ್ಮನು ಮೇಲಿನ ನಾಲ್ಕೂ ಲೋಕಗಳನ್ನು ಅಜರಾಮರವಾಗಿರುವಂತೆ ಸೃಷ್ಟಿಸಿದ್ದಾನೆ. 1. ಎಲ್ಲಕ್ಕಿಂತ ಮೇಲಿನದು ಅನಾಮಿಲೋಕ 2. ಅಗಮ್ ಲೋಕ 3. ಅಲಖ್ ಲೋಕ 4. ಸತ್ಯಲೋಕ

ನಾವು ಪೃಥ್ವಿಲೋಕದಲ್ಲಿದ್ದೇವೆ. ಇಲ್ಲಿಂದ ಮೇಲಿನ ಲೋಕಗಳ ಲೆಕ್ಕ ಮಾಡುವುದಾದರೆ 1. ಸತ್ಯಲೋಕ 2. ಅಲಖ್ ಲೋಕ 3. ಅಗಮ್ ಲೋಕ ಹಾಗೂ 4. ಅನಾಮಿ ಲೋಕವೆಂದು ಲೆಕ್ಕ ಮಾಡಲಾಗುತ್ತದೆ. ಆ ನಾಲ್ಕನೆಯ ಧಾಮದಲ್ಲಿ ಕುಳಿತು ಪರಮಾತ್ಮನು ಸರ್ವ ಬ್ರಹ್ಮಾಂಡಗಳನ್ನು ಹಾಗೂ ಲೋಕಗಳನ್ನು ಸೃಷ್ಟಿಸಿದ್ದಾನೆ. ಉಳಿದ ಸೃಷ್ಟಿಯನ್ನು ಸತ್ಯಲೋಕದಲ್ಲಿ ಕುಳಿತು ಮಾಡಿದ್ದಾನೆ. ಆರ್ಯ ಸಮಾಜದ ಅನುವಾದಕರು ತುರಿಯಾ ಪರಮಾತ್ಮ ಅರ್ಥಾತ್ ನಾಲ್ಕನೆಯ ಪರಮಾತ್ಮನನ್ನು ವರ್ಣಿಸಿದ್ದಾರೆ. ಇದು ನಾಲ್ಕನೆಯ ಧಾಮವಾಗಿದೆ. ಅದರಲ್ಲಿ ಮೂಲ ಪಾಠವಾದ 19ನೇ ಮಂತ್ರದ ಭಾವಾರ್ಥವೇನೆಂದರೆ ತತ್ವದರ್ಶಿಯಾದ ಸಂತನು ನಾಲ್ಕನೆಯ ಧಾಮ ಹಾಗೂ ನಾಲ್ಕನೆಯ ಪರಮಾತ್ಮನನ್ನು (ವಿವಕ್ತಿ) ಭಿನ್ನ–ಭಿನ್ನವಾಗಿ ವರ್ಣಿಸುತ್ತಾನೆ. ಓದುಗರೇ ದಯಮಾಡಿ ಈ ಇದೇ ಪುಸ್ತಕದಲ್ಲಿರುವ ಸೃಷ್ಟಿರಚನೆಯ ಅಧ್ಯಾಯವನ್ನು ಓದಿ. ಇದರಿಂದ ನಿಮಗೆ ಜ್ಞಾನವಾಗುವುದು ಸಂತ ರಾಮ್‌ಪಾಲ್ ದಾಸರೇ ಆ ತತ್ವಜ್ಞಾನವನ್ನು ತಿಳಿದ ತತ್ವದರ್ಶಿ ಸಂತನೆಂದು.

मर्यो न शुभ्रस्तन्वं मृजानोऽत्यो न सृत्वा सनये धनानाम् ।
वृषेव यूथा परि कोशमर्षन्कनिक्रदच्चम्वोरा विवेश ।।२०।।

पदार्थः—वह परमात्मा ( यूथा, वृषेव ) जिस प्रकार एक संघ को उसका सेनापति प्राप्त होता है, इसी प्रकार (कोशम् ) इस ब्रह्माण्डरूपी कोश को (अर्षन्) प्राप्त होकर ( कनिक्रदत् ) उच्च स्वर से गर्जता हुआ ( चम्वोः ) इस ब्रह्माण्ड रूपी विस्तृत प्रकृति-खण्ड में ( पर्याविवेश ) भली-भांति प्रविष्ट होता है और ( न ) जैसे कि ( मर्यः ) मनुष्य ( शुभ्रस्तन्वं, मृजानः ) शुभ्र शरीर को धारण करता हुआ ( अत्योन ) अत्यन्त गतिशील पदार्थों के समान ( सनये ) प्राप्ति के लिए ( सृत्वा) गतिशील होता हुआ (धनानाम्) धनों के लिए कटिबद्ध होता है; इसी प्रकार प्रकृति-रूपी ऐश्वर्य को धारण करने के लिए परमात्मा सदैव उद्यत है ।।२०।।

ವಿವೇಚನೆ :– ಋಗ್ವೇದ 9ನೇ ಮಂಡಲ 96ನೇ ಸೂಕ್ತಿಯ 20ನೇ ಮಂತ್ರದ ಯಥಾರ್ಥ ಜ್ಞಾನವನ್ನು ತಿಳಿಯೋಣ.

ಈ ಮಂತ್ರವೂ ಮಹರ್ಷಿ ದಯಾನಂದರ ಶಿಷ್ಯರಿಂದ ಅನುವಾದಿಸಲ್ಪಟ್ಟಿದೆ. ಇವರ ದೃಷ್ಟಿಯಲ್ಲಿ ಪರಮಾತ್ಮನು ನಿರಾಕಾರನಾಗಿದ್ದಾನೆ. ಏಕೆಂದರೆ ಮಹರ್ಷಿ ದಯಾನಂದರೂ ಪರಮಾತ್ಮನು ನಿರಾಕಾರನೆಂದು ದೃಢಪಡಿಸಿದ್ದಾರೆ. ಹಾಗಾಗಿ ಅನುವಾದಕರು ನೇರವಾದ ಮಂತ್ರವನ್ನು ತಿರುಚಿ ಮರುಚಿ ಅನುವಾದಿಸಿದ್ದಾರೆ. ಮೂಲ ಪಠ್ಯದಲ್ಲಿ ಹೇಗಿದೆಯೆಂದರೆ :–

ಮರ್ಯ ನ ಶುಭ್ರಃ ತನ್ವಾ ಮೃಜಾನಃ ಅತ್ಯಃ ನ ಸೃತ್ವಾ ಸನಯೇ ಧನಾನಾಮ್।
ವೃರ್ಷೇವ ಯೂಥಾ ಪರಿ ಕೋಶಮ್ ಅರ್ಷನ್ ಕನಿಕ್ರದತ್ ಚಮ್ವೋಃ ಆವಿವೇಶ್॥

ಅನುವಾದ :– ಹೇಗೆ (ಮರ್ಯಃ, ನ) ಮನುಷ್ಯನು ಸುಂದರ ವಸ್ತ್ರಗಳನ್ನು ಧರಿಸುತ್ತಾನೋ, ಹಾಗೇ ಪರಮಾತ್ಮನೂ ಮನುಷ್ಯನಂತೆಯೇ (ಶುಭ್ರಃ ತನ್ವ್) ಸುಂದರ ಶರೀರ (ಮುಜಾನಃ) ವನ್ನು ಧರಿಸಿ (ಅತ್ಯಃ) ಅತ್ಯಂತ ವೇಗದಿಂದ ನಡೆಯುತ್ತಾ (ಸನಯೇ ಧನಾನಾಮ್) ಭಕ್ತಿ ಎಂಬ ಧನದ ಧನಿಕರು ಅರ್ಥಾತ್ ಪುಣ್ಯಾತ್ಮರಿಗೆ (ಸನಯೇ) ಪ್ರಾಪ್ತನಾಗುತ್ತಾನೆ. (ಯೂಥಾ ವೃಷೇವ) ಹೇಗೆ ಒಂದು ಸಮುದಾಯಕ್ಕೆ ಒಬ್ಬ ಸೇನಾಪತಿ ಪ್ರಾಪ್ತನಾಗುತ್ತಾನೋ, ಹಾಗೆಯೇ ಆ ಪರಮಾತ್ಮನು

ಸಂತ ಅಥವಾ ಋಷಿಯ ರೂಪದಲ್ಲಿ ಪ್ರಕಟನಾಗುತ್ತಾನೆ, ಹಾಗಾಗಿ ಬೃಹತ್ ಸಂಖ್ಯೆಯಲ್ಲಿ ಅವನ ಅನುಯಾಯಿಗಳಾಗುತ್ತಾರೆ ಮತ್ತು ಪರಮಾತ್ಮನು ಅವರಿಗೆ ಗುರುವಿನ ರೂಪದಲ್ಲಿ ಅವರ ಮುಖಂಡನಾಗುತ್ತಾನೆ. ಆ ಪರಮಾತ್ಮನು (ಪರಿ ಕೋಶಮ್) ಪ್ರಥಮ ಬ್ರಹ್ಮಾಂಡದಲ್ಲಿ (ಅರ್ಪನ್) ಪ್ರಾಪ್ತನಾಗಿ ಅರ್ಥಾತ್ ಆಗಮಿಸಿ (ಕನಿಕ್ರದತ್) ಉಚ್ಚ ಸ್ವರದಲ್ಲಿ ಸತ್ಯಜ್ಞಾನವನ್ನು ಉಚ್ಚರಿಸುತ್ತಾ (ಚಮ್ವೋಃ) ಪೃಥ್ವಿ ಖಂಡದಲ್ಲಿ (ಅವಿವೇಶ) ಪ್ರವೇಶಿಸುತ್ತಾನೆ.

ಭಾವಾರ್ಥ :– ಈ ಮೊದಲೇ ವೇದಮಂತ್ರಗಳಲ್ಲಿ ಹೇಳಿರುವಂತೆ ಪರಮಾತ್ಮನು ಮೇಲಿನ ಲೋಕದಲ್ಲಿರುತ್ತಾನೆ. ಅಲ್ಲಿಂದ ತನ್ನ ರೂಪವನ್ನು ಅರ್ಥಾತ್ ಶರೀರದ ತೇಜಸ್ಸನ್ನು ಸರಳಗೊಳಿಸಿ ಪೃಥ್ವಿಗೆ ಆಗಮಿಸುತ್ತಾನೆ. ಈ ಋಗ್ವೇದ ಮಂಡಲ 9ರ ಸೂಕ್ತಿ 96ರ ಮಂತ್ರ 20ರಲ್ಲೂ ಇದನ್ನೇ ಪುಷ್ಟೀಕರಿಸಲಾಗಿದೆ. ಹೇಗೆ ಮನುಷ್ಯನು ವಸ್ತ್ರಗಳನ್ನು ಧರಿಸುತ್ತಾನೋ, ಹಾಗೆಯೇ ಅನ್ಯ ಶರೀರವನ್ನು ಧರಿಸಿ ಪರಮಾತ್ಮನು ಮಾನವನ ರೂಪದಲ್ಲಿ ಪೃಥ್ವಿ ಮೇಲೆ ಬರುತ್ತಾನೆ ಮತ್ತು (ಧನಾನಾಮ್) ದೃಢಭಕ್ತ (ಒಳ್ಳೆಯ ಪುಣ್ಯಾತ್ಮರಿಗೆ) ರಿಗೆ ಪ್ರಾಪ್ತನಾಗುತ್ತಾನೆ. ಅವರಿಗೆ ವಾಣಿಯ ಮೂಲಕ ತತ್ವಜ್ಞಾನವನ್ನು ಬೋಧಿಸುತ್ತಾನೆ.

ವಿವೇಚನೆ: – ಇವು ಋಗ್ವೇದದ 9ನೇ ಮಂಡಲ 96ನೇ ಸೂಕ್ತಿಯ 16ರಿಂದ 20ನೇ ಮಂತ್ರದ ಫೋಟೋಕಾಪಿಗಳಾಗಿವೆ. ಆರ್ಯ ಸಮಾಜದ ಪ್ರವರ್ತಕರಾದ ಮಹರ್ಷಿ ದಯಾನಂದ ಸರಸ್ವತಿಯವರ ಮಾರ್ಗದರ್ಶನದಲ್ಲಿ ಅವರ ಆರ್ಯ ಸಮಾಜದ ಶಿಷ್ಯರುಗಳು ಇದರ ಹಿಂದಿ ಅನುವಾದವನ್ನು ಮಾಡಿದ್ದಾರೆ. ಈ ಅನುವಾದವು ಸ್ವಲ್ಪಮಟ್ಟಿಗೆ ಮಾತ್ರ ಸರಿಯಾಗಿದ್ದು, ಇದರಲ್ಲೂ ಬಹಳಷ್ಟು ದೋಷಗಳಿವೆ. ಮೊದಲು ಹೆಚ್ಚಿನ ಪ್ರಮಾಣದಲ್ಲಿ ಅನುವಾದ ಕಾರ್ಯವು ಸರಿ ಇರುತ್ತಿತ್ತು. ಸ್ವಲ್ಪಮಟ್ಟಿನ ದೋಷಗಳು ಇರುತ್ತಿದ್ದು, ಅದನ್ನು ನನ್ನ ಮೂಲಕ ಸರಿಪಡಿಸಿ ವಿವೇಚನೆಯಲ್ಲಿ ಬರೆಯಲಾಗಿದೆ. ಈಗ ಹೆಚ್ಚಿನ ದೋಷಗಳನ್ನು ಸರಿಪಡಿಸಿ ಬರೆಯುತ್ತೇನೆ.

ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ, 16ನೇ ಮಂತ್ರದಲ್ಲಿ ಹೇಳಲಾಗಿರುವುದೇನೆಂದರೆ:–

'ಹೇ ಪರಮಾತ್ಮ! ತಮ್ಮ ಗುಪ್ತವಾದ ವಾಸ್ತವಿಕ (ಚಾರು) ಶ್ರೇಷ್ಠ (ನಾಮ) ನಾಮವೇನಿದೆಯೋ ಅದನ್ನು ತಿಳಿಸಿ', ಪ್ರಿಯ ಓದುಗರೇ, ಹೇಗೆ ಭಾರತದ ರಾಜನನ್ನು ಪ್ರಧಾನಮಂತ್ರಿ ಎನ್ನುತ್ತೇವೆಯೋ, ಇದು ಅವರ ಹುದ್ದೆಯ ಪ್ರತಿಕವಾಗಿದೆ. ಅವರ ವಾಸ್ತವಿಕ ಹೆಸರು ಬೇರೆ ಏನೋ ಆಗಿರುತ್ತದೆ. ಹೇಗೆಂದರೆ, ಮೊದಲ ಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ ನೆಹರೂರವರಾಗಿದ್ದರು. "ಜವಾಹರ್‌ಲಾಲ್" ಅವರ ನಿಜವಾದ ಹೆಸರು. ಈ 16ನೆಯ ಮಂತ್ರದಲ್ಲಿ ಹೇಳಿರುವುದೇನೆಂದರೆ–ಹೇ ಪರಮಾತ್ಮ! ತಮ್ಮ ವಾಸ್ತವಿಕ ನಾಮ (ಸೋತೃಯಿಃ) ಉಪಾಸನೆಯನ್ನು ಮಾಡುವ (ಸ್ವ ಆಯುಧಃ) ಸ್ವಯಂಚಾಲಿತ ಶಸ್ತ್ರದಂತೆ (ಪೂಯಮಾನಃ) ಅಜ್ಞಾನವೆಂಬ ದುರ್ಗಂಧವನ್ನು ನಾಶಗೊಳಿಸುವ ಪಾಪನಾಶಕದಂತಿದೆ. ಆ ಸತ್ಯಮಂತ್ರವನ್ನು ತಾವು ನಮಗೆ ಬೋಧಿಸಿ. (ದೇವಸೋಮ) ಹೇ ಅಮರ ಪರಮೇಶ್ವರ! ತಮ್ಮ ಈ ಮಂತ್ರವನ್ನು ಶ್ವಾಸದ ಮೂಲಕ ನಾಸಿಕಾದಿ (ಗಾಃ) ಇಂದ್ರಿಯಗಳಿಂದ (ವಾಸುಮ್ ಅಭಿ) ಶ್ವಾಸೋಚ್ಛಾಸದಿಂದ ಜಪಿಸುವ ಮೂಲಕ (ಸಪ್ತಿರಿವ=ಸಪ್ತಿಃ ಇವ) ವಿದ್ಯುತ್‌ನಂತೆ ಅರ್ಥಾತ್ ವೇಗವಾಗಿ (ಅಭಿವಾಜ) ಭಕ್ತಿ ಎಂಬ ಧನದಿಂದ ಪರಿಪೂರ್ಣಗೊಳಿಸಿ (ಶ್ರವಸ್ಯಾಮೀ) ಐಶ್ವರ್ಯವನ್ನು ಹಾಗೂ ಮೋಕ್ಷವನ್ನು ಪ್ರಾಪ್ತಿಮಾಡಿಸಿ.

ಪ್ರಿಯ ಓದುಗರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 16ನೇ ಮಂತ್ರದ ಅನುವಾದದಲ್ಲಿದ್ದ ಬಹಳಷ್ಟು ತಪ್ಪುಗಳಿದ್ದವು ಅದನ್ನು ಸರಿಪಡಿಸಲಾಗಿದೆ. ಪ್ರಮಾಣಕ್ಕಾಗಿ ಮೂಲ ಪಠ್ಯದಲ್ಲಿರುವ "ಅಭಿವಾಜಂ" ಶಬ್ದವನ್ನು ಅನುವಾದಿಸಿಲ್ಲ. ಅದರ ಬದಲಾಗಿ "ಅಭಿಗಮಯ" ಶಬ್ದದ ಅರ್ಥವನ್ನು ಮಾಡಲಾಗಿದೆ. ಅದು ಮೂಲ ಪಠ್ಯದಲ್ಲಿಲ್ಲ.

ವಿವೇಚನೆ :– ಆರ್ಯ ಸಮಾಜದವರಿಂದ ಅನುವಾದಿಸಲ್ಪಟ್ಟ ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 17ನೇ ಮಂತ್ರದ ಅನುವಾದದಲ್ಲಿಯೂ ಸಹ ಬಹಳಷ್ಟು ತಪ್ಪುಗಳಿವೆ. ಈಗ ಅದನ್ನು ಸರಿಪಡಿಸಿ ಬರೆಯುತ್ತೇನೆ.

ಋಗ್ವೇದದ 9ನೇ ಮಂಡಲದ 86ನೇ ಮತ್ತು 82 ನೇ ಸೂಕ್ತಿಯ ಮಂತ್ರದಲ್ಲಿ ಈ ಮೊದಲೇ ಹೇಳಿರುವಂತೆ ಪರಮಾತ್ಮನು ತನ್ನ ಶಾಶ್ವತ ಸ್ಥಾನದಿಂದ ಧ್ಯೂಲೋಕದ ಮೂರನೆಯ ಸ್ಥಾನದಲ್ಲಿ ವಿರಾಜಮಾನವಾಗಿದೆ. ಅಲ್ಲಿಂದ ನಡೆದು ಪೃಥ್ವಿಯ ಮೇಲೆ ಬೇಕೆಂತಲೇ ಯಾವುದೋ ಮುಖ್ಯವಾದ ಉದ್ದೇಶದಿಂದ ಪ್ರಕಟನಾಗುತ್ತಾನೆ. ಪರಮಾತ್ಮನು ಸರ್ವ ಬ್ರಹ್ಮಾಂಡಗಳಲ್ಲಿ ವಾಸವಾಗಿರುವ ಜೀವಿಗಳ ಪಾಲನೆ–ಪೋಷಣೆಯನ್ನು ಮೂರು ಸ್ಥಿತಿಗಳಲ್ಲಿ ಮಾಡುತ್ತಾನೆ. 1. ಪರಮಾತ್ಮನು ಮೇಲಿನ ಸತ್ಯಲೋಕ ಅಂದರೆ ಅವಿನಾಶಿ ಧಾಮದಲ್ಲಿ ಸಿಂಹಾಸನದ (ತಖ್ತ್) ಮೇಲೆ ಕುಳಿತು ಸರ್ವ ಬ್ರಹ್ಮಾಂಡಗಳ ಕಾರ್ಯಾಚರಣೆಯನ್ನು ಮಾಡುತ್ತಾನೆ. 2. ಬೇಕೆಂದಾಗ ಸಾಧು–ಸಂತರ ರೂಪದಲ್ಲಿ ತನ್ನ ಶರೀರದ ತೇಜಸ್ಸನ್ನು ಸರಳಗೊಳಿಸಿ ಒಳ್ಳೆ ಆತ್ಮಗಳಿಗೆ ಭೇಟಿಯಾಗುತ್ತಾನೆ. 3. ಪ್ರತಿ ಯುಗದಲ್ಲಿ ಯಾವುದೋ ಜಲಾಶಯದಲ್ಲಿ ಅರಳಿರುವ ಕಮಲದ ಹೂವಿನ ಮೇಲೆ ಮಲಗಿರುವ ನವಜಾತ ಶಿಶುವಿನ ರೂಪ ಧರಿಸಿ ಪ್ರಕಟನಾಗುತ್ತಾನೆ. ಮಕ್ಕಳಿಲ್ಲದ ದಂಪತಿ ಅಲ್ಲಿಂದ ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರೆ. ಬಾಲ್ಯದಿಂದಲೇ ಆ ಪರಮಾತ್ಮನು ತನ್ನ ತತ್ವಜ್ಞಾನವೆಂಬ ವಾಸ್ತವಿಕ ಭಕ್ತಿ ಜ್ಞಾನವನ್ನು ಚೌಪದಿ, ದೋಹೆ, ಸಾಖಿ ಹಾಗೂ ಕವಿತೆಗಳ ರೂಪದಲ್ಲಿ ಹೇಳುತ್ತಾನೆ.

1398ನೇ ವಿಕ್ರಮ ಸಂವತ್ಸರ ಅರ್ಥಾತ್ 1455ನೇ ಇಸವಿಯಲ್ಲಿ ಪರಮಾತ್ಮ ತನ್ನ ನಿಜ ಸ್ಥಾನದಿಂದ ನಡೆದು ಭಾರತವರ್ಷದ ಕಾಶೀ ನಗರದ ಹೊರಗಿನ ಲಹರ್‌ತಾರಾ ಎಂಬ ಜಲಾಶಯದಲ್ಲಿ ಕಮಲದ ಹೂವಿನ ಮೇಲೆ ಶಿಶುರೂಪ ಧರಿಸಿ ಪ್ರಕಟರಾಗಿದ್ದರು. ಅಲ್ಲಿಂದ ನೀರು–ನೀಮಾ ಎಂಬ ನೇಕಾರ ದಂಪತಿಗಳು ಆ ಶಿಶುವನ್ನು ತಮ್ಮ ಮನೆಗೆ ಒಯ್ದರು. ನಿಧಾನವಾಗಿ ಪರಮಾತ್ಮ ದೊಡ್ಡವರಾದರು. ಕಬೀರವಾಣಿಯ ಮೂಲಕ ಜ್ಞಾನವನ್ನು ಹೇಳಿದ್ದರು. ಋಗ್ವೇದದ 9ನೇ ಮಂಡಲದ 1ನೇ ಸೂಕ್ತಿಯ 9ನೇ ಮಂತ್ರದಲ್ಲಿ ಪ್ರಮಾಣೀಕರಿಸಲಾಗಿದೆ. ಇದು ಕೂಡ ಆರ್ಯ ಸಮಾಜದ ಆಚಾರ್ಯರಿಂದ ಅನುವಾದಿತವಾಗಿದೆ. ಅದರಲ್ಲೂ ಕೆಲವು ದೋಷಗಳಿವೆ. ಇದು ಋಗ್ವೇದದ 9ನೇ ಮಂಡಲದ 1ನೇ ಸೂಕ್ತಿಯ 9ನೇ ಮಂತ್ರದ ಫೋಟೋಕಾಪಿಯಾಗಿದ್ದು ದಯಮಾಡಿ ಓದಿ.

> अभी॒ई॒ममघ्न्या॑ उ॒त श्री॒णन्ति॑ धे॒नवः॒ शिशु॑म् ।
> सोम॒मिन्द्रा॑य॒ पात॑वे ॥९॥
>
> पदार्थः—( इमं ) उस ( सोमं ) सौम्यस्वभाव वाले श्रद्धालु पुरुष को ( शिशुं ) कुमारावस्था में ही ( अभि ) सब प्रकार से ( अघ्न्याः ) अहिंसनीय ( धेनवः ) गौवें ( श्रीणन्ति ) तृप्त करती हैं ( इन्द्राय ) ऐश्वर्य्यं की ( पातवे ) वृद्धि के लिये । ( उत ) अथवा उक्त श्रद्धालु पुरुष को अहिंसनीय वाणियें ऐश्वर्य्यं की प्राप्ति के लिये संस्कृत करती हैं ॥९॥

ವಿವೇಚನೆ: – ಈ ಫೋಟೋಕಾಪಿಯು ಋಗ್ವೇದದ 9ನೇ ಮಂಡಲದ 1ನೇ ಸೂಕ್ತಿಯ 9ನೇ ಮಂತ್ರದ್ದಾಗಿದ್ದು ಇದರಲ್ಲಿ ಸ್ಪಷ್ಟಪಡಿಸಿರುವುದೇನೆಂದರೆ, (ಸೋಮ) ಅಮರ ಪರಮಾತ್ಮನು ಶಿಶುವಿನ ರೂಪದಲ್ಲಿ ಪ್ರಕಟನಾದಾಗ ಅವನ ಪಾಲನೆಯ ಲೀಲೆಯು ಕಡಸು ಹಸುವಿನ [ಪಡ್ಡೆ ಹಸುವಿನ](ಅಭಿ ಅಘ್‌ನ್ಯಾ ಧೇನುವಃ) ಮೂಲಕ ಆಗುತ್ತದೆ. ಕಬೀರ್ ಸಾಗರ್‌ದ 'ಜ್ಞಾನಪ್ರಕಾಶ'ದ

ಅಧ್ಯಾಯದಲ್ಲಿ ಇದನ್ನು ಪ್ರಮಾಣೀಕರಿಸಲಾಗಿದೆ. ಏನೆಂದರೆ, ಪರಮೇಶ್ವರ ಕಬೀರರನ್ನು ನೀರು–ನೀಮಾ ತಮ್ಮ ಮನೆಗೆ ಒಯ್ದರು. ಆಗ ಶಿಶು ರೂಪದಲ್ಲಿದ್ದ ಪರಮಾತ್ಮನು ಅನ್ನವನ್ನೂ ತಿನ್ನಲಿಲ್ಲ, ಹಾಲನ್ನೂ ಕುಡಿಯಲಿಲ್ಲ. ಸ್ವಾಮಿ ರಾಮಾನಂದರ ಸಲಹೆಯಂತೆ ನೀರೂ ಒಂದು ಕಡಸು ಹಸು [ಪಡ್ಡೆ ಹಸು] ಅಂದರೆ ಒಂದು ಕರುವನ್ನು ತಂದನು. ಅದು ತಕ್ಷಣವೇ ಹಾಲನ್ನು ನೀಡಿತು. ಆ ಕರುವಿನ ಹಾಲಿನಿಂದ ಪರಮೇಶ್ವರನ ಪೋಷಣೆಯ ಲೀಲೆಯಾಗಿತ್ತು. ಕಬೀರ್ ಸಾಗರ್ ಸರಿಸುಮಾರು 600 (ಆರು ನೂರು) ವರ್ಷಗಳ ಮೊದಲು ಬರೆದಿರುವುದಾಗಿದೆ.

ಋಗ್ವೇದದ 9ನೇ ಮಂಡಲದ 1ನೇ ಸೂಕ್ತಿಯ 9ನೇ ಮಂತ್ರದ ಅನುವಾದದಲ್ಲೂ ಕೆಲವು ದೋಷಗಳಿವೆ. ಅಂದರೆ (ಅಭಿ ಅಘ್ನ್ಯಾ) ದ ಅರ್ಥ ಅಹಿಂಸನೀಯ ಎಂದು ಮಾಡಲಾಗಿದೆ. ಆದರೆ ಅದು ತಪ್ಪಾದ ಅರ್ಥವಾಗಿದೆ. ಹರಿಯಾಣ ಪ್ರಾಂತದ ರೋಹತಕ್ ಜಿಲ್ಲೆಯ ಧನಾನಾ ಹಳ್ಳಿಯಲ್ಲಿ ಸಂತ ರಾಮ್‌ಪಾಲ್ ಮಹಾರಾಜರ ಜನನವಾಗಿದೆ. ಅದು ವರ್ತಮಾನದಲ್ಲಿ ಸೋನೀಪತ್ ಜಿಲ್ಲೆಯಲ್ಲಿದೆ. ಈ ಕ್ಷೇತ್ರದಲ್ಲಿ ಯಾವ ಹಸು ಗರ್ಭಧರಿಸಿಲ್ಲವೋ ಆ ಹಸುವನ್ನು ಕಡಸು ಹಸು (ಪಡ್ಡೆ ಹಸು) ಎಂದು ಕರೆಯುತ್ತಾರೆ. ಇದು ಅಪಭ್ರಂಶದ ಶಬ್ದವಾಗಿದೆ. ಒಂದು ಹಸುವಿಗೆ 'ಅಧ್ನಿ' ಎಂದು ಕರೆಯುತ್ತಾರೆ. ಅದರ ಬಹುವಚನ 'ಅದ್‌ನ್ಯಾ' ಎಂದಾಗುತ್ತದೆ. 'ಅಘ್ನ್ಯಾ ಎಂದರೆ ಗಬ್ಬವಲ್ಲದ ಹಸುಗಳು ಹಾಗೂ 'ಅಭಿಘ್ನ್ಯಾ' ಎಂದರೆ ಪೂರ್ಣರೂಪದಲ್ಲಿ ಗರ್ಭ ಧರಿಸದ ಅರ್ಥಾತ್ ಪಡ್ಡೆ ಹಸುಗಳು ಅರ್ಥಾತ್ ಕರುಗಳು ಎಂದರ್ಥ.

ಈಗ ಋಗ್ವೇದದ 9ನೇ ಮಂಡಲ 96ನೇ ಸೂಕ್ತ 17ನೇ ಮಂತ್ರದ ಸರಿಯಾದ ಅನುವಾದವನ್ನು ಮಾಡುವೆನು.

ಕನ್ನಡದಲ್ಲಿ :– (ಶಿಶುಮ್ ಜಜ್ಞಾನಮ್ ಹರ್ಯಂತಮ್) ಪರಮೇಶ್ವರನು ಬೇಕೆಂದೇ ತತ್ವಜ್ಞಾನವನ್ನು ಬೋಧಿಸುವ ಉದ್ದೇಶದಿಂದ ಶಿಶುವಿನ ರೂಪದಲ್ಲಿ ಪ್ರಕಟನಾಗುತ್ತಾನೆ. ಅವರ ಜ್ಞಾನವನ್ನು ಕೇಳಿ (ಮಾರುತೋಗಣೇನ) ಭಕ್ತರ ಒಂದು ಬೃಹತ್ ಸಮೂಹವೇ ಆ ಪರಮಾತ್ಮನ ಅನುಯಾಯಿಗಳಾಗುತ್ತಾರೆ. (ಮೃಜಂತಿ ಶುಮ್ಯಂತಿ ವಹಿನ್)

ಆ ಜ್ಞಾನ ಬೋಧೆಯು ಬುದ್ಧಿಜೀವಿಗಳಿಗೆ ಮಾತ್ರ ಅರಿವಾಗುತ್ತದೆ. ಅವರು ತತ್ವಜ್ಞಾನದ ಆಧಾರದ ಮೇಲೆ 'ಆ ಪರಮೇಶ್ವರನ ಸ್ತುತಿ–ಭಕ್ತಿ ಮಾಡುತ್ತಾರೆ. ಆ ಭಕ್ತಿಯು ಶೀಘ್ರ ಫಲದಾಯಕವಾಗಿರುತ್ತದೆ. ಆ ಪರಮಾತ್ಮನು ತನ್ನ ತತ್ವಜ್ಞಾನವನ್ನು (ಕಾವ್ಯೇನಾ) ಕವಿತ್ವದಿಂದ ಅಂದರೆ ಕವಿಗಳಂತೆ ದೋಹೆ, ಪದ್ಯಗಳು, ಲೋಕೋಕ್ತಿಗಳ, ಚೌಪದಿಗಳ ಮೂಲಕ, (ಕವಿ=ರ್ ಗೀರ್ಭಿಃ) ಕವಿರ್ ವಾಣಿಯ ಮೂಲಕ ಅಂದರೆ ಕಬೀರ ವಾಣಿಯ ಮೂಲಕ (ಪವಿತ್ರಮ್ ಅತಿರೇಭನ್) ಶುದ್ಧ ಜ್ಞಾನವನ್ನು ಉಚ್ಛ ಸ್ವರದಲ್ಲಿ ಕೂಗಿ ಹೇಳುತ್ತಾನೆ. ಅವನು (ಕವಿಃ) ಕವಿಯಂತೆ ಆಚರಣೆಯುಳ್ಳ ಕವಿರ್ದೇವ (ಸಂತ್) ಸಂತನ ರೂಪದಲ್ಲಿ ಪ್ರಕಟನಾದ (ಸೋಮ) ಅಮರ ಪರಮಾತ್ಮನಾಗಿದ್ದಾನೆ. (ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 17ನೇ ಮಂತ್ರ)

ವಿಶೇಷ :– ಈ ಮಂತ್ರದ ಮೂಲ ಪಠ್ಯದಲ್ಲಿ ಎರಡು ಬಾರಿ "ಕವಿಃ" ಶಬ್ದವಿದೆ. ಆರ್ಯ ಸಮಾಜದ ಅನುವಾದಕರು ಒಂದರ (ಕವಿಃ) ಅರ್ಥವನ್ನೇ ನೀಡಿಲ್ಲ.

ವಿವೇಚನೆ :– ಋಗ್ವೇದ 9ನೇ ಮಂಡಲದ 96ನೇ ಸೂಕ್ತಿಯ 18ನೇ ಮಂತ್ರದ ವಿವೇಚನೆ ಮಾಡೋಣ. ಇದರ ಅನುವಾದದಲ್ಲಿಯೂ ಬಹಳಷ್ಟು ದೋಷಗಳಿವೆ. ನಾವು ಸಂಸ್ಕೃತವನ್ನೂ ಬಲ್ಲೆವು. ವಿವೇಚಿಸಿ ಯಥಾರ್ಥ ಅನುವಾದ ಹಾಗೂ ಭಾವಾರ್ಥವನ್ನು ಸ್ಪಷ್ಟಪಡಿಸುತ್ತೇನೆ. 17ನೇ ಮಂತ್ರದಲ್ಲಿ ಹೇಳಿರುವಂತೆ, ಋಷಿ ಅಥವಾ ಸಂತರ ರೂಪದಲ್ಲಿ ಪ್ರಕಟನಾಗಿ ಪರಮಾತ್ಮನು ಅಮೃತವಾಣಿಯನ್ನು ತನ್ನ ಮುಖ ಕಮಲದಿಂದ ನುಡಿಯುತ್ತಾನೆ. ಮತ್ತು ಆ ಜ್ಞಾನವನ್ನು ಅರಿತು ಅನೇಕ ಅನುಯಾಯಿಗಳ ಸಮೂಹವಾಗುತ್ತದೆ. (ಯ) ಪರಮಾತ್ಮ ಹೇಳುವ ಆ ತತ್ವಜ್ಞಾನದ ವಾಣಿಯು (ಋಷಿಕೃತ್) ಋಷಿಯ ರೂಪದಲ್ಲಿ ಪ್ರಕಟನಾದ ಪರಮಾತ್ಮನಿಂದ ರಚಿತವಾದ

(ಸಹಸ್ರಣೀಯಃ) ಸಾವಿರಾರು ವಾಣಿಗಳು ಅಂದರೆ ಕಬೀರ ವಾಣಿಗಳು (ಋಷಿಮನಾ) ಋಷಿ ಸ್ವಭಾವದ ಭಕ್ತರಿಗೆ (ಸ್ವರ್ಷಾಃ) ಆನಂದದಾಯಕವಾಗಿರುತ್ತದೆ. (ಕವಿನಾಮ ಪದವೀಃ) ಕವಿತ್ವದಿಂದ ದೋಹೆ, ಚೌಪದಿಗಳಲ್ಲಿ ತಮ್ಮ ವಾಣಿ ಹೇಳುವ ಕಾರಣದಿಂದ ಆ ಪರಮಾತ್ಮನು ಕವಿಗಳಲ್ಲೇ ಒಬ್ಬ ಪ್ರಸಿದ್ಧ ಕವಿಯ ಪದವಿಯನ್ನು ಪಡೆಯುತ್ತಾನೆ. ಆ (ಸೋಮ) ಅಮರ ಪರಮಾತ್ಮನು (ಸಿಪಾಸನ್) ಸರ್ವರ ಪೋಷಣೆಯ ಇಚ್ಛೆಯನ್ನು ಹೊಂದುತ್ತಾ, ಪ್ರಥಮ ಸ್ಥಿತಿಯಲ್ಲಿ (ಮಹಿಷಃ) ಬೃಹತ್ ಪೃಥ್ವಿ ಅಂದರೆ ಮೇಲಿನ ಲೋಕಗಳಲ್ಲಿ (ತೃತೀಯಮ್ ಧಾಮ) ತೃತೀಯ ಧಾಮ ಅರ್ಥಾತ್ ಸತ್ಯಲೋಕದ ಮೂರನೆಯ ಹಂತದಲ್ಲಿ (ಅನುರಾಜತಿ) ತೇಜೋಮಯ ಶರೀರಯುಕ್ತ (ಸ್ತುಪ) ಗುಮ್ಮಟದಲ್ಲಿ (ವಿರಾಜಮ್) ವಿರಾಜಮಾನನಾಗಿದ್ದಾನೆ, ಅಲ್ಲಿಯೇ ಕುಳಿತಿದ್ದಾನೆ. ಇದೇ ಪ್ರಮಾಣವು ಋಗ್ವೇದದ 9ನೇ ಮಂಡಲದ 54ನೇ ಸೂಕ್ತಿಯ 3ನೇ ಮಂತ್ರದಲ್ಲಿದೆ. ಏನೆಂದರೆ ಸರ್ವ ಲೋಕಗಳಿಗಿಂತ ಮೇಲಿನ ಲೋಕದಲ್ಲಿ ಪರಮಾತ್ಮನು ವಿರಜಮನನಾಗಿದ್ದಾನೆ, (ತಿಷ್ಠಂತಿ) ಕುಳಿತಿದ್ದಾನೆ.

ವಿವೇಚನೆ :- ಋಗ್ವೇದ 9ನೇ ಮಂಡಲ 96ನೇ ಸೂಕ್ತಿಯ 19ನೇ ಮಂತ್ರದ ಅನುವಾದವನ್ನು ಸಹ ಆರ್ಯ ಸಮಾಜದ ವಿದ್ವಾಂಸರೇ ಮಾಡಿದ್ದಾರೆ. ಇದರಲ್ಲೂ ಬಹಳಷ್ಟು ದೋಷಗಳಿವೆ. ಪುಸ್ತಕ ವಿಸ್ತಾರದ ಕಾರಣದಿಂದ ನಮಗೆ ಅವಶ್ಯವಿರುವಷ್ಟು ಮಾಹಿತಿಯನ್ನು ಪಡೆದುಕೊಳ್ಳೋಣ.

ಈ ಮಂತ್ರದಲ್ಲಿ ನಾಲ್ಕನೆಯಧಾಮವನ್ನು ವರ್ಣಿಸಲಾಗಿದೆ. ಸೃಷ್ಟಿ ರಚನೆಯನ್ನು ಓದಿದಾಗ ಸಂಪೂರ್ಣ ಮಾಹಿತಿ ದೊರೆಯುವುದು. ಇದೇ ಪುಸ್ತಕದಲ್ಲಿ ಸೃಷ್ಟಿರಚನೆ ಅಧ್ಯಾಯವನ್ನು ಓದಿ.

ಪರಮಾತ್ಮನು ಮೇಲಿನ ನಾಲ್ಕು ಲೋಕಗಳನ್ನು ಅಜರಾಮರವಾಗಿರುವಂತೆ ಸೃಷ್ಟಿಸಿದ್ದಾನೆ. 1. ಅನಾಮಿ ಲೋಕ 2. ಆಗಮ್ ಲೋಕ 3. ಅಲಖ್ ಲೋಕ 4. ಸತ್ಯಲೋಕ

ನಾವು ಪೃಥ್ವಿಲೋಕದಲ್ಲಿದ್ದೇವೆ. ಇಲ್ಲಿಂದ ಮೇಲಿನ ಲೋಕಗಳ ಲೆಕ್ಕಮಾಡುವುದಾದರೆ 1. ಸತ್ಯಲೋಕ 2. ಅಲಖ್ ಲೋಕ 3. ಅಗಮ ಲೋಕ ಹಾಗೂ 4. ಅನಾಮಿ ಲೋಕವೆಂದು ಲೆಕ್ಕ ಮಾಡಲಾಗುತ್ತದೆ. ಆ ನಾಲ್ಕನೆಯಧಾಮದಲ್ಲಿ ಕುಳಿತು ಪರಮಾತ್ಮನು ಸರ್ವ ಬ್ರಹ್ಮಾಂಡಗಳನ್ನು ಹಾಗೂ ಲೋಕಗಳನ್ನು ಸೃಷ್ಟಿಸಿದ್ದಾನೆ. ಉಳಿದ ಸೃಷ್ಟಿಯನ್ನು ಸತ್ಯಲೋಕದಲ್ಲಿ ಕುಳಿತು ಮಾಡಿದ್ದಾನೆ. ಆರ್ಯ ಸಮಾಜದ ಅನುವಾದಕರು ತುರಿಯಾ ಪರಮಾತ್ಮ ಅರ್ಥಾತ್ ನಾಲ್ಕನೆಯ ಪರಮಾತ್ಮನನ್ನು ವರ್ಣಿಸಿದ್ದಾರೆ. ಇದು ನಾಲ್ಕನೆಯ ಧಾಮವಾಗಿದೆ. ಅದರಲ್ಲಿ ಮೂಲ ಪಾಠವಾದ 19ನೇ ಮಂತ್ರದ ಭಾವಾರ್ಥವೇನೆಂದರೆ ತತ್ವದರ್ಶಿ ಸಂತನು ನಾಲ್ಕನೆಯ ಧಾಮ ಹಾಗೂ ನಾಲ್ಕನೆಯ ಪರಮಾತ್ಮನನ್ನು (ವಿವಕ್ತಿ) ಭಿನ್ನ-ಭಿನ್ನವಾಗಿ ವರ್ಣಿಸುತ್ತಾನೆ. ಓದುಗರೇ ದಯಮಾಡಿ ಈ ಇದೇ ಪುಸ್ತಕದಲ್ಲಿರುವ ಸೃಷ್ಟಿರಚನೆಯ ಅಧ್ಯಾಯವನ್ನು ಓದಿ. ಇದರಿಂದ ನಿಮಗೆ ಜ್ಞಾನವಾಗುವುದು ಸಂತ ರಾಮ್‌ಪಾಲ್ ದಾಸರೇ ಆ ತತ್ವಜ್ಞಾನವನ್ನು ತಿಳಿದ ತತ್ವದರ್ಶಿ ಸಂತನೆಂದು.

ವಿವೇಚನೆ:- ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿ 20ನೇ ಮಂತ್ರದ ಯಥಾರ್ಥವನ್ನು ತಿಳಿಯೋಣ :-

ಈ ಮಂತ್ರವೂ ಮಹರ್ಷಿ ದಯಾನಂದರ ಶಿಷ್ಯರಿಂದ ಅನುವಾದಿಸಲ್ಪಟ್ಟಿದೆ. ಇವರ ದೃಷ್ಟಿಯಲ್ಲಿ ಪರಮಾತ್ಮನು ನಿರಾಕಾರನಾಗಿದ್ದಾನೆ. ಏಕೆಂದರೆ ಮಹರ್ಷಿ ದಯಾನಂದರು ಪರಮಾತ್ಮನು ನಿರಾಕಾರನೆಂದು ದೃಢಪಡಿಸಿದ್ದಾರೆ. ಹಾಗಾಗಿ ಅನುವಾದಕರು ನೇರವಾದ ಮಂತ್ರವನ್ನು ತಿರುಚಿ ಮರುಚಿ ಅನುವಾದಿಸಿದ್ದಾರೆ. ಮೂಲ ಪಠ್ಯದಲ್ಲಿ ಹೇಗಿದೆಯೆಂದರೆ :-

ಮರ್ಯ ನ ಶಭ್ರಃ ತನ್ವಾ ಮೃಜಾನಃ ಅತ್ಯಃ ನ ಸೃತ್ವಾ ಸನಯೇ ಧನಾನಾಮ್।
ವೃರ್ಷೇವ ಯೂಥಾ ಪರಿ ಕೋಶಮ್ ಅರ್ಷನ್ ಕನಿಕ್ರದತ್ ಚಮ್ವೋಃ ಆವಿವೇಶ॥

ಅನುವಾದ :- ಹೇಗೆ (ಮರ್ಯಃ, ನ) ಮನುಷ್ಯನು ಸುಂದರ ವಸ್ತ್ರಗಳನ್ನು ಧರಿಸುತ್ತಾನೋ,

ಹಾಗೇ ಪರಮಾತ್ಮನು (ಶುಭ್ರಃ ತನ್ವ್) ಸುಂದರ ಶರೀರ (ಮುಜಾನಃ) ವನ್ನು ಧರಿಸಿ (ಅತ್ಯಃ) ಅತ್ಯಂತ ವೇಗದಿಂದ (ಸತ್ವಾ) ನಡೆಯುತ್ತಾ (ಧನಾನಾಮ್) ಭಕ್ತಿ ಎಂಬ ಧನದ ಧನಿಕರು ಅರ್ಥಾತ್ ಪುಣ್ಯಾತ್ಮರಿಗೆ (ಸನಯೇ) ಪ್ರಾಪ್ತನಾಗುತ್ತಾನೆ. (ಯೂಥಾ ವೃಷೇವ) ಹೇಗೆ ಒಂದು ಸಮುದಾಯಕ್ಕೆ ಒಬ್ಬ ಸೇನಾಪತಿ ಪ್ರಾಪ್ತನಾಗುತ್ತಾನೋ, ಹಾಗೆಯೇ ಆ ಪರಮಾತ್ಮನು ಸಂತ ಅಥವಾ ಋಷಿಯ ರೂಪದಲ್ಲಿ ಪ್ರಕಟನಾಗುತ್ತಾನೆ, ಹಾಗಾಗಿ ಬೃಹತ್ ಸಂಖ್ಯೆಯಲ್ಲಿ ಅವನ ಅನುಯಾಯಿಗಳಾಗುತ್ತಾರೆ ಮತ್ತು ಪರಮಾತ್ಮನು ಅವರಿಗೆ ಗುರುವಿನ ರೂಪದಲ್ಲಿ ಅವರ ಮುಖಂಡನಾಗುತ್ತಾನೆ. ಆ ಪರಮಾತ್ಮನು (ಪರಿ ಕೋಶಮ್) ಪ್ರಥಮ ಬ್ರಹ್ಮಾಂಡದಲ್ಲಿ (ಅರ್ಷನ್) ಪ್ರಾಪ್ತನಾಗಿ ಅರ್ಥಾತ್ ಆಗಮಿಸಿ (ಕನಿಕ್ರದತ್) ಉಚ್ಚ ಸ್ವರದಲ್ಲಿ ಸತ್ಯಜ್ಞಾನವನ್ನು ಉಚ್ಚರಿಸುತ್ತಾ (ಚಮ್ವೋಃ) ಪೃಥ್ವಿ ಖಂಡದಲ್ಲಿ (ಅವಿವೇಶ) ಪ್ರವೇಶಿಸುತ್ತಾನೆ.

ಭಾವಾರ್ಥ :- ಈ ಮೊದಲೇ ವೇದಮಂತ್ರಗಳಲ್ಲಿ ಹೇಳಿರುವಂತೆ ಪರಮಾತ್ಮನು ಮೇಲಿನ ಲೋಕದಲ್ಲಿರುತ್ತಾನೆ. ಅಲ್ಲಿಂದ ತನ್ನ ರೂಪವನ್ನು ಅರ್ಥಾತ್ ಶರೀರದ ತೇಜಸ್ಸನ್ನು ಸರಳಗೊಳಿಸಿ ಪೃಥ್ವಿ ಮೇಲೆ ಆಗಮಿಸುತ್ತಾನೆ. ಈ ಋಗ್ವೇದ ಮಂಡಲ 9ರ ಸೂಕ್ತಿ 96ರ ಮಂತ್ರ 20ರಲ್ಲೂ ಇದನ್ನೇ ಪುಷ್ಟೀಕರಿಸಲಾಗಿದೆ. ಹೇಗೆ ಮನುಷ್ಯನು ವಸ್ತ್ರಗಳನ್ನು ಧರಿಸುತ್ತಾನೋ, ಹಾಗೆಯೇ ಅನ್ಯ ಶರೀರವನ್ನು ಧರಿಸಿ ಪರಮಾತ್ಮನು ಮಾನವನ ರೂಪದಲ್ಲಿ ಪೃಥ್ವಿ ಮೇಲೆ ಬರುತ್ತಾನೆ ಮತ್ತು (ಧನಾನಾಮ್) ದೃಢಭಕ್ತ (ಒಳ್ಳೆಯ ಪುಣ್ಯಾತ್ಮರಿಗೆ) ರಿಗೆ ಪ್ರಾಪ್ತನಾಗುತ್ತಾನೆ. ಅವರಿಗೆ ವಾಣಿಯ ಮೂಲಕ ತತ್ವಜ್ಞಾನವನ್ನು ಬೋಧಿಸುತ್ತಾನೆ.

(ಪ್ರಮಾಣ ಋಗ್ವೇದ 9ನೇ ಮಂಡಲದ 95ನೇ ಸೂಕ್ತಿಯ 2ನೇ ಮಂತ್ರ)

हरिः सृजानः पथ्यामृतस्येयर्ति वाचमरितेव नावम् ।
देवो देवानां गुह्यानि नामाविष्कृणोति बर्हिषि प्रवाचे ॥२॥

पदार्थः—(हरिः) वह पूर्वोक्त परमात्मा (सृजानः) साक्षात्कार को प्राप्त हुआ (ऋतस्य, पथ्यां) वाक्द्वारा मुक्तिमार्ग की (इयर्ति) प्रेरणा करता है। (अरितेव नावम्) जैसा कि नौका के पार लगाने के समय में नाविक प्रेरणा करता है। और (देवानां देवः) सब देवों का देव (गुह्यानि) गुप्त (नामाविष्कृणोति) संज्ञाओं को प्रगट करता है (बर्हिषि प्रवाचे) वाणीरूपी यज्ञ के लिये ॥२॥

ಋಗ್ವೇದ 9ನೇ ಮಂಡಲದ 95ನೇ ಸೂಕ್ತಿಯ 2ನೇ ಮಂತ್ರದ ಅನುವಾದ ಮಹರ್ಷಿ ದಯಾನಂದರ ಶಿಷ್ಯರುಗಳು ಬಹಳ ಸರಿಯಾಗಿ/ಅಚ್ಚುಕಟ್ಟಾಗಿ ಮಾಡಿದ್ದಾರೆ.

ಇದರ ಭಾವಾರ್ಥವೆಂದರೆ, ಈ ಮೊದಲೇ ಹೇಳಿರುವಂತೆ ಪರಮಾತ್ಮ ಅರ್ಥಾತ್ ಮೇಲಿನ ಮಂತ್ರಗಳಲ್ಲಿ ಪರಮಾತ್ಮನ ಬಗ್ಗೆ ಹೇಳಿರುವಂತೆ ಅವನು (ಸೃಜಾನಃ) ತನ್ನ ಶರೀರವನ್ನು ಧರಿಸಿ (ಋತಸ್ಯ ಪಥ್ಯಾಂ) ಸತ್ಯಭಕ್ತಿಯ ಮಾರ್ಗ ಅರ್ಥಾತ್ ಯಥಾರ್ಥವಾದ ಆಧ್ಯಾತ್ಮಿಕ ಜ್ಞಾನವನ್ನು ತನ್ನ ಅಮೃತವಾಣಿಯ ಮೂಲಕ ಮುಕ್ತಿ ಮಾರ್ಗದ ಪ್ರೇರಣೆಯನ್ನು ನೀಡುತ್ತಾನೆ.

ಆ ಮಂತ್ರವು ಹೇಗಿದೆಯೆಂದರೆ, ಹೇಗೆ (ಅರಿತೇವ ನಾವಮ್) ನಾವಿಕನು ನೌಕೆಯಲ್ಲಿ ಕುಳಿಸಿ ಪಾರುಮಾಡುತ್ತಾನೆ ಹಾಗೆಯೇ ಪರಮಾತ್ಮನೂ ಸತ್ಯಭಕ್ತಿಯ ಮಾರ್ಗವೆಂಬ ನೌಕೆಯ ಮೂಲಕ ಸಾಧಕನನ್ನು ಪ್ರಪಂಚವೆಂಬ ನದಿಯಿಂದ ಪಾರುಮಾಡುತ್ತಾನೆ. ಅವನು (ದೇವಾನಾಮ್ ದೇವಃ) ಸರ್ವ ದೇವಗಳ ದೇವ ಅರ್ಥಾತ್ ಪ್ರಭುಗಳ ಪ್ರಭುವಾದ ಪರಮೇಶ್ವರನು. (ಬರ್ಹಿಷಿ ಪ್ರವಾಚೇ) ವಾಣಿಯ ರೂಪಿ ಜ್ಞಾನಯಜ್ಞಕ್ಕಾಗಿ (ಗುಹ್ಯಾನಿ) ಗುಪ್ತ (ನಾಮಾ ಆವಿಷ್ಕೃಣೋತಿ) ನಾಮಗಳನ್ನು

ಆವಿಷ್ಕರಿಸುತ್ತಾನೆ. ಅರ್ಥಾತ್ ಹೇಗೆ ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ "ಓಂ ತತ್ ಸತ್"ನಲ್ಲಿ ತತ್ ಹಾಗೂ ಸತ್ ಇವು ಗುಪ್ತ ಮಂತ್ರಗಳು ಹಾಗೂ ಅದನ್ನೇ ಆ ಪರಮೇಶ್ವರನು ನನಗೆ (ಸಂತ ರಾಮ್‌ಪಾಲ್ ದಾಸರಿಗೆ) ಹೇಳಿದ್ದಾನೆ. ಅವುಗಳಿಂದಲೇ ಪೂರ್ಣಮೋಕ್ಷ ಸಂಭವ.

ಸೂಕ್ಷ್ಮ ವೇದದಲ್ಲಿ ಪರಮೇಶ್ವರನು ಹೇಳಿರುವುದೇನೆಂದರೆ :–

"ಸೋಹಂ" ಶಬ್ದ್ ಹಮ್ ಜಗ್ ಮೇ ಲಾಏ, ಸಾರ ಶಬ್ದ್ ಹಮ್ ಗುಪ್ತ್ ಛಿಪಾಏ।

ಭಾವಾರ್ಥ :– ಪರಮೇಶ್ವರನು ಸ್ವಯಂ "ಸೋಹಂ" ಶಬ್ದವನ್ನು ಭಕ್ತಿಗಾಗಿ ಹೇಳಿದ್ದಾನೆ. ಈ ಸೋಹಂ ಎನ್ನುವ ಮಂತ್ರ ಯಾವುದೇ ಪ್ರಾಚೀನ ಗ್ರಂಥ (ವೇದ, ಭಗವದ್ಗೀತೆ, ಕುರಾನ್ ಹಾಗೂ ಬೈಬಲ್) ಗಳಲ್ಲೂ ಇಲ್ಲ. ಸೂಕ್ಷ್ಮವೇದದಲ್ಲಿ ಹೇಳಲಾಗಿದೆ :–

ಸೋಹಂ ಊಪರ್ ಔರ್ ಹೈ, ಸತ್ಯ ಸುಕೃತ್ ಏಕ್ ನಾಮ್।
ಸಬ್ ಹಸೋಂ ಕಾ ಜಹಾಂ ಬಾಸ್ ಹೈ, ಬಸ್ತೀ ಹೈ ಬಿನ್ ಠಾಮ್॥

ಭಾವಾರ್ಥ:– "ಸೋಹಂ" ಎಂಬ ನಾಮವನ್ನು ಪರಮಾತ್ಮನೇ ಪ್ರಕಟಿಸಿದ್ದಾನೆ, ಆವಿಷ್ಕರಿಸಿದ್ದಾನೆ. ಆದರೆ ಸಾರ ಶಬ್ದವನ್ನು ಗುಪ್ತವಾಗಿರಿಸಿದ್ದಾನೆ. ಈಗ ನನಗೆ (ಸಂತ ರಾಮ್‌ಪಾಲ್ ದಾಸನಿಗೆ) ಹೇಳಿದ್ದಾನೆ ಅದನ್ನು ದೀಕ್ಷೆಯ ಸಮಯದಲ್ಲಿ ಸಾಧಕರಿಗೆ ಹೇಳಲಾಗುತ್ತದೆ. ಇದರ ಸಂಬಂಧ ಗೀತೆಯ 17ನೆಯ ಅಧ್ಯಾಯದ 23ನೇ ಶ್ಲೋಕದಲ್ಲಿ "ಓಂ ತತ್ ಸತ್" ನೊಂದಿಗಿದೆ.

(ಪ್ರಮಾಣ ಋಗ್ವೇದ 9ನೇ ಮಂಡಲ 94ನೇ ಸೂಕ್ತ 1ನೇ ಮಂತ್ರ)

अधि यद॑स्मिन्वा॒जिनी॑व॒ शुभ॒: स्पर्ध॑न्ते॒ धिय॒: सूर्ये॒ न विश॑: ।
अपो वृ॑णा॒नः प॑वते कवी॒यन्व्र॒जं न प॑शु॒वर्ध॑नाय॒ मन्म॑ ।।१।।

पदार्थः—( सूर्य्ये ) सूर्य के विषय में ( न ) जैसे ( विशः ) रश्मियां प्रकाशित करती हैं । उसी प्रकार ( धियः ) मनुष्यों की बुद्धियां ( स्पर्धन्ते ) अपनी-अपनी उत्कट शक्ति से विषय करती हैं । (अस्मिन् अधि ) जिस परमात्मा में ( वाजिनीव) सर्वोपरि बलों के समान ( शुभः ) शुभ बल है वह परमात्मा ( अपोवृणानः ) कर्मों का अध्यक्ष होता हुआ ( पवते ) सबको पवित्र करता हैं । ( कवीयन् ) कवियों की तरह आचरण करता हुआ ( पशुवर्धनाय ) सर्वद्रष्टृत्व पद के लिए ( व्रजं, न ) इन्द्रियों के अधिकरण मन के समान 'व्रजन्ति इन्द्रियाणि यस्मिन् तद्व्रजम्' ( मन्म ) जो अधिकरणरूप है वही श्रेय का धाम है ।।१।।

ಕೂಡ ಆರ್ಯ ಸಮಾಜದ ಪಂಡಿತರಿಂದ ಮಾಡಲ್ಪಟ್ಟಿದೆ.

ವಿವೇಚನೆ :– ಪುಸ್ತಕದ ವಿಸ್ತಾರತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರೇ ಮಾಡಿದ ಅನುವಾದದ ಮೂಲಕ ನಮ್ಮ ಅಭಿಪ್ರಾಯವನ್ನು ಮಂಡಿಸುತ್ತೇನೆ. ಈ ಮೊದಲೇ ಬರೆದಿರುವ ವೇದಮಂತ್ರಗಳಲ್ಲಿ ಹೇಳಿರುವಂತೆ ಪರಮಾತ್ಮನು ತನ್ನ ಮುಖ ಕಮಲದಿಂದ ವಾಣಿಯ ಉಚ್ಚಾರಣೆಯನ್ನು ಮಾಡಿ ತತ್ವಜ್ಞಾನವನ್ನು ಬೋಧಿಸುತ್ತಾನೆ. ಲೋಕೋಕ್ತಿಗಳ ಮಾಧ್ಯಮದಿಂದ, ಕವಿತ್ವದಿಂದ, ದೊಹೆ, ಶಬ್ದಗಳು, ಸಾಖಿಗಳ, ಚೌಪದಿಗಳ ಮೂಲಕ ವಾಣಿಯನ್ನು ಹೇಳುವುದರಿಂದ ಪ್ರಸಿದ್ಧ ಕವಿಗಳಲ್ಲಿಯ ಒಬ್ಬ ಕವಿಯ ಬಿರುದನ್ನೂ ಪಡೆಯುತ್ತಾನೆ. ಅವನ ಹೆಸರೇ ಕವಿರ್ದೇವ ಅಂದರೆ ಕಬೀರ ಸಾಹೇಬ. ಸರ್ವಶಕ್ತಿವಂತನಾದ ಪರಮೇಶ್ವರನು (ಕವಿಯನ್ ವ್ರಜಮ್ ನ) ಕವಿಗಳ ಹಾಗೆ ಆಚರಣೆ ಮಾಡುತ್ತಾ ಪೃಥ್ವಿಯ ಮೇಲೆ ವಿಹರಿಸುತ್ತಾನೆ ಎಂಬ ಅಂಶವನ್ನು ಈ ಋಗ್ವೇದದ 9ನೇ ಮಂಡಲದ 94ನೇ ಸೂಕ್ತಿಯ 1ನೇ ಮಂತ್ರದಲ್ಲಿ ಸ್ಪಷ್ಟಪಡಿಸಲಾಗಿದೆ.

(ಪ್ರಮಾಣ ಋಗ್ವೇದ 9ನೇ ಮಂಡಲ, 20ನೇ ಸೂಕ್ತಿ, 1ನೇ ಮಂತ್ರ)

प्र कविर्देववीतयेऽव्यो वारेभिरर्षति ।
साह्वान्विश्वा अभि स्पृधः ॥१॥

पदार्थः—वह परमात्मा (कविः) मेधावी है और (अव्यः) सबका रक्षक है (देववीतये) विद्वानों की तृप्ति के लिये (अर्षति) ज्ञान को देता है, (साह्वान्) सहनशील है और (विश्वाः, स्पृधः) सम्पूर्ण दुष्टों को संग्रामों में (अभि) तिरस्कृत करता है ॥१॥

ಆರ್ಯಸಮಾಜದ ಪಂಡಿತರೇ ಅನುವಾದಿಸಿದ್ದಾರೆ. ಇದರ ಅನುವಾದವೂ ಕಡಿಮೆ ಪ್ರಮಾಣದಲ್ಲಿ ಸರಿಯಾಗಿದ್ದು ಹೆಚ್ಚು ಪ್ರಮಾಣದಲ್ಲಿ ತಪ್ಪು ಮಾಡಿದ್ದಾರೆ. ಇದರಲ್ಲಿ ಮೂಲ ಪಠ್ಯದಲ್ಲಿ ಹೀಗಿದೆ:–

'ಪ್ರ ಕವಿರ್ದೇವ ವೀತಯೇ ಅವ್ಯಃ ವಾರೇಭಿಃ ಅರ್ಷತಿ ಸಾಹ್ಯಾನ್ ವಿಶ್ವಾಃ ಅಭಿ ಸ್ಪ್ರಧಃ'

ಸರಳಾರ್ಥ :– (ಪ್ರ) ವೇದ ಜ್ಞಾನದಾತನಿಗಿಂತ ಭಿನ್ನವಾದ ಅವನು (ಕವಿರ್ದೇವ) ಕವಿರ್ದೇವ ಕಬೀರನು ಪರಮೇಶ್ವರನು, ಅವನು ವಿದ್ವಾಂಸರಿಗೆ ಅಂದರೆ ಜಿಜ್ಞಾಸುಗಳಿಗೆ (ವೀತಯೇ) ಜ್ಞಾನ ಧನದ ತೃಪ್ತಿಗಾಗಿ (ವಾರೇಭಿಃ) ಶ್ರೇಷ್ಠ ಆತ್ಮಗಳಿಗೆ (ಅರ್ಷತಿ) ಜ್ಞಾನವನ್ನು ನೀಡುತ್ತಾನೆ. ಅವನು (ಅವ್ಯಃ) ಅವಿನಾಶಿ, ರಕ್ಷಕನು. (ಸಾಹ್ಯಾನ್) ಸಹನಶೀಲನು (ವಿಶ್ವಾಃ) ತತ್ವಜ್ಞಾನ ಹೀನರಾದ ಸಕಲ ದುಷ್ಟರಿಗೆ (ಸ್ಪೃಧಃ) ಆಧ್ಯಾತ್ಮ ಜ್ಞಾನದ ಕೃಪೆಯನ್ನು ಸ್ಪರ್ಧೆ ಅರ್ಥಾತ್ ಜ್ಞಾನಗೋಷ್ಠಿಗಳ ರೂಪದಲ್ಲಿ, ಜ್ಞಾನಚರ್ಚೆಯಲ್ಲಿ (ಅಭಿ) ಪೂರ್ಣ ರೂಪದಿಂದ ಪರಾಜಿತಗೊಳಿಸುತ್ತಾನೆ, ಸೋಲಿಸುತ್ತಾನೆ.

ವಿಶೇಷತೆ :– (ಕ) ಈ ಮಂತ್ರದ ಅನುವಾದದಲ್ಲಿ ಬಹಳಷ್ಟು ಶಬ್ದಗಳನ್ನು ಆರ್ಯ ವಿದ್ವಾಂಸರು ಕೈಬಿಟ್ಟಿದ್ದಾರೆ. ಉದಾಹರಣೆಗೆ "ಪ್ರ", "ವಾರೇಭಿ". ಆದ್ದರಿಂದ ವೇದಗಳ ಯಥಾರ್ಥ ಅನುವಾದ ಬೆಳಕಿಗೆ ಬರಲಿಲ್ಲ. ಈ ಫೋಟೋಕಾಪಿಯನ್ನು ಗಮನಿಸಿದರೆ ಈ ಅಂಶವು ನಿಮಗೆ ತಿಳಿಯುವುದು.

(ಖ) ನನ್ನ ಅನುವಾದದಿಂದ ಸ್ಪಷ್ಟವಾಯ್ತೇನೆಂದರೆ ಆ ಪರಮಾತ್ಮ ಒಳ್ಳೆ ಆತ್ಮಗಳಿಗೆ (ದೃಢಭಕ್ತರಿಗೆ) ಜ್ಞಾನ ನೀಡುತ್ತಾನೆ. ಅವನ ಹೆಸರನ್ನು ಸಹ ಉಲ್ಲೇಖಿಸಲಾಗಿದೆ. 'ಕವಿರ್ದೇವ' ಎಂದು. ನಾವು ಕಬೀರ ಪರಮೇಶ್ವರ ಎನ್ನುತ್ತೇವೆ.

(ಪ್ರಮಾಣ ಋಗ್ವೇದ 9ನೇ ಮಂಡಲ 54ನೇ ಸೂಕ್ತ 3ನೇ ಮಂತ್ರ)

अयं विश्वानि तिष्ठति पुनानो भुवनोपरि ।
सोमो देवो न सूर्यः ॥३॥

पदार्थः—(सूर्यः, न) सूर्य के समान जगत्प्रेरक (अयम्) यह परमात्मा (सोमः, देवः) सौम्य स्वभाव वाला और जगत्प्रकाशक है और (विश्वानि, पुनानः) सब लोकों को पवित्र करता हुआ (भुवनोपरि, तिष्ठति) सम्पूर्ण ब्रह्माण्डों के ऊर्ध्व भाग में भी वर्तमान है ॥३॥

ನೋಡಿದರೆ ತಿಳಿಯುವುದು ಇದರ ಅನುವಾದವನ್ನೂ ಸಹ ಆರ್ಯ ಸಮಾಜದ ವಿದ್ವಾಂಸರೇ ಮಾಡಿರುವುದು. ಆ ಪರಮಾತ್ಮನು (ಭೂವನೋಪರಿ) ಸಂಪೂರ್ಣ ಬ್ರಹ್ಮಾಂಡಗಳ ಊರ್ಧ್ವ

ಅಂದರೆ ಮೇಲೆ (ತಿಷ್ಠತಿ) ವಿರಾಜಮಾನನಾಗಿದ್ದಾನೆ, ಮೇಲೆ ಕುಳಿತಿದ್ದಾನೆ :–

ಇದರ ಯಥಾರ್ಥ ಅನುವಾದ ಈ ರೀತಿಯಲ್ಲಿದೆ :–

(ಅಯಂ) ಈ (ಸೋಮಃ ದೇವ) ಅಮರ ಪರಮೇಶ್ವರನು (ಸೂರ್ಯಃ) ಸೂರ್ಯನ (ನ) ಸಮಾನ (ವಿಶ್ವಾಸಿ) ಸರ್ವರನ್ನೂ (ಪುನಾನಃ) ಪವಿತ್ರಗೊಳಿಸುತ್ತಾ (ಭೂವನೋಪರಿ) ಸಕಲ ಬ್ರಹ್ಮಾಂಡಗಳ ಊರ್ಧ್ವದಲ್ಲಿ ಅಂದರೆ ಮೇಲೆ (ತಿಷ್ಠತಿ) ಕುಳಿತಿದ್ದಾನೆ.

ಭಾವಾರ್ಥ :– ಹೇಗೆ ಸೂರ್ಯನು ಮೇಲೆಯೇ ಇದ್ದು, ತನ್ನ ಪ್ರಕಾಶ ಹಾಗೂ ಉಷ್ಣತೆಯಿಂದಲೇ ಸರ್ವರಿಗೂ ಲಾಭಕೊಡುತ್ತಿರುವನು, ಹಾಗೆ ಈ ಅಮರ ಪರಮೇಶ್ವರನೂ ಸಹ ಈ ಮೇಲಿನ ಮಂತ್ರಗಳಲ್ಲಿ ವರ್ಣಿಸಿರುವಂತೆಯೇ ಇರುವನು. ಸಕಲ ಬ್ರಹ್ಮಾಂಡಗಳ ಮೇಲೆ ಕುಳಿತು ತನ್ನ ನಿರಾಕಾರ ಶಕ್ತಿಯಿಂದ ಸಕಲ ಜೀವಿಗಳಿಗೆ ಲಾಭ ಕೊಡುತ್ತಿದ್ದಾನೆ ಹಾಗೂ ಸಕಲ ಬ್ರಹ್ಮಾಂಡಗಳನ್ನು ನಡೆಸುತ್ತಿದ್ದಾನೆ.

ತರ್ಕ :– ಮಹರ್ಷಿ ದಯಾನಂದರ ಅರ್ಥಾತ್ ಆರ್ಯ ಸಮಾಜದವರ ಅಭಿಪ್ರಾಯವೇನೆಂದರೆ, ಪರಮಾತ್ಮನು ಯಾವುದೇ ಒಂದು ನಿಗದಿತ ಸ್ಥಳದಲ್ಲಿಯಾಗಲೀ ಅಥವಾ ವಿಶೇಷವಾದ ಲೋಕದಲ್ಲಿಯಾಗಲೀ ಇರುವುದಿಲ್ಲ.

ಪ್ರಮಾಣ:– 'ಸತ್ಯಾರ್ಥ ಪ್ರಕಾಶ'ದ ಸಮುಲ್ಲಾಸ (ಅಧ್ಯಾಯ) 7ನೆಯ ಅಧ್ಯಾಯದ 148ನೇ ಪುಟದಲ್ಲಿದೆ. (ಆರ್ಯ ಸಾಹಿತ್ಯ ಪ್ರಚಾರ ಟ್ರಸ್ಟ್, 427, ದೇವಸ್ಥಾನದ ಬೀದಿ, ನಯಾ ಬಾಂಸ ನವದೆಹಲಿ–78ನೆಯ ಆವೃತ್ತಿ)

ಯಾರೋ ಒಬ್ಬರು ಪ್ರಶ್ನಿಸಿದರು :– ಈಶ್ವರನು ಸರ್ವವ್ಯಾಪಕನೇ ಅಥವಾ ಯಾವುದಾದರೂ ವಿಶೇಷ ಲೋಕದಲ್ಲಿ ನೆಲೆಸಿರುವನೇ?

ಉತ್ತರ (ಮಹರ್ಷಿ ದಯಾನಂದರ) :– ವ್ಯಾಪಕನಾಗಿದ್ದಾನೆ. ಏಕೆಂದರೆ ಅವನು ಪ್ರತ್ಯೇಕವಾದ ಲೋಕದಲ್ಲಿದ್ದಿದ್ದರೆ ಸರ್ವ ಅಂತರ್ಯಾಮಿ, ಸರ್ವಜ್ಞ, ಸೃಷ್ಟಿಕರ್ತ, ಸರ್ವರ ಪಾಲಕ, ಪ್ರಳಯಕರ್ತನಾಗಲು ಸಾಧ್ಯವಾಗುತ್ತಿರಲಿಲ್ಲ. ಅಪ್ರಾಪ್ತ ದೇಶದಲ್ಲಿ ಕರ್ತನ ಕ್ರಿಯೆಯು ಸಂಭವಿಸಲು ಸಾಧ್ಯವಿಲ್ಲ. (ಸತ್ಯಾರ್ಥ ಪ್ರಕಾಶದ ಲೇಖನದ ಸಮಾಪ್ತಿ)

ಪರಮಾತ್ಮನು ಯಾವುದೇ ಪ್ರತ್ಯೇಕ ದೇಶ ಅಥವಾ ವಿಶೇಷ ಸ್ಥಾನದಲ್ಲಿ ನೆಲೆಸಿರುವನೆಂದು ಮಹರ್ಷಿ ದಯಾನಂದರು ನಂಬಿರಲಿಲ್ಲ. ಮಹರ್ಷಿ ದಯಾನಂದರು ವೇದ ಜ್ಞಾನವನ್ನೇ ಸತ್ಯಜ್ಞಾನವೆಂದು ನಂಬಿದ್ದರು.

ಪರಮಾತ್ಮನು ಮೇಲಿನ ಲೋಕದಲ್ಲಿ ನೆಲೆಸಿರುವನೆಂದು ನೀವು ನಿಮ್ಮ ಕಣ್ಣಾರೆ ಅನೇಕ ವೇದಮಂತ್ರಗಳಲ್ಲಿ ಓದಿರುವಿರಿ. ಅವನು ಅಲ್ಲಿಂದ ನಡೆದು ಇಲ್ಲಿಯೂ ಪ್ರಕಟನಾಗುತ್ತಾನೆ. ಮಹರ್ಷಿ ದಯಾನಂದರು ಹಾಗೂ ಆರ್ಯ ಸಮಾಜದವರು ಪರಮಾತ್ಮನನ್ನು ನಿರಾಕಾರನೆಂದೇ ಭಾವಿಸುತ್ತಾರೆ.

ಪ್ರಮಾಣ:– 'ಸತ್ಯಾರ್ಥ ಪ್ರಕಾಶ'ದ ಸಮುಲ್ಲಾಸದ 9ನೇ ಅಧ್ಯಾಯದ 176ನೇ ಪುಟದಲ್ಲಿ 7ನೇ ಅಧ್ಯಾಯದ 149ನೇ ಪುಟದಲ್ಲಿ, 11ನೇ ಅಧ್ಯಾಯದ 251ನೇ ಪುಟದಲ್ಲಿ ಪರಮಾತ್ಮನು ನಿರಾಕಾರನೆಂದು ಹೇಳಲಾಗಿದೆ.

ಪ್ರಿಯ ಓದುಗರೇ! ಪರಮಾತ್ಮನು ಸಾಕಾರನೆಂದೂ, ಅವನು ಮಾನವನಂತೆಯೇ ಇರುವನೆಂದು ಅನೇಕ ವೇದಮಂತ್ರಗಳಲ್ಲಿ ಓದಿರುವಿರಿ. ಅವನು ಮೇಲಿನ ಲೋಕದಲ್ಲಿ ನೆಲೆಸುತ್ತಾನೆ, ಅಲ್ಲಿಂದ ನಡೆದು ಬರುತ್ತಾನೆ. ಪೃಥ್ವಿಮೇಲೆ ಪ್ರಕಟನಾಗುತ್ತಾನೆ. ದೃಢ ಭಕ್ತಿಯುಳ್ಳ ಪುಣ್ಯಾತ್ಮರಿಗೆ ಸಿಗುತ್ತಾನೆ. ಅವರಿಗೆ ತನ್ನ ಮುಖಕಮಲದಿಂದ ತತ್ವಜ್ಞಾನವನ್ನು ಬೋಧಿಸುತ್ತಾನೆ. ಕವಿಗಳಂತೆ ಆಚರಿಸುತ್ತಾನೆ. ಭೂಮಿ ಮೇಲೆ ಸಂಚರಿಸಿ ಪರಮಾತ್ಮ, ಉಚ್ಛ ಸ್ವರದಲ್ಲಿ ತನ್ನ

ಆಧ್ಯಾತ್ಮ ಜ್ಞಾನವನ್ನು ಹೇಳುತ್ತಾನೆ.

ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕದಲ್ಲಿಯೂ ಇದನ್ನು ಪ್ರಮಾಣೀಕರಿಸಲಾಗಿದೆ. ಪ್ರಿಯ ಓದುಗರೇ, ತಾವೇ ಸ್ವತಃ ಯಾರಿಗೆ ಎಷ್ಟು ಆಧ್ಯಾತ್ಮ ಜ್ಞಾನವಿತ್ತೆಂದು ನಿರ್ಧರಿಸಿ, ವಿಶೇಷವಾದ ಆಶ್ಚರ್ಯವೇನೆಂದರೆ, ವೇದಮಂತ್ರಗಳ ಅನುವಾದವು ಮಹರ್ಷಿ ದಯಾನಂದರು ಹಾಗೂ ಅವರ ಶಿಷ್ಯರುಗಳಾದ ಆರ್ಯ ಸಮಾಜದವರೇ ಮಾಡಿದ್ದಾರೆ. ಅದರಲ್ಲಿ ಅವರ ಅಭಿಪ್ರಾಯದಲ್ಲೇ ವಿರೋಧವಿದೆ.

ನಿವೇದನೆ:– ವೇದಮಂತ್ರಗಳ ಫೋಟೋಕಾಪಿಯನ್ನು ಇಲ್ಲಿ ನೀಡಿರುವ ಉದ್ದೇಶವೇನೆಂದರೆ, ಒಂದು ವೇಳೆ ಸಂತ ರಾಮ್‌ಪಾಲ್ ಮಹಾರಾಜರು, ಅನುವಾದಿಸಿ ಪುಸ್ತಕದಲ್ಲಿ ಮುದ್ರಿಸಿದ್ದಿದ್ದರೆ, ಅನ್ಯ ವ್ಯಕ್ತಿಗಳು ಸಂತ ರಾಮ್‌ಪಾಲ್‌ರಿಗೆ ಸಂಸ್ಕೃತ ಭಾಷೆಯ ಜ್ಞಾನವಿಲ್ಲ, ಆದ್ದರಿಂದ ಅವರ ಅನುವಾದಕಾರ್ಯದ ಮೇಲೆ ನಮಗೆ ವಿಶ್ವಾಸವಿಲ್ಲವೆಂದು ಹೇಳಿಬಿಡುತ್ತಿದ್ದರು. ಆದರೆ ಈಗ ಆ ಅನುಮಾನಕ್ಕೆ ಆಸ್ಪದವಿಲ್ಲ. ಸಂತ ರಾಮ್‌ಪಾಲ್ ದಾಸರು ಯಥಾರ್ಥವಾಗಿ ವೇದಮಂತ್ರಗಳನ್ನು ಅನುವಾದಿಸಿದ್ದಾರೆ ಎಂದು ಈಗ ದೃಢತೆ ಬರುವುದು.

ಸಂತ ರಾಮ್‌ಪಾಲ್ ಮಹಾರಾಜರು ಹೇಳಿದರು, ಈಗ ಸೃಷ್ಟಿ ರಚನೆಯ ಜ್ಞಾನವನ್ನು ನೀಡುತ್ತೇನೆ. ಇದನ್ನು ಸ್ವಯಂ ಪರಮೇಶ್ವರರೇ ತನ್ನ ಮೂಲಕ ರಚಿತವಾದ ಜಗತ್ತಿನ ಜ್ಞಾನವನ್ನು ತಿಳಿಸಿದ್ದಾರೆ.

❑❑❑

# "ಸಂಕ್ಷಿಪ್ತ ಸೃಷ್ಟಿಯ ರಚನೆ"

ಮೊಟ್ಟ ಮೊದಲು ಸತ್ಯ ಪುರುಷ ಒಬ್ಬರೇ ಇದ್ದರು. ಬೇರೆ ಯಾವ ಸೃಷ್ಟಿಯೂ ಆಗಿರಲಿಲ್ಲ. ಸರ್ವ ಪ್ರಥಮ ಪರಮೇಶ್ವರ ನಾಲ್ಕು ಅವಿನಾಶಿ ಲೋಕಗಳ ರಚನೆಯನ್ನು ವಚನ(ಶಬ್ದ)ದಿಂದ ಮಾಡಿದರು.

(1) ಅನಾಮಿ ಲೋಕ, ಅದನ್ನು ಅಕಹ್ ಲೋಕ ಎಂದೂ ಕರೆಯುತ್ತಾರೆ. (2)ಅಗಮ್ ಲೋಕ (3) ಅಲಖ್ ಲೋಕ (4) ಸತ್ಯಲೋಕ

ನಂತರ ಪರಮಾತ್ಮ ನಾಲ್ಕು ಲೋಕಗಳಲ್ಲಿ ನಾಲ್ಕು ರೂಪಗಳನ್ನು ಧರಿಸಿದರು. ಅವರು ನಾಲ್ಕು ಉಪಮಾತ್ಮಕ ಹೆಸರುಗಳಿಂದ ಪ್ರತ್ಯೇಕ ಲೋಕದಲ್ಲಿ ಪ್ರಸಿದ್ಧರಾದರು.

(1) ಅನಾಮಿಲೋಕದಲ್ಲಿ ಅನಾಮಿಪುರುಷ ಅಥವಾ ಅಕಹ್‌ಪುರುಷ

(2) ಅಗಮ್ ಲೋಕದಲ್ಲಿ ಅಗಮ್ ಪುರುಷ

(3) ಅಲಖ್ ಲೋಕದಲ್ಲಿ ಅಲಖ್ ಪುರುಷ

(4) ಸತ್ಯಲೋಕದಲ್ಲಿ ಸತ್ಯಪುರುಷ. ಹೀಗೆ ಉಪಮಾತ್ಮಕ ಹೆಸರುಗಳಿವೆ.

ನಂತರ ಪರಮಾತ್ಮನು ನಾಲ್ಕು ಲೋಕಗಳಲ್ಲಿ ತನ್ನ ವಚನದಿಂದ ಒಂದೊಂದು ಸಿಂಹಾಸನವನ್ನು ಮಾಡಿದನು. ಪ್ರತಿಯೊಂದು ಸಿಂಹಾಸನದ ಮೇಲೆ ಸಾಮ್ರಾಟನಂತೆ ಕಿರೀಟ ಮುಂತಾದವುಗಳನ್ನು ಧರಿಸಿ ವಿರಾಜಮಾನನಾದನು. ನಂತರ ಪರಮೇಶ್ವರನು ಸತ್ಯಲೋಕದಲ್ಲಿ ಉಳಿದೆಲ್ಲವನ್ನು ಸೃಷ್ಟಿಸಿದನು. ಒಂದು ಶಬ್ದದಿಂದ (ವಚನ) ಹದಿನಾರು ದ್ವೀಪಗಳನ್ನು ಮತ್ತು ಒಂದು ಮಾನಸರೋವರವನ್ನು ಸೃಷ್ಟಿಸಿದನು. ನಂತರ ಹದಿನಾರು ವಚನದಿಂದ ಹದಿನಾರು ಪುತ್ರರನ್ನು ಸೃಷ್ಟಿಸಿದನು. ಇವುಗಳಲ್ಲಿ ಅಚಿಂತ, ತೇಜ್, ಸಹಜದಾಸ್, ಜೋಗ್‌ಜೀತ್, ಕೂರ್ಮ, ಇಚ್ಛಾ ಧೈರ್ಯ ಮತ್ತು ಜ್ಞಾನಿ ಇವುಗಳ ಪಾತ್ರ ಮುಖ್ಯವಾಗಿತ್ತು.

ತನ್ನ ಪುತ್ರರಿಗೆ ಪಾಠ ಕಲಿಸಲು ಅರ್ಥಾತ್ ಸಮರ್ಥನಿಲ್ಲದೆ ಯಾವುದೇ ಕಾರ್ಯವು ಯಶಸ್ವಿಯಾಗುವುದಿಲ್ಲ. ಅವರ ಕೆಲಸ ಅವರಿಗೆ ಒಪ್ಪುತ್ತದೆ ಬೇರೆಯವರು ಮಾಡಿದರೆ ಮೂರ್ಖರೆನ್ನಿಸಿಕೊಳ್ಳುವರು.

ಸತ್ಯ ಪುರುಷನು ತನ್ನ ಪುತ್ರನಾದ ಅಚಿಂತನಿಗೆ ಹೀಗೆಂದನು–"ನೀನು ಸತ್ಯಲೋಕದಲ್ಲಿ ಬೇರೆ ಸೃಷ್ಟಿಯನ್ನು ಮಾಡು. ನಾನು ನಿನಗೆ ಸ್ವಲ್ಪ ಶಕ್ತಿಯನ್ನು ನೀಡಿದ್ದೇನೆ" ಅಚಿಂತನು ತನ್ನ ವಚನದಿಂದ ಅಕ್ಷರ ಪುರುಷನನ್ನು ಸೃಷ್ಟಿಸಿದನು. ಆಗ ಅಕ್ಷರಪುರುಷನೆಂಬ ಯುವಕನು ಸೃಷ್ಟಿಯಾದನು. ಅವನು ಮಾನಸರೋವರದಲ್ಲಿ ಸ್ನಾನ ಮಾಡಲು ಹೋದನು. ಆ ನೀರಿನಲ್ಲಿ ಈಜಾಡತೊಡಗಿದನು. ಸ್ವಲ್ಪ ಹೊತ್ತಿನಲ್ಲೇ ಅವನಿಗೆ ನಿದ್ದೆಯು ಆವರಿಸಿತು. ಅವನು ಸರೋವರದಲ್ಲಿ ತುಂಬಾ ಆಳಕ್ಕೆ ಇಳಿದನು. (ಸತ್ಯಲೋಕದಲ್ಲಿ ಅಮರ ಶರೀರವಿರುತ್ತದೆ. ಅಲ್ಲಿ ಶರೀರವು ಉಸಿರಾಟದ ಮೇಲೆ ಅವಲಂಬಿಸಿರುವುದಿಲ್ಲ) ತುಂಬಾ ಸಮಯದವರೆಗೆ ಅಕ್ಷರ ಪುರುಷನು ನೀರಿನಿಂದ ಹೊರಗೆ ಬರಲಿಲ್ಲ. ಹಾಗಾಗಿ ಅಚಿಂತನಿಗೆ ಸೃಷ್ಟಿಯ ರಚನೆ ಮಾಡಲು ಸಾಧ್ಯವಾಗಲಿಲ್ಲ. ಆಗ ಸತ್ಯ ಪುರುಷನು (ಪರಮ ಅಕ್ಷರ ಪುರುಷನು) ಮಾನಸರೋವರಕ್ಕೆ ಹೋಗಿ ಸ್ವಲ್ಪ ನೀರನ್ನು ತನ್ನ ಅಂಗೈಯಲ್ಲಿ ತೆಗೆದುಕೊಂಡನು. ತನ್ನ ವಚನದಿಂದ ಒಂದು ಮೊಟ್ಟೆಯನ್ನು ಸೃಷ್ಟಿಸಿದನು. ನಂತರ ತನ್ನ ವಚನದಿಂದ ಒಂದು ಆತ್ಮವನ್ನು ಸೃಷ್ಟಿಸಿ ಆ ಮೊಟ್ಟೆಯ ಒಳಗೆ ಅದನ್ನು ಪ್ರವೇಶಿಸಿದನು. ನಂತರ ಆ ಮೊಟ್ಟೆಯನ್ನು ನೀರಿನಲ್ಲಿ ಬಿಟ್ಟನು. ಆ ಮೊಟ್ಟೆಯು ನೀರಿನೊಳಗೆ ಚಲಿಸಿತು.

ಆಗ ಅದರ ಶಬ್ದದಿಂದ ಅಕ್ಷರ ಪುರುಷನ ನಿದ್ರಾಭಂಗವಾಯಿತು. ಯಾರು ತನ್ನನ್ನು ಎಚ್ಚರಿಸಿದವರು ಎಂದು ಅಕ್ಷರ ಪುರುಷನು ಕ್ರೋಧದಿಂದ ನೋಡಿದನು. ಆ ಕ್ರೋಧವು ಆ ಮೊಟ್ಟೆಗೆ ತಾಗಿ ಮೊಟ್ಟೆಯು ಒಡೆದು ಹೋಯಿತು. ಅದರೊಳಗಿಂದ ಒಬ್ಬ ತೇಜೋಮಯ ಯುವಕನು ಹೊರಬಂದನು. ಅವನ ಹೆಸರನ್ನು ಕ್ಷರ ಪುರುಷನೆಂದು ಕರೆಯಲಾಯಿತು. (ನಂತರದಲ್ಲಿ ಅವನೇ

ಕಾಲ ಪುರುಷನೆಂದು ಕರೆಯಲ್ಪಟ್ಟನು.) ಸತ್ಯ ಪುರುಷನು ಅವರಿಬ್ಬರನ್ನೂ ನೀರಿನಿಂದ ಹೊರಬರುವಂತೆ ಹೇಳಿದನು ಹಾಗೂ ಅಕ್ಷರ ಪುರುಷನನ್ನು ಕುರಿತು ಹೀಗೆಂದನು, 'ನೀನು ನಿದ್ದೆಯಲ್ಲಿದ್ದೆ, ನಿನ್ನನ್ನು ನಿದ್ದೆಯಿಂದ ಎಬ್ಬಿಸಲು ಇವೆಲ್ಲವನ್ನು ಮಾಡಬೇಕಾಯಿತು' ನಂತರ ಇವರಿಬ್ಬರನ್ನೂ ಅಚಿಂತನ ಲೋಕದಲ್ಲಿರುವಂತೆ ಹೇಳಿದನು.

ಸ್ವಲ್ಪ ಸಮಯದ ನಂತರ (ಯಾರನ್ನು ಜ್ಯೋತಿ ನಿರಂಜನ ಕಾಲ ಎಂದು ಕರೆಯುತ್ತಾರೆಯೋ) ಆ ಕ್ಷರ ಪುರುಷನು ತನ್ನ ಮನಸ್ಸಿನಲ್ಲೇ ಯೋಚಿಸಿದನು. 'ನಾವು ಮೂವರು ಒಂದು ಲೋಕದಲ್ಲಿ ಇದ್ದೇವೆ. ನನ್ನ ಇತರ ಸಹೋದರರು ಒಂದೊಂದು ದ್ವೀಪದಲ್ಲಿದ್ದಾರೆ'. ಹೀಗೆ ಯೋಚನೆ ಮಾಡಿದ್ದೆ ತಡ, ಅವನು ಇನ್ನೊಂದು ದ್ವೀಪವನ್ನು ಪಡೆಯಲು ತಪಸ್ಸನ್ನು ಪ್ರಾರಂಭಿಸಿದನು.

ಇದಕ್ಕಿಂತ ಮೊದಲು ಸತ್ಯಪುರುಷನು ತನ್ನ ಪುತ್ರನಾದ ಅಚಿಂತನಿಗೆ, 'ನೀನು ಸೃಷ್ಟಿ ರಚನೆಯನ್ನು ಮಾಡಲು ಸಾಧ್ಯವಿಲ್ಲ. ನಾನು ನಿನಗೆ ಇದರ ಅರಿವಾಗಲೆಂದೇ ಅನ್ಯ ರಚನೆ ಮಾಡಲು ಹೇಳಿದೆ. ಆದರೆ ನೀನು ಅಕ್ಷರ ಪುರುಷನನ್ನು ಸಹ ಎಬ್ಬಿಸಲಿಲ್ಲ. ಇನ್ನು ಮುಂದೆ ಇಂಥ ಯಾವ ಪ್ರಯತ್ನವನ್ನೂ ಮಾಡಬೇಡ. ನನ್ನ ಶಬ್ದಶಕ್ತಿಯಿಂದಲೇ ಸಮಸ್ತ ಸೃಷ್ಟಿಯನ್ನು ನಾನೇ ರಚಿಸುವೆ' ಎಂದು ಹೇಳಿದನು.

ಸತ್ಯ ಪುರುಷನು ಸತ್ಯಲೋಕದಲ್ಲಿ ಅಸಂಖ್ಯ ಲೋಕಗಳನ್ನು ಸೃಷ್ಟಿಸಿದನು. ಪ್ರತಿಯೊಂದರಲ್ಲೂ ತನ್ನ ವಚನದಿಂದ (ಶಬ್ದ) ಅನೇಕ ಆತ್ಮಗಳನ್ನು ಸೃಷ್ಟಿಸಿದನು. ಆ ಲೋಕಗಳೆಲ್ಲಾ ಸತ್ಯ ಪುರುಷನ ಸಿಂಹಾಸನದ ಅಕ್ಕ-ಪಕ್ಕ ಇದ್ದವು. ಇವುಗಳಲ್ಲಿ ಕೇವಲ ನರ ಹಂಸಗಳಿದ್ದವು. (ಸತ್ಯಲೋಕದಲ್ಲಿ ಮನುಷ್ಯರನ್ನು ಹಂಸಗಳೆಂದು ಕರೆಯುತ್ತಾರೆ) ಇವುಗಳಿಗೆ ಪರಮೇಶ್ವರನು ಶಕ್ತಿಯನ್ನು ನೀಡಿದ್ದನು. ಹಾಗಾಗಿ ಅವುಗಳು ತನ್ನ ಕುಟುಂಬವನ್ನು ವಚನದಿಂದ ಸೃಷ್ಟಿ ಮಾಡಬಲ್ಲವರಾಗಿದ್ದವು. ಅವರು ಕೇವಲ ಇಬ್ಬರು ಪುತ್ರರನ್ನು ಸೃಷ್ಟಿ ಮಾಡಬಹುದು.

ಕ್ಷರ ಪುರುಷನು (ಜ್ಯೋತಿ ನಿರಂಜನ) ತಪಸ್ಸನ್ನು ಮಾಡಲು ಪ್ರಾರಂಭಿಸಿದನು. ಅವನು ಎಪ್ಪತ್ತು ಯುಗಗಳವರೆಗೆ ತಪಸ್ಸನ್ನು ಮಾಡಿದನು. ಸತ್ಯ ಪುರುಷನು ಕ್ಷರ ಪುರುಷನನ್ನು ಹೀಗೆಂದು ಕೇಳಿದನು. 'ನೀನು ಏಕೆ ತಪಸ್ಸನ್ನು ಮಾಡುತ್ತಿರುವೆ?' ಆಗ ಕ್ಷರ ಪುರುಷನು, 'ನನಗೆ ಈ ಜಾಗವು ಬಹಳ ಚಿಕ್ಕದು. ನನಗೆ ಇನ್ನೊಂದು ಜಾಗವು ಬೇಕಾಗಿದೆ' ಎಂದು ಹೇಳಿದನು. ಪರಮೇಶ್ವರನು (ಸತ್ಯ ಪುರುಷನು) ಅವನಿಗೆ ಎಪ್ಪತ್ತು ಯುಗಗಳ ತಪಸ್ಸಿನ ಪ್ರತಿಫಲವಾಗಿ ಇಪ್ಪತ್ತೊಂದು ಬ್ರಹ್ಮಾಂಡಗಳನ್ನು ನೀಡಿದನು. ಅವು ಸತ್ಯಲೋಕದ ಹೊರಗಿನ ಕ್ಷೇತ್ರದಲ್ಲಿ ಇದ್ದವು.

ಜ್ಯೋತಿ ನಿರಂಜನ (ಕ್ಷರ ಪುರುಷ)ನು ಈ ಬ್ರಹ್ಮಾಂಡಗಳಲ್ಲಿ ಇನ್ನೂ ಬೇರೆ ಸೃಷ್ಟಿಯಾಗಬೇಕೆಂದು ಚಿಂತಿಸಿದನು. ಅದಕ್ಕಾಗಿ ಅವನು ಮತ್ತೆ ಎಪ್ಪತ್ತು ಯುಗಗಳ ಕಾಲ ತಪಸ್ಸನ್ನು ಮಾಡಿದನು. ಆಗ ನಿನಗೆ ಇನ್ನೇನು ಬೇಕು? ಎಂದು ಸತ್ಯ ಪುರುಷನು ಕೇಳಿದನು. ಆಗ ಕ್ಷರ ಪುರುಷನು ಸೃಷ್ಟಿ ರಚನೆ ಮಾಡಲು ಸಾಮಗ್ರಿಗಳನ್ನು ದಯಪಾಲಿಸಿ ಎಂದು ಬೇಡಿದನು. ಸತ್ಯ ಪುರುಷನು ಅವನಿಗೆ ಐದು ತತ್ವಗಳನ್ನು (ನೀರು, ಪೃಥ್ವಿ, ಅಗ್ನಿ, ವಾಯು ಮತ್ತು ಆಕಾಶ) ಹಾಗೂ ಮೂರು ಗುಣಗಳನ್ನು (ರಜೋಗುಣ, ಸತ್ವಗುಣ, ತಮೋಗುಣ) ನೀಡಿದನು. ಹಾಗೂ ಇವುಗಳಿಂದ ಸೃಷ್ಟಿರಚನೆ ಮಾಡಲು ತಿಳಿಸಿದನು.

ಕ್ಷರ ಪುರುಷನು ಮತ್ತೆ ತಪಸ್ಸನ್ನು ಮಾಡಲು ಪ್ರಾರಂಭಿಸಿದನು. ಯಾವಾಗ ಅರವತ್ತನಾಲ್ಕು ಯುಗಗಳು ಕಳೆದವೋ, ಆಗ ಸತ್ಯ ಪುರುಷನು ಇನ್ನೂ ಏನು ಬೇಕು ಎಂದು ಕೇಳಿದನು. ಆಗ ಕ್ಷರ ಪುರುಷನು (ಜ್ಯೋತಿ ನಿರಂಜನ) ನನಗೆ ಕೆಲವು ಆತ್ಮಗಳನ್ನು ನೀಡಿ. ನನಗೆ ಒಬ್ಬನೇ ಇರಲು ಮನಸ್ಸಾಗುತ್ತಿಲ್ಲ ಎಂದು ಹೇಳಿದನು. ಕ್ಷರ ಪುರುಷನಿಗೆ ಹೀಗೆ ಆತ್ಮಗಳು ಸಿಕ್ಕವು. ಮುಂದೆ ಓದಿ :-

## "ನಾವು ಕಾಲನ ಲೋಕಕ್ಕೆ ಹೇಗೆ ಬಂದೆವು?"

ಯಾವಾಗ ಕ್ಷರ ಪುರುಷನು (ಜ್ಯೋತಿನಿರಂಜನನು) ಒಂದು ಕಾಲಿನ ಮೇಲೆ ನಿಂತು ತಪಸ್ಸು ಮಾಡುತ್ತಿದ್ದನೋ, ಆಗ ಆತ್ಮಗಳಾದ ನಾವೆಲ್ಲರೂ ಆ ಕ್ಷರ ಪುರುಷನ ಮೇಲೆ ಆಕರ್ಷಿತವಾದೆವು. ಹೇಗೆ ಯುವಕ ಯುವತಿಯರು ಯಾರಾದರೂ ನಟ-ನಟಿಯರನ್ನು ಕಂಡು ಆಕರ್ಷಿತರಾಗುತ್ತಾರೆ. ಏನು ಕೊಳ್ಳುವುದಿಲ್ಲ ಏನು ಕೊಡುವುದಿಲ್ಲ. ವ್ಯರ್ಥವಾಗಿ ಇಷ್ಟಪಡಲಾರಂಭಿಸುತ್ತಾರೆ. ನಟ-ನಟಿಯರು ತಮ್ಮ ಸ್ವಂತ ಸಂಪಾದನೆಗಾಗಿ ಹಾಡುತ್ತಾರೆ, ಕುಣಿಯುತ್ತಾರೆ. ಆದರೆ ಯುವ ಪೀಳಿಗೆ ಅದನ್ನು ನೋಡಿ ತಮ್ಮ ಹಣವನ್ನು ಹಾಳು ಮಾಡಿಕೊಳ್ಳುತ್ತದೆ. ಅದೇ ರೀತಿ ನಾವು ಪರಮಪಿತನಾದ ಸತ್ಯಪುರುಷನನ್ನು ಬಿಟ್ಟು ಕಾಲ ಪುರುಷನನ್ನು (ಕ್ಷರ ಪುರುಷ) ಹೃದಯಪೂರ್ವಕವಾಗಿ ಇಷ್ಟಪಡಲು ಹತ್ತಿದವು. ನಮಗೆ ಎಲ್ಲ ಸುಖ, ಸೌಲಭ್ಯಗಳನ್ನು ನೀಡುತ್ತಿರುವ ಪರಮೇಶ್ವರನನ್ನು ಬಿಟ್ಟು. ಈ ನಕಲಿ ಡ್ರಾಮ ಮಾಡುವ ಕಾಲ ಪುರುಷನನ್ನು ಇಷ್ಟಪಡಲಾರಂಭಿಸಿದೆವು. ಸತ್ಯಪುರುಷನು ನಡುನಡುವೆ 'ಹೇ ಮಕ್ಕಳೇ, ಈ ಕಾಲನ ಕ್ರಿಯೆಯನ್ನು ನೋಡಬೇಡಿ' ನೀವು ಆರಾಮವಾಗಿರಿ ಎಂದು ಬಹಳಷ್ಟು ಬಾರಿ ಆಕಾಶವಾಣಿಯ ಮೂಲಕ ತಿಳಿಸುತ್ತಾನೆ. ಆದರೆ ನಾವು ಮೇಲಿನಿಂದ ಎಚ್ಚೆತ್ತುಕೊಂಡರೂ ಸಹ ಒಳಗೊಳಗೆ ಕ್ಷರಪುರುಷನನ್ನು ಇಷ್ಟಪಡತೊಡಗಿದೆವು. ಪರಮೇಶ್ವರನಂತು ಅಂತರ್ಯಾಮಿಯಾಗಿದ್ದಾನೆ. ಇವರೆಲ್ಲಾ ಇಲ್ಲಿರಲು ಯೋಗ್ಯರಲ್ಲ ಎಂದೂ ಅವನಿಗೆ ತಿಳಿಯಿತು.

ಕಾಲಪುರುಷ (ಕ್ಷರ ಪುರುಷ=ಜ್ಯೋತಿ ನಿರಂಜನ) ನು ಯಾವಾಗ ಎರಡು ಬಾರಿ ತಪಸ್ಸನ್ನು ಆಚರಿಸಿ ಫಲವನ್ನು ಪಡೆದನೋ ಆಗ ಕೆಲವು ಜೀವಾತ್ಮಗಳು ಸಹ ನನ್ನ ಬಳಿ ಇರಬೇಕು ಎಂದು ಯೋಚಿಸಿದನು. ಏಕಾಂಗಿ ಮನಸ್ಸು ರುಚಿಸುತ್ತಿಲ್ಲ. ಆದ್ದರಿಂದ ಜೀವಾತ್ಮಗಳ ಪ್ರಾಪ್ತಿಗಾಗಿ ತಪಸ್ಸನ್ನು ಮಾಡಲು ಪ್ರಾರಂಭಿಸಿದನು. 64 ಯುಗಗಳವರೆಗೆ ತಪಸ್ಸನ್ನು ಆಚರಿಸಿದ ನಂತರ ಪರಮೇಶ್ವರನು 'ಹೇ ಜ್ಯೋತಿ ನಿರಂಜನ! ಈಗ ಏಕೆ ತಪಸ್ಸನ್ನು ಮಾಡುತ್ತಿರುವೆ' ಎಂದು ಕೇಳಿದನು. ಆಗ ಕ್ಷರಪುರುಷನು ಕೆಲವು ಆತ್ಮಗಳನ್ನು ಪ್ರದಾನ ಮಾಡು, ನನಗೆ ಒಬ್ಬನೇ ಇರಲು ಮನಸ್ಸಾಗುತ್ತಿಲ್ಲ' ಎಂದು ಹೇಳಿದನು. ಆಗ ಸತ್ಯುಪುರಷನು, 'ನಿನ್ನ ತಪಸ್ಸಿನ ಬದಲಾಗಿ ನಾನು ಇನ್ನೂ ಕೆಲವು ಬ್ರಹ್ಮಾಂಡಗಳನ್ನು ನೀಡುತ್ತೇನೆ. ಆದರೆ ನಾನು ನನ್ನ ಆತ್ಮಗಳನ್ನು ನೀಡುವುದಿಲ್ಲ. ಏಕೆಂದರೆ ಇವು ನನ್ನ ಶರೀರದಿಂದ ಹುಟ್ಟಿವೆ. ಹಾಗೊಂದು ವೇಳೆ ಇವುಗಳೇ ಸ್ವತಃ ಹೋಗಲು ಇಚ್ಛಿಸಿದರೆ ಹೋಗಬಹುದು ಎಂದನು. ಯುವ ಕವಿರ್ (ಸಮರ್ಥ ಕಬೀರ)ರ ವಚನವನ್ನು ಕೇಳಿ ಜ್ಯೋತಿ ನಿರಂಜನನು ನಮ್ಮ ಬಳಿ ಬಂದನು. ನಾವೆಲ್ಲಾ ಹಂಸಾತ್ಮಗಳು ಮೊದಲಿನಿಂದಲೂ ಅವನ ಮೇಲೆ ಆಕರ್ಷಿತರಾಗಿದ್ದೆವು.

ಹಾಗಾಗಿ ಆ ಎಲ್ಲಾ ಹಂಸಗಳು ಅವನನ್ನು ನಾಲ್ಕು ಕಡೆಯಿಂದ ಸುತ್ತುವರೆದವು. ಆಗ ಜ್ಯೋತಿ ನಿರಂಜನನು ಹೀಗೆಂದನು, 'ನಾನು ತಂದೆಯಿಂದ ಇಪ್ಪತ್ತೊಂದು ಬೇರೆ ಬ್ರಹ್ಮಾಂಡಗಳನ್ನು ಪಡೆದಿದ್ದೇನೆ. ಅಲ್ಲಿ ಬಗೆ-ಬಗೆಯ ರಮಣೀಯ ಸ್ಥಳಗಳಿವೆ. ನೀವು ನನ್ನ ಜೊತೆ ಬರುವಿರಾ?' ಎಂದು ಕೇಳಿದನು. ಆಗ ಈ 21 ಬ್ರಹ್ಮಾಂಡದಲ್ಲಿ ಕಷ್ಟ ಅನುಭವಿಸುತ್ತಿರುವವರು 'ನಾವೆಲ್ಲಾ ಸಿದ್ಧರಿದ್ದೇವೆ' ಎಂದು ಹೇಳಿದವು. ಆದರೆ ತಂದೆ ಆಜ್ಞೆ ನೀಡಿದರೆ ಆಗ ಕ್ಷರ ಪುರುಷ (ಕಾಲ)ನು ಪೂರ್ಣ ಬ್ರಹ್ಮ ಮಹಾನ್ ಕವೀರ್ (ಸಮರ್ಥ ಕಬೀರ) ಪ್ರಭುವಿನ ಬಳಿ ಹೋಗಿ ವಿಷಯವನ್ನೆಲ್ಲಾ ಹೇಳಿದನು. ಆಗ ಕವಿರಗ್ನಿಯು (ಕಬೀರ ಪರಮೇಶ್ವರನು) ಹೀಗೆಂದನು, "ನನ್ನ ಮುಂದೆ ಯಾರು ಒಪ್ಪಿಗೆ ಸೂಚಿಸುತ್ತಾರೋ, ಅವರಿಗೆ ನಾನು ಆಜ್ಞಾಪಿಸುತ್ತೇನೆ". ಕ್ಷರ ಪುರುಷ ಹಾಗು ಪರಮ ಅಕ್ಷರ ಪುರುಷ" (ಕವಿರ್‌ಮಿತೌಜಾ) ಇವರಿಬ್ಬರೂ ಎಲ್ಲಾ ಹಂಸಾತ್ಮಗಳ ಬಳಿ ಬಂದರು.

ಆಗ ಯಾವ ಹಂಸಾತ್ಮ ಬ್ರಹ್ಮನ ಜೊತೆ ಹೋಗಲು ಇಚ್ಚಿಸುವುದೋ ಅದು ತನ್ನ ಕೈಯನ್ನು ಮೇಲೆತ್ತಿ ಒಪ್ಪಿಗೆ ಸೂಚಿಸಬೇಕೆಂದು ಸತ್ಯ ಕವಿರ್ದೇವನು ಹೇಳಿದನು. ಆಗ ತಮ್ಮ ತಂದೆಯ ಮುಂದೆ ಹಾಗೆ ಮಾಡಲು ಯಾರಿಗೂ ಧೈರ್ಯವಾಗಲಿಲ್ಲ. ಯಾವ ಆತ್ಮವೂ ಒಪ್ಪಿಗೆ ಸೂಚಿಸಲಿಲ್ಲ. ಬಹಳ ಸಮಯದವರೆಗೆ ನಿಃಶಬ್ದ ಆವರಿಸಿತು. ಸ್ವಲ್ಪ ಸಮಯದ ನಂತರ ಒಂದು ಹಂಸವು ಧೈರ್ಯ

ಮಾಡಿ, 'ತಂದೆಯೇ, ನಾನು ಹೋಗಲು ಇಚ್ಛಿಸುವೆ' ಎಂದು ಹೇಳಿತು. ನಂತರ ಅದನ್ನು ನೋಡಿ (ಇಂದು ಕಾಲ ಬ್ರಹ್ಮನ 21 ಬ್ರಹ್ಮಾಂಡಗಳಲ್ಲಿ ಸಿಕ್ಕಿಕೊಂಡಿದ್ದ) ಎಲ್ಲಾ ಹಂಸಾತ್ಮಗಳು ಒಪ್ಪಿಗೆಯನ್ನು ಸೂಚಿಸಿದವು. ಆಗ ಪರಮೇಶ್ವರರು ಜ್ಯೋತಿ ನಿರಂಜನನಿಗೆ ಹೀಗೆಂದರು, 'ನೀನು ನಿನ್ನ ಸ್ಥಾನಕ್ಕೆ ಹೊರಟು ಹೋಗು. ನಿನ್ನ ಜೊತೆ ಬರಲು ಯಾವ ಹಂಸಾತ್ಮಗಳು ಒಪ್ಪಿಗೆ ಸೂಚಿಸಿವೆಯೋ ಅವನ್ನೆಲ್ಲ ನಿನ್ನ ಜೊತೆ ಕಳುಹಿಸಿಕೊಡುತ್ತೇನೆ'. ಆಗ ಜ್ಯೋತಿ ನಿರಂಜನನು ತನ್ನ 21 ಬ್ರಹ್ಮಾಂಡಕ್ಕೆ ಹೊರಟು ಹೋದನು. ಅಲ್ಲಿಯವರೆಗೆ ಈ 21 ಬ್ರಹ್ಮಾಂಡಗಳು ಸತ್ಯಲೋಕದಲ್ಲೇ ಇದ್ದವು.

ಇದಾದ ನಂತರ ಪೂರ್ಣ ಬ್ರಹ್ಮನು ಸರ್ವ ಪ್ರಥಮವಾಗಿ ಒಪ್ಪಿಗೆಯನ್ನು ಸೂಚಿಸಿದ ಹಂಸಾತ್ಮಗೆ ಹುಡುಗಿಯ ರೂಪವನ್ನು ಕೊಟ್ಟನು. ಆದರೆ ಸ್ತ್ರೀಯ ಇಂದ್ರಿಯವನ್ನು ರಚಿಸಲಿಲ್ಲ ಹಾಗು ಎಲ್ಲಾ ಆತ್ಮಗಳನ್ನು (ಜ್ಯೋತಿ ನಿರಂಜನ (ಬ್ರಹ್ಮ)ನ ಜೊತೆ ಹೋಗಲು ಸಹಮತವನ್ನು ನೀಡಿದ) ಆ ಹುಡುಗಿಯ ಶರೀರದಲ್ಲಿ ಪ್ರವೇಶಿಸಿದನು. ಹಾಗೂ ಅವಳ ಹೆಸರನ್ನು ಆಷ್ಟ್ರಾ (ಆದಿ ಮಾಯ/ಪ್ರಕೃತಿದೇವಿ/ದುರ್ಗೆ) ಎಂದು ಇಟ್ಟನು. ಹಾಗೂ ಸತ್ಯ ಪುರುಷನು ಅವಳನ್ನು ಕುರಿತು ಹೀಗೆಂದನು, "ಹೇ ಪುತ್ರಿ! ನಾನು ನಿನಗೆ ಶಬ್ದ ಶಕ್ತಿಯನ್ನು ಪ್ರಧಾನಿಸಿದ್ದೇನೆ. ಎಷ್ಟು ಜೀವ ಬ್ರಹ್ಮ ಹೇಳುವನೊ ಅಷ್ಟು ಸೃಷ್ಟಿ ಮಾಡು." ಪೂರ್ಣ ಬ್ರಹ್ಮ ಕವಿರ್ದೇವ (ಕಬೀರ ಸಾಹೇಬ)ನು ತನ್ನ ಪುತ್ರನಾದ ಸಹಜದಾಸನ ಮೂಲಕ ಪ್ರಕೃತಿಯನ್ನು ಕ್ಷರ ಪುರುಷನ ಬಳಿಗೆ ಕಳುಹಿಸಿಕೊಟ್ಟನು. ಸಹಜದಾಸನು ಜ್ಯೋತಿ ನಿರಂಜನನಿಗೆ ಹೀಗೆಂದನು, ನಿಮ್ಮ ಜೊತೆ ಹೋಗಲು ಸಮ್ಮತಿಸಿದ ಎಲ್ಲಾ ಆತ್ಮಗಳನ್ನು 'ತಂದೆಯು ಈ ಸಹೋದರಿಯ ಶರೀರದಲ್ಲಿ ಎಲ್ಲಾ ಆತ್ಮಗಳನ್ನು ಪ್ರವೇಶಿಸಿದ್ದಾನೆ. ಇವಳಿಗೆ ವಚನ ಶಕ್ತಿಯನ್ನು ನೀಡಿದ್ದಾನೆ. ನೀವು ಎಷ್ಟು ಜೀವಿಗಳನ್ನು ಸೃಷ್ಟಿಸಲು ಬಯಸುವಿರೋ, ಅಷ್ಟು ಜೀವಿಗಳನ್ನು ಪ್ರಕೃತಿಯು ತನ್ನ ಶಬ್ದದಿಂದ ಸೃಷ್ಟಿಸುತ್ತಾಳೆ". ಇಷ್ಟು ಹೇಳಿ ಸಹಜದಾಸನು ತನ್ನ ದ್ವೀಪಕ್ಕೆ ಹೊರಟು ಹೋದನು.

ಯುವತಿಯಾದ ಕಾರಣ ಆ ಹುಡುಗಿಯು ತುಂಬಾ ಸುಂದರವಾಗಿದ್ದಳು. ಬ್ರಹ್ಮನಲ್ಲಿ ವಿಷಯ ವಿಕಾರವು ಜಾಗ್ರೃತವಾಯಿತು. ಪ್ರಕೃತಿ ದೇವಿಯ ಜೊತೆ ಅಭದ್ರ ರೀತಿಯಲ್ಲಿ ವರ್ತಿಸಿದನು. ಆಗ ದುರ್ಗೆಯು, "ಹೇ ಜ್ಯೋತಿ ನಿರಂಜನ, ನನ್ನ ಬಳಿ ತಂದೆಯು ನೀಡಿರುವ ಶಬ್ದ ಶಕ್ತಿಯಿದೆ. ನೀವು ಎಷ್ಟು ಜೀವಿಗಳನ್ನು ಸೃಷ್ಟಿಸಲು ಹೇಳಿರುವಿರೋ ಅಷ್ಟನ್ನು ನಾನು ವಚನದಿಂದ ಸೃಷ್ಟಿಸಬಲ್ಲೆ. ತಾವು ಮೈಥುನ ಕ್ರಿಯೆಯ ಹೊಸ ಪರಂಪರೆಯನ್ನು ಪ್ರಾರಂಭ ಮಾಡಬಾರದೆಂದಳು. ನೀವು ಸಹ ಆ ತಂದೆಯ ಶಬ್ದದಿಂದ ಮೊಟ್ಟೆಯಿಂದ ಹುಟ್ಟಿರುವಿರಿ. ನಾನು ಸಹ ಆ ಪರಮಪಿತನ ವಚನದಿಂದ ನಂತರದಲ್ಲಿ ಹುಟ್ಟಿದ್ದೇನೆ. ನೀವು ನನ್ನ ಅಣ್ಣ ಅಣ್ಣ-ತಂಗಿಯ ಈ ಸಂಯೋಗವು ಮಹಾಪಾಪಕ್ಕೆ ಕಾರಣವಾಗುವುದು." ಆದರೆ ಜ್ಯೋತಿ ನಿರಂಜನನು ಪ್ರಕೃತಿ ದೇವಿಯ ಒಂದೂ ಮಾತನ್ನು ಕೇಳಲಿಲ್ಲ ಹಾಗು ತನ್ನ ಶಬ್ದ ಶಕ್ತಿಯ ಮೂಲಕ ಪ್ರಕೃತಿಗೆ ಉಗುರಿನ ಮೂಲಕ ಸ್ತ್ರೀ ಇಂದ್ರಿಯನ್ನೂ ಪ್ರಕೃತಿಗೆ ಸೃಷ್ಟಿಸಿದನು ಹಾಗು ಬಲಾತ್ಕಾರಮಾಡಲು ಮುಂದಾದ, ಆಗ ಪ್ರಕೃತಿ ದೇವಿಯು ತನ್ನ ಮಾನ ರಕ್ಷಣೆಗೆ ಅನ್ಯ ಮಾರ್ಗ ಕಾಣದೆ ಸೂಕ್ಷ್ಮರೂಪ ಧರಿಸಿ ದುರ್ಗೆಯು ಜ್ಯೋತಿ ನಿರಂಜನನ ತೆರೆದ ಬಾಯಿಯ ಮೂಲಕ ಹೊಟ್ಟೆಯನ್ನು ಪ್ರವೇಶ ಮಾಡಿ ಪೂರ್ಣ ಬ್ರಹ್ಮನಾದ ಕವೀರ್‌ದೇವನನ್ನು ತನ್ನ ರಕ್ಷಣೆ ಮಾಡಬೇಕೆಂದು ಪ್ರಾರ್ಥಿಸಿದಳು.

ಅದೇ ಸಮಯದಲ್ಲಿ ಕವಿರ್ದೇವನು ತನ್ನ ಪುತ್ರನಾದ ಯೋಗಸಂತಾಯನ ಅಂದರೆ ಜೋಗ್‌ಜೀತನ ರೂಪ ಧರಿಸಿ ಅಲ್ಲಿ ಪ್ರತ್ಯಕ್ಷನಾದನು. ಹಾಗೂ ಆ ಕನ್ಯೆಯನ್ನು ಬ್ರಹ್ಮನ ಹೊಟ್ಟೆಯಿಂದ ಹೊರತೆಗೆದು ಹೀಗೆಂದು ಹೇಳಿದನು, "ಹೇ ಜ್ಯೋತಿ ನಿರಂಜನ! ಇಂದಿನಿಂದ ನಿನ್ನ ಹೆಸರು ಕಾಲ ಎಂದಿರುವುದು. ನಿನ್ನ ಜನ್ಮ ಮರಣ ಆಗುತ್ತಿರುವುದು. ಆದ್ದರಿಂದ ನಿನ್ನ ಹೆಸರು ಕ್ಷರ ಪುರುಷ ಎಂದಾಗುತ್ತದೆ ಹಾಗೂ ಒಂದು ಲಕ್ಷ ಮಾನವ ಶರೀರಧಾರಿ ಜೀವಿಗಳನ್ನು ಪ್ರತಿದಿನವು ನೀನು ತಿನ್ನುವೆ. ಹಾಗೂ ಒಂದು ಕಾಲು ಲಕ್ಷ ಜೀವಿಗಳನ್ನು ಸೃಷ್ಟಿಸುವೆ. ನಿಮ್ಮಿಬ್ಬರನ್ನೂ

ಇಪ್ಪತ್ತೊಂದು ಬ್ರಹ್ಮಾಂಡಗಳೊಂದಿಗೆ ಹೊರಹಾಕಲಾಗುತ್ತದೆ." ಇಷ್ಟನ್ನು ಹೇಳುತ್ತಿದ್ದಂತೆಯೇ ಇಪ್ಪತ್ತೊಂದು ಬ್ರಹ್ಮಾಂಡಗಳು ವಿಮಾನದಂತೆ ನಡೆದವು. ಸಹಜದಾಸನ ದ್ವೀಪದ ಹತ್ತಿರದಿಂದ ಹಾದು ಹೋಗಿ ಸತ್ಯಲೋಕದಿಂದ ಹದಿನಾರು ಶಂಖ ಕೋಸ (ಒಂದು ಕೋಸ ಸುಮಾರು 3 ಕಿ.ಮೀ. ಆಗುತ್ತದೆ) ದೂರದವರೆಗೆ ಹೋಗಿ ನಿಂತವು.

ವಿಶೇಷ ವಿವರಣೆ:- ಈವರೆಗೆ ಮೂರು ಶಕ್ತಿಯ ವಿವರಣೆ ಬಂದಿದೆ

(1) ಉಪಮಾತ್ಮಕ ಹೆಸರಿನಿಂದ ಗುರುತಿಸಲ್ಪಡುವ ಪೂರ್ಣಬ್ರಹ್ಮನು ಸತ್ಯಪುರುಷ, ಅಕಾಲ್‌ಪುರುಷ, ಶಬ್ದಸ್ವರೂಪಿ ರಾಮ, ಪರಮ ಅಕ್ಷರ ಬ್ರಹ್ಮ, ಪರಮ ಅಕ್ಷರ ಪುರುಷ ಎಂಬ ಹೆಸರುಗಳಿಂದ ಗುರುತಿಸಲ್ಪಡುತ್ತಾನೆ. ಇವನು ಅಸಂಖ್ಯ ಬ್ರಹ್ಮಾಂಡಗಳ ಒಡೆಯನು, ಪೂರ್ಣ ಬ್ರಹ್ಮನು ವಾಸ್ತವದಲ್ಲಿ ಅವಿನಾಶಿ.

(2) ಅಕ್ಷರ ಪುರುಷನನ್ನು ಪರಬ್ರಹ್ಮನೆಂದು ಕರೆಯಲಾಗುತ್ತದೆ. ವಾಸ್ತವದಲ್ಲಿ ಇವನು ಅವಿನಾಶಿಯಲ್ಲ. ಇವನು ಏಳು ಶಂಖ ಬ್ರಹ್ಮಾಂಡಗಳಿಗೆ ಒಡೆಯ.

(3) ಜ್ಯೋತಿ ನಿರಂಜನನ್ನು ಬ್ರಹ್ಮ, ಕಾಲ, ಕೈಲ, ಕ್ಷರ ಪುರುಷ, ಧರ್ಮರಾಯ ಮುಂತಾದ ಹೆಸರುಗಳಿಂದ ಗುರುತಿಸಲ್ಪಡುತ್ತಾನೆ. ಇವನು ಕೇವಲ ಇಪ್ಪತ್ತೊಂದು ಬ್ರಹ್ಮಾಂಡಗಳಿಗೆ ಒಡೆಯನು. ಮುಂದೆ ಇದೇ ಬ್ರಹ್ಮನ (ಕಾಲನ) ಸೃಷ್ಟಿಯ ಒಂದು ಬ್ರಹ್ಮಾಂಡದ ಪರಿಚಯವನ್ನು ನೀಡಲಾಗುವುದು. ಅದರಲ್ಲಿ ಇನ್ನೂ ಮೂರು ಹೆಸರುಗಳನ್ನು ನೀವು ಓದುವಿರಿ. ಅವರು ಬ್ರಹ್ಮಾ, ವಿಷ್ಣು ಹಾಗೂ ಶಿವ.

ಬ್ರಹ್ಮ ಮತ್ತು ಬ್ರಹ್ಮಾನಲ್ಲಿರುವ ಅಂತರ:- ಒಂದು ಬ್ರಹ್ಮಾಂಡದಲ್ಲಿ ಇರುವ ಎಲ್ಲಕ್ಕಿಂತ ಎತ್ತರವಾದ ಸ್ಥಾನದಲ್ಲಿ ಬ್ರಹ್ಮನು (ಕ್ಷರ ಪುರುಷ) ಸ್ವತಃ ಮೂರು ಗುಪ್ತ ಸ್ಥಾನಗಳನ್ನು ರಚಿಸಿ ಬ್ರಹ್ಮಾ, ವಿಷ್ಣು ಹಾಗೂ ಶಿವನ ರೂಪದಲ್ಲಿರುತ್ತಾನೆ. ಹಾಗೂ ತನ್ನ ಪತ್ನಿಯಾದ ಪ್ರಕೃತಿ (ದುರ್ಗೆ)ಯ ಸಹಯೋಗದಿಂದ ಮೂರು ಮಕ್ಕಳನ್ನು ಸೃಷ್ಟಿಸುತ್ತಾನೆ. ಅವರ ಹೆಸರನ್ನೂ ಸಹ ಬ್ರಹ್ಮಾ, ವಿಷ್ಣು, ಶಿವ ಎಂದೇ ಇಡುತ್ತಾನೆ. ಬ್ರಹ್ಮನ ಪುತ್ರನಾದ ಬ್ರಹ್ಮಾನು ಒಂದು ಬ್ರಹ್ಮಾಂಡದಲ್ಲಿ ಕೇವಲ ಮೂರು ಲೋಕಗಳಲ್ಲಿ (ಭೂಲೋಕ, ಸ್ವರ್ಗಲೋಕ ಹಾಗೂ ಪಾತಾಳಲೋಕದಲ್ಲಿ) ರಜೋಗುಣವೆಂಬ ವಿಭಾಗದ ಮಂತ್ರಿಯಾಗಿದ್ದಾನೆ (ಸ್ವಾಮಿ).

ಇವನನ್ನು ತ್ರಿಲೋಕದ ಬ್ರಹ್ಮಾ ಎಂದು ಕರೆಯಲಾಗಿದೆ. ಹಾಗೂ ಬ್ರಹ್ಮಲೋಕದಲ್ಲಿ ಬ್ರಹ್ಮಾನ ರೂಪದಲ್ಲಿರುವ ಬ್ರಹ್ಮನನ್ನು ಮಹಾಬ್ರಹ್ಮಾ ಹಾಗು ಬ್ರಹ್ಮ ಲೋಕದ ಬ್ರಹ್ಮಾ ಎಂದು ಕರೆಯಲಾಗಿದೆ. ಇದೇ ಬ್ರಹ್ಮ(ಕಾಲ)ನನ್ನು ಸದಾಶಿವ, ಮಹಾಶಿವ, ಮಹಾವಿಷ್ಣು ಎಂದೂ ಸಹ ಕರೆಯಲಾಗುತ್ತದೆ.

ವಿಷ್ಣು ಪುರಾಣದಲ್ಲಿ ಪ್ರಮಾಣ :- ಚತುರ್ಥ ಅಂಶದ ಒಂದನೇ ಅಧ್ಯಾಯದ 230, 231ನೇ ಪುಟದಲ್ಲಿ ಬ್ರಹ್ಮಾನು ಹೀಗೆಂದಿದ್ದಾನೆ, ಹುಟ್ಟು, ಸಾವು ಇಲ್ಲದಿರುವ ವಿಧಾತನಾದ ಪರಮೇಶ್ವರನ ಆದಿ, ಅಂತ್ಯ ಸ್ವರೂಪ, ಸ್ವಭಾವ ಮತ್ತು ಸಾರ ಇವುಗಳನ್ನು ತಿಳಿಯಲು ನಮಗೆ ಸಾಧ್ಯವಿಲ್ಲ. (83ನೇ ಶ್ಲೋಕ).

ಯಾರು ನನ್ನ ರೂಪವನ್ನು ಧರಿಸಿ ಪ್ರಪಂಚವನ್ನು ಸೃಷ್ಟಿ ಮಾಡುತ್ತಾನೋ, ಪಾಲನೆಯ ಸಮಯದಲ್ಲಿ ಪುರುಷ ರೂಪದಲ್ಲಿರುತ್ತಾನೋ ಹಾಗೂ ರುದ್ರನ ರೂಪದಲ್ಲಿ ವಿಶ್ವವನ್ನು ಸಂಹರಿಸುತ್ತಾನೋ, ಅವನು ಅನಂತ ರೂಪದಿಂದ ಈ ಸಂಪೂರ್ಣ ಜಗತ್ತನ್ನು ಧರಿಸುತ್ತಾನೆ. (86ನೇ ಶ್ಲೋಕ).

# ಒಂದು ಬ್ರಹ್ಮಾಂಡದ ಲಘು ಚಿತ್ರ



ಕಾಲಬ್ರಹ್ಮನು ಪ್ರಕೃತಿಗೆ (ದುರ್ಗೆ) ಹೀಗೆಂದನು, "ಈಗ ನನ್ನನ್ನು ಯಾರೂ ಏನು ಮಾಡಲೂ ಸಾಧ್ಯವಿಲ್ಲ. ನನ್ನ ಮನಸ್ಸಿಗೆ ಬಂದಂತೆ ಮಾಡುವೇನು". ಆಗ ಪ್ರಕೃತಿಯು ಮತ್ತೇ ಪ್ರಾರ್ಥಿಸಿದಳು, "ನಿಮಗೆ ನಾಚಿಕೆಯಾಗಬೇಕು. ಮೊದಲಂತು ನೀವು ನನಗೆ ಅಣ್ಣನಾಗಬೇಕು. ಏಕೆಂದರೆ ಅದೇ ಪೂರ್ಣ ಪರಮಾತ್ಮನ (ಕವೀರ ದೇವ) ವಚನ ಶಕ್ತಿಯಿಂದ ಮೊಟ್ಟೆಯಿಂದ ನಿಮ್ಮ ಜನನವಾಯಿತು. ನಂತರದಲ್ಲಿ ಅದೇ ಪರಮೇಶ್ವರನ ವಚನದಿಂದ ನನ್ನ ಸೃಷ್ಟಿಯಾಯಿತು. ನಿಮ್ಮ ಹೊಟ್ಟೆಯಿಂದ ನಾನು ಹೊರಬಂದಿದ್ದೇನೆ. ಹಾಗಾಗಿ ನಾನು ನಿಮ್ಮ ಮಗಳಾದೆ ಹಾಗು ನೀವು ನನಗೆ ತಂದೆಯಾದ್ರಿ ಈ ಪವಿತ್ರ ಸಂಬಂಧವನ್ನು ಬಿಗಡಾಯಿಸುವುದು ಮಹಾಪಾಪಕ್ಕೆ ಸಮಾನ. ನನ್ನ ಬಳಿ ತಂದೆಯು ಪ್ರದಾನ ಮಾಡಿದ ಶಬ್ದ ಶಕ್ತಿ ಇದೆ. ನೀವು ಎಷ್ಟು ಜೀವಿಗಳನ್ನು ಹೇಳುವಿರೋ ಅಷ್ಟನ್ನೂ ನಾನು ವಚನದಿಂದ ಸೃಷ್ಟಿ ಮಾಡುವೆ."

ಜ್ಯೋತಿ ನಿರಂಜನನು ದುರ್ಗೆಯ ಒಂದು ಮಾತನ್ನೂ ಕೇಳಲಿಲ್ಲ. ಅವಳಿಗೆ ಹೀಗೆಂದನು, "ನನಗೆ ಯಾವ ಶಿಕ್ಷೆ ಸಿಗಬೇಕಾಗಿತ್ತೋ ಅದು ಸಿಕ್ಕಿದೆ. ನನ್ನನ್ನು ಸತ್ಯಲೋಕದಿಂದ ಹೊರಹಾಕಿದ್ದಾರೆ. ಈಗ ನಾನು ಇಷ್ಟಬಂದಂತೆ ಮಾಡುವೆ." ಹೀಗೆ ಹೇಳಿದ ಕಾಲ ಪುರುಷನು (ಕ್ಷರ ಪುರುಷ) ಪ್ರಕೃತಿಯನ್ನು ಬಲವಂತವಾಗಿ ಮದುವೆ ಮಾಡಿಕೊಂಡನು. ಹಾಗೂ ಮೂವರು ಪುತ್ರರನ್ನು (ರಜೋಗುಣಯುಕ್ತ ಬ್ರಹ್ಮಾ, ಸತ್ವಗುಣಯುಕ್ತ ವಿಷ್ಣು ಹಾಗೂ ತಮೋಗುಣಯುಕ್ತ ಶಿವನ) ಸೃಷ್ಟಿಸಿದನು. ಈ ಮೂವರು ಯುವಕರಾಗುವವರೆಗೆ ದುರ್ಗೆಯ ಮೂಲಕ ಅವರನ್ನು ಮೂರ್ಛಿತಗೊಳಿಸಿ ಇಟ್ಟಿರುತ್ತಾನೆ. ಯುವಕರಾದ ಮೇಲೆ ಬ್ರಹ್ಮಾನನ್ನು ಕಮಲದ ಹೂವಿನ ಮೇಲೆ, ವಿಷ್ಣುವನ್ನು ಶೇಷನಾಗ ಶಯನದ ಮೇಲೆ ಹಾಗೂ ಶಿವನನ್ನು ಕೈಲಾಸ ಪರ್ವತದಲ್ಲಿ ಎಚ್ಚರಗೊಳಿಸಿ ಇಡುತ್ತಾನೆ.

ಇದಾದ ನಂತರ ಪ್ರಕೃತಿಯ ಮೂಲಕ ಮೂವರಿಗೂ ವಿವಾಹ ಮಾಡಲಾಗುತ್ತದೆ. ನಂತರ ಒಂದು ಬ್ರಹ್ಮಾಂಡದಲ್ಲಿ ಮೂರು ಲೋಕ (ಭೂಲೋಕ, ಸ್ವರ್ಗಲೋಕ ಹಾಗೂ ಪಾತಾಳ ಲೋಕದಲ್ಲಿ) ಒಂದೊಂದು ವಿಭಾಗದ ಮಂತ್ರಿ ಪದವಿಯನ್ನೂ ಸಂಭಾಳಿಸುತ್ತಾನೆ. ಒಂದು ಬ್ರಹ್ಮಾಂಡದಲ್ಲಿ ಒಂದು ಬ್ರಹ್ಮಲೋಕ ರಚಿಸಿದ್ದಾನೆ. ಅದರಲ್ಲಿ ಮೂರು ಗುಪ್ತ ಸ್ಥಾನಗಳನ್ನು ಮಾಡಲಾಗಿದೆ. ಒಂದು ರಜೋಗುಣ ಪ್ರಧಾನವಾದ ಸ್ಥಾನ. ಇಲ್ಲಿ ಈ ಕಾಲಬ್ರಹ್ಮನು ಸ್ವತಃ ಮಹಾ ಬ್ರಹ್ಮಾನ (ಮುಖ್ಯಮಂತ್ರಿ) ರೂಪದಲ್ಲಿ ಇರುತ್ತಾನೆ. ಹಾಗೂ ತನ್ನ ಪತ್ನಿಯಾದ ದುರ್ಗೆಯನ್ನು ಮಹಾ ಸಾವಿತ್ರಿಯ ರೂಪದಲ್ಲಿ ಇಡುತ್ತಾನೆ. ಇವರಿಬ್ಬರ ಸಂಯೋಗದಿಂದ ಈ ಸ್ಥಾನದಲ್ಲಿ ಹುಟ್ಟುವ ಪುತ್ರನು ಸ್ವತಃ ರಜೋಗುಣಿಯಾಗುತ್ತಾನೆ. ಇನ್ನೊಂದು ಸ್ಥಾನವನ್ನು ಸತ್ವಗುಣ ಪ್ರಧಾನ ಸ್ಥಾನವನ್ನಾಗಿ ಮಾಡುತ್ತಾನೆ. ಅಲ್ಲಿ ಈ ಕ್ಷರ ಪುರುಷನು ಸ್ವತಃ ಮಹಾವಿಷ್ಣು ರೂಪ ಧರಿಸಿ ಇರುತ್ತಾನೆ. ಹಾಗೂ ತನ್ನ ಪತ್ನಿಯಾದ ದುರ್ಗೆಯನ್ನು ಮಹಾಲಕ್ಷ್ಮಿಯ ರೂಪದಲ್ಲಿ ಇಡುತ್ತಾನೆ.

ಆ ಸ್ಥಾನದಲ್ಲಿ ಹುಟ್ಟುವ ಪುತ್ರನಿಗೆ ವಿಷ್ಣು ಎಂದು ಹೆಸರಿಡುತ್ತಾನೆ. ಆ ಬಾಲಕನು ಸತ್ವಗುಣಯುಕ್ತನಾಗುತ್ತಾನೆ. ನಂತರ ಅದೇ ಕಾಲನು ಅಲ್ಲಿಯೇ ತಮೋಗುಣ ಪ್ರಧಾನವಾದ ಕ್ಷೇತ್ರವೊಂದನ್ನು ನಿರ್ಮಿಸುತ್ತಾನೆ. ಅಲ್ಲಿ ಅವನು ಸ್ವತಃ ಸದಾಶಿವ ರೂಪವನ್ನು ಧರಿಸಿ ಇರುತ್ತಾನೆ. ಹಾಗೂ ತನ್ನ ಪತ್ನಿಯಾದ ದುರ್ಗೆಯನ್ನು ಮಹಾಪಾರ್ವತಿಯ ರೂಪದಲ್ಲಿ ಇಡುತ್ತಾನೆ. ಇವರಿಬ್ಬರ ಸಂಯೋಗದಿಂದ ಇಲ್ಲಿ ಹುಟ್ಟುವ ಪುತ್ರನಿಗೆ ಶಿವನೆಂದು ಹೆಸರಿಡುತ್ತಾನೆ. ಇವನು ತಮೋಗುಣಯುಕ್ತನಾಗಿರುತ್ತಾನೆ. (ಪ್ರಮಾಣಕ್ಕಾಗಿ ಶ್ರೀ ಶಿವಮಹಾಪುರಾಣ ವಿದ್ವೇಶ್ವರ ಸಂಹಿತೆಯ 20, 21ನೆಯ ಪುಟದಲ್ಲಿ ಬ್ರಹ್ಮಾ, ವಿಷ್ಣು, ರುದ್ರ ಮತ್ತು ಮಹೇಶ್ವರನಿಗಿಂತ ಭಿನ್ನನಾದ ಸದಾಶಿವನಿದ್ದಾನೆ ಎಂದು ಬರೆದಿದೆ. ರುದ್ರ ಸಂಹಿತೆ 6 ಮತ್ತು 7, 9ರ 81ನೇ ಪುಟದಿಂದ 85ನೇ ಪುಟದವರೆಗೆ ಹಾಗು 90ನೇ ಪುಟದಲ್ಲಿ ಕನ್ನಡ ಅನುವಾದಕಾರರಾದ ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್, ಗೀತಾ ಪ್ರೆಸ್ ಗೋರಖ್ ಪುರ್‌ದಿಂದ ಪ್ರಕಾಶಿತಗೊಂಡ ಹಾಗೂ

ಪವಿತ್ರ ಶ್ರೀ ದೇವಿ ಮಹಾಪುರಾಣದ ಮೂರನೇ ಸ್ಕಂದದ 97ನೇ ಪುಟದಿಂದ 107ರವರೆಗೆ, ಗೀತಾ ಪ್ರೆಸ್, ಗೋರಖಪುರದಿಂದ ಪ್ರಕಾಶಿತಗೊಂಡಿದ್ದು, ಇದರ ಕನ್ನಡ ಅನುವಾದಕಾರರಾದ ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್). ಇವರನ್ನು ಮೋಸದಲ್ಲಿಟ್ಟು ತನಗೆ ತಿನ್ನಲು ಜೀವಿಗಳನ್ನು ಶ್ರೀ ಬ್ರಹ್ಮಾನ ಮೂಲಕ, ಸ್ಥಿತಿ (ಒಬ್ಬರು ಇನ್ನೊಬ್ಬರ ಮೋಹ-ಮಮತೆಯಲ್ಲಿ ಸಿಲುಕಿ ಕಾಲನ ಬಲೆಯಲ್ಲಿ ಇಡುವುದು) ಶ್ರೀ ವಿಷ್ಣುವಿನಿಂದ ಹಾಗೂ ಸಂಹಾರವನ್ನು (ಏಕೆಂದರೆ ಕಾಲಪುರುಷ ಶಾಪದ ಕಾರಣ ಒಂದು ಲಕ್ಷ ಮಾನವ ಶರೀರಧಾರಿ ಜೀವಿಗಳ ಸೂಕ್ಷ್ಮ ಶರೀರದಿಂದ ಹೊಲಸನ್ನು ತೆಗೆದು ತಿನ್ನುವುದು, ಅದಕ್ಕಾಗಿ 21ನೇ ಬ್ರಹ್ಮಾಂಡದಲ್ಲಿ ಒಂದು ತಪ್ತ ಶಿಲೆ ಇರುತ್ತದೆ. ಅದು ಸ್ವತಃ ಬಿಸಿಯಾಗಿರುತ್ತದೆ. ಅದರ ಮೇಲೆ ಬೇಯಿಸಿ, ಹೊಲಸನ್ನು ತೆಗೆದು ತಿನ್ನುತ್ತಾನೆ, ಜೀವಿಗಳು ಸಾಯುವುದಿಲ್ಲ, ಆದರೆ ಕಷ್ಟ ಅಸಹನೀಯವಾಗುತ್ತದೆ. ನಂತರ ಕರ್ಮದ ಆಧಾರದ ಮೇಲೆ ಜೀವಿಗಳಿಗೆ ಬೇರೆ ಬೇರೆ ಶರೀರಗಳನ್ನು ಪ್ರದಾನಿಸುತ್ತಾನೆ) ಶ್ರೀ ಶಿವನ ಮೂಲಕ ಮಾಡಿಸುತ್ತಾನೆ.

ಉದಾಹರಣೆಗೆ ಒಂದು ಮನೆಯಲ್ಲಿ ಮೂರು ಕೊಠಡಿಗಳಿರುತ್ತವೆ. ಒಂದು ಕೊಠಡಿಯಲ್ಲಿ ಅಶ್ಲೀಲ ಚಿತ್ರ ಹಾಕಲಾಗಿದೆ. ಆ ಕೊಠಡಿಗೆ ಹೋದ ತಕ್ಷಣ ಮನಸ್ಸಿನಲ್ಲಿ ಅದೇ ರೀತಿ ಕೆಟ್ಟ ಕೆಟ್ಟ ವಿಚಾರಗಳು ಹುಟ್ಟುತ್ತವೆ. ಎರಡನೇ ಕೊಠಡಿಯಲ್ಲಿ ಸಾಧು-ಸಂತರ, ಭಕ್ತರ ಚಿತ್ರಗಳನ್ನು ಹಾಕಿದ್ದರೆ ಮನಸ್ಸಿನಲ್ಲಿ ಒಳ್ಳೆಯ ವಿಚಾರ, ಪ್ರಭುಗಳ ಚಿಂತನೆಯೇ ಬರುತ್ತದೆ. ಮೂರನೇ ಕೊಠಡಿಯಲ್ಲಿ ದೇಶಭಕ್ತರ ಹಾಗೂ ಹುತಾತ್ಮರ ಚಿತ್ರಗಳನ್ನು ಹಾಕಿದ್ದರೆ ಮನಸ್ಸಿನಲ್ಲಿ ಅದೇ ರೀತಿಯ ಉತ್ಸಾಹಭರಿತ ವಿಚಾರಗಳು ಹುಟ್ಟುತ್ತವೆ. ಇದೇ ರೀತಿ ಬ್ರಹ್ಮ (ಕಾಲ)ನು ತನ್ನ ತಿಳುವಳಿಕೆಯಿಂದ ಮೇಲಿನ ಮೂರೂ ಗುಣಗಳ ಪ್ರಧಾನ ಸ್ಥಾನಗಳನ್ನು ಸೃಷ್ಟಿಸಿದ್ದಾನೆ.

(ಬ್ರಹ್ಮಲೋಕದ ಲಘು ಚಿತ್ರ ಮತ್ತು ಜ್ಯೋತಿ ನಿರಂಜನ (ಕಾಲ) ಬ್ರಹ್ಮನ ಲೋಕ 21 ಬ್ರಹ್ಮಾಂಡಗಳ ಲಘು ಚಿತ್ರವನ್ನು ಇದೇ ಪುಸ್ತಕದ ಪುಟ ಸಂಖ್ಯೆ 139 ಮತ್ತು 140 ರಲ್ಲಿ ನೋಡಿ.

❑❑❑

# ಬ್ರಹ್ಮ ಲೋಕದ ಲಘು ಚಿತ್ರ



# ಜ್ಯೋತಿ ನಿರಂಜನ (ಕಾಲ) ಬ್ರಹ್ಮನ ಲೋಕ (ಇಪ್ಪತ್ತೊಂದು ಬ್ರಹ್ಮಾಂಡ)ದ ಲಘು ಚಿತ್ರ



## (ಸೂಕ್ಷ್ಮ ವೇದದಿಂದ ನಿಷ್ಕರ್ಷ ರೂಪ ಸೃಷ್ಟಿ ರಚನೆಯ ವರ್ಣನೆ)

ಪ್ರಭುವಿನಲ್ಲಿ ಪ್ರೇಮವಿರುವ ಆತ್ಮಗಳೇ! ಮೊದಲ ಬಾರಿ ಕೆಳಗಿನ ಸೃಷ್ಟಿಯ ರಚನೆಯ ಬಗ್ಗೆ ಓದಿದರೆ, ಇದೊಂದು ದಂತಕಥೆಯೆನಿಸದೆ ಇರದು. ಆದರೆ ಎಲ್ಲ ಪವಿತ್ರ ಗ್ರಂಥಗಳಲ್ಲಿ ಪ್ರಮಾಣವನ್ನು ಓದಿದರೆ ಆಶ್ಚರ್ಯವಾಗುವುದು. ಈ ವಾಸ್ತವಿಕ ಜ್ಞಾನದ ಅರಿವು ಎಲ್ಲಿ ಅಡಗಿತ್ತು? ದಯಮಾಡಿ ಧೈರ್ಯದೊಂದಿಗೆ ಓದಿರಿ. ಹಾಗೂ ಈ ಅಮೃತಜ್ಞಾನವನ್ನು ಸುರಕ್ಷಿತವಾಗಿ ಕಾಪಾಡಿರಿ. ಇದು ನಿಮ್ಮ ಮುಂದಿನ ನೂರಾ ಒಂದನೆಯ ಪೀಳಿಗೆಯವರೆಗೂ ಉಪಯೋಗಕ್ಕೆ ಬರುವುದು. ಪವಿತ್ರ ಆತ್ಮಗಳೇ! ದಯಮಾಡಿ ಸತ್ಯ ನಾರಾಯಣನ (ಅವಿನಾಶಿ ಪ್ರಭು/ ಸತ್ಯಪುರುಷ) ಮೂಲಕ ರಚಿಸಿದ ಸೃಷ್ಟಿ ರಚನೆಯ ವಾಸ್ತವಿಕ ಜ್ಞಾನವನ್ನು ಓದಿ ತಿಳಿಯಿರಿ.

1. ಪೂರ್ಣ ಬ್ರಹ್ಮ :– ಈ ಸೃಷ್ಟಿ ರಚನೆಯಲ್ಲಿ ಸತ್ಯಪುರುಷ–ಸತ್ಯಲೋಕದ ಸ್ವಾಮೀ (ಪ್ರಭು), ಅಲಖ್ ಪುರುಷ–ಅಲಖ್ ಲೋಕದ ಸ್ವಾಮೀ (ಪ್ರಭು), ಅಗಮ್ ಪುರುಷ–ಅಗಮ್ ಲೋಕದ ಸ್ವಾಮೀ (ಪ್ರಭು) ಹಾಗೂ ಅನಾಮಿ ಪುರುಷ–ಅನಾಮಿ/ ಅಕಹ್ ಲೋಕದ ಸ್ವಾಮಿಯಂತು (ಪ್ರಭುವಂತು) ಒಬ್ಬನೇ ಪೂರ್ಣ ಬ್ರಹ್ಮನು, ಅವನೇ ವಾಸ್ತವದಲ್ಲಿ ಅವಿನಾಶಿ (ನಾಶವಿಲ್ಲದ–ಶಾಶ್ವತ) ಪ್ರಭು. ಆ ಪ್ರಭುವೇ ಭಿನ್ನ–ಭಿನ್ನ ರೂಪ ಧಾರಣೆ ಮಾಡಿ, ತನ್ನ ನಾಲ್ಕೂ ಲೋಕಗಳಲ್ಲಿ ಇರುವನು. ಅವನ ಅಧಿನದಲ್ಲಿ ಅಸಂಖ್ಯಾ (ಎಣಿಸಲಾರದ) ಬ್ರಹ್ಮಾಂಡಗಳು ಇವೆ.

2. ಪರಬ್ರಹ್ಮ :– ಇವನು ಕೇವಲ 7 ಶಂಖ ಬ್ರಹ್ಮಾಂಡದ ಪ್ರಭು ಇವನನ್ನು ಅಕ್ಷರ ಪುರುಷನೆಂದೂ ಹೇಳುತ್ತಾರೆ. ಆದರೆ ಇವನು ಹಾಗೂ ಇವನ ಬ್ರಹ್ಮಾಂಡವು ಸಹ, ವಾಸ್ತವದಲ್ಲಿ ಅವಿನಾಶಿಯಲ್ಲ. (ಶಾಶ್ವತವಲ್ಲದ್ದು)

3. ಬ್ರಹ್ಮ :– ಇವನು ಕೇವಲ 21 ಬ್ರಹ್ಮಾಂಡಗಳ ಪ್ರಭು ಇವನನ್ನು ಕ್ಷರ ಪುರುಷ (ಕ್ಷರ–ನಾಶ) ಜ್ಯೋತಿನಿರಂಜನ, ಕಾಲ, ಮುಂತಾದ ಉಪಮೆಗಳೊಂದಿಗೆ ತಿಳಿಯಲಾಗುತ್ತದೆ. ಇವನು ಹಾಗೂ ಇವನ ಸರ್ವ ಬ್ರಹ್ಮಾಂಡವು ನಾಶವಾಗುವಂತಹದು.

(ಮೇಲೆ ಹೇಳಿರುವ 3 ಪುರುಷರ (ಪೂರ್ಣಬ್ರಹ್ಮ, ಪರಬ್ರಹ್ಮ, ಬ್ರಹ್ಮ) (ಪ್ರಭುಗಳ) ಪ್ರಮಾಣವು ಪವಿತ್ರ ಶ್ರೀಮದ್ಭಗವದ್ಗೀತೆಯ 15ನೇ ಅಧ್ಯಾಯದ 16–17ನೆಯ ಶ್ಲೋಕಗಳಲ್ಲೂ ಇದೆ.)

4. ಬ್ರಹ್ಮಾ :– "ಬ್ರಹ್ಮಾ" ಇದೇ (ಮೇಲೆ ಹೇಳಿರುವ) ಬ್ರಹ್ಮನ (ಕಾಲನ) ಜೇಷ್ಠಪುತ್ರ. ವಿಷ್ಣುವು ಎರಡನೆಯ ಪುತ್ರ ಹಾಗೂ ಶಿವನು ಮೂರನೆಯ ಪುತ್ರ. ಈ ಮೂವರೂ ಕೇವಲ ಒಂದು ಬ್ರಹ್ಮಾಂಡದಲ್ಲಿನ ಒಂದು ವಿಭಾಗದ (ಗುಣದ) ಪ್ರಭುಗಳಾಗಿದ್ದಾರೆ. ಹಾಗೂ ನಾಶಹೊಂದುವವರು. ವಿಸ್ತೃತ ವಿವರಣೆಗಾಗಿ ದಯಮಾಡಿ ಕೆಳಗೆ ಬರೆದಿರುವ ಸೃಷ್ಟಿ ರಚನೆಯ ವಿವರಗಳನ್ನು ಓದಿರಿ.

[ಕವಿರ್ದೇವ (ಕಬೀರ್ ಪರಮೇಶ್ವರ)ರು ಸೂಕ್ಷ್ಮವೇದ ಅರ್ಥಾತ್ ಕವಿರ್ವಾಣಿಯಲ್ಲಿ ಅವರೇ ರಚಿಸಿರುವ ಸೃಷ್ಟಿಯ ಜ್ಞಾನವನ್ನು ಸ್ವತಃ ಈ ಕೆಳಗೆ ಬರೆದಿರುವಂತೆ ತಿಳಿಸಿದ್ದಾರೆ]

ಮೊಟ್ಟ ಮೊದಲು ಅನಾಮಿ/ಅಕಹ್ ಎಂಬ ಲೋಕವಿತ್ತು. ಪೂರ್ಣ ಪರಮಾತ್ಮನು ಆ ಅನಾಮಿ ಲೋಕದಲ್ಲಿ ಒಬ್ಬನೇ ಇದ್ದನು. ಆ ಪರಮಾತ್ಮನ ವಾಸ್ತವಿಕ ಹೆಸರು ಕವಿರ್ದೇವ, ಅರ್ಥಾತ್ ಕಬೀರ್ ಪರಮೇಶ್ವರ ಎಂಬುದಾಗಿದೆ. ಆ ಎಲ್ಲಾ ಆತ್ಮಗಳು ಆ ಪೂರ್ಣ ಪರಮಾತ್ಮನ ಶರೀರದಲ್ಲಿ ಸೇರಿಕೊಂಡಿದ್ದವು. ಈ ಕವಿರ್ದೇವರ ಉಪನಾಮ, ಪದವಿಯ ನಾಮ ಅನಾಮೀ ಪುರುಷವಾಗಿದೆ. (ಪುರುಷ ಶಬ್ದದ ಅರ್ಥ ಪ್ರಭು/ ಒಡೆಯ/ ಸ್ವಾಮಿ ಎಂದಾಗುತ್ತದೆ. ಪ್ರಭು ಮನುಷ್ಯನನ್ನು ತನ್ನದೇ ಸ್ವರೂಪದಲ್ಲಿ ನಿರ್ಮಾಣ ಮಾಡಿದ್ದಾನೆ. ಆದ್ದರಿಂದ ಮಾನವನ ಹೆಸರೂ ಸಹ ಪುರುಷ ಎಂದಾಗಿದೆ) ಅನಾಮೀ ಪುರುಷನ ಒಂದು ರೋಮದ (ಶರೀರದ ಕೂದಲಿನ) ಪ್ರಕಾಶವು ಶಂಖ–ಸೂರ್ಯನ ಪ್ರಕಾಶಕ್ಕಿಂತಲೂ ಅಧಿಕವಾಗಿದೆ.

# ಕಬೀರ್ ಪರಮೇಶ್ವರರ ಅಸಂಖ್ಯ ಬ್ರಹ್ಮಾಂಡಗಳ ಲಘು ಚಿತ್ರ

ಅನಾಮಿ ಲೋಕ : ಈ ಲೋಕದಲ್ಲೂ ಸಹ ಕಬೀರ್ ಪರಮೇಶ್ವರರು ಅನಾಮಿ ಪುರುಷನ ರೂಪದಲ್ಲಿರುತ್ತಾರೆ

ಅಗಮ್ ಲೋಕ : ಈ ಲೋಕದಲ್ಲೂ ಸಹ ಕಬೀರ್ ಪರಮೇಶ್ವರರು ಅಗಮ್ ಪುರುಷನ ರೂಪದಲ್ಲಿರುತ್ತಾರೆ

ಅಲಖ್ ಲೋಕ : ಈ ಲೋಕದಲ್ಲೂ ಸಹ ಕಬೀರ್ ಪರಮೇಶ್ವರರು ಅಲಖ್ ಪುರುಷನ ರೂಪದಲ್ಲಿರುತ್ತಾರೆ



ಹೆಸರು ಬೇರೆ ಇದ್ದು ಪದವಿಯ ಹೆಸರು ಪ್ರಧಾನ ಮಂತ್ರಿ ಎಂದಿರುತ್ತದೆ. ಅನೇಕ ಸಂದರ್ಭಗಳಲ್ಲಿ ಪ್ರಧಾನ ಮಂತ್ರಿಗಳೇ ಹಲವಾರು ವಿಭಾಗಗಳನ್ನು ತಾವೇ ಇರಿಸಿಕೊಂಡಿರುತ್ತಾರೆ. ಆಗ ಯಾವ ವಿಭಾಗದ ಕಾಗದ ಪತ್ರಗಳ ಮೇಲೆ ಸಹಿ ಹಾಕಿ ಮುದ್ರೆ ಹಾಕುತ್ತಾರೋ, ಆಗ ಅದೇ ವಿಭಾಗದ ಪದವಿಯ ಹೆಸರನ್ನು ನಮೂದಿಸುತ್ತಾರೆ. ಉದಾಹರಣೆಗೆ ಗೃಹ ಮಂತ್ರಾಲಯದ ಪದವಿಯನ್ನು ನಿರ್ವಹಿಸುವ ಪ್ರಧಾನಮಂತ್ರಿ ಅಲ್ಲಿನ ಕಾಗದ ಪತ್ರಗಳಿಗೆ ಗೃಹ ಮಂತ್ರಿ ಎಂದೇ ಬರೆಯುತ್ತಾರೆ. ಅಲ್ಲಿ ಅದೇ ವ್ಯಕ್ತಿಯ (ಪ್ರಧಾನ ಮಂತ್ರಿಯ) ಹಸ್ತಾಕ್ಷರದ ಶಕ್ತಿ ಕಡಿಮೆಯಾಗುತ್ತದೆ. ಇದೇ ರೀತಿಯಲ್ಲಿ ಕಬೀರ್ ಪರಮೇಶ್ವರರ (ಕವಿರ್ದೇವರ) ಶರೀರದ ಕಾಂತಿಯು (ಪ್ರಕಾಶವು) ಬೇರೆ–ಬೇರೆ ಲೋಕಗಳಲ್ಲಿ ಬೇರೆ–ಬೇರೆ ಆಗಿರುತ್ತದೆ.

ಇದೇ ರೀತಿ ಪೂರ್ಣ ಪರಮಾತ್ಮರಾದ ಕವಿರ್ದೇವ (ಕಬೀರ್ ಪರಮೇಶ್ವರ)ರು ಕೆಳಗಿನ ಮೂರು ಬೇರೆಯ ಲೋಕಗಳನ್ನು (ಅಗಮ್‌ಲೋಕ, ಅಲಖ್‌ಲೋಕ, ಸತ್ಯಲೋಕ) ಶಬ್ದ (ವಚನ) ದಿಂದ ರಚಿಸಿದ್ದಾರೆ. ಇದೇ ಪೂರ್ಣಬ್ರಹ್ಮ ಪರಮಾತ್ಮ ಕವಿರ್ದೇವ (ಕಬೀರ್ ಪರಮೇಶ್ವರ)ರೇ ಅಗಮ್ ಲೋಕದಲ್ಲಿ ಪ್ರಕಟರಾದರು ಹಾಗು ಕವಿರ್ದೇವ ಅಗಮ್‌ಲೋಕದೂ ಸ್ವಾಮಿಯಾಗಿರುವರು ಹಾಗು ಅಲ್ಲಿ ಇವರ ಉಪನಾಮ ಅಗಮ್ ಪುರುಷ ಅರ್ಥಾತ್ ಅಗಮ್ ಪ್ರಭು ಆಗಿದೆ. ಇದೇ "ಅಗಮ್ ಪುರುಷನ" ಮಾನವ ಸದೃಶ್ಯ ಶರೀರವು ಬಹಳ ತೇಜೋಮಯವಾಗಿದೆ. ಇವರ ಒಂದು ರೋಮ ಕೂಪದಲ್ಲಿನ ಕಾಂತಿಯು (ಪ್ರಕಾಶವು) ನೂರು ಶತಕೋಟಿ ಸೂರ್ಯಗಳ ಪ್ರಕಾಶಕ್ಕಿಂತ ಅಧಿಕವಾಗಿದೆ.

ಈ ಪೂರ್ಣ ಪರಮಾತ್ಮ ಕವಿರ್ದೇವ (ಕವಿರ್ ದೇವ=ಕಬೀರ ಪರಮೇಶ್ವರ) ಅಲಖ್ ಲೋಕದಲ್ಲಿ ಪ್ರಕಟನಾದನು ಹಾಗು ಸ್ವತಃವೇ ಅಲಖ್ ಲೋಕದ ಸ್ವಾಮೀಯಾಗಿರುವನು ಹಾಗು ಉಪನಾಮ ಅಲಖ್ ಪುರುಷವಾಗಿದೆ ಹಾಗು ಈ ಪೂರ್ಣ ಪ್ರಭುವಿನ ಮಾನವ ಸದೃಶ್ಯ ಶರೀರ ತೇಜೋಮಯವಾಗಿದೆ ಹಾಗು ಸ್ವಯಂ ಪ್ರಕಾಶಿತವಾಗಿದೆ. (ಸ್ವಜ್ಯೋತಿ ಪ್ರಕಾಶ) ಇವರ ಒಂದು ರೋಮ (ಶರೀರದ ಕೂದಲಿನ) ಕಾಂತಿಯು (ಪ್ರಕಾಶವು) ಶತಕೋಟಿ ಸೂರ್ಯಗಳ ಪ್ರಕಾಶಕ್ಕಿಂತ ಅಧಿಕವಾಗಿದೆ.

ಈ ಕವಿರ್ದೇವರು ಸತ್ಯಲೋಕದಲ್ಲಿ ಪ್ರಕಟರಾದರು ಹಾಗು ಸತ್ಯಲೋಕದ ಅಧಿಪತಿಕೂಡಾ ಇವರೇ ಆಗಿರುವರು. ಆದ್ದರಿಂದ ಇವರದೇ ಉಪನಾಮ 'ಸತ್ಯಪುರುಷವಾಗಿದೆ'. ಸತ್ಯಪುರುಷ ಅಂದರೆ ಅವಿನಾಶಿ ಪ್ರಭು ಎಂದಾಗುತ್ತದೆ. ಇವರದೆ ಹೆಸರು 'ಅಕಾಲಮೂರ್ತಿ, ಪೂರ್ಣಬ್ರಹ್ಮ, ಪರಮ ಅಕ್ಷರ ಬ್ರಹ್ಮ' ಶಬ್ದ ಸ್ವರೂಪಿ ರಾಮ ಇನ್ನೂ ಮುಂತಾದವುಗಳಿವೆ. ಈ ಸತ್ಯಪುರುಷ ಕವಿರ್ದೇವರ ಮಾನವ ಸದೃಶ್ಯ ಶರೀರವು ತೇಜೋಮಯವಾಗಿದೆ. ಇವರ ಒಂದು ರೋಮ (ಶರೀರದ ಕೂದಲಿನ) ಕಾಂತಿಯು (ಪ್ರಕಾಶವು) ಕೋಟಿ ಸೂರ್ಯ–ಚಂದ್ರರ ಪ್ರಕಾಶಕ್ಕಿಂತ ಅಧಿಕವಾಗಿದೆ.

ಈ ಕವಿರ್ದೇವರು (ಕಬೀರ್ ಪ್ರಭು) "ಸತ್ಯಪುರುಷ" ರೂಪದಲ್ಲಿ ಪ್ರಕಟವಾಗಿ, ಸತ್ಯಲೋಕದಲ್ಲಿ ವಿರಾಜಮಾನರಾಗಿ, ಪ್ರಥಮ ಸತ್ಯಲೋಕದಲ್ಲಿ ಬೇರೆ ರಚನೆಗಳನ್ನು ಮಾಡಿದರು. ಒಂದು ಶಬ್ದ (ವಚನ) ದಿಂದ ಹದಿನಾರು ದ್ವೀಪಗಳ ರಚನೆ ಮಾಡಿದರು. ನಂತರ ಹದಿನಾರು ಶಬ್ದಗಳಿಂದ ಹದಿನಾರು ಪುತ್ರರ ಉತ್ಪತ್ತಿ ಮಾಡಿದರು. ಒಂದು ಮಾನಸ ಸರೋವರದ ರಚನೆಮಾಡಿ. ಅದರಲ್ಲಿ ಅಮೃತವನ್ನು ತುಂಬಿದರು. ಹದಿನಾರು ಪುತ್ರರ ಹೆಸರು ಈ ಕೆಳಗಿನಂತಿವೆ:–

1) ಕೂರ್ಮ, 2) ಜ್ಞಾನಿ, 3) ವಿವೇಕ, 4) ತೇಜ, 5) ಸಹಜ, 6) ಸಂತೋಷ, 7) ಸುರತಿ, 8) ಆನಂದ, 9) ಕ್ಷಮಾ, 10) ನಿಷ್ಕಾಮ, 11) ಜಲರಂಗೀ, 12) ಅಚಿಂತ, 13) ಪ್ರೇಮ, 14) ದಯಾಲ, 15) ಧೈರ್ಯ, 16) ಯೋಗ ಸಂತಾಯನ ಅರ್ಥಾತ್ "ಯೋಗಜಿತ್" ಎಂಬುದಾಗಿದೆ.

ಸತ್ಯಪುರುಷ ಕವಿರ್ದೇವರು ತಮ್ಮ ಪುತ್ರ ಅಚಿಂತನಿಗೆ, ಸತ್ಯಲೋಕದ ಬೇರೆ ರಚನೆಯ ಭಾರವನ್ನು ಒಪ್ಪಿಸಿದರು. ಹಾಗೂ ಶಕ್ತಿ ಪ್ರದಾನ ಮಾಡಿದರು. ಅಚಿಂತನು ತನ್ನ ಶಬ್ದಶಕ್ತಿಯಿಂದ ಅಕ್ಷರ ಪುರುಷ (ಪರಬ್ರಹ್ಮ) ನನ್ನು ಉತ್ಪತ್ತಿ ಮಾಡಿದನು. ಹಾಗೂ ಅಕ್ಷರ ಪುರುಷನ ಸಹಾಯ

ಕೇಳಿದನು. ಅಕ್ಷರ ಪುರುಷನು (ಪರಬ್ರಹ್ಮ) ಸ್ನಾನ ಮಾಡಲು ಮಾನಸ ಸರೋವರಕ್ಕೆ ಹೋದವನು ಆನಂದದಲ್ಲಿ ತಲ್ಲೀನನಾಗಿ ಮಲಗಿ ಬಿಟ್ಟನು (ಏಕೆಂದರೆ ಸತ್ಯಲೋಕದಲ್ಲಿ ಉಸಿರಾಡುವ ಶರೀರ ಇರುವುದಿಲ್ಲ). ಬಹಳ ಸಮಯದವರೆಗೆ ಹೊರಬರಲಿಲ್ಲ. ಆಗ ಅಚಿಂತನು ಅಕ್ಷರ ಪುರುಷನನ್ನು ನಿದ್ರೆಯಿಂದ ಎಚ್ಚರಿಸಲು ಕವಿರ್ದೇವ (ಕಬೀರ್ ಪರಮೇಶ್ವರ) ರನ್ನು ಪ್ರಾರ್ಥಿಸಿದ, ಆಗ ಕವಿರ್ದೇವ ಮಾನಸ ಸರೋವರದಿಂದ ಸ್ವಲ್ಪ ಅಮೃತ ಜಲವನ್ನು ತೆಗೆದುಕೊಂಡು, ಅದರಿಂದ ಒಂದು ಮೊಟ್ಟೆಯನ್ನು ಮಾಡಿದರು ಹಾಗೂ ಆ ಮೊಟ್ಟೆಯಲ್ಲಿ ಒಂದು ಆತ್ಮವನ್ನು ಪ್ರವೇಶ ಮಾಡಿಸಿದರು. ಆ ಮೊಟ್ಟೆಯನ್ನು ಮಾನಸ ಸರೋವರದಲ್ಲಿ ಬಿಟ್ಟರು. ಮೊಟ್ಟೆಯ ಗಡ–ಗಡ ಶಬ್ದದಿಂದ ಅಕ್ಷರ ಪುರುಷನ ನಿದ್ರಾಭಂಗವಾಯಿತು. ಅವನು ಮೊಟ್ಟೆಯನ್ನು ಕೋಪದಿಂದ ನೋಡಿದನು. ಆಗ ಆ ಮೊಟ್ಟೆಯ ಎರಡು ಭಾಗವಾಯಿತು. ಅದರಿಂದ ಜ್ಯೋತಿನಿರಂಜನ (ಕ್ಷರ ಪುರುಷ) ಹೊರಬಂದ, ಅವನನ್ನೇ ಮುಂದೆ 'ಕಾಲ' ಎಂದು ಕರೆದರು. ಇವನ ವಾಸ್ತವಿಕ ಹೆಸರು "ಕೈಲ" ಎಂದು. ಆಗ ಸತ್ಯಪುರುಷನು (ಕವಿರ್ದೇವ) ಆಕಾಶವಾಣಿ ಮೂಲಕ ಅವರಿಬ್ಬರಿಗೆ (ಅಕ್ಷರ ಪುರುಷ ಹಾಗೂ ಕಾಲನಿಗೆ) ಹೊರಗೆ ಬರುವಂತೆ ಹೇಳಿದರು ಹಾಗು ಇಬ್ಬರನ್ನು ಅಚಿಂತನ ದ್ವೀಪದಲ್ಲಿರಲು ತಿಳಿಸಿದರು. ಸತ್ಯಪುರುಷನ ಆಜ್ಞೆಯಂತೆ ಅವರಿಬ್ಬರೂ ಅಲ್ಲಿಯೇ ಇರತೊಡಗಿದರು. (ಮಕ್ಕಳ ಅಸಮರ್ಥತೆಯನ್ನು ಅವರಿಗೇ ತೋರಿಸಿದರು, ಎಲ್ಲಾದರು ಮತ್ತೆ ಪ್ರಭುತ್ವದ ಆಸೆ ಆಗದಿರಲೆಂದು  ಏಕೆಂದರೆ ಸಮರ್ಥರಿಂದಲೇ ಕಾರ್ಯ ಸಿದ್ಧವಾಗುತ್ತವೆ) ನಂತರ ಪೂರ್ಣಧನಿ ಕವಿರ್ದೇವರೇ ಎಲ್ಲ ರಚನಾ ಕಾರ್ಯಗಳನ್ನು ಸ್ವತಃ ಮಾಡಿದರು. ತಮ್ಮ ಶಬ್ಧ ಶಕ್ತಿಯಿಂದ ಒಂದು ರಾಜೇಶ್ವರಿ (ರಾಷ್ಟ್ರೀ) ಶಕ್ತಿಯನ್ನು ಉತ್ಪತ್ತಿ ಮಾಡಿದರು, ಅದರಿಂದ ಸಕಲ ಬ್ರಹ್ಮಾಂಡವಗಳನ್ನು ಸ್ಥಾಪಿಸಿದರು. ಇದನ್ನೇ ಪರಾಶಕ್ತಿ ಪರಾನಂದನೀ ಎನ್ನುತ್ತಾರೆ.

ಪೂರ್ಣ ಬ್ರಹ್ಮನು ತನ್ನ ಒಳಗಿನಿಂದ ತನ್ನ ವಚನ ಶಕ್ತಿಯ ಮೂಲಕ ಎಲ್ಲಾ ಆತ್ಮಗಳನ್ನು ತನ್ನ ಮಾನವ ಸದೃಶ್ಯ ಶರೀರವನ್ನಾಗಿ ಉತ್ಪನ್ನ ಮಾಡಿದನು. ಪ್ರತಿಯೊಂದು ಹಂಸ ಆತ್ಮಗಳ ಪರಮಾತ್ಮನಂತೆ ಶರೀರ ರಚಿಸಲಾಗಿದೆ, ಅದರ ಪ್ರಕಾಶವು (ತೇಜ) **16** ಸೂರ್ಯಗಳಷ್ಟು ಮಾನವ ಸದೃಶ್ಯವಾಗಿದೆ. ಆದರೆ ಪರಮೇಶ್ವರನ ಒಂದು ರೋಮ (ಶರೀರದ ಕೂದಲಿನ) ಪ್ರಕಾಶವು ಕೋಟಿ ಸೂರ್ಯರ ಪ್ರಕಾಶಕ್ಕಿಂತಲೂ ಅಧಿಕವಾಗಿದೆ. ಬಹಳ ಸಮಯದ ನಂತರ ಕ್ಷರ ಪುರುಷ (ಜ್ಯೋತಿನಿರಂಜನ) ನು ಯೋಚಿಸಿದ, "ನಾವು ಮೂವರೂ (ಅಚಿಂತ–ಅಕ್ಷರ ಪುರುಷ–ಕ್ಷರ ಪುರುಷ) ಒಂದೇ ದ್ವೀಪದಲ್ಲಿ ಇದ್ದೇವೆ. ಬೇರೆ ಸಹೋದರರು ಒಂದೊಂದು ದ್ವೀಪದಲ್ಲಿದ್ದಾರೆ. ನಾನೂ ಸಾಧನೆ ಮಾಡಿ. ಪ್ರತ್ಯೇಕ ದ್ವೀಪವನ್ನು ಪಡೆಯುವೆ". ಈ ವಿಚಾರ ಮಾಡಿ ಅವನು ಒಂಟಿ ಕಾಲಿನಲ್ಲಿ ನಿಂತು **70** ಯುಗಗಳವರೆಗೆ ತಪಸ್ಸು ಮಾಡಿದ.

## "ಆತ್ಮಗಳು ಕಾಲನ ಬಲೆಯಲ್ಲಿ ಹೇಗೆ ಸಿಲುಕಿಕೊಂಡವು?"

ವಿಶೇಷ :– ಬ್ರಹ್ಮ (ಜ್ಯೋತಿ ನಿರಂಜನ) ತಪಸ್ಸು ಮಾಡುತ್ತಿದ್ದ, ಇಂದು ಜ್ಯೋತಿನಿರಂಜನನ ಇಪ್ಪತ್ತೊಂದು ಬ್ರಹ್ಮಾಂಡಗಳಲ್ಲಿರುವ ಆತ್ಮಗಳು, ಜ್ಯೋತಿನಿರಂಜನನ (ಬ್ರಹ್ಮ) ತಪಸ್ಸಿನ ಮೇಲೆ ಆಸಕ್ತಗೊಂಡು ತಮ್ಮ ಹೃದಯದಿಂದ ಅವನನ್ನು ಇಷ್ಟಪಡತೊಡಗಿದೆವು. ನಮಗೆ ಸುಖ ನೀಡುತ್ತಿದ್ದ ಪ್ರಭು ಸತ್ಯಪುರುಷನಿಗೆ ವಿಮುಖರಾದೆವು. ಈ ಕಾರಣದಿಂದಾಗಿ ಪತಿವ್ರತೆ ಪದವಿಯಿಂದ ಕೆಳಗೆ ಬಿದ್ದೆವು. ಪೂರ್ಣ ಪುರುಷನ ಮೂಲಕ ಪದೇ ಪದೇ ಎಚ್ಚರಿಕೆ ದೊರೆತರೂ, ಕ್ಷರ ಪುರುಷನ ಮೇಲಿರುವ ನಮ್ಮ ಆಸಕ್ತಿ ಕಡಿಮೆಯಾಗಲಿಲ್ಲ. [ಇದೇ ಪ್ರಭಾವವು ಇಂದಿಗೂ ಕಾಲನ ಸೃಷ್ಟಿಯ ಮೇಲಿದೆ. ಯಾವ ರೀತಿ ನಮ್ಮ ಯುವ ಪೀಳಿಗೆ ಚಲನಚಿತ್ರ ನಟ–ನಟಿಯರ ಕೃತಕ ಅಭಿನಯ ಹಾಗೂ ತಮ್ಮ ದೈನಂದಿನ ಬದುಕಿಗಾಗಿ ಮಾಡುತ್ತಿರುವ ಪಾತ್ರಗಳ ಮೇಲೆ ಎಷ್ಟು ಆಸಕ್ತಿ ತಾಳುತ್ತಾರೆ. ಹೇಳಿದರೂ ಕೇಳಲ್ಲ. ಯಾರಾದರೂ ಸಿನಿಮಾ ನಟ–ನಟಿಯರು ಪಟ್ಟಣಕ್ಕೆ / ಯಾವುದೇ ಊರಿಗೆ ಬರುತ್ತಾರೆಂದಾದರೆ, ಅವರನ್ನು ನೋಡಲು ಮುಗ್ಧ ಮಕ್ಕಳ ಸಮೂಹ ಬಹು ಸಂಖ್ಯೆಯಲ್ಲಿ ಒಟ್ಟುಗೂಡುತ್ತಾರೆ. ಏನು ಕೊಳ್ಳುವುದಿಲ್ಲ ಏನು ತಗೊಳುವುದಿಲ್ಲ, ಅವರ

ದೈನಂದಿನ ಬದುಕಿಗಾಗಿ ನಟ-ನಟಿಯರು ಹಣ ಸಂಪಾದಿಸುತ್ತಿದ್ದಾರೆ. ಅಪ್ಪ-ಅಮ್ಮ ಎಷ್ಟು ಬುದ್ಧಿ ಹೇಳಿದರೂ ಮಕ್ಕಳು ಕೇಳಲ್ಲ, ಎಲ್ಲಾದರೂ, ಎಂದಾದರೂ ಕದ್ದು-ಮುಚ್ಚಿ ಹೋಗುತ್ತಿರುತ್ತಾರೆ.]

ಪೂರ್ಣ ಬ್ರಹ್ಮ ಕವಿರ್ದೇವರು (ಸತ್ಯ ಕಬೀರರು) ಕ್ಷರ ಪುರುಷನನ್ನು ನಿನಗೇನು ಬೇಕು? ಎಂದು ಕೇಳಿದರು, ಆಗ ಅವನು ನನಗೆ ಈ ಜಾಗ ಸಾಲದು, ಪ್ರತ್ಯೇಕವಾದ ದ್ವೀಪವನ್ನು ದಯಮಾಡಿ ಕೊಡಬೇಕು ಎಂದು ಕೇಳಿದನು. ಹಕ್ಕಾ ಕಬೀರ (ಸತ್ಯ ಕಬೀರ)ರು ಅವನಿಗೆ 21 ಬ್ರಹ್ಮಾಂಡಗಳನ್ನು ಅನುಗ್ರಹಿಸಿದರು. ಕೆಲ ಸಮಯದ ನಂತರ ಜ್ಯೋತಿನಿರಂಜನ ಈ ದ್ವೀಪಗಳಲ್ಲಿ ಏನಾದರೂ ರಚನೆ ಮಾಡಬೇಕು, ಖಾಲಿ ಬ್ರಹ್ಮಾಂಡ (ಫ್ಲಾಟ್) ಏತಕ್ಕೆ? ಪ್ರಯೋಜನವಿಲ್ಲ ಎಂದು ಯೋಚಿಸಿದನು. ಈ ವಿಚಾರ ಮಾಡಿ 70 ಯುಗಗಳವರೆಗೆ ತಪಸ್ಸನ್ನು ಮಾಡಿ. ಪೂರ್ಣ ಬ್ರಹ್ಮ ಕವಿರ್ದೇವರನ್ನು ರಚನೆಯ ಸಾಮಾಗ್ರಿಗಳಿಗಾಗಿ ಪ್ರಾರ್ಥಿಸಿದನು. ಆಗ ಅವರು (ಕವಿರ್ದೇವರು) ಮೂರು ಗುಣಗಳು ಮತ್ತು ಐದು ತತ್ವಗಳನ್ನು ಅನುಗ್ರಹಿಸಿದರು. ಇದರಿಂದ ಜ್ಯೋತಿ ನಿರಂಜನ ತನ್ನ ಬ್ರಹ್ಮಾಂಡದಲ್ಲಿ ಸೃಷ್ಟಿ ರಚಿಸಿ, ನಂತರ ಯೋಚಿಸಿದನು. ಇವುಗಳಲ್ಲಿ ಜೀವಗಳಿರಬೇಕು. ಒಬ್ಬನೇ ಇರಲು ಮನಸ್ಸು ಬರುತ್ತಿಲ್ಲ. ನಂತರ 64 ಯುಗಗಳವರೆಗೆ ತಪಸ್ಸು ಮಾಡಿದನು. ಪರಮಾತ್ಮ ಕವಿರ್ದೇವರು ಕೇಳಿದಾಗ ಹೇಳಿದನು-"ನನಗೆ ಕೆಲವು ಆತ್ಮಗಳನ್ನು ಕೊಡಿ ಒಬ್ಬನೇ ಇರಲು ಮನಸ್ಸಾಗುತ್ತಿಲ್ಲ" ಆಗ ಸತ್ಯಪುರುಷ ಕವಿರಗ್ನಿ (ಕಬೀರ್ ಪರಮೇಶ್ವರ) ಹೇಳಿದರು ಬ್ರಹ್ಮ ನಿನ್ನ ತಪದ ಫಲವಾಗಿ ನಿನಗೆ ಬೇರೆ ಇನ್ನಷ್ಟು ಬ್ರಹ್ಮಾಂಡಗಳನ್ನು ಕೊಡುವೆ ಆದರೆ, ನನ್ನ ಆತ್ಮಗಳನ್ನು ನಿನ್ನ ಜಪ-ತಪ ಸಾಧನೆಯ ಫಲವಾಗಿ ಕೊಡಲು ಸಾಧ್ಯವಿಲ್ಲ". ಒಂದುವೇಳೆ ಸ್ವಇಚ್ಛೆಯಿಂದ ಯಾರಾದರೂ ಹೋಗಬಯಸಿದರೆ ಹೋಗಬಹುದು ಎಂದರು. ಸಮರ್ಥ ಕಬೀರರ ವಚನ ಕೇಳಿ ಜ್ಯೋತಿನಿರಂಜನ ನಮ್ಮ ಬಳಿ ಬಂದನು. ನಾವೆಲ್ಲರು ಅವನನ್ನು ಸುತ್ತಿಕೊಂಡು ನಿಂತೆವು ಏಕೆಂದರೆ ಮೊದಲಿನಿಂದಲೂ ನಮಗೆ ಅವನಲ್ಲಿ ಆಸಕ್ತಿ ಇತ್ತು. ಆಗ ಜ್ಯೋತಿನಿರಂಜನ ನಮ್ಮೊಂದಿಗೆ ಹೇಳಿದನು.

"ನನಗೆ ತಂದೆಯವರು ಬೇರೆ 21 ಬ್ರಹ್ಮಾಂಡಗಳನ್ನು ಕೊಟ್ಟಿದ್ದಾರೆ. ನಾನು ಅಲ್ಲಿ ನಾನಾ ಪ್ರಕಾರದ ರಮಣೀಯ ಸ್ಥಾನಗಳನ್ನು ರಚಿಸಿದ್ದೇನೆ. ಏನು ನೀವು ನನ್ನ ಜೊತೆ ಬರುವಿರಾ? ಎಂದಾಗ". ನಾವೇಲ್ಲರು ಯಾರು ಇವತ್ತು ಈ 21 ಬ್ರಹ್ಮಾಂಡದಲ್ಲಿ ಕಷ್ಟಪಡುತ್ತಿರುವರೋ, ನಮಗೆ ತಂದೆಯ ಅನುಮತಿ ಸಿಕ್ಕಿದರೆ ನಾವು ಬರುವೆವು ಎಂದೆವು. ಆಗ ಕ್ಷರ ಪುರುಷನು ಪೂರ್ಣ ಬ್ರಹ್ಮ ಕವಿರ್ದೇವರಲ್ಲಿಗೆ ಹೋಗಿ ಎಲ್ಲಾ ಮಾತು ಹೇಳಿದನು. ಆಗ ಕವಿರಗ್ನಿ (ಕಬೀರ್ ಪರಮೇಶ್ವರ) ರು ನನ್ನ ಮುಂದೆ ನಿನ್ನ ಜೊತೆ ಬರಲು ಇಚ್ಛಿಸುವವರಿಗೆ ಆಜ್ಞೆಕೊಡುವೆ ಎಂದರು. ಕ್ಷರ ಪುರುಷ ಹಾಗೂ ಪರಮ ಅಕ್ಷರ ಪುರುಷ (ಕವಿರಮಿತೌಜಾ=ಕವಿರ್ ಅಮಿತ ಔಜಾ ಅಂದರೆ ಯಾರ ಶಕ್ತಿಯ ಪಾರವೇ ಇಲ್ಲ, ಅವನೇ ಕಬೀರ) ಇಬ್ಬರೂ ನಮ್ಮ (ಹಂಸಾತ್ಮಗಳ) ಬಳಿಗೆ ಬಂದರು. ಸತ್ಯ ಕವಿರ್ದೇವ ಯಾವ ಆತ್ಮಗಳು ಬ್ರಹ್ಮನೊಂದಿಗೆ ಹೋಗಲು ಬಯಸುತ್ತಿದ್ದಿರಿ ತಮ್ಮ ಕೈ ಮೇಲೆತ್ತಿ ಎಂದರು. ತಂದೆಯ ಎದುರು ಕೈ ಎತ್ತಲು ಯಾರಿಗೂ ಧೈರ್ಯ ಬರಲಿಲ್ಲ. ಯಾರೂ ಒಪ್ಪಿಗೆ ಕೊಡಲಿಲ್ಲ. ಬಹಳ ಸಮಯದವರೆಗೆ ಶಾಂತಿ ಆವರಿಸಿತ್ತು. ನಂತರ ಒಂದು ಹಂಸಾತ್ಮವು ಧೈರ್ಯ ಮಾಡಿ ತಾನು ಹೋಗುವುದಾಗಿ ಸಮ್ಮತಿ ಸೂಚಿಸಿತು. ತದನಂತರ ಒಬ್ಬರೊಬ್ಬರನ್ನು ನೋಡಿ (ಯಾರು ಇಂದು ಕಾಲನ (ಬ್ರಹ್ಮನ) 21 ಬ್ರಹ್ಮಾಂಡದಲ್ಲಿ ಸಿಲುಕಿಕೊಂಡಿರುವರು) ಆತ್ಮಗಳಾದ ನಾವೆಲ್ಲರೂ ಸಮ್ಮತಿ ಸೂಚಿಸಿದೆವು. ಜ್ಯೋತಿ ನಿರಂಜನನಿಗೆ ಪರಮೇಶ್ವರ ಕಬೀರರು ಹೇಳಿದರು "ನೀನೀಗ ನಿನ್ನ ಸ್ಥಾನಕ್ಕೆ ಹೋಗು" ಯಾರೆಲ್ಲಾ ಹಂಸಾತ್ಮಗಳು ನಿನ್ನೊಂದಿಗೆ ಬರಲು ಒಪ್ಪಿಗೆ ಕೊಟ್ಟಿರುವರೊ, ಅವರನ್ನೆಲ್ಲಾ ನಾನು ನಿನ್ನ ಹತ್ತಿರ ಕಳುಹಿಸಿ ಕೊಡುತ್ತೇನೆ. ಜ್ಯೋತಿ ನಿರಂಜನ ತನ್ನ 21 ಬ್ರಹ್ಮಾಂಡದಲ್ಲಿ ಹೋದನು. ಆ ಸಮಯದವರೆಗೆ ಈ 21 ಬ್ರಹ್ಮಾಂಡಗಳೂ ಸತ್ಯಲೋಕದಲ್ಲೇ ಇದ್ದವು.

ಇದಾದ ಮೇಲೆ ಪೂರ್ಣ ಬ್ರಹ್ಮನು ಮೊದಲು ಒಪ್ಪಿಗೆ ಸೂಚಿಸಿದ ಆತ್ಮಕ್ಕೆ ಹುಡುಗಿಯ ರೂಪವನ್ನು ಕೊಟ್ಟನು, ಆದರೆ ಸ್ತ್ರೀ ಇಂದ್ರಿಯವನ್ನು ರಚಿಸಲಿಲ್ಲ. ಎಲ್ಲ ಆತ್ಮಗಳನ್ನೂ (ಯಾವ

ಆತ್ಮಗಳು ಜ್ಯೋತಿನಿರಂಜನನ್ನೊಂದಿಗೆ ಬರಲು ಸಮ್ಮತಿ ಕೊಟ್ಟಿದ್ದವು) ಹುಡುಗಿಯ ಶರೀರದ ಒಳಗೆ ಪ್ರವೇಶ ಮಾಡಿದನು ಹಾಗು ಅವಳಿಗೆ ಆಷ್ಟ್ರಾ (ಆದಿಮಾಯಾ/ ಪ್ರಕೃತಿದೇವಿ/ ದುರ್ಗಾ) ಎಂದು ಹೆಸರು ಬಂತು, ಸತ್ಯಪುರುಷನು ಹೇಳಿದನು. “ಪುತ್ರಿ ನಾನು ನಿನಗೆ ಶಬ್ದ (ವಚನ) ಶಕ್ತಿ ಪ್ರದಾನ ಮಾಡಿರುತ್ತೇನೆ. ಬ್ರಹ್ಮನು ಎಷ್ಟು ಜೀವಗಳನ್ನು ಉತ್ಪತ್ತಿ ಮಾಡಲು ಹೇಳುವನೋ, ಅಷ್ಟು ಜೀವಗಳನ್ನು ಉತ್ಪತ್ತಿ ಮಾಡು.” ನಂತರ ಪೂರ್ಣ ಬ್ರಹ್ಮನು ತನ್ನ ಪುತ್ರ ಸಹಜದಾಸನ ಮೂಲಕ ಪ್ರಕೃತಿಯನ್ನು ಕ್ಷರ ಪುರುಷನ ಹತ್ತಿರ ಕಳುಹಿಸಿದ. ಸಹಜದಾಸನು ಜ್ಯೋತಿ ನಿರಂಜನ (ಕ್ಷರ ಪುರುಷ) ನಿಗೆ ಹೇಳಿದನು. “ತಂದೆಯವರು ಈ ಸಹೋದರಿಯ ಶರೀರದಲ್ಲಿ (ತಮ್ಮೊಂದಿಗೆ ಬರಲು ಒಪ್ಪಿದ ಹಂಸಾತ್ಮಗಳನ್ನು) ಆ ಎಲ್ಲಾ ಆತ್ಮಗಳನ್ನು ಪ್ರವೇಶ ಮಾಡಿದ್ದಾರೆ ಹಾಗೂ ಇವಳಿಗೆ ಶಬ್ದ (ವಚನ) ಶಕ್ತಿಯನ್ನು ನೀಡಿದ್ದಾರೆ. ನೀವು ಎಷ್ಟು ಜೀವಗಳನ್ನು ಇಚ್ಛಿಸುವಿರೋ, ಅಷ್ಟು ಜೀವಗಳನ್ನು ಪ್ರಕೃತಿ ಉತ್ಪನ್ನ ಮಾಡುತ್ತಾಳೆ. ಹೀಗೆ ಹೇಳಿ ಸಹಜದಾಸನು ತನ್ನ ದ್ವೀಪಕ್ಕೆ ಹಿಂತಿರುಗಿದನು.

ಯುವತಿಯಾಗಿದ್ದ ಕಾರಣ ಹುಡುಗಿಯ ರೂಪ–ಬಣ್ಣ ಆಕರ್ಷಣೀಯವಾಗಿತ್ತು. ಬ್ರಹ್ಮನ ಒಳಗೆ ವಿಷಯವಾಸನೆ (ಕಾಮಬಯಕೆ) ಹುಟ್ಟಿಕೊಂಡಿತು. ಹಾಗು ಪ್ರಕೃತಿ ದೇವಿಯೊಂದಿಗೆ ಅಸಭ್ಯವರ್ತನೆಯನ್ನು ಮಾಡತೊಡಗಿದ. ತನಗೆ ತಂದೆಯವರು ಪ್ರದಾನ ಮಾಡಿರುವ ಶಬ್ದ (ವಚನ) ಶಕ್ತಿ ಇದೆ, ನೀವು ಬಯಸಿದಷ್ಟು ಜೀವಗಳನ್ನು ವಚನದಿಂದ ಉತ್ಪತ್ತಿ ಮಾಡುವೆನು. ನೀವು ಮೈಥುನ ಪರಂಪರೆ ಪ್ರಾರಂಭಿಸಬೇಡಿ. ನೀವು ಸಹ ಅದೇ ತಂದೆಯ ಶಬ್ದ ಶಕ್ತಿಯಿಂದ ಮೊಟ್ಟೆಯಿಂದ ಉತ್ಪನ್ನವಾಗಿದ್ದಿರಿ. ನಾನೂ ಸಹ ಅದೇ ತಂದೆಯವರಿಂದ ಉತ್ಪತ್ತಿಯಾಗಿರುವೆ. ಹೀಗಿರುವಾಗ ನಾವಿಬ್ಬರೂ ಅಣ್ಣ–ತಂಗಿಯರಾಗಿದ್ದೇವೆ. ಅಣ್ಣ–ತಂಗಿಯ ಈ ಸಂಯೋಗ ಮಹಾಪಾಪದ ಕಾರಣವಾಗುವುದು. ಆದರೆ ಜ್ಯೋತಿ ನಿರಂಜನನು, ಪ್ರಕೃತಿಯ ಒಂದು ಮಾತನ್ನು ಕೇಳಲಿಲ್ಲ. ಮತ್ತು ತನ್ನ ಶಬ್ದ (ವಚನ) ಶಕ್ತಿ ಮೂಲಕ ಉಗುರುಗಳಿಂದ ಸ್ತ್ರೀ ಇಂದ್ರಿ ಪ್ರಕೃತಿಗೆ ಸೃಷ್ಟಿಸಿದನು ಹಾಗು ಬಲಾತ್ಕರಿಸಲು ಇಚ್ಛಿಸಿದನು. ಆಗ ದುರ್ಗಾ ತನ್ನ ಮಾನರಕ್ಷಣೆಗೆ ಅನ್ಯ ಮಾರ್ಗ ಕಾಣದೆ. ಸೂಕ್ಷ್ಮರೂಪ ಧರಿಸಿ ಜ್ಯೋತಿ ನಿರಂಜನನ ತೆರೆದ ಬಾಯಿಯ ಮೂಲಕ ಹೊಟ್ಟೆಯಲ್ಲಿ ಪ್ರವೇಶಿದಳು ಮತ್ತು ಪೂರ್ಣ ಬ್ರಹ್ಮ (ಕವಿರ್ದೇವ) ರಲ್ಲಿ ತನ್ನ ರಕ್ಷಣೆಗಾಗಿ ಯಾಚಿಸಿದಳು. ಅಲ್ಲಿ ಪರಮೇಶ್ವರ ಕವಿರ್ದೇವರು ತನ್ನ ಪುತ್ರ, ಯೋಗ ಸಂತಾಯನ ಅರ್ಥಾತ್ ಯೋಗಜೀತನ ರೂಪದಲ್ಲಿ ಅಲ್ಲಿ ಪ್ರಕಟರಾದರು. ಹಾಗೂ ಆ ಕನ್ಯೆಯನ್ನು ಬ್ರಹ್ಮನ (ಜ್ಯೋತಿ ನಿರಂಜನ) ಉದರದಿಂದ ಹೊರಗೆ ತೆಗೆದರು. ಮತ್ತು ಬ್ರಹ್ಮನಿಗೆ ಹೇಳಿದರು. ಜ್ಯೋತಿ ನಿರಂಜನ ಇಂದಿನಿಂದ ನಿನ್ನ ಹೆಸರು “ಕಾಲ” ಎಂದಾಗುವುದು. ನಿನಗೆ ಹುಟ್ಟು–ಸಾವು ಆಗುತ್ತಿರುವುದು. ಆದ್ದರಿಂದ ನಿನ್ನ ಹೆಸರು ‘ಕ್ಷರ’ ಪುರುಷ ಎಂದಾಗುವುದು ಹಾಗು ಒಂದು ಲಕ್ಷ ಮಾನವ ಶರೀರಧಾರಿ ಜೀವಾತ್ಮಗಳನ್ನು ಪ್ರತಿದಿನ ತಿನ್ನುವೆ ಹಾಗೂ ಒಂದೂ ಕಾಲು ಲಕ್ಷ ಉತ್ಪನ್ನ ಮಾಡುವೆ. ನಿಮ್ಮಿಬ್ಬರನ್ನೂ 21 ಬ್ರಹ್ಮಾಂಡಗಳ ಸಹಿತ ಹೊರಹಾಕಲಾಗುತ್ತದೆ. (ಸತ್ಯಲೋಕದಿಂದ ಬೇರೆ) ಇಷ್ಟು ಹೇಳಿದ ಕೂಡಲೆ 21 ಬ್ರಹ್ಮಾಂಡಗಳು ವಿಮಾನದ ಹಾಗೆ ಹೊರಟವು. ಸಹಜದಾಸನ ದ್ವೀಪದ ಹತ್ತಿರದಿಂದ ಹಾದು ಹೋಗುತ್ತ ಸತ್ಯಲೋಕದಿಂದ 16 ಶಂಖ ಕೋಸ {1 ಕೋಸ ಸುಮಾರು 3 ಕಿ.ಮೀ ಇರುತ್ತದೆ} ದೂರದಲ್ಲಿ ಬಂದು ನಿಂತವು.

ವಿಶೇಷ ವಿವರಣೆ : ಈವರೆಗೆ ಮೂರು ಶಕ್ತಿಗಳ ವಿವರಣೆ ಬಂದಿದೆ.

1. ಪೂರ್ಣ ಬ್ರಹ್ಮ :– ಇವರನ್ನು ಬೇರೆ ಉಪಮಾತ್ಮಕ ನಾಮಗಳಿಂದಲೂ ಕರೆಯಲಾಗುತ್ತದೆ. ಉದಾ :– ಸತ್ಯಪುರುಷ, ಅಕಾಲ ಪುರುಷ, ಶಬ್ಧ ಸ್ವರೂಪಿ ರಾಮ, ಪರಮ ಅಕ್ಷರ ಬ್ರಹ್ಮ/ ಪುರುಷ ಇತ್ಯಾದಿ. ಈ ಪೂರ್ಣ ಬ್ರಹ್ಮ ಅಶಂಖ್ಯ ಬ್ರಹ್ಮಾಂಡಗಳ ಸ್ವಾಮಿ ಹಾಗೂ ವಾಸ್ತವವಾಗಿ ಅವಿನಾಶಿ ಆಗಿದ್ದಾರೆ.

2. ಪರಬ್ರಹ್ಮ :– ಇವನನ್ನು ಅಕ್ಷರ ಪುರುಷ ಎಂದೂ ಕರೆಯಲಾಗುತ್ತದೆ. ಇವನು ವಾಸ್ತವವಾಗಿ ಅವಿನಾಶಿ ಅಲ್ಲ. 7 ಶಂಖ ಬ್ರಹ್ಮಾಂಡಗಳ ಸ್ವಾಮಿ.

# ಒಂದು ಬ್ರಹ್ಮಾಂಡದ ಲಘು ಚಿತ್ರ



3. ಬ್ರಹ್ಮ :– ಇವನನ್ನು ಜ್ಯೋತಿ ನಿರಂಜನ, ಕಾಲ, ಕಾಲ ರೂಪಿ ಬ್ರಹ್ಮ, ಕೈಲ, ಕ್ಷರಪುರುಷ ಹಾಗೂ ಧರ್ಮರಾಯ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಇವನು 21 ಬ್ರಹ್ಮಾಂಡಗಳಿಗೆ ಮಾತ್ರ ಸ್ವಾಮಿ, ಈಗ ಮುಂದೆ ಇದೇ ಬ್ರಹ್ಮ (ಕಾಲ) ನ ಸೃಷ್ಟಿಯ ಒಂದು ಬ್ರಹ್ಮಾಂಡದ ಪರಿಚಯವನ್ನು ಕೊಡುವೆವು. ಇದರಲ್ಲಿ ಇನ್ನು ಮೂರು ಬೇರೆ ಹೆಸರುಗಳು ನಿಮಗೆ ಓದಲು ಸಿಗುವವು. ಬ್ರಹ್ಮಾ, ವಿಷ್ಣು ಹಾಗೂ ಶಿವ.

ಬ್ರಹ್ಮ ಹಾಗೂ ಬ್ರಹ್ಮಾನಲ್ಲಿ ಭೇದ :– ಒಂದು ಬ್ರಹ್ಮಾಂಡದ ಅತ್ಯುನ್ನತ ಸ್ಥಾನದಲ್ಲಿ ಸ್ವತಃ ಬ್ರಹ್ಮನು ಮೂರು ಗುಪ್ತ ಸ್ಥಾನಗಳನ್ನು ರಚನೆ ಮಾಡಿ, ಬ್ರಹ್ಮಾ–ವಿಷ್ಣು ಹಾಗೂ ಶಿವನ ರೂಪದಲ್ಲಿರುತ್ತಾನೆ. ಅವನ ಹೆಂಡತಿ ಪ್ರಕೃತಿಯ (ದುರ್ಗಾ) ಸಹಯೋಗದಿಂದ ಮೂರು ಪುತ್ರರನ್ನು ಉತ್ಪತ್ತಿ ಮಾಡುತ್ತಾನೆ. ಅವರ ಹೆಸರು ಸಹ ಬ್ರಹ್ಮಾ–ವಿಷ್ಣು ಹಾಗೂ ಶಿವ ಇಡುತ್ತಾನೆ. ಆ ಬ್ರಹ್ಮನ ಹಿರಿಯ ಪುತ್ರನೇ ಬ್ರಹ್ಮಾ. ಈ ಬ್ರಹ್ಮಾನು ಒಂದು ಬ್ರಹ್ಮಾಂಡದಲ್ಲಿ ಕೇವಲ ಮೂರು ಲೋಕಗಳಲ್ಲಿ (ಪೃಥ್ವಿಲೋಕ, ಸ್ವರ್ಗಲೋಕ ಹಾಗೂ ಪಾತಾಳಲೋಕದಲ್ಲಿ) ಒಂದು ರಜೋಗುಣ ವಿಭಾಗದ ಮಂತ್ರಿಯಾಗಿದ್ದಾನೆ. ಇವನನ್ನು ತ್ರಿಲೋಕೀಯ 'ಬ್ರಹ್ಮಾ' ಎನ್ನುತ್ತಾರೆ ಹಾಗೂ ಬ್ರಹ್ಮನು ಬ್ರಹ್ಮಲೋಕದಲ್ಲಿ ಬ್ರಹ್ಮಾ ರೂಪದಲ್ಲಿರುತ್ತಾನೆ, ಅವನನ್ನು ಮಹಾಬ್ರಹ್ಮಾ ಹಾಗೂ ಬ್ರಹ್ಮಲೋಕೀಯ ಬ್ರಹ್ಮಾ ಎಂದು ಹೇಳಲಾಗುತ್ತದೆ. ಇದೇ ಬ್ರಹ್ಮ (ಕಾಲ) ನನ್ನು ಮಹಾಬ್ರಹ್ಮಾ, ಮಹಾವಿಷ್ಣು, ಮಹಾಶಿವ (ಸದಾಶಿವ) ಎಂದೂ ಸಹ ಹೇಳುತ್ತಾರೆ.

ಶ್ರೀವಿಷ್ಣು ಪುರಾಣದಲ್ಲಿ ಪ್ರಮಾಣ:– ಚತುರ್ಥ ಅಂಶದ ಒಂದನೇ ಅಧ್ಯಾಯದ ಪುಟ 230 –231 ರಲ್ಲಿ, ಶ್ರೀ ಬ್ರಹ್ಮಾ ಹೇಳಿದ್ದಾನೆ:– ಆ ಅಜನ್ಮ, ಸರ್ವಮಯ ವಿಧಾತಾ, ಪರಮೇಶ್ವರನ ಆದಿ–ಮಧ್ಯ, ಅಂತ್ಯ ಸ್ವರೂಪ, ಸ್ವಭಾವ ಮತ್ತು ಸಾರ (ತತ್ವ) ವನ್ನು ನಾವು ತಿಳಿಯಲಾಗುದಿಲ್ಲ. (ಶ್ಲೋಕ 83)

ಯಾರು ನನ್ನ ರೂಪಧಾರಣೆ ಮಾಡಿ, ಪ್ರಪಂಚದ ರಚನೆ ಮಾಡುತ್ತಾನೆ, ಸ್ಥಿತಿಯ ಸಮಯದಲ್ಲಿ ಪುರುಷ ರೂಪವೆನಿದೆ ಹಾಗು ರುದ್ರ ರೂಪದಿಂದ ಪ್ರಪಂಚದ ನಾಶ ಮಾಡುತ್ತಾನೋ, ಅನಂತ ರೂಪದಿಂದ ಸಮಸ್ತ ವಿಶ್ವವನ್ನು ಧಾರಣೆ ಮಾಡುತ್ತಾನೆ. (ಶ್ಲೋಕ 86)

## "ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಮತ್ತು ಶ್ರೀ ಶಿವನ ಉತ್ಪತ್ತಿ"

ಕಾಲನು ಪ್ರಕೃತಿಗೆ ಹೇಳಿದ ಈಗ ನನಗೆ ಯಾರು ಏನು ಮಾಡಬಲ್ಲರು? ಮನಸೆಚ್ಛೆ ಮಾಡುವೆನು. ಆಗ ಪ್ರಕೃತಿಯು ನಿಮಗೆ ನಾಚಿಕೆಯಾಗಬೇಕು ಎಂದು ಹೇಳಿದಳು. ಪುನಃ ಬ್ರಹ್ಮನಿಗೆ ತಮ್ಮಿಬ್ಬರ ಸಂಬಂಧದ ಬಗ್ಗೆ ಹೇಳುತ್ತಾಳೆ. ನಾವಿಬ್ಬರೂ ಒಂದೇ ತಂದೆಯ ಶಬ್ದಶಕ್ತಿಯಿಂದ ಉತ್ಪನ್ನವಾದವರು ನಿಮ್ಮ ಉತ್ಪನ್ನ ಮೊಟ್ಟೆಯಿಂದ ಹಾಗೂ ನಂತರ ನನ್ನ ಉತ್ಪತ್ತಿ ವಚನದಿಂದ ಆಗಿದೆ, ಇನ್ನೊಂದು ನಾನು ನಿಮ್ಮ ಉದರದಿಂದ (ಹೊಟ್ಟೆಯಿಂದ) ಹೊರ ಬಂದವಳು. ಒಂದು ರೀತಿಯಲ್ಲಿ ತಂಗಿ, ಇನ್ನೊಂದು ರೀತಿಯಲ್ಲಿ ಮಗಳು ನೀವು ನನ್ನ ತಂದೆ. ಇಂತಹ ಪವಿತ್ರ ಸಂಬಂಧವನ್ನು ಕೆಡಸುವುದು ಮಹಾಪಾಪ. ನನ್ನ ಹತ್ತಿರ ತಂದೆಯವರು ಪ್ರದಾನ ಮಾಡಿರುವ ಶಬ್ದ ಶಕ್ತಿ ಇದೆ. ನೀವು ಬಯಸಿದಷ್ಟು ಜೀವಗಳನ್ನು ಉತ್ಪತ್ತಿ ಮಾಡಿಕೊಡುವೆ. ಆದರೆ ಜ್ಯೋತಿ ನಿರಂಜನ ಇವಳ ಮಾತನ್ನು ತಿರಸ್ಕರಿಸಿದ, "ಅಲ್ಲದೆ ನಗೀಗಾಗಲೆ ಸತ್ಯಲೋಕದಿಂದ ಹೊರಹಾಕಿರುವ ಶಿಕ್ಷೆ ದೊರೆತಾಗಿದೆ, ಈಗ ನಾನು ಮನಸ್ಸಿಗೆ ಬಂದ ಹಾಗೆ ಮಾಡುವೆ" ಎಂದು ಹೇಳಿ ಕಾಲನು ಬಲವಂತದಿಂದ ಪ್ರಕೃತಿಯೊಡನೆ ಮದುವೆಯಾದ ಹಾಗು ಮೂರು ಜನ ಪುತ್ರ (ರಜೋಗುಣಯುಕ್ತ ಬ್ರಹ್ಮಾ, ಸತೋಗುಣಯುಕ್ತ ವಿಷ್ಣು ಹಾಗೂ ತಮೋಗುಣಯುಕ್ತ ಶಿವಶಂಕರ)ರನ್ನು ಉತ್ಪತ್ತಿ ಮಾಡಿದನು. ಯುವಕರಾಗುವವರೆಗೆ ಮೂರೂ ಪುತ್ರರನ್ನು ದುರ್ಗೆಯ ಮೂಲಕ ಅಚೇತಗೊಳಿಸುತ್ತಾನೆ. (ಚೈತನ್ಯರಹಿತ) ನಂತರ ಯುವಕರಾದಮೇಲೆ ಬ್ರಹ್ಮಾನನ್ನು ಕಮಲಪುಷ್ಪದ ಮೇಲೆ, ಶ್ರೀ ವಿಷ್ಣುವನ್ನು ಶೇಷನಾಗನ ಶಯನದ ಮೇಲೆ, ಶ್ರೀ ಶಿವನನ್ನು ಕೈಲಾಸ ಪರ್ವತದ ಮೇಲೆ ಸಚೇತಗೊಳಿಸುತ್ತಾನೆ. ನಂತರ ಪ್ರಕೃತಿಯ ಮೂಲಕ ಈ ಮೂವರಿಗೂ ಮದುವೆ ಮಾಡಿಸುತ್ತಾನೆ. ನಂತರ ಕಾಲನ ಆದೇಶದಿಂದ ಪ್ರಕೃತಿ ಮೂವರಿಗೂ

ಒಂದು ಬ್ರಹ್ಮಾಂಡದಲ್ಲಿ ಮೂರು ಲೋಕ (ಭೂಲೋಕ–ಸ್ವರ್ಗಲೋಕ–ಪಾತಳಲೋಕ) ಗಳಲ್ಲಿ ಒಂದೊಂದು ವಿಭಾಗದ ಮಂತ್ರಿ (ಪ್ರಭು) ಎಂದು ನೇಮಿಸುತ್ತಾಳೆ. ರಜೋಗುಣ ವಿಭಾಗಕ್ಕೆ–ಬ್ರಹ್ಮಾ, ಸತೋಗುಣ ವಿಭಾಗಕ್ಕೆ ವಿಷ್ಣು, ತಮೋಗುಣ ವಿಭಾಗಕ್ಕೆ ಶಿವನನ್ನು ನೇಮಿಸಿದಳು ಹಾಗು ಕಾಲಬ್ರಹ್ಮ ಸ್ವತಃ ಗುಪ್ತರೂಪದಲ್ಲಿ (ಮಹಾಬ್ರಹ್ಮಾ–ಮಹಾವಿಷ್ಣು–ಮಹಾಶಿವನಾಗಿ) ಮುಖ್ಯಮಂತ್ರಿಯ ಪದವಿಯನ್ನು ನಿಭಾಯಿಸುತ್ತಾನೆ. ಒಂದು ಬ್ರಹ್ಮಾಂಡದಲ್ಲಿ ಒಂದು "ಬ್ರಹ್ಮ" ಲೋಕದ ರಚನೆ ಮಾಡಿದ್ದಾನೆ. ಅದರಲ್ಲಿ ಮೂರು ಗುಪ್ತ ಸ್ಥಾನಗಳನ್ನು ಮಾಡಿದ್ದಾನೆ. ಒಂದು ರಜೋಗುಣ ಪ್ರಧಾನ ಸ್ಥಾನ ಅಲ್ಲಿ ಈ ಬ್ರಹ್ಮ (ಕಾಲ) ಸ್ವಯಂ ಮಹಾಬ್ರಹ್ಮಾ (ಮುಖ್ಯಮಂತ್ರಿ) ರೂಪದಲ್ಲಿರುತ್ತಾನೆ ಹಾಗು ತನ್ನ ಪತ್ನಿ ದುರ್ಗಾಳನ್ನು ಮಹಾಸಾವಿತ್ರಿ ರೂಪದಲ್ಲಿಡುತ್ತಾನೆ. ಈ ಇಬ್ಬರ ಸಂಯೋಗದಿಂದ ಹುಟ್ಟಿದ ಪುತ್ರನು ರಜೋಗುಣಯುಕ್ತನಾಗುತ್ತಾನೆ ಇವನನ್ನು 'ಬ್ರಹ್ಮಾ' ಎನ್ನಲಾಗುತ್ತದೆ. ಎರಡನೆಯ ಸ್ಥಾನವನ್ನು ಸತೋಗುಣ ಪ್ರಧಾನ ಮಾಡಿ, ಅಲ್ಲಿ ಈ ಕ್ಷರಪುರುಷನು ಸ್ವಯಂ ಮಹಾವಿಷ್ಣು ರೂಪದಿಂದ ನೆಲಸಿ ಹಾಗು ತನ್ನ ಪತ್ನಿ ದುರ್ಗೆಯನ್ನು ಮಹಾಲಕ್ಷ್ಮಿರೂಪದಲ್ಲಿ ಇರಿಸುತ್ತಾನೆ. ಇವರಿಬ್ಬರ ಸಂಯೋಗದಿಂದ ಜನಿಸಿದ ಪುತ್ರನು ಸತ್ವಗುಣಯುಕ್ತನಾಗುತ್ತಾನೆ. ಅವನು'ವಿಷ್ಣು' ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ. ಮೂರನೆಯ ಸ್ಥಾನವನ್ನು ಕ್ಷರ ಪುರುಷನು ತಮೋಗುಣ ಪ್ರಧಾನ ಮಾಡಿ, ಸ್ವಯಂ ಸದಾ ಶಿವರೂಪದಲ್ಲಿ ನೆಲಸಿ ತನ್ನ ಪತ್ನಿ ದುರ್ಗೆಯನ್ನು ಮಹಾಪಾರ್ವತಿ ರೂಪದಲ್ಲಿರಿಸುತ್ತಾನೆ. ಇವರಿಬ್ಬರಿಂದ ಜನಿಸುವ ಪುತ್ರ ತಮೋಗುಣಯುಕ್ತನಾಗಿದ್ದು 'ಶಿವ' ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ.

(ಪ್ರಮಾಣಕ್ಕಾಗಿ ನೋಡಿರಿ ಪವಿತ್ರ ಶ್ರೀ ಶಿವ ಮಹಾಪುರಾಣ, ವಿದ್ವೇಶ್ವರ ಸಂಹಿತೆಯ ಅಧ್ಯಾಯ **10–11** ಪುಟ **21–26**ರಲ್ಲಿ ಬ್ರಹ್ಮಾ–ವಿಷ್ಣು–ರುದ್ರ, ಮಹೇಶ್ವರರಲ್ಲದೆ ಬೇರೆ ಸದಾಶಿವ ನಾಮ ಸಹ ಉಲ್ಲೇಖವಿದೆ. ರುದ್ರ ಸಂಹಿತೆಯ ಅಧ್ಯಾಯ **6** ಹಾಗೂ **7, 9** ಪುಟ ಸಂಖ್ಯೆ **81–90**ರಲ್ಲಿ ಉಲ್ಲೇಖವಿದೆ. ಇದರ ಸಂಪಾದಕರು ಹನುಮಾನ್ ಪ್ರಸಾದ್ ಪೋದ್ದಾರ್, ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್–ಗೀತಾಪ್ರೆಸ್ ಗೋರಖಪುರದಿಂದ ಪ್ರಕಾಶಿತ ಹಾಗೂ ಪವಿತ್ರ ಗ್ರಂಥ. ಶ್ರೀಮದ್ದೇವಿಮಹಾಪುರಾಣದ ಮೂರನೇ ಸ್ಕಂದ ಅಧ್ಯಾಯ **1–3** ಪುಟ ಸಂಖ್ಯೆ **97–103**ರ ವರೆಗೆ ಗೀತಾಪ್ರೆಸ್ ಗೋರಖಪುರದಿಂದ ಪ್ರಕಾಶಿತ, ಇದರ ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್) ನಂತರ ಇವರನ್ನೇ ಮೋಸದಲ್ಲಿಟ್ಟು ತನಗೆ ತಿನ್ನುವುದಕ್ಕಾಗಿ ಶ್ರೀ ಬ್ರಹ್ಮಾನಿಂದ ಜೀವಿಗಳನ್ನು ಸೃಷ್ಟಿ ಮಾಡಿಸುತ್ತಾನೆ. ಶ್ರೀ ವಿಷ್ಣುವಿನಿಂದ (ಸ್ಥಿತಿ) ಮೊಹ ಮಮತೆಯಲ್ಲಿ ಬಂಧಿಸುತ್ತಾನೆ. ಹಾಗೂ ಶ್ರೀ ಶಿವನಿಂದ ಸಂಹಾರ ಮಾಡಿಸುತ್ತಾನೆ. (ಏಕೆಂದರೆ ಕಾಲ ಪುರುಷನು ಶಾಪ ಗ್ರಸ್ತನಾಗಿರುವುದರಿಂದ ಒಂದು ಲಕ್ಷ ಮಾನವ ಶರೀರ ಧಾರಣೆ ಮಾಡಿರುವ ಜೀವಾತ್ಮಗಳ ಸೂಕ್ಷ್ಮ ಶರೀರದಿಂದ ಕೊಳೆ ತೆಗೆದು ತಿನ್ನುವನು ಅದಕ್ಕಾಗಿ **21**ನೇ ಬ್ರಹ್ಮಾಂಡದಲ್ಲಿ ಒಂದು "ತಪ್ತಶಿಲೆ" ಇದೆ. ಅದು ಸ್ವತಃ ಬಹಳ ಬಿಸಿಯಾಗಿರುತ್ತದೆ. ಅದರ ಮೇಲೆ ಒಂದು ಲಕ್ಷ ಮಾನವ ಶರೀರ ಧಾರಣೆ ಮಾಡಿರುವ ಜೀವಾತ್ಮಗಳ ಸೂಕ್ಷ್ಮ ಶರೀರವನ್ನು ಬೆಯಿಸಿ ಕೊಳೆ ತೆಗೆದು ತಿನ್ನುತ್ತಾನೆ. ಜೀವಗಳು (ಆತ್ಮ) ಸಾಯುವುದಿಲ್ಲ ಆದರೆ ಅಸಹನೀಯವಾದ ಕಷ್ಟಕ್ಕೆ ಒಳಗಾಗುತ್ತವೆ. ನಂತರ ಅವುಗಳ ಕರ್ಮಫಲಕ್ಕೆ ಅನುಗುಣವಾಗಿ ಬೇರೆ ಶರೀರವನ್ನು ನೀಡುತ್ತಾನೆ.) ಈ ಕ್ರಿಯೆ ಹೇಗೆ ನಡೆಯುತ್ತದೆ ಉದಾಹರಣೆಗೆ :– ಒಂದು ಮನೆಯಲ್ಲಿ ಮೂರು ಕೊಠಡಿಗಳಿವೆ. ಒಂದರಲ್ಲಿ ಅಶ್ಲೀಲವಾದ ಚಿತ್ರಗಳಿವೆ, ಈ ಕೊಠಡಿಯಲ್ಲಿ ಹೋಗುತ್ತಲೇ ಮಲಿನ ವಿಚಾರಗಳು ಉತ್ಪನ್ನವಾಗುತ್ತವೆ. ಎರಡನೆಯ ಕೊಠಡಿಯಲ್ಲಿ ಸಾಧುಸಂತರ ಭಕ್ತರ ಚಿತ್ರಗಳಿವೆ, ಈ ಕೊಠಡಿಯಲ್ಲಿ ಹೋಗುತ್ತಲೇ ಒಳ್ಳೆ ವಿಚಾರ, ಭಕ್ತಿಭಾವ ಬರುತ್ತದೆ. ಮೂರನೆಯ ಕೊಠಡಿಯಲ್ಲಿ ದೇಶಭಕ್ತರ, ದೇಶಕ್ಕಾಗಿ ಬಲಿದಾನವಾದವರ ಚಿತ್ರಗಳಿವೆ. ಈ ಕೊಠಡಿಯಲ್ಲಿ ಹೋಗುತ್ತಲೇ ಮನಸ್ಸಿನಲ್ಲಿ ದೇಶಭಕ್ತಿ, ರೋಷ ಉತ್ಪನ್ನವಾಗುತ್ತದೆ. ಇದೇ ರೀತಿ ಬ್ರಹ್ಮ (ಕಾಲ)ನು ತನ್ನ ತಿಳುವಳಿಕೆಯಿಂದ ಮೇಲಿನ ಮೂರು ಗುಣಗಳ ಪ್ರಧಾನ ಸ್ಥಾನಗಳನ್ನು ರಚಿಸಿದ್ದಾನೆ.

# "ಮೂರು ಗುಣಗಳು ಯಾವುವು? ಪ್ರಮಾಣ ಸಹಿತ"

ಮೂರು ಗುಣಗಳು ರಜೋಗುಣ–ಬ್ರಹ್ಮಾ, ಸತೋಗುಣ–ವಿಷ್ಣು, ತಮೋಗುಣ–ಶಿವನಾಗಿದ್ದಾನೆ. ಬ್ರಹ್ಮ (ಕಾಲ) ಹಾಗೂ ಪ್ರಕೃತಿ (ದುರ್ಗಾ) ಯಿಂದ ಉತ್ಪನ್ನರಾಗಿದ್ದಾರೆ. ಮೂವರೂ ನಾಶಹೊಂದುವವರು.

ಪ್ರಮಾಣ :– ಗೀತಾಪ್ರೆಸ್ ಗೊರಖ್‌ಪುರ್‌ದಿಂದ ಪ್ರಕಾಶಿತ "ಶ್ರೀ ಶಿವ ಮಹಾಪುರಾಣ" ಇದರ ಸಂಪಾದಕರು ಶ್ರೀ ಹನುಮಾನ್ ಪ್ರಸಾದ್ ಪೋದ್ದಾರ್, ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಣಕರ್. ಅಧ್ಯಾಯ 10–11 ಪುಟ 21–26 ವಿದ್ವೇಶ್ವರ ಸಂಹಿತೆಯಲ್ಲಿ ಉಲ್ಲೇಖವಿದೆ ಹಾಗೂ ರುದ್ರ ಸಂಹಿತೆಯ 9ನೇ ಅಧ್ಯಾಯದ 90ನೇ ಪುಟದಲ್ಲಿ ಉಲ್ಲೇಖವಿದೆ. ಈ ಪ್ರಕಾರ ಬ್ರಹ್ಮಾ–ವಿಷ್ಣು ಹಾಗೂ ಶಿವ ಮೂರು ದೇವತೆಗಳಲ್ಲಿ ಗುಣಗಳಿವೆ. ಆದರೆ ಶಿವ (ಬ್ರಹ್ಮ–ಕಾಲ) ಗುಣಾತೀತ ಎಂದು ಹೇಳಲಾಗಿದೆ.

ಎರಡನೆಯ ಪ್ರಮಾಣ :– ಗೀತಾಪ್ರೆಸ್ ಗೋರಖ್‌ಪುರದಿಂದ ಪ್ರಕಾಶಿತಗೊಂಡ "ಶ್ರೀಮದ್ ದೇವಿಭಾಗವತ ಪುರಾಣ" ಇದರ ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್. ಅಧ್ಯಾಯ 4–5ರ ಮೂರನೆಯ ಸ್ಕಂದ ಪುಟ 105ರಲ್ಲಿ ಭಗವಂತ ವಿಷ್ಣು ದುರ್ಗೆಯ ಸ್ತುತಿ ಮಾಡಿದನು ಮತ್ತು ಹೇಳಿದನು "ನಾನು (ವಿಷ್ಣು), ಬ್ರಹ್ಮಾ ಹಾಗೂ ಶಂಕರ ನಿಮ್ಮ ಕೃಪೆಯಿಂದ ವಿದ್ಯಮಾನರಾಗಿದ್ದೇವೆ ನಮ್ಮ ಅವಿರ್ಭಾವ (ಹುಟ್ಟು) ತಿರೋಭಾವ (ಮರಣ) ವಾಗುತ್ತಿರುತ್ತದೆ, ನಾವು ನಿತ್ಯರಲ್ಲ (ಅವಿನಾಶಿ ಅಲ್ಲ) ನೀನೇ ನಿತ್ಯಳು ಜಗನ್ಮಾತೆ, ಜಗತ್ ಜನನಿ, ನೀನೇ ಪ್ರಕೃತಿ ಮತ್ತು ಸನಾತನೀ ದೇವಿಯಾಗಿರುವೆ. ಭಗವಂತ ಶಂಕರನು ಹೇಳಿದನು. ಬ್ರಹ್ಮಾ–ವಿಷ್ಣು ನಿನ್ನಿಂದ ಉತ್ಪನ್ನರಾದ ಮೇಲೆ ನಂತರ ಉತ್ಪನ್ನನಾದ ನಾನು ತಮೋಗುಣ ಲೀಲೆಯವ ಶಂಕರ ನಿನ್ನ ಸಂತಾನವಲ್ಲವೆ? ಅಂದರೆ ನನ್ನನ್ನು ಉತ್ಪನ್ನ ಮಾಡಿದವಳು ನೀನೆ. ಈ ಪ್ರಪಂಚದ ಸೃಷ್ಟಿ–ಸ್ಥಿತಿ–ಸಂಹಾರಗಳಲ್ಲಿ ನಿನ್ನ ಗುಣಗಳು ಎಂದಿಗೂ ಇರುತ್ತವೆ. ಈ ಮೂರು ಗುಣಗಳಿಂದ ಉತ್ಪನ್ನರಾದ ನಾವು ಬ್ರಹ್ಮಾ–ವಿಷ್ಣು–ಶಂಕರ ನಿಯಮಾನುಸಾರವಾಗಿ (ಯಾರ ಹಣೆಬರಹದಲ್ಲಿ ಎಷ್ಟು ಬರೆದಿರುತ್ತದೆಯೋ ಅಷ್ಟೇ ಕೊಡುತ್ತೇವೆ ಹೆಚ್ಚು–ಕಡಿಮೆ ಮಾಡಲಾರೆವು) ಕಾರ್ಯದಲ್ಲಿ ತತ್ಪರರಾಗಿದ್ದೇವೆ.

ಮೇಲಿನ ಈ ವಿವರಣೆ ಕನ್ನಡ ಮತ್ತು ಹಿಂದಿಯಲ್ಲಿ ಅನುವಾದಿತವಾಗಿರುವ "ಶ್ರೀ ದೇವಿ ಮಹಾಪುರಾಣ" ದಿಂದ ತೆಗೆದು ಕೊಂಡಿದೆ. ಇದರಲ್ಲಿ ಕೆಲವು ತತ್ವಗಳನ್ನು ಅಡಗಿಸಿಡಲಾಗಿದೆ. ಆದ್ದರಿಂದ ಇದೇ ಪ್ರಮಾಣವನ್ನು ನೋಡಿ. "ಶ್ರೀ ಮದ್ ದೇವಿಭಾಗವತ ಮಹಾಪುರಾಣ" ಸಭಾಷಟಿಕಮ್ ಸಮಹಾತ್ಯಮ್, ಖೇಮರಾಜ ಶ್ರೀ ಕೃಷ್ಣದಾಸ್, ಪ್ರಕಾಶನ ಮುಂಬಯಿ, ಇದರಲ್ಲಿ ಸಂಸ್ಕೃತ ಸಹಿತ ಹಿಂದಿ ಅನುವಾದ ಮಾಡಿದೆ.3ನೇ ಸ್ಕಂದದ 4ನೇ ಅಧ್ಯಾಯ ಪುಟ10,ಶ್ಲೋಕ 42.

ಬ್ರಹ್ಮಾ – ಅಹಂ ಮಹೇಶ್ವರಃ ಫಿಲ ತೇ ಪ್ರಭಾವಾತ್ಸರ್ವೇ ವಯಂ ಜನಿ ಯುತಾ ನ
ಯದಾ ತೂ ನಿತ್ಯಾಃ ಕೆ ಅನ್ಯೆ ಸುರಾಃ ಶತಮುಖ ಪ್ರಮುಖಾಃ ಚ ನಿತ್ಯಾ ನಿತ್ಯಾ ತ್ಯಮೇವ
ಜನನಿ ಪ್ರಕೃತಿಃ ಪುರಾಣಾ (42)

ಅನುವಾದ :– (ವಿಷ್ಣು ಹೇಳಿದನು) ಹೇ ಮಾತೆ! ಬ್ರಹ್ಮಾ, ನಾನು ಹಾಗು ಶಿವ ನಿನ್ನದೇ ಪ್ರಭಾವದಿಂದ ಜನಿಸಿದ್ದೇವೆ. ನಿತ್ಯರಲ್ಲ ಅಂದರೆ ಅವಿನಾಶಿಯಲ್ಲ. ನಂತರ ಅನ್ಯ ಇಂದ್ರಾದಿ ಬೇರೆ ದೇವತೆಗಳು ಹೇಗೆ ನಿತ್ಯರಾಗಲು ಸಾಧ್ಯ? ನೀನೇ ಅವಿನಾಶಿಯಾಗಿರುವೆ ಪ್ರಕೃತಿ ಹಾಗೂ ಸನಾತನಿ ದೇವಿಯಾಗಿರುವೆ. (42)

**ಅಧ್ಯಾಯ 5, ಪುಟ 11–12 ಶ್ಲೋಕ 8 :–**

ಯದಿ ದಯಾದ್ರಮನಾ ನ ಸದಾಂಬಿಕೆ ಕಥಮಹಂ ವಿಹಿತಃ ಚ ತಮೋಗುಣಃ
ಕಮಲಜಶ್ಚ ರಜೋಗುಣ ಸಂಭವಃ ಸುವಿಹಿತಃ ಕಿಮು ಸತ್ವಗುಣೋ ಹರಿಃ (8)

ಅನುವಾದ :– ಭಗವಂತ ಶಂಕರ ಹೇಳಿದ, ಹೇ ಮಾತೆ ! ನಿನಗೆ ನಮ್ಮ ಮೇಲೆ ದಯೆ ಇದ್ದರೆ, ನನ್ನನ್ನು ತಮೋಗುಣ ಏಕೆ ಮಾಡಿದೆ? ಕಮಲದಿಂದ ಉತ್ಪನ್ನನಾದ ಬ್ರಹ್ಮಾನನ್ನು ರಜೋಗುಣ ಏತಕ್ಕಾಗಿ ಮಾಡಿದೆ? ಹಾಗೂ ವಿಷ್ಣುವನ್ನು ಸತೋಗುಣ ಏಕೆ ಮಾಡಿದೆ? ಅರ್ಥಾತ್ ಜೀವಿಗಳ ಜನ್ಮ–ಮೃತ್ಯು ರೂಪದ ದುಷ್ಕರ್ಮದಲ್ಲಿ ನಮ್ಮನ್ನು ಏಕೆ ತೊಡಗಿಸಿರುವೆ?

**ಶ್ಲೋಕ 12:**– "ರಮಯಸೆ ಸ್ವಪತಿಂ ಪುರುಷಂ ಸದಾ ತವ ಗತಿಂ ನ ಹಿ ವಿಹ ವಿದಮ್ ಶಿವೇ"

ಅನುವಾದ :– ನಿನ್ನ ಪತಿ ಪುರುಷ ಅರ್ಥಾತ್ ಕಾಲ ಭಗವಂತನೊಂದಿಗೆ ಯಾವಾಗಲೂ ಭೋಗ ವಿಲಾಸ ಮಾಡುತ್ತಿರುತ್ತಿಯಾ. ನಿನ್ನ ಗತಿಯನ್ನು ಯಾರೂ ತಿಳಿದಿಲ್ಲ. (12)

ನಿಷ್ಕರ್ಷ:– ಮೇಲಿನ ಪ್ರಮಾಣಗಳಿಂದ ಸ್ಪಷ್ಟವಾಯ್ತೇನೆಂದರೆ – ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು, ಹಾಗೂ ತಮೋಗುಣ ಶಿವನೆಂದು. ಮೂವರೂ ನಾಶ ಹೊಂದುವವರು. ದುರ್ಗಾಳೊಂದಿಗೆ ಅವಳ ಪತಿ ಕಾಲ ಬ್ರಹ್ಮ ಸದಾ ಭೋಗ–ವಿಲಾಸ ಮಾಡುತ್ತಿರುತ್ತಾನೆ.

## "ಕಾಲಬ್ರಹ್ಮನ ಅವ್ಯಕ್ತನಾಗುವ ಪ್ರತಿಜ್ಞೆ"

### ಸೂಕ್ಷ್ಮವೇದದಿಂದ ಉಳಿದ ಸೃಷ್ಟಿ ರಚನೆ...

ಮೂರು ಪುತ್ರರ ಉತ್ಪತ್ತಿಯ ನಂತರ ಬ್ರಹ್ಮನು ತನ್ನ ಪತ್ನಿ ದುರ್ಗಾ (ಪ್ರಕೃತಿ) ಗೆ ಹೇಳಿದ "ನಾನು ಪ್ರತಿಜ್ಞೆ ಮಾಡುತ್ತೇನೆ, ಭವಿಷ್ಯದಲ್ಲಿ ನನ್ನ ವಾಸ್ತವಿಕ ರೂಪದಲ್ಲಿ ಯಾರಿಗೂ ದರ್ಶನ ನೀಡುವುದಿಲ್ಲ. ಈ ಕಾರಣದಿಂದ ನನ್ನನ್ನು ಅವ್ಯಕ್ತ (ಅಗೋಚರ) ಎಂದುಕೊಳ್ಳುವರು. ದುರ್ಗೆಗೆ ಈ ನನ್ನ ರಹಸ್ಯವನ್ನು ನೀನು ಯಾರಿಗೂ ಹೇಳಬೇಡ. ನಾನು ಗುಪ್ತನಾಗಿರುವೆನು ಎಂದು ಹೇಳಿದನು." ಆಗ ದುರ್ಗಾ ಕೇಳಿದಳು:– "ನೀವು ನಿಮ್ಮ ಪುತ್ರರಿಗೂ ದರ್ಶನ ನೀಡುವುದಿಲ್ಲವೆ?" ಬ್ರಹ್ಮ ಹೇಳಿದನು, "ನನ್ನ ಪುತ್ರರಿಗಾಗಲಿ, ಬೇರೆ ಯಾರಿಗೇ ಆಗಲಿ, ಬೇರೆ ಯಾವುದೇ ಸಾಧನೆಯಿಂದ ನಾನು ದರ್ಶನ ನೀಡುವುದಿಲ್ಲ." ಇದು ನನ್ನ ಅಟಲ ನಿಯಮವಿರುವುದು.

ದುರ್ಗೆ ಹೇಳಿದಳು "ಇದಂತು ನಿಮ್ಮ ಉತ್ತಮ ನಿಯಮವಲ್ಲ. ನಿಮ್ಮ ಪುತ್ರರಿಗೂ ದರ್ಶನ ನೀಡದೆ ಅಡಗಿರುವುದು" ಬ್ರಹ್ಮ ಹೇಳಿದ, ದುರ್ಗಾ! ಇದು ನನ್ನ ವಿವಶತೆ ಇದೆ ನನಗೆ ಒಂದು ಲಕ್ಷ ಮಾನವ ಶರೀರ ಧಾರಣೆ ಮಾಡಿದ ಜೀವಾತ್ಮಗಳನ್ನು ತಿನ್ನುವ ಶಾಪವಿದೆ. ಈ ವಿಚಾರ ನನ್ನ ಪುತ್ರ (ಬ್ರಹ್ಮಾ–ವಿಷ್ಣು–ಮಹೇಶ)ರಿಗೆ ತಿಳಿದರೆ ಅವರು ಸೃಷ್ಟಿ–ಸ್ಥಿತಿ–ಸಂಹಾರಗಳ ಕೆಲಸವನ್ನೇ ಮಾಡುವುದಿಲ್ಲ. ಆದ್ದರಿಂದ ಈ ನನ್ನ ಅನುತ್ತಮ ನಿಯಮ, ಸದಾ ಇರುವುದು. ಈ ಮೂವರನ್ನು ಸ್ವಲ್ಪ ದೊಡ್ಡವರಾದ ಮೇಲೆ ಮೂರ್ಛಿತಗೊಳಿಸು. ನನ್ನ ಬಗ್ಗೆ ಹೇಳಬೇಡಾ. ಇಲ್ಲವಾದರೆ ನನ್ನ ವಿಷಯ ಹೇಳಿದರೆ ನಿನಗೂ ಶಿಕ್ಷೆ ವಿಧಿಸುವೆ." ಈ ಭಯದಿಂದ ವಾಸ್ತವಿಕ ಅಂಶವನ್ನು ಪ್ರಕೃತಿ (ದುರ್ಗೆ) ಹೇಳುವುದಿಲ್ಲ.

{ಪ್ರಮಾಣ :– ಆದ್ದರಿಂದ ಗೀತೆಯಲ್ಲಿನ 7ನೇ ಅಧ್ಯಾಯದ 24ನೇ ಶ್ಲೋಕದಲ್ಲಿ ಹೇಳಲಾಗಿದೆ ಈ ಬುದ್ಧಿಹೀನ ಜನ ಸಮುದಾಯಕ್ಕೆ, ನನ್ನ ಅನುತ್ತಮ ನಿಯಮ (ಅವ್ಯಕ್ತ ಸ್ವರೂಪ) ದ ಬಗ್ಗೆ ಗೋತ್ತಿಲ್ಲ. ನಾನು ಏಂದೂ ಯಾರ ಮುಂದೆಯೂ ಪ್ರಕಟನಾಗುವುದಿಲ್ಲ, ನನ್ನ ಯೋಗಮಾಯೆಯಿಂದ ಅಡಗಿರುತ್ತೇನೆ. ಆದ್ದರಿಂದ ಅವ್ಯಕ್ತನಾದ ನನ್ನನ್ನು ಮನುಷ್ಯನ ರೂಪದಲ್ಲಿ ಬಂದ ಕೃಷ್ಣನೇ ಎಂದು ತಿಳಿಯುತ್ತಾರೆ.

(ಅಬುದ್ಧಯಃ) ಬುದ್ಧಿಹೀನರು (ಮಮ್) ನನ್ನ (ಅನುತ್ತಮಮ್) ಅನುತ್ತಮ್ ಅಂದರೆ ಕೀಳಮಟ್ಟದ (ಅವ್ಯಯಮ್) ಅವಿನಾಶಿ (ಪರಮ ಭಾವಮ್) ವಿಶೇಷ ಭಾವವನ್ನು (ಅಜಾನಂತಃ) ತಿಳಿಯದೆ (ಮಾಮ್ ಅವ್ಯಕ್ತಮ್) ಅವ್ಯಕ್ತನಾದ ನನ್ನನ್ನು (ವ್ಯಕ್ತಿಮ್) ಮನುಷ್ಯರೂಪದಲ್ಲಿ (ಆಪನ್ನಮ್) ಬಂದಿದ್ದಾನೆ (ಮನ್ಯಂತೆ) ಎಂದು ತಿಳಿಯುತ್ತಾರೆ. ಅರ್ಥಾತ್ ನಾನು ಕೃಷ್ಣನಲ್ಲ (ಗೀತೆಯ 7ನೇ ಅಧ್ಯಾಯದ 24ನೇ ಶ್ಲೋಕ)

ಗೀತೆಯ 11ನೇ ಅಧ್ಯಾಯದ 47 ಮತ್ತು 48ನೇ ಶ್ಲೋಕಗಳಲ್ಲಿ ಹೀಗೆ ಹೇಳಿದ್ದಾನೆ– ಇದು ನನ್ನ ವಾಸ್ತವಿಕ ಕಾಲ ರೂಪವಾಗಿದೆ. ಇದರ ದರ್ಶನ ಅಂದರೆ ಬ್ರಹ್ಮನ ಪ್ರಾಪ್ತಿ ವೇದದಲ್ಲಿ ವರ್ಣಿತ ವಿಧಿಯಿಂದಾಗಲಿ, ಯಜ್ಞಗಳಿಂದಾಗಲಿ, ಯಾವುದೆ ಕ್ರಿಯೆಗಳಿಂದಾಗಲಿ ಮತ್ತು ತಪಸ್ಸಿನಿಂದಾಗಲಿ ಸಾಧ್ಯವಿಲ್ಲ.

ಮೂರೂ ಮಕ್ಕಳು (ಬ್ರಹ್ಮಾ–ವಿಷ್ಣು–ಮಹೇಶ್ವರ) ದೊಡ್ಡವರಾದ ಮೇಲೆ ಪ್ರಕೃತಿ/ ದುರ್ಗೆಯು ನೀವು ಮೂವರೂ ಸಾಗರ ಮಂಥನ ಮಾಡಿ ಎಂದು ಹೇಳಿದಳು. [ಜ್ಯೋತಿ ನಿರಂಜನ ತನ್ನ ಉಸಿರಿನ ಮೂಲಕ 4 ವೇದಗಳನ್ನು ಉತ್ಪನ್ನ ಮಾಡಿದನು. ಅವುಗಳಿಗೆ ಸಾಗರದಲ್ಲಿ ವಾಸ ಮಾಡಿರೆಂದು ಗುಪ್ತ ವಾಣಿ ಮೂಲಕ ತಿಳಿಸಿದನು] ಮೊದಲ ಬಾರಿಗೆ ನಾಲ್ಕು ವೇದಗಳು ಈ ಮೂವರು ಸಾಗರ ಮಂಥನ ಮಾಡಿದಾಗ ಹೊರಬಂದವು. ನಾಲ್ಕು ವೇದಗಳೊಂದಿಗೆ ಮೂವರೂ ತಾಯಿಯ ಬಳಿಗೆ ಬಂದರು. ಆಗ ತಾಯಿ ಹೇಳಿದಳು ಈ ನಾಲ್ಕು ವೇದಗಳನ್ನು ಬ್ರಹ್ಮಾನೇ ಇಟ್ಟುಕೊಂಡು ಓದಲಿ.

ಸೂಚನೆ :– ವಾಸ್ತವದಲ್ಲಿ ಪೂರ್ಣ ಬ್ರಹ್ಮನು, ಕಾಲ ಬ್ರಹ್ಮನಿಗೆ 5 ವೇದಗಳನ್ನು ನಿಡಿದ್ದನು. ಆದರೆ ಬ್ರಹ್ಮನು ಕೇವಲ 4 ವೇದಗಳನ್ನು ಪ್ರಕಟಗೊಳಿಸಿದ. ಐದನೆಯ ವೇದವನ್ನು ಅಡಗಿಸಿದನು. ಆ ಅಡಗಿಸಿಟ್ಟ ವೇದವನ್ನು ಪೂರ್ಣ ಪರಮಾತ್ಮ ಸ್ವತಃ ಪ್ರಕಟಗೊಂಡು "ಕವಿರ್ಗಿರ್ಭಿಃ" ಅಂದರೆ ಕವಿರ್‌ವಾಣಿಯ ಮೂಲಕ ಲೋಕೋಕ್ತಿ ಹಾಗೂ ದೋಹೆಗಳ ಮೂಲಕ ಪ್ರಕಟಗೊಳಿಸಿದನು.

ಪ್ರಕೃತಿಯು ತನ್ನದೇ ಬೇರೆ ಮೂರು ರೂಪಗಳನ್ನು (ಸಾವಿತ್ರಿ, ಲಕ್ಷ್ಮೀ, ಪಾರ್ವತಿ) ಧಾರಣೆ ಮಾಡಿ ಸಮುದ್ರದಲ್ಲಿ ಅಡಗಿಸಿದ್ದಳು. ಎರಡನೆಯ ಬಾರಿ ಸಾಗರ ಮಂಥನ ಮಾಡಿದಾಗ ಮೂವರು ಕನ್ಯೆಯರು ಹೊರಬಂದರು. ತಾಯಿಯು ಮೂವರಿಗೂ ವಿವಾಹ ಮಾಡಿದಳು. ಮೂರು ರೂಪವಾಗಿದ್ದ ಪ್ರಕೃತಿ/ ದುರ್ಗೆ, ಬ್ರಹ್ಮಾನಿಗೆ ಸಾವಿತ್ರಿ, ವಿಷ್ಣುವಿಗೆ ಲಕ್ಷ್ಮೀ ಹಾಗೂ ಶಂಕರನಿಗೆ ಪಾರ್ವತಿಯನ್ನು ಪತ್ನಿ ರೂಪದಲ್ಲಿ ನೀಡಿದಳು. ಮೂವರು ಭೋಗ–ವಿಲಾಸ ಮಾಡಿದರು ಇದರಿಂದ ಸುರ (ದೇವ–ದೇವತೆ) ಅಸುರ (ರಾಕ್ಷಸರು) ಹುಟ್ಟಿದರು.

[ಮೂರನೆಯ ಬಾರಿ ಸಾಗರ ಮಂಥನ ಮಾಡಿದಾಗ, 14 ರತ್ನಗಳು ಬಂದವು ಅದು ಬ್ರಹ್ಮಾನಿಗೆ, ಅಮೃತವು ವಿಷ್ಣು ಮತ್ತು ದೇವತೆಗಳಿಗೆ, ಮದ್ಯ (ಸಾರಾಯಿ) ಅಸುರರಿಗೆ ಹಾಗೂ ಶಿವನು ವಿಷವನ್ನು ಕುಡಿದು ತನ್ನ ಕಂಠದಲ್ಲೆ ತಡೆದನು. ಇದಂತೂ ಬಹಳ ನಂತರದ ದಿನಗಳ ಮಾತು] ಬ್ರಹ್ಮಾನು ವೇದವನ್ನು ಓದಿದಾಗ ಈ ಸಮಸ್ತ ಬ್ರಹ್ಮಾಂಡವನ್ನು ರಚಿಸಿರುವ ಸ್ವಾಮಿ ಬೇರೆಯೇ ಇರುವನೆಂದು ತಿಳಿಯಿತು. ಆಗ ಈ ವಿಚಾರವನ್ನು ವಿಷ್ಣುವಿಗೆ–ಶಂಕರನಿಗೆ ತಿಳಿಸಿದನು. "ವೇದಗಳಲ್ಲಿ ಹೇಳಿರುವ ಸೃಜನಹಾರ" ಬೇರೆ ಯಾರೋ ಇದ್ದಾನೆ, ಆದರೆ ವೇದಗಳು ನಮಗೂ ತಿಳಿಯದೆಂದು ಹೇಳುತ್ತವೆ. ಅದಕ್ಕಾಗಿ ಯಾರಾದರು ತತ್ವದರ್ಶಿ ಸಂತರನ್ನು ಕೇಳಿ ಎಂದು ಸಂಕೇತ ಮಾಡಿವೆ. ಆಗ ಬ್ರಹ್ಮಾನು ತಾಯಿಯ ಬಳಿ ಬಂದು ಎಲ್ಲಾ ವೃತ್ತಾಂತವನ್ನು ತಿಳಿಸಿದ. ತಾಯಿ ಹೇಳುತ್ತಿದ್ದಳು ನನ್ನ ಹೊರತು ಯಾರು ಇಲ್ಲ. ನಾನೇ ಕರ್ತಾ ನಾನೇ ಸರ್ವಶಕ್ತಿವಂತಳು. ಆದರೆ ಬ್ರಹ್ಮಾ ಹೇಳಿದನು ವೇದಗಳನ್ನು ಈಶ್ವರ ಕೊಟ್ಟಿದ್ದಾನೆ, ಇವು ಸುಳ್ಳಾಗಲು ಸಾಧ್ಯವಿಲ್ಲ. ದುರ್ಗಾ ಹೇಳಿದಳು ನಿನ್ನ ತಂದೆ ಯಾರಿಗೂ ದರ್ಶನ ನೀಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದಾನೆ. ಇಲ್ಲ ತಾಯಿ ಈಗ ನಿನ್ನ ಮಾತುಗಳಲ್ಲಿ ನನಗೆ ವಿಶ್ವಾಸವಿಲ್ಲ. ನಾನು ಆ ಪುರುಷನನ್ನು ಕಂಡೇ ಕಾಣುತ್ತೇನೆ. ಒಂದು ವೇಳೆ ಅವರು ನಿನಗೆ ದರ್ಶನ ಕೊಡದಿದ್ದರೆ ನೀನು ಏನು ಮಾಡುವೆ? ಎಂದು ದುರ್ಗೆ ಕೇಳಿದಾಗ, "ನಾನು ನಿನಗೆ ಮುಖ ತೋರಿಸುವುದಿಲ್ಲ ಎಂದು ಬ್ರಹ್ಮಾ ಹೇಳಿದ. ಇನ್ನೊಂದೆಡೆ ಜ್ಯೋತಿ ನಿರಂಜನನು ಯಾರಿಗೂ ದರ್ಶನ ಕೊಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದಾನೆ. ಅಂದರೆ 21 ಬ್ರಹ್ಮಾಂಡಗಳಲ್ಲಿ ಏಂದೂ ತನ್ನ ವಾಸ್ತವಿಕ ಕಾಲ ರೂಪದಲ್ಲಿ ಆಕಾರದಲ್ಲಿ ನಾನು ಬರುವುದಿಲ್ಲ.

ಗೀತೆಯ 7ನೇ ಅಧ್ಯಾಯದ 24ನೇ ಶ್ಲೋಕ :–

**ಅವ್ಯಕ್ತಂ, ವ್ಯಕ್ತಿಂ, ಆಪನ್ನಮ್, ಮನ್ಯಂತೇ, ಮಾಮ್, ಅಬುದ್ಧಯಃ ।**
**ಪರಂ, ಭಾವಮ್, ಅಜಾನಂತಃ, ಮಮ್, ಅವ್ಯಯಮ್, ಅನುತ್ತಮಮ್ ॥ 24 ॥**

ಅನುವಾದ:– (ಅಬುದ್ಧಯಃ) ಬುದ್ಧಿಹೀನರು( ಮಮ್) ನನ್ನ (ಅನುತ್ತಮಮ್) ಅನುತ್ತಮ ಅರ್ಥಾತ್ ಕೀಳಮಟ್ಟದ (ಅವ್ಯಯಮ್) ಎಂದೂ ಬದಲಾಗದ (ಪರಮ ಭಾವಮ್) ಪರಮ ಭಾವವನ್ನು (ಅಜಾನಂತಃ) ತಿಳಿಯದೆ (ಮಾಮ್ ಅವ್ಯಕ್ತಮ್) ಅವ್ಯಕ್ತನಾದ ನನ್ನನ್ನು (ವ್ಯಕ್ತಿಮ್) ಮನುಷ್ಯರೂಪದಲ್ಲಿ ಕೃಷ್ಣನ ಅವತಾರ(ಆಪನ್ನಮ್) ಪಡೆದವನು (ಮನ್ಯಂತೆ) ಎಂದು ತಿಳಿದಿದ್ದಾರೆ.

**ಗೀತೆಯ 7ನೇ ಅಧ್ಯಾಯ 25ನೇ ಶ್ಲೋಕ :–**

**ನ, ಅಹಂ, ಪ್ರಕಾಶಃ, ಸರ್ವಸ್ಯ, ಯೋಗಮಾಯಾಸಮಾವೃತಃ ।**
**ಮೂಡಃ,ಅಯಂ,ನ,ಅಭಿಜಾನಾತಿ, ಲೋಕಃ, ಮಾಮ್, ಅಜಮ್, ಅವ್ಯಯಮ್ ॥25॥**

ಅನುವಾದ:– (ಅಹಂ) ನಾನು (ಯೋಗಮಾಯಾ ಸಮಾವೃತಃ) ಯೋಗಮಾಯೆಯಿಂದ ಅಡಗಿರುವವನು (ಸರ್ವಸ್ಯ) ಎಲ್ಲರ ಎದುರಗಡೆ (ಪ್ರತ್ಯಕ್ಷ) ಪ್ರತ್ಯಕ್ಷ (ನ) ವಾಗುವುದಿಲ್ಲ ಅಂದರೆ ಅದೃಶ್ಯ ಅಂದರೆ ಅವ್ಯಕ್ತವಾಗಿರುವೆನು ಆದ್ದರಿಂದ (ಅಜಮ್) ಜನ್ಮತಾಳದ (ಅವ್ಯಯಮ್) ಎಂದೂ ಬದಲಾಗದ ಭಾವವನ್ನು (ಅವ್ಯಯಮ್) ಈ (ಮುಢಃ) ಅಜ್ಞಾನಿ (ಲೋಕಃ) ಜನ ಸಮುದಾಯ (ಮಾಮ್) ನನ್ನನ್ನು (ನ) (ಅಭಿಜಾನಾತಿ) ತಿಳಿದಿಲ್ಲ ಅರ್ಥಾತ್ ನನ್ನನ್ನು ಕೃಷ್ಣನೆಂದು ತಿಳಿಯುತ್ತಾರೆ. ಏಕೆಂದರೆ ಬ್ರಹ್ಮ ತನ್ನ ಶಬ್ದ ಶಕ್ತಿಯಿಂದ ತನ್ನ ನಾನಾ ರೂಪವನ್ನು ಮಾಡಿಕೊಳ್ಳುತ್ತಾನೆ, ಇವನು ದುರ್ಗೆಯ ಗಂಡ ಇದಕ್ಕಾಗಿ ಈ ಮಂತ್ರದಲ್ಲಿ ಹೇಳಿದ್ದಾನೆ. ನಾನು ಶ್ರೀಕೃಷ್ಣ ಮುಂತಾದವರ ಹಾಗೆ ದುರ್ಗಾಳಿಂದ ಜನ್ಮ ತಾಳುವುದಿಲ್ಲ.

## "ಬ್ರಹ್ಮಾನು ತನ್ನ ತಂದೆ ಕಾಲಬ್ರಹ್ಮನನ್ನು ಪಡೆಯುವ ಪ್ರಯತ್ನದಲ್ಲಿ"

**ದುರ್ಗಾ ಬ್ರಹ್ಮಾನಿಗೆ ಹೇಳಿದಳು. ಅಲಖ್ ನಿರಂಜನ ನಿನ್ನ ತಂದೆ. ಆದರೆ ನಿನಗೆ ದರ್ಶನ ಕೊಡುವುದಿಲ್ಲ. ಆದರೆ ನಾನು ದರ್ಶನ ಮಾಡಿಕೊಂಡೇ ಹಿಂದಕ್ಕೆ ಬರುವೆ ಎಂದನು ಬ್ರಹ್ಮಾ. ಒಂದು ವೇಳೆ ನಿನಗೆ ನಿನ್ನ ತಂದೆಯ ದರ್ಶನವಾಗದಿದ್ದರೆ ಏನು ಮಾಡುವೆ? ಬ್ರಹ್ಮಾ ಪ್ರತಿಜ್ಞೆ ಮಾಡಿದ ತಂದೆಯ ದರ್ಶನವಾಗದಿದ್ದರೆ ನಾನು ನಿಮ್ಮ ಮುಂದೆ ಬರುವುದೇ ಇಲ್ಲ. ಹೀಗೆ ಹೇಳಿ ಬ್ರಹ್ಮಾನು ಉತ್ತರ ದಿಕ್ಕಿಗೆ ಹೊರಟನು ಅಲ್ಲಿ ಕತ್ತಲೆಯೋ ಕತ್ತಲೆ. ಅಲ್ಲಿ ಬ್ರಹ್ಮಾನು 4 ಯುಗಗಳವರೆಗೆ ತಪಸ್ಸು ಮಾಡಿದ ಏನೂ ಪ್ರಾಪ್ತಿಯಾಗಲಿಲ್ಲ. ಕಾಲ(ಬ್ರಹ್ಮ) ನು ಆಕಾಶವಾಣಿ ಮೂಲಕ ಕೇಳಿದ ದುರ್ಗಾ ಜೀವಿಗಳ ಉತ್ಪತ್ತಿ ಏಕೆ ಮಾಡಿಲ್ಲ? ದುರ್ಗಾ ಹೇಳಿದಳು "ನಿಮ್ಮ ಜೇಷ್ಠ ಪುತ್ರ ಹಠ ಮಾಡಿ ನಿಮ್ಮನ್ನು ಹುಡುಕಲು ಹೊರಟಿದ್ದಾನೆ. ಬ್ರಹ್ಮಾ ಜೀವಗಳ ಉತ್ಪತ್ತಿ ಮಾಡದಿದ್ದರೆ ಎಲ್ಲಾ ಕಾರ್ಯಗಳು ಅಸಂಭವವಾಗುತ್ತವೆ. ಅವನನ್ನು ಮರಳಿ ಕರೆಸಿಕೊ" ನಾನು ಅವನಿಗೆ ದರ್ಶನ ಕೊಡುವುದಿಲ್ಲ ಎಂದನು ಕಾಲ ಬ್ರಹ್ಮ. ಆಗ ದುರ್ಗಾ 'ಗಾಯತ್ರಿ' ಎಂಬ ಹುಡುಗಿಯನ್ನು ತನ್ನ ಶಬ್ದಶಕ್ತಿಯಿಂದ ಉತ್ಪನ್ನ ಮಾಡಿದಳು. ಬ್ರಹ್ಮಾನನ್ನು ಮರಳಿ ಕರೆತರಲು ಹೇಳಿದಳು. ಗಾಯತ್ರಿ ಬ್ರಹ್ಮಾನ ಕಡೆ ಹೋದಳು. ಆದರೆ ಬ್ರಹ್ಮಾನು ಯಾರು ಬಂದಿರುವರೆಂದು ಭಾಸವೇ ಆಗದಂತೆ, ಸಮಾಧಿ ಸ್ಥಿತಿಯಲ್ಲಿದ್ದನು. ಆಗ ದುರ್ಗೆಯು ಗಾಯತ್ರಿಗೆ ಧ್ಯಾನದ ಮೂಲಕ ಬ್ರಹ್ಮಾನ ಚರಣಗಳನ್ನು ಸ್ಪರ್ಶಿಸಲು ಹೇಳಿದಳು. ಆಗ ಬ್ರಹ್ಮಾನ ಸಮಾಧಿ ಭಂಗವಾಯಿತು. "ಬ್ರಹ್ಮಾ ಕೋಪಗೊಂಡು ಯಾರು ಆ ಪಾಪಿನಿ ನನ್ನ ಧ್ಯಾನ ಭಂಗ ಮಾಡಿದವಳು? ನಿನಗೆ ಶಾಪವನ್ನು ಕೊಡುವೆ ಎಂದ ಬ್ರಹ್ಮಾ.**

**ಆಗ ಗಾಯತ್ರಿ ನನ್ನದೇನೂ ದೋಷವಿಲ್ಲ ಎಂದಳು. ಮೊದಲು ನನ್ನ ಮಾತುಗಳನ್ನು ಕೇಳು. ನಂತರ ಶಾಪ ಕೊಡುವೆಯಂತೆ ಎಂದಳು. ನಿನ್ನನ್ನು ಮರಳಿ ಕರೆತರಲು ನನಗೆ ತಾಯಿ ಕಳುಹಿಸಿದ್ದಾರೆ. ನೀನು ಇಲ್ಲದಿದ್ದರೆ (ಬರದಿದ್ದರೆ) ಜೀವಿಗಳ ಉತ್ಪತ್ತಿಯ ಕಾರ್ಯ ನಡೆಯಲ್ಲ ಎಂದು ಹೇಳಿದಳು. ನಾನು ಹೇಗೆ ಬರಲು ಸಾಧ್ಯ!. ತಂದೆಯ ದರ್ಶನ ಮಾಡದೆ ಬಂದರೆ ಅಪಹಾಸ್ಯಕ್ಕೆ ಗುರಿಯಾಗುವೆ. ಒಂದುವೇಳೆ ನೀನು ತಾಯಿಗೆ ಇವನಿಗೆ ತಂದೆಯ (ಜ್ಯೋತಿ**

ನಿರಂಜನನ) ದರ್ಶನವಾಗಿದೆ. ನಾನು ನನ್ನ ಕಣ್ಣಾರೆ ನೋಡಿದ್ದೇನೆ ಎಂದು ಹೇಳಿದರೆ ನಾನು ಮರಳಿ ಬರುವೆ ಎಂದು ಬ್ರಹ್ಮಾ ಹೇಳಿದಾಗ ಗಾಯತ್ರಿ ಹೇಳಿದಳು. "ನೀನು ನನ್ನೊಂದಿಗೆ ಸಂಭೋಗಿಸಿದರೆ, ನಾನು ಈ ಸುಳ್ಳು ಸಾಕ್ಷಿ ಹೇಳುವೆ." ಆಗ ಬ್ರಹ್ಮಾನು ಯೋಚಿಸಿದ ಇತ್ತ ತಂದೆಯ ದರ್ಶನವಾಗಲಿಲ್ಲ. ಅತ್ತ ತಾಯಿಗೆ ಮುಖ ತೋರಿಸಲಿ ನಾಚಿಕೆಯಾಗುವುದು. ಏನೂ ತೋಚದೆ ನಂತರ ಗಾಯತ್ರಿಯೊಡನೆ ರತಿಕ್ರಿಯೆ (ಸಂಭೋಗ) ಮಾಡಿದನು. ಗಾಯತ್ರಿ ಮತ್ತೊಂದು ಸಾಕ್ಷಿಯನ್ನು ಏಕೆ ಸಿದ್ಧಮಾಡಿಕೊಳ್ಳಬಾರದು ಎಂದು ಹೇಳಿದಳು. ಬ್ರಹ್ಮಾ ಹೇಳಿದನು ಬಹಳ ಒಳ್ಳೆಯದು. ಆಗ ಗಾಯತ್ರಿ ತನ್ನ ಶಬ್ದಶಕ್ತಿಯಿಂದ ಒಂದು ಹುಡುಗಿ ಪುಹಪವತಿಯನ್ನು ಉತ್ಪನ್ನ ಮಾಡಿದಳು. ಅವಳಿಗೆ ಹೇಳಿದಳು "ನೀನು ಬ್ರಹ್ಮಾನಿಗೆ ತಂದೆಯ ದರ್ಶನವಾಗಿದೆ" ಎಂದು ಹೇಳಬೇಕು. ಆಗ ಪುಹಪವತಿ ಹೇಳಿದಳು. "ನಾನೇಕೆ ಸುಳ್ಳು ಸಾಕ್ಷಿ ನೀಡಲಿ. ಒಂದುವೇಳೆ ಬ್ರಹ್ಮಾನು ನನ್ನನ್ನು ಸಂಭೋಗಿಸಿದರೆ ನಾನು ಸುಳ್ಳು ಸಾಕ್ಷಿ ನೀಡುವೆ." ಗಾಯತ್ರಿಯು ಬ್ರಹ್ಮಾನಿಗೆ ಬೇರೆ ದಾರಿ ಇಲ್ಲವೆಂದು ತಿಳಿಸಿದಳು. ಆಗ ಬ್ರಹ್ಮಾನು ಪುಹಪವತಿಯನ್ನು ಸಂಭೋಗಿಸಿದ. ನಂತರ ಮೂವರು (ಬ್ರಹ್ಮಾ, ಗಾಯತ್ರಿ–ಪುಹಪವತಿ) ಸೇರಿ ಆದಿ ಮಾಯೆಯ ಹತ್ತಿರ ಬಂದರು. ಇಬ್ಬರೂ ದೇವಿಯರು (ಗಾಯತ್ರಿ, ಪುಹಪವತಿ) ಮೇಲಿನ ಶರತನ್ನು ಏಕೆ ಮಾಡಿದರು ಎಂದರೆ ಒಂದು ವೇಳೆ ಬ್ರಹ್ಮಾನು ತಾಯಿ ಮುಂದೆ ನಮ್ಮ ಸುಳ್ಳು ಸಾಕ್ಷಿ ಬಾಯಿಬಿಟ್ಟರೆ ತಾಯಿ ಶಾಪ ನೀಡುವಳು, ಆದ್ದರಿಂದ ಅವನನ್ನು ದೋಷಿ ಮಾಡಿಕೊಂಡರು.

(ಇಲ್ಲಿ ಮಹಾರಾಜ್ ಗರೀಬ್‌ದಾಸರು ಹೇಳುತ್ತಾರೆ:–"ದಾಸ್ ಗರೀಬ್ ಯಹ್ ಚೂಕ್ ಧುರೋ ಧುರ್")

## "ಬ್ರಹ್ಮಾನಿಗೆ ತಾಯಿ ದುರ್ಗೆಯಿಂದ ಶಾಪ"

ನಿನಗೆ ತಂದೆಯವರ ದರ್ಶನವಾಯಿತೆ? ಎಂದು ಬ್ರಹ್ಮಾನನ್ನು ತಾಯಿ ಕೇಳಿದಾಗ "ಹಾ! ಆಯಿತು" ಬ್ರಹ್ಮಾ! ಸಾಕ್ಷಿ ತೋರಿಸು ಎಂದಳು ದುರ್ಗಾ. ಆಗ ಈ ಇಬ್ಬರ ಮುಂದೆ ಸಾಕ್ಷತ್ಕಾರವಾಗಿದೆ ಎಂದು ಬ್ರಹ್ಮಾ ಹೇಳಿದನು. ಆಗ ದೇವಿಯು ಆ ಇಬ್ಬರನ್ನೂ ಕೇಳಿದಳು. "ನಿಮ್ಮ ಮುಂದೆ ಬ್ರಹ್ಮಾನಿಗೆ ಆತನ ತಂದೆಯ ದರ್ಶನವಾಯಿತೆ? ಆಗ "ಹೌದು" ಎಂದರು ಇಬ್ಬರೂ. "ನಾವು ನಮ್ಮ ಕಣ್ಣುಗಳಿಂದ ಕಂಡೆವು" ನಂತರ ದುರ್ಗಾ( ಭವಾನಿ)ಗೆ ಸಂಶಯವಾಯಿತು. "ನನಗಂತು ಬ್ರಹ್ಮನು ಹೇಳಿದ್ದ ನಾನು ಯಾರಿಗೂ ದರ್ಶನ ನೀಡುವುದಿಲ್ಲ ಆದರೆ ಇವರು ಹೇಳ್ತಾರೆ ದರ್ಶನವಾಯಿತು. ಆಗ ದುರ್ಗಾ(ಅಷ್ಟಂಗಿ) ಧ್ಯಾನ ಹಚ್ಚಿದಳು ಮತ್ತು ಕಾಲ/ಜ್ಯೋತಿ ನಿರಂಜನ್‌ನಿಗೆ ಇದೇನು ಕಥೆ ಎಂದು ಕೇಳಿದಳು. ಜ್ಯೋತಿ ನಿರಂಜನ್ ಹೇಳಿದ, ಈ ಮೂವರು ಸುಳ್ಳು ಹೇಳುತ್ತಿದ್ದಾರೆ. ಆಗ ತಾಯಿ ಹೇಳಿದಳು ನೀವು ಸುಳ್ಳು ಹೇಳುತ್ತಿರುವಿರಿ. ಇವರಿಗೆ ಏನು ದರ್ಶನ ಆಗಿಲ್ಲ ಎಂದು ಆಕಾಶವಾಣಿ ಆಯಿತು. ಈ ಮಾತನ್ನು ಕೇಳಿ ಬ್ರಹ್ಮಾ ಹೇಳಿದ ತಾಯಿ ನಾನು ಶಪಥ ಮಾಡಿ "ತಂದೆಯವರ ದರ್ಶನಕ್ಕೆ ಹೋಗಿದ್ದೆ ಆದರೆ ದರ್ಶನವಾಗಲಿಲ್ಲ. ನಿನಗೆ ಮುಖ ತೋರಿಸಲು ನಾಚಿಕೆಯಾಗುತ್ತಿತು. ಆದ್ದರಿಂದ ಸುಳ್ಳು ಹೇಳಿದೆ." ಆಗ ತಾಯಿ (ದುರ್ಗೆ) ಹೇಳಿದಳು ಈಗ ನಾನು ನಿನಗೆ ಶಾಪ ಕೊಡುವೆ.

<u>ಬ್ರಹ್ಮಾನಿಗೆ ತಾಯಿ ದುರ್ಗೆಯಿಂದ ಶಾಪ</u> :– ಜಗತ್ತಿನಲ್ಲಿ ಯಾರೂ ನಿನ್ನ ಪೂಜೆ ಮಾಡುವುದಿಲ್ಲ. ಮುಂದೆ ನಿನ್ನ ವಂಶದವರು ಬಹಳ ಪಾಖಂಡ ಮಾಡುವರು. ಸುಳ್ಳು ಮಾತುಗಳಿಂದ ಪ್ರಪಂಚದ ಜನರಿಗೆ ಮೋಸ ಮಾಡುವರು. ಮೇಲ್ನೋಟಕ್ಕೆ ಕರ್ಮಕಾಂಡ ಮಾಡುವರಂತೆ ಕಂಡರೂ ಒಳಗೊಳಗೆ ವಿಕಾರಿಗಳಾಗಿರುವರು. ಕಥೆ–ಪುರಾಣಗಳನ್ನ ಓದಿ ಹೇಳುವರು. ಅವರಿಗೆ ಸ್ವತಃ ಜ್ಞಾನ ಇರುವುದಿಲ್ಲ ಸದ್ಗ್ರಂಥಗಳಲ್ಲಿ ಏನು ಬರೆದಿದೆಯೆಂದು, ಆದರೂ ಕೀರ್ತಿ ಹಾಗೂ ಧನಕ್ಕಾಗಿ, ಗುರುವಾಗಿ, ಶಿಷ್ಯರಿಗೆ ಲೋಕವೇದ (ಶಾಸ್ತ್ರ ವಿರುದ್ಧ ದಂತ ಕಥೆ) ಹೇಳುವರು. ದೇವಿ–ದೇವತೆಗಳ ಪೂಜೆ ಮಾಡಿಸುವರು. ಬೇರೆಯವರನ್ನು ನಿಂದಿಸಿ ಕಷ್ಟದ ಮೇಲೆ ಕಷ್ಟ ಅನುಭವಿಸುವರು. ಅವರ ಅನುಯಾಯಿಗಳಿಗೆ ಪರಮಾರ್ಥವನ್ನು ತಿಳಿಸುವುದಿಲ್ಲ. ದಕ್ಷಿಣೆಯ ಹಣಕ್ಕಾಗಿ ಜನರ ದಾರಿ ತಪ್ಪಿಸುವರು. ತನ್ನನ್ನು ತಾವು ಶ್ರೇಷ್ಠರೆಂದು, ಬೇರೆಯವರು ನೀಚರೆಂದು ತಿಳಿಯುವರು" ತಾಯಿಯ ಬಾಯಿಂದ ಈ ಶಾಪ ವಚನ

ಕೇಳಿ ಬ್ರಹ್ಮಾನು ಮೂರ್ಛೆ ಹೋದನು. ಬಹಳ ಸಮಯಗಳ ನಂತರ ಪ್ರಜ್ಞೆ ಬಂದಿತು.

ಗಾಯತ್ರಿಗೆ ಶಾಪ :– ನಿನಗೆ ಅನೇಕ ಗೂಳಿಗಳು ಗಂಡಂದಿರಾಗಿ ಸಿಗುವರು ನೀನು ಮೃತ್ಯು ಲೋಕದ ಹಸುವಾಗಿರುವೆ.

ಪುಹಪವತಿಗೆ ಶಾಪ :– ನೀನಿರುವ ಜಾಗದಲ್ಲಿ ಕೊಳಕು ಕೆಟ್ಟ ವಾಸನೆ ಇರುತ್ತದೆ. ನಿನ್ನ ಹೂವನ್ನು ಯಾರೂ ಪೂಜೆಗೆ ಬಳಸುವುದಿಲ್ಲ. ಈ ಸುಳ್ಳು ಸಾಕ್ಷಿಗಾಗಿ ನೀನು ಈ ನರಕವನ್ನು ಅನುಭವಿಸಬೇಕು. ನಿನ್ನ ಹೆಸರು ಕೇತಕಿ ಇರುವುದು. (ಈ ಹೂವನ್ನು ಹರಿಯಾಣದಲ್ಲಿ ಕುಸೋಂದಿ ಎನ್ನುತ್ತಾರೆ. ಹೊಲಸು ಸ್ಥಾನದಲ್ಲಿ ಈ ಹೂ ಬೇಳೆಯುತ್ತದೆ.)

ಈ ರೀತಿ ಮೂವರಿಗೂ ಶಾಪ ಕೊಟ್ಟ ನಂತರ ತಾಯಿ ಭವಾನಿಯು ಬಹಳ ಪಶ್ಚಾತ್ತಾಪ ಪಟ್ಟಳು. {ಈ ರೀತಿ ಜೀವಿಗಳು ಏನೂ ಯೋಚಿಸದೆ ಮನಸ್ಸಿನ (ಕಾಲ ನಿರಂಜನನ) ಪ್ರಭಾವದಿಂದ ತಪ್ಪು ಮಾಡುತ್ತದೆ, ಆದರೆ ಆತ್ಮ (ಸತ್ಯಪುರುಷನ ಅಂಶ) ದ ಪ್ರಭಾವದಿಂದ ಜ್ಞಾನೋದಯವಾದಾಗ ಪಶ್ಚಾತಾಪ ಪಡಬೇಕಾಗುತ್ತದೆ. ತಾಯಿ ತನ್ನ ಮಕ್ಕಳಿಗೆ ಚಿಕ್ಕ ತಪ್ಪಿಗಾಗಿ ಹೊಡೆದಿರುತ್ತಾಳೆ (ಕೋಪಗೊಡು) ನಂತರ ಪಶ್ಚಾತ್ತಾಪ ಪಡುತ್ತಾಳೆ (ಇದೆಲ್ಲಾ ಕಾಲನ ಪ್ರಭಾವ). ಇದು ಮನಸ್ಸಿನ ಪ್ರಭಾವದಿಂದ ಎಲ್ಲಾ ಜೀವಿಗಳಲ್ಲಿ ಕ್ರಿಯಾಶಿಲವಾಗಿದೆ.} ಇಲ್ಲಿ ವಿಶೇಷ ಏನೆಂದರೆ ನಿರಂಜನನೂ ಸಹ ತನ್ನ ಕಾನೂನು ಮಾಡಿದ್ದಾನೆ. ಯಾರಾದರೂ ದುರ್ಬಲರನ್ನು ಪೀಡಿಸಿದರೆ ಅವರಿಗೆ ಅದರ ಸೇಡು ತೀರಿಸಬೇಕಾಗುತ್ತದೆ. ಬ್ರಹ್ಮಾ–ಗಾಯತ್ರಿ–ಪುಹಪವತಿಗೆ ಶಾಪ ಕೊಟ್ಟಿದ್ದನ್ನು ನೋಡಿ ಕಾಲನಿರಂಜನನು "ನೀನು ತಪ್ಪು ಮಾಡಿದೆ" ಎಂದು ಪ್ರಕೃತಿಗೆ ತಿಳಿಸಿದ. ನಾನು ನಿನಗೆ ಶಾಪ ಕೊಡುವೆ ಅದೇನೆಂದರೆ "ದ್ವಾಪರ ಯುಗದಲ್ಲಿ ನಿನಗೆ ಐದು ಜನ ಗಂಡಂದಿರು ಇರುವರು" (ದ್ರೌಪದಿಯು ಆದಿ ಮಾಯೆಯ ಅವತಾರವೇ ಆಗಿದ್ದಳು) ಈ ಆಕಾಶವಾಣಿಯನ್ನು ಕೇಳಿದ ಆದಿ ಮಾಯೆಯು ಹೇಳಿದಳು "ನಾನೀಗ ನಿನ್ನ ವಶದಲ್ಲಿರುವೆ ನಿನಗೆ ಹೇಗೆ ಇಷ್ಟವೋ ಹಾಗೆಯೇ ಮಾಡು".

## "ವಿಷ್ಣು ತನ್ನ ತಂದೆ ಕಾಲಬ್ರಹ್ಮನನ್ನು ಕಾಣಲು ಹೊರಡುವನು ಹಾಗೂ ತಾಯಿಯಿಂದ ಆಶೀರ್ವಾದ ಪಡೆಯುವನು"

ಇದಾದ ನಂತರ ವಿಷ್ಣುವಿಗೆ ಪ್ರಕೃತಿ ಹೇಳಿದಳು "ಮಗನೇ ನೀನೂ ಸಹ ನಿನ್ನ ತಂದೆಯನ್ನು ಹುಡುಕಿಕೊ." ಆಗ ವಿಷ್ಣುವು ತನ್ನ ತಂದೆಯನ್ನು ಹುಡುಕುತ್ತಾ ಪಾತಾಳ ಲೋಕವನ್ನು ಸೇರಿದನು. ಅಲ್ಲಿ ಶೇಷನಾಗ ವಿಷ್ಣುವು ತನ್ನ ಸೀಮೆಗೆ ಬರುವುದನ್ನು ಕಂಡು ಕೋಪದಿಂದ ವಿಷಪೂರಿತವಾದ ಉಸಿರು ಬಿಟ್ಟಿತ್ತು. ಈ ವಿಷದ ಕಾರಣದಿಂದಾಗಿ ವಿಷ್ಣುವಿನ ಶರೀರವು ನೀಲಿಬಣ್ಣವಾಯಿತು. ಹೇಗೆ ಸ್ಪ್ರೇ ಪೆಂಟ್ ಆದಂತೆ. ಈ ನಾಗನಿಗೆ ಇದರ ತಪ್ಪಿನ ಶಿಕ್ಷೆ ನೀಡಬೇಕು ಎಂದು ವಿಷ್ಣು ಯೋಚಿಸಿದ. ಆಗ ಜ್ಯೋತಿ ನಿರಂಜನನು ವಿಷ್ಣುವಿಗೆ ಶಾಂತಗೋಳಿಸಲು ಆಕಾಶವಾಣಿ ಮಾಡಿ ಹೇಳಿದ "ಮಗನೆ ನಿನೀಗ ತಾಯಿಯ ಹತ್ತಿರ ಹೋಗು ಸತ್ಯವಾಗಿ ನಡೆದ ಘಟನೆಯನ್ನು ವಿವರಿಸಿ ಹೇಳು. ನಿನಗಾಗಿರುವ ಕಷ್ಟಕ್ಕೆ ದ್ವಾಪರ ಯುಗದಲ್ಲಿ ಯಾವಾಗ ನೀನು ಕೃಷ್ಣನ ಅವತಾರ ತಾಳುವೆ. ಆಗ ಶೇಷನಾಗನ ಅವತಾರ ಕಾಲಿಂದ್ರೀ ಎಂಬ ನಾಗನಾಗಿ ಕಾಲೀದಹ (ಯಮುನೆ–ಕರಿನೀರಿನ, ನದಿ) ದಲ್ಲಿರುವನು ಆಗ ನೀನು ಸೇಡು ತಿರಿಸಿಕೊ.

ಊಂಚ್ ಹೋಯಿ ಕೆ ನೀಚ್ ಸತಾವೈ, ತಾಕರ್ ಓಯಲ್ (ಬದಲಾ) ಮೋಹಿ ಸೋ ಪಾವೈ ।
ಜೋ ಜೀವ್ ದೇಯಿ ಪೀರ್ ಪುನೀ ಕಾಹೂ, ಹಮ್ ಪುನಿ ಓಯಲ್ ದಿವಾವೇ ತಾಹೂಂ॥

ಆಗ ವಿಷ್ಣುವು ತಾಯಿಯ ಹತ್ತಿರ ಬಂದು ಸತ್ಯವನ್ನು ಹೇಳಿದ. "ನನಗೆ ತಂದೆಯ ದರ್ಶನವಾಗಲಿಲ್ಲ" ಈ ಮಾತಿನಿಂದ ತಾಯಿಗೆ ಸಂತೋಷವಾಯಿತು. "ಮಗನೆ ನೀನು ಸತ್ಯವಾದಿ" ಯಾಗಿರುವೆ. ಈಗ ನಾನು ನನ್ನ ಶಕ್ತಿಯಿಂದ ನಿನಗೆ ನಿನ್ನ ತಂದೆಯನ್ನು ಭೇಟಿ ಮಾಡಿಸುವೆ ಹಾಗೂ ನಿನ್ನ ಮನದ ಸಂಶಯವನ್ನು ನಿವಾರಿಸುತ್ತೇನೆ.

ಕಬೀರ್, ದೇಖ್ ಪುತ್ರ್ ತೋಹಿ ಪಿತಾ ಭಿಟಾಊ ತೋರೆ ಮನ್ ಕಾ ಧೋಖಾ ಮಿಟಾಊ ।
ಮನ್ ಸ್ವರೂಪ್ ಕರ್ತಾ ಕಹ್ ಜಾನೋ, ಮನ್‌ತೇ ದೂಜಾ ಔರ್ ನ ಮಾನೋ ।
ಸ್ವರ್ಗ ಪಾತಾಲ್ ದೌರ್ ಮನ್ ಕೇರಾ, ಮನ್ ಅಸ್ತೀರ್ ಮನ್ ಅಹೈ ಅನೇರಾ ।
ನಿರಂಕಾರ್ ಮನ್ ಹೀ ಕೋ ಕಹೀಯೆ, ಮನ್ ಕೀ ಆಶ್ ನಿಶ್ ದಿನ್ ರಹಿಯೆ ।
ದೇಖ್ ಹೂಂ ಪಲಟಿ ಸುನ್ಯ ಮಹ್ ಜ್ಯೋತಿ, ಜಹಾ ಪರ್ ಝಿಲ್-ಮಿಲ್ ಝಾಲರ್ ಹೋತಿ ॥

ಮನಸ್ಸೇ ಜಗತ್ತಿನ ಕರ್ತ, ಮನಸ್ಸೇ ಜ್ಯೋತಿ ನಿರಂಜನ ಎಂದು ತಾಯಿ (ಪ್ರಕೃತಿ/ಅಷ್ಟಂಗಿ) ವಿಷ್ಣುವಿಗೆ ಹೇಳಿದಳು. "ಧ್ಯಾನದಲ್ಲಿ ಒಂದು ಸಾವಿರ ಜ್ಯೋತಿಗಳು (ದೀಪಗಳು) ಎನು ಕಾಣುತ್ತವೋ, ಅದೇ ಅವನ ರೂಪ. ಏನು ಶಂಖ, ಘಂಟೆಯ ಜೋರಾದ ಧ್ವನಿ, ವಾದ್ಯಗಳ ಧ್ವನಿ ಕೇಳುತ್ತಿರುವುದೇ ಮಹಾಸ್ವರ್ಗ ಅದು ನಿರಂಜನನದೇ ಆಗಿದೆ. ಆಗ ತಾಯಿ (ಅಷ್ಟಂಗಿ, ಪ್ರಕೃತಿ) ಹೇಳಿದಳು ಪುತ್ರ ನೀನು ಎಲ್ಲ ದೇವತೆಗಳಲ್ಲಿ ಶ್ರೇಷ್ಠನಾಗಿರುವೆ, ನಿನ್ನೆಲ್ಲಾ ಕಾರ್ಯ ಹಾಗೂ ಕಾಮನೆ (ಬಯಕೆ) ಗಳನ್ನು ನಾನು ಪೂರ್ಣಗೊಳಿಸುವೆ. ನಿನ್ನ ಪೂಜೆಯು ಸಮಸ್ತ ವಿಶ್ವದಲ್ಲಿ ಆಗುವುದು. ನೀನು ಸತ್ಯ ಹೇಳಿರುವೆ. ಕಾಲನ 21ನೇ ಬ್ರಹ್ಮಾಂಡದ ಜೀವಿಗಳು ತಮ್ಮ ವ್ಯರ್ಥ ಮಹಿಮೆಯನ್ನು ಹೇಳುವುದು ಅಭ್ಯಾಸವಾಗಿಬಿಟ್ಟಿದೆ. ಹೇಗೆ ದುರ್ಗಾ ವಿಷ್ಣುವಿಗೆ ಹೇಳುತ್ತಿರುವಳು ಜಗತ್ತಿನಲ್ಲಿ ನಿನ್ನ ಪೂಜೆ ಆಗುವುದು, ನಾನು ನಿನಗೆ ನಿನ್ನ ತಂದೆಯ ದರ್ಶನ ಮಾಡಿಸಿದೆ. ದುರ್ಗೆಯು ಕೇವಲ ಪ್ರಕಾಶವನ್ನು ತೋರಿಸಿ ವಿಷ್ಣುವಿಗೆ ಭ್ರಮೆಗೊಳಿಸಿದಳು. ವಿಷ್ಣುವು ಪ್ರಭುವಿನ ಇದೆ ಸ್ಥಿತಿಯನ್ನು ತನ್ನ ಅನುಯಾಯಿಗಳಿಗೆ ತಿಳಿಸಿದನು. ಪರಮಾತ್ಮನ ಪ್ರಕಾಶ ಮಾತ್ರ ನೋಡಬಹುದು, ಪರಮಾತ್ಮ ನಿರಾಕಾರನು. ನಂತರ ಆದಿ ಭವಾನಿಯು, ರುದ್ರನ (ಮಹೇಶನ) ಬಳಿಗೆ ಹೋಗಿ, ನೀನೂ ಸಹ ನಿನ್ನ ತಂದೆಯನ್ನು ಹುಡುಕು. ನಿನ್ನ ಇಬ್ಬರು ಸೋದರರಿಗೆ ಅವರ ದರ್ಶನವಾಗಲಿಲ್ಲ. ಅವರಿಗೆ ಏನನ್ನು ಕೊಡಬೇಕಿತ್ತೋ ಅದನ್ನು ಕೊಟ್ಟಿದ್ದಾಗಿದೆ. ಈಗ ನಿನಗೆ ಏನು ಬೇಕೆಂದು ಕೇಳು ಎಂದಾಗ ಮಹೇಶನು ಹೇಳಿದನು. "ಹೇ ಜನನೀ ನನ್ನ ಇಬ್ಬರು ಸೋದರರಿಗೂ ತಂದೆಯ ದರ್ಶನವಾಗಿಲ್ಲ, ಎಂದ ಮೇಲೆ, ನಾನೇಕೆ ವ್ಯರ್ಥ ಪ್ರಯತ್ನ ಮಾಡಲಿ? ನನಗೆ ನೀನು ವರವನ್ನು ಕೊಡುವುದಾದರೆ "ಮೃತ್ಯುಂಜಯನಾಗು" (ಅಮರನಾಗುವ) ವರವನ್ನು ಕೊಡು" ಎಂದಾಗ ಪ್ರಕೃತಿ ಹೇಳಿದಳು ನನ್ನಿಂದ ಇದು ಸಾಧ್ಯವಿಲ್ಲ. ಆದರೆ ನಿನಗೆ ನಿನ್ನ ಆಯುಷ್ಯವನ್ನು ಹೆಚ್ಚಿಸಿಕೊಳ್ಳಲು ಒಂದು ಯುಕ್ತಿಯನ್ನು ತಿಳಿಸುವೆ. ಅದರಿಂದ ನಿನ್ನ ಆಯಸ್ಸು ಹೆಚ್ಚಾಗುವುದು, ಅದು ವಿಧಿಯೋಗ ಸಮಾಧೀಸ್ತನಾಗಿರುವುದು (ಅದಕ್ಕಾಗಿಯೇ ಶಿವನು ಹೆಚ್ಚಾಗಿ ಸಮಾಧಿ ಸ್ಥಿತಿಯಲ್ಲೇ ಇರುವನು). ಈ ರೀತಿ ದುರ್ಗೆಯು ಮೂವರಿಗೂ ಪ್ರತ್ಯೇಕ ವಿಭಾಗಗಳನ್ನು ಹಂಚಿಕೊಟ್ಟಳು.

ಬ್ರಹ್ಮಾನಿಗೆ, ಕಾಲ ಲೋಕದಲ್ಲಿ 84 ಲಕ್ಷ ಜೀವಿಗಳ ಶರೀರವನ್ನು ಸೃಷ್ಟಿಸುವ ಅಂದರೆ ರಜೋಗುಣ ಪ್ರಭಾವದಿಂದ ಸಂತಾನೋತ್ಪತ್ತಿ ಮಾಡುವುದಕ್ಕಾಗಿ ವಿವಶ ಮಾಡಿ ಜೀವಿಗಳನ್ನು ಉತ್ಪತ್ತಿ ಮಾಡುವ ಕೆಲಸದ ವಿಭಾಗವನ್ನು ವಹಿಸಲಾಯಿತು.

ವಿಷ್ಣುವಿಗೆ ಈ ಜೀವಿಗಳ ಪಾಲನೆ-ಪೋಷಣೆ (ಕರ್ಮಾನುಸಾರ) ಮಾಡುವ ಹಾಗೂ ಮೋಹ-ಮಮತೆ ಮಾಯೆ, ಪ್ರಿತಿ ಹುಟ್ಟಿಸಿ ಪಾಲನೆ ಮಾಡುವ ವಿಭಾಗ ನೀಡಲಾಯಿತು.

ಶಿವ ಶಂಕರನಿಗೆ ಸಂಹಾರಮಾಡುವ ಕೆಲಸವನ್ನು ನೀಡಲಾಯಿತು. ಏಕೆಂದರೆ ಇವರ ತಂದೆ ನಿರಂಜನ (ಕಾಲ) ನಿಗೆ ಪ್ರತಿ ದಿನ ಒಂದು ಲಕ್ಷ ಮಾನವ ಶರೀರಧಾರಿ ಜೀವಿಗಳನ್ನು ಪ್ರತಿದಿನ ತಿನ್ನಬೇಕಾಗುತ್ತದೆ.

ನಮ್ಮ ಮನಸ್ಸಿನಲ್ಲಿ ಇಲ್ಲೊಂದು ಪ್ರಶ್ನೆ ಹುಟ್ಟುವುದು ಸಹಜ. ಬ್ರಹ್ಮಾ, ವಿಷ್ಣು, ಮಹೇಶ್ವರರು, ತಮ್ಮ-ತಮ್ಮ ಲೋಕದಲ್ಲಿ ಪ್ರತ್ಯೇಕವಾಗಿ ಇರುತ್ತಾರೆ. ಇವರು ಉತ್ಪತ್ತಿ ಸ್ಥಿತಿ, ಸಂಹಾರ ಹೇಗೆ ಮಾಡುತ್ತಾರೆ? ಹೇಗೆಂದರೆ ಈಗ ಉಪಗ್ರಹಗಳನ್ನು ಅಂತರಿಕ್ಷಕ್ಕೆ ಕಳುಹಿಸಿ, ಅವುಗಳಿಂದ ಬರುವಂತಹ ಕಿರಣಗಳಿಂದ ಕೆಳಗಿನ ಸಂಚಾರ ಇತ್ಯಾದಿ ಕೆಲಸಗಳನ್ನು ಸಮರ್ಥವಾಗಿ

ಮಾಡಿರುತ್ತಿರುವಂತೆ. ಮೂರು ದೇವರು ಎಲ್ಲಿಯೇ ಇರಲಿ, ಅವರ ಶರೀರದಿಂದ ಹೊರಹೊಮ್ಮುವ ಗುಣ (ರಜೋಗುಣ–ಸತೋಗುಣ–ತಮೋಗುಣ) ದ ಅಲೆಗಳ ಪ್ರಭಾವದಿಂದ ಮೂರು ಲೋಕಗಳ ಪ್ರತಿ ಜೀವಿಯೂ ಸ್ವತಃವೇ ಪ್ರಭಾವಿತವಾಗುತ್ತವೆ.

ಮೇಲಿನ ವಿವರಣೆ ಬ್ರಹ್ಮ (ಕಾಲ) ನ ಒಂದು ಬ್ರಹ್ಮಾಂಡದಲ್ಲಿನ ರಚನೆಯಾಗಿದೆ. ಇಂತಹ ಕ್ಷರ ಪುರುಷನ 21 ಬ್ರಹ್ಮಾಂಡಗಳಿವೆ. ಆದರೆ ಕ್ಷರಪುರುಷನು (ಕಾಲ) ಸ್ವತಃ ಅವ್ಯಕ್ತ ಅಂದರೆ ವಾಸ್ತವಿಕ ಶರೀರರೂಪದಲ್ಲಿ ಎಲ್ಲರ ಮುಂದೆ ಬರುವುದಿಲ್ಲ. ಅವನನ್ನು ಕಾಣಲು ಮೂರು ದೇವರುಗಳು (ಬ್ರಹ್ಮಾ–ವಿಷ್ಣು–ಮಹೇಶ್ವರ) ವೇದದಲ್ಲಿ ವರ್ಣಿತ ವಿಧಿ ಅನುಸಾರ ಹೆಚ್ಚು ಸಾಧನೆ ಮಾಡಿದರೂ ಬ್ರಹ್ಮನ ದರ್ಶನವಾಗಲೇ ಇಲ್ಲ. ನಂತರ ಋಷಿಗಳು ವೇದಗಳನ್ನು ಓದಿದರು. ಅದರಲ್ಲಿ ಹೀಗೆ ಬರೆದಿದೆ. "ಅಗ್ನೇಃ ತನೂರ್ ಅಸಿ". (ಪವಿತ್ರ ಯಜುರ್ವೇದ ಒಂದನೇ ಅಧ್ಯಾಯದ 15ನೇ ಮಂತ್ರ) ಪರಮೇಶ್ವರನು ಸಶರೀರನಾಗಿದ್ದಾನೆ. ಹಾಗೂ ಪವಿತ್ರ ಯಜುರ್ವೇದ 5ನೇ ಅಧ್ಯಾಯದ 1ನೇ ಮಂತ್ರದಲ್ಲಿ ಹೀಗೆ ಹೇಳಿದೆ. "ಅಗ್ನೇಃ ತನೂರ ಅಸಿ ವಿಷ್ಣವೆ ತ್ವಾ ಸೋಮಸ್ಯ ತನೂರ ಅಸಿ" ಅಂದರೆ ಈ ಮಂತ್ರದಲ್ಲಿ ವೇದ ಎರಡು ಬಾರಿ ಸಾಕ್ಷಿ ನೀಡುತ್ತಿದೆ. ಸರ್ವವ್ಯಾಪಕ, ಸರ್ವರಪಾಲಕ ಸತ್ಯಪುರುಷನು ಸಶರೀರನು. ಪವಿತ್ರ ಯಜುರ್ವೇದದ 40ನೇ ಅಧ್ಯಾಯದ 8ನೇ ಮಂತ್ರದಲ್ಲಿ ಹೀಗೆ ಹೇಳಿದೆ–ಯಾವ ಪರಮೇಶ್ವರನನ್ನು ಸರ್ವ ಜೀವಾತ್ಮಗಳು ಇಷ್ಟಪಡುವವೋ, ಅವನು ಕವಿರ್ ಅರ್ಥಾತ್ ಕಬೀರನು. ಅವನ ಶರೀರವು (ಅಸ್ನಾವೀರಂ) ನಾಡಿ ರಹಿತವಾಗಿದೆ. (ಶುಕ್ರಂ) ವೀರ್ಯದಿಂದಾದ ಪಂಚತತ್ವಗಳನ್ನು ಹೊಂದಿದ (ಅಕಾಯಂ) ಶರೀರವಲ್ಲ. ಅವನು ಎಲ್ಲರ ಸ್ವಾಮಿ, ಎಲ್ಲಕ್ಕಿಂತಲೂ ಮೇಲೆ ಇರುವ ಸತ್ಯಲೋಕದಲ್ಲಿ ವಿರಾಜಮಾನನಾಗಿದ್ದಾನೆ. (ಉಪಸ್ಥಿತನಿದ್ದಾನೆ). ಆ ಪರಮೇಶ್ವರನ ಶರೀರವು ತೇಜಪುಂಜದ ಸ್ವಪ್ರಕಾಶಿತ ಶರೀರ ಇದೆ, ಅವನು ಶಬ್ದ ರೂಪ ಅಂದರೆ ಅವಿನಾಶಿ. ಅವನೇ ಕವಿರ್ದೇವ (ಕಬೀರ್) ಸಕಲ ಬ್ರಹ್ಮಾಂಡಗಳ ರಚನೆ ಮಾಡುವವನು (ವ್ಯದಧಾತಾ) ಎಲ್ಲಾ ಬ್ರಹ್ಮಾಂಡಗಳ ರಚನಾಕಾರ (ಸ್ವಯಂಭೂಃ) ಸ್ವಯಂ ಪ್ರಕಟನಾಗುವನು (ಯಥಾ ತಥ್ಯ ಅರ್ಥಾತ) ವಾಸ್ತವದಲ್ಲಿ (ಶಾಶ್ವತ) ಅವಿನಾಶಿ. (ಗೀತೆಯ 15ನೇ ಅಧಾಯದ 17 ಶ್ಲೋಕದಲ್ಲೂ ಸಹ ಪ್ರಮಾಣವಿದೆ).

ಇದರ ಸಾರವೆನೆಂದರೆ ಪೂರ್ಣಬ್ರಹ್ಮನ ಶರೀರದ ಹೆಸರೇ ಕಬೀರ್ (ಕವಿರ್ದೇವ) ಎಂದಾಗಿದೆ. ಆ ಪರಮೇಶ್ವರನ ಶರೀರವು ಪ್ರಕಾಶ ತತ್ವದಿಂದಾಗಿದೆ. (ನೂರ=ಪ್ರಕಾಶ) ಪರಮಾತ್ಮನ ಶರೀರವು ಅತಿ ಸೂಕ್ಷ್ಮವಾಗಿದೆ ಅದು ದಿವ್ಯದೃಷ್ಟಿಯುಳ್ಳ ಸಾಧಕನಿಗೆ ಕಾಣಿಸುತ್ತದೆ. ಈ ರೀತಿ ಜೀವಾತ್ಮದ್ದು ಸೂಕ್ಷ್ಮ ಶರೀರವಿದೆ. ಅದರ ಮೇಲೆ ತಂದೆ ತಾಯಿಯರ ಸಂಯೋಗದಿಂದ ವೀರ್ಯದಿಂದ ತಯಾರಾದ ಪಂಚತತ್ವ ಶರೀರವನ್ನು ಹಾಕಲಾಗಿದೆ. ಆ ಸೂಕ್ಷ್ಮ ಶರೀರವು ಈ ಪಂಚತತ್ವದ ಶರೀರ ತ್ಯಜಿಸಿದ ನಂತರವೂ (ಮರಣದ ನಂತರವೂ) ಜೀವಾತ್ಮದ ಜೊತೆಗೆ ಇರುತ್ತದೆ. ಆ ಸೂಕ್ಷ್ಮ ಶರೀರವು ದಿವ್ಯದೃಷ್ಟಿಯುಳ್ಳ ಸಾಧಕನಿಗೆ ಕಾಣಿಸುತ್ತದೆ. ಈ ರೀತಿ ಪರಮಾತ್ಮನ ಹಾಗೂ ಜೀವಾತ್ಮದ ಸ್ಥಿತಿಯನ್ನು ಅರಿಯಿರಿ.

ವೇದಗಳಲ್ಲಿ "ಓಂ" ನಾಮ ಸ್ಮರಣೆಯ ಬಗ್ಗೆ ಹೇಳಿದೆ. ಅದು ಬ್ರಹ್ಮ ಸಾಧನೆಯಾಗಿದೆ. ಈ ಉದ್ದೇಶದಿಂದ ಋಷಿಗಳು 'ಓಂ' ನಾಮ ಜಪವನ್ನು ಪೂರ್ಣ ಬ್ರಹ್ಮನದೆಂದು ತಿಳಿದು ಸಾವಿರಾರು ವರ್ಷಗಳ ವರೆಗೆ ಹಠಯೋಗ ಮಾಡಿದರು. ಆದರೆ ಪ್ರಭುವಿನ ದರ್ಶನಾಗಲಿಲ್ಲ. ಕೆಲವು ಸಿದ್ಧಿಗಳು ಲಭಿಸಿದವು. ಆ ಸಿದ್ಧಿ ರೂಪದ ಆಟಿಕೆಗಳನ್ನು ಬಳಸುತ್ತಾ ಋಷಿಗಳೂ ಸಹ ಜನನ–ಮರಣ ಚಕ್ರದೊಳಗೆ ಉಳಿದರು. ಹಾಗು ತಮ್ಮ ಅನುಭವದ ಶಾಸ್ತ್ರಗಳಲ್ಲಿ ಪರಮಾತ್ಮನನ್ನು ನಿರಾಕಾರ ಎಂದು ಬರೆದರು. ಬ್ರಹ್ಮನು (ಕಾಲನು) ತಾನು ಯಾರಿಗೂ ತನ್ನ ವಾಸ್ತವಿಕ ರೂಪದಲ್ಲಿ ದರ್ಶನ ಕೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವನು. ನನ್ನನ್ನು 'ಅವ್ಯಕ್ತ' ನೆಂದು ಅರಿಯುವರು. (ಅವ್ಯಕ್ತದ ಅರ್ಥ ಆಕಾರವೇನೋ ಇದೆ ಆದರೆ ಅದನ್ನು ಗೋಚರಿಸುವುದಿಲ್ಲ ಎಂಬುದಾಗಿದೆ. ಹೇಗೆ ಮೋಡ

ಮುಸುಕಿದಾಗ ಹಗಲಿನಲ್ಲೇ ಸೂರ್ಯ ಕಾಣುವುದಿಲ್ಲವೋ ಹಾಗೆ. ಆದರೆ ಮೋಡದ ಆಚೆ ಸೂರ್ಯ ಇದ್ದಂತೆಯೇ ಇದ್ದಾನೆ, ಈ ಅವಸ್ಥೆಯನ್ನು ಅವ್ಯಕ್ತ ಎನ್ನಲಾಗುತ್ತದೆ. (ಪ್ರಮಾಣಕ್ಕಾಗಿ ಗೀತೆಯ 7ನೇ ಅಧ್ಯಾಯದ 24–25, 11ನೇ ಅಧ್ಯಾಯ 32 ಮತ್ತು 48ನೇ ಶ್ಲೋಕಗಳನ್ನು ಓದಿರಿ).

ಪವಿತ್ರ ಗೀತೆಯನ್ನು ಹೇಳುವ ಕಾಲಬ್ರಹ್ಮ ಶ್ರೀ ಕೃಷ್ಣನ ಶರೀರದಲ್ಲಿ ಪ್ರೇತರೂಪದಲ್ಲಿ ಪ್ರವೇಶ ಮಾಡಿ ಹೇಳಿದ್ದಾನೆ. ಹೇ ಅರ್ಜುನಾ! "ನಾನು ಕಾಲನು ಎಲ್ಲರನ್ನೂ ತಿನ್ನಲು ಬಂದಿರುವೆನು" (ಗೀತೇಯ ಅಧ್ಯಾಯ 11ರ ಶ್ಲೋಕ 32). ಇದು ನನ್ನ ವಾಸ್ತವಿಕ ರೂಪ. ಈ ರೂಪವನ್ನು ನಿನ್ನನ್ನು ಬಿಟ್ಟು ಬೇರೆ ಯಾರೂ ಹಿಂದೆ ನೋಡಿಲ್ಲ ಹಾಗೂ ಮುಂದೆ ನೋಡುವುದು ಇಲ್ಲ ಅಂದರೆ ವೇದಗಳಲ್ಲಿ ವರ್ಣಿತವಾಗಿರುವ ಯಜ್ಞ–ಜಪ–ತಪ 'ಓಂ' ನಾಮದ ಜಾಪ ಮುಂತಾದವು ವಿಧಿಗಳಿಂದ ನನ್ನ ಈ ವಾಸ್ತವಿಕ ಸ್ವರೂಪವನ್ನು ನೋಡಲು ಸಾಧ್ಯವಿಲ್ಲ (ಗೀತೆಯ 11ನೇ ಅಧ್ಯಾಯದ 48ನೇ ಶ್ಲೋಕದಲ್ಲಿದೆ). ನಾನು ಕೃಷ್ಣನಲ್ಲ, ಈ ಮೂರ್ಖರು ಕೃಷ್ಣನ ರೂಪದಲ್ಲಿ ಅವ್ಯಕ್ತನಾದ ನನ್ನನ್ನು ವ್ಯಕ್ತರೂಪ (ಮನುಷ್ಯ ರೂಪ) ತಿಳಿದಿದ್ದಾರೆ. ಏಕೆಂದರೆ ಇವರು ನನ್ನ ಕೆಟ್ಟ ನಿಯಮದ ಬಗ್ಗೆ ತಿಳಿದಿಲ್ಲ. ಅಂದರೆ ನಾನು ಯಾರ ಮುಂದೆಯೂ ವಾಸ್ತವಿಕ ಕಾಲ ರೂಪದಲ್ಲಿ ಬರುವುದಿಲ್ಲ. ಯೋಗಮಾಯೆಯಿಂದ ಅಡಗಿರುತ್ತೇನೆ. (ಗೀತೆಯ 7ನೇ ಅಧ್ಯಾಯ 24–25 ನೇ ಶ್ಲೋಕ). ವಿಚಾರ ಮಾಡಿ : ತನ್ನ ರಹಸ್ಯಮಯವಾಗಿರುವ ವಿಧಾನವನ್ನು ಸ್ವತಃ ಶ್ರೇಷ್ಠವಲ್ಲದ್ದು, (ಅನುತ್ತಮ್) ಎಂದು ಏಕೆ ಹೇಳುತ್ತಿದ್ದಾನೆ?

ಒಂದುವೇಳೆ ತಂದೆಯು ತನ್ನ ಮಕ್ಕಳಿಗೆ ದರ್ಶನ ಕೊಡುತ್ತಿಲ್ಲ ಎಂದರೆ ಅವನಲ್ಲಿ ಯಾವುದೊ ದೋಷ ಇದೆ ಈ ಕಾರಣದಿಂದಾಗಿ ರಹಸ್ಯಮಯವಾಗಿ ಎಲ್ಲ ಸೌಲಭ್ಯ ಒದಗಿಸುತ್ತಿದ್ದಾನೆ. ಶಾಪದಿಂದಾಗಿ ಕಾಲನು ಒಂದು ಲಕ್ಷ ಮಾನವ ಶರೀರ ಧರಿಸಿದ ಜೀವಾಗಳನ್ನು ತಿನ್ನಬೇಕಾಗಿದೆ. ಇದಕ್ಕಿಂತ ಹೆಚ್ಚಾಗಿ ಒಂದು ಲಕ್ಷ ಕಾಲು ಅಂದರೆ 25% (ಪ್ರತಿಶತ) ಹೆಚ್ಚು ಉತ್ಪತ್ತಿಯಾದ ಜೀವಿಗಳನ್ನು ಕರ್ಮ ಭೋಗದ ಶಿಕ್ಷೆ ವಿಧಿಸಲು 84 ಲಕ್ಷ ಯೋನಿಗಳ ರಚನೆ ಮಾಡಲಾಗಿದೆ. ಒಂದು ವೇಳೆ ಎಲ್ಲರ ಎದುರಿಗೆ ಬಂದು ಕಾಲನು ಯಾರ ಮಗನನ್ನೂ, ಮಗಳನ್ನೂ, ತಂದೆ ತಾಯಿರನ್ನೂ, ಹೆಂಡತಿಯನ್ನೂ ತಿಂದರೆ ಎಲ್ಲರಿಗೂ ಕಾಲ ಬ್ರಹ್ಮನ ಮೇಲೆ ದ್ವೇಷವಾಗುತ್ತಿತ್ತು ಹಾಗು ಯಾವಾಗ ಪೂರ್ಣ ಪರಮಾತ್ಮ ಕವಿರಗ್ನಿ (ಕಬೀರ ಪರಮೇಶ್ವರ) ಸ್ವತಃ ಬಂದಾಗ ಅಥವಾ ತನ್ನ ಸಂದೇಶವಾಹಕನನ್ನು ಕಳುಹಿಸಿದಾಗ ಎಲ್ಲಾ ಜೀವಾತ್ಮಗಳು ಸತ್ಯಭಕ್ತಿಯನ್ನು ಮಾಡಿ ನನ್ನ ಸೆರೆಯಿಂದ ಬಿಡಿಸಿಕೊಂಡರೆ ಎಂಬ ಭಯದಿಂದ ನಮ್ಮನ್ನು ಮೋಸದಿಂದ ಇಟ್ಟಿದ್ದಾನೆ. ಮತ್ತು ಪವಿತ್ರ ಗೀತೆಯ 7ನೇ ಅಧ್ಯಾಯದ 18, 24, 25ರಲ್ಲಿ ತನ್ನ ಸಾಧನೆಯಿಂದ ದೊರೆಯುವ ಮುಕ್ತಿ (ಗತಿ) ಯನ್ನು (ಅನುತ್ತಮಾಮ್) ಅತಿ ಅಶ್ರೇಷ್ಠ ಹೇಳಲಾಗಿದೆ ಹಾಗು ತನ್ನ ವಿಧಾನ (ನಿಯಮ) ವನ್ನೂ (ಅನುತ್ತಮಾಮ್) ಅಶ್ರೇಷ್ಠ ಎಂದು ಹೇಳಲಾಗಿದೆ.

ಪ್ರತ್ಯೇಕ ಬ್ರಹ್ಮಾಂಡದ ಬ್ರಹ್ಮಲೋಕದಲ್ಲಿ ಒಂದು ಮಹಾಸ್ವರ್ಗವನ್ನು ರಚಿಸಿದ್ದಾನೆ. ಮಹಾಸ್ವರ್ಗದಲ್ಲಿ ಒಂದು ಸ್ಥಾನದಲ್ಲಿ ನಕಲಿ 'ಸತ್ಯಲೋಕ', ನಕಲಿ 'ಅಲಖ್‌ಲೋಕ', ನಕಲಿ 'ಅಗಮ್‌ಲೋಕ', ಹಾಗೂ ನಕಲಿ 'ಅನಾಮಿಲೋಕ' ಗಳ ರಚನೆ ಜೀವಾತ್ಮಗಳಿಗೆ ಮೋಸದಲ್ಲಿಡಲೆಂದೇ ಪ್ರಕೃತಿ (ದುರ್ಗಾ/ ಆದಿಮಾಯೆ) ಮೂಲಕ ಇವುಗಳನ್ನು ರಚಿಸಿದ್ದಾನೆ. ಇದರ ಬಗ್ಗೆ ಕಬೀರ್ ಪರಮೇಶ್ವರರ ಒಂದು ಶಬ್ದ ಹೀಗಿದೆ."ಕರ್ ನೈನೊ ದೀದಾರ್ ಮಹಲ್ ಮೆ ಪ್ಯಾರಾ ಹೈ"

ಕಾಯಾಭೇದ್ ಕಿಯಾ ನಿರವಾರಾ, ಯಹ್ ಸಬ್ ರಚನಾ ಪಿಂಡ್–ಮಂಝಾರಾ ಹೈ ।
ಮಾಯಾ ಅವಿಗತ್ ಜಾಲ್ ಪಸಾರಾ, ಸೋ ಕಾರೀಗರ್ ಭಾರಾ ಹೈ ।
ಆದಿ ಮಾಯಾ ಕೀನ್ಹೀ ಚತುರಾಯಿ, ಝೂಠೀ ಬಾಜೀ ಪಿಂಡ್ ದಿಖಾಯಿ ।
ಅವಿಗತ್ ರಚನಾ ರಚಿ ಅಂಡ್ ಮಾಹಿ ವಾಕಾ–ಪ್ರತಿಬಿಂಬ್ ಡಾರಾ ಹೈ ।

ಒಂದು ಬ್ರಹ್ಮಾಂಡದಲ್ಲಿ ಬೇರೆ ಮೂರು ಬ್ರಹ್ಮಾ, ವಿಷ್ಣು, ಹಾಗೂ ಶಿವ ಲೋಕಗಳ ರಚನೆಯೂ ಇದೆ. ಅಲ್ಲಿಯೇ ಕುಳಿತು ಈ ಮೂರೂ ಪ್ರಭುಗಳು ಸ್ವರ್ಗ (ಇಂದ್ರನಲೋಕ), ಪೃಥ್ವಿ, ಪಾತಾಳ ಲೋಕಗಳ ಒಂದೊಂದು ವಿಭಾಗದ ಮಾಲೀಕರಾಗಿ ನಿಭಾಯಿಸುತ್ತಾರೆ ಮತ್ತು ತಮ್ಮ ತಂದೆಗೆ

(ಕಾಲನಿಗೆ) ತಿನ್ನಲೆಂದು ಸೃಷ್ಟಿ, ಸ್ಥಿತಿ, ಸಂಹಾರಗಳ ಕಾರ್ಯವನ್ನು ನಿಭಾಯಿಸುತ್ತಾರೆ. ಈ ಮೂರು ಪ್ರಭುಗಳ (ಬ್ರಹ್ಮಾ-ವಿಷ್ಣು-ಮಹೇಶ್ವರರ) ಹುಟ್ಟು-ಸಾವು ಆಗುತ್ತದೆ. ಆಗ ಕಾಲನು ಇವರನ್ನೂ ಸಹ ತಿನ್ನುತ್ತಾನೆ. ಇದೇ ಬ್ರಹ್ಮಾಂಡದಲ್ಲಿ {ಇದನ್ನು ಅಂಡ ಎಂದೂ ಕರೆಯಲಾಗುತ್ತದೆ. ಏಕೆಂದರೆ ಬ್ರಹ್ಮಾಂಡ ಮೊಟ್ಟೆಯ ಆಕಾರದಲ್ಲಿದೆ. ಇದನ್ನು ಪಿಂಡ ಎಂದೂ ಸಹ ಕರೆಯುತ್ತಾರೆ. ಏಕೆಂದರೆ ನಮ್ಮ ಶರೀರ ಅಂದರೆ 'ಪಿಂಡ'ದಲ್ಲಿ ಒಂದು ಬ್ರಹ್ಮಾಂಡದ ರಚನೆಯನ್ನು ಕಮಲಗಳಲ್ಲಿ ಟಿ.ವಿ. ಹಾಗೆ ನೋಡಬಹುದಾಗಿದೆ.} ಒಂದು ಮಾನಸ ಸರೋವರ ಹಾಗೂ ಧರ್ಮರಾಯನ (ನ್ಯಾಯಾಧೀಶನ) ಲೋಕವಿದೆ. ಹಾಗು ಒಂದು ರಹಸ್ಯವಾದ ಸ್ಥಾನದಲ್ಲಿ ಪೂರ್ಣ ಪರಮಾತ್ಮನು ಬೇರೆ ರೂಪವನ್ನು ಧಾರಣೆ ಮಾಡಿಕೊಂಡು ಇರುತ್ತಾನೆ. ಹೇಗೆಂದರೆ ಪ್ರತಿಯೊಂದು ದೇಶಕ್ಕೂ "ರಾಯಭಾರಿ ಭವನ" ವಿರುವಂತೆ. ಅಲ್ಲಿಗೆ ಯಾರೂ ಹೋಗಲು ಸಾಧ್ಯವಿಲ್ಲ. ಅಲ್ಲಿ ಸತ್ಯಲೋಕದ ಭಕ್ತಿ ಕಡಿಮೆಯಾದ (ಅರ್ಧಭಕ್ತಿಯ) ಆತ್ಮಗಳು ಅಲ್ಲಿ ಇರುತ್ತವೆ. ಯಾವಾಗ ಭಕ್ತಿಯುಗ ಬರುವುದೋ, ಆಗ ಪರಮೇಶ್ವರ ಕಬೀರರು ತಮ್ಮ ಪ್ರತಿನಿಧಿ ಸಂತ, ಸದ್ಗುರುವಿಗೆ ಕಳುಹಿಸುತ್ತಾರೆ. ಆಗ ಈ ಪುಣ್ಯಾತ್ಮಗಳಿಗೆ ಭೂಮಿಯ ಮೇಲೆ ಮಾನವ ಶರೀರ ಪ್ರಾಪ್ತವಾಗುತ್ತದೆ. ಅವುಗಳು ಶೀಘ್ರವೇ (ಬೇಗನೆ) ಭಕ್ತಿಪಥದಲ್ಲಿ ಸಾಗುತ್ತವೆ. ಸದ್ಗುರುವಿನಿಂದ ದೀಕ್ಷೆ ಪಡೆದು ಮೋಕ್ಷವನ್ನು ಪಡೆಯುತ್ತವೆ. ಆ ಸ್ಥಾನಗಳಲ್ಲಿರುವ ಆತ್ಮಗಳ ಭಕ್ತಿ ಸಾಧನೆಯ ಪುಣ್ಯ ಖರ್ಚಾಗುವುದಿಲ್ಲ. ಪರಮಾತ್ಮನಿಂದಲೇ ಎಲ್ಲಾ ಸೌಲಭ್ಯಗಳೂ ಪ್ರಾಪ್ತವಾಗುತ್ತವೆ. ಬ್ರಹ್ಮನ ಉಪಾಸಕರು ಗಳಿಸಿದ ಭಕ್ತಿ, ಸ್ವರ್ಗ-ಮಹಾಸ್ವರ್ಗಗಳಲ್ಲಿ ಮುಗಿದುಹೋಗುತ್ತದೆ. ಏಕೆಂದರೆ ಈ ಕಾಲಲೋಕ (ಬ್ರಹ್ಮಲೋಕ) ಹಾಗೂ ಪರಬ್ರಹ್ಮ ಲೋಕದಲ್ಲಿ ಜೀವಾತ್ಮಗಳು ತಾವು ಮಾಡಿದ ಕರ್ಮಫಲ ಮಾತ್ರ ಪಡೆಯುತ್ತವೆ.

ಕ್ಷರ ಪುರುಷ(ಬ್ರಹ್ಮ)ನು ತನ್ನ 20 ಬ್ರಹ್ಮಾಂಡಗಳನ್ನು 4 ಮಹಾ ಬ್ರಹ್ಮಾಂಡಗಳಾಗಿ ವಿಭಾಗಿಸಿದ್ದಾನೆ. ಒಂದು ಬ್ರಹ್ಮಾಂಡದಲ್ಲಿ 5 ಬ್ರಹ್ಮಾಂಡಗಳ ಸಮೂಹವನ್ನು ಮಾಡಿದ್ದಾನೆ. ಅದರ ನಾಲ್ಕೂ ಕಡೆಯೂ (ಸುತ್ತಲೂ) ಗೋಲಾಕಾರದ ಪರಿಧಿಯನ್ನು ಮಾಡಿದ್ದಾನೆ. ಅಲ್ಲದೆ ನಾಲ್ಕು ಮಹಾಬ್ರಹ್ಮಾಂಡಗಳಿಗೂ ಗೋಲಾಕಾರದ ಪರಿಧಿಯನ್ನು ರಚಿಸಲಾಗಿದೆ. 21ನೇ ಬ್ರಹ್ಮಾಂಡವು ಒಂದು ಮಹಾಬ್ರಹ್ಮಾಂಡದಷ್ಟು ಸ್ಥಳವನ್ನು ಹೊಂದಿದೆ. 21ನೇ ಬ್ರಹ್ಮಾಂಡಕ್ಕೆ ಪ್ರವೇಶ ಮಾಡಿದೊಡನೆ, ಮೂರು ರಸ್ತೆಗಳು ಗೋಚರಿಸುತ್ತವೆ. ಇಲ್ಲೂ ಸಹ ಜೀವಿಗಳನ್ನು ವಂಚಿಸಿಡಲು, ಎಡಭಾಗದಲ್ಲಿ ನಕಲಿ ಸತ್ಯಲೋಕ, ನಕಲಿ ಅಲಖ್‌ಲೋಕ, ನಕಲಿ ಅಗಮ್‌ಲೋಕ ಹಾಗೂ ನಕಲಿ ಅನಾಮಿಲೋಕಗಳನ್ನು ಆದಿಮಾಯೆಯಿಂದ (ದುರ್ಗಾಳಿಂದ) ರಚಿಸಿದ್ದಾನೆ. ಬಲಭಾಗದಲ್ಲಿ 12 ಸರ್ವಶ್ರೇಷ್ಠ ಸಾಧಕ ಬ್ರಹ್ಮ ಭಕ್ತರನ್ನು ಇಡುತ್ತಾನೆ. ನಂತರ ಪ್ರತಿಯೊಂದು ಯುಗಗಳಲ್ಲೂ ಅವರನ್ನು ತನ್ನ ಸಂದೇಶವಾಹಕರನ್ನಾಗಿ ಪೃಥ್ವಿಗೆ ಕಳುಹಿಸುತ್ತಾನೆ. ಅವರು ಶಾಸ್ತ್ರವಿರುದ್ಧ ಸಾಧನೆ ಹಾಗು ಜ್ಞಾನವನ್ನು ತಿಳಿಸುತ್ತಾರೆ. ಈ ಕಾರಣ ಸ್ವತಃ ಭಕ್ತಿಹೀನರಾಗಿ ತನ್ನ ಅನುಯಾಯಿಗಳನ್ನು ಸಹ ಕಾಲನ ಜಾಲದಲ್ಲಿ ಸಿಲುಕಿಸುತ್ತಾರೆ. ಇಂತಹ ಗುರು ಹಾಗೂ ಶಿಷ್ಯರು ಇಬ್ಬರೂ ನರಕಕ್ಕೆ ಹೋಗುತ್ತಾರೆ. ನಂತರ ಮುಂಭಾಗದಲ್ಲಿ ಬೀಗ ಹಾಕಲಾಗಿದೆ. ಆ ರಸ್ತೆಯು ಕಾಲನ (ಬ್ರಹ್ಮನ) ನಿಜ ಲೋಕದ ದಾರಿ. ಅಲ್ಲಿ ಈ ಕಾಲನು ತನ್ನ ವಾಸ್ತವಿಕ (ಸಹಜ) ಮಾನವ ಸದೃಶ್ಯ (ಮಾನವನಂತೆ ಕಾಣುವ) ಕಾಲ ರೂಪದಲ್ಲಿರುತ್ತಾನೆ. ಈ ಸ್ಥಳದಲ್ಲಿ ಕಾವಲಿ (ತವಾ) ರೂಪದ ಒಂದು ಕಲ್ಲಿನ ಭಾಗ (ಶಿಲೆ) ಇದೆ, ಅದು ಸ್ವತಃ ಬಹಳ ಬಿಸಿಯಾಗಿರುತ್ತದೆ. ಆ ಬಿಸಿಯಾದ ಶಿಲೆ ಮೇಲೆ ಒಂದು ಲಕ್ಷ ಮಾನವ ಶರೀರ ಧಾರಿ ಜೀವಾತ್ಮಗಳ ಸೂಕ್ಷ್ಮ ಶರೀರವನ್ನು ಸುಟ್ಟು, ಆ ಶರೀರದಿಂದ ಹೊಲಸು ಬೇರ್ಪಡಿಸಿ ಅದನ್ನು ಕಾಲಬ್ರಹ್ಮನು ತಿನ್ನುತ್ತಾನೆ. ಆ ಸಮಯದಲ್ಲಿ (ಬೇಯಿಸುವಾಗ) ಎಲ್ಲಾ ಜೀವಾತ್ಮಗಳು ಬಹಳ ಕಷ್ಟವನ್ನು ಅನುಭವಿಸುತ್ತವೆ, ಹಾಹಾಕಾರ ವಾಗುತ್ತದೆ, ನಂತರ ಸ್ವಲ್ಪ ಸಮಯದ ನಂತರ ಮೂರ್ಛೆ ಹೋಗುತ್ತವೆ. ಜೀವಾತ್ಮಗಳು ಸಾಯುವುದಿಲ್ಲ. ಅಲ್ಲಿಂದ ಧರ್ಮರಾಯನ (ನ್ಯಾಯಾಧೀಶ) ಲೋಕಕ್ಕೆ ಹೋಗುತ್ತವೆ. ಅಲ್ಲಿ ಅವುಗಳ ಕರ್ಮಗಳ ಆಧಾರದ ಮೇಲೆ, ಬೇರೆ ಜನ್ಮವನ್ನು ಪಡೆದು ಹುಟ್ಟು-ಸಾವಿನ ಚಕ್ರದಲ್ಲಿ ಸಿಲುಕುತ್ತವೆ.

# ಬ್ರಹ್ಮ ಲೋಕದ ಲಘು ಚಿತ್ರ



# ಜ್ಯೋತಿ ನಿರಂಜನ (ಕಾಲ) ಬ್ರಹ್ಮನ ಲೋಕ (ಇಪ್ಪತ್ತೊಂದು ಬ್ರಹ್ಮಾಂಡ)ದ ಲಘು ಚಿತ್ರ



ಮೇಲೆ ಹೇಳಿರುವ ಬೀಗವು, ಕಾಲನು ತಿನ್ನುವ ಜೀವಾತ್ಮಗಳನ್ನು ಒಳಗೆ ಬರಲು ಕೆಲವೇ ಕ್ಷಣ ತೆರೆಯುತ್ತಾನೆ. ಪೂರ್ಣ ಪರಮಾತ್ಮನ ಸತ್ಯನಾಮ ಹಾಗೂ ಸಾರ ನಾಮದಿಂದ ಈ ಬೀಗವು ಸ್ವಯಂ ತೆರೆಯುತ್ತದೆ ಈ ರೀತಿ ಪೂರ್ಣ ಪರಮಾತ್ಮ (ಕಬೀರ್ ಪರಮೇಶ್ವರರು) ಕವಿರ್ದೇವರು ಈ ಕಾಲನ ಜಾಲ (ವ್ಯವಸ್ಥೆ) ತಮ್ಮ ನಿಜಭಕ್ತರಾದ ಧರ್ಮ್‌ದಾಸರಿಗೆ ತಿಳಿಸಿದ್ದಾರೆ.

## "ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳ ಸ್ಥಾಪನೆ"

ಕಬೀರ್ ಪರಮೇಶ್ವರರು ಮುಂದೆ ಹೇಳಿದ್ದಾರೆ ಪರಬ್ರಹ್ಮನು (ಅಕ್ಷರ ಪುರುಷ) ತನ್ನ ಕಾರ್ಯದ ಜವಾಬ್ದಾರಿ ಮರೆತು ಮಾನಸ ಸರೋವರದಲ್ಲಿ ಮಲಗಿಬಿಟ್ಟನು ಮತ್ತು ಪರಮೇಶ್ವರನು (ನಾನು ಅಂದರೆ ಕಬೀರ ಸಾಹೇಬ) ಆ ಸರೋವರದೊಳಗೆ ಮೊಟ್ಟೆಬಿಟ್ಟಾಗ ಪರಬ್ರಹ್ಮನು ಕ್ರೋಧದಿಂದ ನೋಡಿದನು. ಈ ಎರಡು ಕಾರಣಗಳಿಗಾಗಿ ಪರಬ್ರಹ್ಮನನ್ನು 7 ಶಂಖ ಬ್ರಹ್ಮಾಂಡ ಸಹಿತವಾಗಿ, ಸತ್ಯಲೋಕದಿಂದ ಹೊರಗೆ ಹಾಕಲಾಯಿತು. ಮತ್ತೊಂದು ಅಪರಾಧವೆಂದರೆ, ಪರಬ್ರಹ್ಮನು ತನ್ನ ಜೊತೆಗಾರ ಕಾಲ ಬ್ರಹ್ಮನನ್ನು ಬಿಟ್ಟಿರುವ ವಿಯೋಗದಲ್ಲಿ ಕವಿರ್ದೇವ (ಕಬೀರ್ ಪರಮೇಶ್ವರ) ನ ಸ್ಮರಣೆಯನ್ನೇ ಮಾಡಲಿಲ್ಲ. "ಕಾಲ ಬ್ರಹ್ಮನು ನನಗಿಂತ ಹೆಚ್ಚಿನ ಆನಂದದಲ್ಲಿರಬಹುದು ನಾನು ಹಿಂದೆ ಬಿದ್ದೆನಲ್ಲ" ಎಂದು ಚಿಂತಿಸ ತೊಡಗಿದ. ಬೇರೆ ಉಳಿದ ಕೆಲವು ಆತ್ಮಗಳು ಪರಬ್ರಹ್ಮನ್ನೊಂದಿಗೆ 7 ಶಂಖ ಬ್ರಹ್ಮಾಂಡಗಳಲ್ಲಿ ಹುಟ್ಟು-ಸಾವಿನ ಕರ್ಮದಂಡವನ್ನು ಅನುಭವಿಸುತ್ತಾ ಇವೆ. ಅವುಗಳು ತಮ್ಮಿಂದ ದೂರವಾದ ಕಾಲ ಬ್ರಹ್ಮನೊಂದಿಗೆ 21 ಬ್ರಹ್ಮಾಂಡಗಳಲ್ಲಿ ಸಿಲುಕಿಕೊಂಡಿರುವ ಆ ಹಂಸಾತ್ಮಗಳ ನೆನಪಿನಲ್ಲಿ ಲೀನವಾದವು ಹಾಗು ಸುಖ ನೀಡುವ ಕವಿರ್ದೇವರನ್ನು ಮರೆತವು. ಪರಮೇಶ್ವರ ಕಬೀರರ ಮೂಲಕ ಪದೇ-ಪದೇ ತಿಳಿಸಿ ಹೇಳಿದರೂ, ಆಸಕ್ತಿಯು ಕಡಿಮೆಯಾಗಲಿಲ್ಲ. ಪರಬ್ರಹ್ಮನು ತಾನು ಬೇರೆ ಸ್ಥಳವನ್ನು ಪಡೆಯಬೇಕು ಎಂದು ಯೋಚಿಸಿ, ರಾಜ್ಯ ಪ್ರಾಪ್ತಿಯ ಇಚ್ಛೆಯಿಂದ ಸಾರನಾಮವನ್ನು ಜಪಿಸತೊಡಗಿದ. ಅದೇ ರೀತಿ ಪರಬ್ರಹ್ಮನೊಂದಿಗಿದ್ದ 7 ಶಂಖ ಬ್ರಹ್ಮಾಂಡಗಳಲ್ಲಿ ಸಿಲುಕಿಕೊಂಡಿರುವ ಆತ್ಮಗಳು ಯೋಚಿಸಿದವು, ಯಾವ ಹಂಸಾತ್ಮಗಳು ಕಾಲ ಬ್ರಹ್ಮ ನೊಂದಿಗೆ 21 ಬ್ರಹ್ಮಾಂಡಗಳಲ್ಲಿ ಹೋಗಿವೆ ಅವು ಅಲ್ಲಿ ಆನಂದದಿಂದ ಇರಬಹುದು, ನಾವು ಹಿಂದೆ ಉಳಿದೆವು. ಪರಬ್ರಹ್ಮನು, ಕಾಲ ಬ್ರಹ್ಮ ಬೇರೆ ಯಾಗಿ ಸುಖ-ಸುವಿಧತೆ, ವಿನೋದ, ಆನಂದದಿಂದ ಇರಬಹುದು ಈ ರೀತಿ ಇವುಗಳ ಬಗ್ಗೆಯೇ ಚಿಂತಿಸುತ್ತಾ ಇದ್ದ. ತಾನು ಬೇರೆಯಾದರೆ ಮಾತ್ರ ಸುಖವಾಗಿರಬಹುದೆಂದು ಯೋಚಿಸಿದ. ಈ ಯೋಚನೆ ಬಲವಾಗಿ ಅಂತರಾತ್ಮದಲ್ಲಿ ಬೇರೆಯಾಗಲೇಬೇಕೆಂದು ನಿರ್ಣಯಿಸಿದ. ಪರಬ್ರಹ್ಮನು ತನ್ನ ಯೋಚನೆಯ ಸಿದ್ಧಿಗಾಗಿ ಹಠ ಯೋಗ ಮಾಡಲಿಲ್ಲ. ಸಹಜ ಧ್ಯಾನದಿಂದ ಪ್ರತ್ಯೇಕ ರಾಜ್ಯಕ್ಕಾಗಿ ವಿಶೇಷವಾಗಿ ಆಸಕ್ತಿಯಿಂದ ಪ್ರಾರ್ಥಿಸಿದ. ಪ್ರತ್ಯೇಕ ರಾಜ್ಯಕ್ಕಾಗಿ ಹುಚ್ಚನಂತೆ ಅಲೆಯತೊಡಗಿದ. ಅನ್ನ-ಪಾನೀಯಗಳನ್ನು ತ್ಯಜಿಸಿದ.

ಬೇರೆ ಕೆಲವು ಆತ್ಮಗಳು ಮೊದಲು ಬ್ರಹ್ಮನೊಂದಿಗೆ ಹೋದ ಆತ್ಮಗಳ ವಿಯೋಗದಲ್ಲಿದ್ದವು ನಂತರ ಪರಬ್ರಹ್ಮನ ವೈರಾಗ್ಯವನ್ನು ಮೆಚ್ಚಿಕೊಂಡು ಇವನಲ್ಲಿ ಆಸಕ್ತಿ ತೋರಿದವು. ಪೂರ್ಣ ಪ್ರಭುವು ಕೇಳಿದಾಗ, ತನಗಾಗಿ ಪ್ರತ್ಯೇಕ ಸ್ಥಾನವನ್ನು ಕೇಳಿದ. ಜೊತೆಗೆ ಕೆಲವು ಹಂಸಾತ್ಮಗಳನ್ನು ಕಳುಹಿಸಬೇಕೆಂದು ಕೇಳಿದ. ಆಗ ಪ್ರಭುವು ಸ್ವಇಚ್ಛೆಯಿಂದ ಪರಬ್ರಹ್ಮನೊಂದಿಗೆ ಹೋಗಬಯಸುವ ಹಂಸಾತ್ಮಗಳು ತಮ್ಮ ಸಮ್ಮತಿ ಸೂಚಿಸಲು ಕೈ ಎತ್ತಿ ಎಂದು ಹೇಳಿದರು. ಬಹಳ ಸಮಯದ ನಂತರ ಒಂದು ಹಂಸಾತ್ಮ ತನ ಸಮ್ಮತಿ ಸೂಚಿಸಿತು. ನಂತರ ಒಬ್ಬರಿಗೊಬ್ಬರು ನೋಡಿ ಆ ಎಲ್ಲಾ ಆತ್ಮಗಳು ಸಮ್ಮತಿ ಸೂಚಿಸಿದವು. ಮೊದಲು ಸಮ್ಮತಿ ಸೂಚಿಸಿದ ಹಂಸಾತ್ಮಕ್ಕೆ ಸ್ತ್ರೀ ರೂಪವನ್ನು ನೀಡಲಾಯ್ತು. ಅವಳ ಹೆಸರನ್ನು "ಈಶ್ವರೀ ಮಾಯಾ" ಎಂದು ಇಡಲಾಯ್ತು. ನಂತರ ಉಳಿದ ಸಮ್ಮತಿ ಸೂಚಿಸಿದ ಹಂಸಾತ್ಮಗಳನ್ನು ಅವಳ ಒಳಗೆ ಪ್ರವೇಶ ಮಾಡಿಸಿ ಹಾಗೂ ಅಚಿಂತನ ಮೂಲಕ ಪರಬ್ರಹ್ಮನ ಬಳಿ ಕಳುಹಿಸಲಾಯ್ತು. ಆ ಮೊದಲ ಸ್ತ್ರೀ ಆತ್ಮಕ್ಕೆ ಪತಿವ್ರತಾ

ಪದವಿಯಿಂದ ಇಳಿದ ಶಿಕ್ಷೆ ಸಿಕ್ಕಿತು. ಅನೇಕ ಯುಗಗಳ ವರೆಗೆ ಇಬ್ಬರೂ (ಈಶ್ವರೀ ಮಾಯಾ–ಪರಬ್ರಹ್ಮ) 7 ಶಂಖ ಬ್ರಹ್ಮಾಂಡದಲ್ಲಿದ್ದರು. ಆದರೂ ಪರಬ್ರಹ್ಮ ದುರ್ವ್ಯವಹಾರ ಮಾಡಲಿಲ್ಲ. ಈಶ್ವರೀ ಮಾಯೆಯ ಸ್ವಇಚ್ಛೆಯಿಂದ ಅವಳಿಗೆ ತನ್ನ ಸಿದ್ಧಿ ಶಕ್ತಿಯಿಂದ ಸ್ತ್ರೀ ಯೋನಿಯನ್ನು ಉಗುರಿನಿಂದ ಮಾಡಿದ. ಅವಳ ಸ್ವಇಚ್ಛೆಯಿಂದ ಸಂತಾನ ಉತ್ಪತ್ತಿ ಮಾಡಿದ. ಈ ಕಾರಣದಿಂದ ಪರಬ್ರಹ್ಮನ ಲೋಕದಲ್ಲಿ ಜೀವಿಗಳಿಗೆ ತಪ್ತ ಶಿಲೆಯ ಮೇಲೆ ಬೇಯುವ ಕಷ್ಟವಿಲ್ಲ. ಅಲ್ಲಿನ ಪಶು–ಪಕ್ಷಿಗಳು ಸಹ ಬ್ರಹ್ಮಲೋಕದ ದೇವತೆಗಳಿಗಿಂತ ಉತ್ತಮ ಚಾರಿತ್ರ್ಯದವು. ದೀರ್ಘ ಆಯಸ್ಸು ಇದೆ. ಆದರೆ ಹುಟ್ಟು–ಸಾವು ಕರ್ಮದಂಡ ಇಲ್ಲಿದ್ದ ಹಾಗೆ ಇವೆ. ಪರಿಶ್ರಮದಿಂದಲೇ ಹೊಟ್ಟೆ ತುಂಬಿಸಿಕೊಳ್ಳಬೇಕು. ಸ್ವರ್ಗ ಮತ್ತು ನರಕಗಳು ಸಹ ಹೀಗೆಯೇ ರಚನೆಯಾಗಿವೆ. ಪರಬ್ರಹ್ಮನಿಗೆ 7 ಶಂಖಗಳ ಬ್ರಹ್ಮಾಂಡಗಳು ಅವನ ಇಚ್ಛೆ ರೂಪಿ ಭಕ್ತಿ–ಧ್ಯಾನ ಅಂದರೆ ಸಹಜ ಸಮಾಧಿ ಯೋಗದ ವಿಧಿಯಿಂದ ಗಳಿಸಿದ ಪ್ರತಿಫಲವಾಗಿ ನೀಡಲಾಯಿತು. ಸತ್ಯಲೋಕದಿಂದ ಬೇರೆಯಾದ ಸ್ಥಾನದಲ್ಲಿ 7 ಶಂಖ ಬ್ರಹ್ಮಾಂಡಗಳನ್ನು ಸುತ್ತ ಗೋಲಾಕಾರದ ಪರದೆಯಿಂದ ಬಂದಿಸಿ ಪರಬ್ರಹ್ಮ, ಈಶ್ವರೀ ಹಾಗು 7 ಶಂಖ ಬ್ರಹ್ಮಾಂಡಗಳನ್ನು ಸತ್ಯಲೋಕದಿಂದ ಹೊರಹಾಕಲಾಯಿತು.

ಪೂರ್ಣ ಬ್ರಹ್ಮ (ಸತ್ಯಪುರುಷ) ನು ಅಶಂಖ್ಯ ಬ್ರಹ್ಮಾಂಡಗಳು ಯಾವವು ಸತ್ಯಲೋಕ ಇತ್ಯಾದಿಗಳಲ್ಲಿವೆ ಹಾಗು ಬ್ರಹ್ಮನ 21 ಬ್ರಹ್ಮಾಂಡಗಳು ಹಾಗು ಪರಬ್ರಹ್ಮನ 7ಶಂಖ ಬ್ರಹ್ಮಾಂಡಗಳದ್ದೂ ಸ್ವಾಮಿಯಾಗಿರುವನು ಅರ್ಥಾತ್ ಕವಿರ್ದೇವ ಕುಲದ ಮಾಲೀಕನು.

ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಶ್ರೀ ಶಿವ ಮುಂತಾದವರಿಗೆ 4–4 ಭುಜಗಳು ಮತ್ತು 16 ಕಲೆಗಳಿವೆ. ದುರ್ಗಾ ದೇವಿಗೆ 8 ಭುಜಗಳು ಮತ್ತು 64 ಕಲೆಗಳಿವೆ. 21 ಬ್ರಹ್ಮಾಂಡದ ಸ್ವಾಮೀ ಕಾಲ ಬ್ರಹ್ಮನಿಗೆ 1000 ಭುಜಗಳು ಮತ್ತು 1000 ಕಲೆಗಳು. 7 ಶಂಖ ಬ್ರಹ್ಮಾಂಡಗಳ ಸ್ವಾಮಿ ಪರಬ್ರಹ್ಮನಿಗೆ 10,000 ಭುಜಗಳು ಮತ್ತು 10,000 ಕಲೆಗಳಿವೆ ಹಾಗು ಪೂರ್ಣ ಬ್ರಹ್ಮ ಅರ್ಥಾತ್ ಸತ್ಯಪುರುಷನಿಗೆ ಅಶಂಖ್ಯ ಭುಜಗಳು ಮತ್ತು ಅಶಂಖ್ಯ ಕಲೆಗಳಿವೆ ಹಾಗೂ ಬ್ರಹ್ಮನ 21 ಬ್ರಹ್ಮಾಂಡಗಳು ಮತ್ತು ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳು ಜೊತೆಗೆ ಅಶಂಖ್ಯ ಬ್ರಹ್ಮಾಂಡಗಳ ಸ್ವಾಮಿಯಾಗಿದ್ದಾನೆ. ಪ್ರತಿಯೊಬ್ಬ ಪ್ರಭು ತಮ್ಮ ಭುಜಗಳನ್ನು ಕೇವಲ ಎರಡನ್ನಾಗಲಿ, ಅಥವಾ ತಮ್ಮ ಇಚ್ಛೆಯಿಂದ ಎಲ್ಲ ಭುಜಗಳನ್ನಾಗಲಿ ಹೊಂದಬಹುದಾಗಿದೆ. ಪೂರ್ಣ ಪರಮಾತ್ಮನು ಪರಬ್ರಹ್ಮನ ಪ್ರತ್ಯೇಕ ಬ್ರಹ್ಮಾಂಡದಲ್ಲಿ ತನ್ನದೇ ಆದ ಬೇರೆ ಸ್ಥಾನ ಮಾಡಿಕೊಂಡು, ಅಲ್ಲಿಯೇ ಗುಪ್ತವಾಗಿ ಇರುತ್ತಾನೆ. ಹೀಗೆ ತಿಳಿಯಿರಿ "ಒಂದು ಸಿ.ಸಿ ಕ್ಯಾಮರಾವನ್ನು ಹೊರಗೆ ಇರಿಸಿ, ಒಳಗೆ ಟಿ.ವಿ ಇಡಲಾಗಿದೆ. ಟಿ.ವಿ ಯಲ್ಲಿ ಹೊರಗಿನ ಎಲ್ಲ ದೃಶ್ಯಗಳು ನೋಡಲು ಲಭ್ಯವಾಗುತ್ತದೆ. ಇದೇ ರೀತಿ ಮತ್ತೊಂದು ಟಿ.ವಿ ಯನ್ನು ಹೊರಗೆ ಇರಿಸಿ, ಒಳಗೆ ಸಿ.ಸಿ ಕ್ಯಾಮರಾ ಇರಿಸಿ. ಅದರಲ್ಲಿ ಒಳಗೆ ಕುಳಿತಿರುವ ವ್ಯಕ್ತಿಯನ್ನು ಮಾತ್ರ ನೋಡಲು ಸಾಧ್ಯ. ಹೀಗೆ ಮಾಡುವುದರಿಂದ ನೌಕರರು ಎಚ್ಚರದಿಂದ ಇದ್ದು ಕಾರ್ಯ ನಿರ್ವಹಿಸುತ್ತಾರೆ. ಇದೇ ಪ್ರಕಾರ ಪೂರ್ಣ ಪರಮಾತ್ಮನು ತಾನು ಸತ್ಯ ಲೋಕದಲ್ಲಿದ್ದುಕೊಂಡೇ, ಎಲ್ಲರನ್ನೂ ನಿಯಂತ್ರಿಸುತ್ತಾನೆ. ಪ್ರತ್ಯೇಕ ಬ್ರಹ್ಮಾಂಡದಲ್ಲೂ ಸದ್ಗುರು ಕವಿರ್ದೇವರು ಇರುತ್ತಾರೆ. ಉದಾಹರಣೆಗೆ ಸೂರ್ಯ ದೂರದಲ್ಲಿದ್ದರೂ ತನ್ನ ಪ್ರಭಾವ ಬೇರೆ ಎಲ್ಲ ಲೋಕಗಳಲ್ಲೂ ಕ್ರಿಯಾಶೀಲನಾಗಿರುವಂತೆ.

## "ಪವಿತ್ರ ಅಥರ್ವಣ ವೇದದಲ್ಲಿ ಸೃಷ್ಟಿ ರಚನೆಯ ಪ್ರಮಾಣ(ಆಧಾರ)"

**ಅಥರ್ವಣ ವೇದದ 4ನೇ ಕಾಂಡದ 1ನೇ ಅನುವಾಕದ 1ನೇ ಮಂತ್ರ:–**

ಬ್ರಹ್ಮ ಜಜ್ಞಾನಂ ಪ್ರಥಮಂ ಪುರಸ್ತಾದ್ ವಿ ಸೀಮತಃ ಸುರುಚೋ ವೇನ ಆವಃ ।
ಸ ಬುಧ್ನ್ಯಾ ಉಪಮಾ ಅಸ್ಯ ವಿಷ್ಠಾಃ ಸತಶ್ಚ ಯೋನಿಮಸತಶ್ಚ ವಿ ವಃ ॥ 1 ॥

ಬ್ರಹ್ಮ–ಜ–ಜ್ಞಾನಂ–ಪ್ರಥಮಮ್–ಪುರಸ್ತಾತ–ವಿಸಿಮತಃ– ಸುರುಚಃ–ವೇನಃ–ಆವಃ
ಸಃ–ಬುಧ್ನ್ಯಾಃ–ಉಪಮಾ–ಅಸ್ಯ–ವಿಷ್ಠಾ–ಸತಃ–ಚ–ಯೋನಿಮ್–ಅಸತಃ–ಚ–ವಿ–ವಃ

ಅನುವಾದ:- (ಪ್ರಥಮಮ್) ಪ್ರಾಚೀನ ಅಂದೆರೆ ಸನಾತನ, (ಬ್ರಹ್ಮ) ಪರಮಾತ್ಮನು (ಜ) ಪ್ರಕಟನಾಗಿ, (ಜ್ಞಾನಮ್) ತಮ್ಮ ತಿಳುವಳಿಕೆಯಿಂದ (ಪುರುಸ್ತಾತ್) ಶಿಖರದಲ್ಲಿ, ಅರ್ಥಾತ್ ಸತ್ಯಲೋಕ ಮುಂತಾದವುಗಳನ್ನು (ಸುರುಚಃ) ಸ್ವಇಚ್ಛೆಯಿಂದ, ಬಹಳ ಪ್ರೀತಿಯಿಂದ , ಸ್ವಪ್ರಕಾಶಿತ, (ವಿಸಿ ಮತಃ) ಸೀಮಾ ರಹಿತ, ಅರ್ಥಾತ್ ವಿಶಾಲ ಸೀಮೆಯುಳ್ಳ ಬೇರೆ ಲೋಕಗಳನ್ನು ಆ (ವೇವಃ) ನೇಕಾರನು ಅರ್ಥಾತ್ ಬಟ್ಟೆಯ ತರಹ ನೇಯ್ದು (ಆವಃ) ಸುರಕ್ಷಣೆ ಮಾಡಿದ (ಚ) ಹಾಗೂ (ಸಃ) ಆ ಪೂರ್ಣ ಬ್ರಹ್ಮನೇ ಎಲ್ಲರ ರಚನೆಯನ್ನು ಮಾಡುತ್ತಾನೆ. (ಅಸ್ಯ) ಇದಕ್ಕಾಗಿ ಆ (ಬುಧ್ನ್ಯಾಃ) ಮೂಲ ಮಾಲೀಕನು, (ಯೋನಿಮ್) ಮೂಲಸ್ಥಾನ ಸತ್ಯಲೋಕದ ರಚನೆ ಮಾಡಿರುವನು. (ಅಸ್ಯ) ಇದಕ್ಕೆ (ಉಪಮಾ) ಸದೃಶ್ಯ ಅರ್ಥಾತ್ ಹೋಲುವಂತೆ (ಸತಃ) ಅಕ್ಷರ ಪುರುಷ ಅರ್ಥಾತ್ ಪರಬ್ರಹ್ಮನ ಲೋಕ ಸ್ವಲ್ಪಮಟ್ಟಿಗೆ ಶಾಶ್ವತ (ಚ) ಹಾಗೂ (ಅಸತಃ) ಕ್ಷರ ಪುರುಷನ ನಾಶವಾಗುವ ಲೋಕ ಮೊದಲಾದ (ವಿ.ವಃ) ವಾಸಿಸುವ ಸ್ಥಾನ ಬೇರೆಯಾಗಿ (ವಿಷ್ಠಾಃ) ಸ್ಥಾಪನೆಮಾಡಿದ್ದಾನೆ.

**ಭಾವಾರ್ಥ:- ಪವಿತ್ರ ವೇದಗಳನ್ನು ಹೇಳಿರುವ ಕಾಲ (ಬ್ರಹ್ಮ)ನು ಹೇಳುತ್ತಿದ್ದಾನೆ, ಅಂದರೆ ಸನಾತನ ಪರಮೇಶ್ವರನು ಸ್ವತಃ ಅನಾಮಯ್ (ಅನಾಮಿ) ಲೋಕದಿಂದ ಸತ್ಯಲೋಕದಲ್ಲಿ ಪ್ರಕಟಗೊಂಡು ತನ್ನ ತಿಳುವಳಿಕೆಯಿಂದ ಬಟ್ಟೆಯಂತೆ ರಚನೆ ಮಾಡಿ ಮೇಲಿನ ಸತ್ಯಲೋಕ ಮುಂತಾದವುಗಳನ್ನು ಸೀಮಾರಹಿತವಾಗಿ ಸ್ವಪ್ರಕಾಶಿತಗೊಳಿಸಿ ಅವುಗಳನ್ನು ಅಜರ-ಅಮರ-ಅವಿನಾಶಿ ಯನ್ನಾಗಿ ಮಾಡಿದರು ಹಾಗೂ ಕೆಳಗಿನ ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳು ಹಾಗೂ ಕಾಲ ಬ್ರಹ್ಮನ 21 ಬ್ರಹ್ಮಾಂಡಗಳು ಹಾಗೂ ಇವುಗಳಲ್ಲಿಯ ಎಲ್ಲಾ ರಚನೆಗಳನ್ನು ಸಹ ಆ ಪರಮಾತ್ಮನೇ ಅಶಾಶ್ವತ ಗೊಳಿಸಿದ."**

**ಅಥರ್ವಣ ವೇದದ 4ನೇ ಕಾಂಡದ 1ನೇ ಅನುವಾಕದ 2ನೇಯ ಮಂತ್ರ:-**

ಇಯಂ ಪಿತ್ರ್ಯಾ ರಾಷ್ಟ್ರ್ಯೇತ್ವಗ್ರೇ ಪ್ರಥಮಾಯ ಜನುಷೆ ಭುವನೇಷ್ಠಾಃ ।
ತಸ್ಮಾ ಏತಂ ಸುರುಚಂ ಹಾರಮಹ್ಯಮ್ ಧರ್ಮಮ್ ಶ್ರೀಣಂತು ಪ್ರಥಮಾಯ ಧಾಸ್ಯವೇ ॥2॥
ಇಯಂ-ಪಿತ್ರ್ಯಾ-ರಾಷ್ಟ್ರೀ-ಏತು-ಅಗ್ರೇ-ಪ್ರಥಮಾಯ-ಜನುಷೆ-ಭುವನೇಷ್ಠಾ।
ತಸ್ಮಾ-ಏತಂ-ಸುರುಚಮ್-ಹವಾರಮಹ್ಯಮ್-ಧರ್ಮಮ್-ಶ್ರೀಣಾಂತು-ಪ್ರಥಮಾಯ ಧಾಸ್ಯವೇ॥

ಅನುವಾದ:- (ಇಯಮ್) ಇದೇ (ಪಿತ್ರ್ಯಾ) ಜಗತ್ತಿನ ತಂದೆ ಪರಮೇಶ್ವರನು (ಏತು) ಈ (ಅಗ್ರೇ) ಸರ್ವೋತ್ತಮ (ಪ್ರಥಮಾಯ) ಎಲ್ಲದಕ್ಕೂ ಮೊದಲು (ರಾಷ್ಟ್ರೀ) ರಾಜೇಶ್ವರೀ ಶಕ್ತಿ ಅಂದರೆ ಪರಾಶಕ್ತಿ ಅದರ ಗುಣವನ್ನು ಆಕರ್ಷಣ ಶಕ್ತಿ ಎಂದೂ ಹೇಳುತ್ತಾರೆ ಅದನ್ನು (ಜನುಷೆ) ಉತ್ಪನ್ನ ಮಾಡಿ (ಭುವನೇಷ್ಠಾಃ) ಲೋಕ ಸ್ಥಾಪನೆಯನ್ನು ಮಾಡಿದನು (ತಸ್ಮಾ) ಅದೇ ಪರಮೇಶ್ವರನು (ಸುರುಚಮ್) ಬಹಳ ಪ್ರೀತಿಯಿಂದ, ಸ್ವ ಇಚ್ಛೆಯಿಂದ (ಏತಮ್) ಈ (ಪ್ರಥಮಾಯ) ಪ್ರಥಮ ಶಕ್ತಿಯ ಉತ್ಪತ್ತಿಯ ಶಕ್ತಿ ಅರ್ಥಾತ್ ಪರಾಶಕ್ತಿಯ ಮೂಲಕ (ಹಾರ ಮಹ್ಯಮ್) ಒಬ್ಬರ ಇನ್ನೊಬ್ಬರ ವಿಯೋಗ ವನ್ನು ತಡೆಯಲು, ಅರ್ಥಾತ್ ಆಕರ್ಷಣ ಶಕ್ತಿಯ (ಶ್ರೀಣಾಂತು) ಗುರುತ್ವಾಕರ್ಷಣಕ್ಕೆ ಪರಮಾತ್ಮನು ಆದೇಶಿಸಿ ಎಂದಿಗೂ ಸಮಾಪ್ತವಾಗದಂತೆ-ಎಂದೆಂದಿಗೂ ಇರುವಂತಹ (ಧರ್ಮಮ್) ಸ್ವಭಾವದಿಂದ (ಧಾಸ್ಯವೆ) ಧಾರಣೆ ಮಾಡಿದ. ಅರ್ಥಾತ್ ಬಟ್ಟೆಯ ಹಾಗೆ ಹೆಣೆದು ನಿಲ್ಲಿಸಿದ್ದಾನೆ.

**ಭಾವಾರ್ಥ:- ಜಗತ್ತಿನ ತಂದೆಯಾದ ಪರಮೇಶ್ವರನು ಎಲ್ಲಕ್ಕೂ ಮೊದಲು ತನ್ನ ಶಬ್ದ ಶಕ್ತಿಯಿಂದ ರಾಷ್ಟ್ರೀ ಎಂದರೆ ಮೊಟ್ಟ ಮೊದಲ ಮಾಯೆ ರಾಜೇಶ್ವರೀ ಉತ್ಪನ್ನ ಮಾಡಿದ ಹಾಗು ಅದೇ ಪರಾಶಕ್ತಿಯ ಮೂಲಕ ಒಬ್ಬರು ಇನ್ನೊಬ್ಬರಿಗೆ ಆಕರ್ಷಣ ಶಕ್ತಿಯಿಂದ ತಡೆಯುವ, ಎಂದೆಂದಿಗೂ ಸಮಾಪ್ತವಾಗದ ಗುಣದಿಂದ ಮೇಲಿನ ಎಲ್ಲ ಬ್ರಹ್ಮಾಂಡಗಳನ್ನೂ ಸ್ಥಾಪನೆ ಮಾಡಿದನು.**

**ಅಥರ್ವಣ ವೇದದ 4ನೇ ಕಾಂಡದ 1ನೇ ಅನುವಾಕದ 3ನೇ ಮಂತ್ರ:–**

ಪ್ರ ಯೋ ಯಜ್ಞೆ ವಿದ್ವಾನಸ್ಯ ಬಂಧುರ್ವಿಶ್ವಾ ದೇವಾನಾಂ ಜನಿಮಾ ವಿವಕ್ತಿ ।
ಬ್ರಹ್ಮ ಬ್ರಹ್ಮಣ ಉಜ್ಜಭಾರ ಮಧ್ಯಾನ್ನೀಚೈರುಚ್ಚೈಃ ಸ್ವಧಾ ಅಭಿ ಪ್ರ ತಸ್ಥೌ" ॥ 3 ॥
ಪ್ರ–ಯಃ– ಯಜ್ಞೆ– ವಿದ್ವಾನಸ್ಯ– ಬಂಧುಃ–ವಿಶ್ವಾ–ದೇವಾನಾಮ್–ಜನಿಮಾ–ವಿವಕ್ತಿ
ಬ್ರಹ್ಮಃ– ಬ್ರಹ್ಮಣಃ–ಉಜ್ಜಭಾರ–ಮಧ್ಯಾತ್–ನಿಚೈಃ–ಉಚೈಃ– ಸ್ವಧಾ–ಅಭಿಃ–ಪತಸ್ಥೌ

ಅನುವಾದ :– (ಪ್ರ) ಸರ್ವ ಪ್ರಥಮ (ದೇವಾನಾಮ್) ದೇವತೆಗಳ ಹಾಗೂ ಬ್ರಹ್ಮಾಂಡಗಳ (ಜಜ್ಞೆ) ಉತ್ಪತ್ತಿಯ ಜ್ಞಾನವನ್ನು (ವಿದ್ವಾನಸ್ಯ) ಜಿಜ್ಞಾಸು ಭಕ್ತನ (ಯಃ) ಅವನು (ಬಂಧುಃ) ವಾಸ್ತವಿಕ ಜೊತೆಗಾರ ಅಂದರೆ ಪೂರ್ಣ ಪರಮಾತ್ಮನೇ ತನ್ನ ನಿಜ ಸೇವಕನಿಗೆ (ಜನಿಮಾ) ತನ್ನಿಂದ ಸೃಷ್ಟಿಯಾದದ್ದನ್ನು (ವಿವಕ್ತಿ) ಸ್ವತಃ ಅವನೇ ಸರಿಯಾಗಿ ವಿಸ್ತಾರಪೂರ್ವಕವಾಗಿ ಹೇಳುತ್ತಾನೆ ಏನೆಂದರೆ (ಬ್ರಹ್ಮಣ) ಪೂರ್ಣ ಪರಮಾತ್ಮನು (ಮಧ್ಯಾತ್) ತನ್ನ ಶಬ್ದ ಶಕ್ತಿಯಿಂದ (ಬ್ರಹ್ಮಃ) ಕಾಲ ಬ್ರಹ್ಮನನ್ನು (ಉಜ್ಜಭಾರ) ಉತ್ಪನ್ನ ಮಾಡಿ (ವಿಶ್ವ) ಸಮಸ್ತ ಜಗತ್ತಿಗೆ ಅಂದರೆ ಎಲ್ಲಾ ಲೋಕಗಳನ್ನು(ಉಚ್ಚೈಃ) ಮೇಲಿನ ಸತ್ಯಲೋಕ ಮೊದಲಾದ (ನಿಚೈಃ) ಕೆಳಗಿನ ಪರಬ್ರಹ್ಮನ ಹಾಗೂ ಕಾಲ ಬ್ರಹ್ಮನ ಸಕಲ ಬ್ರಹ್ಮಾಂಡವನ್ನು (ಸ್ವಧಾ) ತಾನು ಧಾರಣೆ ಮಾಡುವ (ಅಭಿಃ) ಆಕರ್ಷಣ ಶಕ್ತಿಯಿಂದ (ಪ್ರ ತಸ್ಥೌ) ಎರಡನ್ನೂ ಉತ್ತಮ ರೀತಿಯಲ್ಲಿ ರಚಿಸಿದರು.

**ಭಾವಾರ್ಥ:– ಪೂರ್ಣ ಪರಮಾತ್ಮನು ತನ್ನಿಂದ ರಚಿತ ಸೃಷ್ಟಿಯ ಜ್ಞಾನವನ್ನು ಹಾಗೂ ಸಕಲ ಆತ್ಮಗಳ ಉತ್ಪತ್ತಿಯ ಜ್ಞಾನವನ್ನು, ತನ್ನ ವೈಯಕ್ತಿಕ ದಾಸನಿಗೆ ಸ್ವತಃ ಸರಿಯಾಗಿ ತಿಳಿಸುತ್ತಾನೆ. ಏನೆಂದರೆ ಪೂರ್ಣ ಪರಮಾತ್ಮನು ತನ್ನ ಮಧ್ಯ ಅಂದರೆ ತನ್ನ ಶರೀರದಿಂದ ಶಬ್ದ ಶಕ್ತಿಯ ಮೂಲಕ ಕಾಲ ಬ್ರಹ್ಮನನ್ನು ಉತ್ಪತ್ತಿ ಮಾಡಿದನು. ಹಾಗೂ ಎಲ್ಲ ಬ್ರಹ್ಮಾಂಡಗಳನ್ನು, ಮೇಲಿನ ಸತ್ಯಲೋಕ, ಅಲಖಲೋಕ, ಅಗಮ್‌ಲೋಕ, ಅನಾಮಿಲೋಕ ಮುಂತಾದವುಗಳನ್ನು ಹಾಗೂ ಕೆಳಗಿನ ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳ ಲೋಕ ಹಾಗೂ ಕಾಲ ಬ್ರಹ್ಮನ 21 ಬ್ರಹ್ಮಾಂಡಗಳನ್ನು ತಾನು ಧಾರಣೆ ಮಾಡುವ ಆಕರ್ಷಣೆ ಶಕ್ತಿಯಿಂದ ನಿಲ್ಲಿಸಿದ್ದಾನೆ.**

**ಹೇಗೆ ಪೂರ್ಣ ಪರಮಾತ್ಮ ಕಬೀರ್ ಪರಮೇಶ್ವರರು (ಕವಿರ್ದೇವ) ತಮ್ಮ ವೈಯಕ್ತಿಕ ಸೇವಕ ಅಂದರೆ ಸಖನಾದ ಗೌರವಾನ್ವಿತ ಧರ್ಮದಾಸರಿಗೆ, ಗರೀಬ್‌ದಾಸರಿಗೆ ಮುಂತಾದವರಿಗೆ ತನ್ನಿಂದ ರಚಿತ ಸೃಷ್ಟಿಯ ಜ್ಞಾನವನ್ನು ಸ್ವತಃ ಅವರೇ ತಿಳಿಸಿದ್ದಾರೆ. ಮೇಲಿನ ವೇದ ಮಂತ್ರವು ಸಹ ಇದನ್ನೇ ಸಮರ್ಥಿಸುತ್ತಿದೆ.**

**ಅಥರ್ವಣ ವೇದದ 4ನೇ ಕಾಂಡದ ಅನುವಾಕ 1 ರ 4ನೇ ಮಂತ್ರ :–**

ಸಃ ಹಿ ದಿವಃ ಸಃ ಪೃಥಿವ್ಯಾ ಋತಸ್ಥಾ ಮಹೀ ಕ್ಷೇಮಮ್ ರೋದಸೀ ಅಸ್ಕಭಾಯತ್
ಮಹಾನ್ ಮಹೀ ಅಸ್ಕಭಾಯದ್ ವಿ ಜಾತೋ ಧ್ಯಾಂ ಸದ್ಮ ಪಾರ್ಥಿವಂ ಚ ರಜಃ ॥ 4 ॥
ಸಃ–ಹಿ–ದಿವಃ–ಸ–ಪೃಥಿವ್ಯಾ–ಋತುಸ್ಥಾ–ಮಹೀ–ಕ್ಷೇಮಮ್–ರೋದಸಿ ಅಸ್ಕಭಾಯತ್–
ಮಹಾನ್–ಮಹೀ–ಅಸ್ಕಭಾಯದ್– ವಿಜಾತಃ–ಧಾಮ್–ಸದಮ ಪಾರ್ಥಿವಮ್–ಚ–ರಜಃ

ಅನುವಾದ:– (ಸಃ) ಆ ಸರ್ವಶಕ್ತಿವಂತ ಪರಮಾತ್ಮನು (ಹಿ) ನಿಸ್ಸಂದೇಹ (ದಿವಃ) ಮೇಲಿನ ನಾಲ್ಕು ದಿವ್ಯ ಲೋಕಗಳು ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ ಹಾಗೂ ಅನಾಮಿಲೋಕವನ್ನು ಅಂದರೆ ದಿವ್ಯ ಗುಣಗಳುಯುಕ್ತ ಲೋಕಗಳನ್ನು (ಋತಸ್ಥಾ) ಸತ್ಯ ಸ್ಥಿರ ಅಂದರೆ ಅಜರ–ಅಮರ ರೂಪದಿಂದ ಸ್ಥಿರಗೊಳಿಸಿದನು. (ಸ) ಅವುಗಳಿಗೆ ಸಮನಾಗಿ (ಪೃಥಿವ್ಯಾ) ಕೆಳಗಿನ ಪೃಥ್ವಿಯ ಸಕಲ ಲೋಕಗಳನ್ನು ಅಂದರೆ 7 ಶಂಖ ಬ್ರಹ್ಮಾಂಡಗಳು ಹಾಗೂ ಕಾಲ ಬ್ರಹ್ಮನ 21 ಬ್ರಹ್ಮಾಂಡಗಳು (ಮಹೀ) ಪೃಥ್ವಿ ತತ್ವದಿಂದ (ಕ್ಷೇಮ) ಸುರಕ್ಷೆಯ ಜೊತೆ (ಆಸ್ಕಭಾಯತ್) ನಿಲ್ಲಿಸಿದರು (ರೋದಸೀ) ಆಕಾಶ ತತ್ವ ಹಾಗೂ ಪೃಥ್ವಿ ತತ್ವ ಈ ಎರಡಕ್ಕೂ

ಮೇಲೆ, ಕೆಳಗಿನ ಬ್ರಹ್ಮಾಂಡಗಳನ್ನು {ಹೇಗೆಂದರೆ ಆಕಾಶ ಒಂದು ಸೂಕ್ಷ್ಮತತ್ವವಾಗಿದೆ, ಆಕಾಶದ ಗುಣಶಬ್ದವಾಗಿದೆ. ಪೂರ್ಣ ಪರಮಾತ್ಮನು ಮೇಲಿನ ಲೋಕಗಳನ್ನು ಶಬ್ದ ರೂಪದಲ್ಲಿ ರಚಿಸಿದ್ದಾನೆ ಅವು ತೇಜಪುಂಜ ದಿಂದ ಮಾಡಲಾಗಿದೆ ಹಾಗೂ ಕೆಳಗಿನ ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳು ಹಾಗೂ ಕಾಲ ಬ್ರಹ್ಮನ 21 ಬ್ರಹ್ಮಾಂಡಗಳನ್ನು ಪೃಥ್ವೀ ತತ್ವದಿಂದ ಅಸ್ಥಾಯಿ ಇರುವಂತೆ ರಚಿಸಿದನು} (ಮಹಾನ್) ಪೂರ್ಣ ಪರಮಾತ್ಮನು (ಪಾರ್ಥಿವಮ್) ಪೃಥ್ವಿಯ (ವಿ) ಬೇರೆ-ಬೇರೆ (ಧಾಮ) ಲೋಕ (ಚ) ಮತ್ತು (ಸದಮ್) ಆವಾಸಸ್ಥಾನ (ಮಹೀ) ಪೃಥ್ವೀ ತತ್ವದಿಂದ (ರಜಃ) ಪ್ರತ್ಯೇಕ ಬ್ರಹ್ಮಾಂಡದಲ್ಲಿ ಚಿಕ್ಕ-ಚಿಕ್ಕ ಲೋಕಗಳ (ಜಾತಃ) ರಚನೆ ಮಾಡಿ (ಅಸ್ಕಭಾಯಾತ್) ಸ್ಥಿರಗೊಳಿಸಿದನು.

**ಭಾವಾರ್ಥ:- ಮೇಲಿನ ನಾಲ್ಕು ಲೋಕಗಳನ್ನು (ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ, ಅನಾಮಿಲೋಕ) ಅಜರ-ಅಮರ ಶಾಶ್ವತ ಅಂದರೆ ಅವಿನಾಶಿ ರಚಿಸಲಾಗಿದೆ ಹಾಗೂ ಕೆಳಗಿನ ಕಾಲ ಬ್ರಹ್ಮ ಹಾಗೂ ಪರಬ್ರಹ್ಮನ ಲೋಕಗಳನ್ನು ಅಸ್ಥಾಯಿ (ಅವಿನಾಶಿಯಲ್ಲದ) ಯಾಗಿ ರಚಿಸಿ. ಬೇರೆ ಚಿಕ್ಕ-ಚಿಕ್ಕ ಲೋಕಗಳನ್ನು ಸಹ ಅದೇ ಪರಮೇಶ್ವರನೇ ರಚಿಸಿ ಸ್ಥಿರಗೊಳಿಸಿದನು.**

**ಅಥರ್ವಣ ವೇದದ 4ನೇ ಕಾಂಡದ ಅನುವಾಕ 1ರ 5ನೇ ಮಂತ್ರ :-**

ಸಃ ಬುಧ್ಯಾsರಾಷ್ಟ್ರ ಜನುಷೋಭ್ಯಗ್ರಂ ಬೃಹಸ್ಪತಿರ್ದೇವತಾ ತಸ್ಯ ಸಮ್ರಾಟ್ ।
ಅಹರ್ಯಚ್ಛುಕ್ರಂ ಜ್ಯೋತಿಷೋ ಜನಿಷ್ಠಾಥ ಧ್ಯುಮಂತೋ ವಿ ವಸಂತು ವಿಪ್ರಾಃ ॥5॥

ಸಃ-ಬುಧ್ಯಾತ್-ಅಷ್ಟ್ರ- ಜನುಷಃ- ಅಭಿ-ಅಗ್ರಮ್-ಬೃಹಸ್ಪತಿ-ದೇವತಾ-ತಸ್ಯ-ಸಮ್ರಾಟ-ಅಹಃ-ಯತ್-ಶುಕ್ರಮ್-ಜ್ಯೋತಿಷಃ-ಜನಿಷ್ಠ-ಅಥ-ಧ್ಯುಮಂತಃ-ವಿ-ವಸಂತು-ವಿಪ್ರಾಃ

ಅನುವಾದ:- (ಸಃ) ಅದೇ (ಬುಧ್ಯಾತ್) ಮೂಲ ಮಾಲೀಕನಿಂದ (ಅಭಿಅಗ್ರಮ್) ಸರ್ವ ಪ್ರಥಮ ಸ್ಥಾನದಲ್ಲಿ (ಆಷ್ಟ್ರ) ಅಷ್ಟಂಗಿ ಮಾಯಾ/ದುರ್ಗಾದೇವಿ ಅಂದರೆ ಪ್ರಕೃತಿ (ಜನುಷಃ) ಉತ್ಪನ್ನಳಾದಳು. ಏಕೆಂದರೆ ಕೆಳಗಿನ ಪರಬ್ರಹ್ಮ ಹಾಗೂ ಕಾಲ ಬ್ರಹ್ಮನ ಲೋಕಗಳ ಪ್ರಥಮ ಸ್ಥಾನ ಸತ್ಯಲೋಕವಾಗಿದೆ. ಇದನ್ನು ಮೂರನೆಯ ಧಾಮ ಎಂದು ಸಹ ಕರೆಯುತ್ತಾರೆ. (ತಸ್ಯ) ಈ ದುರ್ಗಾಳ ಮಾಲೀಕನು ಸಹ ಈ (ಸಾಮ್ರಾಟ) ರಾಜಾಧಿರಾಜ (ಬೃಹಸ್ಪತಿಃ) ಎಲ್ಲರಿಗಿಂತ ದೊಡ್ಡ ಪ್ರಭು ಹಾಗೂ ಜಗದ್ಗುರು (ದೇವತಾ) ಪರಮೇಶ್ವರನಾಗಿದ್ದಾನೆ. (ಯತ್) ಅದರಿಂದ (ಅಹಃ) ಎಲ್ಲರ ವಿಯೋಗವಾಯಿತು, (ಅಥ) ಇದರ ನಂತರ (ಜ್ಯೋತಿಷಃ) ಜ್ಯೋತಿ ರೂಪ ನಿರಂಜನ ಅರ್ಥಾತ್ ಕಾಲನ (ಶುಕ್ರಮ್) ವೀರ್ಯ ಅರ್ಥಾತ್ ಬೀಜಶಕ್ತಿಯಿಂದ (ಜನಿಷ್ಠ) ದುರ್ಗಾಳ ಉದರದಿಂದ ಉತ್ಪನ್ನರಾಗಿ (ವಿಪ್ರಾಃ) ಭಕ್ತ ಆತ್ಮಗಳು (ವಿ) ಪ್ರತ್ಯೇಕವಾದ (ಧ್ಯುಮಂತಃ) ಮನುಷ್ಯಲೋಕ ಹಾಗೂ ಸ್ವರ್ಗ ಲೋಕದಲ್ಲಿ ಜ್ಯೋತಿ ನಿರಂಜನನ ಆದೇಶದಂತೆ ನಿವಾಸ ಮಾಡಿ ಎಂದು ದುರ್ಗಾ ಹೇಳಿದಳು.

**ಭಾವಾರ್ಥ:- ಪೂರ್ಣ ಪರಮಾತ್ಮನು ಮೇಲಿನ ನಾಲ್ಕು ಲೋಕಗಳಲ್ಲಿನ ಕೆಳಗಿನಿಂದ ಎಲ್ಲಕ್ಕಿಂತ ಪ್ರಥಮ ಸತ್ಯಲೋಕದಲ್ಲಿ ಆಷ್ಟ್ರಾ ಅರ್ಥಾತ್ ಅಷ್ಟಂಗಿ (ಪ್ರಕೃತಿ/ ದುರ್ಗೆ) ಯನ್ನು ಉತ್ಪನ್ನ ಮಾಡಿದನು. ಇವನೇ ರಾಜಾಧಿರಾಜ, ಜಗದ್ಗುರು ಪೂರ್ಣ ಪರಮೇಶ್ವರ (ಸತ್ಯಪುರುಷ) ರಾಗಿದ್ದಾರೆ. ಇವರಿಂದ ಎಲ್ಲರ ವಿಯೋಗವಾಗಿದೆ. ನಂತರ ಸಕಲ ಜೀವಾತ್ಮಗಳು ಜ್ಯೋತಿನಿರಂಜನ (ಕಾಲ) ನ (ವಿರ್ಯ) ಬೀಜದಿಂದ ದುರ್ಗಾ (ಅಷ್ಟ್ರಾ) ಳ ಗರ್ಭದ ಮೂಲಕ ಉತ್ಪನ್ನರಾಗಿ, ಅವು ಸ್ವರ್ಗ ಹಾಗೂ ಭೂಲೋಕದಲ್ಲಿ ವಾಸ ಮಾಡತೊಡಗಿದವು.**

**ಅಥರ್ವಣ ವೇದದ 4ನೇ ಕಾಂಡದ 1ನೇ ಅನುವಾಕದ 6ನೇ ಮಂತ್ರ :-**

ನೂನಂ ತದಸ್ಯ ಕಾವ್ಯೋ ಹಿನೋತಿ ಮಹೋ ದೇವಸ್ಯ ಪೂರ್ವಶ್ಯ ಧಾಮ ।
ಏಷ ಜಜ್ಞೆ ಬಹುಭಿಃ ಸಾಕಮಿತ್ಥಾ ಪೂರ್ವೆ ಅರ್ಧೆ ವಿಶಿತೆ ಸಸನ್ ನು ॥ 6 ॥

ನೂನಂ–ತತ್–ಅಸ್ಯ–ಕಾವ್ಯಃ–ಮಹಃ–ದೇವಸ್ಯ–ಪೂರ್ವಸ್ಯ–ಧಾಮ್–ಹಿನೋತಿ
ಪೂರ್ವೇ–ವಿಶಿತೆ–ಏಷ–ಜಜ್ಞೆ–ಬಹುಭಿಃ–ಸಾಕಮ್–ಇಥ್ಯಾ–ಅರ್ಧೆ–ಸಸನ್–ನು.

ಅನುವಾದ:– (ನೂನಂ) ಸಂದೇಹ ರಹಿತ (ತತ್) ಆ ಪೂರ್ಣ ಪರಮೇಶ್ವರ ಅರ್ಥಾತ್ ತತ್ ಬ್ರಹ್ಮನೇ (ಅಸ್ಯ) ಈ (ಕಾವ್ಯಃ) ಭಕ್ತ ಆತ್ಮವನ್ನು ಯಾರು ಪೂರ್ಣ ಪರಮೇಶ್ವರನ ವಿಧಿವತ್ತಾಗಿ ಭಕ್ತಿಯನ್ನು ಮಾಡುತ್ತಾರೊ, ಅವರನ್ನು ಮರಳಿ (ಮಹಃ) ಸರ್ವ ಶಕ್ತಿಮಾನ್ (ದೇವಸ್ಯ) ಪರಮೇಶ್ವರನ (ಪೂರ್ವಸ್ಯ) ಮೊದಲಿನ (ಧಾಮ) ಲೋಕಕ್ಕೆ ಅರ್ಥಾತ್ ಸತ್ಯ ಲೋಕಕ್ಕೆ (ಹಿನೋತಿ) ಕಳುಹಿಸಲಾಗುತ್ತದೆ. (ಪೂರ್ವ) ಮೊದಲಿನ (ವಿಷಿತೆ) ವಿಶೇಷ ಆತುರತೆ ಪಡೆಯುವ (ಏಷ) ಈ ಪರಮೇಶ್ವರನಿಗೆ ಹಾಗೂ (ಜಗ್ನೆ) ಸೃಷ್ಟಿ ಉತ್ಪತ್ತಿಯ ಜ್ಞಾನ ಅರಿತು (ಬಹುಭಿ) ಬಹಳ ಆನಂದ (ಸಾಕಮ್) ದಿಂದ (ಅರ್ಧೆ) ಕಡಿಮೆ (ಸಸನ್) ಮಲಗುತ್ತಾ (ಇತ್ಥಾ) ವಿಧಿವತ್ತ ಅನುಸಾರ (ನು) ಅಂತರಾತ್ಮದಿಂದ ಸ್ತುತಿಸುತ್ತಾನೆ.

**ಭಾವಾರ್ಥ:– ಅದೇ ಪೂರ್ಣ ಪರಮೇಶ್ವರನು, ಸತ್ಯ ಸಾಧನೆ ಮಾಡುವ ಸಾಧಕನನ್ನು ಮೊದಲಿನ ಸ್ಥಾನವಾದ ಸತ್ಯಲೋಕಕ್ಕೆ ಕರೆದುಕೊಂಡು ಹೋಗುತ್ತಾನೆ. ಎಲ್ಲಿಂದ ಅಗಲಿ ಬಂದಿದ್ವಿ. ಅಲ್ಲಿ ಆ ವಾಸ್ತವಿಕ ಸುಖ ನೀಡುವ ಪ್ರಭುವನ್ನು ಪಡೆದು ಆತ್ಮಾನಂದದಿಂದ ಸ್ತುತಿ ಮಾಡುತ್ತದೆ. ಏನೆಂದರೆ ಹೇ ಪರಮಾತ್ಮ ಅಶಂಖ್ಯ ಜನ್ಮಗಳಿಂದ ಸುತ್ತಾಡಿ (ಹುಟ್ಟು–ಸಾವಿನ ಜಾಲದಲ್ಲಿ) ದವರಿಗೆ, ಅಲೆದಾಡಿದವರಿಗೆ ವಾಸ್ತವಿಕವಾದ ನೆಲೆ ಸಿಕ್ಕಿತ್ತು ಎಂದು. ಇದಕ್ಕೆ ಪ್ರಮಾಣ ಪವಿತ್ರ ಋಗ್ವೇದದ 10ನೇ ಮಂಡಲದ 90ನೇ ಸೂಕ್ತಿಯ 16ನೇ ಮಂತ್ರದಲ್ಲಿದೆ.**

**ಗೌರವಾನ್ವಿತ ಗರೀಬ್‌ದಾಸ್ ರವರನ್ನು ಇದೇ ರೀತಿ, ಪರಮಾತ್ಮ ಕವಿರ್ದೇವರು (ಕಬೀರ್ ಪರಮೇಶ್ವರ) ಸ್ವತಃ ಸತ್ಯ ಭಕ್ತಿಯನ್ನು ಪ್ರಧಾನ ಮಾಡಿ ಸತ್ಯಲೋಕಕ್ಕೆ ಕರೆದುಕೊಂಡು ಹೋದರು. ಆಗ ತಮ್ಮ ಅಮೃತವಾಣಿಯಲ್ಲಿ ಗೌರವಾನ್ವಿತ ಗರೀಬ್‌ದಾಸ್ ಮಹಾರಾಜ ರವರು, ತಮ್ಮ ಕಣ್ಣುಗಳಿಂದ ನೋಡಿದ್ದನ್ನು ಹೇಳಿದ್ದಾರೆ :–**

ಗರೀಬ್, ಅಜಬ್ ನಗರ ಮೆ ಲೇ ಗಯೆ, ಹಮಕು ಸದ್ಗುರು ಆನ್ ।
ಝಿಲಕೇ ಬಿಂಬ ಅಗಾಧ ಗತಿ, ಸುತೆ ಚಾದರ್ ತಾನ್ ॥

**ಅಥರ್ವ ವೇದದ 4ನೇ ಕಾಂಡದ 1ನೇ ಅನುವಾಕದ 7ನೇ ಮಂತ್ರ :–**

ಯೋಥರ್ವಾಣಂ ಪಿತರಂ ದೇವಬಂಧುಂ ಬೃಹಸ್ಪತಿಂ ನಮಸಾವ ಚ ಗಚ್ಛಾತ್ ।
ತ್ವಂ ವಿಶ್ವೇಷಾಂ ಜನಿತಾ ಯಥಾಸಃ ಕವಿರ್ದೇವೋ ನ ದಭಾಯತ್ ಸ್ವಧಾವಾನ್ ॥7॥
ಯಃ–ಅಥರ್ವಾಣಂ–ಪಿತರಮಂ–ದೇವಬಂಧುಂ–ಬೃಹಸ್ಪತಿಂ–ನಮಸಾ–ಅವ–ಚ–ಗಚ್ಛಾತ್
–ತ್ವಮ್–ವಿಶ್ವೇಷಾಮ್–ಜನಿತಾ–ಯಥಾ–ಸಃ–ಕವಿರ್ದೇವಃ–ನ–ಭಾಯತ್–ಸ್ವಧಾವಾನ್

ಅನುವಾದ:– (ಯಃ) ಯಾರು (ಅಥರ್ವಾಣಂ) ಅಚಲ ಅರ್ಥಾತ್ ಅವಿನಾಶಿ (ಪಿತ್ತರಮ್) ಜಗತ್ ಪಿತಾ (ದೇವಬಂಧುಂ) ಭಕ್ತರ ವಾಸ್ತವಿಕ ಜೊತೆಗಾರ ಅರ್ಥಾತ್ ಆತ್ಮದ ಆಧಾರ (ಬೃಹಸ್ಪತಿಮ್) ಜಗದ್ಗುರು (ಚ) ಹಾಗೂ (ನಮಸಾ) ವಿನಮ್ರ ಪೂಜಾರಿ ಅರ್ಥಾತ್ ವಿಧಿವತ್ತಾಗಿ ಸಾಧನೆ ಮಾಡುವವನನ್ನು, (ಅವ) ಸುರಕ್ಷೆಯೊಂದಿಗೆ (ಗಚ್ಛಾತ್) ಸತ್ಯಲೋಕಕ್ಕೆ ಹೋದವರಿಗೆ ಅಂದರೆ ಯಾರದು ಪೂರ್ಣ ಮೋಕ್ಷವಾಯಿತೋ ಅವರು ಸತ್ಯಲೋಕಕ್ಕೆ ಹೋಗಿದ್ದಾರೆ. ಅವರನ್ನು ಸತ್ಯಲೋಕಕ್ಕೆ ಕರೆದುಕೊಂಡು ಹೋದವನು (ವಿಶ್ವೇಷಾಮ್) ಸರ್ವ ಬ್ರಹ್ಮಾಂಡಗಳ (ಜನಿತಾ) ರಚನೆ ಮಾಡಿದವ ಜಗದಂಬಾ ಅಂದರೆ ತಾಯಿಯಂತಹ ಗುಣವುಳ್ಳವ (ನದಭಾಯತ) ಕಾಲಬ್ರಹ್ಮನ ಹಾಗೆ ದ್ರೋಹ ಮಾಡದ (ಸ್ವಧಾವಾನ್) ಸ್ವಭಾವದ ಅರ್ಥಾತ್ ಗುಣಗಳಿಂದಯುಕ್ತ (ಯಥಾ) ಹೇಗಿದಿರೋ, ಹಾಗೆ ಅರ್ಥಾತ್ ಹಾಗೇಯೇ (ಸಃ) ಇದ್ದವರು (ತ್ವಮ್) ತಾವು (ಕವಿರ್ದೇವಃ) ಕವಿರ್ದೇವ ಆಗಿರುವಿರಿ. ಅಥಾರ್ತ ಭಾಷಾ ಭಿನ್ನತೆಯಿಂದ ಇವರನ್ನು ಕಬೀರ್ ಪರಮೇಶ್ವರ ಎಂದೂ ಕರೆಯುತ್ತಾರೆ.

## ಮೇಲೆ ಬೇರು ಕೆಳಗೆ ಶಾಖೆಯುಳ್ಳ ಹಿಮ್ಮುಖವಾಗಿ ತೂಗಾಡುತ್ತಿರುವ ಸಂಸಾರ (ಜಗತ್ತು) ರೂಪಿ ಮರದ ಚಿತ್ರ



**ಭಾವಾರ್ಥ:– ಯಾರು ಸರ್ವ ರಚನೆ ಮಾಡಿರುವರೋ, ಅವರು ಪರಮೇಶ್ವರ ಕವಿರ್ದೇವ ಅರ್ಥಾತ್ ಕಬೀರ್ ಪರಮೇಶ್ವರರು ಎಂಬುದನ್ನು ಈ ಮಂತ್ರದಲ್ಲಿ ಸ್ಪಷ್ಟಪಡಿಸಲಾಗಿದೆ. ಆ ಪರಮೇಶ್ವರ ಅಚಲ ಅರ್ಥಾತ್ ವಾಸ್ತವದಲ್ಲಿ ಅವಿನಾಶಿ (ಗೀತೆಯ 15ನೇ ಅಧ್ಯಾಯದ 16–17ನೇ ಶ್ಲೋಕದಲ್ಲಿ ಇದಕ್ಕೆ ಪ್ರಮಾಣವಿದೆ) ಜಗದ್ಗುರು–ಆತ್ಮೋದ್ಧಾರ, ಯಾರು ಪೂರ್ಣ ಮುಕ್ತರಾಗಿ ಸತ್ಯಲೋಕಕ್ಕೆ ಹೋಗಿದ್ದಾರೆ ಅವರನ್ನು ಕರೆದುಕೊಂಡು ಹೋಗುವವ, ಸರ್ವ ಬ್ರಹ್ಮಾಂಡಗಳ ರಚನೆಕಾರ ಕಾಲಬ್ರಹ್ಮ ನಂತೆ ಮೋಸಮಾಡುವವನಲ್ಲ. ಅವರು ಕಬೀರ್ ಪ್ರಭುವಾಗಿದ್ದಾರೆ ಈ ಪರಮೇಶ್ವರನನ್ನೇ ತಾಯಿ, ತಂದೆ, ಹಾಗು ಸೋದರ ಎಂದೂ ಸಹ ಕರೆಯುತ್ತಾರೆ. ಏಕೆಂದರೆ ತಮ್ಮ ಶಬ್ದಶಕ್ತಿಯಿಂದ ಸಕಲ ಬ್ರಹ್ಮಾಂಡಗಳನ್ನು, ಸಕಲ ಆತ್ಮಗಳನ್ನು ಸೃಷ್ಟಿಮಾಡಿದ್ದಾರೆ. ವಾಸ್ತವಿಕವಾಗಿ ಇವರೇ ಪರಮೇಶ್ವರ. ಆದ್ದರಿಂದ ಈ ಕಬೀರ ಪರಮೇಶ್ವರರ ಸ್ತುತಿ ಮಾಡುತ್ತಾರೆ. "ತ್ವಮೇವ ಮಾತಾ ಚ ಪಿತಾ ತ್ವಮೇವ, ತ್ವಮೇವ ಬಂಧು ಚ ಸಖಾ ತ್ವಮೇವ, ತ್ವಮೇವ ವಿದ್ಯಾ ಚ ದ್ರವಿಣಮ್ ತ್ವಮೇವ, ತ್ವಮೇವ ಸರ್ವ ಮಮ್ ದೇವ ದೇವ". ಇದೇ ಪರಮೇಶ್ವರನ ಮಹಿಮೆಯು ಪವಿತ್ರ ಋಗ್ವೇದದ 1ನೇ ಮಂಡಲದ 24ನೇ ಸೂಕ್ತದಲ್ಲಿ ವಿಸ್ತಾರವಾದ ವಿವರಣೆ ಇದೆ.**

## "ಪವಿತ್ರ ಋಗ್ವೇದದಲ್ಲಿ ಸೃಷ್ಟಿ ರಚನೆಯ ಪ್ರಮಾಣ (ಆಧಾರ)"

**ಋಗ್ವೇದದ 10ನೇ ಮಂಡಲದ ಸೂಕ್ತ 90ರಲ್ಲಿ 1ನೇ ಮಂತ್ರ :–**

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋಂ ವೃತ್ವಾತ್ಯಾತಿಷ್ಠದ್ದಶಾಂಗುಲಮ್ ॥ 1 ॥
ಸಹಸ್ರಶೀರ್ಷಾ–ಪುರುಷಃ–ಸಹಸ್ರಾಕ್ಷಃ–ಸಹಸ್ರಪಾತ್–
ಸ–ಭೂಮಿಮ್–ವಿಶ್ವತಃ–ವೃತ್ವಾ–ಅತ್ಯಾತಿಷ್ಠತ್–ದಶಂಗುಲಮ್।

ಅನುವಾದ:– (ಪುರುಷಃ) ವಿರಾಟ್ ರೂಪದ ಕಾಲಭಗವಂತ ಅಂದರೆ ಕ್ಷರ ಪುರುಷ (ಸಹಸ್ರಶೀರ್ಷಾ) ಸಾವಿರ ತಲೆಗಳುಳ್ಳವ ( ಸಹಸ್ರಾಕ್ಷಃ) ಸಾವಿರ ಕಣ್ಣುಗಳುಳ್ಳವ (ಸಹಸ್ರಪಾತ್) ಸಾವಿರ ಕಾಲುಗಳುಳ್ಳವ (ಸ) ಆ ಕಾಲನು (ಭೂಮಿಮ್) ಪೃಥ್ವಿಯ 21 ಬ್ರಹ್ಮಾಂಡವನ್ನು (ವಿಶ್ವತಃ) ಎಲ್ಲ ಕಡೆಯಿಂದ (ದಶಾಂಗುಲಮ್) ಹತ್ತು ಬೆರಳುಗಳಿಂದ ಅರ್ಥಾತ್ ಪೂರ್ಣ ರೂಪದಿಂದ ವಶಕ್ಕೆ ತೆಗೆದು ಕೊಂಡಿರುವನು (ವೃತ್ವಾ) ಗೋಲಾಕಾರದ ಪರಿಧಿಯಿಂದ ಸುತ್ತಿ (ಅತ್ಯಾತಿಷ್ಠತ್) ಇದರಿಂದ ಹೆಚ್ಚು ಅಂದರೆ ತನ್ನ ಕಾಲಲೋಕದಲ್ಲಿ ಎಲ್ಲರಿಂದ ಬೇರೆಯಾಗಿ 21ನೇ ಬ್ರಹ್ಮಾಂಡದಲ್ಲಿ ಮೇಲೆ ಕುಳಿತ್ತಿದ್ದಾನೆ ಅಂದರೆ ವಾಸಿಸುತ್ತಾನೆ.

**ಭಾವಾರ್ಥ:– ಸಾವಿರ ತಲೆ, ಕೈ–ಕಾಲು ಕಣ್ಣುಗಳನ್ನು ಹೊಂದಿರುವ ವಿರಾಟ್ ರೂಪದ ಕಾಲ ಬ್ರಹ್ಮನ ವರ್ಣನೆಯನ್ನು ಈ ಮಂತ್ರದಲ್ಲಿ ಹೇಳಿದ್ದಾರೆ. (ಗೀತೆಯ 10–11ನೇ ಅಧ್ಯಾಯದಲ್ಲೂ ಸಹ ಕಾಲ ಬ್ರಹ್ಮನ ಇಂತಹದೇ ವರ್ಣನೆ ಇದೆ. ಅಧ್ಯಾಯ 11ರ 46ನೇ ಶ್ಲೋಕದಲ್ಲಿ ಅರ್ಜುನನು ಹೇಳುತ್ತಾನೆ– "ಸಹಸ್ರ ಭುಜಗಳುಳ್ಳ ನೀವು ನಿಮ್ಮ ಚತುರ್ಭುಜ ರೂಪದಲ್ಲಿ ದರ್ಶನ ನೀಡಿ") ಅವನಿಗೆ ಸಾವಿರ ತಲೆ–ಕಾಲು–ಕೈ–ಕಣ್ಣು–ಕಿವಿ ಇತ್ಯಾದಿಗಳಿವೆ, ಆ ವಿರಾಟ್ ರೂಪಿ ಕಾಲ ಬ್ರಹ್ಮನು ತನ್ನ ಅಧೀನದಲ್ಲಿ ಎಲ್ಲ ಜೀವಾತ್ಮಗಳನ್ನು ಇರಿಸಿಕೊಂಡು, 20 ಬ್ರಹ್ಮಾಂಡಗಳನ್ನು ಗೋಲಾಕಾರದ ಪರಿಧಿಯಲ್ಲಿರಿಸಿ. ಸ್ವತಃ ತಾನು ಪ್ರತ್ಯೇಕವಾಗಿ 21ನೇ ಬ್ರಹ್ಮಾಂಡದಲ್ಲಿ ಕಳಿತುಕೊಂಡಿದ್ದಾನೆ.**

**ಋಗ್ವೇದದ 10ನೇ ಮಂಡಲದ 90ನೇ ಸೂಕ್ತದಲ್ಲಿನ 2ನೇ ಮಂತ್ರ :–**

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭಾವ್ಯಮ್ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥ 2 ॥
ಪುರುಷ–ಏವ–ಇದಮ್–ಸರ್ವಮ್–ಯತ್–ಭೂತಮ್–ಯತ್–ಚ–ಭಾವ್ಯಮ್–

ಉತ್‌ಅಮೃತತ್ವಸ್ಯ–ಇಶಾನಃ–ಯತ್–ಅನ್ನೇನ–ಅತಿರೋಹತಿ।

ಅನುವಾದ:– (ಏವ) ಈ ಪ್ರಕಾರ ಸ್ವಲ್ಪಮಟ್ಟಿಗೆ (ಪುರುಷ) ಭಗವಂತನಂತೆ ಇರುವವನು ಅಕ್ಷರಪುರಷ ಅಂದರೆ ಪರಬ್ರಹ್ಮನು. (ಚ) ಮತ್ತು (ಇದಮ್) ಇಲ್ಲಿ (ಯತ್) ಏನೆಲ್ಲಾ (ಭೂತಮ್) ಉತ್ಪನ್ನವಾಗಿದೆ (ಯತ್) ಏನೆಲ್ಲಾ (ಭಾವ್ಯಮ್) ಭವಿಷ್ಯದಲ್ಲೂ ಉತ್ಪನ್ನವಾಗುತ್ತದೆ (ಸರ್ವಂ) ಎಲ್ಲಾ (ಯತ್) ಪ್ರಯತ್ನದಿಂದ ಅಂದರೆ ಶ್ರಮದ ಮೂಲಕ (ಅನ್ನೇನ) ಅನ್ನದಿಂದ (ಅತಿರೋಹತಿ) ವಿಕಾಸಗೊಳ್ಳುವುದು. ಈ ಅಕ್ಷರ ಪುರಷನು ಸಹ (ಉತ್) ಸಂದೇಹಯುಕ್ತಿ (ಅಮೃತತ್ವಸ್ಯ) ಮೋಕ್ಷದ (ಈಶಾನಃ) ಸ್ವಾಮಿಯಾಗಿರುವನು ಆದರೆ ಪೂರ್ಣ ಮೋಕ್ಷದಾಯಕನಲ್ಲ.

**ಭಾವಾರ್ಥ:– ಈ ಮಂತ್ರದಲ್ಲಿ ಪರಬ್ರಹ್ಮ (ಅಕ್ಷರ ಪುರುಷ) ನ ವರ್ಣನೆ ಇದೆ. ಇವನು ಭಗವಂತನ ಕೆಲವು ಲಕ್ಷಣಗಳಿವೆ. ಆದರೆ ಇವನ ಭಕ್ತಿಯಿಂದ ಪೂರ್ಣ ಮೋಕ್ಷ ಸಿಗದು. ಆದ್ದರಿಂದ ಇವನನ್ನು ಸಂದೇಹಯುಕ್ತ ಮುಕ್ತಿದಾತನೆನ್ನುವರು. ಇವನನ್ನು ಭಗವಂತನಂತೇ ಎಂದು ಹೇಳಲು ಕಾರಣ– ಇವನು ಕಾಲನ ರೀತಿ ತಪ್ತಶಿಲೆಯ ಮೇಲೆ ಜೀವಿಗಳನ್ನು ಸುಟ್ಟು ತಿನ್ನುವುದಿಲ್ಲ. ಆದರೆ ಈ ಪರಬ್ರಹ್ಮನ ಲೋಕದಲ್ಲೂ ಸಹ ಪರಿಶ್ರಮದ, ಕರ್ಮಾಧಾರದಂತೆ ಫಲ ಸಿಗುವುದು ಹಾಗೂ ಅನ್ನದಿಂದಲೇ ಸಕಲ ಪ್ರಾಣಿಗಳ ಶರೀರ ಬೆಳೆಯುವುದು. ಜನ್ಮ–ಮೃತ್ಯುವಿನ ಸಮಯ ಕಾಲನಿಗಿಂತ ಹೆಚ್ಚಾಗಿದೆ. ಆದರೂ ಸಹ ಉತ್ಪತ್ತಿ, ಮರಣ ಹಾಗೂ 84 ಲಕ್ಷ ಯೋನಿಗಳ ಯಾತನೆ ಹಾಗೆಯೇ ಇದೆ.**

**ಋಗ್ವೇದದ 10ನೇ ಮಂಡಲದ ಸೂಕ್ತಿ 90ರ 3ನೇ ಮಂತ್ರ :–**

ಏತಾವಾನಸ್ಯ ಮಹಿಮಾತೋ ಜ್ಯಾಯಾಂಶ್ಚ ಪುರಷಃ ।
ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥3॥

ಏತಾವಾನ್‌ಅಸ್ಯ–ಮಹಿಮಾ–ಅತಃ–ಜ್ಯಾಯಾನ್‌ಚ–ಪುರುಷಃ–ಪಾದಃ–ಅಸ್ಯ–ವಿಶ್ವಾಃ–ಭೂತಾನಿ–ತ್ರಿ–ಪಾದ–ಅಸ್ಯ–ಅಮೃತಮ್–ದಿವಿ.

ಅನುವಾದ:– (ಅಸ್ಯ) ಈ ಪರಬ್ರಹ್ಮನಿಗೆ (ಏತಾವಾನ) ಇಷ್ಟೇ ಮಹಿಮೆ ಇದೆ (ಮಹಿಮಾ) ಪ್ರಭುತ್ವವಿದೆ (ಚ) ಹಾಗೂ (ಪುರುಷ) ಆ ಪೂರ್ಣ ಬ್ರಹ್ಮ ಪರಮೇಶ್ವರನು (ಅತಃ) ಇವನಿಗಿಂತ (ಜ್ಯಾಯಾನ) ದೊಡ್ಡವನು. (ವಿಶ್ವಾ) ಸಮಸ್ತ (ಭೂತಾನಿ) ಕ್ಷರಪುರುಷ ಹಾಗು ಅಕ್ಷರ ಪುರುಷ ಹಾಗು ಇವರ ಲೋಕಗಳಲ್ಲಿ ಹಾಗು ಸತ್ಯಲೋಕದಲ್ಲಿ ಎಷ್ಟು ಜೀವಾತ್ಮಗಳಿವೆಯೋ, (ಅಸ್ಯ) ಅವುಗಳ ಮೇಲೆ ಈ ಪೂರ್ಣ ಪರಮಾತ್ಮ ಪರಮ ಅಕ್ಷರ ಪುರುಷನ (ಪಾದಃ) ಒಂದು ಅಂಶ ಇದೆ. (ಅಸ್ಯ) ಈ ಪರಮೇಶ್ವರನ (ತ್ರಿ) ಮೂರು (ದಿವಿ) ದಿವ್ಯಲೋಕ ಅವು ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ (ಅಮೃತಂ) ಅವಿನಾಶಿಯ (ಪಾದ) ಎರಡನೆಯ ಪಾದ ಅಂದರೆ ಏನೆಲ್ಲಾ ಸಕಲ ಬ್ರಹ್ಮಾಂಡಗಳಲ್ಲಿ ಉತ್ಪನ್ನವಾಗಿದೆ ಇದು ಆ ಸತ್ಯಪುರುಷನ ಪೂರ್ಣ ಪರಮಾತ್ಮನದೇ ಅಂಶ ಅಥವಾ ಅಂಗವಾಗಿದೆ.

**ಭಾವಾರ್ಥ:– ಈ ಮೇಲಿನ 2ನೇ ಮಂತ್ರದಲ್ಲಿ ವರ್ಣಿತವಾಗಿರುವ ಅಕ್ಷರ ಪುರುಷ (ಪರಬ್ರಹ್ಮ) ನಿಗೆ ಎಷ್ಟು ಮಹಿಮೆ ಇದೆಯೋ, ಅದಕ್ಕಿಂತಲೂ ಅಧಿಕವಾಗಿ ಪೂರ್ಣ ಪುರುಷ ಕವಿರ್ದೇವರ ಮಹಿಮೆ ಇದೆ. ಇವರು ಸರ್ವಶಕ್ತಿಮಾನ್ ಹಾಗೂ ಸಕಲ ಬ್ರಹ್ಮಾಂಡವೂ, ಇವರ ಅಂಶದಿಂದಲೇ ಆಗಿವೆ. ಈ ಮಂತ್ರದಲ್ಲಿ ಮೂರು ಲೋಕಗಳ ವರ್ಣನೆ ಇದೆ ಏಕೆಂದರೆ ನಾಲ್ಕನೆಯ ಅನಾಮಿಲೋಕ ಬೇರೆ ಲೋಕಗಳ ರಚನೆಗೂ ಮೊದಲೇ ಆಗಿದೆ. ಇದೇ ಮೂವರು ಪ್ರಭುಗಳ (ಕ್ಷರ ಪುರುಷ, ಅಕ್ಷರ ಪುರುಷ ಹಾಗು ಇವರಿಗಿಂತ ಬೇರೆ ಪರಮ ಅಕ್ಷರ ಪುರುಷನ) ವಿವರಣೆಯು ಭಗವದ್ಗೀತೆಯ 15ನೇ ಅಧ್ಯಾಯದ 16–17 ನೇ ಶ್ಲೋಕಗಳಲ್ಲಿದೆ. {ಇದಕ್ಕೆ ಪ್ರಮಾಣವನ್ನು ಗೌರವಾನ್ವಿತ ಗರೀಬ್‌ದಾಸರು ನೀಡಿದ್ದಾರೆ :–**

ಗರೀಬ್, ಜಾಕೆ ಅರ್ಧ ರೂಮ್ ಪರ್ ಸಕಲ್ ಪಸಾರಾ, ಐಸಾ ಪೂರ್ಣಬ್ರಹ್ಮ ಹಮಾರಾ ।
ಗರೀಬ್, ಅನಂತ ಕೋಟಿ ಬ್ರಹ್ಮಾಂಡ ಕಾ, ಏಕ್ ರತಿ ನಹೀ ಭಾರ್ ।

ಸತ್‌ಗುರು ಪುರುಷ ಕಬೀರ್ ಹೈ, ಕುಲ್ ಕೆ ಸೃಜನ್ ಹಾರ್ ॥

**ಇದರ ಪ್ರಮಾಣವನ್ನು ಗೌರವಾನ್ವಿತ ದಾದೂ ರವರು ಹೇಳುತ್ತಿದ್ದಾರೆ:–**

ಜಿನ್ ಮೋಕು ನಿಜನಾಮ್ ದಿಯಾ, ಸೋಈ ಸತ್‌ಗುರು ಹಮಾರ್ ।
ದಾದೂ ದೂಸರಾ ಕೋಎ ನಹೀ, ಕಬೀರ್ ಸೃಜನಹಾರ್ ॥

**ಇದರ ಪ್ರಮಾಣವನ್ನು ಗೌರವಾನ್ವಿತ ಗುರು ನಾನಕ್ ರವರು ಕೊಡುತ್ತಾರೆ:–**

ಯಕ ಅರ್ಜ್ ಗುಫತಮ್ ಪೇಶ್ ತೋ ದರ್ ಕೂನ್ ಕರತಾರ್ ।
ಹಕ್ಕಾ ಕಬೀರ್ ಕರೀಮ್ ತೂ, ಬೇಎಬ್ ಪರವರದಿಗಾರ್ ॥

**(ಶ್ರೀ ಗುರು ಗ್ರಂಥ ಸಾಹೇಬದ ಪುಟ ಸಂಖ್ಯೆ 721, ಮಹಲಾ 1 ರಾಗ ತಿಲಂಗ)**

**'ಕೂನ್ ಕರತಾರ'ದ ಅರ್ಥ ಎಲ್ಲವನ್ನೂ ರಚಿಸುವವನು ಎಂದಾಗಿದೆ. ಅರ್ಥಾತ್ ಶಬ್ದ ಶಕ್ತಿಯಿಂದ ರಚನೆಮಾಡುವ ಶಬ್ದ ಸ್ವರೂಪ ಪ್ರಭು. 'ಹಕ್ಕಾ ಕಬೀರ್' ನ ಅರ್ಥ ಸತ್ಯ ಕಬೀರ್ ಎಂದಾಗಿದೆ. 'ಕರೀಮ್'ನ ಅರ್ಥ ದಯಾಳು ಎಂದಾಗಿದೆ. 'ಪರವರದಿಗಾರ್' ನ ಅರ್ಥ ಪರಮಾತ್ಮ ಎಂದಾಗಿದೆ.}**

**ಋಗ್ವೇದದ 10ನೇ ಮಂಡಲದ 90ನೇ ಸೂಕ್ತಿಯ 4ನೆ ಮಂತ್ರ :–**

ತ್ರಿ ಪಾದೂರ್ಧ್ವ ಉದೈತ್ಪುರುಷಃ ಪಾದೋಸ್ಯೇಹಾಭವತ್ಪುನಃ ।
ತತೋ ವಿಶ್ವ ಡವ್ಯಕ್ರಾಮತ್ಸಾಶನಾನಶನೆ ಅಭಿ ॥4॥
ತ್ರಿ–ಪಾದ–ಊರ್ಧ್ವಃ–ಉದೈತ್–ಪುರುಷಃ–ಪಾದಃ–ಅಸ್ಯ–ಇಹ–ಅಭವತ್
ಪೂನಃ–ತತಃ–ವಿಶ್ವಡ–ವ್ಯಕ್ರಾಮತ–ಸಃ–ಅಶನಾನಶನೆ–ಅಭಿ.

ಅನುವಾದ:– (ಪುರುಷಃ) ಈ ಪರಮ ಅಕ್ಷರ ಬ್ರಹ್ಮ ಅಂದರೆ ಅವಿನಾಶಿ ಪರಮಾತ್ಮಾ (ಊರ್ಧ್ವಃ) ಮೇಲಿನ (ತ್ರಿ) ಮೂರು ಲೋಕಗಳಾದ ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ ರೂಪಿ (ಪಾದ) ಪಾದ ಅಂದರೆ ಮೇಲಿನ ಭಾಗದಲ್ಲಿ (ಉದೈತ್) ಪ್ರಕಟನಾಗುತ್ತಾನೆ ಅರ್ಥಾತ್ ವಿರಾಜಮಾನನಾಗುತ್ತಾನೆ (ಅಸ್ಯ) ಇದೇ ಪರಮೇಶ್ವರ ಪೂರ್ಣಬ್ರಹ್ಮನ (ಪಾದಃ) ಒಂದು ಪಾದ ಅಂದರೆ ಒಂದು ಭಾಗ ಜಗತ್ತು ರೂಪಿ (ಪುನರ್) ನಂತರ ( ಇಹ) ಇಲ್ಲಿ (ಅಭವತ್) ಪ್ರಕಟವಾಗುತ್ತಾನೆ. (ತತಃ) ಆದ್ದರಿಂದ (ಸಃ) ಆ ಅವಿನಾಶಿ ಪೂರ್ಣ ಬ್ರಹ್ಮನು (ಅಶನಾನಸನೆ) ತಿನ್ನುವ ಕಾಲ ಬ್ರಹ್ಮ ಮತ್ತು ತಿನ್ನದೆ ಇರುವ ಪರಬ್ರಹ್ಮನ (ಅಭಿ) ಮೇಲೂ (ವಿಶ್ವಡ) ಸರ್ವತ್ರ (ವ್ಯಕ್ರಾಮಾತ್) ಅವನ ಪ್ರಭುತ್ವ ಎಲ್ಲಾ ಬ್ರಹ್ಮಾಂಡ ಹಾಗೂ ಎಲ್ಲಾ ಪ್ರಭುಗಳ ಮೇಲೂ ಇದೆ. ಅವನೇ ಕುಲದ ಮಾಲೀಕ. ಅವನು ತನ್ನ ಶಕ್ತಿಯನ್ನು ಎಲ್ಲರ ಮೇಲೆ ಪ್ರಯೋಗಿಸಿದ್ದಾನೆ.

**ಭಾವಾರ್ಥ: ಇವನೇ ಸಕಲ ಸೃಷ್ಟಿಯ ರಚನಾಕಾರನು ತಾನು ರಚಿಸಿದ ಮೂರು ಲೋಕಗಳಲ್ಲಿ (ಸತ್ಯಲೋಕ, ಅತಖ್‌ಲೋಕ, ಅಗಮ್‌ಲೋಕ) ಮೂರು ರೂಪಗಳಲ್ಲಿ ಪ್ರಕಟವಾಗಿದ್ದಾನೆ. ಇಲ್ಲಿ ಅನಾಮಿಲೋಕದ ರಚನೆ ಬಗ್ಗೆ ಹೇಳಲಾಗಿಲ್ಲ. ಏಕೆಂದರೆ ಈ ಲೋಕದಲ್ಲಿ ಯಾವುದೇ ರಚನೆ ಇಲ್ಲ. ಇದು ಪೂರ್ವದಿಂದಲ್ಲೇ ಇರುವಂತಹದ್ದು. ನಂತರ ಹೇಳಲಾಗಿದೆ ಅದೇ ಪರಮಾತ್ಮನು ಸತ್ಯಲೋಕದಿಂದ ಬೇರೆಯಾಗಿ ಕೆಳಗಿನ ಕಾಲ ಬ್ರಹ್ಮ ಮತ್ತು ಪರಬ್ರಹ್ಮನ ಲೋಕ ಉತ್ಪನ್ನವಾಗುತ್ತವೆ. ಜೀವಾತ್ಮಗಳನ್ನು ತಿನ್ನುವ ಕಾಲಬ್ರಹ್ಮ (ಏಕೆಂದರೆ ಕಾಲಬ್ರಹ್ಮ ಶಾಪದಿಂದಾಗಿ ಒಂದು ಲಕ್ಷ ಮಾನವ ಶರೀರ ಧಾರಿ ಜೀವಾತ್ಮಗಳನ್ನು ತಿನ್ನುತ್ತಾನೆ) ಹಾಗು ತಿನ್ನದಿರುವ ಪರಬ್ರಹ್ಮ ಅಂದರೆ ಅಕ್ಷರ ಪುರುಷ (ಪರಬ್ರಹ್ಮ ಜೀವಾತ್ಮಗಳನ್ನು ತಿನ್ನುವುದಿಲ್ಲ, ಆದರೆ ಜನ್ಮ–ಮೃತ್ಯು, ಕರ್ಮದಂಡ ಇದ್ದಹಾಗೆ ಇರುತ್ತದೆ) ಇವರ ಮೇಲೆ ಪೂರ್ಣ ಪರಮಾತ್ಮನ ಪ್ರಭಾವವಿದೆ. ಅಂದರೆ ಈ ಪೂರ್ಣ ಪರಮಾತ್ಮನ ಪ್ರಭುತ್ವ ಎಲ್ಲೆಡೆ ಇರುತ್ತದೆ. ಕಬೀರ ಪರಮೇಶ್ವರನೇ ಕುಲದ ಮಾಲೀಕನು. ಅವನು ತನ್ನ ಶಕ್ತಿಯನ್ನು ಎಲ್ಲರ ಮೇಲೆ ಪಸರಿಸಿದ್ದಾನೆ ಹೇಗೆ ಸೂರ್ಯನು ಮೇಲೆ ಇದ್ದು ತನ್ನ ಪ್ರಕಾಶ–ಪ್ರಭಾವವನ್ನು ಎಲ್ಲರ ಮೇಲೂ ಬೀರುತ್ತಾನೋ, ಹಾಗೆ ಪೂರ್ಣ ಪರಮಾತ್ಮನು ತನ್ನ ಶಕ್ತಿ ರೂಪಿ**

**ರೆಂಜ್ ಕ್ಷಮತೆ ಎಲ್ಲಾ ಬ್ರಹ್ಮಂಡಗಳನ್ನು ನಿಯಂತ್ರಿಸುವಲ್ಲಿ ಬಿಟ್ಟಿರುವನು. ಹೇಗೆ ಮೊಬೈಲ್ ಟವರ್ ಒಂದೆಡೆ ಇದ್ದು ಎಲ್ಲ ಕಡೆಗೂ ವಾಣಿಯ ಸಂದೇಶ ಕಳುಹಿಸುತ್ತದೋ, ಹಾಗೆ ಪೂರ್ಣಬ್ರಹ್ಮನು ತನ್ನ ನಿರಾಕಾರ ಶಕ್ತಿಯನ್ನು ಸರ್ವ ವ್ಯಾಪಕ ಮಾಡಿರುವನು ಅದರಿಂದ ಪೂರ್ಣ ಪರಮಾತ್ಮ ಎಲ್ಲ ಬ್ರಹ್ಮಾಂಡಗಳನ್ನೊಂದೇ ಸ್ಥಾನದಲ್ಲಿ ಕುಳಿತು ನಿಯಂತ್ರಿಸುತ್ತಾನೆ. ಇದರ ಪ್ರಮಾಣವನ್ನು ಗೌರವಾನ್ವಿತ ಗರೀಬ್‌ದಾಸರು ಕೊಟ್ಟಿದ್ದಾರೆ. (ಅಮೃತವಾಣಿ, ರಾಗ ಕಲ್ಯಾಣ)**

ತೀನ್ ಚರಣ್ ಚಿಂತಾಮಣೀ ಸಾಹೇಬ್, ಶೇಷ್ ಬದನ್ ಪರ್ ಛಾಯೆ ।
ಮಾತಾ, ಪಿತಾ ಕುಲ್ ನ ಬಂಧು, ನಾ ಕಿನ್ಹೆ ಜನನೀ ಜಾಯೇ ॥

**ಋಗ್ವೇದದ ಮಂಡಲ 10ರ ಸೂಕ್ತಿ 90ರ 5ನೇ ಮಂತ್ರ :–**

ತಸ್ಮಾದ್ವಿರಾಳಜಾಯತ್ ವಿರಾಜೋ ಅಧಿ ಪುರುಷಃ ।
ಸ ಜಾತೋ ಅತ್ಯರಿಚ್ಯತ್ ಪಶ್ಚಾದ್‌ಭೂಮಿಮಥೋ ಪುರಃ ॥5॥

ತಸ್ಮಾತ್–ವಿರಾಟ್–ಅಜಾಯತ–ವಿರಾಜಃ–ಅಧಿ–ಪುರುಷಃ–ಸ–ಜಾತಃ–ಅತ್ಯರಿಚ್ಚ್ಯತ್–ಪಶ್ಚಾತ್–ಭೂಮಿಮ್–ಅಥಃ–ಪುರಃ

ಅನುವಾದ:– (ತಸ್ಮಾತ್) ಅದಾದ ನಂತರ ಆ ಪರಮೇಶ್ವರನು ಶಬ್ದ ಶಕ್ತಿಯಿಂದ (ವಿರಾಟ್) ಕಾಲಬ್ರಹ್ಮ, ಇವನನ್ನು ಕ್ಷರ ಪುರುಷ ಎಂದೂ ಸಹ ಕರೆಯುತ್ತಾರೆ. (ಅಜಾಯತ) ಇವನ ಉತ್ಪನ್ನವಾಯಿತು. (ಪಶ್ವಾತ್) ಅದಾದ ನಂತರ (ವಿರಾಜಃ) ಕಾಲ ಬ್ರಹ್ಮನಿಗಿಂತ (ಅಧಿ) ದೊಡ್ಡ (ಪುರಷಃ) ಪರಮೇಶ್ವರನು (ಭೂಮಿಮ್) ಪೃಥ್ವಿಯ ಲೋಕ, ಕಾಲ ಬ್ರಹ್ಮ ಹಾಗೂ ಪರಬ್ರಹ್ಮನ ಲೋಕಗಳನ್ನು ಉತ್ತಮವಾಗಿ (ಅತ್ಯರಿಚ್ಯತ್) ನಿರ್ಮಿಸಿದ. (ಅರ್ಥ) ನಂತರ (ಪುರ) ಬೇರೆ ಚಿಕ್ಕ–ಚಿಕ್ಕ ಲೋಕಗಳನ್ನು (ಸ) ಆ ಪೂರ್ಣ ಪರಮಾತ್ಮನೇ ಉತ್ಪನ್ನ ಮಾಡಿದ ಅಂದರೆ ಸ್ಥಾಪಿಸಿದನು

**ಭಾವಾರ್ಥ:– 4ನೇ ಮಂತ್ರದಲ್ಲಿ ಹೇಳಿರುವಂತೆ ಪೂರ್ಣ ಪರಮಾತ್ಮನು ಮೂರು (ಅಗಮಲೋಕ, ಅಲಖ್ ಲೋಕ, ಸತ್ಯಲೋಕ) ಲೋಕಗಳ ಉತ್ಪತ್ತಿಯ ನಂತರ ಪೂರ್ಣ ಪರಮಾತ್ಮ ಜ್ಯೋತಿ ನಿರಂಜನ (ಕಾಲ ಬ್ರಹ್ಮ) ನನ್ನು ಉತ್ಪತ್ತಿ ಮಾಡಿದರು. ಅಂದರೆ ಅದೇ ಸರ್ವ ಶಕ್ತಿವಂತ ಪರಮಾತ್ಮ ಪೂರ್ಣ ಬ್ರಹ್ಮ ಕವಿರ್ದೇವನಿಂದಲೇ ಬ್ರಹ್ಮನ ಉತ್ಪತ್ತಿಯಾಯ್ತು. ಇದಕ್ಕೆ ಪ್ರಮಾಣ ಗೀತೆಯ 3ನೇ ಅಧ್ಯಾಯದ 15ನೇ ಶ್ಲೋಕದಲ್ಲಿ ಪರಮ ಅಕ್ಷರ ಪರುಷ ಅಂದರೆ ಅವಿನಾಶಿ ಪ್ರಭುವಿನಿಂದ ಬ್ರಹ್ಮನ ಉತ್ಪತ್ತಿಯಾಯ್ತು. ಪ್ರಮಾಣ ಅಥರ್ವವೇದದ 4ನೇ ಕಾಂಡದ, 1ನೇ ಅನುವಾಕ, ಸೂಕ್ತಿ 3ರಲ್ಲಿನ ಮಂತ್ರದಲ್ಲಿದೆ. ಅದೇ ಪೂರ್ಣ ಬ್ರಹ್ಮನಿಂದಲೇ ಭೂಮಿ ಮೊದಲಾದ ಚಿಕ್ಕ–ದೊಡ್ಡ ಲೋಕಗಳ ಸೃಷ್ಟಿಯಾಯಿತು. ಪೂರ್ಣಬ್ರಹ್ಮನು ಈ ವಿರಾಟ ಭಗವಂತ ಅಂದರೆ ಕಾಲನಿಗಿಂತ ದೊಡ್ಡ ಅಂದರೆ ಇವನ ಮಾಲೀಕನು**

**ಋಗ್ವೇದದ 10ನೇ ಮಂಡಲದ 90ನೇ ಸೂಕ್ತಿಯ 15ನೇ ಮಂತ್ರ :–**

ಸಪ್ತಾಸ್ಯಾಸಪ್ನರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ ।
ದೇವಾ ಯದ್ಯಜ್ಞಂ ತನ್ವಾನಾ ಅಬಧ್ನಂಪರುಷಂ ಪಶುಮ್ ॥ 15 ॥

ಸಪ್ತ–ಅಸ್ಯ–ಆಸನ–ಪರಿಧಯಃ–ತ್ರಿಸಪ್ತ–ಸಮಿಧಃ–ಕೃತಾಃ–ದೇವಾ–ಯತ್–ಯಜ್ಞಮ್–ತನ್ವಾನಾಃ–ಅಬಘ್ನನ್–ಪುರುಷಮ್ –ಪಶುಮ್ ।

ಅನುವಾದ:– (ಸಪ್ತ) 7 ಶಂಖ ಬ್ರಹಾಂಡವು ಪರಬ್ರಹ್ಮನ ಹಾಗೂ (ತ್ರಿಸಪ್ತ) ಕಾಲಬ್ರಹ್ಮನ 21 ಬ್ರಹ್ಮಾಂಡಗಳ (ಸಮಿಧಃ) ಕರ್ಮದಂಡದ ದುಃಖ ರೂಪದ ಬೆಂಕಿಯಿಂದ (ಕೃತಾಃ) ದುಃಖಿ ಮಾಡುವ (ಪರಿಧಃ) ಗೋಲಾಕಾರದ ಸೀಮೆಯಲ್ಲಿ (ಆಸನ್) ವಿದ್ಯಮಾನವಾಗಿದೆ (ಯತ್ ಪುರುಷಮ್) ಯಾರು ಪೂರ್ಣಪರಮಾತ್ಮನ (ಯಜ್ಞಮ್) ಶಾಸ್ತ್ರಬದ್ಧವಾಗಿ ಧಾರ್ಮಿಕ ಕರ್ಮ ಅಂದರೆ ಪೂಜೆ ಮಾಡುತ್ತಾರೋ (ಪಶುಮ್) ಬಲಿಯ ಪಶುರೂಪದ

ಕಾಲನಜಾಲ (ಸೆರೆ) ದಲ್ಲಿ ಕರ್ಮ ಬಂಧನದಲ್ಲಿ ಬಂಧಿಸಿದ (ದೇವಾ) ಭಕ್ತಾತ್ಮಗಳನ್ನು (ತನ್ವಾನಾಃ) ಕಾಲನ ಮೂಲಕ ಹರಡಿಸಿದ ಪಾಪ ರೂಪದ ಕರ್ಮ ಬಂಧನದ ಜಾಲದಿಂದ (ಅಬಧ್ನನ್) ಮುಕ್ತಗೊಳಿಸುತ್ತಾನೆ. ಅಂದರೆ ಬಂಧನದಿಂದ ಮುಕ್ತ ಮಾಡುವ ಮುಕ್ತಿದಾತರು ಈ ಪೂರ್ಣ ಬ್ರಹ್ಮ ಕಬೀರ್ ಪರಮೇಶ್ವರ.

**ಭಾವಾರ್ಥ:– 7 ಶಂಖ ಬ್ರಹ್ಮಾಂಡ ಹಾಗೂ 21 ಬ್ರಹ್ಮಾಂಡಗಳು ಕ್ರಮವಾಗಿ ಪರಬ್ರಹ್ಮ ಹಾಗೂ ಕಾಲ ಬ್ರಹ್ಮನ ಬ್ರಹ್ಮಾಂಡಗಳಾಗಿವೆ. ಆ ಗೋಲಾಕಾರ ಪರಧಿಯಲ್ಲಿ ಬಂಧಿತರಾದ ಪಾಪ ಕರ್ಮಗಳ ಬೆಂಕಿಯಲ್ಲಿ ಉರಿಯುತ್ತಿರುವ ಜೀವಿಗಳಿಗೆ, ಶಾಸ್ತ್ರ ವಿಧಿವಾದ ಧರ್ಮ ಪೂಜಾ ವಿಧಾನಗಳನ್ನು ತಿಳಿಸಿ ಉಪಾಸನೆ ಮಾಡಿಸುತ್ತಾನೆ. ಆ ಕಾರಣದಿಂದ ಬಲಿಕೊಡುವ ಪಶುವಿನಂತೆ ಜನ್ಮ–ಮೃತ್ಯುವಿನ ಕಾಲನಿಗೆ ತಿನ್ನಲು ತಪ್ತಶಿಲೆಯ ಕಷ್ಟದಿಂದ ಪೀಡಿತ ಭಕ್ತಾತ್ಮಾಗಳನ್ನು ಕಾಲನ ಕರ್ಮ ಬಂಧನದಿಂದ ಬಿಡಿಸುವ ಕೆಲಸವನ್ನು ಪೂರ್ಣ ಬ್ರಹ್ಮ ಕಬೀರರು ಮಾಡುತ್ತಾರೆ ಆದ್ದರಿಂದ ಅವರೇ (ಬಂದೀಛೋಡ್) ಬಂಧನದಿಂದ ಮುಕ್ತಗೊಳಿಸುವ ಮುಕ್ತಿದಾತರು.** ಇದಕ್ಕೆ ಪ್ರಮಾಣ ಯಜುರ್ವೇದದ 5ನೇ ಅಧ್ಯಾಯದ 32ನೇ ಮಂತ್ರದಲ್ಲಿದೆ :– ಕವಿರಂಘಾರಿಸಿ (ಕವಿರ್) ಕಬೀರ್ ಪರಮೇಶ್ವರ (ಅಂಘ) ಪಾಪಗಳ (ಅರಿ) ಶತ್ರು (ಅಸಿ) ಇದ್ದಾರೆ ಅಂದರೆ ಪಾಪ ವಿನಾಶಕ ಕಬೀರರಾಗಿದ್ದಾರೆ. ಬಂಭಾರಿಸಿ (ಬಂಭಾರಿ) ಬಂಧನಗಳ ಶತ್ರು ಅಂದರೆ ಬಂದಿಛೋಡ್ ಅಂದರೆ ಮುಕ್ತಿದಾತ ಕಬೀರ್ ಪರಮೇಶ್ವರರಾಗಿದ್ದಾರೆ.

**ಋಗ್ವೇದದ 10ನೇ ಮಂಡಲದ 90ನೇ ಸೂಕ್ತಿಯ 16ನೇ ಮಂತ್ರ :–**

ಯಜ್ಞೇನ ಯಜ್ಞಮಯಜನ್ತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೇ ಹ ನಾಕಂ ಮಹಿಮಾನಃ ಸಚನ್ತ ಯತ್ರ ಪೂರ್ವೇ ಸಾಧ್ಯಾಃ–ಸಂತಿ ದೇವಾಃ ॥16॥

ಯಜ್ಞೇನ–ಯಜ್ಞಮ–ಅ–ಯಜನ್ತ–ದೇವಾಃ–ತಾನಿ–ಧರ್ಮಾಣಿ–ಪ್ರಥಮಾನಿ–ಆಸನ್–ತೇ ಹ–ನಾಕಂ–ಮಹಿಮಾನಃ–ಸಚನ್ತ–ಯತ್ರ–ಪೂರ್ವೇ–ಸಾಧ್ಯಾಃ– ಸಂತಿ–ದೇವಾಃ.

ಅನುವಾದ:– ಯಾವ (ದೇವಾಃ) ನಿರ್ವಿಕಾರ ದೇವ ಸ್ವರೂಪದ ಭಕ್ತಾತ್ಮಗಳು (ಆಯಜ್ಞಮ್) ಅಪೂರ್ಣ ತಪ್ಪು ಧಾರ್ಮಿಕ ವಿಧಿತ ಪೂಜೆಯ ಬದಲಾಗಿ (ಯಜ್ಞೇನ) ಸತ್ಯ ಭಕ್ತಿಯನ್ನು ಧಾರ್ಮಿಕ ಕರ್ಮದ ಆಧಾರದಿಂದ (ಅಯಜಂತ) ಪೂಜೆ ಮಾಡುತ್ತಾರೆ (ತಾನಿ) ಅವರು (ಧರ್ಮಾಣಿ) ಧಾರ್ಮಿಕ ಶಕ್ತಿ ಸಂಪನ್ನ (ಪ್ರಥಮಾನಿ) ಮುಖ್ಯ ಅರ್ಥಾತ್ ಉತ್ತಮ (ಆಸನ್) ವಾಗಿದ್ದಾರೆ. (ತೇ ಹ) ಅವರೇ ವಾಸ್ತವದಲ್ಲಿ (ಮಹಿಮಾನಶಿ) ಮಹಾನ್ ಭಕ್ತಿ–ಶಕ್ತಿ–ಯುಕ್ತರಾಗಿ (ಸಾಧ್ಯಾಃ) ಸಫಲ ಭಕ್ತಜನರು (ನಾಕಮ್) ಪೂರ್ಣ ಸುಖದಾಯಕ ಪರಮೇಶ್ವರನನ್ನು (ಸಚಂತ್) ಸದ್ಭಕ್ತಿಯ ಸಂಪಾದನೆಯಿಂದ ಪಡೆಯುತ್ತಾರೆ ಹಾಗೂ ಅವರು ಅಲ್ಲಿ ಹೋಗುತ್ತಾರೆ. (ಯತ್ರ) ಎಲ್ಲಿ (ಪೂರ್ವೇ) ಮೊದಲನೇ ಸೃಷ್ಟಿಯ (ದೇವಾಃ) ಪಾಪ ರಹಿತ ದೇವ ಸ್ವರೂಪ ಭಕ್ತ ಆತ್ಮಗಳಿವೆಯೋ ಅಲ್ಲಿ (ಸಂತಿ) ಇರುತ್ತಾರೆ.

**ಭಾವಾರ್ಥ:– ಯಾರು ನಿರ್ವಿಕಾರ ದೇವಸ್ವರೂಪ ಭಕ್ತಾತ್ಮರೋ, (ಅವರು ಮಧ್ಯ–ತಂಬಾಕು, ಮಾಂಸ ಇತ್ಯಾದಿ ದುಶ್ಚಟಗಳಿಲ್ಲದ) ಅವರು ಶಾಸ್ತ್ರ ವಿರುದ್ಧ ಪೂಜೆಯನ್ನು ಬಿಟ್ಟು ಶಾಸ್ತ್ರಾನುಕೂಲ ಸಾಧನೆ ಮಾಡುತ್ತಾರೆ. ಅವರು ಭಕ್ತಿಯ ದುಡಿಮೆಯಿಂದ ಧನಿಕರಾಗುತ್ತಾರೆ. ಕಾಲನ ಋಣದಿಂದ ಮುಕ್ತರಾಗಿ ತಮ್ಮ ಭಕ್ತಿಧನ ಸಂಪಾದನೆಯಿಂದ ಸರ್ವ ಸುಖದಾಯಿ ಪರಮಾತ್ಮನನ್ನು ಪಡೆಯುತ್ತಾರೆ ಅಂದರೆ ಸತ್ಯಲೋಕಕ್ಕೆ ಹೋಗುತ್ತಾರೆ. ಅಲ್ಲಿ ಸರ್ವ ಪ್ರಥಮ ರಚಿಸಿದ ಸೃಷ್ಟಿಯ ದೇವ ಸ್ವರೂಪ ಅಂದರೆ ಅಲ್ಲಿ ಪಾಪರಹಿತ ಹಂಸಾತ್ಮಗಳು ಇರುತ್ತವೆ.**

**ಹೇಗೆ ಕೆಲವು ಆತ್ಮಗಳು ಕಾಲನ ಜಾಲದಲ್ಲಿ ಸಿಕ್ಕಿಕೊಂಡು ಇಲ್ಲಿ ಬಂದವು ಹಾಗೂ ಕೆಲವು ಪರಬ್ರಹ್ಮನ ಜೊತೆ 7 ಶಂಖ ಬ್ರಹ್ಮಾಂಡಗಳಲ್ಲಿ ಬಂದವು. ಇನ್ನು ಹಲವು ಆತ್ಮಗಳು ಯಾರಿಗೆ ಪೂರ್ಣ ಪರಮಾತ್ಮನಲ್ಲಿ ಪೂರ್ಣ ವಿಶ್ವಾಸ ಸ್ಥಿರವಾಗಿತ್ತೊ ಅವು ಸತ್ಯಲೋಕದಲ್ಲೆ ಉಳಿದವು.**

ಇದಕ್ಕಾಗಿ ಇದೇ ವರ್ಣನೆಯನ್ನು ಪವಿತ್ರವೇದಗಳಲ್ಲೂ ಮಾಡಲಾಗಿದೆ. ಇದಕ್ಕೆ ಪ್ರಮಾಣ ಗೀತೆಯ 8ನೇ ಅಧ್ಯಾಯದ 8 ರಿಂದ 10ನೇ ಶ್ಲೋಕಗಳಲ್ಲಿದೆ "ಯಾವ ಭಕ್ತನು ಪೂರ್ಣ ಪರಮಾತ್ಮನ ಸಾಧನೆಯನ್ನು ಶಾಸ್ತ್ರವಿಧಿಯಂತೆ ಮಾಡುತ್ತಾನೋ, ಅವನು ತನ್ನ ಭಕ್ತಿ ಬಲದಿಂದ ಪೂರ್ಣ ಪರಮಾತ್ಮನನ್ನು ಪಡೆಯುತ್ತಾನೆ ಅಂದರೆ ಅವನ ಬಳಿ ಹೋಗುತ್ತಾನೆ. ಇದರಿಂದ ಸ್ಪಷ್ಟವಾಯ್ತೆನೆಂದರೆ ಮೂವರು ಪ್ರಭುಗಳಿದ್ದಾರೆ. ಬ್ರಹ್ಮ-ಪರಬ್ರಹ್ಮ-ಪೂರ್ಣಬ್ರಹ್ಮ ಇವರನ್ನೇ

1. ಬಹ್ಮ / ಈಶ್/ ಕ್ಷರಪುರುಷ/ ಕ್ಷರಬ್ರಹ್ಮ / ಕಾಲ

2. ಪರಬ್ರಹ್ಮ / ಅಕ್ಷರಪುರುಷ/ ಅಕ್ಷರಬ್ರಹ್ಮ / ಈಶ್ವರ ಹಾಗೂ.

3. ಪೂರ್ಣಬ್ರಹ್ಮ / ಕವಿರ್ದೇವ/ ಕಬೀರ್/ ಪರಮ ಅಕ್ಷರ ಬ್ರಹ್ಮ / ಪರಮೇಶ್ವರ-ಸತ್ಯಪುರುಷ ಮುಂತಾದ ಪರ್ಯಾಯವಾಚಿ ಶಬ್ದಗಳಿಂದ ಕರೆಯಲಾಗುತ್ತದೆ.

ಇದೇ ಪ್ರಮಾಣ ಋಗ್ವೇದ 9ನೇ ಮಂಡಲದ, 96ನೇ ಸೂಕ್ತಿಯ 17ರಿಂದ 20ನೇಯ ಮಂತ್ರಗಳಲ್ಲಿ ಸ್ಪಷ್ಟವಾಗಿದೆ. ಏನೆಂದರೆ, ಪೂರ್ಣ ಪರಮಾತ್ಮಾ ಕವಿರ್ದೇವ ಶಿಶು ರೂಪ ಧಾರಣೆ ಮಾಡಿ ಪ್ರಕಟವಾಗುತ್ತಾರೆ. ಹಾಗೂ ತಮ್ಮ ನಿರ್ಮಲ ತತ್ವಜ್ಞಾನದ (ಕವಿರ್ಗೀರ್ಭಿಃ) ಕಬೀರ್ ವಾಣಿಯ ಮೂಲಕ ತಮ್ಮ ಅನುಯಾಯಿಗಳಿಗೆ ತಿಳಿಸುತ್ತಾ ವರ್ಣನೆ ಮಾಡುತ್ತಾರೆ. ಆ ಕವಿರ್ದೇವರು ಕಾಲ ಬ್ರಹ್ಮನ ಧಾಮ ಹಾಗೂ ಪರಬ್ರಹ್ಮರ ಧಾಮಕ್ಕಿಂತ ಭಿನ್ನವಾದ ಧಾಮ ಹಾಗೂ ಪೂರ್ಣಬ್ರಹ್ಮರ ಮೂರನೆಯ ಋತಧಾಮ ಅಂದರೆ ಸತ್ಯಲೋಕದಲ್ಲಿ ಮನುಷ್ಯನ ಆಕಾರ ದಲ್ಲಿ ಇದ್ದಾರೆ ಹಾಗೂ ಸತ್ಯಲೋಕದಿಂದ ನಾಲ್ಕನೆಯದು ಅನಾಮಿ ಲೋಕವಿದೆ. ಅದರಲ್ಲೂ ಇದೇ ಕವಿರ್ದೇವರು ಅನಾಮಿ ಪುರುಷ ರೂಪದಲ್ಲಿ, ಮನುಷ್ಯ ಸದೃಶ್ಯ ಆಕಾರದಲ್ಲಿ ವಿರಾಜಮಾನರಾಗಿದ್ದಾರೆ.

## "ಪವಿತ್ರ ಶ್ರೀಮದ್ ದೇವಿಮಹಾಪುರಾಣದಲ್ಲಿ ಸೃಷ್ಟಿ ರಚನೆಯ "ಪ್ರಮಾಣ"

ಬ್ರಹ್ಮಾ, ವಿಷ್ಣು ಹಾಗು ಶಿವನ ತಂದೆ-ತಾಯಿ

(ದುರ್ಗಾ ಮತ್ತು ಬ್ರಹ್ಮನ ಸಂಯೋಗದಿಂದ ಬ್ರಹ್ಮಾ-ವಿಷ್ಣು-ಶಿವನ ಜನ್ಮ)

ಪವಿತ್ರ "ಶ್ರೀಮದ್ದೇವಿಮಹಾಪುರಾಣದ ಮೂರನೇ ಸ್ಕಂದ ಅಧ್ಯಾಯ 1-3 ಪುಟ ಸಂಖ್ಯೆ 97-102ರವರೆಗೆ ಗೀತಾಪ್ರೆಸ್ ಗೋರಖಪುರದಿಂದ ಪ್ರಕಾಶಿತ, ಇದರ ಸಂಪಾದಕರು ಹನುಮಾನ್ ಪ್ರಸಾದ್ ಪೋದ್ದಾರ್, ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್) ರ ವರೆಗಿನ ವಿವರಣೆ :- ಬಹಳಷ್ಟು ಆಚಾರ್ಯರು ಭವಾನಿಯನ್ನು ಮನೋರಥವನ್ನು ಪರಿಪೂರ್ಣವಾಗಿ ನೆರವೇರಿಸುವವಳೆಂದು ತಿಳಿಸಿದ್ದಾರೆ. ಅವಳನ್ನು ಪ್ರಕೃತಿ ಎಂದು ಕರೆಯಲಾಗಿದೆ. ಬ್ರಹ್ಮನೊಂದಿಗೆ ಅಭೇದ ಸಂಬಂಧ ಇದೆ {ಪತ್ನಿಯನ್ನು ಅರ್ಧಾಂಗಿ ಎಂದೂ ಕರೆಯುತ್ತಾರೆ ಅಂದರೆ ದುರ್ಗಾ ಬ್ರಹ್ಮನ ಪತ್ನಿ} ಒಂದು ಬ್ರಹ್ಮಾಂಡದ ಸೃಷ್ಟಿಯ ರಚನೆ ಬಗ್ಗೆ ರಾಜ ಪರೀಕ್ಷಿತನು ಮಹರ್ಷಿ ವ್ಯಾಸರನ್ನು ಪ್ರಶ್ನಿಸಿದಾಗ ಮಹರ್ಷಿ ವ್ಯಾಸರು ತಿಳಿಸಿದರು, ನಾನು ನಾರದರನ್ನು ಕೇಳಿದೆ "ಹೇ ದೇವರ್ಷೆ! ಈ ಬ್ರಹ್ಮಾಂಡದ ರಚನೆ ಹೇಗೆ ಆಗಿದೆ? ನನ್ನ ಈ ಪ್ರಶ್ನೆಯ ಉತ್ತರವಾಗಿ ನಾರದರು ಹೇಳಿದ್ದೆನೆಂದರೆ, ನಾನು ನನ್ನ ತಂದೆ ಶ್ರೀ ಬ್ರಹ್ಮಾ ರವರಿಗೆ ಕೇಳಿದೆ "ಹೇ ತಂದೆ ಈ ಬ್ರಹ್ಮಾಂಡದ ರಚನೆ ನೀವು ಮಾಡಿದ್ದಿರೊ? ವಿಷ್ಣುವೋ? ಅಥವಾ ಶಿವನೋ? ದಯೆಮಾಡಿ ಸತ್ಯವನ್ನು ತಿಳಿಸಿ?".

ಆಗ ಬ್ರಹ್ಮಾ ನಾರದರಿಗೆ ಹೇಳಿದರು ಮಗನೇ, ನನ್ನನ್ನು ನಾನು ಒಂದು ಕಮಲದ ಹೂವಿನ ಮೇಲೆ ಕುಳಿತಿದ್ದನ್ನು ಕಂಡೆ. ನಾನು ಹೇಗೆ ಆ ಜಲರಾಶಿಯ ಮೇಲೆ ಬಂದೆ? ಎಂಬ ಜ್ಞಾನವಿಲ್ಲ. ಒಂದು ಸಾವಿರ ವರ್ಷಗಳ ವರೆಗೆ ಭೂಮಿಯ ಅನ್ವೇಷಣೆ ಮಾಡಿದೆ. ಎಲ್ಲಿ ನೋಡಿದರೂ ನೀರೇ, ನೀರು. ಎಲ್ಲಿಯೂ ನೆಲ ಕಾಣಲಿಲ್ಲ. ಆಗೊಂದು ಆಕಾಶವಾಣಿಯಾಯಿತು. "ತಪಸ್ಸು ಮಾಡು"

ಎಂದು ಒಂದು ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿದೆ. ನಂತರ "ಸೃಷ್ಟಿ ಮಾಡು" ಎಂದು ಆಕಾಶವಾಣಿಯಾಯಿತು. ಅಷ್ಟರಲ್ಲಿ 'ಮಧು ಮತ್ತು ಕೈಟಭ' ಎಂಬ ಇಬ್ಬರು ರಾಕ್ಷಸರು ಬಂದರು. ಅವರ ಭಯದಿಂದ ಕಮಲದ ದಂಟನ್ನು ಹಿಡಿದು ಕೆಳಕ್ಕೆ ಇಳಿದೆ. ಅಲ್ಲಿ ಭಗವಂತ ವಿಷ್ಣು ಶೇಷ ಶಯ್ಯೆಯಲ್ಲಿ ಅಚೇತನಾಗಿದ್ದರು, ಅವರ ಒಳಗಿಂದ ಒಂದು ಸ್ತ್ರೀ, (ಪ್ರೇತದ ಹಾಗೆ ಪ್ರವಿಷ್ಟ ದುರ್ಗೆ) ಹೊರಬಂದಳು. ಅವಳು ಆಕಾಶದಲ್ಲಿ ಅಭೂಷಣಗಳನ್ನು ಧರಿಸಿಕೊಂಡು ಇರುವಂತೆ ಕಾಣಿಸಿದಳು. ಆಗ ವಿಷ್ಣುವಿಗೆ ಪ್ರಜ್ಞೆ ಬಂತು. ಆಗ ಅಲ್ಲಿ ಇಬ್ಬರೇ ಇದ್ದೆವು. (ನಾನು ಮತ್ತು ವಿಷ್ಣು) ಅಷ್ಟರಲ್ಲಿ ಅಲ್ಲಿಗೆ ಶಂಕರನೂ ಬಂದನು.

ದೇವಿಯು (ದುರ್ಗಾ) ನಮ್ಮನ್ನು ವಿಮಾನದಲ್ಲಿ ಕೂರಿಸಿಕೊಂಡು ಬ್ರಹ್ಮ ಲೋಕಕ್ಕೆ ಕರದುಕೊಂಡು ಹೋದಳು. ಅಲ್ಲಿ ಮತ್ತೊಬ್ಬ ಬ್ರಹ್ಮಾ, ವಿಷ್ಣು, ಶಿವ ಹಾಗೂ ಇನ್ನೊಬ್ಬಳು ದೇವಿಯನ್ನೂ ಕಂಡೆವು. ಅವರನ್ನು ಕಂಡ ವಿಷ್ಣುವು ವಿವೇಕಪೂರ್ಣವಾಗಿ ಈ ಕೆಳಗಿನ ವರ್ಣನೆಯನ್ನು ಮಾಡಿದ. (ಕಾಲ ಬ್ರಹ್ಮನು ಭಗವಾನ್ ವಿಷ್ಣುವಿಗೆ ಚೇತನ ಪ್ರದಾನ ಮಾಡಿದ ಆಗ ಬಾಲ್ಯಕಾಲದ ನೆನಪು ಬಂದಿತು. ಆಗ ಆ ಬಾಲ್ಯದ ಕಥೆಯನ್ನು ಹೇಳಿದ).

ಪುಟ ಸಂಖ್ಯೆ 103ರಲ್ಲಿ ಶ್ರೀ ವಿಷ್ಣುವು, ಶ್ರೀ ಬ್ರಹ್ಮಾ ಹಾಗೂ ಶ್ರೀ ಶಿವನಿಗೆ ಹೇಳಿದ "ಇವಳು ಜಗನ್ಮಾತೆ ಪ್ರಕೃತಿದೇವಿಯಾಗಿರುವಳು, ನಮ್ಮ ಮೂವರ ತಾಯಿ. ನಾನು ಚಿಕ್ಕ ಬಾಲಕನಿದ್ದಾಗ ಈ ದೇವಿಯನ್ನು ನೋಡಿದ್ದೆ. ಇವಳು ನನ್ನನ್ನು ತೋಟ್ಟಿಲಲ್ಲಿ ಹಾಕಿ ಆಡಿಸುತ್ತಿದ್ದಳು.

ಮೂರನೇ ಸ್ಕಂದ ದೇವಿಪುರಾಣ ಪುಟ ಸಂಖ್ಯೆ 105ರಲ್ಲಿ ಶ್ರೀ ವಿಷ್ಣವು ದೇವಿಯನ್ನು ಸ್ತುತಿ ಮಾಡುತ್ತಾ ಹೇಳಿದ, ದೇವಿ ನೀನು ಶುದ್ಧ ಸ್ವರೂಪಳು, ಈ ಈ ಪ್ರಪಂಚ ನಿನ್ನಿಂದಲೇ ಎದ್ದು ಕಾಣುತ್ತಿದೆ. ನಾನು (ವಿಷ್ಣು), ಬ್ರಹ್ಮಾ ಹಾಗು ಶಿವ ನಿನ್ನ ಕೃಪೆಯಿಂದಲೇ ವಿದ್ಯಮಾನರಾಗಿದ್ದೇವೆ. ನಮ್ಮ ಅವಿರ್ಭಾವ ಅಂದರೆ ಹುಟ್ಟು, ತಿರೋಭಾವ ಅಂದರೆ ಸಾವು ಆಗುತ್ತಿರುತ್ತದೆ. ಅಂದರೆ ನಾವು ನಾಶಹೊಂದುವವರು. ಕೇವಲ ನೀನೇ ನಿತ್ಯಳು, ನೀನೆ ಜಗತ್ ಜನನಿ ಪ್ರಕೃತಿದೇವಿಯಾಗಿರುವೆ.

ಭಗವಂತ ಶಂಕರ ಹೇಳಿದನು. "ದೇವಿ ಭಗವಂತ ವಿಷ್ಣು ನಿನ್ನಿಂದಲೇ ಉತ್ಪನ್ನರಾಗಿದ್ದಾರೆ. ಅವರನಂತರ ಉತ್ಪನ್ನ ಬ್ರಹ್ಮಾ ಕೂಡ ನಿಮ್ಮ ಬಾಲಕ, ಎಂದ ಮೇಲೆ ನಾನು ತಮೋಗುಣ ಲೀಲೆ ಮಾಡುವ ಶಂಕರ ನಿನ್ನ ಸಂತಾನವಲ್ಲವೇ? ಅಂದರೆ ನನ್ನನ್ನು ಉತ್ಪತ್ತಿ ಮಾಡಿದವಳು ನೀನೆ ಆಗಿರುವೆ."

ವಿಚಾರ ಮಾಡಬೇಕಾದ ಅಂಶ– ಮೇಲಿನ ವಿವರಣೆಗಳಿಂದ ಅರ್ಥವಾದ ಅಂಶವೇನೆಂದರೆ ಬ್ರಹ್ಮಾ, ವಿಷ್ಣು, ಶಿವ ನಾಶವಾಗುವವರು. ಮೃತ್ಯುಂಜಯರಲ್ಲ, ಸರ್ವೇಶ್ವರರೂ ಅಲ್ಲ. ದುರ್ಗೆಯ ಮಕ್ಕಳು. ಕಾಲ ಬ್ರಹ್ಮ–ಸದಾಶಿವ ಇವರ ತಂದೆ.

ಶ್ರೀಮದ್ ದೇವಿಪುರಾಣದ 3ನೇ ಸ್ಕಂದದ ಪುಟ ಸಂಖ್ಯೆ 107ರಲ್ಲಿ ಬ್ರಹ್ಮಾ ಕೇಳಿದ:– ವೇದಗಳಲ್ಲಿ ಹೇಳಿರುವ 'ಬ್ರಹ್ಮ' ತಾವೇಯೋ? ಅಥವಾ ಬೇರೆ ಯಾರಾದರೂ ಪ್ರಭು, ಆಗಿರುವರೂ.? ದುರ್ಗಾ ಹೇಳಿದಳು:– ನಾನು ಮತ್ತು ಬ್ರಹ್ಮ ಇಬ್ಬರೂ ಒಬ್ಬರೇ ಅನ್ಯರಲ್ಲ. ಮತ್ತೆ ಇದೇ ಸ್ಕಂದದ 6ನೇಯ ಅಧ್ಯಾಯ ಪುಟ ಸಂಖ್ಯೆ 111ರಲ್ಲಿ. ದೇವಿ ಹೇಳಿದಳು:– ಈಗ ನನ್ನ ಕಾರ್ಯ ಸಿದ್ಧಿಗಾಗಿ, ವಿಮಾನದಲ್ಲಿ ಕುಳಿತು ಶೀಘ್ರವಾಗಿ ಹೊರಡಿರಿ ಏನಾದರೂ ಕಠಿಣತೆ ಎದುರಾದರೆ ನನ್ನನ್ನು ಸ್ಮರಿಸಿರಿ, ಆಗ ನಾನು ನಿಮ್ಮ ಮುಂದೆ ಬರುವೆ. ದೇವತೆಗಳೇ, ನೀವು ನನ್ನ ಮತ್ತು ಬ್ರಹ್ಮನ ಸ್ಮರಣೆ ಸದಾ ಮಾಡುತ್ತಿರಬೇಕು. ನಮ್ಮಿಬ್ಬರ ಸ್ಮರಣೆ ಮಾಡಿದರೆ, ನಿಮ್ಮ ಕಾರ್ಯಗಳು ಸಿದ್ಧವಾಗಲು ಸ್ವಲ್ಪವೂ ಸಂದೇಹ ಇರಲ್ಲಾ.

ಮೇಲಿನ ಹೇಳಿಕೆಗಳಿಂದ (ವ್ಯಾಖ್ಯೆ) ದುರ್ಗಾ ಮತ್ತು ಕಾಲ ಬ್ರಹ್ಮನೇ ಮೂರೂ ದೇವರುಗಳ (ಬ್ರಹ್ಮಾ, ವಿಷ್ಣು, ಶಿವ) ತಾಯಿ–ತಂದೆಯರೆಂದು ಸ್ಪಷ್ಟವಾಯ್ತು. ಬ್ರಹ್ಮಾ, ವಿಷ್ಣು, ಶಿವ ನಾಶಹೊಂದುವವರಾಗಿದ್ದಾರೆ. ಪೂರ್ಣ ಶಕ್ತಿಯುತರಲ್ಲ.

**ಮೂರೂ ದೇವರುಗಳ (ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಶ್ರೀ ಶಿವ) ಮದುವೆಯನ್ನು ದುರ್ಗಾ (ಪ್ರಕೃತಿ ದೇವಿ) ಮಾಡಿಸಿದಳು. ಪ್ರಮಾಣಕ್ಕಾಗಿ 3ನೇ ಸ್ಕಂದದ ಪುಟ ಸಂಖ್ಯೆ 109–110ರಲ್ಲಿ ನೋಡಿರಿ.**

**ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕ :–**

ಯೆ, ಚ, ಏವ, ಸಾತ್ವಿಕಾಃ, ಭಾವಾಃ, ರಾಜಸಾಃ, ತಾಮಸಾಃ, ಚ, ಯೆ, ।
ಮತಃ, ಏವ, ಇತಿ, ತಾನ, ವಿದ್ಧಿ, ನ, ತು, ಅಹಮ್, ತೇಷು, ತೆ, ಮ ॥

ಅನುವಾದ:– (ಚ) ಮತ್ತು (ಏವ) ಸಹ (ಯೆ) ಯಾವ (ಸಾತ್ವಿಕಾಃ) ಸತೋಗುಣ ವಿಷ್ಣುವಿನಿಂದ ಸ್ಥಿತಿ (ಭಾವಾಃ) ಭಾವವಾಗಿದೆ ಮತ್ತು (ಯೆ) ಯಾವ (ರಾಜಸಾಃ) ರಜೋಗುಣ ಬ್ರಹ್ಮಾನಿಂದ ಉತ್ಪತ್ತಿ (ಚ) ಹಾಗೂ (ತಾಮಸಾಃ) ತಮೋಗುಣ ಶಿವನಿಂದ ಸಂಹಾರವಾಗುತ್ತದೆ (ತಾನ್) ಅದನ್ನೆಲ್ಲಾ ನೀನು (ಮತಃ ಏವ), ನನ್ನ ಮೂಲಕ ಸುನಿಯೋಜಿತವಾಗಿ ನಿಯಮಾನುಸಾರವಾಗಿಯೇ ಆಗಲಿದೆ ಎಂದು (ಇತಿ) ಹೀಗೆ (ವಿಧಿ) ತಿಳಿ (ತು) ಆದರೆ ವಾಸ್ತವದಲ್ಲಿ (ತೇಷು) ಅವರಲ್ಲಿ (ಅಹಮ್) ನಾನು ಮತ್ತು (ತೆ) ಅವರು (ಮಯಿ) ನನಲ್ಲಿ (ನ) ಇಲ್ಲ.

## “ಪವಿತ್ರ ಶಿವ ಮಹಾಪುರಾಣದಲ್ಲಿ ಸೃಷ್ಟಿ ರಚನೆಯ ಪ್ರಮಾಣ”

**(ಕಾಲ ಬ್ರಹ್ಮ ಹಾಗೂ ದುರ್ಗೆಯಿಂದ ಬ್ರಹ್ಮಾ, ವಿಷ್ಣು ಹಾಗೂ ಶಿವನ ಉತ್ಪತ್ತಿ)**

**ಇದರ ಪ್ರಮಾಣವು ಪವಿತ್ರ “ಶ್ರೀ ಶಿವಪುರಾಣ” ಗೀತಾಪ್ರೆಸ್ ಗೋರಖಪುರ ದಿಂದ ಪ್ರಕಾಶಿತ, ಹಿಂದಿ ಸಂಪಾದಕರು ಶ್ರೀಹನುಮಾನ್ ಪ್ರಸಾದ್ ಪೋದ್ದಾರ್, ಕನ್ನಡ ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್, ಇದರ 6ನೇ ಅಧ್ಯಾಯದ ಪ್ರಥಮ ಸೃಷ್ಟಿ ಖಂಡ ‘ರುದ್ರ ಸಂಹಿತೆ’ಯ ಪುಟ 81ರಲ್ಲಿ ಹೇಳಿದೆ, ಯಾರು ಮೂರ್ತಿ ರಹಿತವಾದ ಪರಬ್ರಹ್ಮ, ಅವರ ಮೂರ್ತಿಯೇ ಭಗವಂತ ಸದಾಶಿವ. ಇವರ ಶರೀರದಿಂದ ಒಂದು ಶಕ್ತಿ ಹೊರಹೊಮ್ಮಿತು. ಆ ಶಕ್ತಿ ಅಂಬಿಕಾ, ಪ್ರಕೃತಿ (ದುರ್ಗಾ) ತ್ರಿದೇವ ಜನನಿ (ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಶ್ರೀ ಶಿವನನ್ನು ಉತ್ಪನ್ನಿಸಿದ ತಾಯಿ) ಎಂದು ಕರೆಯಲ್ಪಡುತ್ತಾಳೆ. ಅವಳಿಗೆ ಎಂಟು ಭಜಗಳಿವೆ. ಯಾರು ಸದಾಶಿವನೊ, ಅವನನ್ನು ಶಂಭು, ಮಹೇಶ್ವರ ಎಂದೂ ಸಹ ಕರೆಯುತ್ತಾರೆ.**

**ರುದ್ರ ಸಂಹಿತೆಯ ಪುಟ ಸಂಖ್ಯೆ 82ರಲ್ಲಿ: ಅವನು ತನ್ನ ಎಲ್ಲಾ ಶರೀರಕ್ಕೆ ಭಸ್ಮಲೇಪನ ಮಾಡಿಕೊಂಡಿರುತ್ತಾನೆ. ಆ ಕಾಲ ರೂಪಿ ಬ್ರಹ್ಮನು ‘ಶಿವಲೋಕ’ ಎಂಬ ಒಂದು ಕ್ಷೇತ್ರದ ನಿರ್ಮಾಣ ಮಾಡಿದನು. ನಂತರ ಇಬ್ಬರೂ ಪತಿ–ಪತ್ನಿಯ ವ್ಯವಹಾರ ಮಾಡಿದರು ಇದರಿಂದ ಒಬ್ಬ ಪುತ್ರ ಹುಟ್ಟಿದ, ಅವನ ಹೆಸರು ವಿಷ್ಣು ಇಡಲಾಯಿತು. ಪುಟ ಸಂಖ್ಯೆ 83ರಲ್ಲಿ. ನಂತರ ರುದ್ರ ಸಂಹಿತೆಯ ಅಧ್ಯಾಯ 7ರ 84ನೇ ಪುಟದಲ್ಲಿ ಬ್ರಹ್ಮಾ ಹೇಳಿದ, “ನನ್ನ ಉತ್ಪತ್ತಿಯು (ಕಾಲ– ಬ್ರಹ್ಮ) ಸದಾಶಿವ ಮತ್ತು ದುರ್ಗೆ (ಪ್ರಕೃತಿ) ಯ ಸಂಯೋಗದಿಂದಲೇ ಅಂದರೆ ಪತಿ–ಪತ್ನಿ ವ್ಯವಹಾರದಿಂದ ಆಯ್ತು. ನನ್ನನ್ನು ನಂತರ ಮೂರ್ಛಿತಗೊಸಿದರು.”**

**ನಂತರ ರುದ್ರಸಂಹಿತೆಯ ಅಧ್ಯಾಯ ಸಂಖ್ಯೆ 9 ಪುಟ ಸಂಖ್ಯೆ 90ರಲ್ಲಿ ಬ್ರಹ್ಮಾ, ವಿಷ್ಣು, ಹಾಗೂ ರುದ್ರ ಈ ಮೂರು ದೇವರುಗಳಲ್ಲಿ ಗುಣ ಇದೆ. ಆದರೆ ಶಿವ (ಕಾಲ–ಬ್ರಹ್ಮ)ನಿಗೆ ಗುಣಾತೀತ ಎಂದು ಹೇಳಲಾಗಿದೆ.**

ಇಲ್ಲಿ ನಾಲ್ಕು ಸ್ಪಷ್ಟವಾದವು ಅಂದರೆ ಸದಾಶಿವ (ಕಾಲಬ್ರಹ್ಮ) ಮತ್ತು ಪ್ರಕೃತಿ (ದುರ್ಗೆ) ಯಿಂದ ಬ್ರಹ್ಮಾ, ವಿಷ್ಣು, ಶಿವನ ಉತ್ಪತ್ತಿಯಾಯಿತು. ಈ ಮೂರು ಭಗವಂತರ ( ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಹಾಗೂ ಶ್ರೀ ಶಿವ) ತಾಯಿ ಶ್ರೀ ದುರ್ಗೆ ಹಾಗೂ ತಂದೆ ಶ್ರೀ ಜ್ಯೋತಿ ನಿರಂಜನ್ ಬ್ರಹ್ಮನಾಗಿದ್ದಾನೆ. ಈ ಮೂವರು ಪ್ರಭು ರಜಗುಣ ಬ್ರಹ್ಮಾ, ಸತಗುಣ ವಿಷ್ಣು, ತಮಗುಣ ಶಿವರಾಗಿದ್ದಾರೆ.

# "ಪವಿತ್ರ ಭಗವದ್ಗೀತೆಯಲ್ಲಿ ಸೃಷ್ಟಿ ರಚನೆಯ ಪ್ರಮಾಣ"

ಇದರ ಪ್ರಮಾಣವನ್ನು ಗೀತೆಯ 14ನೇ ಅಧ್ಯಾಯದ 3 ರಿಂದ 5ನೇ ಶ್ಲೋಕಗಳಲ್ಲಿ ನೋಡಬಹುದು. ಕಾಲ ಬ್ರಹ್ಮ ಹೇಳುತ್ತಾನೆ: ಪ್ರಕೃತಿ ನನ್ನ ಹೆಂಡತಿ. ಬ್ರಹ್ಮನಾದ ನಾನು ಇವಳ ಗಂಡ. ನಮ್ಮಿಬ್ಬರ ಸಂಯೋಗದಿಂದ, ಸಕಲ ಜೀವಾತ್ಮಗಳು ಹಾಗೂ ಮೂರು ಗುಣಯುಕ್ತ (ರಜೋಗುಣ–ಬ್ರಹ್ಮಾ, ಸತೋಗುಣ–ವಿಷ್ಣು, ತಮೋಗುಣ–ಶಿವ ಇವರ) ಉತ್ಪತ್ತಿಯಾಯಿತು. ನಾನು (ಬ್ರಹ್ಮ) ಎಲ್ಲ ಜೀವಾತ್ಮಗಳ ತಂದೆ. ಪ್ರಕೃತಿ (ದುರ್ಗಾ) ಇವರ ತಾಯಿ, ನಾನು ಅವಳ ಗರ್ಭದಲ್ಲಿ ಬೀಜ ಸ್ಥಾಪನೆ ಮಾಡುತ್ತೇನೆ. ಅದರಿಂದ ಎಲ್ಲ ಜೀವಾತ್ಮಗಳ ಉತ್ಪತ್ತಿಯಾಗುತ್ತದೆ. ಪ್ರಕೃತಿಯಿಂದ ಉತ್ಪನ್ನವಾದ ಮೂರೂ ಗುಣಗಳು ಜೀವಿಗಳನ್ನು ಶರೀರದಲ್ಲಿ ಕರ್ಮದ ಆಧಾರದಿಂದ ಕಟ್ಟಿಡುತ್ತಾರೆ.ಇದೇ ಪ್ರಮಾಣವು 15ನೇ ಅಧ್ಯಾಯದ 1 ರಿಂದ 4 ಹಾಗೂ 16–17ನೆಯ ಶ್ಲೋಕಗಳಲ್ಲಿದೆ :–

**ಭಗವದ್ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕ :–**

ಊರ್ಧ್ವ ಮೂಲಮ್, ಅಧಃ, ಶಾಖಮ್, ಅಶ್ವತ್ಥಮ್, ಪ್ರಾಹುಃ, ಅವ್ಯಯಂ,
ಛಂದಾಂಸಿ, ಯಸ್ಯ, ಪರ್ಣಾನಿ, ಯಃ, ತಮ್, ವೇದ, ಸಃ, ವೇದವಿತ್ ॥

ಅನುವಾದ:– (ಊರ್ಧ್ವ ಮೂಲಮ್) ಮೇಲೆ ಪೂರ್ಣ ಪರಮಾತ್ಮ ಆದಿ ಪುರುಷ ಪರಮೇಶ್ವರ ರೂಪಿ ಬೇರು (ಅಧಃ ಶಾಖಮ್) ಕೆಳಗೆ ಮೂರೂ ಗುಣ (ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು ಹಾಗೂ ತಮೋಗುಣ ಶಿವ) ರೂಪಿನ ಶಾಖೆಗಳು (ಅವ್ಯಯಂ) ಅವಿನಾಶೀ (ಅಶ್ವತ್ಥಮ್) ವಿಸ್ತಾರವಾದ ಅರಳಿಮರವಿದೆ. (ಯಸ್ಯ) ಅದಕ್ಕೆ (ಛಂದಾಂಸಿ) ವೇದಗಳಲ್ಲಿನ ಛಂಧ (ಭಾಗ) ಗಳಂತೆ, ಪ್ರಪಂಚ ರೂಪಿ ವೃಕ್ಷದ ಭಾಗಗಳಾದ ಚಿಕ್ಕ ಚಿಕ್ಕ ಶಾಖೆಗಳು (ಪರ್ಣಾನಿ) ಎಲೆಗಳು ಇವೆ (ಪ್ರಾಹುಃ) ಎಂದು ಹೇಳಲಾಗಿದೆ. (ತಮ) ಆ ಪ್ರಪಂಚ ರೂಪದ ವೃಕ್ಷವನ್ನು (ಯಃ) ಯಾರು (ವೇದ) ವಿಸ್ತಾರವಾಗಿ ತಿಳಿದಿರುವರೋ, (ಸಃ) ಅವರೇ (ವೇದವಿತ್) ಪೂರ್ಣ ಜ್ಞಾನಿ ಅರ್ಥಾತ್ ತತ್ವದರ್ಶಿಯಾಗಿದ್ದಾರೆ".

**ಗೀತೆಯ 15ನೇ ಅಧ್ಯಾಯದ 2ನೇ ಶ್ಲೋಕ :–**

ಅಧಃ, ಚ, ಊರ್ಧ್ವಮ್, ಪ್ರಸೃತಾಃ, ತಸ್ಯ, ಶಾಖಾಃ, ಗುಣಪ್ರವೃದ್ಧಾಃ, ವಿಷಯ ಪ್ರವಾಲಾಃ
ಅಧಃ, ಚ, ಮೂಲಾನಿ, ಅನುಸಂತತಾನಿ, ಕರ್ಮಾನು ಬಂಧೀನಿ, ಮನುಷ್ಯಲೋಕೆ ॥

ಅನುವಾದ:– (ತಸ್ಯ) ಆ ವೃಕ್ಷದ (ಅಧಃ) ಕೆಳಗೆ (ಚ) ಮತ್ತು (ಊರ್ಧ್ವಮ್) ಮೇಲೆ (ಗುಣಪ್ರವೃದ್ಧಾಃ) ಮೂರು ಗುಣಗಳ ಬ್ರಹ್ಮಾ–ರಜೋಗುಣ, ವಿಷ್ಣು–ಸತೋಗುಣ, ಶಿವ–ತಮೋಗುಣ ರೂಪದಲ್ಲಿ (ಪ್ರಸೃತಾ) ಹರಡಿದ (ವಿಷಯ ಪ್ರವಾಲಾಃ) ವಿಕಾರ–ಕಾಮ–ಕ್ರೋಧ, ಮೋಹ, ಲೋಭ, ಅಹಂಕಾರ ರೂಪಿನ ಚಿಗುರು (ಶಾಖಾಃ) ಶಾಖೆ (ಬ್ರಹ್ಮಾ–ವಿಷ್ಣು–ಶಿವ) ಗಳು (ಕರ್ಮಾನುಬಂಧೀನಿ) ಜೀವಿಗಳನ್ನು ಕರ್ಮಗಳಲ್ಲಿ ಕಟ್ಟಿಹಾಕವ (ಮೂಲಾನಿ) ಬೇರು ಅಂದರೆ ಮುಖ್ಯ ಕಾರಣವಾಗಿವೆ (ಚ) ಹಾಗೂ (ಮನುಷ್ಯಲೋಕೆ) ಭೂಲೋಕದಲ್ಲಿ ಅಂದರೆ ಪೃಥ್ವಿಲೋಕದಲ್ಲಿ (ಅಧಃ) ಕೆಳಗೆ ನರಕ, 84 ಲಕ್ಷ ಯೋನಿಗಳಲ್ಲಿ (ಊರ್ಧ್ವಮ್) ಮೇಲೆ ಸ್ವರ್ಗ ಲೋಕ ಮೊದಲಾದವುಗಳಲ್ಲಿ (ಅನುಸಂತತಾನಿ) ವ್ಯವಸ್ಥೆ ಮಾಡಲಾಗಿದೆ.

**ಗೀತೆಯ 15ನೇ ಅಧ್ಯಾಯದ 3ನೇ ಶ್ಲೋಕ :–**

ನ, ರೂಪಮ್, ಅಸ್ಯ, ಇಹ, ತಥಾ, ಉಪಲಭ್ಯತೆ, ನ,ಅಂತಃ, ನ, ಚ, ಆದಿಃ ನ, ಚ,
ಸಂಪ್ರತಿಷ್ಠಾ, ಅಶ್ವತ್ಥಮ್, ಏನಮ್, ಸುವಿರೂಢಮೂಲಮ್, ಅಸಂಗಶಸ್ತ್ರೇಣ, ದೃಢೇನ ಛಿತ್ವಾ॥

ಅನುವಾದ:– (ಅಸ್ಯ) ಈ ರಚನೆಯ (ನ, ಆದಿಃ) ಪ್ರಾರಂಭವಾಗಲಿ (ಚ) ಮತ್ತು (ನ, ಅಂತಃ) ಅಂತ್ಯವಾಗಲಿ ಇಲ್ಲ (ತಥಾ) ಹಾಗೆಯೇ (ರುಪಮ್) ಸ್ವರೂಪವಾಗಲಿ (ಉಪಲಭ್ಯತೆ)

ಸಿಗುವುದಿಲ್ಲ, (ಚ) ಹಾಗೂ (ಇಹ) ಇಲ್ಲಿ ವಿಚಾರ ಕಾಲದಲ್ಲಿ ಅಂದರೆ ನನ್ನ ಮೂಲಕ ಕೊಡುತ್ತಿರುವ ಈ ಗೀತೆಯ ಜ್ಞಾನದಲ್ಲಿ ಪೂರ್ಣಮಾಹಿತಿ ನನಗೂ ಇಲ್ಲ (ಸಂಪ್ರತಿಷ್ಠಾ) ಏಕೆಂದರೆ ಎಲ್ಲ ಬ್ರಹ್ಮಾಂಡಗಳ ರಚನೆಯು ಪೂರ್ಣವಾಗಿ ಹೇಗಿದೆ ಎಂದು ನನಗೆ ಗೊತ್ತಿಲ್ಲ (ಏನಮ್) ಈ (ಸುವಿರೂಢಮೂಲ) ಉತ್ತಮರೀತಿಯಲ್ಲಿ ಸ್ಥಿರವಾಗಿರುವ (ಅಶ್ವತ್ಥಮ್) ಅಶ್ವತ್ಥವೃಕ್ಷರೂಪದ ಪ್ರಪಂಚ ರೂಪಿ ವೃಕ್ಷದ ಜ್ಞಾನವನ್ನು (ಅಸಂಗಶಸ್ತ್ರೇಣ)ಪೂರ್ಣ ಜ್ಞಾನರೂಪಿ (ದೃಢೇನ್) ದೃಢ ಸೂಕ್ಷ್ಮ ವೇದ ಅಂದರೆ ತತ್ವಜ್ಞಾನದ ಮೂಲಕ ತಿಳಿದು (ಛಿತ್ವಾ) ಕತ್ತರಿಸಿಹಾಕಬೇಕು ಅಂದರೆ ನಿರಂಜನನ ಭಕ್ತಿಯನ್ನು ಕ್ಷಣಿಕ ಸುಖ ಎಂದು ತಿಳಿದು ಬ್ರಹ್ಮಾ, ವಿಷ್ಣು, ಶಿವ, ದುರ್ಗಾ, ಬ್ರಹ್ಮ ಮತ್ತು ಪರಬ್ರಹ್ಮನಿಗಿಂತ ಮೇಲೆ ಪೂರ್ಣಬ್ರಹ್ಮನನ್ನು ಹುಡುಕಬೇಕು.

**ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕ :–**

ತತಃ, ಪದಂ, ತತ್, ಪರಿಮಾರ್ಗಿತವ್ಯಮ್, ಯಸ್ಮಿನ್, ಗತಾಃ, ನ, ನಿವರ್ತಂತಿ, ಭೂಯಃ,
ತಮ, ಏವ, ಚ, ಆದ್ಯಮ್, ಪುರುಷಮ್, ಪ್ರಪದ್ಯೇ, ಯತಃ, ಪ್ರವೃತ್ತಿಃ, ಪ್ರಸೃತಾ, ಪುರಾಣಿ।

ಅನುವಾದ:– ಯಾವಾಗ ತತ್ವದರ್ಶಿ ಸಂತನು ಸಿಗುವನೋ, (ತತಃ) ತದನಂತರ (ತತ್) ಆ ಪರಮಾತ್ಮನ (ಪದಮ್) ಪದ ಸ್ಥಾನ ಅಂದರೆ ಸತ್ಯಲೋಕವನ್ನು (ಪರಿಮಾರ್ಗಿತವ್ಯಮ್) ಸರಿಯಾದ ರೀತಿಯಲ್ಲಿ ಹುಡುಕಬೇಕು. (ಯಸ್ಮಿನ್) ಅಲ್ಲಿ (ಗತಾಃ) ಹೋಗುವುದರಿಂದ ಸಾಧಕನು (ಭೂಯಃ) ಪುನಃ (ನ, ನಿವರ್ತಂತಿ) ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ, (ಚ) ಮತ್ತು (ಯತಃ) ಯಾವ ಪರಮಾತ್ಮ ಪರಮ ಅಕ್ಷರ ಬ್ರಹ್ಮನಿಂದ (ಪುರಾಣೀ) ಮೊದಲಿನ (ಪ್ರವೃತಿಃ) ರಚನೆ–ಸೃಷ್ಟಿ (ಪ್ರಸ್ತುತಾ) ಉತ್ಪನ್ನವಾಗಿದೆ (ತಮ್) ಅಜ್ಞಾತ (ಆಧ್ಯಮ್) ಆದಿ ಯಮ ಅಂದರೆ ನಾನು ಕಾಲ ನಿರಂಜನ (ಪುರುಷಮ್) ಪೂರ್ಣ ಪರಮಾತ್ಮ (ಏವ) ನದೇ (ಪ್ರಪದ್ಯೈ) ಶರಣು ಹೊಂದಿದ್ದೇನೆ ಹಾಗೂ ಅವನನ್ನೇ ಪೂಜಿಸುತ್ತೇನೆ.

**ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕ :–**

ದ್ವೌ, ಇಮೌ, ಪುರಷೌ, ಲೋಕೇ, ಕ್ಷರಃ, ಚ, ಅಕ್ಷರಃ, ಏವ, ಚ,
ಕ್ಷರಃ, ಸರ್ವಾಣಿ, ಭೂತಾನಿ, ಕೂಟಸ್ಥಃ, ಅಕ್ಷರಃ, ಉಚ್ಯತೇ ॥ 16 ॥

ಅನುವಾದ:– (ಲೋಕೇ) ಈ ಪ್ರಪಂಚದಲ್ಲಿ (ದ್ವೌ) ಎರಡು ಪ್ರಕಾರದ (ಕ್ಷರಃ) ನಾಶವಾಗುವ, (ಚ) ಮತ್ತು (ಅಕ್ಷರಃ) ಅವಿನಾಶಿ (ಪುರುಷೌ) ಭಗವಂತ ಇದ್ದಾರೆ (ಏವ) ಈ ಪ್ರಕಾರ (ಇಮೌ) ಈ ಇಬ್ಬರೂ ಪ್ರಭುಗಳ ಲೋಕಗಳಲ್ಲಿ (ಸರ್ವಾಣಿ) ಸಂಪೂರ್ಣ (ಭೂತಾನಿ) ಜೀವಿಗಳ ಶರೀರವು (ಕ್ಷರಃ) ನಾಶವಾಗುತ್ತದೆ. (ಚ) ಮತ್ತು (ಕೂಟಸ್ಥಃ) ಜೀವಾತ್ಮಗಳು (ಅಕ್ಷರ) ಅವಿನಾಶೀ (ಉಚ್ಯತೆ) ಯಾಗಿರುತ್ತವೆ ಎಂದು ಹೇಳುತ್ತಾರೆ.

**ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕ :–**

ಉತ್ತಮಃ ಪುರಷಃ ತು ಅನ್ಯಃ, ಪರಮಾತ್ಮಾ, ಇತಿ, ಉದಾಹೃತಃ
ಯಃ, ಲೋಕತ್ರಯಮ್, ಆವಿಶ್ಯ, ಬಿಭರ್ತಿ, ಅವ್ಯಯಃ, ಈಶ್ವರಃ ॥ 17 ॥

ಅನುವಾದಃ– (ಉತ್ತಮಃ) ಉತ್ತಮ (ಪುರಷಃ) ಪ್ರಭು (ತು,) ವಂತು (ಅನ್ಯಃ) ಮೇಲಿನ ಕ್ಷರ ಪುರುಷ–ಅಕ್ಷರ ಪುರುಷ ಈ ಇಬ್ಬರಿಗಿಂತ ಬೇರೆಯೇ ಇದ್ದಾನೆ (ಇತಿ) ಅವನನ್ನು ವಾಸ್ತವದಲ್ಲಿ (ಪರಮಾತ್ಮಾ) ಪರಮಾತ್ಮಾ (ಉದಾಹೃತಃ) ಎನ್ನಲಾಗಿದೆ (ಯಃ) ಅವನು (ಲೋಕತ್ರಮಂ) ಮೂರೂ ಲೋಕಗಳಲ್ಲಿ (ಆವಿಷ್ಯ) ಪ್ರವೇಶಮಾಡಿ (ಭಿಬರ್ತಿ) ಎಲ್ಲರ ಧಾರಣೆ ಪೋಷಣೆ ಮಾಡುತ್ತಾನೆ ಹಾಗು (ಅವ್ಯಯಃ) ಅವಿನಾಶೀ (ಈಶ್ವರಃ) ಈಶ್ವರ (ಎಲ್ಲ ಪ್ರಭುಗಳಲ್ಲಿ ಶ್ರೇಷ್ಠ ಅಂದರೆ ಸಮರ್ಥ ಪ್ರಭು) ಎಂದು ಹೇಳಲಾಗಿದೆ.

ಭಾವಾರ್ಥ:- ಗೀತೆ ಜ್ಞಾನದಾತ ಪ್ರಭು ಕೇವಲ ಇಷ್ಟೆ ಹೇಳಿದ್ದಾನೆ. ಅಂದ್ರೆ "ಈ ಪ್ರಪಂಚವು ತಲೆಕೆಳಗಾಗಿ ನೇತಾಡುವ ವೃಕ್ಷವಿದ್ದಂತೆ ಎಂದು ತಿಳಿ" ಮೇಲೆ ಬೇರು ಪೂರ್ಣ ಪರಮಾತ್ಮ, ಕೆಳಗೆ ರೆಂಬೆ-ಕೊಂಬೆಗಳು ಇತ್ಯಾದಿ ಬೇರೆ ಭಾಗಗಳೆಂದು ತಿಳಿಯಿರಿ, ಈ ಪ್ರಪಂಚ ರೂಪಿ ವೃಕ್ಷದ ಪ್ರತಿಯೊಂದು ಬೇರೆ ಬೇರೆ ಭಾಗಗಳ ಬಗ್ಗೆ ಯಾವ ಸಂತ ತಿಳಿದಿರುವರೋ, ಅವರೇ ತತ್ವದರ್ಶಿ ಸಂತರು. ಅವರ ವಿಷಯದಲ್ಲಿ ಗೀತೆಯ ಅಧ್ಯಾಯ 4ರ 34ನೇ ಶ್ಲೋಕದಲ್ಲಿ ಹೇಳಿದ್ದಾನೆ. ಗೀತೆಯ 15ನೇ ಅಧ್ಯಾಯದ 2-3ನೇ ಶ್ಲೋಕಗಳಲ್ಲಿ ಮೂರು ಗುಣ ರೂಪಿ ಶಾಖೆಗಳಿವೆ ಎಂದು ಮಾತ್ರ ಹೇಳಲಾಗಿದೆ. ಇಲ್ಲಿ ವಿಚರಕಾಲದಲ್ಲಿ ಅಂದರೆ ಗೀತೆಯಲ್ಲಿ ನಿಮಗೆ ನಾನು (ಗೀತೆಯ ಜ್ಞಾನ ದಾತ) ಪೂರ್ಣ ಮಾಹಿತಿ ಕೊಡಲು ಸಾಧ್ಯವಿಲ್ಲ.

ಏಕೆಂದರೆ ನನಗೆ ಈ ಪ್ರಪಂಚದ ರಚನೆಯ ಆದಿ ಮತ್ತು ಅಂತ್ಯದ ಜ್ಞಾನವಿಲ್ಲ. ಅದಕ್ಕಾಗಿ ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ ಯಾರೋ ತತ್ವದರ್ಶಿ ಸಂತನಿಂದ ಆ ಪೂರ್ಣ ಪರಮಾತ್ಮನ ಜ್ಞಾನ ತಿಳಿಯಿರಿ ಎಂದು ಹೇಳಲಾಗಿದೆ. ಈ ಗೀತೆಯ ಅಧ್ಯಾಯ 15ರ 1ನೇ ಶ್ಲೋಕದಲ್ಲಿ ಆ ತತ್ವದರ್ಶಿ ಸಂತನ ಪರಿಚಯ ಹೇಳಲಾಗಿದೆ ಅಂದರೆ ಈ ಪ್ರಪಂಚ ರೂಪೀ ವೃಕ್ಷದ ಪ್ರತ್ಯೇಕ ಭಾಗದ ಜ್ಞಾನ ನೀಡುವನು. ಅವನಿಗೇ ಕೇಳಿ. ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿದ್ದಾನೆ. ಆ ಸಂತ ದೊರೆತ ನಂತರ ಆ ಪರಮಪದ ಪರಮೇಶ್ವರನ ಹುಡುಕಾಟ ಮಾಡಬೇಕು ಅಂದರೆ ಆ ತತ್ವದರ್ಶಿ ಸಂತ ಹೇಳಿದ ಅನುಸಾರ ಸಾಧನೆಮಾಡಿ, ಅದರಿಂದ ಪೂರ್ಣ ಮೋಕ್ಷ ಪ್ರಾಪ್ತವಾಗುವುದು.

ಗೀತೆಯ 15ನೇ ಅಧ್ಯಾಯದ 16-17ನೇ ಶ್ಲೋಕಗಳಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾನೆ ಮೂರು ಪ್ರಭುಗಳಿದ್ದಾರೆ. ಒಬ್ಬ ಕ್ಷರಪುರುಷ (ಬ್ರಹ್ಮ) ಎರಡನೆಯವ ಅಕ್ಷರ ಪುರುಷ (ಪರಬ್ರಹ್ಮ) ಮೂರನೆಯವ ಪರಮ ಅಕ್ಷರ ಪುರುಷ (ಪೂರ್ಣ ಬ್ರಹ್ಮ). ಕ್ಷರಪುರುಷ ಮತ್ತು ಅಕ್ಷರ ಪುರುಷ ವಾಸ್ತವದಲ್ಲಿ ಅವಿನಾಶಿ ಅಲ್ಲ. ಆ ಅವಿನಾಶಿ ಪರಮಾತ್ಮನು ಇವರಿಬ್ಬರಿಗಿಂತ ಬೇರೆ ಇದ್ದಾನೆ. ಅವನೇ ಎಲ್ಲಾ ಲೋಕಗಳಲ್ಲಿ ಪ್ರವೇಶಿಸಿ ಎಲ್ಲರ ಧಾರಣೆ-ಪೋಷಣೆ ಮಾಡುತ್ತಾನೆ.

ಮೇಲೆ ಹೇಳಿರುವ ಗೀತೆಯ 15ನೇ ಅಧ್ಯಾಯದ 1ರಿಂದ 4ನೇ ಹಾಗೂ 16-17ನೇ ಶ್ಲೋಕಗಳಲ್ಲಿ ಪ್ರಮಾಣಿತವಾಯಿತು ತಲೆಕೆಳಗಾಗಿರುವ ಪ್ರಪಂಚ ರೂಪೀ ವೃಕ್ಷದ ಬೇರು "ಪರಮ ಅಕ್ಷರ ಬ್ರಹ್ಮ" ಅಂದರೆ ಪೂರ್ಣ ಬ್ರಹ್ಮನು, ಅವನಿಂದಲೇ ಪೂರ್ತಿ ವೃಕ್ಷದ ಪಾಲನೆ ಆಗುತ್ತದೆ. ಯಾವ ಭಾಗ ಭೂಮಿಯಿಂದ ತಕ್ಷಣ ಕಾಣುವದು ಅದು ಕಾಂಡ ಇರುತ್ತದೆ ಅದನ್ನು ಅಕ್ಷರ ಪುರಷ ಅರ್ಥಾತ್ ಪರಬ್ರಹ್ಮ ಎಂದು ತಿಳಿಯಿರಿ. ಆ ಕಾಂಡದಿಂದ ಹೊರಬರುವ ಬೇರೆ ದಪ್ಪ ಕೊಂಬೆ ಇದೆ. ಅದರಲ್ಲಿನ ಒಂದು ಕೊಂಬೆಯನ್ನು ಬ್ರಹ್ಮ ಅರ್ಥಾತ್ ಕ್ಷರ ಪುರಷ ಎಂದು ತಿಳಿಯಿರಿ, ಅದೇ ಕೊಂಬೆಯಿಂದ ಮೂರು ಶಾಖೆಗಳು ಬರುತ್ತವೆ. ಅವುಗಳನ್ನು ಬ್ರಹ್ಮಾ, ವಿಷ್ಣು, ಮಹೇಶ್ವರ ಎಂದು ತಿಳಿಯಿರಿ.

ಶಾಖೆಯಲ್ಲಿನ ಎಲೆಗಳನ್ನು ಪ್ರಪಂಚದ ಪ್ರಾಣಿಗಳೆಂದು ತಿಳಿಯಿರಿ. ಗೀತೆಯ 15ನೇ ಅಧ್ಯಾಯದ 16-17ನೇ ಶ್ಲೋಕಗಳಲ್ಲಿ ಸ್ಪಷ್ಟವಾಗಿದೆ-ಕ್ಷರಪುರುಷ (ಬ್ರಹ್ಮ), ಅಕ್ಷರ ಪುರುಷ (ಪರಬ್ರಹ್ಮ) ಇವರ ಎರಡೂ ಲೋಕಗಳಲ್ಲಿ ಎಷ್ಟು ಜೀವಿಗಳಿವೆಯೋ, ಅವುಗಳ ಸ್ಥೂಲಶರೀರ ನಾಶವಾಗುವುದು. ಅದರಲ್ಲಿನ ಜೀವಾತ್ಮ (ಸೂಕ್ಷ್ಮ ಶರೀರ) ಅವಿನಾಶಿಯಾಗಿದೆ. ಕ್ಷರ-ಅಕ್ಷರ ಎರಡೂ ಪ್ರಭುಗಳ ಲೋಕದಲ್ಲಿನ ಸಕಲ ಜೀವಿಗಳು, ನಾಶವಾಗುವಂತಹವು. ಅಕ್ಷರ ಪುರುಷನನ್ನು ಅವಿನಾಶೀ ಎಂದು ಹೇಳಿದ್ದಾರೆ. ಆದರೆ ಅವಿನಾಶಿಯಲ್ಲ, ಅವಿನಾಶಿ ಪರಮಾತ್ಮಾ ಬೇರೆಯೇ ಇದ್ದಾನೆ. ಅವನು ಮೂರು ಲೋಕಗಳಲ್ಲಿ ಪ್ರವೇಶ ಮಾಡುತ್ತಾನೆ. ಸಕಲ ಜೀವಿಗಳ ಪಾಲನೆ ಪೋಷಣೆ ಮಾಡುತ್ತಾನೆ. ಮೇಲಿನ ವಿವರಣೆಯಲ್ಲಿ ಮೂರು ಪ್ರಭುಗಳ ಬೇರೆ ಬೇರೆ ವಿವರಣೆ ಕೊಟ್ಟಿದೆ.

## “ಪವಿತ್ರ ಬೈಬಲ್ ಹಾಗೂ ಪವಿತ್ರ ಕುರಾನ್ ಶರೀಫ್‌ನಲ್ಲಿ ಸೃಷ್ಟಿ ರಚನೆಯ ಪ್ರಮಾಣ”

**ಇದರ ಪ್ರಮಾಣವು ಪವಿತ್ರ ಬೈಬ್‌ಲ್ ಹಾಗೂ ಪವಿತ್ರ ಕುರಾನ್ ಶರೀಫ್ ನಲ್ಲೂ ಇದೆ.**

**ಕುರಾನ್ ಶರೀಫ್‌ನಲ್ಲಿ ಪವಿತ್ರ ಬೈಬಲ್‌ನ ಜ್ಞಾನವೂ ಇದೆ. ಆದ್ದರಿಂದ ಈ ಎರಡೂ ಪವಿತ್ರ ಸದ್ ಗ್ರಂಥಗಳು ಸೇರಿ ಪ್ರಮಾಣಿತಗೊಳಿಸಿವೆ. ಯಾರು ಮತ್ತು ಹೇಗೆ ಸೃಷ್ಟಿಯ ರಚನೆ ಮಾಡಿದರು ಹಾಗು ಅವರ ವಾಸ್ತವಿಕ ಹೆಸರೇನು?**

**ಪವಿತ್ರ ಬೈಬಲ್ (ಉತ್ಪತ್ತಿಗ್ರಂಥ ಪುಟ ಸಂಖ್ಯೆ 2 ರಲ್ಲಿ ಅ. 1:20– 2:5 ರಲ್ಲಿ)**

**6ನೇಯ ದಿನ:– ಪ್ರಾಣಿ ಮತ್ತು ಮನುಷ್ಯ :–**

ಬೇರೆ ಪ್ರಾಣಿಗಳ ರಚನೆ ಮಾಡಿ (26). ನಂತರ ಪರಮೇಶ್ವರನು ಹೇಳಿದನು, ಮನುಷ್ಯರನ್ನು ನಮ್ಮ ಸ್ವರೂಪದಂತೆಯೇ ನಮ್ಮ ಸಮಾನತೆಯಲ್ಲಿ ಮಾಡೋಣ. ಅವರು ಬೇರೆ ಎಲ್ಲ ಪ್ರಾಣಿಗಳನ್ನು ವಶದಲ್ಲಿ ಇರಿಸುವರು (27). ಅಗ ಪರಮೇಶ್ವರ ತನ್ನ ಸ್ವರೂಪದಂತೆಯೇ ಮನುಷ್ಯರನ್ನು ಉತ್ಪನ್ನ ಮಾಡಿದನು. ನರ ಮತ್ತು ನಾರಿ ಉತ್ಪತ್ತಿ ಮಾಡಿ ಮನುಷ್ಯರ ಸೃಷ್ಟಿ ಮಾಡಿದನು.

(29). ಪ್ರಭುವು ಮನುಷ್ಯನಿಗೆ ಆಹಾರಕ್ಕಾಗಿ ಬಹಳ ಬೀಜಗಳುಳ್ಳ ಚಿಕ್ಕ ಮರಗಳು ಹಾಗೂ ಬೀಜಗಳಿಂದ ಕೂಡಿದ ಫಲಗಳನ್ನು ಉತ್ಪತ್ತಿ ಮಾಡಿದ. (ಮಾಂಸ ತಿನ್ನಲು ಹೇಳಲಿಲ್ಲ)

**7ನೇಯ ದಿನ:– ವಿಶ್ರಾಮದ ದಿನ :–**

ಪರಮೇಶ್ವರನು ಆರು ದಿನಗಳಲ್ಲಿ ಸರ್ವ ಸೃಷ್ಟಿಯ ರಚನೆ ಮಾಡಿ, ಏಳನೇ ದಿನ ವಿಶ್ರಾಂತಿ ಪಡೆದನು.

ಪವಿತ್ರ ಬೈಬಲ್ ಸ್ಪಷ್ಟಪಡಿಸಿತು ಪರಮಾತ್ಮನು ಮಾನವ ಸದೃಶ್ಯ ಸಶರೀರವುಳ್ಳವನಾಗಿದ್ದಾನೆ. ಅವನು ಆರು ದಿನಗಳಲ್ಲಿ ಸಂಪೂರ್ಣ ಸೃಷ್ಟಿಯ ರಚನೆ ಮಾಡಿದನು. ನಂತರ ಏಳನೇ ದಿನ ವಿಶ್ರಾಂತಿ ಪಡೆದನು.

**“ಪವಿತ್ರ ಕುರಾನ್ ಶರೀಫ್ (ಸುರತ್ ಫುರ್ಕಾನಿ 25, ಆಯತ್ ಸಂಖ್ಯೆ 52, 58, 59)**

ಆಯತ 52:– ಫಲಾ ತುತಿಅಲ್–ಕಾಫಿರನ್ ವ ಜಹಿದಹುಮ್ ಬಿಹೀ ಜಿಹಾದನ್ ಕಬೀರಾ (ಕಬೀರನ್) ॥52॥

**ಇದರ ಭಾವಾರ್ಥ ಹೀಗಿದೆ:– ಹಜರತ್ ಮಹಮ್ಮದ್ ರವರ ಖುದಾ(ಪ್ರಭು) ಹೇಳುತ್ತಿದ್ದಾನೆ. ಹೇ ಪೈಗಂಬರ್ ನೀವು ಕಾಫಿರರ (ಯಾರು ಒಬ್ಬ ಪ್ರಭುವಿನ ಭಕ್ತಿಯನ್ನು ತ್ಯಜಿಸಿ, ಅನ್ಯ ದೇವಿ–ದೇವತೆಗಳ ಹಾಗೂ ಮೂರ್ತಿ, ಮಕಬರಾ ಮುಂತಾದವುಗಳ ಪೂಜೆ ಮಾಡುತ್ತಾರೆ) ಮಾತನ್ನು ನಂಬಬೇಡಿ. ಏಕೆಂದರೆ ಅವರು ಕಬೀರರನ್ನು ಪೂರ್ಣ ಪರಮಾತ್ಮ ಎಂದು ಒಪ್ಪುವುದಿಲ್ಲ. ನೀವು ನನ್ನಿಂದ ಕೊಡಲಾಗಿರುವ ಕುರಾನಿನ ಜ್ಞಾನದ ಆಧಾರದಲ್ಲಿ ದೃಢವಾಗಿರಿ. ಕಬೀರರೇ ಪೂರ್ಣ ಪ್ರಭುವಾಗಿದ್ದಾರೆ. ಹಾಗೂ ಕಬೀರ್ ಅಲ್ಲಾಹನಿಗಾಗಿ ಸಂಘರ್ಷ ಮಾಡಿ (ಜಗಳವಾಡಬೇಡಿ) ಅಂದರೆ ದೃಡವಾಗಿರು.**

ಆಯತ 58 :– ವ ತವಕ್ಕಲ್ ಅಲಲ್–ಹರಿಲ್ಲಜೀ ಲಾ ಯಮೂತು ವ ಸಬ್ಬಿಹ್ ಬಿಹಮ್‌ದಿಹೀ ವ ಕಫಾ ಬಿಹಿ ಬಿಜುನುಬಿ ಅಬಾದಿಹೀ ಖಬೀರಾ (ಕಬೀರಾ) ॥58॥

**ಭಾವಾರ್ಥ:– ಹಜರತ್ ಮಹಮ್ಮದ್ ರವರು ಯಾರನ್ನು ತಮ್ಮ ಪ್ರಭು ಎಂದು ಒಪ್ಪಿರುತ್ತಾರೋ ಆ ಅಲ್ಲಾಹ (ಪ್ರಭು) ಬೇರೆ ಒಬ್ಬ ಪೂರ್ಣ ಪ್ರಭುವಿನತ್ತ ಸಂಕೇತ ಮಾಡುತ್ತಿದ್ದಾನೆ ಮತ್ತು ಹೇಳುತ್ತಿದ್ದಾನೆ. “ಹೇ ಪೈಗಂಬರ್ ಯಾರು ಜಿಂದಾ ಮಹಾತ್ಮನ ರೂಪದಲ್ಲಿ ಬಂದು ನಿನ್ನನ್ನು ಭೇಟಿ ಮಾಡಿದ್ದರೋ, ಆ ಕಬೀರ್ ಪರಮಾತ್ಮನಲ್ಲಿ ವಿಶ್ವಾಸವಿಡು. ಅವರು ಎಂದೂ**

ಮರಣ ಹೊಂದುವುದಿಲ್ಲ ಅಂದರೆ ಅವಿನಾಶೀಯಾಗಿದ್ದಾರೆ. ಹೊಗಳಿಕೆಯೊಂದಿಗೆ ಅವರ ನಿರ್ಮಲತೆ (ಪವಿತ್ರ) ಯ ಗುಣಗಾನ ಮಾಡುತ್ತಲಿರು. ಆ ಕಬೀರ್ ಅಲ್ಲಾಹ್ ಈ ಪೂಜಿಸಲು ಯೋಗ್ಯರು ಹಾಗೂ ತಮ್ಮ ಉಪಾಸಕರ ಸಕಲ ಪಾಪಗಳನ್ನೂ ನಾಶಮಾಡುವವರಾಗಿದ್ದಾರೆ.

ಆಯತ 59:– "ಅಲ್ಲಜೀ ಖಲಕಸ್ಸಮಾವಾತಿ ವಲಅರ್ಜ್ ವ ಮಾ ಬೈನಹುಮಾ ಫೀ ಸಿತ್ತತಿ ಅಯ್ಯಾಮಿನ್ ಸುಮ್ಮಸ್ತವಾ ಅಲಲ್ ಅರ್ಶಿ ಅರ್ ಹಮಾನು ಫಸಅಲ್ ಬಿಹೀ ಖಬೀರನ್" (ಕಬೀರನ್ ) ॥ 59 ॥

ಭಾವಾರ್ಥ:– ಹಜರತ್ ಮಹಮ್ಮದರಿಗೆ ಕುರಾನ್ ಶರೀಫ್‌ನ್ನು ಬೋಧಿಸಿದ ಪ್ರಭು (ಅಲ್ಲಾಹ) ಹೇಳುತ್ತಿದ್ದಾನೆ. ಭೂಮಿ ಮತ್ತು ಆಕಾಶಗಳ ನಡುವಿನಲ್ಲಿ ಏನೆಲ್ಲಾ ಇದೆಯೋ, ಅದನ್ನೆಲ್ಲಾ ಸೃಷ್ಟಿಮಾಡಿದವರು ಕಬೀರ್ ಅಲ್ಲಾಹ . ಅವರು ಈ ಸೃಷ್ಟಿಕಾರ್ಯವನ್ನು ಆರು ದಿನಗಳಲ್ಲಿ ಮುಗಿಸಿ, ಏಳನೆಯ ದಿನ ತಮ್ಮ ಸತ್ಯಲೋಕದ ಸಿಂಹಾಸನದಲ್ಲಿ ವಿರಾಜಮಾನ (ಕುಳಿತರು) ರಾದರು. ಆ ಪೂರ್ಣ ಪರಮಾತ್ಮನ ಪ್ರಾಪ್ತಿ ಹೇಗೆ ಆಗುವುದು ಹಾಗೂ ಅವರ ಬಗ್ಗೆ ವಾಸ್ತವಿಕ ಜ್ಞಾನ ಪಡೆಯಲು ಪೂರ್ಣ ಜ್ಞಾನಿಯಾದ (ಬಾಖಬರ) ತತ್ಮದರ್ಶಿ ಸಂತರನ್ನು ಕೇಳಿ ತಿಳಿದುಕೊ ನನಗೆ ಅವರ ಬಗ್ಗೆ ಏನೂ ಗೊತ್ತಿಲ್ಲ.

ಮೇಲೆ ಹೇಳಿರುವ ಎರಡು ಪವಿತ್ರ ಧರ್ಮಗಳ ಪವಿತ್ರ ಗ್ರಂಥಗಳು ಕೂಡಿ ಪ್ರಮಾಣಿತಗೊಳಿಸಿದವು ಅಂದರೆ ಸಕಲ ಸೃಷ್ಟಿಯನ್ನು ರಚಿಸಿದವ, ಸರ್ವಪಾಪ ವಿನಾಶಕ, ಸರ್ವಶಕ್ತಿಮಾನ, ಅವಿನಾಶಿ, ಪರಮಾತ್ಮ ಮಾನವ ಸದೃಶ್ಯ ಶರೀರದಲ್ಲಿ ಸತ್ಯಲೋಕದಲ್ಲಿ ಇರುವವರು, ಕಬೀರರೇ ಆಗಿದ್ದಾರೆ. ಅವರನ್ನೇ ಅಲ್ಲಾಹು ಅಕಬಿರೂ ಎಂದೂ ಸಹ ಕರೆಯುತ್ತಾರೆ.

ಗೌರವಾನ್ವಿತ ಧರ್ಮ್‌ದಾಸರು, ಪೂಜ್ಯ ಕಬೀರರನ್ನು ಕೇಳಿದರು ಹೇ ಸರ್ವಶಕ್ತಿಮಾನ್ ! ಇಂದಿನತನಕ ಯಾರೂ ಸಹ ಈ ತತ್ವಜ್ಞಾನವನ್ನು ತಿಳಿಸಿಲ್ಲ. ವೇದಗಳನ್ನು ಬಲ್ಲ ಜ್ಞಾನಿಗಳೂ ಸಹ ತಿಳಿಸಿಲ್ಲ. ಇದರಿಂದ ಸ್ಪಷ್ಟವಾಯ್ತು. ನಾಲ್ಕು ಪವಿತ್ರ ವೇದಗಳು ನಾಲ್ಕು ಪವಿತ್ರ ಕತೇಬ್ (ಕುರಾನ್ ಶರೀಫ್ ಮುಂತಾದವು) ಗಳು ಸುಳ್ಳಾಗಿವೆ. ಪೂರ್ಣ ಪರಮಾತ್ಮ ಕಬೀರರು ಹೇಳಿದರು:–

"ಕಬೀರ್, ಬೇದ ಕತೇಬ್ ಝೂಠೆ ನಹೀ ಭಾಯಿ, ಝೂಠೆ ಹೈ ಜೋ ಸಮಝೆ ನಾಹಿ।"

ಭಾವಾರ್ಥ:– ನಾಲ್ಕು ಪವಿತ್ರ ವೇದಗಳು (ಋಗ್ವೇದ, ಯಜುರ್ವೇದ, ಅಥರ್ವವೇದ, ಸಾಮವೇದ) ಹಾಗೂ ನಾಲ್ಕು ಕತೇಬ್ (ಕುರಾನ್ ಶರೀಪ್, ಜಬೂರ, ತೌರಾತ, ಇಂಜಿಲ) ಗಳು ತಪ್ಪಲ್ಲ. ಆದರೆ ಯಾರು ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಅವರು ಮೂರ್ಖರು.

## "ಪೂಜ್ಯ ಕಬೀರ್ ಪರಮೇಶ್ವರರ ಅಮೃತಮಯ ವಾಣಿಯಲ್ಲಿ ಸೃಷ್ಟಿ ರಚನೆ"

ವಿಶೇಷ :– ಈ ಕೆಳಗಿನ ಅಮೃತವಾಣಿ ಇಸವಿ **1403** ರಿಂದ {ಪೂಜ್ಯ ಕವಿರ್ದೇವ (ಕಬೀರ್ ಪರಮೇಶ್ವರ) ಲೀಲಾಮಯ ಶರೀರದಲ್ಲಿ **5** ವರ್ಷದವರಿದ್ದಾಗ} ಇಸವಿ **1518**ರ {ಮಗಹರ ಸ್ಥಾನದಿಂದ ಸಶರೀರ ಸತ್ಯಲೋಕಕ್ಕೆ ಕಬೀರ ಪರಮೇಶ್ವರರು ಹೋದಾಗ) ಮಧ್ಯ, ಸುಮಾರು **600** ವರ್ಷಗಳ ಹಿಂದೆ ಪರಮ ಪೂಜ್ಯ ಕಬೀರ ಪರಮೇಶ್ವರರ ಮೂಲಕ ತಮ್ಮ ಆತ್ಮೀಯ ಸೇವಕ (ದಾಸ ಭಕ್ತ) ಗೌರವಾನ್ವಿತ ಧರ್ಮದಾಸ್ ಸಾಹೇಬರಿಗೆ ಹೇಳಿದ್ದರು ಹಾಗು ಧರ್ಮದಾಸರು ಅದನ್ನು ಲಿಪಿಬದ್ಧಗೊಳಿಸಿದ್ದರು. ಆದರೆ ಆ ಸಮಯದಲ್ಲಿನ ಪವಿತ್ರ ಹಿಂದೂ ಹಾಗೂ ಪವಿತ್ರ ಮುಸಲ್ಮಾನರ ತತ್ವಜ್ಞಾನವಿಲ್ಲದ ಗುರುಗಳೆನಿಸಿ ಕೊಂಡಿದ್ದವರು "ಈ ನೇಕಾರ ಕಬೀರನು ಸುಳ್ಳುಗಾರ" ಎಂದು ಹೇಳಿದರು. "ಯಾವುದೇ ಸದ್‌ಗ್ರಂಥದಲ್ಲಿ ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಹಾಗೂ ಶ್ರೀ ಶಿವ ರವರ ತಾಯಿ–ತಂದೆಯ ಹೆಸರು ಇಲ್ಲ. ಈ ಮೂರು ಪ್ರಭುಗಳು ಅವಿನಾಶಿ ಇವರ ಜನನ–ಮರಣ ಆಗುವುದಿಲ್ಲ. ಪವಿತ್ರ ವೇದಗಳಲ್ಲಾಗಲಿ ಪವಿತ್ರ ಕುರಾನ್ ಶರೀಫ್ ಮುಂತಾದವುಗಳಲ್ಲಾಗಲಿ ಕಬೀರ್ ಪರಮೇಶ್ವರರ ಪ್ರಮಾಣ (ಸಾಕ್ಷಿ) ಇಲ್ಲ. ಹಾಗೂ

ಪರಮಾತ್ಮನನ್ನು ನಿರಾಕಾರ ಎಂದು ಬರೆದಿದೆ. ನಾವು ಪ್ರತಿ ದಿನ ಓದುತ್ತೇವೆ. ಮುಗ್ಧ ಆತ್ಮಗಳು (ಜೀವಿಗಳು) ಈ ಚತುರ ಗುರುಗಳ ಮೇಲೆ ವಿಶ್ವಾಸ ಮಾಡಿದರು. ಇವರು ಸತ್ಯ ಹೇಳುತ್ತಿದ್ದಾರೆಂದು. ಈ ಕಬೀರ್ ನೇಕಾರನು ಖಂಡಿತ ಅಶಿಕ್ಷಿತನು ಹಾಗೂ ಗುರುಗಳು ಶಿಕ್ಷಿತರಾಗಿದ್ದಾರೆ. ಇವತ್ತು ಅದೆ ಸತ್ಯ ಬೆಳಕಿಗೆ ಬರುತ್ತಿದೆ ಹಾಗು ನಮ್ಮ ಎಲ್ಲ ಪವಿತ್ರ ಧರ್ಮಗಳ, ಪವಿತ್ರ ಧರ್ಮಗ್ರಂಥಗಳು ಸಾಕ್ಷಿ ನೀಡುತ್ತಿವೆ.

ಇದರಿಂದ ಸ್ಪಷ್ಟವಾಯ್ತೆನೆಂದರೆ, ಪೂರ್ಣ ಪರಮೇಶ್ವರ, ಸರ್ವ ಸೃಷ್ಟಿಯ ರಚನಾಕಾರ, ಪೂರ್ಣ ಬ್ರಹ್ಮ, ಹಾಗೂ ಸರ್ವಜ್ಞ ಕವಿರ್ದೇವ (ಕಬೀರ್ ಪರಮೇಶ್ವರ)ರೇ ಆಗಿದ್ದಾರೆ. ಇವರು ಕಾಶೀ (ಬನಾರಸ್) ಯಲ್ಲಿ ಕಮಲದ ಹೂವಿನ ಮೇಲೆ ಪ್ರಕಟಗೊಂಡಿದ್ದರು. 120 ವರ್ಷಗಳವರೆಗೆ ತಮ್ಮ ವಾಸ್ತವಿಕ ತೇಜೋಮಯ ಶರೀರದ ಮೇಲೆ ಮಾನವ ಸದೃಶ್ಯವಾದ ಶರೀರ ಕಡಿಮೆ ಪ್ರಕಾಶಮಾಡಿ ಇದ್ದರು. ಹಾಗು ತಮ್ಮ ಮೂಲಕ ರಚಿಸಿದ್ದ ಸೃಷ್ಟಿಯ ಸರಿಯಾದ ವಾಸ್ತವಿಕ ತತ್ವಜ್ಞಾನವನ್ನು ನೀಡಿ, ಸಶರೀರ ಸತ್ಯಲೋಕಕ್ಕೆ ಹೋದರು.

(ಓದುಗರೇ ದಯವಿಟ್ಟು ಓದಿ ಈ ಕೆಳಗಿನ ಅಮೃತವಾಣಿಗಳನ್ನ ಕಬೀರ್ ಪರಮೇಶ್ವರರರಿಂದಲೇ ಉಚ್ಛಾರಿತ )

ಧರ್ಮದಾಸ್ ಯಹ್ ಜಗ್ ಬೌರಾನಾ । ಕೊಯಿ ನ ಜಾನೆ ಪದ್ ನಿರವಾನಾ ॥
ಯಹೀ ಕಾರಣ್ ಮ್ಯೆ ಕಥಾ ಪಸಾರಾ । ಜಗಸೆ ಕಹಿಯೊ ರಾಮ್ ನಿಯಾರಾ ॥
ಯಹೀ ಜ್ಞಾನ್ ಜಗ್ ಜೀವ್ ಸುನಾವೋ । ಸಬ್ ಜೀವೋಂಕಾ ಭರಮ್ ನಶಾವೊ ॥
ಭರಮ್ ಗಯೆ ಜಗ್ ವೇದ್ ಪುರಾನಾ । ಆದಿ ರಾಮ್ ಕಾ ಭೇದ್ ನ ಜಾನಾ ॥
ರಾಮ್ ರಾಮ್ ಸಬ್ ಜಗತ್ ಬಖಾನೆ । ಆದಿ ರಾಮ್ ಕೋಈ ಬಿರಲಾ ಜಾನೆ ॥
ಜ್ಞಾನೀ ಸುನೆ ಸೋ ಹಿರದೈ ಲಗಾಈ । ಮೂರ್ಖ್ ಸುನೆ ಸೋ ಗಮ್ಯ್ ನಾ ಪಾಈ॥
ಅಬ್ ಮ್ಯೆ ತುಮಸೆ ಕಹೊ ಚಿತಾಯಿ । ತ್ರಿದೇವನ್ ಕೀ ಉತ್ಪತ್ತಿ ಭಾಈ ॥
ಕುಛ್ ಸಂಕ್ಷೇಪ್ ಕಹೂಂ ಗುಹರಾಈ । ಸಬ್ ಸಂಶಯ್ ತುಮ್ಹರೆ ಮಿಟ್ ಜಾಈ
ಮಾಂ ಅಷ್ಟಂಗೀ ಪಿತಾ ನಿರಂಜನ್ । ವೇ ಜಮ್ ದಾರುಣ್ ವಂಶನ್ ಅಂಜನ್ ॥
ಪಹಿಲೆ ಕೀನ್ಹ ನಿರಂಜನ್ ರಾಈ ॥ ಪೀಛೆಸೆ ಮಾಯಾ ಉಪಜಾಈ ॥
ಮಾಯಾ ರೂಪ್ ದೇಖ್ ಅತಿ ಶೋಭಾ । ದೇವ್ ನಿರಂಜನ್ ತನ್-ಮನ್ ಲೋಭಾ॥
ಕಾಮದೇವ್ ಧರ್ಮರಾಯ್ ಸತಾಯೆ । ದೇವಿ ಕೊ ತುರತ್‌ಹೀ ಧರ್ ಖಾಯೆ ॥
ಪೇಟ್ ಸೆ ದೇವಿ ಕರೀ ಪುಕಾರಾ । ಹೇ ಸಾಹಬ್ ಮೇರಾ ಕರೋ ಉಬಾರಾ ॥
ಟೇರ್ ಸುನೀ ತಬ್ ಹಮ್ ತಹಾ ಆಯೆ । ಅಷ್ಟಂಗೀ ಕೊ ಬಂದ್ ಛುಡಾಯೆ ॥
ಸತ್‌ಲೋಕ್ ಮೇ ಕೀನ್ಹಾ ದುರಾಚಾರಿ । ಕಾಲ್ ನಿರಂಜನ್ ದಿನ್ಹಾ ನಿಕಾರಿ ॥
ಮಾಯಾ ಸಮೇತ್ ದಿಯಾ ಭಗಾಈ । ಸೋಲಹ್ ಸಂಖ್ ಕೋಸ್ ದೂರೀ ಪರ್ ಆಈ॥
ಅಷ್ಟಂಗೀ ಔರ್ ಕಾಲ್ ಅಬ್ ದೋಈ । ಮಂದ್ ಕರ್ಮಸೆ ಗಏ ಬಿಗೋಈ ॥
ಧರ್ಮರಾಯ್ ಕೊ ಹಿಕಮತ್ ಕೀನ್ಹಾ । ನಖ್ ರೇಖಾ ಸೆ ಭಗಕರ್ ಲೀನ್ಹಾ ॥
ಧರ್ಮರಾಯ್ ಕಿನ್ಹಾ ಭೋಗ್ ವಿಲಾಸಾ । ಮಾಯಾ ಕೊ ರಹೀ ತಬ್ ಆಸಾ ॥
ತೀನ್ ಪುತ್ರ್ ಅಷ್ಠಂಗೀ ಜಾಯೆ । ಬ್ರಹ್ಮಾ, ವಿಷ್ಣು, ಶಿವ್ ನಾಮ್ ಧರಾಯೆ ॥
ತೀನ್ ದೇವ್ ವಿಸ್ತಾರ್ ಚಲಾಯೆ । ಇನಮೆ ಯಹ್ ಜಗ್ ದೋಖಾ ಖಾಯೆ ॥
ಪುರುಷ್ ಗಮ್ಯ್ ಕೈಸೆ ಕೋ ಪಾವೈ । ಕಾಲ್ ನಿರಂಜನ್ ಜಗ್ ಭರಮಾವೈ ॥
ತೀನ್ ಲೋಕ್ ಅಪನೇ ಸುತ್ ದೀನ್ಹಾ । ಸುನ್ನ್ ನಿರಂಜನ್ ಬಾಸಾ ಲೀನ್ಹಾ ॥
ಅಲಖ್ ನಿರಂಜನ್ ಸುನ್ನ್ ಠಿಕಾನಾ । ಬ್ರಹ್ಮಾ-ವಿಷ್ಣು-ಶಿವ್ ಭೇದ್ ನ ಜಾನಾ ॥
ತೀನ್ ದೇವ್ ಸೊ ಉನಕೊ ಧಾವೈ । ನಿರಂಜನ್ ಕಾ ವೆ ಪಾರ್ ನಾ ಪಾವೆ ॥

ಅಲಖ್ ನಿರಂಜನ್ ಬಡಾ ಬಟಪಾರಾ । ತೀನ್ ಲೋಕ್ ಜೀವ್ ಕಿನ್ ಆಹಾರಾ ॥
ಬ್ರಹ್ಮಾ, ವಿಷ್ಣು, ಶಿವ್ ನಹೀಂ ಬಚಾಯೆ । ಸಕಲ್ ಖಾಯ್ ಪುನ್ ಧೂರ್ ಉಡಾಯೆ॥
ತಿನಕೆ ಸುತ್ ಹೈ ತೀನೋ ದೇವಾ । ಆಂಧರ್ ಜೀವ್ ಕರತ್ ಹೈ ಸೇವಾ ॥
ಅಕಾಲ್ ಪುರುಷ್ ಕಾಹೂ ನಹಿ ಚೀನ್ಹಾ । ಕಾಲ್ ಪಾಯ್ ಸಬಹಿ ಗಹ್ ಲೀನ್ಹಾ ॥
ಬ್ರಹ್ಮ ಕಾಲ್ ಸಕಲ್ ಜಗ್ ಜಾನೆ । ಆದಿ ಬ್ರಹ್ಮ್ ಕೊ ನಾ ಪಹಿಚಾನೆ ॥
ತೀನೋ ದೇವ್ ಔರ್ ಔತಾರಾ । ತಾಕೊ ಭಜೆ ಸಕಲ್ ಸಂಸಾರಾ ॥
ತೀನೋ ಗುಣ್ ಕಾ ಯಹ್ ವಿಸ್ತಾರಾ । ಧರ್ಮದಾಸ್ ಮೈಂ ಕಹೊಂ ಪುಕಾರಾ ।
ಗುಣ್ ತೀನೋಂ ಕೀ ಭಕ್ತಿ ಮೇಂ, ಭೂಲ್ ಪರೋ ಸಂಸಾರ್ ।
ಕಹೈ ಕಬೀರ್ ನಿಜ್ ನಾಮ್ ಬಿನ್, ಕೈಸೆ ಉತರೈಂ ಪಾರ್ ॥

ಮೇಲೆ ಹೇಳಿರುವ ಅಮೃತ ವಾಣಿಯಲ್ಲಿ ಕಬೀರ್ ಪರಮೇಶ್ವರರು ತನ್ನ ಆತ್ಮೀಯ ಸೇವಕನಾದ, ಗೌರವಾನ್ವಿತ ಧರ್ಮದಾಸ್ ರವರಿಗೆ ಹೇಳಿದ್ದರು. ಧರ್ಮದಾಸ! ಈ ಸಕಲ ವಿಶ್ವವೂ ತತ್ವಜ್ಞಾನದ ಕೊರತೆಯಿಂದ ವಿಚಲಿತವಾಗಿವೆ. ಯಾರಿಗೂ, ಪೂರ್ಣವಾದ ಮೋಕ್ಷ ಮಾರ್ಗದ ಹಾಗೂ ಸೃಷ್ಟಿ ರಚನೆಯ ಜ್ಞಾನವಿಲ್ಲ. ಆದ್ದರಿಂದ ನಾನು ನಿನಗೆ ನನ್ನಿಂದಲೇ ರಚಿತವಾಗಿರುವ ಸೃಷ್ಟಿಯ ಕಥೆಯನ್ನು ಹೇಳುತ್ತೇನೆ. ಬುದ್ಧಿವಂತರು ಕೂಡಲೆ ತಿಳಿಯುವರು. ಆದರೆ ಸಕಲ ಪ್ರಮಾಣಗಳನ್ನು ನೋಡಿಯೂ ಕೂಡ ತಿಳಿಯಲಾರದ ಜೀವಿಗಳಂತು ಕಾಲನ ಪ್ರಭಾವದಿಂದ ಪ್ರಭಾವಿತರಾಗಿದ್ದಾರೆ. ಅವರು ಭಕ್ತಿಗೆ ಯೋಗ್ಯರಾದವರಲ್ಲ. ಈಗ ನಾನು ಮೂರು ದೇವತೆಗಳಾದ ಬ್ರಹ್ಮಾ, ವಿಷ್ಣು, ಶಿವನ ಉತ್ಪತ್ತಿಯ ಬಗ್ಗೆ ತಿಳಿಸುತ್ತೇನೆ. ಇವರ ತಾಯಿಯಂತು ಅಷ್ಟಂಗಿ (ದುರ್ಗೆ) ಹಾಗು ತಂದೆ ಜ್ಯೋತಿ ನಿರಂಜನ (ಕಾಲ, ಬ್ರಹ್ಮ)ನು. ಮೊದಲು ಇವರ ತಂದೆ ಬ್ರಹ್ಮನ ಉತ್ಪತ್ತಿಯು ಮೊಟ್ಟೆಯಿಂದ ಆಯಿತು. ನಂತರ ತಾಯಿ ದುರ್ಗೆಯ ಉತ್ಪತ್ತಿಯಾಯಿತು. ದುರ್ಗೆಯ ರೂಪಕ್ಕೆ ಮೋಹಿತನಾಗಿ ಬ್ರಹ್ಮನು ತಪ್ಪು ಮಾಡಿದನು. ಆಗ ದುರ್ಗೆಯು ಮಾನ ರಕ್ಷಣೆಗಾಗಿ ಅವನ ಹೊಟ್ಟೆಯಲ್ಲಿ ಅಡಗಿ ರಕ್ಷಿಸುವ ಪ್ರಾರ್ಥನೆ ಮಾಡಿದಳು. ನಾನು ಕಾಲಬ್ರಹ್ಮನ ಬಳಿಗೆ ಹೋದೆನು. ಆಗ ದುರ್ಗೆಯನ್ನು ಬ್ರಹ್ಮನ ಹೊಟ್ಟೆಯಿಂದ ಹೊರ ತೆಗೆದೆ. 21 ಬ್ರಹ್ಮಾಂಡಗಳ ಸಹಿತ, 16 ಶಂಖ ಕೋಸ ದೂರದವರೆಗೆ ಕಳುಹಿಸಿದೆ. ಬ್ರಹ್ಮನು ದುರ್ಗೆಯೊಂದಿಗೆ ಭೋಗ-ವಿಲಾಸ ಮಾಡಿದನು. ಈ ಇಬ್ಬರ ಸಂಯೋಗದಿಂದ ಮೂರೂ ಗುಣಗಳ (ಶ್ರೀ ಬ್ರಹ್ಮಾ-ಶ್ರೀ ವಿಷ್ಣು-ಶ್ರೀ ಶಿವನ) ಉತ್ಪತ್ತಿಯಾಯ್ತು. ಈ ಮೂರೂ ಗಣ (ರಜಗುಣ-ಸತ್ವಗುಣ-ತಮಗುಣ) ಗಳ ಸಾಧನೆ ಮಾಡಿ ಎಲ್ಲಾ ಜೀವಿಗಳು ಕಾಲ ಬ್ರಹ್ಮನ ಬಲೆಯಲ್ಲಿ ಸಿಲುಕಿ ಕೊಂಡಿವೆ. ವಾಸ್ತವಿಕ ಮಂತ್ರ ಸಿಗುವವರೆಗೂ ಪೂರ್ಣ ಮೋಕ್ಷ ಹೇಗೆ ಸಾಧ್ಯವಾಗುವುದು?

➤ ವಿಶೇಷ :- ಪ್ರಿಯ ಓದುಗರೆ ವಿಚಾರ ಮಾಡಿರಿ, ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಹಾಗೂ ಶಿವ ಇವರನ್ನು ಹಿಂದೂ ಸಮಾಜದ ಸರ್ವರೂ ಈವರೆಗೂ ಈ ಮೂರು ಪರಮಾತ್ಮರನ್ನು ಅಜರ, ಅಮರ, ಅರ್ಥಾತ್ ಹುಟ್ಟು-ಸಾವು ಇಲ್ಲದವರು ಎಂದು ನಂಬುತ್ತಾ ಬಂದಿದ್ದಾರೆ. ಆದರೆ ಈ ಮೂವರೂ ನಾಶಹೊಂದುವವರು. ಇವರ ತಂದೆ ಕಾಲ ರೂಪಿ ಬ್ರಹ್ಮ ಹಾಗೂ ತಾಯಿ ದುರ್ಗಾ ಇದ್ದಾಳೆ. ತಾವೆಲ್ಲರು ಈಗಾಗಲೇ ಮೇಲಿನ ಪ್ರಮಾಣಗಳನ್ನು ಓದಿ ತಿಳಿದಿದ್ದಿರಿ. ಈ ತತ್ವಜ್ಞಾನ ನಮ್ಮ ಶಾಸ್ತ್ರಗಳಲ್ಲೂ ವಿದ್ಯಮಾನವಾಗಿದೆ. ಆದರೆ ಕಲಿಯುಗದ ಗುರುಗಳು, ಋಷಿಗಳು, ಸಂತರು ತಿಳಿಯಲಿಲ್ಲ. ಯಾವ ಶಿಕ್ಷಕರಿಗೆ ಪಠ್ಯ ಕ್ರಮದ ಬಗ್ಗೆ ಸರಿಯಾದ ಜ್ಞಾನವಿಲ್ಲವೋ, ಅವರು ವಿದ್ಯಾರ್ಥಿಗಳ ಭವಿಷ್ಯದ ಶತ್ರು. ಹಾಗೆಯೇ ಈ ಋಷಿಗಳಿಗೆ, ಗುರುಗಳಿಗೆ, ಸಂತರಿಗೆ ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಶ್ರೀ ಶಿವ ಇವರ ತಂದೆ-ತಾಯಿ ಯಾರು ಎಂಬ ಜ್ಞಾನವಿಲ್ಲ ಎಂದರೆ ಇವರು ತತ್ವಜ್ಞಾನ ಹೀನರು. ಈ ಕಾರಣದಿಂದಾಗಿ ಸಮಸ್ತ ಭಕ್ತ ಸಮಾಜವನ್ನು, ಶಾಸ್ತ್ರ ವಿರುದ್ಧವಾದ ಜ್ಞಾನವನ್ನು ತಿಳಿಸುತ್ತಾ, (ದಂತ ಕಥೆಗಳನ್ನು ಹೇಳುತ್ತಾ) ಅವರನ್ನು ಅಜ್ಞಾನದ ಕತ್ತಲಲ್ಲಿ ಇಟ್ಟಿದ್ದಾರೆ.

➢ ಶಾಸ್ತ್ರ ವಿರುದ್ಧವಾದ ಭಕ್ತಿ ಮಾಡಿಸಿ ಪರಮಾತ್ಮನ ವಾಸ್ತವಿಕ ಲಾಭ (ಪೂರ್ಣ ಮೋಕ್ಷ) ದಿಂದ ವಂಚಿತರನ್ನಾಗಿಸಿ ಎಲ್ಲರ ಮಾನವ ಜನ್ಮವನ್ನು ವ್ಯರ್ಥಗೊಳಿಸಿದ್ದಾರೆ. ಭಗವದ್ಗೀತೆಯ 16ನೇ ಅಧ್ಯಾಯದ 23-24ನೇ ಶ್ಲೋಕಗಳಲ್ಲಿ ಇದಕ್ಕೆ ಪ್ರಮಾಣವಿದೆ. ಯಾರು ಶಾಸ್ತ್ರವಿಧಿ ತ್ಯಜಿಸಿ ಮನಸೆಚ್ಛೆ ಆಚರಣೆ (ಪೂಜೆ) ಮಾಡುತ್ತಾರೆ. ಅವರಿಗೆ ಯಾವುದೆ ಲಾಭ ಆಗುವುದಿಲ್ಲ. ಜೀವನವನ್ನೇ ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಪೂರ್ಣ ಪರಮಾತ್ಮ ಕಬೀರರು 5ವರ್ಷದ ಲೀಲಾಮಯ ಆಯಸ್ಸಿನಿಂದ ಇಸವಿ 1403 ರಿಂದಲೇ ಸರ್ವಶಾಸ್ತ್ರಯುಕ್ತ ಜ್ಞಾನವನ್ನು ತಮ್ಮ ಅಮೃತವಾಣಿಯಲ್ಲಿ ತಿಳಿಸಲು ಪ್ರಾರಂಭ ಮಾಡಿದರು. ಆದರೆ ಆ ಅಜ್ಞಾನಿ ಗುರುಗಳು ಈ ತತ್ವಜ್ಞಾನವನ್ನು ಭಕ್ತ ಸಮಾಜಕ್ಕೆ ತಲುಪಿಸಲು ಬಿಡಲಿಲ್ಲ. ಅದು ವರ್ತಮಾನದಲ್ಲಿ ಎಲ್ಲಾ ಸದ್ಗ್ರಂಥಗಳಿಂದ ಸ್ಪಷ್ಟವಾಗುತ್ತಿದೆ. ಇದರಿಂದ ಸ್ಪಷ್ಟವಾಯ್ತೆನೆಂದರೆ ಕವಿರ್ದೇವ (ಕಬೀರ ಪ್ರಭು) ತತ್ವದರ್ಶಿ ಸಂತ ರೂಪದಲ್ಲಿ ಸ್ವತಃ ಪೂರ್ಣ ಪರಮಾತ್ಮ ಬಂದಿದ್ದರು.

## "ಗೌರವಾನ್ವಿತ ಗರೀಬ್‌ದಾಸ್ ಸಾಹೇಬರ ಅಮೃತ ವಾಣಿಯಲ್ಲಿ ಸೃಷ್ಟಿ ರಚನೆಯ ಪ್ರಮಾಣ"

### ಆದಿ ರಮ್ಮೈಣೀ (ಸದ್‌ಗ್ರಂಥ ಪುಟ ಸಂಖ್ಯೆ 690 ರಿಂದ 692ರವರೆಗೆ)

ಆದಿ ರಮ್ಮೈಣೀ ಅದಲೀ ಸಾರಾ । ಜಾ ದಿನ್ ಹೋತೆ ಧುಂಧುಕಾರಾ ॥ 1 ॥
ಸತ್‌ಪುರುಷ್ ಕೀನ್ಹಾ ಪ್ರಕಾಶಾ । ಹಮ್ ಹೋತೆ ತಖತ್ ಕಬೀರ್ ಖವಾಸಾ ॥ 2 ॥
ಮನ್ ಮೋಹಿನಿ ಸಿರಜೀ ಮಾಯಾ । ಸತ್ಪುರುಷ್ ಏಕ್ ಖ್ಯಾಲ್ ಬನಾಯಾ ॥ 3 ॥
ಧರ್ಮರಾಯ್ ಸಿರಜೇ ದರಬಾನೀ । ಚೌಸಠ್ ಜುಗ್ ತಪ್ ಸೇವಾ ಠಾನೀ ॥ 4 ॥
ಪುರುಷ್ ಪೃಥವೀ ಜಾಕೂ ದೀನ್ಹೀ । ರಾಜ್ ಕರೋ ದೇವಾ ಆಧೀನೀ ॥ 5 ॥
ಬ್ರಹ್ಮಾಂಡ್ ಇಕೀಸ್ ರಾಜ್ ತುಮ್ಹ ದೀನ್ಹಾ । ಮನ್ ಕೀ ಇಚ್ಛಾ ಸಬ್ ಜುಗ್ ಲೀನ್ಹಾ ॥ 6 ॥
ಮಾಯಾ ಮೂಲ್ ರೂಪ್ ಏಕ್ ಛಾಜಾ । ಮೋಹಿ ಲಿಯೆ ಜಿನಹೂ ಧರ್ಮರಾಜಾ ॥ 7 ॥
ಧರ್ಮ್ ಕಾ ಮನ್ ಚಂಚಲ್ ಚಿತ್ ಧಾರ್‌ಯಾ । ಮನ್ ಮಾಯಾ ಕಾ ರೂಪ್ ವಿಚಾರಾ ॥ 8 ॥
ಚಂಚಲ್ ಚೇರಿ ಚಪಲ್ ಚಿರಾಗಾ । ಯಾ ಕೆ ಪರಸೆ ಸರಬಸ್ ಜಾಗಾ ॥ 9 ॥
ಧರ್ಮರಾಯ್ ಕೀಯಾ ಮನ್ ಕಾ ಭಾಗೀ । ವಿಷಯ್ ವಾಸನಾ ಸಂಗ್ ಸೆ ಜಾಗೀ ॥ 10 ॥
ಆದಿ ಪುರುಷ್ ಅದಲೀ ಅನರಾಗೀ । ಧರ್ಮರಾಯ್ ದಿಯಾ ದಿಲ್ ಸೆ ತ್ಯಾಗಿ ॥ 11 ॥
ಪುರುಷ್ ಲೋಕ್ ಸೆ ದಿಯಾ ಢಹಾಹೀ । ಅಗಮ್ ದೀಪ್ ಚಲಿ ಆಯೆ ಭಾಯಿ ॥ 12 ॥
ಸಹಜ್ ದಾಸ್ ಜಿಸ್ ದೀಪ್ ರಹಂತಾ । ಕಾರಣ್ ಕೌನ್-ಕೌನ್ ಕುಲ್ ಪಂಥಾ ॥ 13 ॥
ಧರ್ಮರಾಯ್ ಬೋಲೆ ದರಬಾನೀ । ಸುನೋ ಸಹಜ್ ದಾಸ್ ಬ್ರಹ್ಮಜ್ಞಾನಿ ॥ 14 ॥
ಚೌಸಠ್ ಜುಗ್ ಹಮ್ ಸೇವಾ ಕೀನ್ಹೀ । ಪುರುಷ್ ಪೃಥಿವೀ ಹಮ್ ಕೂ ದಿನ್ಹೀ ॥ 15 ॥
ಚಂಚಲ್ ರೂಪ್ ಭಯಾ ಮನ್ ಬೌರಾ । ಮನ್ ಮೋಹಿನಿ ಠಗಿಯಾ ಭೌಂರಾ ॥ 16 ॥
ಸತ್‌ಪುರುಷ್ ಕೆ ನಾ ಮನ್ ಭಾಯೆ । ಪುರುಷ್ ಲೋಕ್ ಸೆ ಹಮ್ ಚಲೀ ಆಯೆ ॥ 17 ॥
ಅಗರ್ ದೀಪ್ ಸುನತ್ ಬಡ್‌ಭಾಗೀ । ಸಹಜ್ ದಾಸ್ ಮೇಟೋ ಮನ್ ಪಾಗೀ ॥ 18 ॥
ಬೋಲೆ ಸಹಜದಾಸ್ ದಿಲ್ ದಾನೀ । ಹಮ್ ತೋ ಚಾಕರ್ ಸತ್ ಸಹದಾನೀ ॥ 19 ॥
ಸತ್‌ಪುರುಷ್ ಸೆ ಅರಜ್ ಗುಜಾರೂಂ । ಜಬ್ ತುಮ್ಹಾರಾ ಬಿವಾಣ್ ಉತಾರೂ ॥ 20 ॥
ಸಹಜದಾಸ್ ಕೊ ಕೀಯಾ ಪೀಯಾನಾ । ಸತ್ಯಲೋಕ್ ಲೀಯಾ ಪ್ರವಾನಾ ॥ 21 ॥
ಸತ್‌ಪುರುಷ್ ಸಾಹಿಬ್ ಸರಬಂಗೀ । ಅವಿಗತ್ ಅದಲೀ ಅಚಲ್ ಅಭಂಗೀ ॥ 22 ॥
ಧರ್ಮರಾಯ್ ತುಮ್ಹಾರಾ ದರಬಾನೀ । ಅಗರ್ ದೀಪ್ ಚಲಿ ಗಯೆ ಪ್ರಾನೀ ॥ 23 ॥
ಕೌನ್ ಹುಕುಮ್ ಕರೀ ಅರಜ್ ಅವಾಜಾ । ಕಹಾ ಪಠಾವೌ ಉಸ್ ಧರ್ಮರಾಜಾ ॥ 24 ॥

ಭಯಿ ಅವಾಜ್ ಅದಲೀ ಏಕ್ ಸಾಚಾ । ವಿಷಯ್ ಲೋಕ್ ಜಾ ತೀನ್ಯೂ ಬಾಚಾ ॥ 25 ॥
ಸಹಜ್ ವಿಮಾನ್ ಚಲೆ ಅಧಿಕಾಯಿ । ಛಿನ್ ಮೆ ಅಗರ್ ದೀಪ್ ಚಲಿ ಆಈ ॥ 26 ॥
ಹಮತೋ ಅರಜ್ ಕರೀ ಅನುರಾಗೀ । ತುಮ್ಹ್ ವಿಷಯ್ ಲೋಕ್ ಜಾವೋ ಬಡಭಾಗಿ ॥ 27 ॥
ಧರ್ಮರಾಯ್ ಕೆ ಚಲೆ ವಿಮಾನಾ । ಮಾನಸರೋವರ್ ಆಯೆ ಪ್ರಾನಾ ॥ 28 ॥
ಮಾನಸರೋವರ್ ರಹನ್ ನ ಪಾಯೆ । ದರ್ಸೈ ಕಬೀರಾ ಥಾನಾ ಲಾಯೆ ॥ 29 ॥
ಬಂಕನಾಲ್ ಕೀ ವಿಷಮಿ ಬಾಟಿ । ತಹಾ ಕಬೀರಾ ರೋಕೀ ಘಾಟೀ ॥ 30 ॥
ಇನ್ ಪಾಂಚೋ ಮಿಲಿ ಜಗತ್ ಬಂಧಾನಾ । ಲಖ್ ಚೌರಾಸಿ ಜೀವ್ ಸಂತಾನಾ ॥ 31 ॥
ಬ್ರಹ್ಮಾ, ವಿಷ್ಣು, ಮಹೇಶ್ವರ್ ಮಾಯಾ । ಧರ್ಮರಾಜ್ ಕಾ ರಾಜ್ ಪಠಾಯಾ ॥ 32 ॥
ಯೌಹ್ ಖೊಖಾ ಪುರ್ ಝುಠೀ ಬಾಜೀ । ಭಿಸತಿ ಬೈಕುಂಠ್ ದಗಾಸಿ ಸಾಜೀ ॥33॥
ಕೃತಿಮ್ ಜೀವ್ ಭುಲಾನೆ ಭಾಈ । ನಿಜ್ ಘರ್ ಕೀ ತೋ ಖಬರಿ ನ ಪಾಈ ॥ 34 ॥
ಸವಾ ಲಾಖ್ ಉಪಜೆ ನಿತ್ ಹಂಸಾ । ಏಕ್ ಲಾಬ್ ವಿನಶೆ ನಿತ್ ಅಂಸಾ ॥ 35 ॥
ಉಪತಿ ಖಪತಿ ಪ್ರಲಯ್ ಫೇರೀ । ಹರ್ಷ ಶೋಕ್ ಜೌಂರಾ ಜಮ್ ಜೆರೀ ॥ 36 ॥
ಪಾಂಚೊಂ ತತ್ವ ಹೈ ಪ್ರಲಯ್ ಮಾಂಹೀ । ಸತ್ವಗುಣ್ ರಜಗುಣ್ ತಮಗುಣ್ ಝಾಂಈ ॥37 ॥
ಆಠೋಂ ಅಂಗ್ ಮಿಲೀ ಹೈ ಮಾಯಾ । ಪಿಂಡ್ ಬ್ರಹ್ಮಾಂಡ್ ಸಕಲ್ ಭರಮಾಯಾ ॥ 38 ॥
ಯಾ ಮೇಂ ಸುರತಿ ಶಬ್ದ್ ಕೀ ಡೋರೀ । ಪಿಂಡ್ ಬ್ರಹ್ಮಾಂಡ್ ಲಗೀ ಹೈ ಖೋರೀ ॥ 39 ॥
ಶ್ವಾಂಸಾ ಪಾರಸ್ ಮನ್ ಗಹ್ ರಾಖೋ । ಖೋಲ್ಹಿ ಕಪಾಟ್ ಅಮೀರಸ್ ಚಾಖೋ ॥ 40 ॥
ಸುನಾಊಂ ಹಂಸ್ ಶಬ್ದ್ ಸುನ್ ದಾಸಾ । ಅಗಮ್ ದೀಪ್ ಹೈ ಅಗ್ ಹೈ ಬಾಸಾ ॥ 41 ॥
ಭವಸಾಗರ್ ಜಮ್ ದಂಡ್ ಜಮಾನಾ । ಧರ್ಮರಾಯ್ ಕಾ ಹೈ ತಲಬಾಂನಾ ॥ 42 ॥
ಪಾಂಚೊ ಊಪರ್ ಪದ್ ಕೀ ನಗರೀ । ಬಾಟ್ ವಿಹಂಗಮ್ ಬಂಕೀ ಡಗರೀ ॥ 43
ಹಮಾರಾ ಧರ್ಮರಾಯ್ ಸೋಂ ದಾವಾ । ಭವಸಾಗರ್ ಮೆಂ ಜೀವ್ ಭರಮಾವಾ ॥ 44 ॥
ಹಮ್ ತೊ ಕಹೈ ಅಗಮ್ ಕೀ ಬಾನೀ । ಜಹಾಂ ಅವಿಗತ್ ಅದಲೀ ಆಪ್ ಬಿನಾನೀ ॥ 45 ॥
ಬಂದೀಛೋಡ್ ಹಮಾರಾ ನಾಮ್ಂ । ಅಜರ್ ಅಮರ್ ಹೈ ಅಸ್ಥಿರ್ ಠಾಮ್ಂ ॥ 46 ॥
ಜುಗನ್ ಜುಗನ್ ಹಮ್ ಕಹತೆ ಆಯೇ । ಜಮ್ ಜೌಂರಾ ಸೆಂ ಹಂಸ್ ಛುಟಾಯೇ ॥ 47 ॥
ಜೋ ಕೋಈ ಮಾನೆಂ ಶಬ್ದ್ ಹಮಾರಾ । ಭವಸಾಗರ್ ನಹೀ ಭರಮೆಂ ಧಾರಾ ॥ 48 ॥
ಯಾ ಮೇಂ ಸುರತಿ ಶಬ್ದ್ ಕಾ ಲೇಖಾ । ತನ್ ಅಂದರ್ ಮನ್ ಕಹೊ ಕಿನ್ಹಿ ದೇಖಾ ॥ 49 ॥
ದಾಸ್ ಗರೀಬ್ ಅಗಮ್ ಕೀ ಬಾನೀ । ಖೋಜಾ ಹಂಸಾ ಶಬ್ದ್ ಸಹದಾನೀ ॥ 50 ॥

**ಭಾವಾರ್ಥ :– ಮೇಲಿನ ವಾಣಿಯ ಭಾವಾರ್ಥ ಹೀಗಿದೆ ಗೌರವಾನ್ವಿತ ಗರೀಬ್‌ದಾಸ ಸಾಹೇಬರು ಸಹ ಇದನ್ನೆ ಹೇಳುತ್ತಿದ್ದಾರೆ ಅಂದರೆ ಇಲ್ಲಿ ಮೊದಲು ಕತ್ತಲೆ ಮಾತ್ರ ಇತ್ತು. ಹಾಗೂ ಪೂರ್ಣ ಪರಮಾತ್ಮ ಕಬೀರ್ ಪರಮೇಶ್ವರರು ಸತ್ಯ ಲೋಕದಲ್ಲಿ ಸಿಂಹಾಸನದ ಮೇಲೆ** ವಿರಾಜಮಾನರಾಗಿದ್ದರು. ನಾವು ಅಲ್ಲಿ ನೌಕರರಾಗಿದ್ದೆವು. ಪರಮಾತ್ಮನು ಬ್ರಹ್ಮ (ಧರ್ಮರಾಯ) ನನ್ನು ಉತ್ಪತ್ತಿ ಮಾಡಿದರು. ನಂತರ ಅವನ ತಪಸ್ಸಿನ ಪ್ರತಿಫಲವಾಗಿ 21 ಬ್ರಹ್ಮಾಂಡಗಳನ್ನು ನೀಡಿದರು. ನಂತರ (ಮಾಯಾ) ದುರ್ಗೆಯ ಉತ್ಪತ್ತಿ ಮಾಡಿದರು. ಯುವತಿ ದುರ್ಗಾಳ ಮೋಹಕ್ಕೆ ಒಳಗಾಗಿ ಬ್ರಹ್ಮನು ಅವಳನ್ನು ಬಲಾತ್ಕರಿಸಿದನು. ಬ್ರಹ್ಮನಿಗೆ ಇದಕ್ಕೆ ಶಿಕ್ಷೆ ಆಯಿತು. ಅವರನ್ನು ಸತ್ಯಲೋಕದಿಂದ ಹೊರ ಹಾಕಿದರು. ಒಂದು ಲಕ್ಷ ಮಾನವ ಶರೀರ ಧಾರಿ ಜೀವಾತ್ಮಗಳನ್ನು ಪ್ರತಿದಿನ ಆಹಾರವಾಗಿ ತಿನ್ನಬೇಕು. ಒಂದೂಕಾಲು ಲಕ್ಷ ಉತ್ಪತ್ತಿ ಮಾಡಬೇಕು ಎಂದು ಶಾಪ ಕೊಟ್ಟರು.

ಇಲ್ಲಿ ಎಲ್ಲ ಜೀವಾತ್ಮಗಳು ಕಷ್ಟ ಪಡುತ್ತಿವೆ. ಒಂದು ವೇಳೆ ಯಾರಾದರೂ ಪೂರ್ಣ ಪರಮಾತ್ಮನ ವಾಸ್ತವಿಕ ಶಬ್ದ (ಸತ್ಯ ನಾಮದ ಮಂತ್ರ) ವನ್ನು ನಮ್ಮಿಂದ ಪಡೆಯುವರೋ, ಅವರನ್ನು ಕಾಲನ ಬಂಧನದಿಂದ ಬಿಡಿಸುವೆವು. ನಮ್ಮ ಹೆಸರು ಮುಕ್ತಿ ದಾತ (ಬಂದೀಛೋಡ)

ಎಂದು. ಗೌರವಾನ್ವಿತ ಗರೀಬ್‌ದಾಸರು, ತಮ್ಮ ಗುರು ಹಾಗೂ ಪರಮಾತ್ಮ, ಕಬೀರರ ಆಧಾರದಿಂದ ಹೇಳುತ್ತಿದ್ದಾರೆ ಸತ್ಯನಾಮ ಹಾಗೂ ಸಾರನಾಮವನ್ನು ನಮ್ಮಿಂದ ಉಪದೇಶ ಪಡೆದು ಭಕ್ತಿ ಮಾಡಿದರೆ ಪೂರ್ಣ ಮೋಕ್ಷ ಪ್ರಾಪ್ತಿಯಾಗುತ್ತದೆ. ಇಲ್ಲದಿದ್ದರೆ ನಕಲಿ ನಾಮ ಕೊಡುವ ಸಂತ ಹಾಗೂ ಮಹಂತರ ಸಿಹಿ ಮಾತಿನಲ್ಲಿ ಸಿಕ್ಕಿಕೊಂಡು ಶಾಸ್ತ್ರ ವಿರುದ್ಧವಾದ ಸಾಧನೆ ಮಾಡಿ, ಕಾಲನ ಜಾಲದಲ್ಲಿ ಸಿಲಿಕಿಕೊಳ್ಳುವಿರಿ. ನಂತರ ಕಷ್ಟದ ಮೇಲೆ ಕಷ್ಟ ಪಡುವಿರಿ.

ಸಂತ ಗರೀಬ್‌ದಾಸರ ಕೃತ ಅಮರ್ ಗ್ರಂಥದ ಅಧ್ಯಾಯ "ಹಂಸ್ ಪರಮ್‌ಹಂಸ್" ಕಥೆಯ ವಾಣಿ ಸಂಖ್ಯೆ 37–43ರಲ್ಲಿ ಹೇಳಲಾಗಿದೆ :-

ಮಾಯಾ ಆದಿ ನಿರಂಜನ್ ಭಾಈ, ಅಪನೆ ಜಾಯೆ ಆಪೈ ಖಾಈ ।
ಬ್ರಹ್ಮಾ, ವಿಷ್ಣು, ಮಹೇಶ್ವರ್ ಚೇಲಾ, ಓಂ–ಸೋಹಂ ಕಾ ಹೈ ಖೇಲಾ ॥
ಶಿಖರ್ ಶುನ್ಯ್ ಮೆ ಧರ್ಮ್ ಅನ್ಯಾಯೀ, ಜಿನ್ ಶಕ್ತಿ ಡಾಯನ್ ಮಹಲ್ ಪಠಾಈ ।
ಲಾಖ್ ಗ್ರಾಸ್ಯೆ ನಿತ್ ಉಠಿ ದೂತೀ, ಮಾಯಾ ಆದಿ ತಖ್ತ್ ಕೀ ಕೂತೀ ॥
ಸವಾ ಲಾಖ್ ಘಡಿಯೆ ನಿತ್ ಭಾಂಡೆ, ಹಂಸಾ ಉತ್ಪತ್ತಿ ಪರಲಯ್ ಡಾಂಡೆ ।
ಯೇ ತೀನೋಂ ಚೇಲಾ ಬಟಪಾರೀ, ಸಿರಜೆ ಪುರುಷಾ ಸಿರಜೀ ನಾರೀ ॥
ಖೋಖಾಪುರ್ ಮೇ ಜೀವ್ ಭುಲಾಯೆ, ಸ್ವಪ್ನಾ ಬಹಿಸ್ತ್ ಬೈಕುಂಠ್ ಬನಾಯೆ ।
ಯೊಹ್ ಹರಹಟ್ ಕಾ ಕೂವಾ ಲೋಈ, ಯಾ ಗಲ್ ಬಂಧ್ಯಾ ಹೈ ಸಬ್ ಕೋಈ ॥
ಕೀಡೀ ಕುಂಜರ್ ಔರ್ ಅವತಾರಾ, ಹರಹಟ್ ಡೋರೀ ಬಂಧೆ ಕಈ ಬಾರಾ ।
ಅರಬ್ ಅಲೀಲ್ ಇಂದ್ರ್ ಹುಏ ಹೈ ಭಾಈ, ಹರಹಟ್ ಡೋರೀ ಬಂಧೆ ಸಬ್ ಆಈ ॥
ಶೇಷ್ ಮಹೇಶ್ ಅರೂ ಗಣೇಶ್ ತಾಂಈ । ಹರಹಟ್ ಡೋರಿ ಬಂಧ್ ಸಬ್ ಆಂಈ ।
ಶುಕ್ರಾದಿಕ್ ಬ್ರಹ್ಮಾದಿಕ್ ದೇವಾ, ಹರಹಟ್ ಡೋರಿ ಬಂಧೆ ಸಬ್ ಖೇವಾ ॥
ಕೋಟಿಕ್ ಕರ್ತಾ ಫಿರತಾ ದೇಖ್ಯಾ, ಹರಹಟ್ ಡೋರಿ ಕಹೂಂ ಸುನಿ ಲೇಖಾ ।
ಚುತುರ್ಭುಜಿ ಭಗವಾನ್ ಕಹಾವೈಂ, ಹರಹಟ್ ಡೋರಿ ಬಂಧೆ ಸಬ್ ಆವೈ ॥
ಯೊಹ್ ಹೈ ಖೋಖಾ ಪುರ್ ಕಾ ಕೂವಾ, ಯಾಮೆಂ ಪರ್‌ಯಾ ಸೋ ನಿಶ್ಚಯ್ ಮೂವಾ ॥

ಈ ಮೂರೂ ದೇವತೆಗಳು (ರಜಗುಣ–ಬ್ರಹ್ಮಾ, ಸತ್ವಗುಣ–ವಿಷ್ಣು, ತಮಗುಣ–ಶಿವ) ಜ್ಯೋತಿ ನಿರಂಜನ್‌ನ (ಕಾಲಬಲಿಯ) ವಶದಲ್ಲಿ ತಮ್ಮ ಮಹಿಮೆಯನ್ನು ತೋರಿಸುತ್ತಾ, ಜೀವಿಗಳನ್ನು ಸ್ವರ್ಗ–ನರಕ ಹಾಗೂ ಈ ಭವಸಾಗರದಲ್ಲಿ (84 ಲಕ್ಷ ಯೋನಿಗಳಲ್ಲಿ) ಅಲೆದಾಡಿಸುತ್ತಿರುತ್ತಾರೆ. ಜ್ಯೋತಿ ನಿರಂಜನ್ ತನ್ನ ಮಾಯೆಯಿಂದ ನಾಗಿಣಿ ಹಾವಿನಂತೆ ಜೀವಿಗಳನ್ನು ಹುಟ್ಟಿಸುತ್ತಾನೆ, ನಂತರ ಸಾಯಿಸುತ್ತಾನೆ. ಯಾವ ರೀತಿ ನಾಗಿಣಿಹಾವು ತನ್ನ ಬಾಲದಿಂದ ಮೊಟ್ಟೆಗಳ ಸುತ್ತ ಕುಂಡಲಿ ಹಾಕಿ ಕುಳಿತು, ನಂತರ ಮೊಟ್ಟೆಗಳನ್ನು ಹೆಡೆಯಿಂದ ಹೊಡೆಯುತ್ತದೆ. ಅದರಿಂದ ಮೊಟ್ಟೆಗಳು ಒಡೆದು ಹೋಗುತ್ತವೆ. ಅದರಿಂದ ಮರಿ ಹೊರ ಬರುತ್ತದೆ ಅವುಗಳನ್ನು ನಾಗಿಣಿಹಾವು ತಿಂದು ಬಿಡುತ್ತದೆ. ಹೆಡೆ ಹೊಡೆಯುವಾಗ ಅನೇಕ ಮೊಟ್ಟೆಗಳು ಒಡೆದು ಹೋಗುತ್ತವೆ. ಏಕೆಂದರೆ ನಾಗಿಣಿಹಾವಿನ ಬಹಳಷ್ಟು ಮೊಟ್ಟೆಗಳಿರುತ್ತವೆ. ಒಡೆದ ಮೊಟ್ಟೆಗಳಿಂದ ಮರಿಗಳು ಹೊರಬರುತ್ತವೆ. ಒಂದೊಮ್ಮೆ ಯವುದಾದರೂ ಮರಿ ಕುಂಡಲಿಯಿಂದ (ನಾಗಿಣಿಹಾವಿನ ಬಾಲದಿಂದ ಮಾಡಿದ ವೃತ್ತದಿಂದ) ಹೊರಬಂದ ಹಾವಿನ ಮರಿ ಮಾತ್ರ ಉಳಿಯುತ್ತದೆ. ಇಲ್ಲದಿದ್ದರೆ ಕುಂಡಲಿಯಲ್ಲಿ ಅದು (ನಾಗಿಣಿ) ಬಿಡುವುದಿಲ್ಲ. ಕುಂಡಲಿಯಲ್ಲಿ ಇರುವಷ್ಟು ಮರಿಗಳನ್ನು ತಿಂದು ಬಿಡುತ್ತದೆ, ಯಾವ ಸಾಧಕನು ಬ್ರಹ್ಮ (ಕಾಲ ಬ್ರಹ್ಮ ಅಂದರೆ ಜ್ಯೋತಿ ನಿರಂಜನ್), ದೇವಿ ದುರ್ಗೆ ಹಾಗೂ ಬ್ರಹ್ಮಾ, ವಿಷ್ಣು, ಶಿವ ಹಾಗೂ ಅನ್ಯ ದೇವತೆಗಳ ಭಕ್ತಿ ಮಾಡುತ್ತಾರೆ, ಅವರು ಕಾಲಬ್ರಹ್ಮ ರೂಪಿ ನಾಗಿಣಿಹಾವಿನ ಚಕ್ರದಲ್ಲಿ ಅಂದರೆ ಕಾಲ ಲೋಕದಲ್ಲಿ ಜನ್ಮ–ಮರಣದ ಚಕ್ರದಲ್ಲಿ ಉಳಿದು ಬಿಡುತ್ತಾರೆ. ಅವರನ್ನು ಕಾಲ ಜ್ಯೋತಿ ನಿರಂಜನ್ ತಿನ್ನುತ್ತಾನೆ.




ಯೊಹ್ ಹರಹಟ್ ಕಾ ಕುಆಂ ಲೊಈ, ಯಾ ಗಲ್ ಬಂಧ್ಯಾ ಹೈ ಸಬ್ ಕೊಈ ।
ಕೀಢೀ ಕುಂಜರ್ ಔರ್ ಅವತಾರಾ, ಹರಹಟ್ ದೊರೀ ಬಂಧೆ ಕಈ ಬಾರಾ ॥

**ಕಾಲನ ಲೋಕದಲ್ಲಿ ಜನನ-ಮರಣರೂಪಿ ಹರಹಟ್ (ಚಕ್ರ)**

ಮಾಯಾ ಕಾಲೀ ನಾಗಿನೀ, ಅಪನೆ ಜಾಯೆ ಖಾತ್ ।
ಕುಂಡಲೀ ಮೆ ಛೋಡ್ಯೈ ನಹೀ ಸೌ ಬಾತೋಂ ಕೀ ಬಾತ್ ॥

ಇದೇ ರೀತಿ ಇದು ಕಾಲ ಬ್ರಹ್ಮನ ಜಾಲವಾಗಿದೆ. ಅನ್ಯ ಸಂತರಿಂದ ನಾಮೋಪದೇಶ ಪಡೆದು ನಿರಂಜನ್‌ನ ವರೆಗಿನ ಭಕ್ತಿ ಮಾಡಿದರೂ,ಈ ನಿರಂಜನ್ ಕುಂಡಲಿಯಿಂದ (21 ಬ್ರಹ್ಮಾಂಡಗಳಿಂದ) ಹೊರ ಬರಲು ಸಾದ್ಯವಿಲ್ಲ. ಸ್ವಯಂ ಬ್ರಹ್ಮಾ, ವಿಷ್ಣು, ಮಹೇಶ್, ಆದಿ ಮಾಯಾ (ದುರ್ಗೆ) ಕೂಡಾ ನಿರಂಜನ್‌ನ ಕುಂಡಲಿಯಲ್ಲಿ ಸಿಲುಕಿದ್ದಾರೆ. ಪಾಪ ಇವರು ಅವತಾರ ಧರಿಸಿ ಬರುತ್ತಾರೆ ಮತ್ತು ಹುಟ್ಟು-ಸಾವು ಚಕ್ರದಲ್ಲಿ ಸಿಲುಕಿರುತ್ತಾರೆ. ಆದ್ದರಿಂದ ವಿಚಾರ ಮಾಡಬೇಕು ಸೊಹಂ ಮಂತ್ರವನ್ನು ಧ್ರುವ, ಪ್ರಹ್ಲಾದ, ಸುಖ್‌ದೇವ ಋಷಿ ಎಲ್ಲರೂ ಜಪ ಮಾಡಿದರು. ಆದರೂ ಪಾರಾಗಲಿಲ್ಲ. ಏಕೆಂದರೆ ಶ್ರೀ ವಿಷ್ಣು ಪುರಾಣದ ಪ್ರಥಮ ಅಂಶದ 12ನೇ ಅಧ್ಯಾಯದ 93ನೇ ಶ್ಲೋಕ, ಪುಟ 51ರಲ್ಲಿ ಹೀಗೆ ಬರೆದಿದೆ. 'ದ್ರುವ'ನಿಗೆ ಒಂದು ಕಲ್ಪದವರೆಗೆ (ಒಂದು ಸಾವಿರ ಚತುರ್ಯುಗ) ಮಾತ್ರ ಮುಕ್ತಿ ದೊರಕಿದೆ. ಆದ್ದರಿಂದ ಕಾಲ ಲೋಕದಲ್ಲಿಯೆ ಉಳಿದುಕೊಂಡನು. "ಓಂ ನಮೋ ಭಗವತೆ ವಾಸುದೇವಾಯ" ಎಂದು ಜಪ ಮಾಡಿದ ಭಕ್ತರು ಸಹ ಕೃಷ್ಣನ ವರೆಗಿನ ಭಕ್ತಿ ಮಾಡುತ್ತಿದ್ದಾರೆ. ಇವರೂ ಸಹ 84 ಲಕ್ಷ ಯೋನಿಗಳ ಚಕ್ರದಿಂದ ಪಾರಾಗುವುದಿಲ್ಲ. ಇಲ್ಲಿ ಗೌರವಾನ್ವಿತ ಗರೀಬ್ ದಾಸ್ ಹಾಗೂ ಕಬೀರ್ ಪರಮೇಶ್ವರರ ವಾಣಿಯಲ್ಲಿ ಪ್ರತ್ಯಕ್ಷ ಪ್ರಮಾಣ ಇದೆ.

ಅನಂತ್ ಕೋಟಿ ಅವತಾರ್ ಹೈ, ಮಾಯಾ ಕೆ ಗೋವಿಂದ್ ।
ಕರ್ತಾ ಹೊ ಹೊ ಅವತರೆ, ಬಹುರ್ ಪಡೆ ಜಗ್ ಫಂದ್ ॥

ಸತ್ಯಪುರುಷ ಕಬೀರ್ ಪರಮೇಶ್ವರರ ಭಕ್ತಿಯಿಂದಲೇ ಜೀವಾತ್ಮ ಮೋಕ್ಷ ಪಡಯುತ್ತದೆ. ಎಲ್ಲಿಯವರೆಗೆ ಜೀವಾತ್ಮ ಸತ್ಯಲೋಕಕ್ಕೆ ಮರಳಿ ಹೋಗುವುದಿಲ್ಲ ಅಲ್ಲಿಯವರೆಗೆ ಕಾಲನ ಲೋಕದಲ್ಲಿ ಹೀಗೆಯೆ ಕರ್ಮ ಮಾಡುವನು ಮತ್ತು ದಾನ ಧರ್ಮದ ಗಳಿಕೆಯನ್ನು ಸ್ವರ್ಗರೂಪಿ ಹೊಟೇಲ್‌ಗಳಲ್ಲಿ ಖರ್ಚು ಮಾಡಿ ಮರಳಿ ಕರ್ಮದ ಆಧಾರದಿಂದ 84 ಲಕ್ಷ ಪ್ರಕಾರದ ಜೀವಿಗಳ ಶರೀರದಲ್ಲಿ ಕಷ್ಟ ಪಡುವ ಈ ಕಾಲ ಲೋಕದಲ್ಲಿ ಸುತ್ತುತ್ತಿರುವನು. ಕೋಟ್ಯಾಂತರ (ಗೋವಿಂದ) ಬಹ್ಮಾ, ವಿಷ್ಣು, ಮಹೇಶ್ವರರು ದುರ್ಗೆ (ಮಾಯೆ) ಯಿಂದ ಉತ್ಪನ್ನರಾಗಿ ಮರಣಹೊಂದಿದ್ದಾರೆ. ದೇವರ ಅವತಾರಗಳಾಗಿ ಆಗಮಿಸಿ ನಂತರ ಕರ್ಮಗಳ ಬಂಧನದಲ್ಲಿ ಬಂಧಿತರಾಗಿ ಕರ್ಮವನ್ನು ಭೋಗಿಸಿ 84 ಲಕ್ಷ ಯೋನಿಗಳಲ್ಲಿ ಹೋದರು. ಹೇಗೆ ಶ್ರೀ ವಿಷ್ಣುವಿಗೆ ನಾರದರ ಶಾಪ ತಗುಲಿ ಅಯೋಧ್ಯಾದಲ್ಲಿ ಶ್ರೀರಾಮಚಂದ್ರನ ರೂಪದಲ್ಲಿ ಆಗಮಿಸಿ, ನಂತರ ಸುಗ್ರಿವನ ಅಣ್ಣ ವಾಲಿಯನ್ನು ಕೊಂದನು. ಈ ಕರ್ಮದ ಶಿಕ್ಷೆಯನ್ನು ಅನುಭವಿಸಲು ಶ್ರೀ ಕಷ್ಣನಾಗಿ ಜನನವಾಯಿತು. ಆಗ ವಾಲಿಯ ಆತ್ಮ ಬೇಟೆಗಾರನಾಗಿ ತನ್ನ ಪತೀಕಾರ ತಿರಿಸಿಕೊಂಡನು. ಶ್ರೀ ಕೃಷ್ಣನ ಕಾಲಿಗೆ ವಿಷಯುಕ್ತ ಬಾಣ ಹೊಡೆದು ವಧೆ ಮಾಡಿದನು.

**ಗೌರವಾನ್ವಿತ ಗರೀಬ್‌ದಾಸರು ತಮ್ಮ ವಾಣಿಯಲ್ಲಿ ಹೇಳಿದ್ದಾರೆ :-**

ಬ್ರಹ್ಮಾ, ವಿಷ್ಣು, ಮಹೇಶ್ವರ್ ಮಾಯಾ, ಔರ್ ಧರ್ಮರಾಯ್ ಕಹಿಯೆ ।
ಇನ್ ಪಾಂಚೋ ಮಿಲ್ ಪರಪಂಚ್ ಬನಾಯಾ, ವಾಣಿ ಹಮಾರಿ ಲಹಿಯೇ ॥
ಇನ್ ಪಾಂಚೋ ಮಿಲ್ ಜೀವ್ ಅಟಕಾಯೆ, ಜುಗನ್-ಜುಗನ್ ಹಮ್ ಆನ್ ಛುಟಾಯೆ ।
ಬಂದೀ ಛೋಡ್ ಹಮಾರಾ ನಾಮ್ಂ ಅಜರ್, ಅಮರ್ ಹೈ ಅಸ್ಥಿರ್ ಠಾಮ್ಂ ॥
ಪೀರ್ ಪೈಗಂಬರ್ ಕುತುಬ್ ಔಲಿಯಾ, ಸುರ್-ನರ್ ಮುನಿ ಜನ್ ಜ್ಞಾನಿ ।
ಯೆತಾ ಕೊ ತೋ ರಾಹ್ ನ ಪಾಯಾ, ಜಮ್ ಕೆ ಬಂಧೆ ಪ್ರಾಣೀ ॥
ಧರ್ಮರಾಯ್ ಕೀ ಧೂಮಾ-ಧಾಮೀ, ಜಮ್ ಪರ್ ಜಂಗ್ ಚಲಾಊಂ ।
ಜೋರಾ ಕೊ ತೊ ಜಾನ್ ನ ದೂಂಗಾ, ಬಾಂದ್ ಅದಲ್ ಘರ್ ಲ್ಯಾಊಂ ॥

ಕಾಲ್-ಅಕಾಲ್ ದೋಹೂಂ ಕೊ ಮೋಸೂಂ, ಮಹಾಕಾಲ್ ಸಿರ್ ಮೂಂಡೂ ।
ಮೈಂ ತೊ ತಖ್ತ್ ಹಜೂರಿ ಹುಕಮೀ, ಚೋರ್ ಖೋಜ್ ಕೂ ಢೂಂಡೂ ॥
ಮೂಲಾ ಮಾಯಾ ಮಗ್ ಮೆ ಬೈಠೀ, ಹಂಸಾ ಚುನ್-ಚುನ್ ಖಾಈ ।
ಜ್ಯೋತಿ ಸ್ವರೂಪಿ ಭಯಾ ನಿರಂಜನ್, ಮೈಂ ಹೀ ಕರ್ತಾ ಭಾಈ ॥
ಸಂಹಸ್ ಅಠಾಸೀ ದೀಪ್ ಮುನೀಶ್ವರ್, ಬಂಧೇ ಮೂಲಾ ಡೋರೀ ।
ಏತ್ಯಾಂ ಮೆಂ ಜಮ್ ಕಾ ತಲಬಾನಾ, ಚಲಿಯೆ ಪುರುಷ್ ಕೀಶೋರೀ ॥
ಮೂಲಾ ಕಾ ತೊ ಮಾಥಾ ದಾಗೂಂ, ಸತಕಿ ಮೊಹರ್ ಕರೂಂಗಾ ।
ಪುರುಷ್ ದೀಪ್ ಕೂ ಹಂಸ್ ಚಲಾಊಂ, ದರಾ ನ್ ರೋಕನ್ ದೂಂಗಾ ॥
ಹಮ್ ತೊ ಬಂದೀ ಛೋಡ್ ಕಹಾವಾಂ, ಧರ್ಮರಾಯ್ ಹೈ ಚಕವೈ ।
ಸತ್‌ಲೋಕ್ ಕೀ ಸಕಲ್ ಸುನಾವಾಂ, ವಾಣಿ ಹಮರಿ ಅಖವೈ ॥
ನೌ ಲಖ್ ಪಟ್ಟಣ್ ಊಪರ್ ಖೇಲೂಂ, ಸಾಹದರೆ ಕೂಂ ರೋಕೂಂ ।
ದ್ವಾದಶ್ ಕೋಟಿ ಕಟಕ್ ಸಬ್ ಕಾಟೂಂ, ಹಂಸ್ ಪಠಾಊಂ ಮೋಖೂಂ ॥
ಚೌದಹ್ ಭುವನ್ ಗಮನ್ ಹೈ ಮೇರಾ, ಜಲ್-ಥಲ್ ಮೆ ಸರಬಂಗೀ ।
ಖಾಲೀಕ್ ಖಲಕ್ ಖಲಕ್ ಮೇ ಖಾಲಿಕ್, ಅವಿಗತ್ ಅಚಲ್ ಅಭಂಗೀ ॥
ಅಗರ್ ಅಲೀಲ್ ಚಕ್ರ್ ಹೈ ಮೇರಾ, ಜಿತ್ ಸೆ ಹಮ್ ಚಲ್ ಆಏ ।
ಪಾಂಚೋ ಪರ್ ಪ್ರವಾನಾ ಮೇರಾ, ಬಂಧಿ ಛುಟಾವನ್ ಧಾಯೆ ॥
ಜಹಾಂ ಓಂಕಾರ್ ನಿರಂಜನ್ ನಾಹೀ, ಬ್ರಹ್ಮಾ, ವಿಷ್ಣು, ವೇದ್ ನಹೀ ಜಾಹೀಂ ।
ಜಹಾಂ ಕರತಾ ನಹೀ ಕಾಲ್ ಭಗವಾನಾ, ಕಾಯಾ ಮಾಯಾ ಪಿಂಡ್ ನ ಪ್ರಾಣಾ ॥
ಪಾಂಚ್ ತತ್ವ್ ತೀನೋ ಗುಣ್ ನಾಹೀಂ, ಜೋರಾ ಕಾಲ್ ದೀಪ್ ನಹೀಂ ಜಾಹೀಂ ।
ಅಮರ್ ಕರೂಂ ಸತ್‌ಲೋಕ್ ಪಠಾಂಊ, ತಾತೈಂ ಬಂದೀ ಛೋಡ್ ಕಹಾಂಊಂ ॥

ಗೌರವಾನ್ವಿತ ಗರೀಬ್‌ದಾಸರು, ಕಬೀರ್ ಪರಮೇಶ್ವರರ ಮಹಿಮೆಯನ್ನು ವರ್ಣಿಸುತ್ತಾ ಹೇಳುತ್ತಾರೆ, ನಮ್ಮ ಪ್ರಭು ಕವಿರ್ದೇವ ಮುಕ್ತಿದಾತರು. ಮುಕ್ತಿದಾತರೆಂದರೆ ಕಾಲನ ಸೆರೆಯಿಂದ ಬಿಡುಗಡೆ ಮಾಡಿ ಮುಕ್ತಿಕೊಡುವವರು, ಕಾಲ ಬ್ರಹ್ಮನ 21 ಬ್ರಹ್ಮಾಂಡಗಳಲ್ಲಿ ಎಲ್ಲ ಜೀವಿಗಳು, ಪಾಪದ ಕಾರಣ ಕಾಲನ ಸೆರೆಯಲ್ಲಿವೆ. ಪೂರ್ಣ ಪರಮಾತ್ಮ ಕಬೀರ ಪರಮೇಶ್ವರರು ಪಾಪ ನಾಶ ಮಾಡುವವರು. ಪಾಪವನ್ನು ಬ್ರಹ್ಮಾ, ವಿಷ್ಣು, ಶಿವ, ದುರ್ಗೆ, ಬ್ರಹ್ಮ, ಪರಬ್ರಹ್ಮ ಈ ಯಾರೂ ನಾಶಮಾಡಲಾರರು. ಯಾರ ಕರ್ಮ ಹೇಗಿದೆಯೊ, ಹಾಗೇಯೆ ಫಲವೂ ದೊರೆಕುತ್ತದೆ. ಇದಕ್ಕಾಗಿ ಯಜುರ್ವೇದದ 5ನೇ ಅಧ್ಯಾಯದ 32ನೇ ಮಂತ್ರದಲ್ಲಿ ಹೀಗೆ ಬರೆದಿದೆ. 'ಕವಿರಂಘಾರಿರಸಿ'=(ಕವಿರ್) ಕವಿರ್ದೇವ (ಕಬೀರ ಪರಮೇಶ್ವರರು) (ಅಂಘ್ ಅರಿ) ಪಾಪಗಳ ಶತ್ರು. 'ಬಂಭಾರಿರಸಿ' = (ಬಂಭಾರಿಃ) ಬಂಧನಗಳ (ಅರಿ) ಶತ್ರು ಅಂದರೆ ಬಂಧನಗಳ ಶತ್ರು ಅಂದರೆ ಮುಕ್ತಿದಾತರು (ಬಂದೀಛೋಡ್).

ಈ ಐವರ ಮೇಲೆ (ಬ್ರಹ್ಮಾ, ವಿಷ್ಣು, ಶಿವ ಮಾಯಾ, ಧರ್ಮರಾಯ್) ಸತ್ಯಪುರುಷ ಪರಮಾತ್ಮ (ಕವಿರ್ದೇವ) ನಿರುವನು. ಇವನೇ ಸತ್ಯಲೋಕದ ಪ್ರಭು. ಉಳಿದ ಎಲ್ಲಾ ಪರಬ್ರಹ್ಮ, ಬ್ರಹ್ಮ (ಧರ್ಮರಾಯ), ಮಾಯಾ (ದುರ್ಗಾ) ಹಾಗೂ ಬ್ರಹ್ಮಾ, ವಿಷ್ಣು, ಶಿವ ನಾಶಹೊಂದುವ ಭಗವಂತರು. ಮಹಾಪ್ರಳಯದಲ್ಲಿ ಇವರು ಹಾಗೂ ಇವರ ಎಲ್ಲ ಲೋಕಗಳು ಸಮಾಪ್ತವಾಗುತ್ತವೆ. ಸಾಮಾನ್ಯ ಜೀವಿಗಿಂತ ಇವರ ಆಯಸ್ಸು ಎಷ್ಟೋ ಸಾವಿರ ಪಟ್ಟು ಹೆಚ್ಚಾಗಿದೆ. ಆದರೆ ಯಾವ ಸಮಯ ನಿರ್ಧಾರಿತವಾಗಿದೆ ಅದು ಒಂದು ದಿನ ನಿಶ್ಚಿತವಾಗಿ ಪೂರ್ಣವಾಗುವುದು. ಈ ವಿಷಯದಲ್ಲಿ ಗೌರವಾನ್ವಿತ ಗರೀಬ್‌ದಾಸರು ಹೀಗೆ ಹೇಳಿದ್ದಾರೆ :-

ಶಿವ್ ಬ್ರಹ್ಮಾ ಕಾ ರಾಜ್, ಇಂದ್ರ್ ಗಿನತೀ ಕಹಾಂ ।

ಚಾರ್ ಮುಕ್ತಿ ವೈಕುಂಠ್ ಸಮುಝ್, ಯೆತಾ ಲಹ್ಯಾ ॥
ಸಂಖ್ ಜುಗನ್ ಕೀ ಜುನೀ, ಉಮ್ರ್ ಬಡ್ ಧಾರಿಯಾ ।
ಜಾ ಜನನೀ ಕುರ್ಬಾನ್, ಸು ಕಾಗಜ್ ಪಾರಿಯಾ ॥
ಯೆತೀ ಉಮ್ರ್ ಬುಲಂದ್ ಮರ್ೈಗಾ ಅಂತ್ ರೆ ।
ಸತ್‌ಗುರು ಲಗೆ ನ ಕಾನ್ ನ ಭೈಂಟೆ ಸಂತ್ ರೆ ॥

ಶಂಖ ಯುಗದ (ಬಹಳ ವರ್ಷಗಳ) ಆಯಸ್ಸು ಇದ್ದರೂ ಸಹ ಒಂದು ದಿನ ಖಂಡಿತ ಮುಗಿಯುತ್ತದೆ. ಒಂದೊಮ್ಮೆ ಸತ್ಯಪುರುಷ ಪರಮಾತ್ಮ (ಕವಿರ್ದೇವ) ಕಬೀರ ಪರಮೇಶ್ವರರ ಪ್ರತಿನಿಧಿ ಪೂರ್ಣ ಸಂತ (ಗುರು) ಅವರು ಮೂರು ನಾಮದ ಮಂತ್ರ (ಅದರಲ್ಲಿ ಒಂದು ಓಂ+ತತ್+ಸತ್ ಸಾಂಕೇತಿಕವಾಗಿವೆ) ಕೊಡುತ್ತಾರೆ. ಹಾಗೂ ಅವರಿಗೆ ಪೂರ್ಣ ಸಂತನಿಂದ ನಾಮೋಪದೇಶ ಕೊಡುವ ಆದೇಶವಿದೆ, ಅವರಿಂದ ಉಪದೇಶ ಪಡೆದು ನಾಮ ಜಪದ ಗಳಿಕೆ ಮಾಡಿದರೆ, ನಾವು ಸತ್ಯಲೋಕದ ಅಧಿಕಾರಿ ಹಂಸರಾಗುತ್ತೇವೆ. ಸತ್ಯಸಾಧನೆ ಮಾಡದ, ದೀರ್ಘ ಆಯಸ್ಸಿನಿಂದ ಪ್ರಯೋಜನವೇನು ಏಕೆಂದರೆ ನಿರಂಜನ್‌ನ ಲೋಕದಲ್ಲಿ ದುಃಖವೇ ದುಃಖವಿದೆ.

ಕಬೀರ್, ಜೀವನಾ ತೊ ಥೋಡಾ ಹೀ ಭಲಾ, ಜೈ ಸತ್ ಸುಮಿರನ್ ಹೋಯ್ ।
ಲಾಖ್ ವರ್ಷ ಕಾ ಜೀವನಾ, ಲೆಖೈ ಧರೈ ನಾ ಕೋಯ್ ॥

ಒಂದೊಮ್ಮೆ ಸತ್ಯ ಸಾಧನೆ ಮಾಡಿದರೆ ಕಡಿಮೆ ಆಯಸ್ಸು ಒಳ್ಳೆಯದು. ಸತ್ಯ ಪುರುಷನ ಸತ್ಯ ಸಾಧನೆ ಬಿಟ್ಟು ಹಾಗೂ ಕಾಲಬ್ರಹ್ಮನ ಮತ್ತು ದೇವಿ-ದೇವತೆಗಳ ಪೂಜೆ ಮಾಡಿ ಮತ್ತು ಪ್ರಾಣಾಯಮ ಇತ್ಯಾದಿ ಮಾಡಿ ಹೆಚ್ಚು ವರ್ಷ ಬದುಕುವವರ ಯಾವುದೇ ಲೆಕ್ಕ (ಅಕೌಂಟ್) ಮೋಕ್ಷ ಮಾರ್ಗದಲ್ಲಿ ಮಾಡುವುದಿಲ್ಲ. ಇಷ್ಟು ಅಧಿಕ ಆಯಸ್ಸು (ಶಂಕರನದಷ್ಟು) ಸಿಕ್ಕಿದರೆ ಒಂದು ದಿನ ಮೃತ್ಯು ಖಂಡಿತ ಆಗುವುದು. ಭಕ್ತಿ ತಪ್ಪಾಗಿದ್ದರೆ, ಜನನ ಹಾಗೂ ಮರಣದ ಚಕ್ರ ಇರುವುದು, ಇಂಥ ಆಯಸ್ಸಿನ ಲಾಭವೇನು.

ಕಬೀರ ಪರಮೇಶ್ವರರು ತಮ್ಮ ಪರಿಚಯವನ್ನು ಸ್ವತಃ ತಿಳಿಸಿದ್ದಾರೆ. ಈ ದೇವರುಗಳಿಗಿಂತ ಮೇಲೆ ಅಸಂಖ್ಯೆ ಭುಜಗಳುಳ್ಳ ಸತ್ಯಪುರುಷನಿದ್ದಾನೆ. ಅವನು ಸತ್ಯಲೋಕ (ಸತ್ಯ ಖಂಡ, ಸತ್ಯಧಾಮ್) ದಲ್ಲಿರುತ್ತಾನೆ. ಅವನ ಅಧಿನ ಎಲ್ಲಾ ಲೋಕಗಳು [ಪರಬ್ರಹ್ಮನ 7 ಶಂಖ ಬ್ರಹ್ಮಾಂಡ, ಕಾಲ ಬ್ರಹ್ಮನ 21 ಬ್ರಹ್ಮಾಂಡಗಳು, ಶಕ್ತಿ (ದುರ್ಗಾ), ಬ್ರಹ್ಮಾ, ವಿಷ್ಣು, ಶಿವನ ಲೋಕಗಳು ಹಾಗೂ ಅನ್ಯ ಸರ್ವ ಬ್ರಹ್ಮಾಂಡ] ಇವೆ. ಯಾರು ಸತ್ಯನಾಮ/ ಸಾರನಾಮವನ್ನು ಸಂಪೂರ್ಣ ಜ್ಞಾನಿ ಅಂದರೆ ಪೂರ್ಣ ಗುರುವಿನಿಂದ ಪಡೆದು ಜಪಿಸಿದರೆ ಸತ್ಯಲೋಕಕ್ಕೆ ಹೋಗುತ್ತಾರೆ, ಅಂತಹ ಆತ್ಮಗಳಿಗೆ ಪುನಃ ಜನ್ಮ ಆಗುವುದಿಲ್ಲ. ಕವಿರ್ದೇವರು ಸ್ವತಃ ಎಲ್ಲ ಬೇರೆ-ಬೇರೆ ಲೋಕಗಳಲ್ಲಿ ಬೇರೆ-ಬೇರೆ ನಾಮಗಳಿಂದ ವಿರಾಜಮಾನರಾಗಿದ್ದಾರೆ. ಹೇಗೆಂದರೆ ಅಲಖ್‌ಲೋಕದಲ್ಲಿ 'ಅಲಖ್ ಪುರುಷ', ಅಗಮ್‌ಲೋಕದಲ್ಲಿ 'ಅಗಮ್‌ಪುರುಷ', ಅಕಹ/ ಅನಾಮಿ ಲೋಕದಲ್ಲಿ ಅನಾಮಿ ಪುರುಷ ರೂಪದಲ್ಲಿ ವಿರಾಜಮಾನರಿದ್ದಾರೆ. ಇವಂತು ಅವರ ಉಪನಾಮಗಳಿವೆ ಆ ಪೂರ್ಣ ಪುರುಷನ ವಾಸ್ತವಿಕ ನಾಮ 'ಕವಿರ್ದೇವ' (ಭಾಷೆಯ ಭಿನ್ನತೆಯಿಂದ ಕಬೀರ ಸಾಹೇಬ) ಇದೆ.

## "ಗೌರವಾನ್ವಿತ ಗುರು ನಾನಕ್ ರವರ ವಾಣಿಯಲ್ಲಿ ಸೃಷ್ಟಿ ರಚನೆಯ ಸಂಕೇತ"

**ಶ್ರೀ ಗುರು ನಾನಕ್ ರವರ ಅಮೃತವಾಣಿ, ಮಹಲಾ-1, ರಾಗ ಬಿಲಾವಲು, ಅಂಶ-1 ("ಗುರು ಗ್ರಂಥ" ಪುಟ. 839)**

ಆಪೆ ಸಚು ಕೀಆ ಕರ್ ಜೋಡಿ । ಅಂಡಜ್ ಫೋಡಿ ಜೋಡಿ ವಿಛೋಡ್ ॥
ಧರತೀ ಆಕಾಶ್ ಕೀಯೆ ಬೈಸಣ್ ಕಉ ಥಾಉ । ರಾತಿ ದಿನಂತು ಕೀಏ ಭಉ-ಭಾಉ ॥
ಜಿನ್ ಕೀಏ ಕರಿ ವೇಖಣ್ ಹಾರಾ (3)

ತ್ರಿತೀಆ ಬ್ರಹ್ಮಾ–ಬಿಸನು–ಮಹೇಸಾ । ದೇವಿ ದೇವ್ ಉಪಾಏ ವೇಸಾ । (4)
ಪಉಣ್ ಪಾಣೀ ಅಗನೀ ಬಿಸರಾಉ । ತಾಹೀ ನಿರಂಜನ್ ಸಾಚೊ ನಾಉ ।
ತಿಸು ಮಹಿ ಮನು ಆ ರಹಿಆ ಲಿವ್ ಲಾಈ । ಪ್ರಣವತಿ ನಾನಕು ಕಾಲು ನ ಖಾಈ ॥ 10 ॥

**ಭಾವಾರ್ಥ :– ಸತ್ಯಪುರುಷನು ಸ್ವತಃ ತನ್ನ ಕೈಯಿಂದಲೇ ಸಮಸ್ತ ಸೃಷ್ಟಿಯ ರಚನೆ ಮಾಡಿರುವನು. ಅವನೇ ಮೊಟ್ಟೆಯನ್ನು ಮಾಡಿದನು. ನಂತರ ಅದರಿಂದ ಜ್ಯೋತಿ ನಿರಂಜನನು ಹೊರಬಂದನು. ಅದೇ ಪೂರ್ಣ ಪರಮಾತ್ಮನು ಸರ್ವ ಜೀವಿಗಳಿಗೆ ವಾಸಿಸಲು, ಭೂಮಿ, ಆಕಾಶ, ಗಾಳಿ, ನೀರು, ಅಗ್ನಿ, ಎಂಬ ಪಂಚ ತತ್ವಗಳನ್ನು ರಚಿಸಿದ. ತನ್ನಿಂದ ರಚಿತವಾದ ಸೃಷ್ಟಿಗೆ, ಸ್ವಯಂ ಸಾಕ್ಷಿಯಾಗಿರುವನು. ಬೇರೆ ಯಾರೂ ಸರಿಯಾದ ಮಾಹಿತಿ ಕೊಡಲಾರರು. ನಂತರ ಮೊಟ್ಟೆ ಒಡೆದರಿಂದ ಹೊರಬಂದ ಜ್ಯೋತಿ ನಿರಂಜನ್‌ನ ನಂತರ ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಹಾಗೂ ಶ್ರೀ ಶಿವನ ಉತ್ಪತ್ತಿ ಆಯಿತು. ಆದಾದ ನಂತರ ಅನ್ಯ ದೇವಿ–ದೇವತೆಗಳ ಉತ್ಪತ್ತಿ ಆಯಿತು ಹಾಗು ಅನೇಕ ಜೀವಿಗಳ ಉತ್ಪತ್ತಿಯಾಯ್ತು. ಅದರ ನಂತರ ಅನ್ಯ ದೇವತೆಗಳ ಜೀವನ ಚರಿತ್ರೆ, ಹಾಗೂ ಅನ್ಯ ಋಷಿಗಳ ಅನುಭವದ 6 ಶಾಸ್ತ್ರ ಹಾಗೂ 18 ಪುರಾಣಗಳಾದವು. ಪೂರ್ಣ ಪರಮಾತ್ಮನ ನಿಜ ನಾಮ. (ಸತ್ಯನಾಮ) ಸಾಧನೆಯನ್ನು ಅನನ್ಯ ಮನದಿಂದ (ದೃಢಚಿತ್ತದಿಂದ) ಮಾಡುವುದರಿಂದ ಗುರು ಮರ್ಯಾದೆಯಲ್ಲಿ, (ಪ್ರಣವತಿ) ಇದ್ದರೆ ಕಾಲನು ಭಕ್ಷಿಸುವುದಿಲ್ಲ ಎಂದು ಗುರು ನಾನಕ್ ರವರು ಹೇಳಿದ್ದಾರೆ.**

**ರಾಗ ಮಾರು (ಅಂಶ) ಅಮೃತವಾಣಿ ಮಹಲಾ 1 (ಗು. ಗ್ರಂ. ಪು. 1037)**

ಸುನಹು ಬ್ರಹ್ಮಾ, ಬಿಸನು ಮಹೇಸು, ಉಪಾಯೆ । ಸುನೆ ವರತೆ ಜುಗ್ ಸಭಾಯೆ ॥
ಇಸು ಪದ್ ಬಿಚಾರೆ ಸೊ ಜನು ಪುರಾ । ತಿಸ್ ಮಿಲಿಯೆ ಭರಮು ಚುಕಾಇದಾ ॥3॥
ಸಾಮ್ ವೇದು, ರುಗು, ಜುಜರು, ಅಥರಬಣು । ಬ್ರಹಮೆಂ ಮುಖ್ ಮಾಇಆ ಹೈ ತ್ರೈಗುಣ್
ತಾ ಕೀ ಕೀಮತ್ ಕಹಿ ನ್ ಸಕ್ಕೈ । ಕೊ ತಿಉ ಬೋಲೆ ಜಿಉ ಬುಲಾಈದಾ । (9)

**ಮೇಲಿನ ಅಮೃತ ವಾಣಿಯ ಸಾರಾಂಶ ಹೀಗಿದೆ "ಮೊಟ್ಟೆ ಎರಡು ಭಾಗವಾದಾಗ ಯಾರು ಹೊರ ಬಂದನು? ಅವನು ನಂತರ ಬ್ರಹ್ಮಲೋಕದ ಸುನ್ನ ಅಂದರೆ ಗುಪ್ತ ಸ್ಥಾನದಲ್ಲಿ (ರಹಸ್ಯ ಸ್ಥಾನದಲ್ಲಿ) ಬ್ರಹ್ಮಾ, ವಿಷ್ಣು, ಶಿವನ ಉತ್ಪತ್ತಿ ಮಾಡಿದ? ಹಾಗು ಆ ಪರಮಾತ್ಮ ಯಾರು ಕಾಲನ ಬಾಯಿಯಿಂದ ನಾಲ್ಕು ವೇದಗಳನ್ನ (ಪವಿತ್ರ ಋಗ್ವೇದ, ಯಜುರ್ವೇದ, ಸಾಮವೇದ ಅಥರ್ವವೇದ) ಉಚ್ಚಾರಿಸಿದ. ಪೂರ್ಣ ಪರಮಾತ್ಮ ಹೇಗೆ ಬೇಕು ಹಾಗೆ ಪ್ರತ್ಯೇಕ ಜೀವಿಗಳಿಂದ ಉಚ್ಚರಿಸುತ್ತಾನೆ. ಈ ಎಲ್ಲಾ ಜ್ಞಾನವನ್ನು ಪೂರ್ಣವಾಗಿ ಹೇಳುವ ಸಂತ ಸಿಕ್ಕರೆ ಅವನ ಬಳಿ ಹೋಗಿ ಹಾಗು ಯಾರು ಎಲ್ಲಾ ಸಂದೇಹಗಳನ್ನು ಸಂಪೂರ್ಣ ನಿವಾರಿಸುತ್ತಾನೆ, ಅವನೇ ಪೂರ್ಣ ಸಂತ ಅಂದರೆ ತತ್ವದರ್ಶಿ ಸಂತನು.**

**ಗೌರವಾನ್ವಿತ ಗುರು ನಾನಕ್ ರವರ ಅಮೃತವಾಣಿ. ಶ್ರೀ ಗುರು ಗ್ರಂಥದ ಪುಟ. 929 ರಾಗ ರಾಮಕಲೀ ಮಹಲಾ 1, ದಖಣೀ ಓಅಂಕಾರ :–**

ಓಅಂಕಾರಿ ಬ್ರಹ್ಮಾ ಉತಪತಿ । ಓ ಅಂಕಾರೂ ಕೀಆ ಜಿನಿ ಚಿತ್ । ಓಅಂಕಾರಿ ಸೈಲ್ ಜುಗ್ ಭಏ । ಓ ಅಂಕಾರಿ ಬೇದ್ ನಿರಮಏ । ಓಅಂಕಾರಿ ಸಬದಿ ಉಧರೆ । ಓಅಂಕಾರಿ ಗುರುಮುಖಿ ತರೆ । ಓನಮ್ ಅಖರ್ ಸುಣಹೂ ಬೀಚಾರು । ಓನಮ್ ಅಖರು ತ್ರಿಭವಣ್ ಸಾರು ।

**ಮೇಲಿನ ಅಮೃತ ವಾಣಿಯಲ್ಲಿ ಶ್ರೀ ಗುರು ನಾನಕ್ ರವರು ಹೇಳುತ್ತಿದ್ದಾರೆ:– ಓಂಕಾರ ಅರ್ಥಾತ್ ಜ್ಯೋತಿ ನಿರಂಜನ (ಕಾಲ) ನಿಂದ, ಬ್ರಹ್ಮಾನ ಉತ್ಪತ್ತಿಯಾಯಿತು. ಅನೇಕ ಯುಗಗಳವರೆಗೆ ಸ್ವೇಚ್ಛೆಯಿಂದ ಇದ್ದು, ಓಂಕಾರನು (ಬ್ರಹ್ಮನು) ವೇದಗಳನ್ನು ಉತ್ಪತ್ತಿ ಮಾಡಿದ. ಅದು ಬ್ರಹ್ಮಾನಿಗೆ ಪ್ರಾಪ್ತವಾಯಿತು. ಮೂರು ಲೋಕಗಳ ಭಕ್ತಿಯ ಕೇವಲ 'ಓಂ' ಮಂತ್ರವಿದೆ ಅದನ್ನೇ ವಾಸ್ತವದಲ್ಲಿ ಜಪ ಮಾಡುವುದು. ಈ 'ಓಂ' ಮಂತ್ರದ ಉಪದೇಶವನ್ನು ಪೂರ್ಣ**

ಸದ್ಗುರುವಿನಿಂದ ಪಡೆದು ಜಪ ಮಾಡಿದರೆ, ಉದ್ಧಾರವಾಗುವುದು.

ವಿಶೇಷ :– ಶ್ರೀ ಗುರು ನಾನಕ್ ರವರು ಮೂರು ಮಂತ್ರಗಳ (ಓಂ–ತತ್–ಸತ್) ಸ್ಥಾನ–ಸ್ಥಾನಗಳಲ್ಲಿನ ರಹಸ್ಯಮಯವಾಗಿ ವಿವರಿಸಿದ್ದಾರೆ, ಇದನ್ನು ಕೇವಲ ಪೂರ್ಣ ಸಂತರು ಮಾತ್ರ ತಿಳಿಯಬಲ್ಲರು ಹಾಗೂ ಈ ಮೂರು ಮಂತ್ರಗಳ ಜಪವನ್ನು ಉಪದೇಶ ಪಡೆಯುವವರಿಗೆ ತಿಳಿಸಲಾಗುತ್ತದೆ. (ಪು 1038) :–

ಉತ್ತಮ್ ಸತಿಗುರು ಪುರುಷ್ ನಿರಾಲೆ, ಸಬದಿ ರತೆ ಹರಿ ರಸ್ ಮತವಾಲೆ ।
ರಿಧಿ, ಬುಧಿ, ಸಿಧಿ, ಗಿಆನ್ ಗುರು ತೆ ಪಾಇಯೆ । ಪೂರೆ ಭಾಗ್ ಮಿಲಾಈದಾ ॥ 15 ॥
ಸತಿಗುರು ತೆ ಪಾಏ ಬೀಚಾರಾ, ಸುನ್ ಸಮಾಧಿ ಸಚೆ ಘರಬಾರಾ ।
ನಾನಕ್ ನಿರಮಲ್ ನಾದು ಸಬದ್ ಧುನಿ, ಸಚು ರಾಮೈಂ ನಾಮಿ ಸಮಾಇದಾ ॥ 17 ॥

ಮೇಲಿನ ಅಮೃತ ವಾಣಿಯ ಭಾವಾರ್ಥ :– ಈ ವಾಸ್ತವಿಕ ಜ್ಞಾನ ನೀಡುವ ಸದ್ಗುರುವಂತು ವಿರಳ. ಅವರು ಕೇವಲ ನಾಮ ಜಪವನ್ನು ಜಪಿಸಲು ಕೊಡುತ್ತಾರೆ ಮತ್ತು ಜಪಿಸುತ್ತಾರೆ. ಬೇರೆ ಹಠಯೋಗ ಸಾಧನೆಯನ್ನು ಹೇಳುವುದಿಲ್ಲ. ನಿಮಗೆ ಹಣ, ಸಂಪತ್ತು, ಪದವಿ, ಬುದ್ಧಿ ಅಥವಾ ಭಕ್ತಿಯ ಶಕ್ತಿಯೂ ಬೇಕಾಗಿದ್ದರೆ ಅದನ್ನು ಪೂರ್ಣ ಜ್ಞಾನಿ ಸಂತರು ಪ್ರದಾನ ಮಾಡುವರು. ಇಂತಹ ಪೂರ್ಣ ಸಂತರು ಬಹಳ ಭಾಗ್ಯವಂತರಿಗೆ ದೊರೆಯುತ್ತಾರೆ. ಆ ಪೂರ್ಣ ಸಂತರು ಮಾತ್ರ ವಿವರಿಸಬಲ್ಲರು ಮೇಲೆ ಆಕಾಶದಲ್ಲಿ ಪರಮೇಶ್ವರನು ತಮ್ಮ ವಾಸ್ತವಿಕ ಮನೆಯನ್ನು ಮೇಲೆ ಸತ್ಯಲೋಕದಲ್ಲಿ ರಚಿಸಿದ್ದಾನೆ. ಅಲ್ಲಿ ಒಂದು ವಾಸ್ತವಿಕ ಸಾರನಾಮದ ಶಬ್ದ ಮೊಳಗುತ್ತಿದೆ. ಆ ಆನಂದದಲ್ಲಿ ಅವಿನಾಶಿ ಪರಮೇಶ್ವರನ ಸಾರಶಬ್ದದಿಂದ ಸೇರಬಹುದು ಅಂದರೆ ಆ ವಾಸ್ತವಿಕ ಸುಖದ ಸ್ಥಾನದಲ್ಲಿ ವಾಸವಾಗಬಹುದು. ಬೇರೆ ನಾಮಗಳಿಂದಾಗಲಿ, ಬೇರೆ ಅಲ್ಪಜ್ಞಾನಿ ಗುರುಗಳಿಂದಾಗಲಿ, ಇದು ಸಾಧ್ಯವಿಲ್ಲ.

ಆಂಶಿಕ ಅಮೃತವಾಣಿ ಮಹಲಾ ಪಹಲಾ (ಶ್ರೀ ಗುರು ಗ್ರಂಥ. ಪುಟ 359–360)

ಸಿವ್ ನಗರೀ ಮಹಿ ಆಸಣಿ ಬೈಸಉ ಕಲಪ್ ತ್ಯಾಗೀ ವಾದ್ಂ । (1)
ಸಿಂಙೀ ಸಬದ್ ಸದಾ ಧುನಿ ಸೋಹೈ ಅಹಿನಿಸಿ ಪೂರೈ ನಾದ್ಂ । (2)
ಹರಿ ಕೀರತಿ ರಹ್ ರಾಸಿ ಹಮಾರಿ ಗುರು ಮುಖ್ ಪಂಥ್ ಅತೀತ್ಂ । (3)
ಸಗಲೀ ಜ್ಯೋತಿ ಹಮಾರಿ ಸಂಮಿಆ ನಾನಾ ವರಣ್ ಅನೇಕ್ಂ ।
ಕಹ್ ನಾನಕ್ ಸುಣಿ ಭರಥರೀ ಜೋಗೀ ಪಾರ್‌ಬ್ರಹ್ಮ ಲಿವ್ ಏಕ್ಂ । (4)

ಮೇಲಿನ ಅಮೃತವಾಣಿಯ ಭಾವಾರ್ಥ:– ಶ್ರೀ ಗುರು ನಾನಕ್ ರವರು ಹೇಳುತ್ತಿದ್ದಾರೆ– ಹೇ ಭರ್ಥರಿ ಯೋಗೀ! ನಿಮ್ಮ ಸಾಧನೆಯು ಭಗವಂತ ಶಿವನವರೆಗೆ ಇದೆ. ಇದರಿಂದ ನಿಮಗೆ ಶಿವನಗರಿಯಲ್ಲಿ ಸ್ಥಾನ ಸಿಕ್ಕಿದೆ. ಶರೀರದಲ್ಲಿ ಶೃಂಗದ ಶಬ್ದ ಮೊದಲಾದವು ಆಗುತ್ತಿದೆ. ಅದು ಈ ಕಮಲಗಳ ಶಬ್ದ. ಟೆಲಿವಿಷನ್ ರೀತಿಯಲ್ಲಿ ಪ್ರತ್ಯೇಕ ದೇವರ ಲೋಕದಿಂದ ಶರೀರದಲ್ಲಿ ಕೇಳಿಸುತ್ತಿದೆ.

ನಾವಂತು, ಒಬ್ಬನೇ ಪರಮಾತ್ಮ ಪಾರಬ್ರಹ್ಮ ಅಂದರೆ ಎಲ್ಲರಿಗಿಂತಲೂ ಬೇರೆಯಿರುವ ಪೂರ್ಣ ಪರಮಾತ್ಮ, ಆ ಒಬ್ಬ ಪರಮಾತ್ಮನ ಅನನ್ಯ ಮನಸ್ಸಿನಿಂದ ಭಕ್ತಿ ಮಾಡುತ್ತೇವೆ.

ನಾವು ಆಡಂಬರ (ಕೈಯಲ್ಲಿ ದಂಡಧರಿಸಿ, ಬಸ್ಮಲೇಪನ ಮಾಡಿಕೊಳ್ಳುವುದು) ಮಾಡುವುದಿಲ್ಲ. ನಾನಂತೂ ಸರ್ವ ಜೀವಿಗಳನ್ನು ಒಬ್ಬ ಪೂರ್ಣ ಪರಮಾತ್ಮನ ಸಂತಾನವೆಂದು ತಿಳಿದಿದ್ದೇನೆ. ಎಲ್ಲವೂ ಅವನ ಶಕ್ತಿಯಿಂದಲೇ ನಡೆಯುತ್ತಿದೆ. ನಮ್ಮ ಧನವಂತು ಗುರುವಿನಿಂದ ಉಪದೇಶ ಪಡೆದ ಸತ್ಯನಾಮ ಜಪವೇ ಆಗಿದೆ ಹಾಗು ಕ್ಷಮೆ ಮಾಡುವುದೇ ನಮ್ಮ ವೇಷ ಭೂಷಣ ಆಗಿದೆ. ನಾನಂತೂ ಪೂರ್ಣ ಪರಮಾತ್ಮನ ಉಪಾಸಕ ಹಾಗು ಪೂರ್ಣ ಸದ್ಗುರುವಿನ ಭಕ್ತಿ ಮಾರ್ಗ ಇದಕ್ಕಿಂತ ಭಿನ್ನವಾಗಿದೆ.

**ಅಮೃತವಾಣಿ ರಾಗ ಆಸಾ ಮಹಲಾ 1 (ಶ್ರೀ ಗುರು ಗ್ರಂಥ ಪುಟ 420)**

॥ಆಸಾ ಮಹಲಾ 1 ॥ ಜಿನಿ ನಾಮು ವಿಸಾರಿಆ ದೂಜೈ ಭರಮಿ ಭುಲಾಈ । ಮೂಲು ಛೋಡಿ ಡಾಲೀ ಲಗೆ, ಕಿಆ ಪಾವಹಿ ಛಾಈ ॥ 1 ॥ ಸಾಹಿಬು ಮೇರಾ ಏಕು ಹೈ ಅವರು ನಹೀಂ ಭಾಈ । ಕಿರಪಾ ತೆ ಸುಖು ಪಾಇಆ ಸಾಚೆ ಪರಥಾಈ ॥3॥ ಗುರ್ ಕೀ ಸೇವಾ ಸೋ ಕರೆ ಜಿಸು ಆಪಿ ಕರಾಏ । ನಾನಕ್ ಸಿರು ದೆ ಛೂಟೀಏ ದರಗಹ್ ಪತಿ ಪಾಏ ॥8 ॥ 18 ॥

**ಮೇಲಿನ ವಾಣಿಯ ಭಾವಾರ್ಥ :- ಶ್ರೀ ಗುರು ನಾನಕ್ ರವರು ಹೇಳುತ್ತಿದ್ದಾರೆ, ಯಾರು ಪೂರ್ಣ ಪರಮಾತ್ಮನ ವಾಸ್ತವಿಕ ನಾಮವನ್ನು ಮರೆತು ಬೇರೆ ಭಗವಂತನ ನಾಮ ಜಪ ಮಾಡುತ್ತಾರೋ, ಅವರು ಭ್ರಮೆಯಲ್ಲಿದ್ದಾರೆ. ಬೇರನ್ನು (ಪೂರ್ಣ ಪರಮಾತ್ಮ) ಬಿಟ್ಟು ಕೊಂಬೆಗಳಿಗೆ (ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವನ) ನೀರು ಹಾಕಿದಂತೆ (ಪೂಜೆ ಮಾಡಿದಂತೆ) ಈ ಸಾಧನೆಯಿಂದ ಯಾವುದೇ ಲಾಭವಾಗುವುದಿಲ್ಲ ಅಂದರೆ ಹೀಗೆ ಮಾಡಿದರೆ ಗಿಡ ಒಣಗುತ್ತದೆ. ಅದರ ನೆರಳಿನಲ್ಲಿ ಕೂರಲೂ ಆಗುವುದಿಲ್ಲ ಇದರ ಸಾರವಿಷ್ಟೆ, ಶಾಸ್ತ್ರ ವಿಧಿಯನ್ನು ಬಿಟ್ಟು ಮಾಡುವ ಸಾಧನೆಯು ವ್ಯರ್ಥ ಪ್ರಯತ್ನವಾಗುವುದು ಯಾವುದೇ ಲಾಭವಿಲ್ಲ, ಇದಕ್ಕೆ ಪ್ರಮಾಣವು ಪವಿತ್ರ ಗೀತೆಯ 16ನೇ ಅಧ್ಯಾಯದ 23-24ನೇ ಶ್ಲೋಕದಲ್ಲಿದೆ. ಆ ಪೂರ್ಣ ಪರಮಾತ್ಮನನ್ನು ಪಡೆಯಲು, ಮನಬಂದಂತೆ ಸಾಧನೆ ಮಾಡುವುದನ್ನು ಬಿಟ್ಟು, ಪೂರ್ಣ ಗುರುದೇವರನ್ನು ಆಶ್ರಯಿಸಿ. ಅವರಿಂದ ಸತ್ಯನಾಮ ಜಪದ ಉಪದೇಶ ಪಡೆದಲ್ಲಿ ಮೋಕ್ಷ ಸಂಭವವಿದೆ. ಇಲ್ಲವಾದರೆ ಮೃತ್ಯುವಿನ ನಂತರ ನರಕಕ್ಕೆ ಹೋಗಬೇಕಾಗುವುದು.**

**ಶ್ರೀ ಗುರು ಗ್ರಂಥ ಪುಟ ಸಂ. 843-844.**

ಬಿಲಾವಲು ಮಹಲಾ 1 ॥ ಮೈ ಮನ್ ಚಾಹು ಘಣಾ ಸಾಚಿ ವಿಗಾಸೀ ರಾಮ್ । ಮೋಹಿ ಪ್ರೇಮ್ ಪಿರೆ ಪ್ರಭು ಅಬಿನಾಸಿ ರಾಮ್ ॥ ಅವಿಗತೊ ಹರಿ ನಾಥು ನಾಥಹ್ ತಿಸೈ ಭಾವೈ ಸೋ ಥೀಏ । ಕಿರಪಾಲು ಸದಾ ದಇಆಲು ದಾತಾ ಜೀಆ ಅಂದರಿ ತೂಂ ಜೀಯೆ । ಮೈಂ ಆಧಾರು ತೇರಾ ತೂ ಖಸಮು ಮೇರಾ ಮೈ ತಾಣು ತಕೀಆ ತೆರಓ । ಸಾಚಿ ಸೂಚಾ ಸದಾ ನಾನಕ್ ಗುರಸಬದಿ ಝುಗರು ನಿಬೇರಓ ॥ 4 ॥ 2॥

**ಮೇಲಿನ ಅಮೃತವಾಣಿಯಲ್ಲಿ ಶ್ರೀ ಗುರು ನಾನಕ್ ರವರು ಹೀಗೆ ಹೇಳುತ್ತಿದ್ದಾರೆ. ಅವಿನಾಶೀ ಪೂರ್ಣ ಪರಮಾತ್ಮನು ನಾಥ್‌ಗಳ ನಾಥ್‌ರು ಅಂದರೆ ದೇವರುಗಳ ದೇವರು (ಸರ್ವ ಪ್ರಭುಗಳು ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಶ್ರೀ ಶಿವ, ಶ್ರೀ ದುರ್ಗಾ, ಬ್ರಹ್ಮ ಹಾಗೂ ಪರಬ್ರಹ್ಮನೂ ನಾಥ ಅಂದರೆ ಸ್ವಾಮಿ). ನಾನಂತೂ ಸತ್ಯನಾಮವನ್ನು ಹೃದಯದಲ್ಲಿ ಧಾರಣೆ ಮಾಡಿರುವೆ. ಹೇ ಪರಮಾತ್ಮ! ಸರ್ವ ಜೀವಿಗಳ ಜೀವನಾಧಾರ ಕೂಡಾ ನೀವೇ. ನಾನು ನಿಮ್ಮ ಆಶ್ರಯದಲ್ಲಿದ್ದೇನೆ, ತಾವು ನನ್ನ ಸ್ವಾಮಿ, ತಾವೇ ಗುರುವಿನ ರೂಪದಲ್ಲಿ ಬಂದು, ಸತ್ಯ ಭಕ್ತಿಯ ನಿರ್ಣಾಯಕ ಜ್ಞಾನ ಪ್ರದಾನ ಮಾಡಿ, ಎಲ್ಲ ಜಗಳಗಳನ್ನು ಕೊನೆಗೊಳಿಸಿದಿರಿ ಅರ್ಥಾತ್ ಸಂದೇಹ ನಿವಾರಣೆ ಮಾಡಿದಿರಿ.**

**(ಶ್ರೀ ಗುರು ಗ್ರಂಥ ಪುಟ ಸಂ. 721 ರಾಗ ತಿಲಂಗ ಮಹಲಾ 1)**

ಯಕ್ ಅರ್ಜ್ ಗುಫತಮ್ ಪೇಶ್ ತೊ ದರ್ ಕೂನ್ ಕರತಾರ್ ।
ಹಕ್ಕಾ ಕಬೀರ್ ಕರೀಮ್ ತೂ ಬೇಯೆಬ್ ಪರವರದಿಗಾರ್ ।
ನಾನಕ್ ಬುಗೋಯದ್ ಜನ್ ತುರಾ ತೇರೆ ಚಾಕರಾಂ ಪಾಖಾಕ್ ।

**ಮೇಲಿನ ಅಮೃತವಾಣಿಯು ಸ್ಪಷ್ಟ ಪಡಿಸುತ್ತಿದೆ (ಹಕ್ಕಾ ಕಬೀರ್ ) ತಾವು ಸತ್ಯ ಕಬೀರ (ಕೂನ ಕರತಾರ) ಶಬ್ದ ಶಕ್ತಿಯಿಂದ ರಚನೆ ಮಾಡಿರುವ ಶಬ್ದ ಸ್ವರೂಪಿ ಪ್ರಭು. ಅರ್ಥಾತ್ ಸಕಲ ಸೃಷ್ಟಿಯ ರಚನಾಕಾರ ತಾವೇ (ಬೆಎಬ್) ನಿರ್ವಿಕಾರ (ಪರವರದಿಗಾರ್) ಎಲ್ಲರ ಪಾಲನೆ ಮಾಡುವವ ದಯಾಳು ಪ್ರಭು, ನಾನು ನಿಮ್ಮ ದಾಸರ-ದಾಸ.**

**(ಶ್ರೀ ಗುರು ಗ್ರಂಥ ಪುಟ ಸಂಖ್ಯೆ 24 ರಾಗ ಸಿರೀ ಮಹಲಾ 1)**

ತೇರಾ ಏಕ್ ನಾಮ್ ತಾರೆ ಸಂಸಾರ್, ಮ್ಯೆಂ ಏಹಾ ಆಸ್ ಏಹೋ ಆಧಾರ್ ।
ನಾನಕ್ ನೀಚ್ ಕಹ್ಯೆ ಬಿಚಾರ್, ದಾಣಕ್ ರೂಪ್ ರಹಾ ಕರತಾರ್ ।

**ಮೇಲೆ ಹೇಳಿರುವ ಅಮೃತವಾಣಿಯಲ್ಲಿ, ಸ್ಪಷ್ಟಪಡಿಸಲಾಗಿದೆ ಯಾರು ಕಾಶಿಯಲ್ಲಿನ ಧಾಣಕನೋ, (ಜುಲಾಹಾ) ಅವನೇ (ಕರತಾರ್) ಸೃಷ್ಟಿಕರ್ತನು. ಅತಿ ಆಧೀನತೆಯಿಂದ ಶ್ರೀ ಗುರು ನಾನಕ್ ರವರು ಹೇಳುತ್ತಿದ್ದಾರೆ. ನಾನು ಸತ್ಯ ಹೇಳುತ್ತಿದ್ದೇನೆ. ಈ ಧಾಣಕ (ನೇಕಾರ) ಅರ್ಥಾತ್ ಕಬೀರ ನೇಕಾರನೇ ಪೂರ್ಣ ಬ್ರಹ್ಮ 'ಸತ್ಯಪುರುಷನು'.**

**ವಿಶೇಷ :- ಮೇಲಿನ ಪ್ರಮಾಣಗಳ ಸಾಂಕೇತಿಕ ಜ್ಞಾನದಿಂದ ಸ್ಪಷ್ಟವಾಯ್ತು, ಸೃಷ್ಟಿಯ ರಚನೆ ಹೇಗೆ ಆಯಿತೆಂದು. ಈಗ ಪೂರ್ಣ ಪರಮಾತ್ಮರನ್ನು ಪ್ರಾಪ್ತಿಮಾಡಿಕೊಳ್ಳಬೇಕು. ಈ ಕಾರ್ಯ ಪೂರ್ಣ ಸಂತರಿಂದ ನಾಮೋಪದೇಶ ಪಡೆದಲ್ಲಿ ಮಾತ್ರ ಸಾಧ್ಯವಿದೆ.**

## "ಬೇರೆ ಸಂತರ ಮೂಲಕ ಸೃಷ್ಟಿ ರಚನೆಯ ದಂತ ಕಥೆ"

**ಅನ್ಯ ಸಂತರು ಸೃಷ್ಟಿ ರಚನೆಯ ಜ್ಞಾನವನ್ನು ಹೇಳಿದ್ದಾರೆ. ಅದು ಹೇಗಿದೆ? ದಯವಿಟ್ಟು ಓದಿರಿ ಕೆಳಗಿನಂತಿದೆ :- ರಾಧಾಸ್ವಾಮಿ ಪಂಥದ ಸಂತರ ಹಾಗೂ ಧನ-ಧನ ಸದ್ಗುರು ಪಂಥದ ಸಂತರ ವಿಚಾರ.**

**ಪವಿತ್ರ ಪುಸ್ತಕ 'ಜೀವನ ಚರಿತ್ರ' ಪರಮ ಸಂತ ಬಾಬಾ ಜಯಮಲ್ ಸಿಂಗ್ ಮಹಾರಾಜ ಪು.ಸಂ 102-103 ರಿಂದ ಸೃಷ್ಟಿ ರಚನೆ (ಸಾವನ್ ಕೃಪಾಲ್ ಪಬ್ಲಿಕೇಶನ್, ದೆಹಲಿ)**

ಮೊದಲು ಸತ್ಯಪುರುಷನು ನಿರಾಕಾರನಾಗಿದ್ದನು. ನಂತರ ಆಕಾರದಲ್ಲಿ ಬಂದರು ಮೇಲಿನ ಮೂರು ನಿರ್ಮಲ ಮಂಡಲಗಳು (ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ) ರಚಿಸಿದ್ದವು ಹಾಗೂ ಪ್ರಕಾಶ ಹಾಗು ಮಂಡಲಗಳ ಶಬ್ದ (ಧ್ವನಿ) ಆಯಿತು.

**ಪವಿತ್ರ ಪುಸ್ತಕ ಸಾರವಚನ (ನಸರ) ಪ್ರಕಾಶಕ:- ರಾಧಾಸ್ವಾಮಿ ಸತ್ಸಂಗ ಸಭಾ, ದಯಾಲಬಾಗ್ ಆಗರಾ "ಸೃಷ್ಟಿ ಕೀ ರಚನಾ" ಪುಟ 8 :-**

ಮೊದಲು ಕತ್ತಲೇ ಇತ್ತು. ಅದರಲ್ಲಿ ಪುರುಷ ಸುನ್ನ ಸಮಾಧಿ (ಆಕಾಶ) ಯಲ್ಲಿದ್ದರು. ಆಗ ಯಾವ ರಚನೆಯೂ ಆಗಿರಲಿಲ್ಲ. ನಂತರ ಹರ್ಷವಾದಾಗ ಶಬ್ದ ಪ್ರಕಟವಾಯಿತು ಮತ್ತು ಅದರಿಂದ ಎಲ್ಲಾ ರಚನೆ ಆಯಿತು. ಮೊದಲು ಸತ್ಯಲೋಕ ನಂತರ ಸತ್ಯಪುರುಷನ ಕಲೆಯಿಂದ 3 ಲೋಕ, ಎಲ್ಲಾ ವಿಸ್ತಾರವಾಯಿತು.

**ಈ ಜ್ಞಾನ ಹೀಗಿದೆ ಒಬ್ಬನು ನೌಕರಿಗೆ ಹೋಗುವ ಮೊದಲು ಸಂದರ್ಶನಕ್ಕಾಗಿ (ಇಂಟರ್ ವ್ಯೂ) ಗಾಗಿ ಹೋದನು. ನೀನು ಮಹಾಭಾರತ ಓದಿರುವೆಯಾ? ಎಂದು ಅಧಿಕಾರಿಯು ಕೇಳಿದಾಗ, ಅವನು ಕಂಠಸ್ಥ ಮಾಡಿರುವೆನೆಂದು ಉತ್ತರಿಸಿದ. ಅಧಿಕಾರಿ ಕೇಳಿದರು ಐದು ಜನ ಪಾಂಡವರ ಹೆಸರನ್ನು ಹೇಳು, ಆಗ ಆ ವ್ಯಕ್ತಿ ಉತ್ತರ ಕೊಟ್ಟ ಒಬ್ಬ ಭೀಮ ಇನ್ನೊಬ್ಬ ಅವರ ಅಣ್ಣ. ಇನ್ನೊಬ್ಬ ಅವನ ತಮ್ಮ, ಇನ್ನಿಬ್ಬರು ಇದ್ದರು, ಅವರ ಹೆಸರನ್ನು ಮರೆತಿರುವೆ ಎಂದ. ಮೇಲೆ ಹೇಳಿರುವ ಸೃಷ್ಟಿ ರಚನೆಯ ಜ್ಞಾನ ಹೀಗೆಯೇ ಇದೆ.**

**ಸತ್ಯಪುರುಷ ಹಾಗೂ ಸತ್ಯಲೋಕದ ಮಹಿಮೆ ಹೇಳುವ ಹಾಗೂ ಐದು ನಾಮ (ಓಂಕಾರ, ಜ್ಯೋತಿ ನಿರಂಜನ, ರರಂಕಾರ, ಸೋಹಂ, ಸತ್ಯನಾಮ) ಕೊಡುವವರು ಹಾಗೂ ಮೂರು ನಾಮ (ಅಕಾಲಮೂರ್ತಿ-ಸತ್ಯಪುರುಷ-ಶಬ್ದ ಸ್ವರೂಪಿ ರಾಮ) ನಾಮ ಕೊಡುವ ಸಂತರಿಂದ ರಚಿತವಾದ ಪುಸ್ತಕಗಳಿಂದ ಕೆಲವು ನಿಷ್ಕರ್ಷ:-**

**ಸಂತಮತ ಪ್ರಕಾಶ ಭಾಗ 3 ಪುಟ 76ರಲ್ಲಿ ಬರೆದಿದೆ :- "ಸತ್ಯಖಂಡ ಅಥವಾ ಸತ್ಯನಾಮ್ ನಾಲ್ಕನೆಯ ಲೋಕ" ಇಲ್ಲಿ "ಸತ್ಯನಾಮ"ಕ್ಕೆ ಸ್ಥಾನ ಎಂದು ಹೇಳಿದ್ದಾರೆ. ನಂತರ ಈ ಪುಸ್ತಕದ**

79ನೇ ಪುಟದಲ್ಲಿ ಹೀಗೆ ಬರೆದಿದ್ದಾರೆ– "ಒಬ್ಬ ರಾಮ ದಶರಥನ ಮಗ. ಎರಡನೆಯ ರಾಮ 'ಮನಸ್ಸು' ಮೂರನೆಯ ರಾಮ ಬ್ರಹ್ಮ, ನಾಲ್ಕನೆಯ ರಾಮ 'ಸತ್ಯನಾಮ' ಇವನೇ ನಿಜವಾದ ರಾಮ. ನಂತರ ಈ ಪುಸ್ತಕದ ಮೊದಲನೆಯ ಭಾಗ ಪುಟ ಸಂಖ್ಯೆ 17 ರಲ್ಲಿ ಬರೆದಿದೆ. "ಯಾವುದನ್ನು ಸತ್ಯನಾಮ" ಎನ್ನುತ್ತೇವೇಯೊ ಅದೇ ಸತ್ಯಲೋಕ." ಪವಿತ್ರ ಪುಸ್ತಕ "ಸಾರ ವಚನ ನಸರ್ ಅಂದರೆ ವಾರ್ತಿಕ" ಪುಟ ಸಂಖ್ಯೆ 3ರಲ್ಲಿ ಬರೆದಿದೆ. ಈಗ ತಿಳಿಯಬೇಕು. ರಾಧಾಸ್ವಾಮಿ ಪದ್ ಎಲ್ಲಕ್ಕಿಂತ ಉಚ್ಚ ಸ್ಥಾನದಲ್ಲಿದೆ. ಅದನ್ನೇ ಸಂತರು ಸತ್ಯಲೋಕ, ಸತ್ಯ ಖಂಡ, ಸಾರಶಬ್ದ, ಸತ್ಯ ಶಬ್ದ, ಸತ್ಯನಾಮ ಮತ್ತು ಸತ್ಯಪುರುಷ ಎಂದು ವ್ಯಾಖ್ಯಾನ ಮಾಡಿದ್ದಾರೆ. ಪವಿತ್ರ ಪುಸ್ತಕ ಸಾರವಚನ (ನಸರ್) ಆಗ್ರಾದಿಂದ ಪ್ರಕಾಶಿತವಾಗಿರುವುದು. ಪುಟ ಸಂಖ್ಯೆ 4ರಲ್ಲಿ ಮೇಲೆ ಹೇಗೆ ವರ್ಣಿಸಿದೆಯೋ, ಹಾಗೇ ವರ್ಣನೆ ಇದೆ. ಪವಿತ್ರ ಪುಸ್ತಕ "ಸಚ್ಚಖಂಡ ಕೀ ಸಡಕ್" ಪುಟ ಸಂಖ್ಯೆ 226 ರಲ್ಲಿ "ಸಂತರ ದೇಶ ಸತ್ಯಖಂಡ ಅಥವಾ ಸತ್ಯಲೋಕವಾಗಿದೆ. ಅದನ್ನೇ ಸತ್ಯನಾಮ ಸತ್ಯಶಬ್ದ' ಸಾರ ಶಬ್ದ ಎಂದು ಕರೆಯುತ್ತಾರೆ.

ವಿಶೇಷ :– ಮೇಲಿನ ಹೇಳಿಕೆಗಳು ಹೇಗಿವೆಯೆಂದರೆ ಯಾರೋ ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಪಟ್ಟಣವನ್ನೇ ನೋಡಿಲ್ಲ. ಕಾರ್ ನೋಡಿಲ್ಲ. ಪೆಟ್ರೋಲ್ ನೋಡಿಲ್ಲ. ಡ್ರೈವಿಂಗ್‌ನ ಜ್ಞಾನವೂ ಇಲ್ಲ. ಆದರೆ ಹೇಳುತ್ತಾನೆ. "ನಾನು ಕಾರಿನಲ್ಲಿ ಕುಳಿತು ಆನಂದ ಪಡುತ್ತೇನೆ ಎಂದು." ನಂತರ ಜೊತೆಗಾರರು ಕೇಳಿದರು "ಕಾರು ಹೇಗಿದೆ–ಪೆಟ್ರೋಲ್ ಹೇಗಿದೆ ಡ್ರೈವರ್ ಹೇಗಿದ್ದಾನೆ? ತಾನೆ ಗುರುವೆಂದು ಹೇಳುತ್ತಿದ್ದ ವ್ಯಕ್ತಿ ಹೇಳಿದ ಪಟ್ಟಣ ಎಂದರೆ ಕಾರು, ಪೆಟ್ರೋಲ್ ಅಂದರೂ ಕಾರೆ, ಡ್ರೈವರ್ ಅಂದರೂ ಕಾರೆ, ರಸ್ತೆ ಎಂದರೂ ಕಾರೇ ಎಂದನು.

ವಿಚಾರ ಮಾಡೋಣ ಬನ್ನಿ:– ಸತ್ಯಪುರುಷನು ಪೂರ್ಣ ಪರಮಾತ್ಮನಾಗಿದ್ದಾನೆ. ಸತ್ಯನಾಮವು "ಓಂ–ತತ್" ಈ ಎರಡು ಸಾಂಕೇತಿಕ ಮಂತ್ರಗಳಿಂದ ಕೂಡಿವೆ. ಹಾಗೂ ನಂತರ 'ಸಾರನಾಮ'ವು ಸಾಧಕನಿಗೆ ಪೂರ್ಣ ಗುರುವಿನಿಂದ ಉಪದೇಶಿಸಲ್ಪಡುತ್ತದೆ. ಈ ಸತ್ಯನಾಮ ಹಾಗೂ ಸಾರನಾಮ ಸ್ಮರಣೆ ಮಾಡುವ ನಾಮಗಳು, ಸತ್ಯಲೋಕವೆಂಬುದು ಸತ್ಯಪುರುಷನಿರುವ ಸ್ಥಾನ. ಪುಣ್ಯಾತ್ಮರೇ! ಈಗ ಸತ್ಯ ಹಾಗೂ ಅಸತ್ಯವನ್ನು ಸ್ವತಃ ನೀವೆ ನಿರ್ಧರಿಸಿ.

❑❑❑

# "ಶಾಸ್ತ್ರಗಳಲ್ಲಿ ಪರಮಾತ್ಮ"

ಪ್ರಶ್ನೆ :- ಪ್ರಪಂಚದ ಶಾಸ್ತ್ರಗಳು ಮತ್ತು ಸಂತರು ಪರಮಾತ್ಮನ ವಿಷಯದಲ್ಲಿ ಯಾವ ಯಾವ ಮಾಹಿತಿ ನೀಡುತ್ತಾರೆ?

ಉತ್ತರ :- ವಿಶ್ವದ ಮುಖ್ಯ ಶಾಸ್ತ್ರಗಳಲ್ಲಿ, ಸದ್ಗ್ರಂಥಗಳಲ್ಲಿ ಪರಮಾತ್ಮನನ್ನು ಬಹಳ ಚೆನ್ನಾಗಿ ಪರಿಭಾಷಿಸಿದ್ದಾರೆ. ವಿಶ್ವದ ಮುಖ್ಯ ಶಾಸ್ತ್ರ, ಸದ್ಗ್ರಂಥಗಳು ಯಾವುವು ಎಂದು ಮೊದಲು ತಿಳಿಯೋಣ.

1.ವೇದ :- ವೇದಗಳಲ್ಲಿ ಎರಡು ಪ್ರಕಾರಗಳಿವೆ :- 1) ಸೂಕ್ಷ್ಮವೇದ, 2) ಸಾಮಾನ್ಯ ವೇದ

1) ಸೂಕ್ಷ್ಮವೇದ :- ಈ ಜ್ಞಾನವನ್ನು ಪರಮಾತ್ಮನು ಸ್ವತಃ ಭೂಮಿಯ ಮೇಲೆ ಪ್ರಕಟನಾಗಿ ತನ್ನ ಮುಖ ಕಮಲದಿಂದ ಉಚ್ಚರಿಸಿ ಹೇಳುತ್ತಾನೆ. ಇದು ಸಂಪೂರ್ಣ ಜ್ಞಾನಯುಕ್ತವಾಗಿದೆ.

ಪ್ರಮಾಣ :- ಋಗ್ವೇದದ 9ನೇ ಮಂಡಲದ 86ನೇ ಸೂಕ್ತಿಯ 26-27ನೇ ಮಂತ್ರ, ಋಗ್ವೇದದ 9ನೇ ಮಂಡಲದ 82ನೇ ಸೂಕ್ತಿಯ 1, 2, 3ನೇ ಮಂತ್ರ, ಋಗ್ವೇದ 9ನೇ ಮಂಡಲದ 94ನೇ ಸೂಕ್ತಿಯ 1ನೇ ಮಂತ್ರ, ಋಗ್ವೇದ 9ನೇ ಮಂಡಲದ 95ನೇ ಸೂಕ್ತಿಯ 2ನೇ ಮಂತ್ರ, ಋಗ್ವೇದ 9ನೇ ಮಂಡಲದ 20ನೇ ಸೂಕ್ತಿಯ 1ನೇ ಮಂತ್ರ, ಋಗ್ವೇದ 9ನೇ ಮಂಡಲದ 96ನೇ ಸೂಕ್ತಿಯ 16ರಿಂದ 20ನೇ ಮಂತ್ರ, ಋಗ್ವೇದ 9ನೇ ಮಂಡಲದ 54ನೇ ಸೂಕ್ತಿಯ 3ನೇ ಮಂತ್ರ, ಯಜುರ್ವೇದದ 9ನೇ ಅಧ್ಯಾಯದ 1 ಮತ್ತು 32ನೇ ಮಂತ್ರ, ಯಜುರ್ವೇದದ 29ನೇ ಅಧ್ಯಾಯದ 25ನೇ ಮಂತ್ರ, ಅಥರ್ವವೇದದ 4ನೇ ಕಾಂಡದ 1ನೇ ಅನುವಾಕದ 7ನೇ ಮಂತ್ರ. ಸಾಮವೇದದ 822ನೇ ಮಂತ್ರ

ಅನ್ಯ ಪ್ರಮಾಣಗಳು :- ಶ್ರೀಮದ್ಭಗವದ್ಗೀತೆಯ 4ನೇ ಅಧ್ಯಾಯದ 32ನೇ ಮಂತ್ರದಲ್ಲಿದೆ. ಸಚ್ಚಿದಾನಂದ ಘನಬ್ರಹ್ಮ ಅರ್ಥಾತ್ ಸತ್ಯಪುರುಷನು ತನ್ನ ಮುಖ ಕಮಲದಿಂದ ವಾಣಿಯನ್ನು ಹೇಳುತ್ತಾ ವಿಸ್ತಾರವಾಗಿ ತತ್ವಜ್ಞಾನವನ್ನು ಹೇಳುತ್ತಾನೆ ಎಂದು ಹೇಳಲಾಗಿದೆ.

ಕಾರಣ :- ಪರಮಾತ್ಮನು ಸೃಷ್ಟಿಯ ಪ್ರಾರಂಭದಲ್ಲಿ ಸಂಪೂರ್ಣ ಜ್ಞಾನವನ್ನು ಬ್ರಹ್ಮ (ಜ್ಯೋತಿ ನಿರಂಜನ ಅಂದರೆ ಕಾಲಪುರುಷ)ನ ಅಂತಃಕರಣದಲ್ಲಿ ಹಾಕಿದ್ದನು. (fax ಮಾಡಿದ್ದನು). ಪರಮಾತ್ಮನ ಮೂಲಕ ನಿರ್ಧರಿಸಲ್ಪಟ್ಟ ಸಮಯದಲ್ಲಿ ಈ ಜ್ಞಾನವು ಸ್ವತಃವೇ ಕಾಲಪುರುಷನ ಶ್ವಾಸಗಳ ಮೂಲಕ ಸಮುದ್ರದಲ್ಲಿ ಪ್ರಕಟವಾಯಿತು. ಕಾಲಪುರುಷನು ಇದರಲ್ಲಿದ್ದ ಮಹತ್ವ ಪೂರ್ಣವಾದ ಮಾಹಿತಿಯನ್ನು ತೆಗೆದುಬಿಟ್ಟನು. ಉಳಿದ ಅರ್ಧಂಬರ್ಧ ಜ್ಞಾನವು ಈ ಪ್ರಪಂಚದಲ್ಲಿ ಪ್ರವೇಶ ಮಾಡಿಸಿದ. ಅದನ್ನೇ ನಾಲ್ಕು ಭಾಗಗಳಲ್ಲಿ ನಾಲ್ಕು ವೇದಗಳ ರೂಪದಲ್ಲಿ ಓದುತ್ತಾರೆ.

2. ಸಾಮಾನ್ಯ ವೇದ :- ಇದು ಅದೇ ಆಂಶಿಕ ಜ್ಞಾನವಾಗಿದೆ, ಯಾವುದನ್ನು ಬ್ರಹ್ಮ (ಜ್ಯೋತಿ ನಿರಂಜನ ಅರ್ಥಾತ್ ಕಾಲನು) ತನ್ನ ಜ್ಯೇಷ್ಠ ಪುತ್ರನಾದ ಬ್ರಹ್ಮಾನಿಗೆ ನೀಡಿದ್ದನು. ಇದು ಅಪೂರ್ಣವಾದ ಜ್ಞಾನ. ಇದರಲ್ಲಿನ ಮುಖ್ಯ ಮಾಹಿತಿಯನ್ನು ತೆಗೆದುಬಿಡಲಾಗಿದೆ. ಅದನ್ನು ಬ್ರಹ್ಮ ಅಂದರೆ ಕಾಲ ಬೇಕೆಂದೇ ತೆಗೆದು ಬಿಟ್ಟಿದ್ದನು. ಇದಕ್ಕೆ ಕಾರಣವೇನೆಂದರೆ "ಕಾಲ ಪುರುಷನಿಗೆ" ಯಾರಿಗೂ ಪೂರ್ಣ ಪರಮಾತ್ಮನ ಜ್ಞಾನವಾಗಬಾರದೆಂದು ಭಯವಿರುತ್ತದೆ. ಒಂದು ವೇಳೆ ಜೀವಿಗಳಿಗೆ ಪೂರ್ಣ ಪರಮಾತ್ಮನ ಜ್ಞಾನವಾದರೆ ಅವರೆಲ್ಲಾ ಈ ಕಾಲನ ಲೋಕವನ್ನು ಬಿಟ್ಟು ಪೂರ್ಣ ಪರಮಾತ್ಮನ ಲೋಕ (ಸತ್ಯಲೋಕ = ಶಾಶ್ವತ ಸ್ಥಾನ)ಕ್ಕೆ ಹೊರಟು ಹೋಗುವರು, ಅಲ್ಲಿಗೆ ಹೋದ ಬಳಿಕ ಜನನ-ಮರಣವು ಸಮಾಪ್ತವಾಗುವುದು. ಆದ್ದರಿಂದ ಬ್ರಹ್ಮ (ಕಾಲಪುರುಷ)ನು ಪೂರ್ಣ ಪರಮಾತ್ಮನ ಪರಮ ಪದದ ಮಾಹಿತಿ ತಿಳಿಸಲಿಲ್ಲ. ಅದನ್ನು ನಾಶ ಮಾಡಿ ಬಿಟ್ಟಿದ್ದನು. ಅದನ್ನು ಪೂರ್ತಿ ಮಾಡಲು ಸ್ವತಃ ಪೂರ್ಣ ಪರಮಾತ್ಮನು ಸಶರೀರ ಪ್ರಕಟನಾಗಿ ಸಂಪೂರ್ಣ

ಜ್ಞಾನವನ್ನು ತಿಳಿಸುತ್ತಾನೆ. ತನ್ನ ಪ್ರಾಪ್ತಿಗಾಗಿ ವಾಸ್ತವಿಕ ಮಂತ್ರವನ್ನು ಸಹ ಹೇಳುತ್ತಾನೆ, ಅದನ್ನು ಕಾಲ ಭಗವಂತ ನಷ್ಟ ಮಾಡಿ ಉಳಿದ ಜ್ಞಾನ ನೀಡಿದ್ದಾನೆ. ಅದನ್ನು ಋಷಿಗಳು ವೇದವೆಂದು ಕರೆಯುತ್ತಾರೆ. ವ್ಯಾಸ ಮಹರ್ಷಿಗಳು ವೇದವನ್ನು ಬರೆದರು ಹಾಗು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದರು.

1) ಋಗ್ವೇದ 2) ಯಜುರ್ವೇದ 3) ಸಾಮವೇದ 4) ಅಥರ್ವವೇದ–ಇವು ವರ್ತಮಾನದಲ್ಲಿ ಪ್ರಚಲಿತವಾಗಿವೆ. ಈ ನಾಲ್ಕೂ ವೇದಗಳ ಸಾರಾಂಶವನ್ನು ಕಾಲ ಪುರುಷನು ಶ್ರೀಮದ್ಭಗವದ್ಗೀತೆಯ ರೂಪದಲ್ಲಿ ಶ್ರೀಕೃಷ್ಣನ ಶರೀರದಲ್ಲಿ ಪ್ರವೇಶ ಮಾಡಿ, ಮಹಾಭಾರತದ ಯುದ್ಧದ ಮುಂಚೆ ಹೇಳಿದ್ದನು. ಅದನ್ನೂ ಸಹ ನಂತರದಲ್ಲಿ ವ್ಯಾಸ ಮಹರ್ಷಿಗಳು ಕಾಗದದ ಮೇಲೆ ಬರೆದರು. ಅದು ಇಂದು ನಮ್ಮೆಲ್ಲರ ಬಳಿ ಉಪಲಬ್ಧವಿದೆ.

ಸದ್ಗ್ರಂಥಗಳಲ್ಲಿ ಬೈಬಲ್ ನ ಹೆಸರೂ ಇದೆ. ಮೂರೂ ಪುಸ್ತಕಗಳ ಸಂಗ್ರಹವೇ ಬೈಬಲ್. ಅವುಗಳು 1) ತೌರೆತ್ 2) ಜಬೂರ್ 3) ಇಂಜಿಲ್

ಬೈಬಲ್‌ನಲ್ಲಿ ಮೊಟ್ಟಮೊದಲು ಸೃಷ್ಟಿಯ ರಚನೆಯ ಬಗ್ಗೆ ಮಾಹಿತಿ ಇದೆ. ಇದರಲ್ಲಿ ಪರಮಾತ್ಮನು ಮೊಟ್ಟಮೊದಲಿಗೆ ಸೃಷ್ಟಿಯ ರಚನೆಯನ್ನು ಮಾಡಿದನು ಎಂದು ಬರೆದಿದೆ. ಭೂಮಿ, ಸೂರ್ಯ, ಹಗಲು–ರಾತ್ರಿ, ಪಶು–ಪಕ್ಷಿ, ಮನುಷ್ಯನ (ನರ–ನಾರಿ) ರಚನೆಯನ್ನು ಪರಮಾತ್ಮನು ಆರು ದಿನಗಳಲ್ಲಿ ಮಾಡಿದನು. ಹಾಗೂ ಏಳನೇ ದಿನ ಸಿಂಹಾಸನದ ಮೇಲೆ ಆಸೀನನಾದನು. ಸೃಷ್ಟಿಯ ರಚನೆಯ 1ನೇ ಅಧ್ಯಾಯದ 26, 27, 28ನೇ ಶ್ಲೋಕದಲ್ಲಿ, ಪರಮಾತ್ಮನು ಮಾನವನನ್ನು ತನ್ನ ಸ್ವರೂಪದಂತೆ ಉತ್ಪತ್ತಿಸಿದ್ದಾನೆ ಎಂದೂ ಸಹ ಸ್ಪಷ್ಟಪಡಿಸಲಾಗಿದೆ. ಇದರಿಂದ ಪರಮಾತ್ಮನೂ ಸಹ ಮನುಷ್ಯನಂತೆ (ನರಾಕಾರ) ಇದ್ದಾನೆ ಎಂದು ಸ್ಪಷ್ಟವಾಗುತ್ತದೆ.

### ❖ ಮಾಂಸ ತಿನ್ನುವುದು ಬೈಬಲ್‌ನಲ್ಲಿ ನಿಷೇಧ :–

ಇದೇ ಉತ್ಪತ್ತಿ ಗ್ರಂಥದಲ್ಲಿ ಬೈಬಲ್‌ನಲ್ಲಿ ಬರೆದಿರುವುದೇನೆಂದರೆ, (ಶ್ಲೋಕ 27–28ರಲ್ಲಿ) ಮನುಷ್ಯರಿಗೆ ತಿನ್ನಲು ಬೀಜವುಳ್ಳ ಗಿಡಗಳು (ಅಕ್ಕಿ, ಬೇಳೆ, ಗೋದಿ, ಕಡಲೆ, ನವಣೆ ಮುಂತಾದವು) ಮತ್ತು ಹಣ್ಣು ಬಿಡುವ ಮರಗಳನ್ನು ನೀಡಲಾಗಿದೆ. ಅದೇ ನಿಮ್ಮ ಭೋಜನ. ಪಶುಪಕ್ಷಿಗಳು ತಿನ್ನಲು ಹುಲ್ಲು ಎಲೆಗಳನ್ನು ಕೊಟ್ಟನು. ಇದಾದ ನಂತರ ಪರಮಾತ್ಮನು ತನ್ನ ನಿಜವಾದ ಧಾಮದಲ್ಲಿ (ಸತ್ಯಲೋಕದಲ್ಲಿ) ಕುಳಿತನು. ಬೈಬಲ್‌ನಲ್ಲಿ ಮುಂದೆ ಕಾಲ ಭಗವಂತ ಹಾಗೂ ಅವನ ಪುತ್ರರು ಜ್ಞಾನ ನೀಡಿದ್ದಾರೆ. ಒಂದು ವೇಳೆ ಬೈಬಲ್ ಗ್ರಂಥದಲ್ಲಿ ಮುಂದೆ ಮಾಂಸ ತಿನ್ನುವಂತೆ ಬರೆದಿದ್ದರೆ ಅದು ಪೂರ್ಣ ಪರಮಾತ್ಮನ ಆದೇಶವಲ್ಲ. ಅದು ಬೇರೆ ಯಾರೋ ಅಪೂರ್ಣ ಪ್ರಭುವಿನದು ಇರಬೇಕು. ಪೂರ್ಣ ಪರಮಾತ್ಮ (**Complete God**) ನ ಆದೇಶವನ್ನು ಅವಹೇಳನ ಮಾಡಿದರೆ ಅವನಿಗೆ ಪಾಪದ ಭಾಗಿಯಾಗುವನು.

❖ ಕುರಾನ್ ಶರೀಫ್ (ಮಜೀದ್):– ಬೈಬಲ್ ನಂತರದ ಸದ್ಗ್ರಂಥಗಳಲ್ಲಿ ಕುರಾನ್ ಶರೀಫರ ಹೆಸರು ಬಹಳ ಶ್ರದ್ಧೆಯಿಂದ ಹೇಳುತ್ತಾರೆ. ಕುರಾನ್ ಜ್ಞಾನವನ್ನು ನೀಡಿದವನೂ ಸಹ ಬೈಬಲ್‌ನ ಜ್ಞಾನವನ್ನು ನೀಡಿದವನೇ ಹಾಗೂ ನಾಲ್ಕೂ ವೇದಗಳ ಮತ್ತು ಭಗವದ್ಗೀತೆಯ ಜ್ಞಾನವನ್ನು ನೀಡಿದವನೇ ಆಗಿದ್ದಾನೆ. ಆದ್ದರಿಂದ ಅವನು ಈ ವಿಚಾರಗಳನ್ನು ಬೈಬಲ್ ಮತ್ತು ಕುರಾನ್‌ನಲ್ಲಿ ವೇದ ಮತ್ತು ಗೀತೆಯಲ್ಲಿ ಕೊಟ್ಟ ಜ್ಞಾನವನ್ನು ಪುನರಾವರ್ತಿಸಿಲ್ಲ.

❖ ಉಪನಿಷತ್ತು :– ಇವು ಸಂಖ್ಯೆಯಲ್ಲಿ 11 ಎಂದು ಭಾವಿಸಲಾಗಿದೆ. ಯಾರೋ ಋಷಿಯ ಅನುಭವವೇ ಉಪನಿಷತ್ತಿನ ಜ್ಞಾನ. ಒಂದು ವೇಳೆ ಈ ಅನುಭವವು ವೇದಗಳೊಂದಿಗೆ ಮತ್ತು ಗೀತೆಯೊಂದಿಗೆ ಹೊಂದಾಣಿಕೆ ಯಾಗದಿದ್ದರೆ ಅದು ವ್ಯರ್ಥ. ಆಗ ಅದನ್ನು ಅನುಸರಿಸಬಾರದು. ಆದ್ದರಿಂದ ಉಪನಿಷತ್ತುಗಳನ್ನು ಬಿಟ್ಟು ವೇದ ಹಾಗೂ ಗೀತೆಯ ಜ್ಞಾನವನ್ನು ಗ್ರಹಿಸಬೇಕು.

ಏಕೆಂದರೆ ಉಪನಿಷತ್ತಿನ ಅಧಿಕಾಂಶ ಜ್ಞಾನವು ವೇದ ಹಾಗೂ ಗೀತೆಗೆ ವಿರುದ್ಧವಾಗಿದೆ. ಇದೇ ರೀತಿ ಬೈಬಲ್ ಹಾಗೂ ಕುರಾನ್ ಜ್ಞಾನವು ವೇದ ಹಾಗೂ ಗೀತೆಯ ಜೊತೆ ಸಾಮ್ಯತೆ ಹೊಂದದಿದ್ದರೆ ಆ ಜ್ಞಾನವನ್ನೂ ಗ್ರಹಿಸಬಾರದು.

❖ ಪುರಾಣ:– ಇವು ಸಂಖ್ಯೆಯಲ್ಲಿ 18 (ಹದಿನೆಂಟು) ಎಂದು ಭಾವಿಸಲಾಗಿದೆ. ಹಾಗೆಯೇ ಈ ಪುರಾಣಗಳ ಜ್ಞಾನವು ಒಂದೇ ಜ್ಞಾನ ಎಂದು ಭಾವಿಸಲಾಗಿದೆ. ಈ ಜ್ಞಾನವು ಮೊಟ್ಟ ಮೊದಲಿಗೆ ಬ್ರಹ್ಮಾನು ತನ್ನ ಪುತ್ರರಿಗೆ (ದಕ್ಷ ಮುಂತಾದ ಋಷಿಗಳಿಗೆ) ನೀಡಿದ್ದನು. ರಾಜ ದಕ್ಷ, ಮನು ಹಾಗೂ ಪರಾಶರ ಮುಂತಾದ ಋಷಿಗಳು ಇದನ್ನು ಮುಂದೆ ಪ್ರಚಾರ ಮಾಡುವಾಗ ತಮ್ಮ ಅನುಭವಗಳನ್ನೂ ಸೇರಿಸಿ ಬಿಟ್ಟರು. ಈ ರೀತಿ 18 ಭಾಗಗಳಲ್ಲಿ ಪುರಾಣದ ಜ್ಞಾನವಿದೆಯೆಂದು ಭಾವಿಸಲಾಗಿದೆ. 18 ಪುರಾಣಗಳ ಜ್ಞಾನದ ಅಂಶ ವೇದ ಹಾಗೂ ಗೀತೆಯ ಜೊತೆ ಸಾಮ್ಯತೆ ಇರದಿದ್ದರೆ ಅದನ್ನು ಬಿಟ್ಟುಬಿಡಬೇಕಾಗುತ್ತದೆ. ಅದೇ ರೀತಿ ವೇದಗಳ ಹಾಗೂ ಗೀತೆಯ ಜ್ಞಾನದ ವಿರುದ್ಧವಾದ ಜ್ಞಾನದಿಂದ ತುಂಬಿದ ಪುಸ್ತಕವಿದ್ದರೆ, ಅದನ್ನೂ ಬಿಟ್ಟು ಬಿಡಬೇಕು.

ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಅರ್ಜುನನಿಗೆ ಹೀಗೆ ಹೇಳುತ್ತಿದ್ದಾನೆ, "ನೀನು ಸರ್ವ ಭಾವದಿಂದ ಆ ಪರಮೇಶ್ವರನಿಗೆ (ಗೀತೆಯ ಜ್ಞಾನ ನೀಡಿದಾತನಿಗಿಂತ ಭಿನ್ನವಾಗಿರುವವನು) ಶರಣಾಗು. ಆ ಪರಮೇಶ್ವರನ ಕೃಪೆಯಿಂದಲೇ ನೀನು ಪರಮಶಾಂತಿ ಹಾಗೂ ಸನಾತನ ಪರಮಧಾಮ (ಸತ್ಯಲೋಕ)ವನ್ನು ಪಡೆಯುವೆ". ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾವ ಜ್ಞಾನವನ್ನು (ಸೂಕ್ಷ್ಮವೇದ) ಸ್ವತಃ ಪರಮಾತ್ಮನು ತನ್ನ ಮುಖಕಮಲದಿಂದ ಹೇಳುತ್ತಾನೋ, ಅದನ್ನು ಸಚ್ಚಿದಾನಂದ ಘನಬ್ರಹ್ಮನ ವಾಣಿ ಎಂದು ಹೇಳಲಾಗುತ್ತದೆ, ಅದನ್ನೇ ತತ್ವಜ್ಞಾನವೆನ್ನುವರು. ಅದರಲ್ಲಿ ಪರಮಾತ್ಮನು ಪೂರ್ಣ ಮೋಕ್ಷಮಾರ್ಗದ ಜ್ಞಾನವನ್ನು ಕೊಟ್ಟಿದ್ದಾನೆ. ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ ಹೇಳಲಾಗಿದೆ, "ಆ ತತ್ವಜ್ಞಾನವನ್ನು ನೀನು ತತ್ವದರ್ಶಿ ಸಂತರ ಬಳಿ ಹೋಗಿ ತಿಳಿದುಕೋ, ಅವರಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಿ, ಪ್ರಶ್ನೆ ಕೇಳುವುದರಿಂದ ಆ ತತ್ವದರ್ಶಿ ಸಂತರು ನಿನಗೆ ತತ್ವಜ್ಞಾನದ ಉಪದೇಶವನ್ನು ನೀಡುವರು. ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ತತ್ವದರ್ಶಿ ಸಂತನನ್ನು ಗುರುತಿಸುವ ಬಗ್ಗೆ ಹೇಳಲಾಗಿದೆ. ಯಾವ ಸಂತನು ಪ್ರಪಂಚವೆಂಬ ವೃಕ್ಷದ ಸರ್ವಾಂಗಗಳನ್ನು ತಿಳಿದಿರುತ್ತಾನೋ, ಅವನು ವೇದವಿತ್ ಅಂದರೆ ವೇದಗಳ ತಾತ್ಪರ್ಯವನ್ನೂ ತಿಳಿದಿರುತ್ತಾನೆ, ಅವನನ್ನು ತತ್ವದರ್ಶಿ ಸಂತ ಎಂದು ಹೇಳಲಾಗಿದೆ. ಸೂಕ್ಷ್ಮವೇದ ಅಂದರೆ ಸಚ್ಚಿದಾನಂದ ಘನಬ್ರಹ್ಮನ ವಾಣಿಯಲ್ಲಿ ಹೇಳಲಾಗಿದೆ:–

ಕಬೀರ್, ಅಕ್ಷರ್ ಪುರುಷ್ ಏಕ್ ಪೇಡ್ ಹೈ, ಕ್ಷರ್ ಪುರುಷ್ ವಾಕೀ ಡಾರ್ ।
ತೀನೋಂ ದೇವಾ ಶಾಖಾ ಹೈಂ, ಪಾತ್ ರೂಪ್ ಸಂಸಾರ್ ॥

ಇದೆ ಸಚ್ಚಿದಾನಂದ ಘನಬ್ರಹ್ಮನ ವಾಣಿಯನ್ನು ತತ್ವಜ್ಞಾನವೆಂದೂ ಕರೆಯುತ್ತಾರೆ. ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಲಾಗಿದೆ :– ತತ್ವಜ್ಞಾನದ ಪ್ರಾಪ್ತಿಯ ನಂತರ ಪರಮೇಶ್ವರನ ಪರಮಪದದ ಅನ್ವೇಷಣೆ ಮಾಡಬೇಕು. ಅಲ್ಲಿಗೆ ಹೋದ ನಂತರ ಸಾಧಕನು ಎಂದಿಗೂ ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ. ಅಂದರೆ ಅವನಿಗೆ ಪೂರ್ಣ ಮೋಕ್ಷವು ಪ್ರಾಪ್ತವಾಗುತ್ತದೆ. ಆ ಪರಮಾತ್ಮನು ಪ್ರಪಂಚವೆಂಬ ವೃಕ್ಷದ ರಚನೆ ಮಾಡಿದ್ದಾನೆ. ಕೇವಲ ಅವನನ್ನು ಆರಾಧಿಸು. ಗೀತೆಯ ಜ್ಞಾನದಾತನು ತನ್ನ ಸಾಧನೆಗಿಂತ ಶ್ರೇಷ್ಠ ಆ ಪೂರ್ಣ ಪರಮಾತ್ಮನ ಭಕ್ತಿಮಾಡುವುದೆಂದು ನಂಬುತ್ತಾನೆ. ಅದರಿಂದಲೇ ಆ ಪರಮೇಶ್ವರನ ಪರಮ ಪದವು ಪ್ರಾಪ್ತವಾಗುತ್ತದೆ. ಅದನ್ನು ಪಡೆದ ನಂತರ ಜನನ–ಮರಣವೆಂಬ ಜಂಜಾಟವು ಸಂಪೂರ್ಣವಾಗಿ ಕೊನೆಗೊಳ್ಳುತ್ತದೆ.

❖ ಶ್ರೀಗುರು ಗ್ರಂಥ ಸಾಹೇಬ್:– ಇದನ್ನು ಸಿಖ್ಖರ ಧರ್ಮಗ್ರಂಥವೆಂದು ನಂಬಲಾಗುತ್ತದೆ. ವಾಸ್ತವದಲ್ಲಿ ಇದು ಬಹಳಷ್ಟು ಮಹಾತ್ಮರ ಅಮೃತವಾಣಿಯ ಸಂಗ್ರಹವಾಗಿದೆ. ಇದರಲ್ಲಿ ಶ್ರೀ ಗುರು ನಾನಕ್ ಸಾಹೇಬರ ವಾಣಿ. ಅರ್ಥಾತ್ ಮಹಲಾ–ಪಹಲಾ ವಾಣಿ ತತ್ವಜ್ಞಾನ ಅರ್ಥಾತ್ ಸೂಕ್ಷ್ಮವೇದಕ್ಕೂ ಒಂದಕ್ಕೊಂದು ಸಾಮ್ಯತೆ ಇದೆ. ಏಕೆಂದರೆ ಶ್ರೀ ಗುರುನಾನಕರಿಗೆ ಪರಮಾತ್ಮನು ಸಿಕ್ಕಿದ್ದನು. ಆ ಸಮಯದಲ್ಲಿ ಶ್ರೀ ಗುರುನಾನಕ್ ಸಾಹೇಬರು ಸುಲ್ತಾನಪುರ ನಗರದಲ್ಲಿ ನವಾಬರ ಬಳಿ ಮೋದಿಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಸುಲ್ತಾನಪುರದಿಂದ ಅರ್ಧ ಕಿ.ಮೀ. ದೂರದಲ್ಲಿ ಬೇಈ ನದಿ ಹರಿಯುತ್ತದೆ. ಶ್ರೀ ಗುರುನಾನಕರು ಪ್ರತಿದಿನ ಆ ನದಿಯಲ್ಲಿ ಸ್ನಾನ ಮಾಡಲು ಹೋಗುತ್ತಿದ್ದರು. ಒಂದು ದಿನ ಪರಮಾತ್ಮನು ಜಿಂದಾ ಮಹಾತ್ಮನ ವೇಷದಲ್ಲಿ ಬೇಈ ನದಿಯಲ್ಲಿ ಪ್ರಕಟನಾದನು. ಅಲ್ಲಿ ಶ್ರೀ ಗುರುನಾನಕರ ಜೊತೆ ಜ್ಞಾನ ಚರ್ಚೆಯಾಯಿತು. ಅದಾದ ನಂತರ ಶ್ರೀ ಗುರು ನಾನಕರು ನದಿಯಲ್ಲಿ ಧುಮುಕಿದರು. ಆದರೆ ಮೇಲೆ ಬರಲಿಲ್ಲ. ಶ್ರೀ ಗುರು ನಾನಕರು ನದಿಯಲ್ಲಿ ಮುಳುಗಿ ಹೋದರೆಂದು ಅಲ್ಲಿ ಇದ್ದಂತಹ ಜನರೆಲ್ಲಾ ಭಾವಿಸಿದರು. ಊರಿನ ಜನರು ನದಿಯಲ್ಲಿ ಬಲೆ ಬೀಸಿ ಹುಡುಕಿದರೂ ಸಹ ಅವರಿಗೆ ನಿರಾಸೆಯೇ ಕಾದಿತ್ತು. ಏಕೆಂದರೆ ಶ್ರೀ ಗುರು ನಾನಕರಂತು ಜಿಂದಾ ಮಹಾತ್ಮನ ರೂಪದಲ್ಲಿ ಪ್ರಕಟನಾಗಿದ್ದ ಪರಮಾತ್ಮನ ಜೊತೆ ಸಚ್ಚಖಂಡ (ಸತ್ಯಲೋಕ)ಕ್ಕೆ ಹೋಗಿದ್ದರು. ಮೂರು ದಿನದ ನಂತರ ಶ್ರೀ ಗುರು ನಾನಕರು ಮರಳಿ ಭೂಮಿಗೆ ಬಂದರು. ಎಲ್ಲಿ ಅಂತರ್ಧಾನರಾಗಿದ್ದರೋ, ಅದೇ ಬೇಈ ನದಿಯ ಅದೇ ದಡದ ಮೇಲೆ ಬಂದು ನಿಂತರು.

ಶ್ರೀ ಗುರು ನಾನಕರನ್ನು ಜೀವಂತ ನೋಡಿ ಸುಲ್ತಾನಪುರದ ನಿವಾಸಿಗಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಶ್ರೀ ಗುರು ನಾನಕರ ಸಹೋದರಿಯಾದ ನಾನಕಿಯ ವಿವಾಹ ಸುಲ್ತಾನಪುರದಲ್ಲಾಗಿತ್ತು. ತನ್ನ ಸಹೋದರಿಯ ಜೊತೆಯಲ್ಲೇ ಶ್ರೀ ಗುರು ನಾನಕರು ವಾಸಿಸುತ್ತಿದ್ದರು. ತನ್ನ ಅಣ್ಣನ ಸಾವಿನಿಂದ ದುಃಖಿಯಾಗಿದ್ದ ನಾನಕಿಗೆ ಅಣ್ಣನನ್ನು ನೋಡಿ ಬಹಳ ಸಂತೋಷವಾಯಿತು. ಶ್ರೀ ಗುರು ನಾನಕರಿಗೆ ಪರಮಾತ್ಮ ಸಿಕ್ಕಿದ್ದರು, ನಿಜವಾದ ಜ್ಞಾನ ಸಿಕ್ಕಿತು. ನಿಜವದ ಮಂತ್ರ (ಸತ್ಯನಾಮ) ಸಿಕ್ಕಿತು. ಭಾಈ ಬಾಲೆವಾಲಿ "ಜನ್ಮ ಸಾಖಿ ಗುರು ನಾನಕದೇವ ಜಿ" ಎಂಬ ಪುಸ್ತಕದಲ್ಲಿ ಹಾಗೂ ಸಂತ ಸಂಪೂರ್ಣ ಸಿಂಗರ ಸಂಪಾದಕತ್ವದ ಹಿಂದಿ ಲಿಪಿಯ ಪ್ರಾಣ ಸಂಗಲಿಯಲ್ಲಿ ಪ್ರಮಾಣವಿರುವುದೇನೆಂದರೆ, ಶ್ರೀ ಗುರು ನಾನಕ್ ದೇವರು ಸ್ವತಃ ಮರ್ದಾನಾಗೆ ಈ ರೀತಿ ಹೇಳಿದ್ದಾರೆ. "ಬೇಈ ನದಿಯ ತೀರದಲ್ಲಿ ನಾನು ಸ್ನಾನ ಮಾಡುತ್ತಿರುವಾಗ ಪರಮಾತ್ಮನು ಜಿಂದಾ ಬಾಬಾ ರೂಪದಲ್ಲಿ ನನಗೆ ಸಿಕ್ಕಿದ್ದರು. ನಾನು ಮೂರು ದಿನಗಳವರೆಗೆ ಅವರ ಜೊತೆಯಲ್ಲೇ ಇದ್ದೆ. ಆ ಜಿಂದಾ ಬಾಬಾ ನನ್ನ ಸದ್ಗುರುವೂ ಹೌದು, ಸರ್ವ ಸೃಷ್ಟಿಯನ್ನು ರಚಿಸಿದವನೂ ಹೌದು. ಆದ್ದರಿಂದ ಅವರೇ "ಬಾಬಾ" ಎಂದು ಕರೆಯಲ್ಪಡಲು ಅರ್ಹರು. ಬೇರೆಯವರನ್ನು ಬಾಬಾ ಎಂದು ಕರೆಯಬಾರದು. ಅವರ ಹೆಸರು ಕಬೀರ.

ಕಾಯಮ್ ದಾಯ್‌ಕಾ ಕುದರತೀ ಸಬ್ ಪೀರನ್ ಸಿರ್ ಪೀರ್ ಆಲಮ್ ಬಡಾ ಕಬೀರ್॥

ಆದ್ದರಿಂದ ಶ್ರೀ ಗುರು ನಾನಕರ ವಾಣಿಯು (ಮಹಲಾ 1) ಸೂಕ್ಷ್ಮವೇದದ ಜೊತೆ ಸಾಮ್ಯತೆ ಹೊಂದಿದೆ. ಇದು ಸರಿಯಾಗಿದೆ. ಅನ್ಯ ಸಂತರ ವಾಣಿಯು ಸಾಮ್ಯತೆ ಹೊಂದುವುದಿಲ್ಲ. ಕಾರಣವಿಷ್ಟೇ, ಶ್ರೀ ಗುರು ನಾನಕ್ ಸಾಹೇಬರಿಗೆ ಪರಮಾತ್ಮ ಕಬೀರರು ಸಿಕ್ಕಿದ್ದರು.

ಪ್ರಮಾಣ :– ಶ್ರೀ ಗುರು ಗ್ರಂಥ ಸಾಹಿಬ್ ಪುಟ 24 ರಲ್ಲಿರುವ ವಾಣಿ:–

ಏಕ್ ಸುಆನ್ ದುಈ ಸುಆನೀ ನಾಲ್ ಭಲಕೇ ಭೌಂಕಹೀ ಸದಾ ಬಿಯಾಲ್,
ಕುಡ್ ಛುರಾ ಮುಠಾ ಮುರದಾರ್ ಧಾಣಕ್ ರೂಪ್ ರಹಾ ಕರ್‌ತಾರ್।
ತೇರಾ ಏಕ್ ನಾಮ್ ತಾರೇ ಸಂಸಾರ್ ಮೈಂ ಏಹೋ ಆಶ್ ಏಹೋ ಆಧಾರ್,
ಧಾಣಕ್ ರೂಪ್ ರಹಾ ಕರ್‌ತಾರ್।

ಫಾಹೀ ಸುರತ್ ಮಲೂಕೀ ವೇಶ್, ಏಹ್ ಠಗ್‌ವಾಡಾ ಠಗೀ ದೇಶ್।
ಖರಾ ಸಿಆಣಾಂ ಬಹುತಾ ಭಾರ್, ಧಾಣಕ್ ರೂಪ್ ರಹಾ ಕರ್‌ತಾರ್॥

**ಶ್ರೀ ಗುರು ಗ್ರಂಥ ಸಾಹಿಬ್ 731ನೇ ಪುಟದಲ್ಲಿ ಈ ವಾಣಿ ಇದೆ:–**

ನೀಚ್ ಜಾತಿ ಪರದೇಶೀ ಮೇರಾ, ಕ್ಷಣ್ ಆವ್ಯೆ ಕ್ಷಣ್ ಜಾವ್ಯೆ।
ಜಾಕಿ ಸಂಗತ್ ನಾನಕ್ ರಹಂದಾ, ಕ್ಯೂಕರ್ ಮುಂಡಾ ಪಾವ್ಯೆ॥

**ಪುಟ 721ರಲ್ಲಿ ಈ ವಾಣಿ ಬರೆದಿದೆ**

ಯಕ್ ಅರ್ಜ್ ಗುಫ್‌ತಮ್ ಪೇಶ್ ತೋದರ್, ಕೂನ್ ಕರ್‌ತಾರ್ ।
ಹಕ್ಕಾ ಕಬೀರ್ ಕರೀಮ್ ತೂ, ಬೇಎಬ್ ಪರವರ್ ದಿಗಾರ್॥

**ಈ ಮೇಲೆ ತಿಳಿಸಿರುವ ಅಮೃತವಾಣಿಯು ಶ್ರೀ ಗುರುಗ್ರಂಥ ಸಾಹೇಬದ್ದಾಗಿದೆ. ಇದರಿಂದ ಶ್ರೀ ಗುರು ನಾನಕ್ ಸಾಹೇಬರಿಗೆ ಪರಮಾತ್ಮ ಸಿಕ್ಕಿದ್ದರು ಎಂಬುದು ಸಾಬೀತಾಗುತ್ತದೆ. ಅವರು "ಕಬೀರ ಕರ್‌ತಾರ್" ಕಾಶಿಯಲ್ಲಿ ನೇಕಾರನ ರೂಪದಲ್ಲಿ ಲೀಲೆ ಮಾಡಲು ಬಂದಿದ್ದವರು.**

**ಸಂತ ಗರೀಬ್‌ದಾಸ (ಹರಿಯಾಣಾದ ಝುಜ್ಜರ್ ಜಿಲ್ಲೆಯ ಛುಡಾನಿ ಗ್ರಾಮದವ)ರಿಗೂ ಸಹ ಇದೇ ರೀತಿ ಜಿಂದಾ ಮಹಾತ್ಮನ ರೂಪದಲ್ಲಿ ಕಬೀರ ಪರಮಾತ್ಮ ಸಿಕ್ಕಿದ್ದರು. ಅದೇ ರೀತಿ ಸಚ್ಚಖಂಡ್ (ಸತ್ಯಲೋಕ)ಕ್ಕೆ ಕರೆದುಕೊಂಡು ಹೋಗಿದ್ದರು, ನಂತರ ತಂದು ಬಿಟ್ಟರು. ಸಂತ ಗರೀಬ್ ದಾಸರು ಹೇಳಿದ್ದಾರೆ :–**

ಗರೀಬ್, ಹಮ್ ಸುಲ್ತಾನೀ ನಾನಕ್ ತಾರೆ, ದಾದೂ ಕೂಂ ಉಪದೇಶ್ ದಿಯಾ।
ಜಾತಿ ಜುಲಾಹಾ ಭೇದ್ ನಹೀಂ ಪಾಯಾ, ಕಾಶೀ ಮಾಹೆಂ ಕಬೀರ್ ಹುಆ॥
ಅನಂತ್ ಕೋಟಿ ಬ್ರಹ್ಮಾಂಡ್ ಕಾ, ಏಕ್ ರತಿ ನಹೀಂ ಭಾರ್।
ಸತ್‌ಗುರು ಪುರುಷ್ ಕಬೀರ್ ಹ್ಯೆ, ಕುಲ್ ಕೆ ಸಿರಜನ್ ಹಾರ್॥

**ಸಂತ ದಾದೂದಾಸರಿಗೂ ಪರಮಾತ್ಮ ಜಿಂದಾ ಮಹಾತ್ಮನ ರೂಪದಲ್ಲಿ ಸಿಕ್ಕಿದ್ದರು. ಆಗ ಅವರ ವಯಸ್ಸು ಕೇವಲ 7 ವರ್ಷ. ಒಂದು ದಿನ ಗ್ರಾಮದ ಹೊರಗಡೆ ಮಕ್ಕಳ ಜೊತೆ ಆಡುತ್ತಿದ್ದರು. ಪರಮಾತ್ಮ ಅವರಿಗೂ ಸಹ ಜಿಂದ ಮಹಾತ್ಮನ ವೇಷದಲ್ಲಿ ಸಿಕ್ಕಿದ್ದರು. ಸತ್ಯಲೋಕಕ್ಕೆ ಕರೆದುಕೊಂಡು ಹೋಗಿದ್ದನು. ದಾದೂರವರೂ ಸಹ ಮೂರು ದಿನಗಳವರೆಗೆ ಮೂರ್ಛಿತರಾಗಿದ್ದರು, ನಂತರ ಎಚ್ಚರಗೊಂಡಾಗ ಕಬೀರ ಪರಮೇಶ್ವರನ ಮಹಿಮೆಯನ್ನು ಹೇಳತೊಡಗಿದರು.**

ಜಿನ್ ಮೋಕೂಂ ನಿಜ್ ನಾಮ್ (ವಾಸ್ತವಿಕ ಹೆಸರು) ದಿಯಾ,
ಸೋಈ ಸತ್‌ಗುರು ಹಮಾರ್।
ದಾದೂ ದೂಸರಾ ಕೋಈ ನಹೀಂ, ಕಬೀರ್ ಸಿರಜನ್‌ಹಾರ್॥
ದಾದೂ ನಾಮ್ ಕಬೀರ್ ಕೀ, ಜ್ಯೆ ಕೋಈ ಲೇವೇ ಓಟ್।
ಉನ್ ಕೋ ಕಬಹು ಲಾಗೇ ನಹೀಂ, ಕಾಲ್ ಬಜ್ರ್ ಕೀ ಚೋಟ್ ॥

**ಸಂತ ಗರೀಬ್‌ದಾಸರು ಹೇಳಿದ್ದಾರೆ :–**

ದಾದೂ ಕೂಂ ಸತ್‌ಗುರು ಮಿಲೆ, ದೇಈ ಪಾನ್ ಕೀ ಪೀಖ್।
ಬೂಢಾ ಬಾಬಾ ಜಿಸೆ ಕಹ್ಯೆ, ಯಹ್ ದಾದೂ ಕೀ ನಹೀಂ ಸೀಖ್॥
ಪಹಲೀ ಚೋಟ್ ದಾದೂ ಕೋ, ಮಿಲೇ ಪುರುಷ್ ಕಬೀರ್।
ಟಕ್ಕರ್ ಮಾರೀ ಜದ್ ಮಿಲೇ, ಫಿರ್ ಸಾಂಭರ್ ಕೇ ತೀರ್॥

**❖ ಸಂತ ಧರ್ಮದಾಸರು ಬಾಂಧವ್‌ಗಢ್‌ದವರಿಗೆ ಸಿಕ್ಕರು:–** ಧರ್ಮದಾಸರು ತೀರ್ಥಯಾತ್ರೆ ಮಾಡುತ್ತಾ, ಎಲ್ಲಾ ಊರುಗಳಲ್ಲಿ ವಿಹರಿಸುತ್ತಾ ಮಥುರಾ ನಗರಕ್ಕೆ ಬಂದಾಗ, ಪರಮಾತ್ಮನು ಜಿಂದಾ ಮಹಾತ್ಮನ ವೇಷದಲ್ಲಿ ಭೇಟಿಯಾದನು. ಪರಮಾತ್ಮ ಧರ್ಮದಾಸರನ್ನೂ

ಸಹ ಸತ್ಯಲೋಕಕ್ಕೆ ಕರೆದೊಯ್ದರು. ಮೂರುದಿನ ಹಗಲಿರುಳೂ ಧರ್ಮದಾಸರು, ಶ್ರೀ ಗುರು ನಾನಕ್ ರಂತೆ ಪರಮಾತ್ಮನ ಜೊತೆ ಆಕಾಶಮಂಡಲ (ಸತ್ಯಲೋಕ) ದಲ್ಲಿ ಇದ್ದರು. ಧರ್ಮದಾಸರ ಶರೀರವು ಮೂರ್ಛಿತಗೊಂಡಿತ್ತು. ಮೂರನೇ ದಿನ ಎಚ್ಚರಗೊಂಡಾಗ, "ನಾನು ಸತ್ಯಲೋಕದಲ್ಲಿ ಪರಮಾತ್ಮನ ಜೊತೆ ಹೋಗಿದ್ದೆ, ಆ ಪರಮಾತ್ಮನು ಕಾಶೀ ನಗರದಲ್ಲಿ ಲೀಲೆಗಳನ್ನು ಮಾಡಲು ಬಂದಿದ್ದಾನೆ. ಅವನನ್ನು ಭೇಟಿಯಾಗುವೆ" ಎಂದು ಹೇಳಿದರು. ಅದೇ ರೀತಿ ಧರ್ಮದಾಸರು ಬನಾರಸಗೆ (ಕಾಶಿಗೆ) ಹೋದರು. ಅಲ್ಲಿ ನೇಕಾರ ರೂಪದಲ್ಲಿ ಪರಮಾತ್ಮನು ಕೆಲಸ ಮಾಡುತ್ತಿದ್ದುದ್ದನ್ನು ನೋಡಿ ಆಶ್ಚರ್ಯಪಟ್ಟರು. ಅವರ ಪಾದಗಳ ಮೇಲೆ ಬಿದ್ದು ಯಥಾರ್ಥ ಭಕ್ತಿ ಮಾರ್ಗವನ್ನು ಪಡೆದು ಉದ್ಧಾರ ಮಾಡಿಕೊಂಡರು. ಹೆಚ್ಚಿನ ಮಾಹಿತಿಗಾಗಿ ಇದೇ ಪುಸ್ತಕದ 'ಯಾರ್‍ಯಾರಿಗೆ ಪರಮಾತ್ಮನು ಸಿಕ್ಕನು' ಎಂಬ ಅಧ್ಯಾಯವನ್ನು ಓದಿ.

❖ ಹಜರತ್ ಮುಹಮ್ಮದರಿಗೆ ಪರಮಾತ್ಮನು ಮಕ್ಕಾ (ಕಾಬಾ)ದಲ್ಲಿ ಜಿಂದಾ ಮಹಾತ್ಮನ ರೂಪದಲ್ಲಿ ಸಿಕ್ಕಿದ್ದರು ಹಾಗೂ ಅವರನ್ನು ತನ್ನ ಲೋಕಕ್ಕೆ ಕರೆದೊಯ್ದಿದ್ದರು. ಆ ಲೋಕವು ಒಂದು ಬ್ರಹ್ಮಾಂಡದಲ್ಲಿ ರಾಜದೂತ ಭವನದ ರೂಪದಲ್ಲಿ ಕಟ್ಟಲ್ಪಟ್ಟಿತ್ತು. ಪರಮಾತ್ಮನು ಹಜರತ್ ಮೊಹಮ್ಮದನಿಗೆ ತಿಳಿಸಿ ಹೇಳಿದರು ಹಾಗೂ ತನ್ನ ಜ್ಞಾನವನ್ನು ಅವನಿಗೆ ತಿಳಿದರು. ಆದರೆ ಹಜರತ್ ಮುಹಮ್ಮದರು ಪರಮಾತ್ಮನ ಜ್ಞಾನವನ್ನು ಒಪ್ಪಿಕೊಳ್ಳಲಿಲ್ಲ ಹಾಗೂ ಸತ್ಯಲೋಕದಲ್ಲಿ ಇರಲು ಇಷ್ಟಪಡಲಿಲ್ಲ. ಆದ್ದರಿಂದ ಹಜರತ್ ಮುಹಮ್ಮದರನ್ನು ಮರಳಿ ಶರೀರದೊಳಗೆ ಕಳುಹಿಸಿರು. ಆಗ ಹಜರತ್ ಮುಹಮ್ಮದರ ಸಾವಿರಾರು ಮುಸಲ್ಮಾನ ಅನುಯಾಯಿಗಳಾಗಿದ್ದರು. ಅವರ ಮಹಿಮೆ ಇಡೀ ಪ್ರಪಂಚದಲ್ಲಿ ಬಹಳ ವೇಗದಿಂದ ಹರಡುತ್ತಿತ್ತು ಹಾಗೂ ಕುರಾನ್ ಜ್ಞಾನವನ್ನು ಸರ್ವೋತ್ತಮ ಎಂದು ನಂಬಿದ್ದರು.

ಸಂತ ಗರೀಬ್‌ದಾಸರು ಹೇಳಿರುವುದೇನೆಂದರೆ, 'ಕಬೀರ ಪರಮೇಶ್ವರರು ಮುಹಮ್ಮದ್ ಸಾಹೇಬರನ್ನು ಮೇಲಿನ ಲೋಕಕ್ಕೆ ಕರೆದುಕೊಂಡು ಹೋದರೂ ಸಹ ಅವರು ಅಲ್ಲಿ ಇರಲಿಲ್ಲ.' ಗರೀಬ್ ದಾಸರು ಹೇಳಿದ್ದಾರೆ ಕಬೀರ ಪರಮೇಶ್ವರರು ಹೀಗೆ ಹೇಳಿದರೆಂದು :-

ಹಮ್ ಮುಹಮ್ಮದ್ ಕೋ ವಹಾಂ ಲೇ ಗಯೋ,
ಇಚ್ಛಾ ರೂಪೀ ವಹಾಂ ನಹೀಂ ರಹಯೋ।
ಉಲ್ಟ್ ಮುಹಮ್ಮದ್ ಮಹಲ್ ಪಠಾಯಾ,
ಗುಝ್ ಬಿರಜ್ ಏಕ್ ಕಲಮಾ ಲ್ಯಾಯಾ।
ರೋಜಾ, ಬಂಗ್, ನಿಮಾಜ್ ದಯೀ ರೇ,
ಬಿಸ್ಮಲ್ ಕೀ ನಹೀಂ ಬಾತ್ ಕಹೀ ರೇ।
ಮಾರೀ ಗಊ ಶಬ್ದ್ ಕೇ ತೀರಂ, ಏಸೇ ಹೋತೆ ಮುಹಮ್ಮದ್ ಪೀರಂ।
ಶಬ್ದೈ ಫೇರ್ ಜಿವಾಈ, ಜೀವ್ ರಾಖ್ಯಾ ಮಾಂಸ್ ನಹೀಂ ಭಖ್ಯಾ,
ಏಸೆ ಪೀರ್ ಮುಹಮ್ಮದ್ ಭಾಈ।
ಮಾರೀ ಗಊ ಲೇ ಶಬ್ದ್ ತಲವಾರ್,
ಜೀವತ್ ಹುಈ ನಹೀಂ ಅಲ್ಲಾಹ್ ಸೇ ಕರೀ ಪುಕಾರ್।
ತಬ್ ಹಮೋಂ (ಮುಝ್‌ಕೋ) ಮುಹಮ್ಮದ್ ನೇ ಯಾದ್ ಕಿಯಾ ರೇ।
ಶಬ್ದ್ ಸ್ವರೂಪ್ ಹಮ್ ಬೇಗ್ ಗಯಾ ರೇ।
ಮುಈ ಗಊ ಹಮ್ ನೇ ತುರಂತ್ ಜೀವಾಈ।
ತಬ್ ಮುಹಮ್ಮದ್ ಕೇ ನಿಶ್ಚಯ್ ಆಈ॥
ತುಮ್ ಕಬೀರ್ ಅಲ್ಲಾಹ್ ದರ್ವೇಶಾ।
ಮೋಮಿನ್ ಮುಹಮ್ಮದ್ ಕಾ ಗಯಾ ಅಂದೇಶಾ॥

ಕಹಾ ಮುಹಮ್ಮದ್ ಸುನ್ ಜಿಂದಾ ಸಾಹೇಬ್।
ತುಮ್ ಅಲ್ಲಾಹ್ ಕಬೀರ್ ಔರ್ ಸಬ್ ನಾಯಬ್॥

ಇದರ ಪ್ರಮಾಣವು 'ಕುರಾನ್ ಶರೀಫ್'ನ ಸುರತ್ ಫುರ್ಕಾನಿ 25 ಆಯತ 52ರಿಂದ 59ರಲ್ಲಿದೆ. ಕುರಾನ್ ಶರೀಫನ ಜ್ಞಾನದಾತನನ್ನು ಹಜರತ್ ಮುಹಮ್ಮದ್ ಹಾಗೂ ಮುಸಲ್ಮಾನ್ ಧರ್ಮದ ಎಲ್ಲಾ ಜನರು ದೇವರೆಂದು ಭಾವಿಸುತ್ತಾರೆ. ಅವನನ್ನೇ ಪೂರ್ಣ ಪರಮಾತ್ಮನೆಂದು ನಂಬುತ್ತಾರೆ. ಈ 52ರಿಂದ 59 ಆಯತಗಳಲ್ಲಿ ಕುರಾನ್ ಜ್ಞಾನವನ್ನು ನೀಡಿದಾತನು ಹೇಳಿರುವುದೇನೆಂದರೆ, 'ಹೇ ಪೈಗಂಬರ್! ಹಜರತ್ ಮುಹಮ್ಮದ್! ಕುರಾನ್ ಆಯತಗಳಲ್ಲಿ ನಾನು ನಿನಗೆ ನೀಡಿರುವ ಜ್ಞಾನವೇನಿದೆ, ಅದರ ಮೇಲೆ ನೀನು ದೃಢವಾಗಿರು. ಅಲ್ಲಾಹ್ ಕಬೀರನು ಮತ್ತು ಈ ಕಾಫೀರರು ಆ ಅಲ್ಲಾಹ್‌ನ ಮೇಲೆ ವಿಶ್ವಾಸವನ್ನಿಡುವುದಿಲ್ಲ. ನೀನು ಅವರ ಮಾತನ್ನು ನಂಬಬೇಡ. ಇವರ ಜೊತೆ ಸಂಘರ್ಷ ಮಾಡು. ಜಗಳವಾಡಬೇಡ.

ಹೇ ಪೈಗಂಬರ್! ಈ ಕಬೀರ ಪರಮಾತ್ಮನು ಯಾರನ್ನೋ ಮಾವ, ಅತ್ತೆ, ಮಗ, ಸೊಸೆ, ನಾದಿನಿಯನ್ನಾಗಿ ಮಾಡಿದ್ದಾನೆ. ನೀನು ಆ ಕಾಬಾನಲ್ಲಿ ಸಿಕ್ಕ ಜಿಂದಾ ಬಾಬಾ ಮೇಲೆ ನಂಬಿಕೆ ಇಡು. ಅವನೇ ವಾಸ್ತವದಲ್ಲಿ ಅವಿನಾಶಿ ಪರಮಾತ್ಮನು. ಅವನು ತನ್ನ ಭಕ್ತರ ತಪ್ಪು (ಪಾಪ) ಗಳನ್ನು ಕ್ಷಮಿಸುತ್ತಾನೆ. ಅವನೇ ಕಬೀರ ಅಲ್ಲಾಹ್ ಆಗಿದ್ದಾನೆ. ಬೈಬಲ್ ಗ್ರಂಥದಲ್ಲಿ ಉತ್ಪತ್ತಿ ಗ್ರಂಥದ ವರ್ಣನೆಯಲ್ಲಿ ಬರುವವನೇ ಈ ಕಬೀರ ಅಲ್ಲಾಹ್, ಆ ಪರಮಾತ್ಮನು ಆರು ದಿನಗಳಲ್ಲಿ ಆಕಾಶ ಮತ್ತು ಭೂಮಿ ಹಾಗೂ ಇವುಗಳ ಮಧ್ಯೆ ಇರುವ ಎಲ್ಲಾ ನಕ್ಷತ್ರಗಳನ್ನು ಸೃಷ್ಟಿಸಿದ್ದಾನೆ. ಅಂದರೆ ಎಲ್ಲಾ ಸೃಷ್ಟಿಯ ರಚನೆ ಮಾಡಿ ಏಳನೆಯ ದಿನ ಸಿಂಹಾಸನದ ಮೇಲೆ ಹೋಗಿ ಕುಳಿತನು. ಅವನ ಬಗ್ಗೆ ಯಾರೋ ಬಾಖಬರ್ ಅಂದರೆ ತತ್ವದರ್ಶಿ ಸಂತನ ಬಳಿ ತಿಳಿದುಕೋ.

## ❖ ಹಜರತ್ ಮುಹಮ್ಮದ್‌ರು ಮಾಂಸವನ್ನು ತಿನ್ನುತ್ತಿರಲಿಲ್ಲ :-

ಸಂತ ಗರೀಬ್ ದಾಸರು (ಝುಜ್ಜರ್ ಜಿಲ್ಲೆಯ ಛುಡಾನಿ ಗ್ರಾಮದವರು) ತಮ್ಮ ಅಮೃತವಾಣಿಯಲ್ಲಿ ಸ್ಪಷ್ಟವಾಗಿ ಹೇಳಿರುವುದೇನೆಂದರೆ, ಹಜರತ್ ಮುಹಮ್ಮದ್ ಹಾಗೂ ಒಂದು ಲಕ್ಷ ಎಂಭತ್ತು ಸಾವಿರ ಅನುಯಾಯಿಗಳು ಮುಸಲ್ಮಾನರಾಗಿದ್ದರು. ಅವರು ಮಾಂಸ ತಿನ್ನಲಿಲ್ಲ ಹಾಗೂ ಹಸುವನ್ನು ಬಿಸ್ಮಿಲ್ (ಹತ್ಯೆ) ಮಾಡಿರಲಿಲ್ಲ.

ಗರೀಬ್, ನಬೀ ಮುಹಮ್ಮದ್ ನಮಸ್ಕಾರ್ ಹೈ, ರಾಮ್ ರಸೂಲ್ ಕಹಾಯಾ।
ಏಕ್ ಲಾಖ್ ಅಸ್ಸೀ ಕೂಂ ಸೌಗಂಧ್, ಜಿನ್ ನಹೀಂ ಕರದ್ ಚಲಾಯಾ॥
ಅರ್ಸ್-ಕುರ್ಸ್ ಪರ್ ಅಲ್ಲಹ್ ತಖ್ತ್ ಹೈ, ಖಾಲಿಕ್ ಬಿನ್ ನಹೀಂ ಖಾಲೀ।
ವೇ ಪೈಗಂಬರ್ ಪಾಕ್ ಪುರುಷ್ ಥೆ, ಸಾಹೇಬ್ ಕೇ ಅಬದಾಲೀ॥

ಭಾವಾರ್ಥ:- ಗರೀಬ್ ದಾಸರು ಹೇಳಿದ್ದಾರೆ, "ನಬೀ ಮುಹಮ್ಮದನಿಗೆ ನಾನು ನಮಸ್ಕಾರ ಮಾಡುತ್ತೇನೆ. ಅವರಂತೂ ಪರಮಾತ್ಮನ ರಸೂಲ್ (ಸಂದೇಶವಾಹಕರು) . ಅವರಿಗೆ ಒಂದು ಲಕ್ಷ ಎಂಭತ್ತು ಸಾವಿರ ಮುಸಲ್ಮಾನರು ಅನುಯಾಯಿಗಳು. ನಾನು (ಗರೀಬ್‌ದಾಸ) ಆಣೆ ಮಾಡಿ ಹೇಳುತ್ತೇನೆ, ಅವರು (ಒಂದು ಲಕ್ಷದ 84 ಸಾವಿರ ಅನುಯಾಯಿಗಳು) ಹಾಗೂ ಹಜರತ್ ಮುಹಮ್ಮದರು ಎಂದಿಗೂ ಯಾವ ಜೀವಿಯ ಮೇಲೂ ಖಡ್ಗ(ಕರದ) ಚಲಾಯಿಸಲಿಲ್ಲ. ಅರ್ಥಾತ್ ಎಂದಿಗೂ ಜೀವಹಿಂಸೆ ಮಾಡಲಿಲ್ಲ ಹಾಗೂ ಮಾಂಸವನ್ನು ತಿನ್ನಲಿಲ್ಲ.

ಪರಮಾತ್ಮನು ಆಕಾಶದ ಅಂತಿಮ ಸ್ಥಾನ (ಎಲ್ಲಾ ಬ್ರಹ್ಮಾಂಡಗಳ ಮೇಲಿರುವ ಸ್ಥಾನ)ದ ಮೇಲೆ ವಿರಾಜಮಾನನಾಗಿದ್ದಾನೆ, ಆದರೆ ಅವನ ದೃಷ್ಟಿಯಿಂದ ಯಾವ ಜೀವಿಯೂ ತಪ್ಪಿಸಿಕೊಂಡಿಲ್ಲ. ಅವನು ಎಲ್ಲಾ ಜೀವಿಗಳನ್ನೂ ನೋಡುತ್ತಾನೆ. ಆ ಪೈಗಂಬರ (ಹಜರತ್ ಮುಹಮ್ಮದ್ ಮತ್ತು ಅನ್ಯ) ಪವಿತ್ರ ಆತ್ಮಗಳಾಗಿದ್ದರು. ಅವರು ಪರಮಾತ್ಮನ ಕೃಪಾ ಪಾತ್ರರಾಗಿದ್ದರು.

## ❖ ಸಂತ ಜಂಭೇಶ್ವರ ಮಹಾರಾಜರ ವಿಚಾರ :-

ಈ ಮಾತಿನ ಸಾಕ್ಷಿಯನ್ನು ಸಂತ ಜಂಭೇಶ್ವರ ಮಹಾರಾಜರು (ಬಿಶ್ನೋಈ ಧರ್ಮದ ಪ್ರವರ್ತಕರು) ನೀಡಿದ್ದಾರೆ. ವಾಣೀ ಸಂಖ್ಯೆ 12ರಲ್ಲಿ ಈ ರೀತಿ ಇದೆ.

ಮಹಮದ್-ಮಹಮದ್ ನ ಕರ್ ಕಾಜೀ, ಮಹಮದ್ ಕಾ ತೋ ವಿಷಮ್ ವಿಚಾರೂ।
ಮಹಮದ್ ಹಾಥ್ ಕರದ್ ನ ಹೋತೀ, ಲೋಹೇ ಘಡೀ ನ ಸಾರೂ।
ಮಹಮದ್ ಸಾಥ್ ಪಯಬಂರ್ ಸೀಧಾ, ಏಕ್ ಲಾಖ್ ಅಸ್ಸೀ ಹಜಾರೂಂ।
ಮಹಮದ್ ಮರದ್ ಹಲಾಲೀ ಹೋತಾ, ತುಮ್ ಹೀ ಭಏ ಮುರದಾರೂಂ।

ಭಾವಾರ್ಥ :- ಸಂತ ಜಂಭೇಶ್ವರರು ಹೇಳಿದ್ದಾರೆ:- ಹೇ ಕಾಜಿ! 'ನೀವು ಆ ಪವಿತ್ರ ಆತ್ಮ ಮುಹಮ್ಮದರ ಹೆಸರಿನಲ್ಲಿ ಯಾವ ಹಸುಗಳನ್ನು ಅಥವಾ ಅನ್ಯ ಜೀವಿಗಳನ್ನು ಕೊಲ್ಲುತ್ತೀರೋ, ಆ ಮಹಾಪುರುಷರಿಗೆ ಕೆಟ್ಟ ಹೆಸರು ತರುತ್ತಿದ್ದೀರಾ, ಹಜರತ್ ಮಹಮದರ ವಿಚಾರವು ಬಹಳ ಕಷ್ಟಕರವಾಗಿತ್ತು. ನೀವು ಅವರು ಹೇಳಿರುವ ಮಾರ್ಗದಿಂದ ತಪ್ಪಿದ್ದಿರಿ. ಮಹಮದರ ಕೈಯಲ್ಲಿ ಜೀವ ತೆಗೆಯುವ, ಚೂರಿ ಕಬ್ಬಿಣವನ್ನು ಕುಟ್ಟಿ-ಕುಟ್ಟಿ ಸಿದ್ಧಗೊಳಿಸಿದ ಚೂರಿ ಇರಲಿಲ್ಲ. ಹಜರತ್ ಮಹಮದರ ಜೊತೆ ಒಂದು ಲಕ್ಷ ಎಂಭತ್ತು ಸಾವಿರ (1,80,000) ಪವಿತ್ರಾತ್ಮರಾದ ಮುಸಲ್ಮಾನ ಅನುಯಾಯಿಗಳಿದ್ದರು. ಅವರು ತುಂಬಾ ಮುಗ್ಧರು, ಹಾಗೂ ಒಳ್ಳೆಯ ಪೈಗಂಬರರು. ಹಜರತ್ ಮುಹಮ್ಮದರಂತು ಪ್ರಾಮಾಣಿಕತೆಯಿಂದ ಸಂಪಾದನೆ ಮಾಡಿ ತಿನ್ನುವವರಾಗಿದ್ದರು. ನೀವು ಜೀವ ಹಿಂಸೆಮಾಡುವವರಾಗಿದ್ದೀರಾ. ಆ ಮಹಾಪುರುಷನಂತೆ ನೀವೂ ಸಹಾ ನಿಮ್ಮ ಜೀವನವನ್ನು ಪಾಪರಹಿತವಾಗಿ ಮಾಡಿಕೊಳ್ಳಿ, ಜೀವಹಿಂಸೆಯನ್ನು ಮಾಡಬೇಡಿ.

ಪರಮಾತ್ಮನು ಜಿಂದಾ ಮಹಾತ್ಮನ ರೂಪದಲ್ಲಿ ಸಮರಾಥಲ್‌ದಲ್ಲಿ ಸಂತ ಜಂಭೇಶ್ವರರಿಗೆ ಸಿಕ್ಕಿದ್ದರು :- ವೇದಗಳಲ್ಲಿ ಪ್ರಮಾಣವಿದೆ ಪರಮಾತ್ಮನು ಸತ್ಯಲೋಕದಲ್ಲಿ ಇರುತ್ತಾನೆ. ಅಲ್ಲಿಂದ ನಡೆದು ಭೂಮಿಯ ಮೇಲೆ ಪ್ರಕಟನಾಗುತ್ತಾನೆ. ಒಳ್ಳೆಯ ಆತ್ಮಗಳನ್ನು ಭೇಟಿಯಾಗುತ್ತಾನೆ. ಅವರಿಗೆ ಆಧ್ಯಾತ್ಮಿಕ ಯಥಾರ್ಥ ಜ್ಞಾನವನ್ನು ನೀಡುತ್ತಾನೆ. ಕವಿಯಂತೆ ಭೂಮಿಯ ಮೇಲೆ ವಿಹರಿಸುತ್ತಾನೆ. ಹಾಗಾಗಿ ಅವನು ಪ್ರಸಿದ್ಧ ಕವಿಗಳಲ್ಲಿ ಒಬ್ಬನೆನಿಸಿಕೊಳ್ಳುತ್ತಾನೆ. ಅವನು ಪ್ರಸಿದ್ಧ ಕವಿಯ ಬಿರುದನ್ನು ಪಡೆಯುತ್ತಾನೆ. ಆ ಪರಮಾತ್ಮನು ಯಾವುದೇ ವೇದಗಳಲ್ಲಿ ಹಾಗೂ ಉಪನಿಷತ್ತುಗಳ ದೊಡ್ಡ-ದೊಡ್ಡ ಗ್ರಂಥಗಳಲ್ಲಿ ಸಿಗದಿರುವ ರಹಸ್ಯವಾದ ಭಕ್ತಿಮಂತ್ರವನ್ನು ನೀಡುತ್ತಾನೆ. ದಯಮಾಡಿ ಈ ಮಂತ್ರಗಳ ಅನುವಾದದ ಫೋಟೋಕಾಪಿಗಳನ್ನು ಇದೇ ಪುಸ್ತಕದ ವೇದಮಂತ್ರಗಳ ಫೋಟೊಕಾಪಿ ಅಧ್ಯಾಯವನ್ನು ಓದಿ.

ಪ್ರಮಾಣ :- ಋಗ್ವೇದದ 9ನೇ ಮಂಡಲದ 20ನೇ ಸೂಕ್ತಿಯ 1ನೇ ಮಂತ್ರ, ಋಗ್ವೇದ 9ನೇ ಮಂಡಲದ 86ನೇ ಸೂಕ್ತಿಯ 26-27ನೇ ಮಂತ್ರ, ಋಗ್ವೇದ 9 ನೇ ಮಂಡಲದ 82ನೇ ಸೂಕ್ತಿಯ 1ನೇ ಮತ್ತು 2ನೇ ಮಂತ್ರ, ಋಗ್ವೇದ 9ನೇ ಮಂಡಲದ 54ನೇ ಸೂಕ್ತದ 3ನೇ ಮಂತ್ರ, ಋಗ್ವೇದ 9ನೇ ಮಂಡಲದ 94ನೇ ಸೂಕ್ತದ 1ನೇ ಮಂತ್ರ ಋಗ್ವೇದ 9ನೇ ಮಂಡಲದ 95ನೇ ಸೂಕ್ತಿಯ 2ನೇ ಮಂತ್ರ ಹಾಗೂ ಋಗ್ವೇದ 9ನೇ ಮಂಡಲದ 96ನೇ ಸೂಕ್ತಿಯ 16ರಿಂದ 20ನೇ ಮಂತ್ರ.

ಈ ಮೊದಲೇ ತಿಳಿಸಿದಂತೆ ಹಜರತ್ ಮುಹಮ್ಮದ್ ಮತ್ತು ಇನ್ನೂ ಅನೇಕ ಮಹಾತ್ಮರಿಗೆ ಪರಮಾತ್ಮ ಜಿಂದಾ ಮಹಾತ್ಮನ ರೂಪದಲ್ಲಿ ಸಿಕ್ಕಿದ್ದರು. ಅದೇ ರೀತಿ ಮಹಾತ್ಮ ಜಂಭೇಶ್ವರ ಮಹಾರಾಜರಿಗೆ ಸಮರಾಥಲ್‌ದಲ್ಲಿ ಜಿಂದಾ ಮಹಾತ್ಮನ ರೂಪದಲ್ಲಿ ಪರಮಾತ್ಮ ಸಿಕ್ಕಿದ್ದರು.

ಪ್ರಮಾಣ :- ಶ್ರೀ ಜಂಭೇಶ್ವರರ ವಾಣಿಯ ಸಂಖ್ಯೆ 50ರ ಕೆಲವು ಅಂಶಗಳು:

ದಿಲ್-ದಿಲ್ ಆಪ್ ಖುದಾಯ್ ಬಂದ್ ಜಾಗ್ಯೋ, ಸಬ್ ದಿಲ್ ಜಾಗ್ಯೋ ಸೋಈ।

ಜೋ ಜಿಂದೋ ಹಜ್ ಕಾಬೈ ಜಾಗ್ಯೋ, ಥಲ್ ಸಿರ್ ಜಾಗ್ಯೋ ಸೋಈ॥
ನಾಮ್ ವಿಷ್ಣು ಕೆ ಮುಸಕಲ್ ಘಾತೈ, ತೇ ಕಾಫರ್ ಸೈತಾನೀ।
ಹಿಂದು ಹೋಯ್ ಕಾ ತೀರ್ಥ್ ನ್ಹಾವೈ, ಪಿಂಡ್ ಭರಾವೈ, ತೇಪಣ್ ರಹಾ ಇವಾಂಣೀ।
ತುರಕ್ ಹೋಯ್ ಹಜ್ ಕಾಂಬೋ ಧೋಕೇ, ಭೂಲಾ ಮುಸಲ್‌ಮಾಣೀ।
ಕೇ ಕೇ ಪುರುಷ್ ಅವರ್ ಜಾಗ್ಯೆಲಾ, ಥಲ್ ಜಾಗ್ಯೋ ನಿಜ್ ವಾಣೀ।

ಭಾವಾರ್ಥ :- ಜಂಭೇಶ್ವರರು ಹೇಳಿರುವುದೇನೆಂದರೆ, ಯಾವಾಗ ಮುಹಮ್ಮದರು ಹಜ್ ಯಾತ್ರೆಗಾಗಿ ಮಕ್ಕಾಗೆ ಹೋಗಿದ್ದರೋ, ಆಗ ಪರಮಾತ್ಮ ಜಿಂದಾ ಮಹಾತ್ಮನ ರೂಪದಲ್ಲಿ ಕಾಬಾದಲ್ಲಿ (ಮಕ್ಕಾದಲ್ಲಿ) ಹಜರತ್ ಮುಹಮ್ಮದರಿಗೆ ಸಿಕ್ಕಿದ್ದರು. ಆಗ ಅವರು ಮಂದಿರ, ಮಕ್ಕಾ ಮುಂತಾದ ತೀರ್ಥ ಸ್ಥಾನಗಳಿಗೆ ಅಲೆದಾಡುವುದರಿಂದ ಪರಮಾತ್ಮ ಸಿಗುವುದಿಲ್ಲ. ಅವನ ಪ್ರಾಪ್ತಿಗಾಗಿ ಮಂತ್ರ ಜಪವನ್ನು ಮಾಡಬೇಕಾಗುತ್ತದೆ ಎಂದು ಹಜರತ್ ಮುಹಮ್ಮದರಿಗೆ ಎಚ್ಚರಿಸಿದ್ದರು. ಶ್ರೀ ಜಂಭೇಶ್ವರರು ಹೇಳಿದ್ದೇನೆಂದರೆ, ಅದೇ ಪರಮಾತ್ಮನು ಥಲಸಿರ್ (ಸಮರಾಥಲ) ಸ್ಥಾನ (ರಾಜಸ್ಥಾನ ಪ್ರಾಂತ್ಯ) ಕ್ಕೆ ಬಂದನು ಹಾಗೂ ನನ್ನನ್ನು ಎಚ್ಚರಿಸಿದನು. ನನ್ನ ಸಮರಾಥಲವು ಪ್ರಸಿದ್ಧವಾಗಿರುವಂತೆ ಇನ್ನೂ ಎಷ್ಟು ಜನರನ್ನು ಎಚ್ಚರಿಸಿದ್ದಾನೋ ಗೊತ್ತಿಲ್ಲ. ಇದು ನನ್ನ ಸತ್ಯವಾಣಿ ಅರ್ಥಾತ್ ವಿಶೇಷವಾದ ವಚನಗಳು. ನಾನು ನನ್ನ ಅನುಭವದ ಯಥಾರ್ಥ ವಾಣಿಯನ್ನು ಹೇಳಿ ಸಮರಾಥಲದ ವ್ಯಕ್ತಿಗಳಲ್ಲಿ ಪರಮಾತ್ಮನ ಭಕ್ತಿಯ ಬಗ್ಗೆ ಜಾಗೃತಿ ಮೂಡಿಸಿದ್ದೇನೆ. ಮುಸಲ್ಮಾನರು ಈ ಸತ್ಯವನ್ನರಿಯದೇ ಈಗಲೂ ಕಾಬಾಗೆ ಹಜ್ ಯಾತ್ರೆ ಮಾಡಲು ಹೋಗುತ್ತಾರೆ. ಅಲ್ಲಿ ಅವರು ಪ್ರಣಾಮ ಮಾಡುತ್ತಾರೆ. ಕಲ್ಲಿಗೆ ನಮಸ್ಕಾರ ಮಾಡುತ್ತಾರೆ ಅದೆಲ್ಲಾ ವ್ಯರ್ಥ. ಇದೇ ರೀತಿ ಹಿಂದೂಗಳು ಸಹ ತೀರ್ಥಯಾತ್ರೆ ಮಾಡುತ್ತಾರೆ. ಭೂತ-ಪ್ರೇತಗಳನ್ನು ಪೂಜಿಸುತ್ತಾರೆ. ಪಿಂಡಪ್ರದಾನ ಮಾಡುತ್ತಾರೆ. ಇದು ಸಹ ವ್ಯರ್ಥ ಸಾಧನೆಯಾಗಿದೆ.

ಸಂತ ಶ್ರೀ ಜಂಭೇಶ್ವರ ಮಹಾರಾಜರು 29 ನಿಯಮಗಳನ್ನು ರಚಿಸಿ ಸ್ವಚ್ಛ ಸಾಧಕ ಸಮಾಜವನ್ನು ಸಿದ್ಧಗೊಳಿಸಿದ್ದರು. ಅವರು 29 ನಿಯಮಗಳನ್ನೂ ಪಾಲಿಸುತ್ತಿದ್ದರು ಹಾಗೂ ಜಂಭೇಶ್ವರರ ಮೂಲಕ ಹೇಳಲ್ಪಟ್ಟ ನಾಮವನ್ನು ಜಪಿಸುತ್ತಿದ್ದರು. ಅವರನ್ನು ಬಿಶ್ನೋಯಿ' (29 ನಿಯಮಗಳನ್ನು ಪಾಲಿಸುವವರು) ಎಂದು ಕರೆಯಲಾಗುತ್ತಿತ್ತು.

ವರ್ತಮಾನದಲ್ಲಿ 'ಬಿಶ್ನೋಈ' ಯಾರೂ ಇಲ್ಲ. ಏಕೆಂದರೆ ಸಮಯ ಹಾಗೂ ಪರಿಸ್ಥಿತಿ ಬದಲಾಗುತ್ತಿರುತ್ತದೆ. ಅದಕ್ಕನುಗುಣವಾಗಿ ಮಾನವನ ಆಚಾರ-ವಿಚಾರ, ವ್ಯವಹಾರ ಎಲ್ಲವೂ ಬದಲಾಗುತ್ತದೆ. ಸಂತರ ಅಭಾವವೇ ಇದಕ್ಕೆ ಮುಖ್ಯ ಕಾರಣ. ಶ್ರೀ ಜಂಭೇಶ್ವರರು ಸ್ವರ್ಗಧಾಮಕ್ಕೆ ಹೋದ ನಂತರ ಅವರಂತೆ ಸಿದ್ಧಿ ಶಕ್ತಿಯನ್ನು ಹೊಂದಿರುವ ಹಾಗೂ ಭಕ್ತಿಯಿಂದ ಇರುವ ಮಹಾಪುರುಷ ಯಾರು ಇರಲಿಲ್ಲ. ಹಾಗಾಗಿ ನಿಯಮಗಳ ಪಾಲನೆ ಆಗಲಿಲ್ಲ. ಇಂದು ಬಿಶ್ನೋಯಿ ಧರ್ಮದ ಅನುಯಾಯಿಗಳು ತೀರ್ಥಯಾತ್ರೆ ಮಾಡುವುದಕ್ಕೆ ಹೆಚ್ಚು ಮಹತ್ವ ನೀಡುತ್ತಾರೆ ಹಾಗೂ ಆ ತೀರ್ಥ ಸ್ಥಾನಗಳಲ್ಲೇ ಹೋಮ-ಹವನಗಳನ್ನು ಮಾಡಿ ತಮ್ಮನ್ನು ಧನ್ಯರೆಂದು ಭಾವಿಸುತ್ತಾರೆ. ಯಾವುದಾದರೂ ಸಂತನು ತನ್ನ ಜೀವಿತ ಕಾಲದಲ್ಲಿ ಸಾಧನೆಯನ್ನು ಮಾಡಿ, ಚಮತ್ಕಾರಗಳನ್ನು ತೋರಿಸಿದರೆ ಅವರಿರುವ ಜಾಗವನ್ನು ತೀರ್ಥಸ್ಥಾನಗಳೆಂದು ಕರೆಯುತ್ತಾರೆ. ಅವರ ಜನ್ಮಸ್ಥಾನ ಹಾಗೂ ನಿರ್ವಾಣ ಸ್ಥಾನವನ್ನು ಸಹ ತೀರ್ಥಸ್ಥಾನ ಅಥವಾ ಸ್ಮಾರಕಗಳೆಂದು ಕರೆಯುತ್ತಾರೆ.

ಈ ಸ್ಮಾರಕಗಳನ್ನು ಸಂರಕ್ಷಿಸಬೇಕಾಗಿರುವುದು ಅನಿವಾರ್ಯ. ಏಕೆಂದರೆ ಅಲ್ಲಿ ಅವರ ನೆನಪು ಇರುತ್ತದೆ ಹಾಗೂ ಸತ್ಯ ಪ್ರತೀಕವಾಗಿರುತ್ತದೆ. ಘಟನಾ ಸ್ಥಳ ಇದ್ದರೂ ಸಾಧನೆ ಹಾಗೂ ಭಕ್ತಿ ಇಲ್ಲದಿದ್ದರೆ ಜೀವನದ ಸಾರ್ಥಕತೆ ಇರುವುದಿಲ್ಲ. ಆದ್ದರಿಂದ ಪೂರ್ಣ ಗುರುವನ್ನು ಹುಡುಕಿ ಅವರು ಹೇಳಿದ ದಾರಿಯಲ್ಲೇ ನಡೆಯುತ್ತಾ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು. ಏಕೆಂದರೆ ಪ್ರತಿಯೊಬ್ಬ ಮಹಾಪುರುಷರು ಗುರುಮಾಡಿಕೊಂಡಿದ್ದಾರೆ. ಆ

ಗುರುವು ಸಹ ಪೂರ್ಣಗುರುವಾಗಿರಬೇಕು ತನ್ನ ಮುಖ ಕಮಲದಿಂದ ಭಕ್ತಿಯ ವಿಧಾನವನ್ನು ತಿಳಿಸುವನು. ಆದರೆ ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದು ಧರ್ಮದಲ್ಲೂ ಭಕ್ತಿಯ ವಿಧಾನವನ್ನು ಬದಲಾಯಿಸಲಾಗುತ್ತಿರುತ್ತದೆ. ಇದು ಹೆಚ್ಚು ಹಾನಿಕಾರಕ.

ಉದಾ:– ಸಂತ ಶ್ರೀ ಜಂಭೇಶ್ವರರ **120** ವಾಣಿಗಳಿವೆ. ಅವು ಅವರು ಸ್ವತಃ ತಮ್ಮ ಮುಖ ಕಮಲದಿಂದ ಉಚ್ಚರಿಸಿದ ಅಮೃತವಾಣಿಯಾಗಿವೆ. ಆದರೆ ಈಗ ಆ ಪ್ರತ್ಯೇಕ ಪದ್ಯದ ಪ್ರಾರಂಭದಲ್ಲಿ 'ಓಂ' ಅಕ್ಷರವನ್ನು ಸೇರಿಸಲಾಗಿದೆ. ಇದು ತಪ್ಪು. ಇದು ಸಂತರಿಗೆ ಮಾಡಿದ ಅವಮಾನವಾಗಿದೆ. 'ಓಂ' ಅಕ್ಷರದ ವಿನಃ ಈ ಪದ್ಯವು ಸಾರ್ಥಕವಾಗಿಲ್ಲದಿದ್ದರೆ ಜಂಭೇಶ್ವರರೇ ಇದನ್ನು ಸೇರಿಸುತ್ತಿದ್ದರು. ಉದಾ: – ಒಂದು ಕಂಪನಿ ಮೋಟಾರ್ ಸೈಕಲ್‌ನ ಪಿಸ್ಟನ್ ತಯಾರಿಸಿದರೆ ಅದು ಸಂಪೂರ್ಣವಾಗಿ ಸರಿಯಾಗಿರುತ್ತದೆ. ಅದನ್ನು ಬಿಟ್ಟು ಬೇರೆ ಯಾರೋ ವ್ಯಕ್ತಿ ತನಗೆ ಇಷ್ಟ ಬಂದ ಹಾಗೇ 'ಪಿಸ್ಟನ್' ತಯಾರಿಸಿ ಯಾವುದೋ ನಟ್ಟು–ಬೋಲ್ಟ್ ಸೇರಿಸಿ ವೆಲ್ಡ್ ಮಾಡಿ ತನ್ನ ಚಾಣಾಕ್ಷತೆಯನ್ನು ತೋರಿಸಿದರೆ ಎಷ್ಟು ಸರಿ? ಇದು ಬರಿ ವ್ಯರ್ಥ. ಇದೇ ರೀತಿ ಸಂತ ಜಂಭೇಶ್ವರರ ಪದ್ಯದ ಜೊತೆ 'ಓಂ' ಅಕ್ಷರ ಸೇರಿಸಿ ಓದಿದರೆ ಲಾಭಕ್ಕೆ ಬದಲಾಗಿ ನಷ್ಟವೇ ಆಗುವುದು.

❖ ಇದೇ ರೀತಿ ಒಂದು ಗಾಯತ್ರಿ ಮಂತ್ರವನ್ನು ಮಾಡಿಟ್ಟಿದ್ದಾರೆ. ಅದನ್ನು ಹಿಂದೂ ಧರ್ಮದ ವ್ಯಕ್ತಿಗಳು ಶ್ರದ್ಧೆಯಿಂದ ಜಪಿಸುತ್ತಾರೆ. ಆ ಮಂತ್ರವು ಈ ರೀತಿ ಹಾಳಾಗಿದೆ. 'ಓಂ ಭೂರ್ಭವ ಸ್ವಃ ತತ್ಸವಿತುರ್ ವರೇಣಿಯಂ ಭರ್ಗೋದೇವತ್ಸ್ಯ। ಧೀಮಹಿ ಧೀಯೋ ಯೋ ನ ಪ್ರಚೋದಯಾತ್' ವಾಸ್ತವದಲ್ಲಿ ಇದು ಯಜುರ್ವೇದದ **36**ನೇ ಅಧ್ಯಾಯದ **3**ನೇ ಮಂತ್ರ. ಇದರ ಹಿಂದೆ 'ಓಂ' ಅಕ್ಷರವಿಲ್ಲ. ವೇದವನ್ನು ಪರಮಾತ್ಮ ನೀಡಿರುವವನು. ಇದರ ಮುಂದೆ 'ಓಂ' ಅಕ್ಷರವನ್ನು ಸೇರಿಸುವುದು ಭಗವಂತನಿಗೆ ಅಪಮಾನ ಮಾಡಿದ ಹಾಗೆ. ಪಿಸ್ಟನಗೆ ನಟ್ ವೆಲ್ಡ್ ಮಾಡಿದಂಗೆ ಇದು ವ್ಯರ್ಥ.

ಸಂತ ಶ್ರೀ ಜಂಭೇಶ್ವರರು **69**ನೇ ವಾಣಿಯಲ್ಲಿ ಹೇಳಿರುವುದೇನೆಂದರೆ, ವೇದ ಹಾಗೂ ಪುರಾಣಗಳಲ್ಲಿ ಯಥಾರ್ಥವಾದ ಭಕ್ತಿ ಮಾರ್ಗವಿಲ್ಲ. ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಭೂತಾರಾಧನೆಯನ್ನು ಪ್ರಾರಂಭಿಸಲಾಗಿದೆ. ಪ್ರಪಂಚವೆಂಬ ವೃಕ್ಷದ ಮೂಲವೇ ಆದ ಅಪರಂಪಾರ ಪರಮಾತ್ಮನನ್ನು ಏಕೆ ಜಪಿಸುವುದಿಲ್ಲ? ಮೂಲದ ಪೂಜೆ ಮಾಡದೆ ರೆಂಬೆ–ಕೊಂಬೆಗಳ ಹಾಗೂ ಪೂಜೆಯು ವ್ಯರ್ಥ. ಇದರಿಂದ ಜಮ ಹಾಗು ಕಾಲ ದಿಂದ ಪಾರಾಗಲು ಸಾಧ್ಯವಿಲ್ಲ (ಜಮ=ಜನ್ಮ, ಕಾಲ=ಸಾವು) ಅಂದರೆ ಜನನ–ಮರಣವು ಅಂತ್ಯಗೊಳ್ಳುವುದಿಲ್ಲ.

ಯಾರೋ ಒಳ್ಳೆಯ ಪುರುಷನೇ ತತ್ವಜ್ಞಾನವನ್ನು ಕೇಳಿದ್ದಾನೆ. ಅವನು ಜೀವನದ ವಿಧಾನವನ್ನು ತಿಳಿದಿದ್ದಾನೆ. ಆ ಕಾರಣದಿಂದ ಬದುಕಿದ್ದಾಗಲೂ ಲಾಭವಾಗುತ್ತದೆ ಹಾಗು ಸತ್ತ ನಂತರವೂ ಹಾನಿಯಾಗುವುದಿಲ್ಲ. ಅಂಥವನು ಮೋಕ್ಷವನ್ನು ಪಡೆಯುತ್ತಾನೆ.

**72**ನೇ ವಾಣಿಯಲ್ಲಿರುವ ಕೆಲವು ಪಂಕ್ತಿಗಳು :–

ವೇದ್ ಕುರಾಣ್ ಕುಮಾಯಾ ಜಾಲೂಂ ಭೂಲಾ ಜೀವ್ ಕೂಜೀವ್ ಕುಜಾಣೀ।
ಕೇವಲ್ ಜ್ಞಾನೀ ಥಲ್ ಸಿರ್ ಆಯೋ ಪರಗಟ್ ಖೇಲ್ ಪಸಾರೀ।
ಕೋಡ್ ತೆತೀಸಾಂ ಪೋಹ್ ರಚಾವಣ್ ಹಾರೀ, ಜ್ಯೂಂ ಛಕ್ ಆಈಸಾರೀ।

**72**ನೇ ವಾಣಿಯಲ್ಲಿ ಶ್ರೀ ಜಂಭೇಶ್ವರರು ಹೇಳಿರುವುದೇನೆಂದರೆ, ತತ್ವಜ್ಞಾನವನ್ನು ತಿಳಿಸುವಾತನು ಸಮರಾಥಲಕ್ಕೆ ಬಂದಿದ್ದನು. ಅವನು ಕೇವಲ ಜ್ಞಾನಿ ಅರ್ಥಾತ್ ಪೂರ್ಣ ಜ್ಞಾನವನ್ನು ತಿಳಿದವನಾಗಿದ್ದನು ಮತ್ತು ಸಕಲ ಸೃಷ್ಟಿಯನ್ನು ರಚಿಸಿದ್ದವನು. ಅವನ ತತ್ವಜ್ಞಾನದಿಂದಲೇ ಪೂರ್ಣ ತೃಪ್ತಿ ಲಭಿಸಿತು. ಅವನೇ ಪೂರ್ಣ ಗುರು.

**ವಾಣಿ ಸಂಖ್ಯೆ 69 ರ ಕೆಲವು ಪಂಕ್ತಿಗಳು:–**

ಸೋ ಅಪರಂಪಾರ್ ಕಾಂಯ್ ನ ಜಂಪೋ, ತತ್ ಖಿಣ್ ಲಹೋ ಇಮಾಣೋ।
ಭಲ್ ಮೂಲ್ ಸೀಂಚೋ ರೇ ಪ್ರಾಣೀ, ಜ್ಯೂಂ ತರವರ್ ಮೇಲತ್ ಡಾಲೂ।
ಜಇಯಾ ಮೂಲ್ ನ ಸಿಚ್ಚೋ ತೋ ಜಾಮಣ್–ಮರಣ್ ಬಿಗೋವೋ।
ಅಂಹನಿಶ್ ಕರಣೀ ಥೀರ್ ನ ರಹಿಬಾ ನ ಬಂಚ್ಯೋ ಜಮ್ ಕಾಲೂಂ।
ಕೋಈ ಕೋಈ ಭಲ್ ಮೂಲ್ ಸಿಂಚೀಲೋ,
ಭಲ್ ತಂತ್ ಬುಝೀಲೋ ಜಾ ಜೀವನ್। ಕೀ ವಿಧಿ ಜಾಣೀ,
ಜೀವತಡಾ ಕಛು ಲಾಹೋ ಹೋಸೀ ಮೂವಾ ನ ಆವತ್ ಹಾಂಣೀ।

## ❖ ಶ್ರೀ ಜಂಭೇಶ್ವರರ ಗುರುಗಳು ಯಾರಾಗಿದ್ದರು?

**ಜಂಭೇಶ್ವರರಿಗೆ ಸರ್ವ ಸೃಷ್ಟಿಕರ್ತ ಪೂರ್ಣ ಪರಮಾತ್ಮ ಜಿಂದಾ ಮಹಾತ್ಮ ರೂಪದಲ್ಲಿ ಸಿಕ್ಕಿದ್ದರು. ಅವರನ್ನೇ ಗುರು ಮಾಡಿಕೊಂಡಿದ್ದರು. ಸಂತ ಶ್ರೀ ಜಂಭೇಶ್ವರರ ಗುರು ಇದ್ದರು:–**

**ಪ್ರಮಾಣ :– ವಾಣಿ ಸಂಖ್ಯೆ 90ರ ಕೊನೆಯಲ್ಲಿರುವ ಪಂಕ್ತಿಗಳು:–**

ಜಾಂ ಜಾಂ ಪವನ್ ಆಸಣ್, ಪಾಣೀ ಆಸಣ್, ಚಂದ್ ಆಸಣ್।
ಸೂರ್ (ಸೂರ್ಯ್) ಆಸಣ್ ಗುರು ಆಸಣ್ ಸಂಮರಾ ಥಲೇ।
ಕಹೈ ಸತಗುರು ಭೂಲ್ ಮತ್ ಜಾಇಯೋ ಪಡೋಲಾ ಅಭೈ ದೋಜಖೇ।

**ವಾಣಿ ಸಂಖ್ಯೆ 91ರಲ್ಲಿರುವ ಪಂಕ್ತಿಗಳು:–**

ಧಂದೇ–ಮಂದೇ ಬಾಲಕ್ ಬುದ್ಧೇ, ಕೂಡೇ ಕಪಟೇ ಋಧ ನ ಸಿದ್ಧೇ।
ಮೇರೇ ಗುರು ಜೋ ದೀನ್ಹೀ ಶಿಕ್ಷಾ ಸರ್ವ್ ಆಲಿಂಗಣ್ ಫೋರೀ ದೀಕ್ಷಾ।
ಸತ್–ಸತ್ ಭಾಖತ್ ಗುರು ರಾಯೋಂ ಜರಾ ಮರಣ್ ಭೋ ಭಾಗೂಂ।

**ವಾಣಿ ಸಂಖ್ಯೆ 92ರ ಕೆಲವು ಪಂಕ್ತಿಗಳು:–**

ಪಢ್ ವೇದ್ ಕುರಾಣ್ ಕುಮಾಯಾ ಜಾಲೋಂ ದಂತ್ ಕಥಾ ಜುಗ್ ಛಾಯೋ।
ಸಿದ್ಧ ಸಾಧಕ್ ಕೋ ಏಕ್ ಮತೋ, ಜಿನ್ ಜೀವತ್ ಮುಕ್ತ್ ದೃಢಾಯೋ।
ಜುಗಾಂ–ಜುಗಾಂ ಕಾ ಜೋಗೀ ಆಯೋ, ಸತಗುರು ಸಿದ್ಧ್ ಬತಾಏ।
ಸಹಜ್ ಸ್ನಾನೀ ಕೇವಲ್ ಜ್ಞಾನೀ ಬ್ರಹ್ಮ್ ಜ್ಞಾನೀ ಸುಕೃತ ಅಹಲ್ಯೋ ನ ಜಾಈ।

**ಮೇಲೆ ತಿಳಿಸಿದ ಅಮೃತವಾಣಿಯ ಭಾವಾರ್ಥ :– ವಾಣಿ ಸಂಖ್ಯೆ 90ರ ವಾಣಿಯಲ್ಲಿ ಶ್ರೀ ಸಂತ ಜಂಭೇಶ್ವರರು ಹೇಳಿರುವುದೇನೆಂದರೆ, 'ಹೇಗೆ ಗಾಳಿಗೆ ಆಸನ [ಸ್ಥಾನ = ಜಾಗ = ಆಶ್ರಮ] ವಿದೆಯೋ, ಅಂದರೆ ಗಾಳಿಯು ಕೆಲವು ಕಿಲೋಮೀಟರ್ ಮೇಲಿನವರೆಗೆ ಇರುತ್ತದೆ. ಅದಕ್ಕೂ ಸ್ಥಾನವಿದೆ. ಆದರೆ ಅದು ತನ್ನ ಸ್ಥಾನದಲ್ಲೇ ಅಲ್ಲಿ–ಇಲ್ಲಿ ಸುತ್ತಾಡುತ್ತಿರುತ್ತದೆ. ಇದೇ ರೀತಿ ನೀರು = ಜಲ ಇದಕ್ಕೂ ಒಂದು ಸ್ಥಾನವಿದೆ. ಸೂರ್ಯ–ಚಂದ್ರರಿಗೂ ಸ್ಥಾನವಿದೆ. ಇದೇ ರೀತಿ ಸದ್ಗುರು ಸಿಕ್ಕ ನಂತರ ನಾನು ಸಮರಾಥಲದಲ್ಲಿ ನನ್ನ ಸ್ಥಾನವನ್ನು ಸ್ಥಾಪಿಸಿಕೊಂಡೆ. ನನ್ನ ಗುರುಗಳನ್ನು, ಪರಮಾತ್ಮನನ್ನು ಮರೆಯಬಾರದು, ಇಲ್ಲದಿದ್ದರೆ ನರಕಕ್ಕೆ ಹೋಗುವೆ' ಎಂದು ಹೇಳಿದ್ದಾರೆ. ಹಾಗಾಗಿ ಸಂತ ಜಂಭೇಶ್ವರರು ಮಾನವಕುಲಕ್ಕೆ ಗುರು ಮಾಡಿಕೊಂಡು ಪರಮಾತ್ಮನನ್ನು ಆರಾಧಿಸಬೇಕೆಂದು ಎಚ್ಚರಿಸಿದ್ದಾರೆ.**

**ಸ್ಪಷ್ಟನೆ :– ಸಂತ ಜಂಭೇಶ್ವರರನ್ನು ಪರಮಾತ್ಮನು ಜಿಂದಾ ಮಹಾತ್ಮ ರೂಪದಲ್ಲಿ ಭೇಟಿಯಾಗಿದ್ದನು. ಇದೇ ರೀತಿ ಹರಿಯಾಣ ರಾಜ್ಯದ 'ಝಜ್ಜರ್' ಜಿಲ್ಲೆಯ 'ಛುಡಾಣಿ' ಗ್ರಾಮದಲ್ಲಿ ಪರಮಾತ್ಮನು ಸಂತ ಗರೀಬ್‌ದಾಸರನ್ನು ಭೇಟಿಯಾಗಿದ್ದನು. ಅವರು ಸಹ ತಮ್ಮ ಅಮೃತವಾಣಿಯಲ್ಲಿ ಹೇಳಿದ್ದಾರೆ:–**

ಗರೀಬ್, ಏಸಾ ಸತಗುರು ಹಮ್ ಮಿಲ್ಯಾ, ಹೈ ಜಿಂದಾ ಜಗದೀಶ್।
ಸುನ್ನ್ ವಿದೇಶೀ ಮಿಲ್ ಗಯಾ, ಛತ್ರ್ ಮುಕುಟ್ ಹೈ ಶೀಶ್॥
ಗರೀಬ್, ಜಿಂದಾ ಜೋಗೀ ಜಗತ್ ಗುರೂ, ಮಾಲಿಕ್ ಮುರಸಿದ್ ಪೀರ್।
ದೋಹೂಂ ದೀನ್ ಝುಗಡಾ ಮಂಡ್ಯಾ, ಪಾಯಾ ನಹೀಂ ಶರೀರ್॥
ಗುರು ಜ್ಞಾನ್ ಅಮಾನ್ ಅಡೋಲ್ ಅಬೋಲ್ ಹೈ, ಸತಗುರೂ ಶಬ್ದ್ ಸೇರೀ ಪಿಛಾನೀ।
ದಾಸ್ ಗರೀಬ್ ಕಬೀರ್ ಸತಗುರು ಮಿಲ್ಯಾ, ಆನ್ ಅಸ್ಥಾನ್ ರೋಪ್ಯಾ ಛುಡಾನೀ॥

ಇದೇ ರೀತಿ ಜಂಭೇಶ್ವರರು ವಾಣಿಯ ಸಂಖ್ಯೆ 91ರ ಅಮೃತವಾಣಿಯಲ್ಲಿ ಹೇಳಿರುವುದೇನೆಂದರೆ, 'ನನ್ನ ಗುರುವಿನ ಜ್ಞಾನವು ಸುಳ್ಳಲ್ಲ. ಮೋಸದಿಂದ ತುಂಬಿಲ್ಲ. ಬಾಲಕ ಬುದ್ಧಿ ಅಂದರೆ ಅರ್ಥಂಬರ್ಥ ಜ್ಞಾನವಲ್ಲ, ಮಂದಮತಿಯ ಜ್ಞಾನವಲ್ಲ ಹಾಗೂ ಸಿದ್ಧಿ ನೀಡುವ ಜ್ಞಾನವಲ್ಲ. ಇದು ಪೂರ್ಣ ಮೋಕ್ಷ ಮಾರ್ಗದು' ನನ್ನ ಗುರುಗಳು ನನಗೆ ಸರ್ವಸತ್ಯ ಜ್ಞಾನದ ಶಿಕ್ಷಣವನ್ನು ನೀಡಿದ್ದಾರೆ. ಅದನ್ನೇ ನಾನು ದೀಕ್ಷೆಯ ರೂಪದಲ್ಲಿ ಮುಂದೆ ಹೇಳಿದ್ದೇನೆ. ಇದರಿಂದ ವೃದ್ಧಾಪ್ಯದಲ್ಲಿ ಬರುವಂಥಹ ಕಷ್ಟ ಹಾಗೂ ಮರಣದ ಭಯವು ಸಮಾಪ್ತವಾಯಿತು.

ಸ್ಪಷ್ಟನೆ: – ಭಗವದ್ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಇದಕ್ಕೆ ಪ್ರಮಾಣವಿದೆ. ಯಾವ ಸಾಧಕರು ತತ್ವದರ್ಶಿ ಸಂತನನ್ನು ಹುಡುಕಿಕೊಳ್ಳುತ್ತಾನೋ ಅವರು ಜನನ–ಮರಣದಿಂದ ಪಾರಾಗಲು ಪ್ರಯತ್ನಿಸುತ್ತಾರೆ. ಏಕೆಂದರೆ ಅವರಿಗೆ 'ತತ್ ಬ್ರಹ್ಮ'ನನ್ನು ತಿಳಿದಿರುತ್ತಾರೆ ಹಾಗೂ ಎಲ್ಲ ಕರ್ಮಗಳನ್ನು ಸಹ ತಿಳಿದಿರುತ್ತಾರೆ.

ವಾಣಿ ಸಂಖ್ಯೆ 92ರ ಅಮೃತವಾಣಿಯ ಭಾವಾರ್ಥ :– ಸಂತ ಜಂಭೇಶ್ವರರು ಹೇಳಿರುವುದೇನೆಂದರೆ ವೇದ ಮತ್ತು ಕುರಾನ್‌ವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಕೇವಲ ದಂತಕಥೆಗಳನ್ನು ಮಾನವ ಸಮಾಜಕ್ಕೆ ತಿಳಿಸುತ್ತಾರೆ. ಸಿದ್ಧರ ಹಾಗೂ ಸಾಧಕರ ಅಭಿಪ್ರಾಯವು ಒಂದೇ ಆಗಿರುತ್ತದೆ. ಅವರು ಈ ಪ್ರಪಂಚದಲ್ಲಿ ಬದುಕಿದ್ದರೂ ಸತ್ತವರಂತೆ ಇರುತ್ತಾರೆ, ಪ್ರಪಂಚವನ್ನು ಸಾರರಹಿತವೆಂದು ಭಾವಿಸುತ್ತಾರೆ. ಪರಮಾತ್ಮನು ಪ್ರತಿಯೊಂದು ಯುಗಗಳಲ್ಲಿ ಪ್ರಕಟನಾಗುತ್ತಾನೆ. ಯಥಾರ್ಥ ಭಕ್ತಿ ವಿಧಿಯನ್ನು ಹೇಳುತ್ತಾನೆ. ಅವನೇ ಸದ್ಗುರು, ಅವನೇ ಪೂರ್ಣ ಸಿದ್ಧನು ಅರ್ಥಾತ್ ಸಮರ್ಥನು ಆಗಿರುತ್ತಾನೆ. ಸದ್ಗುರು ಹಾಗು ಸಂತ ರೂಪದಲ್ಲಿ ಪ್ರಕಟನಾದ ಆ ಪರಮಾತ್ಮನೇ ಜ್ಞಾನಿಯು ಅರ್ಥಾತ್ ಅವನೊಬ್ಬನೇ ಸತ್ಯಜ್ಞಾನವನ್ನು ಅರಿತವನಾಗಿರುತ್ತಾನೆ. ಆ ಸದ್ಗುರುವಿನಿಂದ ಯಾರು ದೀಕ್ಷೆ ಪಡೆಯುತ್ತಾರೋ ಆ ಬ್ರಹ್ಮ ಜ್ಞಾನಿಯ ಅರ್ಥಾತ್ ಸತ್ಯಸಾಧಕನ ಸಾಧನೆಯು ಅಹಲ್ಯೋ ಅರ್ಥಾತ್ ಭಕ್ತಿಯು ವ್ಯರ್ಥವಾಗುವುದಿಲ್ಲ. ಅವನು ಪೂರ್ಣ ಮೋಕ್ಷವನ್ನು ಪಡೆಯುತ್ತಾನೆ.

❖ ವಿಶ್ಲೇಷಣೆ :– 'ಬಿಶ್ನೋಯಿ' ಧರ್ಮದ ಅನುವಾದಕರು ವಾಣಿ ಸಂಖ್ಯೆ 50ರ ಅಮೃತವಾಣಿಯ ಈ ಪಂಕ್ತಿಯ ಭಾವಾರ್ಥವನ್ನು ಹೀಗೆ ಮಾಡಿದ್ದಾರೆ.

ದಿಲ್ ದಿಲ್ ಆಪ್ ಖುದಾಬಂದ್ ಜಾಗ್ಯೋ, ಸಬ್ ದಿಲ್ ಜಾಗ್ಯೋ ಸೋಈ।
ಜೋ ಜಿಂದೋ ಹಜ್ ಕಾಬೇ ಜಾಗ್ಯೋ, ಥಲ್ ಸಿರ್ ಜಾಗ್ಯೋ ಸೋಈ॥

ತಪ್ಪು ಭಾವಾರ್ಥ ಮಾಡಿದ್ದಾರೆ ಯಾವ ಪರಮಾತ್ಮನು ಮುಹಮ್ಮದರಿಗೆ ಕಾಬಾದಲ್ಲಿ ಸಿಕ್ಕಿದ್ದನು ಅವರೇ ಶ್ರೀ ಸಂತ ಜಂಭೇಶ್ವರರು ಸಮರಾಥಲಕ್ಕೆ ಬಂದಿದ್ದರು. ಒಂದು ವೇಳೆ ಹೀಗೆ ಅರ್ಥವಾಗಿದ್ದರೆ ಜಂಭೇಶ್ವರರ ಜನನವು ಪವಿತ್ರ ಗ್ರಾಮವಾದ ಪೀಪಾಸರದಲ್ಲಾಯಿತು, ಅವರಂತು ಈ ಮೊದಲೇ ಅಲ್ಲಿಗೆ ಬಂದಿದ್ದರು, ಸಮರಾಥಲದಲ್ಲಂತು ನಂತರ ಹೋದರು, ನಂತರ ಲಾಲಾಸರದಲ್ಲಿ ಅವರ ನಿರ್ವಾಣವಾಯಿತು. ವಾಸ್ತವಿಕ ಅರ್ಥ ಪೂರ್ವದಲ್ಲೇ ಬರೆದಿದೆ ಅದೇ ಸರಿಯಾಗಿದೆ ಆದರು ಯಾವ ಮಹಾತ್ಮರಿಗೆ ಪರಮಾತ್ಮ ಸಿಗುತ್ತಾರೋ, ಅವರು ಪೂರ್ಣ ಸಂತರಾಗಿರುತ್ತಾರೆ. ಆದರೆ ಅವರು ಸತ್ಯ ಭಕ್ತಿಯ ಅಧಿಕಾರಿ ಹಾಗೂ ಸಮಯ ಸಂದರ್ಭವಿಲ್ಲದೆ

ಏನನ್ನೂ ಹೇಳುವುದಿಲ್ಲ. ಸಂತ ಜಂಭೇಶ್ವರರು ಸ್ವತಃ ಮಾಡುತ್ತಿದ್ದ ನಾಮಜಪವು 'ಬಿಶ್ನೋಯಿ' ಧರ್ಮದಲ್ಲಿ ಮಾಡುವಂಥಹ ಆರತಿ ವಾಣಿ ಸಂಖ್ಯೆ 8ರಲ್ಲಿರುವ ಮೊದಲನೇ ಪಂಕ್ತಿಯಲ್ಲಿ ಬರೆಯಲಾಗಿದೆ. ಅದು ಈ ರೀತಿ ಇದೆ :–

"ಓಮ್ ಶಬ್ದ್ ಸೋಹಂಗ್ ಧ್ಯಾವೇ। ಪ್ರಭು ಶಬ್ದ್ ಸೋಹಂಗ್ ಧ್ಯಾವೈ"

ಆದರೆ ಈ ಮಂತ್ರದ ಜಪವನ್ನು ಹೇಗೆ ಮಾಡಬೇಕೆನ್ನುವುದನ್ನು ಗುರುವಿಲ್ಲದೆ ತಿಳಿಯಲು ಸಾಧ್ಯವಿಲ್ಲ. ಶ್ರೀ ಸಂತ ಜಂಭೇಶ್ವರರು ಸ್ವತಃ ಮೇಲಿನ ಜಪವನ್ನು ಮಾಡುತ್ತಿದ್ದರೂ ಸಹ ಬೇರೆಯವರಿಗೆ ವಿಷ್ಣು–ವಿಷ್ಣು ಭಣ್ ರೇ ಪ್ರಾಣಿ ಅಂದರೆ ವಿಷ್ಣು–ವಿಷ್ಣು ಎನ್ನುವ ಜಪ ಮಾಡಿ ಎಂದು ಹೇಳುತ್ತಿದ್ದರು. ಕಾರಣವೇನೆಂದರೆ ಎಲ್ಲಿಯವರೆಗೆ ಶಿಷ್ಯ ಅದರ ಯೋಗ್ಯನಾಗುವುದಿಲ್ಲವೊ ಅಲ್ಲಿಯವರೆಗೆ ಈ ಮಂತ್ರವನ್ನು ನೀಡಲಾಗುವುದಿಲ್ಲ. ಇನ್ನೊಂದು ವಿಶೇಷವೆಂದರೆ ಪರಮಾತ್ಮನು ಯಾವ–ಯಾವ ಸಂತ ಮಹಾತ್ಮರಿಗೆಲ್ಲಾ ಸಿಕ್ಕಿದ್ದನೋ ಈ ಮಂತ್ರವನ್ನು ಅವರಿಗೆಲ್ಲಾ ಕಲಿಯುಗದ 5,505 ವರ್ಷ ಕಳೆಯುವವರೆಗೆ ರಹಸ್ಯವಾಗಿಡಲು ಹೇಳಿದ್ದನು.

1997ನೆಯ ಇಸವಿಗೆ ಕಲಿಯುಗದ 5,505 ವರ್ಷಗಳು ಕಳೆದಿವೆ. ಈಗ ಈ ಮಂತ್ರವನ್ನು ನೀಡಬಹುದಾಗಿದೆ. ಈ ಮಂತ್ರವನ್ನು ನೀಡಲು ಸಹ ಪೂರ್ಣ ಸಂತನ ಅವಶ್ಯಕತೆ ಇದೆ. ಇದೇ ರೀತಿ ಶ್ರೀ ಗುರು ನಾನಕದೇವರು ಸ್ವತಃ 'ಬಿಶ್ನೋಯಿ' ಧರ್ಮದ 8ನೇ ಪದ್ಯದ ಮೊದಲನೇ ಪಂಕ್ತಿಯಲ್ಲಿರುವ ನಾಮಜಪವನ್ನು ಮಾಡುತ್ತಿದ್ದರು. ಆದರೆ ಶಿಷ್ಯರಿಗೆ ವಾಹೇ ಗುರು–ವಾಹೇ–ಗುರು ಎಂದು ಜಪಿಸಲು ಹೇಳುತ್ತಿದ್ದರು. ಕಾರಣ ಈ ಮಂತ್ರವನ್ನು ಕಲಿಯುಗದ 5,505 ವರ್ಷಗಳು ಕಳೆಯುವವರೆಗೂ ರಹಸ್ಯವಾಗಿ ಇಡಬೇಕೆಂಬುದೇ ಇದರ ಉದ್ದೇಶವಾಗಿತ್ತು. ಈಗ ಈ ಮಂತ್ರದ ಜಪವು ಮನೆ–ಮನೆಯಲ್ಲೂ ಆಗುವುದು. ಈ ಎರಡು ಅಕ್ಷರಗಳ ಮಂತ್ರವನ್ನು 'ಸತ್ಯನಾಮ' ಎಂದು ಕರೆಯುತ್ತಾರೆ.

ಇದೇ 2 ಅಕ್ಷರದ ನಾಮಮಂತ್ರವನ್ನು 'ಘೀಸಾದಾಸ್' (ಉತ್ತರ ಪ್ರದೇಶ ರಾಜ್ಯದ 'ಬಾಘಪತ್' ಜಿಲ್ಲೆಯ 'ಖೇಖಡಾ ಗ್ರಾಮ) ಅವರಿಗೆ ಜಿಂದಾ ಮಹಾತ್ಮನ ರೂಪದಲ್ಲಿ ಪ್ರಕಟನಾಗಿ ಪರಮಾತ್ಮನು ತಿಳಿಸಿದ್ದನು. ಅವರು ತಮ್ಮ ವಾಣಿಯಲ್ಲಿ ಹೇಳಿದ್ದಾರೆ :–

ಓಹಂಗ್ ಸೋಹಂಗ್ ಜಪಲೇ ಭಾಈ। ರಾಮ್ ನಾಮ್ ಕೀ ಯಹೀ ಕಮಾಈ॥

ಪರಮಾತ್ಮನು ಸಂತ ಗರೀಬ್‌ದಾಸರಿಗೆ (ಹರಿಯಾಣ ರಾಜ್ಯದ ಝಜ್ಜರ್ ಜಿಲ್ಲೆಯ 'ಛುಡಾಣಿ' ಗ್ರಾಮದವರಿಗೆ) ಜಿಂದಾ ಮಹಾತ್ಮನ ವೇಷದಲ್ಲಿ ಕಾಡಿನಲ್ಲಿ ಸಿಕ್ಕಿದ್ದರು. ಅವರಿಗೂ ಸಹ ಈ ಮಂತ್ರವನ್ನು ಜಪಿಸಲು ಹೇಳಿದ್ದರು. ಅದು ಸಂತ ಗರೀಬ್‌ದಾಸರ ಅಮೃತವಾಣಿಯಲ್ಲಿ ಹೀಗೆ ಬರೆದಿದೆ. "ರಾಮ್ ನಾಮ್ ಜಪ್ ಕರ್ ಸ್ಥಿರ್ ಹೊಈ, ಓಂ ಸೋಹಂ ಮಂತ್ರ ದೋಈ" ಆದರೆ ಗರೀಬ್‌ದಾಸರು ಈ ಮಂತ್ರವನ್ನು ಬೇರೆಯವರಿಗೆ ಜಪಿಸಲು ನೀಡಿಲ್ಲ. ಕೇವಲ ಒಬ್ಬ ಸಂತನಿಗೆ ಆ ಮಂತ್ರವನ್ನು ಕೊಟ್ಟು ನೀನು ಸಹ ನಿನ್ನ ವಿಶ್ವಾಸಪಾತ್ರನಾದ ಒಬ್ಬ ಶಿಷ್ಯನಿಗೆ ನೀಡು ಎಂದು ಹೇಳಿದರು. ಇದೇ ರೀತಿ ಈ ಪರಂಪರೆಯೂ ನಡೆಯುತ್ತಾ ಬಂದು, ಈ ಮಂತ್ರವೂ ಕೇವಲ ನನ್ನ ಪೂಜ್ಯ ಗುರುದೇವರಾದ ಸಂತ ರಾಮದೇವಾನಂದ ಜಿ ಮಹಾರಾಜ ಅವರ ತನಕ ಬಂದಿತು. ನಂತರ ಅವರು ಇದನ್ನು ನನಗೆ ಉಪದೇಶಿಸಿದರು. 1994ನೇ ಇಸವಿಯಲ್ಲಿ ಇದನ್ನು ಮುಂದೆ ನಾಮದೀಕ್ಷೆ ನೀಡಲು ಆದೇಶಿಸಿದರು. 1997ನೇ ಇಸವಿಯಲ್ಲಿ ನನಗೆ (ಸಂತ ರಾಮ್‌ಪಾಲ್ ದಾಸನಿಗೆ) ಪರಮಾತ್ಮ ಸಿಕ್ಕಿದರು. ಈ ನಾಮಜಪವನ್ನು ಹಾಗೂ ಸಾರನಾಮವನ್ನು ನೀಡಲು ಆದೇಶಿಸಿದರು. ವರ್ತಮಾನದ ಸಮಯವು ಮೋಕ್ಷಪ್ರಾಪ್ತಿಗೆ ಸರ್ವೋತ್ತಮವಾದ ಸಮಯವಾಗಿದೆ.

ಪ್ರಶ್ನೆ :– ಪ್ರಪಂಚದ ಸದ್ಗ್ರಂಥಗಳಲ್ಲಿ ಪರಮಾತ್ಮನನ್ನು ಹೇಗೆ ವರ್ಣಿಸಲಾಗಿದೆ?

ಉತ್ತರ :– ಇಲ್ಲಿಯವರೆಗೆ ಸದ್ಗ್ರಂಥಗಳ ಬಗ್ಗೆ ಹಾಗೂ ಪರಮಾತ್ಮನನ್ನು ಪ್ರಾಪ್ತಿಸಿದ ಕೆಲವು ಮಹಾಪುರುಷರ ಸಂಕ್ಷಿಪ್ತ ಮಾಹಿತಿಯನ್ನು ಬರೆಯಲಾಗಿದೆ.

# 'ಪರಮಾತ್ಮನು ಸಾಕಾರನು, ನಿರಾಕಾರನು' ಇದು ಎಲ್ಲ ಸದ್ಗ್ರಂಥಗಳ ಹಾಗು ಪರಮಾತ್ಮನನ್ನು ಪಡೆದ ಸಂತರ ನಿಷ್ಕರ್ಷ.

ಎಷ್ಟು ಜನ ಸಂತ, ಮಹಾತ್ಮರಾಗಿದ್ದರೋ, ಯಾರ್ಯಾರಿಗೆಲ್ಲಾ ಪರಮಾತ್ಮನು ಸಿಕ್ಕಿದ್ದಾನೋ, ಅವರೆಲ್ಲ ಯಾವುದೇ ವಿಶೇಷ ಧರ್ಮವನ್ನು ಸ್ಥಾಪಿಸಿಲ್ಲ. ಹೌದು, ಅವರೆಲ್ಲಾ ಧಾರ್ಮಿಕತೆಯನ್ನು ಎತ್ತಿ ಹಿಡಿದಿದ್ದಾರೆ ಹಾಗೂ ಯಥಾರ್ಥ ಭಕ್ತಿಯನ್ನು ಬೆಳಕಿಗೆ ತರಲು ಪ್ರಯತ್ನಿಸಿದ್ದಾರೆ. ಆದರೆ ಸಮಯ ಕಳೆದಂತೆಲ್ಲಾ ಅದು ಒಂದು ಧರ್ಮ ಅಥವಾ ಸಮುದಾಯದ ರೂಪವನ್ನು ತಾಳುತ್ತದೆ. ಉದಾಹರಣೆಗೆ ಹೇಗೆ ಸಿಖ್ ಧರ್ಮವಾಯಿತೋ ಹಾಗೆಯೇ ಬಿಶ್ನೋಈ ಧರ್ಮವಾಯಿತು. ಈ ಮೊದಲು ಇವರೆಲ್ಲ ಹಿಂದೂ ಧರ್ಮವನ್ನು ಪಾಲಿಸುತ್ತಿದ್ದರು. ಆದರೆ ಹಿಂದೂ ಧರ್ಮದಲ್ಲಿ ಸತ್ಯ ಸಾಧನೆಯು ಇಲ್ಲದಿದ್ದಾಗ ಪರಮಾತ್ಮನಿಂದ ಪ್ರಾಪ್ತವಾದ ಯಥಾರ್ಥ ಜ್ಞಾನದ ಆಧಾರದಿಂದ ಈ ಮಹಾತ್ಮರು ಭಕ್ತಿ ಮತ್ತು ಧಾರ್ಮಿಕತೆಯನ್ನು ಜನರಿಗೆ ತಿಳಿಸಿಕೊಟ್ಟರು. ಇದರಿಂದ ಅವರ ಅನುಯಾಯಿಗಳಿಗೆ ಲಾಭವಾಯಿತು. ಅವರೆಲ್ಲಾ ಈ ಮಾರ್ಗದಲ್ಲಿ ನಡೆಯಲಾರಂಭಿಸಿದರು. ಹೀಗೆ ನೂರಾರು ವರ್ಷಗಳು ಕಳೆದವು. ಸಿಖ್ ಧರ್ಮದ ಪ್ರವರ್ತಕರಾದ ಶ್ರೀ ಗುರುನಾನಕ್ ದೇವ್ ಹಾಗೂ 'ಬಿಶ್ನೋಈ' ಧರ್ಮದ ಸಂಸ್ಥಾಪಕರಾದ ಶ್ರೀ ಸಂತ ಜಂಭೇಶ್ವರರು ಸಮಕಾಲೀನರಾಗಿದ್ದರು. ಆದರೆ ಇಂದು ಆ ಎರಡು ಧರ್ಮಗಳಲ್ಲಿ ಆ ಭಕ್ತಿ ಹಾಗು ಮರ್ಯಾದೆ ಇಲ್ಲ. ಇದರ ಪುನರುತ್ಥಾನವು ನನ್ನ (ಸಂತ ರಾಮ್‌ಪಾಲನ) ಮೂಲಕ ಆಗುತ್ತಿದೆ. ಮೇಲೆ ತಿಳಿಸಿದ ಮಹಾ ಪುರುಷರು ಯಾವ ಭಕ್ತಿಯ ಆಚರಣೆ ಮಾಡುತ್ತಿದ್ದರೋ ಹಾಗೂ ಮಾಡಿಸುತ್ತಿದ್ದರೋ ಅಂಥಹ ಯಥಾರ್ಥ ಭಕ್ತಿ ಹಾಗು ಮರ್ಯಾದೆಯ ಪಾಲನೆಯನ್ನು ಇಲ್ಲಿ ಮಾಡಿಸಲಾಗುತ್ತದೆ. ಮೇಲೆ ತಿಳಿಸಿರುವ ಮಹಾತ್ಮರ ಬಹಳಷ್ಟು ಜನರು ವಿರೋಧಿಸಿದರು, ಇದನ್ನು ಖಂಡಿಸಿದರು. ಆದರೆ ಸಂತರು ತಮ್ಮ ಉದ್ದೇಶದ ಮೇಲೆ ದೃಢವಾಗಿರುತ್ತಾರೆ. ಏಕೆಂದರೆ ಅವರು ಮಾನವ ಕಲ್ಯಾಣಕ್ಕಾಗಿಯೇ ಜನ್ಮಿಸುತ್ತಾರೆ. ವರ್ತಮಾನದಲ್ಲಿ ನನ್ನ (ಸಂತ ರಾಮ್‌ಪಾಲ್) ಜೊತೆ ಯಾವ ರೀತಿಯ ಅನ್ಯಾಯ. ಅತ್ಯಾಚಾರಗಳು ಆಗುತ್ತಿವೆಯೋ, ಹೇಗೆ ನನಗೆ ಕೆಟ್ಟ ಹೆಸರು ಬರುವಂತೆ ಮಾಡುತ್ತಿದ್ದಾರೋ. ಆದರೆ ಸತ್ಯವನ್ನು ನಾಶಮಾಡಲು ಸಾಧ್ಯವಿಲ್ಲ. ಈ ಆಧ್ಯಾತ್ಮ ಜ್ಞಾನವೆಂಬ ಬಿರುಗಾಳಿಯನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಈಗ ಸತ್ಯವಾದ ಆಧ್ಯಾತ್ಮ ಜ್ಞಾನದ ಸ್ಫೋಟವಾಗಿದೆ.

## ❖ ಬಿಶ್ನೋಈ ಧರ್ಮದ ಭಕ್ತಿ

ಪ್ರಶ್ನೆ :– ಬಿಶ್ನೋಈ ಧರ್ಮದಲ್ಲಿ ಯಾವ ಭಕ್ತಿ ನಡೆಯುತ್ತಿದೆ? ಇದರ ಪ್ರವರ್ತಕರಾದ ಆ ಮಹಾಪುರುಷ ಯಾರು?

ಉತ್ತರ :– ಬಿಶ್ನೋಈ ಧರ್ಮದ ಪ್ರವರ್ತಕರು ಶ್ರೀ ಜಂಭೇಶ್ವರ ಮಹಾರಾಜರು. ಇವರ ಜನ್ಮವು 'ಪಿಪಾಸರ್' ಎಂಬ ಗ್ರಾಮ (ಭಾರತದ ರಾಜಸ್ಥಾನ ಎಂಬ ರಾಜ್ಯ)ದಲ್ಲಿ ಆಗಿತ್ತು. ಇವರ ಭಕ್ತಿಸ್ಥಳದ ಗ್ರಾಮ ಸಮರಾಥಲ (ರಾಜಸ್ಥಾನ) ಹಾಗೂ ನಿರ್ವಾಣ ಸ್ಥಳ ಲಾಲಾಸರ್ ಗ್ರಾಮ (ರಾಜಸ್ಥಾನ)ದ ಪಕ್ಕದಲ್ಲಿದೆ. ಇದನ್ನು 'ಮುಕಾಮ್' ಎಂದು ಕರೆಯುತ್ತಾರೆ. (ಮುಕಾಮ್ ಎಂದರೆ ಸ್ಥಾನ ಎಂದರ್ಥ.)

'ಬಿಶ್ನೋಈ ಧರ್ಮದಲ್ಲಿ ಭಕ್ತಿ' :– ಶ್ರೀ ಜಂಭೇಶ್ವರರನ್ನು ವಿಷ್ಣುವಿನ ಅವತಾರವೆಂದು ಭಾವಿಸಲಾಗಿದೆ. ಇದನ್ನು ಸ್ವತಃ ಶ್ರೀ ಜಂಭೇಶ್ವರರೇ ತಮ್ಮ ಅಮೃತವಾಣಿಯಲ್ಲಿ ತಿಳಿಸಿದ್ದಾರೆ.

ಪ್ರಮಣ :– ಜಂಭೇಶ್ವರರ ವಾಣೀಸಂಖ್ಯೆ **94, 54, 67, 116**

'ಬಿಶ್ನೋಈ' ಧರ್ಮದಲ್ಲಿ ಶ್ರೀ ವಿಷ್ಣು ಹಾಗೂ ಶ್ರೀ ಕೃಷ್ಣ (ಸತ್ವಗುಣದ ಅವತಾರವಾದ ಶ್ರೀ ವಿಷ್ಣು) ಇವರನ್ನು ಆರಾಧಿಸಲು ಶ್ರೀ ಜಂಭೇಶ್ವರರು ತಮ್ಮ ಮುಖಕಮಲದಿಂದ ಆದೇಶಿಸಿದ್ದಾರೆ.

ಬಿಶ್ನೋಈ ಧರ್ಮದ ಭಕ್ತಿಯಿಂದ ಸ್ವರ್ಗ ಪ್ರಾಪ್ತಿಯೇ (ವೈಕುಂಠವಾಸ) ಅಂತಿಮ ಲಾಭ. ಇದಕ್ಕೂ ಸಹ ಅಮೃತವಾಣಿಯಲ್ಲಿ ಪ್ರಮಾಣವಿದೆ.

ಪ್ರಮಾಣ :– ವಾಣೀ ಸಂಖ್ಯೆ **13, 14, 15, 23, 25, 31, 33, 34, 64, 67, 78, 97, 98, 102, 119** ಹಾಗೂ **120**

ಶ್ರೀ ವಿಷ್ಣುವನ್ನು ಪ್ರಪಂಚದ ಮೂಲ ಬೇರು ಅಂದರೆ ಪಾಲಿಸುವವನು ಎಂದು ಹೇಳಲಾಗಿದೆ.

❖ "ಸದ್ಗುರುವಿನಿಂದ ನಾಮದೀಕ್ಷೆ ಪಡೆದು ಭಕ್ತಿಯನ್ನು ಮಾಡಿ"

ವಾಣೀ ಸಂಖ್ಯೆ = **30**

ಶ್ರೀ ಜಂಭೇಶ್ವರರ ಆದೇಶವೇನೆಂದರೆ, ಗುರುವಿನಿಂದ ನಾಮದೀಕ್ಷೆ ಪಡೆದು ಭಕ್ತಿ ಮಾಡುವುದರಿಂದ ಲಾಭವಾಗುವುದು. ಮೊದಲು ಗುರುವನ್ನು ಹುಡುಕು. ಗುರುವಿಲ್ಲದೆ ದಾನ ಮಾಡಬಾರದು, ಗುರುವೇ ದಾನಕ್ಕೆ ಸುಪಾತ್ರನಾದವನು, ಕುಪಾತ್ರರಿಗೆ ದಾನ ಮಾಡಬಾರದು.

ಪ್ರಮಾಣ : – ವಾಣೀ ಸಂಖ್ಯೆ **1, 23, 26, 29, 30, 35, 36, 37, 40, 41, 45, 77, 85, 86, 90, 91, 101, 107, 108, 120, 56**

ಕುಪಾತ್ರರಿಗೆ ದಾನ ನೀಡುವುದು ವ್ಯರ್ಥ:– ಪದ್ಯದ ಸಂಖ್ಯೆ **56**ರಲ್ಲಿ ವಿಶೇಷ ವಿವರಣೆ ಇದೆ. ಇದರಲ್ಲಿ ಕುಪಾತ್ರರಿಗೆ ದಾನ ನೀಡುವುದು ಎಂದರೆ ರಾತ್ರಿಯ ಕತ್ತಲಿನಲ್ಲಿ ಕಳ್ಳನು ಕಳ್ಳತನ ಮಾಡಿದ ಹಾಗೆ. ಸುಪಾತ್ರರಿಗೆ ದಾನ ನೀಡುವುದು ಎಂದರೆ ಫಲವತ್ತಾದ ಜಮೀನಿನಲ್ಲಿ ಬೀಜ ಬಿತ್ತಿದ ಹಾಗೆ ಎಂದು ಬರೆದಿದೆ. ಬಿಶ್ನೋಈ ಧರ್ಮದಲ್ಲಿ ತೀರ್ಥಸ್ಥಾನಕ್ಕೆ ಹೋಗುವುದು, ಅಲ್ಲಿ ಸ್ನಾನ ಮಾಡುವುದು, ಪಿಂಡದಾನ ಮಾಡುವುದು ಮುಂತಾದ ಪೂಜೆಗಳು ನಿಷೇಧವಿದೆ. ಪ್ರಮಾಣ:– ವಾಣೀ ಸಂಖ್ಯೆ **50**

❖ ಶ್ರೀ ಜಂಭೇಶ್ವರರಿಗೆ ಪರಮಾತ್ಮ ಜಿಂದಾ ಮಹಾತ್ಮ ರೂಪದಲ್ಲಿ ಸಮರಾಥಲದಲ್ಲಿ ಸಿಕ್ಕಿದ್ದರು. ಪ್ರಮಾಣ :– ವಾಣೀ ಸಂಖ್ಯೆ **50, 72, 90**

❖ ವೇದಶಾಸ್ತ್ರಗಳಲ್ಲಿ ಪೂರ್ಣ ಮೋಕ್ಷಮಾರ್ಗವಿಲ್ಲ. ಪ್ರಮಾಣ :– ವಾಣೀಸಂಖ್ಯೆ **59, 92**

❖ ಭಕ್ತಿ ಇಲ್ಲದೆ ರಾಜ್ಯಭಾರ ಮತ್ತು ಎಲ್ಲಾ ಮಹಿಮೆ ವ್ಯರ್ಥ ಪ್ರಮಾಣ :– ವಾಣೀ ಸಂಖ್ಯೆ **60**

❖ ಶ್ರೀ ರಾಮಚಂದ್ರನು ಕೆಲವು ತಪ್ಪುಗಳನ್ನು ಮಾಡಿದ್ದನು ಪ್ರಮಾಣ :– ವಾಣೀ ಸಂಖ್ಯೆ **62**

❖ ಗುರುವನ್ನು ಬಿಟ್ಟು ಶಿಷ್ಯನನ್ನು ಗೌರವಿಸುವುದು ತಪ್ಪು. ಪ್ರಮಾಣ :– ವಾಣೀ ಸಂಖ್ಯೆ **71**

ಕಬೀರ ಪರಮೇಶ್ವರರು ಸಹ ಹೇಳಿದ್ದಾರೆ :–

ಗುರು ಕೋ ತಜ್ಜೆ ಭಜ್ಜೆ ಜೊ ಆನಾ (ಅನ್ಯ)।
ತಾ ಪಶುಆ ಕೋ ಫೋಕಟ್ ಜ್ಞಾನಾ॥

❖ ಬಿಶ್ನೋಈ ಧರ್ಮದಲ್ಲಿ ಸ್ವರ್ಗ (ವೈಕುಂಠ) ವನ್ನೇ ಉತ್ತಮ (ಶ್ರೇಷ್ಠ) ಲೋಕವೆಂದು ನಂಬಲಾಗಿದೆ. ಪ್ರಮಾಣ :– ವಾಣೀ ಸಂಖ್ಯೆ **73, 119, 94**

## "ಹರಿಯಾಣಕ್ಕೆ ಹರಿ ಬರುವರು"

ಶ್ರೀ ಜಂಭೇಶ್ವರರ ವಾಣೀ ಸಂಖ್ಯೆ **102**ರಲ್ಲಿ ಹೀಗೆ ಬರೆದಿದೆ:–

ವಿಷ್ಣು–ವಿಷ್ಣು ಭಣ್ ಅಜರ್ ಜರೀ ಜೈ, ಧರ್ಮ್ ಹುವೈ ಪಾಪಾಂ ಛುಟಿಜೈ।
ಹರಿ ಪರ್ ಹರಿ ಕೋ ನಾಮ್ ಜಪೀಜೈ,
ಹಿರಯಾಲೋ ಹರಿ ಆಣ್ ಹರೂಂ, ಹರಿ ನಾರಾಯಣ್ ದೈವ್ ನರೂಂ।
ಆಶಾ ಸಾಸ್ ನಿರಾಸ್ ಭಇಲೋ, ಪಾಇಲೋ ಮೋಕ್ಷ ದವಾರ್ ಖಿಂಣೂ॥

**ಭಾವಾರ್ಥ :– ಇದರಲ್ಲಿ "ಹಿರಯಾಲೋ ಹರಿ ಆಣ್ ಹರೂಂ" ಎಂದು ಬರೆದಿದೆ. ಹರಿಯಾಲೋ ಎಂದರೆ ಹರಿಯಾಣ ಎಂದರ್ಥ. ಆ ಸಮಯದಲ್ಲಿ ಹರಿಯಾಣ ಎಂಬ ಪ್ರಾಂತ್ಯವಿರಲಿಲ್ಲ. ಆದ್ದರಿಂದ ಹರಿಯಾಲೋ ಎಂದು ಬರೆಯಲಾಗಿದೆ. ಹರಿ ಅಂದರೆ ಪರಮಾತ್ಮ ಹರಿಯಾಲೋ ಅಂದರೆ ಹರಿಯಾಣ ಪ್ರಾಂತ್ಯಕ್ಕೆ ಬರುವನು ಎಂದು ಈ ಪಂಕ್ತಿಯ ಅರ್ಥ. ನಾರಾಯಣನೆಂದು ಕರೆಯಲ್ಪಡುವ ಪರಮಾತ್ಮನು ಸಾಧಾರಣ ಮನುಷ್ಯನ ರೂಪ ಧರಿಸಿ ಬರುತ್ತಾನೆ. ನಾರಾಯಣನ ಅರ್ಥವೆಂದರೆ ನೀರಿನ ಮೇಲೆ ಪ್ರಕಟನಾಗುವವನು ಎಂದರ್ಥ. ಅವನು ಪರಮೇಶ್ವರನೇ ಆಗಿದ್ದಾನೆ. ಆದ್ದರಿಂದ ಪರಮಾತ್ಮನನ್ನು ನಾರಾಯಣ ಎಂದು ಕರೆಯಲಾಗುತ್ತದೆ. ಅವರ ಮೂಲಕ ಹೇಳಲ್ಪಟ್ಟ ಜ್ಞಾನದಿಂದ ನಿರಾಸೆ ತುಂಬಿದ ಭಕ್ತರಲ್ಲಿ ಆಶಾಭಾವನೆ ಮೂಡುವುದು ಹಾಗೂ ಮೋಕ್ಷದ ದ್ವಾರವು ತೆರೆಯುವುದು. ಶಾಸ್ತ್ರವಿರುದ್ಧವಾದ ಸಾಧನೆ ಮಾಡುವುದರಿಂದ ಸಾಧಕನು ಭಕ್ತಿ ಮಾಡಿದರೂ ಸಹ ಅವನಿಗೆ ಯಾವುದೇ ಲಾಭವಾಗುತ್ತಿರಲಿಲ್ಲ, ಪರಮಾತ್ಮ ಹರಿಯಾಣಕ್ಕೆ ಬರುವರು ಎನ್ನುವುದು ಇದರ ಭಾವಾರ್ಥ. ಅವರ ಮೂಲಕ ತಿಳಿಸಲ್ಪಡುವ ಶಾಸ್ತ್ರೋಕ್ತವಾದ ಭಕ್ತಿಯ ಸಾಧನೆಯಿಂದ ಮೋಕ್ಷದ ದ್ವಾರವು ತೆರೆಯುವುದು. ನಿರಾಶೆ ಹೊಂದಿದವರಿಗೆ ಆಶಾಭಾವನೆ ಮೂಡುವುದು. ಇಲ್ಲಿಯೂ ಸುಖ ಸಿಗುವುದು, ಪರಲೋಕದಲ್ಲೂ ಸುಖ ಸಿಗುವುದು ಹಾಗು ಮೋಕ್ಷ ಪ್ರಾಪ್ತಿಯಾಗುವುದು.**

ವಾಣಿ :– ಹರಿ ಪರ್ ಹೀರೆ ಕೋ ನಾಮ್ ಉಪೀಜ್ಯೈ।

ಈ ವಾಣಿಯನ್ನು ಈ ರೀತಿ ಓದಬೇಕು:– ಹರ್ ಪಲ್ ಹರಿ ಕೋ ನಾಮ್ ಜಪೀಜ್ಯೈ.

**'ಶ್ರೀ ಜಂಭೇಶ್ವರರ ಗುರು ಯಾರಾದರೂ ಇದ್ದರೇ?' (ಈ ಮೊದಲೇ ಬರೆಯಲಾಗಿದೆ) ಪ್ರಮಾಣ :– ವಾಣಿ ಸಂಖ್ಯೆ 90, 91, 92 ವಾಣಿ ಸಂಖ್ಯೆ 90ರ ಗುರುವಿಗೆ ಸಂಬಂಧಿಸಿದ ವಾಣಿ–'ಗುರು ಆಸಣ್ ಸಮರಾಥಲೇ'**

ಕಹೈ ಸತ್‌ಗುರು ಭೂಲ್ ಮತ್ ಜಾಇಯೋಂ ಪಡೋಲಾ ಅಮ್ಮೈ ದೋಜಖೇ।

**ವಾಣಿ ಸಂಖ್ಯೆ 91ರಿಂದ ಕೆಲವು ಅಂಶಗಳು:–**

ಮೇರೇ ಗುರೂ ಜೋ ದೀನ್ಹೀ ಶಿಕ್ಷಾ, ಸರ್ವ್ ಆಲಿಡಗಂಣ್ ಫೇರೀ ದೀಕ್ಷಾ।
ಸತ್ ಸತ್ ಭಾಖತ್ ಗುರೂ ರಾಯೋಂ ಜರಾ ಮರಣ್ ಭಯ್ ಭಾಗು॥

**ಪ್ರಮಾಣಕ್ಕಾಗಿ 'ಗೀತೆಯೇ ನಿನ್ನ ಜ್ಞಾನ ಅಮೃತ' ಎಂಬ ಪುಸ್ತಕಕ್ಕೆ ಸಂಬಂಧಿಸಿದ ಶ್ರೀಮದ್ಭಗವದ್ಗೀತೆಯ ಕೆಲವು ಅಧ್ಯಾಯಗಳ ಹಾಗೂ ಶ್ಲೋಕಗಳ ಕನ್ನಡ ಅನುವಾದವನ್ನು ಶ್ರೀ ಜಯದಯಾಲ್ ಗೋಯಂದಕಾ ಅವರ ಮೂಲಕ ಅನುವಾದಿತ ಹಾಗೂ ಭಾರತದ ಪ್ರಸಿದ್ಧ ಪ್ರೆಸ್ ಆದ ಗೀತಾ ಪ್ರೆಸ್, ಗೋರಖ್‌ಪುರ್ (ಉತ್ತರ ಪ್ರದೇಶ)ದ ಮೂಲಕ ಪ್ರಕಾಶನಗೊಳಿಸಲಾಗಿದೆ.**

**(ಶ್ರೀಮದ್ಭಗವದ್ಗೀತೆಯ 1ನೇ ಅಧ್ಯಾಯದ ಯಾವ ಶ್ಲೋಕವೂ ಗೀತೆಯ ಜ್ಞಾನದಾತನು ಹೇಳಿದ್ದಲ್ಲ. ಆದ್ದರಿಂದ ಇದನ್ನು ಕೈಬಿಡಲಾಗಿದೆ)**

❑❑❑

ಕಥಮ್, ಭೀಷ್ಮಮ್, ಅಹಮ್, ಸಂಖ್ಯೇ, ದ್ರೋಣಮ್, ಚ, ಮಧುಸೂದನ ।
ಇಷುಭಿಃ, ಪ್ರತಿ, ಯೋತ್ಸ್ಯಾಮಿ, ಪೂಜಾರ್ಹೌ, ಅರಿಸೂದನ ॥೪॥

**ಆಗ ಅರ್ಜುನ ಹೇಳಿದನು**

| | | | |
|---|---|---|---|
| **ಮಧುಸೂದನ** | - ಹೇ ಮಧುಸೂದನ | **ದ್ರೋಣಮ್** | - ದ್ರೋಣಾಚಾರ್ಯರ ವಿರುದ್ಧ ಹೇಗೆ |
| **ಅಹಮ್** | - ನಾನು | | |
| **ಸಂಖ್ಯೇ** | - ರಣಭೂಮಿಯಲ್ಲಿ | **ಪ್ರತಿಯೋತ್ಸ್ಯಾಮಿ** | - ಯುದ್ಧಮಾಡಲಿ ? |
| **ಕಥಮ್** | - ಯಾವಪ್ರಕಾರ | **(ಯತಃ)** | - ಏಕೆಂದರೆ |
| **ಇಷುಭಿಃ** | - ಬಾಣಗಳಿಂದ | **ಅರಿಸೂದನ** | - ಹೇ ಅರಿಸೂದನನೇ |
| **ಭೀಷ್ಮಮ್** | - ಭೀಷ್ಮಪಿತಾಮಹರ | **(ತೌ)** | - ಅವರಿಬ್ಬರೂ |
| **ಚ** | - ಮತ್ತು | **ಪೂಜಾರ್ಹೌ** | - ಪೂಜನೀಯರಾಗಿದ್ದಾರೆ. |

ಗುರೂನ್, ಅಹತ್ವಾ, ಹಿ, ಮಹಾನುಭಾವಾನ್, ಶ್ರೇಯಃ, ಭೋಕ್ತುಮ್,
ಭೈಕ್ಷ್ಯಮ್, ಅಪಿ, ಇಹ, ಲೋಕೇ, ಹತ್ವಾ, ಅರ್ಥಕಾಮಾನ್, ತು, ಗುರೂನ್,
ಇಹ, ಏವ, ಭುಂಜೀಯ, ಭೋಗಾನ್, ರುಧಿರಪ್ರದಿಗ್ಧಾನ್ ॥೫॥

**ಆದುದರಿಂದ ಈ**

| | | | |
|---|---|---|---|
| **ಮಹಾನು** | - ಮಹಾನು | **ಹಿ** | - ಏಕೆಂದರೆ |
| **ಭಾವಾನ್** | ಭಾವರಾದ | **ಗುರೂನ್** | - ಗುರುಜನರನ್ನು |
| **ಗುರೂನ್** | - ಗುರುಜನರನ್ನು | **ಹತ್ವಾ ಅಪಿ** | - ಕೊಂದು ಕೂಡ |
| **ಅಹತ್ವಾ** | - ಕೊಲ್ಲದೆ (ನಾನು) | **ಇಹ** | - ಈ ಲೋಕದಲ್ಲಿ |
| **ಇಹ** | - ಈ | **ರುಧಿರ-** | - ರಕ್ತದಿಂದ |
| **ಲೋಕೇ** | - ಲೋಕದಲ್ಲಿ | **ಪ್ರದಿಗ್ಧಾನ್** | ತೊಯ್ದಿರುವರ |
| **ಭೈಕ್ಷ್ಯಮ್** | - ಭಿಕ್ಷೆಯ ಅನ್ನವನ್ನು | **ಅರ್ಥಕಾಮಾನ್** | - ಅರ್ಥ ಮತ್ತು ಕಾಮರೂಪೀ |
| **ಅಪಿ** | - ಕೂಡ | | |
| **ಭೋಕ್ತುಮ್** | - ಉಣ್ಣುವುದು | **ಭೋಗಾನ್ ಏವ** | - ಭೋಗಗಳನ್ನೇ |
| **ಶ್ರೇಯಃ** | - ಶ್ರೇಯಸ್ಕರವೆಂದು (ಭಾವಿಸುತ್ತೇನೆ) | **ತು ಭುಂಜೀಯ** | - ಆದರೋ - ಭೋಗಿಸುವೆನು. |

ನ, ಚ, ಏತತ್, ವಿದ್ಮಃ, ಕತರತ್, ನಃ, ಗರೀಯಃ, ಯದ್ವಾ, ಜಯೇಮ, ಯದಿ,
ವಾ, ನಃ, ಜಯೇಯುಃ। ಯಾನ್, ಏವ, ಹತ್ವಾ, ನ, ಜಿಜೀವಿಷಾಮಃ, ತೇ,
ಅವಸ್ಥಿತಾಃ, ಪ್ರಮುಖೇ, ಧಾರ್ತರಾಷ್ಟ್ರಾಃ ॥೬॥

**ಮತ್ತು ನಾವುಗಳು**

| | | | |
|---|---|---|---|
| **ಏತತ್** | - ಇದನ್ನು | | ಮಾಡುವುದು ಮತ್ತು |
| **ಚ** | - ಸಹಿತ | | ಮಾಡದಿರುವುದು |
| **ನ, ವಿದ್ಮಃ** | - ತಿಳಿಯುವುದಿಲ್ಲ (ಏನೆಂದರೆ) | | ಈ ಎರಡರಲ್ಲಿ |
| | | **ಕತರತ್** | - ಯಾವುದು |
| **ನಃ** | - ನಮಗಾಗಿ ಯುದ್ಧ | **ಗರೀಯಃ** | - ಶ್ರೇಷ್ಠವಾಗಿದೆ |

**ಯತ್, ವಾ** – ಅಥವಾ (ಇದನ್ನು ಕೂಡ ಅರಿಯೆವು ಏನೆಂದರೆ)
**ಜಯೇಮ** – ಅವರನ್ನು ನಾವು ಗೆಲ್ಲುವೆವೋ
**ಯದ, ವಾ** – ಅಥವಾ
**ನಃ** – ನಮ್ಮನ್ನು (ಅವರು)
**ಜಯೇಯುಃ** – ಗೆಲ್ಲುವರೋ (ಮತ್ತು)
**ಯಾನ್** – ಯಾರನ್ನು
**ಹತ್ವಾ** – ಕೊಂದು (ನಾವು)
**ಜಿಜೀವಿಷಾಮಃ ನ** – ಜೀವಿಸಿರುವುದನ್ನು ಇಷ್ಟಪಡುವುದಿಲ್ಲವೋ
**ತೇ, ಏವ** – ನಮ್ಮ ಆತ್ಮೀಯರಾದ ಅವರುಗಳೇ
**ಧಾರ್ತರಾಷ್ಟ್ರಾಃ** – ಧೃತರಾಷ್ಟ್ರನ ಪುತ್ರರು
**ಪ್ರಮುಖೇ** – ನಮ್ಮ ಎದುರು
**ಅವಸ್ಥಿತಾಃ** – ನಿಂತಿದ್ದಾರೆ.

ಕಾರ್ಪಣ್ಯದೋಷೋಪಹತಸ್ವಭಾವಃ, ಪೃಚ್ಛಾಮಿ, ತ್ವಾಮ್, ಧರ್ಮ-
ಸಂಮೂಢಚೇತಾಃ, ಯತ್, ಶ್ರೇಯಃ, ಸ್ಯಾತ್, ನಿಶ್ಚಿತಮ್, ಬ್ರೂಹಿ, ತತ್,
ಮೇ, ಶಿಷ್ಯಃ, ತೇ ಅಹಮ್, ಶಾಧಿ, ಮಾಮ್, ತ್ವಾಮ್, ಪ್ರಸನ್ನಮ್ ॥೭॥

**ಆದುದರಿಂದ**

**ಕಾರ್ಪಣ್ಯ-** – ಹೇಡಿತನರೂಪೀ
**ದೋಷೋಪ-** ದೋಷದಿಂದ
**ಹತಸ್ವಭಾವಃ** ನಷ್ಟವಾಗಿರುವ ಸ್ವಭಾವವುಳ್ಳವನೂ (ಹಾಗೂ)
**ಧರ್ಮಸಂ-** – ಧರ್ಮದ ವಿಷಯದಲ್ಲಿ
**ಮೂಢಚೇತಾಃ** ಮೋಹಿತ ಚಿತ್ತನಾಗಿರುವ (ನಾನು),
**ತ್ವಾಮ್** – ನಿನ್ನಲ್ಲಿ
**ಪೃಚ್ಛಾಮಿ** – ಕೇಳುತ್ತೇನೆ (ಏನೆಂದರೆ)
**ಯತ್** – ಯಾವ (ಸಾಧನವು)
**ನಿಶ್ಚಿತಮ್** – ನಿಶ್ಚಯವಾಗಿ
**ಶ್ರೇಯಃ** – ಶ್ರೇಯಸ್ಕರವಾಗಿ
**ಸ್ಯಾತ್** – ಇದೆಯೋ
**ತತ್, ಮೇ** – ಅದನ್ನು ನನಗಾಗಿ
**ಬ್ರೂಹಿ** – ಹೇಳು (ಏಕೆಂದರೆ)
**ಅಹಮ್** – ನಾನು
**ತೇ** – ನಿನ್ನ
**ಶಿಷ್ಯಃ** – ಶಿಷ್ಯನಾಗಿದ್ದೇನೆ (ಆದ್ದರಿಂದ)
**ತ್ವಾಮ್** – ನಿನ್ನಲ್ಲಿ
**ಪ್ರಪನ್ನಮ್** – ಶರಣಾಗಿರುವ
**ಮಾಮ್** – ನನಗೆ
**ಶಾಧಿ** – ಉಪದೇಶಮಾಡು.

ನ, ತು, ಏವ, ಅಹಮ್, ಜಾತು, ನ, ಅಸಮ್, ನ, ತ್ವಮ್, ನ, ಇಮೇ,
ಜನಾಧಿಪಾಃ ನ, ಚ, ಏವ, ನ, ಭವಿಷ್ಯಾಮಃ, ಸರ್ವೇ, ವಯಮ್, ಅತಃ, ಪರಮ್ ॥೧೨॥

**ಏಕೆಂದರೆ ಆತ್ಮ ಶಾಶ್ವತ, ಆದುದರಿಂದ ಶೋಕಿಸುವುದು ಯುಕ್ತವಲ್ಲ.**

**ವಾಸ್ತವವಾಗಿಯೂ**

**(ಏವಂ)** – ಈ ಪ್ರಕಾರ
**ಅಹಂ** – ನಾನು
**ಜಾತು** – ಯಾವ ಕಾಲದಲ್ಲಿಯೂ
**ನ, ತು, ಆಸಮ್** – ಇರಲಿಲ್ಲ (ಎಂಬುದು)
**ನ, ಏವ, ನ** – ಇಲ್ಲವೇ ಇಲ್ಲ
**ನ, (ಆಸನ್)** – ಇರಲಿಲ್ಲವೆಂಬುದಿಲ್ಲ (ಅಂದರೆ ಇದ್ದರು) ಹಾಗೆಯೇ
**ಅತಃ, ಪರಮ್** – ಇನ್ನು ಮುಂದೆಯೂ
**ವಯಂ, ಸರ್ವೇ** – ನಾವೆಲ್ಲರು

| | | | |
|---|---|---|---|
| ತ್ವಂ | - ನೀನಾಗಲಿ | ನ, ಭವಿಷ್ಯಾಮಃ | - ಇರುವುದಿಲ್ಲವೆಂಬುದು |
| ಇಮೆ | - ಜನಾಧಿಪಾಃ | ನ | - ಇಲ್ಲ (ಅಂದರೆ ಇರುತ್ತೇವೆ). |
| ಚ | - ಈ ರಾಜರುಗಳಾದರೋ | | |

ಅವಿನಾಶಿ, ತು, ತತ್, ವಿದ್ಧಿ, ಯೇನ, ಸರ್ವಮ್, ಇದಮ್, ತತಮ್,
ವಿನಾಶಮ್, ಅವ್ಯಯಸ್ಯ, ಅಸ್ಯ, ನ, ಕಶ್ಚಿತ್, ಕರ್ತುಮ್, ಅರ್ಹತಿ ॥೧೭॥

ಈ ನಿರ್ಣಯಕ್ಕನುಸಾರವಾಗಿ

| | | | |
|---|---|---|---|
| ಅವಿನಾಶಿ | - ನಾಶರಹಿತ | ತತಮ್ | - ವ್ಯಾಪ್ತವಾಗಿದೆ |
| ತು | - ಎಂದು (ನೀನು) | ಅಸ್ಯ | - ಈ |
| ತತ್ | - ಅದನ್ನು | ಅವ್ಯಯಸ್ಯ | - ಅವಿನಾಶಿಯ |
| ವಿದ್ಧಿ | - ತಿಳಿ | ವಿನಾಶಮ್ | - ವಿನಾಶವನ್ನು |
| ಏನ | - ಯಾವುದರಿಂದ | ಕರ್ತುಮ್ | - ಮಾಡಲು |
| ಇದಮ್ | - ಈ | ಕಶ್ಚಿತ್ | - ಯಾರೂ ಕೂಡ |
| ಸರ್ವಮ್ | - ಸಂಪೂರ್ಣ ದೃಶ್ಯ ಜಗತ್ತು | ನ, ಅರ್ಹತಿ | - ಸಮರ್ಥರಲ್ಲ |

ವಾಸಾಂಸಿ, ಜೀರ್ಣಾನಿ, ಯಥಾ, ವಿಹಾಯ, ನವಾನಿ, ಗೃಹ್ಣಾತಿ, ನರಃ, ಅಪರಾಣಿ,
ತಥಾ, ಶರೀರಾಣಿ, ವಿಹಾಯ, ಜೀರ್ಣಾನಿ, ಅನ್ಯಾನಿ, ಸಂಯಾತಿ, ನವಾನಿ, ದೇಹೀ ॥೨೨॥

| | | | |
|---|---|---|---|
| ಯಥಾ | - ಹೇಗೆ | ತಥಾ | - ಹಾಗೆಯೇ |
| ನರಃ | - ಮನುಷ್ಯನು | ದೇಹಿ | - ಜೀವಾತ್ಮನು |
| ಜೀರ್ಣಾನಿ | - ಹಳೆಯ | ಜೀರ್ಣಾನಿ | - ಹಳೆಯದಾದ |
| ವಾಸಾಂಸಿ | - ವಸ್ತ್ರಗಳನ್ನು | ಶರೀರಾಣಿ | - ಶರೀರಗಳನ್ನು |
| ವಿಹಾಯ | - ತ್ಯಾಗಮಾಡಿ | ವಿಹಾಯ | - ತ್ಯಾಗಮಾಡಿ |
| ಅಪರಾಣಿ | - ಬೇರೆಯ | ಅನ್ಯಾನಿ | - ಬೇರೆಯಾದ |
| ನವಾನಿ | - ಹೊಸದಾದ ವಸ್ತ್ರಗಳನ್ನು | ನವಾನಿ | - ಹೊಸ (ಶರೀರಗಳನ್ನು) |
| ಗೃಹ್ಣಾತಿ | - ಧರಿಸುತ್ತಾನೋ | ಸಂಯಾತಿ | - ಪಡೆಯುತ್ತಾನೆ. |

ಜಾತಸ್ಯ, ಹಿ, ಧ್ರುವಃ, ಮೃತ್ಯುಃ, ಧ್ರುವಮ್, ಜನ್ಮ, ಮೃತಸ್ಯ, ಚ, ತಸ್ಮಾತ್,
ಅಪರಿಹಾರ್ಯೇ, ಅರ್ಥೇ, ನ, ತ್ವಮ್, ಶೋಚಿತುಮ್, ಅರ್ಹಸಿ ॥೨೭॥

| | | | |
|---|---|---|---|
| ಹಿ | - ಏಕೆಂದರೆ (ಈ ಅಭಿಪ್ರಾಯಕ್ಕನು ಸಾರವಾಗಿ) | ಧ್ರುವಮ್ | - ನಿಶ್ಚಿತವಾಗಿದೆ |
| | | ತಸ್ಮಾತ್ | - ಆದ್ದರಿಂದ |
| | | ಅಪರಿಹಾರ್ಯೇ | - ಪರಿಹಾರೋಪಾಯ ವಿಲ್ಲದ |
| ಜಾತಸ್ಯ | - ಹುಟ್ಟಿದವನ | | |
| ಮೃತ್ಯುಃ | - ಮರಣವು | ಅರ್ಥೇ | - ವಿಷಯದಲ್ಲಿ |
| ಧ್ರುವಃ | - ನಿಶ್ಚಿತವಾಗಿದೆ | ತ್ವಮ್ | - ನೀನು |

ಚ - ಮತ್ತು
ಮೃತಸ್ಯ - ಸತ್ತವನ
ಜನ್ಮ - ಜನನವು
ಶೋಚಿತುಮ್ - ಶೋಕಪಡಲು
ನ, ಅರ್ಹಸಿ - ಯೋಗ್ಯನಲ್ಲ

ಹತಃ, ವಾ, ಪ್ರಾಪ್ಸ್ಯಸಿ, ಸ್ವರ್ಗಮ್, ಜಿತ್ವಾ, ವಾ, ಭೋಕ್ಷ್ಯಸೇ, ಮಹೀಮ್,
ತಸ್ಮಾತ್, ಉತ್ತಿಷ್ಠ ಕೌಂತೇಯ, ಯುದ್ಧಾಯ, ಕೃತನಿಶ್ಚಯಃ ॥೩೭॥

ವಾ - ಒಂದೋ (ಯುದ್ಧದಲ್ಲಿ)
(ತ್ವಮ್) ಹತಃ - ನೀನು ಕೊಲ್ಲಲ್ಪಟ್ಟು
ಸ್ವರ್ಗಮ್ - ಸ್ವರ್ಗವನ್ನು
ಪ್ರಾಪ್ಸ್ಯಸಿ - ಪಡೆಯುವೆ
ವಾ - ಅಥವಾ (ಯುದ್ಧದಲ್ಲಿ)
ಜಿತ್ವಾ - ಗೆದ್ದು
ಮಹೀಮ್ - ಪೃಥ್ವಿಯ ರಾಜ್ಯವನ್ನು
ಭೋಕ್ಷ್ಯಸೇ - ಭೋಗಿಸುವೆ
ತಸ್ಮಾತ್ - ಈ ಕಾರಣದಿಂದ
ಕೌಂತೇಯ - ಹೆ ಅರ್ಜುನನೇ!
ಯುದ್ಧಾಯ - ಯುದ್ಧಕ್ಕಾಗಿ
ಕೃತನಿಶ್ಚಯಃ - ನಿಶ್ಚಯಮಾಡಿ
ಉತ್ತಿಷ್ಠ - ಎದ್ದು ನಿಲ್ಲು.

ಸುಖದುಃಖೇ, ಸಮೇ, ಕೃತ್ವಾ, ಲಾಭಾಲಾಭೌ, ಜಯಾಜಯೌ,
ತತಃ, ಯುದ್ಧಾಯ, ಯುಜ್ಯಸ್ವ, ನ, ಏವಮ್, ಪಾಪಮ್, ಅವಾಪ್ಸ್ಯತಿ ॥೩೮॥

**ಒಂದು ವೇಳೆ ನಿನಗೆ ಸ್ವರ್ಗ ಅಥವಾ ರಾಜ್ಯದ ಇಚ್ಛೆಯಿಲ್ಲದಿದ್ದರೂ ಸಹ -**

ಜಯಾಜಯೌ - ಜಯ-ಪರಾಜಯ
ಲಾಭಾಲಾಭೌ - ಲಾಭ-ಹಾನಿ (ಮತ್ತು)
ಸುಖದುಃಖೇ - ಸುಖ-ದುಃಖಗಳನ್ನು
ಸಮೇ - ಸಮಾನವಾಗಿ
ಕೃತ್ವಾ - ತಿಳಿದುಕೊಂಡು
ತತಃ - ಅನಂತರ
ಯುದ್ಧಾಯ - ಯುದ್ಧಕ್ಕಾಗಿ
ಯುಜ್ಯಸ್ವ - ಸಿದ್ಧನಾಗು
ಏವಮ್ - ಈ ಪ್ರಕಾರ (ಯುದ್ಧಮಾಡುವುದರಿಂದ ನೀನು)
ಪಾಪಮ್ - ಪಾಪವನ್ನು
ನ, ಅವಾಪ್ಸ್ಯಸಿ - ಹೊಂದುವುದಿಲ್ಲ.

ಯಾವಾನ್, ಅರ್ಥಃ, ಉದಪಾನೇ, ಸರ್ವತಃ, ಸಂಪ್ಲುತೋದಕೇ,
ತಾವಾನ್, ಸರ್ವೇಷು, ವೇದೇಷು, ಬ್ರಾಹ್ಮಣಸ್ಯ, ವಿಜಾನತಃ ॥೪೬॥

**ಏಕೆಂದರೆ**

ಸರ್ವತಃ - ಎಲ್ಲ ಕಡೆಗಳಿಂದಲೂ
ಸಂಪ್ಲುತೋದಕೇ - ಪರಿಪೂರ್ಣವಾದ ಜಲಾಶಯವು
(ಪ್ರಾಪ್ತೇ ಸತಿ) - ಪ್ರಾಪ್ತವಾದ ಮೇಲೆ
ಉದಪಾನೇ - ಚಿಕ್ಕ ಜಲಾಶಯದಲ್ಲಿ (ಮನುಷ್ಯನಿಗೆ)
ಯಾವಾನ್ - ಎಷ್ಟು
ಅರ್ಥಃ - ಪ್ರಯೋಜನ,
(ಅಸ್ತಿ) - ಇರುತ್ತದೆಯೋ
ವಿಜಾನತಃ - ಬ್ರಹ್ಮವನ್ನು ತತ್ತ್ವಶಃ ತಿಳಿದಿರುವ
ಬ್ರಾಹ್ಮಣಸ್ಯ - ಬ್ರಾಹ್ಮಣನಿಗೆ
ಸರ್ವೇಷು - ಸಮಸ್ತವಾದ
ವೇದೇಷು - ವೇದಗಳಲ್ಲಿ
ತಾವಾನ್ - ಅಷ್ಟೇ (ಪ್ರಯೋಜನವಿರುತ್ತದೆ).

ಕರ್ಮಜಮ್, ಬುದ್ಧಿಯುಕ್ತಾಃ ಹಿ, ಫಲಮ್, ತ್ಯಕ್ತ್ವಾ ,ಮನೀಷಿಣಃ,
ಜನ್ಮಬಂಧವಿನಿರ್ಮುಕ್ತಾಃ ಪದಮ್, ಗಚ್ಛಂತಿ, ಅನಾಮಯಮ್ ॥೫೧॥

| | | | |
|---|---|---|---|
| ಹಿ | - ಏಕೆಂದರೆ | ತ್ಯಕ್ತ್ವಾ | - ತ್ಯಾಗಮಾಡಿ |
| ಬುದ್ಧಿಯುಕ್ತಾಃ | - ಸಮಬುದ್ಧಿ ಯುಕ್ತರಾದ | ಜನ್ಮಬಂಧ-ವಿನಿರ್ಮುಕ್ತಾಃ | - ಜನ್ಮರೂಪೀ ಬಂಧನದಿಂದ ಮುಕ್ತರಾಗಿ |
| ಮನೀಷಿಣಃ | - ಜ್ಞಾನಿಗಳು, | ಅನಾಮಯಮ್ | - ನಿರ್ವಿಕಾರ |
| ಕರ್ಮಜಮ್ | - ಕರ್ಮಗಳಿಂದ ಉಂಟಾಗುವ | ಪದಮ್ | - ಪರಮಪದವನ್ನು |
| ಫಲಮ್ | - ಫಲವನ್ನು | ಗಚ್ಛಂತಿ | - ಹೊಂದುತ್ತಾರೆ. |

ಶ್ರುತಿವಿಪ್ರತಿಪನ್ನಾ, ತೇ, ಯದಾ, ಸ್ಥಾಸ್ಯತಿ, ನಿಶ್ಚಲಾ,
ಸಮಾಧೌ, ಅಚಲಾ, ಬುದ್ಧಿಃ ತದಾ, ಯೋಗಮ್, ಅವಾಪ್ಸ್ಯತಿ ॥೫೩॥

ಮತ್ತು

| | | | |
|---|---|---|---|
| ಶ್ರುತಿವಿಪ್ರತಿಪನ್ನಾ | - ಬಗೆ ಬಗೆಯ ವಚನಗಳನ್ನು ಕೇಳುವುದರಿಂದ ವಿಚಲಿತವಾಗಿರುವ | ಅಚಲಾ | - ಸ್ಥಿರವಾಗಿ |
| | | ಸ್ಥಾಸ್ಯತಿ | - ನಿಲ್ಲುವುದೋ |
| | | ತದಾ | - ಆಗ (ನೀನು) |
| | | ಯೋಗಮ್ | - ಯೋಗವನ್ನು |
| ತೇ, ಬುದ್ಧಿಃ | - ನಿನ್ನ ಬುದ್ಧಿಯು | ಅವಾಪ್ಸ್ಯಸಿ | - ಪಡೆಯುವೆ ಅರ್ಥಾತ್ ಪರಮಾತ್ಮನೊಡನೆ ನಿನ್ನ ನಿತ್ಯ ಸಂಯೋಗವು ಉಂಟಾಗುವುದು. |
| ಯದಾ | - ಯಾವಾಗ | | |
| ಸಮಾಧೌ | - ಪರಮಾತ್ಮನಲ್ಲಿ | | |
| ನಿಶ್ಚಲಾ | - ನಿಶ್ಚಲವಾಗಿ (ಮತ್ತು) | | |

ವಿಷಯಾಃ ವಿನಿವರ್ತಂತೇ, ನಿರಾಹಾರಸ್ಯ, ದೇಹಿನಃ ರಸವರ್ಜಮ್,
ರಸಃ ಅಪಿ, ಅಸ್ಯ, ಪರಮ್, ದೃಷ್ಟ್ವಾ, ನಿವರ್ತತೇ ॥೫೯॥

ಆದಾಗ್ಯೂ

| | | | |
|---|---|---|---|
| ನಿರಾಹಾರಸ್ಯ | - (ಇಂದ್ರಿಯಗಳ ಮೂಲಕ) ವಿಷಯಗಳನ್ನು ಗ್ರಹಿಸದಿರುವ | | ಆಸಕ್ತಿಯು ನಿವೃತ್ತವಾಗುವುದಿಲ್ಲ |
| | | ಅಸ್ಯ | - ಈ ಸ್ಥಿತಪ್ರಜ್ಞ ಪುರುಷನ |
| ದೇಹಿನಃ | - ಪುರುಷನಲ್ಲಿ ಕುರಿತು | ರಸಃ, ಅಪಿ | - ಆಸಕ್ತಿ ಕೂಡ |
| ವಿಷಯಾಃ | - ಕೇವಲ ವಿಷಯಗಳು | ಪರಮ್ | - ಪರಮಾತ್ಮನ |
| ನಿವರ್ತಂತೆ | - ನಿವೃತ್ತವಾಗುತ್ತವೆ (ಆದರೆ) | ದೃಷ್ಟ್ವಾ | - ಸಾಕ್ಷಾತ್ಕಾರದಿಂದಾಗಿ |
| | | ನಿವರ್ತತೇ | - ಸಂಪೂರ್ಣವಾಗಿ ನಿವೃತ್ತಿಯಾಗಿಯಾಗುತ್ತವೆ |
| ರಸವರ್ಜಮ್ | - ವಿಷಯಗಳಲ್ಲಿನ | | |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 3ರ ಶ್ಲೋಕಗಳ ಫೋಟೊ ಕಾಪಿ

॥ ಓಂ ಶ್ರೀಪರಮಾತ್ಮನೇ ನಮಃ ॥

## ॥ ಅಥ ತೃತೀಯೋಽಧ್ಯಾಯಃ - ಕರ್ಮಯೋಗ ॥

ಜ್ಯಾಯಸೀ, ಚೇತ್, ಕರ್ಮಣಃ, ತೇ, ಮತಾ, ಬುದ್ಧಿಃ, ಜನಾರ್ದನ, ತತ್,
ಕಿಮ್, ಕರ್ಮಣಿ, ಘೋರೇ, ಮಾಮ್, ನಿಯೋಜಯಸಿ, ಕೇಶವ ॥೧॥

**ಇದರ ಬಗ್ಗೆ ಅರ್ಜುನನು ಪ್ರಶ್ನಿಸಿದನು**

| | | | |
|---|---|---|---|
| **ಜನಾರ್ದನ** | - ಹೇ ಜನಾರ್ದನನೇ | **ತತ್** | - ಮತ್ತೇಕೆ |
| **ಚೇತ್** | - ಒಂದು ವೇಳೆ | **ಕೇಶವ** | - ಹೇ ಕೇಶವನೇ |
| **ತೇ** | - ನಿನಗೆ | **ಮಾಮ್** | - ನನ್ನನ್ನು |
| **ಕರ್ಮಣಃ** | - ಕರ್ಮಕ್ಕಿಂತ | **ಘೋರೇ** | - ಭಯಂಕರವಾದ |
| **ಬುದ್ಧಿಃ** | - ಜ್ಞಾನವು | **ಕರ್ಮಣಿ** | - ಕರ್ಮದಲ್ಲಿ |
| **ಜ್ಯಾಯಸೀ** | - ಶ್ರೇಷ್ಠವೆಂದು | **ಕಿಮ್** | - ಏತಕ್ಕೆ |
| **ಮತಾ** | - ಮಾನ್ಯವಾದರೆ | **ನಿಯೋಜಯಸಿ** | - ತೊಡಗಿಸುತ್ತೀಯೆ? |

ವ್ಯಾಮಿಶ್ರೇಣ, ಇವ, ವಾಕ್ಯೇನ, ಬುದ್ಧಿಮ್, ಮೋಹಯಸಿ, ಇವ, ಮೇ, ತತ್,
ಏಕಮ್, ವದ, ನಿಶ್ಚಿತ್ಯ, ಯೇನ, ಶ್ರೇಯಃ, ಅಹಮ್, ಆಪ್ನುಯಾಮ್ ॥೨॥

**ಹಾಗೂ ನೀನು -**

| | | | |
|---|---|---|---|
| **ವ್ಯಾಮಿಶ್ರೇಣ- ಇವ** | - ಗೊಂದಲ ವಾದಂತಿರುವ, | **ಏನ** | - ಯಾವುದರಿಂದ |
| **ವಾಕ್ಯೇನ** | - ವಚನಗಳಿಂದ | **ಅಹಮ್** | - ನಾನು |
| **ಮೇ** | - ನನ್ನ | **ಶ್ರೇಯಃ** | - ಶ್ರೇಯಸ್ಸನ್ನು |
| **ಬುದ್ಧಿಮ್** | - ಬುದ್ಧಿಯನ್ನು | **ಆಪ್ನುಯಾಮ್** | - ಹೊಂದುವೆನೋ |
| **ಮೋಹಯಸಿ- ಇವ** | - ಮೋಹಕ್ಕೆ ಒಳಗಾಗಿಸುತ್ತಿರುವೆ (ಆದ್ದರಿಂದ) | **ತತ್** | - ಆ |
| | | **ಏಕಮ್** | - ಒಂದು ಮಾತನ್ನು |
| | | **ನಿಶ್ಚಿತ್ಯ** | - ನಿಶ್ಚಯಮಾಡಿ |
| | | **ವದ** | - ಹೇಳು. |

ಲೋಕೇ, ಅಸ್ಮಿನ್, ದ್ವಿವಿಧಾ, ನಿಷ್ಠಾ, ಪುರಾ, ಪ್ರೋಕ್ತಾ, ಮಯಾ, ಅನಘ,
ಜ್ಞಾನಯೋಗೇನ, ಸಾಂಖ್ಯಾನಾಮ್, ಕರ್ಮಯೋಗೇನ, ಯೋಗಿನಾಮ್ ॥೩॥

**ಹೀಗೆ ಅರ್ಜುನನು ಪ್ರಶ್ನಿಸಿದುದಕ್ಕೆ ಶ್ರೀ ಕೃಷ್ಣಪರಮಾತ್ಮನು ಹೇಳಿದನು-**

| | | | |
|---|---|---|---|
| **ಅನಘ** | - ಹೇ ನಿಷ್ಪಾಪನೇ | **ಮಯಾ** | - ನನ್ನ ಮೂಲಕ |
| **ಅಸ್ಮಿನ್, ಲೋಕೇ** | - ಈ ಲೋಕದಲ್ಲಿ | **ಪುರಾ** | - ಮೊದಲು |
| **ದ್ವಿವಿಧಾ** | - ಎರಡು ಪ್ರಕಾರದ | **ಪ್ರೋಕ್ತಾ** | - ಹೇಳಲಾಗಿವೆ (ಅವುಗಳಲ್ಲಿ) |
| **ನಿಷ್ಠಾ** | - ನಿಷ್ಠೆಗಳು* | | |

| | | | |
|---|---|---|---|
| **ಸಾಙ್ಖ್ಯಾನಾಮ್** | - ಸಾಙ್ಖ್ಯಯೋಗಿಗಳ (ನಿಷ್ಠೆಯಾದರೋ), | **ಯೋಗಿನಾಮ್** | - ಯೋಗಿಗಳ (ನಿಷ್ಠೆ)† |
| **ಜ್ಞಾನಯೋಗೇನ** | - ಜ್ಞಾನಯೋಗ ದೊಡನೆ (ಮತ್ತು) | **ಕರ್ಮಯೋಗೇನ** | - ಕರ್ಮಯೋಗ ‡ ದೊಡನೆ, (ಇರುತ್ತದೆ). |

ನ, ಕರ್ಮಣಾಮ್, ಅನಾರಂಭಾತ್, ನೈಷ್ಕರ್ಮ್ಯಮ್, ಪುರುಷಃ, ಅಶ್ನುತೇ,
ನ, ಚ, ಸಂನ್ಯಸನಾತ್, ಏವ, ಸಿದ್ಧಿಮ್, ಸಮಧಿಗಚ್ಛತಿ ॥೪॥

**ಆದರೆ ಯಾವುದೇ ಮಾರ್ಗಕ್ಕೆ ಅನುಸಾರವಾಗಿ ಸ್ವರೂಪತಃ ಕರ್ಮಗಳನ್ನೇ ತ್ಯಾಗ ಮಾಡಿಬಿಡುವ ಅವಶ್ಯಕತೆಯಿಲ್ಲ ; ಏಕೆಂದರೆ -**

| | | | |
|---|---|---|---|
| **ಪುರುಷಃ** | - ಮನುಷ್ಯನು | **ನ, ಅಶ್ನುತೇ** | - ಪಡೆದುಕೊಳ್ಳುವುದಿಲ್ಲ |
| **ಕರ್ಮಣಾಮ್** | - ಕರ್ಮಗಳನ್ನು | **ಚ** | - ಮತ್ತು |
| **ಅನಾರಂಭಾತ್** | - ಆಚರಿಸದೆ (ಅರ್ಥಾತ್ ಕರ್ಮಾನುಷ್ಠಾನ ಮಾಡದೆ) | **ಸಂನ್ಯಸನಾತ್ ಏವ** | - ಕೇವಲ ಕರ್ಮಗಳ ತ್ಯಾಗ ಮಾತ್ರದಿಂದ |
| | | **ಸಿದ್ಧಿಮ್** | - ಸಿದ್ಧಿ ಅಂದರೆ ಸಾಙ್ಖ್ಯ ನಿಷ್ಠೆಯನ್ನೇ |
| **ನೈಷ್ಕರ್ಮ್ಯಮ್** | - ನಿಷ್ಕರ್ಮತೆಯನ್ನು (ಅಂದರೆ ಯೋಗ ನಿಷ್ಠೆಯನ್ನು)* | **ನ, ಸಮಧಿಗಚ್ಛತಿ** | - ಪಡೆಯುವುದಿಲ್ಲ. |

ನ, ಹಿ, ಕಶ್ಚಿತ್, ಕ್ಷಣಮ್, ಅಪಿ, ಜಾತು, ತಿಷ್ಠತಿ, ಅಕರ್ಮಕೃತ್,
ಕಾರ್ಯತೇ, ಹಿ, ಅವಶಃ, ಕರ್ಮ, ಸರ್ವಃ, ಪ್ರಕೃತಿಜೈಃ, ಗುಣೈಃ ॥೫॥

**ಹಾಗೂ ಪೂರ್ಣವಾಗಿ ಕರ್ಮಗಳನ್ನೆಲ್ಲಾ ತ್ಯಜಿಸಲೂ ಸಹ ಆಗುವುದಿಲ್ಲ-**

| | | | |
|---|---|---|---|
| **ಹಿ** | - ನಿಸ್ಸಂದೇಹವಾಗಿ | **ಸರ್ವಃ** | - ಎಲ್ಲ ಮನುಷ್ಯ ಸಮುದಾಯವು |
| **ಕಶ್ಚಿತ್** | - ಯಾವನಾದರೂ (ಮನುಷ್ಯನು) | **ಪ್ರಕೃತಿಜೈಃ** | - ಪ್ರಕೃತಿಜನ್ಯವಾದ |
| **ಜಾತು** | - ಯಾವುದೇ ಕಾಲದಲ್ಲಿ | **ಗುಣೈಃ** | - ಗುಣಗಳ ಮೂಲಕ |
| **ಕ್ಷಣಮ್, ಅಪಿ** | - ಕ್ಷಣಮಾತ್ರವೂ ಸಹ | **ಅವಶಃ** | - ಪರವಶವಾಗಿ |
| **ಅಕರ್ಮಕೃತ್** | - ಕರ್ಮವನ್ನು ಮಾಡದೆ | **ಕರ್ಮ** | - ಕರ್ಮಮಾಡುವುದಕ್ಕೆ |
| **ನ, ತಿಷ್ಠತಿ** | - ಇರಲಾರನು | **ಕಾರ್ಯತೇ** | - ಬಾಧ್ಯನನ್ನಾಗಿ ಮಾಡಲ್ಪಡುತ್ತದೆ. |
| **ಹಿ** | - ಏಕೆಂದರೆ | | |

ಕರ್ಮೇಂದ್ರಿಯಾಣಿ, ಸಂಯಮ್ಯ, ಯಃ, ಆಸ್ತೇ, ಮನಸಾ, ಸ್ಮರನ್,
ಇಂದ್ರಿಯಾರ್ಥಾನ್, ವಿಮೂಢಾತ್ಮಾ, ಮಿಥ್ಯಾಚಾರಃ, ಸಃ, ಉಚ್ಯತೇ ॥೬॥

**ಆದುದರಿಂದ -**

| | | | |
|---|---|---|---|
| ಯಃ | - ಯಾವ | ಇಂದ್ರಿ- ಯಾರ್ಥಾನ್ | - ಇಂದ್ರಿಯಗಳ ವಿಷಯಗಳನ್ನು |
| ವಿಮೂಢಾತ್ಮಾ | - ಮೂಢಬುದ್ಧಿಯುಳ್ಳ ಮನುಷ್ಯನು | ಸ್ಮರನ್ | - ಚಿಂತಿಸುತ್ತ |
| ಕರ್ಮೇಂದ್ರಿ- ಯಾಣಿ | - ಸಮಸ್ತ ಇಂದ್ರಿಯಗಳನ್ನು | ಆಸ್ತೇ | - ಇರುತ್ತಾನೋ |
| | | ಸಃ | - ಅವನು |
| ಸಂಯಮ್ಯ | - (ಹಠಪೂರ್ವಕವಾಗಿ ಮೇಲಿಂದಮೇಲೆ) ತಡೆದು, | ಮಿಥ್ಯಾಚಾರಃ | - ಮಿಥ್ಯಾಚಾರಿ ಅರ್ಥಾತ್ ಡಾಂಭಿಕನೆಂದು |
| ಮನಸಾ | - ಮನಸ್ಸಿನಿಂದ | ಉಚ್ಯತೇ | - ಹೇಳಲ್ಪಡುತ್ತಾನೆ. |

ಯಃ, ತು, ಇಂದ್ರಿಯಾಣಿ, ಮನಸಾ, ನಿಯಮ್ಯ, ಆರಭತೇ, ಅರ್ಜುನ,
ಕರ್ಮೇಂದ್ರಿಯೈಃ, ಕರ್ಮಯೋಗಮ್, ಅಸಕ್ತಃ, ಸಃ, ವಿಶಿಷ್ಯತೇ ॥೭॥

| | | | |
|---|---|---|---|
| ತು | - ಆದರೆ | ಮನಸಾ | - ಮನಸ್ಸಿನಿಂದ |
| ಅರ್ಜುನ | - ಎಲೈ ಅರ್ಜುನನೇ | ಇಂದ್ರಿಯಾಣಿ | - ಇಂದ್ರಿಯಗಳನ್ನು |
| ಯಃ | - ಯಾವ(ಪುರುಷನು) | ನಿಯಮ್ಯ | - ವಶಪಡಿಸಿಕೊಂಡು |
| ಅಸಕ್ತಃ | - ಅನಾಸಕ್ತನಾಗಿ | ಆರಭತೇ | - ಆಚರಣೆಯನ್ನು ಮಾಡುತ್ತಾನೋ |
| ಕರ್ಮೇಂದ್ರಿಯೈಃ | - ಸಮಸ್ತ ಇಂದ್ರಿಯಗಳ ಮೂಲಕ | ಸಃ | - ಅವನೇ |
| ಕರ್ಮ ಯೋಗಮ್ | - ಕರ್ಮಯೋಗದ | ವಿಶಿಷ್ಯತೇ | - ಶ್ರೇಷ್ಠನಾಗಿದ್ದಾನೆ. |

ನಿಯತಮ್, ಕುರು, ಕರ್ಮ, ತ್ವಮ್, ಕರ್ಮ, ಜ್ಯಾಯಃ, ಹಿ, ಅಕರ್ಮಣಃ,
ಶರೀರಯಾತ್ರಾ, ಅಪಿ, ಚ, ತೇ, ನ, ಪ್ರಸಿದ್ಧ್ಯೇತ್, ಅಕರ್ಮಣಃ ॥೮॥

ಆದುದರಿಂದ-

| | | | |
|---|---|---|---|
| ತ್ವಂ | - ನೀನು | ಜ್ಯಾಯಃ | - ಶ್ರೇಷ್ಠವಾಗಿದೆ |
| ನಿಯತಮ್ | - ಶಾಸ್ತ್ರವಿಹಿತವಾದ | ಚ | - ಹಾಗೂ |
| ಕರ್ಮ | - ಕರ್ತವ್ಯ ಕರ್ಮವನ್ನು | ಅಕರ್ಮಣಃ | - ಕರ್ಮಮಾಡದೇ ಇರುವುದರಿಂದ |
| ಕುರು | - ಮಾಡು | | |
| ಹಿ | - ಏಕೆಂದರೆ | ತೇ | - ನಿನ್ನ |
| ಅಕರ್ಮಣಃ | - ಕರ್ಮಮಾಡದೇ ಇರುವುದಕ್ಕಿಂತ | ಶರೀರಯಾತ್ರಾ- ಅಪಿ | - ಶರೀರ ನಿರ್ವಾಹವೂ ಸಹ |
| ಕರ್ಮ | - ಕರ್ಮಮಾಡುವುದು | ನ, ಪ್ರಸಿದ್ಧ್ಯೇತ್ | - ಸಿದ್ಧವಾಗಲಾರದು. |

ಯಜ್ಞಾರ್ಥಾತ್, ಕರ್ಮಣಃ, ಅನ್ಯತ್ರ, ಲೋಕಃ, ಅಯಮ್, ಕರ್ಮಬಂಧನಃ,
ತದರ್ಥಮ್, ಕರ್ಮ, ಕೌಂತೇಯ, ಮುಕ್ತಸಂಗಃ, ಸಮಾಚಾರ ॥೯॥

**ಮತ್ತು ಎಲೈ ಅರ್ಜುನ! ಬಂಧನದ ಭಯದಿಂದಲೂ ಸಹ ಕರ್ಮಗಳ ತ್ಯಾಗ ಯೋಗ್ಯವಲ್ಲ ಏಕೆಂದರೆ-**

| | |
|---|---|
| **ಯಜ್ಞಾರ್ಥಾತ್** | - ಯಜ್ಞದ ನಿಮಿತ್ತವಾಗಿ ಮಾಡಲ್ಪಡುವ |
| **ಕರ್ಮಣಃ** | - ಕರ್ಮಗಳನ್ನು (ಬಿಟ್ಟು) |
| **ಅನ್ಯತ್ರ** | - ಬೇರೆಯಾದ ಕರ್ಮಗಳಲ್ಲಿ (ತೊಡಗಿದ್ದುಕೊಂಡೆ) |
| **ಅಯಮ್** | - ಈ |
| **ಲೋಕಃ** | - ಮನುಷ್ಯ ಸಮುದಾಯವು |
| **ಕರ್ಮಬಂಧನಃ** | - ಕರ್ಮಗಳಿಂದ |
| | ಬಂಧಿತವಾಗುತ್ತದೆ (ಆದ್ದರಿಂದ) |
| **ಕೌಂತೇಯ** | - ಹೇ ಅರ್ಜುನನೇ! (ನೀನು) |
| **ಮುಕ್ತಸಂಗಃ** | - ಆಸಕ್ತಿರಹಿತನಾಗಿ |
| **ತದರ್ಥಮ್** | - ಆ ಯಜ್ಞದ ನಿಮಿತ್ತವಾಗಿಯೇ (ಚೆನ್ನಾಗಿ) |
| **ಕರ್ಮ** | - ಕರ್ತವ್ಯ ಕರ್ಮವನ್ನು |
| **ಸಮಾಚರ** | - ಮಾಡು. |

ಸಹಯಜ್ಞಾಃ, ಪ್ರಜಾಃ, ಸೃಷ್ಟ್ವಾ, ಪುರಾ, ಉವಾಚ, ಪ್ರಜಾಪತಿಃ,
ಅನೇನ, ಪ್ರಸವಿಷ್ಯಧ್ವಮ್, ಏಷಃ, ವಃ, ಅಸ್ತು, ಇಷ್ಟಕಾಮಧುಕ್ ॥೧೦॥

**ಹಾಗೆಯೇ ಕರ್ಮಮಾಡದೇ ಹೋದರೆ ನೀನು ಪಾಪಭಾಗಿಯಾಗುವೆ ಏಕೆಂದರೆ-**

| | |
|---|---|
| **ಪ್ರಜಾಪತಿಃ** | - ಪ್ರಜಾಪತಿ ಬ್ರಹ್ಮನು |
| **ಪುರಾ** | - ಕಲ್ಪದ ಆದಿಯಲ್ಲಿ |
| **ಸಹಯಜ್ಞಾಃ** | - ಯಜ್ಞಸಹಿತವಾಗಿ |
| **ಪ್ರಜಾಃ** | - ಪ್ರಜೆಗಳನ್ನು |
| **ಸೃಷ್ಟ್ವಾ** | - ರಚಿಸಿ (ಅವರಿಗೆ) |
| **ಉವಾಚ** | - ಹೇಳಿದ (ಏನೆಂದರೆ) |
| **(ಯೂಯಮ್)** | - ನೀವುಗಳು |
| **ಅನೇನ** | - ಈ ಯಜ್ಞದ ಮೂಲಕ |
| **ಪ್ರಸವಿಷ್ಯಧ್ವಮ್** | - ವೃದ್ಧಿಯನ್ನು ಪಡೆಯಿರಿ (ಮತ್ತು) |
| **ಏಷಃ** | - ಈ ಯಜ್ಞವು |
| **ವಃ** | - ನಿಮ್ಮಗಳಿಗೆ |
| **ಇಷ್ಟಕಾಮಧುಕ್** | - ಇಚ್ಛಿಸಿದ ಭೋಗಗಳನ್ನು |
| | ಪ್ರದಾನ ಮಾಡುವಂತಹುದು |
| **ಅಸ್ತು** | - ಆಗಲಿ. |

ದೇವಾನ್, ಭಾವಯತ, ಅನೇನ, ತೇ, ದೇವಾಃ, ಭಾವಯಂತು, ವಃ,
ಪರಸ್ಪರಮ್, ಭಾವಯಂತಃ, ಶ್ರೇಯಃ, ಪರಮ್, ಅವಾಪ್ಸ್ಯಥ ॥೧೧॥

**ಹಾಗೂ ನೀವುಗಳು-**

| | |
|---|---|
| **ಅನೇನ** | - ಈ ಯಜ್ಞದ ಮೂಲಕ |
| **ದೇವಾನ್** | - ದೇವತೆಗಳನ್ನು |
| **ಭಾವಯತ** | - ತೃಪ್ತಿಪಡಿಸಿರಿ |
| **ತೇ, ದೇವಾಃ** | - ಆ ದೇವತೆಗಳು |
| **(ಏವಮ್)** | - ಈ ಪ್ರಕಾರವಾಗಿ (ನಿಸ್ವಾರ್ಥ ಭಾವದಿಂದ) |
| **ಪರಸ್ಪರಮ್** | - ಒಬ್ಬರು ಇನ್ನೊಬ್ಬರನ್ನು |
| **ಭಾವಯಂತಃ** | - ತೃಪ್ತಿಪಡಿಸುತ್ತಾ |
| **ಪರಮ್** | - ಪರಮ |

| | | | |
|---|---|---|---|
| ವಃ | - ನಿಮ್ಮಗಳ | ಶ್ರೇಯಃ | - ಶ್ರೇಯಸ್ಸನ್ನು |
| ಭಾವಯಂತು | - ಉನ್ನತಿ ಮಾಡಲಿ | ಅವಾಪ್ಸ್ಯಥ | - ನೀವು ಪಡೆಯುವಿರಿ. |

ಇಷ್ಟಾನ್, ಭೋಗಾನ್, ಹಿ, ವಃ, ದೇವಾಃ, ದಾಸ್ಯಂತೇ, ಯಜ್ಞಭಾವಿತಾಃ,
ತೈಃ, ದತ್ತಾನ್, ಅಪ್ರದಾಯ, ಏಭ್ಯಃ, ಯಃ, ಭುಂಕ್ತೇ, ಸ್ತೇನಃ, ಏವ, ಸಃ ॥೧೨॥

**ಹಾಗೂ**

| | | | |
|---|---|---|---|
| ಯಜ್ಞಭಾವಿತಾಃ | - ಯಜ್ಞದ ಮೂಲಕ ತೃಪ್ತರಾದ | ತೈಃ | - ಆ ದೇವತೆಗಳ ಮೂಲಕ |
| ದೇವಾಃ | - ದೇವತೆಗಳು | ದತ್ತಾನ್ | - ಕೊಡಲ್ಪಟ್ಟ ಭೋಗಗಳನ್ನು |
| ವಃ | - ನಿಮ್ಮಗಳಿಗೆ (ಬೇಡದೆಯೇ) | ಯಃ | - ಯಾವ ಪುರುಷನು |
| ಇಷ್ಟಾನ್ | - ಇಚ್ಛಿಸಿದ | ಏಭ್ಯಃ | - ಅವರಿಗೆ |
| ಭೋಗಾನ್ | - ಭೋಗಗಳನ್ನು | ಅಪ್ರದಾಯ | - ಕೊಡದೆ (ತಾನೇ) |
| ಹಿ | - ನಿಶ್ಚಯವಾಗಿಯೂ | ಭುಂಕ್ತೇ | - ಭೋಗಿಸುತ್ತಾನೋ |
| ದಾಸ್ಯಂತೇ | - ಕೊಡುತ್ತಿರುವರು (ಈಪ್ರಕಾರವಾಗಿ) | ಸಃ | - ಅವನು |
| | | ಸ್ತೇನಃ, ಏವ | - ಕಳ್ಳನೇ ಆಗಿದ್ದಾನೆ |

ಯಜ್ಞಶಿಷ್ಟಾಶಿನಃ, ಸಂತಃ, ಮುಚ್ಯಂತೇ ಸರ್ವಕಿಲ್ಬಿಷೈಃ,
ಭುಂಜತೇ, ತೇ, ಅಘಮ್, ಪಾಪಾಃ, ಯೇ, ಪಚಂತಿ, ಆತ್ಮಕಾರಣಾತ್ ॥೧೩॥

**ಕಾರಣವೇನೆಂದರೆ-**

| | | | |
|---|---|---|---|
| ಯಜ್ಞಶಿಷ್ಟಾಶಿನಃ | - ಯಜ್ಞದಲ್ಲಿ ಉಳಿದ ಅನ್ನವನ್ನು ಸೇವಿಸುವವರು, | ಆತ್ಮಕಾರಣಾತ್ | - ತಮ್ಮ ಶರೀರ ಪೋಷಣೆಗಾಗಿಯೇ |
| ಸಂತಃ | - ಶ್ರೇಷ್ಠ ಪುರುಷರು | ಪಚಂತಿ | - (ಅನ್ನವನ್ನು) ತಯಾರಿಸುತ್ತಾರೆಯೋ |
| ಸರ್ವಕಿಲ್ಬಿಷೈಃ | - ಎಲ್ಲ ಪಾಪಗಳಿಂದ | ತೇ, ತು | - ಅವರಾದರೋ |
| ಮುಚ್ಯಂತೇ | - ಮುಕ್ತರಾಗುತ್ತಾರೆ. | ಅಘಮ್ | - ಪಾಪವನ್ನೇ |
| ಯೇ | - ಯಾವ | ಭುಂಜತೇ | - ತಿನ್ನುತ್ತಾರೆ. |
| ಪಾಪಾಃ | - ಪಾಪೀ ಜನರು | | |

ಅನ್ನಾತ್, ಭವಂತಿ, ಭೂತಾನಿ, ಪರ್ಜನ್ಯಾತ್, ಅನ್ನಸಂಭವಃ,
ಯಜ್ಞಾತ್, ಭವತಿ, ಪರ್ಜನ್ಯಃ, ಯಜ್ಞಃ, ಕರ್ಮಸಮುದ್ಭವಃ ॥೧೪॥

ಕರ್ಮ, ಬ್ರಹ್ಮೋದ್ಭವಮ್, ವಿದ್ಧಿ, ಬ್ರಹ್ಮ ಅಕ್ಷರಸಮುದ್ಭವಮ್,
ತಸ್ಮಾತ್, ಸರ್ವಗತಮ್, ಬ್ರಹ್ಮ ನಿತ್ಯಮ್, ಯಜ್ಞೇ, ಪ್ರತಿಷ್ಠಿತಮ್ ॥೧೫॥

**ಹಾಗೂ ಆ -**

| | | | |
|---|---|---|---|
| ಭೂತಾನಿ | - ಸಂಪೂರ್ಣ ಪ್ರಾಣಿಗಳು | ಬ್ರಹ್ಮೋದ್ಭವಂ | - ವೇದದಿಂದ ಉತ್ಪನ್ನ |

ಅನ್ನಾತ್ - ಅನ್ನದಿಂದ
ಭವಂತಿ - ಉತ್ಪನ್ನವಾಗುತ್ತವೆ
ಅನ್ನಸಂಭವಃ - ಅನ್ನದ ಉತ್ಪತ್ತಿಯು
ಪರ್ಜನ್ಯಾತ್ - ವೃಷ್ಟಿಯಿಂದ (ಆಗುತ್ತದೆ)
ಪರ್ಜನ್ಯಃ - ವೃಷ್ಟಿಯು
ಯಜ್ಞಾತ್ - ಯಜ್ಞದಿಂದ
ಭವತಿ - ಆಗುತ್ತದೆ (ಮತ್ತು)
ಯಜ್ಞಃ - ಯಜ್ಞವು
ಕರ್ಮಸಮುದ್ಭವಃ - ವಿಹಿತವಾದ ಕರ್ಮಗಳಿಂದ ಉತ್ಪನ್ನವಾಗುವುದು
ಕರ್ಮ - ಕರ್ಮಗಳ ಸಮುದಾಯವನ್ನು (ನೀನು) ವಾದುದು (ಮತ್ತು)
ಬ್ರಹ್ಮ - ವೇದವು
ಅಕ್ಷರಸಮುದ್ಭವಮ್ - ಅವಿನಾಶಿಯಾದ ಪರಮಾತ್ಮನಿಂದ ಉತ್ಪನ್ನವಾದುದೆಂದು
ವಿದ್ಧಿ - ತಿಳಿ
ತಸ್ಮಾತ್ - ಇದರಿಂದ (ಸಿದ್ಧವಾಗುವು ದೇನೆಂದರೆ)
ಸರ್ವಗತಮ್ - ಸರ್ವವ್ಯಾಪಿಯಾದ
ಬ್ರಹ್ಮ - ಪರಮ ಅಕ್ಷರವಾದ ಪರಮಾತ್ಮನು
ನಿತ್ಯಮ್ - ಸದಾ
ಯಜ್ಞೇ - ಯಜ್ಞದಲ್ಲಿ
ಪ್ರತಿಷ್ಠಿತಮ್ - ಪ್ರತಿಷ್ಠಿತನಾಗಿದ್ದಾನೆ.

ಏವಮ್, ಪ್ರವರ್ತಿತಮ್, ಚಕ್ರಮ್, ನ, ಅನುವರ್ತಯತಿ, ಇಹ, ಯಃ,
ಅಘಾಯುಃ, ಇಂದ್ರಿಯಾರಾಮಃ, ಮೋಘಮ್, ಪಾರ್ಥ, ಸಃ, ಜೀವತಿ ॥೧೬॥

ಪಾರ್ಥ - ಹೇ ಪಾರ್ಥನೇ
ಯಃ - ಯಾವ ಮನುಷ್ಯನು
ಇಹ - ಈ ಲೋಕದಲ್ಲಿ
ಏವಮ್ - ಈ ಪ್ರಕಾರ
ಪ್ರವರ್ತಿತಮ್ - (ಪರಂಪರೆಯಿಂದ) ಪ್ರಚಲಿತವಾಗಿರುವ
ಚಕ್ರಮ್ - ಸೃಷ್ಟಿಚಕ್ರಕ್ಕೆ ಅನುಕೂಲವಾಗಿ
ನ, ಅನು-ವರ್ತಯತಿ - ವರ್ತಿಸುವುದಿಲ್ಲವೋ ಅರ್ಥಾತ್ ತನ್ನ ಕರ್ತವ್ಯದ ಪಾಲನೆಯನ್ನು ಮಾಡುವುದಿಲ್ಲವೋ
ಸಃ - ಅವನು
ಇಂದ್ರಿಯಾರಾಮಃ - ಇಂದ್ರಿಯಗಳ ಮೂಲಕ ಭೋಗಗಳಲ್ಲಿ ರಮಿಸುವವನು
ಅಘಾಯುಃ - ಪಾಪಾಯುವು
ಮೋಘಮ್ - ವ್ಯರ್ಥ (ವಾಗಿಯೇ)
ಜೀವತಿ - ಜೀವಿಸುತ್ತಾನೆ.

ತಸ್ಮಾತ್, ಅಸಕ್ತಃ, ಸತತಮ್, ಕಾರ್ಯಮ್, ಕರ್ಮ, ಸಮಾಚಾರ,
ಅಸಕ್ತಃ, ಹಿ, ಆಚರನ್, ಕರ್ಮ, ಪರಮ್, ಆಪ್ನೋತಿ, ಪೂರುಷಃ ॥೧೯॥

| | | | |
|---|---|---|---|
| **ತಸ್ಮಾತ್** | - ಆದ್ದರಿಂದ (ನೀನು) | **ಅಸಕ್ತಃ** | - ಆಸಕ್ತಿರಹಿತನಾಗಿ |
| **ಸತತಮ್** | - ನಿರಂತರವಾಗಿ | **ಕರ್ಮ** | - ಕರ್ಮವನ್ನು |
| **ಅಸಕ್ತಃ** | - ಆಸಕ್ತಿರಹಿತನಾಗಿ (ಸದಾ) | **ಆಚರನ್** | - ಮಾಡುತ್ತಾ ಇರುವ |
| **ಕಾರ್ಯಮ್, ಕರ್ಮ** | - ಕರ್ತವ್ಯ ಕರ್ಮವನ್ನು | **ಪೂರುಷಃ** | - ಮನುಷ್ಯನು |
| | | **ಪರಮ್** | - ಪರಮಾತ್ಮನನ್ನು |
| **ಸಮಾಚರ** | - ಚೆನ್ನಾಗಿ ಮಾಡುತ್ತಿರು | **ಆಪ್ನೋತಿ** | - ಪಡೆಯುತ್ತಾನೆ. |
| **ಹಿ** | - ಏಕೆಂದರೆ | | |

ಯದಿ, ಹಿ, ಅಹಮ್, ನ, ವರ್ತೇಯಮ್, ಜಾತು, ಕರ್ಮಣಿ, ಅತಂದ್ರಿತಃ
ಮಮ, ವರ್ತ್ಮ, ಅನುವರ್ತಂತೇ, ಮನುಷ್ಯಾಃ ಪಾರ್ಥ, ಸರ್ವಶಃ ॥೨೩॥

| | | | |
|---|---|---|---|
| **ಹಿ** | - ಏಕೆಂದರೆ | **ವರ್ತೇಯಮ್** | (ದೊಡ್ಡ ಹಾನಿಯುಂಟಾಗುವುದು ಏಕೆಂದರೆ) |
| **ಪಾರ್ಥ** | - ಹೇ ಪಾರ್ಥನೇ | | |
| **ಯದಿ** | - ಒಂದು ವೇಳೆ | **ಮನುಷ್ಯಾಃ** | - ಮನುಷ್ಯರು |
| **ಜಾತು** | - ಯಾವಾಗಲಾದರೂ | **ಸರ್ವಶಃ** | - ಎಲ್ಲ ಪ್ರಕಾರದಿಂದ |
| **ಅಹಮ್** | - ನಾನು | **ಮಮ** | - ನನ್ನ |
| **ಅತಂದ್ರಿತಃ** | - ಸಾವಧಾನವಾಗಿದ್ದುಕೊಂಡು | **ವರ್ತ್ಮ** | - ಮಾರ್ಗವನ್ನೇ |
| **ಕರ್ಮಣಿ** | - ಕರ್ಮಗಳಲ್ಲಿ | **ಅನುವರ್ತಂತೇ** | - ಅನುಸರಣೆ ಮಾಡುತ್ತಾರೆ. |
| **ನ,** | - ವರ್ತಿಸುವುದಿಲ್ಲವಾದರೆ | | |

ನ, ಬುದ್ಧಿಭೇದಮ್, ಜನಯೇತ್, ಅಜ್ಞಾನಾಮ್, ಕರ್ಮಸಂಗಿನಾಮ್,
ಜೋಷಯೇತ್, ಸರ್ವಕರ್ಮಾಣಿ, ವಿದ್ವಾನ್, ಯುಕ್ತಃ, ಸಮಾಚರನ್ ॥೨೬॥

**ಹಾಗೂ -**

| | | | |
|---|---|---|---|
| **ಯುಕ್ತಃ** | - ಪರಮಾತ್ಮನ ಸ್ವರೂಪದಲ್ಲಿ ಸ್ಥಿತನಾಗಿದ್ದ | | ಕರ್ಮಗಳಲ್ಲಿ ಅಶ್ರದ್ಧೆಯನ್ನು |
| | | **ನ, ಜನಯೇತ್** | - ಉಂಟುಮಾಡದಿರಲಿ (ಆದರೆ ತಾನು) |
| **ವಿದ್ವಾನ್** | - ಜ್ಞಾನೀ ಪುರುಷನು | | |
| **ಕರ್ಮಸಂಗಿ-ನಾಮ್** | - ಶಾಸ್ತ್ರವಿಹಿತವಾದ ಕರ್ಮಗಳಲ್ಲಿ ಆಸಕ್ತಿಯುಳ್ಳ | **ಸರ್ವ ಕರ್ಮಾಣಿ** | - ಶಾಸ್ತ್ರವಿಹಿತ ಸಮಸ್ತ ಕರ್ಮಗಳನ್ನು |
| | | **ಸಮಾಚರನ್** | - ಚೆನ್ನಾಗಿಮಾಡುತ್ತ (ಅವರಿಂದಲೂ ಅದೇ ರೀತಿ), |
| **ಅಜ್ಞಾನಾಮ್** | - ಅಜ್ಞಾನಿಗಳ | | |
| **ಬುದ್ಧಿಭೇದಮ್** | - ಬುದ್ಧಿಯಲ್ಲಿ ಭ್ರಮೆಯನ್ನು | **ಜೋಷಯೇತ್** | - ಮಾಡಿಸಲಿ. |

ಯೇ, ಮೇ, ಮತಮ್, ಇದಮ್, ನಿತ್ಯಮ್, ಅನುತಿಷ್ಠಂತಿ, ಮಾನವಾಃ
ಶ್ರದ್ಧಾವಂತಃ, ಅನಸೂಯಂತಃ, ಮುಚ್ಯಂತೇ, ತೇ, ಅಪಿ, ಕರ್ಮಭಿಃ ॥೩೧॥

**ಮತ್ತು ಎಲೈ ಅರ್ಜುನ -**

| | | | |
|---|---|---|---|
| **ಯೇ** | - ಯಾವ | **ಶ್ರದ್ಧಾವಂತಃ** | - ಶ್ರದ್ಧಾಯುಕ್ತರಾಗಿ |
| **ಮಾನವಾಃ** | - ಮನುಷ್ಯರು | **ಮೇ** | - ನನ್ನ |
| **ಅನಸೂಯಂತಃ** | - ದೋಷದೃಷ್ಟಿಯಿಂದ ರಹಿತರಾಗಿ (ಮತ್ತು) | **ಇದಮ್** | - ಈ |
| | | **ಮತಮ್** | - ಸಿದ್ಧಾಂತವನ್ನು |
| **ನಿತ್ಯಮ್** | - ಸದಾ | **ಅಪಿ** | - ಕೂಡ |
| **ಅನುತಿಷ್ಠಂತಿ** | - ಅನುಸರಣೆ ಮಾಡುತ್ತಾರೋ | **ಕರ್ಮಭಿಃ** | - ಸಂಪೂರ್ಣವಾಗಿ ಕರ್ಮಗಳಿಂದ |
| **ತೇ** | - ಅವರು | **ಮುಚ್ಯಂತೇ** | - ಬಿಡುಗಡೆ ಹೊಂದುತ್ತಾರೆ. |

ಶ್ರೇಯಾನ್, ಸ್ವಧರ್ಮ, ವಿಗುಣಃ, ಪರಧರ್ಮಾತ್, ಸ್ವನುಷ್ಠಿತಾತ್,
ಸ್ವಧರ್ಮೇ, ನಿಧನಮ್, ಶ್ರೇಯಃ, ಪರಧರ್ಮಃ, ಭಯಾವಹಃ ॥೩೫॥

**ಏಕೆಂದರೆ -**

| | | | |
|---|---|---|---|
| **ಸ್ವನುಷ್ಠಿತಾತ್** | - ಒಳ್ಳೆಯ ಪ್ರಕಾರದಿಂದ ಆಚರಣೆಗೆ ತರಲಾಗಿರುವ | **ಸ್ವಧರ್ಮೇ** | - ತನ್ನ ಧರ್ಮವಲ್ಲಾದ (ರೋ) |
| | | **ನಿಧನಮ್** | - ಸಾಯುವುದೂ (ಕೂಡ) |
| **ಪರಧರ್ಮಾತ್** | - ಬೇರೆಯರ ಧರ್ಮಕ್ಕಿಂತ | **ಶ್ರೇಯಃ** | - ಶ್ರೇಯಸ್ಕರವಾಗಿದೆ |
| **ವಿಗುಣಃ** | - ಗುಣರಹಿತವಾದರೂಸಹ | **ಪರಧರ್ಮಃ** | - ಇನ್ನೊಬ್ಬರ ಧರ್ಮವು |
| **ಸ್ವಧರ್ಮಃ** | - ತನ್ನದಾದ ಧರ್ಮವು, | **ಭಯಾವಹಃ** | - ಭಯವನ್ನುಂಟು ಮಾಡುವುದಾಗಿದೆ. |
| **ಶ್ರೇಯಾನ್** | - ಅತಿ ಉತ್ತಮವಾಗಿದೆ | | |

ಇಂದ್ರಿಯಾಣಿ, ಪರಾಣಿ, ಆಹುಃ, ಇಂದ್ರಿಯೇಭ್ಯಃ, ಪರಮ್, ಮನಃ,
ಮನಸಃ, ತು, ಪರಾ, ಬುದ್ಧಿಃ, ಯಃ, ಬುದ್ಧೇಃ, ಪರತಃ, ತು, ಸಃ ॥೪೨॥

**ಮತ್ತು ಇಂದ್ರಿಯಗಳನ್ನು ನಿಗ್ರಹಿಸಿ ಕಾಮರೂಪೀ ವೈರಿಯನ್ನು ಸಂಹಾರಮಾಡಲು ನನ್ನಲ್ಲಿ ಶಕ್ತಿಯಿಲ್ಲ ಎಂದು ನೀನು ತಿಳಿದುಕೊಂಡರೆ ಅದು ನಿನ್ನ ತಪ್ಪು ಏಕೆಂದರೆ ಈ ಶರೀರಕ್ಕಿಂತ -**

| | | | |
|---|---|---|---|
| **ಇಂದ್ರಿಯಾಣಿ** | - ಇಂದ್ರಿಯಗಳು (ಸ್ಥೂಲ ಶರೀರಕ್ಕಿಂತ) | **ಮನಸಃ, ತು** | - ಮನಸ್ಸಿಗಿಂತಲೂ (ಕೂಡ) |
| **ಪರಾಣಿ** | - ಪರ ಅಂದರೆ ಶ್ರೇಷ್ಠ ಬಲಶಾಲಿ ಮತ್ತು ಸೂಕ್ಷ್ಮವೆಂದು | **ಪರಾ** | - ಶ್ರೇಷ್ಠವಾದುದು |
| | | **ಬುದ್ಧಿಃ** | - ಬುದ್ಧಿಯಾಗಿದೆ |
| | | **ತು, ಯಃ** | - ಮತ್ತು ಯಾವುದು |
| **ಆಹುಃ** | - ಹೇಳುತ್ತಾರೆ | **ಬುದ್ಧೇಃ** | - ಬುದ್ಧಿಗಿಂತಲೂ (ಕೂಡ) |
| **ಇಂದ್ರಿಯೇಭ್ಯಃ** | - ಈ ಇಂದ್ರಿಯಗಳಿಗಿಂತ | | |

| | | | |
|---|---|---|---|
| ಇಂದ್ರಿಯೇಭ್ಯಃ | - ಈ ಇಂದ್ರಿಯಗಳಿಗಿಂತ | | (ಕೂಡ) |
| ಪರಮ್ | - ಶ್ರೇಷ್ಠವಾದುದು | ಪರತಃ | - ಅತ್ಯಂತ ಶ್ರೇಷ್ಠವಾಗಿದೆಯೋ |
| ಮನಃ | - ಮನಸ್ಸು (ಆಗಿದೆ) | ಸಃ | - ಅದು (ಆತ್ಮಾ) ಆಗಿದೆ. |

ಏವಮ್, ಬುದ್ಧೇಃ, ಪರಮ್, ಬುದ್ಧ್ವಾ, ಸಂಸ್ತಭ್ಯ, ಆತ್ಮಾನಮ್, ಆತ್ಮನಾ,
ಜಹಿ, ಶತ್ರುಮ್, ಮಹಾಬಾಹೋ, ಕಾಮರೂಪಮ್, ದುರಾಸದಮ್ ॥೪೩॥

| | | | |
|---|---|---|---|
| ಏವಂ | - ಈ ಪ್ರಕಾರವಾಗಿ | ಆತ್ಮಾನಮ್ | - ಮನಸ್ಸನ್ನು |
| ಬುದ್ಧೇಃ | - ಬುದ್ಧಿಗಿಂತ | ಸಂಸ್ತಭ್ಯ | - ವಶಪಡಿಸಿಕೊಂಡು |
| ಪರಮ್ | - ಪರ ಅರ್ಥಾತ್ ಸೂಕ್ಷ್ಮ ಬಲಶಾಲಿ ಮತ್ತು ಅತ್ಯಂತ ಶ್ರೇಷ್ಠನಾದ ಆತ್ಮವನ್ನು | ಮಹಾಬಾಹೋ | - ಹೇ ಮಹಾಬಾಹುವೇ (ನೀನು ಈ) |
| | | ಕಾಮರೂಪಮ್ | - ಕಾಮರೂಪೀ |
| | | ದುರಾಸದಮ್ | - ದುರ್ಜಯವಾದ |
| ಬುದ್ಧ್ವಾ | - ಅರಿತುಕೊಂಡು (ಮತ್ತು) | ಶತ್ರುಮ್ | - ಶತ್ರುವನ್ನು |
| | | ಜಹಿ | - ಕೊಂದು ಹಾಕು. |
| ಆತ್ಮನಾ | - ಬುದ್ಧಿಯ ಮೂಲಕ | | |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 4ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ಚತುರ್ಥೋಽಧ್ಯಾಯಃ - ಜ್ಞಾನಕರ್ಮಸಂನ್ಯಾಸಯೋಗ ॥

ಇಮಮ್, ವಿವಸ್ವತೇ ಯೋಗಮ್, ಪ್ರೋಕ್ತವಾನ್, ಅಹಮ್, ಅವ್ಯಯಮ್,
ವಿವಸ್ವಾನ್, ಮನವೇ, ಪ್ರಾಹ, ಮನುಃ, ಇಕ್ಷ್ವಾಕವೇ, ಅಬ್ರವೀತ್ ॥೧॥

**ಅನಂತರ ಶ್ರೀ ಕೃಷ್ಣ ಪರಮಾತ್ಮ ಹೇಳಿದ, ಎಲೈ ಅರ್ಜುನ -**

| | | | |
|---|---|---|---|
| **ಅಹಮ್** | - ನಾನು | **ವಿವಸ್ವಾನ್** | - ಸೂರ್ಯನು (ತನ್ನ ಪುತ್ರನಾದ) |
| **ಇಮಮ್** | - ಈ | **ಮನವೇ** | - ವೈವಸ್ವತ ಮನುವಿಗೆ |
| **ಅವ್ಯಯಮ್** | - ಅವಿನಾಶಿಯಾದ | **ಪ್ರಾಹ** | - ಹೇಳಿದನು (ಮತ್ತು) |
| **ಯೋಗಮ್** | - ಯೋಗವನ್ನು | **ಮನುಃ** | - ಮನುವು (ತನ್ನ ಪುತ್ರ) |
| **ವಿವಸ್ವತೇ** | - ಸೂರ್ಯನಿಗೆ | **ಇಕ್ಷ್ವಾಕವೇ** | - ರಾಜಾ ಇಕ್ಷ್ವಾಕುವಿಗೆ |
| **ಪ್ರೋಕ್ತವಾನ್** | - ಹೇಳಿದ್ದೆ | **ಅಬ್ರವೀತ್** | - ಹೇಳಿದನು. |

ಏವಮ್, ಪರಂಪರಾಪ್ರಾಪ್ತಮ್, ಇಮಮ್, ರಾಜರ್ಷಯಃ, ವಿದುಃ,
ಸಃ, ಕಾಲೇನ, ಇಹ, ಮಹತಾ, ಯೋಗಃ, ನಷ್ಟಃ, ಪರಂತಪ ॥೨॥

| | | | |
|---|---|---|---|
| **ಪರಂತಪ** | - ಹೇ ಪರಂತಪ ಅರ್ಜುನನೇ | **ಸಃ, ಯೋಗಃ** | - ಆ, ಯೋಗವು |
| **ಏವಮ್** | - ಈ ಪ್ರಕಾರವಾಗಿ | **ಮಹತಾ** | - ಬಹಳ |
| **ಪರಂಪರಾ-** | - ಪರಂಪರೆಯಿಂದ | **ಕಾಲೇನ** | - ಕಾಲದಿಂದ |
| **ಪ್ರಾಪ್ತಮ್** | ಪ್ರಾಪ್ತವಾದ | **ಇಹ** | - ಈ ಪೃಥ್ವೀಲೋಕದಲ್ಲಿ |
| **ಇಮಮ್** | - ಈ ಯೋಗವನ್ನು | **ನಷ್ಟಃ** | - ಲುಪ್ತಪ್ರಾಯವಾಗಿ ಹೋಯಿತು. |
| **ರಾಜರ್ಷಯಃ** | - ರಾಜರ್ಷಿಗಳು | | |
| **ವಿದುಃ** | - ತಿಳಿದರು (ಆದರೆ ನಂತರ) | | |

ಸಃ, ಏವ, ಅಯಮ್, ಮಯಾ, ತೇ, ಅದ್ಯ, ಯೋಗಃ, ಪ್ರೋಕ್ತಃ, ಪುರಾತನ,
ಭಕ್ತಃ, ಅಸಿ, ಮೇ, ಸಖಾ, ಚ, ಇತಿ, ರಹಸ್ಯಮ್, ಹಿ, ಏತತ್, ಉತ್ತಮಮ್ ॥೩॥

| | | | |
|---|---|---|---|
| **(ತ್ವಮ್)** | - ನೀನು | **ಅದ್ಯ** | - ಇಂದು |
| **ಮೇ** | - ನನ್ನ | **ಮಯಾ** | - ನನ್ನಿಂದ |
| **ಭಕ್ತಃ** | - ಭಕ್ತನು | **ತೇ** | - ನಿನಗೆ |
| **ಚ** | - ಮತ್ತು | **ಪ್ರೋಕ್ತಃ** | - ಹೇಳಲಾಗಿದೆ |
| **ಸಖಾ** | - ಪ್ರಿಯಸಖನು | **ಹಿ, ಏತತ್** | - ಏಕೆಂದರೆ, ಇದು |
| **ಅಸಿ** | - ಆಗಿರುವೆ | **ಉತ್ತಮಮ್** | - ಬಹಳ ಉತ್ತಮವಾದ |
| **ಇತಿ** | - ಆದ್ದರಿಂದ | **ರಹಸ್ಯಮ್** | - ರಹಸ್ಯವಾಗಿದೆ ಅರ್ಥಾತ್ ಗುಪ್ತವಾಗಿಡಲು |
| **ಸಃ, ಏವ** | - ಅದೇ | | |
| **ಅಯಮ್** | - ಈ | | |

| | |
|---|---|
| **ಪುರಾತನಃ** | - ಪುರಾತನವಾದ |
| **ಯೋಗಃ** | - ಯೋಗವನ್ನು |
| | ಯೋಗ್ಯವಾದ ವಿಷಯವಾಗಿದೆ. |

ಅಪರಮ್, ಭವತಃ, ಜನ್ಮ, ಪರಮ್, ಜನ್ಮ, ವಿವಸ್ವತಃ, ಕಥಮ್,
ಏತತ್, ವಿಜಾನೀಯಾಮ್, ತ್ವಮ್, ಆದೌ, ಪ್ರೋಕ್ತವಾನ್, ಇತಿ ॥೪॥

**ಶ್ರೀಕೃಷ್ಣನ ಈ ಮಾತುಗಳನ್ನು ಕೇಳಿ ಅರ್ಜುನ ಪ್ರಶ್ನಿಸಿದನು-**
**ಹೇ ಪರಮಾತ್ಮಾ -**

| | |
|---|---|
| **ಭವತಃ** | - ನಿನ್ನ |
| **ಜನ್ಮ** | - ಜನ್ಮ(ವಾದರೋ) |
| **ಅಪರಮ್** | - ಅರ್ವಾಚೀನ ಈಗಿನ ಕಾಲದ್ದಾಗಿದೆ (ಮತ್ತು) |
| **ವಿವಸ್ವತಃ** | - ಸೂರ್ಯನ |
| **ಜನ್ಮ** | - ಜನ್ಮವು |
| **ಪರಮ್** | - ಬಹಳ ಪ್ರಾಚೀನವಾಗಿದೆ ಎಂದರೆ-ಕಲ್ಪದ ಆದಿಯಲ್ಲಿ ಆಗಿ ಹೋಗಿತ್ತು |
| | (ಹಾಗಿರುವಾಗ) |
| **ತ್ವಮ್** | - ನೀನೇ |
| **ಆದೌ** | - ಕಲ್ಪದ ಆದಿಯಲ್ಲಿ (ಸೂರ್ಯನಿಗೆ) |
| **ಏತತ್** | - ಈ ಯೋಗವನ್ನು |
| **ಪ್ರೋಕ್ತವಾನ್** | - ಹೇಳಿದ್ದೆ (ಎಂದು ನಾನು) |
| **ಇತಿ** | - ಈ ವಿಷಯವನ್ನು |
| **ಕಥಮ್** | - ಹೇಗೆ |
| **ವಿಜಾನೀಯಾಮ್** | - ತಿಳಿದುಕೊಳ್ಳಲಿ |

ಬಹೂನಿ, ಮೇ, ವ್ಯತೀತಾನಿ, ಜನ್ಮಾನಿ, ತವ, ಚ, ಅರ್ಜುನ,
ತಾನಿ, ಅಹಮ್, ವೇದ, ಸರ್ವಾಣಿ, ನ, ತ್ವಮ್, ವೇತ್ಥ, ಪರಂತಪ ॥೫॥

**ಅದಕ್ಕೆ ಶ್ರೀಕೃಷ್ಣ ಪರಮಾತ್ಮ ಹೇಳಿದ -**

| | | | |
|---|---|---|---|
| **ಪರಂತಪ** | - ಹೇ ಪರಂತಪ | **ವ್ಯತೀತಾನಿ** | - ಆಗಿಹೋಗಿವೆ |
| **ಅರ್ಜುನ** | - ಅರ್ಜುನನೇ | **ತಾನಿ** | - ಆ |
| **ಮೇ** | - ನನ್ನ | **ಸರ್ವಾಣಿ** | - ಎಲ್ಲವು |
| **ಚ** | - ಮತ್ತು | **ತ್ವಮ್** | - ನಿನಗೆ |
| **ತವ** | - ನಿನ್ನ | **ನ, ವೇತ್ಥ** | - ಅರಿವಿಲ್ಲ |
| **ಬಹೂನಿ** | - ಅನೇಕ | **ಅಹಮ್** | - ನಾನು |
| **ಜನ್ಮಾನಿ** | - ಜನ್ಮಗಳು | **ವೇದ** | - ಅರಿತಿರುವೆ. |

ಅಜಃ, ಅಪಿ, ಸ್ವಾಮ್, ಅವ್ಯಯಾತ್ಮಾ, ಭೂತಾನಾಮ್, ಈಶ್ವರಃ, ಅಪಿ, ಸನ್,
ಪ್ರಕೃತಿಮ್, ಸ್ವಾಮ್, ಅಧಿಷ್ಠಾಯ, ಸಂಭವಾಮಿ, ಆತ್ಮಮಾಯಯಾ ॥೬॥

**ಹಾಗೂ ನನ್ನ ಜನ್ಮವು ಲೌಕಿಕ ಮನುಷ್ಯರಂತೆ ಅಲ್ಲ -**

| | | | |
|---|---|---|---|
| **(ಅಹಮ್)** | - ನಾನು | **ಸ್ವಾಮ್** | - ನನ್ನ |
| **ಅಜಃ** | - ಅಜನ್ಮಾ(ಮತ್ತು) | **ಪ್ರಕೃತಿಮ್** | - ಪ್ರಕೃತಿಯನ್ನು |

| | | | |
|---|---|---|---|
| **ಅವ್ಯಯಾತ್ಮಾ** | - ಅವಿನಾಶಿ ಸ್ವರೂಪನು | **ಅಧಿಷ್ಠಾಯ** | - ಅಧೀನ ಮಾಡಿಕೊಂಡು |
| **ಸನ್, ಅಪಿ** | - ಆಗಿದ್ದರೂ | | |
| **ಭೂತಾನಾಮ್** | - ಸಮಸ್ತ ಪ್ರಾಣಿಗಳ | **ಆತ್ಮಮಾಯಯಾ** | - ನನ್ನ ಯೋಗ ಮಾಯೆಯಿಂದ |
| **ಈಶ್ವರಃ** | - ಈಶ್ವರ | | |
| **ಸನ್, ಅಪಿ** | - ಆಗಿದ್ದುಕೊಂಡು ಕೂಡ | **ಸಂಭವಾಮಿ** | - ಪ್ರಕಟನಾಗುತ್ತೇನೆ. |

ಯದಾ, ಯದಾ, ಹಿ, ಧರ್ಮಸ್ಯ, ಗ್ಲಾನಿಃ, ಭವತಿ, ಭಾರತ,
ಅಭ್ಯುತ್ಥಾನಮ್, ಅಧರ್ಮಸ್ಯ, ತದಾ, ಆತ್ಮಾನಮ್, ಸೃಜಾಮಿ, ಅಹಮ್ ॥೭॥

| | | | |
|---|---|---|---|
| **ಭಾರತ** | - ಹೇ ಭರತವಂಶೀಯ ಅರ್ಜುನನೇ | **ತದಾ, ಹಿ** | - ಆಗಾಗಲೇ |
| | | **ಅಹಮ್** | - ನಾನು |
| **ಯದಾ, ಯದಾ** | - ಯಾವಾಗ-ಯಾವಾಗ | **ಆತ್ಮಾನಮ್** | - ನನ್ನ ರೂಪವನ್ನು |
| **ಧರ್ಮಸ್ಯ** | - ಧರ್ಮದ | **ಸೃಜಾಮಿ** | - ರಚಿಸುತ್ತೇನೆ ಅರ್ಥಾತ್ ಸಾಕಾರರೂಪದಿಂದ ಜನರ ಮುಂದೆ ಪ್ರಕಟನಾಗುತ್ತೇನೆ. |
| **ಗ್ಲಾನಿಃ** | - ಹಾನಿಯು (ಮತ್ತು) | | |
| **ಅಧರ್ಮಸ್ಯ** | - ಅಧರ್ಮದ | | |
| **ಅಭ್ಯುತ್ಥಾನಮ್** | - ವೃದ್ಧಿಯು | | |
| **ಭವತಿ** | - ಆಗುತ್ತದೋ | | |

ಪರಿತ್ರಾಣಾಯ, ಸಾಧೂನಾಮ್, ವಿನಾಶಾಯ, ಚ, ದುಷ್ಕೃತಾಮ್,
ಧರ್ಮಸಂಸ್ಥಾಪನಾರ್ಥಾಯ, ಸಂಭವಾಮಿ, ಯುಗೇ, ಯುಗೇ ॥೮॥

**ಏಕೆಂದರೆ-**

| | | | |
|---|---|---|---|
| **ಸಾಧೂನಾಮ್** | - ಸಾಧುಪುರುಷರನ್ನು | **ಚ** | - ಮತ್ತು |
| **ಪರಿತ್ರಾಣಾಯ** | - ಉದ್ಧಾರ ಮಾಡುವುದಕ್ಕಾಗಿ | **ಧರ್ಮಸಂಸ್ಥಾಪ-ನಾರ್ಥಾಯ** | - ಧರ್ಮವನ್ನು ಚೆನ್ನಾಗಿ ಸ್ಥಾಪಿಸುವುದಕ್ಕಾಗಿ (ನಾನು) |
| **ದುಷ್ಕೃತಾಮ್** | - ಪಾಪಕರ್ಮ ಮಾಡುವವರನ್ನು | **ಯುಗೇ, ಯುಗೇ** | - ಯುಗ ಯುಗಗಳಲ್ಲಿ |
| **ವಿನಾಶಾಯ** | - ನಾಶಪಡಿಸಲು | **ಸಂಭವಾಮಿ** | - ಪ್ರಕಟವಾಗುತ್ತೇನೆ. |

ಜನ್ಮ, ಕರ್ಮ, ಚ, ಮೇ, ದಿವ್ಯಮ್, ಏವಮ್, ಯಃ, ವೇತ್ತಿ, ತತ್ತ್ವತಃ,
ತ್ಯಕ್ತ್ವಾ, ದೇಹಮ್, ಪುನಃ ಜನ್ಮ ನ, ಏತಿ, ಮಾಮ್, ಏತಿ, ಸಃ, ಅರ್ಜುನ ॥೯॥

**ಆದುದರಿಂದ -**

| | | | |
|---|---|---|---|
| **ಅರ್ಜುನ** | - ಹೇ ಅರ್ಜುನನೇ | **ವೇತ್ತಿ** | - ತಿಳಿಯುತ್ತಾನೋ |
| **ಮೇ, ಜನ್ಮ** | - ನನ್ನ ಜನ್ಮ | **ಸಃ** | - ಅವನು |
| **ಚ** | - ಮತ್ತು | **ದೇಹಮ್** | - ಶರೀರವನ್ನು |
| **ಕರ್ಮ** | - ಕರ್ಮಗಳು | **ತ್ಯಕ್ತ್ವಾ** | - ತ್ಯಾಗಮಾಡಿ |
| **ದಿವ್ಯಮ್** | - ದಿವ್ಯ ಅರ್ಥಾತ್ | **ಪುನಃ** | - ಮತ್ತೆ |

| | | | |
|---|---|---|---|
| | ನಿರ್ಮಲ ಮತ್ತು ಅಲೌಕಿಕವಾಗಿವೆ | **ಜನ್ಮ** | - ಜನ್ಮವನ್ನು |
| **ಏವಮ್** | - ಈ ಪ್ರಕಾರವಾಗಿ | **ನ, ಏತಿ** | - ಪಡೆಯುವುದಿಲ್ಲ (ಆದರೆ) |
| **ಯಃ** | - ಯಾವ ಮನುಷ್ಯನು | **ಮಾಮ್** | - ನನ್ನ(ನ್ನೇ) |
| **ತತ್ತ್ವತಃ** | - ತತ್ತ್ವದಿಂದ* | **ಏತಿ** | - ಪಡೆಯುತ್ತಾನೆ. |

ವೀತರಾಗಭಯಕ್ರೋಧಾಃ, ಮನ್ಮಯಾಃ, ಮಾಮ್, ಉಪಾಶ್ರಿತಾಃ,
ಬಹವಃ, ಜ್ಞಾನತಪಸಾ, ಪೂತಾಃ, ಮದ್ಭಾವಮ್, ಆಗತಾಃ ॥೧೦॥

**ಮತ್ತು ಎಲೈ ಅರ್ಜುನ! ಹಿಂದೆಯೂ ಸಹ -**

| | | | |
|---|---|---|---|
| **ವೀತರಾಗ-** | - ಯಾರ ರಾಗ, ಭಯ | **ಮಾಮ್** | - ನನ್ನ |
| **ಭಯಕ್ರೋಧಾಃ** | ಮತ್ತು ಕ್ರೋಧ ಸರ್ವಥಾ ನಷ್ಟವಾಗಿದೆಯೋ (ಮತ್ತು) | **ಉಪಾಶ್ರಿತಾಃ** | - ಆಶ್ರಿತರಾಗಿರುವ |
| | | **ಬಹವಃ** | - ಅನೇಕ ಭಕ್ತರು |
| | | **ಜ್ಞಾನತಪಸಾ** | - ಜ್ಞಾನರೂಪ ತಪಸ್ಸಿನಿಂದ |
| **ಮನ್ಮಯಾಃ** | - ಯಾರು ನನ್ನಲ್ಲಿ ಅನನ್ಯ ಪ್ರೇಮಪೂರ್ವಕ ಸ್ಥಿತರಾಗಿದ್ದಾರೋ (ಅಂತಹ) | **ಪೂತಾಃ** | - ಪವಿತ್ರರಾಗಿ |
| | | **ಮದ್ಭಾವಮ್** | - ನನ್ನ ಸ್ವರೂಪವನ್ನು |
| | | **ಆಗತಾಃ** | - ಹೊಂದಿದ್ದಾರೆ. |

ಯೇ, ಯಥಾ, ಮಾಮ್, ಪ್ರಪದ್ಯಂತೇ, ತಾನ್, ತಥಾ, ಏವ, ಭಜಾಮಿ,
ಅಹಮ್, ಮಮ,ವರ್ತ್ಮ, ಅನುವರ್ತಂತೇ, ಮನುಷ್ಯಾಃ, ಪಾರ್ಥ, ಸರ್ವಶಃ ॥೧೧॥

| | | | |
|---|---|---|---|
| **ಪಾರ್ಥ** | - ಹೇ ಅರ್ಜುನನೇ | **ಪ್ರಪದ್ಯಂತೇ** | - ಭಜಿಸುತ್ತಾರೋ |
| **ಯೇ** | - ಯಾವ ಭಕ್ತರು | **ಅಹಮ್** | - ನಾನು (ಕೂಡ) |
| **ಮಾಮ್** | - ನನ್ನನ್ನು | **ತಾನ್** | - ಅವರನ್ನು |
| **ಯಥಾ** | - ಯಾವ ಭಾವದಿಂದ | **ತಥಾ, ಏವ** | - ಅದೇ ಭಾವದಿಂದ |
| **ಭಜಾಮಿ** | - ಭಜಿಸುತ್ತೇನೆ (ಏಕೆಂದರೆ) | **ಮಮ, ವರ್ತ್ಮ** | - ನನ್ನ ಮಾರ್ಗವನ್ನೇ |
| | | **ಅನುವರ್ತಂತೇ** | - ಅನುಸರಣೆ ಮಾಡುತ್ತಾರೆ. |
| **ಮನುಷ್ಯಾಃ** | - ಎಲ್ಲ ಮನುಷ್ಯರು | | |
| **ಸರ್ವಶಃ** | - ಎಲ್ಲ ಪ್ರಕಾರದಿಂದ | | |

ಕಾಂಕ್ಷಂತಃ, ಕರ್ಮಣಾಮ್, ಸಿದ್ಧಿಮ್, ಯಜಂತೇ, ಇಹ, ದೇವತಾಃ,
ಕ್ಷಿಪ್ರಮ್, ಹಿ, ಮಾನುಷೇ, ಲೋಕೇ, ಸಿದ್ಧಿಃ, ಭವಂತಿ, ಕರ್ಮಜಾ ॥೧೨॥

**ಯಾರು ನನ್ನನ್ನು ಯಥಾರ್ಥವಾಗಿ ತಿಳಿದಿಲ್ಲವೋ ಅವರು -**

| | | | |
|---|---|---|---|
| **ಇಹ** | - ಈ | **ಹಿ** | - ಏಕೆಂದರೆ (ಅವರಿಗೆ) |
| **ಮಾನುಷೇ ಲೋಕೇ** | - ಮನುಷ್ಯ ಲೋಕದಲ್ಲಿ | **ಕರ್ಮಜಾ** | - ಕರ್ಮದಿಂದ |

| | | | |
|---|---|---|---|
| **ಕರ್ಮಣಾಮ್** | - ಕರ್ಮಗಳ | | ಉತ್ಪನ್ನವಾಗುವ |
| **ಸಿದ್ಧಿಮ್** | - ಫಲವನ್ನು | **ಸಿದ್ಧಿಃ** | - ಸಿದ್ಧಿಯು |
| **ಕಾಂಕ್ಷಂತಃ** | - ಬಯಸುವ (ಜನರು) | **ಕ್ಷಿಪ್ರಮ್** | - ಶೀಘ್ರವಾಗಿ |
| **ದೇವತಾಃ** | - ದೇವತೆಗಳ | **ಭವತಿ** | - ಸಿಗುತ್ತದೆ. |
| **ಯಜಂತೇ** | - ಪೂಜೆ ಮಾಡುತ್ತಾರೆ | | |

ಚಾತುರ್ವರ್ಣ್ಯಮ್, ಮಯಾ, ಸೃಷ್ಟಮ್, ಗುಣಕರ್ಮವಿಭಾಗಶಃ, ತಸ್ಯ,
ಕರ್ತಾರಮ್, ಅಪಿ, ಮಾಮ್, ವಿದ್ಧಿ, ಅಕರ್ತಾರಮ್, ಅವ್ಯಯಮ್ ॥೧೩॥

**ಹಾಗೂ ಎಲೈ ಅರ್ಜುನ -**

| | | | |
|---|---|---|---|
| **ಚಾತುರ್ವರ್ಣ್ಯಮ್** | - ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಈ ನಾಲ್ಕೂ ವರ್ಣಗಳ ಸಮೂಹವು | **ತಸ್ಯ** | - ಆ (ಸೃಷ್ಟಿರಚನಾದಿ ಕರ್ಮಗಳ) |
| | | **ಕರ್ತಾರಮ್** | - ಕರ್ತೃವಾಗಿದ್ದರೂ |
| | | **ಅಪಿ, ಮಾಮ್** | - ಕೂಡ, ನನ್ನನ್ನು |
| **ಗುಣಕರ್ಮವಿಭಾಗಶಃ** | - ಗುಣ ಮತ್ತು ಕರ್ಮಗಳ ವಿಭಾಗ ಪೂರ್ವಕವಾಗಿ | **ಅವ್ಯಯಮ್** | - ಅವಿನಾಶಿಯಾದ ಪರಮೇಶ್ವರನನ್ನು (ನೀನು ವಾಸ್ತವವಾಗಿ) |
| **ಮಯಾ** | - ನನ್ನ ಮೂಲಕ | **ಅಕರ್ತಾರಮ್** | - ಅಕರ್ತಾ(ನೆಂದೇ) |
| **ಸೃಷ್ಟಮ್** | - ರಚಿಸಲ್ಪಟ್ಟಿದೆ (ಈ ಪ್ರಕಾರವಾಗಿ) | **ವಿದ್ಧಿ** | - ತಿಳಿ. |

ನ, ಮಾಮ್, ಕರ್ಮಾಣಿ, ಲಿಂಪಂತಿ,ನ, ಮೇ, ಕರ್ಮಫಲೇ, ಸ್ಪೃಹಾ,
ಇತಿ, ಮಾಮ್, ಯಃ, ಅಭಿಜಾನಾತಿ, ಕರ್ಮಭಿಃ, ನ, ಸಃ, ಬಧ್ಯತೇ ॥೧೪॥

| | | | |
|---|---|---|---|
| **ಕರ್ಮಫಲೇ** | - ಕರ್ಮಗಳ ಫಲದಲ್ಲಿ | **ಮಾಮ್** | - ನನಗೆ |
| **ಮೇ** | - ನನಗೆ | **ಕರ್ಮಾಣಿ** | - ಕರ್ಮಗಳು |
| **ಸ್ಪೃಹಾ** | - ಸ್ಪೃಹೆ | **ನ, ಲಿಂಪಂತಿ** | - ಅಂಟಿಕೊಳ್ಳುವುದಿಲ್ಲ |
| **ನ** | - ಇಲ್ಲವಾಗಿದೆ (ಆದ್ದರಿಂದ) | **ಇತಿ** | - ಈ ಪ್ರಕಾರವಾಗಿ |
| | | **ಯಃ** | - ಯಾರು |
| **ಮಾಮ್** | - ನನ್ನನ್ನು | **ಸಃ** | - ಅವನು (ಕೂಡ) |
| **ಅಭಿಜಾನಾತಿ** | - ತತ್ತ್ವದಿಂದ ತಿಳಿದುಕೊಳ್ಳುತ್ತಾನೋ | **ಕರ್ಮಭಿಃ** | - ಕರ್ಮಗಳಿಂದ |
| | | **ನ, ಬಧ್ಯತೇ** | - ಬಂಧಿತನಾಗುವುದಿಲ್ಲ |

ಏವಮ್, ಜ್ಞಾತ್ವಾ, ಕೃತಮ್, ಕರ್ಮ, ಪೂರ್ವೈಃ, ಅಪಿ, ಮುಮುಕ್ಷುಭಿಃ,
ಕುರು, ಕರ್ಮ, ಏವ, ತಸ್ಮಾತ್, ತ್ವಮ್, ಪೂರ್ವೈಃ ಪೂರ್ವತರಮ್, ಕೃತಮ್ ॥೧೫॥

| | | | |
|---|---|---|---|
| **ಪೂರ್ವೈಃ** | - ಪೂರ್ವಕಾಲದ | **ತಸ್ಮಾತ್** | - ಆದ್ದರಿಂದ |

**ಮುಮುಕ್ಷುಭಿಃ** - ಮುಮುಕ್ಷುಗಳಿಂದ
**ಅಪಿ** - ಕೂಡ
**ಏವಮ್** - ಈ ಪ್ರಕಾರವಾಗಿ
**ಜ್ಞಾತ್ವಾ** - ತಿಳಿದು
**ಕರ್ಮ** - ಕರ್ಮಗಳು
**ಕೃತಮ್** - ಮಾಡಲ್ಪಟ್ಟಿವೆ
**ತ್ವಮ್** - ನೀನು (ಕೂಡ)
**ಪೂರ್ವೈಃ** - ಪೂರ್ವಜರ ಮೂಲಕ
**ಪೂರ್ವತರಮ್** - ಸದಾಕಾಲ
**ಕೃತಮ್** ಮಾಡಲ್ಪಡುತ್ತಾ ಬಂದಿರುವ, ಕರ್ಮ
**ಏವ** - ಕರ್ಮಗಳನ್ನೇ
**ಕುರು** - ಮಾಡು.

ಕಿಮ್, ಕರ್ಮ, ಕಿಮ್, ಅಕರ್ಮ, ಇತಿ, ಕವಯಃ, ಅಪಿ, ಅತ್ರ, ಮೋಹಿತಾಃ, ತತ್,
ತೇ, ಕರ್ಮ, ಪ್ರವಕ್ಷ್ಯಾಮಿ, ಯತ್, ಜ್ಞಾತ್ವಾ, ಮೋಕ್ಷ್ಯಸೇ, ಅಶುಭಾತ್ ॥೧೬॥

**ಆದರೆ -**

**ಕರ್ಮ** - ಕರ್ಮವು
**ಕಿಮ್** - ಯಾವುದು (ಮತ್ತು)
**ಅಕರ್ಮ** - ಅಕರ್ಮವು
**ಕಿಮ್** - ಯಾವುದು
**ಇತಿ** - ಈ ಪ್ರಕಾರವಾಗಿ
**ಅತ್ರ** - ಇದರ ನಿರ್ಣಯ ಮಾಡುವಲ್ಲಿ
**ಕವಯಃ, ಅಪಿ** - ಬುದ್ಧಿವಂತರಾದ ಪುರುಷರು ಸಹ
**ಮೋಹಿತಾಃ** - ಮೋಹಿತರಾಗುತ್ತಾರೆ (ಆದ್ದರಿಂದ)
**ತತ್** - ಆ
**ಕರ್ಮ** - ಕರ್ಮತತ್ತ್ವವನ್ನು (ನಾನು)
**ತೇ** - ನಿನಗೆ
**ಪ್ರವಕ್ಷ್ಯಾಮಿ** - ಚೆನ್ನಾಗಿ ತಿಳಿಯ ಹೇಳುವೆನು
**ಯತ್** - ಯಾವುದನ್ನು (ಅದನ್ನು)
**ಜ್ಞಾತ್ವಾ** - ತಿಳಿದು (ನೀನು)
**ಅಶುಭಾತ್** - ಅಶುಭದಿಂದ ಅಂದರೆ ಕರ್ಮ ಬಂಧದಿಂದ
**ಮೋಕ್ಷ್ಯಸೇ** - ಮುಕ್ತನಾಗಿ ಹೋಗುವೆ.

ಕರ್ಮಣಃ, ಹಿ, ಅಪಿ, ಬೋದ್ಧವ್ಯಮ್, ಬೋದ್ಧವ್ಯಮ್, ಚ, ವಿಕರ್ಮಣಃ,
ಅಕರ್ಮಣ, ಚ, ಬೋದ್ಧವ್ಯಮ್, ಗಹನಾ, ಕರ್ಮಣಃ, ಗತಿಃ ॥೧೭॥

**ಕರ್ಮಣಃ** - ಕರ್ಮದ (ಸ್ವರೂಪವನ್ನೂ)
**ಅಪಿ** - ಕೂಡ
**ಬೋದ್ಧವ್ಯಮ್** - ತಿಳಿಯಬೇಕು
**ಚ** - ಮತ್ತು
**ಅಕರ್ಮಣಃ** - ಅಕರ್ಮದ (ಸ್ವರೂಪವನ್ನೂ)
**ಬೋದ್ಧವ್ಯಮ್** - ತಿಳಿಯಬೇಕು
**ಚ** - ಹಾಗೂ
**ವಿಕರ್ಮಣಃ** - ವಿಕರ್ಮದ (ಸ್ವರೂಪವನ್ನೂ ಸಹ)
**ಬೋದ್ಧವ್ಯಮ್** - ತಿಳಿಯಬೇಕು
**ಹಿ** - ಏಕೆಂದರೆ
**ಕರ್ಮಣಃ** - ಕರ್ಮದ
**ಗತಿಃ** - ಗತಿಯು
**ಗಹನಾ** - ಗಹನವಾಗಿದೆ.

ಕರ್ಮಣಿ, ಅಕರ್ಮ, ಯಃ, ಪಶ್ಯೇತ್, ಅಕರ್ಮಣಿ, ಚ, ಕರ್ಮ, ಯಃ,
ಸಃ, ಬುದ್ಧಿಮಾನ್, ಮನುಷ್ಯೇಷು, ಸಃ, ಯುಕ್ತಃ, ಕೃತ್ಸ್ನಕರ್ಮಕೃತ್ ॥೧೮॥

| | | | |
|---|---|---|---|
| **ಯಃ** | - ಯಾವ ಮನುಷ್ಯನು | **ಪಶ್ಯೇತ** | - ನೋಡುತ್ತಾನೋ |
| **ಕರ್ಮಣಿ** | - ಕರ್ಮದಲ್ಲಿ | **ಸಃ** | - ಅವನು |
| **ಅಕರ್ಮ** | - ಅಕರ್ಮವನ್ನು | **ಮನುಷ್ಯೇಷು** | - ಮನುಷ್ಯರಲ್ಲಿ |
| **ಪಶ್ಯೇತ್** | - ನೋಡುತ್ತಾನೋ | **ಬುದ್ಧಿಮಾನ್** | - ಬುದ್ಧಿವಂತನಾಗಿದ್ದಾನೆ (ಮತ್ತು) |
| **ಚ** | - ಮತ್ತು | | |
| **ಯಃ** | - ಯಾರು | **ಸಃ, ಯುಕ್ತಃ** | - ಆ ಯೋಗಿಯು |
| **ಅಕರ್ಮಣಿ** | - ಅಕರ್ಮದಲ್ಲಿ | **ಕೃತ್ಸ್ನಕರ್ಮಕೃತ್** | - ಸಮಸ್ತ ಕರ್ಮಗಳನ್ನು ಮಾಡುವವನಾಗಿದ್ದಾನೆ. |
| **ಕರ್ಮ** | - ಕರ್ಮವನ್ನು | | |

ಯಸ್ಯ, ಸರ್ವೇ, ಸಮಾರಂಭಾಃ, ಕಾಮಸಂಕಲ್ಪವರ್ಜಿತಾಃ,
ಜ್ಞಾನಾಗ್ನಿದಗ್ಧಕರ್ಮಾಣಮ್, ತಮ್, ಆಹುಃ, ಪಂಡಿತಮ್, ಬುಧಾಃ ॥೧೯॥

**ಮತ್ತು ಎಲೈ ಅರ್ಜುನ -**

| | | | |
|---|---|---|---|
| **ಯಸ್ಯ** | - ಯಾರ | **ಕರ್ಮಾಣಮ್** | ಕರ್ಮಗಳು ಜ್ಞಾನರೂಪೀ ಅಗ್ನಿಯ ಮೂಲಕ ಭಸ್ಮವಾಗಿ ಹೋಗಿವೆಯೋ |
| **ಸರ್ವೇ** | - ಸಂಪೂರ್ಣ | | |
| **ಸಮಾರಂಭಾಃ** | - (ಶಾಸ್ತ್ರಸಮ್ಮತವಾದ) ಕರ್ಮಗಳು | | |
| **ಕಾಮಸಂಕಲ್ಪ-ವರ್ಜಿತಾಃ** | - ಕಾಮನೆ ಮತ್ತು ಸಂಕಲ್ಪವಿಲ್ಲದೆ ಇರುತ್ತವೆಯೋ (ಹಾಗೂ) | **ತಮ್** | - ಆ ಮಹಾ ಪುರುಷನನ್ನು |
| | | **ಬುಧಾಃ** | - ಜ್ಞಾನಿಜನರೂ ಸಹ |
| | | **ಪಂಡಿತಮ್** | - ಪಂಡಿತನೆಂದು |
| **ಜ್ಞಾನಾಗ್ನಿದಗ್ಧ-** | - ಯಾರ ಸಮಸ್ತ | **ಆಹುಃ** | - ಹೇಳುತ್ತಾರೆ. |

ತ್ಯಕ್ತ್ವಾ, ಕರ್ಮಫಲಾಸಂಗಮ್, ನಿತ್ಯತೃಪ್ತಃ, ನಿರಾಶ್ರಯಃ,
ಕರ್ಮಣಿ, ಅಭಿಪ್ರವೃತ್ತಃ, ಅಪಿ, ನ, ಏವ, ಕಿಂಚಿತ್, ಕರೋತಿ, ಸಃ, ॥೨೦॥

**ಮತ್ತು ಯಾವ ಪುರುಷನು -**

| | | | |
|---|---|---|---|
| **ಕರ್ಮಫಲಾ-ಸಂಗಮ್** | - ಯಾವ ಪುರುಷನು ಸಮಸ್ತ ಕರ್ಮಗಳಲ್ಲಿ ಮತ್ತು ಅವುಗಳ ಫಲದಲ್ಲಿ ಆಸಕ್ತಿಯನ್ನು | | ನಿತ್ಯತೃಪ್ತನಾಗಿದ್ದಾನೆಯೋ |
| | | **ಸಃ** | - ಅವನು |
| | | **ಕರ್ಮಣಿ** | - ಕರ್ಮಗಳಲ್ಲಿ |
| **ತ್ಯಕ್ತ್ವಾ** | - ಸರ್ವಥಾ ತ್ಯಾಗಮಾಡಿ | **ಅಭಿಪ್ರವೃತ್ತಃ, ಅಪಿ** | - ಚೆನ್ನಾಗಿ ವರ್ತಿಸುತ್ತಿದ್ದರೂ ಕೂಡ (ವಾಸ್ತವವಾಗಿ) |
| **ನಿರಾಶ್ರಯಃ** | - ಜಗತ್ತಿನ ಆಶ್ರಯದಿಂದ ರಹಿತನಾಗಿದ್ದಾನೆಯೋ (ಮತ್ತು) | **ನ, ಏವ-** | - ಏನನ್ನು |
| | | **ಕಿಂಚಿತ್, ಕರೋತಿ** | ಮಾಡುವುದಿಲ್ಲ |
| **ನಿತ್ಯತೃಪ್ತಃ** | - ಪರಮಾತ್ಮನಲ್ಲಿ | | |

ನಿರಾಶೀಃ, ಯತಚಿತ್ತಾತ್ಮಾ, ತ್ಯಕ್ತಸರ್ವಪರಿಗ್ರಹಃ, ಶಾರೀರಮ್,
ಕೇವಲಮ್, ಕರ್ಮ, ಕುರ್ವನ್, ನ, ಆಪ್ನೋತಿ, ಕಿಲ್ಬಿಷಮ್ ॥೨೧॥

**ಮತ್ತು -**

| | |
|---|---|
| **ನಿರಾಶೀಃ** | - ಯಾರಿಗೆ ಯಾವುದೇ ಪ್ರಕಾರದ ಆಸೆ ಇಲ್ಲವೋ |
| **ಯತಚಿತ್ತಾತ್ಮಾ** | - ಯಾರು ಅಂತಃಕರಣ ಮತ್ತು ಇಂದ್ರಿಯಗಳ ಸಹಿತ ಶರೀರವನ್ನು ಗೆದ್ದಿರುವನೋ, |
| **ತ್ಯಕ್ತಸರ್ವ-ಪರಿಗ್ರಹಃ** | - ಯಾರು ಸಮಸ್ತ ಭೋಗ ಸಾಮಗ್ರಿಗಳನ್ನು ತ್ಯಜಿಸಿದ್ದಾನೋ (ಅಂತಹ ಸಾಂಖ್ಯಯೋಗಿ) |
| **ಕೇವಲಮ್** | - ಕೇವಲ |
| **ಶಾರೀರಮ್** | - ಶರೀರ ಸಂಬಂಧವಾದ |
| **ಕರ್ಮ** | - ಕರ್ಮಗಳನ್ನು |
| **ಕುರ್ವನ್** | - ಮಾಡುತ್ತಾ ಇದ್ದರೂ |
| **ಕಿಲ್ಬಿಷಮ್** | - ಪಾಪವನ್ನು |
| **ನ, ಆಪ್ನೋತಿ** | - ಪಡೆಯುವುದಿಲ್ಲ. |

ಯದೃಚ್ಛಾಲಾಭಸಂತುಷ್ಟಃ, ದ್ವಂದ್ವಾತೀತಃ, ವಿಮತ್ಸರಃ,
ಸಮಃ, ಸಿದ್ಧೌ ಅಸಿದ್ಧೌ ಚ, ಕೃತ್ವಾ, ಅಪಿ, ನ, ನಿಬಧ್ಯತೇ ॥೨೨॥

**ಮತ್ತು -**

| | |
|---|---|
| **ಯದೃಚ್ಛಾ-ಲಾಭ ಸಂತುಷ್ಟಃ** | - ಯಾವ ಮನುಷ್ಯನು ಇಚ್ಛಿಸದೆ ತಾನಾಗಿ ಪ್ರಾಪ್ತವಾದ ಪದಾರ್ಥದಲ್ಲಿ ಸದಾ ಸಂತುಷ್ಟನಾಗಿರುತ್ತಾನೆಯೋ |
| **ವಿಮತ್ಸರಃ** | - ಯಾರಲ್ಲಿ ಈರ್ಷ್ಯೆಯು ಸರ್ವಥಾ ಅಭಾವವಾಗಿ ಹೋಗಿದೆಯೋ |
| **ದ್ವಂದ್ವಾತೀತಃ** | - ಯಾರು ಹರ್ಷ-ಶೋಕ ಮೊದಲಾದ ದ್ವಂದ್ವಗಳಿಂದ ಸರ್ವಥಾ ಅತೀತನಾಗಿದ್ದಾನೋ (ಅಂತಹ) |
| **ಸಿದ್ಧೌ** | - ಸಿದ್ಧಿ |
| **ಚ** | - ಮತ್ತು |
| **ಅಸಿದ್ಧೌ** | - ಅಸಿದ್ಧಿಯಲ್ಲಿ |
| **ಸಮಃ** | - ಸಮಚಿತ್ತನಾಗಿರುವ ಕರ್ಮಯೋಗಿ (ಕರ್ಮವನ್ನು) |
| **ಕೃತ್ವಾ ಅಪಿ** | - ಮಾಡುತ್ತಿದ್ದರೂ |
| **ನ ನಿಬಧ್ಯತೇ** | - ಅವುಗಳಿಂದ ಬಂಧಿತನಾಗುವುದಿಲ್ಲ. |

ಗತಸಂಗಸ್ಯ, ಮುಕ್ತಸ್ಯ, ಜ್ಞಾನಾವಸ್ಥಿತಚೇತಸಃ, ಯಜ್ಞಾಯ,
ಆಚರತಃ, ಕರ್ಮ, ಸಮಗ್ರಮ್, ಪ್ರವಿಲೀಯತೇ ॥೨೩॥

**ಏಕೆಂದರೆ -**

| | | | |
|---|---|---|---|
| **ಗತಸಂಗಸ್ಯ** | - ಯಾರ ಆಸಕ್ತಿಯು ಸರ್ವಥಾ ನಷ್ಟವಾಗಿ ಹೋಗಿದೆಯೋ | **ಜ್ಞಾನಾವಸ್ಥಿತ-ಚೇತಸಃ** | - ಯಾರ ಚಿತ್ತವು ನಿರಂತರವಾಗಿ ಪರಮಾತ್ಮನ ಜ್ಞಾನದಲ್ಲಿ ನೆಲೆ ನಿಂತಿರುತ್ತದೋ (ಇಂತಹ ಕೇವಲ) |
| **ಮುಕ್ತಸ್ಯ** | - ಯಾರು ದೇಹಾಭಿಮಾನ ಮತ್ತು ಮಮತಾ ರಹಿತನಾಗಿ ಹೋಗಿದ್ದಾನೋ | | |
| **ಯಜ್ಞಾಯ** | - ಯಜ್ಞಸಂಪಾದನೆಗಾಗಿ | **ಕರ್ಮ** | - ಕರ್ಮವು |
| **ಆಚರತಃ** | - ಕರ್ಮಮಾಡುವ ಮನುಷ್ಯನ | **ಪ್ರವಿಲೀಯತೇ** | - ಚೆನ್ನಾಗಿ ವಿಲೀನವಾಗಿ ಹೋಗುತ್ತದೆ. |
| **ಸಮಗ್ರಮ್** | - ಸಂಪೂರ್ಣ | | |

ಬ್ರಹ್ಮ, ಅರ್ಪಣಮ್, ಬ್ರಹ್ಮ, ಹವಿಃ, ಬ್ರಹ್ಮಾಗ್ನೌ, ಬ್ರಹ್ಮಣಾ, ಹುತಮ್,
ಬ್ರಹ್ಮ, ಏವ, ತೇನ, ಗಂತವ್ಯಮ್, ಬ್ರಹ್ಮಕರ್ಮಸಮಾಧಿನಾ ॥೨೪॥

**ಯಜ್ಞಕ್ಕಾಗಿಯೇ ಆಚರಣೆ ಮಾಡುವವರಲ್ಲಿ ಈ ಭಾವನೆಯಿಂದಲೇ ಕೆಲವರು ಯಜ್ಞ ಮಾಡುತ್ತಾರೆ -**

| | | | |
|---|---|---|---|
| **ಅರ್ಪಣಮ್** | - (ಯಾವ ಯಜ್ಞದಲ್ಲಿ) ಅರ್ಪಣ ಅಂದರೆ ಸ್ರುವ ಮೊದಲಾದುವು (ಸಹ) | **ಬ್ರಹ್ಮಾಗ್ನೌ** | - ಬ್ರಹ್ಮರೂಪವಾದ ಅಗ್ನಿಯಲ್ಲಿ |
| **ಬ್ರಹ್ಮ** | - ಬ್ರಹ್ಮವಾಗಿದೆಯೋ (ಮತ್ತು) | **ಹುತಮ್** | - ಆಹುತಿ ಕೊಡುವ ರೂಪವಾದ ಕ್ರಿಯೆಯು ಸಹ ಬ್ರಹ್ಮವಾಗಿದೆ |
| **ಹವಿಃ** | - ಹವನ ಮಾಡಲ್ಪಡಲು ಯೋಗ್ಯವಾದ ದ್ರವ್ಯವೂ (ಸಹ) | **ತೇನ** | - ಆ |
| | | **ಬ್ರಹ್ಮಕರ್ಮ-ಸಮಾಧಿನಾ** | - ಬ್ರಹ್ಮಕರ್ಮದಲ್ಲಿ ಸ್ಥಿತನಾಗಿರುವ ಯೋಗಿಯ ಮೂಲಕ |
| **ಬ್ರಹ್ಮ** | - ಬ್ರಹ್ಮವಾಗಿದೆಯೋ (ಹಾಗೂ) | **ಗಂತವ್ಯಮ್** | - ಪಡೆಯಲು ಯೋಗ್ಯವಾದ (ಫಲವೂ ಸಹ) |
| **ಬ್ರಹ್ಮಣಾ** | - ಬ್ರಹ್ಮರೂಪನಾದ ಕರ್ತೃವಿನ ಮೂಲಕ | **ಬ್ರಹ್ಮ** | - ಬ್ರಹ್ಮವೇ |
| | | **ಏವ** | - ಆಗಿದೆ. |

ದೈವಮ್, ಏವ, ಅಪರೇ, ಯಜ್ಞಮ್, ಯೋಗಿನಃ, ಪರ್ಯುಪಾಸತೇ,
ಬ್ರಹ್ಮಾಗ್ನೌ, ಅಪರೇ, ಯಜ್ಞಮ್, ಯಜ್ಞೇನ, ಏವ, ಉಪಜುಹ್ವತಿ ॥೨೫॥

ಮತ್ತು -

| | | | |
|---|---|---|---|
| ಅಪರೇ | - ಬೇರೆ | ಬ್ರಹ್ಮಾಗ್ನೌ | - ಪರಬ್ರಹ್ಮ ಪರಮಾತ್ಮ ರೂಪವಾದ ಅಗ್ನಿಯಲ್ಲಿ |
| ಯೋಗಿನಃ | - ಯೋಗಿಜನರು | ಯಜ್ಞೇನ, ಏವ | - (ಅಭೇದ ದರ್ಶನರೂಪೀ) ಯಜ್ಞದ ಮೂಲಕವೇ |
| ದೈವಮ್ | - ದೇವತೆಗಳ ಪೂಜಾ ರೂಪವಾದ | ಯಜ್ಞಮ್ | - ಆತ್ಮರೂಪೀ ಯಜ್ಞದ |
| ಯಜ್ಞಮ್, ಏವ | - ಯಜ್ಞವನ್ನೇ | ಉಪಜುಹ್ವತಿ | - ಹೋಮ*ವನ್ನು ಮಾಡುತ್ತಾರೆ. |
| ಪರ್ಯುಪಾಸತೇ | - ಚೆನ್ನಾಗಿ ಅನುಷ್ಠಾನ ಮಾಡುತ್ತಾರೆ (ಮತ್ತು) | | |
| ಅಪರೇ | - ಬೇರೆ (ಯೋಗಿಜನರು) | | |

ಶ್ರೋತ್ರಾದೀನಿ, ಇಂದ್ರಿಯಾಣಿ, ಅನ್ಯೇ ಸಂಯಮಾಗ್ನಿಷು, ಜುಹ್ವತಿ,
ಶಬ್ದಾದೀನ್, ವಿಷಯಾನ್, ಅನ್ಯೇ, ಇಂದ್ರಿಯಾಗ್ನಿಷು, ಜುಹ್ವತಿ ॥೨೬

| | | | |
|---|---|---|---|
| ಅನ್ಯೇ | - ಅನ್ಯ (ಯೋಗಿಜನರು) | ಅನ್ಯೇ | - ಬೇರೆ (ಯೋಗಿಜನರು) |
| ಶ್ರೋತ್ರಾದೀನಿ | - ಶ್ರವಣೇಂದ್ರಿಯಾದಿ | ಶಬ್ದಾದೀನ್ | - ಶಬ್ದಾದಿ |
| ಇಂದ್ರಿಯಾಣಿ | - ಸಮಸ್ತ ಇಂದ್ರಿಯಗಳನ್ನು | ವಿಷಯಾನ್ | - ವಿಷಯಗಳನ್ನು |
| ಸಂಯಮಾಗ್ನಿಷು | - ಸಂಯಮರೂಪವಾದ ಅಗ್ನಿಗಳಲ್ಲಿ | ಇಂದ್ರಿಯಾಗ್ನಿಷು | - ಇಂದ್ರಿಯರೂಪವಾದ ಅಗ್ನಿಗಳಲ್ಲಿ |
| ಜುಹ್ವತಿ | - ಹವನ ಮಾಡುತ್ತಾರೆ (ಮತ್ತು) | ಜುಹ್ವತಿ | - ಹವನ ಮಾಡುತ್ತಾರೆ. |

ಸರ್ವಾಣಿ, ಇಂದ್ರಿಯಕರ್ಮಾಣಿ, ಪ್ರಾಣಕರ್ಮಾಣಿ, ಚ, ಅಪರೇ,
ಆತ್ಮಸಂಯಮಯೋಗಾಗ್ನೌ, ಜುಹ್ವತಿ, ಜ್ಞಾನದೀಪಿತೇ ॥೨೭॥

| | | | |
|---|---|---|---|
| ಅಪರೇ | - ಬೇರೆ (ಯೋಗಿಜನರು) | ಜ್ಞಾನದೀಪಿತೇ | - ಜ್ಞಾನದಿಂದ ಪ್ರಕಾಶಿತವಾದ |
| ಸರ್ವಾಣಿ- ಇಂದ್ರಿಯ- ಕರ್ಮಾಣಿ | - ಇಂದ್ರಿಯಗಳ ಸಂಪೂರ್ಣ ಕ್ರಿಯೆಗಳನ್ನು | ಆತ್ಮಸಂಯಮ- ಯೋಗಾಗ್ನೌ | - ಆತ್ಮಸಂಯಮ ಯೋಗರೂಪೀ ಅಗ್ನಿಯಲ್ಲಿ |
| ಚ | - ಮತ್ತು | | |
| ಪ್ರಾಣಕರ್ಮಾಣಿ | - ಪ್ರಾಣಗಳ ಸಮಸ್ತ ಕ್ರಿಯೆಗಳನ್ನು | ಜುಹ್ವತಿ | - ಹವನ ಮಾಡುತ್ತಾರೆ. * |

ದ್ರವ್ಯಯಜ್ಞಾಃ, ತಪೋಯಜ್ಞಾಃ, ಯೋಗಯಜ್ಞಾಃ, ತಥಾ, ಅಪರೇ,
ಸ್ವಾಧ್ಯಾಯಜ್ಞಾನಯಜ್ಞಾಃ ಚ, ಯತಯಃ, ಸಂಶಿತವ್ರತಾಃ ॥೨೮॥

| | | | |
|---|---|---|---|
| **ಅಪರೇ** | - ಕೆಲವು ಪುರುಷರು | **ಚ** | - ಮತ್ತು (ಎಷ್ಟೋ ಪುರುಷರು) |
| **ದ್ರವ್ಯಯಜ್ಞಾಃ** | - ದ್ರವ್ಯ ಸಂಬಂಧವಾದ ಯಜ್ಞವನ್ನು ಮಾಡುವವರಾಗಿದ್ದಾರೆ (ಎಷ್ಟೋ ಪುರುಷರು) | **ಸಂಶಿತವ್ರತಾಃ** | - ಅಹಿಂಸಾದಿ ತೀಕ್ಷ್ಣ ವ್ರತಗಳಿಂದ ಕೂಡಿದವರಾಗಿ |
| **ತಪೋಯಜ್ಞಾಃ** | - ತಪಸ್ಯಾರೂಪವಾದ ಯಜ್ಞವನ್ನು ಮಾಡು ವವರಾಗಿದ್ದಾರೆ | **ಯತಯಃ** | - ಯತ್ನಶೀಲರಾದ ಪುರುಷರು |
| **ತಥಾ** | - ಹಾಗೂ (ಇನ್ನು ಕೆಲವರು) | **ಸ್ವಾಧ್ಯಾಯ-ಜ್ಞಾನಯಜ್ಞಾಃ** | - ಸ್ವಾಧ್ಯಾಯ ರೂಪವಾದ ಜ್ಞಾನಯಜ್ಞವನ್ನು ಮಾಡುವವ ರಾಗಿದ್ದಾರೆ. |
| **ಯೋಗಯಜ್ಞಾಃ** | - ಅಷ್ಟಾಂಗಯೋಗ ರೂಪೀ ಯಜ್ಞವನ್ನು ಮಾಡುವವರಾಗಿದ್ದಾರೆ | | |

ಅಪಾನೇ, ಜುಹ್ವತಿ, ಪ್ರಾಣಮ್, ಪ್ರಾಣೇ, ಅಪಾನಮ್, ತಥಾ, ಅಪರೇ,
ಪ್ರಾಣಾಪಾನಗತೀ, ರುದ್ಧ್ವಾ, ಪ್ರಾಣಾಯಾಮಪರಾಯಣಾಃ ॥೨೯॥
ಅಪರೇ, ನಿಯತಾಹಾರಾಃ, ಪ್ರಾಣಾನ್, ಪ್ರಾಣೇಷು, ಜುಹ್ವತಿ,
ಸರ್ವೇ, ಅಪಿ, ಏತೇ, ಯಜ್ಞವಿದಃ, ಯಜ್ಞಕ್ಷಪಿತಕಲ್ಮಷಾಃ ॥೩೦॥

**ಮತ್ತು ಬೇರೆ ಯೋಗಿಗಳು -**

| | | | |
|---|---|---|---|
| **ಅಪರೇ** | - ಬೇರೆ (ಎಷ್ಟೋ ಯೋಗಿಜನರು) | **ಪರಾಯಣಾಃ** | ಪರಾಯಣರಾದ ಪುರುಷರು |
| **ಅಪಾನೇ** | - ಅಪಾನವಾಯುವಿನಲ್ಲಿ | **ಪ್ರಾಣಾಪಾನಗತೀ** | - ಪ್ರಾಣ ಮತ್ತು ಅಪಾನದ ಗತಿಯನ್ನು |
| **ಪ್ರಾಣಮ್** | - ಪ್ರಾಣವಾಯುವನ್ನು | | |
| **ಜುಹ್ವತಿ** | - ಹೋಮಮಾಡುತ್ತಾರೆ | **ರುದ್ಧ್ವಾ** | - ತಡೆದು |
| **ತಥಾ** | - ಹಾಗೆಯೇ (ಅನ್ಯ ಯೋಗಿಜನರು) | **ಪ್ರಾಣಾನ್** | - ಪ್ರಾಣಗಳನ್ನು |
| | | **ಪ್ರಾಣೇಷು** | - ಪ್ರಾಣಗಳಲ್ಲಿಯೇ |
| **ಪ್ರಾಣೇ** | - ಪ್ರಾಣವಾಯುವಿನಲ್ಲಿ | **ಜುಹ್ವತಿ** | - ಹೋಮಮಾಡುತ್ತಾರೆ |
| **ಅಪಾನಮ್** | - ಅಪಾನ ವಾಯುವನ್ನು (ಹೋಮಮಾಡುತ್ತಾರೆ ಹಾಗೂ) | **ಏತೇ** | - ಈ |
| | | **ಸರ್ವೇ, ಅಪಿ** | - ಎಲ್ಲ (ಸಾಧಕರು) |
| | | **ಯಜ್ಞಕ್ಷಪಿತ - ಕಲ್ಮಷಾಃ** | - ಯಜ್ಞಗಳ ಮೂಲಕ ಪಾಪಗಳನ್ನು ನಾಶಮಾಡುವವರು ಮತ್ತು |
| **ಅಪರೇ** | - ಉಳಿದ (ಎಷ್ಟೋ ಪುರುಷರು) | | |
| **ನಿಯತಾಹಾರಾಃ** | - ನಿಯಮಿತವಾದ ಆಹಾರ *ಮಾಡುವ | **ಯಜ್ಞವಿದಃ** | - ಯಜ್ಞಗಳನ್ನು ತಿಳಿದವರಾಗಿದ್ದಾರೆ. |
| **ಪ್ರಾಣಾಯಾಮ** | - ಪ್ರಾಣಾಯಾಮ | | |

ಯಜ್ಞಶಿಷ್ಟಾಮೃತಭುಜಃ, ಯಾಂತಿ, ಬ್ರಹ್ಮ, ಸನಾತನಮ್, ನ,
ಅಯಮ್, ಲೋಕಃ, ಅಸ್ತಿ, ಅಯಜ್ಞಸ್ಯ, ಕುತಃ, ಅನ್ಯಃ, ಕುರುಸತ್ತಮ ॥೩೧

**ಮತ್ತು -**

| | |
|---|---|
| **ಕುರುಸತ್ತಮ** | - ಹೇ ಕುರುಶ್ರೇಷ್ಠನಾದ ಅರ್ಜುನನೇ! |
| **ಯಜ್ಞಶಿಷ್ಟಾ-ಮೃತ ಭುಜಃ** | - ಯಜ್ಞದಲ್ಲಿ ಉಳಿದ ಅಮೃತವನ್ನು ಅನುಭವಿಸುವ (ಯೋಗಿಗಳು) |
| **ಸನಾತನಮ್** | - ಸನಾತನನಾದ |
| **ಬ್ರಹ್ಮ** | - ಪರಬ್ರಹ್ಮ ಪರಮಾತ್ಮನನ್ನು |
| **ಯಾಂತಿ** | - ಹೊಂದುತ್ತಾರೆ (ಮತ್ತು) |
| **ಅಯಜ್ಞಸ್ಯ** | - ಯಜ್ಞವನ್ನು ಮಾಡದಿರುವ ಪುರುಷನಿಗೆ |
| **ಅಯಂ** | - ಈ |
| **ಲೋಕಃ** | - ಮನುಷ್ಯಲೋಕವು ಸಹ (ಸುಖದಾಯಕ) |
| **ನ, ಅಸ್ತಿ** | - ಇಲ್ಲ (ಮತ್ತೆ) |
| **ಅನ್ಯಃ** | - ಪರಲೋಕವು |
| **ಕುತಃ** | - ಹೇಗೆ (ಸುಖದಾಯಕವಾಗಬಲ್ಲದು?) |

ಏವಂ, ಬಹುವಿಧಾಃ, ಯಜ್ಞಾಃ, ವಿತತಾಃ, ಬ್ರಹ್ಮಣಃ, ಮುಖೇ,
ಕರ್ಮಜಾನ್, ವಿದ್ಧಿ, ತಾನ್, ಸರ್ವಾನ್, ಏವಮ್, ಜ್ಞಾತ್ವಾ, ವಿಮೋಕ್ಷ್ಯಸೇ ॥೩೨॥

| | |
|---|---|
| **ಏವಮ್** | - ಈ ಪ್ರಕಾರವಾಗಿ (ಇನ್ನೂ) |
| **ಬಹುವಿಧಾಃ** | - ಅನೇಕ ವಿಧವಾದ |
| **ಯಜ್ಞಾಃ** | - ಯಜ್ಞಗಳು |
| **ಬ್ರಹ್ಮಣಃ** | - ವೇದ |
| **ಮುಖೇ** | - ವಾಣಿಯಲ್ಲಿ |
| **ವಿತತಾಃ** | - ವಿಸ್ತಾರವಾಗಿ ಹೇಳಲಾಗಿವೆ |
| **ತಾನ್** | - ಆ |
| **ಸರ್ವಾನ್** | - ಎಲ್ಲವನ್ನೂ (ನೀನು) |
| **ಕರ್ಮಜಾನ್** | - ಮನಸ್ಸು ಇಂದ್ರಿಯ ಮತ್ತು ಶಾರೀರಿಕ ಕ್ರಿಯೆಗಳ ಮೂಲಕ ನಡೆಯುವುದು ಎಂದು, |
| **ವಿದ್ಧಿ** | - ತಿಳಿ |
| **ಏವಮ್** | - ಈ ಪ್ರಕಾರವಾಗಿ |
| **ಜ್ಞಾತ್ವಾ** | - ತತ್ತ್ವದಿಂದ ತಿಳಿದು (ಅವುಗಳ ಅನುಷ್ಠಾನದ ಮೂಲಕ ನೀನು) |
| **ವಿಮೋಕ್ಷ್ಯಸೇ** | - ಕರ್ಮಬಂಧನದಿಂದ ಸರ್ವಥಾ ಮುಕ್ತನಾಗುವೆ. |

ಶ್ರೇಯಾನ್, ದ್ರವ್ಯಮಯಾತ್, ಯಜ್ಞಾತ್, ಜ್ಞಾನಯಜ್ಞಃ ಪರಂತಪ,
ಸರ್ವಮ್, ಕರ್ಮ, ಅಖಿಲಮ್, ಪಾರ್ಥ, ಜ್ಞಾನೇ, ಪರಿಸಮಾಪ್ಯತೇ ॥೩೩॥

| | |
|---|---|
| **ಪರಂತಪ,-ಪಾರ್ಥ** | - ಹೇ ಪರಂತಪ, ಅರ್ಜುನನೇ |
| **ದ್ರವ್ಯಮಯಾತ್** | - ದ್ರವ್ಯಮಯವಾದ |
| **ಯಜ್ಞಾತ್** | - ಯಜ್ಞಕ್ಕಿಂತಲೂ |
| **ಜ್ಞಾನಯಜ್ಞಃ** | - ಜ್ಞಾನಯಜ್ಞವು |
| **ಶ್ರೇಯಾನ್** | - ಅತ್ಯಂತ ಶ್ರೇಷ್ಠವಾಗಿದೆ (ಹಾಗೂ) |
| **ಅಖಿಲಮ್** | - ಯಾವನ್ಮಾತ್ರ, |
| **ಸರ್ವಮ್** | - ಎಲ್ಲ |
| **ಕರ್ಮ** | - ಸಂಪೂರ್ಣವಾದ ಕರ್ಮಗಳು |
| **ಜ್ಞಾನೇ** | - ಜ್ಞಾನದಲ್ಲಿ |
| **ಪರಿಸಮಾಪ್ಯತೇ** | - ಸಮಾಪ್ತಿಯಾಗುತ್ತವೆ. |

ತತ್, ವಿದ್ಧಿ, ಪ್ರಣಿಪಾತೇನ, ಪರಿಪ್ರಶ್ನೇನ, ಸೇವಯಾ,
ಉಪದೇಕ್ಷ್ಯಂತಿ, ತೇ, ಜ್ಞಾನಮ್, ಜ್ಞಾನಿನಃ, ತತ್ತ್ವದರ್ಶಿನಃ ॥೩೪॥

| | |
|---|---|
| **ತತ್** | - ಆ ಜ್ಞಾನವನ್ನು (ನೀನು ತತ್ತ್ವದರ್ಶಿಗಳಾದ ಜ್ಞಾನಿಗಳ ಬಳಿಗೆ ಹೋಗಿ) |
| **ವಿದ್ಧಿ** | - ತಿಳಿದುಕೋ (ಅವರಿಗೆ) |
| **ಪ್ರಣಿಪಾತೇನ** | - ಚೆನ್ನಾಗಿ ಶ್ರದ್ಧೆಯಿಂದ ದಂಡವತ್ ಪ್ರಣಾಮ ಮಾಡುವುದರಿಂದ (ಅವರ) |
| **ಸೇವಯಾ** | - ಸೇವೆ ಮಾಡುವುದರಿಂದ ಮತ್ತು |
| **ಪರಿಪ್ರಶ್ನೇನ** | - ಕಪಟವನ್ನು ಬಿಟ್ಟು ಸರಳತಾ ಪೂರ್ವಕವಾಗಿ ಪ್ರಶ್ನೆ ಮಾಡುವುದರಿಂದ |
| **ತತ್ತ್ವದರ್ಶಿನಃ** | - ಪರಮಾತ್ಮ ತತ್ತ್ವವನ್ನು ಚೆನ್ನಾಗಿ ತಿಳಿದಿರುವ |
| **ತೇ** | - ಆ |
| **ಜ್ಞಾನಿನಃ** | - ಜ್ಞಾನಿಗಳೂ ಮಹಾತ್ಮರೂ (ನಿನಗೆ) |
| **ಜ್ಞಾನಮ್** | - ತತ್ತ್ವಜ್ಞಾನದ |
| **ಉಪದೇಕ್ಷ್ಯಂತಿ** | - ಉಪದೇಶವನ್ನು ಮಾಡುವರು. |

ಯತ್, ಜ್ಞಾತ್ವಾ, ನ, ಪುನಃ, ಮೋಹಮ್, ಏವಮ್, ಯಾಸ್ಯಸಿ, ಪಾಂಡವ,
ಯೇನ, ಭೂತಾನಿ, ಅಶೇಷೇಣ, ದ್ರಕ್ಷ್ಯಸಿ, ಆತ್ಮನಿ, ಅಥೋ, ಮಯಿ ॥೩೫॥

| | |
|---|---|
| **ಯತ್** | - ಯಾವುದನ್ನು |
| **ಜ್ಞಾತ್ವಾ** | - ತಿಳಿದುಕೊಂಡು |
| **ಪುನಃ** | - ಮತ್ತೆ (ನೀನು) |
| **ಏವಮ್** | - ಈ ಪ್ರಕಾರವಾದ |
| **ಮೋಹಮ್** | - ಮೋಹವನ್ನು |
| **ನ, ಯಾಸ್ಯಸಿ** | - ಪಡೆಯಲಾರೆ |
| **ಪಾಂಡವ** | - ಹೇ ಅರ್ಜುನನೇ |
| **ಯೇನ** | - ಯಾವ ಜ್ಞಾನದ ಮೂಲಕ (ನೀನು) |
| **ಭೂತಾನಿ** | - ಸಮಸ್ತ ಭೂತಗಳನ್ನು |
| **ಅಶೇಷೇಣ** | - ನಿಶ್ಶೇಷ ಭಾವದಿಂದ (ಮೊದಲು) |
| **ಆತ್ಮನಿ** | - ತನ್ನಲ್ಲಿ (ಮತ್ತೆ)* |
| **ಅಥೋ** | - ಅನಂತರ |
| **ಮಯಿ** | - ಸಚ್ಚಿದಾನಂದಘನ ಪರಮಾತ್ಮನಾದ ನನ್ನಲ್ಲಿ |
| **ದ್ರಕ್ಷ್ಯಸಿ** | - ನೋಡುವೆ.† |

ಅಪಿ, ಚೇತ್, ಅಸಿ, ಪಾಪೇಭ್ಯಃ, ಸರ್ವೇಭ್ಯಃ, ಪಾಪಕೃತ್ತಮಃ,
ಸರ್ವಮ್, ಜ್ಞಾನಪ್ಲವೇನ, ಏವ, ವೃಜಿನಮ್, ಸಂತರಿಷ್ಯಸಿ ॥೩೬॥

| | |
|---|---|
| **ಚೇತ್** | - ಒಂದು ವೇಳೆ (ನೀನು) |
| **ಸರ್ವೇಭ್ಯಃ** | - ಎಲ್ಲ |
| **ಪಾಪೇಭ್ಯಃ** | - ಪಾಪಿಗಳಿಗಿಂತಲೂ |
| **ಅಪಿ** | - ಕೂಡ |
| **ಪಾಪಕೃತ್ತಮಃ** | - ಹೆಚ್ಚು ಪಾಪ ಮಾಡಿದವನು |
| **ಅಸಿ** | - ಆಗಿರುವೆ (ಆದರೂ ನೀನು) |
| **ಜ್ಞಾನಪ್ಲವೇನ** | - ಜ್ಞಾನರೂಪವಾದ ದೋಣಿಯ ಮೂಲಕ |
| **ಏವ** | - ನಿಸ್ಸಂದೇಹವಾಗಿ |
| **ಸರ್ವಮ್** | - ಸಂಪೂರ್ಣ, |
| **ವೃಜಿನಮ್** | - ಪಾಪ-ಸಮುದ್ರದಿಂದ, |
| **ಸಂತರಿಷ್ಯಸಿ** | - ಚೆನ್ನಾಗಿ ಪಾರಾಗಿಬಿಡುವೆ. |

ಯಥಾ, ಏಧಾಂಸಿ, ಸಮಿದ್ಧಃ, ಅಗ್ನಿಃ, ಭಸ್ಮಸಾತ್, ಕುರುತೇ, ಅರ್ಜುನ,
ಜ್ಞಾನಾಗ್ನಿಃ ಸರ್ವಕರ್ಮಾಣಿ, ಭಸ್ಮಸಾತ್, ಕುರುತೇ, ತಥಾ ||೩೭

**ಏಕೆಂದರೆ**

| | | | |
|---|---|---|---|
| **ಅರ್ಜುನ** | - ಹೇ ಅರ್ಜುನನೇ | **ತಥಾ** | - ಹಾಗೆಯೇ |
| **ಯಥಾ** | - ಹೇಗೆ | **ಜ್ಞಾನಾಗ್ನಿಃ** | - ಜ್ಞಾನರೂಪೀ ಅಗ್ನಿಯು |
| **ಸಮಿದ್ಧಃ** | - ಪ್ರಜ್ವಲಿತವಾದ | **ಸರ್ವಕರ್ಮಾಣಿ** | - ಸಂಪೂರ್ಣ ಕರ್ಮಗಳನ್ನು |
| **ಅಗ್ನಿಃ** | - ಅಗ್ನಿಯು | | |
| **ಏಧಾಂಸಿ** | - ಇಂಧನಗಳನ್ನು | | |
| **ಭಸ್ಮಸಾತ್** | - ಭಸ್ಮಮಯ | **ಭಸ್ಮಸಾತ್** | - ಭಸ್ಮಮಯ |
| **ಕುರುತೇ** | - ಮಾಡಿಬಿಡುತ್ತದೆಯೋ | **ಕುರುತೇ** | - ಮಾಡಿಬಿಡುತ್ತದೆ. |

ನ, ಹಿ, ಜ್ಞಾನೇನ, ಸದೃಶಮ್, ಪವಿತ್ರಮ್, ಇಹ, ವಿದ್ಯತೇ,
ತತ್, ಸ್ವಯಮ್, ಯೋಗಸಂಸಿದ್ಧಃ, ಕಾಲೇನ, ಆತ್ಮನಿ, ವಿಂದತಿ ||೩೮||

**ಆದುದರಿಂದ**

| | | | |
|---|---|---|---|
| **ಇಹ** | - ಈ ಜಗತ್ತಿನಲ್ಲಿ | **ಕಾಲೇನ** | - ಎಷ್ಟೋ ಕಾಲದಿಂದ |
| **ಜ್ಞಾನೇನ** | - ಜ್ಞಾನಕ್ಕೆ | **ಯೋಗಸಂಸಿದ್ಧಃ** | - ಕರ್ಮಯೋಗದ ಮೂಲಕ ಶುದ್ಧಾಂತಃಕರಣವುಳ್ಳ ಮನುಷ್ಯನು |
| **ಸದೃಶಮ್** | - ಸಮಾನವಾಗಿ | | |
| **ಪವಿತ್ರಮ್** | - ಪವಿತ್ರಗೊಳಿಸುವಂತಹುದು | | |
| **ಹಿ** | - ನಿಃಸಂದೇಹವಾಗಿ | **ಸ್ವಯಮ್** | - ತನಗೆತಾನೇ |
| **ನ, ವಿದ್ಯತೇ** | - ಯಾವುದೂ ಇಲ್ಲ | **ಆತ್ಮನಿ** | - ಆತ್ಮನಲ್ಲಿ |
| **ತತ್** | - ಆ ಜ್ಞಾನವನ್ನು | **ವಿಂದತಿ** | - ಪಡೆದುಕೊಳ್ಳುತ್ತಾನೆ |

ಶ್ರದ್ಧಾವಾನ್, ಲಭ್ಯತೇ, ಜ್ಞಾನ, ತತ್ಪರಃ, ಸಂಯತೇಂದ್ರಿಯಃ,
ಜ್ಞಾನಮ್, ಲಬ್ಧ್ವಾ, ಪರಾಂ, ಶಾಂತಿಂ, ಅಚಿರೇಣ, ಅಧಿಗಚ್ಛತಿ ||೩೯||

**ಮತ್ತು ಎಲೈ ಅರ್ಜುನ -**

| | | | |
|---|---|---|---|
| **ಸಂಯತೇಂದ್ರಿಯಃ** | - ಜಿತೇಂದ್ರಿಯನೂ | **ಜ್ಞಾನಮ್** | - ಜ್ಞಾನವನ್ನು |
| **ತತ್ಪರಃ** | - ಸಾಧನಪರಾಯಣನೂ (ಮತ್ತು) | **ಲಬ್ಧ್ವಾ** | - ಪಡೆದುಕೊಂಡು (ಅವನು) |
| **ಶ್ರದ್ಧಾವಾನ್** | - ಶ್ರದ್ಧಾವಂತನಾದ ಮನುಷ್ಯನು | **ಅಚಿರೇಣ** | - ವಿಳಂಬವಿಲ್ಲದೆ |
| | | **ಪರಾಮ್,** | - ಭಗವತ್ |
| **ಜ್ಞಾನಮ್** | - ಜ್ಞಾನವನ್ನು | **ಪ್ರಾಪ್ತಿರೂಪೀ** | |
| **ಲಭತೇ** | - ಪಡೆಯುತ್ತಾನೆ (ಹಾಗೂ) | **ಶಾಂತಿಮ್** | ಪರಮಶಾಂತಿಯನ್ನು |
| | | **ಅಧಿಗಚ್ಛತಿ** | - ಪಡೆದುಕೊಳ್ಳುತ್ತಾನೆ. |

ಅಜ್ಞಃ ಚ, ಅಶ್ರದ್ದಧಾನಃ ಚ, ಸಂಶಯಾತ್ಮಾ ವಿನಶ್ಯತಿ,
ನ, ಅಯಂ, ಲೋಕಃ, ಅಸ್ತಿ, ನ, ಪರಃ, ನ, ಸುಖಂ, ಸಂಶಯಾತ್ಮನಃ ||೪೦||

**ಮತ್ತು ಎಲೈ ಅರ್ಜುನ -**

| | |
|---|---|
| **ಅಜ್ಞಃ** | - ವಿವೇಕಹೀನನೂ |
| **ಚ** | - ಮತ್ತು |
| **ಅಶ್ರದ್ಧಧಾನಃ** | - ಶ್ರದ್ಧಾರಹಿತನೂ |
| **ಸಂಶಯಾತ್ಮಾ** | - ಸಂಶಯಯುಕ್ತನಾದ ಮನುಷ್ಯನು |
| **ವಿನಶ್ಯತಿ** | - ಪರಮಾರ್ಥದಿಂದ ಅವಶ್ಯವಾಗಿ ಭ್ರಷ್ಟನಾಗಿ ಹೋಗುತ್ತಾನೆ (ಇಂತಹ) |
| **ಸಂಶಯಾತ್ಮನಃ** | - ಸಂಶಯಯುಕ್ತನಾದ ಮನುಷ್ಯನಿಗೆ |
| **ಅಯಮ್,- ಲೋಕಃ, ನ, ಅಸ್ತಿ** | - ಈ ಲೋಕವೂ ಇಲ್ಲ |
| **ನ, ಪರಃ,** | - ಪರಲೋಕವೂ ಇಲ್ಲ |
| **ಚ** | - ಮತ್ತು |
| **ನ, ಸುಖಮ್** | - ಸುಖವೂ ಇಲ್ಲ |

ಯೋಗಸಂನ್ಯಸ್ತಕರ್ಮಾಣಂ, ಜ್ಞಾನಸಂಛಿನ್ನಸಂಶಯಮ್,
ಆತ್ಮವಂತಂ, ನ, ಕರ್ಮಾಣಿ, ನಿಬಧ್ನಂತಿ, ಧನಂಜಯ ||೪೦||

**ಮತ್ತು**

| | |
|---|---|
| **ಧನಂಜಯ** | - ಹೇ ಧನಂಜಯನೇ |
| **ಯೋಗಸನ್ನ್ಯಸ್ತ ಕರ್ಮಾಣಮ್** | - ಯಾವಾತನು ಕರ್ಮ ಯೋಗದ ವಿಧಿಯಿಂದ ಸಮಸ್ತ ಕರ್ಮಗಳನ್ನು ಪರಮಾತ್ಮನಿಗೆ ಅರ್ಪಿಸಿದ್ದಾನೋ (ಮತ್ತು) |
| **ಜ್ಞಾನಸಂಛಿನ್ನ- ಸಂಶಯಮ್** | - ಯಾರು ವಿವೇಕದ ಮೂಲಕ ಸಮಸ್ತ ಸಂಶಯಗಳನ್ನು ನಾಶಮಾಡಿದ್ದಾನೋ |
| **ಆತ್ಮವಂತಮ್** | - ಅಂತಃಕರಣವನ್ನು ವಶಮಾಡಿಕೊಂಡಿರುವ ಪುರುಷನನ್ನು |
| **ಕರ್ಮಾಣಿ** | - ಕರ್ಮಗಳು |
| **ನ, ನಿಬಧ್ನಂತಿ** | - ಬಂಧಿಸುವುದಿಲ್ಲ. |

ತಸ್ಮಾತ್, ಅಜ್ಞಾನಸಂಭೂತಮ್, ಹೃತ್ಸ್ಥಮ್, ಜ್ಞಾನಾಸಿನಾ, ಆತ್ಮನಃ,
ಛಿತ್ತ್ವಾ, ಏನಂ, ಸಂಶಯಂ, ಯೋಗಂ, ಆತಿಷ್ಠ ಉತ್ತಿಷ್ಠ ಭಾರತ ||೪೨||

| | |
|---|---|
| **ತಸ್ಮಾತ್** | - ಆದಕಾರಣ |
| **ಭಾರತ** | - ಹೇ ಭರತವಂಶೀಯನಾದ ಅರ್ಜುನನೇ |
| **ಹೃತ್ಸ್ಥಮ್** | - ಹೃದಯದಲ್ಲಿ ಸ್ಥಿತವಾದ |
| **ಏನಮ್** | - ಈ |
| **ಅಜ್ಞಾನ- ಸಂಭೂತಮ್** | - ಅಜ್ಞಾನದಿಂದ ಉತ್ಪನ್ನವಾದ |
| **ಆತ್ಮನಃ** | - ನಿನ್ನ |
| **ಸಂಶಯಮ್** | - ಸಂಶಯವನ್ನು |
| **ಜ್ಞಾನಾಸಿನಾ** | - ವಿವೇಕ ಜ್ಞಾನರೂಪೀ ಖಡ್ಗದ ಮೂಲಕ |
| **ಛಿತ್ತ್ವಾ** | - ಭೇದಿಸಿ |
| **ಯೋಗಮ್** | - ಸಮತ್ವರೂಪೀ ಕರ್ಮಯೋಗದಲ್ಲಿ |
| **ಆತಿಷ್ಠ** | - ಸ್ಥಿತನಾಗಿಬಿಡು (ಮತ್ತು) |
| **ಉತ್ತಿಷ್ಠ** | - ಯುದ್ಧಕ್ಕೆ ಎದ್ದು ನಿಲ್ಲು |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 5ರ ಶ್ಲೋಕಗಳ ಫೋಟೊ ಕಾಪಿ :-

# ॥ ಅಥ ಪಂಚಮೋಽಧ್ಯಾಯಃ - ಕರ್ಮಸಂನ್ಯಾಸಯೋಗ ॥

## ಅರ್ಜುನ ಉವಾಚ

ಸಂನ್ಯಾಸಂ, ಕರ್ಮಣಾಂ, ಕೃಷ್ಣ ಪುನಃ, ಯೋಗಂ, ಚ, ಶಂಸಸಿ,
ಯತ್, ಶ್ರೇಯಃ, ಏತಯೋಃ, ಏಕಮ್, ತತ್, ಮೇ, ಬ್ರೂಹಿ, ಸುನಿಶ್ಚಿತಮ್ ॥೧॥

**ಅನಂತರ ಅರ್ಜುನ ಕೇಳಿದನು -**

| | | | |
|---|---|---|---|
| **ಕೃಷ್ಣ** | - ಹೇ ಕೃಷ್ಣನೇ! (ನೀನು) | **ಏತಯೋಃ** | - ಈ ಎರಡರಲ್ಲಿ |
| **ಕರ್ಮಣಾಮ್** | - ಕರ್ಮಗಳ | **ಯತ್, ಏಕಮ್** | - ಯಾವ ಒಂದು |
| **ಸಂನ್ಯಾಸಮ್** | - ಸಂನ್ಯಾಸವನ್ನು | **ಮೇ** | - ನನಗಾಗಿ |
| **ಚ** | - ಮತ್ತು | **ಸುನಿಶ್ಚಿತಮ್** | - ಚೆನ್ನಾಗಿ ನಿಶ್ಚಯವಾಗಿ |
| **ಪುನಃ** | - ಪುನಃ | **ಶ್ರೇಯಃ** | - ಶ್ರೇಯಸ್ಕರವಾದ ಸಾಧನವಾಗಿದೆಯೋ |
| **ಯೋಗಮ್** | - ಕರ್ಮಯೋಗವನ್ನು | **ತತ್, ಬ್ರೂಹಿ** | - ಅದನ್ನು ಹೇಳು. |
| **ಶಂಸಸಿ** | - ಪ್ರಶಂಸೆ ಮಾಡುತ್ತಿರುವೆ (ಆದ್ದರಿಂದ) | | |

ಸಂನ್ಯಾಸಃ, ಕರ್ಮಯೋಗಃ, ಚ, ನಿಃಶ್ರೇಯಸಕರೌ, ಉಭೌ,
ತಯೋಃ, ತು, ಕರ್ಮಸಂನ್ಯಾಸಾತ್, ಕರ್ಮಯೋಗಃ, ವಿಶಿಷ್ಯತೇ ॥೨॥

**ಅರ್ಜುನನು ಹೀಗೆ ಕೇಳಿದಾಗ ಶ್ರೀಕೃಷ್ಣ ಹೇಳಿದ, ಎಲೈ ಅರ್ಜುನ -**

| | | | |
|---|---|---|---|
| **ಸಂನ್ಯಾಸಃ** | - ಕರ್ಮಸಂನ್ಯಾಸ* | **ತಯೋಃ** | - ಅವೆರಡರಲ್ಲಿಯೂ |
| **ಚ** | - ಮತ್ತು | **ಕರ್ಮ- ಸಂನ್ಯಾಸಾತ್** | - ಕರ್ಮ ಸಂನ್ಯಾಸಕ್ಕಿಂತ |
| **ಕರ್ಮಯೋಗಃ** | - ಕರ್ಮಯೋಗವು‡ | **ಕರ್ಮಯೋಗಃ** | - ಕರ್ಮಯೋಗವು (ಸಾಧನದಲ್ಲಿ ಸುಗಮ ವಾಗಿರುವುದರಿಂದ) |
| **ಉಭೌ** | - (ಈ) ಎರಡೂ | | |
| **ನಿಃಶ್ರೇಯಸಕರೌ** | - ಪರಮಕಲ್ಯಾಣ ಕಾರಕವಾಗಿವೆ | | |
| **ತು** | - ಆದರೂ | **ವಿಶಿಷ್ಯತೇ** | - ಶ್ರೇಷ್ಠವಾಗಿದೆ. |

ಜ್ಞೇಯಃ, ಸಃ, ನಿತ್ಯಸಂನ್ಯಾಸೀ, ಯಃ, ನ, ದ್ವೇಷ್ಟಿ ನ, ಕಾಂಕ್ಷತಿ,
ನಿರ್ದ್ವಂದ್ವಃ ಹಿ, ಮಹಾಬಾಹೋ, ಸುಖಮ್, ಬಂಧಾತ್, ಪ್ರಮುಚ್ಯತೇ ॥೩॥

**ಆದುದರಿಂದ -**

| | | | |
|---|---|---|---|
| **ಮಹಾಬಾಹೋ** | - ಹೇ ಅರ್ಜುನನೇ | **ಹಿ** | - ಏಕೆಂದರೆ |
| **ಯಃ** | - ಯಾವ ಪುರುಷನು (ಯಾರನ್ನೂ) | **ನಿರ್ದ್ವಂದ್ವಃ** | - ರಾಗ-ದ್ವೇಷಾದಿ ದ್ವಂದ್ವಗಳಿಂದ ರಹಿತನಾದ (ಪುರುಷನು) |
| **ನ, ದ್ವೇಷ್ಟಿ** | - ದ್ವೇಷಿಸುವುದಿಲ್ಲವೋ (ಮತ್ತು ಯಾವುದನ್ನೂ) | | |
| **ನ, ಕಾಂಕ್ಷತಿ** | - ಬಯಸುವುದಿಲ್ಲವೋ | **ಸುಖಮ್** | - ಸುಖಪೂರ್ವಕವಾಗಿ |
| **ಸಃ** | - ಆ ಕರ್ಮಯೋಗಿಯು | **ಬಂಧಾತ್** | - ಸಂಸಾರ ಬಂಧನದಿಂದ |
| **ನಿತ್ಯಸಂನ್ಯಾಸೀ** | - ಸದಾ ಸಂನ್ಯಾಸಿಯೆಂದೇ | | |
| **ಜ್ಞೇಯಃ** | - ತಿಳಿಯಲು ಯೋಗ್ಯನಾಗಿದ್ದಾನೆ | **ಪ್ರಮುಚ್ಯತೇ** | - ಮುಕ್ತನಾಗಿ ಬಿಡುತ್ತಾನೆ |

ಸಾಂಖ್ಯಯೋಗೌ, ಪೃಥಕ್, ಬಾಲಾಃ, ಪ್ರವದಂತಿ, ನ, ಪಂಡಿತಾಃ,
ಏಕಮ್, ಅಪಿ, ಆಸ್ಥಿತಃ, ಸಮ್ಯಕ್, ಉಭಯೋಃ, ವಿಂದತೇ ಫಲಮ್ ॥೪॥

**ಮತ್ತು ಎಲೈ ಅರ್ಜುನ - ಮೇಲೆ ಹೇಳಿದ**

| | | | |
|---|---|---|---|
| **ಸಾಂಖ್ಯಯೋಗೌ** | - ಸಂನ್ಯಾಸವನ್ನು ಮತ್ತು ಕರ್ಮಯೋಗವನ್ನು | **(ಹಿಃ)** | - ಏಕೆಂದರೆ (ಎರಡರ ಪೈಕಿ) |
| **ಬಾಲಾಃ** | - ಮೂರ್ಖಜನರು | **ಏಕಮ್, ಅಪಿ,** | - ಒಂದರಲ್ಲಿಯಾದರೂ |
| **ಪೃಥಕ್** | - ಬೇರೆ-ಬೇರೆಯಾದ (ಫಲಗಳನ್ನು ಕೊಡುವುವೆಂದು) | **ಸಮ್ಯಕ್** | - ಸಮ್ಯಕ್ ಪ್ರಕಾರದಿಂದ |
| | | **ಆಸ್ಥಿತಃ** | - ಸ್ಥಿತನಾದ ಪುರುಷನು |
| | | **ಉಭಯೋಃ** | - ಎರಡರ |
| **ಪ್ರವದಂತಿ** | - ಹೇಳುತ್ತಾರೆ | **ಫಲಮ್** | - ಫಲರೂಪವಾದ ಪರಮಾತ್ಮನನ್ನು |
| **ನ, ಪಂಡಿತಾಃ** | - ಪಂಡಿತರಾದವರು ಹೇಳುವುದಿಲ್ಲ | **ವಿಂದತೇ** | - ಪಡೆಯುತ್ತಾನೆ |

ಯತ್, ಸಾಂಖ್ಯೈಃ, ಪ್ರಾಪ್ಯತೇ, ಸ್ಥಾನಮ್, ತತ್, ಯೋಗೈಃ, ಅಪಿ, ಗಮ್ಯತೇ,
ಏಕಮ್, ಸಾಂಖ್ಯಮ್, ಚ, ಯೋಗಮ್, ಚ, ಯಃ, ಪಶ್ಯತಿ, ಸಃ, ಪಶ್ಯತಿ ॥೫॥

**ಹಾಗೂ -**

| | | | |
|---|---|---|---|
| **ಸಾಂಖ್ಯೈಃ** | - ಜ್ಞಾನಯೋಗಿಗಳ ಮೂಲಕ | **ಸಾಂಖ್ಯಮ್** | - ಜ್ಞಾನಯೋಗ |
| | | **ಚ** | - ಮತ್ತು |
| **ಯತ್** | - ಯಾವ | **ಯೋಗಮ್** | - ಕರ್ಮಯೋಗವನ್ನು (ಫಲರೂಪದಲ್ಲಿ) |
| **ಸ್ಥಾನಮ್** | - ಪರಮಧಾಮವು | | |
| **ಪ್ರಾಪ್ಯತೇ** | - ಪಡೆದುಕೊಳ್ಳುವರೋ | **ಏಕಮ್** | - ಒಂದೆಂದು |
| **ಯೋಗೈಃ** | - ಕರ್ಮಯೋಗಿಗಳೂ | | |
| **ಅಪಿ** | - ಸಹ | **ಪಶ್ಯತಿ** | - ನೋಡುತ್ತಾನೋ |
| **ತತ್** | - ಅದನ್ನೇ | **ಸಃ, ಚ** | - ಅವನೇ (ಯಥಾರ್ಥವಾಗಿ) |
| **ಗಮ್ಯತೇ** | - ಪಡೆದುಕೊಳ್ಳುವರು | | |
| **ಯಃ** | - ಯಾವ ಪುರುಷನು | **ಪಶ್ಯತಿ** | - ನೋಡುತ್ತಾನೆ |

ಸಂನ್ಯಾಸಃ, ತು, ಮಹಾಬಾಹೋ, ದುಃಖಮ್, ಆಪ್ತುಮ್, ಅಯೋಗತಃ,
ಯೋಗಯುಕ್ತಃ, ಮುನಿಃ, ಬ್ರಹ್ಮ, ನಚಿರೇಣ, ಅಧಿಗಚ್ಛತಿ ॥೬॥

| | | | |
|---|---|---|---|
| **ತು** | - ಆದರೆ | **ದುಃಖಮ್** | - ಕಠಿಣವಾಗಿದೆ (ಮತ್ತು) |
| **ಮಹಾಬಾಹೋ** | - ಹೇ ಅರ್ಜುನನೇ | | |
| **ಅಯೋಗತಃ** | - ಕರ್ಮಯೋಗದ ವಿನಾ | **ಮುನಿಃ** | - ಭಗವಂತನ ಸ್ವರೂಪವನ್ನು ಮನನಮಾಡುವ |
| **ಸಂನ್ಯಾಸಃ** | - ಸಂನ್ಯಾಸ ಅರ್ಥಾತ್- ಮನಸ್ಸು ಇಂದ್ರಿಯ ಮತ್ತು ಶರೀರದ ಮೂಲಕ ನಡೆಯುವ ಸಮಸ್ತ ಕರ್ಮಗಳಲ್ಲಿ ಕರ್ತೃತ್ವದ ತ್ಯಾಗ | **ಯೋಗಯುಕ್ತಃ** | - ಕರ್ಮಯೋಗಿಯು |
| | | **ಬ್ರಹ್ಮ** | - ಪರಬ್ರಹ್ಮ ಪರಮಾತ್ಮನನ್ನು |
| | | **ನಚಿರೇಣ** | - ಶೀಘ್ರವಾಗಿಯೇ |
| **ಆಪ್ತುಮ್** | - ಪ್ರಾಪ್ತವಾಗುವುದು | **ಅಧಿಗಚ್ಛತಿ** | - ಪಡೆಯುತ್ತಾನೆ |

ಯೋಗಯುಕ್ತಃ, ವಿಶುದ್ಧಾತ್ಮಾ, ವಿಜಿತಾತ್ಮಾ, ಜಿತೇಂದ್ರಿಯಃ,
ಸರ್ವಭೂತಾತ್ಮಭೂತಾತ್ಮಾ, ಕುರ್ವನ್, ಅಪಿ,ನ, ಲಿಪ್ಯತೇ ॥೭॥

**ಹಾಗೂ -**

| | | | |
|---|---|---|---|
| **ವಿಜಿತಾತ್ಮಾ** | - ಯಾರ ಮನಸ್ಸು ತನ್ನ ವಶದಲ್ಲಿದೆಯೋ | **ಭೂತಾತ್ಮಾ** | ಪ್ರಾಣಿಗಳ ಆತ್ಮರೂಪೀ ಪರಮಾತ್ಮನೇ ಯಾರ ಆತ್ಮನಾಗಿದ್ದಾನೋ (ಅಂತಹ) |
| **ಜಿತೇಂದ್ರಿಯಃ** | - ಯಾರು ಜಿತೇಂದ್ರಿಯನೋ (ಹಾಗೆಯೇ) | **ಯೋಗಯುಕ್ತಃ** | - ಕರ್ಮಯೋಗಿಯು |
| **ವಿಶುದ್ಧಾತ್ಮಾ** | - ವಿಶುದ್ಧವಾದ ಅಂತಃಕರಣ ವುಳ್ಳವನೋ (ಮತ್ತು) | **ಕುರ್ವನ್, ಅಪಿ** | - ಕರ್ಮ ಮಾಡುತ್ತಿದ್ದರೂ ಸಹ |
| **ಸರ್ವಭೂತಾತ್ಮ** | - ಸಂಪೂರ್ಣ | **ನ, ಲಿಪ್ಯತೇ** | - ಲಿಪ್ತನಾಗುವುದಿಲ್ಲ |

ನ, ಏವ, ಕಿಂಚಿತ್, ಕರೋಮಿ, ಇತಿ, ಯುಕ್ತಃ, ಮನ್ಯೇತ, ತತ್ತ್ವವಿತ್,
ಪಶ್ಯನ್, ಶೃಣ್ವನ್, ಸ್ಪೃಶನ್, ಜಿಘ್ರನ್, ಅಶ್ನನ್, ಗಚ್ಛನ್, ಸ್ವಪನ್, ಶ್ವಸನ್ ॥೮॥
ಪ್ರಲಪನ್, ವಿಸೃಜನ್, ಗೃಹ್ಣನ್, ಉನ್ಮಿಷನ್, ನಿಮಿಷನ್, ಅಪಿ,
ಇಂದ್ರಿಯಾಣಿ, ಇಂದ್ರಿಯಾರ್ಥೇಷು, ವರ್ತಂತೇ, ಇತಿ, ಧಾರಯನ್ ॥೯॥

**ಮತ್ತು ಎಲೈ ಅರ್ಜುನ-**

| | | | |
|---|---|---|---|
| **ತತ್ತ್ವವಿತ್** | - ತತ್ತ್ವವನ್ನು ಅರಿತಿರುವ | **ನಿಮಿಷನ್** | - ಮುಚ್ಚಿಕೊಳ್ಳುತ್ತ ಲಿರುವಾಗ |
| **ಯುಕ್ತಃ** | - ಸಾಂಖ್ಯಯೋಗಿಯು | | |
| **ಪಶ್ಯನ್** | - ನೋಡುವಾಗ | **ಅಪಿ** | - ಕೂಡ |

| | | | |
|---|---|---|---|
| **ಶೃಣ್ವನ್** | - ಕೇಳುವಾಗ | **ಇಂದ್ರಿಯಾಣಿ** | - ಎಲ್ಲ ಇಂದ್ರಿಯಗಳು, |
| **ಸ್ಪೃಶನ್** | - ಸ್ಪರ್ಶಿಸುವಾಗ | **ಇಂದ್ರಿಯಾರ್ಥೇಷು** | - ತಮ್ಮ-ತಮ್ಮ ಅರ್ಥಗಳಲ್ಲಿ |
| **ಜಿಘ್ರನ್** | - ಆಘ್ರಾಣಿಸುವಾಗ | **ವರ್ತಂತೇ** | - ವ್ಯವಹರಿಸುತ್ತಿವೆ, (ಎಂದು) |
| **ಅಶ್ನನ್** | - ಭೋಜನ ಮಾಡುವಾಗ | **ಇತಿ** | - ಈ ಪ್ರಕಾರವಾಗಿ |
| **ಗಚ್ಛನ್** | - ನಡೆವಾಗ | **ಧಾರಯನ್** | - ತಿಳಿದುಕೊಂಡು |
| **ಸ್ವಪನ್** | - ಮಲಗಿರುವಾಗ | **ಏವ** | - ನಿಸ್ಸಂದೇಹವಾಗಿ |
| **ಶ್ವಸನ್** | - ಉಸಿರಾಡುವಾಗ | **ಕಿಂಚಿತ್** | - (ನಾನು) ಏನನ್ನೂ |
| **ಪ್ರಲಪನ್** | - ಮಾತನಾಡುವಾಗ | **ನ, ಕರೋಮಿ** | - ಮಾಡುವುದಿಲ್ಲ |
| **ವಿಸೃಜನ್** | - ತ್ಯಜಿಸುವಾಗ | **ಇತಿ** | - ಹೀಗೆ |
| **ಗೃಹ್ಣನ್** | - ಗ್ರಹಿಸುತ್ತ (ಹಾಗೂ) | **ಮನ್ಯೇತ** | - ತಿಳಿಯಲಿ |
| **ಉನ್ಮಿಷನ್** | - ಕಣ್ಣುಗಳನ್ನು ತೆರೆಯುತ್ತ (ಮತ್ತು) | | |

ಬ್ರಹ್ಮಣಿ, ಆಧಾಯ, ಕರ್ಮಾಣಿ, ಸಂಗಮ್, ತ್ಯಕ್ತ್ವಾ, ಕರೋತಿ, ಯಃ,
ಲಿಪ್ಯತೇ, ನ, ಸಃ, ಪಾಪೇನ, ಪದ್ಮಪತ್ರಮ್, ಇವ, ಅಂಭಸಾ ॥೧೦॥

**ಆದರೆ ಎಲೈ ಅರ್ಜುನ! ದೇಹಾಭಿಮಾನಿಯಾದವರಿಗೆ ಈ ಸಾಧನೆ ಕಠಿಣ ಮತ್ತು ನಿಷ್ಕಾಮ ಕರ್ಮಯೋಗ ಸುಲಭ, ಏಕೆಂದರೆ -**

| | | | |
|---|---|---|---|
| **ಕರ್ಮಾಣಿ** | - ಎಲ್ಲ ಕರ್ಮಗಳನ್ನು | **ಸಃ** | - ಆ ಪುರುಷನು |
| **ಬ್ರಹ್ಮಣಿ** | - ಪರಮಾತ್ಮನಲ್ಲಿ | **ಅಂಭಸಾ ಪದ್ಮ** | - ನೀರಿನಲ್ಲಿರುವ |
| **ಆಧಾಯ** | - ಅರ್ಪಣೆ ಮಾಡಿ (ಮತ್ತು) | **ಪತ್ರಮ್, ಇವ** | ಕಮಲದ ಎಲೆಯು ನೀರಿನಿಂದ ಲಿಪ್ತವಾಗುವುದಿಲ್ಲವೋ ಅದರಂತೆ |
| **ಸಂಗಮ್** | - ಆಸಕ್ತಿಯನ್ನು | | |
| **ತ್ಯಕ್ತ್ವಾ** | - ತ್ಯಾಗಮಾಡಿ | | |
| **ಯಃ** | - ಯಾವ ಪುರುಷನು | **ಪಾಪೇನ** | - ಪಾಪದಿಂದ |
| **ಕರೋತಿ** | - ಕರ್ಮವನ್ನು ಮಾಡುತ್ತಾನೋ | **ನ, ಲಿಪ್ಯತೇ** | - ಲಿಪ್ತನಾಗುವುದಿಲ್ಲ |

ಕಾಯೇನ, ಮನಸಾ, ಬುದ್ಧ್ಯಾ, ಕೇವಲೈಃ ಇಂದ್ರಿಯೈಃ ಅಪಿ,
ಯೋಗಿನ, ಕರ್ಮ, ಕುರ್ವಂತಿ, ಸಂಗಮ್, ತ್ಯಕ್ತ್ವಾ, ಆತ್ಮಶುದ್ಧಯೇ ॥೧೧॥

**ಆದುದರಿಂದ -**

| | | | |
|---|---|---|---|
| **ಯೋಗಿನಃ** | - ಕರ್ಮಯೋಗಿಗಳು (ಮಮತ್ವ ಬುದ್ಧಿರಹಿತರಾಗಿ) | | ಆಗುವ ಎಲ್ಲ ಕ್ರಿಯೆಗಳಲ್ಲಿ |
| **ಕೇವಲೈಃ** | - ಕೇವಲ | **ಸಂಗಮ್** | - ಆಸಕ್ತಿಯನ್ನು |
| **ಇಂದ್ರಿಯೈಃ** | - ಇಂದ್ರಿಯಗಳು | **ತ್ಯಕ್ತ್ವಾ** | - ತ್ಯಾಗಮಾಡಿ |
| **ಮನಸಾ** | - ಮನಸ್ಸು | **ಆತ್ಮಶುದ್ಧಯೇ** | - ಅಂತಃಕರಣದ ಶುದ್ಧಿಗಾಗಿ |
| **ಬುದ್ಧ್ಯಾ** | - ಬುದ್ಧಿ (ಮತ್ತು) | **ಕರ್ಮ** | - ಕರ್ಮವನ್ನು |
| **ಕಾಯೇನ, ಅಪಿ** | - ಶರೀರದ ಮೂಲಕ | **ಕುರ್ವಂತಿ** | - ಮಾಡುತ್ತಾರೆ. |

ಯುಕ್ತಃ, ಕರ್ಮಫಲಂ, ತ್ಯಕ್ತ್ವಾ, ಶಾಂತಿಂ, ಆಪ್ನೋತಿ, ನೈಷ್ಠಿಕೀಮ್,
ಅಯುಕ್ತಃ, ಕಾಮಕಾರೇಣ, ಫಲೇ, ಸಕ್ತಃ, ನಿಬಧ್ಯತೇ ॥೧೨॥

**ಆದರಿಂದ-**

| | | | |
|---|---|---|---|
| **ಯುಕ್ತಃ** | - ಕರ್ಮಯೋಗಿಯು | **ಅಯುಕ್ತಃ** | - ಸಕಾಮಪುರುಷನು |
| **ಕರ್ಮಫಲಮ್** | - ಕರ್ಮಗಳ ಫಲಗಳನ್ನು | **ಕಾಮಕಾರೇಣ** | - ಕಾಮನೆಯ ಪ್ರೇರಣೆಯಿಂದ |
| **ತ್ಯಕ್ತ್ವಾ** | - ತ್ಯಾಗಮಾಡಿ | | |
| **ನೈಷ್ಠಿಕೀಮ್** | - ಭಗವತ್ಪ್ರಾಪ್ತಿರೂಪವಾದ | **ಫಲೇ** | - ಫಲದಲ್ಲಿ |
| **ಶಾಂತಿಮ್** | - ಶಾಂತಿಯನ್ನು | **ಸಕ್ತಃ** | - ಆಸಕ್ತನಾಗಿ |
| **ಆಪ್ನೋತಿ** | - ಪಡೆಯುತ್ತಾನೆ (ಮತ್ತು) | **ನಿಬಧ್ಯತೇ** | - ಬಂಧಿತನಾಗುತ್ತಾನೆ |

ಸರ್ವಕರ್ಮಾಣಿ, ಮನಸಾ, ಸಂನ್ಯಸ್ಯ, ಆಸ್ತೇ, ಸುಖಂ, ವಶೀ,
ನವದ್ವಾರೇ, ಪುರೇ, ದೇಹೀ, ನ, ಏವ, ಕುರ್ವನ್, ನ, ಕಾರಯನ್ ॥೧೩॥

**ಮತ್ತು ಎಲೈ ಅರ್ಜುನ -**

| | | | |
|---|---|---|---|
| **ವಶೀ** | - ಅಂತಃಕರಣವು ಯಾರ ವಶದಲ್ಲಿದೆಯೋ ಅಂತಹ ಸಾಂಖ್ಯ ಯೋಗವನ್ನು ಆಚರಿಸುವ | **ಪುರೇ** | - ಶರೀರರೂಪೀ ಪುರದಲ್ಲಿ |
| | | **ಸರ್ವಕರ್ಮಾಣಿ** | - ಎಲ್ಲ ಕರ್ಮಗಳನ್ನು |
| | | **ಮನಸಾ** | - ಮನದಿಂದ |
| | | **ಸಂನ್ಯಸ್ಯ** | - ತ್ಯಾಗಮಾಡಿ |
| **ದೇಹೀ** | - ಪುರುಷನು | **ಸುಖಮ್, ಆಸ್ತೇ** | - ಆನಂದಪೂರ್ವಕ (ಸಚ್ಚಿದಾನಂದಘನ ಪರಮಾತ್ಮನ ಸ್ವರೂಪದಲ್ಲಿ) ಸ್ಥಿತನಾಗಿರುತ್ತಾನೆ. |
| **ನ, ಕುರ್ವನ್** | - ಮಾಡದೆ (ಮತ್ತು) | | |
| **ನ, ಕಾರಯನ್** | - ಮಾಡಿಸದೆಯೇ | | |
| **ನವದ್ವಾರೇ** | - ನವದ್ವಾರಗಳು | | |

ನ, ಕರ್ತೃತ್ವಮ್, ನ, ಕರ್ಮಾಣಿ, ಲೋಕಸ್ಯ, ಸೃಜತಿ, ಪ್ರಭುಃ,
ನ, ಕರ್ಮಫಲಸಂಯೋಗಮ್, ಸ್ವಭಾವಃ, ತು, ಪ್ರವರ್ತತೇ ॥೧೪॥

| | | | |
|---|---|---|---|
| **ಪ್ರಭುಃ** | - ಪರಮೇಶ್ವರನು | **ಕರ್ತೃತ್ವಮ್** | - ಕರ್ತೃತ್ವವನ್ನು |
| **ಲೋಕಸ್ಯ** | - ಮನುಷ್ಯರ | **ನ, ಸೃಜತಿ** | - ರಚಿಸುವುದಿಲ್ಲ |
| **ನ, ಕರ್ಮಾಣಿ-** | - ಕರ್ಮಗಳನ್ನು | **ನ, (ಸೃಜತಿ)** | - ರಚಿಸುವುದಿಲ್ಲ |
| **ಸೃಜತಿ** | ರಚಿಸುವುದಿಲ್ಲ (ಮತ್ತು) | **ತು** | - ಆದರೆ |
| | | **ಸ್ವಭಾವಃ** | - ಪ್ರಕೃತಿಯೇ ಎಲ್ಲ ರೀತಿಯಿಂದ |
| **ಕರ್ಮಫಲ-** | - ಕರ್ಮಫಲ | | |
| **ಸಂಯೋಗಮ್** | ಸಂಯೋಗವನ್ನು (ಸಹ) | **ಪ್ರವರ್ತತೇ** | - ವರ್ತಿಸುತ್ತದೆ. |

ನ, ಆದತ್ತೇ ಕಸ್ಯಚಿತ್, ಪಾಪಮ್, ನ, ಚ, ಏವ, ಸುಕೃತಮ್, ವಿಭುಃ,
ಅಜ್ಞಾನೇನ, ಆವೃತಮ್, ಜ್ಞಾನಮ್, ತೇನ, ಮುಹ್ಯಂತಿ, ಜಂತವಃ ॥೧೫॥

**ಹಾಗೆಯೇ -**

| | | | |
|---|---|---|---|
| **ವಿಭುಃ** | - ಸರ್ವವ್ಯಾಪಿಯಾದ ಪರಮೇಶ್ವರನು | **ಅಜ್ಞಾನೇನ** | - ಅಜ್ಞಾನದ ಮೂಲಕ |
| **ಕಸ್ಯಚಿತ್** | - ಯಾರ | **ಜ್ಞಾನಮ್** | - ಜ್ಞಾನವು |
| **ಪಾಪಮ್** | - ಪಾಪಕರ್ಮವನ್ನು | **ಆವೃತಮ್** | - ಮುಚ್ಚಲ್ಪಟ್ಟಿದೆ |
| **ನ, (ಆದತ್ತೆ)** | - ಸ್ವೀಕರಿಸುವುದಿಲ್ಲ | **ತೇನ** | - ಅದರಿಂದಲೇ |
| **ಚ** | - ಮತ್ತು | **ಜಂತವಃ** | - ಎಲ್ಲ ಅಜ್ಞಾನಿ ಮನುಷ್ಯರೂ |
| **ಸುಕೃತಮ್, ಏವ** | - ಶುಭಕರ್ಮವನ್ನೂ ಸಹ, | **ಮುಹ್ಯಂತಿ** | - ಮೋಹಿತ ರಾಗುತ್ತಿದ್ದಾರೆ. |
| **ನ, ಆದತ್ತೇ** | - ಸ್ವೀಕರಿಸುವುದಿಲ್ಲ (ಆದರೆ) | | |

ಜ್ಞಾನೇನ, ತು, ತತ್, ಅಜ್ಞಾನಮ್, ಯೇಷಾಮ್, ನಾಶಿತಮ್, ಆತ್ಮನಃ
ತೇಷಾಮ್, ಆದಿತ್ಯವತ್, ಜ್ಞಾನಮ್, ಪ್ರಕಾಶಯತಿ, ತತ್ಪರಮ್ ॥೧೬॥

| | | | |
|---|---|---|---|
| **ತು** | - ಆದರೆ | **ಜ್ಞಾನಮ್** | - ಜ್ಞಾನವು |
| **ಯೇಷಾಮ್** | - ಯಾರ | **ಆದಿತ್ಯವತ್** | - ಸೂರ್ಯನಂತೆ |
| **ತತ್, ಅಜ್ಞಾನಮ್** | - ಆ ಅಜ್ಞಾನವು | **ತತ್ಪರಮ್** | - ಆ ಸಚ್ಚಿದಾನಂದ ಘನನಾದ ಪರಮಾತ್ಮನನ್ನು |
| **ಆತ್ಮನಃ** | - ಪರಮಾತ್ಮನ | | |
| **ಜ್ಞಾನೇನ** | - ತತ್ವಜ್ಞಾನದ ಮೂಲಕ | | |
| **ನಾಶಿತಮ್** | - ನಾಶವಾಗಿದೆಯೋ | **ಪ್ರಕಾಶಯತಿ** | - ಪ್ರಕಾಶಿತ ಗೊಳಿಸುತ್ತದೆ.* |
| **ತೇಷಾಮ್** | - ಅವನ (ಅ) | | |

ತದ್ಬುದ್ಧಯಃ, ತದಾತ್ಮಾನಃ, ತನ್ನಿಷ್ಠಾಃ, ತತ್ಪರಾಯಣಾಃ,
ಗಚ್ಛಂತಿ ಅಪುನರಾವೃತ್ತಿಮ್, ಜ್ಞಾನನಿರ್ಧೂತಕಲ್ಮಷಾಃ ॥೧೭॥

**ಮತ್ತು ಎಲೈ ಅರ್ಜುನ -**

| | | | |
|---|---|---|---|
| **ತದಾತ್ಮಾನಃ** | - ಯಾರ ಮನಸ್ಸು ಪರಮಾತ್ಮನಲ್ಲಿ ತದಾಕಾರವಾಗಿದೆಯೋ | | ಏಕೀಭಾವದ ಸ್ಥಿತಿ ಇದೆಯೋ (ಅಂತಹ) |
| | | **ತತ್ಪರಾಯಣಾಃ** | - ತತ್ಪರಾಯಣರಾದ ಪುರುಷರು |
| **ತದ್‌ಬುದ್ಧಯಃ** | - ಯಾರ ಬುದ್ಧಿಯು ಪರಮಾತ್ಮನಲ್ಲಿ ಏಕಾಕಾರವಾಗಿದೆಯೋ (ಮತ್ತು) | **ಜ್ಞಾನನಿರ್ಧೂತ ಕಲ್ಮಷಾಃ** | - ಜ್ಞಾನದ ಮೂಲಕ ಪಾಪರಹಿತರಾಗಿ |
| | | **ಅಪುನರಾ-ವೃತ್ತಿಮ್** | - ಅಪುನರಾವೃತ್ತಿ ಯನ್ನು ಅರ್ಥಾತ್ ಪರಮಗತಿಯನ್ನು |
| **ತನ್ನಿಷ್ಠಾಃ** | - ಸಚ್ಚಿದಾನಂದಘನ ಪರಮಾತ್ಮನಲ್ಲಿಯೇ ಯಾರಿಗೆ ನಿರಂತರವಾದ | **ಗಚ್ಛಂತಿ** | - ಪಡೆಯುತ್ತಾರೆ. |

ವಿದ್ಯಾವಿನಯಸಂಪನ್ನೇ, ಬ್ರಾಹ್ಮಣೇ, ಗವಿ, ಹಸ್ತಿನಿ,
ಶುನಿ, ಚ, ಏವ, ಶ್ವಪಾಕೇ, ಚ, ಪಂಡಿತಾಃ, ಸಮದರ್ಶಿನಃ ॥೧೮॥

**ಹಾಗೆಯೇ**

| | | | |
|---|---|---|---|
| **ಪಂಡಿತಾಃ** | - ಜ್ಞಾನಿಗಳು | **ಶುನಿ** | - ನಾಯಿಯಲ್ಲಿ |
| **ವಿದ್ಯಾವಿನಯ-** | - ವಿದ್ಯಾ ಮತ್ತು | **ಚ** | - ಮತ್ತು |
| **ಸಂಪನ್ನೇ** | ವಿನಯ ಯುಕ್ತರಾದ | **ಶ್ವಪಾಕೇ** | - ಚಾಂಡಾಲನಲ್ಲಿ |
| **ಬ್ರಾಹ್ಮಣೇ** | - ಬ್ರಾಹ್ಮಣನಲ್ಲಿ | | (ಯೂ) |
| **ಚ** | - ಹಾಗೂ | **ಸಮದರ್ಶಿನಃ,** | - ಸಮದರ್ಶಿ- |
| **ಗವಿ** | - ಹಸುವಿನಲ್ಲಿ | **ಏವ** | ಗಳಾಗಿಯೇ* |
| **ಹಸ್ತಿನಿ** | - ಆನೆಯಲ್ಲಿ | | (ಇರುತ್ತಾರೆ). |

ಇಹ, ಏವ, ತೈಃ, ಜಿತಃ ಸರ್ಗಃ, ಯೇಷಾಮ್, ಸಾಮ್ಯೇ, ಸ್ಥಿತಮ್, ಮನಃ
ನಿರ್ದೋಷಮ್, ಹಿ, ಸಮಮ್, ಬ್ರಹ್ಮ, ತಸ್ಮಾತ್, ಬ್ರಹ್ಮಣಿ, ತೇ, ಸ್ಥಿತಾಃ ॥೧೯॥

**ಆದುದರಿಂದ -**

| | | | |
|---|---|---|---|
| **ಯೇಷಾಮ್** | - ಯಾರ | **ಸಾಮ್ಯೇ** | - ಸಮಭಾವದಲ್ಲಿ |
| **ಮನಃ** | - ಮನಸ್ಸು | **ಸ್ಥಿತಮ್** | - ಸ್ಥಿತವಾಗಿದೆಯೋ |
| **ತೈಃ** | - ಅವರು | **ನಿರ್ದೋಷಮ್** | - ನಿರ್ದೋಷನು (ಮತ್ತು) |
| **ಇಹ, ಏವ** | - ಈ ಜೀವಿತ ಅವಸ್ಥೆಯಲ್ಲಿಯೇ | **ಸಮಮ್** | - ಸಮನಾಗಿದ್ದಾನೆ |
| **ಸರ್ಗಃ** | - ಸಮಸ್ತ ಜಗತ್ತು | **ತಸ್ಮಾತ್** | - ಇದರಿಂದಾಗಿ |
| **ಜಿತಃ** | - ಗೆದ್ದಿರುವರು* | **ತೇ** | - ಅವರು |
| **ಹಿ** | - ಏಕೆಂದರೆ | **ಬ್ರಹ್ಮಣಿ** | - ಸಚ್ಚಿದಾನಂದಘನ ಪರಮಾತ್ಮನಲ್ಲಿಯೇ |
| **ಬ್ರಹ್ಮ** | - ಸಚ್ಚಿದಾನಂದಘನ ಪರಮಾತ್ಮನು | **ಸ್ಥಿತಾಃ** | - ಸ್ಥಿತವಾಗಿರುತ್ತಾರೆ. |

ನ, ಪ್ರಹೃಷ್ಯೇತ್, ಪ್ರಿಯಮ್, ಪ್ರಾಪ್ಯ, ನ, ಉದ್ವಿಜೇತ್, ಪ್ರಾಪ್ಯ, ಚ, ಅಪ್ರಿಯಮ್,
ಸ್ಥಿರಬುದ್ಧಿಃ ಅಸಂಮೂಢಃ, ಬ್ರಹ್ಮವಿತ್, ಬ್ರಹ್ಮಣಿ, ಸ್ಥಿತಃ ॥೨೦॥

**ಮತ್ತು ಯಾವ ಪುರುಷನು -**

| | | | |
|---|---|---|---|
| **ಪ್ರಿಯಮ್** | - ಪ್ರಿಯವಾದುದನ್ನು | **ಸ್ಥಿರಬುದ್ಧಿಃ** | - ಸ್ಥಿರಬುದ್ಧಿ |
| **ಪ್ರಾಪ್ಯ** | - ಪಡೆದರೂ | **ಅಸಂಮೂಢಃ** | - ಸಂಶಯರಹಿತನಾದ |
| **ನ, ಪ್ರಹೃಷ್ಯೇತ್** | - ಹರ್ಷಿತ ನಾಗುವುದಿಲ್ಲವೋ | **ಬ್ರಹ್ಮವಿತ್** | - ಬ್ರಹ್ಮವೇತ್ತನಾದ ಪುರುಷನು |
| **ಚ** | - ಮತ್ತು | **ಬ್ರಹ್ಮಣಿ** | - ಸಚ್ಚಿದಾನಂದಘನ ಪರಬ್ರಹ್ಮ ಪರಮಾತ್ಮನಲ್ಲಿ (ಏಕೀಭಾವದಿಂದ) |
| **ಅಪ್ರಿಯಮ್** | - ಅಪ್ರಿಯವಾದುದನ್ನು | | |
| **ಪ್ರಾಪ್ಯ** | - ಪಡೆದರೂ | | |
| **ನ, ಉದ್ವಿಜೇತ್** | - ಉದ್ವಿಗ್ನ ನಾಗುವುದಿಲ್ಲವೋ (ಅ) | **ಸ್ಥಿತಃ** | - ನಿತ್ಯ ಸ್ಥಿತನಾಗಿರುತ್ತಾನೆ. |

ಬಾಹ್ಯಸ್ಪರ್ಶೇಷು, ಅಸಕ್ತಾತ್ಮಾ, ವಿಂದತಿ, ಆತ್ಮನಿ, ಯತ್, ಸುಖಮ್,
ಸಃ ಬ್ರಹ್ಮಯೋಗಯುಕ್ತಾತ್ಮಾ, ಸುಖಮ್, ಅಕ್ಷಯಮ್, ಅಶ್ನುತೇ ॥೨೧॥

ಮತ್ತು-

| | | | |
|---|---|---|---|
| **ಬಾಹ್ಯಸ್ಪರ್ಶೇಷು** | - ಹೊರಗಿನ ವಿಷಯಗಳಲ್ಲಿ | **ಸಃ** | - ಆ |
| **ಅಸಕ್ತಾತ್ಮಾ** | - ಆಸಕ್ತಿ ರಹಿತವಾದ ಅಂತಃಕರಣವು (ಸಾಧಕನು) | **ಬ್ರಹ್ಮಯೋಗ - ಯುಕ್ತಾತ್ಮಾ** | - ಸಚ್ಚಿದಾನಂದ ಘನನಾದ ಪರಬ್ರಹ್ಮ ಪರಮಾತ್ಮನ ಧ್ಯಾನ ರೂಪವಾದ ಯೋಗ ದಲ್ಲಿ ಅಭಿನ್ನ ಭಾವ ದಿಂದ ಸ್ಥಿತನಾದ ಪುರುಷನು |
| **ಆತ್ಮನಿ** | - ಆತ್ಮನಲ್ಲಿ(ಸ್ಥಿತವಾದ) | | |
| **ಯತ್** | - ಯಾವ | | |
| **ಸುಖಮ್** | - ಧ್ಯಾನಜನಿತವಾದ ಸಾತ್ವಿಕ ಆನಂದವಿದೆಯೋ | | |
| **(ತತ್)** | - ಅದನ್ನು | **ಅಕ್ಷಯಮ್** | - ಅಕ್ಷಯವಾದ |
| **ವಿಂದತಿ** | - ಪಡೆಯುತ್ತಾನೆ (ಅನಂತರ) | **ಸುಖಮ್** | - ಆನಂದವನ್ನು |
| | | **ಅಶ್ನುತೇ** | - ಅನುಭವಿಸುತ್ತಾನೆ |

ಯೇ, ಹಿ, ಸಂಸ್ಪರ್ಶಜಾಃ, ಭೋಗಾಃ, ದುಃಖಯೋನಯಃ, ಏವ, ತೇ,
ಆದ್ಯಂತವಂತಃ, ಕೌಂತೇಯ, ನ, ತೇಷು, ರಮತೇ, ಬುಧಃ ॥೨೨॥

| | | | |
|---|---|---|---|
| **ಯೇ** | - ಯಾವ | **ದುಃಖ- ಯೋನಯಃ, ಏವ** | - ದುಃಖಕ್ಕೆ ಕಾರಣ ವಾಗಿಯೇ ಇವೆ |
| **ಸಂಸ್ಪರ್ಶಜಾಃ** | - ಇಂದ್ರಿಯ ಹಾಗೂ ವಿಷಯಗಳ ಸಂಯೋಗದಿಂದ ಉತ್ಪನ್ನವಾಗುವ | **(ಚ)** | (ಮತ್ತು) |
| | | **ಆದ್ಯಂತವಂತಃ** | - ಆದಿ-ಅಂತ್ಯಗಳುಳ್ಳ ವುಗಳಾಗಿವೆ ಅರ್ಥಾತ್ ಅನಿತ್ಯಗಳಾಗಿವೆ (ಆದುದರಿಂದ) |
| **ಭೋಗಾಃ** | - ಸಮಸ್ತ ಭೋಗಗಳಿವೆಯೋ | | |
| **ತೇ** | - ಅವು (ವಿಷಯಿ- ಪುರುಷರುಗಳಿಗೆ ಸುಖರೂಪದಿಂದ ಭಾಸವಾಗುತ್ತವೆ ಯಾದರೂ ಸಹ) | **ಕೌಂತೇಯ** | - ಹೇ ಅರ್ಜುನನೇ |
| | | **ಬುಧಃ** | - ಬುದ್ಧಿವಂತರಾದ ವಿವೇಕಿ ಪುರುಷರು |
| | | **ತೇಷು** | - ಅವುಗಳಲ್ಲಿ |
| **ಹಿ** | - ನಿಸ್ಸಂದೇಹವಾಗಿ, | **ನ, ರಮತೇ** | - ರಮಿಸುವುದಿಲ್ಲ |

ಶಕ್ನೋತಿ, ಇಹ, ಏವ, ಯಃ, ಸೋಢುಂ, ಪ್ರಾಕ್, ಶರೀರವಿಮೋಕ್ಷಣಾತ್,
ಕಾಮಕ್ರೋಧೋದ್ಭವಮ್, ವೇಗಮ್, ಸಃ, ಯುಕ್ತಃ, ಸಃ, ಸುಖೀ, ನರಃ ॥೨೩॥

| | | | |
|---|---|---|---|
| **ಯಃ** | - ಯಾವ ಸಾಧಕನು | **ವೇಗಮ್** | - ವೇಗವನ್ನು |
| **ಇಹ** | - ಈ ಮನುಷ್ಯ ಶರೀರದಲ್ಲಿ | **ಸೋಢುಮ್** | - ಸಹಿಸುವುದರಲ್ಲಿ |
| **ಶರೀರವಿ-ಮೋಕ್ಷಣಾತ್** | - ಶರೀರ ನಾಶವಾಗುವುದಕ್ಕೆ | **ಶಕ್ನೋತಿ** | - ಸಮರ್ಥನಾಗುತ್ತಾನೆಯೋ |
| **ಪ್ರಾಕ್, ಏವ** | - ಮೊದಲೇ | **ಸಃ, ನರಃ** | - ಆ ಪುರುಷನು |
| **ಕಾಮಕ್ರೋಧೋ-ದ್ಭವಮ್** | - ಕಾಮ-ಕ್ರೋಧಗಳಿಂದ ಉತ್ಪನ್ನವಾಗುವ | **ಯುಕ್ತಃ** | - ಯೋಗಿಯು (ಮತ್ತು) |
| | | **ಸಃ** | - ಅವನೇ |
| | | **ಸುಖೀ** | - ಸುಖಿಯಾಗಿದ್ದಾನೆ. |

ಯಃ, ಅಂತಸುಖಃ, ಅಂತರಾರಾಮಃ, ತಥಾ, ಅಂತರ್ಜ್ಯೋತಿಃ, ಏವ, ಯಃ,
ಸಃ, ಯೋಗೀ, ಬ್ರಹ್ಮನಿರ್ವಾಣಮ್, ಬ್ರಹ್ಮಭೂತಃ, ಅಧಿಗಚ್ಛತಿ ॥೨೪॥

| | | | |
|---|---|---|---|
| **ಯಃ** | - ಯಾವ ಪುರುಷನು (ಬ್ರಹ್ಮನಿಗಿಂತ ಬೇರೆ ಯಾವುದೂ ಇಲ್ಲವೇ ಇಲ್ಲ ಎಂದು) | **ಯಃ** | - ಯಾರು |
| **ಏವ** | - ನಿಶ್ಚಯಮಾಡಿ | **ಅಂತರ್ಜ್ಯೋತಿಃ** | - ಆತ್ಮನಲ್ಲಿಯೇ ಜ್ಞಾನವುಳ್ಳವನಾಗಿದ್ದಾನೋ |
| **ಅಂತಃಸುಖಃ** | - ಅಂತರಾತ್ಮನಲ್ಲಿಯೇ ಸುಖವುಳ್ಳವನಾಗಿದ್ದಾನೋ | **ಸಃ** | - ಅವನು |
| **ಅಂತರಾರಾಮಃ** | - ಆತ್ಮನಲ್ಲಿಯೇ ರಮಿಸುವವನಾಗಿದ್ದಾನೆಯೋ | **ಬ್ರಹ್ಮಭೂತಃ** | - ಸಚ್ಚಿದಾನಂದಘನನಾದ ಪರಬ್ರಹ್ಮ ಪರಮಾತ್ಮನ ಜೊತೆಯಲ್ಲಿ ಏಕೀಭಾವವನ್ನು ಪಡೆದ |
| **ತಥಾ** | - ಹಾಗೂ | **ಯೋಗೀ** | - ಸಾಂಖ್ಯಯೋಗಿಯು |
| | | **ಬ್ರಹ್ಮನಿರ್ವಾಣಮ್** | - ಶಾಂತಬ್ರಹ್ಮನನ್ನು |
| | | **ಅಧಿಗಚ್ಛತಿ** | - ಪಡೆಯುತ್ತಾನೆ. |

ಲಭಂತೇ, ಬ್ರಹ್ಮನಿರ್ವಾಣಮ್, ಋಷಯಃ, ಕ್ಷೀಣಕಲ್ಮಷಾಃ,
ಛಿನ್ನದ್ವೈಧಾಃ, ಯತಾತ್ಮಾನಃ, ಸರ್ವಭೂತಹಿತೇ, ರತಾಃ ॥೨೫॥

**ಮತ್ತು-**

| | | | |
|---|---|---|---|
| **ಕ್ಷೀಣಕಲ್ಮಷಾಃ** | - ಯಾರ ಪಾಪಗಳೆಲ್ಲ ನಾಶವಾಗಿ ಹೋಗಿವೆಯೋ | **ಯತಾತ್ಮಾನಃ** | - ಯಾರ ಮನಸ್ಸು ಗೆಲ್ಲಲ್ಪಟ್ಟು ನಿಶ್ಚಲಭಾವದಿಂದ ಪರಮಾತ್ಮನಲ್ಲಿ ನೆಲೆನಿಂತಿದೆಯೋ (ಅವರು) |
| **ಛಿನ್ನದ್ವೈಧಾಃ** | - ಯಾರ ಸಂಶಯಗಳೆಲ್ಲ ಜ್ಞಾನದ ಮೂಲಕ ನಿವೃತ್ತಿ ಹೊಂದಿವೆಯೋ | **ಋಷಯಃ** | - ಬ್ರಹ್ಮವೇತ್ತರಾದ ಪುರುಷರು |
| **ಸರ್ವಭೂತ-ಹಿತೇ, ರತಾಃ** | - ಯಾರು ಸಮಸ್ತ ಪ್ರಾಣಿಗಳ ಹಿತದಲ್ಲಿ ನಿರತರಾಗಿದ್ದಾರೋ (ಮತ್ತು) | **ಬ್ರಹ್ಮನಿರ್ವಾಣಮ್** | - ಶಾಂತಬ್ರಹ್ಮವನ್ನು |
| | | **ಲಭಂತೇ** | - ಪಡೆಯುತ್ತಾರೆ. |

ಕಾಮಕ್ರೋಧವಿಯುಕ್ತಾನಾಂ, ಯತೀನಾಂ, ಯತಚೇತಸಾಮ್,
ಅಭಿತಃ, ಬ್ರಹ್ಮನಿರ್ವಾಣಂ, ವರ್ತತೇ, ವಿದಿತಾತ್ಮನಾಮ್ ॥೨೬॥

| | | | |
|---|---|---|---|
| **ಕಾಮಕ್ರೋಧ** | - ಕಾಮಕ್ರೋಧ | **ಯತೀನಾಮ್** | - ಜ್ಞಾನೀಪುರುಷರಿಗೆ |
| **ವಿಯುಕ್ತಾನಾಮ್** | ರಹಿತರು | **ಅಭಿತಃ** | - ಎಲ್ಲ ಕಡೆಗಳಿಂದ |
| **ಯತಚೇತಸಾಮ್** | - ಚಿತ್ತವನ್ನು ಗೆದ್ದಿರುವವರು | **ಬ್ರಹ್ಮ-** | - ಶಾಂತ ಪರಬ್ರಹ್ಮ |
| **ವಿದಿತಾತ್ಮನಾಮ್** | - ಪರಬ್ರಹ್ಮ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಂಡಿರುವ | **ನಿರ್ವಾಣಮ್** | ಪರಮಾತ್ಮನೇ |
| | | **ವರ್ತತೇ** | - ಪರಿಪೂರ್ಣನಾಗಿದ್ದಾನೆ |

ಸ್ಪರ್ಶಾನ್, ಕೃತ್ವಾ, ಬಹಿಃ, ಬಾಹ್ಯನ್, ಚಕ್ಷುಃ, ಚ, ಏವ, ಅಂತರೇ, ಭ್ರುವೋಃ,
ಪ್ರಾಣಾಪಾನೌ, ಸಮೌ, ಕೃತ್ವಾ, ನಾಸಾಭ್ಯಂತರಚಾರಿಣೌ ॥೨೭॥
ಯತೇಂದ್ರಿಯಮನೋಬುದ್ಧಿ ಮುನಿಃ ಮೋಕ್ಷಪರಾಯಣಃ,
ವಿಗತೇಚ್ಛಾಭಯಕ್ರೋಧಃ, ಯಃ, ಸದಾ, ಮುಕ್ತಃ, ಏವ, ಸಃ ॥೨೮॥

**ಮತ್ತು ಎಲೈ ಅರ್ಜುನ -**

| | | | |
|---|---|---|---|
| **ಬಾಹ್ಯಾನ್** | - ಹೊರಗಿನ | **ಯತೇಂದ್ರಿಯ** | - ಯಾರ |
| **ಸ್ಪರ್ಶಾನ್** | - ವಿಷಯ ಭೋಗಗಳನ್ನು | **ಮನೋಬುದ್ಧಿಃ** | ಇಂದ್ರಿಯಗಳು ಮನಸ್ಸು ಮತ್ತು ಬುದ್ಧಿ ಗೆಲ್ಲಲ್ಪಟ್ಟಿವೆಯೋ (ಅಂತಹ) |
| **ಬಹಿಃ, ಏವ** | - ಹೊರಗಡೆಯೇ | | |
| **ಕೃತ್ವಾ** | - ತ್ಯಜಿಸಿ, (ಅರ್ಥಾತ್ ವಿಷಯಗಳನ್ನು ಚಿಂತಿಸದೆ ಇರುತ್ತ) | **ಯಃ** | - ಯಾವ |
| **ಚ** | - ಮತ್ತು | **ಮೋಕ್ಷ-** | - ಮೋಕ್ಷಪರಾಯಣ |
| **ಚಕ್ಷುಃ** | - ನೇತ್ರಗಳ ದೃಷ್ಟಿಯನ್ನು | **ಪರಾಯಣಃ** | ನಾದ |
| **ಭ್ರುವೋಃ** | - ಭೃಕುಟಿಯ | **ಮುನಿಃ** | - ಮುನಿಯು* |
| **ಅಂತರೇ** | - ನಡುವೆ (ಸ್ಥಿರವಾಗಿಟ್ಟುಕೊಂಡು ಹಾಗೂ) | **ವಿಗತೇಚ್ಛಾ-** | - ಇಚ್ಛೆ ಭಯ |
| | | **ಭಯಕ್ರೋಧಃ** | ಮತ್ತು ಕ್ರೋಧಗಳಿಂದ ರಹಿತನಾಗಿದ್ದಾನೋ |
| **ನಾಸಾಭ್ಯಂತರ-** | - ಮೂಗಿನಲ್ಲಿ | | |
| **ಚಾರಿಣೌ** | ಸಂಚರಿಸುವ | **ಸಃ** | - ಅವನು |
| **ಪ್ರಾಣಾಪಾನೌ** | - ಪ್ರಾಣ ಮತ್ತು ಅಪಾನ ವಾಯುವನ್ನು | **ಸದಾ** | - ಸದಾ |
| | | **ಮುಕ್ತಃ, ಏವ** | - ಮುಕ್ತನಾದವನೇ ಆಗಿದ್ದಾನೆ |
| **ಸಮೌ, ಕೃತ್ವಾ** | - ಸಮಾನವಾಗಿಸಿ | | |

ಭೋಕ್ತಾರಮ್, ಯಜ್ಞತಪಸಾಮ್, ಸರ್ವಲೋಕಮೇಹೇಶ್ವರಮ್,
ಸುಹೃದಮ್, ಸರ್ವಭೂತಾನಾಮ್, ಜ್ಞಾತ್ವಾ, ಮಾಂ, ಶಾಂತಿಂ, ಋಚ್ಛತಿ ॥೨೯॥

**ಮತ್ತು ಎಲೈ ಅರ್ಜುನ! ನನ್ನ ಭಕ್ತನು -**

| | | | |
|---|---|---|---|
| **ಮಾಮ್** | - ನನ್ನನ್ನು | **ಸುಹೃದಮ್** | - ಸುಹೃದನು ಎಂದರೆ ಸ್ವಾರ್ಥ ರಹಿತನಾದ ದಯಾಳು ಮತ್ತು ಪ್ರೇಮಿ (ಹೀಗೆಂದು) |
| **ಯಜ್ಞತಪಸಾಮ್** | - ಎಲ್ಲ ಯಜ್ಞ ಮತ್ತು ತಪಸ್ಸುಗಳನ್ನು | | |
| **ಭೋಕ್ತಾರಮ್** | - ಭೋಗಿಸುವವನು | | |
| **ಸರ್ವಲೋಕ-ಮಹೇಶ್ವರಮ್** | - ಸಮಸ್ತ ಲೋಕಗಳ ಒಡೆಯರಿಗೂ ಒಡೆಯನು (ಹಾಗೂ) | **ಜ್ಞಾತ್ವಾ** | - ತತ್ವಶಃ ತಿಳಿದು |
| | | **ಶಾಂತಿಮ್** | - ಶಾಂತಿಯನ್ನು |
| **ಸರ್ವಭೂತಾನಾಂ** | - ಸಮಸ್ತ ಭೂತ-ಪ್ರಾಣಿಗಳ | **ಋಚ್ಛತಿ** | - ಪಡೆಯುತ್ತಾನೆ. |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 6 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ಷಷ್ಠೋऽಧ್ಯಾಯಃ - ಆತ್ಮಸಂಯಮಯೋಗ ॥

### ಶ್ರೀ ಭಗವಾನುವಾಚ

ಅನಾಶ್ರಿತಃ, ಕರ್ಮಫಲಮ್, ಕಾರ್ಯಮ್, ಕರ್ಮ, ಕರೋತಿ, ಯಃ,
ಸಃ, ಸಂನ್ಯಾಸೀ, ಚ, ಯೋಗೀ, ಚ, ನ, ನಿರಗ್ನಿಃ, ನ, ಚ, ಅಕ್ರಿಯಃ, ॥೧॥

**ಅನಂತರ ಶ್ರೀಕೃಷ್ಣಪರಮಾತ್ಮ ಹೇಳಿದ, ಎಲೈ ಅರ್ಜುನ -**

| | | | |
|---|---|---|---|
| **ಯಃ** | - ಯಾವ ಪುರುಷನು | **ಚ** | - ಹಾಗೂ |
| **ಕರ್ಮಫಲಮ್** | - ಕರ್ಮಫಲವನ್ನು | **ಯೋಗೀ** | - ಯೋಗಿಯಾಗಿದ್ದಾನೆ |
| **ಅನಾಶ್ರಿತಃ** | - ಆಶ್ರಯವನ್ನು ಪಡೆಯದೆ | **ಚ** | - ಮತ್ತು |
| | | **ನಿರಗ್ನಿಃ, ನ** | - ಕೇವಲ ಅಗ್ನಿಯನ್ನು ತ್ಯಜಿಸಿದವನು ಸಂನ್ಯಾಸಿಯಲ್ಲ |
| **ಕಾರ್ಯಮ್-ಕರ್ಮ** | - ಕರ್ತವ್ಯ ಕರ್ಮವನ್ನು | | |
| **ಕರೋತಿ** | - ಮಾಡುತ್ತಾನೆಯೋ | **ಚ** | - ಮತ್ತು |
| **ಸಃ** | - ಅವನು | **ಅಕ್ರಿಯಃ, ನ** | - ಕೇವಲ ಕ್ರಿಯೆಗಳನ್ನು ತ್ಯಾಗಮಾಡುವವನು ಯೋಗಿಯಲ್ಲ, |
| **ಸಂನ್ಯಾಸೀ** | - ಸಂನ್ಯಾಸೀ | | |

ಯಂ, ಸಂನ್ಯಾಸಂ, ಇತ, ಪ್ರಾಹುಃ, ಯೋಗಮ್, ತಮ್, ವಿದ್ಧಿ
ಪಾಂಡವ, ನ, ಹಿ, ಅಸಂನ್ಯಸ್ತಸಂಕಲ್ಪಃ, ಯೋಗೀ, ಭವತಿ, ಕಶ್ಚನ ॥೨॥

**ಆದುದರಿಂದ -**

**ಪಾಂಡವ** - ಹೇ ಅರ್ಜುನನೇ
**ಯಮ್** - ಯಾವುದನ್ನು
**ಸಂನ್ಯಾಸಮ್** - ಸಂನ್ಯಾಸ*
**ಇತಿ, ಪ್ರಾಹುಃ** - ಎಂದು ಹೇಳುವರೋ
**ತಮ್** - ಅದನ್ನೇ (ನೀನು)
**ಯೋಗಮ್** - ಯೋಗ ‡ ವೆಂದು
**ವಿದ್ಧಿ** - ತಿಳಿ
**ಹಿ** - ಏಕೆಂದರೆ
**ಅಸಂನ್ಯಸ್ತ-ಸಂಕಲ್ಪಃ** - ಸಂಕಲ್ಪಗಳ ತ್ಯಾಗವನ್ನು ಮಾಡದಿರುವ
**ಕಶ್ಚನ** - ಯಾವ ಪುರುಷನೂ ಕೂಡ
**ಯೋಗೀ** - ಯೋಗೀ
**ನ, ಭವತಿ** - ಆಗುವುದಿಲ್ಲ

ಆರುರುಕ್ಷೋಃ, ಮುನೇಃ, ಯೋಗಂ, ಕರ್ಮ, ಕಾರಣಂ, ಉಚ್ಯತೇ,
ಯೋಗಾರೂಢಸ್ಯ, ತಸ್ಯ, ಏವ, ಶಮಃ, ಕಾರಣಂ, ಉಚ್ಯತೇ ॥೩॥

**ಯೋಗಮ್** - ಯೋಗದಲ್ಲಿ
**ಆರುರುಕ್ಷೋಃ** - ಆರೂಢನಾಗಬೇಕೆಂಬ ಇಚ್ಛೆಯುಳ್ಳ
**ಮುನೇಃ** - ಮನನಶೀಲನಾದ ಪುರುಷನಿಗಾಗಿ
**ಕರ್ಮ** - ನಿಷ್ಕಾಮಭಾವದಿಂದ ಕರ್ಮಮಾಡುವುದೇ
**ಕಾರಣಮ್** - (ಯೋಗದ ಪ್ರಾಪ್ತಿಯಲ್ಲಿ) ಕಾರಣವೆಂದು
**ಉಚ್ಯತೇ** - ಹೇಳಲಾಗುತ್ತದೆ (ಮತ್ತು ಯೋಗಾ ರೂಢನಾದ ಮೇಲೆ)
**ತಸ್ಯ** - ಆ
**ಯೋಗಾರೂಢಸ್ಯ** - ಯೋಗಾರೂಢನಾದ ಪುರುಷನ
**ಶಮಃ** - ಯಾವ ಎಲ್ಲ ಸಂಕಲ್ಪಗಳ ಅಭಾವವಿದೆಯೋ
**ಏವ** - ಅದೇ (ಅವನ ಶ್ರೇಯಸ್ಸಿಗೆ)
**ಕಾರಣಮ್** - ಕಾರಣವೆಂದು
**ಉಚ್ಯತೇ** - ಹೇಳಲಾಗುತ್ತದೆ.

ಯದಾ, ಹಿ, ನ, ಇಂದ್ರಿಯಾರ್ಥೇಷು, ನ, ಕರ್ಮಸು, ಅನುಷಜ್ಜತೇ,
ಸರ್ವಸಂಕಲ್ಪಸಂನ್ಯಾಸೀ, ಯೋಗಾರೂಢಃ, ತದಾ, ಉಚ್ಯತೇ ॥೪॥

**ಯದಾ** - ಯಾವ ಕಾಲದಲ್ಲಿ
**ಇಂದ್ರಿಯಾ-ರ್ಥೇಷು** - ಇಂದ್ರಿಯಗಳ ಭೋಗಗಳಲ್ಲಿ
**ನ-ಅನುಷಜ್ಜತೆ** - ಆಸಕ್ತನಾಗುವುದಿಲ್ಲ (ಮತ್ತು)
**ಕರ್ಮಸು, ಹಿ** - ಕರ್ಮಗಳಲ್ಲಿಯೂ
**ನ, (ಅನುಷಜ್ಜತೇ)** - ಆಸಕ್ತನಾಗುವುದಿಲ್ಲ
**ತದಾ** - ಆ ಕಾಲದಲ್ಲಿ
**ಸರ್ವಸಂಕಲ್ಪ-ಸಂನ್ಯಾಸೀ** - ಎಲ್ಲ ಸಂಕಲ್ಪಗಳನ್ನು ತ್ಯಾಗಮಾಡಿದ ಪುರುಷನು
**ಯೋಗಾರೂಢಃ** - ಯೋಗಾ ರೂಢನೆಂದು
**ಉಚ್ಯತೇ** - ಹೇಳಲ್ಪಡುತ್ತಾನೆ.

ಉದ್ಧರೇತ್, ಆತ್ಮನಾ, ಆತ್ಮಾನಮ್, ನ, ಆತ್ಮಾನಮ್, ಅವಸಾದಯೇತ್,
ಆತ್ಮಾ ಏವ, ಹಿ, ಆತ್ಮನಃ, ಬಂಧುಃ, ಆತ್ಮಾ ಏವ, ರಿಪುಃ, ಆತ್ಮನಃ ॥೫॥

**ಆದುದರಿಂದ ಮನುಷ್ಯನು ಅಗತ್ಯವಾಗಿ -**

**ಆತ್ಮನಾ** - ತನ್ನ ಮೂಲಕ
**ಆತ್ಮಾನಮ್** - ತನ್ನನ್ನು (ಸಂಸಾರಸಾಗರದಿಂದ)
**ಉದ್ಧರೇತ್** - ಉದ್ಧರಿಸಿಕೊಳ್ಳಲಿ (ಮತ್ತು)
**ಆತ್ಮಾನಮ್** - ತನ್ನನ್ನು
**ನ, ಅವಸಾದ-ಯೇತ್** - ಅಧೋಗತಿಯಲ್ಲಿ ಹಾಕದಿರಲಿ
**ಹಿ** - ಏಕೆಂದರೆ (ಈ ಮನುಷ್ಯನು)
**ಆತ್ಮಾ, ಏವ** - ತನಗೆ ತಾನೆ
**ಆತ್ಮನಃ, ಬಂಧುಃ** ಮಿತ್ರನಾಗಿದ್ದಾನೆ (ಹಾಗೂ)
**ಆತ್ಮಾ, ಏವ** - ತನಗೆ ತಾನೇ
**ಆತ್ಮನಃ, ರಿಪುಃ** ಶತ್ರುವಾಗಿದ್ದಾನೆ

ಬಂಧುಃ ಆತ್ಮಾ, ಆತ್ಮನಃ, ತಸ್ಯ, ಯೇನ, ಆತ್ಮಾ ಏವ, ಆತ್ಮನಾ, ಜಿತಃ,
ಅನಾತ್ಮನಃ, ತು, ಶತ್ರುತ್ವೇ, ವರ್ತೇತ, ಆತ್ಮಾ ಏವ, ಶತ್ರುವತ್ ॥೬॥

**ಯೇನ** - ಯಾವ
**ಆತ್ಮನಾ** - ಜೀವಾತ್ಮನ ಮೂಲಕ
**ಆತ್ಮಾ** - ಮನಸ್ಸು ಮತ್ತು ಇಂದ್ರಿಯಗಳ ಸಹಿತವಾಗಿ ಶರೀರವು
**ತು** - ಆದರೆ
**ಅನಾತ್ಮನಃ** - ಯಾರ ಮೂಲಕ ಮನಸ್ಸು ಹಾಗೂ ಇಂದ್ರಿಯಗಳ ಸಹಿತವಾಗಿ ಶರೀರವು
**ಜಿತಃ** - ಗೆಲ್ಲಲ್ಪಟ್ಟಿದೆಯೋ
**ತಸ್ಯ** - ಆ
**ಆತ್ಮನಃ** - ಜೀವಾತ್ಮನಿಗಾದರೋ
**ಆತ್ಮಾ, ಏವ** - ಅವನು ತನಗೆ ತಾನೇ
**ಬಂಧುಃ** ಮಿತ್ರನಾಗಿದ್ದಾನೆ
ಗೆಲ್ಲಲ್ಪಟ್ಟಿಲ್ಲವೋ ಅವನಿಗಾಗಿ
**ಆತ್ಮಾ, ಏವ** - ಅವನು ಸ್ವತಃ
**ಶತ್ರುವತ್** - ಶತ್ರುವಿನಂತೆ
**ಶತ್ರುತ್ವೇ** - ಶತ್ರುತ್ವದಲ್ಲಿ
**ವರ್ತೇತ** - ವರ್ತಿಸುತ್ತಾನೆ.

ಜಿತಾತ್ಮನಃ, ಪ್ರಶಾಂತಸ್ಯ, ಪರಮಾತ್ಮಾ ಸಮಾಹಿತಃ,
ಶೀತೋಷ್ಣಸುಖದುಃಖೇಷು, ತಥಾ, ಮಾನಾಪಮಾನಯೋಃ, ॥೭॥

**ಮತ್ತು ಎಲೈ ಅರ್ಜುನ -**

**ಶೀತೋಷ್ಣಸುಖ ದುಃಖೇಷು** - ಶೀತ-ಉಷ್ಣ ಮತ್ತು ಸುಖ-ದುಃಖಾದಿಗಳಲ್ಲಿ
**ತಥಾ** - ಹಾಗೂ
**ಮಾನಾಪ-ಮಾನಯೋಃ** - ಮಾನ ಮತ್ತು ಅಪಮಾನಗಳಲ್ಲಿ
**ಪ್ರಶಾಂತಸ್ಯ** - ಯಾರ ಅಂತಃಕರಣದ
(ಜ್ಞಾನದಲ್ಲಿ)
**ಪರಮಾತ್ಮಾ** - ಸಚ್ಚಿದಾನಂದಘನ ಪರಮಾತ್ಮನು
**ಸಮಾಹಿತಃ** - ಸಮ್ಯಕ್ ಪ್ರಕಾರದಿಂದ ಸ್ಥಿತನಾಗಿರುತ್ತಾನೆ

| | | | |
|---|---|---|---|
| | ವೃತ್ತಿಗಳು ಚೆನ್ನಾಗಿ ಶಾಂತವಾಗಿಯೋ (ಅಂತಹ) | | ಅರ್ಥಾತ್ ಅವನ ಜ್ಞಾನದಲ್ಲಿ ಪರಮಾತ್ಮನಲ್ಲದೆ ಬೇರೇನೂ ಇಲ್ಲವೇ ಇಲ್ಲ |
| **ಜಿತಾತ್ಮನಃ** | - ಆತ್ಮವನ್ನು ಸ್ವಾಧೀನ ಪಡಿಸಿಕೊಂಡ ಪುರುಷರ | | |

ಜ್ಞಾನವಿಜ್ಞಾನತೃಪ್ತಾತ್ಮಾ, ಕೂಟಸ್ಥಃ, ವಿಜಿತೇಂದ್ರಿಯಃ,
ಯುಕ್ತಃ, ಇತಿ, ಉಚ್ಯತೇ, ಯೋಗೀ, ಸಮಲೋಷ್ಟಾಶ್ಮಕಾಂಚನಃ ॥೮॥

**ಮತ್ತು-**

| | | | |
|---|---|---|---|
| **ಜ್ಞಾನವಿಜ್ಞಾನ-ತೃಪ್ತಾತ್ಮಾ** | - ಯಾರ ಅಂತಃಕರಣವು ಜ್ಞಾನ-ವಿಜ್ಞಾನದಿಂದ ತೃಪ್ತವಾಗಿದೆಯೋ | **ಸಮಲೋಷ್ಟಾ-ಶ್ಮಕಾಂಚನಃ** | - ಯಾರಿಗೆ ಕಲ್ಲು ಮಣ್ಣು ಮತ್ತು ಚಿನ್ನ ಸಮಾನವಾಗಿವೆಯೋ |
| **ಕೂಟಸ್ಥಃ** | - ಯಾರ ಸ್ಥಿತಿಯು ವಿಕಾರರಹಿತ ವಾಗಿದೆಯೋ | **ಯೋಗೀ** | - (ಆ) ಯೋಗಿಯು |
| | | **ಯುಕ್ತಃ** | - ಯುಕ್ತನು ಅರ್ಥಾತ್ ಭಗವತ್ಪ್ರಾಪ್ತ ನಾಗಿದ್ದಾನೆ |
| **ವಿಜಿತೇಂದ್ರಿಯಃ** | - ಯಾರ ಇಂದ್ರಿಯಗಳು ಪೂರ್ಣವಾಗಿ ಗೆಲ್ಲಲ್ಪಟ್ಟಿವೆಯೋ (ಮತ್ತು) | **ಇತಿ** | - ಹೀಗೆ |
| | | **ಉಚ್ಯತೇ** | - ಹೇಳಲಾಗುತ್ತದೆ. |

ಸುಹೃದ್, ಮಿತ್ರ ಅರಿ, ಉದಾಸೀನ, ಮಧ್ಯಸ್ಥ, ದ್ವೇಷ್ಯ, ಬಂಧುಷು,
ಸಾಧುಷು, ಅಪಿ, ಚ, ಪಾಪೇಷು, ಸಮಬುದ್ಧಿಃ, ವಿಶಿಷ್ಯತೇ ॥೯॥

| | | | |
|---|---|---|---|
| **ಸುಹೃದ್** | - ಸಹೃದಯಿ* | **ಸಾಧುಷು** | - ಧರ್ಮಾತ್ಮರಲ್ಲಿ |
| **ಮಿತ್ರ** | - ಸ್ನೇಹಿತ | **ಚ** | - ಮತ್ತು |
| **ಅರಿ** | - ಶತ್ರು | **ಪಾಪೇಷು** | - ಪಾಪಿಗಳಲ್ಲಿ |
| **ಉದಾಸೀನ** | - ಉದಾಸೀನ † | **ಅಪಿ** | - ಕೂಡ |
| **ಮಧ್ಯಸ್ಥ** | - ಮಧ್ಯಸ್ಥರು‡ | **ಸಮಬುದ್ಧಿಃ** | - ಸಮಭಾವ ವನ್ನಿಡುವವನು |
| **ದ್ವೇಷ್ಯ** | - ದ್ವೇಷೀ (ಮತ್ತು) | | |
| **ಬಂಧುಷು** | - ಬಂಧು-ಬಾಂಧವರಲ್ಲಿ (ಹಾಗೂ) | **ವಿಶಿಷ್ಯತೇ** | - ಅತ್ಯಂತ ಶ್ರೇಷ್ಠನಾಗಿದ್ದಾನೆ |

ಯೋಗೀ, ಯುಂಜೀತ, ಸತತಮ್, ಆತ್ಮಾನಮ್, ರಹಸಿ, ಸ್ಥಿತಃ,
ಏಕಾಕೀ, ಯತಚಿತ್ತಾತ್ಮಾ, ನಿರಾಶೀಃ, ಅಪರಿಗ್ರಹಃ ॥೧೦॥

**ಆದುದರಿಂದ ಇದು ಉಚಿತವಾಗಿದೆ -**

| | | | |
|---|---|---|---|
| **ಯತಚಿತ್ತಾತ್ಮಾ** | - ಮನಸ್ಸು ಮತ್ತು | **ಯೋಗೀ** | - ಯೋಗಿಯು |

| | | | |
|---|---|---|---|
| | ಇಂದ್ರಿಯಗಳ ಸಹಿತವಾಗಿ ಶರೀರವನ್ನು ತನ್ನ ವಶದಲ್ಲಿ ಇಟ್ಟುಕೊಂಡವನೂ | **ಏಕಾಕೀ** | - ಒಬ್ಬಂಟಿಗನಾಗಿ |
| **ನಿರಾಶೀಃ** | - ಆಶಾರಹಿತನೂ (ಮತ್ತು) | **ರಹಸಿ** | - ಏಕಾಂತಸ್ಥಾನದಲ್ಲಿ |
| **ಅಪರಿಗ್ರಹಃ** | - ಸಂಗ್ರಹರಹಿತನೂ (ಆದ) | **ಸ್ಥಿತಃ** | - ಸ್ಥಿತನಾಗಿ |
| | | **ಆತ್ಮಾನಮ್** | - ಆತ್ಮವನ್ನು |
| | | **ಸತತಮ್** | - ನಿರಂತರ |
| | | **ಯುಂಜೀತ** | - (ಪರಮಾತ್ಮನಲ್ಲಿ) ತೊಡಗಿಸಬೇಕು. |

ಶುಚೌ, ದೇಶೇ, ಪ್ರತಿಷ್ಠಾಪ್ಯ, ಸ್ಥಿರಂ, ಆಸನಂ, ಆತ್ಮನಃ,
ನ, ಅತ್ಯುಚ್ಛ್ರಿತಂ, ನ, ಅತಿನೀಚಂ, ಚೈಲಾಜಿನಕುಶೋತ್ತರಮ್ ॥೧೧॥

| | | | |
|---|---|---|---|
| **ಶುಚೌ** | - ಶುದ್ಧವಾದ | | ಎತ್ತರವಾಗಿಲ್ಲದೆ (ಮತ್ತು) |
| **ದೇಶೇ** | - ಭೂಮಿಯಲ್ಲಿ (ಅದರ ಮೇಲೆ ಕ್ರಮವಾಗಿ) | **ನ, ಅತಿನೀಚಮ್** | - ಬಹಳ ತಗ್ಗಾಗಿಲ್ಲದಂತೆ (ಅಂತಹ) |
| **ಚೈಲಾಜಿನ-ಕುಶೋತ್ತರಮ್** | - ಕುಶ ಮೃಗಚರ್ಮ ಮತ್ತು ವಸ್ತ್ರಗಳು ಹಾಸಿವೆಯೋ (ಹಾಗೆಯೇ) | **ಆತ್ಮನಃ** | - ತನ್ನ |
| | | **ಆಸನಮ್** | - ಆಸನವನ್ನು |
| | | **ಸ್ಥಿರಮ್** | - ಸ್ಥಿರವಾಗಿ |
| | | **ಪ್ರತಿಷ್ಠಾಪ್ಯ** | - ಸ್ಥಾಪನೆಮಾಡಿ |
| **ನ, ಅತ್ಯುಚ್ಛ್ರಿತಮ್** | - ಬಹಳ | | |

ತತ್ರ, ಏಕಾಗ್ರಮ್, ಮನಃ, ಕೃತ್ವಾ, ಯತಚಿತ್ತೇಂದ್ರಿಯಕ್ರಿಯಃ,
ಉಪವಿಶ್ಯ, ಆಸನೇ, ಯುಂಜ್ಯಾತ್, ಯೋಗಮ್, ಆತ್ಮವಿಶುದ್ಧಯೇ ॥೧೨॥

| | | | |
|---|---|---|---|
| **ತತ್ರ, ಆಸನೇ** | - ಆ ಆಸನದಲ್ಲಿ | **ಮನಃ** | - ಮನಸ್ಸನ್ನು |
| **ಉಪವಿಶ್ಯ** | - ಕುಳಿತುಕೊಂಡು | **ಏಕಾಗ್ರಮ್ ಕೃತ್ವಾ** | - ಏಕಾಗ್ರಗೊಳಿಸಿ |
| **ಯತಚಿತ್ತೇಂ-ದ್ರಿಯಕ್ರಿಯಃ** | - ಚಿತ್ತ ಮತ್ತು ಇಂದ್ರಿಯಗಳ ಕ್ರಿಯೆಗಳನ್ನು ವಶದಲ್ಲಿಟ್ಟುಕೊಂಡು | **ಆತ್ಮವಿಶುದ್ಧಯೇ** | - ಅಂತಃಕರಣದ ಶುದ್ಧಿಗಾಗಿ |
| | | **ಯೋಗಮ್** | - ಯೋಗದ |
| | | **ಯುಂಜ್ಯಾತ್** | - ಅಭ್ಯಾಸವನ್ನು ಮಾಡಲಿ. |

ಸಮಮ್, ಕಾಯಶಿರೋಗ್ರೀವಮ್, ಧಾರಯನ್, ಅಚಲಮ್, ಸ್ಥಿರಃ
ಸಂಪ್ರೇಕ್ಷ್ಯ, ನಾಸಿಕಾಗ್ರಮ್, ಸ್ವಮ್, ದಿಶಃ, ಚ, ಅನವಲೋಕಯನ್ ॥೧೩॥

**ಅದರ ವಿಧಾನ ಈ ರೀತಿಯಿದೆ-**

| | | | |
|---|---|---|---|
| **ಕಾಯಶಿರೋ-ಗ್ರೀವಮ್** | - ಶರೀರ ತಲೆ ಮತ್ತು ಕುತ್ತಿಗೆಯನ್ನು | **ಸ್ವಮ್** | - ತನ್ನ |
| **ಸಮಮ್** | - ಸಮಾನವಾಗಿ (ಹಾಗೂ) | **ನಾಸಿಕಾಗ್ರಮ್** | - ನಾಸಿಕದ ಅಗ್ರಭಾಗದಲ್ಲಿ |
| **ಅಚಲಮ್** | - ಅಚಲವಾಗಿ | **ಸಂಪ್ರೇಕ್ಷ್ಯ** | - ದೃಷ್ಟಿಯನ್ನು ನಿಲ್ಲಿಸಿ (ಬೇರೆ) |
| **ಧಾರಯನ್** | - ಇಟ್ಟುಕೊಂಡು | **ದಿಶಃ** | - ದಿಕ್ಕುಗಳನ್ನು |
| **ಚ** | - ಮತ್ತು | **ಅನವಲೋಕಯನ್** | - ನೋಡದೆ, |
| **ಸ್ಥಿರಃ** | - ಸ್ಥಿರವಾಗಿ | | |

ಪ್ರಶಾಂತಾತ್ಮಾ, ವಿಗತಭೀಃ, ಬ್ರಹ್ಮಚಾರಿವ್ರತೇ, ಸ್ಥಿತಃ
ಮನಃ, ಸಂಯಮ್ಯ, ಮಚ್ಚಿತ್ತಃ, ಯುಕ್ತಃ, ಆಸೀತ, ಮತ್ಪರಃ ॥೧೪॥

| | | | |
|---|---|---|---|
| **ಬ್ರಹ್ಮಚಾರಿವ್ರತೇ ಸ್ಥಿತಃ** | - ಬ್ರಹ್ಮಚಾರಿಯ ವ್ರತದಲ್ಲಿ ಸ್ಥಿತನಾಗಿದ್ದು | | ಯೋಗಿಯು |
| **ವಿಗತಭೀಃ** | - ಭಯರಹಿತನೂ (ಹಾಗೂ) | **ಮನಃ** | - ಮನಸ್ಸನ್ನು |
| **ಪ್ರಶಾಂತಾತ್ಮಾ** | - ಪೂರ್ಣವಾಗಿ ಶಾಂತವಾದ ಅಂತಃಕರಣವುಳ್ಳ | **ಸಂಯಮ್ಯ** | - ತಡೆದುಕೊಂಡು |
| **ಯುಕ್ತಃ** | - ಎಚ್ಚರಿಕೆಯುಳ್ಳ | **ಮಚ್ಚಿತ್ತಃ** | - ನನ್ನಲ್ಲಿಯೇ ಚಿತ್ತವುಳ್ಳವನಾಗಿ |
| | | **ಮತ್ಪರಃ** | - ನನ್ನಲ್ಲಿ ಪರಾಯಣನಾಗಿ |
| | | **ಆಸೀತ** | - ಕುಳಿತುಕೊಳ್ಳಬೇಕು. |

ಯುಂಜನ್, ಏವಂ, ಸದಾ, ಆತ್ಮಾನಮ್, ಯೋಗೀ, ನಿಯತಮಾನಸಃ
ಶಾಂತಿಮ್, ನಿರ್ವಾಣಪರಮಾಮ್, ಮತ್ಸಂಸ್ಥಾಮ್, ಅಧಿಗಚ್ಛತಿ ॥೧೫॥

| | | | |
|---|---|---|---|
| **ನಿಯತಮಾನಸಃ** | - ಮನಸ್ಸನ್ನು ವಶಪಡಿಸಿಕೊಂಡಿರುವ | **ಯುಂಜನ್** | - ತೊಡಗಿಸುತ್ತ |
| **ಯೋಗೀ** | - ಯೋಗಿಯು | **ಮತ್ಸಂಸ್ಥಾಮ್** | - ನನ್ನಲ್ಲಿ ಇರುವ |
| **ಏವಮ್** | - ಈ ಪ್ರಕಾರವಾಗಿ | **ನಿರ್ವಾಣ-ಪರಮಾಮ್** | - ಪರಮಾನಂದದ ಪರಾಕಾಷ್ಠಾ ರೂಪಿಯಾದ |
| **ಆತ್ಮಾನಮ್** | - ಆತ್ಮವನ್ನು | | |
| **ಸದಾ** | - ನಿರಂತರವಾಗಿ ಪರಮೇಶ್ವನಾದ (ನನ್ನಲ್ಲಿ) | **ಶಾಂತಿಮ್** | - ಶಾಂತಿಯನ್ನು |
| | | **ಅಧಿಗಚ್ಛತಿ** | - ಪಡೆಯುತ್ತಾನೆ. |

ನ, ಅತಿ, ಅಶ್ನತಃ ತು, ಯೋಗಃ, ಅಸ್ತಿ, ನ, ಚ, ಏಕಾಂತಮ್, ಅನಶ್ನತಃ
ನ, ಚ, ಅತಿ, ಸ್ವಪ್ನಶೀಲಸ್ಯ, ಜಾಗ್ರತಃ, ನ, ಏವ, ಚ, ಅರ್ಜುನಃ ॥೧೬॥

ಆದರೆ

| | | | |
|---|---|---|---|
| **ಅರ್ಜುನ** | - ಹೇ ಅರ್ಜುನನೇ! (ಈ) | **ಚ** | - ಹಾಗೂ |
| **ಯೋಗಃ** | - ಯೋಗವು | **ಅತಿ, ಸ್ವಪ್ನಶೀಲಸ್ಯ** | - ಬಹಳವಾಗಿ |
| **ಅತಿ, ಅಶ್ನತಃ ತು** | - ಬಹಳ ತಿನ್ನುವವನಿಗಾಗಿ | | ಮಲಗುವ |
| **ನ, ಅಸ್ತಿ** | - ಸಿದ್ಧಿಸುವುದಿಲ್ಲ | | ಸ್ವಭಾವವುಳ್ಳವನಿಗೂ |
| **ಚ** | - ಮತ್ತು | **ನ** | - ಸಿದ್ಧಿಸುವುದಿಲ್ಲ |
| **ಏಕಾಂತಮ್** | - ಸರ್ವಥಾ | **ಚ** | - ಮತ್ತು |
| **ಅನಶ್ನತಃ,** | ತಿನ್ನದಿರುವವನಿ | **ಜಾಗ್ರತಃ,** | - ಮಲಗದೇ |
| | ಗಾಗಿಯೂ | **ಏವ** | ಇರುವವನಿಗೂ |
| **ನ** | - ದೊರೆಯುವುದಿಲ್ಲ | **ನ** | - ಸಿದ್ಧಿಸುವುದಿಲ್ಲ. |

ಯುಕ್ತಾಹಾರವಿಹಾರಸ್ಯ, ಯುಕ್ತಚೇಷ್ಟಸ್ಯ, ಕರ್ಮಸು,
ಯುಕ್ತಸ್ವಪ್ನಾವಬೋಧಸ್ಯ, ಯೋಗಃ, ಭವತಿ, ದುಃಖಹಾ ॥೧೭॥

| | | | |
|---|---|---|---|
| **ದುಃಖಹಾ** | - ದುಃಖಗಳನ್ನು | **ಯುಕ್ತಚೇಷ್ಟಸ್ಯ** | - ಯಥಾಯೋಗ್ಯವಾಗಿ |
| | ನಾಶಪಡಿಸುವ | | ಚೇಷ್ಟೆಮಾಡುವವನಿಗೆ |
| **ಯೋಗಃ** | - ಯೋಗವು | **ಯುಕ್ತಸ್ವಪ್ನಾವ-** | - ಯಥಾಯೋಗ್ಯವಾಗಿ |
| **ಯುಕ್ತಾಹಾರ-** | - ಯಥಾಯೋಗ್ಯವಾಗಿ | **ಬೋಧಸ್ಯ** | ಮಲಗುವುದು |
| **ವಿಹಾರಸ್ಯ** | ಆಹಾರ-ವಿಹಾರ | | ಹಾಗೂ ಎಚ್ಚರ |
| | ಮಾಡುವವನಿಗೆ | | ವಾಗಿರುವವನಿಗೇ |
| **ಕರ್ಮಸು** | - ಕರ್ಮಗಳಲ್ಲಿ | **ಭವತಿ** | - ಸಿದ್ಧವಾಗುತ್ತದೆ. |

ತಮ್, ವಿದ್ಯಾತ್, ದುಃಖಸಂಯೋಗವಿಯೋಗಮ್, ಯೋಗಸಂಜ್ಞಿತಮ್,
ಸಃ, ನಿಶ್ಚಯೇನ, ಯೋಕ್ತವ್ಯಃ, ಯೋಗಃ, ಅನಿರ್ವಿಣ್ಣಚೇತಸಾ ॥೨೩

ಮತ್ತು ಯಾವುದು -

| | | | |
|---|---|---|---|
| **ದುಃಖಸಂಯೋಗ-** | ದುಃಖರೂಪೀ | **ಅನಿರ್ವಿಣ್ಣ-** | - ಬೇಸರಿಸದೆ |
| **ವಿಯೋಗಮ್** | ಸಂಸಾರದ | **ಚೇತಸಾ** | ಅರ್ಥಾತ್ |
| | ಸಂಯೋಗದಿಂದ | | ಧೈರ್ಯ ಮತ್ತು |
| | ರಹಿತನಾಗಿ (ಹಾಗೂ) | | ಉತ್ಸಾಹದಿಂದ |
| **ಯೋಗಸಂಜ್ಞಿ-** | - ಯಾವುದರ ಹೆಸರು | | ಕೂಡಿದ |
| **ತಮ್** | ಯೋಗವೆಂಬು | | ಚಿತ್ತದಿಂದ |
| | ದಿದೆಯೋ | **ನಿಶ್ಚಯೇನ** | - ನಿಶ್ಚಯ |
| **ತಮ್** | - ಅದನ್ನು | | ಪೂರ್ವಕವಾಗಿ |
| **ವಿದ್ಯಾತ್** | - ತಿಳಿಯಬೇಕು | **ಯೋಕ್ತವ್ಯಃ** | - ಮಾಡುವುದು |
| **ಸಃ, ಯೋಗಃ** | - ಆ ಯೋಗವು | | ಕರ್ತವ್ಯವಾಗಿದೆ. |

ಸರ್ವಭೂತಸ್ಥಿತಮ್,ಯಃ, ಮಾಮ್, ಭಜತಿ, ಏಕತ್ವಮ್, ಆಸ್ಥಿತಃ,
ಸರ್ವಥಾ, ವರ್ತಮಾನಃ,ಅಪಿ, ಸಃ, ಯೋಗೀ, ಮಯಿ, ವರ್ತತೇ ॥೩೧॥

**ಈ ರೀತಿ -**

| | | | |
|---|---|---|---|
| **ಯಃ** | - ಯಾವ ಪುರುಷನು | **ಭಜತಿ** | - ಭಜಿಸುತ್ತಾನೋ |
| **ಏಕತ್ವಮ್** | - ಏಕೀಭಾವದಲ್ಲಿ | **ಸಃ, ಯೋಗೀ** | - ಆ ಯೋಗಿಯು |
| **ಆಸ್ಥಿತಃ** | - ಸ್ಥಿತನಾಗಿ | **ಸರ್ವಥಾ** | - ಎಲ್ಲ ಪ್ರಕಾರದಿಂದ |
| **ಸರ್ವಭೂತ-ಸ್ಥಿತಮ್** | - ಸಮಸ್ತ ಭೂತಗಳಲ್ಲಿ ಆತ್ಮರೂಪದಿಂದ ಸ್ಥಿತನಾದ | **ವರ್ತಮಾನಃ** | - ವರ್ತಿಸುತ್ತಿದ್ದರೂ |
| | | **ಅಪಿ** | - ಕೂಡ |
| | | **ಮಯಿ** | - ನನ್ನಲ್ಲಿ(ಯೇ) |
| **ಮಾಮ್** | - ಸಚ್ಚಿದಾನಂದಘನ ವಾಸುದೇವನಾದ ನನ್ನನ್ನು | **ವರ್ತತೇ** | - ವರ್ತಿಸುತ್ತಾನೆ |

ಆತ್ಮೌಪಮ್ಯೇನ, ಸರ್ವತ್ರ, ಸಮಮ್, ಪಶ್ಯತಿ, ಯಃ, ಅರ್ಜುನ, ಸುಖಮ್,
ವಾ, ಯದಿ, ವಾ, ದುಃಖಮ್, ಸಃ, ಯೋಗೀ, ಪರಮಃ, ಮತಃ ॥೩೨॥

**ಮತ್ತು -**

| | | | |
|---|---|---|---|
| **ಅರ್ಜುನ** | - ಹೇ ಅರ್ಜುನಾ! | **ಯದಿ, ವಾ** | - ಅಥವಾ |
| **ಯಃ** | - ಯಾವ ಯೋಗಿಯು | **ದುಃಖಮ್** | - ದುಃಖವನ್ನೂ (ಕೂಡ ಎಲ್ಲರಲ್ಲಿ ಸಮವಾಗಿ ನೋಡುತ್ತಾನೋ) |
| **ಆತ್ಮೌಪಮ್ಯೇನ** | - ತನ್ನಂತೆಯೇ* | | |
| **ಸರ್ವತ್ರ** | - ಸಂಪೂರ್ಣ ಭೂತಗಳನ್ನು | | |
| **ಸಮಮ್** | - ಸಮದೃಷ್ಟಿಯಿಂದ | **ಸಃ** | - ಆ |
| **ಪಶ್ಯತಿ** | - ನೋಡುತ್ತಾನೋ | **ಯೋಗೀ** | - ಯೋಗಿಯು |
| **ವಾ** | - ಮತ್ತು | **ಪರಮಃ** | - ಪರಮ ಶ್ರೇಷ್ಠನೆಂದು |
| **ಸುಖಮ್** | - ಸುಖ | **ಮತಃ** | - ತಿಳಿಯಲ್ಪಟ್ಟಿದ್ದಾನೆ |

ಅಸಂಶಯಮ್, ಮಹಾಬಾಹೋ, ಮನಃ, ದುರ್ನಿಗ್ರಹಮ್, ಚಲಮ್,
ಅಭ್ಯಾಸೇನ, ತು, ಕೌಂತೇಯ, ವೈರಾಗ್ಯೇಣ, ಚ, ಗೃಹ್ಯತೇ ॥೩೫॥

**ಹೀಗೆ ಅರ್ಜುನ ಕೇಳಿದ ನಂತರ ಶ್ರೀಕೃಷ್ಣ ಹೇಳಿದನು -**

| | | | |
|---|---|---|---|
| **ಮಹಾಬಾಹೋ** | - ಹೇ ಮಹಾಬಾಹುವೇ | **ಕೌಂತೇಯ** | - ಹೇ ಕುಂತೀಪುತ್ರನಾದ ಅರ್ಜುನನೇ (ಇದು) |
| **ಅಸಂಶಯಮ್** | - ನಿಸ್ಸಂದೇಹವಾಗಿ | | |
| **ಮನಃ** | - ಮನಸ್ಸು | **ಅಭ್ಯಾಸೇನ** | - ಅಭ್ಯಾಸದಿಂದ * |
| **ಚಲಮ್** | - ಚಂಚಲ (ಮತ್ತು) | **ಚ** | - ಮತ್ತು |
| **ದುರ್ನಿಗ್ರಹಮ್** | - ಕಷ್ಟದಿಂದ ವಶವಾಗು ವಂತಹುದಾಗಿದೆ | **ವೈರಾಗ್ಯೇಣ** | - ವೈರಾಗ್ಯದಿಂದ |
| | | **ಗೃಹ್ಯತೇ** | - ವಶವಾಗುತ್ತದೆ. |
| **ತು** | - ಆದರೆ | | |

ಅಸಂಯತಾತ್ಮನಾ, ಯೋಗಃ, ದುಷ್ಪ್ರಾಪಃ ಇತಿ, ಮೇ, ಮತಿ,
ವಶ್ಯಾತ್ಮನಾ, ತು, ಯತತಾ, ಶಕ್ಯಃ, ಅವಾಪ್ತುಮ್, ಉಪಾಯತಃ ॥೩೬॥

| | | | |
|---|---|---|---|
| **ಅಸಂಯತಾತ್ಮನಾ** | - ಯಾರು ಮನಸ್ಸನ್ನು ವಶಪಡಿಸಿ ಕೊಳ್ಳಲಿಲ್ಲವೋ ಅಂತಹ ಪುರುಷರ ಮೂಲಕ | **ವಶ್ಯಾತ್ಮನಾ** | - ಮನಸ್ಸನ್ನು ವಶಪಡಿಸಿ ಕೊಂಡಿರುವ |
| | | **ಯತತಾ** | - ಪ್ರಯತ್ನಶೀಲನಾದ ಪುರುಷರ ಮೂಲಕ |
| | | **ಉಪಾಯತಃ** | - ಸಾಧನೆಯಿಂದ |
| **ಯೋಗಃ** | - ಯೋಗವು | **ಅವಾಪ್ತುಮ್** | - ಪಡೆದುಕೊಳ್ಳುವುದು |
| **ದುಷ್ಪ್ರಾಪಃ** | - ಪಡೆಯಲು ಅಸಾಧ್ಯವಾಗಿದೆ | **ಶಕ್ಯಃ** | - ಸಹಜವಾಗಿದೆ |
| | | **ಇತಿ, ಮೇ** | - ಇದು ನನ್ನ |
| **ತು** | - ಆದರೆ | **ಮತಿಃ** | - ಮತವಾಗಿದೆ. |

ಅಯತಿಃ, ಶ್ರದ್ಧಯಾ, ಉಪೇತಃ, ಯೋಗಾತ್, ಚಲಿತಮಾನಸಃ,
ಅಪ್ರಾಪ್ಯ, ಯೋಗಸಂಸಿದ್ಧಿಮ್, ಕಾಮ್, ಗತಿಮ್, ಕೃಷ್ಣ ಗಚ್ಛತಿ ॥೩೭॥

**ಆಗ ಅರ್ಜುನ ಹೇಳಿದನು -**

| | | | |
|---|---|---|---|
| **ಕೃಷ್ಣ** | - ಹೇ ಶ್ರೀಕೃಷ್ಣ! | | ಹೋಗಿದೆಯೋ (ಇಂತಹ ಸಾಧಕನಾದ ಯೋಗಿಯು) |
| **ಶ್ರದ್ಧಯಾ,- ಉಪೇತಃ** | - ಯಾರು ಯೋಗದಲ್ಲಿ ಶ್ರದ್ಧೆ ಇಟ್ಟಿದ್ದಾರೆ (ಆದರೆ) | | |
| **ಅಯತಿಃ** | - ಸಂಯಮಿಗಳಲ್ಲ (ಈ ಕಾರಣದಿಂದ ಅಂತ್ಯಕಾಲದಲ್ಲಿ) | **ಯೋಗಸಂ- ಸಿದ್ಧಿಮ್** | - ಯೋಗದ ಸಿದ್ಧಿಯನ್ನು ಅಂದರೆ ಭಗವಂತನ ಸಾಕ್ಷಾತ್ಕಾರವನ್ನು |
| **ಯೋಗಾತ್- ಚಲಿತಮಾನಸಃ** | - ಯಾರ ಮನಸ್ಸು ಯೋಗದಿಂದ ವಿಚಲಿತವಾಗಿ | **ಅಪ್ರಾಪ್ಯ** | - ಪಡೆಯದೆ |
| | | **ಕಾಮ್, ಗತಿಮ್** | - ಯಾವ ಗತಿಯನ್ನು |
| | | **ಗಚ್ಛತಿ** | - ಪಡೆಯುತ್ತಾನೆ? |

ಕಚ್ಚಿತ್, ನ, ಉಭಯವಿಭ್ರಷ್ಟಃ, ಛಿನ್ನಾಭ್ರಮ್, ಇವ, ನಶ್ಯತಿ,
ಅಪ್ರತಿಷ್ಠಃ, ಮಹಾಬಾಹೋ, ವಿಮೂಢಃ, ಬ್ರಹ್ಮಣಃ, ಪಥಿ ॥೩೮॥

**ಮತ್ತು -**

| | | | |
|---|---|---|---|
| **ಮಹಾಬಾಹೋ** | - ಹೇ ಮಹಾಬಾಹುವೇ! | **ಛಿನ್ನಾಭ್ರಮ್- ಇವ** | - ಭಿನ್ನ-ಭಿನ್ನವಾದ ಮೋಡದಂತೆ |
| **ಬ್ರಹ್ಮಣಃ** | - ಭಗವತ್‌ಪ್ರಾಪ್ತಿಯ | | |
| **ಪಥಿ** | - ಮಾರ್ಗದಲ್ಲಿ | **ಉಭಯವಿಭ್ರಷ್ಟಃ** | - ಎರಡೂ ಕಡೆಗಳಿಂದ ಭ್ರಷ್ಟನಾಗಿ |
| **ವಿಮೂಢಃ** | - ಮೋಹಿತನಾದ (ಮತ್ತು) | | |
| **ಅಪ್ರತಿಷ್ಠಃ** | - ಆಶ್ರಯರಹಿತ ಪುರುಷನು | **ಕಚ್ಚಿತ್ ನ, ನಶ್ಯತಿ** | - ನಷ್ಟವಾಗುವುದಿಲ್ಲವಲ್ಲ ತಾನೇ? |

ಏತತ್, ಮೇ, ಸಂಶಯಮ್, ಕೃಷ್ಣ ಛೇತ್ತುಮ್, ಅರ್ಹಸಿ, ಅಶೇಷತಃ
ತ್ವದನ್ಯಃ, ಸಂಶಯಸ್ಯ, ಅಸ್ಯ, ಛೇತ್ತಾ, ನ, ಹಿ, ಉಪಪದ್ಯತೇ ॥೩೯॥

| | | | |
|---|---|---|---|
| **ಕೃಷ್ಣ** | - ಹೇ ಶ್ರೀಕೃಷ್ಣನೇ! | **ಹಿ** | - ಏಕೆಂದರೆ |
| **ಮೇ, ಏತತ್** | - ನನ್ನ ಈ | **ಅಸ್ಯ, ಸಂಶಯಸ್ಯ** | - ಈ ಸಂಶಯವನ್ನು |
| **ಸಂಶಯಮ್** | - ಸಂಶಯವನ್ನು | **ಛೇತ್ತಾ** | - ಛೇದಿಸುವವರು |
| **ಅಶೇಷತಃ** | - ಸಂಪೂರ್ಣವಾಗಿ | **ತ್ವದನ್ಯಃ** | - ನೀನಲ್ಲದೆ ಬೇರೆ ಯಾರೂ |
| **ಛೇತ್ತುಮ್** | - ಛೇದಿಸಲು (ನೀನೇ) | | |
| **ಅರ್ಹಸಿ** | - ಸಮರ್ಥನಾಗಿರುವೆ | **ನ, ಉಪಪದ್ಯತೇ** | - ಸಿಕ್ಕುವುದು ಸಂಭವವಿಲ್ಲ |

ಪಾರ್ಥ, ನ, ಏವ, ಇಹ, ನ, ಅಮುತ್ರ, ವಿನಾಶಃ, ತಸ್ಯ, ವಿದ್ಯತೇ,
ನ, ಹಿ, ಕಲ್ಯಾಣಕೃತ್ ಕಶ್ಚಿತ್, ದುರ್ಗತಿಮ್, ತಾತ, ಗಚ್ಛತಿ ॥೪೦॥

**ಅರ್ಜುನ ಹೀಗೆ ಕೇಳಿದಾಗ ಶ್ರೀಕೃಷ್ಣ ಹೇಳಿದನು -**

| | | | |
|---|---|---|---|
| **ಪಾರ್ಥ** | - ಹೇ ಪಾರ್ಥನೇ! | **ಕಲ್ಯಾಣಕೃತ್** | - ಆತ್ಮೋದ್ಧಾರಕ್ಕಾಗಿ ಅಂದರೆ ಭಗವತ್ಪ್ರಾಪ್ತಿಗಾಗಿ ಕರ್ಮವನ್ನು ಮಾಡುವ |
| **ತಸ್ಯ** | - ಆ ಪುರುಷನ | | |
| **ಇಹ** | - ಈ ಲೋಕದಲ್ಲಿ | | |
| **ವಿನಾಶಃ** | - ವಿನಾಶವು | | |
| **ನ, ವಿದ್ಯತೇ** | ಆಗುವುದಿಲ್ಲ (ಮತ್ತು) | | |
| **ಅಮುತ್ರ,** | - ಪರಲೋಕದಲ್ಲಿಯೂ | **ಕಶ್ಚಿತ್** | - ಯಾವ ಮನುಷ್ಯನೂ |
| **ಏವ, ನ** | ವಿನಾಶವಾಗುವುದಿಲ್ಲ | **ದುರ್ಗತಿಮ್** | - ದುರ್ಗತಿಯನ್ನು |
| **ಹಿ** | - ಏಕೆಂದರೆ | **ನ, ಗಚ್ಛತಿ** | - ಪಡೆಯುವುದಿಲ್ಲ. |
| **ತಾತ** | - ಹೇ ಪ್ರೀತಿಪಾತ್ರನೇ! | | |

ಪ್ರಾಪ್ಯ, ಪುಣ್ಯಕೃತಾಮ್, ಲೋಕಾನ್, ಉಷಿತ್ವಾ, ಶಾಶ್ವತೀಃ, ಸಮಾಃ
ಶುಚೀನಾಮ್, ಶ್ರೀಮತಾಮ್, ಗೇಹೇ, ಯೋಗಭ್ರಷ್ಟಃ ಅಭಿಜಾಯತೇ ॥೪೧॥

**ಆದರೆ ಆ -**

| | | | |
|---|---|---|---|
| **ಯೋಗಭ್ರಷ್ಟಃ** | - ಯೋಗಭ್ರಷ್ಟನಾದ ಪುರುಷನು | **ಶಾಶ್ವತೀಃ** | - ಬಹಳ |
| | | **ಸಮಾಃ** | - ವರ್ಷಗಳವರೆಗೆ |
| **ಪುಣ್ಯಕೃತಾಮ್** | - ಪುಣ್ಯವಂತರ | **ಉಷಿತ್ವಾ** | - ವಾಸಮಾಡಿ (ಮತ್ತೆ) |
| **ಲೋಕಾನ್** | - ಲೋಕಗಳನ್ನು ಅರ್ಥಾತ್ ಸ್ವರ್ಗಾದಿ ಉತ್ತಮವಾದ ಲೋಕಗಳನ್ನು | **ಶುಚೀನಾಮ್** | - ಶುದ್ಧವಾದ ಆಚರಣೆ ಮಾಡುವ |
| | | **ಶ್ರೀಮತಾಮ್** | - ಶ್ರೀಮಂತಪುರುಷರ |
| | | **ಗೇಹೇ** | - ಮನೆಯಲ್ಲಿ |
| **ಪ್ರಾಪ್ಯ** | - ಪ್ರಾಪ್ತಮಾಡಿಕೊಂಡು (ಅವುಗಳಲ್ಲಿ) | **ಅಭಿಜಾಯತೇ** | - ಜನ್ಮವೆತ್ತುತ್ತಾನೆ. |

ಅಥವಾ, ಯೋಗಿನಾಮ್, ಏವ, ಕುಲೇ, ಭವತಿ, ಧೀಮತಾಮ್,
ಏತತ್, ಹಿ, ದುರ್ಲಭತರಮ್, ಲೋಕೇ, ಜನ್ಮ, ಯತ್, ಈದೃಶಮ್ ॥೪೨॥

| | | | |
|---|---|---|---|
| **ಅಥವಾ** | - ಅಥವಾ (ವೈರಾಗ್ಯವಂತನಾದ ಪುರುಷನು ಆ ಲೋಕಗಳಿಗೆ ಹೋಗದೆ) | **ಈದೃಶಮ್** | - ಈ ಪ್ರಕಾರದ |
| | | **ಯತ್** | - ಯಾವ |
| | | **ಏತತ್** | - ಈ |
| | | **ಜನ್ಮ** | - ಜನ್ಮವಿದೆಯೋ (ಅದು) |
| **ಧೀಮತಾಮ್** | - ಜ್ಞಾನಿಗಳಾದ | **ಲೋಕೇ** | - ಜಗತ್ತಿನಲ್ಲಿ |
| **ಯೋಗಿನಾಮ್** | - ಯೋಗಿಗಳ | **ಹಿ** | - ನಿಸ್ಸಂದೇಹವಾಗಿ |
| **ಕುಲೇ, ಏವ** | - ಕುಲದಲ್ಲಿಯೇ | **ದುರ್ಲಭ-ತರಮ್** | - ಅತ್ಯಂತ ದುರ್ಲಭವಾಗಿದೆ. |
| **ಭವತಿ** | - ಜನಿಸುತ್ತಾನೆ (ಆದರೆ) | | |

ತತ್ರ, ತಮ್, ಬುದ್ಧಿಸಂಯೋಗಮ್, ಲಭತೇ, ಪೌರ್ವದೇಹಿಕಮ್,
ಯತತೇ, ಚ, ತತಃ, ಭೂಯಃ, ಸಂಸಿದ್ಧೌ, ಕುರುನಂದನ ॥೪೩॥

**ಮತ್ತು ಅವನು -**

| | | | |
|---|---|---|---|
| **ತತ್ರ** | - ಅಲ್ಲಿ | **ಚ** | - ಮತ್ತು |
| **ತಮ್** | - ಆ | **ಕುರುನಂದನ** | - ಹೇ ಕುರುನಂದನನೇ! |
| **ಪೌರ್ವ-ದೇಹಿಕಮ್** | - ಹಿಂದಿನ ಶರೀರದಲ್ಲಿ ಸಂಗ್ರಹಿಸಿದ | **ತತಃ** | - ಅದರ ಪ್ರಭಾವದಿಂದ (ಅವನು-ಪುನಃ) |
| **ಬುದ್ಧಿ-ಸಂಯೋಗಮ್** | - ಬುದ್ಧಿಸಂಯೋಗವನ್ನು ಎಂದರೆ ಸಮಬುದ್ಧಿ ರೂಪವಾದ ಯೋಗದ ಸಂಸ್ಕಾರಗಳನ್ನು (ಅನಾಯಾಸವಾಗಿಯೇ) | **ಸಂಸಿದ್ಧೌ** | - ಪರಮಾತ್ಮನ ಪ್ರಾಪ್ತಿರೂಪವಾದ ಸಿದ್ಧಿಗಾಗಿ |
| | | **ಭೂಯಃ** | - ಮೊದಲಿಗಿಂತಲೂ ಹೆಚ್ಚಾಗಿ |
| **ಲಭತೇ** | - ಪಡೆಯುತ್ತಾನೆ | **ಯತತೇ** | - ಪ್ರಯತ್ನ ಮಾಡುತ್ತಾನೆ. |

ಪೂರ್ವಾಭ್ಯಾಸೇನ, ತೇನ, ಏವ, ಹ್ರಿಯತೇ, ಹಿ, ಅವಶಃ, ಅಪಿ, ಸಃ
ಜಿಜ್ಞಾಸುಃ, ಅಪಿ, ಯೋಗಸ್ಯ, ಶಬ್ದಬ್ರಹ್ಮ, ಅತಿವರ್ತತೇ ॥೪೪॥

**ಮತ್ತು -**

| | | | |
|---|---|---|---|
| **ಸಃ** | - ಆ ಶ್ರೀಮಂತರ ಮನೆಯಲ್ಲಿ ಜನಿಸುವ ಯೋಗಭ್ರಷ್ಟನು | **(ತಥಾ)** | - (ಹಾಗೂ) |
| | | **ಯೋಗಸ್ಯ** | - ಸಮಬುದ್ಧಿ ರೂಪವಾದ ಯೋಗದ |
| **ಅವಶಃ, ಅಪಿ** | - ಪರಾಧೀನನಾಗಿಯೂಸಹ | **ಜಿಜ್ಞಾಸುಃ** | - ಜಿಜ್ಞಾಸುವು |
| **ತೇನ** | - ಆ | **ಅಪಿ** | - ಕೂಡ |
| **ಪೂರ್ವಾ-ಭ್ಯಾಸೇನ ಏವ** | - ಹಿಂದಿನ ಅಭ್ಯಾಸದಿಂದಲೇ | **ಶಬ್ದಬ್ರಹ್ಮ** | - ವೇದದಲ್ಲಿ ಹೇಳಲಾಗಿರುವ |

**ಹಿ** - ನಿಸ್ಸಂದೇಹವಾಗಿ
**ಹ್ರಿಯತೇ** - ಭಗವಂತನ ಕಡೆಗೆ ಆಕರ್ಷಿಸಲ್ಪಡುತ್ತಾನೆ
ಸಕಾಮ ಕರ್ಮಗಳ ಫಲವನ್ನು
**ಅತಿವರ್ತತೇ** - ದಾಟಿ ಹೋಗುತ್ತಾನೆ.

ಪ್ರಯತ್ನಾತ್, ಯತಮಾನಃ, ತು, ಯೋಗೀ,ಸಂಶುದ್ಧ ಕಿಲ್ಬಿಷಃ,
ಅನೇಕಜನ್ಮ ಸಂಸಿದ್ಧಃ, ತತಃ, ಯಾತಿ, ಪರಾಮ್, ಗತಿಮ್ ॥೪೫॥

**ತು** - ಆದರೆ
**ಪ್ರಯತ್ನಾತ್** - ಪ್ರಯತ್ನಪೂರ್ವಕವಾಗಿ
**ಯತಮಾನಃ** - ಅಭ್ಯಾಸಮಾಡುವ
**ಯೋಗೀ** - ಯೋಗಿ (ಯಾದರೋ)
**ಅನೇಕಜನ್ಮ-** - ಹಿಂದಿನ ಅನೇಕ
**ತತಃ** - ಮತ್ತೆ ತತ್ಕಾಲದಲ್ಲಿಯೇ
**ಸಂಸಿದ್ಧಃ** ಜನ್ಮಗಳ ಸಂಸ್ಕಾರ ಬಲದಿಂದ ಇದೇ ಜನ್ಮದಲ್ಲಿ ಸಂಸಿದ್ಧನಾಗಿ
**ಸಂಶುದ್ಧಕಿಲ್ಬಿಷಃ** - ಸಂಪೂರ್ಣ ಪಾಪಗಳಿಂದ ರಹಿತನಾಗಿ
**ಪರಾಮ್, ಗತಿಮ್** - ಪರಮಗತಿಯನ್ನು
**ಯಾತಿ** - ಪಡೆಯುತ್ತಾನೆ.

ತಪಸ್ವಿಭ್ಯಃ, ಅಧಿಕಃ, ಯೋಗೀ, ಜ್ಞಾನಿಭ್ಯಃ, ಅಪಿ, ಮತಃ, ಅಧಿಕಃ,
ಕರ್ಮಿಭ್ಯಃ, ಚ, ಅಧಿಕ, ಯೋಗೀ, ತಸ್ಮಾತ್, ಯೋಗೀ, ಭವ, ಅರ್ಜುನ ॥೪೬॥

**ಏಕೆಂದರೆ -**

**ಯೋಗೀ** - ಯೋಗಿಯು
**ತಪಸ್ವಿಭ್ಯಃ** - ತಪಸ್ವಿಗಳಿಗಿಂತ
**ಅಧಿಕಃ** - ಶ್ರೇಷ್ಠನಾಗಿದ್ದಾನೆ
**ಜ್ಞಾನಿಭ್ಯಃ, ಅಪಿ** - ಶಾಸ್ತ್ರಜ್ಞಾನಿಗಳಿಗಿಂತಲೂ
**ಅಧಿಕಃ** - ಶ್ರೇಷ್ಠನು (ಎಂದು)
**ಮತಃ** - ತಿಳಿಯಲಾಗಿದೆ
**ಚ** - ಮತ್ತು
**ಕರ್ಮಿಭ್ಯಃ** - ಸಕಾಮ ಕರ್ಮ ಮಾಡುವವರಿ
ಗಿಂತಲೂ ಸಹ
**ಯೋಗೀ** - ಯೋಗಿಯು
**ಅಧಿಕಃ** - ಶ್ರೇಷ್ಠನಾಗಿದ್ದಾನೆ
**ತಸ್ಮಾತ್** - ಆದ್ದರಿಂದ
**ಅರ್ಜುನ** - ಹೇ ಅರ್ಜುನನೇ! (ನೀನು)
**ಯೋಗೀ, ಭವ** - ಯೋಗೀ, ಆಗು.

ಯೋಗಿನಾಮ್, ಅಪಿ, ಸರ್ವೇಷಾಮ್, ಮದ್ಗತೇನ, ಅಂತರಾತ್ಮನಾ,
ಶ್ರದ್ಧಾವಾನ್, ಭಜತೇ, ಯಃ, ಮಾಮ್, ಸಃ, ಮೇ, ಯುಕ್ತತಮಃ, ಮತಃ ॥೪೭॥

**ಮತ್ತು ಎಲ್ಲೈ ಪ್ರೀತಿಪಾತ್ರನೇ -**

**ಸರ್ವೇಷಾಮ್** - ಸಂಪೂರ್ಣ
**ಯೋಗಿನಾಮ್** - ಯೋಗಿಗಳಲ್ಲಿ
**ಅಪಿ** - ಕೂಡ
**ಯಃ** - ಯಾವ
**ಶ್ರದ್ಧಾವಾನ್** - ಶ್ರದ್ಧಾಳುವಾದ ಯೋಗಿಯು
**ಮದ್ಗತೇನ** - ನನ್ನಲ್ಲಿ ತೊಡಗಿದ್ದು
**ಮಾಮ್** - ನನ್ನನ್ನು
**ಭಜತೇ** - ನಿರಂತರ ಭಜಿಸುತ್ತಾನೋ
**ಸಃ** - ಆ ಯೋಗಿಯು
**ಮೇ** - ನನಗೆ
**ಯುಕ್ತತಮಃ** - ಪರಮಶ್ರೇಷ್ಠ
**ಮತಃ** - ಮಾನ್ಯನಾಗಿದ್ದಾನೆ

ಶ್ರೀ ಮದ್ಭಗವದ್ಗೀತೆ ಅಧ್ಯಾಯ 7 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ಸಪ್ತಮೋಽಧ್ಯಾಯಃ - ಜ್ಞಾನ-ವಿಜ್ಞಾನಯೋಗ ॥

### ಶ್ರೀ ಭಗವಾನುವಾಚ

ಮಯಿ, ಆಸಕ್ತಮನಾಃ, ಪಾರ್ಥ, ಯೋಗಮ್, ಯುಂಜನ್, ಮದಾಶ್ರಯಃ,
ಅಸಂಶಯಮ್, ಸಮಗ್ರಮ್, ಮಾಮ್, ಯಥಾ, ಜ್ಞಾಸ್ಯಸಿ, ತತ್, ಶೃಣು ॥೧॥

**ನಂತರ ಶ್ರೀಕೃಷ್ಣನು ಹೇಳಿದನು -**

| | | | |
|---|---|---|---|
| **ಪಾರ್ಥ** | - ಹೇ ಪಾರ್ಥಾ! | **ಸಮಗ್ರಮ್,** | - ಸಂಪೂರ್ಣವಿಭೂತಿ |
| **ಮಯಿ,-** | - ಅನನ್ಯ ಪ್ರೇಮದಿಂದ | **ಮಾಮ್** | ಬಲ, ಐಶ್ವರ್ಯಾದಿ ಗುಣಗಳಿಂದ ಯುಕ್ತನಾಗಿ, ಎಲ್ಲರ ಆತ್ಮರೂಪನಾದ ನನ್ನನ್ನು |
| **ಆಸಕ್ತಮನಾಃ** | ನನ್ನಲ್ಲಿ ಆಸಕ್ತಚಿತ್ತನಾಗಿ (ಹಾಗೂ) | | |
| **ಮದಾಶ್ರಯಃ** | - ಅನನ್ಯಭಾವದಿಂದ ನನ್ನ ಪರಾಯಣನಾಗಿ | | |
| **ಯೋಗಮ್** | - ಯೋಗದಲ್ಲಿ | **ಅಸಂಶಯಮ್** | - ಸಂಶಯ ರಹಿತನಾಗಿ |
| **ಯುಂಜನ್** | - ತೊಡಗಿರುವ (ನೀನು) | **ಜ್ಞಾಸ್ಯಸಿ** | - ತಿಳಿಯುವೆಯೋ |
| **ಯಥಾ** | - ಯಾವ ಪ್ರಕಾರದಿಂದ | **ತತ್, ಶೃಣು** | - ಅದನ್ನು ಕೇಳು. |

ಜ್ಞಾನಮ್, ತೇ, ಅಹಮ್, ಸವಿಜ್ಞಾನಮ್, ಇದಮ್, ವಕ್ಷ್ಯಾಮಿ,
ಅಶೇಷತ, ಯತ್, ಜ್ಞಾತ್ವಾ, ನ, ಇಹ, ಭೂಯಃ ಅನ್ಯತ್, ಜ್ಞಾತವ್ಯಮ್ ಅವಶಿಷ್ಯತೇ ॥೨॥

| | | | |
|---|---|---|---|
| **ಅಹಮ್** | - ನಾನು | **ಜ್ಞಾತ್ವಾ** | - ತಿಳಿದನಂತರ |
| **ತೇ** | - ನಿನಗಾಗಿ | **ಇಹ** | - ಈ ಜಗತ್ತಿನಲ್ಲಿ |
| **ಇದಮ್** | - ಈ | **ಭೂಯಃ** | - ಮತ್ತೆ |
| **ಸವಿಜ್ಞಾನಮ್** | - ವಿಜ್ಞಾನಸಹಿತವಾದ | **ಅನ್ಯತ್** | - ಬೇರೆ ಏನೂ |
| **ಜ್ಞಾನಮ್** | - ತತ್ವಜ್ಞಾನವನ್ನು | **ಜ್ಞಾತವ್ಯಮ್** | - ತಿಳಿಯಲು ಯೋಗ್ಯವಾದುದು |
| **ಅಶೇಷತಃ** | - ಸಂಪೂರ್ಣವಾಗಿ | | |
| **ವಕ್ಷ್ಯಾಮಿ** | - ಹೇಳುವೆನು | **ನ, ಅವಶಿಷ್ಯತೇ** | - ಉಳಿದಿರುವುದಿಲ್ಲ. |
| **ಯತ್** | - ಯಾವುದನ್ನು | | |

ಮನುಷ್ಯಾಣಾಮ್, ಸಹಸ್ರೇಷು, ಕಶ್ಚಿತ್, ಯತತಿ, ಸಿದ್ಧಯೇ,
ಯತತಾಮ್, ಅಪಿ, ಸಿದ್ಧಾನಾಮ್, ಕಶ್ಚಿತ್, ಮಾಮ್, ವೇತ್ತಿ ತತ್ತ್ವತಃ ॥೩॥

**ಆದರೆ -**

| | | | |
|---|---|---|---|
| **ಸಹಸ್ರೇಷು** | - ಸಾವಿರಾರು | **ಯತತಿ** | - ಯತ್ನಿಸುತ್ತಾನೆ (ಮತ್ತು ಆ) |
| **ಮನುಷ್ಯಾಣಾಮ್** | - ಮನುಷ್ಯರಲ್ಲಿ | | |
| **ಕಶ್ಚಿತ್** | - ಯಾರೋ ಒಬ್ಬನು | **ಯತತಾಮ್** | - ಯತ್ನಿಸುವ |
| **ಸಿದ್ಧಯೇ** | - ನನ್ನ ಪ್ರಾಪ್ತಿಗಾಗಿ | **ಸಿದ್ಧಾನಾಮ್** | - ಯೋಗಿಗಳಲ್ಲಿ |

**ಅಪಿ** - ಕೂಡ
**ಕಶ್ಚಿತ್** - ಯಾರೋ ಒಬ್ಬ (ನನ್ನ ಪರಾಯಣನಾಗಿ)
**ಮಾಮ್** - ನನ್ನನ್ನು
**ತತ್ತ್ವತಃ** - ತತ್ತ್ವದಿಂದ ಅಂದರೆ (ಯಥಾರ್ಥ ರೂಪದಿಂದ)
**ವೇತ್ತಿ** - ತಿಳಿಯುತ್ತಾನೆ

ಭೂಮಿಃ, ಆಪಃ, ಅನಲಃ, ವಾಯುಃ, ಖಮ್, ಮನಃ ಬುದ್ಧಿಃ ಏವ, ಚ,
ಅಹಂಕಾರಃ, ಇತಿ, ಇಯಮ್, ಮೇ, ಭಿನ್ನಾ ಪ್ರಕೃತಿಃ ಅಷ್ಟಧಾ ॥೪॥

ಅಪರಾ, ಇಯಮ್, ಇತಃ, ತು, ಅನ್ಯಾಮ್, ಪ್ರಕೃತಿಮ್, ವಿದ್ಧಿ ಮೇ, ಪರಾಮ್,
ಜೀವಭೂತಾಮ್, ಮಹಾಬಾಹೋ, ಯಯಾ, ಇದಮ್, ಧಾರ್ಯತೇ, ಜಗತ್ ॥೫॥

**ಮತ್ತು ಎಲೈ ಅರ್ಜುನ -**

**ಭೂಮಿಃ** - ಪೃಥ್ವಿ
**ಆಪಃ** - ಜಲ
**ಅನಲಃ** - ಅಗ್ನಿ
**ವಾಯುಃ** - ವಾಯು
**ಖಮ್** - ಆಕಾಶ
**ಮನಃ** - ಮನಸ್ಸು
**ಬುದ್ಧಿಃ** - ಬುದ್ಧಿ
**ಚ** - ಮತ್ತು
**ಅಹಂಕಾರಃ, ಏವ** - ಅಹಂಕಾರವೂ ಕೂಡ
**ಇತಿ** - ಈ ಪ್ರಕಾರ
**ಇಯಮ್** - ಇದು
**ಅಷ್ಟಧಾ** - ಎಂಟು ಪ್ರಕಾರದಿಂದ
**ಭಿನ್ನಾ** - ವಿಭಾಜಿತವಾಗಿರುವ
**ಮೇ** - ನನ್ನ
**ಪ್ರಕೃತಿಃ** - ಪ್ರಕೃತಿಯಾಗಿದೆ
**ಇಯಮ್, ತು** - ಇದು ಎಂಟು ಪ್ರಕಾರದ ಭೇದವುಳ್ಳದ್ದಾದರೋ
**ಅಪರಾ** - ಅಪರಾ ಎಂದರೆ ನನ್ನ ಜಡವಾದ ಪ್ರಕೃತಿಯಾಗಿದೆ (ಮತ್ತು)
**ಮಹಾಬಾಹೋ** - ಹೇ ಮಹಾಬಾಹುವೇ!
**ಇತಃ** - ಇದಕ್ಕಿಂತ
**ಅನ್ಯಾಮ್** - ಬೇರೆಯಾದ
**ಯಯಾ** - ಯಾವುದರಿಂದ
**ಇದಮ್** - ಈ (ಸಮಸ್ತವಾದ)
**ಜಗತ್** - ಜಗತ್ತು
**ಧಾರ್ಯತೇ** - ಧರಿಸಿದೆಯೋ, (ಅದು)
**ಮೇ** - ನನ್ನ
**ಜೀವಭೂತಾಮ್** - ಜೀವರೂಪವಾದ
**ಪರಾಮ್** - ಪರಾ ಅಂದರೆ ಚೇತನ
**ಪ್ರಕೃತಿಮ್** - ಪ್ರಕೃತಿ (ಯೆಂದು)
**ವಿದ್ಧಿ** - ತಿಳಿ.

ಏತದ್ಯೋನೀನಿ, ಭೂತಾನಿ, ಸರ್ವಾಣಿ, ಇತಿ, ಉಪಧಾರಯ,
ಅಹಮ್, ಕೃತ್ಸ್ನಸ್ಯ, ಜಗತಃ, ಪ್ರಭವಃ, ಪ್ರಲಯಃ, ತಥಾ ॥೬॥

**ಮತ್ತು ಎಲೈ ಅರ್ಜುನ! -**

**ಸರ್ವಾಣಿ** - ಸಮಸ್ತ
**ಭೂತಾನಿ** - ಭೂತಗಳು
**ಪ್ರಭವಃ** - ಉತ್ಪತ್ತಿ
**ತಥಾ** - ಹಾಗೂ

| | | | |
|---|---|---|---|
| **ಏತದ್ಯೋನೀನಿ** | - ಈ ಎರಡೂ ಪ್ರಕೃತಿಗಳಿಂದಲೇ ಉತ್ಪನ್ನವಾಗಿವೆ (ಮತ್ತು) | **ಪ್ರಲಯಃ** | - ಪ್ರಳಯವಾಗಿದ್ದೇನೆ (ಅಂದರೆ ಸಮಸ್ತ ಜಗತ್ತಿನ ಮೂಲ ಕಾರಣವಾಗಿದ್ದೇನೆ) |
| **ಅಹಮ್** | - ನಾನು | | |
| **ಕೃತ್ಸ್ನಸ್ಯ** | - ಸಂಪೂರ್ಣ | **ಇತಿ** | - ಹೀಗೆಂದು (ನೀನು) |
| **ಜಗತಃ** | - ಜಗತ್ತಿನ | **ಉಪಧಾರಯ** | - ತಿಳಿ. |

ಮತ್ತಃ, ಪರತರಮ್, ನ, ಅನ್ಯತ್, ಕಿಂಚಿತ್, ಅಸ್ತಿ, ಧನಂಜಯ,
ಮಯಿ, ಸರ್ವಮ್, ಇದಮ್, ಪ್ರೋತಮ್, ಸೂತ್ರೇ, ಮಣಿಗಣಾಃ, ಇವ ॥೭॥

**ಆದುದರಿಂದ -**

| | | | |
|---|---|---|---|
| **ಧನಂಜಯ** | - ಹೇ ಧನಂಜಯನೇ! | **ಇದಮ್** | - ಈ |
| **ಮತ್ತಃ** | - ನನಗಿಂತ | **ಸರ್ವಮ್** | - ಸಂಪೂರ್ಣ (ಜಗತ್ತು) |
| **ಅನ್ಯತ್** | - ಭಿನ್ನವಾಗಿ | **ಸೂತ್ರೇ** | - ಸೂತ್ರದಲ್ಲಿ (ನೂಲಿನ) |
| **ಕಿಂಚಿತ್** | - ಯಾವುದೇ | **ಮಣಿಗಣಾಃ, ಇವ** | - ಮಣಿಗಳಂತೆ |
| **ಪರತರಮ್** | - ಪರಮ (ಕಾರಣವು) | **ಮಯಿ** | - ನನ್ನಲ್ಲಿ |
| **ನ, ಅಸ್ತಿ** | - ಇಲ್ಲವಾಗಿದೆ | **ಪ್ರೋತಮ್** | - ಪೋಣಿಸಲ್ಪಟ್ಟಿದೆ. |

ರಸಃ, ಅಹಮ್, ಅಪ್ಸು, ಕೌಂತೇಯ, ಪ್ರಭಾ, ಅಸ್ಮಿ, ಶಶಿಸೂರ್ಯಯೋಃ,
ಪ್ರಣವಃ, ಸರ್ವವೇದೇಷು ಶಬ್ದಃ, ಖೇ, ಪೌರುಷಮ್, ನೃಷು ॥೮॥

**ಹೇಗೆಂದರೆ -**

| | | | |
|---|---|---|---|
| **ಕೌಂತೇಯ** | - ಹೇ ಅರ್ಜುನನೇ | **ಅಪ್ಸು** | - ನೀರಿನಲ್ಲಿ |
| **ಅಹಮ್** | - ನಾನು | **ರಸಃ** | - ರಸವು |
| **ಶಶಿ-** | - ಚಂದ್ರ ಮತ್ತು | **ಪ್ರಣವಃ** | - ಓಂಕಾರವಾಗಿದ್ದೇನೆ |
| **ಸೂರ್ಯಯೋಃ** | - ಸೂರ್ಯರಲ್ಲಿ | **ಖೇ** | - ಆಕಾಶದಲ್ಲಿ |
| **ಪ್ರಭಾ** | - ಪ್ರಕಾಶ | **ಶಬ್ದಃ** | - ಶಬ್ದ (ಮತ್ತು) |
| **ಅಸ್ಮಿ** | - ಆಗಿದ್ದೇನೆ | **ನೃಷು** | - ಪುರುಷರಲ್ಲಿ |
| **ಸರ್ವವೇದೇಷು** | - ಸಂಪೂರ್ಣ ವೇದಗಳಲ್ಲಿ | **ಪೌರುಷಮ್** | - ಪುರುಷತ್ವ |
| | | **(ಅಸ್ಮಿ)** | - ಆಗಿದ್ದೇನೆ. |

ಪುಣ್ಯಃ, ಗಂಧಃ, ಪೃಥಿವ್ಯಾಮ್, ಚ, ತೇಜಃ, ಚ, ಅಸ್ಮಿ, ವಿಭಾವಸೌ,
ಜೀವನಮ್, ಸರ್ವಭೂತೇಷು, ತಪಃ, ಚ, ಅಸ್ಮಿ, ತಪಸ್ವಿಷು ॥೯॥

| | | | |
|---|---|---|---|
| **ಪೃಥಿವ್ಯಾಮ್** | - ಪೃಥ್ವಿಯಲ್ಲಿ | **ಸರ್ವಭೂತೇಷು** | - ಸಮಸ್ತ ಭೂತಗಳಲ್ಲಿ |
| **ಪುಣ್ಯಃ** | - ಪವಿತ್ರ*ವಾದ | **ಜೀವನಮ್** | - (ಅವುಗಳ) ಜೀವನ ನಾನು ಆಗಿದ್ದೇನೆ |
| **ಗಂಧಃ** | - ಗಂಧವು | | |
| **ಚ** | - ಮತ್ತು | **ಚ** | - ಮತ್ತು |
| **ವಿಭಾವಸೌ** | - ಅಗ್ನಿಯಲ್ಲಿ | **ತಪಸ್ವಿಷು** | - ತಪಸ್ವಿಗಳಲ್ಲಿ |
| **ತೇಜಃ, ಅಸ್ಮಿ** | - ತೇಜಸ್ಸು ಆಗಿದ್ದೇನೆ | **ತಪಃ, ಅಸ್ಮಿ** | - ತಪಸ್ಸು ಆಗಿದ್ದೇನೆ. |
| **ಚ** | - ಹಾಗೂ | | |

ಬೀಜಮ್, ಮಾಮ್, ಸರ್ವಭೂತಾನಾಮ್, ವಿದ್ಧಿ, ಪಾರ್ಥ, ಸನಾತನಮ್,
ಬುದ್ಧಿಃ ಬುದ್ಧಿಮತಾಮ್, ಅಸ್ಮಿ ತೇಜಃ, ತೇಜಸ್ವಿನಾಮ್, ಅಹಮ್ ॥೧೦॥

| | | | |
|---|---|---|---|
| ಪಾರ್ಥ | - ಹೇ ಅರ್ಜುನಾ! | ಬುದ್ಧಿಮತಾಮ್ | - ಬುದ್ಧಿವಂತರುಗಳ |
| ಸರ್ವಭೂತಾನಾಮ್ | - ಸಮಸ್ತ ಪ್ರಾಣಿಗಳ | ಬುದ್ಧಿಃ | - ಬುದ್ಧಿಯು (ಮತ್ತು) |
| ಸನಾತನಮ್ | - ಸನಾತನ | ತೇಜಸ್ವಿನಾಮ್ | - ತೇಜಸ್ವಿಗಳ |
| ಬೀಜಮ್ | - ಬೀಜವು | ತೇಜಃ | - ತೇಜಸ್ಸು |
| ಮಾಮ್ | - ನನ್ನನ್ನೇ | ಅಹಮ್, ಅಸ್ಮಿ | - ನಾನೇ ಆಗಿದ್ದೇನೆ. |
| ವಿದ್ಧಿ | - (ನೀನು) ತಿಳಿ | | |

ಬಲಮ್, ಬಲವತಾಮ್, ಚ, ಅಹಮ್, ಕಾಮರಾಗವಿವರ್ಜಿತಮ್,
ಧರ್ಮಾವಿರುದ್ಧಃ ಭೂತೇಷು, ಕಾಮಃ ಅಸ್ಮಿ ಭರತರ್ಷಭ ॥೧೧॥

ಮತ್ತು -

| | | | |
|---|---|---|---|
| ಭರತರ್ಷಭ | - ಹೇ ಭರತಶ್ರೇಷ್ಠನೆ! | ಭೂತೇಷು | - ಎಲ್ಲ ಭೂತಗಳಲ್ಲಿ |
| | - ನಾನು | ಧರ್ಮಾವಿರುದ್ಧಃ | - ಧರ್ಮಕ್ಕೆ ಅನುಕೂಲವಾದ ಅರ್ಥಾತ್ ಶಾಸ್ತ್ರಕ್ಕೆ ಅನುಕೂಲವಾದ |
| ಬಲವತಾಮ್ | - ಬಲಶಾಲಿಗಳ | | |
| ಕಾಮರಾಗ-ವಿವರ್ಜಿತಮ್ | - ಆಸಕ್ತಿ ಮತ್ತು ಕಾಮನೆಗಳಿಂದ ರಹಿತ | | |
| ಬಲಮ್ | - ಬಲ ಅಂದರೆ ಸಾಮರ್ಥ್ಯವಾಗಿದ್ದೇನೆ | ಕಾಮಃ | - ಕಾಮವು |
| | | ಅಹಮ್, ಅಸ್ಮಿ | - ನಾನೇ ಆಗಿದ್ದೇನೆ. |
| ಚ | - ಮತ್ತು | | |

ಯೇ, ಚ, ಏವ, ಸಾತ್ತ್ವಿಕಾಃ, ಭಾವಾಃ, ರಾಜಸಾಃ, ತಾಮಸಾಃ, ಚ, ಯೇ,
ಮತ್ತಃ, ಏವ, ಇತಿ, ತಾನ್, ವಿದ್ಧಿ ನ, ತು, ಅಹಮ್, ತೇಷು, ತೇ, ಮಯಿ ॥೧೨॥

| | | | |
|---|---|---|---|
| ಚ, ಏವ | - ಮತ್ತು ಕೂಡ | ತಾನ್ | - ಅವೆಲ್ಲವುಗಳನ್ನು |
| ಯೇ | - ಯಾವ | ಮತ್ತಃ, ಏವ | - ನನ್ನಿಂದಲೇ (ಉಂಟಾಗುತ್ತವೆ) |
| ಸಾತ್ವಿಕಾಃ | - ಸತ್ವಗುಣದಿಂದ ಉತ್ಪನ್ನವಾಗುವ | ಇತಿ, ವಿದ್ಧಿ | - ಎಂದು ನೀನು ತಿಳಿ |
| ಭಾವಾಃ | - ಭಾವಗಳಿವೆಯೋ | ತು | - ಆದರೆ (ವಾಸ್ತವವಾಗಿ)* |
| ಯೇ | - ಯಾವ | | |
| ರಾಜಸಾಃ | - ರಜೋಗುಣದಿಂದ | ತೇಷು | - ಅವುಗಳಲ್ಲಿ |
| ಚ | - ಹಾಗೂ | ಅಹಮ್ | - ನಾನು (ಮತ್ತು) |
| ತಾಮಸಾಃ | - ತಮೋಗುಣದಿಂದ | ತೇ | - ಅವು |
| | ಉಂಟಾಗುವ | ಮಯಿ | - ನನ್ನಲ್ಲಿ |
| | ಭಾವಗಳಿವೆಯೋ | ನ | - ಇಲ್ಲ |

ತ್ರಿಭಿಃ ಗುಣಮಯೈಃ ಭಾವೈಃ ಏಭಿಃ ಸರ್ವಮ್, ಇದಮ್, ಜಗತ್,
ಮೋಹಿತಮ್, ನ, ಅಭಿಜಾನಾತಿ, ಮಾಮ್, ಏಭ್ಯಃ ಪರಮ್ ಅವ್ಯಯಮ್ ||೧೩||

ಆದರೆ -

| | | | |
|---|---|---|---|
| **ಗುಣಮಯೈಃ** | - ಗುಣಗಳ ಕಾರ್ಯ ರೂಪವಾದ ಸಾತ್ವಿಕ ರಾಜಸ ಮತ್ತು ತಾಮಸಗಳೆಂಬ | **ಮೋಹಿತಮ್** | - ಮೊಹಿತವಾಗುತ್ತಿದೆ (ಆದಕಾರಣ) |
| **ಏಭಿಃ, ತ್ರಿಭಿಃ** | - ಈ ಮೂರು ಪ್ರಕಾರದ | **ಏಭ್ಯಃ** | - ಈ ಮೂರೂ ಗುಣಗಳಿಂದ |
| **ಭಾವೈಃ** | - ಭಾವಗಳಿಂದ * | **ಪರಮ್** | - ಅತೀತನಾದ |
| **ಇದಮ್,- ಸರ್ವಮ್** | - ಈ ಎಲ್ಲ | **ಅವ್ಯಯಮ್** | - ಅವಿನಾಶಿಯಾದ |
| **ಜಗತ್** | - ಜಗತ್ತಿನ ಪ್ರಾಣಿ ಸಮುದಾಯವು | **ಮಾಮ್** | - ನನ್ನನ್ನು |
| | | **ನ, ಅಭಿಜಾನಾತಿ** | - ತಿಳಿಯುವುದಿಲ್ಲ |

ದೈವೀ, ಹಿ, ಏಷಾ, ಗುಣಮಯಿ, ಮಮ, ಮಾಯಾ, ದುರತ್ಯಯಾ, ಮಾಮ್,
ಏವ, ಯೇ, ಪ್ರಪದ್ಯಂತೇ, ಮಾಯಾಮ್, ಏತಾಮ್, ತರಂತಿ, ತೇ ||೧೪||

| | | | |
|---|---|---|---|
| **ಹಿ** | - ಏಕೆಂದರೆ | **ಯೇ** | - ಯಾವ ಪುರುಷರು (ಕೇವಲ) |
| **ಏಷಾ** | - ಈ | **ಮಾಮ್, ಏವ** | - ನನ್ನನ್ನೇ |
| **ದೈವೀ** | - ಅಲೌಕಿಕವಾದ ಅರ್ಥಾತ್ ಅತಿ ಅದ್ಭುತವಾದ | **ಪ್ರಪದ್ಯಂತೇ** | - ನಿರಂತರವಾಗಿ ಭಜಿಸುತ್ತಾರೋ |
| **ಗುಣಮಯೀ** | - ತ್ರಿಗುಣ ಮಯಿಯಾದ | **ತೇ, ಏತಾಮ್** | - ಅವರು ಈ |
| **ಮಮ, ಮಾಯಾ** | - ನನ್ನ ಮಾಯೆಯು | **ಮಾಯಾಮ್** | - ಮಾಯೆಯನ್ನು |
| **ದುರತ್ಯಯಾ** | - ಬಹಳ ದುಸ್ತರವಾಗಿದೆ (ಆದರೆ) | **ತರಂತಿ** | - ದಾಟಿಬಿಡುತ್ತಾರೆ ಅಂದರೆ ಜಗತ್ತಿನಿಂದ ಪಾರಾಗುತ್ತಾರೆ. |

ನ, ಮಾಮ್, ದುಷ್ಕೃತಿನಃ, ಮೂಢಾಃ, ಪ್ರಪದ್ಯಂತೇ, ನರಾಧಮಾಃ
ಮಾಯಯಾ, ಅಪಹೃತಜ್ಞಾನಾಃ, ಆಸುರಮ್, ಭಾವಮ್, ಆಶ್ರಿತಾಃ ||೧೫||

ಇಂತಹ ಸುಲಭ ಉಪಾಯವಿದ್ದರೂ ಸಹ -

| | | | |
|---|---|---|---|
| **ಮಾಯಯಾ** | - ಮಾಯೆಯ ಮೂಲಕ | **ಆಶ್ರಿತಾಃ** | - ಆಶ್ರಯಿಸಿರುವ |
| | | **ನರಾಧಮಾಃ** | - ಮನುಷ್ಯರಲ್ಲಿ ನೀಚ |
| **ಅಪಹೃತಜ್ಞಾನಾಃ** | - ಯಾರ ಜ್ಞಾನವು ಅಪಹರಿಸಲ್ಪಟ್ಟಿದೆಯೋ (ಅಂತಹ) | **ದುಷ್ಕೃತಿನಃ** | - ದೂಷಿತ ಕರ್ಮಮಾಡುವ |
| | | **ಮೂಢಾಃ** | - ಮೂಢಜನರು |
| **ಆಸುರಮ್, ಭಾವಮ್** | - ಆಸುರೀ ಸ್ವಭಾವವನ್ನು | **ಮಾಮ್** | - ನನ್ನನ್ನು |
| | | **ನ, ಪ್ರಪದ್ಯಂತೇ** | - ಭಜಿಸುವುದಿಲ್ಲ |

ಚತುರ್ವಿಧಾಃ, ಭಜಂತೇ, ಮಾಮ್, ಜನಾಃ, ಸುಕೃತಿನಃ, ಅರ್ಜುನ,
ಆರ್ತಃ, ಜಿಜ್ಞಾಸುಃ, ಅರ್ಥಾರ್ಥೀ, ಜ್ಞಾನೀ ಚ, ಭರತರ್ಷಭ ॥೧೬॥

| | | | |
|---|---|---|---|
| **ಭರತರ್ಷಭ-ಅರ್ಜುನ** | - ಹೇ ಭರತ ವಂಶೀಯರಲ್ಲಿ ಶ್ರೇಷ್ಠನಾದ ಅರ್ಜುನಾ! | **ಜಿಜ್ಞಾಸುಃ** | - ಜಿಜ್ಞಾಸು‡ |
| **ಸುಕೃತಿನಃ** | - ಉತ್ತಮ ಕರ್ಮವನ್ನು ಮಾಡುವ | **ಚ** | - ಮತ್ತು |
| **ಅರ್ಥಾರ್ಥೀ** | - ಅರ್ಥಾರ್ಥೀ* | **ಜ್ಞಾನೀ** | - ಜ್ಞಾನೀ (ಹೀಗೆ) |
| **ಆರ್ತಃ** | - ಆರ್ತ† | **ಚತುರ್ವಿಧಾಃ** | - ನಾಲ್ಕು ಪ್ರಕಾರದ |
| | | **ಜನಾಃ** | - ಭಕ್ತಜನರು |
| | | **ಮಾಮ್** | - ನನ್ನನ್ನು |
| | | **ಭಜಂತೇ** | - ಭಜಿಸುತ್ತಾರೆ. |

ತೇಷಾಮ್, ಜ್ಞಾನೀ, ನಿತ್ಯಯುಕ್ತಃ, ಏಕಭಕ್ತಿಃ, ವಿಶಿಷ್ಯತೇ,
ಪ್ರಿಯಃ, ಹಿ, ಜ್ಞಾನಿನಃ, ಅತ್ಯರ್ಥಮ್, ಅಹಮ್, ಸಃ, ಚ, ಮಮ, ಪ್ರಿಯಃ ॥೧೭॥

| | | | |
|---|---|---|---|
| **ತೇಷಾಮ್** | - ಅವರುಗಳಲ್ಲಿ | **ಜ್ಞಾನಿನಃ** | - ನನ್ನನ್ನು ತತ್ತ್ವತಃ ತಿಳಿಯುವ ಜ್ಞಾನಿಗೆ |
| **ನಿತ್ಯಯುಕ್ತಃ** | - ನಿತ್ಯವೂ ನನ್ನಲ್ಲಿ ಏಕೀಭಾವದಿಂದ ಸ್ಥಿತರಾಗಿರುವ | **ಅಹಮ್** | - ನಾನು |
| | | **ಅತ್ಯರ್ಥಮ್** | - ಅತ್ಯಂತ |
| **ಏಕಭಕ್ತಿಃ** | - ಅನನ್ಯ ಪ್ರೇಮಭಕ್ತಿಯುಳ್ಳ | **ಪ್ರಿಯಃ** | - ಪ್ರಿಯನಾಗಿದ್ದೇನೆ |
| | | **ಚ** | - ಮತ್ತು |
| **ಜ್ಞಾನೀ** | - ಜ್ಞಾನೀಭಕ್ತನು | **ಸಃ** | - ಆ ಜ್ಞಾನಿಯು |
| **ವಿಶಿಷ್ಯತೇ** | - ಅತಿ ಉತ್ತಮನಾಗಿದ್ದಾನೆ | **ಮಮ** | - ನನಗೆ |
| | | **ಪ್ರಿಯಃ** | - ಅತ್ಯಂತಪ್ರಿಯನಾಗಿದ್ದಾನೆ |
| **ಹಿ** | - ಏಕೆಂದರೆ | | |

ಉದಾರಾಃ ಸರ್ವೇ, ಏವ, ಏತೇ, ಜ್ಞಾನೀ, ತು, ಆತ್ಮಾ, ಏವ, ಮೇ, ಮತಮ್,
ಆಸ್ಥಿತಃ, ಸಃ, ಹಿ, ಯುಕ್ತಾತ್ಮಾ ಮಾಮ್, ಏವ, ಅನುತ್ತಮಾಮ್, ಗತಿಮ್ ॥೧೮॥

**ಆದಾಗ್ಯೂ -**

| | | | |
|---|---|---|---|
| **ಏತೇ** | - ಈ | **ಸಃ** | - ಅವನು |
| **ಸರ್ವೇ, ಏವ** | - ಎಲ್ಲರೂ | **ಯುಕ್ತಾತ್ಮಾ** | - ಮದ್ಗತ ಮನಸ್ಸು ಮತ್ತು ಬುದ್ಧಿಯುಳ್ಳವನಾದ (ಜ್ಞಾನಿಭಕ್ತನು) |
| **ಉದಾರಾಃ** | - ಉದಾರರಾಗಿದ್ದಾರೆ | | |
| **ತು** | - ಆದರೆ | | |
| **ಜ್ಞಾನೀ** | - ಜ್ಞಾನಿ (ಯಾದರೋ ಸಾಕ್ಷಾತ್) | **ಅನುತ್ತಮಾಮ್** | - ಅತಿ ಉತ್ತಮ |
| **ಆತ್ಮಾ, ಏವ** | - ನನ್ನಸ್ವರೂಪವೇ ಆಗಿದ್ದಾನೆ (ಹೀಗೆ) | **ಗತಿಮ್** | - ಗತಿಸ್ವರೂಪನಾದ |
| | | **ಮಾಮ್, ಏವ** | - ನನ್ನಲ್ಲಿಯೇ |
| **ಮೇ, ಮತಮ್** | - ನನ್ನ ಮತವು | **ಆಸ್ಥಿತಃ** | - ಒಳ್ಳೆಯ ಪ್ರಕಾರದಿಂದ ಸ್ಥಿತನಾಗಿದ್ದಾನೆ |
| **ಹಿ** | - ಏಕೆಂದರೆ | | |

ಬಹೂನಾಮ್, ಜನ್ಮನಾಮ್, ಅಂತೇ, ಜ್ಞಾನವಾನ್, ಮಾಮ್, ಪ್ರಪದ್ಯತೇ,
ವಾಸುದೇವಃ, ಸರ್ವಮ್, ಇತಿ, ಸಃ, ಮಹಾತ್ಮಾ, ಸುದುರ್ಲಭಃ ॥೧೯॥

**ಮತ್ತು ಎಲೈ ಅರ್ಜುನ -**

**ಬಹೂನಾಮ್** - ಅನೇಕ
**ಜನ್ಮನಾಮ್** - ಜನ್ಮಗಳ
**ಅಂತೇ** - ಕಡೆಯ ಜನ್ಮದಲ್ಲಿ
**ಜ್ಞಾನವಾನ್** - ತತ್ತ್ವಜ್ಞಾನವನ್ನು ಪಡೆದ ಪುರುಷನು
**ಸರ್ವಮ್** - ಎಲ್ಲವೂ
**ವಾಸುದೇವಃ** - ವಾಸುದೇವನೇ ಆಗಿದ್ದಾನೆ *
**ಇತಿ** - ಈ ಪ್ರಕಾರವಾಗಿ
**ಮಾಮ್** - ನನ್ನನ್ನು
**ಪ್ರಪದ್ಯತೇ** - ಭಜಿಸುತ್ತಾನೆ
**ಸಃ, ಮಹಾತ್ಮಾ** - ಅಂತಹ ಮಹಾತ್ಮನು
**ಸುದುರ್ಲಭಃ** - ಅತ್ಯಂತ ದುರ್ಲಭನಾಗಿದ್ದಾನೆ.

ಕಾಮೈಃ ತೈಃ ತೈಃ ಹೃತಜ್ಞಾನಾಃ ಪ್ರಪದ್ಯಂತೇ, ಅನ್ಯದೇವತಾಃ,
ತಮ್, ನಿಯಮಮ್, ಆಸ್ಥಾಯ, ಪ್ರಕೃತ್ಯಾ, ನಿಯತಾಃ ಸ್ವಯಾ ॥೨೦॥

**ಮತ್ತು ಎಲೈ ಅರ್ಜುನ ! ವಿಷಯಾಸಕ್ತರಾದವರು -**

**ತೈಃ, ತೈಃ** - ಯಾವು-ಯಾವುದೋ
**ಕಾಮೈಃ** - ಭೋಗಗಳ ಕಾಮನೆಯ ಮೂಲಕ
**ಹೃತಜ್ಞಾನಾಃ** - ಯಾರ ಜ್ಞಾನವು ಅಪಹರಿಸಲ್ಪಟ್ಟಿದೆಯೋ (ಆ ಜನರು)
**ಸ್ವಯಾ, ಪ್ರಕೃತ್ಯಾ** - ತಮ್ಮ ಸ್ವಭಾವದಿಂದ
**ನಿಯತಾಃ** - ಪ್ರೇರಿತರಾಗಿ
**ತಮ್,ತಮ್** - ಆಯಾಯಾ
**ನಿಯಮಮ್** - ನಿಯಮಗಳನ್ನು
**ಆಸ್ಥಾಯ** - ಧಾರಣೆ ಮಾಡಿ†
**ಅನ್ಯದೇವತಾಃ** - ಬೇರೆ ದೇವತೆಗಳನ್ನು
**ಪ್ರಪದ್ಯಂತೇ** - ಭಜಿಸುತ್ತಾರೆ ಅರ್ಥಾತ್ ಪೂಜಿಸುತ್ತಾರೆ.

ಯಃ, ಯಃ, ಯಾಮ್, ಯಾಮ್, ತನುಮ್, ಭಕ್ತಃ, ಶ್ರದ್ಧಯಾ, ಅರ್ಚಿತುಮ್, ಇಚ್ಛತಿ,
ತಸ್ಯ, ತಸ್ಯ, ಅಚಲಾಮ್, ಶ್ರದ್ಧಾಮ್, ತಾಮ್, ಏವ, ವಿದಧಾಮಿ, ಅಹಮ್ ॥೨೧॥

**ಯಃ,ಯಃ** - ಯಾವ ಯಾವ
**ಭಕ್ತಃ** - ಸಕಾಮ ಭಕ್ತರು
**ಯಾಮ್, ಯಾಮ್** - ಯಾವ ಯಾವ
**ತನುಮ್** - ದೇವತೆಯ ಸ್ವರೂಪವನ್ನು
**ಶ್ರದ್ಧಯಾ** - ಶ್ರದ್ಧೆಯಿಂದ
**ಅರ್ಚಿತುಮ್** - ಪೂಜಿಸಲು
**ಇಚ್ಛತಿ** - ಇಷ್ಟಪಡುತ್ತಾರೋ
**ತಸ್ಯ, ತಸ್ಯ** - ಆಯಾಯಾ ಭಕ್ತನ
**ಶ್ರದ್ಧಾಮ್** - ಶ್ರದ್ಧೆಯನ್ನು
**ಅಹಮ್** - ನಾನು
**ತಾಮ್, ಏವ** - ಅದೇ ದೇವತೆಯ ಕುರಿತು
**ಅಚಲಾಮ್**- - ಸ್ಥಿರ
**ವಿದಧಾಮಿ** ಗೊಳಿಸುತ್ತೇನೆ.

ಸಃ, ತಯಾ, ಶ್ರದ್ಧಯಾ, ಯುಕ್ತಃ, ತಸ್ಯ, ಆರಾಧನಮ್, ಈಹತೇ,
ಲಭತೇ, ಚ, ತತಃ, ಕಾಮಾನ್, ಮಯಾ, ಏವ, ವಿಹಿತಾನ್, ಹಿ, ತಾನ್ ॥೨೨॥

**ಹಾಗೂ -**

| | | | |
|---|---|---|---|
| **ಸಃ** | - ಆ ಪುರುಷನು | **ತಸ್ಯ** | - ಆ ದೇವತೆಯ |
| **ತಯಾ, ಶ್ರದ್ಧಯಾ** | - ಆ ಶ್ರದ್ಧೆಯಿಂದ | **ಆರಾಧನಮ್** | - ಪೂಜೆಯನ್ನು |
| **ಯುಕ್ತಃ** | - ಯುಕ್ತನಾಗಿ | **ಈಹತೇ** | - ಮಾಡುತ್ತಾನೆ |
| **ಚ** | - ಮತ್ತು | **ತಾನ್, ಕಾಮಾನ್** | - ಆ ಬಯಸಿದ ಭೋಗಗಳನ್ನು |
| **ತತಃ** | - ಆ ದೇವತೆಯಿಂದ | | |
| **ಮಯಾ, ಏವ** | - ನನ್ನ ಮೂಲಕವೇ | **ಹಿ** | - ನಿಸ್ಸಂದೇಹವಾಗಿ |
| **ವಿಹಿತಾನ್** | - ವಿಧಿಸಲ್ಪಟ್ಟ | **ಲಭತೇ** | - ಪಡೆಯುತ್ತಾನೆ |

ಅಂತವತ್, ತು, ಫಲಮ್, ತೇಷಾಮ್, ತತ್, ಭವತಿ ಅಲ್ಪಮೇಧಸಾಮ್,
ದೇವಾನ್, ದೇವಯಜಃ, ಯಾಂತಿ, ಮದ್ಭಕ್ತಾಃ, ಯಾಂತಿ, ಮಾಮ್, ಅಪಿ ॥೨೩॥

**ಮತ್ತು ಎಲೈ ಅರ್ಜುನ!**

| | | | |
|---|---|---|---|
| **ತು** | - ಆದರೆ | **ದೇವಾನ್** | - ದೇವತೆಗಳನ್ನು |
| **ತೇಷಾಮ್** | - ಆ | **ಯಾಂತಿ** | - ಹೊಂದುತ್ತಾರೆ (ಮತ್ತು) |
| **ಅಲ್ಪಮೇಧ-ಸಾಮ್** | - ಅಲ್ಪಬುದ್ಧಿಯುಳ್ಳವರ | **ಮದ್ಭಕ್ತಾಃ** | - ನನ್ನ ಭಕ್ತರು (ಹೇಗಾದರೂ ಭಜಿಸಲಿ ಕಡೆಯಲ್ಲಿ ಅವರು) |
| **ತತ್, ಫಲಮ್** | - ಆ ಫಲವು | | |
| **ಅಂತವತ್** | - ನಾಶವಾಗುವಂತಹುದು | | |
| **ಭವತಿ** | - ಆಗಿದೆ (ಹಾಗೂ ಆ) | | |
| **ದೇವಯಜಃ** | - ದೇವತೆಗಳನ್ನು ಪೂಜಿಸುವವರು | **ಮಾಮ್, ಅಪಿ** | - ನನ್ನನ್ನೇ |
| | | **ಯಾಂತಿ** | - ಸೇರುತ್ತಾರೆ. |

ಅವ್ಯಕ್ತಮ್, ವ್ಯಕ್ತಿಮ್, ಆಪನ್ನಮ್, ಮನ್ಯಂತೇ ಮಾಮ್, ಅಬುದ್ಧಯಃ,
ಪರಮ್, ಭಾವಮ್, ಅಜಾನಂತಃ, ಮಮ, ಅವ್ಯಯಮ್, ಅನುತ್ತಮಮ್ ॥೨೪॥

**ಹೀಗಿದ್ದರೂ ಕೂಡ ಜನರು ನನ್ನ ಧ್ಯಾನ ಮಾಡುವುದಿಲ್ಲ, ಇದಕ್ಕೆ ಕಾರಣವೆಂದರೆ**

| | | | |
|---|---|---|---|
| **ಅಬುದ್ಧಯಃ** | - ಬುದ್ಧಿಹೀನರಾದ ಪುರುಷರು | **ಮಾಮ್** | - ಸಚ್ಚಿದಾನಂದಘನ ಪರಮಾತ್ಮನಾದ ನನ್ನನ್ನು (ಮನುಷ್ಯನಂತೆ ಹುಟ್ಟಿ) |
| **ಮಮ** | - ನನ್ನ | | |
| **ಅನುತ್ತಮಮ್** | - ಉತ್ಕೃಷ್ಟವೂ | | |
| **ಅವ್ಯಯಮ್** | - ಅವಿನಾಶೀ | | |
| **ಪರಮ್** | - ಪರಮ | **ವ್ಯಕ್ತಿಮ್** | - ವ್ಯಕ್ತಿಭಾವವನ್ನು |
| **ಭಾವಮ್** | - ಭಾವವನ್ನು | **ಆಪನ್ನಮ್** | - ಪಡೆದವನೆಂದು |
| **ಅಜಾನಂತಃ** | - ತಿಳಿಯದೆ | **ಮನ್ಯಂತೇ** | - ತಿಳಿಯುತ್ತಾರೆ. |
| **ಅವ್ಯಕ್ತಮ್** | - ಮನಸ್ಸು-ಇಂದ್ರಿಯಗಳಿಗಿಂತ ಪರನಾದ | | |

ನ, ಅಹಮ್, ಪ್ರಕಾಶಃ, ಸರ್ವಸ್ಯ, ಯೋಗಮಾಯಾಸಮಾವೃತಃ,
ಮೂಢಃ ಅಯಮ್, ನ, ಅಭಿಜಾನಾತಿ, ಲೋಕಃ, ಮಾಮ್, ಅಜಮ್, ಅವ್ಯಯಮ್ ॥೨೫॥

| | | | |
|---|---|---|---|
| **ಯೋಗಮಾಯಾ-ಸಮಾವೃತಃ** | - ನನ್ನ ಯೋಗ ಮಾಯೆಯಿಂದ ಅಡಗಿರುವ | **ಲೋಕಃ** | - ಜನಸಮುದಾಯವು |
| **ಅಹಮ್** | - ನಾನು | **ಅಜಮ್** | - ಜನ್ಮರಹಿತನಾದ |
| **ಸರ್ವಸ್ಯ** | - ಎಲ್ಲರಿಗೂ | **ಅವ್ಯಯಮ್** | - ಅವಿನಾಶಿ ಪರಮೇಶ್ವರನಾದ |
| **ಪ್ರಕಾಶಃ, ನ** | - ಪ್ರತ್ಯಕ್ಷನಾಗುವುದಿಲ್ಲ (ಆದ್ದರಿಂದ) | **ಮಾಮ್** | - ನನ್ನನ್ನು |
| **ಅಯಮ್** | - ಈ | **ನ, ಅಭಿಜಾನಾತಿ** | - ತಿಳಿಯುವುದಿಲ್ಲ ಅರ್ಥಾತ್ ನನ್ನನ್ನು ಜನ್ಮ-ಮರಣವುಳ್ಳವನೆಂದು ತಿಳಿಯುತ್ತದೆ. |
| **ಮೂಢಃ** | - ಅಜ್ಞಾನಿ | | |

ವೇದ, ಅಹಮ್, ಸಮತೀತಾನಿ, ವರ್ತಮಾನಾನಿ, ಚ, ಅರ್ಜುನ,
ಭವಿಷ್ಯಾಣಿ, ಚ, ಭೂತಾನಿ, ಮಾಮ್, ತು, ವೇದ, ನ, ಕಶ್ಚನ ॥೨೬॥

| | | | |
|---|---|---|---|
| **ಅರ್ಜುನ** | - ಹೇ ಅರ್ಜುನಾ! | **ಅಹಮ್, ವೇದ** | - ನಾನು ಬಲ್ಲೆ |
| **ಸಮತೀತಾನಿ** | - ಹಿಂದೆ ಕಳೆದು ಹೋದ | **ತು** | - ಆದರೆ |
| **ಚ** | - ಮತ್ತು | **ಮಾಮ್** | - ನನ್ನನ್ನು |
| **ವರ್ತಮಾನಾನಿ** | - ವರ್ತಮಾನದಲ್ಲಿ ಇರುವ | **ಕಶ್ಚನ** | - ಯಾರೂ ಕೂಡ (ಶ್ರದ್ಧಾ-ಭಕ್ತಿ ರಹಿತರಾದ ಪುರುಷರು) |
| **ಚ** | - ಹಾಗೂ | | |
| **ಭವಿಷ್ಯಾಣಿ** | - ಮುಂದೆ ಹುಟ್ಟಲಿರುವ | **ನ, ವೇದ** | - ತಿಳಿಯುವುದಿಲ್ಲ. |
| **ಭೂತಾನಿ** | - ಎಲ್ಲ ಪ್ರಾಣಿಗಳನ್ನು | | |

ಇಚ್ಛಾದ್ವೇಷಸಮುತ್ಥೇನ, ದ್ವಂದ್ವಮೋಹೇನ, ಭಾರತ,
ಸರ್ವಭೂತಾನಿ, ಸಂಮೋಹಮ್, ಸರ್ಗೇ, ಯಾಂತಿ, ಪರಂತಪ ॥೨೭॥

ಏಕೆಂದರೆ -

| | | | |
|---|---|---|---|
| **ಭಾರತ** | - ಹೇ ಭರತ ವಂಶೀಯನಾದ | **ಪರಂತಪ** | - ಅರ್ಜುನನೇ! |
| | | **ಸರ್ಗೇ** | - ಜಗತ್ತಿನಲ್ಲಿ |
| **ಇಚ್ಛಾದ್ವೇಷ-ಸಮುತ್ಥೇನ** | - ಇಚ್ಛೆ ಮತ್ತು ದ್ವೇಷದಿಂದ ಉಂಟಾಗುವ | **ಸರ್ವಭೂತಾನಿ** | - ಸಂಪೂರ್ಣ ಪ್ರಾಣಿಗಳು |
| | | **ಸಮ್ಮೋಹಮ್** | - ಅತ್ಯಂತ ಅಜ್ಞತೆಯನ್ನು |
| **ದ್ವಂದ್ವಮೋಹೇನ** | - ಸುಖ-ದುಃಖಾದಿ ದ್ವಂದ್ವ ರೂಪವಾದ ಮೋಹದಿಂದ | **ಯಾಂತಿ** | - ಹೊಂದುತ್ತಿದ್ದಾರೆ. |

ಯೇಷಾಮ್, ತು, ಅಂತಗತಮ್, ಪಾಪಮ್, ಜನಾನಾಮ್, ಪುಣ್ಯಕರ್ಮಣಾಮ್,
ತೇ, ದ್ವಂದ್ವಮೋಹನಿರ್ಮುಕ್ತಾಃ ಭಜಂತೇ, ಮಾಮ್, ದೃಢವ್ರತಾಃ ॥೨೮॥

**ತು** - ಆದರೆ (ನಿಷ್ಕಾಮ ಭಾವದಿಂದ)
**ಪುಣ್ಯಕರ್ಮ-ಣಾಮ್** - ಶ್ರೇಷ್ಠಕರ್ಮಗಳ ಆಚರಣೆ ಮಾಡುವ
**ಯೇಷಾಮ್** - ಯಾವ
**ಜನಾನಾಮ್** - ಪುರುಷರ
**ಪಾಪಮ್** - ಪಾಪಗಳು
**ಅಂತಗತಮ್** - ನಷ್ಟವಾಗಿ ಹೋಗಿವೆಯೋ
**ತೇ** - ಆ
**ದ್ವಂದ್ವಮೋಹ-ನಿರ್ಮುಕ್ತಾಃ** - ರಾಗ-ದ್ವೇಷಜನಿತ ದ್ವಂದ್ವರೂಪೀ ಮೋಹದಿಂದ ಮುಕ್ತರಾದ
**ದೃಢವ್ರತಾಃ** - ದೃಢನಿಶ್ಚಯವುಳ್ಳ ಭಕ್ತರು
**ಮಾಮ್** - ನನ್ನನ್ನು
**ಭಜಂತೇ** - ಎಲ್ಲ ಪ್ರಕಾರದಿಂದಲೂ ಭಜಿಸುತ್ತಾರೆ.

ಜರಾಮರಣಮೋಕ್ಷಾಯ, ಮಾಮ್, ಆಶ್ರಿತ್ಯ, ಯತಂತಿ, ಯೇ,
ತೇ, ಬ್ರಹ್ಮ ತತ್, ವಿದುಃ, ಕೃತ್ಸ್ನಮ್, ಅಧ್ಯಾತ್ಮಮ್, ಕರ್ಮ, ಚ, ಅಖಿಲಮ್ ॥೨೯॥

ಮತ್ತು -

**ಯೇ** - ಯಾರು
**ಮಾಮ್** - ನನ್ನಲ್ಲಿ
**ಆಶ್ರಿತ್ಯ** - ಶರಣಾಗಿ
**ಜರಾಮರಣ-ಮೋಕ್ಷಾಯ** - ಜರಾ ಮತ್ತು ಮರಣದಿಂದ ಬಿಡುಗಡೆ ಹೊಂದಲು
**ಯತಂತಿ** - ಪ್ರಯತ್ನ ಮಾಡುತ್ತಾರೋ
**ತೇ** - ಆ (ಪುರುಷರು)
**ತತ್** - ಆ
**ಬ್ರಹ್ಮ** - ಬ್ರಹ್ಮವನ್ನು
**ಕೃತ್ಸ್ನಮ್** - ಸಂಪೂರ್ಣವಾಗಿ
**ಅಧ್ಯಾತ್ಮಮ್** - ಅಧ್ಯಾತ್ಮವನ್ನು
**ಚ** - ಹಾಗೂ
**ಅಖಿಲಮ್** - ಸಂಪೂರ್ಣ
**ಕರ್ಮ** - ಕರ್ಮವನ್ನು
**ವಿದುಃ** - ತಿಳಿಯುತ್ತಾರೆ.

ಸಾಧಿಭೂತಾಧಿದೈವಮ್, ಮಾಮ್, ಸಾಧಿಯಜ್ಞಮ್, ಚ, ಯೇ, ವಿದುಃ,
ಪ್ರಯಾಣಕಾಲೇ, ಅಪಿ, ಚ, ಮಾಮ್, ತೇ, ವಿದುಃ, ಯುಕ್ತಚೇತಸಃ ॥೩೦॥

ಮತ್ತು

**ಯೇ** - ಯಾವ ಪುರುಷರು
**ಸಾಧಿಭೂತಾಧಿ ದೈವಮ್** - ಅಧಿಭೂತ ಮತ್ತು ಅಧಿದೈವದ ಸಹಿತ
**ಚ** - ಹಾಗೂ
**ಸಾಧಿಯಜ್ಞಮ್** - ಅಧಿಯಜ್ಞದ ಸಹಿತ
**ಮಾಮ್** - ಎಲ್ಲರ ಆತ್ಮರೂಪಿ ಯಾದ ನನ್ನನ್ನು

| | | | |
|---|---|---|---|
| ಪ್ರಯಾಣಕಾಲೇ | – ಅಂತ್ಯಕಾಲದಲ್ಲಿಯೂ | ಯುಕ್ತಚೇತಸಃ | – ಯುಕ್ತಚಿತ್ತರಾದ |
| ಅಪಿ | ಸಹ | | ಪುರುಷರು |
| ವಿದುಃ | – ತಿಳಿಯುತ್ತಾರೆಯೋ* | ಮಾಮ್, ಚ, | – ನನ್ನನ್ನೇ ಅರಿಯುತ್ತಾರೆ |
| ತೇ | – ಆ | ವಿದುಃ | ಅಂದರೆ ಪಡೆಯುತ್ತಾರೆ. |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 8 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ಅಷ್ಟಮೋಽಧ್ಯಾಯಃ – ಅಕ್ಷರಬ್ರಹ್ಮಯೋಗ ॥

ಕಿಮ್, ತತ್, ಬ್ರಹ್ಮ ಕಿಮ್, ಅಧ್ಯಾತ್ಮಮ್, ಕಿಮ್, ಕರ್ಮ, ಪುರುಷೋತ್ತಮ,
ಅಧಿಭೂತಮ್, ಚ, ಕಿಮ್, ಪ್ರೋಕ್ತಮ್, ಅಧಿದೈವಮ್, ಕಿಮ್, ಉಚ್ಯತೇ ॥೧॥

**ಭಗವಂತನ ಮಾತು ತಿಳಿಯದೇ ಹೋದ ಪ್ರಯುಕ್ತ ಅರ್ಜುನ ಕೇಳಿದನು –**

| | | | |
|---|---|---|---|
| **ಪುರುಷೋತ್ತಮ** | – ಹೇ ಪುರುಷೋತ್ತಮ! | **ಕಿಮ್** | – ಯಾವುದನ್ನು |
| **ತತ್, ಬ್ರಹ್ಮ** | – ಆ ಬ್ರಹ್ಮವು | **ಪ್ರೋಕ್ತಮ್** | – ಹೇಳಲಾಗಿದೆ |
| **ಕಿಮ್** | – ಯಾವುದು? | **ಚ** | – ಮತ್ತು |
| **ಅಧ್ಯಾತ್ಮಮ್** | – ಅಧ್ಯಾತ್ಮವೆಂದರೆ | **ಅಧಿದೈವಮ್** | – ಅಧಿದೈವವೆಂದು |
| **ಕಿಮ್** | – ಏನು? | **ಕಿಮ್** | – ಯಾವುದಕ್ಕೆ |
| **ಕರ್ಮ, ಕಿಮ್** | – ಕರ್ಮ ಎಂದರೆ ಏನು? | **ಉಚ್ಯತೇ** | – ಹೇಳುತ್ತಾರೆ? |
| **ಅಧಿಭೂತಮ್** | – ಅಧಿಭೂತವೆಂಬ (ಹೆಸರಿನಿಂದ) | | |

ಅಧಿಯಜ್ಞಃ, ಕಥಮ್, ಕಃ, ಅತ್ರ, ದೇಹೇ, ಅಸ್ಮಿನ್, ಮಧುಸೂದನ,
ಪ್ರಯಾಣಕಾಲೇ, ಚ, ಕಥಮ್, ಜ್ಞೇಯಃ, ಅಸಿ, ನಿಯತಾತ್ಮಭಿಃ ॥೨॥

**ಮತ್ತು –**

| | | | |
|---|---|---|---|
| **ಮಧುಸೂದನ** | – ಹೇ ಮಧುಸೂದನ ! | **ನಿಯತಾತ್ಮಭಿಃ** | – ಯುಕ್ತಚಿತ್ತವುಳ್ಳ ಪುರುಷರ ಮೂಲಕ, |
| **ಅತ್ರ** | – ಇಲ್ಲಿ | | |
| **ಅಧಿಯಜ್ಞಃ, ಕಃ** | – ಅಧಿಯಜ್ಞ ಯಾರು? ಮತ್ತು ಅವನು | **ಪ್ರಯಾಣಕಾಲೇ** | – ಅಂತ್ಯಕಾಲದಲ್ಲಿ (ನೀನು) |
| **ಅಸ್ಮಿನ್, ದೇಹೇ** | – ಈ ಶರೀರದಲ್ಲಿ | **ಕಥಮ್** | – ಯಾವ ಪ್ರಕಾರ |
| **ಕಥಮ್** | – ಹೇಗಿದ್ದಾನೆ? | **ಜ್ಞೇಯಃ** | – ತಿಳಿಯಲು |
| **ಚ** | – ಹಾಗೂ | **ಅಸಿ** | – ಬರುತ್ತೀಯೆ? |

ಅಕ್ಷರಮ್, ಬ್ರಹ್ಮ ಪರಮಮ್, ಸ್ವಭಾವಃ ಅಧ್ಯಾತ್ಮಮ್, ಉಚ್ಯತೇ,
ಭೂತಭಾವೋದ್ಭವಕರಃ, ವಿಸರ್ಗಃ, ಕರ್ಮಸಂಜ್ಞಿತಃ ॥೩॥

**ಈ ರೀತಿ ಅರ್ಜುನ ಪ್ರಶ್ನಿಸಿದ ನಂತರ ಶ್ರೀಕೃಷ್ಣ ಹೇಳಿದ, ಎಲೈ ಅರ್ಜುನ –**

| | | | |
|---|---|---|---|
| **ಪರಮಮ್** | – ಪರಮ | **ಭೂತಭಾವೋ-ದ್ಭವಕರಃ** | – ಭೂತಗಳ ಭಾವವನ್ನು ಉಂಟುಮಾಡುವ (ಯಾವ) |
| **ಅಕ್ಷರಮ್** | – ಅಕ್ಷರವು | | |
| **ಬ್ರಹ್ಮ** | – ಬ್ರಹ್ಮವಾಗಿದೆ | | |

**ಸ್ವಭಾವಃ** - ತನ್ನ ಸ್ವರೂಪ ಅರ್ಥಾತ್ ಜೀವಾತ್ಮನು
**ಅಧ್ಯಾತ್ಮಮ್** - ಅಧ್ಯಾತ್ಮ ಎಂಬ (ಹೆಸರಿನಿಂದ)
**ಉಚ್ಯತೇ** - ಹೇಳಲ್ಪಡುತ್ತಾನೆ
**ವಿಸರ್ಗಃ** - ತ್ಯಾಗವಿದೆ (ಸೃಷ್ಟಿಯ ರಚನಾರೂಪೀ ಕ್ರಿಯೆಯನ್ನು)
**ಕರ್ಮಸಂಜ್ಞಿತಃ** - ಕರ್ಮ ಎಂಬ ಹೆಸರಿನಿಂದ ಹೇಳಲಾಗಿದೆ.

ಅಧಿಭೂತಮ್, ಕ್ಷರಃ, ಭಾವಃ, ಪುರುಷಃ, ಚ, ಅಧಿದೈವತಮ್,
ಅಧಿಯಜ್ಞಃ ಅಹಮ್, ಏವ, ಅತ್ರ, ದೇಹೇ, ದೇಹಭೃತಾಮ್, ವರ ॥೪॥

**ಹಾಗೆಯೇ -**

**ಕ್ಷರಃ, ಭಾವಃ** - ಉತ್ಪತ್ತಿ-ವಿನಾಶ ಧರ್ಮವುಳ್ಳ ಎಲ್ಲ ಪದಾರ್ಥಗಳೂ
**ಅಧಿಭೂತಮ್** - ಅಧಿಭೂತವಾಗಿವೆ
**ಪುರುಷಃ** - ಹಿರಣ್ಮಯ ಪುರುಷನು * (ಚತುರ್ಮುಖ ಬ್ರಹ್ಮದೇವರು)
**ಅಧಿದೈವತಮ್** - ಅಧಿದೈವವಾಗಿದ್ದಾನೆ
**ಚ** - ಮತ್ತು
**ದೇಹಭೃತಾಮ್,** - ಹೇ ದೇಹಧಾರಿಗಳಲ್ಲಿ
**ವರ** ಶ್ರೇಷ್ಠನಾದ ಅರ್ಜುನನೆ!
**ಅತ್ರ** - ಈ
**ದೇಹೇ** - ಶರೀರದಲ್ಲಿ
**ಅಹಮ್, ಏವ** - ವಾಸುದೇವನಾದ ನಾನೇ (ಅಂತರ್ಯಾಮಿ ರೂಪದಿಂದ)
**ಅಧಿಯಜ್ಞಃ** - ಅಧಿ ಯಜ್ಞನಾಗಿದ್ದೇನೆ

ಅಂತಕಾಲೇ, ಚ, ಮಾಮ್, ಏವ, ಸ್ಮರನ್, ಮುಕ್ತ್ವಾ, ಕಲೇವರಮ್, ಯಃ,
ಪ್ರಯಾತಿ, ಸಃ, ಮದ್ಭಾವಮ್, ಯಾತಿ, ನ, ಅಸ್ತಿ, ಅತ್ರ, ಸಂಶಯಃ ॥೫॥

**ಯಃ** - ಯಾವ ಪುರುಷನು
**ಅಂತಕಾಲೇ ಚ** - ಅಂತ್ಯ ಕಾಲ ದಲ್ಲಿಯೂ ಕೂಡ
**ಮಾಮ್, ಏವ** - ನನ್ನನ್ನೇ
**ಸ್ಮರನ್** - ಸ್ಮರಣೆ ಮಾಡುತ್ತ
**ಕಲೇವರಮ್** - ಶರೀರವನ್ನು
**ಮುಕ್ತ್ವಾ** - ತ್ಯಾಗಮಾಡಿ
**ಪ್ರಯಾತಿ** - ಹೋಗುತ್ತಾನೋ
**ಸಃ** - ಅವನು
**ಮದ್ಭಾವಮ್** - ನನ್ನ ಸಾಕ್ಷಾತ್ ಸ್ವರೂಪವನ್ನು
**ಯಾತಿ** - ಪಡೆಯುತ್ತಾನೆ
**ಅತ್ರ** - ಇದರಲ್ಲಿ
**ಸಂಶಯಃ** - ಯಾವುದೇ
**ನ, ಅಸ್ತಿ** ಸಂಶಯವು ಇರುವುದಿಲ್ಲ

ಯಮ್, ಯಮ್, ವಾ, ಅಪಿ, ಸ್ಮರನ್, ಭಾವಮ್, ತ್ಯಜತಿ, ಅಂತೇ, ಕಲೇವರಮ್,
ತಮ್, ತಮ್, ಏವ, ಏತಿ, ಕೌಂತೇಯ, ಸದಾ, ತದ್ಭಾವಭಾವಿತಃ ॥೬॥

**ಕಾರಣ -**

**ಕೌಂತೇಯ** - ಹೇ ಕುಂತೀಪುತ್ರನಾದ ಅರ್ಜುನನೇ! (ಈ ಮನುಷ್ಯನು)
**ಅಂತೇ** - ಅಂತ್ಯಕಾಲದಲ್ಲಿ
**ತ್ಯಜತಿ** - ತ್ಯಜಿಸುತ್ತಾನೋ
**ತಮ್, ತಮ್, ಏವ,** - ಅದನ್ನೇ,
**ಏತಿ** - ಪಡೆಯುತ್ತಾನೆ (ಏಕೆಂದರೆ ಅವನು)

ಯಮ್, ಯಮ್, - ಯಾವ-ಯಾವ
ವಾ, ಅಪಿ ಭಾವಮ್ - ಭಾವವನ್ನು
ಸ್ಮರನ್ - ಸ್ಮರಿಸುತ್ತ
ಕಲೇವರಮ್ - ಶರೀರವನ್ನು
ಸದಾ - ಸದಾ
ತದ್ಭಾವ ಭಾವಿತಃ - ಅದೇ ಭಾವದಿಂದ ಭಾವಿತಾಗಿದ್ದಾನೆ

ತಸ್ಮಾತ್, ಸರ್ವೇಷು, ಕಾಲೇಷು, ಮಾಮ್, ಅನುಸ್ಮರ, ಯುಧ್ಯ, ಚ,
ಮಯಿ, ಅರ್ಪಿತಮನೋಬುದ್ಧಿಃ ಮಾಮ್, ಏವ, ಏಷ್ಯತಿ, ಅಸಂಶಯಮ್ ॥೭॥

ತಸ್ಮಾತ್ - ಆದ್ದರಿಂದ (ಹೇ ಅರ್ಜುನನೇ ! ನೀನು)
ಸರ್ವೇಷು - ಎಲ್ಲ
ಕಾಲೇಷು - ಸಮಯದಲ್ಲಿ (ನಿರಂತರ)
ಮಾಮ್ - ನನ್ನ
ಅನುಸ್ಮರ - ಸ್ಮರಣೆಮಾಡು
ಚ - ಮತ್ತು
ಯುಧ್ಯ - ಯುದ್ಧವನ್ನೂ ಮಾಡು!
(ಈ ಪ್ರಕಾರವಾಗಿ)
ಮಯಿ - ನನ್ನಲ್ಲಿ
ಅರ್ಪಿತಮನೋ,- ಅರ್ಪಿತವಾದ
ಬುದ್ಧಿಃ ಮನಸ್ಸು-ಬುದ್ಧಿಗಳಿಂದ ಯುಕ್ತನಾಗಿ (ನೀನು)
ಅಸಂಶಯಮ್ - ನಿಸ್ಸಂದೇಹವಾಗಿ
ಮಾಮ್, ಏವ - ನನ್ನನ್ನೇ
ಏಷ್ಯಸಿ - ಪಡೆಯುವೆ.

ಅಭ್ಯಾಸಯೋಗಯುಕ್ತೇನ, ಚೇತಸಾ, ನಾನ್ಯಗಾಮಿನಾ, ಪರಮಮ್,
ಪುರುಷಮ್, ದಿವ್ಯಮ್, ಯಾತಿ, ಪಾರ್ಥ, ಅನುಚಿಂತಯನ್ ॥೮॥

ಪಾರ್ಥ - ಹೇ ಪಾರ್ಥನೇ
ಅಭ್ಯಾಸ-ಯೋಗ-ಯುಕ್ತೇನ - ಪರಮೇಶ್ವರನ ಧ್ಯಾನದ ಅಭ್ಯಾಸ ರೂಪವಾದ ಯೋಗದಿಂದ ಯುಕ್ತನಾಗಿ
ನಾನ್ಯಗಾಮಿನಾ - ಬೇರೆ ಕಡೆ ಎಲ್ಲಿಯೂ ಹೋಗದಿರುವ
ಚೇತಸಾ - ಚಿತ್ತದಿಂದ
ಅನುಚಿಂತಯನ್- ನಿರಂತರ ಚಿಂತನೆ ಮಾಡುವ ಮನುಷ್ಯ
ಪರಮಮ್ - ಪರಮ (ಪ್ರಕಾಶಸ್ವರೂಪೀ)
ದಿವ್ಯಮ್ - ದಿವ್ಯ
ಪುರುಷಮ್ - ಪುರುಷನನ್ನು ಅರ್ಥಾತ್ ಪರಮೇಶ್ವರನನ್ನೇ
ಯಾತಿ - ಹೊಂದುತ್ತಾನೆ

ಕವಿಮ್, ಪುರಾಣಮ್, ಅನುಶಾಸಿತಾರಮ್, ಅಣೋಃ, ಅಣೀಯಾಂಸಮ್,
ಅನುಸ್ಮರೇತ್, ಯಃ, ಸವಸ್ಯ, ಧಾತಾರಮ್, ಅಚಿಂತ್ಯರೂಪಮ್,
ಆದಿತ್ಯ ವರ್ಣಮ್, ತಮಸಃ, ಪರಸ್ತಾತ್ ॥೯॥

ಆದ್ದರಿಂದ -

ಯಃ - ಯಾವ ಪುರುಷನು
ಕವಿಮ್ - ಸರ್ವಜ್ಞ
ಪುರಾಣಮ್ - ಅನಾದಿ
ಅನುಶಾಸಿತಾರಮ್- ಎಲ್ಲರ ನಿಯಂತಾ *
ಅಣೋಃ, - ಸೂಕ್ಷ್ಮಕ್ಕಿಂತಲೂ
ಅಣೀಯಾಂಸಮ್ ಅತಿ ಸೂಕ್ಷ್ಮನಾದವನು
ಸರ್ವಸ್ಯ - ಎಲ್ಲರ
ಧಾತಾರಮ್ - ಧಾರಣೆ-ಪೋಷಣೆ ಮಾಡುವವನು

| | | | |
|---|---|---|---|
| ಅಚಿಂತ್ಯ-ರೂಪಮ್ | - ಅಚಿಂತ್ಯ ಸ್ವರೂಪನು | ಪರಸ್ತಾತ್ | - ಪರನಾದ ಶುದ್ಧ ಸಚ್ಚಿದಾನಂದಘನ ಪರಮೇಶ್ವರನ |
| ಆದಿತ್ಯವರ್ಣಮ್ | - ಸೂರ್ಯನಂತೆ ನಿತ್ಯ ಚೇತನ ಪ್ರಕಾಶ ರೂಪನು (ಮತ್ತು) | ಅನುಸ್ಮರೇತ್ | - ಸ್ಮರಣೆ ಮಾಡುತ್ತಾನೋ. |
| ತಮಸಃ | - ಅವಿದ್ಯೆಯಿಂದ | | |

ಪ್ರಯಾಣಕಾಲೇ, ಮನಸಾ, ಅಚಲೇನ, ಭಕ್ತ್ಯಾ ಯುಕ್ತಃ, ಯೋಗಬಲೇನ, ಚ, ಏವ, ಭ್ರುವೋಃ, ಮಧ್ಯೇ, ಪ್ರಾಣಮ್, ಆವೇಶ್ಯ, ಸಮ್ಯಕ್, ಸಃ, ತಮ್, ಪರಮ್, ಪುರುಷಮ್, ಉಪೈತಿ, ದಿವ್ಯಮ್ ॥೧೦॥

| | | | |
|---|---|---|---|
| ಸಃ | - ಆ | ಚ | - ಮತ್ತೆ |
| ಭಕ್ತ್ಯಾ,ಯುಕ್ತಃ | - ಭಕ್ತಿಯುಕ್ತನಾದ ಪುರುಷನು, | ಅಚಲೇನ | - ನಿಶ್ಚಲವಾದ |
| | | ಮನಸಾ | - ಮನಸ್ಸಿನಿಂದ |
| ಪ್ರಯಾಣಕಾಲೇ | - ಅಂತ್ಯಕಾಲದಲ್ಲಿ (ಕೂಡ) | (ಸ್ಮರನ್) | - ಸ್ಮರಣೆಮಾಡುತ್ತ |
| ಯೋಗಬಲೇನ | - ಯೋಗಬಲದಿಂದ | ತಮ್ | - ಆ |
| ಭ್ರುವೋಃ | - ಭೃಕುಟಿಯ | ದಿವ್ಯಮ್ | - ದಿವ್ಯರೂಪನಾದ |
| ಮಧ್ಯೇ | - ಮಧ್ಯದಲ್ಲಿ | ಪರಮ್ | - ಪರಮ |
| ಪ್ರಾಣಮ್ | - ಪ್ರಾಣವನ್ನು | ಪುರುಷಮ್, ಏವ | - ಪುರುಷ ಪರಮಾತ್ಮನನ್ನೇ |
| ಸಮ್ಯಕ್ | - ಒಳ್ಳೆ ಪ್ರಕಾರದಿಂದ | | |
| ಆವೇಶ್ಯ | - ಸ್ಥಾಪಿಸಿ | ಉಪೈತಿ | - ಪಡೆಯುತ್ತಾನೆ |

ಯತ್, ಅಕ್ಷರಮ್, ವೇದವಿದಃ, ವದಂತಿ, ವಿಶಂತಿ, ಯತ್, ಯತಯಃ, ವೀತರಾಗಾಃ, ಯತ್, ಇಚ್ಛಂತಃ, ಬ್ರಹ್ಮಚರ್ಯಮ್, ಚರಂತಿ, ತತ್, ತೇ, ಪದಮ್, ಸಂಗ್ರಹೇಣ, ಪ್ರವಕ್ಷ್ಯೇ ॥೧೧॥

ಮತ್ತು ಎಲೈ ಅರ್ಜುನ -

| | | | |
|---|---|---|---|
| ವೇದವಿದಃ | - ವೇದವನ್ನು ಬಲ್ಲ ವಿದ್ವಾಂಸರು | ಯತ್ | - ಯಾವ ಪರಮ ಪದವನ್ನು |
| ಯತ್ | - ಯಾವ ಸಚ್ಚಿದಾನಂದ ಘನರೂಪೀ ಪರಮಪದವನ್ನು | ಇಚ್ಛಂತಃ | - ಬಯಸುವ (ಬ್ರಹ್ಮಚಾರಿಗಳು) |
| | | ಬ್ರಹ್ಮಚರ್ಯಮ್ | - ಬ್ರಹ್ಮಚರ್ಯದ |
| ಅಕ್ಷರಮ್ | - ಅವಿನಾಶೀ (ಎಂದು) | ಚರಂತಿ | - ಆಚರಣೆಯನ್ನು ಮಾಡುತ್ತಾರೋ |
| ವದಂತಿ | - ಹೇಳುತ್ತಾರೋ | | |
| ವೀತರಾಗಾಃ | - ಆಸಕ್ತಿರಹಿತರಾದ | ತತ್ | - ಆ |
| ಯತಯಃ | - ಯತ್ನಶೀಲ ಸಂನ್ಯಾಸಿ ಮಹಾತ್ಮರು | ಪದಮ್ | - ಪರಮಪದವನ್ನು (ನಾನು) |
| ಯತ್ | - ಯಾವುದರಲ್ಲಿ | ತೇ | - ನಿನಗೋಸ್ಕರ |
| ವಿಶಂತಿ | - ಪ್ರವೇಶ ಮಾಡುತ್ತಾರೋ (ಮತ್ತು) | ಸಂಗ್ರಹೇಣ | - ಸಂಕ್ಷೇಪವಾಗಿ |
| | | ಪ್ರವಕ್ಷ್ಯೇ | - ಹೇಳುವೆನು. |

ಸರ್ವದ್ವಾರಾಣಿ, ಸಂಯಮ್ಯ, ಮನಃ, ಹೃದಿ, ನಿರುಧ್ಯ, ಚ, ಮೂರ್ಧ್ನಿ,
ಆಧಾಯ, ಆತ್ಮನಃ, ಪ್ರಾಣಮ್, ಆಸ್ಥಿತಃ, ಯೋಗಧಾರಣಾಮ್ ॥೧೨॥
ಓಂ, ಇತಿ, ಏಕಾಕ್ಷರಮ್, ಬ್ರಹ್ಮ, ವ್ಯಾಹರನ್, ಮಾಮ್, ಅನುಸ್ಮರನ್,
ಯಃ, ಪ್ರಯಾತಿ, ತ್ಯಜನ್, ದೇಹಮ್, ಸಃ, ಯಾತಿ, ಪರಮಾಮ್, ಗತಿಮ್ ॥೧೩॥

**ಎಲ್ಲೈ ಅರ್ಜುನ -**

| | |
|---|---|
| **ಸರ್ವದ್ವಾರಾಣಿ** | - ಎಲ್ಲ ಇಂದ್ರಿಯಗಳ ದ್ವಾರಗಳನ್ನು |
| **ಸಂಯಮ್ಯ** | - ತಡೆದು |
| **ಚ** | - ಹಾಗೂ |
| **ಮನಃ** | - ಮನಸ್ಸನ್ನು |
| **ಹೃದಿ** | - ಹೃದಯದಲ್ಲಿ |
| **ನಿರುಧ್ಯ** | - ಸ್ಥಿರವಾಗಿಸಿ (ಮತ್ತು ಆ ಗೆಲ್ಲಲ್ಪಟ್ಟ ಮನಸ್ಸಿನ ಮೂಲಕ) |
| **ಪ್ರಾಣಮ್** | - ಪ್ರಾಣವನ್ನು |
| **ಮೂರ್ಧ್ನಿ** | - ಮಸ್ತಕದಲ್ಲಿ |
| **ಆಧಾಯ** | - ಸ್ಥಾಪಿಸಿಕೊಂಡು |
| **ಆತ್ಮನಃ** | - ಪರಮಾತ್ಮನ ಸಂಬಂಧವಾದ |
| **ದೇಹಮ್** | - ಶರೀರವನ್ನು |
| **ತ್ಯಜನ್** | - ತ್ಯಜಿಸಿ |
| **ಪ್ರಯಾತಿ** | - ಹೋಗುತ್ತಾನೋ |
| **ಸಃ** | - ಆ ಪುರುಷನು |
| **ಯೋಗ-ಧಾರಣಾಮ್** | - ಯೋಗ ಧಾರಣೆಯಲ್ಲಿ |
| **ಆಸ್ಥಿತಃ** | - ಸ್ಥಿರನಾಗಿದ್ದು |
| **ಯಃ** | - ಯಾವ ಪುರುಷನು |
| **ಓಂ, ಇತಿ** | - ಓಂ (ಎಂಬ) ಈ |
| **ಏಕಾಕ್ಷರಮ್** | - ಏಕಾಕ್ಷರರೂಪವಾದ |
| **ಬ್ರಹ್ಮ** | - ಬ್ರಹ್ಮವನ್ನು |
| **ವ್ಯಾಹರನ್** | - ಉಚ್ಚರಿಸುತ್ತಾ (ಮತ್ತು ಅದರ ಅರ್ಥ ಸ್ವರೂಪನಾದ) |
| **ಮಾಮ್** | - ನಿರ್ಗುಣಬ್ರಹ್ಮನಾದ ನನ್ನನ್ನು |
| **ಅನುಸ್ಮರನ್** | - ಚಿಂತನೆ ಮಾಡುತ್ತಾ |
| **ಪರಮಾಮ್, ಗತಿಮ್** | - ಪರಮಗತಿಯನ್ನು |
| **ಯಾತಿ** | - ಹೊಂದುತ್ತಾನೆ. |

ಅನನ್ಯಚೇತಾಃ, ಸತತಮ್, ಯಃ, ಮಾಮ್, ಸ್ಮರತಿ, ನಿತ್ಯಶಃ,
ತಸ್ಯ, ಅಹಮ್, ಸುಲಭಃ, ಪಾರ್ಥ, ನಿತ್ಯಯುಕ್ತಸ್ಯ, ಯೋಗಿನಃ ॥೧೪॥

| | |
|---|---|
| **ಪಾರ್ಥ** | - ಹೇ ಅರ್ಜುನನೇ |
| **ಯಃ** | - ಯಾವ ಪುರುಷನು |
| **(ಮಯಿ)** | - ನನ್ನಲ್ಲಿ |
| **ಅನನ್ಯಚೇತಾಃ** | - ಅನನ್ಯಚಿತ್ತನಾಗಿ |
| **ನಿತ್ಯಶಃ** | - ಸದಾಕಾಲ |
| **ಸತತಮ್** | - ನಿರಂತರ |
| **ಮಾಮ್** | - ಪುರುಷೋತ್ತಮನಾದ ನನ್ನನ್ನು |
| **ಸ್ಮರತಿ** | - ಸ್ಮರಿಸುತ್ತಾನೋ |
| **ತಸ್ಯ** | - ಆ |
| **ನಿತ್ಯಯುಕ್ತಸ್ಯ** | - ನಿತ್ಯ-ನಿರಂತರ ನನ್ನಲ್ಲಿ ಯುಕ್ತನಾದ |
| **ಯೋಗಿನಃ** | - ಯೋಗಿಗೆ |
| **ಅಹಮ್** | - ನಾನು |
| **ಸುಲಭಃ** | - ಸುಲಭನಾಗಿದ್ದೇನೆ. ಅರ್ಥಾತ್ ಅವನಿಗೆ ಸಹಜವಾಗಿಯೇ ಪ್ರಾಪ್ತನಾಗುತ್ತೇನೆ. |

ಮಾಮ್, ಉಪೇತ್ಯ, ಪುನರ್ಜನ್ಮ ದುಃಖಾಲಯಮ್, ಅಶಾಶ್ವತಮ್,
ನ, ಆಪ್ನುವಂತಿ, ಮಹಾತ್ಮಾನಃ ಸಂಸಿದ್ಧಿಮ್, ಪರಮಾಮ್, ಗತಾಃ ||೧೫||

| | | | |
|---|---|---|---|
| **ಪರಮಾಮ್** | - (ಮತ್ತು ಆ) ಪರಮ | **ದುಃಖಾಲ-** | - ದುಃಖಗಳ |
| **ಸಂಸಿದ್ಧಿಮ್** | - ಸಿದ್ಧಿಯನ್ನು | **ಯಮ್** | ಆಲಯವೂ (ಮತ್ತು) |
| **ಗತಾಃ** | - ಪಡೆದ | **ಅಶಾಶ್ವತಮ್** | - ಕ್ಷಣಭಂಗುರವೂ ಆದ |
| **ಮಹಾತ್ಮಾನಃ** | - ಮಹಾತ್ಮಾಜನರು | **ಪುನರ್ಜನ್ಮ** | - ಪುನರ್ಜನ್ಮವನ್ನು |
| **ಮಾಮ್** | - ನನ್ನನ್ನು | **ನ, ಆಪ್ನುವಂತಿ** | - ಪಡೆಯುವುದಿಲ್ಲ |
| **ಉಪೇತ್ಯ** | - ಪಡೆದುಕೊಂಡು | | |

ಆಬ್ರಹ್ಮಭುವನಾತ್, ಲೋಕಾಃ, ಪುನರಾವರ್ತಿನಃ, ಅರ್ಜುನ,
ಮಾಮ್, ಉಪೇತ್ಯ, ತು, ಕೌಂತೇಯ, ಪುನರ್ಜನ್ಮ ನ, ವಿದ್ಯತೇ ||೧೬||

| | | | |
|---|---|---|---|
| **ಅರ್ಜುನ** | - ಹೇ ಅರ್ಜುನಾ! | **ತು** | - ಆದರೆ |
| **ಆಬ್ರಹ್ಮ-** | - ಬ್ರಹ್ಮಲೋಕ | **ಕೌಂತೇಯ** | - ಹೇ ಕುಂತೀ ಪುತ್ರ! |
| **ಭುವನಾತ್** | ಪರ್ಯಂತ | **ಮಾಮ್** | - ನನನ್ನು |
| **ಲೋಕಾಃ** | - ಎಲ್ಲ ಲೋಕಗಳು | **ಉಪೇತ್ಯ** | - ಪಡೆದನಂತರ |
| **ಪುನರಾ-** | - ಪುನರಾವರ್ತಿ | **ಪುನರ್ಜನ್ಮ** | - ಪುನರ್ಜನ್ಮವು |
| **ವರ್ತಿನಃ** | ಗಳಾಗಿವೆ * | **ನ, ವಿದ್ಯತೇ** | - ಇರುವುದಿಲ್ಲ |

ಸಹಸ್ರಯುಗಪರ್ಯಂತಮ್, ಅಹಃ, ಯತ್, ಬ್ರಹ್ಮಣಃ, ವಿದುಃ,
ರಾತ್ರಮ್, ಯುಗಸಹಸ್ರಾಂತಾಮ್, ತೇ, ಅಹೋರಾತ್ರವಿದಃ, ಜನಾಃ ||೧೭||

**ಹಾಗೂ ಎಲೈ ಅರ್ಜುನ -**

| | | | |
|---|---|---|---|
| **ಬ್ರಹ್ಮಣಃ** | - ಬ್ರಹ್ಮದೇವರ | **ಸಹಸ್ರಾಂತಾಮ್** | ಚತುರ್ಯುಗಗಳ ವರೆಗಿನ ಅವಧಿಯೆಂದೂ |
| **ಯತ್** | - ಯಾವ | | |
| **ಅಹಃ** | - ಒಂದುಹಗಲಿದೆಯೋ (ಅದನ್ನು) | **(ಯೇ)** | - ಯಾವ ಪುರುಷರು |
| **ಸಹಸ್ರಯುಗ-** | - ಒಂದು ಸಾವಿರ | **ವಿದುಃ** | - ತತ್ತ್ವದಿಂದ ತಿಳಿಯುತ್ತಾರೋ* |
| **ಪರ್ಯಂತಮ್** | ಚತುರ್ಯುಗಗಳ ವರೆಗಿನ ಅವಧಿ ಯೆಂದೂ ಮತ್ತು | **ತೇ** | - ಆ |
| | | **ಜನಾಃ** | - ಯೋಗಿಜನರು |
| **ರಾತ್ರಿಮ್** | - ರಾತ್ರಿಯನ್ನು (ಕೂಡ) | **ಅಹೋ-** | - ಕಾಲದ ತತ್ತ್ವವನ್ನು |
| **ಯುಗ-** | - ಒಂದು ಸಾವಿರ | **ರಾತ್ರವಿದಃ** | ತಿಳಿದವರಾಗಿದ್ದಾರೆ. |

ಅವ್ಯಕ್ತಾತ್, ವ್ಯಕ್ತಯಃ, ಸರ್ವಾಃ, ಪ್ರಭವಂತಿ, ಅಹರಾಗಮೇ,
ರಾತ್ರ್ಯಾಗಮೇ, ಪ್ರಲೀಯಂತೇ, ತತ್ರ, ಏವ, ಅವ್ಯಕ್ತಸಂಜ್ಞಕೇ ॥೧೮॥

**ಆದುದರಿಂದ ಅವರು ಇದನ್ನೂ ಸಹ ತಿಳಿದಿದ್ದಾರೆ -**

| | | | |
|---|---|---|---|
| **ಸರ್ವಾಃ** | - ಸಂಪೂರ್ಣ | **ರಾತ್ರ್ಯಾಗಮೇ** | - ಬ್ರಹ್ಮನ ರಾತ್ರಿಯ ಪ್ರವೇಶ ಕಾಲದಲ್ಲಿ |
| **ವ್ಯಕ್ತಯಃ** | - ಚರಾಚರ ಭೂತಗಣವು | **ತತ್ರ** | - ಆ |
| **ಅಹರಾಗಮೇ** | - ಬ್ರಹ್ಮನ ಹಗಲಿನ ಪ್ರವೇಶ ಕಾಲದಲ್ಲಿ | **ಅವ್ಯಕ್ತಸಂಜ್ಞಕೇ, ಏವ** | - ಅವ್ಯಕ್ತನೆಂಬ ಹೆಸರಿನ ಬ್ರಹ್ಮನ ಸೂಕ್ಷ್ಮಶರೀರ ದಲ್ಲಿಯೇ |
| **ಅವ್ಯಕ್ತಾತ್** | - ಅವ್ಯಕ್ತದಿಂದ ಅಂದರೆ ಬ್ರಹ್ಮನ ಸೂಕ್ಷ್ಮ ಶರೀರದಿಂದ | **ಪ್ರಲೀಯಂತೇ** | - ಲೀನವಾಗುತ್ತವೆ. |
| **ಪ್ರಭವಂತಿ** | - ಉತ್ಪನ್ನವಾಗುತ್ತವೆ | | |

ಭೂತಗ್ರಾಮಃ, ಸಃ, ಏವ, ಅಯಮ್, ಭೂತ್ವಾ, ಭೂತ್ವಾ, ಪ್ರಲೀಯತೇ,
ರಾತ್ರ್ಯಾಗಮೇ, ಅವಶಃ ಪಾರ್ಥ, ಪ್ರಭವತಿ, ಅಹರಾಗಮೇ ॥೧೯॥

| | | | |
|---|---|---|---|
| **ಪಾರ್ಥ** | - ಹೇ ಪಾರ್ಥನೇ! | **ರಾತ್ರ್ಯಾಗಮೇ** | - ರಾತ್ರಿಯ ಪ್ರವೇಶಕಾಲದಲ್ಲಿ |
| **ಸಃ, ಏವ,** | - ಅದೇ | **ಪ್ರಲೀಯತೇ** | - ಲೀನವಾಗಿ ಹೋಗುತ್ತದೆ |
| **ಅಯಮ್** | - ಈ | **ಅಹರಾಗಮೇ** | - ಹಗಲಿನ ಪ್ರವೇಶ ಕಾಲದಲ್ಲಿ (ಮತ್ತೆ) |
| **ಭೂತಗ್ರಾಮಃ** | - ಭೂತಸಮುದಾಯವು | **ಪ್ರಭವತಿ** | - ಉತ್ಪನ್ನವಾಗುತ್ತದೆ. |
| **ಭೂತ್ವಾ ಭೂತ್ವಾ** | - ಉತ್ಪನ್ನವಾಗುತ್ತ-ವಾಗುತ್ತಾ | | |
| **ಅವಶಃ** | - ಪ್ರಕೃತಿಯ ವಶದಲ್ಲಿದ್ದು | | |

ಪರಃ, ತಸ್ಮಾತ್, ತು, ಭಾವಃ, ಅನ್ಯಃ, ಅವ್ಯಕ್ತಃ, ಅವ್ಯಕ್ತಾತ್, ಸನಾತನಃ,
ಯಃ, ಸಃ, ಸರ್ವೇಷು, ಭೂತೇಷು, ನಶ್ಯತ್ಸು ನ, ವಿನಶ್ಯತಿ ॥೨೦॥

| | | | |
|---|---|---|---|
| **ತು** | - ಆದರೆ | **ಅವ್ಯಕ್ತಃ** | - ಅವ್ಯಕ್ತ |
| **ತಸ್ಮಾತ್** | - ಆ | **ಭಾವಃ** | - ಭಾವವಾಗಿದೆಯೋ |
| **ಅವ್ಯಕ್ತಾತ್** | - ಅವ್ಯಕ್ತಕ್ಕಿಂತಲೂ | **ಸಃ** | - ಆ ಪರಮ ದಿವ್ಯಪುರುಷನು |
| **ಪರಃ** | - ಅತಿ ಶ್ರೇಷ್ಠವಾದ | **ಸರ್ವೇಷು** | - ಎಲ್ಲ |
| **ಅನ್ಯಃ** | - ಇನ್ನೊಂದು ಅರ್ಥಾತ್ ವಿಲಕ್ಷಣವಾದದ್ದು | **ಭೂತೇಷು** | - ಪ್ರಾಣಿಗಳು |
| | | **ನಶ್ಯತ್ಸು** | - ನಷ್ಟವಾದರೂ (ಕೂಡ) |
| **ಯಃ** | - ಯಾವುದು | | |
| **ಸನಾತನಃ** | - ಸನಾತನವಾದ | **ನ, ವಿನಶ್ಯತಿ** | - ನಾಶವಾಗುವುದಿಲ್ಲ |

ಅವ್ಯಕ್ತಃ, ಅಕ್ಷರ, ಇತಿ, ಉಕ್ತಃ, ತಮ್, ಆಹುಃ, ಪರಮಾಮ್, ಗತಿಮ್
ಯಮ್, ಪ್ರಾಪ್ಯ, ನ, ನಿವರ್ತಂತೇ, ತತ್, ಧಾಮ, ಪರಮಮ್, ಮಮ ॥೨೧॥

ಮತ್ತು ಯಾವುದನ್ನು –

| | | | |
|---|---|---|---|
| **ಅವ್ಯಕ್ತಃ** | – ಅವ್ಯಕ್ತವು | **ಇತಿ** | – ಈ (ಹೆಸರಿನಿಂದ) |
| **ಅಕ್ಷರಃ** | – ಅಕ್ಷರ | **ಉಕ್ತಃ** | – ಹೇಳಲಾಗಿದೆಯೋ |
| **ತಮ್** | – ಅದೇ ಅಕ್ಷರವೆಂಬ ಹೆಸರಿನ ಅವ್ಯಕ್ತ ಭಾವವನ್ನು | **ಪ್ರಾಪ್ಯ** | – ಪಡೆದ (ಮನುಷ್ಯನು) |
| | | **ನ, ನಿವರ್ತಂತೇ** | – ಹಿಂದಿರುಗುವುದಿಲ್ಲವೋ |
| **ಪರಮಾಮ್, ಗತಿಮ್** | – ಪರಮಗತಿಯೆಂದು | **ತತ್** | – ಅದು |
| | | **ಮಮ** | – ನನ್ನ |
| **ಆಹುಃ** | – ಹೇಳುತ್ತಾರೆ (ಹಾಗೂ) | **ಪರಮಮ್** | – ಪರಮ |
| **ಯಮ್** | – ಯಾವ ಸನಾತನವಾದ ಅವ್ಯಕ್ತ ಭಾವವನ್ನು | **ಧಾಮ** | – ಧಾಮವಾಗಿದೆ. |

ಪುರುಷಃ, ಸಃ, ಪರಃ, ಪಾರ್ಥ, ಭಕ್ತ್ಯಾ, ಲಭ್ಯಃ, ತು, ಅನನ್ಯಯಾ,
ಯಸ್ಯ, ಅಂತಃಸ್ಥಾನಿ, ಭೂತಾನಿ, ಯೇನ, ಸರ್ವಮ್, ಇದಮ್, ತತಮ್ ॥೨೨॥

| | | | |
|---|---|---|---|
| **ಪಾರ್ಥ** | – ಹೇ ಪಾರ್ಥನೇ! | **ತತಮ್** | – ಪರಿಪೂರ್ಣವಾಗಿದೆ * |
| **ಯಸ್ಯ** | – ಯಾವ ಪರಮಾತ್ಮನ | **ಸಃ** | – ಆ ಸನಾತನ, ಅವ್ಯಕ್ತನಾದ |
| **ಅಂತಃಸ್ಥಾನಿ** | – ಅಂತರ್ಗತವಾಗಿ | **ಪರಃ** | – ಪರಮ, ಪುರುಷಃ |
| **ಭೂತಾನಿ** | – ಎಲ್ಲ ಜೀವಿಗಳಿವೆಯೋ (ಮತ್ತು) | **ತು** | – ಪುರುಷನಾದರೋ |
| | | **ಅನನ್ಯಯಾ** | – ಅನನ್ಯವಾದ † |
| **ಯೇನ** | – ಯಾವ ಸಚ್ಚಿದಾನಂದಘನ ಪರಮಾತ್ಮನಿಂದ | **ಭಕ್ತ್ಯಾ** | – ಭಕ್ತಿಯಿಂದಲೇ |
| | | **ಲಭ್ಯಃ** | – ದೊರೆಯುತ್ತಾನೆ. |
| **ಇದಮ್, ಸರ್ವಮ್** | – ಈ ಸಮಸ್ತ ಜಗತ್ತು | | |

ವೇದೇಷು, ಯಜ್ಞೇಷು, ತಪಃಸು, ಚ, ಏವ, ದಾನೇಷು, ಯತ್, ಪುಣ್ಯಫಲಮ್,
ಪ್ರದಿಷ್ಟಮ್, ಅತ್ಯೇತಿ, ತತ್, ಸರ್ವಮ್, ಇದಮ್, ವಿದಿತ್ವಾ, ಯೋಗೀ,
ಪರಮ್, ಸ್ಥಾನಮ್, ಉಪೈತಿ, ಚ, ಆದ್ಯಮ್ ॥೨೮॥

ಏಕೆಂದರೆ –

| | | | |
|---|---|---|---|
| **ಯೋಗೀ** | – ಯೋಗೀಪುರುಷನು | **ವೇದೇಷು** | – ವೇದಗಳ ಅಧ್ಯಯನ |
| **ಇದಮ್** | – ಈ ರಹಸ್ಯವನ್ನು | **ಚ** | – ಹಾಗೂ |
| **ವಿದಿತ್ವಾ** | – ತತ್ತ್ವಶಃ ತಿಳಿದುಕೊಂಡು | **ಯಜ್ಞೇಷು** | – ಯಜ್ಞ |
| **ತಪಃಸು** | – ತಪಸ್ಸು (ಮತ್ತು) | **ಏವ** | – ನಿಸ್ಸಂದೇಹವಾಗಿ |
| **ದಾನೇಷು** | – ದಾನಾದಿಗಳನ್ನು ಮಾಡುವುದರಲ್ಲಿ | **ಅತ್ಯೇತಿ** | – ದಾಟಿ ಹೋಗುತ್ತಾನೆ |
| | | **ಚ** | – ಮತ್ತು |
| **ಯತ್** | – ಯಾವ | **ಆದ್ಯಮ್** | – ಸನಾತನವಾದ |
| **ಪುಣ್ಯಫಲಮ್** | – ಪುಣ್ಯಫಲಗಳನ್ನು | **ಪರಮ್,–** | – ಪರಮ |
| **ಪ್ರದಿಷ್ಟಮ್** | – ಹೇಳಿದೆಯೋ | **ಸ್ಥಾನಮ್** | ಪದವನ್ನು |
| **ತತ್** | – ಆ | **ಉಪೈತಿ** | – ಪಡೆಯುತ್ತಾನೆ. |
| **ಸರ್ವಮ್** | – ಎಲ್ಲವನ್ನೂ | | |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 9 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ನವಮೋऽಧ್ಯಾಯಃ - ರಾಜವಿದ್ಯಾರಾಜಗುಹ್ಯಯೋಗ ॥

ಇದಮ್, ತು, ತೇ, ಗುಹ್ಯತಮಮ್, ಪ್ರವಕ್ಷ್ಯಾಮಿ, ಅನಸೂಯವೇ, ಜ್ಞಾನಮ್,
ವಿಜ್ಞಾನಸಹಿತಮ್, ಯತ್, ಜ್ಞಾತ್ವಾ, ಮೋಕ್ಷ್ಯಸೇ, ಅಶುಭಾತ್ ॥೧॥

**ನಂತರ ಶ್ರೀಕೃಷ್ಣಪರಮಾತ್ಮನು ಹೇಳಿದನು, ಎಲೈ ಅರ್ಜುನ -**

| | | | |
|---|---|---|---|
| **ಅನಸೂಯವೇ,** | - ದೋಷ-ದೃಷ್ಟಿರಹಿತ | **ತು** | - ಏನೆಂದರೆ |
| **ತೇ** | ಭಕ್ತನಾದ ನಿನಗೆ | **ಯತ್** | - ಯಾವುದನ್ನು |
| **ಇದಮ್** | - ಈ | **ಜ್ಞಾತ್ವಾ** | - ತಿಳಿದು (ನೀನು) |
| **ಗುಹ್ಯತಮಮ್** | - ಪರಮಗೋಪ್ಯವಾದ | **ಅಶುಭಾತ್** | - ದುಃಖರೂಪೀ ಜಗತ್ತಿನಿಂದ |
| **ವಿಜ್ಞಾನಸಹಿತಮ್** | - ವಿಜ್ಞಾನಸಹಿತವಾದ | **ಮೋಕ್ಷ್ಯಸೇ** | - ಪಾರಾಗಿ ಹೋಗುವೆ. |
| **ಜ್ಞಾನಮ್** | - ಜ್ಞಾನವನ್ನು (ಪುನಃ) | | |
| **ಪ್ರವಕ್ಷ್ಯಾಮಿ** | - ಚೆನ್ನಾಗಿ ಹೇಳುವೆನು | | |

ರಾಜವಿದ್ಯಾಂ, ರಾಜಗುಹ್ಯಮ್, ಪವಿತ್ರಮ್, ಇದಮ್, ಉತ್ತಮಮ್,
ಪ್ರತ್ಯಕ್ಷಾವಗಮಮ್, ಧರ್ಮ್ಯಮ್, ಸುಸುಖಮ್, ಕರ್ತುಮ್, ಅವ್ಯಯಮ್ ॥೨॥

| | | | |
|---|---|---|---|
| **ಇದಮ್** | - ಈ ವಿಜ್ಞಾನ ಸಹಿತವಾದ ಜ್ಞಾನವು | **ಗಮಮ್** | ಫಲವುಳ್ಳದ್ದು |
| **ರಾಜವಿದ್ಯಾ** | - ಎಲ್ಲ ವಿದ್ಯೆಗಳ ರಾಜನೂ | **ಧರ್ಮ್ಯಮ್** | - ಧರ್ಮಯುಕ್ತ ವಾದುದು |
| **ರಾಜಗುಹ್ಯಮ್** | - ಎಲ್ಲ ರಹಸ್ಯಗಳ ರಾಜಾ | **ಕರ್ತುಮ್** | - ಸಾಧನೆ ಮಾಡುವುದಕ್ಕೆ |
| **ಪವಿತ್ರಮ್** | - ಅತಿ ಪವಿತ್ರ | **ಸುಸುಖಮ್** | - ತುಂಬಾ ಸುಲಭ (ಮತ್ತು) |
| **ಉತ್ತಮಮ್** | - ಅತಿ ಉತ್ತಮವು | | |
| **ಪ್ರತ್ಯಕ್ಷಾವ-** | - ಪ್ರತ್ಯಕ್ಷ | **ಅವ್ಯಯಮ್** | - ಅವಿನಾಶಿಯಾಗಿದೆ. |

ಅಶ್ರದ್ದಧಾನಾಃ, ಪುರುಷಾಃ, ಧರ್ಮಸ್ಯ, ಅಸ್ಯ, ಪರಂತಪ,
ಅಪ್ರಾಪ್ಯ, ಮಾಮ್, ನಿವರ್ತಂತೇ, ಮೃತ್ಯುಸಂಸಾರವರ್ತ್ಮನಿ ॥೩॥

**ಮತ್ತು -**

| | | | |
|---|---|---|---|
| **ಪರಂತಪ** | - ಹೇ ಪರಂತಪನೇ! | **ಅಪ್ರಾಪ್ಯ** | - ಪಡೆಯದೆ |
| **ಅಸ್ಯ** | - ಈ (ಮೇಲೆ ಹೇಳಿದ) | **ಮೃತ್ಯುಸಂಸಾರ-** | - ಮೃತ್ಯು |
| **ಧರ್ಮಸ್ಯ** | - ಧರ್ಮದಲ್ಲಿ | **ವರ್ತ್ಮನಿ** | ರೂಪವಾದ ಸಂಸಾರಚಕ್ರದಲ್ಲಿ |
| **ಅಶ್ರದ್ಧಧಾನಾಃ** | - ಶ್ರದ್ಧಾರಹಿತರಾದ | | |
| **ಪುರುಷಾಃ** | - ಪುರುಷರು | **ನಿವರ್ತಂತೇ** | - ಸುತ್ತುತ್ತಿರುತ್ತಾರೆ. |
| **ಮಾಮ್** | - ನನ್ನನ್ನು | | |

ಮಯಾ, ತತಮ್, ಇದಮ್, ಸರ್ವಮ್, ಜಗತ್, ಅವ್ಯಕ್ತಮೂರ್ತಿನಾ,
ಮತ್‍ಸ್ಥಾನಿ, ಸರ್ವಭೂತಾನಿ, ನ, ಚ, ಅಹಮ್, ತೇಷು, ಅವಸ್ಥಿತಃ ॥೪॥

ಮತ್ತು ಎಲೈ ಅರ್ಜುನ –

| | | | |
|---|---|---|---|
| **ಮಯಾ** | – ನನ್ನ | **ಸರ್ವಭೂತಾನಿ** | – ಎಲ್ಲ ಭೂತಗಳು |
| **ಅವ್ಯಕ್ತ-ಮೂರ್ತಿನಾ** | – ನಿರಾಕಾರ ಪರಮಾತ್ಮನಿಂದ | **ಮತ್ಸ್ಥಾನಿ** | – ನನ್ನೊಳಗೆ ಸಂಕಲ್ಪದ ಆಧಾರದಿಂದ ಸ್ಥಿತವಾಗಿವೆ (ಆದರೆ ವಾಸ್ತವವಾಗಿ) |
| **ಇದಮ್** | – ಈ | | |
| **ಸರ್ವಮ್,-** | – ಎಲ್ಲ | | |
| **ಜಗತ್** | ಜಗತ್ತು (ನೀರಿನಿಂದ ಮಂಜುಗಡ್ಡೆ ವ್ಯಾಪಿಸುವಂತೆ) | **ಅಹಮ್** | – ನಾನು |
| | | **ತೇಷು** | – ಅವುಗಳಲ್ಲಿ |
| **ತತಮ್** | – ಪರಿಪೂರ್ಣವಾಗಿದೆ | **ನ, ಅವಸ್ಥಿತಃ** | – ಸ್ಥಿತನಾಗಿಲ್ಲ. |
| **ಚ** | – ಮತ್ತು | | |

ನ, ಚ, ಮತ್ಸ್ಥಾನಿ, ಭೂತಾನಿ, ಪಶ್ಯ, ಮೇ, ಯೋಗಮ್, ಐಶ್ವರಮ್,
ಭೂತಭೃತ್, ನ, ಚ, ಭೂತಸ್ಥಃ, ಮಮ, ಆತ್ಮಾ, ಭೂತಭಾವನಃ ॥೫॥

| | | | |
|---|---|---|---|
| **ಭೂತಾನಿ** | – ಆ ಎಲ್ಲ ಭೂತಗಳು | **ಐಶ್ವರಮ್** | – ಈಶ್ವರೀಯ |
| **ಮತ್ಸ್ಥಾನಿ, ನ** | – ನನ್ನಲ್ಲಿ ಸ್ಥಿತವಾಗಿಲ್ಲ (ಆದರೆ) | **ಯೋಗಮ್** | – ಯೋಗಶಕ್ತಿಯನ್ನು |
| | | **ಪಶ್ಯ** | – ನೋಡು (ಏನೆಂದರೆ) |
| **ಮೇ** | – ನನ್ನ | | |
| **ಭೂತಭೃತ್** | – ಜೀವಜಗತ್ತಿನ ಧಾರಣೆ- ಪೋಷಣೆ ಮಾಡುವವನು | **ಚ** | – ಆಗಿದ್ದರೂ |
| | | **ಮಮ** | – ನನ್ನ |
| | | **ಆತ್ಮಾ** | – ಆತ್ಮವು (ವಾಸ್ತವದಲ್ಲಿ) |
| **ಚ** | – ಮತ್ತು | **ಭೂತಸ್ಥಃ, ನ** | – ಭೂತಗಳಲ್ಲಿ ಸ್ಥಿತನಾಗಿಲ್ಲ. |
| **ಭೂತಭಾವನಃ** | – ಭೂತಗಳನ್ನು ಉತ್ಪತ್ತಿ ಮಾಡುವ | | |

ಯಥಾ, ಆಕಾಶಸ್ಥಿತಃ, ನಿತ್ಯಮ್, ವಾಯುಃ, ಸರ್ವತ್ರಗಃ, ಮಹಾನ್,
ತಥಾ, ಸರ್ವಾಣಿ, ಭೂತಾನಿ, ಮತ್ಸ್ಥಾನಿ, ಇತಿ, ಉಪಧಾರಯ ॥೬॥

ಏಕೆಂದರೆ –

| | | | |
|---|---|---|---|
| **ಯಥಾ** | – ಹೇಗೆ (ಆಕಾಶದಿಂದ ಉತ್ಪನ್ನವಾಗಿ) | | (ನನ್ನ ಸಂಕಲ್ಪದ ಮೂಲಕ ಉತ್ಪನ್ನ ವಾಗುವುದರಿಂದ) |
| **ಸರ್ವತ್ರಗಃ** | – ಎಲ್ಲೆಲ್ಲೂ ಸಂಚರಿಸುವ | | |
| **ಮಹಾನ್, ವಾಯುಃ** | – ಮಹಾನ್ ವಾಯುವು | **ಸರ್ವಾಣಿ** | – ಸಂಪೂರ್ಣ |
| **ನಿತ್ಯಮ್** | – ಸದಾಕಾಲ | **ಭೂತಾನಿ** | – ಭೂತಗಳು |
| **ಆಕಾಶಸ್ಥಿತಃ** | – ಆಕಾಶದಲ್ಲಿಯೇ ನೆಲೆಸಿರುತ್ತದೋ | **ಮತ್ಸ್ಥಾನಿ** | – ನನ್ನಲ್ಲಿ ಸ್ಥಿತವಾಗಿವೆ |
| | | **ಇತಿ** | – ಎಂದು |
| **ತಥಾ** | – ಹಾಗೆಯೇ | **ಉಪಧಾರಯ** | – ತಿಳಿ. |

ಸರ್ವಭೂತಾನಿ, ಕೌಂತೇಯ, ಪ್ರಕೃತಿಮ್, ಯಾಂತಿ, ಮಾಮಿಕಾಮ್,
ಕಲ್ಪಕ್ಷಯೇ, ಪುನಃ, ತಾನಿ, ಕಲ್ಪಾದೌ, ವಿಸೃಜಾಮಿ, ಅಹಮ್ ॥೭॥

**ಮತ್ತು -**

| | | | |
|---|---|---|---|
| **ಕೌಂತೇಯ** | - ಹೇ ಅರ್ಜುನಾ! | | ಪ್ರಕೃತಿಯಲ್ಲಿ ಲೀನವಾಗುತ್ತವೆ (ಮತ್ತು) |
| **ಕಲ್ಪಕ್ಷಯೇ** | - ಕಲ್ಪಗಳ ಅಂತ್ಯದಲ್ಲಿ | **ಕಲ್ಪಾದೌ** | - ಕಲ್ಪಗಳ ಆದಿಯಲ್ಲಿ |
| **ಸರ್ವಭೂತಾನಿ** | - ಎಲ್ಲ ಭೂತಗಳು | **ತಾನಿ** | - ಅವುಗಳನ್ನು |
| **ಮಾಮಿಕಾಮ್** | - ನನ್ನ | **ಅಹಮ್, ಪುನಃ** | - ನಾನು ಪುನಃ |
| **ಪ್ರಕೃತಿಮ್** | - ಪ್ರಕೃತಿಯನ್ನು | **ವಿಸೃಜಾಮಿ** | - ಸೃಷ್ಟಿಸುತ್ತೇನೆ |
| **ಯಾಂತಿ** | - ಪಡೆಯುತ್ತವೆ ಅರ್ಥಾತ್ | | |

ಪ್ರಕೃತಿಮ್, ಸ್ವಾಮ್, ಅವಷ್ಟಭ್ಯ, ವಿಸೃಜಾಮಿ, ಪುನಃ ಪುನಃ
ಭೂತಗ್ರಾಮಮ್, ಇಮಮ್, ಕೃತ್ಸ್ನಮ್, ಅವಶಮ್, ಪ್ರಕೃತೇಃ, ವಶಾತ್ ॥೮॥

**ಹೇಗೆಂದರೆ -**

| | | | |
|---|---|---|---|
| **ಸ್ವಾಮ್** | - ನನ್ನ | **ಕೃತ್ಸ್ನಮ್** | - ಸಮಸ್ತ |
| **ಪ್ರಕೃತಿಮ್** | - ಪ್ರಕೃತಿಯನ್ನು | **ಭೂತ-** | - ಭೂತ |
| **ಅವಷ್ಟಭ್ಯ** | - ಅಂಗೀಕರಿಸಿಕೊಂಡು | **ಗ್ರಾಮಮ್** | ಸಮುದಾಯವನ್ನು |
| **ಪ್ರಕೃತೇಃ** | - ಸ್ವಭಾವದ | **ಪುನಃ ಪುನಃ** | - ಮತ್ತೆ ಮತ್ತೆ (ಅವುಗಳ ಕರ್ಮಗಳಿಗನು ಸಾರವಾಗಿ) |
| **ವಶಾತ್** | - ಬಲದಿಂದ | | |
| **ಅವಶಮ್** | - ಪರತಂತ್ರವಾದ | | |
| **ಇಮಮ್** | - ಈ | **ವಿಸೃಜಾಮಿ** | - ರಚಿಸುತ್ತೇನೆ |

ಅವಜಾನಂತಿ, ಮಾಮ್, ಮೂಢಾಃ, ಮಾನುಷೀಂ, ತನುಮ್, ಆಶ್ರಿತಮ್,
ಪರಮ್, ಭಾವಮ್, ಅಜಾನಂತಃ, ಮಮ, ಭೂತಮಹೇಶ್ವರಮ್ ॥೧೧॥

**ಹೀಗಿದ್ದರೂ ಸಹ -**

| | | | |
|---|---|---|---|
| **ಮಮ** | - ನನ್ನ | **ಅವಜಾನಂತಿ** | - ತುಚ್ಛವಾಗಿ ತಿಳಿಯುತ್ತಾರೆ ಅರ್ಥಾತ್ ನನ್ನ ಯೋಗಮಾಯೆ ಯಿಂದ ಜಗತ್ತಿನ ಉದ್ಧಾರಕ್ಕಾಗಿ ಮನುಷ್ಯ ರೂಪದಲ್ಲಿ ವಿಹರಿಸುತ್ತಿರುವ ಪರಮೇಶ್ವರನಾದ ನನ್ನನ್ನು ಸಾಧಾರಣ ಮನುಷ್ಯನೆಂದು ತಿಳಿಯುತ್ತಾರೆ. |
| **ಪರಮ್** | - ಪರಮ | | |
| **ಭಾವಮ್** | - ಭಾವವನ್ನು * | | |
| **ಅಜಾನಂತಃ** | - ತಿಳಿಯದಿರುವ | | |
| **ಮೂಢಾಃ** | - ಮೂಢ ಜನರು | | |
| **ಮಾನುಷೀಮ್,** | - ಮನುಷ್ಯ | | |
| **ತನುಮ್** | ಶರೀರವನ್ನು | | |
| **ಆಶ್ರಿತಮ್** | - ಧರಿಸಿರುವ | | |
| **ಭೂತ-** | - ಸಂಪೂರ್ಣ | | |
| **ಮಹೇಶ್ವರಮ್,** | ಭೂತಗಳ ಮಹಾನ್ | | |
| **ಮಾಮ್** | ಈಶ್ವರನಾದ ನನ್ನನ್ನು | | |

**ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ ।**
**ನಮಸ್ಯಂತಶ್ಚ ಮಾ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥೧೪॥**

ಸತತಮ್, ಕೀರ್ತಯಂತಃ, ಮಾಮ್, ಯತಂತಃ, ಚ, ದೃಢವ್ರತಾಃ,
ನಮಸ್ಯಂತಃ, ಚ, ಮಾಮ್, ಭಕ್ತ್ಯಾ, ನಿತ್ಯಯುಕ್ತಾಃ, ಉಪಾಸತೇ ॥೧೪॥

**ಮತ್ತು ಎಲೈ ಅರ್ಜುನ –**

| | | | |
|---|---|---|---|
| ದೃಢವ್ರತಾಃ | – ದೃಢ ನಿಶ್ಚಯವುಳ್ಳ ಭಕ್ತ ಜನರು | ಮಾಮ್ | – ನನಗೆ |
| ಸತತಮ್ | – ನಿರಂತರ | ನಮಸ್ಯಂತಃ | – ಪದೇ ಪದೇ ನಮಸ್ಕರಿಸುತ್ತಾ |
| ಕೀರ್ತಯಂತಃ | – ನನ್ನ ನಾಮ ಮತ್ತು ಗುಣಗಳ ಕೀರ್ತನೆ ಮಾಡುತ್ತಾ | ನಿತ್ಯಯುಕ್ತಾಃ | – ಸದಾ ನನ್ನ ಧ್ಯಾನದಲ್ಲಿ ಯುಕ್ತರಾಗಿ |
| ಚ | – ಹಾಗೂ | ಭಕ್ತ್ಯಾ | – ಅನನ್ಯ ಪ್ರೇಮದಿಂದ |
| ಯತಂತಃ | – ನನ್ನ ಪ್ರಾಪ್ತಿಗಾಗಿ ಪ್ರಯತ್ನ ಮಾಡುತ್ತ | ಮಾಮ್ | – ನನ್ನ |
| ಚ | – ಮತ್ತು | ಉಪಾಸತೇ | – ಉಪಾಸನೆಯನ್ನು ಮಾಡುತ್ತಾರೆ. |

ಜ್ಞಾನಯಜ್ಞೇನ, ಚ, ಅಪಿ, ಅನ್ಯೇ, ಯಜಂತಃ, ಮಾಮ್, ಉಪಾಸತೇ,
ಏಕತ್ವೇನ, ಪೃಥಕ್ತ್ವೇನ, ಬಹುಧಾ, ವಿಶ್ವತೋಮುಖಮ್ ॥೧೫॥

**ಅವರಲ್ಲಿ ಕೆಲವರು –**

| | | | |
|---|---|---|---|
| **ಅನ್ಯೇ** | – ಇತರೆ ಜ್ಞಾನ ಯೋಗಿಗಳು | **ಚ** | – ಮತ್ತು (ಬೇರೆ ಮನುಷ್ಯರು) |
| **ಮಾಮ್** | – ನಿರ್ಗುಣ-ನಿರಾಕಾರ ಬ್ರಹ್ಮನಾದ ನನ್ನನ್ನು | **ಬಹುಧಾ** | – ಅನೇಕ ಪ್ರಕಾರ |
| **ಜ್ಞಾನಯಜ್ಞೇನ** | – ಜ್ಞಾನಯಜ್ಞದ ಮೂಲಕ | **ವಿಶ್ವತೋ-ಮುಖಮ್** | – ವಿರಾಟ್‌ಸ್ವರೂಪೀ ಪರಮೇಶ್ವರನಾದ ನನ್ನನ್ನು |
| **ಏಕತ್ವೇನ** | – ಅಭಿನ್ನಭಾವದಿಂದ | **ಪೃಥಕ್ತ್ವೇನ** | – ಭೇದಭಾವದಿಂದ |
| **ಯಜಂತಃ, ಅಪಿ** | – ಪೂಜಿಸುತ್ತಿದ್ದರೂ ಕೂಡ (ನನ್ನ ಉಪಾಸನೆಯನ್ನೇ ಮಾಡುತ್ತಾರೆ) | **ಉಪಾಸತೇ** | – ಉಪಾಸನೆ ಮಾಡುತ್ತಾರೆ. |

ಗತಿಃ, ಭರ್ತಾ, ಪ್ರಭುಃ, ಸಾಕ್ಷೀ, ನಿವಾಸಃ, ಶರಣಮ್, ಸುಹೃತ್,
ಪ್ರಭವಃ, ಪ್ರಲಯಃ, ಸ್ಥಾನಮ್, ನಿಧಾನಮ್, ಬೀಜಮ್, ಅವ್ಯಯಮ್ ॥೧೮॥

**ಮತ್ತು ಎಲೈ ಅರ್ಜುನ –**

| | | | |
|---|---|---|---|
| **ಗತಿಃ** | – ಪಡೆಯಲು ಯೋಗ್ಯವಾದ ಪರಮಧಾಮವೂ | | ಬಯಸದೆ ಹಿತಮಾಡುವವನೂ |
| | | **ಪ್ರಭವಃ,** | – ಎಲ್ಲರ ಉತ್ಪತ್ತಿ- |

**ಭರ್ತಾ** - ಪಾಲನೆ-ಪೋಷಣೆ ಮಾಡುವನೂ
**ಪ್ರಭುಃ** - ಎಲ್ಲರ ಒಡೆಯನು
**ಸಾಕ್ಷೀ** - ಶುಭಾಶುಭಗಳನ್ನು ನೋಡುವವನೂ
**ನಿವಾಸಃ** - ಎಲ್ಲರ ವಾಸಸ್ಥಾನನೂ
**ಶರಣಮ್** - ಶರಣಾಗಲು ಯೋಗ್ಯನಾದವನು
**ಸುಹೃತ್** - ಪ್ರತ್ಯುಪಕಾರವನ್ನು
**ಪ್ರಲಯಃ** ಪ್ರಳಯಗಳಿಗೆ ಕಾರಣನೂ
**ಸ್ಥಾನಮ್** - ಇರುವಿಕೆಗೆ ಆಧಾರನೂ
**ನಿಧಾನಮ್** - ನಿಧಾನನೂ (ಮತ್ತು)*
**ಅವ್ಯಯಮ್** - ಅವಿನಾಶಿಯೂ
**ಬೀಜಮ್** - ಕಾರಣವೂ (ಕೂಡ)
**(ಅಹಮ್, ಏವ)** - ನಾನೇ ಆಗಿದ್ದೇನೆ

ತಪಾಮಿ, ಅಹಮ್, ಅಹಮ್, ವರ್ಷಮ್, ನಿಗೃಹ್ಣಾಮಿ, ಉತ್ಸೃಜಾಮಿ, ಚ,
ಅಮೃತಮ್, ಚ, ಏವ, ಮೃತ್ಯುಃ, ಚ, ಸತ್, ಅಸತ್, ಚ, ಅಹಮ್, ಅರ್ಜುನ ॥೧೯॥

**ಅಹಮ್** - ನಾನೇ
**ತಪಾಮಿ** - ಸೂರ್ಯನ ರೂಪದಿಂದ ಬೆಳಗುತ್ತಿದ್ದೇನೆ
**ವರ್ಷಮ್** - ಮಳೆಯನ್ನು
**ನಿಗೃಹ್ಣಾಮಿ** - ಆಕರ್ಷಿಸುತ್ತೇನೆ
**ಚ** - ಮತ್ತು (ಅದನ್ನು)
**ಉತ್ಸೃಜಾಮಿ** - ಸುರಿಸುತ್ತೇನೆ
**ಅರ್ಜುನ** - ಹೇ ಅರ್ಜುನನೇ!
**ಅಹಮ್, ಏವ** - ನಾನೇ
**ಅಮೃತಮ್** - ಅಮೃತ
**ಚ** - ಮತ್ತು
**ಮೃತ್ಯುಃ** - ಮೃತ್ಯು (ವಾಗಿದ್ದೇನೆ)
**ಚ** - ಮತ್ತು
**ಸತ್, ಅಸತ್** - ಸತ್-ಅಸತ್
**ಚ** - ಕೂಡ
**ಅಹಮ್** - ನಾನೇ (ಆಗಿದ್ದೇನೆ).

ತ್ರೈವಿದ್ಯಾಃ ಮಾಮ್, ಸೋಮಪಾಃ, ಪೂತಪಾಪಾಃ, ಯಜ್ಞೈಃ, ಇಷ್ಟ್ವಾ,
ಸ್ವರ್ಗತಿಮ್, ಪ್ರಾರ್ಥಯಂತೇ, ತೇ, ಪುಣ್ಯಮ್, ಆಸಾದ್ಯ,
ಸುರೇಂದ್ರಲೋಕಮ್, ಅಶ್ನಂತಿ, ದಿವ್ಯಾನ್, ದಿವಿ, ದೇವಭೋಗಾನ್ ॥೨೦॥

**ಆದರೆ ಯಾರು -**

**ತ್ರೈವಿದ್ಯಾಃ** - ಮೂರೂ ವೇದಗಳಲ್ಲಿ ವಿಧಿಸಿರುವ ಸಕಾಮ ಕರ್ಮಗಳನ್ನು ಮಾಡುವ
**ಸೋಮಪಾಃ** - ಸೋಮರಸ ಪಾನಮಾಡುವ

**ಪೂತಪಾಪಾಃ** - ಪಾಪರಹಿತ ಪುರುಷರು*
**ಮಾಮ್** - ನನ್ನನ್ನು
**ಯಜ್ಞೈಃ** - ಯಜ್ಞಗಳ ಮೂಲಕ
**ಇಷ್ಟ್ವಾ** - ಪೂಜಿಸಿ
**ಸ್ವರ್ಗತಿಮ್** - ಸ್ವರ್ಗಪ್ರಾಪ್ತಿಯನ್ನು
**ಪ್ರಾರ್ಥಯಂತೇ** - ಬಯಸುತ್ತಾರೆ
**ತೇ** - ಆ ಪುರುಷರು
**ಪುಣ್ಯಮ್** - ತಮ್ಮ ಪುಣ್ಯಗಳ ಫಲರೂಪವಾಗಿ
**ಸುರೇಂದ್ರ ಲೋಕಮ್** - ಸ್ವರ್ಗಲೋಕವನ್ನು
**ಆಸಾದ್ಯ** - ಪ್ರಾಪ್ತರಾಗಿ
**ದಿವಿ, ದಿವ್ಯಾನ್** - ಸ್ವರ್ಗದಲ್ಲಿ ದಿವ್ಯವಾದ
**ದೇವಭೋಗಾನ್** - ದೇವತೆಗಳ ಭೋಗಗಳನ್ನು
**ಅಶ್ನಂತಿ** - ಭೋಗಿಸುತ್ತಾರೆ.

ತೇ, ತಮ್, ಭುಕ್ತ್ವಾ, ಸ್ವರ್ಗಲೋಕಮ್, ವಿಶಾಲಮ್, ಕ್ಷೀಣೇ, ಪುಣ್ಯೇ,
ಮರ್ತ್ಯಲೋಕಮ್, ವಿಶಂತಿ, ಏವಮ್,ತ್ರಯಿಧರ್ಮಮ್, ಅನುಪ್ರಪನ್ನಾಃ,
ಗತಾಗತಮ್, ಕಾಮಕಾಮಾಃ, ಲಭಂತೇ ॥೨೧॥

ಮತ್ತು -

| | | | |
|---|---|---|---|
| ತೇ | – ಅವರು | ಭುಕ್ತ್ವಾ | – ಭೋಗಿಸಿ |
| ತಮ್ | – ಆ | ಪುಣ್ಯೇ | – ಪುಣ್ಯವು |
| ವಿಶಾಲಮ್ | – ವಿಶಾಲವಾದ | ಕ್ಷೀಣೇ | – ಕ್ಷೀಣಿಸಿದ ನಂತರ |
| ಸ್ವರ್ಗಲೋಕಮ್ | – ಸ್ವರ್ಗಲೋಕವನ್ನು | ಮರ್ತ್ಯಲೋಕಮ್ | – ಮರ್ತ್ಯಲೋಕವನ್ನು |
| **ವಿಶಂತಿ** | – ಪಡೆಯುತ್ತಾರೆ | **ಗತಾಗತಮ್** | – ಮತ್ತೆ ಮತ್ತೆ ಆವಾಗಮನಕ್ಕೆ |
| **ಏವಮ್** | – ಈ ಪ್ರಕಾರವಾಗಿ (ಸ್ವರ್ಗದ ಸಾಧನ ರೂಪಿಯಾದ) | **ಲಭಂತೇ** | – ಪ್ರಾಪ್ತರಾಗುತ್ತಾರೆ ಅರ್ಥಾತ್ ಪುಣ್ಯದ ಪ್ರಭಾವದಿಂದ ಸ್ವರ್ಗಕ್ಕೆ ಹೋಗುತ್ತಾರೆ ಮತ್ತು ಪುಣ್ಯವು ಕ್ಷೀಣಿಸಿದ ನಂತರ ಮೃತ್ಯುಲೋಕಕ್ಕೆ ಬರುತ್ತಾರೆ. |
| **ತ್ರಯೀಧರ್ಮಮ್** | – ಮೂರೂ ವೇದಗಳಲ್ಲಿ ಹೇಳಿರುವ ಸಕಾಮಕರ್ಮದ | | |
| **ಅನುಪ್ರಪನ್ನಾಃ** | – ಆಶ್ರಯ ಪಡೆಯುವ (ಮತ್ತು) | | |
| **ಕಾಮಕಾಮಾಃ** | – ಭೋಗಗಳ ಕಾಮನೆಯುಳ್ಳ ಪುರುಷರು | | |

ಅನನ್ಯಾಃ, ಚಿಂತಯಂತಃ, ಮಾಮ್, ಯೇ, ಜನಾಃ, ಪರ್ಯುಪಾಸತೇ,
ತೇಷಾಮ್, ನಿತ್ಯಾಭಿಯುಕ್ತಾನಾಮ್, ಯೋಗಕ್ಷೇಮಮ್, ವಹಾಮಿ, ಅಹಮ್ ॥೨೨॥

ಮತ್ತು -

| | | | |
|---|---|---|---|
| **ಯೇ** | – ಯಾವ, | **ಮಾಮ್** | – ಪರಮೇಶ್ವರನಾದ ನನ್ನನ್ನು |
| **ಅನನ್ಯಾಃ** | – ಅನನ್ಯ ಪ್ರೇಮೀ | | |
| **ಜನಾಃ** | – ಭಕ್ತಜನರು | **ಚಿಂತಯಂತಃ** | – ನಿರಂತರ ಚಿಂತಿಸುತ್ತ ಮಾಡುವ ಪುರುಷರ |
| **ಪರ್ಯುಪಾಸತೇ** | – ನಿಷ್ಕಾಮ ಭಾವದಿಂದ ಭಜಿಸುತ್ತಾರೋ | **ಯೋಗಕ್ಷೇಮಮ್** | – ಯೋಗಕ್ಷೇಮವನ್ನು* |
| **ತೇಷಾಮ್** | – ಆ | **ಅಹಮ್** | – ನಾನೇ ಸ್ವಯಂ |
| **ನಿತ್ಯಾಭಿಯುಕ್ತಾನಾಮ್** | – ನಿತ್ಯ-ನಿರಂತರ ನನ್ನ ಚಿಂತನೆಯನ್ನು | **ವಹಾಮಿ** | – ವಹಿಸಿಕೊಳ್ಳುತ್ತೇನೆ. |

ಯೇ, ಅಪಿ, ಅನ್ಯದೇವತಾಃ, ಭಕ್ತಾಃ, ಯಜಂತೇ, ಶ್ರದ್ಧಯಾ, ಅನ್ವಿತಾಃ,
ತೇ, ಅಪಿ, ಮಾಮ್, ಏವ, ಕೌಂತೇಯ, ಯಜಂತಿ, ಅವಿಧಿಪೂರ್ವಕಮ್ ॥೨೩॥

**ಕೌಂತೇಯ** – ಹೇ ಅರ್ಜುನನೇ!
**ಅಪಿ** – ಒಂದೊಮ್ಮೆ
**ಶ್ರದ್ಧಯಾ** – ಶ್ರದ್ಧೆಯಿಂದ
**ಅನ್ವಿತಾಃ** – ಯುಕ್ತರಾದ
**ಯೇ** – ಯಾವ
**ಭಕ್ತಾಃ** – ಸಕಾಮ ಭಕ್ತರು
**ಅನ್ಯದೇವತಾಃ** – ಬೇರೆ ದೇವತೆಗಳನ್ನು
**ಯಜಂತೇ** – ಪೂಜಿಸುತ್ತಾರೋ
**ತೇ, ಅಪಿ** – ಅವರು ಕೂಡ
**ಮಾಮ್, ಏವ** – ನನ್ನನ್ನೇ
**ಯಜಂತಿ** – ಪೂಜಿಸುತ್ತಾರೆ (ಆದರೆ ಅವರ ಆ ಪೂಜೆಯು)
**ಅವಿಧಿ-ಪೂರ್ವಕಮ್** – ಅವಿಧಿಪೂರ್ವಕ ಅರ್ಥಾತ್ ಅಜ್ಞಾನ ಪೂರ್ವಕವಾಗಿದೆ.

ಅಹಮ್, ಹಿ, ಸರ್ವಯಜ್ಞಾನಾಮ್, ಭೋಕ್ತಾ, ಚ, ಪ್ರಭುಃ, ಏವ, ಚ,
ನ, ತು, ಮಾಮ್, ಅಭಿಜಾನಂತಿ, ತತ್ತ್ವೇನ, ಅತಃ, ಚ್ಯವಂತಿ, ತೇ ॥೨೪॥

**ಹಿ** – ಏಕೆಂದರೆ
**ಸರ್ವಯಜ್ಞಾ-ನಾಮ್** – ಸಮಸ್ತ ಯಜ್ಞಗಳ
**ಭೋಕ್ತಾ, ಚ** – ಭೋಕ್ತಾ ಮತ್ತು
**ಪ್ರಭುಃ, ಚ** – ಒಡೆಯನೂ ಕೂಡ
**ಅಹಮ್, ಏವ** – ನಾನೇ ಆಗಿದ್ದೇನೆ
**ತು** – ಆದರೆ
**ಮಾಮ್** – ಪರಮೇಶ್ವರನಾದ ನನ್ನನ್ನು
**ತತ್ತ್ವೇನ** – ತತ್ತ್ವದಿಂದ
**ತೇ** – ಅವರು
**ನ, ಅಭಿಜಾನಂತಿ** – ತಿಳಿಯುವುದಿಲ್ಲ
**ಅತಃ** – ಇದರಿಂದ
**ಚ್ಯವಂತಿ** – ಪತನರಾಗುತ್ತಾರೆ ಅಂದರೆ ಪುನರ್ಜನ್ಮವನ್ನು ಪಡೆಯುತ್ತಾರೆ.

ಯಾಂತಿ, ದೇವವ್ರತಾಃ, ದೇವಾನ್, ಪಿತೄನ್, ಯಾಂತಿ, ಪಿತೃವ್ರತಾಃ,
ಭೂತಾನಿ, ಯಾಂತಿ, ಭೂತೇಜ್ಯಾಃ, ಯಾಂತಿ, ಮದ್ಯಾಜಿನಃ, ಅಪಿ, ಮಾಮ್ ॥೨೫॥

**ಕಾರಣ, ಈ ನಿಯಮವಿದೆ –**

**ದೇವವ್ರತಾಃ** – ದೇವತೆಗಳನ್ನು ಪೂಜಿಸುವವರು
**ದೇವಾನ್** – ದೇವತೆಗಳನ್ನು
**ಯಾಂತಿ** – ಪಡೆಯುತ್ತಾರೆ
**ಪಿತೃವ್ರತಾಃ** – ಪಿತೃಗಳನ್ನು ಪೂಜಿಸುವವರು
**ಪಿತೄನ್** – ಪಿತೃಗಳನ್ನು
**ಯಾಂತಿ** – ಪಡೆಯುತ್ತಾರೆ
**ಭೂತೇಜ್ಯಾಃ** – ಭೂತಗಳನ್ನು ಪೂಜಿಸುವವರು
**ಭೂತಾನಿ** – ಭೂತಗಳನ್ನು
**ಯಾಂತಿ** – ಪಡೆಯುತ್ತಾರೆ (ಮತ್ತು)
**ಮದ್ಯಾಜಿನಃ** – ನನ್ನನ್ನು ಪೂಜಿಸುವ ಭಕ್ತರು
**ಮಾಮ್, ಅಪಿ** – ನನ್ನನ್ನೇ
**ಯಾಂತಿ** – ಪಡೆಯುತ್ತಾರೆ, ಅದಕ್ಕಾಗಿ ನನ್ನ ಭಕ್ತರುಗಳಿಗೆ ಪುನರ್ಜನ್ಮ ವಾಗುವುದಿಲ್ಲ

ಅಪಿ, ಚೇತ್, ಸುದುರಾಚಾರಃ, ಭಜತೇ, ಮಾಮ್, ಅನನ್ಯಭಾಕ್,
ಸಾಧುಃ, ಏವ, ಸಃ, ಮಂತ್ಯವ್ಯಃ, ಸಮ್ಯಕ್, ವ್ಯವಸಿತಃ, ಹಿ, ಸಃ ॥೩೦॥

**ಹಾಗೂ ಇನ್ನೂ ಸಹ ನನ್ನ ಭಕ್ತಿಯ ಪ್ರಭಾವವನ್ನು ಕೇಳು –**

| | | | |
|---|---|---|---|
| **ಚೇತ್** | – ಒಂದು ವೇಳೆ (ಯಾರಾದರೂ) | **ಸಃ** | – ಅವನು |
| **ಸುದುರಾಚಾರಃ** | – ಅತಿಶಯ ದುರಾಚಾರಿ ಯಾದರೂ | **ಸಮ್ಯಕ್** | – ಯಥಾರ್ಥವಾಗಿ |
| **ಅಪಿ** | – ಕೂಡ | **ವ್ಯವಸಿತಃ** | – ನಿಶ್ಚಯವುಳ್ಳ ವನಾಗಿದ್ದಾನೆ, ಅರ್ಥಾತ್ ಪರಮೇಶ್ವರನ ಭಜನೆಗೆ ಸಮಾನ ವಾದುದು ಬೇರಾವುದೂ ಇಲ್ಲವೆಂದು ಅವನು ಚೆನ್ನಾಗಿ ನಿಶ್ಚಯಿಸಿ ಕೊಂಡಿರುತ್ತಾನೆ. |
| **ಅನನ್ಯಭಾಕ್** | – ಅನನ್ಯ ಭಾವದಿಂದ ನನ್ನ ಭಕ್ತನಾಗಿ | | |
| **ಮಾಮ್** | – ನನ್ನನ್ನು | | |
| **ಭಜತೇ** | – ಭಜಿಸುತ್ತಾ(ನಾದರೆ) | | |
| **ಸಃ** | – ಅವನನ್ನು | | |
| **ಸಾಧುಃ, ಏವ** | – ಸಾಧು ಎಂದೇ | | |
| **ಮಂತವ್ಯಃ** | – ತಿಳಿಯಬೇಕು | | |
| **ಹಿ** | – ಏಕೆಂದರೆ | | |

ಕ್ಷಿಪ್ರಮ್, ಭವತಿ, ಧರ್ಮಾತ್ಮಾ, ಶಶ್ವತ್, ಶಾಂತಿಮ್, ನಿಗಚ್ಛತಿ,
ಕೌಂತೇಯ, ಪ್ರತಿ, ಜಾನೀಹಿ, ನ, ಮೇ, ಭಕ್ತಃ, ಪ್ರಣಶ್ಯತಿ ॥೩೧॥

**ಆದುದರಿಂದ ಅವನು –**

| | | | |
|---|---|---|---|
| **ಕ್ಷಿಪ್ರಮ್** | – ಶೀಘ್ರವಾಗಿಯೇ | **ಕೌಂತೇಯ** | – ಹೇ ಅರ್ಜುನಾ!(ನೀನು) |
| **ಧರ್ಮಾತ್ಮಾ** | – ಧರ್ಮಾತ್ಮಾ | **ಪ್ರತಿ** | – ನಿಶ್ಚಯಪೂರ್ವಕ ವಾದ ಸತ್ಯವನ್ನು |
| **ಭವತಿ** | – ಆಗುತ್ತಾನೆ (ಮತ್ತು) | | |
| **ಶಶ್ವತ್** | – ಸದಾ ಇರುವಂತಹ | **ಜಾನೀಹಿ** | – ತಿಳಿ (ಏನೆಂದರೆ) |
| **ಶಾಂತಿಮ್** | – ಪರಮಶಾಂತಿಯನ್ನು | **ಮೇ, ಭಕ್ತಃ** | – ನನ್ನ ಭಕ್ತನು |
| **ನಿಗಚ್ಛತಿ** | – ಪಡೆಯುತ್ತಾನೆ | **ನ, ಪ್ರಣಶ್ಯತಿ** | – ನಾಶವಾಗುವುದಿಲ್ಲ |

ಮಾಮ್, ಹಿ, ಪಾರ್ಥ, ವ್ಯಪಾಶ್ರಿತ್ಯ, ಯೇ, ಅಪಿ, ಸ್ಯುಃ ಪಾಪಯೋನಯಃ
ಸ್ತ್ರಿಯಃ ವೈಶ್ಯಾಃ ತಥಾ, ಶೂದ್ರಾಃ ತೇ, ಅಪಿ, ಯಾಂತಿ, ಪರಾಮ್, ಗತಿಮ್ ॥೩೨॥

| | | | |
|---|---|---|---|
| **ಪಾರ್ಥ** | – ಹೇ ಅರ್ಜುನಾ! | **ತೇ** | – ಅವರು |
| **ಸ್ತ್ರಿಯಃ** | – ಸ್ತ್ರೀಯರು | **ಅಪಿ** | – ಕೂಡ |
| **ವೈಶ್ಯಾಃ** | – ವೈಶ್ಯರು | **ಮಾಮ್** | – ನನ್ನಲ್ಲಿ |
| **ಶೂದ್ರಾಃ** | – ಶೂದ್ರರು | **ವ್ಯಪಾಶ್ರಿತ್ಯ** | – ಶರಣಾಗಿ |
| **ತಥಾ** | – ಹಾಗೂ | **ಪರಾಮ್** | – ಪರಮ |
| **ಪಾಪಯೋನಯಃ** | – ಪಾಪಯೋನಿಗಳು | **ಗತಿಮ್, ಹಿ** | – ಗತಿಯನ್ನೇ |
| **ಯೇ, ಅಪಿ, ಸ್ಯುಃ** | – ಯಾರೇ ಆಗಿರಲಿ | **ಯಾಂತಿ** | – ಪಡೆಯುತ್ತಾರೆ. |

ಕಿಮ್, ಪುನಃ, ಬ್ರಾಹ್ಮಣಾಃ, ಪುಣ್ಯಾಃ, ಭಕ್ತಾಃ, ರಾಜರ್ಷಯಃ, ತಥಾ,
ಅನಿತ್ಯಮ್, ಅಸುಖಮ್, ಲೋಕಮ್, ಇಮಮ್, ಪ್ರಾಪ್ಯ, ಭಜಸ್ವ, ಮಾಮ್ ॥೩೩॥

**ಪುನಃ, ಕಿಮ್** - ಮತ್ತೆ
**ಪುಣ್ಯಾಃ** - ಪುಣ್ಯಶೀಲರಾದ
**ಬ್ರಾಹ್ಮಣಾಃ** - ಬ್ರಾಹ್ಮಣರು
**ತಥಾ** - ಹಾಗೂ
**ರಾಜರ್ಷಯಃ** - ರಾಜರ್ಷಿ
**ಭಕ್ತಾಃ** - ಭಕ್ತಜನರು ನನ್ನಲ್ಲಿ ಶರಣಾಗಿ ಪರಮ ಗತಿಯನ್ನು ಪಡೆಯುತ್ತಾರೆ.
**ಕಿಮ್** - ಮತ್ತೆ ಇದರಲ್ಲಿ ಹೇಳುವುದೇನಿದೇ? (ಆದ್ದರಿಂದ ನೀನು)
**ಅಸುಖಮ್** - ಸುಖರಹಿತ (ಮತ್ತು)
**ಅನಿತ್ಯಮ್** - ಕ್ಷಣಭಂಗುರವಾದ
**ಇಮಮ್, ಲೋಕಮ್** - ಈ ಮನುಷ್ಯ ಶರೀರವನ್ನು
**ಪ್ರಾಪ್ಯ** - ಪಡೆದುಕೊಂಡು (ನಿರಂತರ)
**ಮಾಮ್, ಭಜಸ್ವ** - ನನ್ನನ್ನೇ ಭಜಿಸು.

ಮನ್ಮನಾಃ, ಭವ, ಮದ್ಭಕ್ತಃ, ಮದ್ಯಾಜೀ, ಮಾಮ್, ನಮಸ್ಕುರು,
ಮಾಮ್, ಏವ, ಏಷ್ಯಸಿ, ಯುಕ್ತ್ವಾ, ಏವಮ್, ಆತ್ಮಾನಮ್, ಮತ್ಪರಾಯಣಃ ॥೩೪॥

**ಮನ್ಮನಾಃ, ಭವ** - ನನ್ನಲ್ಲಿ ಮನಸ್ಸುಳ್ಳವನಾಗು
**ಮದ್ಭಕ್ತಃ** - ನನ್ನ ಭಕ್ತ
**(ಭವ)** - ನಾಗು
**ಮದ್ಯಾಜೀ** - ನನ್ನನ್ನು ಪೂಜಿಸುವವ
**(ಭವ)** - ನಾಗು
**ಮಾಮ್** - ನನಗೆ
**ನಮಸ್ಕುರು** - ನಮಸ್ಕರಿಸು
**ಏವಮ್** - ಈ ಪ್ರಕಾರ
**ಆತ್ಮಾನಮ್** - ಆತ್ಮವನ್ನು (ನನ್ನಲ್ಲಿ)
**ಯುಕ್ತ್ವಾ** - ನಿಯುಕ್ತಗೊಳಿಸಿ
**ಮತ್ಪರಾಯಣಃ** - ನನ್ನ ಪರಾಯಣನಾಗಿ (ನೀನು)
**ಮಾಮ್ ಏವ** - ನನ್ನನ್ನೇ
**ಏಷ್ಯಸಿ** - ಪಡೆಯುವೆ.

ಶ್ರೀ ಮದ್ಭಗವದ್ಗೀತೆ ಅಧ್ಯಾಯ 10 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ದಶಮೋಽಧ್ಯಾಯಃ - ವಿಭೂತಿಯೋಗ ॥

ಭೂಯಃ, ಏವ, ಮಹಾಬಹೋ, ಶೃಣು, ಮೇ, ಪರಮಮ್, ವಚಃ,
ಯತ್, ತೇ, ಅಹಮ್, ಪ್ರೀಯಮಾಣಾಯ, ವಕ್ಷ್ಯಾಮಿ, ಹಿತಕಾಮ್ಯಯಾ ॥೧॥

**ಶ್ರೀಕೃಷ್ಣಪರಮಾತ್ಮನು ಹೇಳಿದನು -**

**ಮಹಾಬಾಹೋ** - ಹೇ ಮಹಾಬಾಹುವೇ! (ನನ್ನಲ್ಲಿ)
**ಪ್ರೀಯಮಾಣಾಯ** - ಮಿಗಿಲಾದ ಪ್ರೀತಿಯುಳ್ಳವನಾದ
**ತೇ** - ನಿನಗೆ
**ಮೇ** - ನನ್ನ
**ಪರಮಮ್** - ಪರಮ ರಹಸ್ಯವಾದ ಮತ್ತು ಮಹಾತ್ಮ್ಯ ಸಹಿತ
**ವಚಃ** - ವಚನಗಳನ್ನು
**ಹಿತ ಕಾಮ್ಯಯಾ** - ನಿನ್ನ ಹಿತಕ್ಕಾಗಿ
**ಭೂಯಃ, ಏವ** - ಇನ್ನೊಮ್ಮೆ
**ಅಹಮ್** - ನಾನು
**ವಕ್ಷ್ಯಾಮಿ** - ಹೇಳುವೆನು
**ಯತ್, ಶೃಣು** - ಅದನ್ನು ಕೇಳು.

ನ, ಮೇ, ವಿದುಃ, ಸುರಗಣಾಃ, ಪ್ರಭವಮ್, ನ, ಮಹರ್ಷಯಃ,
ಅಹಮ್, ಆದಿಃ, ಹಿ, ದೇವಾನಾಮ್, ಮಹರ್ಷೀಣಾಮ್, ಚ, ಸರ್ವಶಃ ॥೨॥

**ಎಲೈ ಅರ್ಜುನ -**

| | | | |
|---|---|---|---|
| **ಮೇ** | - ನನ್ನ | **ಹಿ** | - ಏಕೆಂದರೆ |
| **ಪ್ರಭವಮ್** | - ಉತ್ಪತ್ತಿಯನ್ನು ಅರ್ಥಾತ್ ಲೀಲೆಯಿಂದ ಪ್ರಕಟವಾಗುವುದನ್ನು | **ಅಹಮ್** | - ನಾನು |
| | | **ಸರ್ವಶಃ** | - ಎಲ್ಲ ಪ್ರಕಾರದಿಂದ |
| | | **ದೇವಾನಾಮ್** | - ದೇವತೆಗಳಿಗೂ |
| | | **ಚ** | - ಮತ್ತು |
| **ಸುರಗಣಾಃ** | - ದೇವತೆಗಳು | **ಮಹರ್ಷೀ-ಣಾಮ್** | - ಮಹರ್ಷಿಗಳಿಗೂ (ಕೂಡ) |
| **ನ, ವಿದುಃ** | ತಿಳಿಯುವುದಿಲ್ಲ | | |
| **ಮಹರ್ಷಯಃ-** | - ಮಹರ್ಷಿಗಳು | **ಆದಿಃ** | - ಆದಿಕಾರಣನಾಗಿದ್ದೇನೆ |
| **ನ, (ವಿದುಃ)** | ತಿಳಿಯುವುದಿಲ್ಲ | | |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 11 ರ ಶ್ಲೋಕಗಳ ಫೋಟೋ ಕಾಪಿ

## ॥ ಅಥೈಕಾದಶೋಽಧ್ಯಾಯಃ - ವಿಶ್ವರೂಪದರ್ಶನಯೋಗ ॥

ದ್ಯಾವಾಪೃಥಿವ್ಯೋಃ, ಇದಮ್, ಅಂತರಮ್, ಹಿ,
ವ್ಯಾಪ್ತಮ್, ತ್ವಯಾ, ಏಕೇನ, ದಿಶಃ, ಚ, ಸರ್ವಾಃ,
ದೃಷ್ಟ್ವಾ, ಅದ್ಭುತಮ್, ರೂಪಮ್, ಉಗ್ರಮ್, ತವ, ಇದಮ್,
ಲೋಕತ್ರಯಮ್, ಪ್ರವ್ಯಥಿತಮ್, ಮಹಾತ್ಮನ್ ॥೨೦॥

| | | | |
|---|---|---|---|
| **ಮಹಾತ್ಮನ್** | - ಹೇ ಮಹಾತ್ಮನೇ ! | **ವ್ಯಾಪ್ತಮ್** | - ಪರಿಪೂರ್ಣವಾಗಿದೆ (ಹಾಗೂ) |
| **ಇದಮ್** | - ಈ | | |
| | | **ತವ, ಇದಮ್** | - ನಿನ್ನ ಈ |
| **ದ್ಯಾವಾ-ಪೃಥಿವ್ಯೋಃ** | - ಸ್ವರ್ಗ ಮತ್ತು ಪೃಥ್ವಿಯ ನಡುವಿನ | **ಅದ್ಭುತಮ್** | - ಅಲೌಕಿಕವಾದ ಮತ್ತು |
| | | **ಉಗ್ರಮ್** | - ಭಯಂಕರವಾದ |
| **ಅಂತರಮ್** | - ಸಂಪೂರ್ಣ ಆಕಾಶ | **ರೂಪಮ್** | - ರೂಪವನ್ನು |
| **ಚ** | - ಹಾಗೂ | **ದೃಷ್ಟ್ವಾ** | - ನೋಡಿ |
| **ಸರ್ವಾಃ, ದಿಶಃ** | - ಎಲ್ಲ ದಿಕ್ಕುಗಳು | **ಲೋಕತ್ರಯಮ್** | - ಮೂರೂ ಲೋಕಗಳು |
| **ಏಕೇನ** | - ಒಬ್ಬನಾದ | **ಪ್ರವ್ಯಥಿತಮ್** | - ಭಯದಿಂದ ನಡುಗುತ್ತಿವೆ. |
| **ತ್ವಯಾ ಹಿ** | - ನಿನ್ನಿಂದಲೇ | | |

ಅಮೀ, ಹಿ, ತ್ವಾಮ್, ಸುರಸಂಘಾಃ, ವಿಶಂತಿ,
ಕೇಚಿತ್, ಭೀತಾಃ ಪ್ರಾಂಜಲಯಃ, ಗೃಣಂತಿ,
ಸ್ವಸ್ತಿ, ಇತಿ, ಉಕ್ತ್ವಾ, ಮಹರ್ಷಿಸಿದ್ಧಸಂಘಾಃ
ಸ್ತುವಂತಿ, ತ್ವಾಮ್, ಸ್ತುತಿಭಿಃ, ಪುಷ್ಕಲಾಭಿಃ ॥೨೧॥

**ಮತ್ತು ಹೇ ಗೋವಿಂದಾ !**

| | | | |
|---|---|---|---|
| **ಅಮೀ** | - ಅದೇ, | | ಮಾಡುತ್ತಾರೆ (ಹಾಗೂ) |
| **ಸುರಸಂಘಾಃ ಹಿ** | - ದೇವತೆಗಳ ಸಮೂಹಗಳು | **ಮಹರ್ಷಿ-** | - ಮಹರ್ಷಿಗಳು |
| **ತ್ವಾಮ್** | - ನಿನ್ನಲ್ಲಿ | **ಸಿದ್ಧ ಸಂಘಾಃ** | ಮತ್ತು ಸಿದ್ಧರುಗಳ ಸಮುದಾಯವು |
| **ವಿಶಂತಿ** | - ಪ್ರವೇಶ ಮಾಡುತ್ತವೆ (ಮತ್ತು) | **ಸ್ವಸ್ತಿ** | - ಕಲ್ಯಾಣವಾಗಲಿ |
| **ಕೇಚಿತ್** | - ಕೆಲವರು | **ಇತಿ, ಉಕ್ತ್ವಾ** | - ಎಂದು ಹೇಳಿ |
| **ಭೀತಾಃ** | - ಭಯಭೀತರಾಗಿ | **ಪುಷ್ಕಲಾಭಿಃ** | - ಉತ್ತಮೋತ್ತಮ |
| **ಪ್ರಾಂಜಲಯಃ** | - ಕೈ ಮುಗಿದು | **ಸ್ತುತಿಭಿಃ** | - ಸ್ತೋತ್ರಗಳಿಂದ |
| **ಗೃಣಂತಿ** | - ನಿನ್ನ ನಾಮ ಮತ್ತು ಗುಣಗಳ ಉಚ್ಚಾರಣೆ | **ತ್ವಾಮ್** | - ನಿನ್ನನ್ನು |
| | | **ಸ್ತುವಂತಿ** | - ಸ್ತುತಿ ಮಾಡುತ್ತಾರೆ. |

ಲೇಲಿಹ್ಯಸೇ, ಗ್ರಸಮಾನಃ, ಸಮಂತಾತ್,
ಲೋಕಾನ್, ಸಮಗ್ರಾನ್, ವದನೈಃ, ಜ್ವಲದ್ಭಿಃ,
ತೇಜೋಭಿಃ, ಆಪೂರ್ಯ, ಜಗತ್, ಸಮಗ್ರಮ್,
ಭಾಸಃ ತವ, ಉಗ್ರಾಃ, ಪ್ರತಪಂತಿ, ವಿಷ್ಣೋ ॥೩೦॥

**ಮತ್ತು ನೀನು ಆ -**

| | | | |
|---|---|---|---|
| **ಸಮಗ್ರಾನ್** | - ಸಮಸ್ತ | **ವದನೈಃ** | - ಮುಖಗಳ ಮೂಲಕ |
| **ಲೋಕಾನ್** | - ಜನರನ್ನು | **ಗ್ರಸಮಾನಃ** | - ಕಾಲನಂತೆ ನುಂಗಿಹಾಕುತ್ತ |
| **ಜ್ವಲದ್ಭಿಃ** | - ಪ್ರಜ್ವಲಿತ | | |
| **ಸಮಂತಾತ್** | - ಎಲ್ಲ ಕಡೆಯಿಂದ | **ಸಮಗ್ರಮ್** | - ಸಂಪೂರ್ಣ |
| **ಲೇಲಿಹ್ಯಸೇ** | - ಪದೇ ಪದೇ ಚಪ್ಪರಿಸುತ್ತಿರುವೆ, | **ಜಗತ್** | - ಜಗತ್ತನ್ನು |
| | | **ತೇಜೋಭಿಃ** | - ತೇಜಸ್ಸಿನ ಮೂಲಕ |
| **ವಿಷ್ಣೋ** | - ಹೇವಿಷ್ಣುವೇ ! | **ಆಪೂರ್ಯ** | - ಪೂರ್ಣವಾಗಿ |
| **ತವ, ಉಗ್ರಾಃ** | - ನಿನ್ನ ಉಗ್ರವಾದ | **ಪ್ರತಪಂತಿ** | - ಸಂತಪ್ತ ಗೊಳಿಸುತ್ತಿದ್ದೀಯೇ. |
| **ಭಾಸಃ** | - ಪ್ರಕಾಶವು | | |

ಆಖ್ಯಾಹಿ, ಮೇ, ಕಃ, ಭವಾನ್, ಉಗ್ರರೂಪಃ,
ನಮಃ, ಅಸ್ತು, ತೇ, ದೇವವರ, ಪ್ರಸೀದ,
ವಿಜ್ಞಾತುಮ್, ಇಚ್ಛಾಮಿ, ಭವಂತಮ್, ಆದ್ಯಮ್,
ನ, ಹಿ, ಪ್ರಜಾನಾಮಿ, ತವ, ಪ್ರವೃತ್ತಿಮ್ ॥೩೧॥

**ಓ ಪರಮಾತ್ಮಾ! ಕೃಪೆ ತೋರಿ -**

| | | | |
|---|---|---|---|
| **ಉಗ್ರರೂಪಃ** | - ಉಗ್ರರೂಪಿಯಾದ | **ಭವಂತಮ್** | - ನಿನ್ನನ್ನು(ನಾನು) |

**ಭವಾನ್, ಕಃ** - ನೀನು ಯಾರು ?
**ಮೇ** - ಎಂದು ಕೃಪೆ ಮಾಡಿ ನನಗೆ
**ಆಖ್ಯಾಹಿ** - ತಿಳಿಸು
**ದೇವವರ** - ಹೇ ದೇವ ಶ್ರೇಷ್ಠನೆ !
**ತೇ** - ನಿನಗೆ
**ನಮಃ, ಅಸ್ತು** - ನಮಸ್ಕಾರವಿರಲಿ (ನೀನು)
**ಪ್ರಸೀದ** - ಪ್ರಸನ್ನನಾಗು !
**ಆದ್ಯಮ್** - ಆದಿಪುರುಷನಾದ
**ವಿಜ್ಞಾತುಮ್** - ವಿಶೇಷರೂಪದಿಂದ ತಿಳಿಯಲು
**ಇಚ್ಛಾಮಿ** - ಬಯಸುತ್ತೇನೆ
**ಹಿ** - ಏಕೆಂದರೆ (ನಾನು)
**ತವ** - ನಿನ್ನ
**ಪ್ರವೃತ್ತಿಮ್** - ಪ್ರವೃತ್ತಿಯನ್ನು
**ನ, ಪ್ರಜಾನಾಮಿ** - ಅರಿಯೆನು.

ಕಾಲಃ, ಅಸ್ಮಿ, ಲೋಕಕ್ಷಯಕೃತ್, ಪ್ರವೃದ್ಧಃ,
ಲೋಕಾನ್, ಸಮಾಹರ್ತುಮ್, ಇಹ, ಪ್ರವೃತ್ತಃ,
ಋತೇ, ಅಪಿ, ತ್ವಾಮ್, ನ, ಭವಿಷ್ಯಂತಿ, ಸರ್ವೇ,
ಯೇ, ಅವಸ್ಥಿತಾಃ, ಪ್ರತ್ಯನೀಕೇಷು ಯೋಧಾಃ ॥೩೨॥

**ಅರ್ಜುನ ಹೀಗೆ ಕೇಳಿದ ನಂತರ ಶ್ರೀಕೃಷ್ಣ ಹೇಳಿದ, ಎಲೈ ಅರ್ಜುನ ! ನಾನು -**

**ಲೋಕಕ್ಷಯಕೃತ್** - ಲೋಕಗಳನ್ನು ನಾಶಮಾಡುವ
**ಪ್ರವೃದ್ಧಃ** - ಬೆಳೆದಿರುವ
**ಕಾಲಃ** - ಮಹಾಕಾಲನು
**ಅಸ್ಮಿ** - ಆಗಿದ್ದೇನೆ
**ಇಹ** - ಈ ಸಮಯದಲ್ಲಿ
**ಲೋಕಾನ್** - ಈ ಲೋಕಗಳನ್ನು
**ಸಮಾಹರ್ತುಮ್** - ನಾಶಗೊಳಿಸಲೋಸುಗ
**ಪ್ರವೃತ್ತಃ** - ಪ್ರವೃತ್ತನಾಗಿದ್ದೇನೆ (ಅದಕ್ಕಾಗಿ)
**ಯೇ** - ಯಾವ
**ಪ್ರತ್ಯನೀಕೇಷು** - ಪ್ರತಿಪಕ್ಷದ ಸೇನೆಯಲ್ಲಿ
**ಅವಸ್ಥಿತಾಃ** - ಸ್ಥಿತರಾದ
**ಯೋಧಾಃ** - ಯೋಧರು ಗಳಿದ್ದಾರೋ
**ತೇ, ಸರ್ವೇ** - ಅವರೆಲ್ಲರೂ
**ತ್ವಾಮ್, ಋತೇ, ಅಪಿ** - ನೀನು ಯುದ್ಧ ಮಾಡದಿದ್ದರೂ ಕೂಡ
**ನ, ಭವಿಷ್ಯಂತಿ** - ಇವರೆಲ್ಲರೂ ನಾಶವಾಗುವರು.

ತಸ್ಮಾತ್, ತ್ವಮ್, ಉತ್ತಿಷ್ಠ ಯಶಃ, ಲಭಸ್ವ,
ಜಿತ್ವಾ, ಶತ್ರೂನ್, ಭುಂಕ್ಷ್ವ, ರಾಜ್ಯಮ್, ಸಮೃದ್ಧಮ್,
ಮಯಾ, ಏವ, ಏತೇ, ನಿಹತಾಃ, ಪೂರ್ವಮ್,
ಏವ, ನಿಮಿತ್ತಮಾತ್ರಮ್, ಭವ, ಸವ್ಯಸಾಚಿನ್ ॥೩೩॥

**ತಸ್ಮಾತ್** - ಆದ್ದರಿಂದ
**ತ್ವಮ್, ಉತ್ತಿಷ್ಠ** - ನೀನು ಎದ್ದು ನಿಲ್ಲು !
**ಯಶಃ** - ಯಶಸ್ಸನ್ನು
**ಲಭಸ್ವ** - ಗಳಿಸು (ಮತ್ತು)
**ಶತ್ರೂನ್, ಜಿತ್ವಾ** - ಶತ್ರುಗಳನ್ನು ಗೆದ್ದು
**ಸಮೃದ್ಧಮ್** - ಧನ-ಧಾನ್ಯ ಸಂಪನ್ನವಾದ
**ರಾಜ್ಯಮ್** - ರಾಜ್ಯವನ್ನು
**ಭುಂಕ್ಷ್ವ** - ಅನುಭವಿಸು
**ಏತೇ** - ಈ ಎಲ್ಲ (ಶೂರವೀರರೂ)
**ಪೂರ್ವಮ್, ಏವ** - ಮೊದಲಿನಿಂದಲೇ
**ಮಯಾ** - ನನ್ನ ಮೂಲಕವೇ
**ನಿಹತಾಃ** - ಕೊಲ್ಲಲ್ಪಟ್ಟಿದ್ದಾರೆ
**ಸವ್ಯಸಾಚಿನ್** - ಹೇ, ಸವ್ಯಸಾಚಿಯೇ!*
**ನಿಮಿತ್ತ-** - ನೀನಾದರೋ
**ಮಾತ್ರಮ್, ಏವ** ನಿಮಿತ್ತ ಮಾತ್ರವೇ
**ಭವ** - ಆಗು.

ಕಸ್ಮಾತ್, ಚ, ತೇ, ನ, ನಮೇರನ್, ಮಹಾತ್ಮನ್,
ಗರೀಯಸೇ, ಬ್ರಹ್ಮಣಃ, ಅಪಿ, ಆದಿಕರ್ತ್ರೇ,
ಅನಂತ, ದೇವೇಂಶ, ಜಗನ್ನಿವಾಸ,
ತ್ವಮ್, ಅಕ್ಷರಮ್, ಸತ್, ಅಸತ್, ತತ್ಪರಮ್, ಯತ್, ॥೩೭॥

| | | | |
|---|---|---|---|
| **ಮಹಾತ್ಮನ್** | - ಹೇ ಮಹಾತ್ಮನೆ ! | **ದೇವೇಶ** | - ಹೇ ದೇವೇಶನೇ! |
| **ಬ್ರಹ್ಮಣಃ, ಅಪಿ** | - ಬ್ರಹ್ಮನಿಗೂ ಸಹ | **ಜಗನ್ನಿವಾಸ** | - ಹೇ ಜಗನ್ನಿವಾಸನೇ! |
| **ಆದಿಕರ್ತ್ರೇ** | - ಆದಿಕರ್ತಾ | **ಯತ್** | - ಯಾರು |
| **ಚ, ಗರೀಯಸೇ** | - ಮತ್ತು ಎಲ್ಲರಿಗೂ ಹಿರಿಯನಾದ | **ಸತ್, ಅಸತ್** | - ಸತ್ ಅಸತ್ (ಮತ್ತು) |
| | | **ತತ್ಪರಮ್** | - ಅದಕ್ಕಿಂತ ಮಿಗಿಲಾದ |
| **ತೇ** | - ನಿನಗೆ (ಇವರು) | **ಅಕ್ಷರಮ್** | - ಅಕ್ಷರ ಅರ್ಥಾತ್ ಸಚ್ಚಿದಾನಂದಘನ ಬ್ರಹ್ಮನಿದ್ದಾನೋ |
| **ಕಸ್ಮಾತ್** | - ಹೇಗೆ | | |
| **ನ, ನಮೇರನ್** | - ನಮಸ್ಕಾರ ಮಾಡದಿರುವರು? (ಏಕೆಂದರೆ) | **(ತತ್)** | - ಅವನು |
| | | **ತ್ವಮ್** | - ನೀನೇ ಆಗಿದ್ದೀಯೆ. |
| **ಅನಂತ** | - ಹೇ ಅನಂತನೇ ! | | |

ಕಿರೀಟಿನಮ್, ಗದಿನಮ್, ಚಕ್ರಹಸ್ತಮ್,
ಇಚ್ಛಾಮಿ, ತ್ವಾಮ್, ದ್ರಷ್ಟುಮ್, ಅಹಮ್, ತಥಾ, ಏವ,
ತೇನ, ರೂಪೇಣ, ಚತುರ್ಭುಜೇನ,
ಸಹಸ್ರಬಾಹೋ, ಭವ, ವಿಶ್ವಮೂರ್ತೇ ॥೪೬॥

**ಮತ್ತು ಹೇ ವಿಷ್ಣು ಪರಮಾತ್ಮಾ! -**

| | | | |
|---|---|---|---|
| **ಕಿರೀಟಿನಮ್** | - ಮುಕುಟವನ್ನು ಧರಿಸಿರುವ ಹಾಗೂ | **(ಅತಃ)** | - ಆದ್ದರಿಂದ |
| | | **ವಿಶ್ವಮೂರ್ತೇ** | - ಹೇ ವಿಶ್ವಸ್ವರೂಪಿಯೇ! |
| **ಗದಿನಮ್,** | - ಗದೆ ಮತ್ತು | | |
| **ಚಕ್ರಹಸ್ತಮ್** | ಚಕ್ರವನ್ನು ಕೈಯಲ್ಲಿ ಧರಿಸಿರುವ | **ಸಹಸ್ರಬಾಹೋ** | - ಹೇ ಸಹಸ್ರಬಾಹುವೇ! (ನೀನು) |
| **ತಥಾ, ಏವ** | - ಹಾಗೆಯೇ | **ತೇನ, ಏವ** | - ಅದೇ |
| **ತ್ವಾಮ್** | - ನಿನ್ನ (ರೂಪವನ್ನು) | **ಚತುರ್ಭುಜೇನ** | - ಚತುರ್ಭುಜ |
| **ಅಹಮ್** | - ನಾನು | **ರೂಪೇಣ** | ರೂಪದಿಂದ |
| **ದ್ರಷ್ಟುಮ್** | - ನೋಡಲು | **ಭವ** | - ಪ್ರಕಟನಾಗು. |
| **ಇಚ್ಛಾಮಿ** | - ಬಯಸುತ್ತೇನೆ | | |

ಮಯಾ, ಪ್ರಸನ್ನೇವ, ತವ, ಅರ್ಜುನ, ಇದಮ್,
ರೂಪಮ್, ಪರಮ್, ದರ್ಶಿತಮ್, ಆತ್ಮಯೋಗಾತ್,
ತೇಜೋಮಯಮ್, ವಿಶ್ವಮ್, ಅನಂತಮ್, ಆದ್ಯಮ್,
ಯತ್, ಮೇ, ತ್ವದನ್ಯೇನ, ನ, ದೃಷ್ಟಪೂರ್ವಮ್ ॥೪೭॥

**ಅರ್ಜುನನ ಈ ಪ್ರಾರ್ಥನೆಯನ್ನು ಕೇಳಿ ಶ್ರೀಕೃಷ್ಣ ಹೇಳಿದನು -**

| | | | |
|---|---|---|---|
| **ಅರ್ಜುನ** | - ಹೇ ಅರ್ಜುನಾ! | **ಆದ್ಯಮ್** | - ಎಲ್ಲರ ಆದಿ (ಮತ್ತು) |
| **ಪ್ರಸನ್ನೇನ** | - ಅನುಗ್ರಹ ಪೂರ್ವಕವಾಗಿ | **ಅನಂತಮ್** | - ಅಸೀಮವಾದ |
| **ಮಯಾ** | - ನಾನು | **ವಿಶ್ವಮ್** | - ವಿರಾಟ್ |
| **ಆತ್ಮಯೋಗಾತ್** | - ನನ್ನ ಯೋಗಶಕ್ತಿಯ ಪ್ರಭಾವದಿಂದ | **ರೂಪಮ್** | - ರೂಪವನ್ನು |
| **ಇದಮ್, ಮೇ** | - ಈ ನನ್ನ | **ತವ, ದರ್ಶಿತಮ್** | - ನಿನಗೆ ತೋರಿಸಿದ್ದೇನೆ |
| **ಪರಮ್** | - ಪರಮ | **ಯತ್** | - ಅದನ್ನು |
| **ತೇಜೋಮಯಮ್** | - ತೇಜೋಮಯ | **ತ್ವದನ್ಯೇನ** | - ನೀನಲ್ಲದೆ ಬೇರಾರೂ |
| | | **ನ ದೃಷ್ಟ-** **ಪೂರ್ವಮ್** | - ಮೊದಲು ನೋಡಿರಲಿಲ್ಲ |

ನ, ವೇದಯಜ್ಞಾಧ್ಯಯನೈಃ, ನ, ದಾನೈಃ,
ನ, ಚ, ಕ್ರಿಯಾಭಿಃ, ನ, ತಪೋಭಿಃ, ಉಗ್ರೈಃ,
ಏವಂ ರೂಪಃ, ಶಕ್ಯಃ, ಅಹಮ್, ನೃಲೋಕೇ,
ದ್ರಷ್ಟುಮ್, ತ್ವದನ್ಯೇನ, ಕುರುಪ್ರವೀರ ॥೪೮॥

| | | | |
|---|---|---|---|
| **ಕುರುಪ್ರವೀರ** | - ಹೇ ಅರ್ಜುನಾ ! | **ಯಜ್ಞಾಧ್ಯಯನೈಃ** | ಯಜ್ಞಗಳ ಅಧ್ಯಯನದಿಂದ ನೋಡಲಾಗುವುದಿಲ್ಲ |
| **ನೃಲೋಕೇ** | - ಮನುಷ್ಯಲೋಕದಲ್ಲಿ | **ನ, ದಾನೈಃ** | - ದಾನದಿಂದ ಇಲ್ಲ |
| **ಏವಂರೂಪಃ** | - ಈ ಪ್ರಕಾರದ ವಿಶ್ವರೂಪವುಳ್ಳ | **ನ, ಕ್ರಿಯಾಭಿಃ** | - ಕ್ರಿಯೆಗಳಿಂದ ಇಲ್ಲ |
| **ಅಹಮ್** | - ನನ್ನನ್ನು | **ಚ** | - ಮತ್ತು |
| **ನ, ವೇದ-** | - ವೇದ ಮತ್ತು | **ದ್ರಷ್ಟುಮ್** | - ನೋಡಲು |
| **ಉಗ್ರೈಃ, ತಪೋಭಿಃ** | - ಉಗ್ರವಾದ ತಪಸ್ಸುಗಳಿಂದಾಗಲೀ | **ನ, ಶಕ್ಯಃ** | - ಶಕ್ಯನಲ್ಲ |
| **ತ್ವದನ್ಯೇನ** | - ನೀನಲ್ಲದೆ ಉಳಿದವರ ಮೂಲಕ | | |

ಮಾ, ತೇ, ವ್ಯಥಾ, ಮಾ, ಚ, ವಿಮೂಢಭಾವಃ,
ದೃಷ್ಟ್ವಾ, ರೂಪಮ್, ಘೋರಮ್, ಈದೃಕ್,
ಮಮ, ಇದಮ್, ವ್ಯಪೇತಭೀಃ, ಪ್ರೀತಮನಾಃ, ಪುನಃ, ತ್ವಮ್,
ತತ್, ಏವ, ಮೇ, ರೂಪಮ್, ಇದಮ್, ಪ್ರಪಶ್ಯ ॥೪೯॥

| | | | |
|---|---|---|---|
| **ಮಮ, ಈದೃಕ್** | - ನನ್ನ ಈ ರೀತಿಯ | **ತ್ವಮ್** | - ನೀನು |
| **ಇದಮ್** | - ಈ | **ವ್ಯಪೇತಭೀಃ** | - ಭಯರಹಿತ (ಮತ್ತು) |
| **ಘೋರಮ್** | - ಭಯಂಕರವಾದ | **ಪ್ರೀತಮನಾಃ** | - ಪ್ರೀತಿಯುಕ್ತವಾದ ಮನಸ್ಸಿನವನಾಗಿ |
| **ರೂಪಮ್, ದೃಷ್ಟ್ವಾ** | - ರೂಪವನ್ನು ನೋಡಿ | **ತತ್, ಏವ, ಮೇ** | - ಅದೇ ನನ್ನ |
| **ತೇ** | - ನಿನಗೆ | **ಇದಮ್** | - ಈ (ಶಂಖ, ಚಕ್ರ ಗದೆ, ಪದ್ಮಯುಕ್ತವಾದ ಚತುರ್ಭುಜ) |
| **ವ್ಯಥಾ** | - ವ್ಯಾಕುಲತೆಯು | **ರೂಪಮ್** | - ರೂಪವನ್ನು |
| **ಮಾ** | - ಆಗಬಾರದು | **ಪುನಃ, ಪ್ರಪಶ್ಯ** | - ಮತ್ತೆ ನೋಡು. |
| **ಚ** | - ಮತ್ತು | | |
| **ವಿಮೂಢಭಾವಃ** | - ಮೂಢಭಾವವು ಸಹ | | |
| **ಮಾ** | - ಆಗಬಾರದು | | |

ಇತಿ, ಅರ್ಜುನಮ್, ವಾಸುದೇವಃ, ತಥಾ, ಉಕ್ತ್ವಾ
ಸ್ವಕಮ್, ರೂಪಮ್, ದರ್ಶಯಾಮಾಸ, ಭೂಯಃ,
ಆಶ್ವಾಸಯಾಮಾಸ, ಚ, ಭೀತಮ್, ಏನಮ್
ಭೂತ್ವಾ, ಪುನಃ, ಸೌಮ್ಯವಪುಃ, ಮಹಾತ್ಮಾ ॥೫೦॥

**ನಂತರ ಸಂಜಯ ಹೇಳಿದ, ಎಲೈ ರಾಜಾ**

| | | | |
|---|---|---|---|
| **ವಾಸುದೇವಃ** | - ಭಗವಾನ್ ವಾಸುದೇವನು | **ಪುನಃ** | - ಮತ್ತೆ |
| **ಅರ್ಜುನಮ್** | - ಅರ್ಜುನನಿಗೆ | **ಮಹಾತ್ಮಾ** | - ಮಹಾತ್ಮನಾದ ಶ್ರೀಕೃಷ್ಣನು |
| **ಇತಿ, ಉಕ್ತ್ವಾ** | - ಈ ಪ್ರಕಾರ ಹೇಳಿ | **ಸೌಮ್ಯವಪುಃ,** | - ಸೌಮ್ಯ |
| **ಭೂಯಃ, ತಥಾ** | - ನಂತರ ಹಾಗೆಯೇ | **ಭೂತ್ವಾ** | ಮೂರ್ತಿಯಾಗಿ |
| **ಸ್ವಕಮ್** | - ತನ್ನ | **ಏನಮ್** | - ಆ |
| **ರೂಪಮ್** | - ಚತುರ್ಭುಜ ರೂಪವನ್ನು | **ಭೀತಮ್** | - ಭಯಗ್ರಸ್ತನಾದ ಅರ್ಜುನನಿಗೆ |
| **ದರ್ಶಯಾಮಾಸ** | - ತೋರಿಸಿದನು | **ಆಶ್ವಾಸಯಾ-ಮಾಸ** | - ಧೈರ್ಯ ತುಂಬಿದನು. |
| **ಚ** | - ಮತ್ತು | | |

ದೃಷ್ಟ್ವಾ, ಇದಮ್, ಮಾನುಷಮ್, ರೂಪಮ್, ತವ, ಸೌಮ್ಯಮ್, ಜನಾರ್ದನ,
ಇದಾನೀಮ್, ಅಸ್ಮಿ, ಸಂವೃತ್ತಃ, ಸಚೇತಾಃ, ಪ್ರಕೃತಿಮ್, ಗತಃ ॥೫೧॥

**ನಂತರ ಅರ್ಜುನ ಹೇಳಿದನು -**

| | | | |
|---|---|---|---|
| **ಜನಾರ್ದನ** | - ಹೇ ಜನಾರ್ದನಾ! | **ಇದಾನೀಮ್** | - ಈಗ (ನಾನು) |
| **ತವ, ಇದಮ್** | - ನಿನ್ನ ಈ | **ಸಚೇತಾಃ,** | - ಸ್ಥಿರಚಿತ್ತನಾಗಿದ್ದೇನೆ |
| **ಸೌಮ್ಯಮ್** | - ಅತಿಶಾಂತವಾದ | **ಸಂವೃತ್ತಃ, ಅಸ್ಮಿ** | (ಮತ್ತು) |
| **ಮಾನುಷಮ್-ರೂಪಮ್** | - ಮನುಷ್ಯ ರೂಪವನ್ನು | **ಪ್ರಕೃತಿಮ್** | - ನನ್ನ ಸ್ವಾಭಾವಿಕವಾದ ಸ್ಥಿತಿಯನ್ನು |
| **ದೃಷ್ಟ್ವಾ** | - ನೋಡಿ | **ಗತಃ** | - ಪಡೆದಿದ್ದೇನೆ. |

ಸುದರ್ದರ್ಶಮ್, ಇದಮ್, ರೂಪಮ್, ದೃಷ್ಟವಾನಸಿ, ಯತ್, ಮಮ,
ದೇವಾಃ, ಅಪಿ, ಅಸ್ಯ, ರೂಪಸ್ಯ, ನಿತ್ಯಮ್, ದರ್ಶನಾಕಾಂಕ್ಷಿಣಃ ॥೫೨॥

**ಅರ್ಜುನನ ಮಾತನ್ನು ಕೇಳಿ ಭಗವಂತ ಹೇಳಿದ, ಎಲೈ ಅರ್ಜುನ !-**

| | | | |
|---|---|---|---|
| **ಮಮ** | - ನನ್ನ | **ದೃಷ್ಟವಾನ್, ಅಸಿ** | - ನೋಡಿರುವೆಯೋ |
| **ಯತ್, ರೂಪಮ್** | - ಯಾವ ಚತುರ್ಭುಜ ರೂಪವನ್ನು(ನೀನು) | **ಇದಮ್** | - ಇದು |
| **ಸುದು-ರ್ದರ್ಶಮ್** | - ಸುದುರ್ದರ್ಶವಾಗಿದೆ ಅರ್ಥಾತ್ ಇದರ ದರ್ಶನ ಬಹಳ ದುರ್ಲಭವಾಗಿದೆ | **ನಿತ್ಯಮ್** | - ಸದಾ |
| | | **ಅಸ್ಯ, ರೂಪಸ್ಯ** | - ಈ ರೂಪದ |
| | | **ದರ್ಶನ ಕಾಂಕ್ಷಿಣಃ** | - ದರ್ಶನದ ಆಕಾಂಕ್ಷೆಯನ್ನು ಮಾಡುತ್ತಿರುತ್ತಾರೆ. |
| **ದೇವಾಃ** | - ದೇವತೆಗಳು | | |
| **ಅಪಿ** | - ಸಹ | | |

ನ, ಅಹಮ್, ವೇದೈಃ, ನ, ತಪಸಾ, ನ, ದಾನೇನ, ನ, ಚ, ಇಜ್ಯಯಾ,
ಶಕ್ಯಃ, ಏವಂವಿಧಃ, ದ್ರಷ್ಟುಮ್, ದೃಷ್ಟವಾನ್, ಅಸಿ, ಮಾಮ್, ಯಥಾ ॥೫೩॥

**ಮತ್ತು ಎಲೈ ಅರ್ಜುನ !**

**ಯಥಾ** – ಯಾವ ಪ್ರಕಾರವಾಗಿ (ನೀನು)
**ಮಾಮ್** – ನನ್ನನ್ನು
**ದೃಷ್ಟವಾನ್, ಅಸಿ** – ನೋಡಿದ್ದಿಯೋ
**ಏವಂವಿಧಃ** – ಈ ಪ್ರಕಾರ ಚತುರ್ಭುಜ ರೂಪನಾದ
**ಅಹಮ್** – ನನ್ನನ್ನು
**ವೇದೈಃ** – ವೇದಾಧ್ಯಯನಗಳಿಂದ
**ದ್ರಷ್ಟುಮ್, ನ, ಶಕ್ಯಃ** – ನೋಡಲು ಸಾಧ್ಯವಿಲ್ಲ
**ತಪಸಾ, ನ** – ತಪಸ್ಸಿನಿಂದಲೂ
**(ದ್ರಷ್ಟುಮ್ ಶಕ್ಯಃ)** ನೋಡಲು ಸಾಧ್ಯವಿಲ್ಲ
**ದಾನೇನ, ನ** – ದಾನದಿಂದಲೂ
**(ದ್ರಷ್ಟುಮ್ ಶಕ್ಯಃ)** ನೋಡಲು ಸಾಧ್ಯವಿಲ್ಲ
**ಚ** – ಮತ್ತು
**ಇಜ್ಯಯಾ, ನ** – ಯಜ್ಞದಿಂದಲೂ
**(ದ್ರಷ್ಟುಮ್ ಶಕ್ಯಃ)** ನೋಡಲು ಸಾಧ್ಯವಿಲ್ಲ

ಭಕ್ತ್ಯಾ, ತು, ಅನನ್ಯಯಾ, ಶಕ್ಯಃ, ಅಹಮ್, ಏವಂವಿಧಃ, ಅರ್ಜುನ,
ಜ್ಞಾತುಮ್, ದ್ರಷ್ಟುಮ್, ಚ, ತತ್ತ್ವೇನ, ಪ್ರವೇಷ್ಟುಮ್, ಚ, ಪರಂತಪ ॥೫೪॥

**ತು** – ಆದರೆ
**ಪರಂತಪ** – ಹೇ ಪರಂತಪ
**ಅರ್ಜುನ** – ಅರ್ಜುನಾ!
**ಅನನ್ಯಯಾ, ಭಕ್ತ್ಯಾ** – ಅನನ್ಯ ಭಕ್ತಿಯ* ಮೂಲಕ
**ಏವಂವಿಧಃ** – ಈ ಪ್ರಕಾರವಾದ ಚತುರ್ಭುಜ ರೂಪವುಳ್ಳ
**ಅಹಮ್** – ನಾನು
**ದ್ರಷ್ಟುಮ್** – ಪ್ರತ್ಯಕ್ಷವಾಗಿ ನೋಡಲು
**ತತ್ತ್ವೇನ** – ತತ್ತ್ವದಿಂದ
**ಜ್ಞಾತುಮ್** – ತಿಳಿಯಲು
**ಚ** – ಹಾಗೂ
**ಪ್ರವೇಷ್ಟುಮ್** – ಪ್ರವೇಶಿಸಲು ಅರ್ಥಾತ್ ಏಕೀಭಾವದಿಂದ ಪ್ರಾಪ್ತವಾಗುವುದಕ್ಕೆ
**ಚ** – ಸಹ
**ಶಕ್ಯಃ** – ಶಕ್ಯನಾಗಿದ್ದೇನೆ

ಮತ್ಕರ್ಮಕೃತ್, ಮತ್ಪರಮಃ, ಮದ್ಭಕ್ತಃ, ಸಂಗವರ್ಜಿತಃ,
ನಿರ್ವೈರಃ, ಸರ್ವಭೂತೇಷು, ಯಃ, ಸಃ, ಮಾಮ್, ಏತಿ, ಪಾಂಡವ ॥೫೫॥

**ಪಾಂಡವ** – ಹೇ ಅರ್ಜುನಾ!
**ಯಃ** – ಯಾವ ಪುರುಷನು
**ಮತ್ಕರ್ಮ ಕೃತ್** – ಕೇವಲ ನನಗಾಗಿಯೇ ಸಮಸ್ತ ಕರ್ತವ್ಯ ಕರ್ಮಗಳನ್ನು ಮಾಡುವವ ನಾಗಿದ್ದಾನೋ
**ನಿರ್ವೈರಃ** – ವೈರಭಾವರಹಿತ ನಾಗಿದ್ದಾನೋ*
**ಸಃ** – ಆ (ಅನನ್ಯ ಭಕ್ತಿಯುಕ್ತನಾದ
**ಮತ್ಪರಮಃ** – ನನ್ನ ಪರಾಯಣ ನಾಗಿದ್ದಾನೋ
**ಮದ್ಭಕ್ತಃ** – ನನ್ನ ಭಕ್ತನಾಗಿದ್ದಾನೋ
**ಸಂಗವರ್ಜಿತಃ** – ಆಸಕ್ತಿರಹಿತ ನಾಗಿದ್ದಾನೋ ಮತ್ತು
**ಸರ್ವಭೂತೇಷು** – ಸಮಸ್ತ ಭೂತ ಪ್ರಾಣಿಗಳಲ್ಲಿ ಪುರುಷನು)
**ಮಾಮ್** – ನನ್ನನ್ನೇ
**ಏತಿ** – ಹೊಂದುತ್ತಾನೆ.

ಶ್ರೀ ಮದ್ಭಗವದ್ಗೀತೆ ಅಧ್ಯಾಯ 12 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ದ್ವಾದಶೋऽಧ್ಯಾಯಃ - ಭಕ್ತಿಯೋಗ ॥

ಏವಮ್, ಸತತಯುಕ್ತಾಃ, ಯೇ, ಭಕ್ತಾಃ, ತ್ವಾಮ್, ಪರ್ಯುಪಾಸತೇ,
ಯೇ, ಚ, ಅಪಿ, ಅಕ್ಷರಮ್, ಅವ್ಯಕ್ತಮ್,ತೇಷಾಮ್, ಕೇ, ಯೋಗವಿತ್ತಮಾಃ ॥೧॥

**ಹೀಗೆ ಭಗವಂತನ ವಚನಗಳನ್ನು ಕೇಳಿ ಅರ್ಜುನ ಹೇಳಿದನು -**

**ಹೇ, ಮನಮೋಹನ ! -**

**ಯೇ** - ಯಾವ
**ಭಕ್ತಾಃ** - ಅನನ್ಯಪ್ರೇಮಿ ಭಕ್ತರು
**ಏವಮ್** - ಹಿಂದೆ ಹೇಳಿದ ಪ್ರಕಾರವಾಗಿ
**ಸತತಯುಕ್ತಾಃ** - ನಿರಂತರ ನಿನ್ನ ಭಜನೆ-ಧ್ಯಾನದಲ್ಲಿ ತೊಡಗಿದ್ದು
**ತ್ವಾಮ್** - ಸಗುಣರೂಪೀ ಪರಮೇಶ್ವರನಾದ ನಿನ್ನನ್ನು (ಉಪಾಸಿಸುತ್ತಾರೆ)
**ಚ** - ಮತ್ತು
**ಯೇ** - ಬೇರೆಯವರು (ಕೇವಲ)
**ಅಕ್ಷರಮ್** - ಅವಿನಾಶಿಯಾದ ಸಚ್ಚಿದಾನಂದಘನ
**ಅವ್ಯಕ್ತಮ್, ಅಪಿ** - ನಿರಾಕಾರ ಬ್ರಹ್ಮನನ್ನೇ
**ಪರ್ಯುಪಾಸತೇ** - ಅತಿ ಶ್ರೇಷ್ಠಭಾವದಿಂದ ಭಜಿಸುತ್ತಾರೆ
**ತೇಷಾಮ್** - ಆ ಎರಡೂ ಪ್ರಕಾರದ ಉಪಾಸಕರಲ್ಲಿ
**ಯೋಗವಿತ್ತಮಾಃ** - ಅತ್ಯುತ್ತಮ ಯೋಗವೇತ್ತರು
**ಕೇ** - ಯಾರು
**(ಸಂತಿ)** - ಆಗಿದ್ದಾರೆ?

ಮಯಿ, ಆವೇಶ್ಯ, ಮನಃ, ಯೇ, ಮಾಮ್, ನಿತ್ಯಯುಕ್ತಾಃ, ಉಪಾಸತೇ,
ಶ್ರದ್ಧಯಾ, ಪರಯಾ, ಉಪೇತಾಃ, ತೇ, ಮೇ, ಯುಕ್ತತಮಾಃ, ಮತಾಃ ॥೨॥

**ಹೀಗೆ ಅರ್ಜುನ ಕೇಳಿದ ನಂತರ ಶ್ರೀಕೃಷ್ಣ ಪರಮಾತ್ಮ ಹೇಳಿದ, ಎಲೈ ಅರ್ಜುನ ! -**

**ಮಯಿ** - ನನ್ನಲ್ಲಿ
**ಮನಃ** - ಮನಸ್ಸನ್ನು
**ಆವೇಶ್ಯ** - ಏಕಾಗ್ರಮಾಡಿ
**ನಿತ್ಯಯುಕ್ತಾಃ** - ನಿರಂತರ ನನ್ನ ಭಜನೆ-ಧ್ಯಾನದಲ್ಲಿ ತೊಡಗಿದ್ದು*
**ಯೇ** - ಯಾವ ಭಕ್ತಜನರು
**ಪರಯಾ** - ಅತಿಶಯ ಶ್ರೇಷ್ಠವಾದ
**ಶ್ರದ್ಧಯಾ** - ಶ್ರದ್ಧೆಯಿಂದ
**ಉಪೇತಾಃ** - ಯುಕ್ತರಾಗಿ
**ಮಾಮ್** - ಸಗುಣರೂಪೀ ಪರಮೇಶ್ವರನಾದ ನನ್ನನ್ನು
**ಉಪಾಸತೇ** - ಭಜಿಸುತ್ತಾರೋ
**ತೇ** - ಅವರು
**ಮೇ** - ನನಗೆ
**ಯುಕ್ತತಮಾಃ** - ಯೋಗಿಗಳಲ್ಲಿ ಅತಿ ಉತ್ತಮವಾದ ಯೋಗಿಗಳೆಂದು
**ಮತಾಃ** - ಮಾನ್ಯರಾಗಿದ್ದಾರೆ.

ಯೇ, ತು, ಅಕ್ಷರಮ್, ಅನಿರ್ದೇಶ್ಯಮ್, ಅವ್ಯಕ್ತಮ್, ಪರ್ಯುಪಾಸತೇ,
ಸರ್ವತ್ರಗಮ್, ಅಚಿಂತ್ಯಮ್, ಚ, ಕೂಟಸ್ಥಮ್, ಅಚಲಮ್, ಧ್ರುವಮ್ ॥೩॥

ಸಂನಿಯಮ್ಯ, ಇಂದ್ರಿಯಗ್ರಾಮಮ್, ಸರ್ವತ್ರ, ಸಮಬುದ್ಧಯಃ,
ತೇ, ಪ್ರಾಪ್ನುವಂತಿ, ಮಾಮ್, ಏವ, ಸರ್ವಭೂತಹಿತೇ, ರತಾಃ ॥೪॥

**ತು** – ಆದರೆ
**ಯೇ** – ಯಾವ ಪುರುಷರು
**ಇಂದ್ರಿಯ-ಗ್ರಾಮಮ್** – ಇಂದ್ರಿಯಗಳ ಸಮುದಾಯವನ್ನು
**ಸನ್ನಿಯಮ್ಯ** – ಚೆನ್ನಾಗಿ ವಶಪಡಿಸಿಕೊಂಡು
**ಅಚಿಂತ್ಯಮ್** – ಮನಸ್ಸು-ಬುದ್ಧಿಗಳಿಗೆ ಅತೀತವಾದ
**ಸರ್ವತ್ರಗಮ್** – ಸರ್ವವ್ಯಾಪಿ
**ಅನಿರ್ದೇಶ್ಯಮ್** – ಅವರ್ಣನೀಯ ಸ್ವರೂಪೀ
**ಚ** – ಮತ್ತು
**ಕೂಟಸ್ಥಮ್** – ಸದಾ ಏಕರಸವಾಗಿರುವ
**ಧ್ರುವಮ್** – ನಿತ್ಯನು
**ಅಚಲಮ್** – ಅಚಲನು
**ಅವ್ಯಕ್ತಮ್** – ನಿರಾಕಾರನು
**ಅಕ್ಷರಮ್** – ಅವಿನಾಶಿ ಸಚ್ಚಿದಾನಂದ ಘನನಾದ ಬ್ರಹ್ಮನನ್ನು
**ಪರ್ಯುಪಾಸತೇ** – ನಿರಂತರ ಏಕೀಭಾವದಿಂದ ಧ್ಯಾನಿಸುತ್ತ ಭಜಿಸುತ್ತಾರೋ
**ತೇ** – ಅವರು
**ಸರ್ವಭೂತಹಿತೇ** – ಸಮಸ್ತ ಭೂತಗಳ ಹಿತದಲ್ಲಿ
**ರತಾಃ** – ನಿರತರಾಗಿ (ಮತ್ತು)
**ಸರ್ವತ್ರ** – ಎಲ್ಲರಲ್ಲಿ
**ಸಮಬುದ್ಧಯಃ** – ಸಮಾನ ಭಾವವುಳ್ಳ ಯೋಗಿಗಳು
**ಮಾಮ್, ಏವ** – ನನ್ನನ್ನೇ
**ಪ್ರಾಪ್ನುವಂತಿ** – ಪಡೆಯುತ್ತಾರೆ.

ಕ್ಲೇಶಃ, ಅಧಿಕತರಃ, ತೇಷಾಮ್, ಅವ್ಯಕ್ತಾಸಕ್ತಚೇತಸಾಮ್,
ಅವ್ಯಕ್ತಾ, ಹಿ, ಗತಿಃ, ದುಃಖಮ್, ದೇಹವದ್ಭಿಃ, ಅವಾಪ್ಯತೇ ॥೫॥

**ತೇಷಾಮ್** – ಆ
**ಅವ್ಯಕ್ತಾಸಕ್ತ-ಚೇತಸಾಮ್** – ಸಚ್ಚಿದಾನಂದಘನ ನಿರಾಕಾರ-ಬ್ರಹ್ಮನಲ್ಲಿ ಆಸಕ್ತಚಿತ್ತರಾಗಿರುವ ಪುರುಷರ (ಸಾಧನೆಯಲ್ಲಿ)
**ಕ್ಲೇಶಃ** – ಪರಿಶ್ರಮವು
**ಅಧಿಕತರಃ** – ವಿಶೇಷವಾದುದಾಗಿದೆ
**ಹಿ** – ಏಕೆಂದರೆ
**ದೇಹವದ್ಭಿಃ** – ದೇಹಾಭಿಮಾನಿಗಳ ಮೂಲಕ
**ಅವ್ಯಕ್ತಾ, ಗತಿಃ** – ಅವ್ಯಕ್ತ ವಿಷಯಕವಾದ ಗತಿಯು
**ದುಃಖಮ್** – ದುಃಖಪೂರ್ವಕವಾಗಿ
**ಅವಾಪ್ಯತೇ** – ಪಡೆಯಲಾಗುತ್ತದೆ.

ಯೇ, ತು, ಸರ್ವಾಣಿ, ಕರ್ಮಾಣಿ, ಮಯಿ, ಸಂನ್ಯಸ್ಯ, ಮತ್ಪರಾಃ,
ಅನನ್ಯೇನ, ಏವ, ಯೋಗೇನ, ಮಾಮ್, ಧ್ಯಾಯಂತಃ, ಉಪಾಸತೇ ॥೬॥

**ತು** – ಆದರೆ
**ಯೇ, ಮತ್ಪರಾಃ** – ಯಾರು ನನ್ನ ಪರಾಯಣರಾಗಿರುವ ಭಕ್ತಜನರು
**ಸರ್ವಾಣಿ** – ಸಂಪೂರ್ಣ

| | | | |
|---|---|---|---|
| **ಕರ್ಮಾಣಿ** | - ಕರ್ಮಗಳನ್ನು | **ಅನನ್ಯೇನ** | - ಅನನ್ಯವಾದ |
| **ಮಯಿ** | - ನನ್ನಲ್ಲಿ | **ಯೋಗೇನ** | - ಭಕ್ತಿಯೋಗದಿಂದ |
| **ಸನ್ನ್ಯಸ್ಯ** | - ಅರ್ಪಣೆಮಾಡಿ | **ಧ್ಯಾಯಂತಃ** | - ನಿರಂತರವಾಗಿ ಚಿಂತನೆಮಾಡುತ್ತಾ |
| **ಮಾಮ್ ಏವ** | - ಸಗುಣರೂಪೀ ಪರಮೇಶ್ವರನಾದ ನನ್ನನ್ನೇ | **ಉಪಾಸತೇ** | - ಭಜಿಸುತ್ತಾರೆ* |

ತೇಷಾಮ್, ಅಹಮ್, ಸಮುದ್ಧರ್ತಾ, ಮೃತ್ಯುಸಂಸಾರ ಸಾಗರಾತ್,
ಭವಾಮಿ, ನಚಿರಾತ್, ಪಾರ್ಥ, ಮಯಿ, ಆವೇಶಿತಚೇತಸಾಮ್ ॥೭॥

| | | | |
|---|---|---|---|
| **ಪಾರ್ಥ** | - ಹೇ ಅರ್ಜುನಾ! | **ನಚಿರಾತ್** | - ಶೀಘ್ರವಾಗಿಯೇ |
| **ತೇಷಾಮ್** | - ಆ | **ಮೃತ್ಯು-** | - ಮೃತ್ಯುರೂಪವಾದ |
| **ಮಯಿ** | - ನನ್ನಲ್ಲಿ | **ಸಂಸಾರ** | ಸಂಸಾರ |
| **ಆವೇಶಿತ-** | - ಚಿತ್ತವನ್ನು | **ಸಾಗರಾತ್** | ಸಮುದ್ರದಿಂದ |
| **ಚೇತಸಾಮ್** | ತೊಡಗಿಸುವ ಪ್ರೇಮಿಭಕ್ತರನ್ನು | **ಸಮುದ್ಧರ್ತಾ** | - ಉದ್ಧರಿಸುವವನು |
| **ಅಹಮ್** | - ನಾನು | **ಭವಾಮಿ** | - ಆಗುತ್ತೇನೆ |

ಮಯಿ, ಏವ, ಮನಃ, ಆಧತ್ಸ್ವ, ಮಯಿ, ಬುದ್ಧಿಮ್, ನಿವೇಶಯ,
ನಿವಸಿಷ್ಯಸಿ, ಮಯಿ, ಏವ, ಅತಃ, ಊರ್ಧ್ವಮ್, ನ, ಸಂಶಯಃ ॥೮॥

ಆದುದರಿಂದ ಎಲೈ ಅರ್ಜುನ ! ನೀನು -

| | | | |
|---|---|---|---|
| **ಮಯಿ** | - ನನ್ನಲ್ಲಿ | **ಊರ್ಧ್ವಮ್** | - ನಂತರ (ನೀನು) |
| **ಮನಃ, ಆಧತ್ಸ್ವ** | - ಮನಸ್ಸನ್ನು ತೊಡಗಿಸು | **ಮಯಿ, ಏವ** | - ನನ್ನಲ್ಲಿಯೇ |
| **ಮಯಿ, ಏವ** | - (ಮತ್ತು) ನನ್ನಲ್ಲಿಯೇ | **ನಿವಸಿಷ್ಯಸಿ** | - ನೆಲೆಸುವೆ (ಇದರಲ್ಲಿ ಯಾವುದೇ) |
| **ಬುದ್ಧಿಮ್** | - ಬುದ್ಧಿಯನ್ನು | | |
| **ನಿವೇಶಯ** | - ತೊಡಗಿಸು | | |
| **ಅತಃ** | - ಇದಾದ | **ನ, ಸಂಶಯಃ** | - ಸಂಶಯವಿಲ್ಲ |

ಅಥ, ಚಿತ್ತಮ್, ಸಮಾಧಾತುಮ್, ನ, ಶಕ್ನೋಷಿ, ಮಯಿ, ಸ್ಥಿರಮ್,
ಅಭ್ಯಾಸಯೋಗೇನ, ತತಃ, ಮಾಮಂ, ಇಚ್ಛ ಆಪ್ತುಮ್, ಧನಂಜಯ ॥೯॥

ಮತ್ತು

| | | | |
|---|---|---|---|
| **ಅಥ** | - ಒಂದು ವೇಳೆ (ನೀನು) | **ಧನಂಜಯ** | - ಹೇ ಅರ್ಜುನಾ! |
| **ಚಿತ್ತಮ್** | - ಮನಸ್ಸನ್ನು | **ಅಭ್ಯಾಸ-** | - ಅಭ್ಯಾಸರೂಪೀ |
| **ಮಯಿ, ಸ್ಥಿರಮ್** | - ನನ್ನಲ್ಲಿ ಅಚಲವಾಗಿ | **ಯೋಗೇನ** | ಯೋಗದ ಮೂಲಕ* |
| **ಸಮಾಧಾತುಮ್** | - ಸ್ಥಾಪಿಸಲು | **ಮಾಮ್** | - ನನ್ನನ್ನು |
| **ನ, ಶಕ್ನೋಸಿ** | - ಸಮರ್ಥನಲ್ಲ | **ಆಪ್ತುಮ್** | - ಹೊಂದುವುದಕ್ಕಾಗಿ |
| **ತತಃ** | ವಾದರೆ | **ಇಚ್ಛ** | - ಇಚ್ಛಿಸು. |

ಅಭ್ಯಾಸೇ, ಅಪಿ, ಅಸಮರ್ಥಃ, ಅಪಿ, ಮತ್ಕರ್ಮಪರಮಃ, ಭವ,
ಮದರ್ಥಮ್, ಅಪಿ, ಕರ್ಮಾಣಿ, ಕುರ್ವನ್, ಸಿದ್ಧಿಮ್, ಅವಾಪ್ಸ್ಯಸಿ ||೧೦||

**ಮತ್ತು ಒಂದು ವೇಳೆ ನೀನು -**

**ಅಭ್ಯಾಸೇ** - ಅಭ್ಯಾಸದಲ್ಲಿ
**ಅಪಿ** - ಕೂಡ
**ಅಸಮರ್ಥಃ** - ಅಸಮರ್ಥ
**ಅಪಿ** - ಆಗಿರುವೆ (ಆದರೆ)
**ಮತ್ಕರ್ಮ-ಪರಮಃ** - ಕೇವಲ ನನಗಾಗಿಯೇ ಕರ್ಮಮಾಡಲಿಕ್ಕಾಗಿಯೇ ಪರಾಯಣ †
**ಭವ** - ಆಗಿಬಿಡು (ಈ ಪ್ರಕಾರ)
**ಮದರ್ಥಮ್** - ನನ್ನನಿಮಿತ್ತವಾಗಿ
**ಕರ್ಮಾಣಿ** - ಕರ್ಮಗಳನ್ನು
**ಕುರ್ವನ್, ಅಪಿ** - ಮಾಡುತ್ತಾ ಕೂಡ
**ಸಿದ್ಧಿಮ್** - ನನ್ನಪ್ರಾಪ್ತಿರೂಪೀ ಸಿದ್ಧಿಯನ್ನು
**ಅವಾಪ್ಸ್ಯಸಿ** - ಪಡೆಯುವೆ.

ಅಥ, ಏತತ್, ಅಪಿ, ಅಶಕ್ತಃ, ಅಸಿ, ಕರ್ತುಮ್, ಮದ್ಯೋಗಮ್, ಆಶ್ರಿತಃ,
ಸರ್ವಕರ್ಮಫಲತ್ಯಾಗಮ್, ತತಃ, ಕುರು, ಯತಾತ್ಮವಾನ್ ||೧೧||

**ಅಥ** - ಒಂದು ವೇಳೆ
**ಮದ್ಯೋಗಮ್** - ನನ್ನಪ್ರಾಪ್ತಿರೂಪೀ ಯೋಗವನ್ನು
**ಆಶ್ರಿತಃ** - ಆಶ್ರಯಿಸಿ
**ಏತತ್** - ಮೇಲೆ ಹೇಳಿದ ಸಾಧನೆಯನ್ನು
**ಕರ್ತುಮ್, ಅಪಿ** - ಮಾಡುವುದರಲ್ಲಿಯೂ
**ಅಶಕ್ತಃ, ಅಸಿ, ತತಃ**- ಅಸಮರ್ಥನಾಗಿದ್ದರೆ
**ಯತಾತ್ಮವಾನ್** - ಮನಸ್ಸು-ಬುದ್ಧಿ-ಮೊದಲಾದುವನ್ನು ಜಯಿಸುವವನಾಗಿ
**ಸರ್ವಕರ್ಮ-ಫಲತ್ಯಾಗಮ್** - ಎಲ್ಲಾ ಕರ್ಮಗಳ ಫಲತ್ಯಾಗ*
**ಕುರು** - ಮಾಡು.

ಶ್ರೇಯಃ, ಹಿ, ಜ್ಞಾನಮ್, ಅಭ್ಯಾಸಾತ್, ಜ್ಞಾನಾತ್, ಧ್ಯಾನಮ್, ವಿಶಿಷ್ಯತೇ,
ಧ್ಯಾನಾತ್, ಕರ್ಮಫಲತ್ಯಾಗಃ, ತ್ಯಾಗಾತ್, ಶಾಂತಿಃ, ಅನಂತರಮ್ ||೧೨||

**ಅಭ್ಯಾಸಾತ್** - ಮರ್ಮವನ್ನರಿಯದೆ ಮಾಡಲ್ಪಟ್ಟ ಅಭ್ಯಾಸಕ್ಕಿಂತ
**ಜ್ಞಾನಮ್, ಶ್ರೇಯಃ** - ಜ್ಞಾನವು† ಶ್ರೇಷ್ಠವಾಗಿದೆ
**ಜ್ಞಾನಾತ್** - ಜ್ಞಾನಕ್ಕಿಂತ
**ಧ್ಯಾನಮ್** - ಪರಮೇಶ್ವರನಾದ ನನ್ನಸ್ವರೂಪದ ಧ್ಯಾನವು
**ಹಿ** - ಏಕೆಂದರೆ
**ತ್ಯಾಗಾತ್** - ತ್ಯಾಗದಿಂದ
**ವಿಶಿಷ್ಯತೇ** - ಶ್ರೇಷ್ಠವಾಗಿದೆ (ಮತ್ತು)
**ಧ್ಯಾನಾತ್** - ಧ್ಯಾನಕ್ಕಿಂತ (ಲೂ ಸಹ)
**ಕರ್ಮಫಲತ್ಯಾಗಃ** - ಎಲ್ಲ ಕರ್ಮಗಳ ಫಲದ ತ್ಯಾಗ ಶ್ರೇಷ್ಠವಾಗಿದೆ ‡
**ಅನಂತರಮ್** - ತತ್ಕಾಲದಲ್ಲಿಯೇ
**ಶಾಂತಿಃ** - ಪರಮಶಾಂತಿ ಲಭಿಸುತ್ತದೆ.

ಅದ್ವೇಷ್ಟಾ, ಸರ್ವಭೂತಾನಾಮ್, ಮೈತ್ರಃ, ಕರುಣಃ, ಏವ, ಚ,
ನಿರ್ಮಮಃ, ನಿರಹಂಕಾರಃ, ಸಮದುಃಖಸುಖಃ, ಕ್ಷಮೀ ॥೧೩॥
ಸಂತುಷ್ಟಃ, ಸತತಮ್, ಯೋಗೀ, ಯತಾತ್ಮಾ, ದೃಢನಿಶ್ಚಯಃ,
ಮಯಿ, ಅರ್ಪಿತಮನೋಬುದ್ಧಿಃ, ಯಃ, ಮದ್ಭಕ್ತಃ, ಸಃ, ಮೇ, ಪ್ರಿಯಃ ॥೧೪॥

**ಈ ರೀತಿ ಶಾಂತಿಯನ್ನು ಪಡೆದವನು -**

**ಯಃ** - ಯಾವ ಪುರುಷನು
**ಸರ್ವಭೂತಾನಾಮ್** - ಎಲ್ಲ ಭೂತಗಳಲ್ಲಿ
**ಅದ್ವೇಷ್ಟಾ** - ದ್ವೇಷಭಾವ ರಹಿತನಾಗಿ
**ಮೈತ್ರಃ** - ಸ್ವಾರ್ಥರಹಿತ ಎಲ್ಲರ ಪ್ರೇಮಿಯಾಗಿದ್ದಾನೋ
**ಚ** - ಮತ್ತು
**ಕರುಣಃ** - ಹೇತುರಹಿತ ದಯಾಳು ವಾಗಿದ್ದಾನೆಯೋ ಸಹ ಅಭಯ ನೀಡುವವ ನಾಗಿರುವನೋ (ಹಾಗೂ ಯಾವ)
**ಯೋಗೀ** - ಯೋಗಿಯು
**ಸತತಮ್** - ನಿರಂತರವಾಗಿ
**ಸಂತುಷ್ಟಃ** - ಸಂತುಷ್ಟನಾಗಿದ್ದಾನೋ
**ಯತಾತ್ಮಾ** - ಮನಸ್ಸು-ಇಂದ್ರಿಯಗಳ ಸಹಿತ ಶರೀರವನ್ನು ವಶದಲ್ಲಿ ಇಟ್ಟುಕೊಂಡಿದ್ದಾನೋ (ಮತ್ತು)
**ಏವ** - ಹಾಗೂ
**ನಿರ್ಮಮಃ** - ಮಮತಾರಹಿತನೂ
**ನಿರಹಂಕಾರಃ** - ಅಹಂಕಾರರಹಿತನೂ
**ಸಮದುಃಖಸುಖಃ** - ಸುಖ-ದುಃಖಗಳ ಪ್ರಾಪ್ತಿಯಲ್ಲಿ ಸಮನಾಗಿರುವವನೂ (ಮತ್ತು)
**ಕ್ಷಮೀ** - ಕ್ಷಮಾವಂತನಾಗಿದ್ದಾನೋ ಅರ್ಥಾತ್ ಅಪರಾಧ ಮಾಡುವವರಿಗೂ
**ದೃಢನಿಶ್ಚಯಃ** - ನನ್ನಲ್ಲಿ ದೃಢನಿಶ್ಚಯವುಳ್ಳವನಾಗಿದ್ದಾನೆಯೋ
**ಮಯಿ** - ನನ್ನಲ್ಲಿ
**ಅರ್ಪಿತ-ಮನೋಬುದ್ಧಿಃ** - ಮನಸ್ಸು-ಬುದ್ಧಿಗಳನ್ನು ಅರ್ಪಿಸಿರುವನೋ
**ಸಃ, ಮದ್ಭಕ್ತಃ** - ಆ ನನ್ನ ಭಕ್ತನು
**ಮೇ** - ನನಗೆ
**ಪ್ರಿಯಃ** - ಪ್ರಿಯನಾಗಿದ್ದಾನೆ.

ಯಸ್ಮಾತ್, ನ, ಉದ್ವಿಜತೇ, ಲೋಕಃ, ಲೋಕಾತ್, ನ, ಉದ್ವಿಜತೇ, ಚ, ಯಃ,
ಹರ್ಷಾಮರ್ಷಭಯೋದ್ವೇಗೈಃ, ಮುಕ್ತಃ, ಯಃ, ಸಃ, ಚ, ಮೇ, ಪ್ರಿಯಃ ॥೧೫॥

**ಯಸ್ಮಾತ್** - ಯಾರಿಂದ
**ಲೋಕಃ** - ಯಾವುದೇ ಜೀವಿಯು
**ನ, ಉದ್ವಿಜತೇ** - ಉದ್ವೇಗವನ್ನು ಪಡೆಯುವುದಿಲ್ಲವೋ
**ಚ** - ಮತ್ತು
**ಯಃ** - ಯಾರು (ತಾನು ಸಹ)
**ಲೋಕಾತ್** - ಯಾವುದೇ ಜೀವಿಯಿಂದ

| | |
|---|---|
| **ನ, ಉದ್ವಿಜತೇ** | - ಉದ್ವೇಗವನ್ನು ಪಡೆಯುವುದಿಲ್ಲವೋ |
| **ಚ** | - ಹಾಗೂ |
| **ಯಃ** | - ಯಾರು |
| **ಹರ್ಷಾ-ಮರ್ಷ** | - ಹರ್ಷ, ಅಮರ್ಷ,* ಭಯ ಮತ್ತು |
| **ಭಯೋದ್ವೇಗೈಃ** | ಉದ್ವೇಗಾದಿಗಳಿಂದ |
| **ಮುಕ್ತಃ** | - ರಹಿತನಾಗಿದ್ದಾನೋ |
| **ಸಃ** | - ಆ ಭಕ್ತನು |
| **ಮೇ** | - ನನಗೆ |
| **ಪ್ರಿಯಃ** | - ಪ್ರಿಯನು. |

ಅನಪೇಕ್ಷಃ, ಶುಚಿಃ, ದಕ್ಷಃ, ಉದಾಸೀನಃ, ಗತವ್ಯಥಃ,
ಸರ್ವಾರಂಭಪರಿತ್ಯಾಗೀ, ಯಃ, ಮದ್ಭಕ್ತಃ, ಸಃ, ಮೇ, ಪ್ರಿಯಃ ॥೧೬॥

| | |
|---|---|
| **ಯಃ** | - ಯಾವ ಪುರುಷನು |
| **ಅನಪೇಕ್ಷಃ** | - ಆಕಾಂಕ್ಷಾ ರಹಿತನಾಗಿದ್ದಾನೋ |
| **ಶುಚಿಃ** | - ಹೊರಗು-ಒಳಗಿನಿಂದ ಶುದ್ಧನಾಗಿದ್ದಾನೋ † |
| **ದಕ್ಷಃ** | - ದಕ್ಷನೂ |
| **ಉದಾಸೀನಃ** | - ಪಕ್ಷಪಾತದಿಂದ ರಹಿತನೂ (ಮತ್ತು) |
| **ಗತವ್ಯಥಃ** | - ದುಃಖರಹಿತನಾಗಿದ್ದಾನೋ |
| **ಸರ್ವಾರಂಭ-ಪರಿತ್ಯಾಗಿ** | - ಎಲ್ಲ ಕ್ರಿಯೆಗಳ ಕರ್ತೃತ್ವದ ತ್ಯಾಗಿಯಾದ ‡ |
| **ಸಃ, ಮದ್ಭಕ್ತಃ** | - ಆ ನನ್ನ ಭಕ್ತನು |
| **ಮೇ** | - ನನಗೆ |
| **ಪ್ರಿಯಃ** | - ಪ್ರಿಯನಾಗಿದ್ದಾನೆ. |

ಯಃ, ನ, ಹೃಷ್ಯತಿ, ನ, ದ್ವೇಷ್ಟಿ ನ, ಶೋಚತಿ, ನ, ಕಾಂಕ್ಷತಿ,
ಶುಭಾಶುಭಪರಿತ್ಯಾಗೀ, ಭಕ್ತಿಮಾನ್, ಯಃ, ಸಃ, ಮೇ, ಪ್ರಿಯಃ ॥೧೭॥

| | |
|---|---|
| **ಯಃ** | - ಯಾರು, (ಎಂದೂ) |
| **ನ, ಹೃಷ್ಯತಿ** | - ಹರ್ಷಿತನಾಗುವುದಿಲ್ಲವೋ |
| **ನ, ದ್ವೇಷ್ಟಿ** | - ದ್ವೇಷಿಸುವುದಿಲ್ಲವೋ |
| **ನ, ಶೋಚತಿ** | - ಶೋಕಿಸುವುದಿಲ್ಲವೋ |
| **ನ, ಕಾಂಕ್ಷತಿ** | - ಬಯಸುವುದಿಲ್ಲವೋ (ಹಾಗೂ) |
| **ಯಃ** | - ಯಾರು |
| **ಶುಭಾಶುಭ-ಪರಿತ್ಯಾಗೀ** | - ಶುಭ ಮತ್ತು ಅಶುಭವಾದ ಸಮಸ್ತ ಕರ್ಮಗಳನ್ನು ತ್ಯಜಿಸಿದ್ದಾನೆಯೋ |
| **ಸಃ, ಭಕ್ತಿಮಾನ್** | - ಆ ಭಕ್ತಿಯುಕ್ತನಾದ ಪುರುಷನು |
| **ಮೇ** | - ನನಗೆ |
| **ಪ್ರಿಯಃ** | - ಪ್ರಿಯನಾಗಿದ್ದಾನೆ. |

ಸಮಃ, ಶತ್ರೌ, ಚ, ಮಿತ್ರೇ, ಚ, ತಥಾ, ಮಾನಾಪಮಾನಯೋಃ,
ಶೀತೋಷ್ಣಸುಖದುಃಖೇಷು, ಸಮಃ, ಸಂಗವಿವರ್ಜಿತಃ, ॥೧೮॥

**ಮತ್ತು ಯಾರು -**

**ಶತ್ರೌ, ಚ, ಮಿತ್ರೇ** - ಶತ್ರು ಮತ್ತು ಮಿತ್ರರಲ್ಲಿ
**ಮಾನಾಪ-ಮಾನಯೋಃ** - ಮಾನ-ಅಪಮಾನದಲ್ಲಿ
**ಸಮಃ** - ಸಮನಾಗಿದ್ದಾನೆಯೋ
**ತಥಾ** - ಹಾಗೂ
**ಶೀತೋಷ್ಣ-** - ಚಳಿ, ಸೆಕೆ
**ಸುಖ-ದುಃಖೇಷು** - ಮತ್ತು ಸುಖ-ದುಃಖ ಮೊದಲಾದ ದ್ವಂದ್ವಗಳಲ್ಲಿ
**ಸಮಃ** - ಸಮನಾಗಿದ್ದಾನೋ
**ಚ** - ಮತ್ತು
**ಸಂಗವಿವರ್ಜಿತಃ** - ಆಸಕ್ತಿ ರಹಿತನಾಗಿದ್ದಾನೋ.

ತುಲ್ಯನಿಂದಾಸ್ತುತಿಃ, ಮೌನೀ, ಸಂತುಷ್ಟಃ, ಯೇನ, ಕೇನಚಿತ್,
ಅನಿಕೇತಃ, ಸ್ಥಿರಮತಿಃ, ಭಕ್ತಿಮಾನ್, ಮೇ, ಪ್ರಿಯಃ, ನರಃ ॥೧೯॥

**ಹಾಗೂ ಯಾರು -**

**ತುಲ್ಯನಿಂದಾಸ್ತುತಿಃ** - ನಿಂದೆ ಮತ್ತು ಸ್ತುತಿಯನ್ನು ಸಮಾನವಾಗಿ ತಿಳಿಯುತ್ತಾನೋ
**ಮೌನೀ** - ಮನನಶೀಲನಾಗಿದ್ದಾನೋ,* (ಮತ್ತು)
**ಯೇನ, ಕೇನಚಿತ್** - ಯಾವುದೇ ಪ್ರಕಾರದಿಂದಲಾದರೂ ಶರೀರ ನಿರ್ವಾಹದಲ್ಲಿ
**ಸಂತುಷ್ಟಃ** - ಸದಾ ಸಂತುಷ್ಟನಾಗಿದ್ದಾನೋ (ಮತ್ತು)
**ಅನಿಕೇತಃ** - ಇರುವ ಸ್ಥಾನದಲ್ಲಿ ಮಮತೆ ಮತ್ತು ಆಸಕ್ತಿಯಿಂದ ರಹಿತನಾಗಿದ್ದಾನೆಯೋ (ಅಂತಹ)
**ಸ್ಥಿರಮತಿಃ** - ಸ್ಥಿರಬುದ್ಧಿಯುಳ್ಳವನಾದ
**ಭಕ್ತಿಮಾನ್, ನರಃ** - ಭಕ್ತಿಯುಕ್ತ, ಪುರುಷನು
**ಮೇ, ಪ್ರಿಯಃ** - ನನಗೆ ಪ್ರಿಯನು.

ಯೇ, ತು, ಧರ್ಮ್ಯಾಮೃತಮ್, ಇದಮ್, ಯಥಾ, ಉಕ್ತಮ್, ಪರ್ಯುಪಾಸತೇ,
ಶ್ರದ್ದಧಾನಾಃ, ಮತ್ಪರಮಾಃ, ಭಕ್ತಾಃ, ತೇ, ಅತೀವ, ಮೇ, ಪ್ರಿಯಾಃ ॥೨೦॥

**ತು** - ಆದರೆ
**ಯೇ** - ಯಾರು
**ಶ್ರದ್ದಧಾನಾಃ** - ಶ್ರದ್ಧೆಯಿಂದ ಕೂಡಿದ ಪುರುಷರು†
**ಮತ್ಪರಮಾಃ** - ನನ್ನ ಪರಾಯಣರಾಗಿ
**ಇದಮ್** - ಈ
**ಯಥಾ, ಉಕ್ತಮ್** - ಮೇಲೆ ಹೇಳಿರುವ
**ಧರ್ಮ್ಯಾ-ಮೃತಮ್** - ಧರ್ಮಮಯವಾದ ಅಮೃತವನ್ನೂ
**ಪರ್ಯುಪಾಸತೇ** - ನಿಷ್ಕಾಮ ಪ್ರೇಮ ಭಾವದಿಂದ ಸೇವನೆ ಮಾಡುವರೋ
**ತೇ, ಭಕ್ತಾಃ** - ಆ ಭಕ್ತರು
**ಮೇ, ಅತೀವ** - ನನಗೆ ಅತಿಶಯವಾಗಿ
**ಪ್ರಿಯಾಃ** - ಪ್ರಿಯರಾಗಿದ್ದಾರೆ.

ಶ್ರೀ ಮದ್ಭಗವದ್ಗೀತೆ ಅಧ್ಯಾಯ 13 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ತ್ರಯೋದಶೋऽಧ್ಯಾಯಃ-ಕ್ಷೇತ್ರಕ್ಷೇತ್ರಜ್ಞವಿಭಾಗಯೋಗ ॥

ಇದಮ್, ಶರೀರಮ್, ಕೌಂತೇಯ, ಕ್ಷೇತ್ರಮ್, ಇತಿ, ಅಭಿಧೀಯತೇ,
ಏತತ್, ಯಃ, ವೇತ್ತಿ, ತಮ್, ಪ್ರಾಹುಃ, ಕ್ಷೇತ್ರಜ್ಞಃ ಇತಿ, ತದ್ವಿದಃ ॥೧॥

**ನಂತರ ಶ್ರೀಕೃಷ್ಣ ಪರಮಾತ್ಮ ಪುನಃ ಹೇಳಿದನು -**

**ಕೌಂತೇಯ** - ಹೇ ಅರ್ಜುನಾ !
**ಇದಮ್** - ಈ
**ಶರೀರಮ್** - ಶರೀರವು
**ಕ್ಷೇತ್ರಮ್** - ಕ್ಷೇತ್ರ*
**ಇತಿ** - ಈ (ಹೆಸರಿನಿಂದ), (ಮತ್ತು)
**ಏತತ್** - ಇದನ್ನು
**ಯಃ** - ಯಾರು
**ವೇತ್ತಿ** - ತಿಳಿದಿರುವನೋ
**ತಮ್** - ಅವನನ್ನು
**ಕ್ಷೇತ್ರಜ್ಞಃ** - ಕ್ಷೇತ್ರಜ್ಞ
**ಇತಿ** - ಈ (ಹೆಸರಿನಿಂದ)
**ಅಭಿಧೀಯತೇ** - ಹೇಳಲ್ಪಡುತ್ತದೆ
**ತದ್ವಿದಃ** - ಅವುಗಳ ತತ್ವಗಳನ್ನು ಅರಿತಿರುವ ಜ್ಞಾನಿಗಳು
**ಪ್ರಾಹುಃ** - ಹೀಗೆ ಹೇಳುತ್ತಾರೆ.

ಕ್ಷೇತ್ರಜ್ಞಮ್, ಚ, ಅಪಿ, ಮಾಮ್, ವಿದ್ಧಿ, ಸರ್ವಕ್ಷೇತ್ರೇಷು, ಭಾರತ,
ಕ್ಷೇತ್ರಕ್ಷೇತ್ರಜ್ಞಯೋಃ, ಜ್ಞಾನಮ್, ಯತ್, ತತ್, ಜ್ಞಾನಮ್, ಮತಮ್, ಮಮ ॥೨॥

**ಭಾರತ** - ಹೇ ಅರ್ಜುನಾ!
**ಸರ್ವಕ್ಷೇತ್ರೇಷು** - ಎಲ್ಲಾ ಕ್ಷೇತ್ರಗಳಲ್ಲಿ
**ಕ್ಷೇತ್ರಜ್ಞಮ್** - ಕ್ಷೇತ್ರಜ್ಞ ಅರ್ಥಾತ್ ಜೀವಾತ್ಮನು*
**ಅಪಿ** - ಕೂಡ (ನೀನು)
**ಮಾಮ್, ವಿದ್ಧಿ** - ನಾನೆಂದೇ ತಿಳಿ
**ಚ** - ಮತ್ತು
**ಕ್ಷೇತ್ರಕ್ಷೇತ್ರ-ಜ್ಞಯೋಃ** - ಕ್ಷೇತ್ರ-ಕ್ಷೇತ್ರಜ್ಞನ ಅರ್ಥಾತ್ ವಿಕಾರ ಸಹಿತ ಪ್ರಕೃತಿಯ ಮತ್ತು ಪುರುಷನನ್ನು
**ಯತ್** - ಯಾವುದು
**ಜ್ಞಾನಮ್** - ತತ್ವದಿಂದ ತಿಳಿಯುವು† ದಾಗಿದೆಯೋ
**ತತ್, ಜ್ಞಾನಮ್** - ಅದು ಜ್ಞಾನವಾಗಿದೆ
**(ಇತಿ)** - ಹೀಗೆಂಬ
**ಮಮ, ಮತಮ್** - ನನ್ನ ಮತವಾಗಿದೆ.

ತತ್, ಕ್ಷೇತ್ರಮ್, ಯತ್, ಚ, ಯಾದೃಕ್, ಚ, ಯದ್ವಿಕಾರಿ, ಯತಃ, ಚ, ಯತ್,
ಸಃ, ಚ, ಯಃ, ಯತ್ಪ್ರಭಾವಃ, ಚ, ತತ್, ಸಮಾಸೇನ, ಮೇ, ಶೃಣು ॥೩॥

**ಆದುದರಿಂದ -**

**ತತ್, ಕ್ಷೇತ್ರಮ್** - ಆ ಕ್ಷೇತ್ರವು
**ಯತ್, ಚ** - ಯಾವುದು ಮತ್ತು
**ಯಾದೃಕ್, ಚ** - ಹೇಗಿದೆ ಹಾಗೂ
**ಚ, ಸಃ** - ಹಾಗೂ ಆ (ಕ್ಷೇತ್ರಜ್ಞನೂ ಕೂಡ)
**ಯಃ** - ಯಾರು

| | | | |
|---|---|---|---|
| ಯದ್ವಿಕಾರಿ | - ಯಾವ ವಿಕಾರಗಳ ನ್ನುಳ್ಳದ್ದಾಗಿದೆಯೋ | ಚ | - ಮತ್ತು |
| ಚ | - ಮತ್ತು | ಯತ್ಪ್ರಭಾವಃ | - ಯಾವ ಪ್ರಭಾವ ವುಳ್ಳವನಾಗಿದ್ದಾನೆ |
| ಯತಃ | - ಯಾವುದರಿಂದ | ತತ್ | - ಅವೆಲ್ಲವನ್ನೂ |
| ಯತ್ | - ಯಾವುದು ಉಂಟಾಗಿದೆಯೋ | ಸಮಾಸೇನ | - ಸಂಕ್ಷೇಪವಾಗಿ |
| | | ಮೇ, ಶೃಣು | - ನನ್ನಿಂದ ಕೇಳು. |

ಋಷಿಭಿಃ, ಬಹುಧಾ, ಗೀತಮ್, ಛಂದೋಭಿಃ, ವಿವಿಧೈಃ, ಪೃಥಕ್,
ಬ್ರಹ್ಮಸೂತ್ರಪದೈಃ, ಚ, ಏವ, ಹೇತುಮದ್ಭಿಃ, ವಿನಿಶ್ಚಿತೈಃ ॥೪॥

**ಈ ಕ್ಷೇತ್ರ ಮತ್ತು ಕ್ಷೇತ್ರಜ್ಞರ ತತ್ತ್ವವು -**

| | | | |
|---|---|---|---|
| ಋಷಿಭಿಃ | - ಋಷಿಗಳ ಮೂಲಕ | ಚ | - ಹಾಗೂ |
| ಬಹುಧಾ | - ಅನೇಕ ಪ್ರಕಾರಗಳಿಂದ | ವಿನಿಶ್ಚಿತೈಃ | - ಚೆನ್ನಾಗಿ ನಿಶ್ಚಯಿಸಲ್ಪಟ್ಟ |
| ಗೀತಮ್ | - ಹೇಳಲ್ಪಟ್ಟಿದೆ (ಮತ್ತು) | ಹೇತುಮದ್ಭಿಃ | - ಯುಕ್ತಿಯುಕ್ತವಾದ |
| ವಿವಿಧೈಃ | - ವಿವಿಧ | ಬ್ರಹ್ಮಸೂತ್ರಪದೈಃ | - ಬ್ರಹ್ಮಸೂತ್ರದ ಪದಗಳ ಮೂಲಕವೂ |
| ಛಂದೋಭಿಃ | - ವೇದಮಂತ್ರಗಳ ಮೂಲಕವೂ | ಏವ | - ಕೂಡ |
| ಪೃಥಕ್ | - ವಿಭಾಗಪೂರ್ವಕವಾಗಿ | (ಗೀತಮ್) | - ಹೇಳಲಾಗಿದೆ. |
| (ಗೀತಮ್) | - ಹೇಳಲಾಗಿದೆ | | |

ಮಹಾಭೂತಾನಿ, ಅಹಂಕಾರಃ, ಬುದ್ಧಿಃ, ಅವ್ಯಕ್ತಮ್, ಏವ, ಚ,
ಇಂದ್ರಿಯಾಣಿ, ದಶ, ಏಕಮ್, ಚ, ಪಂಚ, ಚ, ಇಂದ್ರಿಯಗೋಚರಾಃ ॥೫॥

**ಮತ್ತು ಎಲ್ಲೈ ಅರ್ಜುನ! ಅದನ್ನೇ ನಾನು ನಿನಗೂ ಹೇಳುತ್ತೇನೆ.**

| | | | |
|---|---|---|---|
| ಮಹಾಭೂತಾನಿ | - ಐದು ಮಹಾಭೂತಗಳು* | ಇಂದ್ರಿಯಾಣಿ | - ಇಂದ್ರಿಯಗಳು † |
| ಅಹಂಕಾರಃ | - ಅಹಂಕಾರವು | ಏಕಮ್ | - ಒಂದು ಮನಸ್ಸು |
| ಬುದ್ಧಿಃ, ಚ | - ಬುದ್ಧಿ ಮತ್ತು | ಚ, ಪಂಚ | - ಮತ್ತು ಐದು |
| ಅವ್ಯಕ್ತಮ್, ಏವ | - ಮೂಲಪ್ರಕೃತಿ ಕೂಡ | ಇಂದ್ರಿಯ-ಗೋಚರಾಃ | - ಇಂದ್ರಿಯಗಳ ವಿಷಯಗಳು ಎಂದರೆ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ. |
| ಚ | - ಹಾಗೂ | | |
| ದಶ | - ಹತ್ತು | | |

ಇಚ್ಛಾ, ದ್ವೇಷಃ, ಸುಖಮ್, ದುಃಖಮ್, ಸಂಘಾತಃ, ಚೇತನಾ, ಧೃತಿಃ
ಏತತ್, ಕ್ಷೇತ್ರಮ್, ಸಮಾಸೇನ, ಸವಿಕಾರಮ್, ಉದಾಹೃತಮ್ ॥೬॥

| | | | |
|---|---|---|---|
| ಇಚ್ಛಾ | - ಇಚ್ಛೆ | ಧೃತಿಃ | - ಧೃತಿ † (ಈ ಪ್ರಕಾರ) |
| ದ್ವೇಷಃ | - ದ್ವೇಷ | ಸವಿಕಾರಮ್ | - ವಿಕಾರಗಳ ಸಹಿತ ‡ |
| ಸುಖಮ್ | - ಸುಖ | ಏತತ್ | - ಈ |
| ದುಃಖಮ್ | - ದುಃಖ | ಕ್ಷೇತ್ರಮ್ | - ಕ್ಷೇತ್ರವನ್ನು |
| ಸಂಘಾತಃ | - ಸ್ಥೂಲ ದೇಹದ ಪಿಂಡ | ಸಮಾಸೇನ | - ಸಂಕ್ಷೇಪವಾಗಿ |
| ಚೇತನಾ | - ಚೈತನ್ಯ * ಮತ್ತು | ಉದಾಹೃತಮ್ | - ಹೇಳಲಾಗಿದೆ. |

ಅಮಾನ್ವಿತಮ್, ಅದಂಭಿತ್ವಮ್, ಅಹಿಂಸಾ, ಕ್ಷಾಂತಿಃ, ಆರ್ಜವಮ್,
ಆಚಾರ್ಯೋಪಾಸನಮ್, ಶೌಚಮ್, ಸ್ಥೈರ್ಯಮ್, ಆತ್ಮವಿನಿಗ್ರಹಃ ॥೭॥

**ಮತ್ತು ಎಲೈ ಅರ್ಜುನಾ! -**

**ಅಮಾನಿತ್ವಮ್** - ಶ್ರೇಷ್ಠತೆಯ ಅಭಿಮಾನದ ಅಭಾವ

**ಅದಂಭಿತ್ವಮ್** - ಡಂಭಾಚರಣೆಯ ಅಭಾವ

**ಅಹಿಂಸಾ** - ಯಾವುದೇ ಪ್ರಾಣಿಯನ್ನು ಯಾವುದೇ ರೀತಿಯಲ್ಲಿ ಹಿಂಸಿಸದಿರುವುದು

**ಕ್ಷಾಂತಿಃ** - ಕ್ಷಮಾಭಾವ

**ಆರ್ಜವಮ್** - ಮನಸ್ಸು - ವಾಣಿ ಮೊದಲಾದುವುಗಳಲ್ಲಿ ಸರಳತೆ

**ಆಚಾರ್ಯೋ-ಪಾಸನಂ** - ಶ್ರದ್ಧಾಭಕ್ತಿಪೂರ್ವಕವಾಗಿ ಗುರುಸೇವೆ

**ಸ್ಥೈರ್ಯಮ್** - ಅಂತಃಕರಣದ ಸ್ಥಿರತೆ (ಮತ್ತು)

**ಶೌಚಮ್** - ಹೊರಗಿನ - ಒಳಗಿನ ಶುದ್ಧಿ §

**ಆತ್ಮವಿನಿಗ್ರಹಃ** - ಮನ-ಇಂದ್ರಿಯಗಳ ಸಹಿತ ಶರೀರದ ನಿಗ್ರಹ

ಇಂದ್ರಿಯಾರ್ಥೇಷು, ವೈರಾಗ್ಯಮ್, ಅನಹಂಕಾರಃ, ಏವ, ಚ,
ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಮ್ ॥೮॥

**ಇಂದ್ರಿಯಾ-ರ್ಥೇಷು** - ಈ ಲೋಕ ಮತ್ತು ಪರಲೋಕಗಳ ಸಮಸ್ತ ಭೋಗಗಳಲ್ಲಿ

**ವೈರಾಗ್ಯಮ್** - ಆಸಕ್ತಿಯ ಅಭಾವ

**ಚ** - ಮತ್ತು

**ಅನಹಂಕಾರಃ, ಏವ** - ಅಹಂಕಾರವೂ ಕೂಡ ಇಲ್ಲದಿರುವುದು

**ಜನ್ಮ-ಮೃತ್ಯು-ಜರಾ-ವ್ಯಾಧಿ ದುಃಖದೋಷಾನುದರ್ಶನಂ** - ಜನ್ಮ ಮೃತ್ಯು ಜರಾ (ಮುಪ್ಪು) ಮತ್ತು ರೋಗ ಮುಂತಾದವುಗಳಲ್ಲಿ ದುಃಖ ಮತ್ತು ದೋಷಗಳನ್ನೂ ಪದೇ ಪದೇ ವಿಚಾರಮಾಡುವುದು

ಅಸಕ್ತಿಃ, ಅನಭಿಷ್ವಂಗಃ, ಪುತ್ರದಾರಗೃಹಾದಿಷು,
ನಿತ್ಯಮ್, ಚ, ಸಮಚಿತ್ತತ್ವಮ್, ಇಷ್ಟಾನಿಷ್ಟೋಪಪತ್ತಿಷು ॥೯॥

**ಹಾಗೂ -**

**ಪುತ್ರದಾರ-ಗೃಹಾದಿಷು** - ಪುತ್ರ-ಪತ್ನೀ-ಗೃಹ ಮತ್ತು ಧನಾದಿಗಳಲ್ಲಿ

**ಅಸಕ್ತಿಃ** - ಆಸಕ್ತಿಯ ಅಭಾವ

**ಅನಭಿಷ್ವಂಗಃ** - ಮಮತೆಯಿಲ್ಲದಿರುವುದು

**ಚ, ಇಷ್ಟಾ-ನಿಷ್ಟೋಪಪತ್ತಿಷು** - ಪ್ರಿಯ ಮತ್ತು ಅಪ್ರಿಯಗಳ ಪ್ರಾಪ್ತಿಯಲ್ಲಿ

**ನಿತ್ಯಮ್** - ಸದಾ

**ಸಮಚಿತ್ತತ್ವಮ್** - ಚಿತ್ತವು ಸಮನಾಗಿರುವುದು.

ಮಯಿ, ಚ, ಅನನ್ಯಯೋಗೇನ, ಭಕ್ತಿಃ, ಅವ್ಯಭಿಚಾರಿಣೀ,
ವಿವಿಕ್ತದೇಶಸೇವಿತ್ವಮ್, ಅರತಿಃ, ಜನಸಂಸದಿ ॥೧೦॥

**ಮಯಿ** - ಪರಮೇಶ್ವರನಾದ ನನ್ನಲ್ಲಿ

**ಅನನ್ಯಯೋಗೇನ** - ಅನನ್ಯ ಯೋಗದ ಮೂಲಕ

**ಅವ್ಯಭಿಚಾರಿಣೀ** - ಅವ್ಯಭಿಚಾರಿಣಿಯಾದ

**ಭಕ್ತಿಃ** - ಭಕ್ತಿಯು*

**ಚ** - ಹಾಗೂ

**ವಿವಿಕ್ತದೇಶ-ಸೇವಿತ್ವಮ್** - ಏಕಾಂತ ಮತ್ತು ಶುದ್ಧವಾದ ದೇಶದಲ್ಲಿ ವಾಸಿಸುವ ಸ್ವಭಾವ (ಮತ್ತು)

**ಜನಸಂಸದಿ** - ವಿಷಯಾಸಕ್ತರಾದ ಮನುಷ್ಯರುಗಳ ಸಮುದಾಯದಲ್ಲಿ

**ಅರತಿಃ** - ಪ್ರೇಮವಿಲ್ಲದಿರುವಿಕೆ

ಅಧ್ಯಾತ್ಮಜ್ಞಾನನಿತ್ಯತ್ವಮ್, ತತ್ತ್ವಜ್ಞಾನಾರ್ಥದರ್ಶನಮ್, ಏತತ್,
ಜ್ಞಾನಮ್, ಇತಿ, ಪ್ರೋಕ್ತಮ್, ಅಜ್ಞಾನಮ್, ಯತ್, ಅತಃ, ಅನ್ಯಥಾ ॥೧೧॥

**ಅಧ್ಯಾತ್ಮಜ್ಞಾನ-ನಿತ್ಯತ್ವಮ್** - ಅಧ್ಯಾತ್ಮ ಜ್ಞಾನದಲ್ಲಿ † ನಿತ್ಯವಾದ ಸ್ಥಿತಿ (ಮತ್ತು)

**ತತ್ತ್ವಜ್ಞಾನಾರ್ಥ-ದರ್ಶನಮ್** - ತತ್ತ್ವಜ್ಞಾನದ ಅರ್ಥರೂಪೀ ಪರಮಾತ್ಮನನ್ನೇ ನೋಡುವುದು

**ಏತತ್** - ಇವೆಲ್ಲ

**ಜ್ಞಾನಮ್** - ಜ್ಞಾನವಾಗಿದೆ ‡ (ಮತ್ತು)

**ಯತ್** - ಯಾವುದು

**ಅತಃ** - ಇದಕ್ಕಿಂತ

**ಅನ್ಯಥಾ** - ವಿಪರೀತ ವಾಗಿದೆಯೋ

**ಅಜ್ಞಾನಮ್** - ಅದು ಅಜ್ಞಾನವಾಗಿದೆ *

**ಇತಿ** - ಹೀಗೆ

**ಪ್ರೋಕ್ತಮ್** - ಹೇಳಿದೆ.

ಜ್ಞೇಯಮ್, ಯತ್, ತತ್, ಪ್ರವಕ್ಷ್ಯಾಮಿ, ಯತ್, ಜ್ಞಾತ್ವಾ, ಅಮೃತಮ್, ಅಶ್ನುತೇ,
ಅನಾದಿಮತ್, ಪರಮ್, ಬ್ರಹ್ಮ ನ, ಸತ್, ತತ್, ನ, ಅಸತ್, ಉಚ್ಯತೇ ॥೧೨॥

ಮತ್ತು ಎಲೈ ಅರ್ಜುನಾ ! -

**ಯತ್** - ಯಾವುದು

**ಜ್ಞೇಯಮ್** - ತಿಳಿಯಲು ಯೋಗ್ಯವಾಗಿದೆಯೋ (ಹಾಗೂ)

**ಯತ್** - ಯಾವುದನ್ನು

**ಜ್ಞಾತ್ವಾ** - ತಿಳಿದು (ಮನುಷ್ಯನು)

**ಅಮೃತಮ್** - ಪರಮಾನಂದವನ್ನು

**ಅಶ್ನುತೇ** - ಪ್ರಾಪ್ತನಾಗುತ್ತಾನೆಯೋ

**ತತ್** - ಅದನ್ನು

**ಪ್ರವಕ್ಷ್ಯಾಮಿ** - ಚೆನ್ನಾಗಿ ಹೇಳುವೆನು

**ತತ್** - ಆ

**ಅನಾದಿಮತ್** - ಅನಾದಿಯಾಗಿರುವ

**ಪರಮ್** - ಪರಮ

**ಬ್ರಹ್ಮ** - ಬ್ರಹ್ಮವು

**ನ, ಸತ್, ಉಚ್ಯತೇ** - ಸತ್ ಎಂದು ಹೇಳಲಾಗುವುದಿಲ್ಲ

**ನ, ಅಸತ್** - ಅಸತ್ತೆಂದೇ ಹೇಳಲಾಗುವುದಿಲ್ಲ

ಸರ್ವತಃಪಾಣಿಪಾದಮ್, ತತ್, ಸರ್ವತೋಽಕ್ಷಿಶಿರೋಮುಖಮ್,
ಸರ್ವತಃಶ್ರುತಿಮತ್, ಲೋಕೇ, ಸರ್ವಮ್, ಆವೃತ್ಯ, ತಿಷ್ಠತಿ ॥೧೩॥

ಆದರೆ -

| | | | |
|---|---|---|---|
| **ತತ್** | - ಆ | **ಸರ್ವತಃ -** | - ಎಲ್ಲಾ ಕಡೆ |
| **ಸರ್ವತಃ-** | - ಎಲ್ಲಾ ಕಡೆ ಹಸ್ತ | **ಶ್ರುತಿಮತ್** | ಕಿವಿಗಳುಳ್ಳದ್ದು |
| **ಪಾಣಿಪಾದಮ್** | ಮತ್ತು ಪಾದಗಳುಳ್ಳದ್ದು | **ಯತಃ** | - ಏಕೆಂದರೆ ಅದು |
| | | **ಲೋಕೇ** | - ಜಗತ್ತಿನಲ್ಲಿ |
| **ಸರ್ವತೋಽ-** | - ಎಲ್ಲಾ ಕಡೆ ಕಣ್ಣು | **ಸರ್ವಮ್** | - ಎಲ್ಲವನ್ನೂ |
| **ಕ್ಷಿಶಿರೋ** | ತಲೆ ಮತ್ತು | **ಆವೃತ್ಯ** | - ವ್ಯಾಪಿಸಿ |
| **ಮುಖಮ್** | ಮುಖವುಳ್ಳದ್ದು (ಹಾಗೂ) | **ತಿಷ್ಠತಿ** | - ಸ್ಥಿತವಾಗಿದೆ.* |

ಸರ್ವೇಂದ್ರಿಯಗುಣಾಭಾಸಮ್, ಸರ್ವೇಂದ್ರಿಯವಿವರ್ಜಿತಮ್,
ಅಸಕ್ತಮ್, ಸರ್ವಭೃತ್, ಚ, ಏವ, ನಿರ್ಗುಣಮ್, ಗುಣಭೋಕ್ತೃ, ಚ ॥೧೪॥

ಮತ್ತು -

| | | | |
|---|---|---|---|
| **ಸರ್ವೇಂದ್ರಿಯ** | - ಅವನು ಸಂಪೂರ್ಣ | **ಏವ** | - ಕೂಡ |
| **ಗುಣಾಭಾಸಂ** | ಇಂದ್ರಿಯಗಳ ವಿಷಯಗಳನ್ನು ಬಲ್ಲವನಾಗಿದ್ದಾನೆ (ಆದರೆ ವಾಸ್ತವಾಗಿ) | **ಸರ್ವಭೃತ್** | - ಎಲ್ಲವನ್ನೂ ಧರಿಸಿ ಪೋಷಿಸುವವನು |
| | | **ಚ** | - ಮತ್ತು |
| **ಸರ್ವೇಂದ್ರಿಯ-** | - ಎಲ್ಲಾ ಇಂದ್ರಿಯ | **ನಿರ್ಗುಣಮ್** | - ನಿರ್ಗುಣನಾದರೂ (ಕೂಡ) |
| **ವಿವರ್ಜಿತಮ್** | ಗಳಿಂದ ರಹಿತನಾಗಿದ್ದಾನೆ | **ಗುಣಭೋಕ್ತೃ** | - ಗುಣಗಳನ್ನು ಭೋಗಿಸುವವ ನಾಗಿದ್ದಾನೆ |
| **ಚ** | - ಹಾಗೂ | | |
| **ಅಸಕ್ತಮ್** | - ಆಸಕ್ತಿರಹಿತನಾಗಿದ್ದರೂ | | |

ಬಹಿಃ, ಅಂತಃ, ಚ, ಭೂತಾನಾಮ್, ಅಚರಮ್, ಚರಮ್, ಏವ, ಚ,
ಸೂಕ್ಷ್ಮತ್ವಾತ್, ತತ್, ಅವಿಜ್ಞೇಯಮ್, ದೂರಸ್ಥಮ್, ಚ, ಅಂತಿಕೇ, ಚ, ತತ್ ॥೧೫॥

ಹಾಗೆಯೇ -

| | | | |
|---|---|---|---|
| **ಭೂತಾನಾಮ್** | - (ಅವನು) ಎಲ್ಲ ಚರಾಚರ ಭೂತಗಳ | **ಸೂಕ್ಷ್ಮತ್ವಾತ್** | - ಸೂಕ್ಷ್ಮ ನಾಗಿರುವುದರಿಂದ |
| **ಬಹಿಃ, ಅಂತಃ** | - ಹೊರಗೊಳಗೆ (ಪರಿ ಪೂರ್ಣನಾಗಿದ್ದಾನೆ) | **ಅವಿಜ್ಞೇಯಮ್** | - ಅವಿಜ್ಞೇಯ ನಾಗಿದ್ದಾನೆ * |
| | | **ಚ** | - ಹಾಗೂ |
| **ಚ, ಚರಮ್,** | - ಚರ ಮತ್ತು | **ಅಂತಿಕೇ** | - ಅತಿ ಸಮೀಪದಲ್ಲಿ † |
| **ಅಚರಮ್** | ಅಚರರೂಪಿಯೂ | **ಚ** | - ಮತ್ತು |
| **ಏವ** | - ಕೂಡ (ಅವನೇ ಆಗಿದ್ದಾನೆ) | **ದೂರಸ್ಥಮ್** | - ದೂರದಲ್ಲಿ ಸ್ಥಿತನಾದವನು ‡ |
| **ಚ, ತತ್** | - ಮತ್ತು ಅವನು | **ತತ್** | - ಅವನೇ ಆಗಿದ್ದಾನೆ |

ಅವಿಭಕ್ತಮ್, ಚ, ಭೂತೇಷು, ವಿಭಕ್ತಮ್, ಇವ, ಚ, ಸ್ಥಿತಮ್,
ಭೂತಭರ್ತೃ, ಚ, ತತ್, ಜ್ಞೇಯಮ್, ಗ್ರಸಿಷ್ಣು ಪ್ರಭವಿಷ್ಣು ಚ ॥೧೬॥

**ಹಾಗೆಯೇ ಆ ಪರಮಾತ್ಮನು -**

**ಅವಿಭಕ್ತಮ್** - ವಿಭಾಗರಹಿತನಾಗಿ ಏಕರೂಪದಿಂದ ಆಕಾಶದಂತೆ ಪರಿಪೂರ್ಣನಾದರೂ
**ಚ** - ಕೂಡ
**ಭೂತೇಷು** - ಚರಾಚರ ಸಮಸ್ತ ಭೂತಗಳಲ್ಲಿ
**ವಿಭಕ್ತಮ್, ಇವ** - ವಿಭಕ್ತನಾದವನಂತೆ
**ಸ್ಥಿತಮ್** - ಸ್ಥಿತನಾಗಿ ‡ (ತೋರುತ್ತಾನೆ)
**ಚ, ತತ್** - ಹಾಗೂ ಆ
**ಜ್ಞೇಯಮ್** - ತಿಳಿಯಲು ಯೋಗ್ಯನಾದ ಪರಮಾತ್ಮನು
**ಭೂತಭರ್ತೃ** - ವಿಷ್ಣುರೂಪದಿಂದ ಭೂತಗಳನ್ನು ಧಾರಣೆ ಪೋಷಣೆ ಮಾಡುವವನು
**ಚ, ಗ್ರಸಿಷ್ಣು** - ಮತ್ತು ರುದ್ರರೂಪದಿಂದ ಸಂಹರಿಸುವವನು
**ಚ** - ಹಾಗೂ
**ಪ್ರಭವಿಷ್ಣು** - ಬ್ರಹ್ಮನ ರೂಪದಿಂದ ಎಲ್ಲರನ್ನು ಸೃಷ್ಟಿ ಮಾಡುವವನೂ ಆಗಿದ್ದಾನೆ

ಜ್ಯೋತಿಷಾಮ್, ಅಪಿ, ತತ್, ಜ್ಯೋತಿಃ, ತಮಸಃ, ಪರಮ್, ಉಚ್ಯತೇ,
ಜ್ಞಾನಮ್, ಜ್ಞೇಯಮ್, ಜ್ಞಾನಗಮ್ಯಮ್, ಹೃದಿ, ಸರ್ವಸ್ಯ, ವಿಷ್ಠಿತಮ್ ॥೧೭॥

**ತತ್** - (ಮತ್ತು) ಆ ಪರಬ್ರಹ್ಮವು
**ಜ್ಯೋತಿಷಾಮ್** - ಜ್ಯೋತಿಗಳಿಗೂ
**ಅಪಿ** - ಕೂಡ
**ಜ್ಯೋತಿಃ** - ಜ್ಯೋತಿಯೆಂದು * (ಮತ್ತು)
**ತಮಸಃ** - ಮಾಯೆಗಿಂತ
**ಪರಮ್** - ಅತೀತವೂ
**ಜ್ಞಾನಮ್** - ಬೋಧಸ್ವರೂಪ
**ಜ್ಞೇಯಮ್** - ತಿಳಿಯಲು ಯೋಗ್ಯವೂ (ಮತ್ತು)
**ಜ್ಞಾನಗಮ್ಯಮ್** - ತತ್ವಜ್ಞಾನದಿಂದ ಪಡೆಯಲು ಯೋಗ್ಯವೂ (ಮತ್ತು)
**ಸರ್ವಸ್ಯ** - ಎಲ್ಲರ
**ಹೃದಿ** - ಹೃದಯದಲ್ಲಿ
**ವಿಷ್ಠಿತಮ್** - ವಿಶೇಷರೂಪದಿಂದ ಸ್ಥಿತವೆಂದು
**ಉಚ್ಯತೇ** - ಹೇಳಲಾಗುತ್ತದೆ.

ಇತಿ, ಕ್ಷೇತ್ರಮ್, ತಥಾ, ಜ್ಞಾನಮ್, ಜ್ಞೇಯಮ್, ಚ, ಉಕ್ತಮ್, ಸಮಾಸತಃ,
ಮದ್ಭಕ್ತಃ, ಏತತ್, ವಿಜ್ಞಾಯ, ಮದ್ಭಾವಾಯ, ಉಪಪದ್ಯತೇ ॥೧೮॥

**ಎಲೈ ಅರ್ಜುನಾ! -**

| | | | |
|---|---|---|---|
| **ಇತಿ** | - ಈ ಪ್ರಕಾರವಾಗಿ | **ಸಮಾಸತಃ** | - ಸಂಕ್ಷೇಪವಾಗಿ |
| **ಕ್ಷೇತ್ರಮ್** | - ಕ್ಷೇತ್ರ* | **ಉಕ್ತಮ್** | - ಹೇಳಲಾಯಿತು |
| **ತಥಾ, ಜ್ಞಾನಮ್** | - ಹಾಗೂ ಜ್ಞಾನವು † | **ಮದ್ಭಕ್ತಃ** | - ನನ್ನ ಭಕ್ತನು |
| **ಚ** | - ಮತ್ತು | **ಏತತ್** | - ಇದನ್ನು |
| **ಜ್ಞೇಯಮ್** | - ತಿಳಿಯಲು ಯೋಗ್ಯವಾದ ಪರಮಾತ್ಮನ ಸ್ವರೂಪ ‡ | **ವಿಜ್ಞಾಯ** | - ತತ್ತ್ವಶಃ ಅರಿತು |
| | | **ಮದ್ಭಾವಾಯ** | - ನನ್ನ ಸ್ವರೂಪವನ್ನು |
| | | **ಉಪಪದ್ಯತೇ** | - ಪಡೆಯುತ್ತಾನೆ. |

ಪ್ರಕೃತಿಮ್, ಪುರುಷಮ್, ಚ, ಏವ, ವಿದ್ಧಿ, ಅನಾದೀ, ಉಭೌ, ಅಪಿ,
ವಿಕಾರಾನ್, ಚ, ಗುಣಾನ್, ಚ, ಏವ, ವಿದ್ಧಿ, ಪ್ರಕೃತಿಸಂಭವಾನ್ ॥೧೯॥

**ಮತ್ತು ಎಲೈ ಅರ್ಜುನಾ! -**

| | | | |
|---|---|---|---|
| **ಪ್ರಕೃತಿಮ್** | - ಪ್ರಕೃತಿಯನ್ನು | **ಚ** | - ಹಾಗೂ |
| **ಚ** | - ಮತ್ತು | **ಗುಣಾನ್** | - ತ್ರಿಗುಣಾತ್ಮಕವಾದ ಸಂಪೂರ್ಣ ಪದಾರ್ಥಗಳನ್ನು |
| **ಪುರುಷಮ್** | - ಪುರುಷನನ್ನು | | |
| **ಉಭೌ, ಏವ** | - ಇವೆರಡನ್ನೂ | | |
| **ಅನಾದಿ** | - ಅನಾದಿಯೆಂದು | **ಅಪಿ** | - ಸಹ |
| **ವಿದ್ಧಿ** | - ನೀನು ತಿಳಿ | **ಪ್ರಕೃತಿ-ಸಂಭವಾನ್ ಏವ** | - ಪ್ರಕೃತಿಯಿಂದಲೇ ಉತ್ಪನ್ನವಾದುವೆಂದು |
| **ಚ** | - ಹಾಗೂ | | |
| **ವಿಕಾರಾನ್** | - ರಾಗ-ದ್ವೇಷಾದಿ ವಿಕಾರಗಳನ್ನು | **ವಿದ್ಧಿ** | - ನೀನು ತಿಳಿ. |

ಕಾರ್ಯಕರಣಕರ್ತೃತ್ವೇ, ಹೇತುಃ, ಪ್ರಕೃತಿಃ, ಉಚ್ಯತೇ,
ಪುರುಷಃ, ಸುಖದುಃಖಾನಾಮ್, ಭೋಕ್ತೃತ್ವೇ, ಹೇತುಃ, ಉಚ್ಯತೇ ॥೨೦॥

**ಏಕೆಂದರೆ -**

| | | | |
|---|---|---|---|
| **ಕಾರ್ಯಕರಣ-ಕರ್ತೃತ್ವೇ** | - ಕಾರ್ಯ ಮತ್ತು ಕರಣಗಳನ್ನು ಉತ್ಪನ್ನ ಮಾಡುವುದರಲ್ಲಿ* | **ಸುಖ-ದುಃಖಾನಾಮ್** | - ಸುಖ-ದುಃಖಗಳ |
| | | **ಭೋಕ್ತೃತ್ವೇ** | - ಭೋಕ್ತೃತ್ವದಲ್ಲಿ ಅರ್ಥಾತ್ ಭೋಗಿಸುವುದರಲ್ಲಿ |
| **ಹೇತುಃ** | - ಕಾರಣ | | |
| **ಪ್ರಕೃತಿಃ** | - ಪ್ರಕೃತಿಯು (ಎಂದು) | | |
| **ಉಚ್ಯತೇ** | - ಹೇಳಲಾಗುತ್ತದೆ (ಮತ್ತು) | **ಹೇತುಃ** | - ಕಾರಣವೆಂದು |
| | | **ಉಚ್ಯತೇ** | - ಹೇಳಲಾಗುತ್ತದೆ. |
| **ಪುರುಷಃ** | - ಜೀವಾತ್ಮನು | | |

ಪುರುಷಃ, ಪ್ರಕೃತಿಸ್ಥಃ, ಹಿ, ಭುಂಕ್ತೇ, ಪ್ರಕೃತಿಜಾನ್, ಗುಣಾನ್,
ಕಾರಣಮ್, ಗುಣಸಂಗಃ, ಅಸ್ಯ, ಸದಸದ್ಯೋನಿಜನ್ಮಸು ॥೨೧॥

**ಆದರೆ -**

| | | | |
|---|---|---|---|
| **ಪ್ರಕೃತಿಸ್ಥಃ, ಹಿ** | - ಪ್ರಕೃತಿಯಲ್ಲಿ ಸ್ಥಿತನಾದವನೇ* | **ಭುಂಕ್ತೇ** | - ಭೋಗಿಸುತ್ತಾನೆ |
| | | **ಗುಣಸಂಗಃ** | - ಆ ಗುಣಗಳ ಸಂಗವೇ |

**ಪುರುಷಃ** - ಪುರುಷನು
**ಪ್ರಕೃತಿಜಾನ್** - ಪ್ರಕೃತಿಯಿಂದ ಉತ್ಪನ್ನವಾದ
**ಗುಣಾನ್** - ತ್ರಿಗುಣಾತ್ಮಕ ಪದಾರ್ಥಗಳನ್ನು
**ಅಸ್ಯ** - ಈ ಜೀವಾತ್ಮನು
**ಸದಸದ್ಯೋನಿ-ಜನ್ಮಸು** - ಒಳ್ಳೆಯ ಕೆಟ್ಟ ಯೋನಿಗಳಲ್ಲಿ ಜನ್ಮ ಪಡೆಯುವುದಕ್ಕೆ
**ಕಾರಣಮ್** - ಕಾರಣವಾಗಿದೆ.†

ಉಪದ್ರಷ್ಟಾ, ಅನುಮಂತಾ, ಚ, ಭರ್ತಾ, ಭೋಕ್ತಾ, ಮಹೇಶ್ವರಃ,
ಪರಮಾತ್ಮಾ, ಇತಿ, ಚ, ಅಪಿ, ಉಕ್ತಃ, ದೇಹೇ, ಅಸ್ಮಿನ್, ಪುರುಷಃ, ಪರಃ ॥೨೨॥

**ಅಸ್ಮಿನ್, ದೇಹೇ** - ಈ ದೇಹದಲ್ಲಿ
**(ಸ್ಥಿತಃ) ಅಪಿ** ಸ್ಥಿತನಾಗಿದ್ದರೂ
**ಪುರುಷಃ** - ಈ ಆತ್ಮನು (ವಾಸ್ತವವಾಗಿ)
**ಪರಃ (ಏವ)** - ಪರಮಾತ್ಮನೇ ಆಗಿದ್ದಾನೆ ‡ (ಅವನೇ)
**ಉಪದ್ರಷ್ಟಾ** - ಸಾಕ್ಷಿಯಾಗಿರುವುದರಿಂದ ಉಪದ್ರಷ್ಟಾ
**ಚ** - ಮತ್ತು
**ಅನುಮಂತಾ** - ಯಥಾರ್ಥ ಸಮ್ಮತಿ ಕೊಡುವವನಾದ್ದರಿಂದ ಅನುಮಂತಾ
**ಭರ್ತಾ** - ಎಲ್ಲರ ಧಾರಣೆ-ಪೋಷಣೆ ಮಾಡುವವನಾದ್ದರಿಂದ ಭರ್ತಾ
**ಭೋಕ್ತಾ** - ಜೀವರೂಪದಿಂದ ಭೋಕ್ತಾ
**ಮಹೇಶ್ವರಃ** - ಬ್ರಹ್ಮಾ ಮೊದಲಾದವರ ಒಡೆಯನಾದ್ದರಿಂದ ಮಹೇಶ್ವರ
**ಚ, ಪರಮಾತ್ಮಾ** - ಮತ್ತು ಶುದ್ಧ ಸಚ್ಚಿದಾನಂದ ಘನನಾದ್ದರಿಂದ ಪರಮಾತ್ಮ
**ಇತಿ, ಉಕ್ತಃ** - ಎಂದು ಹೇಳಲಾಗಿದೆ.

ಯಃ, ಏವಮ್, ವೇತ್ತಿ, ಪುರುಷಮ್, ಪ್ರಕೃತಿಮ್, ಚ, ಗುಣೈಃ, ಸಹ,
ಸರ್ವಥಾ, ವರ್ತಮಾನಃ, ಅಪಿ, ನ, ಸಃ, ಭೂಯಃ, ಅಭಿಜಾಯತೇ ॥೨೩॥

**ಏವಮ್** - ಈ ಪ್ರಕಾರವಾಗಿ
**ಪುರುಷಮ್** - ಪುರುಷನನ್ನು
**ಚ** - ಮತ್ತು
**ಗುಣೈಃ** - ಗುಣಗಳ
**ಸಹ** - ಸಹಿತವಾಗಿ
**ಪ್ರಕೃತಿಮ್** - ಪ್ರಕೃತಿಯನ್ನು
**ಯಃ** - ಯಾವ ಮನುಷ್ಯನು
**ವೇತ್ತಿ** - ತತ್ತ್ವದಿಂದ ತಿಳಿಯುತ್ತಾನೋ*
**ಸಃ** - ಅವನು
**ಸರ್ವಥಾ** - ಎಲ್ಲ ಪ್ರಕಾರಗಳಿಂದ
**ವರ್ತಮಾನಃ** - ಕರ್ತವ್ಯ ಕರ್ಮಗಳನ್ನು ಮಾಡುತ್ತಿದ್ದರೂ
**ಅಪಿ** - ಕೂಡ
**ಭೂಯಃ** - ಮತ್ತೆ
**ನ, ಅಭಿಜಾಯತೇ** - ಹುಟ್ಟುವುದಿಲ್ಲ.

ಧ್ಯಾನೇನ, ಆತ್ಮನಿ, ಪಶ್ಯಂತಿ, ಕೇಚಿತ್, ಆತ್ಮಾನಮ್, ಆತ್ಮನಾ,
ಅನ್ಯೇ, ಸಾಂಖ್ಯೇನ, ಯೋಗೇನ, ಕರ್ಮಯೋಗೇನ, ಚ, ಅಪರೇ ॥೨೪॥

**ಎಲೈ ಅರ್ಜುನಾ ! ಆ ಪರಮ ಪುರುಷ -**

| | | | |
|---|---|---|---|
| **ಆತ್ಮಾನಮ್** | - ಪರಮಾತ್ಮನನ್ನು | **ಸಾಂಖ್ಯೇನ-** | - ಜ್ಞಾನಯೋಗದ † |
| **ಕೇಚಿತ್** | - ಎಷ್ಟೋ ಮನುಷ್ಯರು | **ಯೋಗೇನ** | ಮೂಲಕ |
| **ಆತ್ಮನಾ** | - ಶುದ್ಧವಾದ ಸೂಕ್ಷ್ಮಬುದ್ಧಿಯಿಂದ, | **ಚ** | - ಮತ್ತು |
| | | **ಅಪರೆ** | - ಇನ್ನೂ ಕೆಲವರು |
| **ಧ್ಯಾನೇನ** | - ಧ್ಯಾನದ ಮೂಲಕ * | **ಕರ್ಮಯೋಗೇನ**- | ಕರ್ಮಯೋಗದ ಮೂಲಕ ‡ |
| **ಆತ್ಮನಿ** | - ಹೃದಯದಲ್ಲಿ | **(ಪಶ್ಯಂತಿ)** | - ನೋಡುತ್ತಾರೆ ಅಂದರೆ ಪಡೆಯುತ್ತಾರೆ. |
| **ಪಶ್ಯಂತಿ** | - ನೋಡುತ್ತಾರೆ | | |
| **ಅನ್ಯೇ** | - ಬೇರೆ ಕೆಲವರು | | |

ಅನ್ಯೇ, ತು, ಏವಮ್, ಅಜಾನಂತಃ, ಶ್ರುತ್ವಾ, ಅನ್ಯೇಭ್ಯಃ, ಉಪಾಸತೇ,
ತೇ, ಅಪಿ, ಚ, ಅತಿತರಂತಿ, ಏವ, ಮೃತ್ಯುಮ್, ಶ್ರುತಿಪರಾಯಣಾಃ ॥೨೫॥

| | | | |
|---|---|---|---|
| **ತು** | - ಆದರೆ | **ಶ್ರುತ್ವಾ** | - ಕೇಳಿ (ಆದರಂತೆಯೇ) |
| **ಅನ್ಯೇ** | - ಇವರಿಗಿಂತ ಬೇರೆಯಾದ ಅರ್ಥಾತ್ ಯಾರು ಮಂದಬುದ್ಧಿಯುಳ್ಳ ಪುರುಷರಿದ್ದಾರೋ ಅವರು | **ಉಪಾಸತೇ** | - ಉಪಾಸನೆ ಮಾಡುತ್ತಾರೆ * |
| | | **ಚ, ತೇ** | - ಮತ್ತು ಅವರು |
| | | **ಶ್ರುತಿ ಪರಾಯಣಾಃ** | - ಶ್ರವಣ ಪರಾಯಣ ರಾದ ಪುರುಷರು |
| **ಏವಮ್** | - ಈ ಪ್ರಕಾರವಾಗಿ | **ಅಪಿ** | - ಸಹ |
| **ಅಜಾನಂತಃ** | - ತಿಳಿಯದವರಾಗಿ | **ಮೃತ್ಯುಮ್** | - ಮೃತ್ಯುರೂಪೀ ಸಂಸಾರ ಸಾಗರವನ್ನು |
| **ಅನ್ಯೇಭ್ಯಃ** | - ಇತರರಿಂದ ಅರ್ಥಾತ್ ತತ್ತ್ವವನ್ನು ಅರಿತಿರುವ ಪುರುಷರಿಂದ | **ಅತಿತರಂತಿ, ಏವ** | - ನಿಸ್ಸಂದೇಹವಾಗಿ ದಾಟುತ್ತಾರೆ. |

ಯಾವತ್, ಸಂಜಾಯತೇ, ಕಿಂಚಿತ್, ಸತ್ತ್ವಮ್, ಸ್ಥಾವರಜಂಗಮಮ್,
ಕ್ಷೇತ್ರಕ್ಷೇತ್ರಜ್ಞಸಂಯೋಗಾತ್, ತತ್, ವಿದ್ಧಿ, ಭರತರ್ಷಭ ॥೨೬॥

| | | | |
|---|---|---|---|
| **ಭರತರ್ಷಭ** | - ಹೇ ಅರ್ಜುನಾ! | **ತತ್** | - ಅವೆಲ್ಲವನ್ನೂ (ನೀನು) |
| **ಯಾವತ್** | - ಯಾವನ್ಮಾತ್ರ | | |
| **ಕಿಂಚಿತ್** | - ಎಷ್ಟು | **ಕ್ಷೇತ್ರಕ್ಷೇತ್ರಜ್ಞ- ಸಂಯೋಗಾತ್** | - ಕ್ಷೇತ್ರ ಮತ್ತು ಕ್ಷೇತ್ರಜ್ಞನ ಸಂಯೋಗದಿಂದಲೇ (ಹುಟ್ಟಿದವುಗಳೆಂದು) |
| **ಸ್ಥಾವರ- ಜಂಗಮಮ್** | - ಸ್ಥಾವರ ಜಂಗಮ | | |
| **ಸತ್ವಮ್** | - ಪ್ರಾಣಿಗಳು | | |
| **ಸಂಜಾಯತೇ** | - ಹುಟ್ಟುತ್ತವೆಯೋ | **ವಿದ್ಧಿ** | - ತಿಳಿ. |

ಸಮಮ್, ಸರ್ವೇಷು, ಭೂತೇಷು, ತಿಷ್ಠಂತಮ್, ಪರಮೇಶ್ವರಮ್,
ವಿನಶ್ಯತ್ಸು ಅವಿನಶ್ಯಂತಮ್, ಯಃ, ಪಶ್ಯತಿ, ಸಃ, ಪಶ್ಯತಿ ॥೨೭॥

**ಹೀಗೆ ತಿಳಿದುಕೊಂಡು -**

| | | | |
|---|---|---|---|
| ಯಃ | - ಯಾವ ಪುರುಷನು | ಸಮಮ್ | - ಸಮಭಾವದಿಂದ |
| ವಿನಶ್ಯತ್ಸು | - ನಷ್ಟವಾಗುತ್ತಿರುವ | ತಿಷ್ಠಂತಮ್ | - ಸ್ಥಿತನಾಗಿ |
| ಸರ್ವೇಶು | - ಎಲ್ಲ | ಪಶ್ಯತಿ | - ನೋಡುತ್ತಾನೋ |
| ಭೂತೇಷು | - ಚರಾಚರ ಭೂತಗಳಲ್ಲಿ | ಸಃ, (ಏವ) | - ಅವನೇ (ಯಥಾರ್ಥವಾಗಿ) |
| ಪರಮೇಶ್ವರಮ್ | - ಪರಮೇಶ್ವರನನ್ನು | | |
| ಅವಿನಶ್ಯಂತಮ್ | - ನಾಶರಹಿತನಾಗಿ | ಪಶ್ಯತಿ | - ನೋಡುತ್ತಾನೆ. |

ಸಮಮ್, ಪಶ್ಯನ್, ಹಿ, ಸರ್ವತ್ರ, ಸಮವಸ್ಥಿತಮ್, ಈಶ್ವರಮ್,
ನ, ಹಿನಸ್ತಿ, ಆತ್ಮನಾ, ಆತ್ಮಾನಮ್, ತತಃ, ಯಾತಿ, ಪರಾಮ್, ಗತಿಮ್ ॥೨೮॥

| | | | |
|---|---|---|---|
| ಹಿ | - ಏಕೆಂದರೆ (ಯಾವ ಪುರುಷನು) | ಪಶ್ಯನ್ | - ನೋಡುತ್ತಾ |
| | | ಆತ್ಮನಾ | - ತನ್ನ ಮೂಲಕ |
| ಸರ್ವತ್ರ | - ಎಲ್ಲರಲ್ಲಿ | ಆತ್ಮಾನಮ್ | - ತನ್ನನ್ನೂ |
| ಸಮವಸ್ಥಿತಮ್ | - ಸಮಭಾವದಿಂದ ಸ್ಥಿತವಾಗಿರುವ | ನ ಹಿನಸ್ತಿ | - ನಾಶಗೊಳಿಸುವುದಿಲ್ಲ* |
| | | ತತಃ | - ಇದರಿಂದ (ಅವನು) |
| ಈಶ್ವರಮ್ | - ಪರಮೇಶ್ವರನನ್ನು | ಪರಾಮ್, ಗತಿಮ್ | - ಪರಮ ಗತಿಯನ್ನು |
| ಸಮಮ್ | - ಸಮಾನವಾಗಿ | ಯಾತಿ | - ಪಡೆಯುತ್ತಾನೆ. |

ಪ್ರಕೃತ್ಯಾ, ಏವ, ಚ, ಕರ್ಮಾಣಿ, ಕ್ರಿಯಮಾಣಾನಿ, ಸರ್ವಶಃ,
ಯಃ, ಪಶ್ಯತಿ, ತಥಾ, ಆತ್ಮಾನಮ್, ಅಕರ್ತಾರಮ್, ಸಃ, ಪಶ್ಯತಿ ॥೨೯॥

| | | | |
|---|---|---|---|
| ಚ | - ಮತ್ತು | ಪಶ್ಯತಿ | - ನೋಡುತ್ತಾನೆ |
| ಯಃ | - ಯಾವ ಪುರುಷನು | ತಥಾ, ಆತ್ಮಾನಮ್ | - ಮತ್ತು ಆತ್ಮನನ್ನು |
| ಕರ್ಮಾಣಿ | - ಸಮಸ್ತ ಕರ್ಮಗಳನ್ನು | ಅಕರ್ತಾರಮ್ | - ಅಕರ್ತನೆಂದು |
| ಸರ್ವಶಃ | - ಎಲ್ಲಾ ಪ್ರಕಾರದಿಂದ | ಪಶ್ಯತಿ | - ನೋಡುತ್ತಾನೋ † |
| ಪ್ರಕೃತ್ಯಾ, ಏವ | - ಪ್ರಕೃತಿಯ ಮೂಲಕವೇ | ಸಃ | - ಅವನೇ (ಯಥಾರ್ಥವಾಗಿ) |
| ಕ್ರಿಯಮಾಣಾನಿ | - ಮಾಡಲ್ಪಡುವಂತೆ | (ಪಶ್ಯತಿ) | - ನೋಡುತ್ತಾನೆ. |

ಯದಾ, ಭೂತಪೃಥಗ್ಭಾವಮ್, ಏಕಸ್ಥಮ್, ಅನುಪಶ್ಯತಿ,
ತತಃ, ಏವ, ಚ, ವಿಸ್ತಾರಮ್, ಬ್ರಹ್ಮ, ಸಂಪದ್ಯತೇ, ತದಾ ॥೩೦॥

**ಮತ್ತು ಈ ಪುರುಷನು -**

| | | | |
|---|---|---|---|
| ಯದಾ | - ಯಾವ ಕ್ಷಣದಲ್ಲಿ | ವಿಸ್ತಾರಮ್ | - ಸಮಸ್ತ ಭೂತಗಳ ವಿಸ್ತಾರವನ್ನು |
| ಭೂತಪೃಥ-ಗ್ಭಾವಮ್ | - ಭೂತಗಳ ಬೇರೆ ಬೇರೆಯಾದ ಭಾವಗಳನ್ನು | ಅನುಪಶ್ಯತಿ | - ನೋಡುತ್ತಾನೋ |
| | | ತದಾ | - ಅದೇ ಕ್ಷಣ (ಅವನು) |
| ಏಕಸ್ಥಮ್ | - ಒಬ್ಬ ಪರಮಾತ್ಮನಲ್ಲೇ ಸ್ಥಿತವಿರುವುದಾಗಿ | ಬ್ರಹ್ಮ | - ಸಚ್ಚಿದಾನಂದಘನ ಬ್ರಹ್ಮವನ್ನು |
| ಚ | - ಹಾಗೂ | ಸಂಪದ್ಯತೇ | - ಪಡೆಯುತ್ತಾನೆ. |
| ತತಃ, ಏವ | - ಆ ಪರಮಾತ್ಮನಲ್ಲಿಯೇ | | |

ಅನಾದಿತ್ವಾತ್, ನಿರ್ಗುಣತ್ವಾತ್, ಪರಮಾತ್ಮಾ ಅಯಮ್, ಅವ್ಯಯಃ

ಶರೀರಸ್ಥಃ ಅಪಿ, ಕೌಂತೇಯ, ನ, ಕರೋತಿ, ನ, ಲಿಪ್ಯತೇ ॥೩೧॥

| | | | |
|---|---|---|---|
| **ಕೌಂತೇಯ** | - ಹೇ ಅರ್ಜುನಾ! | **ಪರಮಾತ್ಮಾ** | - ಪರಮಾತ್ಮನು |
| **ಅನಾದಿತ್ವಾತ್** | - ಅನಾದಿಯಾದ್ದರಿಂದ (ಮತ್ತು) | **ಶರೀರಸ್ಥಃ** | - ಶರೀರದಲ್ಲಿ ಸ್ಥಿತನಾಗಿದ್ದರೂ |
| **ನಿರ್ಗುಣತ್ವಾತ್** | - ನಿರ್ಗುಣ ನಾದ್ದರಿಂದ | **ಅಪಿ** | - ಕೂಡ (ವಾಸ್ತವದಲ್ಲಿ) |
| **ಅಯಮ್** | - ಈ | **ನ, ಕರೋತಿ** | - ಏನು ಮಾಡುವುದಿಲ್ಲ |
| **ಅವ್ಯಯಃ** | - ಅವಿನಾಶಿಯಾದ | **ನ, ಲಿಪ್ಯತೇ** | - ಲಿಪ್ತನಾಗುವುದೂ ಇಲ್ಲ |

ಯಥಾ, ಸರ್ವಗತಮ್, ಸೌಕ್ಷ್ಮ್ಯಾತ್, ಆಕಾಶಮ್, ನ, ಉಪಲಿಪ್ಯತೇ,

ಸರ್ವತ್ರ, ಅವಸ್ಥಿತಃ ದೇಹೇ, ತಥಾ, ಆತ್ಮಾ, ನ, ಉಪಲಿಪ್ಯತೇ ॥೩೨॥

| | | | |
|---|---|---|---|
| **ಯಥಾ** | - ಯಾವ ಪ್ರಕಾರ, | **ತಥಾ** | - ಅಂತೆಯೇ |
| **ಸರ್ವಗತಮ್** | - ಸರ್ವತ್ರವ್ಯಾಪಿಸಿರುವ | **ದೇಹೆ, ಸರ್ವತ್ರ** | - ದೇಹದಲ್ಲಿ ಸರ್ವತ್ರ |
| **ಆಕಾಶಮ್** | - ಆಕಾಶವು | **ಅವಸ್ಥಿತಃ** | - ಸ್ಥಿತವಾಗಿರುವ |
| **ಸೌಕ್ಷ್ಮ್ಯಾತ್** | - ಸೂಕ್ಷ್ಮವಾಗಿರುವ ಕಾರಣ | **ಆತ್ಮಾ** | - ಆತ್ಮನು |
| **ನ, ಉಪಲಿಪ್ಯತೇ** | - ಲಿಪ್ತವಾಗುವುದಿಲ್ಲವೋ | **ನ, ಉಪಲಿಪ್ಯತೇ** | - ನಿರ್ಗುಣನಾದ ಕಾರಣ ದೇಹದ ಗುಣಗಳಿಂದ ಲಿಪ್ತನಾಗುವುದಿಲ್ಲ |

ಯಥಾ, ಪ್ರಕಾಶಯತಿ, ಏಕಃ, ಕೃತ್ಸ್ನಮ್, ಲೋಕಮ್, ಇಮಮ್, ರವಿಃ,

ಕ್ಷೇತ್ರಮ್, ಕ್ಷೇತ್ರೀ, ತಥಾ, ಕೃತ್ಸ್ನಮ್, ಪ್ರಕಾಶಯತಿ, ಭಾರತ ॥೩೩॥

| | | | |
|---|---|---|---|
| **ಭಾರತ** | - ಹೇ ಅರ್ಜುನಾ! | **ಪ್ರಕಾಶಯತಿ** | - ಪ್ರಕಾಶಿಸುತ್ತಾನೋ |
| **ಯಥಾ** | - ಯಾವ ಪ್ರಕಾರ | **ತಥಾ** | - ಅದೇ ಪ್ರಕಾರ |
| **ಏಕಃ, ರವಿಃ** | - ಒಬ್ಬನೇ ಸೂರ್ಯನು | **ಕ್ಷೇತ್ರೀ** | - ಒಬ್ಬನೇ ಆತ್ಮನು |
| **ಇಮಮ್** | - ಈ | **ಕೃತ್ಸ್ನಮ್** | - ಸಂಪೂರ್ಣ |
| **ಕೃತ್ಸ್ನಮ್** | - ಸಮಸ್ತ | **ಕ್ಷೇತ್ರಮ್** | - ಕ್ಷೇತ್ರವನ್ನು |
| **ಲೋಕಮ್** | - ಬ್ರಹ್ಮಾಂಡವನ್ನು | **ಪ್ರಕಾಶಯತಿ** | - ಪ್ರಕಾಶಿಸುತ್ತಾನೆ |

ಕ್ಷೇತ್ರಕ್ಷೇತ್ರಜ್ಞಯೋಃ, ಏವಮ್, ಅಂತರಮ್, ಜ್ಞಾನಚಕ್ಷುಷಾ,

ಭೂತಪ್ರಕೃತಿಮೋಕ್ಷಮ್, ಚ, ಯೇ, ವಿದುಃ, ಯಾಂತಿ, ತೇ, ಪರಮ್ ॥೩೪॥

| | | | |
|---|---|---|---|
| **ಏವಮ್** | - ಈ ಪ್ರಕಾರವಾಗಿ | **ಯೇ** | - ಯಾವ |
| **ಕ್ಷೇತ್ರ-ಕ್ಷೇತ್ರಜ್ಞಯೋಃ** | - ಕ್ಷೇತ್ರ ಮತ್ತು ಕ್ಷೇತ್ರಜ್ಞರ | **ಜ್ಞಾನಚಕ್ಷುಷಾ** | - ಜ್ಞಾನನೇತ್ರಗಳ ಮೂಲಕ |
| **ಅಂತರಮ್** | - ಭೇದವನ್ನು * | **ವಿದುಃ** | - ತತ್ವಶಃ ತಿಳಿಯುತ್ತಾರೋ |
| **ಚ** | - ಹಾಗೂ | | |
| **ಭೂತಪ್ರಕೃತಿ-ಮೋಕ್ಷಮ್** | - ಪ್ರಕೃತಿ ಮತ್ತು ಪ್ರಕೃತಿಯ ಕಾರ್ಯಗಳಿಂದ ಮುಕ್ತರಾಗುವುದನ್ನು | **ತೇ** | - ಆ ಮಹಾತ್ಮರು |
| | | **ಪರಮ್** | - ಪರಬ್ರಹ್ಮ ಪರಮಾತ್ಮನನ್ನು |
| | | **ಯಾಂತಿ** | - ಪಡೆಯುತ್ತಾರೆ. |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 14 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ಚತುರ್ದಶೋऽಧ್ಯಾಯಃ - ಗುಣತ್ರಯವಿಭಾಗಯೋಗ ॥

ಪರಮ್, ಭೂಯಃ, ಪ್ರವಕ್ಷ್ಯಾಮಿ, ಜ್ಞಾನಾನಾಮ್, ಜ್ಞಾನಮ್, ಉತ್ತಮಮ್,
ಯತ್, ಜ್ಞಾತ್ವಾ, ಮುನಯಃ, ಸರ್ವೇ, ಪರಾಮ್, ಸಿದ್ಧಿಮ್, ಇತಃ, ಗತಾಃ ॥೧॥

**ನಂತರ ಶ್ರೀಕೃಷ್ಣ ಹೇಳಿದನು, ಎಲೈ ಅರ್ಜುನಾ ! -**

| | | | |
|---|---|---|---|
| **ಯತ್** | - ಯಾವುದನ್ನು | **ಗತಾಃ** | - ಪ್ರಾಪ್ತರಾಗಿದ್ದಾರೆ |
| **ಜ್ಞಾತ್ವಾ** | - ತಿಳಿದುಕೊಂಡು | **ಜ್ಞಾನಾನಾಮ್** | - ಜ್ಞಾನಗಳಲ್ಲಿ ಕೂಡ |
| **ಸರ್ವೇ** | - ಎಲ್ಲ | **ಉತ್ತಮಮ್- (ತತ್)** | - ಅತ್ಯುತ್ತಮವಾದ ಆ, |
| **ಮುನಯಃ** | - ಮುನಿಜನರು | **ಪರಮ್** | - ಪರಮ |
| **ಇತಃ** | - ಈ ಜಗತ್ತಿನಿಂದ (ಮುಕ್ತರಾಗಿ) | **ಜ್ಞಾನಮ್** | - ಜ್ಞಾನವನ್ನು |
| **ಪರಾಮ್** | - ಪರಮ | **ಭೂಯಃ** | - ಪುನಃ (ನಾನು) |
| **ಸಿದ್ಧಿಮ್** | - ಸಿದ್ಧಿಗೆ | **ಪ್ರವಕ್ಷ್ಯಾಮಿ** | - ಹೇಳುವೆನು. |

ಇದಮ್, ಜ್ಞಾನಮ್, ಉಪಾಶ್ರಿತ್ಯ, ಮಮ, ಸಾಧರ್ಮ್ಯಮ್, ಆಗತಾಃ,
ಸರ್ಗೇ, ಅಪಿ, ನ, ಉಪಜಾಯಂತೇ, ಪ್ರಲಯೇ, ನ, ವ್ಯಥಂತಿ, ಚ ॥೨॥

**ಎಲೈ ಅರ್ಜುನಾ ! -**

| | | | |
|---|---|---|---|
| **ಇದಮ್, ಜ್ಞಾನಮ್** | - ಈ ಜ್ಞಾನವನ್ನು | **ನ, ಉಪ- ಜಾಯಂತೇ** | - ಉತ್ಪನ್ನವಾಗುವುದಿಲ್ಲ |
| **ಉಪಾಶ್ರಿತ್ಯ** | - ಆಶ್ರಯಿಸಿ ಅರ್ಥಾತ್ ಧಾರಣೆಮಾಡಿ | **ಚ** | - ಮತ್ತು |
| **ಮಮ** | - ನನ್ನ | **ಪ್ರಲಯೇ** | - ಪ್ರಳಯಕಾಲದಲ್ಲಿ |
| **ಸಾಧರ್ಮ್ಯಮ್** | - ಸ್ವರೂಪಕ್ಕೆ | **ಅಪಿ** | - ಕೂಡ |
| **ಆಗತಾಃ** | - ಪ್ರಾಪ್ತರಾದ ಪುರುಷರು | **ನ, ವ್ಯಥಂತಿ** | - ವ್ಯಾಕುಲ ರಾಗುವುದಿಲ್ಲ. |
| **ಸರ್ಗೇ** | - ಸೃಷ್ಟಿಯ ಆದಿಯಲ್ಲಿ (ಪುನಃ) | | |

ಮಮ, ಯೋನಿಃ, ಮಹತ್, ಬ್ರಹ್ಮ, ತಸ್ಮಿನ್, ಗರ್ಭಮ್, ದಧಾಮಿ,
ಅಹಮ್, ಸಂಭವಃ, ಸರ್ವಭೂತಾನಾಮ್, ತತಃ, ಭವತಿ, ಭಾರತ ॥೩॥

| | | | |
|---|---|---|---|
| **ಭಾರತ** | - ಹೇ ಅರ್ಜುನಾ! | **ಅಹಮ್** | - ನಾನು |
| **ಮಮ** | - ನನ್ನ | **ತಸ್ಮಿನ್** | - ಆ ಯೋನಿಯಲ್ಲಿ |
| **ಮಹತ್, ಬ್ರಹ್ಮ** | - ಮಹತ್, ಬ್ರಹ್ಮರೂಪವಾದ ಮೂಲಪ್ರಕೃತಿಯು | **ಗರ್ಭಮ್** | - ಚೇತನ- ಸಮುದಾಯರೂಪೀ ಗರ್ಭವನ್ನು |

| | | | |
|---|---|---|---|
| **ಯೋನಿಃ** | - ಸಂಪೂರ್ಣ ಭೂತಗಳ ಯೋನಿಯಾಗಿದೆ ಅರ್ಥಾತ್ ಗರ್ಭಾಧಾನದ ಸ್ಥಾನವಾಗಿದೆ (ಮತ್ತು) | **ದಧಾಮಿ** | - ಸ್ಥಾಪಿಸುತ್ತೇನೆ |
| | | **ತತಃ** | - ಆ ಜಡ-ಚೇತನದ ಸಂಯೋಗದಿಂದ |
| | | **ಸರ್ವಭೂತಾನಾಮ್** | - ಎಲ್ಲ ಭೂತಗಳ |
| | | **ಸಂಭವಃ** | - ಉತ್ಪತ್ತಿಯು |
| | | **ಭವತಿ** | - ಉಂಟಾಗುತ್ತದೆ. |

ಸರ್ವಯೋನಿಷು, ಕೌಂತೇಯ, ಮೂರ್ತಯಃ, ಸಂಭವಂತಿ, ಯಾಃ,
ತಾಸಾಮ್, ಬ್ರಹ್ಮ, ಮಹತ್, ಯೋನಿಃ, ಅಹಮ್, ಬೀಜಪ್ರದಃ, ಪಿತಾ ॥೪॥

**ಹಾಗೂ -**

| | | | |
|---|---|---|---|
| **ಕೌಂತೇಯ** | - ಹೇ ಅರ್ಜುನಾ! | **ಮಹತ್, ಬ್ರಹ್ಮ** | - ಪ್ರಕೃತಿ (ಯಾದರೋ) |
| **ಸರ್ವಯೋನಿಷು** | - ನಾನಾ ಪ್ರಕಾರದ ಎಲ್ಲಾ ಯೋನಿಗಳಲ್ಲಿ | **ತಾಸಾಮ್** | - ಅವೆಲ್ಲದರ |
| **ಯಾಃ** | - ಎಷ್ಟು | **ಯೋನಿಃ** | - ಗರ್ಭಧಾರಣೆ ಮಾಡುವ ಮಾತೆಯಾಗಿದ್ದಾಳೆ |
| **ಮೂರ್ತಯಃ** | - ಮೂರ್ತಿಗಳು ಅರ್ಥಾತ್ ಶರೀರಧಾರಿ ಪ್ರಾಣಿಗಳು | **ಅಹಮ್** | - (ಮತ್ತು) ನಾನು |
| | | **ಬೀಜಪ್ರದಃ** | - ಬೀಜವನ್ನು ಸ್ಥಾಪಿಸುವ |
| **ಸಂಭವಂತಿ** | - ಹುಟ್ಟುತ್ತವೆಯೋ | **ಪಿತಾ** | - ಪಿತಾ ಆಗಿದ್ದೇನೆ. |

ಸತ್ತ್ವಮ್, ರಜಃ, ತಮಃ, ಇತಿ, ಗುಣಾಃ, ಪ್ರಕೃತಿಸಂಭವಾಃ,
ನಿಬಧ್ನಂತಿ, ಮಹಾಬಾಹೋ, ದೇಹೇ, ದೇಹಿನಮ್, ಅವ್ಯಯಮ್ ॥೫॥

| | | | |
|---|---|---|---|
| **ಮಹಾಬಾಹೋ** | - ಹೇ ಅರ್ಜುನಾ ! | **ಗುಣಾಃ** | - ಮೂರೂ ಗುಣಗಳೂ |
| **ಸತ್ತ್ವಮ್** | - ಸತ್ವಗುಣ | **ಅವ್ಯಯಮ್** | - ಅವಿನಾಶಿಯಾದ |
| **ರಜಃ** | - ರಜೋಗುಣ ಮತ್ತು | **ದೇಹಿನಮ್** | - ಜೀವಾತ್ಮನನ್ನು |
| **ತಮಃ, ಇತಿ** | - ತಮೋಗುಣ ಇವು | **ದೇಹೇ** | - ಶರೀರದಲ್ಲಿ |
| **ಪ್ರಕೃತಿಸಂಭವಾಃ** | - ಪ್ರಕೃತಿಯಿಂದ ಉತ್ಪನ್ನವಾಗಿ | **ನಿಬಧ್ನಂತಿ** | - ಬಂಧಿಸುತ್ತವೆ. |

ನ, ಅನ್ಯಮ್, ಗುಣೇಭ್ಯಃ, ಕರ್ತಾರಮ್, ಯದಾ, ದ್ರಷ್ಟಾ, ಅನುಪಶ್ಯತಿ,
ಗುಣೇಭ್ಯಃ, ಚ, ಪರಮ್, ವೇತ್ತಿ, ಮದ್ಭಾವಮ್, ಸಃ, ಅಧಿಗಚ್ಛತಿ ॥೧೯॥

**ಮತ್ತು ಎಲೈ ಅರ್ಜುನಾ ! -**

| | | | |
|---|---|---|---|
| **ಯದಾ** | - ಯಾವ ಸಮಯದಲ್ಲಿ | **ಕರ್ತಾರಮ್** | - ಕರ್ತನೆಂದು |
| **ದ್ರಷ್ಟಾ** | - ದ್ರಷ್ಟಾ* ಪುರುಷನು | **ನ, ಅನುಪಶ್ಯತಿ** | - ನೋಡುವುದಿಲ್ಲ |
| **ಗುಣೇಭ್ಯಃ** | - ಮೂರೂ ಗುಣಗಳನ್ನಲ್ಲದೆ | **ಚ** | - ಮತ್ತು |
| | | **ಗುಣೇಭ್ಯಃ** | - ಮೂರೂ ಗುಣಗಳಿಗಿಂತ |
| **ಅನ್ಯಮ್** | - ಬೇರೆ ಯಾರನ್ನೂ | | |

| | | | |
|---|---|---|---|
| ಪರಮ್ | - ಅತ್ಯಂತ ಶ್ರೇಷ್ಠನಾದ ಸಚ್ಚಿದಾನಂದ ಘನಸ್ವರೂಪೀ ಪರಮಾತ್ಮನಾದ ನನ್ನನ್ನು | | ತಿಳಿಯುತ್ತಾನೋ (ಆ ಸಮಯ) |
| | | ಸಃ | - ಅವನು |
| | | ಮದ್ಭಾವಮ್ | - ನನ್ನ ಸ್ವರೂಪವನ್ನೂ |
| | | ಅಧಿಗಚ್ಛತಿ | - ಪಡೆಯುತ್ತಾನೆ. |
| ವೇತ್ತಿ | - ತತ್ವಶಃ | | |

ಗುಣಾನ್, ಏತಾನ್, ಅತೀತ್ಯ, ತ್ರೀನ್, ದೇಹೀ, ದೇಹಸಮುದ್ಭವಾನ್,
ಜನ್ಮಮೃತ್ಯುಜರಾದುಃಖೈಃ, ವಿಮುಕ್ತಃ, ಅಮೃತಮ್, ಅಶ್ನುತೇ ॥೨೦॥

**ಹಾಗೂ ಈ -**

| | | | |
|---|---|---|---|
| ದೇಹೀ | - ಪುರುಷನು | ಜನ್ಮಮೃತ್ಯು-ಜರಾದುಃಖೈಃ | - ಜನ್ಮ ಮೃತ್ಯು, ವೃದ್ಧಾವಸ್ಥೆ ಮತ್ತು ಎಲ್ಲ ಪ್ರಕಾರದ ದುಃಖಗಳಿಂದ |
| ದೇಹ-ಸಮುದ್ಭವಾನ್ | - ಶರೀರದ ಉತ್ಪತ್ತಿಗೆ* ಕಾರಣರೂಪವಾದ | | |
| ಏತಾನ್, ತ್ರೀನ್ | - ಈ ಮೂರೂ | ವಿಮುಕ್ತಃ | - ಮುಕ್ತನಾಗಿ |
| ಗುಣಾನ್ | - ಗುಣಗಳನ್ನು | ಅಮೃತಮ್ | - ಪರಮಾನಂದವನ್ನು |
| ಅತೀತ್ಯ | - ದಾಟಿಕೊಂಡು | ಅಶ್ನುತೇ | - ಪಡೆಯುತ್ತಾನೆ. |

ಸಮದುಃಖಸುಖಃ, ಸ್ವಸ್ಥಃ, ಸಮಲೋಷ್ಟಾಶ್ಮಕಾಂಚನಃ,
ತುಲ್ಯಪ್ರಿಯಾಪ್ರಿಯಃ, ಧೀರಃ, ತುಲ್ಯನಿಂದಾತ್ಮಸಂಸ್ತುತಿಃ ॥೨೪॥

**ಮತ್ತು ಯಾರು -**

| | | | |
|---|---|---|---|
| ಸ್ವಸ್ಥಃ | - ನಿರಂತರ ಆತ್ಮಭಾವದಲ್ಲಿ ಸ್ಥಿತನಾಗಿದ್ದಾನೋ | ಧೀರಃ | - ಜ್ಞಾನಿಯಾಗಿದ್ದಾನೋ |
| ಸಮದುಃಖಸುಖಃ | - ಸುಖ-ದುಃಖಗಳನ್ನು ಸಮನಾಗಿ ತಿಳಿಯುತ್ತಾನೋ | ತುಲ್ಯಪ್ರಿಯಾ-ಪ್ರಿಯಃ | - ಪ್ರಿಯ ಮತ್ತು ಅಪ್ರಿಯವನ್ನು ಒಂದೇ ಎಂದು ತಿಳಿಯುತ್ತಾನೋ ಮತ್ತು |
| ಸಮಲೋಷ್ಟಾಶ್ಮ-ಕಾಂಚನಃ | - ಮಣ್ಣು ಕಲ್ಲು ಮತ್ತು ಚಿನ್ನಗಳಲ್ಲಿ ಸಮಾನವಾದ ಭಾವವುಳ್ಳವನಾಗಿದ್ದಾನೋ | ತುಲ್ಯನಿಂದಾತ್ಮ-ಸಂಸ್ತುತಿಃ | - ತನ್ನ ನಿಂದಾ ಸ್ತುತಿಯಲ್ಲಿ ಕೂಡ ಸಮಭಾವವುಳ್ಳವನಾಗಿದ್ದಾನೋ |

ಮಾಮ್, ಚ, ಯಃ, ಅವ್ಯಭಿಚಾರೇಣ, ಭಕ್ತಿಯೋಗೇನ, ಸೇವತೇ,
ಸಃ, ಗುಣಾನ್, ಸಮತೀತ್ಯ, ಏತಾನ್, ಬ್ರಹ್ಮಭೂಯಾಯ, ಕಲ್ಪತೇ ॥೨೬॥

| | | | |
|---|---|---|---|
| ಚ | - ಮತ್ತು | ಅವ್ಯಭಿಚಾರೇಣ | - ಅವ್ಯಭಿಚಾರೀ |
| ಯಃ | - ಯಾವ ಪುರುಷನು | ಭಕ್ತಿಯೋಗೇನ | - ಭಕ್ತಿಯೋಗದ ಮೂಲಕ * |

| | | | |
|---|---|---|---|
| **ಮಾಮ್** | - ನನ್ನನ್ನು | **ಸಮತೀತ್ಯ** | - ಚೆನ್ನಾಗಿ ದಾಟಿಕೊಂಡು |
| **ಸೇವತೇ** | - ನಿರಂತರ ಭಜಿಸುತ್ತಾನೋ | **ಬ್ರಹ್ಮಭೂ-ಯಾಯ** | - ಸಚ್ಚಿದಾನಂದ ಘನನಾದ ಬ್ರಹ್ಮವನ್ನು ಪಡೆಯಲು |
| **ಸಃ** | - ಅವನು (ಕೂಡ) | | |
| **ಏತಾನ್** | - ಈ | | |
| **ಗುಣಾನ್** | - ಮೂರೂ ಗುಣಗಳನ್ನು | **ಕಲ್ಪತೇ** | - ಯೋಗ್ಯನಾಗುತ್ತಾನೆ. |

ಬ್ರಹ್ಮಣಃ, ಹಿ, ಪ್ರತಿಷ್ಠಾ, ಅಹಮ್, ಅಮೃತಸ್ಯ, ಅವ್ಯಯಸ್ಯ, ಚ,
ಶಾಶ್ವತಸ್ಯ, ಚ, ಧರ್ಮಸ್ಯ, ಸುಖಸ್ಯ, ಐಕಾಂತಿಕಸ್ಯ, ಚ ॥೨೭॥

**ಮತ್ತು ಎಲೈ ಅರ್ಜುನಾ ! -**

| | | | |
|---|---|---|---|
| **ಹಿ** | - ಏಕೆಂದರೆ (ಆ) | **ಧರ್ಮಸ್ಯ** | - ಧರ್ಮದ |
| **ಅವ್ಯಯಸ್ಯ** | - ಅವಿನಾಶಿಯಾದ | **ಚ** | - ಮತ್ತು |
| **ಬ್ರಹ್ಮಣಃ** | - ಪರಬ್ರಹ್ಮನ | **ಐಕಾಂತಿಕಸ್ಯ** | - ಅಖಂಡ ಏಕರಸ |
| **ಚ** | - ಮತ್ತು | **ಸುಖಸ್ಯ** | - ಆನಂದದ |
| **ಅಮೃತಸ್ಯ** | - ಅಮೃತದ | **ಪ್ರತಿಷ್ಠಾ** | - ಆಶ್ರಯವು |
| **ಚ** | - ಹಾಗೂ | **ಅಹಮ್** | - ನಾನಾಗಿದ್ದೇನೆ |
| **ಶಾಶ್ವತಸ್ಯ** | - ನಿತ್ಯವಾದ | | |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 15 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ಪಂಚದಶೋಽಧ್ಯಾಯಃ - ಪುರುಷೋತ್ತಮಯೋಗ ॥

ಊರ್ಧ್ವಮೂಲಮ್, ಅಧಃಶಾಖಮ್, ಅಶ್ವತ್ಥಮ್, ಪ್ರಾಹುಃ, ಅವ್ಯಯಮ್,
ಛಂದಾಂಸಿ, ಯಸ್ಯ, ಪರ್ಣಾನಿ, ಯಃ, ತಮ್, ವೇದ, ಸಃ, ವೇದವಿತ್ ॥೧॥

**ನಂತರ ಶ್ರೀಕೃಷ್ಣ ಪುನಃ ಹೇಳಿದನು - ಎಲೈ ಅರ್ಜುನಾ ! -**

| | | | |
|---|---|---|---|
| **ಊರ್ಧ್ವ-ಮೂಲಮ್** | - ಆದಿಪುರುಷ ಪರಮೇಶ್ವರನು ಯಾವುದರ ಬೇರು* ಆಗಿದೆಯೋ | **ಅಧಃಶಾಖಮ್** | - ಬ್ರಹ್ಮದೇವರು ಯಾವುದರ ಮುಖ್ಯ ಕೊಂಬೆ † ಯಾಗಿದ್ದಾರೋ |
| **ಅಶ್ವತ್ಥಮ್** | - ಆ ಜಗದ್ರೂಪಿ ಅಶ್ವತ್ಥ ವೃಕ್ಷವನ್ನು | **ತಮ್** | - ಆ ಜಗದ್ರೂಪೀ ಅಶ್ವತ್ಥ ವೃಕ್ಷವನ್ನು |
| **ಅವ್ಯಯಮ್** | - ಅವಿನಾಶೀ‡ ಎಂದು | **ಯಃ** | - ಯಾರು |
| **ಪ್ರಾಹುಃ** | - ಹೇಳುತ್ತಾರೆ (ಹಾಗೂ) | **ವೇದ** | - ತತ್ತ್ವದಿಂದ ತಿಳಿಯುತ್ತಾನೋ |
| **ಛಂದಾಂಸೀ** | - ವೇದಗಳು§ | **ಸಃ** | - ಅವನು |
| **ಯಸ್ಯ** | - ಯಾವ ಮರದ | **ವೇದವಿತ್** | - ವೇದಗಳ ತಾತ್ಪರ್ಯವನ್ನು ತಿಳಿದವನಾಗಿದ್ದಾನೆ.¶ |
| **ಪರ್ಣಾನಿ** | - ಎಲೆಗಳು ಎಂದು (ಹೇಳಲ್ಪಟ್ಟಿದೆಯೋ) | | |

ಅಧಃ, ಚ, ಊರ್ಧ್ವಮ್, ಪ್ರಸೃತಾಃ, ತಸ್ಯ, ಶಾಖಾಃ, ಗುಣಪ್ರವೃದ್ಧಾಃ,
ವಿಷಯಪ್ರವಾಲಾಃ, ಅಧಃ, ಚ, ಮೂಲಾನಿ, ಅನುಸಂತತಾನಿ,
ಕರ್ಮಾನುಬಂಧೀನಿ, ಮನುಷ್ಯಲೋಕೇ ॥೨॥

**ಮತ್ತು ಎಲೈ ಅರ್ಜುನಾ! -**

| | |
|---|---|
| **ತಸ್ಯ** | - ಆ ಜಗತ್ತೆಂಬ ಅಶ್ವತ್ಥವೃಕ್ಷದ |
| **ಗುಣಪ್ರವೃದ್ಧಾಃ** | - ಮೂರೂ ಗುಣರೂಪೀ ನೀರಿನಿಂದ ಬೆಳೆದಿರುವ (ಮತ್ತು) |
| **ವಿಷಯ-ಪ್ರವಾಲಾಃ** | - ವಿಷಯ * ಭೋಗರೂಪೀ ಚಿಗುರುಗಳುಳ್ಳ |
| **ಶಾಖಾಃ** | - ದೇವ, ಮನುಷ್ಯ ಮತ್ತು ತಿರ್ಯಕ್ ಮೊದಲಾದ ಯೋನಿರೂಪೀ ಕೊಂಬೆಗಳು † |
| **ಅಧಃ, ಚ** | - ಕೆಳಗೆ ಮತ್ತು |
| **ಊರ್ಧ್ವಮ್** | - ಮೇಲೆ |
| **ಪ್ರಸೃತಾಃ** | - ಎಲ್ಲೆಡೆ ಹರಡಿಕೊಂಡಿವೆ (ಹಾಗೂ) |
| **ಮನುಷ್ಯಲೋಕೇ** | - ಮನುಷ್ಯಜನ್ಮದಲ್ಲಿ ‡ |
| **ಕರ್ಮಾನು-ಬಂಧೀನಿ** | - ಕರ್ಮಗಳಿಗನು ಗುಣವಾಗಿ ಬಂಧಿಸುವಂತಹ |
| **ಮೂಲಾನಿ** | - ಅಹಂತೆ, ಮಮತೆ ಮತ್ತು ವಾಸನಾರೂಪೀ ಬಿಳಲುಗಳು |
| **(ಅಪಿ)** | - ಕೂಡ |
| **ಅಧಃ, ಚ** | - ಕೆಳಗೆ ಮತ್ತು |
| **(ಊರ್ಧ್ವಮ್)** | - ಮೇಲೆ |
| **ಅನುಸಂತತಾನಿ** | - ಎಲ್ಲ ಲೋಕಗಳಲ್ಲಿ ಹರಡಿಕೊಳ್ಳುತ್ತವೆ. |

ನ, ರೂಪಮ್, ಅಸ್ಯ, ಇಹ, ತಥಾ, ಉಪಲಭ್ಯತೇ, ನ, ಅಂತಃ, ನ,
ಚ, ಆದಿಃ, ನ, ಚ, ಸಂಪ್ರತಿಷ್ಠಾ, ಅಶ್ವತ್ಥಮ್, ಏನಮ್,
ಸುವಿರೂಢಮೂಲಮ್, ಅಸಂಗಶಸ್ತ್ರೇಣ, ದೃಢೇನ, ಛಿತ್ತ್ವಾ ॥೩॥

**ಆದರೆ -**

| | |
|---|---|
| **ಅಸ್ಯ** | - ಈ ಜಗದ್ರೂಪೀ ವೃಕ್ಷದ |
| **ರೂಪಮ್** | - ಸ್ವರೂಪವು ಹೇಗೆ ಹೇಳಿದೆಯೋ |
| **ತಥಾ** | - ಹಾಗೆ |
| **ಇಹ** | - ಇಲ್ಲಿ (ವಿಚಾರ ಕಾಲದಲ್ಲಿ) |
| **ನ, ಉಪಲಭ್ಯತೇ** | - ಕಂಡುಬರುವುದಿಲ್ಲ * |
| **(ಯತಃ)** | - ಏಕೆಂದರೆ (ಇದರ) |
| **(ಅತಃ)** | - ಆದ್ದರಿಂದ |
| **ಸುವಿರೂಢ-ಮೂಲಮ್** | - ಅಹಂತೆ, ಮಮತೆ ಮತ್ತು ವಾಸನಾ ರೂಪವಾದ ದೃಢವಾದ ಬೇರುಗಳುಳ್ಳ |
| **ಏನಮ್** | - ಈ |
| **ನ, ಆದಿಃ** | - ಆದಿಯಿಲ್ಲ † |
| **ಚ** | - ಮತ್ತು |
| **ನ, ಅಂತಃ** | - ಅಂತ್ಯವು ಸಿಗುವುದಿಲ್ಲ ‡ |
| **ಚ** | - ಹಾಗೂ (ಇದರ) |
| **ನ, ಸಂಪ್ರತಿಷ್ಠಾ** | - ಒಳ್ಳೆಯ ಪ್ರಕಾರದಿಂದ ಸ್ಥಿತಿಯೂ ಇಲ್ಲ § |
| **ಅಶ್ವತ್ಥಮ್** | - ಜಗತ್‌ರೂಪವಾದ ಅಶ್ವತ್ಥವೃಕ್ಷವನ್ನು |
| **ದೃಢೇನ** | - ದೃಢವಾದ |
| **ಅಸಂಗಶಸ್ತ್ರೇಣ** | - ವೈರಾಗ್ಯರೂಪೀ* ಶಸ್ತ್ರದ ಮೂಲಕ |
| **ಛಿತ್ತ್ವಾ** | - ಕತ್ತರಿಸಿಹಾಕಿ † |

ತತಃ ಪದಮ್, ತತ್, ಪರಿಮಾರ್ಗಿತವ್ಯಮ್, ಯಸ್ಮಿನ್, ಗತಾಃ, ನ,
ನಿವರ್ತಂತಿ, ಭೂಯಃ, ತಮ್, ಏವ, ಚ, ಆದ್ಯಮ್, ಪುರುಷಮ್, ಪ್ರಪದ್ಯೇ,
ಯತಃ, ಪ್ರವೃತ್ತಿಃ, ಪ್ರಸೃತಾ, ಪುರಾಣೀ ॥೪॥

**ತತಃ** - ಅದರ ನಂತರ
**ಯಸ್ಮಿನ್** - ಯಾವುದರಲ್ಲಿ
**ಗತಾಃ** - ಹೋಗಿರುವಂತಹ ಪುರುಷರು
**ಪದಮ್** - ಪರಮಪದರೂಪೀ ಪರಮೇಶ್ವರನನ್ನು
**ಪರಿಮಾರ್ಗಿತ-ವ್ಯಮ್** - ಚೆನ್ನಾಗಿ ಹುಡುಕಬೇಕು
**ಚ** - ಮತ್ತು
**ಯತಃ** - ಯಾವ ಪರಮೇಶ್ವರ ನಿಂದ (ಈ)
**ಪುರಾಣೀ** - ಪುರಾತನವಾದ
**ಪ್ರವೃತ್ತಿಃ** - ಜಗದ್ರೂಪೀ ವೃಕ್ಷದ ಪರಂಪರೆಯು
**ಪ್ರಸೃತಾ** - ವಿಸ್ತಾರವನ್ನು
**ಭೂಯಃ , ನ, ನಿವರ್ತಂತಿ** - ಜಗತ್ತಿನಲ್ಲಿ ಮತ್ತೆ ಹಿಂದಿರುಗಿ ಬರುವುದಿಲ್ಲ
**ತತ್** - ಆ ಪಡೆದಿದೆಯೋ
**ತಮ್, ಏವ, ಆದ್ಯಮ್, ಪುರುಷಮ್** - ಅದೇ ಆದಿಪುರುಷ ನಾರಾಯಣನಿಗೇ
**ಪ್ರಪದ್ಯೇ** - ನಾನು ಶರಣಾಗಿದ್ದೇನೆ (ಈ ಪ್ರಕಾರವಾಗಿ ದೃಢನಿಶ್ಚಯಮಾಡಿ ಆ ಪರಮೇಶ್ವರನ ಮನನ ಮತ್ತು ನಿದಿಧ್ಯಾಸನ ಮಾಡಬೇಕು).

ನಿರ್ಮಾನಮೋಹಾಃ, ಜಿತಸಂಗದೋಷಾಃ, ಅಧ್ಯಾತ್ಮನಿತ್ಯಾಃ,
ವಿನಿವೃತ್ತಕಾಮಾಃ, ದ್ವಂದ್ವೈಃ, ವಿಮುಕ್ತಾಃ, ಸುಖದುಃಖಸಂಜ್ಞೈಃ,
ಗಚ್ಛಂತಿ, ಅಮೂಢಾಃ, ಪದಮ್, ಅವ್ಯಯಮ್, ತತ್, ॥೫॥

**ನಿರ್ಮಾನ-ಮೋಹಾಃ** - ಯಾರ ಮಾನ-ದೊಡ್ಡಸ್ತಿಕೆ ಮತ್ತು ಮೋಹ ನಷ್ಟವಾಗಿ ಹೋಗಿದೆಯೋ
**ಜಿತಸಂಗದೋಷಾಃ**- ಯಾರು ಆಸಕ್ತಿರೂಪೀ ದೋಷವನ್ನು ಜಯಿಸಿ
**ವಿನಿವೃತ್ತಕಾಮಾಃ** - ಯಾರ ಕಾಮನೆಗಳು ಪೂರ್ಣರೂಪದಿಂದ ನಾಶವಾಗಿ ಹೋಗಿವೆಯೋ (ಅವರು)
**ಸುಖದುಃಖ-ಸಂಜ್ಞೈಃ** - ಸುಖದುಃಖಗಳೆಂಬ ಹೆಸರಿನ
ಕೊಂಡಿರುವನೋ
**ಅಧ್ಯಾತ್ಮನಿತ್ಯಾಃ** - ಯಾರಿಗೆ ಪರಮಾತ್ಮನ ಆ ಸ್ವರೂಪದಲ್ಲಿ ನಿತ್ಯಸ್ಥಿತಿಯಿದೆಯೋ (ಮತ್ತು)
**ದ್ವಂದ್ವೈಃ** - ದ್ವಂದ್ವಗಳಿಂದ
**ವಿಮುಕ್ತಾಃ** - ವಿಮುಕ್ತರಾದ
**ಅಮೂಢಾಃ** - ಜ್ಞಾನಿಜನರು
**ಅವ್ಯಯಮ್** - ಅವಿನಾಶಿಯಾದ
**ತತ್, ಪದಮ್** - ಆ ಪರಮಪದವನ್ನು
**ಗಚ್ಛಂತಿ** - ಪಡೆದುಕೊಳ್ಳುತ್ತಾರೆ.

ನ, ತತ್, ಭಾಸಯತೇ, ಸೂರ್ಯಃ, ನ, ಶಶಾಂಕಃ, ನ, ಪಾವಕಃ,
ಯತ್, ಗತ್ವಾ, ನ, ನಿವರ್ತಂತೇ, ತತ್, ಧಾಮ, ಪರಮಮ್, ಮಮ ॥೬॥

ಮತ್ತು ಎಲೈ ಅರ್ಜುನ -

| | | | |
|---|---|---|---|
| **ತತ್** | - ಆ (ಸ್ವಯಂ ಪ್ರಕಾಶ ಪರಮಪದವನ್ನು) | **ಯತ್, ಗತ್ವಾ** | - ಯಾವ ಪರಮ ಪದವನ್ನು ಪಡೆದುಕೊಂಡು (ಮನುಷ್ಯನು) |
| **ನ, ಸೂರ್ಯಃ,- ಭಾಸಯತೆ** | - ಸೂರ್ಯನು ಪ್ರಕಾಶಿಸಲಾರನು | | |
| **ನ, ಶಶಾಂಕಃ** | - ಚಂದ್ರನು ಪ್ರಕಾಶಿಸಲಾರನು (ಮತ್ತು) | **ನ, ನಿವರ್ತಂತೆ** | - ಮರಳಿ ಜಗತ್ತಿಗೆ ಬರುವುದಿಲ್ಲವೋ |
| | | **ತತ್** | - ಅದೇ |
| **ನ, ಪಾವಕಃ** | - ಅಗ್ನಿಯು ಪ್ರಕಾಶಿಸಲಾರನು | **ಮಮ** | - ನನ್ನ ಪರಮಮ್ |
| | | **ಧಾಮ** | - ಪರಮಧಾಮವಾಗಿದೆ* |

ಸರ್ವಸ್ಯ, ಚ, ಅಹಮ್, ಹೃದಿ, ಸಂನಿವಿಷ್ಟಃ ಮತ್ತಃ, ಸ್ಮೃತಿಃ ಜ್ಞಾನಮ್,
ಅಪೋಹನಮ್, ಚ, ವೇದೈಃ ಚ, ಸರ್ವೈಃ ಅಹಮ್, ಏವ, ವೇದ್ಯಃ,
ವೇದಾಂತಕೃತ್, ವೇದವಿತ್, ಏವ, ಚ, ಅಹಮ್ ॥೧೫॥

| | | | |
|---|---|---|---|
| **ಅಹಮ್** | - ನಾನೇ | **ಚ** | - ಹಾಗೂ |
| **ಸರ್ವಸ್ಯ** | - ಎಲ್ಲಾ ಪ್ರಾಣಿಗಳ | **ಮತ್ತಃ** | - ನನ್ನಿಂದಲೇ |
| **ಹೃದಿ** | - ಹೃದಯದಲ್ಲಿ | **ಸ್ಮೃತಿಃ** | - ಸ್ಮೃತಿ |
| **ಸನ್ನಿವಿಷ್ಟಃ** | - ಅಂತರ್ಯಾಮಿ ರೂಪದಿಂದ ನೆಲೆಸಿದ್ದೇನೆ | **ಜ್ಞಾನಮ್** | - ಜ್ಞಾನ |
| | | **ಚ** | - ಮತ್ತು |
| | | **ಅಪೋಹನಮ್** | - ಸಂಶಯ † ವಿಪರ್ಯಯ ಮೊದಲಾದ ದೋಷಗಳ ನಿವಾರಣೆ |
| | | **ವೇದ್ಯಃ** | - ತಿಳಿಯಲು ಯೋಗ್ಯನಾಗಿದ್ದೇನೆ. |
| | | **ವೇದಾಂತಕೃತ್** | - ವೇದಾಂತದ ಕರ್ತೃ |
| **(ಭವತಿ)** | - ಆಗುತ್ತದೆ | **ಚ** | - ಮತ್ತು |
| **ಚ, ಸರ್ವೈಃ** | - ಮತ್ತು ಎಲ್ಲ | **ವೇದವಿತ್** | - ವೇದಗಳನ್ನು ಬಲ್ಲವನೂ (ಸಹ) |
| **ವೇದೈಃ** | - ವೇದಗಳ ಮೂಲಕ * | | |
| **ಅಹಮ್, ಏವ** | - ನಾನೇ | **ಅಹಮ್, ಏವ** | - ನಾನೇ (ಆಗಿದ್ದೇನೆ). |

ದ್ವೌ, ಇಮೌ, ಪುರುಷೌ, ಲೋಕೇ, ಕ್ಷರಃ, ಚ, ಅಕ್ಷರಃ, ಏವ, ಚ,
ಕ್ಷರಃ, ಸರ್ವಾಣಿ, ಭೂತಾನಿ, ಕೂಟಸ್ಥಃ, ಅಕ್ಷರಃ, ಉಚ್ಯತೇ ॥೧೬॥

ಹಾಗೂ ಎಲೈ ಅರ್ಜುನಾ ! -

| | | | |
|---|---|---|---|
| **ಲೋಕೇ** | - ಈ ಜಗತ್ತಿನಲ್ಲಿ | **ಏವ** | - ಕೂಡ |
| **ಕ್ಷರಃ** | - ನಾಶವಾಗುವುದು | **ಇಮೌ** | - ಈ |
| **ಚ** | - ಹಾಗೂ | **ದ್ವೌ** | - ಎರಡು ಪ್ರಕಾರದ † |
| **ಅಕ್ಷರಃ** | - ನಾಶವಾಗದಿರುವುದು | **ಪುರುಷೌ** | - ಪುರುಷರಿದ್ದಾರೆ (ಇವರಲ್ಲಿ) |

| | | | |
|---|---|---|---|
| **ಸರ್ವಾಣಿ** | - ಸಮಸ್ತ | **ಚ** | - ಮತ್ತು |
| **ಭೂತಾನಿ** | - ಭೂತ- ಪ್ರಾಣಿಗಳ ಶರೀರವಾದರೋ | **ಕೂಟಸ್ಥಃ** | - ಜೀವಾತ್ಮನು |
| | | **ಅಕ್ಷರಃ** | - ಅವಿನಾಶಿಯೆಂದು |
| **ಕ್ಷರಃ** | - ನಾಶವಾಗುವಂತಹುದು | **ಉಚ್ಯತೇ** | - ಹೇಳಲಾಗುತ್ತದೆ |

ಉತ್ತಮಃ, ಪುರುಷಃ, ತು, ಅನ್ಯಃ, ಪರಮಾತ್ಮಾ, ಇತಿ, ಉದಾಹೃತಃ,
ಯಃ ಲೋಕತ್ರಯಮ್, ಆವಿಶ್ಯ, ಬಿಭರ್ತಿ, ಅವ್ಯಯಃ, ಈಶ್ವರಃ ॥೧೭॥

**ಹಾಗೂ ಅವರಿಬ್ಬರಿಗಿಂತ -**

| | | | |
|---|---|---|---|
| **ಉತ್ತಮಃ** | - ಉತ್ತಮನಾದ | **ಬಿಭರ್ತಿ** | - ಎಲ್ಲರ ಧಾರಣೆ ಮತ್ತು ಪಾಲನೆ ಮಾಡುತ್ತಾನೋ ಅವನನ್ನು |
| **ಪುರುಷಃ** | - ಪುರುಷನು | | |
| **ತು** | - ಆದರೋ | | |
| **ಅನ್ಯಃ** | - ಬೇರೆಯೇ ಆಗಿದ್ದಾನೆ | **ಅವ್ಯಯಃ** | - ಅವಿನಾಶಿ |
| **ಯಃ** | - ಯಾರು | **ಈಶ್ವರಃ** | - ಪರಮೇಶ್ವರ (ಮತ್ತು) |
| **ಲೋಕತ್ರಯಮ್** | - ಮೂರೂ ಲೋಕಗಳಲ್ಲಿ | **ಪರಮಾತ್ಮಾ** | - ಪರಮಾತ್ಮ |
| | | **ಇತಿ** | - ಈ ಪ್ರಕಾರವಾಗಿ |
| **ಆವಿಶ್ಯ** | - ಪ್ರವೇಶಿಸಿ | **ಉದಾಹೃತಃ** | - ಹೇಳಲಾಗಿದೆ. |

ಯಸ್ಮಾತ್, ಕ್ಷರಮ್, ಅತೀತಃ, ಅಹಮ್, ಅಕ್ಷರಾತ್, ಅಪಿ, ಚ, ಉತ್ತಮಃ,
ಅತಃ, ಅಸ್ಮಿ, ಲೋಕೇ, ವೇದೇ, ಚ, ಪ್ರಥಿತಃ, ಪುರುಷೋತ್ತಮಃ ॥೧೮॥

| | | | |
|---|---|---|---|
| **ಯಸ್ಮಾತ್** | - ಏಕೆಂದರೆ | **ಉತ್ತಮಃ** | - ಉತ್ತಮನಾಗಿದ್ದೇನೆ |
| **ಅಹಮ್** | - ನಾನು | **ಅತಃ** | - ಆದ್ದರಿಂದ |
| **ಕ್ಷರಮ್** | - ನಾಶವಾಗುವ ಜಡವರ್ಗ-ಕ್ಷೇತ್ರಕ್ಕಿಂತ | **ಲೋಕೇ** | - ಲೋಕದಲ್ಲಿ |
| | | **ಚ** | - ಮತ್ತು |
| **ಅತೀತಃ** | - (ಸರ್ವಥಾ)ಅತೀತನಾಗಿದ್ದೇನೆ | **ವೇದೇ** | - ವೇದದಲ್ಲಿ(ಕೂಡ) |
| **ಚ** | - ಮತ್ತು | **ಪುರುಷೋತ್ತಮಃ** | - ಪುರುಷೋತ್ತಮನೆಂಬ ಹೆಸರಿನಿಂದ |
| **ಅಕ್ಷರಾತ್** | - ಅವಿನಾಶಿಯಾದ ಜೀವಾತ್ಮನಿಗಿಂತಲೂ | **ಪ್ರಥಿತಃ** | - ಪ್ರಸಿದ್ಧನು |
| **ಅಪಿ** | - ಕೂಡ | **ಅಸ್ಮಿ** | - ಆಗಿದ್ದೇನೆ. |

ಯಃ, ಮಾಮ್, ಏವಮ್, ಅಸಂಮೂಢಃ, ಜಾನಾತಿ, ಪುರುಷೋತ್ತಮಮ್,
ಸಃ, ಸರ್ವವಿತ್, ಭಜತಿ, ಮಾಮ್, ಸರ್ವಭಾವೇನ, ಭಾರತ ॥೧೯॥

| | | | |
|---|---|---|---|
| **ಭಾರತ** | - ಹೇ ಅರ್ಜುನಾ! | **ಸರ್ವವಿತ್, ಸಃ** | - ಆ ಸರ್ವಜ್ಞನಾದ ಪುರುಷನು |
| **ಯಃ** | - ಯಾರು | | |
| **ಅಸಮ್ಮೂಢಃ** | - ಜ್ಞಾನಿಪುರುಷನು | **ಸರ್ವಭಾವೇನ** | - ಎಲ್ಲ ಪ್ರಕಾರದಿಂದ ನಿರಂತರ |
| **ಮಾಮ್** | - ನನ್ನನ್ನು | | |
| **ಏವಮ್** | - ಈ ಪ್ರಕಾರ (ತತ್ತ್ವದಿಂದ) | **ಮಾಮ್** | - ವಾಸುದೇವ ಪರಮೇಶ್ವರನಾದ ನನ್ನನ್ನೇ |
| **ಪುರುಷೋತ್ತಮಮ್** | - ಪುರುಷೋತ್ತಮನೆಂದು | | |
| **ಜಾನಾತಿ** | - ತಿಳಿಯುತ್ತಾನೆಯೋ | **ಭಜತಿ** | - ಭಜಿಸುತ್ತಾರೆ. |

ಇತಿ, ಗುಹ್ಯತಮಮ್, ಶಾಸ್ತ್ರಮ್, ಇದಮ್, ಉಕ್ತಮ್, ಮಯಾ, ಅನಘ,
ಏತತ್, ಬುದ್ಧ್ವಾ, ಬುದ್ಧಿಮಾನ್, ಸ್ಯಾತ್, ಕೃತಕೃತ್ಯಃ, ಚ, ಭಾರತ ॥೨೦॥

| | | | |
|---|---|---|---|
| **ಅನಘ** | - ಹೇ ನಿಷ್ಪಾಪ | **ಉಕ್ತಮ್** | - ಹೇಳಲ್ಪಟ್ಟಿತು* |
| **ಭಾರತ** | - ಅರ್ಜುನಾ! | **ಏತತ್** | - ಇದನ್ನು |
| **ಇತಿ** | - ಈ ಪ್ರಕಾರವಾಗಿ | **ಬುದ್ಧ್ವಾ** | - ತತ್ವಶಃ ತಿಳಿದು |
| **ಗುಹ್ಯತಮಮ್** | - ಅತಿ ರಹಸ್ಯಯುಕ್ತವಾದ ಗೋಪನೀಯ | **ಬುದ್ಧಿಮಾನ್** | - ಜ್ಞಾನಿಯೂ |
| | | **ಚ** | - ಮತ್ತು |
| **ಇದಮ್, ಶಾಸ್ತ್ರಮ್** | - ಈ ಶಾಸ್ತ್ರವು | **ಕೃತಕೃತ್ಯಃ** | - ಕೃತಾರ್ಥನೂ |
| **ಮಯಾ** | - ನನ್ನಮೂಲಕ | **ಸ್ಯಾತ್** | - ಆಗಿಬಿಡುತ್ತಾನೆ. |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 16 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ಷೋಡಶೋಽಧ್ಯಾಯಃ - ದೈವಾಸುರ ಸಂಪದ್ವಿಭಾಗಯೋಗ ॥

ಅಭಯಮ್, ಸತ್ತ್ವಸಂಶುದ್ಧಿಃ, ಜ್ಞಾನಯೋಗವ್ಯವಸ್ಥಿತಿಃ, ದಾನಮ್,
ದಮಃ, ಚ, ಯಜ್ಞಃ, ಚ, ಸ್ವಾಧ್ಯಾಯಃ, ತಪಃ, ಆರ್ಜವಮ್ ॥೧॥

**ನಂತರ ಶ್ರೀಕೃಷ್ಣ ಪರಮಾತ್ಮನು ಪುನಃ ಹೇಳಿದ, ಎಲೈ ಅರ್ಜುನ! ದೈವೀ ಸಂಪತ್ತು ಯಾರಿಗೆ ದೊರಕಿದೆಯೋ ಹಾಗೂ ಯಾರಿಗೆ ಆಸುರೀ ಸಂಪತ್ತು ದೊರಕಿದೆಯೋ ಅವರ ಲಕ್ಷಣಗಳನ್ನು ಬೇರೆ-ಬೇರೆಯಾಗಿ ಹೇಳುತ್ತೇನೆ, ಅವರಲ್ಲಿ -**

| | | | |
|---|---|---|---|
| **ಅಭಯಮ್** | - ಭಯದ ಸರ್ವಥಾ ಅಭಾವ | **ಚ** | - ಮತ್ತು |
| | | **ದಾನಮ್** | - ಸಾತ್ವಿಕದಾನ † |
| **ಸತ್ವಸಂಶುದ್ಧಿಃ** | - ಅಂತಃಕರಣದ ಪೂರ್ಣ ನಿರ್ಮಲತೆ | **ದಮಃ** | - ಇಂದ್ರಿಯಗಳ ದಮನ |
| | | **ಯಜ್ಞಃ** | - ಭಗವಂತನ ದೇವತೆಗಳ ಮತ್ತು ಗುರುಜನರ ಪೂಜೆ ಮತ್ತು |
| **ಜ್ಞಾನಯೋಗ-ವ್ಯವಸ್ಥಿತಿಃ-** | ತತ್ತ್ವಜ್ಞಾನಕ್ಕಾಗಿ ಧ್ಯಾನ ಯೋಗದಲ್ಲಿ ನಿರಂತರ ದೃಢವಾದ ಸ್ಥಿತಿ * | | |
| | ಅಗ್ನಿಹೋತ್ರಾದಿ ಉತ್ತಮ ಕರ್ಮಗಳ ಆಚರಣೆ (ಹಾಗೂ) | **ತಪಃ** | - ಸ್ವಧರ್ಮಪಾಲನೆಗಾಗಿ ಕಷ್ಟವನ್ನು ಸಹಿಸುವುದು |
| **ಸ್ವಾಧ್ಯಾಯಃ** | - ವೇದ-ಶಾಸ್ತ್ರಗಳ ಪಠನ-ಪಾಠನ ಹಾಗೂ ಭಗವಂತನ ನಾಮ ಮತ್ತು ಗುಣಗಳ ಕೀರ್ತನೆ | **ಚ** | - ಮತ್ತು |
| | | **ಆರ್ಜವಮ್** | - ಶರೀರ ಹಾಗೂ ಇಂದ್ರಿಯಗಳ ಸಹಿತ ಅಂತಃಕರಣದ ಸರಳತೆ |

ಅಹಿಂಸಾ, ಸತ್ಯಮ್, ಅಕ್ರೋಧಃ, ತ್ಯಾಗಃ, ಶಾಂತಿಃ, ಅಪೈಶುನಮ್,
ದಯಾ, ಭೂತೇಷು, ಅಲೋಲುಪ್ತ್ವಮ್, ಮಾರ್ದವಮ್, ಹ್ರೀಃ ಅಚಾಪಲಮ್ ॥೨॥

**ಅಹಿಂಸಾ** - ಮನಸ್ಸು ವಾಣಿ ಮತ್ತು ಶರೀರದಿಂದ ಯಾರಿಗೂ ಯಾವ ಪ್ರಕಾರವಾಗಿಯೂ ಕಷ್ಟಕೊಡದಿರುವುದು

**ಸತ್ಯಮ್** - ಯಥಾರ್ಥ ಮತ್ತು ಪ್ರಿಯವಾದ ಭಾಷಣ*

**ಅಕ್ರೋಧಃ** - ತನಗೆ ಅಪಕಾರ ಮಾಡಿದವರ ಮೇಲೆಯೂ ಕೋಪಿಸದಿರುವುದು

**ಭೂತೇಷು ದಯಾ** - ಎಲ್ಲ ಪ್ರಾಣಿಗಳಲ್ಲಿ ಹೇತುರಹಿತವಾದ ದಯೆ

**ಅಲೋಲು-ಪ್ತ್ವಮ್** - ಇಂದ್ರಿಯಗಳು ವಿಷಯಗಳೊಡನೆ ಸಂಯೋಗ ವಾದಾಗಲೂ ಅದರಲ್ಲಿ ಆಸಕ್ತರಾಗದಿರುವಿಕೆ

**ತ್ಯಾಗಃ** - ಕರ್ಮಗಳಲ್ಲಿ ಕರ್ತೃತ್ವದ ಅಭಿಮಾನವನ್ನು ತ್ಯಜಿಸುವುದು

**ಶಾಂತಿಃ** - ಅಂತಃಕರಣದ ಉಪರತಿ ಅರ್ಥಾತ್ ಚಿತ್ತಚಾಂಚಲ್ಯತೆಯ ಅಭಾವ

**ಅಪೈಶುನಮ್** - ಯಾರನ್ನೂ ನಿಂದಿಸದಿರುವುದು

**ಮಾರ್ದವಮ್** - ಕೋಮಲತೆ

**ಹ್ರೀಃ** - ಲೋಕ ಮತ್ತು ಶಾಸ್ತ್ರಕ್ಕೆ ವಿರುದ್ಧವಾದ ಆಚರಣೆಯಲ್ಲಿ ಲಜ್ಜೆಪಡುವುದು (ಮತ್ತು)

**ಅಚಾಪಲಮ್** - ವ್ಯರ್ಥವಾದ ಚೇಷ್ಟೆಗಳ ಅಭಾವ.

ತೇಜಃ, ಕ್ಷಮಾ, ಧೃತಿಃ, ಶೌಚಮ್, ಅದ್ರೋಹಃ, ನಾತಿಮಾನಿತಾ,
ಭವಂತಿ, ಸಂಪದಮ್, ದೈವೀಮ್, ಅಭಿಜಾತಸ್ಯ, ಭಾರತ ॥೩॥

**ತೇಜಃ** - ತೇಜಸ್ಸು*

**ಕ್ಷಮಾ** - ಕ್ಷಮೆ

**ಧೃತಿಃ** - ಧೈರ್ಯ

**ಶೌಚಮ್** - ಬಾಹ್ಯಶುದ್ಧಿ† (ಹಾಗೂ)

**ಅದ್ರೋಹಃ** - ಯಾರಲ್ಲಿಯೂ ಶತ್ರುಭಾವ ವಿಲ್ಲದಿರುವುದು (ಮತ್ತು)

**ದೈವೀಮ್, ಸಂಪದಮ್** - ದೈವೀಸಂಪತ್ತನ್ನು

**ನಾತಿಮಾನಿತಾ** - ತನ್ನಲ್ಲಿ ಪೂಜ್ಯತೆಯ ಅಭಿಮಾನದ ಅಭಾವ (ಇವೆಲ್ಲವುಗಳಾದರೋ)

**ಭಾರತ** - ಹೇ ಅರ್ಜುನಾ!

**ಅಭಿಜಾತಸ್ಯ** - ಪಡೆದು ಉತ್ಪನ್ನರಾದ ಪುರುಷರ ಲಕ್ಷಣಗಳು

**ಭವಂತಿ** - ಆಗಿವೆ.

ದಂಭಃ, ದರ್ಪಃ, ಅಭಿಮಾನಃ, ಚ, ಕ್ರೋಧಃ, ಪಾರುಷ್ಯಮ್, ಏವ, ಚ,
ಅಜ್ಞಾನಮ್, ಚ, ಅಭಿಜಾತಸ್ಯ, ಪಾರ್ಥ, ಸಂಪದಮ್, ಆಸುರೀಮ್ ॥೪॥

**ಪಾರ್ಥ** - ಹೇ ಅರ್ಜುನಾ!

**ದಂಭಃ** - ದಂಭವು

**ಚ** - ಮತ್ತು

**ಅಜ್ಞಾನಮ್** - ಅಜ್ಞಾನವು

| | |
|---|---|
| ದರ್ಪಃ | - ಅಹಂಕಾರವು |
| ಚ | - ಮತ್ತು |
| ಅಭಿಮಾನಃ | - ಅಭಿಮಾನವು |
| ಚ | - ಹಾಗೂ |
| ಕ್ರೋಧಃ | - ಕೋಪವು |
| ಪಾರುಷ್ಯಮ್ | - ಕಠೋರತೆ |
| ಏವ | - ಇವೆಲ್ಲವೂ |
| ಆಸುರೀಮ್ | - ಆಸುರೀ |
| ಸಂಪದಮ್ | - ಸಂಪತ್ತನ್ನು |
| ಅಭಿಜಾತಸ್ಯ | - ಪಡೆದು ಜನಿಸಿರುವ ಪುರುಷರ (ಲಕ್ಷಣಗಳಾಗಿವೆ). |

ದೈವೀ, ಸಂಪತ್, ವಿಮೋಕ್ಷಾಯ, ನಿಬಂಧಾಯ, ಆಸುರೀ, ಮತಾ,
ಮಾ, ಶುಚಃ, ಸಂಪದಮ್, ದೈವೀಮ್, ಅಭಿಜಾತಃ, ಅಸಿ, ಪಾಂಡವ ॥೫॥

**ಆ ಎರಡು ರೀತಿಯ ಸಂಪತ್ತುಗಳಲ್ಲಿ -**

| | |
|---|---|
| ದೈವೀ, ಸಂಪತ್ | - ದೈವೀ ಸಂಪತ್ತು |
| ವಿಮೋಕ್ಷಾಯ | - ಮುಕ್ತಿಗಾಗಿ (ಮತ್ತು) |
| ಆಸುರೀ | - ಆಸುರೀ ಸಂಪತ್ತು |
| ನಿಬಂಧಾಯ | - ಬಂಧಿಸುವುದಕ್ಕಾಗಿ (ಎಂದು) |
| ಮತಾ | - ತಿಳಿಯಲಾಗಿದೆ |
| (ಅತಃ) | - ಆದ್ದರಿಂದ |
| ಪಾಂಡವ | - ಹೇ ಅರ್ಜುನಾ! (ನೀನು) |
| ಮಾ, ಶುಚಃ | - ಶೋಕಪಡಬೇಡ |
| (ಯತಃ) | - ಏಕೆಂದರೆ (ನೀನು) |
| ದೈವೀಮ್, ಸಂಪದಮ್ | - ದೈವೀಸಂಪತ್ತನ್ನು |
| ಅಭಿಜಾತಃ | - ಪಡೆದು ಜನಿಸಿರುವ, |
| ಅಸಿ | - ಆಗಿರುವೆ. |

ದ್ವೌ, ಭೂತಸರ್ಗೌ, ಲೋಕೇ, ಅಸ್ಮಿನ್, ದೈವಃ, ಆಸುರಃ, ಏವ, ಚ,
ದೈವಃ, ವಿಸ್ತರಶಃ, ಪ್ರೋಕ್ತಃ, ಆಸುರಮ್, ಪಾರ್ಥ, ಮೇ, ಶೃಣು ॥೬॥

| | |
|---|---|
| ಪಾರ್ಥ | - ಹೇ ಅರ್ಜುನಾ! |
| ಅಸ್ಮಿನ್ | - ಈ |
| ಲೋಕೇ | - ಲೋಕದಲ್ಲಿ |
| ಭೂತಸರ್ಗೌ | - ಭೂತಗಳ ಸೃಷ್ಟಿ ಎಂದರೆ ಮನುಷ್ಯ ಸಮುದಾಯ |
| ದ್ವೌ ಏವ | - ಎರಡು ಪ್ರಕಾರದ್ದಾಗಿದೆ (ಒಂದಾದರೋ) |
| ದೈವಃ | - ದೈವೀಪ್ರಕೃತಿಯುಳ್ಳದ್ದು |
| ಆಸುರಮ್ | - ಆಸುರೀ- ಪ್ರಕೃತಿ ಯುಳ್ಳ ಮನುಷ್ಯ ಸಮುದಾಯವನ್ನು |
| ಚ | - ಮತ್ತು (ಎರಡನೆಯದು) |
| ಆಸುರಃ | - ಆಸುರೀ ಪ್ರಕೃತಿಯುಳ್ಳದ್ದು (ಅವುಗಳಲ್ಲಿ) |
| ದೈವಃ | - ದೈವೀಪ್ರಕೃತಿ ಯುಳ್ಳದ್ದಾದರೋ |
| ವಿಸ್ತರಶಃ | - ವಿಸ್ತಾರಪೂರ್ವಕವಾಗಿ |
| ಪ್ರೋಕ್ತಃ | - ಹೇಳಲ್ಪಟ್ಟಿತು (ಈಗ ನೀನು) ಕೂಡ ವಿಸ್ತಾರ ಪೂರ್ವಕವಾಗಿ |
| ಮೇ, ಶೃಣು | - ನನ್ನಿಂದ ಕೇಳು. |

ಪ್ರವೃತ್ತಿಮ್, ಚ, ನಿವೃತ್ತಿಮ್, ಚ, ಜನಾಃ, ನ, ವಿದುಃ, ಅಸುರಾಃ,
ನ, ಶೌಚಮ್, ನ, ಅಪಿ, ಚ, ಆಚಾರಃ, ನ, ಸತ್ಯಮ್, ತೇಷು, ವಿದ್ಯತೇ ॥೭॥

ಎಲೈ ಅರ್ಜುನಾ! -

**ಅಸುರಾಃ** - ಅಸುರೀ ಸ್ವಭಾವದವರಾದ
**ಜನಾಃ** - ಮನುಷ್ಯರು
**ಪ್ರವೃತ್ತಿಮ್** - ಪ್ರವೃತ್ತಿಯನ್ನು
**ಚ** - ಮತ್ತು
**ನಿವೃತ್ತಿಮ್** - ನಿವೃತ್ತಿಯನ್ನು
**ಚ** - ಕೂಡ
**ನ, ವಿದುಃ** - ತಿಳಿಯುವುದಿಲ್ಲ (ಆದ್ದರಿಂದ)
**ತೇಷು** - ಅವರಲ್ಲಿ
**ನ, ಶೌಚಮ್** - ಬಾಹ್ಯ ಮತ್ತು ಆಂತರಿಕ ಶುದ್ಧಿಯಿರುವುದಿಲ್ಲ
**ನ, ಆಚಾರಃ** - ಶ್ರೇಷ್ಠವಾದ ಆಚರಣೆ ಇರುವುದಿಲ್ಲ
**ಚ** - ಮತ್ತು
**ಸತ್ಯಮ್, ಅಪಿ** - ಸತ್ಯಭಾಷಣವೂ ಕೂಡ
**ನ, ವಿದ್ಯತೇ** - ಇರುವುದಿಲ್ಲ

ಅಸತ್ಯಮ್, ಅಪ್ರತಿಷ್ಠಮ್, ತೇ, ಜಗತ್, ಆಹುಃ, ಅನೀಶ್ವರಮ್,
ಅಪರಸ್ಪರಸಂಭೂತಮ್, ಕಿಮ್, ಅನ್ಯತ್, ಕಾಮಹೈತುಕಮ್ ॥೮॥

ಹಾಗೆಯೇ -

**ತೇ** - ಆ ಅಸುರೀ ಪ್ರಕೃತಿಯುಳ್ಳವರು
**ಜಗತ್** - (ಈ) ಜಗತ್ತು
**ಅಪ್ರತಿಷ್ಠಮ್** - ಆಶ್ರಯರಹಿತ
**ಅಸತ್ಯಮ್** - ಸರ್ವಥಾ ಅಸತ್ಯ (ಮತ್ತು)
**ಅನೀಶ್ವರಮ್** - ದೇವರಿಲ್ಲದೇ
**ಅಪರಸ್ಪರ-ಸಂಭೂತಮ್** - ತನ್ನಿಂದ ತಾನೇ ಕೇವಲ ಸ್ತ್ರೀ-ಪುರುಷರ ಸಂಯೋಗದಿಂದ ಉತ್ಪನ್ನವಾಗಿದೆ (ಆದ್ದರಿಂದ)
**ಕಾಮಹೈತುಕಮ್** - ಕೇವಲ ಕಾಮವೇ ಇವರ ಕಾರಣವಾಗಿದೆ
**ಅನ್ಯತ್, ಕಿಮ್** - ಇದಲ್ಲದೆ ಬೇರೆ ಏನಿದೆ? (ಎಂದು)
**ಆಹುಃ** - ಹೇಳುತ್ತಿರುತ್ತಾರೆ.

ಏತಾಮ್, ದೃಷ್ಟಿಮ್, ಅವಷ್ಟಭ್ಯ, ನಷ್ಟಾತ್ಮಾನಃ, ಅಲ್ಪಬುದ್ಧಯಃ,
ಪ್ರಭಂತಿ, ಉಗ್ರಕರ್ಮಾಣಃ, ಕ್ಷಯಾಯಾ, ಜಗತಃ, ಅಹಿತಾಃ ॥೯॥

**ಏತಾಮ್** - ಈ
**ದೃಷ್ಟಿಮ್** - ಮಿಥ್ಯಾಜ್ಞಾನವನ್ನು
**ಅವಷ್ಟಭ್ಯ** - ಅವಲಂಬಿಸಿ
**ನಷ್ಟಾತ್ಮಾನಃ** - ಯಾರ ಸ್ವಭಾವವು ನಷ್ಟವಾಗಿ ಹೋಗಿದೆಯೋ (ಹಾಗೂ),
**ಅಲ್ಪಬುದ್ಧಯಃ** - ಯಾರ ಬುದ್ಧಿಯು ಮಂದವಾಗಿದೆಯೋ (ಅವರು)
**ಅಹಿತಾಃ** - ಎಲ್ಲರಿಗೂ ಅಪಕಾರಮಾಡುವ
**ಉಗ್ರಕರ್ಮಾಣಃ** - ಕ್ರೂರಕರ್ಮಿಗಳಾದ ಮನುಷ್ಯರು
**ಜಗತಃ** - (ಕೇವಲ) ಜಗತ್ತಿನ
**ಕ್ಷಯಾಯ** - ನಾಶಕ್ಕಾಗಿಯೇ
**ಪ್ರಭವಂತಿ** - ಸಮರ್ಥರಾಗುತ್ತಾರೆ.

ಕಾಮಮ್, ಆಶ್ರಿತ್ಯ, ದುಷ್ಪೂರಮ್, ದಂಭಮಾನಮದಾನ್ವಿತಾಃ,
ಮೋಹಾತ್, ಗೃಹೀತ್ವಾ, ಅಸದ್ಗ್ರಾಹಾನ್, ಪ್ರವರ್ತಂತೇ, ಅಶುಚಿವ್ರತಾಃ ॥೧೦॥

| | | | |
|---|---|---|---|
| **ದಂಭಮಾನ-ಮದಾನ್ವಿತಾಃ** | - ದಂಭ, ಮಾನ ಮತ್ತು ಮದದಿಂದ ಕೂಡಿದವರಾದ ಮನುಷ್ಯರು | **ಮೋಹಾತ್** | - ಅಜ್ಞಾನದಿಂದ |
| **ದುಷ್ಪೂರಮ್** | - ಯಾವ ಪ್ರಕಾರದಿಂದಲೂ ಪೂರ್ಣವಾಗದ | **ಅಸದ್‌ಗ್ರಾಹಾನ್** | - ಮಿಥ್ಯಾ ಸಿದ್ಧಾಂತಗಳನ್ನು |
| **ಕಾಮಮ್** | - ಕಾಮನೆಗಳ | **ಗೃಹೀತ್ವಾ** | - ಗ್ರಹಣಮಾಡಿ (ಮತ್ತು) |
| **ಆಶ್ರಿತ್ಯ** | - ಆಶ್ರಯ ಪಡೆದು | **ಅಶುಚಿವ್ರತಾಃ** | - ಭ್ರಷ್ಟ ಆಚರಣೆಗಳನ್ನು ತಮ್ಮದಾಗಿಸಿಕೊಂಡು (ಜಗತ್ತಿನಲ್ಲಿ) |
| | | **ಪ್ರವರ್ತಂತೇ** | - ವ್ಯವಹರಿಸುತ್ತಾರೆ. |

ಚಿಂತಾಮ್, ಅಪರಿಮೇಯಾಮ್, ಚ, ಪ್ರಲಯಾಂತಾಮ್, ಉಪಾಶ್ರಿತಾಃ,
ಕಾಮೋಪಭೋಗಪರಮಾಃ, ಏತಾವತ್, ಇತಿ, ನಿಶ್ಚಿತಾಃ ॥೧೧॥

**ಹಾಗೆಯೇ ಅವರು -**

| | | | |
|---|---|---|---|
| **ಪ್ರಲಯಾಂ-ತಾಮ್** | - ಮರಣ ಪರ್ಯಂತವಾಗಿ ಇರುವ | **ಅಪರಿಮೇಯಾಮ್** | - ಅಸಂಖ್ಯಾತ |
| **ಕಾಮೋಪ-ಭೋಗಪರಮಾಃ** | - ವಿಷಯಭೋಗಗಳನ್ನು ಭೋಗಿಸುವುದರಲ್ಲಿ ತತ್ಪರರಾಗಿರುವವರು | **ಚಿಂತಾಮ್** | - ಚಿಂತೆಗಳ |
| **ಚ** | - ಮತ್ತು | **ಉಪಾಶ್ರಿತಾಃ** | - ಆಶ್ರಯ ಪಡೆದವರು |
| | | **ಏತಾವತ್** | - ಇಷ್ಟೇ ಸುಖ |
| | | **ಇತಿ** | - ಈ ಪ್ರಕಾರವಾಗಿ |
| | | **ನಿಶ್ಚಿತಾಃ** | - ನಿಶ್ಚಯಿಸಿ ಕೊಳ್ಳುತ್ತಾರೆ. |

ಆಶಾಪಾಶಶತೈಃ, ಬದ್ಧಾಃ, ಕಾಮಕ್ರೋಧಪರಾಯಣಾಃ,
ಈಹಂತೇ, ಕಾಮಭೋಗಾರ್ಥಮ್, ಅನ್ಯಾಯೇನ, ಅರ್ಥಸಂಚಯಾನ್ ॥೧೨॥

**ಆದುದರಿಂದ -**

| | | | |
|---|---|---|---|
| **ಆಶಾಪಾಶಶತೈಃ** | - ನೂರಾರು ಆಸೆಗಳ ಪಾಶಗಳಲ್ಲಿ | **ಅನ್ಯಾಯೇನ** | - ಅನ್ಯಾಯ ಪೂರ್ವಕವಾಗಿ |
| **ಬದ್ಧಾಃ** | - ಬಂಧಿತರಾದ ಮನುಷ್ಯರು | **ಅರ್ಥ-ಸಂಚಯಾನ್** | - ಧನವೇ ಮುಂತಾದ ಪದಾರ್ಥಗಳನ್ನು ಸಂಗ್ರಹಿಸುವ |
| **ಕಾಮಕ್ರೋಧ-** | - ಕಾಮ-ಕ್ರೋಧಗಳ | **ಈಹಂತೇ** | - ಪ್ರಯತ್ನ ಮಾಡುತ್ತಿರುತ್ತಾರೆ. |
| **ಪರಾಯಣಾಃ** | - ಪರಾಯಣರಾಗಿ | | |
| **ಕಾಮಭೋಗಾ-ರ್ಥಮ್** | - ವಿಷಯ ಭೋಗಗಳಿಗಾಗಿ | | |

ಇದಮ್, ಅದ್ಯ, ಮಯಾ, ಲಬ್ಧಮ್, ಇಮಮ್, ಪ್ರಾಪ್ಸ್ಯೇ, ಮನೋರಥಮ್,
ಇದಮ್, ಅಸ್ತಿ, ಇದಮ್, ಅಪಿ, ಮೇ, ಭವಿಷ್ಯತಿ, ಪುನಃ ಧನಮ್ ॥೧೩॥

**ಮತ್ತು ಅವರ ವಿಚಾರಗಳು ಹೀಗಿವೆ -**

| | | | |
|---|---|---|---|
| **ಮಯಾ** | - ನಾನು | **ಪ್ರಾಪ್ಸ್ಯೇ** | - ಪಡೆಯುವೆ |
| **ಅದ್ಯ** | - ಈ ದಿನ | **ಮೇ** | - ನನ್ನಬಳಿ |
| **ಇದಮ್** | - ಇದನ್ನು | **ಇದಮ್** | - ಇಷ್ಟು |
| **ಲಬ್ಧಮ್** | - ಪ್ರಾಪ್ತಿಮಾಡಿ ಕೊಂಡಿದ್ದೇನೆ (ಮತ್ತು ಈಗ) | **ಧನಮ್** | - ಧನವು |
| | | **ಅಸ್ತಿ** | - ಇದೆ (ಮತ್ತು) |
| | | **ಪುನಃ, ಅಪಿ** | - ಇನ್ನೂ ಕೂಡ |
| **ಇಮಮ್** | - ಈ | **ಇದಮ್** | - ಇದು |
| **ಮನೋರಥಮ್** | - ಮನೋರಥವನ್ನು | **ಭವಿಷ್ಯತಿ** | - ಆಗುವುದು. |

ಅಸೌ, ಮಯಾ, ಹತಃ, ಶತ್ರುಃ, ಹನಿಷ್ಯೇ, ಚ, ಅಪರಾನ್, ಅಪಿ,
ಈಶ್ವರಃ, ಅಹಮ್, ಅಹಮ್, ಭೋಗೀ, ಸಿದ್ಧಃ, ಅಹಮ್, ಬಲವಾನ್, ಸುಖೀ ॥೧೪॥

| | | | |
|---|---|---|---|
| **ಅಸೌ** | - ಆ | **ಅಹಮ್** | - ನಾನು |
| **ಶತ್ರುಃ** | - ಶತ್ರುವು | **ಈಶ್ವರಃ** | - ಈಶ್ವರನಾಗಿದ್ದೇನೆ |
| **ಮಯಾ** | - ನನ್ನಮೂಲಕ | **ಭೋಗೀ** | - ಐಶ್ವರ್ಯವನ್ನು ಭೋಗಿಸುವವ ನಾಗಿದ್ದೇನೆ |
| **ಹತಃ** | - ಕೊಲ್ಲಲ್ಪಟ್ಟನು | | |
| **ಚ** | - ಮತ್ತು | | |
| **ಅಪರಾನ್, ಅಪಿ** | - ಇತರ ಶತ್ರುಗಳನ್ನು ಕೂಡ | **ಅಹಮ್** | - ನಾನು |
| | | **ಸಿದ್ಧಃ** | - ಎಲ್ಲ ಸಿದ್ಧಿಗಳಿಂದ ಕೂಡಿದ್ದೇನೆ (ಮತ್ತು) |
| **ಅಹಮ್** | - ನಾನು | **ಬಲವಾನ್** | - ಬಲಶಾಲಿ (ಹಾಗೂ) |
| **ಹನಿಷ್ಯೆ** | - ಕೊಲ್ಲುವೆನು | **ಸುಖೀ** | - ಸುಖಿಯಾಗಿದ್ದೇನೆ |

ಆಢ್ಯಃ, ಅಭಿಜನವಾನ್, ಅಸ್ಮಿ, ಕಃ, ಅನ್ಯಃ, ಅಸ್ತಿ, ಸದೃಶಃ, ಮಯಾ,
ಯಕ್ಷ್ಯೇ, ದಾಸ್ಯಾಮಿ, ಮೋದಿಷ್ಯೇ, ಇತಿ, ಅಜ್ಞಾನವಿಮೋಹಿತಾಃ ॥೧೫॥
ಅನೇಕಚಿತ್ತವಿಭ್ರಾಂತಾಃ ಮೋಹಜಾಲಸಮಾವೃತಾಃ,
ಪ್ರಸಕ್ತಾಃ, ಕಾಮಭೋಗೇಷು, ಪತಂತಿ, ನರಕೇ, ಅಶುಚೌ ॥೧೬॥

**ಆದುದರಿಂದ ನಾನು -**

| | | | |
|---|---|---|---|
| **ಆಢ್ಯಃ** | - ದೊಡ್ಡಶ್ರೀಮಂತ (ಮತ್ತು) | **ಇತಿ** | - ಈ ಪ್ರಕಾರವಾಗಿ |
| **ಅಭಿಜನವಾನ್** | - ದೊಡ್ಡ ಕುಟುಂಬವುಳ್ಳವನು | **ಅಜ್ಞಾನ-ವಿಮೋಹಿತಾಃ** | - ಅಜ್ಞಾನದಿಂದ ಮೋಹಿತರಾಗಿರುವ (ಹಾಗೂ) |
| **ಅಸ್ಮಿ** | - ಆಗಿದ್ದೇನೆ | **ಅನೇಕಚಿತ್ತ-ವಿಭ್ರಾಂತಾಃ** | - ಅನೇಕ ರೀತಿಯಲ್ಲಿ ಭ್ರಮಿತಚಿತ್ತವುಳ್ಳವರು |
| **ಮಯಾ** | - ನನ್ನ | **ಮೋಹಜಾಲ-ಸಮಾವೃತಾಃ** | - ಮೋಹರೂಪೀ ಜಾಲದಲ್ಲಿ ಸಿಕ್ಕಿಹಾಕಿಕೊಂಡಿರುವ (ಮತ್ತು) |
| **ಸದೃಶಃ** | - ಸಮಾನ | | |
| **ಅನ್ಯಃ** | - ಬೇರೆ | | |
| **ಕಃ** | - ಯಾರು | | |

**ಅಸ್ತಿ** - ಇದ್ದಾರೆ (ನಾನು)
**ಯಕ್ಷ್ಯೇ** - ಯಜ್ಞವನ್ನು ಮಾಡುವೆನು
**ದಾಸ್ಯಾಮಿ** - ದಾನವನ್ನು ಕೊಡುವೆನು (ಮತ್ತು)
**ಮೋದಿಷ್ಯೇ** - ಆಮೋದ-ಪ್ರಮೋದ ಮಾಡುವೆನು

**ಕಾಮಭೋಗೇಷು** - ವಿಷಯ ಭೋಗಗಳಲ್ಲಿ
**ಪ್ರಸಕ್ತಾಃ** - ಅತ್ಯಂತ ಆಸಕ್ತರು (ಅಸುರ ಜನರು)
**ಅಶುಚೌ** - ಅತಿ ಅಪವಿತ್ರವಾದ
**ನರಕೇ** - ನರಕದಲ್ಲಿ
**ಪತಂತಿ** - ಬೀಳುತ್ತಾರೆ.

ಆತ್ಮಸಂಭಾವಿತಾಃ, ಸ್ತಬ್ಧಾಃ, ಧನಮಾನಮದಾನ್ವಿತಾಃ, ಯಜಂತೇ,
ನಾಮಯಜ್ಞೈಃ, ತೇ, ದಂಭೇನ, ಅವಿಧಿಪೂರ್ವಕಮ್ ॥೧೭॥

**ಹಾಗೂ -**

**ತೇ** - ಅವರು
**ಆತ್ಮಸಂಭಾವಿತಾಃ** - ತಾವು-ತಮ್ಮನ್ನೇ ಶ್ರೇಷ್ಠರೆಂದು ತಿಳಿಯುವವರು
**ಸ್ತಬ್ಧಾಃ** - ಅಹಂಕಾರೀ ಪುರುಷರು
**ಧನಮಾನ-ಮದಾನ್ವಿತಾಃ** - ಧನ ಮತ್ತು ಮಾನದ ಮದದಿಂದ ಕೂಡಿದವರಾಗಿ

**ನಾಮಯಜ್ಞೈಃ** - ಕೇವಲ ಹೆಸರಿಗೆ ಮಾತ್ರ ಯಜ್ಞಗಳ ಮೂಲಕ
**ದಂಭೇನ** - ಪಾಖಂಡತೆಯಿಂದ
**ಅವಿಧಿ-ಪೂರ್ವಕಮ್** - ಶಾಸ್ತ್ರವಿಧಿರಹಿತವಾದ
**ಯಜಂತೇ** - ಯಜ್ಞವನ್ನು ಮಾಡುತ್ತಾರೆ.

ಅಹಂಕಾರಮ್, ಬಲಮ್, ದರ್ಪಮ್, ಕಾಮಮ್, ಕ್ರೋಧಮ್, ಚ, ಸಂಶ್ರಿತಾಃ,
ಮಾಮ್, ಆತ್ಮಪರದೇಹೇಷು, ಪ್ರದ್ವಿಷಂತಃ, ಅಭ್ಯಸೂಯಕಾಃ ॥೧೮॥

**ಹಾಗೂ ಆ -**

**ಅಹಂಕಾರಮ್** - ಅಹಂಕಾರ
**ಬಲಮ್** - ಬಲ
**ದರ್ಪಮ್** - ದರ್ಪ
**ಕಾಮಮ್** - ಕಾಮನೆ (ಮತ್ತು)
**ಅಭ್ಯಸೂಯಕಾಃ** - ಇತರರನ್ನುನಿಂದಿಸುವ ಪುರುಷರು
**ಆತ್ಮಪರದೇಹೇಷು** - ತನ್ನ ಮತ್ತು ಇತರರ ಶರೀರದಲ್ಲಿ (ಸ್ಥಿತವಾದ)

**ಕ್ರೋಧಮ್** - ಕ್ರೋಧವೇ ಮೊದಲಾದವುಗಳ
**ಸಂಶ್ರಿತಾಃ** - ಆಶ್ರಿತರು
**ಚ** - ಇಷ್ಟೇ ಅಲ್ಲ ಇನ್ನೂ
**ಮಾಮ್** - ಅಂತರ್ಯಾಮಿ ಯಾದ ನನ್ನೊಡನೆ
**ಪ್ರದ್ವಿಷಂತಃ** - ದ್ವೇಷಮಾಡುತ್ತಾರೆ.

ತಾನ್, ಅಹಮ್, ದ್ವಿಷತಃ, ಕ್ರೂರಾನ್, ಸಂಸಾರೇಷು, ನರಾಧಮಾನ್,
ಕ್ಷಿಪಾಮಿ, ಅಜಸ್ರಮ್, ಅಶುಭಾನ್, ಆಸುರೀಷು, ಏವ, ಯೋನಿಷು ॥೧೯॥

**ಹೀಗೆ -**

**ತಾನ್** - ಆ
**ದ್ವಿಷತಃ** - ದ್ವೇಷಮಾಡುವ

**ಅಹಮ್** - ನಾನು
**ಸಂಸಾರೇಷು** - ಪ್ರಪಂಚದಲ್ಲಿ

**ಅಶುಭಾನ್** - ಪಾಪಾಚಾರಿಗಳೂ (ಮತ್ತು)
**ಕ್ರೂರಾನ್** - ಕ್ರೂರಕರ್ಮಿಗಳಾದ
**ನರಾಧಮಾನ್** - ನರಾಧಮರನ್ನು
**ಅಜಸ್ರಮ್** - ಪದೇ ಪದೇ
**ಆಸುರೀಷು** - ಆಸುರೀ
**ಯೋನಿಷು, ಏವ,** - ಯೋನಿಗಳಲ್ಲಿಯೇ
**ಕ್ಷಿಪಾಮಿ** - ಹಾಕುತ್ತೇನೆ

ಆಸುರೀಮ್, ಯೋನಿಮ್, ಆಪನ್ನಾಃ, ಮೂಢಾ, ಜನ್ಮನಿ, ಜನ್ಮನಿ,
ಮಾಮ್, ಅಪ್ರಾಪ್ಯ, ಏವ, ಕೌಂತೇಯ, ತತಃ, ಯಾಂತಿ, ಅಧಮಾಮ್, ಗತಿಮ್ ॥೨೦॥

**ಆದುದರಿಂದ -**

**ಕೌಂತೇಯ** - ಹೇ ಅರ್ಜುನಾ !
**ಮೂಢಾಃ** - ಆ ಮೂಢರು
**ಮಾಮ್** - ನನ್ನನ್ನು
**ಅಪ್ರಾಪ್ಯ** - ಪಡೆದುಕೊಳ್ಳದೆ
**ಜನ್ಮನಿ, ಜನ್ಮನಿ** - ಜನ್ಮ ಜನ್ಮದಲ್ಲಿ
**ಆಸುರೀಮ್** - ಆಸುರೀ
**ಯೋನಿಮ್** - ಯೋನಿಯನ್ನು
**ಆಪನ್ನಾಃ** - ಪಡೆಯುತ್ತಾರೆ
(ಅನಂತರ)
**ತತಃ** - ಅದಕ್ಕಿಂತಲೂ ಕೂಡ
**ಅಧಮಾಮ್** - ಅತಿ ನೀಚ
**ಗತಿಮ್, ಏವ** - ಗತಿಯನ್ನೇ *
**ಯಾಂತಿ** - ಪಡೆಯುತ್ತಾರೆ ಅರ್ಥಾತ್ ಘೋರವಾದ ನರಕದಲ್ಲಿ ಬೀಳುತ್ತಾರೆ.

ತ್ರಿವಿಧಮ್, ನರಕಸ್ಯ, ಇದಮ್, ದ್ವಾರಮ್, ನಾಶನಮ್, ಆತ್ಮನಃ
ಕಾಮಃ, ಕ್ರೋಧಃ, ತಥಾ, ಲೋಭಃ, ತಸ್ಮಾತ್, ಏತತ್, ತ್ರಯಮ್, ತ್ಯಜೇತ್ ॥೨೧॥

**ಮತ್ತು ಎಲೈ ಅರ್ಜುನಾ ! -**

**ಕಾಮಃ** - ಕಾಮವು
**ಕ್ರೋಧಃ** - ಕ್ರೋಧವು
**ತಥಾ** - ಹಾಗೂ
**ಲೋಭಃ** - ಲೋಭವು
**ದ್ವಾರಮ್** - ದ್ವಾರಗಳು *
**ಆತ್ಮನಃ** - ಆತ್ಮನನ್ನು
**ನಾಶನಮ್** - ನಾಶ ಮಾಡುವವುಗಳಾಗಿವೆ ಅರ್ಥಾತ್ ಅವನನ್ನು ಅಧೋಗತಿಗೆ ತೆಗೆದುಕೊಂಡು
**ಇದಮ್** - ಈ
**ತ್ರಿವಿಧಮ್** - ಮೂರು ಪ್ರಕಾರದ
**ನರಕಸ್ಯ** - ನರಕದ
ಹೋಗು ವಂಥವುಗಳಾಗಿವೆ
**ತಸ್ಮಾತ್** - ಆದಕಾರಣ
**ಏತತ್** - ಈ
**ತ್ರಯಮ್** - ಮೂರನ್ನೂ
**ತ್ಯಜೇತ್** - ತ್ಯಜಿಸಬೇಕು.

ಏತೈಃ, ವಿಮುಕ್ತಃ, ಕೌಂತೇಯ, ತಮೋದ್ವಾರೈಃ, ತ್ರಿಭಿಃ, ನರಃ,
ಆಚರತಿ, ಆತ್ಮನಃ, ಶ್ರೇಯಃ, ತತಃ, ಯಾತಿ, ಪರಾಮ್, ಗತಿಮ್ ॥೨೨॥

**ಏಕೆಂದರೆ -**

**ಕೌಂತೇಯ** - ಹೇ ಅರ್ಜುನನೇ!
**ಏತೈಃ** - ಈ
**ಆಚರತಿ** - ಆಚರಣೆ ಮಾಡುತ್ತಾನೆ ‡

ತ್ರಿಭಿಃ - ಮೂರೂ
ತಮೋದ್ವಾರೈಃ - ನರಕದ ದ್ವಾರಗಳಿಂದ
ವಿಮುಕ್ತಃ - ಮುಕ್ತನಾದ †
ನರಃ - ಪುರುಷನು
ಆತ್ಮನಃ - ತನ್ನ
ಶ್ರೇಯಃ - ಶ್ರೇಯಸ್ಸಿನ
ತತಃ - ಇದರಿಂದ (ಅವನು)
ಪರಾಮ್ - ಪರಮ
ಗತಿಮ್ - ಗತಿಗೆ
ಯಾತಿ - ಹೋಗುತ್ತಾನೆ ಅರ್ಥಾತ್ ನನ್ನನ್ನು ಪ್ರಾಪ್ತನಾಗುತ್ತಾನೆ.

ಯಃ ಶಾಸ್ತ್ರವಿಧಿಮ್, ಉತ್ಸೃಜ್ಯ, ವರ್ತತೇ, ಕಾಮಕಾರತಃ,
ನ, ಸಃ, ಸಿದ್ಧಿಮ್, ಅವಾಪ್ನೋತಿ, ನ, ಸುಖಮ್, ನ, ಪರಾಮ್, ಗತಿಮ್ ॥೨೩॥

ಮತ್ತು -

ಯಃ - ಯಾವ ಪುರುಷನು
ಶಾಸ್ತ್ರವಿಧಿಮ್ - ಶಾಸ್ತ್ರವಿಧಿಯನ್ನು
ಉತ್ಸೃಜ್ಯ - ತ್ಯಜಿಸಿ
ಕಾಮಕಾರತಃ - ತನ್ನ ಇಚ್ಛೆಯಿಂದ ಮನ ಬಂದಂತೆ
ವರ್ತತೇ - ಆಚರಣೆ ಮಾಡುತ್ತಾನೆಯೋ
ಸಃ - ಅವನು
ಸಿದ್ಧಿಮ್ - ಸಿದ್ಧಿಯನ್ನು
ನ, ಅವಾಪ್ನೋತಿ - ಪಡೆಯುವುದಿಲ್ಲ
ನ, ಪರಾಮ್- ಗತಿಮ್ - ಪರಮ ಗತಿಯನ್ನು ಪಡೆಯುವುದಿಲ್ಲ (ಮತ್ತು)
ನ, ಸುಖಮ್ - ಸುಖವನ್ನೂ ಪಡೆಯುವುದಿಲ್ಲ.

ತಸ್ಮಾತ್, ಶಾಸ್ತ್ರಮ್, ಪ್ರಮಾಣಮ್, ತೇ, ಕಾರ್ಯಾಕಾರ್ಯವ್ಯವಸ್ಥಿತೌ,
ಜ್ಞಾತ್ವಾ, ಶಾಸ್ತ್ರವಿಧಾನೋಕ್ತಮ್, ಕರ್ಮ, ಕರ್ತುಮ್, ಇಹ, ಅರ್ಹಸಿ ॥೨೪॥

ತಸ್ಮಾತ್ - ಆದ್ದರಿಂದ
ತೇ - ನಿನಗಾಗಿ
ಇಹ, ಕಾರ್ಯಾ- ಕಾರ್ಯ ವ್ಯವಸ್ಥಿತೌ - ಈ ಕರ್ತವ್ಯ ಮತ್ತು ಅಕರ್ತವ್ಯದ ವ್ಯವಸ್ಥೆಯಲ್ಲಿ
ಶಾಸ್ತ್ರಮ್ - ಶಾಸ್ತ್ರವೇ
ಪ್ರಮಾಣಮ್ - ಪ್ರಮಾಣವಾಗಿದೆ
(ಏವಮ್) - ಹೀಗೆಂದು
ಜ್ಞಾತ್ವಾ - ತಿಳಿದು (ನೀನು)
ಶಾಸ್ತ್ರವಿಧಾ- ನೋಕ್ತಮ್ - ಶಾಸ್ತ್ರವಿಧಿಯಿಂದ ನಿಯತವಾದ
ಕರ್ಮ - ಕರ್ಮವೇ
ಕರ್ತುಮ್ - ಮಾಡಲು
ಅರ್ಹಸಿ - ಯೋಗ್ಯನಾಗಿರುವೆ.

ಶ್ರೀ ಮದ್ಭಗವದ್ಗೀತೆ ಅಧ್ಯಾಯ 17 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥ ಸಪ್ತದಶೋಽಧ್ಯಾಯಃ -ಶ್ರದ್ಧಾತ್ರಯ ವಿಭಾಗ ಯೋಗ ॥

ಯೇ, ಶಾಸ್ತ್ರವಿಧಿಮ್, ಉತ್ಸೃಜ್ಯ, ಯಜಂತೇ, ಶ್ರದ್ಧಯಾ, ಅನ್ವಿತಾಃ,
ತೇಷಾಮ್, ನಿಷ್ಠಾ ತು, ಕಾ, ಕೃಷ್ಣ ಸತ್ತ್ವಮ್, ಆಹೋ, ರಜಃ, ತಮಃ ॥೧॥

**ಹೀಗೆ ಭಗವಂತನ ವಚನಗಳನ್ನು ಕೇಳಿ ಅರ್ಜುನ ಹೇಳಿದನು -**

| | | | |
|---|---|---|---|
| **ಕೃಷ್ಣ** | - ಹೇ ಶ್ರೀಕೃಷ್ಣ! | **ತೇಷಾಮ್** | - ಅವರ |
| **ಯೇ** | - ಯಾವ ಮನುಷ್ಯರು | **ನಿಷ್ಠಾ** | - ಸ್ಥಿತಿಯು |
| **ಶಾಸ್ತ್ರವಿಧಿಮ್** | - ಶಾಸ್ತ್ರವಿಧಿಯನ್ನು | **ತು** | - ಮತ್ತೆ |
| **ಉತ್ಸೃಜ್ಯ** | - ತ್ಯಾಗಮಾಡಿ | **ಕಾ** | - ಎಂತಹುದು? |
| **ಶ್ರದ್ಧಯಾ** | - ಶ್ರದ್ಧೆಯಿಂದ | **ಸತ್ತ್ವಮ್** | - ಸಾತ್ತ್ವಿಕವೋ |
| **ಅನ್ವಿತಾಃ** | - ಕೂಡಿದವರಾಗಿ | **ಆಹೋ** | - ಅಥವಾ |
| **ಯಜಂತೇ** | - ದೇವತೆಗಳ ಪೂಜೆಯನ್ನು ಮಾಡುತ್ತಾರೆಯೋ | **ರಜಃ** | - ರಾಜಸವೋ (ಅಥವಾ) |
| | | **ತಮಃ** | - ತಾಮಸವೋ? |

ತ್ರಿವಿಧಾ, ಭವತಿ, ಶ್ರದ್ಧಾ, ದೇಹಿನಾಮ್, ಸಾ, ಸ್ವಭಾವಜಾ,
ಸಾತ್ತ್ವಿಕೀ, ರಾಜಸೀ ಚ, ಏವ, ತಾಮಸೀ, ಚ, ಇತಿ, ತಾಮ್, ಶೃಣು ॥೨॥

**ಹೀಗೆ ಅರ್ಜುನ ಕೇಳಿದ ನಂತರ ಶ್ರೀಕೃಷ್ಣ ಹೇಳಿದನು - ಎಲೈ ಅರ್ಜುನಾ ! -**

| | | | |
|---|---|---|---|
| **ದೇಹಿನಾಮ್** | - ಮನುಷ್ಯರ (ಶಾಸ್ತ್ರೀಯ ಸಂಸ್ಕಾರಗಳಿಂದ ರಹಿತವಾದ ಕೇವಲ) | **ಚ** | - ಹಾಗೂ |
| | | **ತಾಮಸೀ** | - ತಾಮಸ |
| | | **ಇತಿ** | - ಹೀಗೆ |
| **ಸ್ವಭಾವಜಾ** | - ಸ್ವಭಾವದಿಂದ ಉತ್ಪನ್ನವಾದ* | **ತ್ರಿವಿಧಾ, ಏವ** | - ಮೂರೂ ಪ್ರಕಾರದ್ದಾಗಿಯೇ |
| **ಸಾ, ಶ್ರದ್ಧಾ** | - ಆ ಶ್ರದ್ಧೆಯು | **ಭವತಿ** | - ಇರುತ್ತದೆ |
| **ಸಾತ್ತ್ವಿಕೀ** | - ಸಾತ್ತ್ವಿಕ | **ತಾಮ್** | - ಅದನ್ನು(ನೀನು) |
| **ಚ** | - ಮತ್ತು | **(ಮತ್ತಃ)** | - ನನ್ನಿಂದ |
| **ರಾಜಸೀ** | - ರಾಜಸ | **ಶೃಣು** | - ಕೇಳು. |

ಸತ್ತ್ವಾನುರೂಪಾ, ಸರ್ವಸ್ಯ, ಶ್ರದ್ಧಾ ಭವತಿ, ಭಾರತ,
ಶ್ರದ್ಧಾಮಯಃ, ಅಯಮ್, ಪುರುಷಃ, ಯಃ, ಯಚ್ಛ್ರದ್ಧಃ ಸಃ, ಏವ, ಸಃ, ॥೩॥

| | | | |
|---|---|---|---|
| **ಭಾರತ** | - ಹೇ ಅರ್ಜುನಾ! | **(ಅತಃ)** | - ಆದ್ದರಿಂದ |
| **ಸರ್ವಸ್ಯ** | - ಎಲ್ಲಮನುಷ್ಯರ | **ಯಃ** | - ಯಾವ ಪುರುಷನು |
| **ಶ್ರದ್ಧಾ** | - ಶ್ರದ್ಧೆಯು | **ಯಚ್ಛ್ರದ್ಧಃ** | - ಎಂತಹ ಶ್ರದ್ಧೆಯುಳ್ಳವನಾಗಿದ್ದಾನೋ |
| **ಸತ್ತ್ವಾನುರೂಪಾ** | - ಅವರ ಅಂತಃಕರಣಕ್ಕೆ ಅನುರೂಪವಾಗಿ | **ಸಃ** | - ಅವನು ಕೂಡ |
| **ಭವತಿ** | - ಇರುತ್ತದೆ | **ಸಃ ಏವ** | - ಸ್ವಯಂ ಅದೇ ಸ್ವಭಾವದವನಾಗಿದ್ದಾನೆ |
| **ಅಯಮ್-ಪುರುಷಃ** | - ಈ ಪುರುಷನು | | |
| **ಶ್ರದ್ಧಾಮಯಃ** | - ಶ್ರದ್ಧಾಮಯನಾಗಿದ್ದಾನೆ | | |

ಯಜಂತೇ ಸಾತ್ತ್ವಿಕಾಃ, ದೇವಾನ್, ಯಕ್ಷರಕ್ಷಾಂಸಿ, ರಾಜಸಾಃ,
ಪ್ರೇತಾನ್, ಭೂತಗಣಾನ್, ಚ, ಅನ್ಯೇ, ಯಜಂತೇ, ತಾಮಸಾಃ, ಜನಾಃ ॥೪॥

ಅವರಲ್ಲಿ -

| | | | |
|---|---|---|---|
| ಸಾತ್ತ್ವಿಕಾಃ | - ಸಾತ್ತ್ವಿಕ ಪುರುಷರು | ಅನ್ಯೇ | - ಬೇರೆ |
| ದೇವಾನ್ | - ದೇವತೆಗಳನ್ನು | ತಾಮಸಾಃ | - ತಾಮಸ |
| ಯಜಂತೇ | - ಪೂಜಿಸುತ್ತಾರೆ | ಜನಾಃ | - ಮನುಷ್ಯರು |
| ರಾಜಸಾಃ | - ರಾಜಸ ಪುರುಷರು | ಪ್ರೇತಾನ್, ಚ | - ಪ್ರೇತ ಮತ್ತು |
| ಯಕ್ಷರಕ್ಷಾಂಸಿ | - ಯಕ್ಷ ಮತ್ತು ರಾಕ್ಷಸರನ್ನು (ಹಾಗೂ) | ಭೂತಗಣಾನ್ | - ಭೂತಗಣಗಳನ್ನು |
| | | ಯಜಂತೆ | - ಪೂಜಿಸುತ್ತಾರೆ. |

ಅಶಾಸ್ತ್ರವಿಹಿತಮ್, ಘೋರಮ್, ತಪ್ಯಂತೇ, ಯೇ, ತಪಃ, ಜನಾಃ,
ದಂಭಾಹಂಕಾರಸಂಯುಕ್ತಾಃ, ಕಾಮರಾಗಬಲಾನ್ವಿತಾಃ ॥೫॥

ಮತ್ತು ಎಲೈ ಅರ್ಜುನಾ ! -

| | | | |
|---|---|---|---|
| ಯೇ ಜನಾಃ | - ಯಾವ ಮನುಷ್ಯರು | ದಂಭಾಹಂಕಾರ-ಸುಯುಕ್ತಾಃ | - ದಂಭ ಮತ್ತು ಅಹಂಕಾರದಿಂದ ಕೂಡಿದವರಾಗಿ (ಹಾಗೂ) |
| ಅಶಾಸ್ತ್ರವಿಹಿತಮ್ | - ಶಾಸ್ತ್ರವಿಧಿಯಿಂದ ರಹಿತವಾದ (ಕೇವಲ ಮನಬಂದಂತೆ) | ಕಾಮರಾಗ-ಬಲಾನ್ವಿತಾಃ | - ಕಾಮನೆ, ಆಸಕ್ತಿ ಮತ್ತು ಬಲದ ಅಭಿಮಾನದಿಂದಲೂ ಕೂಡಿದ್ದಾರೋ |
| ಘೋರಮ್ | - ಘೋರವಾದ | | |
| ತಪಃ | - ತಪಸ್ಸನ್ನು | | |
| ತಪ್ಯಂತೇ | - ಆಚರಿಸುತ್ತಾರೋ (ಹಾಗೂ) | | |

ಕರ್ಶಯಂತಃ, ಶರೀರಸ್ಥಮ್, ಭೂತಗ್ರಾಮಮ್, ಅಚೇತಸಃ,
ಮಾಮ್, ಚ, ಏವ, ಅಂತಃಶರೀರಸ್ಥಮ್, ತಾನ್, ವಿದ್ಧಿ, ಆಸುರನಿಶ್ಚಯಾನ್ ॥೬॥

ಹಾಗೂ ಯಾರು -

| | | | |
|---|---|---|---|
| ಶರೀರಸ್ಥಮ್ | - ಶರೀರ ರೂಪದಿಂದ ಸ್ಥಿತವಾದ | ಚ | - ಮತ್ತು |
| ಭೂತಗ್ರಾಮಮ್ | - ಭೂತ ಸಮುದಾಯವನ್ನು* | ಅಂತಃಶರೀರ-ಸ್ಥಮ್ | - ಅಂತಃಕರಣದಲ್ಲಿ ಸ್ಥಿತನಾದ |
| ಮಾಮ್, ಏವ | - ಪರಮಾತ್ಮನಾದ ನನ್ನನ್ನು ಕೂಡ | ಅಚೇತಸಃ | - ಅಜ್ಞಾನಿಗಳನ್ನು (ನೀನು) |
| ಕರ್ಶಯಂತಃ | - ಕೃಶಗೊಳಿಸುವವರಾಗಿದ್ದಾರೋ * | ಆಸುರ-ನಿಶ್ಚಯಾನ್ | - ಆಸುರೀ ಸ್ವಭಾವದವರೆಂದು |
| ತಾನ್ | - ಆ | ವಿದ್ಧಿ | - ತಿಳಿ. |

ಆಹಾರಃ, ತು, ಅಪಿ, ಸರ್ವಸ್ಯ, ತ್ರಿವಿಧಃ, ಭವತಿ, ಪ್ರಿಯಃ,
ಯಜ್ಞಃ, ತಪಃ, ತಥಾ, ದಾನಮ್, ತೇಷಾಮ್, ಭೇದಮ್, ಇಮಮ್, ಶೃಣು ॥೭॥

**ಮತ್ತು ಎಲೈ ಅರ್ಜುನಾ ! ಶ್ರದ್ಧೆಯು ಮೂರು ವಿಧವಾಗಿರುವಂತೆಯೇ –**

| | | | |
|---|---|---|---|
| **ಆಹಾರಃ** | – ಭೋಜನವು | **ದಾನಮ್** | – ದಾನವೂ ಸಹ ಮೂರು–ಮೂರು ಪ್ರಕಾರದ್ದಾಗಿರುತ್ತವೆ |
| **ಅಪಿ** | – ಕೂಡ | **ತೇಷಾಮ್** | – ಅವುಗಳ |
| **ಸರ್ವಸ್ಯ** | – ಎಲ್ಲರಿಗೂ (ತಮ್ಮ ತಮ್ಮ ಪ್ರಕೃತಿ ಗನುಗುಣವಾಗಿ) | **ಇಮಮ್** | – ಈ (ಬೇರೆ–ಬೇರೆಯಾದ) |
| **ತ್ರಿವಿಧಃ** | – ಮೂರು ಪ್ರಕಾರವಾಗಿ | **ಭೇದಮ್ (ಮತ್ತಃ)** | – ಭೇದವನ್ನು (ನನ್ನಿಂದ) |
| **ಪ್ರಿಯಃ, ಭವತಿ** | – ಪ್ರಿಯವಾಗಿರುತ್ತದೆ | **ಶೃಣು** | – ನೀನು ಕೇಳು. |
| **ತು, ತಥಾ** | – ಮತ್ತು ಹಾಗೆಯೇ | | |
| **ಯಜ್ಞಃ** | – ಯಜ್ಞವು | | |
| **ತಪಃ** | – ತಪಸ್ಸು (ಮತ್ತು) | | |

ಆಯುಃ–ಸತ್ತ್ವ–ಬಲ–ಆರೋಗ್ಯ,–ಸುಖ–ಪ್ರೀತಿ–ವಿವರ್ಧನಾಃ,
ರಸ್ಯಾಃ, ಸ್ನಿಗ್ಧಾಃ, ಸ್ಥಿರಾಃ, ಹೃದ್ಯಾಃ, ಆಹಾರಾಃ, ಸಾತ್ತ್ವಿಕಪ್ರಿಯಾಃ ॥೮॥

| | | | |
|---|---|---|---|
| **ಆಯುಃ– ಸತ್ವಬಲ– ಆರೋಗ್ಯ– ಸುಖಪ್ರೀತಿ– ವಿವರ್ಧನಾಃ** | – ಆಯಸ್ಸು ಬುದ್ಧಿ ಬಲ, ಆರೋಗ್ಯ, ಸುಖ ಮತ್ತು ಪ್ರೀತಿಯನ್ನು ಹೆಚ್ಚಿಸುವ, | **ಹೃದ್ಯಾಃ** | – ಸ್ವಭಾವದಿಂದಲೇ ಮನಸ್ಸಿಗೆ ಪ್ರಿಯವಾದಂತಹ |
| **ರಸ್ಯಾಃ** | – ರಸಯುಕ್ತ | **ಆಹಾರಾಃ** | – ಆಹಾರ ಅಂದರೆ ಭೋಜನ ಮಾಡುವ ಪದಾರ್ಥಗಳು |
| **ಸ್ನಿಗ್ಧಾಃ** | – ಸ್ನೇಹಯುಕ್ತ (ಮತ್ತು) | **ಸಾತ್ವಿಕಪ್ರಿಯಾಃ** | – ಸಾತ್ವಿಕ ಪುರುಷನಿಗೆ ಪ್ರಿಯವಾಗಿರುತ್ತವೆ. |
| **ಸ್ಥಿರಾಃ** | – ಸ್ಥಿರವಾಗಿರುವ * (ಹಾಗೂ) | | |

ಕಟು–ಆಮ್ಲ–ಲವಣ–ಅತ್ಯುಷ್ಣ–ತೀಕ್ಷ್ಣ– ರೂಕ್ಷ– ವಿದಾಹಿನಃ,
ಆಹಾರಾಃ, ರಾಜಸಸ್ಯ, ಇಷ್ಟಾಃ, ದುಃಖಶೋಕಾಮಯಪ್ರದಾಃ ॥೯॥

**ಮತ್ತು –**

| | | | |
|---|---|---|---|
| **ಕಟು–ಆಮ್ಲ–** | – ಕಹಿ, ಹುಳಿ, ಉಪ್ಪಿನಿಂದ | **ಆಮಯ, ಪ್ರದಾಃ–** | ರೋಗಗಳನ್ನು ಉಂಟುಮಾಡುವ |
| **ಲವಣ, ಅತ್ಯುಷ್ಣ– ತೀಕ್ಷ್ಣ–ರೂಕ್ಷ ವಿದಾಹಿನಃ** | ಕೂಡಿದ, ತುಂಬಾ ಬಿಸಿ ಖಾರವಾದ, ಹುರಿದಿರುವ, ಉರಿಯುಂಟು ಮಾಡುವ (ಮತ್ತು) | **ಆಹಾರಾಃ** | – ಆಹಾರ ಅರ್ಥಾತ್ ಭೋಜನಮಾಡುವ ಪದಾರ್ಥಗಳು |
| | | **ರಾಜಸಸ್ಯ** | – ರಾಜಸ ಪುರುಷನಿಗೆ |
| | | **ಇಷ್ಟಾಃ** | – ಪ್ರಿಯವಾಗಿರುತ್ತವೆ. |
| **ದುಃಖಶೋಕ–** | – ದುಃಖ, ಚಿಂತೆ ಹಾಗೂ | | |

ಯಾತಯಾಮಮ್, ಗತರಸಮ್, ಪೂತಿ, ಪರ್ಯುಷಿತಮ್, ಚ, ಯತ್,
ಉಚ್ಛಿಷ್ಟಮ್, ಅಪಿ, ಚ, ಅಮೇಧ್ಯಮ್, ಭೋಜನಮ್, ತಾಮಸಪ್ರಿಯಮ್ ॥೧೦॥

| | | | |
|---|---|---|---|
| **ಯತ್** | - ಯಾವ | **ಉಚ್ಛಿಷ್ಟಮ್** | - ಎಂಜಲಾದುದು |
| **ಭೋಜನಮ್** | - ಭೋಜನವು | **ಚ** | - ಹಾಗೂ (ಯಾವುದು) |
| **ಯಾತಯಾಮಮ್** | - ಬೆಂದಿರುವ, | **ಅಮೇಧ್ಯಮ್** | - ಅಪವಿತ್ರವೂ |
| **ಗತರಸಮ್** | - ರಸರಹಿತವಾದ | **ಅಪಿ** | - ಆಗಿದೆಯೋ |
| **ಪೂತಿ** | - ದುರ್ಗಂಧ ಯುಕ್ತವಾದ | **(ತತ್)** | - ಆ ಭೋಜನವು |
| **ಪರ್ಯುಷಿತಮ್** | - ಹಳಸಿದ | **ತಾಮಸ-ಪ್ರಿಯಮ್** | - ತಾಮಸ ಪುರುಷನಿಗೆ ಪ್ರಿಯವಾಗಿರುತ್ತದೆ. |
| **ಚ** | - ಮತ್ತು | | |

ಅಫಲಾಕಾಂಕ್ಷಿಭಿಃ, ಯಜ್ಞಃ, ವಿಧಿದೃಷ್ಟಃ, ಯಃ, ಇಜ್ಯತೇ,
ಯಷ್ಟವ್ಯಮ್, ಏವ, ಇತಿ, ಮನಃ, ಸಮಾಧಾಯ, ಸಃ, ಸಾತ್ತ್ವಿಕಃ ॥೧॥

**ಮತ್ತು ಎಲೈ ಅರ್ಜುನಾ ! -**

| | | | |
|---|---|---|---|
| **ವಿಧಿದೃಷ್ಟಃ** | - ಶಾಸ್ತ್ರವಿಧಿಯಿಂದ ನಿಯತವಾದ | **ಸಮಾಧಾಯ** | - ಸಮಾಧಾನ ಮಾಡಿಕೊಂಡು |
| **ಯಃ** | - ಯಾವ | **ಅಫಲಾಕಾಂಕ್ಷಿಭಿಃ** | - ಫಲವನ್ನು ಬಯಸದ ಪುರುಷರ ಮೂಲಕ |
| **ಯಜ್ಞಃ** | - ಯಜ್ಞವು | **ಇಜ್ಯತೇ** | - ಮಾಡಲ್ಪಡುತ್ತದೆಯೋ |
| **ಯಷ್ಟವ್ಯಮ್, ಏವ** | - ಮಾಡುವುದೇ ಕರ್ತವ್ಯವಾಗಿದೆ | **ಸಃ** | - ಅದು |
| **ಇತಿ** | - ಈ ಪ್ರಕಾರವಾಗಿ | **ಸಾತ್ತ್ವಿಕಃ** | - ಸಾತ್ತ್ವಿಕವಾಗಿದೆ. |
| **ಮನಃ** | - ಮನಸ್ಸನ್ನು | | |

ಅಭಿಸಂಧಾಯ, ತು, ಫಲಮ್, ದಂಭಾರ್ಥಮ್, ಅಪಿ, ಚ, ಏವ, ಯತ್,
ಇಜ್ಯತೇ, ಭರತಶ್ರೇಷ್ಠ, ತಮ್, ಯಜ್ಞಮ್, ವಿದ್ಧಿ, ರಾಜಸಮ್ ॥೧೨॥

| | | | |
|---|---|---|---|
| **ತು** | - ಆದರೆ | **ದಂಭಾರ್ಥಮ್ ಏವ** | - ಕೇವಲ ದಂಭಾಚರಣೆಗಾಗಿಯೇ |
| **ಭರತಶ್ರೇಷ್ಠ** | - ಹೇ ಅರ್ಜುನಾ! | **ಇಜ್ಯತೇ** | - ಮಾಡಲಾಗುತ್ತದಯೋ |
| **ಚ** | - ಅಥವಾ | **ತಮ್, ಯಜ್ಞಮ್** | - ಆ ಯಜ್ಞವನ್ನು |
| **ಫಲಮ್** | - ಫಲವನ್ನು | **ರಾಜಸಮ್** | - (ನೀನು) ರಾಜಸವೆಂದು |
| **ಅಪಿ** | - ಸಹ | **ವಿದ್ಧಿ** | - ತಿಳಿ. |
| **ಅಭಿಸಂಧಾಯ** | - ದೃಷ್ಟಿಯಲ್ಲಿಟ್ಟುಕೊಂಡು | | |
| **ಯತ್** | - ಯಾವ ಯಜ್ಞವು | | |

ವಿಧಿಹೀನಮ್, ಅಸೃಷ್ಟಾನ್ನಮ್, ಮಂತ್ರಹೀನಮ್, ಅದಕ್ಷಿಣಮ್,
ಶ್ರದ್ಧಾವಿರಹಿತಮ್, ಯಜ್ಞಮ್, ತಾಮಸಮ್, ಪರಿಚಕ್ಷತೇ ॥೧೩॥

**ಹಾಗೂ -**

| | | | |
|---|---|---|---|
| **ವಿಧಿಹೀನಮ್** | - ಶಾಸ್ತ್ರವಿಧಿಯಿಂದ ರಹಿತವಾದ | **ಶ್ರದ್ಧಾವಿರಹಿತಮ್** | - ಶ್ರದ್ಧೆಯಿಲ್ಲದೆ ಮಾಡಲ್ಪಡುವ |
| **ಅಸೃಷ್ಟಾನ್ನಮ್** | - ಅನ್ನದಾನರಹಿತವಾದ | **ಯಜ್ಞಮ್** | - ಯಜ್ಞವನ್ನು |
| **ಮಂತ್ರಹೀನಮ್** | - ಮಂತ್ರಗಳಿಲ್ಲದೆ | **ತಾಮಸಮ್** | - ತಾಮಸ ಯಜ್ಞವೆಂದು |
| **ಅದಕ್ಷಿಣಮ್** | - ದಕ್ಷಿಣೆಯಿಲ್ಲದೆ (ಮತ್ತು) | **ಪರಿಚಕ್ಷತೇ** | - ಹೇಳುತ್ತಾರೆ. |

ದೇವದ್ವಿಜಗುರುಪ್ರಾಜ್ಞಪೂಜನಮ್, ಶೌಚಮ್, ಆರ್ಜವಮ್,
ಬ್ರಹ್ಮಚರ್ಯಮ್, ಅಹಿಂಸಾ, ಚ, ಶಾರೀರಮ್, ತಪಃ, ಉಚ್ಯತೇ ॥೧೪॥

**ಹಾಗೂ ಎಲೈ ಅರ್ಜುನಾ! -**

| | | | |
|---|---|---|---|
| **ದೇವದ್ವಿಜ-ಗುರು ಪ್ರಾಜ್ಞ-ಪೂಜನಮ್** | - ದೇವತೆಗಳ, ಬ್ರಾಹ್ಮಣರ, ಗುರುಗಳ ಮತ್ತು ಜ್ಞಾನಿಜನರ * ಪೂಜೆ | **ಬ್ರಹ್ಮಚರ್ಯಮ್** | - ಬ್ರಹ್ಮಚರ್ಯ |
| | | **ಚ** | - ಮತ್ತು |
| | | **ಅಹಿಂಸಾ** | - ಅಹಿಂಸೆ (ಇವು) |
| | | **ಶಾರೀರಮ್** | - ಶರೀರ ಸಂಬಂಧವಾದ |
| **ಶೌಚಮ್** | - ಪವಿತ್ರತೆ | **ತಪಃ** | - ತಪಸ್ಸೆಂಬುದಾಗಿ |
| **ಆರ್ಜವಮ್** | - ಸರಳತೆ | **ಉಚ್ಯತೇ** | - ಹೇಳಲಾಗುತ್ತದೆ. |

ಅನುದ್ವೇಗಕರಮ್, ವಾಕ್ಯಮ್, ಸತ್ಯಮ್, ಪ್ರಿಯಹಿತಮ್, ಚ, ಯತ್,
ಸ್ವಾಧ್ಯಾಯಾಭ್ಯಸನಮ್, ಚ, ಏವ, ವಾಙ್ಮಯಮ್, ತಪಃ, ಉಚ್ಯತೇ ॥೧೫॥

| | | | |
|---|---|---|---|
| **ಯತ್** | - ಯಾವುದು | **ಸ್ವಾಧ್ಯಾಯಾ-ಭ್ಯಸನಮ್** | - ವೇದಶಾಸ್ತ್ರಗಳ ಪಠಣದ ಮತ್ತು ಪರಮೇಶ್ವರನ ನಾಮ-ಜಪದ ಅಭ್ಯಾಸವಿದೆಯೋ |
| **ಅನುದ್ವೇಗಕರಂ** | - ಉದ್ವೇಗ ಗೊಳಿಸದಿರುವ | | |
| **ಪ್ರಿಯಹಿತಮ್** | - ಪ್ರಿಯ ಮತ್ತು ಹಿತಕಾರಕವಾದ | **(ತತ್) ಏವ** | - ಅದೇ |
| **ಚ** | - ಹಾಗೂ | **ವಾಙ್ಮಯಮ್** | - ವಾಣಿ ಸಂಬಂಧವಾದ |
| **ಸತ್ಯಮ್** | - ಯಥಾರ್ಥವಾದ | **ತಪಃ** | - ತಪಸ್ಸೆಂದು |
| **ವಾಕ್ಯಮ್** | - ಮಾತಾಗಿದೆಯೋ † | **ಉಚ್ಯತೇ** | - ಹೇಳಲಾಗುತ್ತದೆ. |
| **ಚ** | - ಮತ್ತು (ಯಾವುದು) | | |

ಮನಃಪ್ರಸಾದಃ, ಸೌಮ್ಯತ್ವಮ್, ಮೌನಮ್, ಆತ್ಮವಿನಿಗ್ರಹಃ
ಭಾವಸಂಶುದ್ಧಿಃ ಇತಿ, ಏತತ್, ತಪಃ, ಮಾನಸಮ್, ಉಚ್ಯತೇ ॥೧೬॥

| | | | |
|---|---|---|---|
| **ಮನಃಪ್ರಸಾದಃ** | - ಮನಸ್ಸಿನ ಪ್ರಸನ್ನತೆ | | |
| **ಸೌಮ್ಯತ್ವಮ್** | - ಶಾಂತಭಾವ | **ಇತಿ** | - ಈ ಪ್ರಕಾರವಾದ |
| **ಮೌನಮ್** | - ಭಗವತ್ ಚಿಂತನ ಮಾಡುವ ಸ್ವಭಾವ | **ಏತತ್** | - ಇದು |
| | | **ಮಾನಸಮ್** | - ಮನಸ್ಸಂಬಂಧವಾದ |
| **ಆತ್ಮವಿನಿಗ್ರಹಃ** | - ಮನಸ್ಸಿನ ನಿಗ್ರಹ (ಮತ್ತು) | **ತಪಃ** | - ತಪಸ್ಸೆಂದು |
| | | **ಉಚ್ಯತೇ** | - ಹೇಳಲಾಗುತ್ತದೆ. |
| **ಭಾವಸಂಶುದ್ಧಿಃ** | - ಅಂತಃಕರಣದ ಭಾವಗಳ ಪವಿತ್ರತೆ | | |

ಶ್ರದ್ಧಯಾ, ಪರಯಾ, ತಪ್ತಮ್, ತಪಃ, ತತ್, ತ್ರಿವಿಧಮ್,
ನರೈಃ ಅಫಲಾಕಾಂಕ್ಷಿಭಿಃ, ಯುಕ್ತೈಃ ಸಾತ್ತ್ವಿಕಮ್, ಪರಿಚಕ್ಷತೇ ॥೧೭॥

**ಆದರೆ, ಎಲೈ ಅರ್ಜುನಾ !**

| | | | |
|---|---|---|---|
| **ಅಫಲಾಕಾಂಕ್ಷಿಭಿಃ** | - ಫಲವನ್ನು ಇಚ್ಛಿಸದಿರುವ | **ನರೈಃ** | - ಪುರುಷರ ಮೂಲಕ |
| | | **ಪರಯಾ** | - ಪರಮ |
| **ಯುಕ್ತೈಃ** | - ಯೋಗೀ | **ಶ್ರದ್ಧಯಾ** | - ಶ್ರದ್ಧೆಯಿಂದ |
| **ತಪ್ತಮ್** | - ಮಾಡಲ್ಪಟ್ಟ | **ತಪಃ** | - ತಪವನ್ನು |
| **ತತ್** | - ಆ (ಹಿಂದೆ ಹೇಳಿದ) | **ಸಾತ್ತ್ವಿಕಮ್** | - ಸಾತ್ತ್ವಿಕವೆಂದು |
| **ತ್ರಿವಿಧಮ್** | - ಮೂರು ಪ್ರಕಾರದ | **ಪರಿಚಕ್ಷತೇ** | - ಹೇಳುತ್ತಾರೆ. |

ಸತ್ಕಾರಮಾನಪೂಜಾರ್ಥಮ್, ತಪಃ, ದಂಭೇನ, ಚ, ಏವ, ಯತ್,
ಕ್ರಿಯತೇ, ತತ್, ಇಹ, ಪ್ರೋಕ್ತಮ್, ರಾಜಸಮ್, ಚಲಮ್, ಅಧ್ರುವಮ್ ॥೧೮॥

| | | | |
|---|---|---|---|
| ಯತ್ | - ಯಾವ | ಕ್ರಿಯತೇ | - ಮಾಡಲಾಗುತ್ತದೆಯೋ |
| ತಪಃ | - ತಪವು | ತತ್ | - ಅದು |
| ಸತ್ಕಾರಮಾನ-ಪೂಜಾರ್ಥಮ್ | - ಸತ್ಕಾರ, ಮಾನ ಮತ್ತು ಪೂಜೆಗೋಸ್ಕರ (ಹಾಗೂ) | ಅಧ್ರುವಮ್ | - ಅನಿಶ್ಚಿತ * (ಹಾಗೂ) |
| | | ಚಲಮ್ | - ಕ್ಷಣಿಕವಾದ ಫಲವುಳ್ಳ ತಪವನ್ನು |
| ಚ, ಏವ | - ಬೇರೆ ಯಾವುದೋ ಸ್ವಾರ್ಥಕ್ಕಾಗಿಯೂ ಸ್ವಭಾವದಿಂದ | ಇಹ | - ಇಲ್ಲಿ |
| | | ರಾಜಸಮ್ | - ರಾಜಸವೆಂದು |
| (ವಾ) | - ಅಥವಾ | ಪ್ರೋಕ್ತಮ್ | - ಹೇಳಲಾಗಿದೆ. |
| ದಂಭೇನ | - ದಂಭದಿಂದ | | |

**ಮೂಢಗ್ರಾಹೇಣ, ಆತ್ಮನಃ, ಯತ್, ಪೀಡಯಾ, ಕ್ರಿಯತೇ, ತಪಃ**
**ಪರಸ್ಯ, ಉತ್ಸಾದನಾರ್ಥಮ್, ವಾ, ತತ್, ತಾಮಸಮ್, ಉದಾಹೃತಮ್ ॥೧೯॥**

| | | | |
|---|---|---|---|
| **ಯತ್, ತಪಃ** | - ಯಾವ ತಪವು | **ಪರಸ್ಯ** | - ಬೇರೊಬ್ಬರಿಗೆ |
| **ಮೂಢಗ್ರಾಹೇಣ** | - ಮೂಢತೆಯಿಂದೊಡಗೊಂಡ ಹಠದಿಂದ | **ಉತ್ಸಾದ-ನಾರ್ಥಮ್** | - ಅನಿಷ್ಟ ಮಾಡುವುದಕ್ಕಾಗಿ |
| **ಆತ್ಮನಃ** | - ಮನಸ್ಸು ವಾಣಿ ಮತ್ತು ಶರೀರದ | **ಕ್ರಿಯತೇ** | - ಮಾಡಲಾಗುತ್ತದೆಯೋ |
| | | **ತತ್** | - ಆ ತಪವು |
| **ಪೀಡಯಾ** | - ಪೀಡೆಯ ಸಹಿತ | **ತಾಮಸಮ್** | - ತಾಮಸವೆಂದು |
| **ವಾ** | - ಅಥವಾ | **ಉದಾಹೃತಮ್** | - ಹೇಳಲಾಗಿದೆ. |

ದಾತವ್ಯಮ್, ಇತಿ, ಯತ್, ದಾನಮ್, ದೀಯತೇ, ಅನುಪಕಾರಿಣೇ,
ದೇಶೇ, ಕಾಲೇ, ಚ, ಪಾತ್ರೇ, ಚ, ತತ್, ದಾನಮ್, ಸಾತ್ತ್ವಿಕಮ್, ಸ್ಮೃತಮ್ ॥೨೦॥

| | | | |
|---|---|---|---|
| **ದಾತವ್ಯಮ್** | - ದಾನಕೊಡುವುದೇ ತನ್ನ ಕರ್ತವ್ಯವಾಗಿದೆ | **ದೇಶೇ ಚ** | - ದೇಶ * ಹಾಗೂ |
| | | **ಕಾಲೇ ಚ** | - ಕಾಲ † ಮತ್ತು |
| **ಇತಿ** | - ಇಂತಹ ಭಾವದಿಂದ | **ಪಾತ್ರೇ** | - ಪಾತ್ರನು ‡ ಪ್ರಾಪ್ತವಾದಾಗ |
| **ಯತ್ ದಾನಮ್** | - ಯಾವ ದಾನವನ್ನು | | |

**ಅನುಪಕಾರಿಣೇ** - ಪ್ರತ್ಯುಪಕಾರ ಮಾಡದಿರುವವನಿಗೆ
**ದೀಯತೆ** - ಕೊಡಲಾಗುತ್ತದೆಯೋ
**ತತ್, ದಾನಮ್** - ಆ ದಾನವನ್ನು
**ಸಾತ್ವಿಕಮ್** - ಸಾತ್ವಿಕವೆಂದು
**ಸ್ಮೃತಮ್** - ಹೇಳಲಾಗಿದೆ.

ಯತ್, ತು, ಪ್ರತ್ಯುಪಕಾರಾರ್ಥಮ್, ಫಲಮ್, ಉದ್ದಿಶ್ಯ, ವಾ, ಪುನಃ
ದೀಯತೇ, ಚ, ಪರಿಕ್ಲಿಷ್ಟಮ್, ತತ್, ದಾನಮ್, ರಾಜಸಮ್, ಸ್ಮೃತಮ್ ॥೨೧॥

**ತು** - ಆದರೆ
**ಯತ್** - ಯಾವ (ದಾನ)
**ಪರಿಕ್ಲಿಷ್ಟಮ್** - ಕ್ಲೇಶಪೂರ್ವಕ*
**ಚ** - ಹಾಗೂ
**ಪ್ರತ್ಯುಪಕಾರಾ-ರ್ಥಮ್** - ಪ್ರತ್ಯುಪಕಾರದ ಪ್ರಯೋಜನದಿಂದ †
**ವಾ** - ಅಥವಾ
**ಫಲಮ್** - ಫಲವನ್ನು
**ಉದ್ದಿಶ್ಯ** - ದೃಷ್ಟಿಯಲ್ಲಿಟ್ಟು‡
**ಪುನಃ** - ಪುನಃ
**ದೀಯತೇ** - ಕೊಡಲಾಗುತ್ತದೆಯೋ
**ತತ್** - ಆ
**ದಾನಮ್** - ದಾನವು
**ರಾಜಸಮ್** - ರಾಜಸವೆಂದು
**ಸ್ಮೃತಮ್** - ಹೇಳಲಾಗಿದೆ

ಅದೇಶಕಾಲೇ, ಯತ್, ದಾನಮ್, ಅಪಾತ್ರೇಭ್ಯಃ, ಚ, ದೀಯತೇ
ಅಸತ್ಕೃತಮ್, ಅವಜ್ಞಾತಮ್, ತತ್, ತಾಮಸಮ್, ಉದಾಹೃತಮ್ ॥೨೨॥

**ಯತ್, ದಾನಮ್** - ಯಾವ ದಾನವು
**ಅಸತ್ಕೃತಮ್** - ಸತ್ಕಾರವಿಲ್ಲದೆ
**(ವಾ)** - ಅಥವಾ
**ಅವಜ್ಞಾತಮ್** - ತಿರಸ್ಕಾರ ಪೂರ್ವಕವಾಗಿ
**ಅದೇಶಕಾಲೇ** - ಅಯೋಗ್ಯವಾದ ದೇಶ-ಕಾಲಗಳಲ್ಲಿ
**ಚ** - ಮತ್ತು
**ಅಪಾತ್ರೇಭ್ಯಃ** - ಕುಪಾತ್ರನಿಗೆ *
**ದೀಯತೇ** - ಕೊಡಲಾಗುತ್ತದೆಯೋ
**ತತ್** - ಆ ದಾನವು
**ತಾಮಸಮ್** - ತಾಮಸವೆಂದು
**ಉದಾಹೃತಮ್** - ಹೇಳಲಾಗಿದೆ.

ಓಂ ತತ್ಸತ್, ಇತಿ, ನಿರ್ದೇಶಃ, ಬ್ರಹ್ಮಣಃ, ತ್ರಿವಿಧಃ, ಸ್ಮೃತಃ
ಬ್ರಾಹ್ಮಣಾಃ, ತೇನ, ವೇದಾಃ, ಚ, ಯಜ್ಞಾಃ, ಚ, ವಿಹಿತಾಃ, ಪುರಾ ॥೨೩॥

**ಮತ್ತು ಎಲೈ ಅರ್ಜುನಾ! -**

**ಓಂ** - ಓಂ
**ತತ್** - ತತ್
**ಸತ್** - ಸತ್
**ಇತಿ** - ಹೀಗೆ (ಈ)
**ತ್ರಿವಿಧಃ** - ಮೂರು ಪ್ರಕಾರದ
**ನಿರ್ದೇಶಃ** - ಹೆಸರುಗಳು
**ಬ್ರಹ್ಮಣಃ** - ಓರ್ವ ಸಚ್ಚಿದಾನಂದ ಘನನಾದ ಬ್ರಹ್ಮನ
**ಸ್ಮೃತಃ** - ಹೇಳಲಾಗಿದೆ
**ತೇನ** - ಅವನಿಂದಲೇ
**ಪುರಾ** - ಸೃಷ್ಟಿಯ ಆದಿಕಾಲದಲ್ಲಿ
**ಬ್ರಾಹ್ಮಣಾಃ** - ಬ್ರಾಹ್ಮಣರು
**ಚ** - ಮತ್ತು
**ವೇದಾಃ** - ವೇದಗಳು
**ಚ** - ಹಾಗೂ
**ಯಜ್ಞಾಃ** - ಯಜ್ಞಾದಿಗಳು
**ವಿಹಿತಾಃ** - ರಚಿಸಲ್ಪಟ್ಟವು.

ತಸ್ಮಾತ್, ಓಂ, ಇತಿ, ಉದಾಹೃತ್ಯ, ಯಜ್ಞದಾನತಪಃಕ್ರಿಯಾಃ,
ಪ್ರವರ್ತಂತೇ ವಿಧಾನೋಕ್ತಾಃ, ಸತತಮ್, ಬ್ರಹ್ಮವಾದಿನಾಮ್ ॥೨೪॥

**ತಸ್ಮಾತ್** - ಆದ್ದರಿಂದ
**ಬ್ರಹ್ಮವಾದಿನಾಮ್** - ವೇದಮಂತ್ರಗಳನ್ನು ಉಚ್ಚರಿಸುವ ಶ್ರೇಷ್ಠ ಪುರುಷರ
**ವಿಧಾನೋಕ್ತಾಃ** - ಶಾಸ್ತ್ರವಿಧಿಯಿಂದ ನಿಯತವಾದ
**ಯಜ್ಞದಾನ-ತಪಃಕ್ರಿಯಾಃ** - ಯಜ್ಞ, ದಾನ ಮತ್ತು ತಪೋರೂಪವಾದ ಕ್ರಿಯೆಗಳು
**ಸತತಮ್** - ಸದಾ
**ಓಮ್, ಇತಿ** - ಓಂ ಎಂದು ಪರಮಾತ್ಮನ ನಾಮವನ್ನು
**ಉದಾಹೃತ್ಯ** - ಉಚ್ಚಾರಣೆ ಮಾಡಿಯೇ
**ಪ್ರವರ್ತಂತೇ** - ಆರಂಭವಾಗುತ್ತದೆ.

ತತ್, ಇತಿ, ಅನಭಿಸಂಧಾಯ, ಫಲಮ್, ಯಜ್ಞತಪಃ ಕ್ರಿಯಾಃ,
ದಾನಕ್ರಿಯಾಃ, ಚ, ವಿವಿಧಾಃ, ಕ್ರಿಯಂತೇ, ಮೋಕ್ಷಕಾಂಕ್ಷಿಭಿಃ ॥೨೫॥

**ಮತ್ತು -**

**ತತ್** - ತತ್ ಅರ್ಥಾತ್ ತತ್ ಎಂಬ ಹೆಸರಿನಿಂದ ಹೇಳಲಾಗುವ ಪರಮಾತ್ಮನದ್ದೇ ಇದೆಲ್ಲವೂ ಆಗಿದೆ
**ಇತಿ** - ಈ (ಭಾವದಿಂದ)
**ಫಲಮ್** - ಫಲವನ್ನು
**ಅನಭಿಸಂಧಾಯ** - ಬಯಸದೆ
**ವಿವಿಧಾಃ** - ನಾನಾ ಪ್ರಕಾರದ
**ಯಜ್ಞತಪಃಕ್ರಿಯಾಃ**- ಯಜ್ಞ ತಪೋರೂಪವಾದ ಕ್ರಿಯೆಗಳು
**ಚ** - ಹಾಗೂ
**ದಾನಕ್ರಿಯಾಃ** - ದಾನರೂಪವಾದ ಕ್ರಿಯೆಗಳು
**ಮೋಕ್ಷಕಾಂಕ್ಷಿಭಿಃ** - ಶ್ರೇಯಸ್ಸಿನ ಇಚ್ಛೆಯುಳ್ಳ ಪುರುಷರ ಮೂಲಕ
**ಕ್ರಿಯಂತೇ** - ಮಾಡಲ್ಪಡುತ್ತವೆ.

ಸದ್ಭಾವೇ, ಸಾಧುಭಾವೇ, ಚ, ಸತ್, ಇತಿ, ಏತತ್, ಪ್ರಯುಜ್ಯತೇ,
ಪ್ರಶಸ್ತೇ, ಕರ್ಮಣಿ, ತಥಾ, ಸತ್, ಶಬ್ದಃ, ಪಾರ್ಥ, ಯುಜ್ಯತೇ ॥೨೬॥

**ಮತ್ತು -**

**ಸತ್** - ಸತ್
**ಇತಿ** - ಈ ಪ್ರಕಾರದ
**ಏತತ್** - ಈ (ಪರಮಾತ್ಮನ ನಾಮವನ್ನು)
**ಸದ್ಭಾವೇ** - ಸತ್ಯಭಾವದಲ್ಲಿ
**ಚ** - ಮತ್ತು
**ಸಾಧುಭಾವೇ** - ಶ್ರೇಷ್ಠಭಾವದಲ್ಲಿ
**ಪ್ರಯುಜ್ಯತೇ** - ಪ್ರಯೋಗಿಸಲ್ಪಡುತ್ತದೆ
**ತಥಾ** - ಹಾಗೂ
**ಪಾರ್ಥ** - ಹೇ ಪಾರ್ಥನೇ!
**ಪ್ರಶಸ್ತೇ** - ಉತ್ತಮವಾದ
**ಕರ್ಮಣಿ** - ಕರ್ಮದಲ್ಲಿ (ಸಹ)
**ಸತ್** - ಸತ್
**ಶಬ್ದಃ** - ಶಬ್ದದ
**ಯುಜ್ಯತೇ** - ಪ್ರಯೋಗ ಮಾಡಲಾಗುತ್ತದೆ.

ಯಜ್ಞೇ, ತಪಸಿ, ದಾನೇ, ಚ, ಸ್ಥಿತಿಃ, ಸತ್, ಇತಿ, ಚ, ಉಚ್ಯತೇ,
ಕರ್ಮ, ಚ, ಏವ, ತದರ್ಥೀಯಮ್, ಸತ್, ಇತಿ, ಏವ, ಅಭಿಧೀಯತೇ ॥೨೭॥

| | | | |
|---|---|---|---|
| ಚ | - ಹಾಗೂ | ಚ | - ಮತ್ತು |
| ಯಜ್ಞೇ, ತಪಸಿ | - ಯಜ್ಞ, ತಪಸ್ಸು | ತದರ್ಥೀಯಮ್ | - ಆ ಪರಮಾತ್ಮನಿಗಾಗಿ ಮಾಡಲಾದ |
| ಚ, ದಾನೇ | - ಮತ್ತು ದಾನದಲ್ಲಿ | ಕರ್ಮ | - ಕರ್ಮವು |
| (ಯಾ) | - ಯಾವ | ಏವ | - ನಿಶ್ಚಯಪೂರ್ವಕವಾಗಿ |
| ಸ್ಥಿತಿಃ | - ಸ್ಥಿತಿಯು ಇದೆಯೋ | ಸತ್, ಇತಿ | - ಸತ್ ಎಂದು |
| (ಸಾ), ಏವ | - ಅದೂ ಕೂಡ | ಅಭಿಧೀಯತೇ | - ಹೇಳಲಾಗುತ್ತದೆ |
| ಸತ್, ಇತಿ | - ಸತ್ ಎಂದು | | |
| ಉಚ್ಯತೇ | - ಹೇಳಲಾಗುತ್ತದೆ | | |

ಅಶ್ರದ್ಧಯಾ, ಹುತಮ್, ದತ್ತಮ್, ತಪಃ, ತಪ್ತಮ್, ಕೃತಮ್, ಚ, ಯತ್,
ಅಸತ್, ಇತಿ, ಉಚ್ಯತೇ, ಪಾರ್ಥ, ನ, ಚ, ತತ್, ಪ್ರೇತ್ಯ, ನೋ, ಇಹ ॥೨೮॥

ಮತ್ತು -

| | | | |
|---|---|---|---|
| ಪಾರ್ಥ | - ಹೇ ಅರ್ಜುನಾ! | ತಪ್ತಮ್ | - ತಪಿಸಲಾದ |
| ಅಶ್ರದ್ಧಯಾ | - ಶ್ರದ್ಧೆಯಿಲ್ಲದೆ ಮಾಡಲಾದ | ತಪಃ | - ತಪಸ್ಸು |
| | | ಚ | - ಮತ್ತು |
| ಹುತಮ್ | - ಹವನವು | ಯತ್ | - ಯಾವುದಾದರೂ |
| ದತ್ತಮ್ | - ಕೊಡಲಾದ ದಾನ (ಹಾಗೂ) | ಕೃತಮ್ | - ಮಾಡಲ್ಪಟ್ಟ ಶುಭಕರ್ಮವಿದೆಯೋ |
| (ತತ್) | - ಆ ಸಮಸ್ತವು | ಇಹ, ನೋ | - ಈ ಲೋಕದಲ್ಲಿ (ಲಾಭದಾಯಕವಲ್ಲ) |
| ಅಸತ್, ಇತಿ | - ಅಸತ್ತು ಎಂದು | | |
| ಉಚ್ಯತೇ | - ಹೇಳಲಾಗುತ್ತದೆ (ಆದ್ದರಿಂದ) | ಚ | - ಮತ್ತು |
| | | ಪ್ರೇತ್ಯ, ನ | - ಸತ್ತನಂತರವೂ ಲಾಭದಾಯಕವಲ್ಲ |
| ತತ್ | - ಅದು | | |

ಶ್ರೀ ಮದ್ಭಗವದ್ಗೀತೆ ಅಧ್ಯಾಯ 18 ರ ಶ್ಲೋಕಗಳ ಫೋಟೊ ಕಾಪಿ

## ॥ ಅಥಾಷ್ಟಾದಶೋऽಧ್ಯಾಯಃ - ಮೋಕ್ಷಸಂನ್ಯಾಸ ಯೋಗ ॥

ಸಂನ್ಯಾಸಸ್ಯ, ಮಹಾಬಾಹೋ, ತತ್ತ್ವಮ್, ಇಚ್ಛಾಮಿ, ವೇದಿತುಮ್,
ತ್ಯಾಗಸ್ಯ, ಚ, ಹೃಷೀಕೇಶ, ಪೃಥಕ್, ಕೇಶಿನಿಷೂದನ ॥೧॥

ಅನಂತರ ಅರ್ಜುನ ಹೇಳಿದನು -

| | | | |
|---|---|---|---|
| ಮಹಾಬಾಹೋ | - ಹೇ ಮಹಾಬಾಹುವೇ! | ಚ | - ಮತ್ತು |
| ಹೃಷೀಕೇಶ | - ಹೇ ಅಂತರ್ಯಾ-ಮಿಯೇ! | ತ್ಯಾಗಸ್ಯ | - ತ್ಯಾಗದ |
| | | ತತ್ತ್ವಮ್ | - ತತ್ತ್ವವನ್ನು |
| ಕೇಶಿನಿಸೂದನ | - ಹೇ ವಾಸುದೇವನೇ! (ನಾನು) | ಪೃಥಕ್ | - ಬೇರೆ-ಬೇರೆಯಾಗಿ |
| | | ವೇದಿತುಮ್ | - ತಿಳಿಯಲು |
| ಸನ್ಯಾಸಸ್ಯ | - ಸಂನ್ಯಾಸ | ಇಚ್ಛಾಮಿ | - ಬಯಸುತ್ತೇನೆ |

ಕಾಮ್ಯಾನಾಮ್, ಕರ್ಮಣಾಮ್, ನ್ಯಾಸಮ್, ಸಂನ್ಯಾಸಮ್, ಕವಯಃ, ವಿದುಃ
ಸರ್ವಕರ್ಮಫಲತ್ಯಾಗಮ್, ಪ್ರಾಹುಃ, ತ್ಯಾಗಮ್, ವಿಚಕ್ಷಣಾಃ ॥೨॥

**ಹೀಗೆ ಅರ್ಜುನ ಹೇಳಿದ ನಂತರ ಶ್ರೀಕೃಷ್ಣ ಹೇಳಿದನು -**

| | |
|---|---|
| **ಕವಯಃ** | - ಎಷ್ಟೋ ಮಂದಿ ಪಂಡಿತ ಜನರು |
| **ಕಾಮ್ಯಾನಾಮ್, ಕರ್ಮಣಾಮ್** | - ಕಾಮ್ಯ ಕರ್ಮಗಳ * |
| **ನ್ಯಾಸಮ್** | - ತ್ಯಾಗವನ್ನು |
| **ಸನ್ನ್ಯಾಸಮ್** | - ಸಂನ್ಯಾಸ (ಎಂದು) |
| **ವಿದುಃ** | - ತಿಳಿಯುತ್ತಾರೆ |
| **ತಥಾ ಇತರೇ** | - ಹಾಗೂ ಬೇರೆ |
| **ವಿಚಕ್ಷಣಾಃ** | - ವಿಚಾರಕುಶಲ ಪುರುಷರು |
| **ಸರ್ವಕರ್ಮ-ಫಲತ್ಯಾಗಮ್** | - ಎಲ್ಲಾ ಕರ್ಮಗಳ ಫಲತ್ಯಾಗವನ್ನು † |
| **ತ್ಯಾಗಮ್** | - ತ್ಯಾಗ ಎಂದು |
| **ಪ್ರಾಹುಃ** | - ಹೇಳುತ್ತಾರೆ. |

ತ್ಯಾಜ್ಯಮ್, ದೋಷವತ್, ಇತಿ, ಏಕೇ, ಕರ್ಮ, ಪ್ರಾಹುಃ, ಮನೀಷಿಣಃ,
ಯಜ್ಞದಾನತಪಃಕರ್ಮ, ನ, ತ್ಯಾಜ್ಯಮ್, ಇತಿ, ಚ, ಅಪರೇ ॥೩॥

| | |
|---|---|
| **ಏಕೇ** | - ಕೆಲವರು |
| **ಮನೀಷಿಣಃ** | - ವಿದ್ವಾಂಸರು |
| **ಕರ್ಮ** | - ಕರ್ಮಮಾತ್ರ |
| **ದೋಷವತ್** | - ದೋಷಯುಕ್ತವಾಗಿವೆ (ಆದ್ದರಿಂದ) |
| **ತ್ಯಾಜ್ಯಮ್** | - ತ್ಯಜಿಸಲು ಯೋಗ್ಯವಾಗಿವೆ |
| **ಇತಿ, ಪ್ರಾಹುಃ** | - ಹೀಗೆ ಹೇಳುತ್ತಾರೆ |
| **ಚ** | - ಮತ್ತು |
| **ಅಪರೆ** | - ಬೇರೆ ವಿದ್ವಾಂಸರು |
| **ಯಜ್ಞದಾನ-ತಪಃಕರ್ಮ** | - ಯಜ್ಞ, ದಾನ, ಮತ್ತು ತಪರೂಪವಾದ ಕರ್ಮ |
| **ನ, ತ್ಯಾಜ್ಯಮ್** | - ತ್ಯಜಿಸಲು ಯೋಗ್ಯವಾಗಿಲ್ಲ |
| **ಇತಿ** | - ಹೀಗೆ |
| **(ಪ್ರಾಹುಃ)** | - ಹೇಳುತ್ತಾರೆ. |

ನಿಶ್ಚಯಮ್, ಶೃಣು, ಮೇ, ತತ್ರ, ತ್ಯಾಗೇ, ಭರತಸತ್ತಮ,
ತ್ಯಾಗಃ, ಹಿ, ಪುರುಷವ್ಯಾಘ್ರ, ತ್ರಿವಿಧಃ, ಸಂಪ್ರಕೀರ್ತಿತಃ ॥೪॥

**ಆದರೆ -**

| | |
|---|---|
| **ಪುರುಷವ್ಯಾಘ್ರ** | - ಹೇ ಪುರುಷ ಶ್ರೇಷ್ಠ |
| **ಭರತಸತ್ತಮ** | - ಅರ್ಜುನಾ! |
| **ತತ್ರ** | - ಸಂನ್ಯಾಸ ಮತ್ತು ತ್ಯಾಗ ಈ ಎರಡರಲ್ಲಿ ಮೊದಲು |
| **ತ್ಯಾಗೇ** | - ತ್ಯಾಗದ ವಿಷಯದಲ್ಲಿ (ನೀನು) |
| **ಮೇ** | - ನನ್ನ |
| **ನಿಶ್ಚಯಮ್** | - ನಿಶ್ಚಯವನ್ನು |
| **ಶೃಣು** | - ಕೇಳು |
| **ಹಿ** | - ಏಕೆಂದರೆ |
| **ತ್ಯಾಗಃ** | - ತ್ಯಾಗವು (ಸಾತ್ವಿಕ, ರಾಜಸ ಮತ್ತು ತಾಮಸ ಎಂದು) |
| **ತ್ರಿವಿಧಃ** | - ಮೂರು ಪ್ರಕಾರದ್ದೆಂದು |
| **ಸಂಪ್ರಕೀರ್ತಿತಃ** | - ಹೇಳಲಾಗಿದೆ. |

ಯಜ್ಞದಾನತಪಃಕರ್ಮ, ನ, ತ್ಯಾಜ್ಯಮ್, ಕಾರ್ಯಮ್, ಏವ, ತತ್,
ಯಜ್ಞಃ, ದಾನಮ್, ತಪಃ, ಚ, ಏವ, ಪಾವನಾನಿ, ಮನೀಷಿಣಾಮ್ ॥೫॥

| | |
|---|---|
| **ಯಜ್ಞದಾನ-ತಪಃಕರ್ಮ** | - ಯಜ್ಞ, ದಾನ ಮತ್ತು ತಪರೂಪವಾದ ಕರ್ಮ |
| **ನ, ತ್ಯಾಜ್ಯಮ್** | - ತ್ಯಾಗಮಾಡಲು ಯೋಗ್ಯವಾದುದಲ್ಲ (ಅಲ್ಲದೆ) |
| **ತತ್** | - ಅದಾದರೋ |
| **ಕಾರ್ಯಮ್ ಏವ,** | - ಅವಶ್ಯವಾದ ಕರ್ತವ್ಯವಾಗಿದೆ; (ಏಕೆಂದರೆ) |
| **ಯಜ್ಞಃ** | - ಯಜ್ಞ |
| **ದಾನಮ್** | - ದಾನ |
| **ಚ** | - ಮತ್ತು |
| **ತಪಃ, ಏವ** | - ತಪ ಈ ಮೂರೂ ಕರ್ಮಗಳು ಕೂಡ |
| **ಮನೀಷಿಣಾಮ್** | - ಬುದ್ಧಿವಂತ ಪುರುಷರನ್ನು* |
| **ಪಾವನಾನಿ** | - ಪವಿತ್ರ ಗೊಳಿಸುವುದಾಗಿವೆ. |

ಏತಾನಿ, ಅಪಿ, ತು, ಕರ್ಮಾಣಿ, ಸಂಗಮ್, ತ್ಯಕ್ತ್ವಾ, ಫಲಾನಿ, ಚ,
ಕರ್ತವ್ಯಾನಿ, ಇತಿ, ಮೇ, ಪಾರ್ಥ, ನಿಶ್ಚಿತಮ್, ಮತಮ್, ಉತ್ತಮಮ್ ॥೬॥

**ಆದ್ದರಿಂದ**

| | |
|---|---|
| **ಪಾರ್ಥ** | - ಹೇ ಪಾರ್ಥನೆ! |
| **ಏತಾನಿ** | - ಈ ಯಜ್ಞ, ದಾನ ಮತ್ತು ತಪೋರೂಪೀ ಕರ್ಮಗಳನ್ನು |
| **ತು** | - ಹಾಗೂ, |
| **(ಅನ್ಯಾನಿ) ಅಪಿ** | - ಬೇರೆಯೂ ಕೂಡ |
| **ಕರ್ಮಾಣಿ** | - ಸಂಪೂರ್ಣ ಕರ್ತವ್ಯ ಕರ್ಮಗಳನ್ನು |
| **ಸಂಗಮ್** | - ಆಸಕ್ತಿ |
| **ಚ** | - ಮತ್ತು |
| **ಫಲಾನಿ** | - ಫಲಗಳನ್ನು |
| **ತ್ಯಕ್ತ್ವಾ** | - ತ್ಯಜಿಸಿ (ಅವಶ್ಯವಾಗಿ) |
| **ಕರ್ತವ್ಯಾನಿ** | - ಮಾಡಬೇಕು |
| **ಇತಿ** | - ಇದು |
| **ಮೇ** | - ನನ್ನ |
| **ನಿಶ್ಚಿತಮ್** | - ನಿಶ್ಚಯಿಸಲ್ಪಟ್ಟ |
| **ಉತ್ತಮಮ್** | - ಉತ್ತಮವಾದ |
| **ಮತಮ್** | - ಅಭಿಪ್ರಾಯವಾಗಿದೆ. |

ನಿಯತಸ್ಯ, ತು, ಸಂನ್ಯಾಸಃ, ಕರ್ಮಣಃ, ನ, ಉಪಪದ್ಯತೇ,
ಮೋಹಾತ್, ತಸ್ಯ, ಪರಿತ್ಯಾಗಃ, ತಾಮಸಃ, ಪರಿಕೀರ್ತಿತಃ ॥೭॥

| | |
|---|---|
| **ತು** | - ಆದರೆ |
| **ನಿಯತಸ್ಯ** | - ನಿಯತವಾದ * |
| **ಕರ್ಮಣಃ** | - ಕರ್ಮವು |
| **ಸಂನ್ಯಾಸಃ** | - ಸ್ವರೂಪದಿಂದ ತ್ಯಜಿಸುವುದು |
| **ನ, ಉಪಪದ್ಯತೇ** | - ಉಚಿತವಲ್ಲ (ಆದ್ದರಿಂದ) |
| **ಮೋಹಾತ್** | - ಮೋಹದ ಕಾರಣ |
| **ತಸ್ಯ** | - ಅದರ |
| **ಪರಿತ್ಯಾಗಃ** | - ತ್ಯಾಗಮಾಡಿ ಬಿಡುವುದು |
| **ತಾಮಸಃ** | - ತಾಮಸ ತ್ಯಾಗವೆಂದು |
| **ಪರಿಕೀರ್ತಿತಃ** | - ಹೇಳಲಾಗಿದೆ. |

ದುಃಖಮ್, ಇತಿ, ಏವ, ಯತ್, ಕರ್ಮ, ಕಾಯಕ್ಲೇಶಭಯಾತ್, ತ್ಯಜೇತ್,
ಸಃ, ಕೃತ್ವಾ, ರಾಜಸಮ್, ತ್ಯಾಗಮ್, ನ, ಏವ, ತ್ಯಾಗಫಲಮ್, ಲಭೇತ್ ॥೮॥

**ಮತ್ತು ಯಾವ ಮನುಷ್ಯನಾದರೂ -**

| | | | |
|---|---|---|---|
| **ಯತ್** | - ಯಾವ (ಎಲ್ಲ) | **ತ್ಯಜೇತ್** | - ತ್ಯಾಗಮಾಡಿದರೆ |
| **ಕರ್ಮ** | - ಕರ್ಮವಿವೆಯೋ | **ಸಃ** | - ಅವನು (ಇಂತಹ) |
| **(ತತ್)** | - ಅವೆಲ್ಲವೂ | **ರಾಜಸಮ್** | - ರಾಜಸವಾದ |
| **ದುಃಖಮ್, ಏವ** | - ದುಃಖರೂಪವೇ ಆಗಿವೆ | **ತ್ಯಾಗಮ್** | - ತ್ಯಾಗವನ್ನು |
| | | **ಕೃತ್ವಾ** | - ಮಾಡಿ |
| **ಇತಿ** | - ಹೀಗೆ (ತಿಳಿದುಕೊಂಡು) | **ತ್ಯಾಗಫಲಮ್** | - ತ್ಯಾಗದ ಫಲವನ್ನು |
| **ಕಾಯಕ್ಲೇಶ-ಭಯಾತ್** | - ಶಾರೀರಿಕ ಕ್ಲೇಶದ ಭಯದಿಂದ ಕರ್ತವ್ಯ ಕರ್ಮವನ್ನು | **ನ, ಏವ, ಲಭೇತ್** | - ಯಾವ ಪ್ರಕಾರದಿಂದಲೂ ಪಡೆಯುವುದಿಲ್ಲ. |

ಕಾರ್ಯಮ್, ಇತಿ, ಏವ, ಯತ್, ಕರ್ಮ, ನಿಯತಮ್, ಕ್ರಿಯತೇ, ಅರ್ಜುನ,
ಸಂಗಮ್, ತ್ಯಕ್ತ್ವಾ, ಫಲಮ್, ಚ, ಏವ, ಸಃ, ತ್ಯಾಗಃ, ಸಾತ್ತ್ವಿಕಃ ಮತಃ ॥೯॥

| | | | |
|---|---|---|---|
| **ಅರ್ಜುನ** | - ಹೇ ಅರ್ಜುನನೇ! | **ನಿಯತಮ್** | - ಶಾಸ್ತ್ರವಿಹಿತವಾದ |
| **ಯತ್** | - ಯಾವ | **ಕರ್ಮ** | - ಕರ್ಮವು |
| **ಕಾರ್ಯಮ್, ಏವ** | - ಮಾಡಲೇಬೇಕು | **ಕ್ರಿಯತೇ** | - ಮಾಡಲಾಗುತ್ತದೆಯೋ |
| **ಇತಿ** | - ಈ ಕರ್ತವ್ಯ ಭಾವದಿಂದ | **ಸಃ, ಏವ** | - ಅದೇ |
| **ಸಂಗಮ್, ಚ** | - ಆಸಕ್ತಿ ಮತ್ತು | **ಸಾತ್ತ್ವಿಕಃ** | - ಸಾತ್ತ್ವಿಕವಾದ |
| **ಫಲಮ್** | - ಫಲವನ್ನು | **ತ್ಯಾಗಃ** | - ತ್ಯಾಗವೆಂದು |
| **ತ್ಯಕ್ತ್ವಾ** | - ತ್ಯಾಗಮಾಡಿ | **ಮತಃ** | - ತಿಳಿಯಲಾಗಿದೆ |

ನ, ದ್ವೇಷ್ಟಿ ಅಕುಶಲಮ್, ಕರ್ಮ, ಕುಶಲೇ, ನ, ಅನುಷಜ್ಜತೇ,
ತ್ಯಾಗೀ, ಸತ್ತ್ವಸಮಾವಿಷ್ಟಃ, ಮೇಧಾವೀ, ಛಿನ್ನಸಂಶಯಃ ॥೧೦॥

**ಮತ್ತು ಎಲೈ ಅರ್ಜುನಾ ! -**

| | | | |
|---|---|---|---|
| **ಅಕುಶಲಮ್** | - ಯಾವ ಮನುಷ್ಯನು ಅಕುಶಲವಾದ | **ಸತ್ತ್ವಸಮಾವಿಷ್ಟಃ** | - ಶುದ್ಧವಾದ ಸತ್ತ್ವಗುಣದಿಂದ ಯುಕ್ತನಾದ ಪುರುಷನು |
| **ಕರ್ಮ** | - ಕರ್ಮವನ್ನಾದರೋ | | |
| **ನ, ದ್ವೇಷ್ಟಿ** | - ದ್ವೇಷಿಸುವುದಿಲ್ಲ (ಮತ್ತು) | **ಛಿನ್ನಸಂಶಯಃ** | - ಸಂಶಯ ರಹಿತ |
| **ಕುಶಲೇ** | - ಕುಶಲ ಕರ್ಮದಲ್ಲಿ | **ಮೇಧಾವೀ** | - ಬುದ್ಧಿವಂತ (ಮತ್ತು) |
| **ನ, ಅನುಷಜ್ಜತೇ** | - ಆಸಕ್ತನಾಗುವುದಿಲ್ಲ ಅಂತಹ | **ತ್ಯಾಗೀ** | - ನಿಜವಾದ ತ್ಯಾಗಿಯಾಗಿದ್ದಾನೆ. |

ನ, ಹಿ, ದೇಹಭೃತಾ, ಶಕ್ಯಮ್, ತ್ಯಕ್ತುಮ್, ಕರ್ಮಾಣಿ, ಅಶೇಷತಃ,
ಯಃ, ತು, ಕರ್ಮಫಲತ್ಯಾಗೀ, ಸ, ತ್ಯಾಗೀ, ಇತಿ, ಅಭಿಧೀಯತೇ ॥೧೧॥

| | | | |
|---|---|---|---|
| **ಹಿ** | - ಏಕೆಂದರೆ | **(ತಸ್ಮಾತ್)** | - ಆದ ಕಾರಣ |
| **ದೇಹಭೃತಾ** | - ಶರೀರಧಾರಿಯಾದ ಯಾವುದೇ ಮನುಷ್ಯನು | **ಯಃ** | - ಯಾರು |
| **ಅಶೇಷತಃ** | - ಸಂಪೂರ್ಣವಾಗಿ | **ಕರ್ಮಫಲತ್ಯಾಗೀ** | - ಕರ್ಮಫಲವನ್ನು ತ್ಯಾಗಮಾಡಿದ್ದಾನೋ |
| **ಕರ್ಮಾಣಿ** | - ಎಲ್ಲಾ ಕರ್ಮಗಳನ್ನು | **ಸಃ, ತು** | - ಅವನೇ |
| **ತ್ಯಕ್ತುಮ್** | - ತ್ಯಾಗ ಮಾಡುವುದು | **ತ್ಯಾಗೀ** | - ತ್ಯಾಗಿಯಾಗಿದ್ದಾನೆ |
| **ನ, ಶಕ್ಯಮ್** | - ಸಾಧ್ಯವಿಲ್ಲ | **ಇತಿ** | - ಎಂದು |
| | | **ಅಭಿಧೀಯತೇ** | - ಹೇಳಲಾಗುತ್ತದೆ. |

ಸುಖಮ್, ತು, ಇದಾನೀಮ್, ತ್ರಿವಿಧಮ್, ಶೃಣು, ಮೇ, ಭರತರ್ಷಭ,
ಅಭ್ಯಾಸಾತ್, ರಮತೇ, ಯತ್ರ, ದುಃಖಾಂತಮ್, ಚ, ನಿಗಚ್ಛತಿ ॥೩೬॥
ಯತ್, ತತ್, ಅಗ್ರೇ, ವಿಷಮ್, ಇವ, ಪರಿಣಾಮೇ, ಅಮೃತೋಪಮಮ್,
ತತ್, ಸುಖಮ್, ಸಾತ್ತ್ವಿಕಮ್, ಪ್ರೋಕ್ತಮ್, ಆತ್ಮಬುದ್ಧಿಪ್ರಸಾದಜಮ್ ॥೩೭॥

| | | | |
|---|---|---|---|
| **ಭರತರ್ಷಭ** | - ಹೇ ಭರತಶ್ರೇಷ್ಠನೇ ! | **ತತ್** | - ಅದು |
| **ಇದಾನೀಮ್** | - ಈಗ | **ಅಗ್ರೇ** | - ಆರಂಭಕಾಲದಲ್ಲಿ |
| **ತ್ರಿವಿಧಮ್** | - ಮೂರು ಪ್ರಕಾರದ | **ವಿಷಮ್, ಇವ** | - ವಿಷಕ್ಕೆ ಸಮಾನವಾಗಿ ತೋರುತ್ತದೆ * (ಯಾದರೂ) |
| **ಸುಖಮ್, ತು** | - ಸುಖವನ್ನು ಕೂಡ | **ಪರಿಣಾಮೇ** | - ಪರಿಣಾಮದಲ್ಲಿ |
| **ಮೇ, ಶೃಣು** | - ನನ್ನಿಂದ ಕೇಳು | **ಅಮೃತೋ-ಪಮಮ್** | - ಅಮೃತಕ್ಕೆ ಸಮಾನವಾಗಿದೆ |
| **ಯತ್ರ** | - ಯಾವ ಸುಖದಲ್ಲಿ (ಸಾಧಕ ಮನುಷ್ಯನು) | **ಆತ್ಮಬುದ್ಧಿಃ-ಪ್ರಸಾದಜಮ್** | - ಪರಮಾತ್ಮ ವಿಷಯಕ ಬುದ್ಧಿಯ ಪ್ರಸಾದದಿಂದ ಉತ್ಪನ್ನವಾಗುವ |
| **ಅಭ್ಯಾಸಾತ್** | - ಭಜನೆ, ಧ್ಯಾನ ಮತ್ತು ಸೇವೆ ಮೊದಲಾದ ಅಭ್ಯಾಸದಿಂದ | **ತತ್, ಸುಖಮ್** | - ಆ ಸುಖವು |
| **ರಮತೇ** | - ರಮಿಸುತ್ತಾನೆಯೋ | **ಸಾತ್ತ್ವಿಕಮ್** | - ಸಾತ್ತ್ವಿಕವೆಂದು |
| **ಚ** | - ಮತ್ತು | **ಪ್ರೋಕ್ತಮ್** | - ಹೇಳಲಾಗಿದೆ. |
| **ದುಃಖಾಂತಮ್** | - ದುಃಖದ ಅಂತ್ಯವನ್ನು | | |
| **ನಿಗಚ್ಛತಿ** | - ಪಡೆಯುತ್ತಾನೆಯೋ | | |
| **ಯತ್** | - ಯಾವ (ಇಂತಹ ಸುಖವಿದೆಯೋ) | | |

ವಿಷಯೇಂದ್ರಿಯಸಂಯೋಗಾತ್, ಯತ್, ತತ್, ಅಗ್ರೇ, ಅಮೃತೋಪಮಮ್,
ಪರಿಣಾಮೇ, ವಿಷಮ್, ಇವ, ತತ್, ಸುಖಮ್, ರಾಜಸಮ್, ಸ್ಮೃತಮ್ ॥೩೮॥

| | | | |
|---|---|---|---|
| **ಯತ್** | - ಯಾವ | **ಅಮೃತೋ-ಪಮಮ್** | - ಅಮೃತಕ್ಕೆ ಸಮಾನವಾಗಿ ತೋರಿದರೂ ಸಹ |
| **ಸುಖಮ್** | - ಸುಖವು | **ಪರಿಣಾಮೇ** | - ಪರಿಣಾಮದಲ್ಲಿ |
| **ವಿಷ-ಯೇಂದ್ರಿಯ ಸಂಯೋಗಾತ್ (ಭವತಿ)** | - ವಿಷಯ ಮತ್ತು ಇಂದ್ರಿಯಗಳ ಸಂಯೋಗದಿಂದ ಉಂಟಾಗುತ್ತದೆಯೋ | **ವಿಷಮ್, ಇವ** | - ವಿಷಕ್ಕೇ ಸಮಾನವಾಗಿದೆ * |
| **ತತ್** | - ಅದು | **(ಅತಃ), ತತ್** | - ಆದ್ದರಿಂದ ಆ ಸುಖವು |
| **ಅಗ್ರೇ** | - ಮೊದಲು ಭೋಗಕಾಲದಲ್ಲಿ | **ರಾಜಸಮ್** | - ರಾಜಸವೆಂದು |
| | | **ಸ್ಮೃತಮ್** | - ಹೇಳಲ್ಪಟ್ಟಿದೆ. |

ಬ್ರಾಹ್ಮಣಕ್ಷತ್ರಿಯವಿಶಾಮ್, ಶೂದ್ರಾಣಾಮ್, ಚ, ಪರಂತಪ,
ಕರ್ಮಾಣಿ, ಪ್ರವಿಭಕ್ತಾನಿ, ಸ್ವಭಾವಪ್ರಭವೈಃ ಗುಣೈಃ ॥೪೧॥

ಆದುದರಿಂದ -

**ಪರಂತಪ** - ಹೇ ಪರಂತಪನೆ!
**ಬ್ರಾಹ್ಮಣ-ಕ್ಷತ್ರಿಯ ವಿಶಾಮ್** - ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರ
**ಚ** - ಹಾಗೂ
**ಶೂದ್ರಾಣಾಮ್** - ಶೂದ್ರರ
**ಕರ್ಮಾಣಿ** - ಕರ್ಮಗಳು
**ಸ್ವಭಾವಪ್ರಭವೈಃ** - ಸ್ವಭಾವದಿಂದ ಉತ್ಪನ್ನವಾದ
**ಗುಣೈಃ** - ಗುಣಗಳ ಅನುಸಾರವಾಗಿ
**ಪ್ರವಿಭಕ್ತಾನಿ** - ವಿಭಾಗಿಸಲ್ಪಟ್ಟಿವೆ.

ಶಮಃ, ದಮಃ ತಪಃ ಶೌಚಮ್, ಕ್ಷಾಂತಿ, ಆರ್ಜವಮ್, ಏವ, ಚ,
ಜ್ಞಾನಮ್, ವಿಜ್ಞಾನಮ್, ಆಸ್ತಿಕ್ಯಮ್, ಬ್ರಹ್ಮಕರ್ಮ, ಸ್ವಭಾವಜಮ್ ॥೪೨॥

**ಶಮಃ** - ಅಂತಃಕರಣವನ್ನು ನಿಗ್ರಹಿಸುವುದು
**ದಮಃ** - ಇಂದ್ರಿಯಗಳ ದಮನ ಮಾಡುವುದು
**ತಪಃ** - ಧರ್ಮಪಾಲನೆಗಾಗಿ ಕಷ್ಟವನ್ನು ಸಹಿಸುವುದು
**ಶೌಚಮ್** - ಹೊರಗೊಳಗಿಂದ ಶುದ್ಧವಾಗಿರುವುದು*
**ಕ್ಷಾಂತಿಃ** - ಮತ್ತೊಬ್ಬರ ಅಪರಾಧಗಳನ್ನು ಕ್ಷಮಿಸುವುದು
**ಆರ್ಜವಮ್** - ಮನಸ್ಸು ಇಂದ್ರಿಯಗಳು ಮತ್ತು ಶರೀರವನ್ನು ಸರಳವಾಗಿರಿಸುವುದು
**ಆಸ್ತಿಕ್ಯಮ್** - ವೇದ, ಶಾಸ್ತ್ರ ದೇವರು ಮತ್ತು ಪರಲೋಕಾದಿಗಳಲ್ಲಿ ಶ್ರದ್ಧೆಯನ್ನಿಡುವುದು
**ಜ್ಞಾನಮ್** - ವೇದ-ಶಾಸ್ತ್ರಗಳ ಅಧ್ಯಯನ-ಅಧ್ಯಾಪನ ಮಾಡುವುದು
**ಚ** - ಮತ್ತು
**ವಿಜ್ಞಾನಮ್ ಏವ** - ಪರಮಾತ್ಮ ತತ್ತ್ವದ ಅನುಭವ ಪಡೆಯುವುದು (ಇವೆಲ್ಲವೂ)
**ಬ್ರಹ್ಮಕರ್ಮ-ಸ್ವಭಾವಜಮ್** - ಬ್ರಾಹ್ಮಣನ ಸ್ವಾಭಾವಿಕವಾದ ಕರ್ಮಗಳಾಗಿವೆ.

ಶೌರ್ಯಮ್, ತೇಜಃ, ಧೃತಿಃ, ದಾಕ್ಷ್ಯಮ್, ಯುದ್ಧೇ, ಚ, ಅಪಿ, ಅಪಲಾಯನಮ್,
ದಾನಮ್, ಈಶ್ವರಭಾವಃ, ಚ, ಕ್ಷಾತ್ರಮ್, ಕಮ್, ಸ್ವಭಾವಜಮ್ ॥೪೩॥

**ಶೌರ್ಯಮ್** - ಶೂರತ್ವ
**ತೇಜಃ** - ತೇಜವು
**ಧೃತಿಃ** - ಧೈರ್ಯವು
**ದಾಕ್ಷ್ಯಮ್** - ದಕ್ಷತೆ
**ಚ** - ಮತ್ತು
**ಯುದ್ಧೇ, ಅಪಿ** - ಯುದ್ಧದಲ್ಲಿ ಹೆಚ್ಚಿನ ಸಂಕಟ ಉಂಟಾದರೂ ಕೂಡ
ಅಪಲಾಯನಮ್ - ಓಡಿಹೋಗದಿರುವುದು
**ದಾನಮ್** - ದಾನವನ್ನು ಕೊಡುವುದು
**ಚ** - ಮತ್ತು
**ಈಶ್ವರಭಾವಃ** - ಸ್ವಾಮಿಭಾವ* (ಇವೆಲ್ಲವೂ)
**ಕ್ಷಾತ್ರಮ್** - ಕ್ಷತ್ರಿಯನ
**ಸ್ವಭಾವಜಮ್** - ಸ್ವಾಭಾವಿಕವಾದ
**ಕರ್ಮ** - ಕರ್ಮಗಳಾಗಿವೆ.

ಕೃಷಿಗೌರಕ್ಷ್ಯವಾಣಿಜ್ಯಮ್, ವೈಶ್ಯಕರ್ಮ, ಸ್ವಭಾವಜಮ್,
ಪರಿಚರ್ಯಾತ್ಮಕಮ್, ಕರ್ಮ, ಶೂದ್ರಸ್ಯ, ಅಪಿ, ಸ್ವಭಾವಜಮ್ ॥೪೪॥

**ಹಾಗೂ -**

| | | | |
|---|---|---|---|
| **ಕೃಷಿಗೌರಕ್ಷ್ಯ-ವಾಣಿಜ್ಯಮ್** | - ಕೃಷಿ, ಗೋಪಾಲನೆ, ಮತ್ತು ಕ್ರಯ-ವಿಕ್ರಯರೂಪವಾದ ಸತ್ಯ ವ್ಯವಹಾರ † (ಇವೆಲ್ಲವೂ) | **ಸ್ವಭಾವಜಮ್** | ಕರ್ಮಗಳಾಗಿವೆ (ಹಾಗೂ) |
| **ವೈಶ್ಯಕರ್ಮ-** | - ವೈಶ್ಯರ ಸ್ವಾಭಾವಿಕ | **ಶೂದ್ರಸ್ಯ, ಅಪಿ** | - ಶೂದ್ರನಿಗೂ ಕೂಡ |
| | | **ಪರಿಚರ್ಯಾ-ತ್ಮಕಮ್** | - ಎಲ್ಲ ವರ್ಣಗಳ ಸೇವೆ ಮಾಡುವುದು |
| | | **ಸ್ವಭಾವಜಮ್** | - ಸ್ವಾಭಾವಿಕವಾದ |
| | | **ಕರ್ಮ** | - ಕರ್ಮವಾಗಿದೆ. |

ಸ್ವೇ, ಸ್ವೇ, ಕರ್ಮಣಿ, ಅಭಿರತಃ, ಸಂಸಿದ್ಧಿಮ್, ಲಭ್ಯತೇ, ನರಃ,
ಸ್ವಕರ್ಮನಿರತಃ, ಸಿದ್ಧಿಮ್, ಯಥಾ, ವಿಂದತಿ, ತತ್, ಶೃಣು ॥೪೫॥

| | | | |
|---|---|---|---|
| **ಸ್ವೇ, ಸ್ವೇ** | - ತಮ್ಮ-ತಮ್ಮ | **ಅಭಿರತಃ** | - ತತ್ಪರತೆಯಿಂದ ತೊಡಗಿರುವ |
| **ಕರ್ಮಣಿ** | - ಸ್ವಾಭಾವಿಕವಾದ ಕರ್ಮಗಳಲ್ಲಿ | **ನರಃ** | - ಮನುಷ್ಯನು |
| **ಸಂಸಿದ್ಧಿಮ್** | - ಭಗವತ್ಪ್ರಾಪ್ತಿರೂಪೀ ಪರಮಸಿದ್ಧಿಯನ್ನು | **ಯಥಾ** | - ಯಾವ ಪ್ರಕಾರದಿಂದ ಕರ್ಮಮಾಡಿ |
| **ಲಭತೇ** | - ಪಡೆಯುತ್ತಾನೆ | **ಸಿದ್ಧಿಮ್** | - ಪರಮಸಿದ್ಧಿಯನ್ನು |
| **ಸ್ವಕರ್ಮನಿರತಃ** | - ತನ್ನ ಸ್ವಾಭಾವಿಕ ಕರ್ಮದಲ್ಲಿ ತೊಡಗಿರುವ ಮನುಷ್ಯನು | **ವಿಂದತಿ** | - ಪಡೆಯುತ್ತಾನೆಂಬ |
| | | **ತತ್** | - ಆ ವಿಧಿಯನ್ನು (ನೀನು) |
| | | **ಶೃಣು** | - ಕೇಳು. |

ಯತಃ ಪ್ರವೃತ್ತಿಃ ಭೂತಾನಾಮ್, ಯೇನ, ಸರ್ವಮ್, ಇದಮ್, ತತಮ್,
ಸ್ವಕರ್ಮಣಾ, ತಮ್, ಅಭ್ಯರ್ಚ್ಯ, ಸಿದ್ಧಿಮ್, ವಿಂದತಿ, ಮಾನವಃ ॥೪೬॥

**ಎಲೈ ಅರ್ಜುನಾ! -**

| | | | |
|---|---|---|---|
| **ಯತಃ** | - ಯಾವ ಪರಮೇಶ್ವರನಿಂದ | **ತಮ್** | - ಆ, ಪರಮೇಶ್ವರನನ್ನು |
| **ಭೂತಾನಾಮ್** | - ಸಮಸ್ತಪ್ರಾಣಿಗಳ | **ಸ್ವಕರ್ಮಣಾ** | - ತನ್ನ ಸ್ವಾಭಾವಿಕವಾದ ಕರ್ಮಗಳ ಮೂಲಕ |
| **ಪ್ರವೃತ್ತಿಃ** | - ಉತ್ಪತ್ತಿಯಾಗಿದೆಯೋ (ಮತ್ತು) | **ಅಭ್ಯರ್ಚ್ಯ** | - ಪೂಜೆಮಾಡಿ † |
| **ಯೇನ, ಇದಮ್** | - ಯಾರಿಂದ ಈ | **ಮಾನವಃ** | - ಮನುಷ್ಯನು |
| **ಸರ್ವಮ್** | - ಸಮಸ್ತ (ಜಗತ್ತು) | **ಸಿದ್ಧಿಮ್** | - ಪರಮಸಿದ್ಧಿಯನ್ನು |
| **ತತಮ್** | - ವ್ಯಾಪ್ತವಾಗಿದೆಯೋ* | **ವಿಂದತಿ** | - ಪಡೆಯುತ್ತಾನೆ. |

ಶ್ರೇಯಾನ್, ಸ್ವಧರ್ಮಃ, ವಿಗುಣಃ, ಪರಧರ್ಮಾತ್, ಸ್ವನುಷ್ಠಿತಾತ್,
ಸ್ವಭಾವನಿಯತಮ್, ಕರ್ಮ, ಕುರ್ವನ್, ನ, ಆಪ್ನೋತಿ, ಕಿಲ್ಬಿಷಮ್ ॥೪೭॥

**ಆದುದರಿಂದ -**

| | | | |
|---|---|---|---|
| **ಸ್ವನುಷ್ಠಿತಾತ್** | - ಒಳ್ಳೆಯ ರೀತಿಯಲ್ಲಿ ಆಚರಿಸಲಾದ | **ಸ್ವಭಾವ-ನಿಯತಮ್** | - ಸ್ವಭಾವದಿಂದ ನಿಯಮಿಸಲ್ಪಟ್ಟಿರುವ |
| **ಪರಧರ್ಮಾತ್** | - ಬೇರೆಯವರ ಧರ್ಮಕ್ಕಿಂತ | **ಕರ್ಮ** | - ಸ್ವಧರ್ಮರೂಪೀ ಕರ್ಮವನ್ನು |
| **ವಿಗುಣಃ, (ಅಪಿ)** | - ಗುಣರಹಿತವಾದರೂ ಕೂಡ | **ಕುರ್ವನ್** | - ಮಾಡುತ್ತಾ (ಮನುಷ್ಯನು) |
| **ಸ್ವಧರ್ಮಃ** | - ತನ್ನ ಧರ್ಮವು | **ಕಿಲ್ಬಿಷಮ್** | - ಪಾಪವನ್ನು |
| **ಶ್ರೇಯಾನ್** | - ಶ್ರೇಷ್ಠವಾಗಿದೆ | **ನ, ಆಪ್ನೋತಿ** | - ಪಡೆಯುವುದಿಲ್ಲ |
| **(ಯಸ್ಮಾತ್)** | - ಏಕೆಂದರೆ | | |

ಸಹಜಮ್, ಕರ್ಮ, ಕೌಂತೇಯ, ಸದೋಷಮ್, ಅಪಿ, ನ, ತ್ಯಜೇತ್,
ಸರ್ವಾರಂಭಾಃ, ಹಿ, ದೋಷೇಣ, ಧೂಮೇನ, ಅಗ್ನಿಃ, ಇವ, ಆವೃತಾಃ ॥೪೮॥

| | | | |
|---|---|---|---|
| **ಕೌಂತೇಯ** | - ಹೇ ಕುಂತೀಪುತ್ರನೇ ! | **ಅಗ್ನಿಃ** | - ಅಗ್ನಿಯು |
| **ಸದೋಷಮ್ ಅಪಿ** | - ದೋಷಯುಕ್ತವಾದರೂ ಕೂಡ | **ಧೂಮೇನ, ಇವ** | - ಹೊಗೆಯಿಂದ ಯುಕ್ತವಾಗಿರುವಂತೆ |
| **ಸಹಜಮ್** | - ಸಹಜವಾದ * | **ಸರ್ವಾರಂಭಾಃ** | - ಎಲ್ಲ ಕರ್ಮಗಳೂ (ಒಂದಲ್ಲ ಒಂದು) |
| **ಕರ್ಮ** | - ಕರ್ಮವನ್ನು | | |
| **ನ, ತ್ಯಜೇತ್** | - ತ್ಯಜಿಸಬಾರದು | **ದೋಷೇಣ** | - ದೋಷದಿಂದ |
| **ಹಿ** | - ಏಕೆಂದರೆ | **ಆವೃತಾಃ** | - ಕೂಡಿರುತ್ತವೆ. |

ಅಸಕ್ತಬುದ್ಧಿಃ ಸರ್ವತ್ರ, ಜಿತಾತ್ಮ ವಿಗತಸ್ಪೃಹಃ
ನೈಷ್ಕರ್ಮ್ಯಸಿದ್ಧಿಮ್, ಪರಮಾಮ್, ಸಂನ್ಯಾಸೇನ, ಅಧಿಗಚ್ಛತಿ ॥೪೯॥

**ಹಾಗೂ ಎಲೈ ಅರ್ಜುನಾ ! -**

| | | | |
|---|---|---|---|
| **ಸರ್ವತ್ರ** | - ಸರ್ವತ್ರ | **ಸಂನ್ಯಾಸೇನ** | - ಸಾಂಖ್ಯಯೋಗದ ಮೂಲಕ |
| **ಅಸಕ್ತಬುದ್ಧಿಃ** | - ಆಸಕ್ತಿರಹಿತವಾದ ಬುದ್ಧಿಯುಳ್ಳವನು | **ಪರಮಾಮ್** | - ಆ ಪರಮ |
| **ವಿಗತಸ್ಪೃಹಃ** | - ಸ್ಪೃಹಾರಹಿತನೂ (ಮತ್ತು) | **ನೈಷ್ಕರ್ಮ್ಯ-ಸಿದ್ಧಿಮ್** | - ನೈಷ್ಕರ್ಮ್ಯ ಸಿದ್ಧಿಯನ್ನು |
| **ಜಿತಾತ್ಮಾ** | - ಗೆಲ್ಲಲ್ಪಟ್ಟ ಅಂತಃಕರಣವುಳ್ಳ ಪುರುಷನು | **ಅಧಿಗಚ್ಛತಿ** | - ಪಡೆಯುತ್ತಾನೆ. |

ಸಿದ್ಧಿಮ್, ಪ್ರಾಪ್ತಃ, ಯಥಾ, ಬ್ರಹ್ಮ ತಥಾ, ಆಪ್ನೋತಿ, ನಿಬೋಧ, ಮೇ,
ಸಮಾಸೇನ, ಏವ, ಕೌಂತೇಯ, ನಿಷ್ಠಾ ಜ್ಞಾನಸ್ಯ, ಯಾ, ಪರಾ ॥೫೦॥

**ಆದುದರಿಂದ -**

| | | | |
|---|---|---|---|
| **ಯಾ** | - ಯಾವ | **ಬ್ರಹ್ಮ** | - ಬ್ರಹ್ಮವನ್ನು |
| **ಜ್ಞಾನಸ್ಯ** | - ಜ್ಞಾನಯೋಗದ | **ಆಪ್ನೋತಿ** | - ಪಡೆಯುತ್ತಾನೋ |
| **ಪರಾ** | - ಶ್ರೇಷ್ಠವಾದ | **ತಥಾ** | - ಆ ಪ್ರಕಾರವನ್ನು |

**ನಿಷ್ಠಾ** – ನಿಷ್ಠೆಯಾಗಿದೆಯೋ
**ಸಿದ್ಧಿಮ್** – ಆ ನೈಷ್ಕರ್ಮ್ಯ ಸಿದ್ಧಿಯನ್ನು
**ಯಥಾ** – ಯಾವ ಪ್ರಕಾರವಾಗಿ
**ಪ್ರಾಪ್ತಃ** – ಪಡೆದುಕೊಂಡ ಮನುಷ್ಯನು
**ಕೌಂತೇಯ** – ಹೇ ಕುಂತೀಪುತ್ರನೇ ! (ನೀನು)
**ಸಮಾಸೇನ, ಏವ** – ಸಂಕ್ಷೇಪವಾಗಿಯೇ
**ಮೇ** – ನ್ನಿಂದ
**ನಿಬೋಧ** – ತಿಳಿದುಕೊ.

ಬುದ್ಧ್ಯಾ, ವಿಶುದ್ಧಯಾ, ಯುಕ್ತಃ ಧೃತ್ಯಾ, ಆತ್ಮಾನಮ್, ನಿಯಮ್ಯ, ಚ,
ಶಬ್ದಾದೀನ್, ವಿಷಯಾನ್, ತ್ಯಕ್ತ್ವಾ, ರಾಗದ್ವೇಷೌ, ವ್ಯುದಸ್ಯ, ಚ ॥೫೧॥
ವಿವಿಕ್ತಸೇವೀ, ಲಘ್ವಾಶೀ, ಯತವಾಕ್ಕಾಯಮಾನಸಃ,
ಧ್ಯಾನಯೋಗಪರಃ, ನಿತ್ಯಮ್, ವೈರಾಗ್ಯಮ್, ಸಮುಪಾಶ್ರಿತಃ ॥೫೨॥
ಅಹಂಕಾರಮ್, ಬಲಮ್, ದರ್ಪಮ್, ಕಾಮಮ್, ಕ್ರೋಧಮ್, ಪರಿಗ್ರಹಮ್
ವಿಮುಚ್ಯ, ನಿರ್ಮಮಃ, ಶಾಂತಃ, ಬ್ರಹ್ಮಭೂಯಾಯ, ಕಲ್ಪತೇ ॥೫೩॥

ಮತ್ತು ಎಲೈ ಅರ್ಜುನಾ ! -

**ವಿಶುದ್ಧಯಾ** – ವಿಶುದ್ಧವಾದ
**ಬುದ್ಧ್ಯಾ** – ಬುದ್ಧಿಯಿಂದ
**ಯುಕ್ತಃ** – ಕೂಡಿದವನಾಗಿ (ಹಾಗೂ)
**ಲಘ್ವಾಶೀ** – ಹಗುರವಾದ, ಸಾತ್ತ್ವಿಕ ಮತ್ತು ನಿಯಮಿತ ಭೋಜನ ಮಾಡುವವನು *
**ಶಬ್ದಾದೀನ್-ವಿಷಯಾನ್** – ಶಬ್ದಾದಿ ವಿಷಯಗಳನ್ನು
**ತ್ಯಕ್ತ್ವಾ** – ತ್ಯಾಗಗೈದು
**ವಿವಿಕ್ತಸೇವೀ** – ಏಕಾಂತ ಮತ್ತು ಶುದ್ಧವಾದ ದೇಶದ ಸೇವನೆ ಮಾಡುವವನು
**ಧೃತ್ಯಾ** – ಸಾತ್ವಿಕ ಧಾರಣ ಶಕ್ತಿಯ ಮೂಲಕ †
**ಆತ್ಮಾನಮ್** – ಅಂತಃಕರಣ ಮತ್ತು ಇಂದ್ರಿಯಗಳನ್ನು
**ನಿಯಮ್ಯ** – ಸಂಯಮದಲ್ಲಿರಿಸಿ ಕೊಂಡು
**ಯತವಾಕ್ಕಾಯ-ಮಾನಸಃ** – ಮನಸ್ಸು ವಾಣಿ ಮತ್ತು ಶರೀರವನ್ನು ವಶದಲ್ಲಿರಿಸಿ ಕೊಳ್ಳುವವನು
**ರಾಗದ್ವೇಷೌ** – ರಾಗ-ದ್ವೇಷಗಳನ್ನು
**ವ್ಯುದಸ್ಯ** – ಸರ್ವಥಾ ನಾಶಪಡಿಸಿಕೊಂಡು
**ವೈರಾಗ್ಯಮ್** – ಚೆನ್ನಾಗಿ ದೃಢವಾದ ವೈರಾಗ್ಯದ
**ಸಮುಪಾಶ್ರಿತಃ** – ಆಶ್ರಯ ಪಡೆಯುವವನು
**ಚ, ಅಹಂಕಾರಮ್** – ಹಾಗೂ ಅಹಂಕಾರ
**ಬಲಮ್** – ಬಲ
**ದರ್ಪಮ್** – ದಂಭ
**ಕಾಮಮ್** – ಕಾಮ
**ಕ್ರೋಧಮ್, ಚ** – ಕ್ರೋಧ ಮತ್ತು
**ಪರಿಗ್ರಹಮ್** – ಪರಿಗ್ರಹವನ್ನು
**ವಿಮುಚ್ಯ** – ತ್ಯಜಿಸಿ
**ನಿತ್ಯಮ್** – ನಿರಂತರ
**ಧ್ಯಾನಯೋಗ-ಪರಃ** – ಧ್ಯಾನಯೋಗ ಪರಾಯಣನಾಗಿರುವ
**ನಿರ್ಮಮಃ** – ಮಮತಾರಹಿತ (ಮತ್ತು)
**ಶಾಂತಃ** – ಶಾಂತಿಯುಕ್ತನಾದ ಪುರುಷನು
**ಬ್ರಹ್ಮ-ಭೂಯಾಯ** – ಸಚ್ಚಿದಾನಂದಘನ ಬ್ರಹ್ಮನಲ್ಲಿ ಅಭಿನ್ನಭಾವದಿಂದ ಸ್ಥಿತನಾಗಲು
**ಕಲ್ಪತೇ** – ಪಾತ್ರನಾಗುತ್ತಾನೆ.

ಬ್ರಹ್ಮಭೂತಃ, ಪ್ರಸನ್ನಾತ್ಮಾ, ನ, ಶೋಚತಿ, ನ, ಕಾಂಕ್ಷತಿ,
ಸಮಃ, ಸರ್ವೇಷು, ಭೂತೇಷು, ಮದ್ಭಕ್ತಿಮ್, ಲಭತೇ, ಪರಾಮ್ ॥೫೪॥

ಮತ್ತು ಆ -

**ಬ್ರಹ್ಮಭೂತಃ** - ಸಚ್ಚಿದಾನಂದಘನ ಬ್ರಹ್ಮನಲ್ಲಿ ಏಕೀಭಾವದಿಂದ ಸ್ಥಿತನಾದ
**ಪ್ರಸನ್ನಾತ್ಮಾ** - ಪ್ರಸನ್ನವಾದ ಮನಸ್ಸುಳ್ಳ ಯೋಗಿಯು
**ನ ಶೋಚತಿ** - ಯಾರಿಗಾಗಿಯೂ ಶೋಕಿಸುವುದಿಲ್ಲ (ಮತ್ತು)
**ನ ಕಾಂಕ್ಷತಿ** - ಯಾವುದರ ಆಕಾಂಕ್ಷೆಯನ್ನೂ ಮಾಡುವುದಿಲ್ಲ (ಇಂತಹ)
**ಸರ್ವೇಷು** - ಸಮಸ್ತ
**ಭೂತೇಷು** - ಪ್ರಾಣಿಗಳಲ್ಲಿ
**ಸಮಃ** - ಸಮಭಾವವುಳ್ಳ * ಯೋಗಿಯು
**ಪರಾಮ್,** - ನನ್ನ ಪರಾ
**ಮದ್ಭಕ್ತಿಮ್** ಭಕ್ತಿಯನ್ನು †
**ಲಭತೇ** - ಪಡೆಯುತ್ತಾನೆ

ಭಕ್ತ್ಯಾ, ಮಾಮ್, ಅಭಿಜಾನಾತಿ, ಯಾವಾನ್, ಯಃ, ಚ, ಅಸ್ಮಿ, ತತ್ತ್ವತಃ,
ತತಃ, ಮಾಮ್, ತತ್ತ್ವತಃ, ಜ್ಞಾತ್ವಾ, ವಿಶತೇ, ತದನಂತರಮ್ ॥೫೫॥

ಮತ್ತು ಆ -

**ಭಕ್ತ್ಯಾ** - ಆ ಪರಾಭಕ್ತಿಯ ಮೂಲಕ (ಅವನು)
**ಮಾಮ್** - ಪರಮಾತ್ಮನಾದ ನನ್ನನ್ನು
**(ಅಹಮ್), ಯಃ** - ನಾನು ಯಾರಾಗಿದ್ದೇನೋ
**ಚ** - ಮತ್ತು
**ಯಾವಾನ್ ಅಸ್ಮಿ** - ಯಾವ ಪ್ರಭಾವದಿಂದ ಯುಕ್ತನಾಗಿದ್ದೇನೋ
**ತತ್ತ್ವತಃ,** - ಸರಿಯಾಗಿ
**ಅಭಿಜಾನಾತಿ** - ಹೇಗಿರುವೆನೋ ಹಾಗೆ ತತ್ತ್ವಶಃ ಅರಿಯುತ್ತಾನೆ (ಹಾಗೂ)
**ತತಃ** - ಆ ಭಕ್ತಿಯಿಂದ
**ಮಾಮ್, ತತ್ತ್ವತಃ**- ನನ್ನನ್ನು ತತ್ತ್ವದಿಂದ
**ಜ್ಞಾತ್ವಾ** - ತಿಳಿದುಕೊಂಡು
**(ಸಃ)** - ಅವನು
**ತದನಂತರಮ್** - ತತ್ಕಾಲದಲ್ಲಿಯೇ
**ವಿಶತೇ** - ನನ್ನಲ್ಲಿ ಪ್ರವೇಶ ಮಾಡಿಬಿಡುತ್ತಾನೆ.

ಸರ್ವಕರ್ಮಾಣಿ, ಅಪಿ, ಸದಾ, ಕುರ್ವಾಣಃ, ಮದ್ವ್ಯಪಾಶ್ರಯಃ,
ಮತ್ಪ್ರಸಾದಾತ್, ಅವಾಪ್ನೋತಿ, ಶಾಶ್ವತಮ್, ಪದಮ್, ಅವ್ಯಯಮ್ ॥೫೬॥

**ಮದ್ವ್ಯಪಾಶ್ರಯಃ** - ನನ್ನ ಪರಾಯಣನಾದ ಕರ್ಮಯೋಗಿಯು
**ಸರ್ವಕರ್ಮಾಣಿ** - ಎಲ್ಲ ಕರ್ಮಗಳನ್ನು
**ಸದಾ** - ಯಾವಾಗಲೂ
**ಕುರ್ವಾಣಃ** - ಮಾಡುತ್ತಿದ್ದರೂ
**ಅಪಿ** - ಕೂಡ
**ಮತ್ಪ್ರಸಾದಾತ್** - ನನ್ನ ಕೃಪೆಯಿಂದ
**ಶಾಶ್ವತಮ್** - ಸನಾತನ
**ಅವ್ಯಯಮ್** - ಅವಿನಾಶಿಯಾದ
**ಪದಮ್** - ಪರಮಪದವನ್ನು
**ಅವಾಪ್ನೋತಿ** - ಪಡೆಯುತ್ತಾನೆ.

ಈಶ್ವರಃ, ಸರ್ವಭೂತಾನಾಮ್, ಹೃದ್ದೇಶೇ, ಅರ್ಜುನ, ತಿಷ್ಠತಿ
ಭ್ರಾಮಯನ್, ಸರ್ವಭೂತಾನಿ, ಯಂತ್ರಾರೂಢಾನಿ, ಮಾಯಯಾ ॥೬೧॥

**ಏಕೆಂದರೆ -**

| | |
|---|---|
| **ಅರ್ಜುನ** | - ಹೇ ಅರ್ಜುನನೇ! |
| **ಯಂತ್ರಾರೂಢಾನಿ** | - ಶರೀರರೂಪೀ ಯಂತ್ರದಲ್ಲಿ ಆರೂಢನಾಗಿರುವ |
| **ಸರ್ವಭೂತಾನಿ** | - ಸಮಸ್ತ ಪ್ರಾಣಿಗಳನ್ನು |
| **ಈಶ್ವರಃ** | - ಅಂತರ್ಯಾಮಿ ಪರಮೇಶ್ವರನು |
| **ಮಾಯಯಾ** | - ತನ್ನಮಾಯೆಯಿಂದ (ಅವುಗಳ ಕರ್ಮಾನುಸಾರ) |
| **ಭ್ರಾಮಯನ್** | - ಅಲೆಸುತ್ತ |
| **ಸರ್ವಭೂತಾನಾಮ್** | - ಎಲ್ಲ ಪ್ರಾಣಿಗಳ |
| **ಹೃದ್ದೇಶೇ** | - ಹೃದಯದಲ್ಲಿ |
| **ತಿಷ್ಠತಿ** | - ಸ್ಥಿತನಾಗಿದ್ದಾನೆ |

**ತಮ್, ಏವ, ಶರಣಮ್, ಗಚ್ಛ, ಸರ್ವಭಾವೇನ, ಭಾರತ,**
**ತತ್ಪ್ರಸಾದಾತ್, ಪರಾಮ್, ಶಾಂತಿಮ್, ಸ್ಥಾನಮ್, ಪ್ರಾಪ್ಸ್ಯಸಿ, ಶಾಶ್ವತಮ್ ॥೬೨॥**

**ಆದುದರಿಂದ -**

| | |
|---|---|
| **ಭಾರತ** | - ಹೇ ಅರ್ಜುನಾ! (ನೀನು) |
| **ಸರ್ವಭಾವೇನ** | - ಎಲ್ಲಾ ಪ್ರಕಾರದಿಂದ |
| **ತಮ್, ಏವ** | - ಆ ಪರಮೇಶ್ವರನಲ್ಲಿಯೇ |
| **ಶರಣಮ್, ಗಚ್ಛ** | - ಶರಣು * ಹೋಗು |
| **ತತ್ಪ್ರಸಾದಾತ್** | - ಆ ಪರಮಾತ್ಮನ ಕೃಪೆಯಿಂದಲೇ (ನೀನು) |
| **ಪರಾಮ್** | - ಪರಮ |
| **ಶಾಂತಿಮ್** | - ಶಾಂತಿಯನ್ನು (ಹಾಗೂ) |
| **ಶಾಶ್ವತಮ್** | - ಸನಾತನವಾದ |
| **ಸ್ಥಾನಮ್** | - ಪರಮಧಾಮವನ್ನು |
| **ಪ್ರಾಪ್ಸ್ಯಸಿ** | - ಪಡೆಯುವೆ. |

ಇತಿ, ತೇ, ಜ್ಞಾನಮ್, ಆಖ್ಯಾತಮ್, ಗುಹ್ಯಾತ್, ಗುಹ್ಯತರಮ್, ಮಯಾ,
ವಿಮೃಶ್ಯ, ಏತತ್, ಅಶೇಷೇಣ, ಯಥಾ, ಇಚ್ಛಸಿ, ತಥಾ, ಕುರು ॥೬೩

| | |
|---|---|
| **ಇತಿ** | - ಈ ಪ್ರಕಾರವಾಗಿ |
| **ಗುಹ್ಯಾತ್** | - ಗೋಪನೀಯ ಕ್ಕಿಂತಲೂ |
| **ಗುಹ್ಯತರಮ್** | - ಅತಿಗೋಪನೀಯ ವಾದ |
| **ಜ್ಞಾನಮ್** | - ಜ್ಞಾನವನ್ನು |
| **ಮಯಾ** | - ನನ್ನಿಂದ |
| **ತೇ, ಆಖ್ಯಾತಮ್** | - ನಿನಗೆ ಹೇಳಲ್ಪಟ್ಟಿತು (ಈಗ ನೀನು) |
| **ಏತತ್** | - ಈ ರಹಸ್ಯಯುಕ್ತವಾದ ಜ್ಞಾನವನ್ನು |
| **ಅಶೇಷೇಣ** | - ಪೂರ್ಣವಾಗಿ |
| **ವಿಮೃಶ್ಯ** | - ಚೆನ್ನಾಗಿ ವಿಚಾರಮಾಡಿ |
| **ಯಥಾ** | - ಹೇಗೆ |
| **ಇಚ್ಛಸಿ** | - ಇಷ್ಟಪಡುವೆಯೋ |
| **ತಥಾ, ಕುರು** | - ಹಾಗೆಯೇ ಮಾಡು. |

ಸರ್ವಗುಹ್ಯತಮಮ್, ಭೂಯಃ, ಶೃಣು, ಮೇ, ಪರಮಮ್, ವಚಃ,
ಇಷ್ಟಃ ಅಸಿ, ಮೇ, ದೃಢಮ್, ಇತಿ, ತತಃ, ವಕ್ಷ್ಯಾಮಿ, ತೇ, ಹಿತಮ್ ॥೬೪॥

**ಇಷ್ಟು ಹೇಳಿದರೂ ಸಹ ಅರ್ಜುನನಿಂದ ಯಾವ ಉತ್ತರವೂ ದೊರೆಯದ ಕಾರಣದಿಂದ ಶ್ರೀಕೃಷ್ಣಪರಮಾತ್ಮನು ಪುನಃ ಹೇಳಿದನು, ಎಲೈ ಅರ್ಜುನಾ ! -**

**ಸರ್ವಗುಹ್ಯ-ತಮಮ್** - ಸಂಪೂರ್ಣವಾದ ಗೋಪನೀಯಕ್ಕಿಂತ ಅತಿ ಗೋಪನೀಯವಾದ

**ಮೇ** - ನನ್ನ

**ಪರಮಮ್** - ಪರಮ ರಹಸ್ಯಯುಕ್ತವಾದ

**ವಚಃ** - ವಚನವನ್ನು(ನೀನು)

**ಭೂಯಃ, ಶೃಣು** - ಇನ್ನೊಮ್ಮೆ ಕೇಳು

**ಮೇ** - (ನೀನು) ನನಗೆ

**ದೃಢಮ್** - ಅತಿಶಯ

**ಇಷ್ಟಃ** - ಪ್ರಿಯನು

**ಅಸಿ** - ಆಗಿರುವೆ

**ತತಃ** - ಆದ್ದರಿಂದ

**ಇತಿ** - ಈ

**ಹಿತಮ್** - ಪರಮ ಹಿತಕಾರಕವಾದ ವಚನವನ್ನು (ನಾನು)

**ತೇ** - ನಿನಗೆ

**ವಕ್ಷ್ಯಾಮಿ** - ಹೇಳುವೆನು.

**ಮನ್ಮನಾಃ ಭವ, ಮದ್ಭಕ್ತಃ, ಮದ್ಯಾಜೀ, ಮಾಮ್, ನಮಸ್ಕುರು,**
**ಮಾಮ್, ಏವ, ಏಷ್ಯಸಿ, ಸತ್ಯಮ್, ತೇ, ಪ್ರತಿಜಾನೇ, ಪ್ರಿಯಃ, ಅಸಿ, ಮೇ ||೬೫||**

**ಎಲೈ ಅರ್ಜುನಾ! ನೀನು -**

**ಮನ್ಮನಾಃ ಭವ** - ನನ್ನಲ್ಲಿ ಮನವುಳ್ಳವನಾಗು

**ಮದ್ಭಕ್ತಃ (ಭವ)** - ನನ್ನ ಭಕ್ತನಾಗು

**ಮದ್ಯಾಜೀ (ಭವ)** - ನನ್ನನ್ನು ಪೂಜಿಸುವವನಾಗು (ಮತ್ತು)

**ಮಾಮ್** - ನನಗೆ

**ನಮಸ್ಕುರು** - ಪ್ರಣಾಮಮಾಡು

**(ಏವಮ್)** - ಹೀಗೆ ಮಾಡುವುದರಿಂದ (ನೀನು)

**ಮಾಮ್ ಏವ** - ನನ್ನನ್ನೇ

**ಏಷ್ಯಸಿ** - ಪಡೆಯುವೆ (ಇದನ್ನು ನಾನು)

**ತೇ** - ನಿನ್ನೊಡನೆ

**ಸತ್ಯಮ್** - ಸತ್ಯವಾದ

**ಪ್ರತಿಜಾನೇ** - ಪ್ರತಿಜ್ಞೆ ಮಾಡುತ್ತೇನೆ

**(ಯತಃ)** - ಏಕೆಂದರೆ (ನೀನು)

**ಮೇ, ಪ್ರಿಯಃ** - ನನಗೆ ಅತ್ಯಂತ ಪ್ರಿಯನಾದವನು

**ಅಸಿ** - ಆಗಿದ್ದೀಯೆ.

**ಸರ್ವಧರ್ಮಾನ್, ಪರಿತ್ಯಜ್ಯ, ಮಾಮ್, ಏಕಮ್, ಶರಣಮ್, ವ್ರಜ,**
**ಅಹಮ್, ತ್ವಾ, ಸರ್ವಪಾಪೇಭ್ಯಃ, ಮೋಕ್ಷಯಿಷ್ಯಾಮಿ, ಮಾ, ಶುಚಃ ||೬೬||**

**ಸರ್ವಧರ್ಮಾನ್** - ಸಂಪೂರ್ಣ ಧರ್ಮಗಳನ್ನು ಅರ್ಥಾತ್ ಸಮಸ್ತ ಕರ್ತವ್ಯ ಕರ್ಮಗಳನ್ನು

**ಪರಿತ್ಯಜ್ಯ** - (ನನ್ನಲ್ಲಿ) ತ್ಯಾಗಮಾಡಿ (ಸಮರ್ಪಿಸಿ ನೀನು)

**ಏಕಮ್, ಮಾಮ್** - ಸರ್ವಶಕ್ತಿವಂತನೂ ಸರ್ವಾಧಾರನೂ ಆದ ಪರಮೇಶ್ವರನಾದ ನನ್ನೋರ್ವನಿಗೆ

**ಶರಣಮ್ ವ್ರಜ** - ಶರಣು ಬಂದುಬಿಡು*

**ಅಹಮ್,** - ನಾನು

**ತ್ವಾ** - ನಿನ್ನನ್ನು

**ಸರ್ವಪಾಪೇಭ್ಯಃ** - ಸಮಸ್ತ ಪಾಪಗಳಿಂದ

**ಮೋಕ್ಷಯಿಷ್ಯಾಮಿ** - ಮುಕ್ತನಾಗಿಸುವೆ (ನೀನು)

**ಮಾ, ಶುಚಃ** - ಶೋಕ ಮಾಡಬೇಡ.

ಅಧ್ಯೇಷ್ಯತೇ, ಚ, ಯಃ, ಇಮಮ್, ಧರ್ಮ್ಯಮ್, ಸಂವಾದಮ್, ಆವಯೋಃ,
ಜ್ಞಾನಯಜ್ಞೇನ, ತೇನ, ಅಹಮ್, ಇಷ್ಟಃ, ಸ್ಯಾಮ್, ಇತಿ, ಮೇ, ಮತಿಃ ॥೭೦॥

| | | | |
|---|---|---|---|
| **ಯಃ** | - ಯಾವ ಪುರುಷನು | **ತೇನ, ಚ** | - ಅವನ ಮೂಲಕ ಕೂಡ |
| **ಇಮಮ್** | - ಈ | **ಅಹಮ್** | - ನಾನು |
| **ಧರ್ಮ್ಯಮ್** | - ಧರ್ಮಮಯವಾದ | **ಜ್ಞಾನಯಜ್ಞೇನ** | - ಜ್ಞಾನಯಜ್ಞದಿಂದ * |
| **ಆವಯೋಃ** | - ನಮ್ಮಿಬ್ಬರ | **ಇಷ್ಟಃ, ಸ್ಯಾಮ್** | - ಪೂಜಿತನಾಗುವೆನು |
| **ಸಂವಾದಮ್** | - ಸಂವಾದ ರೂಪವಾದ ಗೀತಾಶಾಸ್ತ್ರವನ್ನು | **ಇತಿ, ಮೇ** | - ಎಂಬುದು ನನ್ನ |
| | | **ಮತಿಃ** | - ಮತವಾಗಿದೆ. |
| **ಅಧ್ಯೇಷ್ಯತೇ** | - ಓದುವನೋ | | |

ಓದುಗರೇ ವೀಕ್ಷಿಸಿ! ಗೀತೆಯ ಅಧ್ಯಾಯ 18 ಶ್ಲೋಕ 70 ರಲ್ಲಿ "ಇಷ್ಟಃ" ಎಂಬ ಪದವಿದೆ, ಇದರ ಅರ್ಥ "ಪೂಜಿತ" ಅಂದರೆ "ಪೂಜ್ಯ" ಮಾಡಲಾಗಿದೆ. ಶ್ಲೋಕ 64 ರಲ್ಲಿಯೂ "ಇಷ್ಟಃ" ಎಂಬ ಪದಇದೆ. ಒಂದು ವೇಳೆ ಇದರ ಅರ್ಥವನ್ನು "ಪೂಜ್ಯ ದೇವ" ಅಂದರೆ "ಇಷ್ಟಃ ದೇವ" ಮಾಡಿದರೆ, ಗೀತೆಯ ಜ್ಞಾನದಾತನ ಇಷ್ಟ ದೇವ ಕೂಡಾ ಪರಮ ಅಕ್ಷರ ಬ್ರಹ್ಮ ಇದ್ದಾನೆ ಎಂದು ಸ್ಪಷ್ಟವಾಗುತ್ತದೆ.